ಸಂವಾದ

ರೂ. ೫೦

ವಿಶೇಷಾಂಕ

2012

SyndNivas
"Dream your plan,
We plan your dream!"
For Construction/Extension/Acquisition of a house/flat or for acquiring a site and building a house thereon.
Scheme available for Indian citizens, and also for NRIs
For salaried class
Quantum of loan - Maximum of 72 months gross salary
Repayment period upto 20 years
*Conditions apply.
A bank committed to its customers.
With over 85 years of banking experience, nearly 4000 service outlets and a growing customer base.
It is our commitment to give our customers the finest of banking services that makes us the preferred bank of millions.
As we march forward, we reaffirm our commitment to uphold the rights of our customers and associates.
विश्वसनीय. मैत्रीपूर्ण
Faithful. Friendly
सिंडिकेटबैंक
SyndicateBank
भारत सरकार का उपक्रम
A Govt. of India Undertaking
Toll Free Voice Mail No: 1800 425 66 55
www.syndicatebank.in

WITH BEST WISHES FROM

ASIAN FAB TEC LIMITED

Mfrs of LPG Cylinders, Transformers, Fabrication
and Power project works

Plot no.15, 2nd Phase, Peenya Industrial Area,
Bangalore-58
ph: 41170182, 41171271,
TeleFax:23720309,
E-mail: asianfabtec@yahoo.com

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 symetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab

Digital Library

Data Centre

Gym


Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

ಮೈಸೂರ್ ಸ್ಯಾಂಡಲ್

ತ್ವಚೆಗೆ ತಂಪು – ದೇಹಕ್ಕೆ ಕಂಪು

ಆರೋಗ್ಯಕರ ತ್ವಚೆಗೆ ಅಸಲಿ ಶ್ರೀಗಂಧ ಸೌಗಂಧದ ಸ್ವರ್ಗ

ಅಸಲಿ ಶ್ರೀಗಂಧದ ಮೋಹಕತೆ ನಿಮ್ಮ ತ್ವಚೆಯ ಲಾವಣ್ಯವನ್ನು ಹೆಚ್ಚಿಸುತ್ತದೆ. ಕೆಎಸ್&ಡಿಎಲ್ ಸಂಸ್ಥೆಯು ಬಹು ಬೇಡಿಕೆಯ ಉತ್ತಮ ಸಾಬೂನುಗಳನ್ನು ಮತ್ತು ಪ್ರತಿಯೊಬ್ಬರ ಭಕ್ತಿ ಸಮರ್ಪಣೆಯ ಅಗರಬತ್ತಿಯನ್ನು ಒದಗಿಸುತ್ತಿದೆ. ಆರೋಗ್ಯಕರ ಕುಟುಂಬದ ವೈಶಿಷ್ಟ್ಯವೇ ನಮ್ಮೆಲ್ಲ ಉತ್ಪನ್ನಗಳ ಗುರಿಯಾಗಿದೆ.

ಸಾಬೂನು ತಯಾರಿಕೆಯಲ್ಲಿ 94 ವರ್ಷಗಳ ಸರಿಸಾಟಿಯಿಲ್ಲದ ಅನುಭವವುಳ್ಳ ಕೆಎಸ್&ಡಿಎಲ್ ಒಂದು ವಿಶ್ವದರ್ಜೆ ಸಾಬೂನು ತಯಾರಿಕಾ ಸಂಸ್ಥೆ ಮೈಸೂರ್ ಸ್ಯಾಂಡಲ್, ಶುಚಿತ್ವದ ಜೊತೆಗೆ ತ್ವಚೆಯ ಕಾಂತಿ ಹಾಗೂ ಸೌಂದರ್ಯವನ್ನು ನಿರಂತರವಾಗಿ ವೃದ್ಧಿಸುತ್ತದೆ.

ಅಸಲಿ ಶ್ರೀಗಂಧವುಳ್ಳ ಮೈಸೂರು ಸ್ಯಾಂಡಲ್, ಸರ್ವಋತುಗಳಿಗೆ ಹಾಗೂ ಸಮಸ್ತ ಬಳಕೆಗೆ ಉಪಯುಕ್ತ.

ನಿಮ್ಮ ಆರೋಗ್ಯವೇ ನಮ್ಮ ಕಾಳಜಿ

FROM THE HOUSE OF MYSORE SANDAL SOAP

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

ನಮ್ಮ ಉತ್ಪನ್ನಗಳು : ಸ್ನಾನದ ಸಾಬೂನುಗಳು, ಮಾರ್ಜಕಗಳು, ಅಗರಬತ್ತಿಗಳು ಸೌಂದರ್ಯ ಪ್ರಸಾಧನಗಳು, ಕ್ಲೀನಾಲ್ ಮತ್ತು ಧೂಪ್ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ.

www.mysoresandal.co.in
ದೂರವಾಣಿ : 080-2337 0537, 2337 5289
ಟೋಲ್ ನಂ : 1800 425 1103

VASWANI™
GROUP
Live the dream

With Best Compliments From

Vaswani Estates Developers Pvt. Ltd.
Vaswani Victoria

30, Victoria Road, Bangalore-560047
Tel: 91-80-40400000
Mob: 9880974000
fax: 91-80-40400101
www.vaswani group.com

Vaswani Group is committed to Total Customer Satisfaction through

CONTINUOUS IMPROVEMENTS IN PRODUCTS, SERVICES AND PROCESSES
PROFESSIONAL AND BUSINESS INTEGRITY
THE NAME VASWANI TO BE SYNONYMOUS WITH QUALITY



ಅಂತರಂಗ

ಸಂ । ಪಾ । ದ । ಕೀ । ಯ

ಹೊಸ ವರ್ಷ; ಹೊಸ ಭರವಸೆ...

ವಿಶೇಷಾಂಕಕ್ಕಾಗಿ ಲೇಖನವೊಂದನ್ನು ಬರೆದು ಕೊಡುವಂತೆ ಮಿತ್ರರೊಬ್ಬರನ್ನು ಸಂಪರ್ಕಿಸಿದಾಗ 'ಹೇಗಿದ್ದರೂ 2012ರಲ್ಲಿ ಪ್ರಳಯವಾಗುತ್ತದೆ. ಯಾಕೆ ವಿಶೇಷಾಂಕ ಮಾಡುತ್ತೀರಿ?' ಎಂದು ರೇಗಿಸಿದರು. ನಾನು ಅಷ್ಟೇ ತಮಾಷೆಯಾಗಿ 'ಹೌದು 2011ರ ಬೆಳವಣಿಗೆ ನೋಡಿದರೆ ಜಗತ್ತಿನಲ್ಲಿ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಯ ಪ್ರಳಯ ಆಗುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ಎಲ್ಲ ಭ್ರಷ್ಟರು ಮತ್ತು ಸರ್ವಾಧಿಕಾರಿಗಳ ವಿನಾಶ ಆರಂಭವಾಗಿದೆ. ಆ ಸಂತೋಷಕ್ಕಾಗಿಯಾದರೂ ವಿಶೇಷಾಂಕ ತರಲೇ ಬೇಕಲ್ಲಾ' ಎಂದು ಪ್ರತಿಕ್ರಿಯಿಸಿದೆ.

ಕಳೆದ ವರ್ಷ ಜಗತ್ತಿನಾದ್ಯಂತ ಆದ ಬೆಳವಣಿಗೆಗಳು ಬದಲಾವಣೆ ಬಯಸುವವರಲ್ಲಿ ಒಟ್ಟಾರೆ ನಿರಾಶೆಯನ್ನೇನೂ ಮೂಡಿಸುವಂತಿಲ್ಲ. ಅದರಲ್ಲೂ ಮುಸ್ಲಿಂ ರಾಷ್ಟ್ರಗಳಲ್ಲಿ ಆರಂಭವಾದ ಹೋರಾಟಗಳು ಜಗತ್ತಿನ ಎಲ್ಲಾ ಸರ್ವಾಧಿಕಾರಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ್ದರೆ, ಅಮೆರಿಕಾ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳಲ್ಲಿ ಆರಂಭವಾದ ಹೋರಾಟ ಬಂಡವಾಳಶಾಹಿ ರಾಷ್ಟ್ರಗಳ ಜನಮಾನಸದ ಲಾವಾರಸವನ್ನು ಹೊರಗೆ ಹಾಕಿದೆ.

2010ರ ಡಿಸೆಂಬರ್‌ನಲ್ಲಿ ಟ್ಯುನಿಷಿಯಾ ಎಂಬ ಪುಟ್ಟ ಮುಸ್ಲಿಂ ರಾಷ್ಟ್ರದಲ್ಲಿ ಯುವಕನೊಬ್ಬನ ಆತ್ಮಹತ್ಯೆಯಿಂದ ಆರಂಭವಾದ ಹೋರಾಟ ಜಗತ್ತಿನಾದ್ಯಂತ ವ್ಯಾಪಕವಾಗಿ ಹಬ್ಬಿದೆ. ತನ್ನ ಜೀವನಕ್ಕೆ ಆಧಾರವಾದ ಹಣ್ಣಿನ ಅಂಗಡಿಯೊಂದನ್ನು ದಬ್ಬಾಳಿಕೆ ಮೂಲಕ ಪೊಲೀಸರು ಧ್ವಂಸಗೊಳಿಸಿದಾಗ ಆಕ್ರೋಶ ತಡೆಯಲಾರದ ಯುವಕ ಆತ್ಮಹತ್ಯೆ ಮಾಡಿಕೊಂಡ. ಬಹುಷಃ ಭಾರತದಲ್ಲಾಗಿದ್ದರೆ ಅದು ಒಂದು ದಿನದ ರೋಧನದ ಘಟನೆ ಮಾತ್ರವಾಗುತ್ತಿತ್ತು. ಆದರೆ ಟ್ಯುನಿಷಿಯಾ ಜನತೆ ಈ ಘಟನೆಯಿಂದ ಕೆರಳಿ ಕೆಂಡವಾದರು. ಅಲ್ಲಿನ ಸರ್ವಾಧಿಕಾರಿ ಅಧ್ಯಕ್ಷನನ್ನೇ ಪದಚ್ಯುತಗೊಳಿಸಿದರು.

ಟ್ಯುನಿಷಿಯಾದಲ್ಲಿ ಆರಂಭವಾದ ಈ ಹೊರಾಟ ನಂತರ ಈಜಿಪ್ಟ್‌ಗೆ ಹಬ್ಬಿತು. ಈಜಿಪ್ಟಿನ ಜನತಂತ್ರವಾದಿಗಳು ಜನರ ಆಕ್ರೋಶಗಳಿಗೆ ಧ್ವನಿಯಾದರು. ಹೋಸ್ನಿ ಮುಬಾರಕ್ ಎಂಬ ಸರ್ವಾಧಿಕಾರಿ ಅಧ್ಯಕ್ಷ ಜನಶಕ್ತಿ ಎದುರು ಅಧಿಕಾರ ತ್ಯಜಿಸಬೇಕಾಯಿತು. ನಂತರದ ಸರದಿ ಲಿಬಿಯಾದ್ದು. ಲಿಬಿಯಾದ ಸಂಪತ್ತೆಲ್ಲ ತನ್ನ ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡಿದ್ದ ಅಧ್ಯಕ್ಷ ಗಡಾಫಿ ಹೇಡಿಯಂತೆ ಜೀವಕ್ಕಾಗಿ ಅಂಗಲಾಚುವಂತೆ ಪ್ರಜಾಪ್ರಭುತ್ವವಾದಿ ಹೋರಾಟಗಾರರ ಆಕ್ರೋಶಕ್ಕೆ ಬಲಿಯಾಗಬೇಕಾಯಿತು.

ಇದೇ ಬಗೆಯ ಹೋರಾಟ ಜೋರ್ಡಾನ್. ಸಿರಿಯಾ, ಸೌದಿ **ಅರೇಬಿಯಾ, ಯೆಮನ್, ಬಹರೇನ್, ಸಿರಿಯಾ ಮೊದಲಾದ ರಾಷ್ಟ್ರಗಳಲ್ಲಿ ಪ್ರಭುತ್ವ ವಿರೋಧಿ ಹೋರಾಟ ವ್ಯಾಪಿಸಿದೆ. ಮೂಲಭೂತವಾದಿ ಹಣೆ ಪಟ್ಟಿ ಅಂಟಿಸಿಕೊಂಡಿದ್ದ ಮುಸ್ಲಿಂ ರಾಷ್ಟ್ರಗಳು ಇಡೀ ಜಗತ್ತಿಗೆ ಪ್ರಜಾಪ್ರಭುತ್ವ ಮತ್ತು** ಸ್ವಾತಂತ್ರ್ಯದ ಪಾಠ ಹೇಳಲು ಮೈ ಕೊಡವಿ ಎದ್ದು ನಿಂತಿವೆ. ಧಾರ್ಮಿಕ ನಂಬಿಕೆಗಳಿಗೂ, ಪ್ರಭುತ್ವ ನಡೆಸುವ ದಬ್ಬಾಳಿಕೆ– ದೌರ್ಜನ್ಯಗಳಿಗೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಈ ಹೋರಾಟಗಳು ಸಾರಿ ಹೇಳಿವೆ.

ಮತ್ತೊಂದು ಸಂತೋಷದ ಸಂಗತಿಯೆಂದರೆ ಜಗತ್ತಿನ ಹಿರಿಯಣ್ಣ ಅಮೆರಿಕಾಕ್ಕೆ ಉಂಟಾಗಿರುವ ನಡುಕ. ತನ್ನ ಬಂಡವಾಳಶಾಹಿ ನೀತಿಯಿಂದ ಇಡೀ ಜಗತ್ತನ್ನು ತನ್ನ **ಬೆರಳ ತುದಿಯಲ್ಲಿ ಕುಣಿಸುತ್ತಿದ್ದ ಅಮೆರಿಕಾಕ್ಕೆ ಈಗ ತನ್ನ ನಿಂತ ನೆಲವೇ ಕುಸಿಯುತ್ತಿರುವ ಅನುಭವವಾಗುತ್ತಿದೆ. ಆರ್ಥಿಕ ಹಿಂಜರಿತದಿಂದ ಜರ್ಜರಿತವಾಗಿರುವ** ದೇಶ ಈಗ ಆಂತರಿಕ ಜನಾಂದೋಲನವನ್ನು ಎದುರಿಸಲಾಗದೆ ತತ್ತರಿಸಿ ಹೋಗಿದೆ. ಏರುತ್ತಿರುವ ಬಡತನ ಮತ್ತು, ಅದಕ್ಕೆ ಪ್ರತಿಯಾಗಿ ಕ್ರೋಢೀಕೃತವಾಗುತ್ತಿರುವ ಸಂಪತ್ತು ಅಮೆರಿಕಾದ ಸಾರ್ವಜನಿಕರನ್ನು ಬಡಿದೆಬ್ಬಿಸಿದೆ. ಇತರೆ ರಾಷ್ಟ್ರಗಳಿಗೆ ಬುದ್ದಿ ಹೇಳುವ ಅಮೆರಿಕಾ ತನ್ನೊಳಗಿನ ಹುಳುಕನ್ನು ಸರಿಪಡಿಸಿಕೊಳ್ಳಲು ಹೆಣಗಬೇಕಾಗಿದೆ. ಸೂರ್ಯ ಮುಳುಗದ ದೇಶ ಇಂಗ್ಲೆಂಡ್ ಪರಿಸ್ಥಿತಿ ಕೂಡ ಇದಕ್ಕೆ ಹೊರತಾಗಿಲ್ಲ.

ಗ್ರೀಸ್ ಮತ್ತು ಸ್ಪೇನ್ ದೇಶದ ಸ್ಥಿತಿಯಂತೂ ಹೇಳ ತೀರದಾಗಿದೆ. ತನ್ನ ದೇಶದ ಆಸ್ತಿಯನ್ನು ಮಾರಿಕೊಂಡರೂ ಬದುಕಲಾರದಂತಹ ಸ್ಥಿತಿ ಈ ದೇಶಗಳಿಗೆ ಬಂದಿದೆ. ಆರ್ಥಿಕವಾಗಿ ಸಂಪೂರ್ಣವಾಗಿ ದಿವಾಳಿ ಎದ್ದು ಹೋಗಿರುವ ಈ ದೇಶಗಳು ಬಹುತೇಕ ದೈನೇಸಿ ಸ್ಥಿತಿಗೆ ಬಂದು ನಿಂತಿವೆ. ಇನ್ನು ರಷ್ಯಾ ಸ್ಥಿತಿಯಂತೂ ಹೇಳತೀರದಾಗಿದೆ. ದೇಶದಲ್ಲಾದ ಯಾವ ರಾಜಕೀಯ ಬದಲಾವಣೆಗಳೂ ರಷ್ಯನ್ನರಿಗೆ ನೆಮ್ಮದಿಯನ್ನ ತರಲಿಲ್ಲ. ಈಗಿನ ಅಧ್ಯಕ್ಷ ಪುಟಿನ್‌ರ ಭ್ರಷ್ಟಾಚಾರದ ವಿರುದ್ಧ ಇಡೀ ದೇಶ ಎದ್ದು ನಿಂತಿದೆ. **ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅದಕ್ಷತೆಯಿಂದ** ನರಳಿ ಹೋಗಿರುವ ಈ ದೇಶಗಳು **ಹೊಸ ಬದುಕಿನ ಹುಡುಕಾಟದಲ್ಲಿ ತೊಡಗಿವೆ.**

ಭಾರತಕ್ಕೆ ಬಂದರೆ ಜನಪರ ಹೋರಾಟಗಳ ಬಗ್ಗೆ ಇದ್ದ ಹತಾಷೆ ಕ್ರಮೇಣ ಕರಗುತ್ತಿದೆ. ತನ್ನ ಹಲವಾರು ಮಿತಿಗಳ ನಡುವೆ ಕೂಡ ಅಣ್ಣಾ ಹಜಾರೆ ಅವರ ಹೋರಾಟ ದೇಶದ ಜನರಲ್ಲಿ ಸ್ವಲ್ಪ ಆಶಾಭಾವನೆಯನ್ನು ಮೂಡಿಸಿದೆ. 2ಜಿ ಹಗರಣ, ಕಾಮನ್‌ವೆಲ್ತ್ ಹಗರಣ, ಮತ್ತು ಗಣಿ ಹಗರಣಗಳು ಬಯಲಾಗಿ ಸ್ವಲ್ಪವಾದರೂ ಭ್ರಷ್ಟರ ಎದೆಯಲ್ಲಿ ನಡುಕ ಹುಟ್ಟಿಸಿವೆ. ಕರ್ನಾಟಕದಲ್ಲಿಯೂ ಯಡಿಯೂರಪ್ಪ ಮತ್ತು ಜನಾರ್ಧನ ರೆಡ್ಡಿ ಅವರು ಜೈಲು ಸೇರುವ ಮೂಲಕ ಹತಾಶರಾಗಿದ್ದ ಜನರಲ್ಲಿ ಹೊಸ ಭರವಸೆಗಳು ಮೂಡಿವೆ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳೆಂಬ 'ತ್ರಿಕರಣ'ಗಳ ಅಮಾನವೀಯ ಧಾಳಿ ಜಗತ್ತಿನ ಎಲ್ಲ ದೇಶಗಳನ್ನೂ ಕಿತ್ತು ತಿನ್ನುತ್ತಿದೆ. ಅದರ ಹುಟ್ಟಿಗೆ ಕಾರಣವಾದ ಅಮೆರಿಕಾವನ್ನು ಸಹ. ಇಂಥ ಸಂದರ್ಭದಲ್ಲಿ ಈ 'ತ್ರಿಕರಣ'ಗಳನ್ನು ಮೆಟ್ಟಿ ನಿಂತು ಹೊಸ ಭರವಸೆಗಳನ್ನು ಮೂಡಿಸುತ್ತಿರುವ ಲ್ಯಾಟಿನ್ ಅಮೆರಿಕಾ ದೇಶಗಳು ಈಗ ಇಡೀ ಜಗತ್ತಿನ ಗಮನ ಸೆಳೆಯುತ್ತಿವೆ. ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ಬರೆಯುತ್ತಿರುವ ಈ ದೇಶಗಳು ನಮಗೆಲ್ಲ ಆದರ್ಶವಾಗಬೇಕಾಗಿವೆ.

ಇಂಥ ಸಂದರ್ಭದಲ್ಲಿ 'ಸಂವಾದ' ವಿಶೇಷಾಂಕವಾಗಿ ಹೊರ ಬರುತ್ತಿದೆ. ನಿಜ ಪ್ರಜಾಪ್ರಭುತ್ವದ ಹೋರಾಟಕ್ಕೆ ಜನರನ್ನು ಅಣಿಗೊಳಿಸಲು ವಿಶೇಷಾಂಕದ ಲೇಖನಗಳು ಸಹಾಯಕವಾಗುತ್ತವೆ ಎಂಬ ಆಶಯ 'ಸಂವಾದ' ಬಳಗದ್ದು.

ಇಂದೂಧರ ಹೊನ್ನಾಪುರ

ಸಂವಾದ

ಮಾಸ ಪತ್ರಿಕೆ

ಸಂಪುಟ: 10, ಸಂಚಿಕೆ: 3 & 4
ಜನವರಿ-ಫೆಬ್ರುವರಿ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-560 091

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
& 080-23480278
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

ಕಥೆಗಳು

● 20 ಮಾದೇವಿಯ ಮುಳ್ಳು
ವಿನಯಾ

● 32 ಆರ್ಮುಗ ಕುರುಬು ಮತ್ತು ಶ್ರೀಲಿಂಗ ಸ್ವಾಮಿ
ಮಂಜುನಾಥ್‌ಲತಾ

● 52 ಬಂದಿ
ಮೂಲ: ಅಬ್ದುಲ್ ರಜಾಕ್ ಗುರ್ನಾ
ಅನು: ಕೇಶವ ಮಳಗಿ

● 70 ರುಕ್ಮಿಣಿ
ಡಾ॥ ಮೊಗಳ್ಳಿ ಗಣೇಶ

● 86 ಸೈದೂರನ ಮೀನು ಶಾಸ್ತ್ರಿಗಳ ಬೆಕ್ಕು ...
ಡಾ॥ ನಾ. ಡಿಸೋಜ

● 104 ಸ್ವರ್ಗವೆಂದರೆ
ಭಾನು ಮುಷ್ತಾಕ್

● 144 ಒಂದು ಗುಡಿಸಲಿನಿಂದ
ಮೂಲ: ಎಚ್. ಜಿ. ಸೇಂಟ್‌ಪಿಯರ್
ಅನು: ಎಸ್. ಶಿವಲಿಂಗಂ



● 176 ನಮ್ಮನೆ ಗೌರಮ್ಮನೆ ಇಷ್ಟ
ದು. ಸರಸ್ವತಿ

● 194 ಒಂದು ಬೆಳಕಿನ ಕಿರಣ
ನೀಲಾ. ಕೆ

● 218 ಹದ್ದು ಮೀರದ ಹಾಳೂರಿನ ಗೋಡೆಗಳು...
ಡಾ॥ ಎಸ್. ಜಿ. ಜೋಗುರ

ಅಂಕಣಗಳು

● 78 ನೋಯುವ ಹಲ್ಲಿಗೆ ಹೊರಳುವ ನಾಲಿಗೆ -3
ಡಾ॥ ಎಚ್.ಎಸ್ ಅನುಪಮಾ

● 118 ಕಾಲಮಾನ-19
ಡಾ॥ ಮುಜಾಫ್ಫರ್ ಅಸ್ಸಾದಿ

● 236 ಬತ್ತದ ಬಯಲು-2
ಡಾ॥ ಜಿ.ಎಂ. ಪುಟ್ಟಯ್ಯ

● 250 ದಲಿತ್ ಡೈರಿ
ಚಂದ್ರಭಾನ್ ಪ್ರಸಾದ್
ಅನು: ಎಸ್. ಮರಿಸ್ವಾಮಿ

● 260 ಮುಲ್ಲಾ ನಸ್ರುದ್ದೀನ್ ಕಥೆಗಳು-3
ಡಾ॥ ಜೆ. ಬಾಲಕೃಷ್ಣ

ನಾಟಕ

● 132 ಆ ಸರ್ಕಲ್ಲು
ಡಿ.ಎಸ್ ಚೌಗಲೆ

ಮುಖಪುಟ ಮತ್ತು ಒಳಪುಟಗಳ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಲೇಖನಗಳು

12 ಸ್ವಾತಂತ್ರ್ಯೋತ್ತರ ಕರ್ನಾಟಕ ಮತ್ತು ಜಾತ್ಯಾತೀತತೆ: ಒಂದು ನೋಟ
ಡಾ॥ ನಟರಾಜ್ ಹುಳಿಯಾರ್

26 ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಕಂದಕ
ಡಾ॥ ಡೊಮಿನಿಕ್ ಡಿ

40 ಇಸ್ಲಾಂ ಇಲ್ಲದ ಜಗತ್ತು ಹೇಗಿರುತ್ತಿತ್ತು?
ಮೂಲ: ಅಸ್ಗರ್ ಅಲಿ ಎಂಜಿನಿಯರ್
ಅನು: ಹಸನ್ ನಯೀಂ ಸುರಕೋಡ

48 ಕನ್ನಡ ಇಂಗ್ಲಿಷ್ ಶೈಕ್ಷಣಿಕ ಸವಾಲುಗಳು
ಡಾ॥ ಮೇಟಿ ಮಲ್ಲಿಕಾರ್ಜುನ

58 ವಿಜ್ಞಾನವೆನ್ನುವ ಅಂತಿಮ ಪರಿಕರ
ಅಗ್ನಿ ಶ್ರೀಧರ್

90 ಮಾನವೀಯತೆ ಅಂತಾರಲ್ಲ ಅದರ ಬಗ್ಗೆ
ದೇವನೂರು ಮಹಾದೇವ

94 ಲ್ಯಾಟೀನ್ ಅಮೆರಿಕಾದ ಪಾಠಗಳು
ಡಾ॥ ವಿ.ಎಸ್ ಶ್ರೀಧರ

128 ಈ ದಶಕದ ಕೆಲವು ವೈಚಾರಿಕ ಬೆಳವಣಿಗೆಗಳು
ಡಾ॥ ಎಸ್. ನಟರಾಜು ಬೂದಾಳು

140 ಲೋಟ ತಟ್ಟೆಯ ಮೂರು ಪ್ರಸಂಗಗಳು
ಪ್ರೊ॥ ರಹಮತ್ ತರೀಕೆರೆ

166 ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ
ಬಾಲಗುರುಮೂರ್ತಿ

180 ಪ್ರಭುತ್ವವೆಂಬ ಆನೆ ಕುರುಡರು ಕಂಡಂತೆ
ಜಿ. ರಾಜಶೇಖರ್

188 ಕರ್ನಾಟಕ ರಾಜಕಾರಣ ಮತ್ತು ಸಾಂಸ್ಕೃತಿಕ ಕ್ರಿಯಾಶೀಲತೆ
ಹುಲಿಕುಂಟೆ ಮೂರ್ತಿ

204 ಕರಡಿ ಖಲಂದರರು ಮತ್ತು ಹಾವಾಡಿಗರು: ಬದುಕು ಬೀದಿಯಲ್ಲಿ
ಕೆ.ಎಲ್ ಚಂದ್ರಶೇಖರ ಐಜೂರ್

210 ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು
ರಂಗನಾಥ ಕಂಟನಕುಂಟೆ

224 ಲೋಹಿಯಾ ಗಾಂಧಿ ಮತ್ತು ಗಾಂಧೀವಾದ
ಬಾಪು ಹೆದ್ದೂರಶೆಟ್ಟಿ

ಕವನಗಳು

10 ಕಣ್ಣು ಕಡಲುಗಳ ನಡುವೆ
ಡಾ॥ ಎಚ್.ಎಲ್ ಪುಷ್ಪ

25 ಖೂಳ ಹುಳುವಿನ ಮೂಳ ಗೀತೆ
ಲಕ್ಷ್ಮೀಪತಿ ಕೋಲಾರ

35 ಬಿಡಿ ಬಿಡಿ ಕವಿತೆ
ವೀರಣ್ಣ ಮಡಿವಾಳರ

46 ಬಾಲ ಜಂಗಮ ಬಂದವನೆ
ವಡ್ಡಗೆರೆ ನಾಗರಾಜಯ್ಯ

67 ನೀ ಹಾಡಿದ ರಾಗ ಇದೇನಾ?
ಚಂದ್ರಶೇಖರ ತಾಳ್ಯ

68 ನಾವು ಮಕ್ಕಳಲ್ಲವೇ
ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ

74 ಕವಿತೆ ಓದೋಣ ಬನ್ನಿ
ವಿ. ಹರಿನಾಥ ಬಾಬು

85 ಫೆಬ್ರವರಿ ಒಂದು ಹಕ್ಕಿ
ತೆಲುಗು: ಡಾ॥ ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ ಮಾಲೂರು

101 ಭೂಮಿ ಸಣ್ಣದಾಗಿದೆಯಂತೆ
ಕು.ಸ ಮಧುಸೂದನ

102 ಅವರು ಮತ್ತು ನಾವು
ಪ್ರೊ॥ ಟಿ.ಯಲ್ಲಪ್ಪ

127 ಹೊಂಡು ನೀರಿನ ಹಳ್ಳ
ವಿ.ಎಂ ಮಂಜುನಾಥ್

174 ಬಾಡಿಗೆ ತಾಯಂದಿರು
ಡಾ॥ ಕೆ. ಷರೀಫಾ

200 ಹನಿಹನಿದು ಹರಳುಗಟ್ಟಿದೆ
ಮಮತಾ ಜಿ. ಸಾಗರ

201 ಮುಟ್ಟಿನ ನೆತ್ತರಲ್ಲಿ ಅ.ಆ.ಇ.ಈ ತಿದ್ದಿ ಕಲಿತವ
ಎಚ್. ಲಕ್ಷ್ಮೀನಾರಾಯಣಸ್ವಾಮಿ

229 ನೀನೊಂದು ಬೆರಗು
ಮೂಡ್ನಾಕೂಡು ಚಿನ್ನಸ್ವಾಮಿ

243 ಶಬ್ದಚಾಲಕಿಯ ಗರ್ವಭಂಗ
ಲಲಿತಾ ಸಿದ್ಧಬಸವಯ್ಯ

257 ನಾನಲ್ಲ ನಿನ್ನ ಕಲ್ಪನೆ
ಮಖ್ಬರ್ ಪಾಷ

259 ಗಾಂಧಿಗೊಂದು ಪತ್ರ
ದಯಾನಂದ

266 ರೈಘುನಾಯಣ
ಜಂಬಣ್ಣ ಅಮರಚಿಂತ

268 ಬಾಚಣಗಿ ಭರಮಪ್ಪ
ಅರ್ಜುನ ಕೋರಟಕರ

ಸಿನಿಮಾ

244 ರಾಜಕೀಯ ಮತ್ತು ಸಿನಿಮಾ
ಕೃಷ್ಣ ಮಾಸಡಿ

ಕಣ್ಣು
ಕಡಲುಗಳ ನಡುವೆ

ಕಣ್ಣಿಗೆ ಕಣ್ಣೇ ಕನ್ನಡಿ
ಅಥವಾ ಕಣ್ಣಿಗೆ ಕಡಲು
ಕಡಲು ಕನ್ನಡಿಗಳ ನಡುವಣ ನಂಟು
ಉಪಮೆಗೆ ನಿಲುಕಿದರೂ ನಿಲುಕುವಂತದ್ದಲ್ಲ

ಜನ ಅಂಜುತ್ತಾರೆ ಒಳಗೊಳಗೆ
ಕಣ್ಣ ಕನ್ನಡಿಯೊಳಗೆ ನೀರ ಇಣುಕಲು
ಕಣ್ಣಲ್ಲಿದೆ ಕದಲದ ಕಾಲುವೆ, ನದಿ ಮತ್ತೆ
ಹಿಂದಕ್ಕೆ ಸಾಗಿ ಬರದ ಕಡಲು
ಅಲ್ಲಿದೆ ಕುದಿವ, ಮೊರೆವ, ಅಂಗಲಾಚುವ
ಅಸಹಾಯಕ ಕದಲದ ಕಡಲು
ಅರಿಯುವವರು ಅರಿಯುತ್ತಾರೆ, ಅರಿಯಲಾರದವರು
ಥೂ ಕಡಲು, ಉಪ್ಪುಪ್ಪು ಪಕ್ಕನೆ ದೂರಿ
ದೂರ ದೂರ ಸರಿಯುತ್ತಾರೆ
ಕಣ್ಣರೆಪ್ಪೆಯ ಅಂಚಿನಲಿ ಒಸರುವ ಉಪ್ಪುಪ್ಪು
ಕಡಲನ್ನು ಬೊಗಸೆಯಲಿ ಹಿಡಿಯಲಾಗದು
ಮರೆತ ಮಾತುಗಳ ಮೀಟಿ ಮೇಲಕ್ಕೆ ಎತ್ತಲಾಗದು
ಕಡತಗಳಲಿ ಹಿಡಿದಿಡಲಾಗದು.

ಕವನ

ಅವಳ ಕಣ್ಣಕನ್ನಡಿಯಲ್ಲಿ ಇಣುಕಿ ನೋಡಿ
ಮಾತಿನ ವಿರಳಿತದಂತೆ ಬೆಳಕಿನ ಆಟ
ಇಬ್ಬನಿ ಬೆಳಗಿನ ಮೌನದ ಸಂಕೇತ
ಕಡಲು ಕುದಿವ ಮೊರೆತಗಳ ಉಪಮೆ
ಕಣ್ಣ ರೆಪ್ಪೆಯಲ್ಲಿ ಅಡಗಿದೆ ಅವಳ ಕತೆ
ಕಾಜಲಿನ ಸಪೂರ ರೇಖೆಗಳಿವೆ ಹೊರಗೆ ರೆಪ್ಪೆಯ ಮೇಲೆ
ಅದೊಂದು ಮಾಯಾಕನ್ನಡಿಯೇ
ನುಂಗಿ ನೊಣೆಯುವ ಕತ್ತಲಿನ ಕಣಿವೆಯೇ
ಹದಿನಾರರ ಕಣ್ಣುಗಳಲ್ಲಿ
ನವಿರು ರೇಶ್ಮೆಯ ಹೂ ಪಕಳೆಗಳಿಲ್ಲ
ಸಾವಧಾನದಿ ಹಿಡಿದು ಬಿಡುವ ಜೀವತಂತುಗಳಿಲ್ಲ
ಆದರೂ ನಂಜು ಕುಡಿದ ನಂಜುಂಡನ ದಿಟ್ಟತನವಿದೆ.

ಕಣ್ಣೆಂಬ ಆ ಕಾಮನಬಿಲ್ಲಿನಲ್ಲಿ
ಭೂತ ಇತ್ತಿತ್ತ ಬಾಯಿ ತೆರಕೊಂಡಿತ್ತು
ಅತ್ತತ್ತ ವರ್ತಮಾನ ಅಂಜಿ ಅಳುಕತ್ತಿತ್ತು
ಗರಬಡಿದ ಭವಿಷ್ಯ ಗ್ರಹತಾರೆಗಳ ಕೈಯಲ್ಲಿತ್ತು
ನೀಳವಾದ ಆ ಎವೆಗಳ ಮೇಲಿನ ಕಾಲದ ಕುಣಿತಕ್ಕೆ
ಚಿಗುರನು ಸವರಿ ಮೊರೆವ ಆವೇಶವಿತ್ತು

ಹಗಲು ಇರುಳುಗಳ ಗೆರೆ ಕಳೆದು
ಮೊರೆವ ನಗರದ ಬೀದಿಗಳಲ್ಲಿ
ಎಲ್ಲೆಲ್ಲೂ ಆಹ್ವಾನಿಸುತ್ತಿವೆ ಕೆಎಫ್‌ಸಿಗಳು,
ಕಾಫಿಡೇಗಳು ಅಡಗುದಾಣಗಳಾಗಿ
ನಗರದ ಬೀದಿಗಳ ಮಣ್ಣ ಹೊದಿಕೆಯ
ಹುಲ್ಲಿನ ಮೇಲಿನ ಇಬ್ಬನಿಗಳು ಇನ್ನೂ
ನಿಟ್ಟಿಸುತ್ತಿವೆ ಬೆರಗಿನಿಂದ

ಹುಚ್ಚು ಕುದುರೆಯ ಕೆನೆತವನು
ಹೀಗಾಗಿ ನಗರದಿಂದ ಬಹುದೂರ
ಕಡಲು ಕನ್ನಡಿಗಳ ನಡುವಿನ ಸಾಮೀಪ್ಯ
ಉಪಮೆಗೆ ನಿಲುಕುವಂತದ್ದಲ್ಲ
ಕಣ್ಣಂಚಿನ ಕಂಬನಿಗಳ ಕನ್ನಡಿಯ ನೋಟ
ಖಂಡಿತಾ ಹೇಳಲು ಬರುವಂತದ್ದಲ್ಲ

ಡಾ|| ಎಚ್. ಎಲ್. ಪುಷ್ಪ

ಕನ್ನಡದ ಮಹತ್ವದ ಕವಿಯತ್ರಿ, ವಿಮರ್ಶಕಿ. ನಾಟಕಕಾರ್ತಿ, ಉಪನ್ಯಾಸಕಿ. 'ಅನ್ವೇಷಣೆ' ಸಾಹಿತ್ಯ ಪತ್ರಿಕೆಯ ಗೌರವ ಸಂಪಾದಕಿ. ಇವರ ಅನೇಕ ಕವನ ಸಂಕಲನ, ಸಾಹಿತ್ಯ ವಿಮರ್ಶೆ, ನಾಟಕ, ಸಂಪಾದಿತ ಕೃತಿಗಳು ಪ್ರಕಟಣೆಗೊಂಡಿವೆ. ರಾಷ್ಟ್ರಮಟ್ಟದ ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ ಹಿರಿಮೆ; ಕೇಂದ್ರ ಸಾಹಿತ್ಯ ಅಕಾಡೆಮಿ ಸೇರಿದಂತೆ ರಾಜ್ಯ- ರಾಷ್ಟ್ರಮಟ್ಟದ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳ ಮನ್ನಣೆಗೆ ಪಾತ್ರರು.

ಸ್ವಾತಂತ್ರ್ಯೋತ್ತರ ಕರ್ನಾಟಕ ಮತ್ತು ಜಾತ್ಯತೀತತೆ: ಒಂದು ನೋಟ



ಡಾ॥ ನಟರಾಜ್ ಹುಳಿಯಾರ್

೧

ಕಳೆದ ಐವತ್ತು, ಅರವತ್ತು ವರ್ಷಗಳ ಕರ್ನಾಟಕದ ಚರಿತ್ರೆಯ ಮುಖ್ಯ ಬೆಳವಣಿಗೆಗಳಲ್ಲಿ "ಸೆಕ್ಯುಲರ್ ಇಂಟೆಲೆಕ್ಚುಯಲ್ಸ್" ವಿಕಾಸ ಕೂಡ ಒಂದು. ಈ ಸೆಕ್ಯುಲರ್ ಬುದ್ಧಿಜೀವಿಗಳು ಕರ್ನಾಟಕದಲ್ಲಿ ಹಲ ಬಗೆಯ ವ್ಯವಸ್ಥೆಯ **ವಿರೋಧಿ ಚಳುವಳಿಗಳಲ್ಲಿ ಬೆರೆತು ಹೋಗಿದ್ದಾರೆ. ಕರ್ನಾಟಕದಲ್ಲಿ ನಡೆಯುತ್ತಾ ಬಂದಿರುವ ಗಾಂಧೀವಾದಿ ಚಳುವಳಿ, ಸಮಾಜವಾದಿ ಚಳುವಳಿ, ಮಾರ್ಕ್ಸ್‌ವಾದಿ ಚಳುವಳಿ, ವಿಚಾರವಾದಿ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ, ಸ್ತ್ರೀವಾದಿ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ...ಮುಂತಾಗಿ ಎಲ್ಲ ಮುಖ್ಯ ಚಳುವಳಿಗಳಲ್ಲೂ ಈ ಸೆಕ್ಯುಲರ್** ಬುದ್ಧಿಜೀವಿಗಳು ಭಾಗಿಯಾಗಿದ್ದಾರೆ. ಹಾಗೆಯೇ ನವೋದಯ, ಪ್ರಗತಿಶೀಲ, ನವ್ಯ, ಬರಹಗಾರರ ಒಕ್ಕೂಟ, ದಲಿತ, ಬಂಡಾಯ ಹಾಗೂ ರಂಗಭೂಮಿ ಚಟುವಟಿಕೆಗಳಂಥ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಳುವಳಿಗಳ ಜೊತೆಗೂ ಇದ್ದಾರೆ. ಸರ್ಕಾರೇತರ ಸಂಸ್ಥೆಗಳಲ್ಲೂ ಅವರು ಇದ್ದಾರೆ. ಈ ಎಲ್ಲ ಚಳುವಳಿಗಳು, ಅವುಗಳ ನಾಯಕರು, ಅದರಲ್ಲಿ ಭಾಗಿಯಾದ ವಿವಿಧ ವೇದಿಕೆಗಳು, ವಿವಿಧ ರಾಜಕೀಯ ಪಕ್ಷಗಳ ಕಾಲಕಾಲದ ಜಾತ್ಯತೀತ ನಿಲುವುಗಳು ಹಾಗೂ ಜಾತ್ಯತೀತ ಬುದ್ಧಿಜೀವಿಗಳು ಈ ಎಲ್ಲರ ಪ್ರಯತ್ನಗಳಿಂದಾಗಿ ಕರ್ನಾಟಕದಲ್ಲಿ ಗಟ್ಟಿಯಾದ ಜಾತ್ಯತೀತ ಚಿಂತನೆ ಹಾಗು ಕೋಮುವಾದ ವಿರೋಧಿ ಚಿಂತನೆಗಳು ರೂಪುಗೊಂಡಿವೆ. ಈ ಚಿಂತನೆಗಳನ್ನು ವಿವಿಧ ಹಂತಗಳಲ್ಲಿ ಕರ್ನಾಟಕದ ಸಾಮಾನ್ಯ ಜನ ಕೂಡ ಒಂದು ಮಟ್ಟದಲ್ಲಿ ಪ್ರತಿಧ್ವನಿಸಿದ್ದಾರೆ. ಇವೆಲ್ಲದರ ಹಿನ್ನೆಲೆಗೆ ಕಳೆದ ಹಲವಾರು ದಶಕಗಳಲ್ಲಿ ಕರ್ನಾಟಕದಲ್ಲಿ ಬೆಳೆದ ಜಾತಿವಿನಾಶ ಪರಿಕಲ್ಪನೆಯೂ ಕೆಲಸ ಮಾಡಿದೆ.



ಸ್ವಾತಂತ್ರ್ಯೋತ್ತರ ಕರ್ನಾಟಕದ ಕಲೆ, ಸಂಸ್ಕೃತಿ, ಜಕಾರಣ, ಚಳುವಳಿ, ಚಿಂತನೆಗಳನ್ನು ಪ್ರಭಾವಿಸಿದ ಗೂ ಪ್ರೇರೇಪಿಸಿದ ಪೆರಿಯಾರ್‌ವಾದ್ಮ ೀಹಿಯಾವಾದ ಹಾಗೂ ಅಂಬೇಡ್ಕರ್‌ವಾದಗಳ ೂಲದಲ್ಲಿ ಹಾಗೂ ವಿವಿಧ ಸಾಹಿತ್ಯ ಚಳುವಳಿಗಳ ುಖ್ಯ ಕಾಳಜಿಗಳಲ್ಲಿ ಜಾತಿವಿನಾಶ ಹಾಗೂ ತಿವಿರೋಧಗಳು ಕೂಡ ಇದ್ದವು. ಮಾರ್ಕ್ಸ್‌ವಾದದಿಂದ ಾವಿತರಾದ ಚಿಂತಕರು ಜಾತ್ಯತೀತತೆಯನ್ನು ಒಂದು ್ವವಾಗಿ ಒಪ್ಪಿದವರಾಗಿದ್ದರು. ರೈತ ಚಳುವಳಿಯನ್ನು ಪಿಸಿದ ಎಂ.ಡಿ. ನಂಜುಂಡಸ್ವಾಮಿಯವರು ಎಪ್ಪತ್ತರ ಶಕದ ಸಮಾಜವಾದಿ ಯುವಜನ ಸಭಾದ ಲದಿಂದಲೂ ಜಾತಿವಿನಾಶ ಕುರಿತ ಚಿಂತನೆಯನ್ನು ೆಸಿದವರು. ಮುಂದೆ ರೈತ ಚಳುವಳಿಯ ಇನ್ನಿತರ ಯಕರಲ್ಲೂ ಜಾತ್ಯತೀತತೆ ಒಂದು ಮಟ್ಟದಲ್ಲಾದರೂ ಂದುವರಿಯಿತು. ದಲಿತ ಚಳುವಳಿಯಲ್ಲಂತೂ ತಿವಿರೋಧ ಬಹಳ ಸ್ಪಷ್ಟವಾಗಿತ್ತು. ಪೆರಿಯಾರ್‌ವಾದ ಚಾರಿಕತೆಯ ಮೂಲಕ ಜಾತಿಯ ವಿರುದ್ಧ ಸಮರ ರಿತ್ತು. ಲೋಹಿಯಾವಾದ ಜಾತಿ ಅಸಮಾನತೆಯ ುದ್ಧ ಹೋರಾಟ ಮಾಡುತ್ತಾ ಜಾತಿವಿನಾಶದ ್ಯನೀತಿಯನ್ನು ಅಳವಡಿಸಿಕೊಂಡಿತ್ತು.

ಎಪ್ಪತ್ತರ ದಶಕದ ಅರಸು ಆಡಳಿತದಲ್ಲಿ ರಂಭಗೊಂಡ ಹಿಂದುಳಿದ ಹಾಗೂ ದಲಿತ ಜಾತಿಗಳ ಸ ಸಮೀಕರಣ, ಹಾವನೂರು ವರದಿಯ ನಂತರ ಂದುಳಿದ ವರ್ಗಗಳಲ್ಲಿ ಕಂಡು ಬಂದ ಹೊಸ ಚಲನೆ, ಸವಲಿಂಗಪ್ಪನವರು ಪ್ರಾಚೀನ ಕನ್ನಡ ಸಾಹಿತ್ಯ ಕುರಿತು ಾಡಿದ ವಿಮರ್ಶೆಯ ಫಲವಾಗಿ ಹುಟ್ಟಿದ ಬೂಸಾ ಸುವಳಿ, ಜಯಪ್ರಕಾಶ ನಾರಾಯಣರ ನವನಿರ್ಮಾಣ ುವಳಿ, ಇಂದಿರಾಗಾಂಧಿಯವರು ಹೇರಿದ ುರ್ಜೆನ್ಸಿಯನ್ನು ವಿರೋಧಿಸಿದ ಚಿಂತನೆಗಳು– ವೆಲ್ಲದರ ಫಲವಾಗಿ ಕೂಡ ಕರ್ನಾಟಕದಲ್ಲಿ ಜಾತ್ಯತೀತ ಂತನೆ ರೂಪುಗೊಂಡಿತು. ಈ ದಿಸೆಯಲ್ಲಿ ಎಪ್ಪತ್ತರ ಶಕದಲ್ಲಿ ವಿಶ್ವವಿದ್ಯಾಲಯಗಳ ಪ್ರಜ್ಞಾವಂತ ್ಯಾರ್ಥಿಗಳು ತಮ್ಮ ಹೆಸರುಗಳಲ್ಲಿದ್ದ ಜಾತಿಸೂಚಕ ುತುಗಳನ್ನು, ಜಾತಿ ಚಿಹ್ನೆಗಳನ್ನು ಕೈ ಬಿಟ್ಟದ್ದು ಕೂಡ ಂದು ಚಾರಿತ್ರಿಕ ಬೆಳವಣಿಗೆಯಾಗಿತ್ತು. ದಲಿತ ಂಘರ್ಷ ಸಮಿತಿಯನ್ನು ರೂಪಿಸಿದ ಬಿ. ಕೃಷ್ಣಪ್ಪ, ವನೂರ ಮಹಾದೇವ, ಸಿದ್ಧಲಿಂಗಯ್ಯ ಮುಂತಾದವರ ಂತನೆ ಹಾಗೂ ಹೋರಾಟಗಳು ಕೇವಲ ದಲಿತ ಜಾತಿ, ರ್ಗಗಳಿಗೆ ಮಾತ್ರ ಸೀಮಿತವಾಗದೆ, ಅವುಗಳ ಆಚೆಗೂ ತ್ಯತೀತ ಚಿಂತನೆಯನ್ನು ಬಿತ್ತಲು ನೆರವಾದವು. ವಚನ ುವಳಿಯಿಂದ ಪ್ರಭಾವಿತರಾದ ಸೂಕ್ಷ್ಮಜ್ಞರು, ಕುವೆಂಪು, ರಂತರ ಬರಹಗಳಿಂದ ಪ್ರಭಾವಗೊಂಡ ಸೂಕ್ಷ್ಮವಾದ ುಣ ತರುಣಿಯರು, ನಂತರ ನವ್ಯ ದಲಿತ, ಡಾಯ ಹಾಗೂ ಸಮುದಾಯದಂಥ ಗಚಳುವಳಿಗಳಿಂದ ರೂಪುಗೊಂಡ ಬರಹಗಾರ, ರಹಗಾರ್ತಿಯರು, ಓದುಗರು, ರಂಗಭೂಮಿ ನಟಿಯರು ಜಾತ್ಯತೀತತೆಯನ್ನು ಒಂದು ಲ್ಯವನ್ನಾಗಿ ಬೆಳೆಸತೊಡಗಿದರು. ಸಂಕ್ರಮಣ, ಶೂದ್ರ, ಮುಕ್ತಿ, ಪಂಚಮ ಥರದ ಕಿರುಪತ್ರಿಕೆಗಳ ಜೊತೆಗೆ ಜಾವಾಣಿ, ಮುಂಗಾರು, ಆಂದೋಲನ, ಲಂಕೇಶ್‌ಪತ್ರಿಕೆ, ಸುದ್ದಿಸಂಗಾತಿ ಪತ್ರಿಕೆಗಳು ಕೂಡ ಜಾತ್ಯತೀತ ನೋಟಕ್ರಮವನ್ನು ಬೆಳೆಸಿದವು.

ಡಾ. ಸಿದ್ಧಲಿಂಗಯ್ಯನವರು ವಿಧಾನ ಪರಿಷತ್ತಿನ ಶಾಸಕರಾಗಿದ್ದಾಗ ಸದನದಲ್ಲಿ ಮಂಡಿಸಿದ ಅಂತರ್ಜಾತೀಯ ವಿವಾಹಿತರಿಗೆ ಮೀಸಲಾತಿಯ ಬೇಡಿಕೆ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ರವಿವರ್ಮಕುಮಾರ್ ಅವರು ಅಂತರ್ಜಾತೀಯ ವಿವಾಹಿತರ ಮೀಸಲಾತಿಗಾಗಿ ಮಾಡಿರುವ ಶಿಫಾರಸುಗಳು ಕೂಡ ಚಾರಿತ್ರಿಕ ಮಹತ್ವವುಳ್ಳವು. ಈ ಸಂದರ್ಭಗಳಲ್ಲಿ ಡಾ. ಸಿದ್ಧಲಿಂಗಯ್ಯ ಹಾಗೂ ರವಿವರ್ಮಕುಮಾರ್ ಇಬ್ಬರೂ ಭಾರತದ ದೇವಾನುದೇವತೆಗಳೇ ಜಾತಿ ಮೀರಿ ಮದುವೆಯಾದ ಉದಾಹರಣೆಗಳನ್ನು ಉಲ್ಲೇಖಿಸಿದ್ದಾರೆ. ಜಾತ್ಯತೀತ ಒಲವಿನ ವಿವಾಹವೇದಿಕೆಯಾದ ಮಾನವ ಮಂಟಪ, ಕೆ.ರಾಮದಾಸ್, ಕಡಿದಾಳು ಶಾಮಣ್ಣ, ಎಚ್.ಎಲ್. ಕೇಶವಮೂರ್ತಿ, ಬಂಜಗೆರೆ ಜಯಪ್ರಕಾಶ್, ರವಿವರ್ಮಕುಮಾರ್, ಅನಸೂಯಮ್ಮ ಥರದ ನೂರಾರು ಜಾತ್ಯತೀತ ಚಿಂತಕ, ಚಿಂತಕಿಯರು ಬೆಂಬಲಿಸಿರುವ, ತಾತ್ವಿಕವಾಗಿ ಒಪ್ಪಿದವರೇ ಆಗಿದ್ದಾರೆ. ಬೌದ್ಧ, ಶರಣ, ಸೂಫಿ, ಮಂಟೇಸ್ವಾಮಿ, ಮಲೆಮಾದೇಶ್ವರ ಮಾರ್ಗಗಳನ್ನು ಆಧುನಿಕ ಕಾಲದಲ್ಲಿ ಹೊಸದಾಗಿ ವಿವರಿಸುತ್ತಿರುವ ಚಿಂತಕ, ಚಿಂತಕಿಯರು ಭಾರತದ ಧರ್ಮಗಳ ಒಳಗೇ ಇರುವ ಜಾತ್ಯತೀತ ಅಂಶಗಳನ್ನು ಮುನ್ನೆಲೆಗೆ ತರುವ ಯತ್ನ ಮಾಡುತ್ತಿದ್ದಾರೆ.

ಅದೇ ರೀತಿ, ಕಾಮ, ಪ್ರೇಮ, ಆಳವಾದ ರಾಷ್ಟ್ರೀಯತಾ ಭಾವ, ಸಮುದಾಯ ಪ್ರಜ್ಞೆ, ಅಸಲಿ ಆಧ್ಯಾತ್ಮ, ವೈಚಾರಿಕತೆ, ವೈಜ್ಞಾನಿಕ ನೋಟ, ಕರುಣೆ, ಮೇಲುಜಾತಿಯ ಜನರಲ್ಲಿರಬಹುದಾದ ನಿಜವಾದ ಪಾಪಪ್ರಜ್ಞೆ, ಸಂಸ್ಕೃತಿಯ ಸ್ವ-ಪರೀಕ್ಷೆ, ಮುಕ್ತತೆ, ತಾರುಣ್ಯದ ತೀವ್ರಸ್ಥಿತಿ, ಒಳಿತಿನ ಪ್ರಜ್ಞೆ, ಮುಗ್ಧತೆ...ಇವೇ ಮುಂತಾದ ಸ್ಥಿತಿಗಳಲ್ಲೂ ಭಾರತೀಯರು ಜಾತಿ ಮೀರಿ ನಡೆದುಕೊಳ್ಳಲೆತ್ನಿಸಿದ್ದಾರೆ. ಹಾಗೆಯೇ, ಹಿರಿಯರ ಅನಗತ್ಯ ಜಾತೀಯ ಹಾಗು ಮತೀಯ ದುರ್ಮಾರ್ಗದರ್ಶನವಿಲ್ಲದ ಸಂದರ್ಭದಲ್ಲಿ ಮಕ್ಕಳು ಹೆಚ್ಚು ಜಾತ್ಯತೀತವಾಗಿ ವರ್ತಿಸುತ್ತಾ ಬಂದಿದ್ದಾರೆ. ಕರ್ನಾಟಕದ ಚುನಾವಣೆಗಳಲ್ಲಿ ಕೂಡ ಜನ ಆಗಾಗ್ಗೆ ಜಾತಿ,

ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಿಂದೀಚೆಗೆ ಹೆಡೆಯೆತ್ತಿದ ಕೋಮುವಾದದಿಂದಾಗಿ ಜಾತ್ಯತೀತ ಚಿಂತನೆಯ ಸ್ವರೂಪದಲ್ಲಿ ಮುಖ್ಯ ಪಲ್ಲಟವುಂಟಾಯಿತು. ಜಾತೀಯತೆಯ ಭಾಗವಾಗಿದ್ದ ನೀಚತನ, ಸಂಕುಚಿತತೆ, ಇತರ ಜಾತಿಗಳ ದಮನ ಹಾಗೂ ಅನ್ಯರ ಬಗ್ಗೆ ಅಸಹ್ಯ ಸೃಷ್ಟಿಸುವ ವಿಕಾರಗಳು ಕಳೆದ ಮೂರು ದಶಕಗಳಲ್ಲಿ ಬೆಳೆದ ಕೋಮುವಾದದ ಭಾಗವೂ ಆಗತೊಡಗಿದವು. ಜಾತೀಯತೆಯ ಭಾಗವಾಗಿದ್ದ ಫ್ಯಾಸಿಸ್ಟ್ ಧೋರಣೆ ಕೋಮುವಾದಕ್ಕೂ ವರ್ಗಾವಣೆಗೊಂಡಿತು.

ಏರ್ಪಡಿಸಿರುವ ಸರಳ ಜಾತ್ಯತೀತ ವಿವಾಹಗಳು, ಸೈದ್ಧಾಂತಿಕ ಹಿನ್ನೆಲೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ವೇದಿಕೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಜಾತ್ಯತೀತ ಆಲೋಚನೆಯನ್ನು ಬಿತ್ತಿ, ಬೆಳೆಸುತ್ತಾ ಬಂದಿವೆ. ಕನ್ನಡದ ಹಲವು ಜನಪ್ರಿಯ ಸಿನಿಮಾಗಳಲ್ಲಿ ಬರುವ ಅಂತರ್ಜಾತೀಯ ಪ್ರೇಮಗಳ ಸನ್ನಿವೇಶಗಳಲ್ಲಿ ಕೂಡ ಜಾತ್ಯತೀತ ಚಿಂತನೆ ಮೇಲ್ಪದರದಲ್ಲಿಯಾದರೂ ಕಾಣಿಸಿಕೊಳ್ಳುತ್ತಾ ಬಂದಿದೆ. ವಿಶ್ವವಿದ್ಯಾಲಯಗಳ ಪಠ್ಯ ಪುಸ್ತಕಗಳ ಮೂಲಕ, ಉದಾರವಾದಿ ಧೋರಣೆಯ ಶಿಕ್ಷಣ ಸಂಸ್ಥೆಗಳ ಮೂಲಕ ಕೂಡ ಜಾತ್ಯತೀತ ನೋಟ ಪ್ರಸಾರಗೊಂಡಿದೆ. ಆಧುನಿಕ ಕನ್ನಡ ಸಾಹಿತ್ಯದ ಗಂಭೀರ ಕೃತಿಗಳ ಆಳದಲ್ಲಿ ಜಾತ್ಯತೀತ ಧ್ವನಿಗಳಿವೆ. ಸಾಹಿತ್ಯ, ಕಲೆ, ಸಿನಿಮಾ ಹಾಗೂ ಪತ್ರಿಕೋದ್ಯಮಗಳಲ್ಲಿ ತೊಡಗಿರುವ ಅನೇಕ ಗಂಭೀರವ್ಯಕ್ತಿಗಳು ಸಾಮಾನ್ಯವಾಗಿ ಜಾತ್ಯತೀತ ತತ್ವಕ್ಕೆ ಬದ್ಧರಾಗಿಯೇ ಉಳಿದಿದ್ದಾರೆ. ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳ ಕ್ರಿಯಾಶೀಲ ಅಧ್ಯಾಪಕ, ಅಧ್ಯಾಪಕಿಯರು, ಮಾನವ ಹಕ್ಕುಗಳ ಕಾರ್ಯಕರ್ತರು, ಲಾಯರುಗಳು, ವಿವಿಧ ರೀತಿಯ ಸಾಮಾಜಿಕನ್ಯಾಯಗಳ ಚಳುವಳಿಯಲ್ಲಿ ಭಾಗಿಯಾಗುತ್ತಿರುವವರು ಕೂಡ ಜಾತ್ಯತೀತತೆಯನ್ನು ಧರ್ಮಗಳನ್ನು ಮೀರಿ ಮತ ಚಲಾಯಿಸಿದ್ದಾರೆ. ನಗರಗಳಲ್ಲಿ ಹಾಗೂ ಬೆಂಗಳೂರಿನ ಕಾರ್ಪೊರೇಟ್ ವಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿರುವ ಅಂತರ್ಜಾತೀಯ ವಿವಾಹಗಳು ಕೂಡ ಆಧುನಿಕ ವಲಯಗಳಲ್ಲಿ ಹಬ್ಬುತ್ತಿರುವ ಒಂದು ಮಟ್ಟದ ಜಾತ್ಯತೀತತೆಯನ್ನು ಸೂಚಿಸುತ್ತವೆ. ಆದರೆ, ಮೀಸಲಾತಿಯ ಪ್ರಶ್ನೆ ಬಂದಾಗ ಈ ಕಾರ್ಪೊರೇಟ್ ವಲಯದ ಜನ ಜಾತ್ಯತೀತವಾಗಿ ಯೋಚಿಸಲಾರರು ಎಂಬುದು ಈ ವಲಯದ ಜಾತ್ಯತೀತತೆಯ ಸೀಮಿತತೆಯನ್ನೂ ಸೂಚಿಸುತ್ತದೆ.

ಭಾರತೀಯ ಸಮಾಜದ ಎಲ್ಲ ಜಾತಿಗಳೂ ಭಾಗವಹಿಸುವ ಪ್ರಜಾಪ್ರಭುತ್ವದ ಸ್ವರೂಪದಿಂದಾಗಿ ಸರ್ಕಾರಗಳು ಜಾತ್ಯತೀತವಾಗಿ ವರ್ತಿಸಲೇಬೇಕಾದ ಅನಿವಾರ್ಯತೆಯೂ ಇದೆ. ಭಾರತೀಯ ಸಂವಿಧಾನದ ಬಗೆಬಗೆಯ



ನಿರ್ದೇಶನಗಳಿಂದಾಗಿ ಹಾಗೂ ಸರ್ಕಾರಗಳನ್ನು ರೂಪಿಸಿದ ಕೆಲವು ರಾಜಕಾರಣಿಗಳು ಅಧಿಕಾರಿಗಳು ಹಾಗೂ ಸಲಹೆಗಾರರ ಆರೋಗ್ಯಕರ ನೋಟಗಳಿಂದಾಗಿ ಸರ್ಕಾರಿ ನೀತಿಗಳು ಹಾಗೂ ಯೋಜನೆಗಳಲ್ಲೂ ಜಾತ್ಯತೀತ ಚಿಂತನೆ ಕೆಲಸ ಮಾಡಿದೆ. ಉದ್ಯೋಗದಲ್ಲಿ ಮೀಸಲಾತಿ, ಎಲ್ಲ ಜಾತಿಯ ಹುಡುಗರೂ ಇರುವ ಹಿಂದುಳಿದ ವರ್ಗಗಳ ಹಾಸ್ಟೆಲುಗಳು, ಬಿ.ಡಿ.ಎ. ಸೈಟು ಹಂಚಿಕೆ, ವಿವಿಧ ಜಾತಿಗಳಿಗೆ ಸಮಾನ ಅವಕಾಶ ಕಲ್ಪಿಸುವ ಯೋಜನೆಗಳು, ಸರ್ಕಾರಿ ಶಾಲಾಕಾಲೇಜುಗಳಲ್ಲಿ ವಿವಿಧ ಜಾತಿಗಳ ವಿದ್ಯಾರ್ಥಿಗಳಿಗೆ ಒದಗಿರುವ ವಿದ್ಯಾಭ್ಯಾಸದ ಅವಕಾಶಗಳು...ಇವೇ ಮುಂತಾದ ಸರ್ಕಾರಿ ಕಾರ್ಯಕ್ರಮಗಳಲ್ಲೂ ಜಾತ್ಯತೀತ ಚಿಂತನೆಯ ಎಳೆಗಳಿವೆ. ಕಾಂಗ್ರೆಸ್, ಜೆ.ಡಿ.ಎಸ್, ಬಹುಜನ ಸಮಾಜ ಪಕ್ಷಗಳು ಕೂಡ ತಮ್ಮ ಕೆಲ ಬಗೆಯ ಚಿಂತನೆ, ಕಾರ್ಯನೀತಿ ಹಾಗೂ ಕಾರ್ಯಕ್ರಮಗಳಲ್ಲಿ ಜಾತ್ಯತೀತತೆಯನ್ನು ಬಿಂಬಿಸುತ್ತಾ ಬಂದಿವೆ. ಎಷ್ಟೇ ಮತೀಯವಾದಿ ಧೋರಣೆಯಿದ್ದರೂ, ಬಿಜೆಪಿ ಥರದ ಸರ್ಕಾರಗಳು ಕೂಡ ಜಾತ್ಯತೀತವಾಗಿ ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆಯೂ ಇದೆ. ಇವೆಲ್ಲದಕ್ಕೂ ಒಂದು ದೃಷ್ಟಿಯಿಂದ ಭಾರತೀಯ ಸಂವಿಧಾನದ ಜಾತ್ಯತೀತ ತಳಹದಿಯೇ ಕಾರಣವಾಗಿದೆ.

ಸಾಂಸ್ಕೃತಿಕ ಕೇಂದ್ರಗಳಲ್ಲಿರುವ ಅನೇಕ ಉದಾರವಾದಿ ಗುಂಪುಗಳು ಜಾತಿವಿರೋಧ ಹಾಗೂ ಜಾತ್ಯತೀತತೆಯ ಬಗ್ಗೆ ಇನ್ನೂ ಸ್ಪಷ್ಟವಿದ್ದಂತಿಲ್ಲ. ಅಲ್ಲದೆ, ಸೆಕ್ಯುಲರ್ ಪ್ರಜ್ಞೆಯ ವ್ಯಕ್ತಿಗಳು ಹಾಗೂ ವೇದಿಕೆಗಳ ಜೊತೆಗೆ ಬುದ್ಧಿಜೀವಿ ವರ್ಗದ ಬಹು ದೊಡ್ಡ ಭಾಗವಾದ ಲಾಯರುಗಳು, ಇಂಜಿನಿಯರ್‌ಗಳು, ವಿಜ್ಞಾನಿಗಳು, ಡಾಕ್ಟರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದಂತೆ ಕಾಣುತ್ತಿಲ್ಲ. ಸ್ತ್ರೀವಾದಿಗಳು ಜಾತೀಯತೆ ಹಾಗೂ ಕೋಮುವಾದಕ್ಕೆ ವಿರೋಧ ತೋರುತ್ತಾ ಬಂದಿದ್ದರೂ, ಮಹಿಳೆಯರನ್ನು ಉದ್ದೇಶಿಸಿ ಬರೆದಾಗ, ಮಾತಾಡಿದಾಗ ಈ ಸಮಸ್ಯೆಯನ್ನು ಹೆಚ್ಚು ಮುಖ್ಯವಾಗಿ ಪರಿಗಣಿಸಿದಂತಿಲ್ಲ.



೨

ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಿಂದೀಚೆಗೆ ಹೆಡೆಯೆತ್ತಿದ ಕೋಮುವಾದದಿಂದಾಗಿ ಜಾತ್ಯತೀತ ಚಿಂತನೆಯ ಸ್ವರೂಪದಲ್ಲಿ ಮುಖ್ಯ ಪಲ್ಲಟವುಂಟಾಯಿತು. ಜಾತೀಯತೆಯ ಭಾಗವಾಗಿದ್ದ ನೀಚತನ, ಸಂಕುಚಿತತೆ, ಇತರ ಜಾತಿಗಳ ದಮನ ಹಾಗೂ ಅನ್ಯರ ಬಗ್ಗೆ ಅಸಹ್ಯ ಸೃಷ್ಟಿಸುವ ವಿಕಾರಗಳು ಕಳೆದ ಮೂರು ದಶಕಗಳಲ್ಲಿ ಬೆಳೆದ ಕೋಮುವಾದದ ಭಾಗವೂ ಆಗತೊಡಗಿದವು. ಜಾತೀಯತೆಯ ಭಾಗವಾಗಿದ್ದ ಫ್ಯಾಸಿಸ್ಟ್ ಧೋರಣೆ ಕೋಮುವಾದಕ್ಕೂ ವರ್ಗಾವಣೆಗೊಂಡಿತು. ಅಸ್ಪೃಶ್ಯತೆಗೆ ಒಗ್ಗಿ ಹೋದ ಕಂದಾಚಾರಿ ಹಿಂದೂ ಮನಸ್ಸು ಹೊಸಹೊಸ ಅಸ್ಪೃಶ್ಯತೆಗಳನ್ನು ಸೃಷ್ಟಿಸಲಾರಂಭಿಸಿತು. ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಬಗೆಗೆ ಅಸ್ಪೃಶ್ಯತೆಯ ಭಾವವನ್ನು ಬೆಳೆಸತೊಡಗಿತು. ಹಾಗೆಯೇ ಜನರ ಭಕ್ತಿ, ನಂಬಿಕೆಗಳ ದುರುಪಯೋಗ, ಚರಿತ್ರೆ ಹಾಗೂ ಚಾರಿತ್ರಿಕ ಬೆಳವಣಿಗೆಗಳ ವಿಕೃತ ವ್ಯಾಖ್ಯಾನ, ಧರ್ಮದ ದುರ್ಬಳಕೆಯ ಮೂಲಕ ಅಧಿಕಾರ ಹಿಡಿಯುವ ರಾಜಕೀಯ ಪಕ್ಷಗಳ ಕುಟಿಲ ಯೋಜನೆಗಳು, ಪ್ರಬಲ ಜಾತಿಗಳ ಯಜಮಾನೀ ಹಿಡಿತ, ವೈದಿಕ ಹುನ್ನಾರಗಳು ಹಾಗೂ ವ್ಯಾಪಾರಿ ಶಕ್ತಿಗಳು ಕೂಡ ಕೋಮುವಾದವನ್ನು ಬೆಳೆಸಿವೆ, ಬೆಳೆಸುತ್ತಿವೆ. ಈ ದಿಸೆಯಲ್ಲಿ ಕೋಮುವಾದವನ್ನು ಬೆಳೆಸಲೆಂದೇ ಹುಟ್ಟಿರುವ ಆರೆಸ್ಸೆಸ್, ವಿ.ಎಚ್.ಪಿ ಮತ್ತು ಅವುಗಳ ಅಂಗಸಂಸ್ಥೆಗಳು ಹಾಗೂ ಧರ್ಮಗುರುಗಳ ಕುಮ್ಮಕ್ಕು ನೇರವಾಗಿಯೂ ಹಿನ್ನೆಲೆಯಲ್ಲಿಯೂ ಕೆಲಸಮಾಡುತ್ತಿದೆ. ಬಹುಸಂಖ್ಯಾತ ಕೋಮುವಾದದಿಂದಾಗಿ ಜಮಾತೆ ಇಸ್ಲಾಮಿ ಥರದ ಅಲ್ಪಸಂಖ್ಯಾತ ಕೋಮುವಾದವೂ ತಲೆಯೆತ್ತಿದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಆಧುನಿಕ ಕರ್ನಾಟಕದಲ್ಲಿ ಕಳೆದ ಮೂರು ದಶಕಗಳಲ್ಲಿ ಜಾತೀಯತೆಯ ಜೊತೆಜೊತೆಗೇ, ಅದಕ್ಕಿಂತ ಅಪಾಯಕಾರಿಯಾದ ಕೋಮುವಾದವೂ ಪ್ರಬಲವಾಗತೊಡಗಿತು. ಈ ಘಟ್ಟದಲ್ಲಿ, ಈ ಬರಹದ ಮೊದಲ ಭಾಗದಲ್ಲಿ ಉಲ್ಲೇಖಿಸಿದ ಎಲ್ಲ ಜನತಾ ಚಳುವಳಿಗಳೂ ಕ್ರಮೇಣ ಕೋಮುವಾದವನ್ನು ವಿರೋಧಿಸುವ ಹಾಗೂ ಜಾತ್ಯತೀತತೆಯನ್ನು ಬೆಂಬಲಿಸುವ ಹೋರಾಟಗಳ ಜೊತೆ ಸೇರಿದ್ದು ಸಹಜವಾಗಿತ್ತು ಮತ್ತು ಅನಿವಾರ್ಯವಾಗಿತ್ತು. ಬಹುಸಂಖ್ಯಾತರ ಕೋಮುವಾದದಿಂದ ಆತಂಕಕ್ಕೊಳಗಾದ ಅಲ್ಪಸಂಖ್ಯಾತ ಬುದ್ಧಿಜೀವಿಗಳ ಜೊತೆಗೆ, ಅಲ್ಪಸಂಖ್ಯಾತರ ಕೆಲವು ವೇದಿಕೆಗಳು ಕೂಡ ಈ ಹೋರಾಟಗಳ ಜೊತೆ ಸೇರಿಕೊಂಡವು. ಅಲ್ಪಸಂಖ್ಯಾತ ವಲಯದ ಬುದ್ಧಿಜೀವಿಗಳು ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಕೋಮುವಾದಗಳೆರಡನ್ನೂ ವಿರೋಧಿಸುವ ಕೆಲಸ ಮಾಡಬೇಕಾಯಿತು.

ತೊಂಬತ್ತರ ದಶಕದ ಅಯೋಧ್ಯಾ ರಾಜಕೀಯ ಆರಂಭಿಸಿದ ಹಿಂಸಾಮಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಕರ್ನಾಟಕದ ಜಾತ್ಯತೀತ ಹೋರಾಟಕ್ಕೆ ನಿರ್ದಿಷ್ಟವಾದ ಕೋಮುವಾದ ವಿರೋಧದ ಸ್ವರೂಪ ಸೇರಿಕೊಂಡಿತು. ಬಗೆಬಗೆಯ ಸಮಾಜಪರ ವೇದಿಕೆಗಳು ಒಂದಾಗಿ ಕೋಮುಸೌಹಾರ್ದ ವೇದಿಕೆಯನ್ನು ರೂಪಿಸಿದವು. ಆರಂಭದಲ್ಲಿ ಈ ವೇದಿಕೆಯನ್ನು ಬದ್ಧ ಎಡಪಂಥೀಯ ನಾಯಕರು ರೂಪಿಸಿದರೂ, ಕ್ರಮೇಣ ಅದರಲ್ಲಿ ಕರ್ನಾಟಕದ ದಲಿತ ಚಳುವಳಿಯ ಹಲವು ಬಣಗಳು, ಕರ್ನಾಟಕ ರಾಜ್ಯ ರೈತ ಸಂಘ, ಮಾನವ ಹಕ್ಕುಗಳ ಕಾರ್ಯಕರ್ತರು, ಕಮ್ಯೂನಿಸ್ಟ್ ಪಕ್ಷಗಳಿಂದ ಹಿಡಿದು ಹಲಬಗೆಯ ಜಾತ್ಯತೀತ ವೇದಿಕೆಗಳು, ಸರ್ಕಾರೇತರ ಸಂಸ್ಥೆಗಳು, ಜಾತ್ಯತೀತ ಪತ್ರಕರ್ತರು, ಬರಹಗಾರ, ಬರಹಗಾರ್ತಿಯರು ಪ್ರಜಾಸತ್ತಾತ್ಮಕ ಸಂಘಟನೆಗಳು ಒಂದುಗೂಡಿದ್ದು ಕರ್ನಾಟಕದ ಚರಿತ್ರೆಯ ಮಹತ್ವದ ಬೆಳವಣಿಗೆಯೊಂದಕ್ಕೆ ಕಾರಣವಾಯಿತು. ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಬೆಳೆಸಲು ಕೋಮುವಾದಿ ಶಕ್ತಿಗಳು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯನ್ನು ನೆಪವಾಗಿಸಿಕೊಂಡ ಆ ಕಾಲಘಟ್ಟದಲ್ಲಿ ಕೋಮುಸೌಹಾರ್ದ ವೇದಿಕೆಯ ಮೂಲಕ ಜಾತ್ಯತೀತ ಶಕ್ತಿಗಳು ಕರ್ನಾಟಕದ ಕೋಮುವಾದೀಕರಣಕ್ಕೆ ಪ್ರಬಲ ವಿರೋಧವೊಡ್ಡಿದವು. 'ಜನಮತ: ಕೋಮುವಾದದ ವಿರುದ್ಧ ಕರ್ನಾಟಕ' ಸಂಘಟನೆ ಕೂಡ ಕೆಲ ಕಾಲ ಕೋಮುವಾದದ ವಿರುದ್ಧ ಜನಮತವನ್ನು ರೂಪಿಸಿತು. ರಹಮತ್ ತರೀಕೆರೆ, ಎಸ್.ಎಸ್.ಹಿರೇಮಠ, ಜಿ.ರಾಜಶೇಖರ್, ಫಣಿರಾಜ್, ವಸು, ಶಿವಸುಂದರ್, ಎಸ್.ಚಂದ್ರಶೇಖರ್ ಮೊದಲಾದವರು ಚರಿತ್ರೆ, ಸಾಹಿತ್ಯ, ಸಮಾಜವಿಜ್ಞಾನಗಳಲ್ಲಿ ನಡೆಸಿರುವ ಜವಾಬ್ದಾರಿಯುತ ಸಂಶೋಧನೆಗಳು ಕೋಮುವಾದದ ಪಿತೂರಿಗಳನ್ನು ಬಯಲಿಗೆಳೆಯುತ್ತಾ ಜಾತ್ಯತೀತ ಚಿಂತನೆಯನ್ನು ಬಲಪಡಿಸಿವೆ. ಎಂ.ಡಿ.ನಂಜುಂಡಸ್ವಾಮಿ, ಯು.ಆರ್.ಅನಂತಮೂರ್ತಿ, ಕೆ.ಮರುಳಸಿದ್ಧಪ್ಪ, ರಾಜೇಂದ್ರ ಚೆನ್ನಿ, ಜಿ.ಕೆ.ಗೋವಿಂದರಾವ್, ಲಂಕೇಶ್, ತೇಜಸ್ವಿ, ಡಿ.ಆರ್.ನಾಗರಾಜ್, ಕಿ.ರಂ.ನಾಗರಾಜ್, ಗಿರೀಶ್ ಕಾರ್ನಾಡ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಬಾನು ಮುಷ್ತಾಕ್, ಸಾರಾ ಅಬೂಬ್‌ಕರ್, ಜಿ.ರಾಮಕೃಷ್ಣ, ದೇವನೂರ ಮಹಾದೇವ, ದಿನೇಶ್‌ಅಮೀನಮಟ್ಟು, ಪಟ್ಟಾಭಿರಾಮ ಸೋಮಯಾಜಿ, ಶೂದ್ರ ಶ್ರೀನಿವಾಸ್, ಇಂದೂಧರ ಹೊನ್ನಾಪುರ, ಬಿ.ಎಂ.ಹನೀಫ್, ಸುಬ್ಬುಹೊಲೆಯಾರ್, ಗೌರಿ ಲಂಕೇಶ್, ಕೆ.ನೀಲಾ, ಅಗ್ನಿ ಶ್ರೀಧರ್, ಟಿ.ಕೆ.ತ್ಯಾಗರಾಜ್, ಅಬ್ದುಲ್ ಬಶೀರ್, ಬಂಜಗೆರೆ ಜಯಪ್ರಕಾಶ್, ಮೊಗಳ್ಳಿ ಗಣೇಶ್, ಬಿ.ಎಂ.ಪುಟ್ಟಯ್ಯ, ದು.ಸರಸ್ವತಿ, ಮಲ್ಲಿಕಾ ಘಂಟಿ ಹಾಗೂ ಇಲ್ಲಿ ಹೆಸರಿಸದ ಇದೇ ರೀತಿಯ ನೂರಾರು ಬರಹಗಾರರು, ಹೋರಾಟಗಾರರು ತಮ್ಮ ಚಿಂತನೆ ಹಾಗೂ ಕ್ರಿಯೆಗಳ ಮೂಲಕ ಕೋಮುವಾದಕ್ಕೆ ವಿರೋಧ ಒಡ್ಡುತ್ತಾ ಬಂದಿದ್ದಾರೆ. ಬಿ.ಶಾಮಸುಂದರ್, ಬಿ.ಕೃಷ್ಣಪ್ಪ, ಕೆ.ರಾಮದಾಸ್, ಕೆ.ಎಸ್.ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್, ಜಿ.ಎನ್.ನಾಗರಾಜ್, ಸಿದ್ದನಗೌಡ ಪಾಟೀಲ, ಕೆ.ಎಲ್.ಅಶೋಕ್, ಮಾವಳ್ಳಿ ಶಂಕರ್, ಲಕ್ಷ್ಮೀನಾರಾಯಣ ನಾಗವಾರ, ಡಿ.ಜಿ.ಸಾಗರ್, ವೆಂಕಟಸ್ವಾಮಿ, ಗೋವಿಂದಯ್ಯ ಥರದ

ಜಾತ್ಯತೀತತೆ ಎನ್ನುವುದು ಕೇವಲ ಕೋಮುವಾದ ಹುಟ್ಟು ಹಾಕುವ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಕೆಲಸಕ್ಕೆ ಮಾತ್ರ ಸೀಮಿತವಾಗಬಾರದು. ಬದಲಿಗೆ ಜಾತ್ಯತೀತತೆಯನ್ನು ಒಂದು ವಿಶಾಲ ನೋಟಕ್ರಮವಾಗಿ ಬೆಳೆಸಿ,ಜಾತ್ಯತೀತ ಮೌಲ್ಯಗಳನ್ನು, ಆಶಯಗಳನ್ನು ಜನರ ಜೀವನಕ್ರಮದ ಭಾಗವಾಗಿ ಬೆಳೆಸಲು ನಿರಂತರವಾಗಿ ಕೆಲಸ ಮಾಡಬೇಕಾಗುತ್ತದೆ. ಜಾತ್ಯತೀತತೆ ಎನ್ನುವುದು ನಾವೂ ನೆಮ್ಮದಿಯಿಂದ ಬದುಕಿ ನಮ್ಮ ಸುತ್ತಲಿನವರನ್ನೂ ನೆಮ್ಮದಿಯಿಂದ ಬದುಕಲು ನೆರವಾಗುವ ಉದಾತ್ತ ಜೀವನಕ್ರಮ ಎಂಬುದನ್ನು ಮತ್ತೆ ಮತ್ತೆ ಮನವರಿಕೆ ಮಾಡಿಕೊಡುತ್ತಿರಬೇಕಾಗುತ್ತದೆ.

ಹೋರಾಟಗಾರರು ಕೋಮುವಾದದ ವಿರುದ್ಧ ನಾಭಿಪ್ರಾಯ ರೂಪಿಸುತ್ತಾ ಬಂದಿದ್ದಾರೆ. ಹಿಂದೂ ೋಮುವಾದವನ್ನು ವಿರೋಧಿಸುವ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ಮುರುಘಾ ಶರಣರು, ಗದುಗಿನ ತೋಂಟದಾರ್ಯ ಸ್ವಾಮೀಜಿ, ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮೀಜಿಯವರಂಥ ಕೆಲವು

ಉದಾರವಾದಿ ಲಿಂಗಾಯತ ಹಾಗೂ ಶೂದ್ರ ಜಾತಿಗಳ ರ್ಮಗುರುಗಳು, ಫಾದರ್ ಚೆಸರಾ ಥರದ ಕ್ರೈಸ್ತ ಾದ್ರಿಗಳು ಕೂಡ ಕೋಮುವಾದ ವಿರೋಧಿ ಹೋರಾಟಗಳಲ್ಲಿ ಭಾಗಿಯಾದರು.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ತಳವೂರಿದ ಮೇಲೆ ಬೇರೆ ಬೇರೆ ರೀತಿಯಲ್ಲಿ ಧ್ರುವೀಕರಣಗೊಳ್ಳತೊಡಗಿದ ಜಾತೀಯ ಹಾಗೂ ಮತೀಯ ಶಕ್ತಿಗಳಿಗೆ ಇವತ್ತಿಗೂ ಹಲಬಗೆಯ ಜಾತ್ಯತೀತ ೇದಿಕೆಗಳು, ಗಾಂಧೀವಾದಿಗಳು, ಎಡಪಂಥೀಯರು, ಸಮಾಜವಾದಿಗಳು, ಎಡಪಕ್ಷಗಳು ಹಾಗೂ ದಲಿತ ಸಂಘಟನೆಗಳು ವಿರೋಧ ತೋರಿಸುತ್ತಲೇ ಇವೆ. ಈ ವಿರೋಧವು ಪತ್ರಿಕೆಗಳು, ಪ್ರತಿಭಟನೆ, ಸಾಹಿತ್ಯ, ಬರಹ, ಸಂವಾದ, ವಿಚಾರ ಸಂಕಿರಣ, ಬೋಧನೆ ಹಾಗೂ ಕಾರ್ಯಕ್ರಮಗಳ ಮೂಲಕ ನಿರಂತರವಾಗಿ ವ್ಯಕ್ತವಾಗುತ್ತಲೇ ಇದೆ.

೨

ಕರ್ನಾಟಕದ ಟಿಪಿಕಲ್ ಸೆಕ್ಯುಲರ್ ಪ್ರಜ್ಞೆ ಏಕಕಾಲಕ್ಕೆ ಜಾತಿವಿರೋಧಿ ಹಾಗೂ ಕೋಮುವಾದ ವಿರೋಧಿ ಎರಡೂ ಆಗಿದೆ. ಆದರೆ ಕರ್ನಾಟಕದಲ್ಲಿ ಈ ಬಗೆಯ ಸೆಕ್ಯುಲರ್ ಪ್ರಜ್ಞೆ ಇನ್ನಷ್ಟು ಗಟ್ಟಿಯಾಗಿ ಬೆಳೆಯಲು ಇರುವ ಕೆಲವು ತೊಡಕುಗಳನ್ನೂ ಸರಿಯಾಗಿ ಗಮನಿಸಬೇಕು. ಸಮಾಜಪರ ಕೆಲಸದಲ್ಲಿ ಭಾಗಿಯಾಗಿರುವ ಅನೇಕ ಸಂಘಟನೆಗಳಿಗೆ ಜಾತ್ಯತೀತತೆಯ ಬಗ್ಗೆ ಸ್ಪಷ್ಟ ನಿಲುವು ಹಾಗೂ ಅರಿವು ಇಲ್ಲದಿರುವುದು ಕೂಡ ಒಂದು ಮುಖ್ಯ ಸಮಸ್ಯೆಯೇ ಆಗಿದೆ. ಉದಾಹರಣೆಗೆ, ಅರಸು ಆಡಳಿತ ಹಾಗೂ ಆನಂತರದ ಕೆಲವು ಘಟ್ಟಗಳಲ್ಲಿ ಹಿಂದುಳಿದ ವರ್ಗಗಳು ಹಾಗೂ ಹಿಂದುಳಿದ ಜಾತಿಗಳ ಮರುಧೃವೀಕರಣವಾದಾಗ ಅವುಗಳ ನಾಯಕರು ಜಾತಿವಿನಾಶ ಹಾಗೂ ಜಾತ್ಯತೀತತೆಯ ಅಂಶಗಳನ್ನು ಈ ಚಳುವಳಿಯ ಜೊತೆಗೆ ಸಮರ್ಥವಾಗಿ ಬೆಸೆಯಲಾರದೆ ಹೋದರು. ಅಲ್ಪಸಂಖ್ಯಾತ, ಹಿಂದುಳಿದ ದಲಿತರನ್ನು ಒಗ್ಗೂಡಿಸಲು ಯತ್ನಿಸಿದ 'ಅಹಿಂದ'ದ ಪರಿಕಲ್ಪನೆ ಕೂಡ ಜಾತ್ಯತೀತ ಕಲ್ಪನೆಯಾಗಿ ವಿಕಾಸಗೊಳ್ಳಲಿಲ್ಲ. ಯಜಮಾನೀ ಜಾತಿಗಳ ಹಿಡಿತದಿಂದ ನರಳಿರುವ ಹಿಂದುಳಿದ ಜಾತಿಗಳು ಒಗ್ಗೂಡಿದ ಘಟ್ಟದಲ್ಲಿ, ಜಾತಿಪದ್ಧತಿಗೆ ಮಾರಣಾಂತಿಕ ಹೊಡೆತ ಕೊಡುವುದರ ಮೂಲಕವೇ ಹಿಂದುಳಿದವರ ನಿಜವಾದ ಬಿಡುಗಡೆ ಸಾಧ್ಯ ಎಂಬ ಮುಖ್ಯ ಸತ್ಯವನ್ನು ಈ ಜಾತಿಗಳ ನಾಯಕರು ಮರೆತರು. ಬದಲಿಗೆ ತಂತಮ್ಮ ಜಾತಿಗಳ ಜನರನ್ನು ಒಗ್ಗೂಡಿಸುವುದರ ಮೂಲಕ ಸಣ್ಣಪುಟ್ಟ ನಾಯಕತ್ವ ಪಡೆಯಲು ಈ ನಾಯಕರು ಮುಂದಾದರು. ಹಿಂದುಳಿದ ಜಾತಿಗಳ ಕೆಲವು ನಾಯಕರಲ್ಲಿ ಇದ್ದ ಒಂದು ಮಟ್ಟದ ಜಾತ್ಯತೀತ ಪ್ರಜ್ಞೆ ಅವರ ಹಿಂದುಳಿದ ಜಾತಿಗಳ ಅನುಯಾಯಿಗಳಿಗೆ ವರ್ಗಾವಣೆಯಾಗಲಿಲ್ಲ. ದಲಿತ ಸಂಘರ್ಷ ಸಮಿತಿಗಳ ಮೂಲಕ ದಲಿತ ಪ್ರಜ್ಞೆ ಹಾಗೂ ಜಾತ್ಯತೀತ ಪ್ರಜ್ಞೆಗಳು ದಲಿತ ಸಮುದಾಯಗಳಲ್ಲಿ ಬೆಳೆದಂತೆ, ಹಿಂದುಳಿದ ವರ್ಗಗಳ



ಚಳುವಳಿಯ ಮೂಲಕ ಹಿಂದುಳಿದ ಜಾತಿಗಳಲ್ಲಿ ಶೂದ್ರಪ್ರಜ್ಞೆ ಹಾಗೂ ಜಾತ್ಯತೀತ ಪ್ರಜ್ಞೆಗಳು ಬೆಳೆಯಲಿಲ್ಲ. ಹೀಗಾಗಿ, ಹಿಂದುಳಿದ ಜಾತಿಗಳ ಹುಡುಗರು ಭಜರಂಗದಳದಂಥ ಕ್ರೂರ ಮತೀಯ ವೇದಿಕೆಗಳ ಸೇವಕವರ್ಗವಾಗುವ ಹೀನಾಯ ಸ್ಥಿತಿ ತಲುಪಿ, ಕೋಮುವಾದಿ ಹಿಂಸೆಯನ್ನು ಬಿತ್ತುವವರ ದಾಳಗಳಾದರು. ಜಾತಿವಿರೋಧದ ಆಶಯವಿರುವ ಬಹುಜನ ಸಮಾಜ ಪಕ್ಷ ಕೂಡ ಬರಬರುತ್ತಾ, 'ಜಾತಿವಿನಾಶಕ್ಕಿಂತ ಜಾತಿಗಳ ಒಗ್ಗೂಡುವಿಕೆಯ ಮೂಲಕವೇ ಬಹುಜನರು ಅಧಿಕಾರ ಹಿಡಿಯಬೇಕು' ಎಂದು ವಾದಿಸಿದ ಕಾನ್ಸೀರಾಮ್ ಅವರ ಚಿಂತನೆಯಿಂದ ಹೆಚ್ಚು ಪ್ರಭಾವಿತವಾಯಿತು.

ಸಾಂಸ್ಕೃತಿಕ ಕೇಂದ್ರಗಳಲ್ಲಿರುವ ಅನೇಕ ಉದಾರವಾದಿ ಗುಂಪುಗಳು ಜಾತಿವಿರೋಧ ಹಾಗೂ ಜಾತ್ಯತೀತತೆಯ ಬಗ್ಗೆ ಇನ್ನೂ ಸ್ಪಷ್ಟವಿದ್ದಂತಿಲ್ಲ. ಅಲ್ಲದೆ, ಸೆಕ್ಯುಲರ್ ಪ್ರಜ್ಞೆಯ ವ್ಯಕ್ತಿಗಳು ಹಾಗೂ ವೇದಿಕೆಗಳ ಜೊತೆಗೆ ಬುದ್ಧಿಜೀವಿ ವರ್ಗದ ಬಹು ದೊಡ್ಡ ಭಾಗವಾದ ಲಾಯರುಗಳು, ಇಂಜಿನಿಯರ್‌ಗಳು, ವಿಜ್ಞಾನಿಗಳು, ಡಾಕ್ಟರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದಂತೆ ಕಾಣುತ್ತಿಲ್ಲ. ಸ್ತ್ರೀವಾದಿಗಳು ಜಾತೀಯತೆ ಹಾಗೂ ಕೋಮುವಾದಕ್ಕೆ ವಿರೋಧ ತೋರುತ್ತಾ ಬಂದಿದ್ದರೂ, ಮಹಿಳೆಯರನ್ನು ಉದ್ದೇಶಿಸಿ ಬರೆದಾಗ, ಮಾತಾಡಿದಾಗ ಈ ಸಮಸ್ಯೆಯನ್ನು ಹೆಚ್ಚು ಮುಖ್ಯವಾಗಿ ಪರಿಗಣಿಸಿದಂತಿಲ್ಲ. ಕೋಮುವಾದದಿಂದ ಅಪಾರ ಅಪಾಯಕ್ಕೆ ಒಳಗಾಗುವ ಹಾಗೂ ಕೋಮುವಾದ ಹಬ್ಬಿಸುವ ಕಂದಾಚಾರದಿಂದಾಗಿ ತಮ್ಮ ಅವಕಾಶಗಳನ್ನು ಹಾಗೂ ಚಲನೆಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಮಹಿಳೆಯರಿಗೆ ಕೋಮುವಾದದ ಬಗ್ಗೆ ವ್ಯಾಪಕ ಎಚ್ಚರ ಮೂಡಿಸಲು ಸ್ತ್ರೀವಾದಿಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಹೀಗಾಗಿ, ಮಹಿಳೆಯರು ಪುರುಷರು ಬಿತ್ತುವ ಕೋಮು ಪೂರ್ವಗ್ರಹದ ಬಲಿಪಶುಗಳೂ ಆಗಿದ್ದಾರೆ; ತಮಗರಿವಿಲ್ಲದೆಯೇ ಆ ಪೂರ್ವಗ್ರಹವನ್ನು ಹಬ್ಬಿಸುವ ಪ್ರಸಾರಕೇಂದ್ರಗಳೂ ಆಗಿದ್ದಾರೆ. ಈ ಅಪಾಯವನ್ನು ನಮ್ಮ ಸ್ತ್ರೀವಾದಿಗಳು ದೊಡ್ಡ ಮಟ್ಟದಲ್ಲಿ ಗ್ರಹಿಸಿ ವಿವರಿಸಿದಂತಿಲ್ಲ. ಕೋಮುವಾದ ಕುರಿತಂತೆ ವಿದ್ಯಾರ್ಥಿ ಸಮುದಾಯವನ್ನು ಎಚ್ಚರಿಸುತ್ತಾ, ಜಾತ್ಯತೀತತೆಯನ್ನು ಬೆಳೆಸುವ ಕೆಲಸ ದಲಿತ ಚಳುವಳಿ ಹಾಗೂ ಎಸ್.ಎಫ್.ಐ ಥರದ ಕೆಲವೇ ಸಂಘಟನೆಗಳು ಹಾಗೂ ಬಿಡಿ ಬಿಡಿ ವ್ಯಕ್ತಿಗಳ ಮಟ್ಟದಲ್ಲಿ ಮಾತ್ರ ನಡೆಯುತ್ತಾ ಬಂದಿದೆಯೇ ಹೊರತು ಉಳಿದ ವೇದಿಕೆಗಳು ಇತ್ತ ಹೆಚ್ಚು ಗಮನ ಕೊಟ್ಟಂತಿಲ್ಲ.

ಕರ್ನಾಟಕದ ವಿವಿಧ ಸಮುದಾಯಗಳು ಅನುಸರಿಸುತ್ತಿರುವ ಹಲವು ಧರ್ಮಗಳಲ್ಲಿ ಇರಬಹುದಾದ ಒಂದು ಮಟ್ಟದ ಜಾತ್ಯತೀತ ಲಕ್ಷಣಗಳಿಗೂ ಕೋಮುವಾದದಿಂದಾಗಿ ಹಾಗೂ ಈ ಧರ್ಮಗಳ ಒಳಗೇ ಇರುವ ಸನಾತನ ಧೋರಣೆಯಿಂದಾಗಿ ಹಿನ್ನಡೆಯಾದಂತಿದೆ. ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಧರ್ಮಗಳಲ್ಲಿ ಮನುಧರ್ಮವನ್ನು ಹಾಗೂ ವೈದಿಕ ಹಿಂದೂ ಧರ್ಮವನ್ನು ಪೋಷಿಸುತ್ತಾ ಬಂದಿರುವ ಸ್ಮಾರ್ತ ಹಾಗೂ ಮಾಧ್ವ ಧರ್ಮಗಳನ್ನು ಬಿಟ್ಟರೆ ಉಳಿದ ಅನೇಕ ಧರ್ಮಗಳ ನೋಟಕ್ರಮಗಳು ಚರಿತ್ರೆಯಲ್ಲಿ ಜಾತಿಪದ್ಧತಿಗೆ ಒಂದಲ್ಲ ಒಂದು ಬಗೆಯ ಭಿನ್ನಮತವನ್ನು ವ್ಯಕ್ತಪಡಿಸುತ್ತಾ ಬಂದಿವೆ. ಲಿಂಗಾಯತ ಧರ್ಮ, ಜೈನ ಧರ್ಮ, ಸಿಖ್ ಧರ್ಮ, ಬೌದ್ಧ ಧರ್ಮ, ಕ್ರಿಶ್ಚಿಯನ್ ಧರ್ಮ, ಇಸ್ಲಾಂ, ಸೂಫಿ ಮಾರ್ಗ, ಮಂಟೇಸ್ವಾಮಿ, ಮಲೆಮಾದೇಶ್ವರ ಚಿಂತನಾ ಕ್ರಮಗಳು ಜಾತಿಪದ್ಧತಿಗೆ ತಾತ್ವಿಕ ವಿರೋಧ ವ್ಯಕ್ತಪಡಿಸಿವೆ. ಆದರೆ ಈಚಿನ ದಶಕಗಳಲ್ಲಿ ಜೈನ, ಲಿಂಗಾಯತ, ಸಿಖ್ ಮಾರ್ಗಗಳು ತಮ್ಮ ಧರ್ಮಗಳ ಮೂಲದಲ್ಲಿರುವ ಜಾತ್ಯತೀತ ಸತ್ವವನ್ನೇ ನಾಶಮಾಡಿಕೊಂಡಂತೆ ಕಾಣುತ್ತದೆ. ಈ ಸ್ಥಿತಿಗೆ ಆಯಾ

ಹಿಂದುಳಿದ ಜಾತಿಗಳ ಕೆಲವು ನಾಯಕರಲ್ಲಿ ಇದ್ದ ಒಂದು ಮಟ್ಟದ ಜಾತ್ಯತೀತ ಪ್ರಜ್ಞೆ ಅವರ ಹಿಂದುಳಿದ ಜಾತಿಗಳ ಅನುಯಾಯಿಗಳಿಗೆ ವರ್ಗಾವಣೆಯಾಗಲಿಲ್ಲ. ದಲಿತ ಸಂಘರ್ಷ ಸಮಿತಿಗಳ ಮೂಲಕ ದಲಿತ ಪ್ರಜ್ಞೆ ಹಾಗೂ ಜಾತ್ಯತೀತ ಪ್ರಜ್ಞೆಗಳು ದಲಿತ ಸಮುದಾಯಗಳಲ್ಲಿ ಬೆಳೆದಂತೆ, ಹಿಂದುಳಿದ ವರ್ಗಗಳ ಚಳುವಳಿಯ ಮೂಲಕ ಹಿಂದುಳಿದ ಜಾತಿಗಳಲ್ಲಿ ಶೂದ್ರಪ್ರಜ್ಞೆ ಹಾಗೂ ಜಾತ್ಯತೀತ ಪ್ರಜ್ಞೆಗಳು ಬೆಳೆಯಲಿಲ್ಲ. ಹೀಗಾಗಿ, ಹಿಂದುಳಿದ ಜಾತಿಗಳ ಹುಡುಗರು ಭಜರಂಗದಳದಂಥ ಕ್ರೂರ ಮತೀಯ ವೇದಿಕೆಗಳ ಸೇವಕವರ್ಗವಾಗುವ ಹೀನಾಯ ಸ್ಥಿತಿ ತಲುಪಿ, ಕೋಮುವಾದಿ ಹಿಂಸೆಯನ್ನು ಬಿತ್ತುವವರ ದಾಳಗಳಾದರು.



ಜಾತ್ಯತೀತತೆ ಎನ್ನುವುದು ಕೇವಲ ಕೋಮುವಾದ ಹುಟ್ಟು ಹಾಕುವ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಕೆಲಸಕ್ಕೆ ಮಾತ್ರ ಸೀಮಿತವಾಗಬಾರದು. ಬದಲಿಗೆ ಜಾತ್ಯತೀತತೆಯನ್ನು ಒಂದು ವಿಶಾಲ ನೋಟಕ್ರಮವಾಗಿ ಬೆಳೆಸಿ, ಜಾತ್ಯತೀತ ಮೌಲ್ಯಗಳನ್ನು, ಆಶಯಗಳನ್ನು ಜನರ ಜೀವನಕ್ರಮದ ಭಾಗವಾಗಿ ಬೆಳೆಸಲು ನಿರಂತರವಾಗಿ ಕೆಲಸ ಮಾಡಬೇಕಾಗುತ್ತದೆ. ಜಾತ್ಯತೀತತೆ ಎನ್ನುವುದು ನಾವೂ ನೆಮ್ಮದಿಯಿಂದ ಬದುಕಿ ನಮ್ಮ ಸುತ್ತಲಿನವರನ್ನೂ ನೆಮ್ಮದಿಯಿಂದ ಬದುಕಲು ನೆರವಾಗುವ ಉದಾತ್ತ ಜೀವನಕ್ರಮ ಎಂಬುದನ್ನು ಮತ್ತೆ ಮತ್ತೆ ಮನವರಿಕೆ ಮಾಡಿಕೊಡುತ್ತಿರಬೇಕಾಗುತ್ತದೆ.

ಧರ್ಮಗಳ ಉದಾರ ಗುಣಗಳನ್ನು ಅವುಗಳ ಒಳಗಿದ್ದೇ ನಾಶ ಮಾಡುತ್ತಿರುವ ಪೂಜಾರಿ, ಪುರೋಹಿತರೂ, ಈ ಧರ್ಮಗಳ ಅಸ್ತಿತ್ವವನ್ನು ಇಲ್ಲವಾಗಿಸಲು ಯತ್ನಿಸುತ್ತಾ ಬಂದಿರುವ ವೈದಿಕರೂ ಕಾರಣರಾಗಿದ್ದಾರೆ. 'ಜಾತಿ ಸಹಜ ಅಲ್ಲ, ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ' ಎಂಬ ತತ್ವದ ಮೇಲೆ ನಿಂತಿರುವ ಬೌದ್ಧ ಧರ್ಮ ಮಾತ್ರ ದಲಿತ ಚಳುವಳಿಯ ಜೊತೆ ಬೆರೆತಿರುವ ಕಾರಣದಿಂದಾಗಿ ಇಂದಿಗೂ ಜಾತ್ಯತೀತ ತತ್ವವನ್ನು ಉಳಿಸಿಕೊಂಡೇ ಬೆಳೆಯುತ್ತಿದೆ.

ದೇಶದ ಎಲ್ಲೆಡೆ ಜಾತ್ಯತೀತ ಆಂದೋಲನದಲ್ಲಿರುವ ಒಂದು ಮುಖ್ಯ ಸಮಸ್ಯೆ ಕರ್ನಾಟಕದ ಜಾತ್ಯತೀತ ಆಂದೋಲನದಲ್ಲೂ ಇದೆ. ಅದೇನೆಂದರೆ, ಈ ಆಂದೋಲನ ಮತೀಯವಾದಿಗಳು ಒಡ್ಡುವ ಸಮಸ್ಯೆಗಳ ಸಂದರ್ಭದಲ್ಲಿ ಹೆಚ್ಚು ಜಾಗೃತವಾಗುತ್ತದೆ. ಉಳಿದಂತೆ ಅದು ಅಲ್ಪತೃಪ್ತ ಸ್ಥಿತಿಯಲ್ಲಿರತೊಡಗುತ್ತದೆ. ಸಾಮಾನ್ಯವಾಗಿ ಕೇಡನ್ನು ಸೃಷ್ಟಿಸುವವರಿಗೆ ಇರುವ ದುರುಳ ಏಕೋದ್ದೇಶ ಹಾಗೂ ಜಿಗುಟುತನ ಒಳಿತಿನ ಪರವಾಗಿರುವವರಿಗೆ ಇರುವುದಿಲ್ಲ. ಯಥಾಸ್ಥಿತಿವಾದಿಗಳಿಂದ, ರಾಜಕೀಯ ಪಕ್ಷಗಳಿಂದ ಹಾಗೂ ಮತೀಯ ಶಕ್ತಿಗಳಿಂದ ಹಣ ಹಾಗೂ ಇನ್ನಿತರ ಬಗೆಯ ಬೆಂಬಲ ಪಡೆವ ಕೋಮುವಾದಿಗಳು ಸದಾ ಒಂದಲ್ಲ ಒಂದು ಸಂಚು ಮಾಡಿ ಸಮಾಜದ ಸಮತೋಲನ ಕೆಡಿಸುತ್ತಲೇ ಇರುತ್ತಾರೆ. ಈ ಸಂಚುಗಳನ್ನು ಸಮಾಜ ವಿರೋಧಿ ಅಪರಾಧಗಳೆಂದು ಪರಿಗಣಿಸಿ ಮಟ್ಟ ಹಾಕುವುದು ಸರ್ಕಾರಗಳ ಕರ್ತವ್ಯ. ಈ ಕೆಲಸವನ್ನು ಜಾತ್ಯತೀತವಾದಿಗಳೇ ಮಾಡಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ಆದರೆ, ಬಲಪಂಥೀಯ ಗುಂಪುಗಳು, ಧಾರ್ಮಿಕ ವೇದಿಕೆಗಳು, ಕೋಮುವಾದಿ ಪೋಲೀಸರು, ಅಧಿಕಾರಿಗಳು, ಮಾಧ್ಯಮಗಳಲ್ಲಿ ನುಸುಳಿಕೊಂಡಿರುವ ಕೋಮುವಾದಿಗಳು ವಿಚ್ಛಿದ್ರಕಾರಿ ಕೋಮು ಶಕ್ತಿಗಳಿಗೆ ಬಲ ತುಂಬುತ್ತಿರುವ ಕ್ರಮಗಳ ಬಗೆಗೆ ಸರ್ಕಾರಗಳನ್ನು ಹಾಗೂ ಜನರನ್ನು ಎಚ್ಚರಿಸುವ ಕೆಲಸವನ್ನಂತೂ ಜಾತ್ಯತೀತ ಶಕ್ತಿಗಳು ನಿರಂತರವಾಗಿ ಮಾಡುತ್ತಿರಬೇಕಾಗುತ್ತದೆ. ಸರ್ಕಾರಗಳೇ ಮತೀಯವಾದಾಗ ಈ ಜವಾಬ್ದಾರಿ ಇನ್ನಷ್ಟು ಹೆಚ್ಚುತ್ತದೆ.



ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560 001
ದೂ : 22245152 / ಫ್ಯಾಕ್ಸ್ : 22121932; email : sahityakademi@gmail.com



ಕೆ.ಪಿ.ಪೂರ್ಣಚಂದ್ರ ತೇಜಸ್ವಿ
ಬದುಕು – ಬರಹ
– ಕರೀಗೌಡ ಬೀಚನಹಳ್ಳಿ
ರೂ. 150

ಶಿವಕಾಮಿಯ ಶಪಥ
ತಮಿಳು : ಕಲ್ಕಿ ಕೃಷ್ಣಮೂರ್ತಿ
– ಅನು:ಶಶಿಕಲಾ ರಾಜ
ರೂ. 400



ತಾಮ್ರಪಟ
ಮರಾಠಿ : ರಂಗನಾಥ ಪಠಾರೆ
– ಅನು: ಶಾ. ಮಂ. ಕೃಷ್ಣರಾಯ
ರೂ. 400



ಭಾರತದ ಮೊದಲ ಕಾದಂಬರಿಗಳು
ಸಂ. ಮೀನಾಕ್ಷಿ ಮುಖರ್ಜಿ
– ಅನು: ಜೆ. ಬಾಲಕೃಷ್ಣ
ರೂ. 175



ರತ್ನಾಕರವರ್ಣಿ
– ಜಿ.ಎಸ್.ಸಿದ್ದಲಿಂಗಯ್ಯ
ರೂ. 40



ನಂಜನಗೂಡು ತಿರುಮಲಾಂಬ
– ಬಿ.ಎನ್. ಸುಮಿತ್ರಾಬಾಯಿ
ರೂ. 40



ಹಂಸ
– ಮೀರಾ ಮೂರ್ತಿ
ರೂ. 40



ರಾಮಧಾರಿಸಿಂಹ ದಿನಕರ
ವಿಜೇಂದ್ರ ನಾರಾಯಣ ಸಿಂಹ
– ಅನು: ಪಂಚಾಕ್ಷರಿ ಹಿರೇಮಠ
ರೂ. 40

JOURNALS

INDIAN LITERATURE : Bi-monthly in English
Annual subscription Rs. 250
Three years subscription Rs. 650
Each copy Rs. 50

SAMKALEENA BHARATIYA SAHITYA : Bi-monthly in Hindi
Annual subscription Rs. 125
Three years subscription Rs. 350
Each copy Rs. 25

ಹಾಗೆಯೇ, ಜಾತ್ಯತೀತತೆ ಎನ್ನುವುದು ಕೇವಲ ೀಮುವಾದ ಹುಟ್ಟು ಹಾಕುವ ಸಮಸ್ಯೆಗಳಿಗೆ ಉತ್ತರ ಡುಕೊಳ್ಳುವ ಕೆಲಸಕ್ಕೆ ಮಾತ್ರ ಸೀಮಿತವಾಗಬಾರದು. ವಲಿಗೆ ಜಾತ್ಯತೀತತೆಯನ್ನು ಒಂದು ವಿಶಾಲ ೀಟಕ್ರಮವಾಗಿ ಬೆಳೆಸಿ, ಜಾತ್ಯತೀತ ಮೌಲ್ಯಗಳನ್ನು, ಯಗಳನ್ನು ಜನರ ಜೀವನಕ್ರಮದ ಭಾಗವಾಗಿ ಸಲು ನಿರಂತರವಾಗಿ ಕೆಲಸ ಮಾಡಬೇಕಾಗುತ್ತದೆ. ತ್ಯತೀತತೆ ಎನ್ನುವುದು ನಾವೂ ನೆಮ್ಮದಿಯಿಂದ ುಕಿ ನಮ್ಮ ಸುತ್ತಲಿನವರನ್ನೂ ನೆಮ್ಮದಿಯಿಂದ ುಕಲು ನೆರವಾಗುವ ಉದಾತ್ತ ಜೀವನಕ್ರಮ ಬುದನ್ನು ಮತ್ತೆ ಮತ್ತೆ ಮನವರಿಕೆ ಡಿಕೊಡುತ್ತಿರಬೇಕಾಗುತ್ತದೆ. ಆಧುನಿಕ ಭಾರತದಲ್ಲಿ ತ್ಯತೀತತೆ ಇಲ್ಲದಿದ್ದರೆ ಸ್ಕೂಲು, ಆಸ್ಪತ್ರೆಗಳಿಂದ ದು ಯಾವ ಆಧುನಿಕ ಸಂಸ್ಥೆಗಳೂ ಇರುತ್ತಿರಲಿಲ್ಲ ಗೂ ಶೋಷಿತ ವರ್ಗಗಳ ಬಿಡುಗಡೆ ಾಧ್ಯವಾಗುತ್ತಿತ್ತು ಎಂಬ ಸರಳ ಸತ್ಯವನ್ನು ಸಾಮಾನ್ಯರು ಮನಗಾಣಬೇಕಾಗಿದೆ. ಜೊತೆಗೆ, ೀಮುವಾದದ ವಿಷದ ಬಗೆಗೆ ಹಾಗೂ ಅದರ ಕರತೆಯ ಬಗೆಗೆ ಎಲ್ಲ ತಲೆಮಾರಿನ ಜನರನ್ನೂ ಚ್ಚರಿಸುತ್ತಿರಬೇಕಾಗುತ್ತದೆ. ನಮ್ಮ ನಿಲುವು, ಬರಹ, ತು, ಕಾರ್ಯಕ್ರಮ, ರಾಜಕೀಯ ಹಾಗೂ ಮಾಜಿಕ ಆಯ್ಕೆಗಳು... ಮುಂತಾಗಿ ಎಲ್ಲ ಯಗಳಲ್ಲೂ ಜಾತಿವಿನಾಶ, ಜಾತಿವಿರೋಧ, ತ್ಯತೀತತೆ ಹಾಗೂ ಧರ್ಮಾತೀತತೆಗಳು ದುಕೊಂಡೇ ಇರಬೇಕಾಗುತ್ತದೆ. ಅದರ ಜೊತೆಗೆ, ಪರವಾದ ಚಳುವಳಿಗಳಲ್ಲಿ ಭಾಗಿಯಾಗುವವರು ರ ಕಷ್ಟಗಳನ್ನು ಹಂಚಿಕೊಳ್ಳುವ ಬಗೆಬಗೆಯ ದಿಕೆಗಳಿಗೆ ನೆರವಾಗುತ್ತಾ ಜಾತ್ಯತೀತ ಮನೋಭಾವವನ್ನು ಹಬ್ಬಿಸಬೇಕಾಗುತ್ತದೆ. ಹಾಗೆಯೇ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮನಸ್ಸು ಜಾತೀಯತೆ ಹಾಗೂ ಕೋಮುಭಾವನೆಗಳಿಂದ ವಿಕಾರಗೊಳ್ಳದ ಹಾಗೆ ನೋಡಿಕೊಳ್ಳುವ ಕೆಲಸ ಲಕ್ಷಾಂತರ ಶಿಕ್ಷಕ, ಶಿಕ್ಷಕಿಯರ ಮೇಲೂ ಇದೆ. ಅದೇವೇಳೆಗೆ ಬಹುಸಂಖ್ಯಾತರ ಕೋಮುವಾದಕ್ಕೆ ಪ್ರತಿಯಾಗಿ ಹುಟ್ಟುವ ಅಲ್ಪಸಂಖ್ಯಾತರ ಕೋಮುವಾದದ ಅಪಾಯದ ಬಗೆಗೂ ಕೂಡ ಜಾತ್ಯತೀತರು ಎಚ್ಚರವಾಗಿರಬೇಕಾಗುತ್ತದೆ. ಹಿಂದೂ ಕೋಮುವಾದದಿಂದ ಹಿಂದೂಜಾತಿಗಳ ದುರ್ಬಲರಿಗೆ ಅನ್ಯಾಯವಾದಂತೆ, ಮುಸ್ಲಿಂ ಮೂಲಭೂತವಾದದಿಂದ ಬಡಮುಸ್ಲಿಮರಿಗೂ ಅನ್ಯಾಯವಾಗುತ್ತದೆ. ಲಂಕೇಶ್, ಅಥವಾ ತೇಜಸ್ವಿ ಥರದವರು ತೋರಿಸಿಕೊಟ್ಟಂತೆ ಸೆಕ್ಯುಲರ್ ಆಗಿರುವುದೆಂದರೆ ಎಲ್ಲ ಬಗೆಯ ಕೋಮುವಾದವನ್ನೂ ವಿರೋಧಿಸುವುದು ಎಂಬುದನ್ನು ನಾವು ಮರೆಯಬಾರದು. ಒಂದು ಬಗೆಯ ಕೋಮುವಾದದ ಬಗ್ಗೆ ಯೋಜಿತ ಮೌನದಿಂದಿರುವುದು ಕೂಡ ತಪ್ಪು ಎಂಬುದನ್ನು ಲೋಹಿಯಾರಂಥ ಚಿಂತಕರು ನಮಗೆ ಮನವರಿಕೆ ಮಾಡಿಕೊಟ್ಟಿರುವುದನ್ನು ಕಡೆಗಣಿಸಬಾರದು. ಈ ಎಲ್ಲದರ ನಡುವೆಯೂ ಭಾರತದ ಎಲ್ಲ ಜಾತಿ, ಧರ್ಮಗಳ ಅನುಯಾಯಿಗಳನ್ನೂ ಆಯಾ ಧರ್ಮಗಳ ಪುರೋಹಿತಶಾಹಿಗಳ ಹಿಡಿತದಿಂದ ಹೊರತರುವ ದಿಕ್ಕಿನಲ್ಲೂ ಯೋಚಿಸಬೇಕಾಗುತ್ತದೆ. ಹಾಗೆಯೇ, ಕೋಮು ಭಾವನೆಗಳನ್ನು ಬೆಳೆಸುವ ದುರುಳ ವೇದಿಕೆಗಳ ವ್ಯಾಖ್ಯಾನಗಳನ್ನು, ಸುಳ್ಳುಗಳನ್ನು ಹಾಗೂ ತಿರುಚಿದ ಸತ್ಯಗಳನ್ನು ಗಾಳಿಸುದ್ದಿಗಳಾಗಿ ಹಬ್ಬಿಸುವ ಬೇಜವಾಬ್ದಾರಿ ಮಧ್ಯಮ ವರ್ಗದ ವಾಚಾಳಿಗಳ ಪೂರ್ವಗ್ರಹ ಹಾಗೂ ಅಜ್ಞಾನಗಳನ್ನು ತಿದ್ದುವ ಕೆಲಸವನ್ನೂ ಮಾಡುತ್ತಿರಬೇಕಾಗುತ್ತದೆ.

ಸಂವಿಧಾನದ ಮೂಲ ಆಶಯವಾದ ಹಾಗೂ ಭಾರತದ ಉಳಿವಿಗೆ ಅತ್ಯಗತ್ಯವಾದ ಸೆಕ್ಯುಲರಿಸಮ್ಮನ್ನು ಅಪಾರ ಎಚ್ಚರದಿಂದ, ನಿರಂತರವಾಗಿ ಪೊರೆಯದಿದ್ದರೆ ಭಾರತದ ವರ್ತಮಾನ ಹಾಗೂ ಭವಿಷ್ಯಗಳೆರಡೂ ಗಂಡಾಂತರದಲ್ಲಿರುತ್ತವೆ ಎಂಬ ಕಠೋರ ಸತ್ಯವನ್ನು ಎಲ್ಲ ಭಾರತೀಯರಿಗೂ ತಲುಪಿಸುವ ದೊಡ್ಡ ಜವಾಬ್ದಾರಿ ಜಾತ್ಯತೀತರ ಮೇಲೇ ಇದೆ ಎಂಬುದನ್ನು ಮರೆಯಬಾರದು.

ಡಾ॥ ನಟರಾಜ್ ಹುಳಿಯಾರ್



ಗಮನ ಸೆಳೆದ ಕನ್ನಡದ ಬಹುಮುಖಿ ಚಿಂತನೆಯ ಬರಹಗಾರ. ಡಾ॥ ರಾಮಮನೋಹರ ಲೋಹಿಯಾ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಹೆಗ್ಗಳಿಕೆ. 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' ತೌಲನಿಕ ಅಧ್ಯಯನ ಕೃತಿಗೆ ಪಿಎಚ್‌ಡಿ ಪದವಿ. ಅನೇಕ ಗಮನಾರ್ಹ ಕೃತಿಗಳ ಪ್ರಕಟಣೆ; ಪ್ರತಿಷ್ಠಿತ ಪುರಸ್ಕಾರಗಳು ಇವರನ್ನು ಅರಸಿ ಬಂದಿವೆ. ಪ್ರಸ್ತುತ ಬೆ.ವಿ.ವಿ. ಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ಇಂಗ್ಲಿಷ್ ಅಧ್ಯಾಪಕ.



ಮಾದೇವಿಯ ಮುಳ್ಳು

ಮೀನ ಯಾಪಾರ ಇಲ್ಲವಾಗಿ
ಸೊಸೈಟಿ, ತಕ್ಕಡಿ, ಫಿಕ್ಸ್ ರೇಟು
ಅಯ್ಸ ಪೆಟ್ಟಿಗೆ, ಅಯ
ಗಾಡಿಗಳು ಏನೆಲ್ಲ ಆಗಿವ
ಹೊಳೆಯ ದಡಕ್ಕೆ ದಡವೆ
ಬದಲಿಯಾಗಿದೆ. ಅಲ್ಲೀ
ಹೆಂಗಸರ ಕರಾಮತ್ತಿಲ್ಲ
"ಅಯ್ಸ ಹಾಕಿದ ಮೀ
ನಮ್ಮೂರವ್ರು ಹನಳ್ಳಿಯವರ
ತಿಂಬುರೇ? ಯಾವೂರಿ
ಕಂಪನಿ ಬಂದ್ರೂ ನಮ್ಮೂರಿ
ಬರ, ಬಂದ್ರೂ ನಿಲ್ಲ." ಅಂ
ಆಡಿಕೊಂಡ
ಸಮಾಧಾನಿಸಿಕೊಂಡಿದ್ದ
ಸುಳ್ಳಾಗಿ ಹೋಗಿದೆ. ತವ
ಸೊಂಟ, ನೆತ್ತಿ ಸವರಿಕೊಂಡಿ
ಬುಟ್ಟಿಯಲ್ಲೀಗ ತೆಂಗಿನ ಚಿಪ
ತುಂಬಿ ಕೋಳಿಗೂಡಿ
ಮೇಲಿಡುವಾಗ ಅವರಿ
ಹೆಂಗೆಂಗೋ ಆಗಿದ

ವಿನಯಾ

ಎಡಗೈ ತಲೆ ಮೇಲಿಟ್ಟು ಸರ್‍ಸ ಸಾಗಿದ್ದು ಕಂಡರೆ ಅದು ಮಾದೇವಿಯೇ.

ಎತ್ತ ಹೋದಳೋ ಬೇಲಿಗಂಡಿಯ ಹಾವಿನ ಮರಿ ಹಂಗೆ. ಬಾಗಿಲ ಚೌಕಟ್ಟಿಗೆ

ಮೈಯಾನಿಸಿ ನಿಂತ ಬಾಯಕ್ಕ ಮಬ್ಬು ಕವಚುತ್ತಿದ್ದ ತನ್ನ ಕಣ್ಣನ್ನೊಮ್ಮೆ ತಿಕ್ಕಿಕೊಂಡಳು. ಮಾದೇವಿ ತನ್ನಕಡೆ ತೆರಗಣ್ಣಲ್ಲೂ ನೋಡಿಲ್ಲ ಅನ್ನಿಸಿ ಕಸವಸವಾಯ್ತು. ಕೈಕಾಲು ಬಳಬಳ ಅಂದಂತಾಗಿ ಅಲ್ಲೇ ಚಿಟ್ಟೆಯ ಮೇಲೆ ಕುಂತಳು. "ಅಮ್ಮೋ ಹಾಳ್‌ಬಿದ್ದ ಮಾದೇವಿಯೇನಾರೂ ಬಂದ್ ಸತ್ತೀತೇನ್ರಾ?" ಅನ್ನುವ ಸುಕ್ರುವಿನ ಕೂಗು ದಣಪೆಯ ಆಚೆಯಿಂದ ಕೇಳಿತಾದರೂ, ಬಾಯಕ್ಕನಿಗೆ ಗಂಟಲು ಬಿರಿ ಬಂದ ಹಾಗಾಗಿ ಉತ್ತರ ಕೊಡಬೇಕೆನ್ನಿಸಲಿಲ್ಲ.

ಯಾವುದೋ ಸನ್ನೆಯ ಬೆನ್ನು ಹತ್ತಿದವಳಂತೆ ಧಗಧಗ ನಡೆಯೋ ರೋಗ ಮಾದೇವಿಗೆ ಹತ್ತಿದ್ದು ಇತ್ತಿತ್ತಲಾಗಿ. ಹೋದಸಲದ ಸಸಿ ನೆಟ್ಟಿಯವರೆಗೂ ಅಂಥದ್ದೇನೂ ಇರಲಿಲ್ಲ. ಬಾಯಕ್ಕನ ಮನಿ ಗಡಿಯಾರ 'ಢಣ್' ಅಂತ ಎಂಟು ಬಾರಿಸಲು ತಡವಾದೀತು, ಮಾದೇವಿ ಬರುವುದು ತಡವಾಗಲಿಕ್ಕಿಲ್ಲ. ತನ್ನ ಮನಿಯಂಬೋ ಮನಿಯ ದಗದ ಮುಗ್ಸಿ ಮಕ್ಕಳನ್ನು ಶಾಲಿ ಹಾದಿಗೆ ಹಚ್ಚಿ, ಸೀರಿ ನಿರಿಯನ್ನ ಎತ್ತಿ ಸಿಗಿಸಿಕೊಂಡು, ಪರಕಾರವನ್ನು ಫಡ್‌ಫಡ್ ಬಡೀತಾ ಬಂದಳೆಂದರೆ ಮಾದೇವಿ ಜೊತೆಗೇ ಗುಲುಗುಲು ಜೀವವೂ ಬರುವುದನ್ನು ಬಾಯ ಅನುಭವಿಸಿದ್ದಾಳೆ, ಸುಕ್ರು ಬೆಳ್ಳಿ ಮೂಡುವಾಗಲೇ ಘಟವೆಗೆ ಹೋಗುವುದರಿಂದ ಅವಳ ಮನಿದಗದ ಬೇಗ ಮುಗಿಯುತ್ತದೆಂದು ಸುತ್ತಲಿನ

ಕಥೆ

ರತೇರು ಮಾತಾಡಿಕೊಳ್ಳುತ್ತಿದ್ದರು. ಮಾದೇವಿ ಅಂಗಳ ಕಸ ಹೊಡಿಯುವಾಗ ಅವರಿನ್ನೂ ಮತ್ತೊಂದು ಮಗ್ಗುಲಿಗೆ ಹೊರಳುತ್ತಿರುತ್ತಾರೆನ್ನುವುದನ್ನು ಮಾತ್ರ ಉಸುರುತ್ತಿರಲಿಲ್ಲ. ಶಾಲೇಲಿ ಮಾದೇವಿ ಮಕ್ಕಳು ಗಾಂವಕರರ ನಾಯಕರ ಮಕ್ಕಳಿಗಿಂತ ಹೆಚ್ಚು ಗ್ರೇಡ್ ತಗ್ಗೊಳ್ಳೋದು, ಕಡೆಕಡೆಗೆ ಶಾಲಾಭಿವೃದ್ಧಿ ಕಮೀಟಿಯಲ್ಲಿ ಮಾದೇವಿ ಹೆಸರು ಯಾಕೆ ಸೇರಿಸಬಾರದೆಂದು ಹೆಡ್‌ಮಾಸ್ತರಿಣಿ ಸೀತಕ್ಕನವರ ತಲೆಯಲ್ಲೂ ಬಾದುಹೋಯಿತು. ಹೋದ ವರ್ಷ ಮಾದೇವಿ ಮಗಳು ಎಸ್.ಎಸ್.ಎಲ್.ಸಿ.ಯಲ್ಲಿ ಶಾಲೆಗೇ ಮೊದಲು ಬಂದು ಕುಮಟೆಯ ಕಾಲೇಜಿಗೆ ಹೋಗತೊಡಗಿದ್ದು ಅಂಬೇರ ಕೊಪ್ಪದಲ್ಲಿ ಸಣ್ಣ ಸುಳಿಗಾಳಿ ಸುಳಿದಹಾಗಿತ್ತು. ಮಗಳ ಬಗ್ಗೆ ಮಂಕ್ರುವೂ ಖುಷಿಯಾಗಿದ್ದ. ಮಗಳ ಹೆಸರಲ್ಲಿ ಸಣ್ಣದೊಂದು ಟಿ.ವಿ. ತಂದು ಮನೆಯ ಮೂಲೆಯಲ್ಲಿ ನೆಟ್ಟ. ಇದರಿಂದ ತಿರುಗಣಿ ಮಡುವಿನಲ್ಲಿ ಸಿಕ್ಕಂತೆ ಒದ್ದಾಡಿದವಳು ಮಾದೇವಿ. ಟಿ.ವಿ. ನೋಡುತ್ತ ಉಂಡದ್ದೇನು ತಿಂದದ್ದೇನು. ಹೀಗೀದೆ ಮುಕ್ಕುವ ಮಕ್ಕಳು ತನ್ನನ್ನು ಬೇವರ್ಸಿ ಮಾಡಿಬಿಟ್ಟರು ಅನ್ನಿಸುತ್ತಿತ್ತು. ಎಲ್ಲರ ಹಾಗೆ ಟಿ.ವಿ. ಮುಂದೆ ಬಾಯ್ತೆಗೆದು ಕೂಡಲಾಗದೆ, ದುಮುದುಮು ಉರೀತಾ ಹಿತ್ತಲಿಗೆ ಮುಂಚಿಗೆ ಗಿರಕಿ ಹೊಡೀತಿದ್ದಳು.

ಹ್ಯಾಂಗೆ ಟಿ.ವಿ. ಅನ್ನೋದು ಕೊಪ್ಪದ ಮನಿಗಳಿಗೆ ದೇವರ ಗೂಡಿನಷ್ಟು ಖಾಯಂ ಆಗತೊಡಗಿತ್ತು. ಮನಿ ಮುಂದಿನ ಮಡಲಸೋಗೆ ಕೆಳಗೆ ಕುಂತು ಹರಿದ ಬಲೆಗಳ ಹೆಣೆಯುವ ಗಂಡಸರಿಲ್ಲ. ಒಣಜಬ್ಬು ತಯಾರಿ ಮಾಡುವ ಹೆಂಗಸರಿಲ್ಲ. 'ಚಿಪ್ಪಿಕಲ್ಲಿನ ಬ್ಯಾಸ' ಅಂತು ಕೇಳೂ ಹಂಗೇ ಇಲ್ಲ. ತನ್ನ ಜಗತ್ತೊಂದು ಅನಾಮತ್ತಾಗಿ ಕಳೆದುಹೋದವಳಂತೆ ಮಾದೇವಿ ಚಡಪಡಿಸುತ್ತಿದ್ದಳು.

ಬಸಲೆ ಬುಡದಲ್ಲಿ ಮೀನು ಮಾಡುವಾಗಲೋ, ಮಸಾಲೆ ಅರೆಯುವಾಗಲೋ ಸುತ್ತಿಟ್ಟ ನೂಲು ಬಿಚ್ಚುವಂತೆ ಹಿಂದೆ ಹಿಂದೆ ಹೋಗುತ್ತಿದ್ದಳು. ಮಚವೆಗಳು ದಡ ತಾಡುವಾಗ ಮೀನು ಬುಟ್ಟಿ ಇಟ್ಟುಕೊಂಡು ಕಾಯುವುದು, ಬುಟ್ಟಿ ತುಂಬಿಸಿಕೊಂಡು ಹೊಯಿಗೆಯಲ್ಲಿ ಕಾಲು ಹುಗಿಯುವಾಗಲೂ ಓಡುವುದು, ಬಿಸಿ ಬಿಸಿ ಹೊಯಿಗೆಯ ಕಣಗಳು ಜನ್ಮಬಂಧುವಿನ ಹಾಗೆ ಕಾಲ್ಬೆರಳ ಸಂದಿಯೊಳಗೆ ಉಳಿದುಬಿಡುವುದು ಏನೆಲ್ಲ.. .. ಚೊಗ್ಗಿ–ಪಲಕಿ ಹಾಕುತ್ತಿದ್ದ ಅಪ್ಪನ ಮನೆ ಕಾಲದಿಂದಲೂ ಮಾದೇವಿ ಮೀನು ಮಾರಲು ಅನ್ನಿಸಿಕೊಂಡಿದ್ದಳು. ಕಪ್ಪು ಬೀಟೆಮರದ ಹಲಗೆಯಂತಹ ಹುಡುಗಿಯನ್ನು ಸುಕ್ರ ಎಂಬ ಮಚವೆಗೆ ಪಳಗಿದ ಪೋರ ತಾನಾಗೇ ಕೇಳಿಸಿ ಅಕ್ಕಿಕಾಳು ಹಾಕಿಸಿಕೊಳ್ಳಲೂ ಮಾದೇವಿಯ 'ಗನಾತನ' ಕಾರಣವಾಗಿತ್ತು. ಬಿಳಿಬಿಳಿ ಹಲಸಿನ ತೊಳಿಯಂಥ ಹಣ್ಣುಗಳು ಮೀನುಪ್ಯಾಟಿಯಲ್ಲಿ ಬಂದವರ ಮಕಮಕ ನೋಡಿ ಹಲ್ಲು ಕಿರಿಯುವಾಗ, ಒಂದು ರೇಟು ಹೇಳಿ ದುಸರಾ ಮಾತಾಡದೆ, ಹಾದಿಗೆ ನೆಟ್ಟ ಬಾಂದುಕಲ್ಲಿನ ಹಾಗೆ ಕೂತಿರುತ್ತಿದ್ದ ಮಾದೇವಿಯಲ್ಲೇ ಯಾಪಾರ ಹೆಚ್ಚಾಗಲು ಕಾರಣವಿತ್ತು. ಜಬ್ಬು ಎಣಿಸಿ ಪಾಲಕ್ಕೆ ಹಾಕುವಾಗ ಕೈ ಚೂಕ್ ಆಗಿ ಜಬ್ಬು ಬುಟ್ಟಿಗೆ ವಾಪಸ್ ಬೀಳುತ್ತಿರಲಿಲ್ಲ. 'ಕಸಿದೀದು' ಅಂತ ಮುಗ್ಗಿದ್ದನ್ನು ಸೇರಿಸುತ್ತಲೂ ಇರಲಿಲ್ಲ. ಪಳದಿ ಉಂಡವರಿಗೆ ಹೆಂಡತಿ ಮೇಲೆ ಅಕ್ಕರತೆ ಹೆಚ್ಚುವಂತೆ ಮಾದೇವಿಯ ಬಗ್ಗೂ ಮಮಕಾರ ಹುಟ್ಟುತ್ತಿತ್ತು. ಬಿಸಿಲು ಇಳಿಯೋ ಹೊತ್ತಲ್ಲಿ ಬಂಗಡೆ–ಭೂತಾಯಿ ಬುಟ್ಟಿಗಳು ಗಂಗಾವಳಿಯಿಂದ ಹನೇಹಳ್ಳಿಯವರೆಗೂ ಸಾಲುಗಟ್ಟಿದ್ದರೂ ಜನ ಮಿಣಸು ಅಂಗಡಿ ಮುರ್ಕಿಯಲ್ಲಿ ಮಾದೇವಿಯ ಬುಟ್ಟಿಗಾಗಿ ಕಾಯುತ್ತಿದ್ದರು. 'ಇಬ್ಬಿಬ್ಬು ನಮ್ದೂ ಅದೇ ಬೋಟಿಂದೇರಾ' ಅಂತ ಒಬ್ಬಳು, 'ಅದೇ ಸಮದ್ರದಾಗಿಂದೇರಾ ಒಡೀದಿರೇ' ಅಂತ ಮತ್ತೊಬ್ಬಳು ಕಾಯಿಸಿಕೊಂಡು ಹೋಗುತ್ತಿದ್ದರೂ ಮೀನರುಚಿ ಹತ್ತಿದ್ದ ನಾಲಿಗೆಯ ಮಂದಿ 'ಹಿಹೆಹೆ' ಅಂತ ಅಬ್ಬೇಪಾರಿ ನಗುತ್ತ ನಿಂತಿರುತ್ತಿದ್ದರು. ಎಷ್ಟೋ ಸಲ ಮಾದೇವಿಯ ಬುಟ್ಟಿ ಹನೇಹಳ್ಳಿ ಕಾಣುತ್ತಲೂ ಇರಲಿಲ್ಲ.

ಹತ್ತು ವರ್ಷಕ್ಕೂ ಹೆಚ್ಚೇ ಆಯ್ತು. ಹೀಂಗೆ ಮೀನ ಯಾಪಾರ ಇಲ್ಲವಾಗಿ. ಸೊಸ್ಯೆಟಿ, ತಕ್ಕಡಿ, ಫಿಕ್ಸ್ ರೇಟು, ಅಯ್ಸ ಪೆಟ್ಟಿಗೆ, ಅಯ್ಸ ಗಾಡಿಗಳು ಏನೆಲ್ಲ ಆಗಿವೆ. ಹೊಳೆಯ ದಡಕ್ಕೆ ದಡವೇ ಬದಲಿಯಾಗಿದೆ. ಅಲ್ಲೀಗ ಹೆಂಗಸರ ಕರಾಮತ್ತಿಲ್ಲ. 'ಅಯ್ಸ ಹಾಕಿದ ಮೀನ ನಮ್ಮೂರವ್ರು ಹನಳ್ಳಿಯವರು ತಿಂಬುರೇ? ಯಾವೂರಿಗೆ ಕಂಪನಿ ಬಂದ್ರೂ ನಮ್ಮೂರಿಗೆ ಬರ, ಬಂದ್ರೂ ನಿಲ್ಲ." ಅಂತ ಆಡಿಕೊಂಡು ಸಮಾಧಾನಿಸಿಕೊಂಡಿದ್ದೆಲ್ಲ ಸುಳ್ಳಾಗಿ ಹೋಗಿದೆ. ತಮ್ಮ ಸೊಂಟ, ನೆತ್ತಿ ಸವರಿಕೊಂಡಿದ್ದ ಬುಟ್ಟಿಯಲ್ಲೀಗ ತೆಂಗಿನ ಚಿಪ್ಪು ತುಂಬಿ ಕೋಳಿಗೂಡಿನ ಮೇಲಿಡುವಾಗ ಅವರಿಗೆ ಹೆಂಗೆಂಗೋ ಆಗಿದೆ. ಮಾದೇವಿಗೆ ಈಗಲೂ ಮೀನುಬುಟ್ಟಿ ಹೊತ್ತು ಓಡುವ ಕನಸು ಬೀಳುತ್ತದಂತೆ. ಬುಟ್ಟಿ ಕೆಳಗಿನ ಹಾಳಿಕೊಟ್ಟೆಯಿಂದ ಹಿಣಜು ತುಂಬಿದ ಗಮಲು ಮೀನಿನ ನೀರು ತೊಟ್ಟಿಕ್ಕುತ್ತ, ಮೊಲೆಸಂದಿಯಿಂದ ಹೊಕ್ಕುಳಿನಿಂದ ನಿಧಾನ ಇಳಿ ಇಳಿದಂತೆ ಕಚುಗುಳಿಯಿಟ್ಟಂತಾಗುತ್ತದೆ. ಹಾಗವಳು ಬಾಯಕ್ಕನ ಬಳಿ ಹೇಳಿಕೊಳ್ಳುತ್ತಾಳೆ. ತಿಂಗಳಿಗೊಮ್ಮೆ ಮುಟ್ಟು ಬರುವಂತೆ ಬರುವ ಮಾದೇವಿಯ ಈ ಕನಸಿಗೆ ಬಾಯಕ್ಕಗೂ 'ಅಯ್ಯೋ' ಅನ್ನಿಸಿದೆ. 'ಬುಟ್ಟಿ ಕೈ ತಪ್ತ ಮಾದೇವಿ. ಕೈಯಾಡತಿದ್ದ ನಾಕ ಕಾಸೂ ಕೈ ತಪ್ತ' ಅಂತ ಬಾಯಕ್ಕ ಅನುಕಂಪಿಸುತ್ತಾಳೆ. ಮೀನು ಬುಟ್ಟೀಲಿ ಸಾಮಾನ ಕಟ್ಟಿಸ್ಕಂಡು ಕಮತೇರ ಅಂಗಡಿ ಕಾಜಮೀಜು, ಸೇಂಗಾಬೀಜ ಕಟ್ಟಿಸ್ಕಂಡೋಗುದಿಲ್ಲ– ಮಕ್ಕಳೂ ಈಗ ಮುಂಚಿನಂತೆ ನಮ್ಮನ್ನ ಕಾಯುವುದಿಲ್ಲ. ಅಂಬೇರ ಕೊಪ್ಪದ ಹೆಂಗಸರು ನೀರಿನಿಂದೆತ್ತಿ ಬ್ಯಾಲಿಯ ಮೇಲೆ ಒಗದ ಮೀನಜಬ್ಬಿನ ಹಾಂಗೆ ಅಕಮಕ ಆಗಿರುವುದನ್ನು ಬಾಯಕ್ಕ ಬಲ್ಲವಳೇ.

ಬಾಯಕ್ಕನ ಗಂಡ ಸಣ್ಣಪ್ಪ ಮಾಸ್ತರು ನಾಡೋರ ಕೊಪ್ಪ ಬಿಟ್ಟು ರಸ್ತೆಬದಿ ಗೇರುಹಕ್ಕಲ ಸವರಿ ಮನಿ ಕಟ್ಟಿಸ್ಕಂಡು ಇದ್ದದ್ದರಿಂದ ಆ ಕಾಲದಿಂದಲೂ ಬಾಯಕ್ಕನ ಮನಿಗೂ ಅಂಬೇರ ಕೊಪ್ಪಕ್ಕೂ ನಂಟಿತ್ತು. 'ಗಂಡಾ ಹೆಣ್ತಿ ನೌಕರಿ ಮಾಡಬೇಕರೆ ಕೊಪ್ಪದಾಗಿರುಕಾಗ' ಅಂತ ಗಂಡ ಯಾಕೆ ಹೇಳುತ್ತಿದ್ದುದೆಂದು ಬಾಯಕ್ಕಗೆ ಗೊತ್ತಾಗಿದೆ.

ಮಾದೇವಿಗೆ ಉರುಲು ಬಂದದ್ದು 'ಖಾಯಂ ಕೆಲ್ಸ' ಸುರುಮಾಡಿದಾಗ. ಅಲ್ಲೀವರ್ಗೂ ಹಿತ್ತಲ ಗುಡ್ಸೋದು, ಕಾರ್ಯದ ಪಾತ್ರಿ ತೊಳ್ಯೋದು, ಮಕ್ಕಳು ಬಂದಿದ್ದಾಗ ಮೀನು ಮಾಡಿಕೊಡೋದು, ಕರಂಟ ಕೈಕೊಟ್ರೆ ಅರ್ರ್ಯೋ ಕಲ್ಲು ತೊಳ್ದು ಮಸಾಲಿ ಗಂಧ ಮಾಡಿಕೊಡೋದು.. ಹೀಗೆ ಕೆಲ್ಸ ಮಾಡಿ ಕೊಡುತ್ತಿದ್ದಳು.

ಅರ್ಜಂಟು ಬಂತು ಅಂದ್ರೆ ಹೆಂಡ್ತಿ ಮಕ್ಕಳ ಸೀರಿ, ಚೊಗ್ಗಿ ಒಗದು ಹಾಕಿ, ಕಸ ಹೊಡೆದು ಮಜ್ಜಿಗೆ ಕಡದುಕೊಡತಿದ್ದ ಗಂಡನ ಬಗ್ಗೆ ಈಗಲೂ ಮುದ್ದು ಬರುತ್ತದೆ. 'ಏಗೆ ಅವರಿರಬೇಕಾಗತ, ನಾ ಹಿಂಗೆ ಪರದೇಸಿ ಹಂಗೆ ಕುಳ್ಳುದಿರುದಲಾಗತ' ಅಂತ ಬಾಯಕ್ಕ ದಿನಕೊಮ್ಮಿಯಾದರೂ ಅಂದುಕೊಂಡು ಕಣ್ಣೊರೆಸಿಕೊಳ್ಳುತ್ತಾಳೆ. ಮೀನಪಳದಿ ಇಲ್ಲದೆ ಒಂದಗಳೂ ಗಂಟಲಿಗಿಳಿಯದ ಸಣ್ಣಪ್ಪ ಮಾಸ್ತರು ರಿಟೈಯ್ಡ ಆದ ಮೇಲಂತೂ ಅದನ್ನು ವ್ರತದ ಹಾಗೆ ಪಾಲಿಸಿದ್ರು. 'ಹೋಗೂ ದಿನವೂ ಮೀನ ಚೀಲ ಹಿಡಕಂಡೇ ಹೋದದ್ದಲ್ವೇ' ಈ ಮಾತನ್ನು ಬಾಯಕ್ಕ ಸಾವಿರ ನಮೂನೆ ಅನುವಾದಗಳಲ್ಲಿ ಸಾವಿರ ಮಂದಿ ಹತ್ರ ಹೇಳಿದ್ದಾಳೆ. ಮೀನು ತರಲು ಹೋದ ಮಾಸ್ತರು ಎದೆ ಚಳಕು ಬಂದು ಸೊಸೈಟಿಯ ಕಟ್ಟಿಮೇಲೆ ಕೂತದ್ದೇ ಕಡೆ. 'ಮಾಸ್ತ್ರೇ. ಎಂತ ಆಯ್ತಾ?' ಅನ್ನೋ ಪ್ರಶ್ನೆಗೂ ಉತ್ತರವಿಲ್ಲ. 'ಚಂದದ ಸಾವು', 'ಜಬಾದ್ದರಿ ಮುಗ್ಸಿದ್ರು' ಅಂತ ಊರಾಡಿಕೊಂಡರೂ ಬಾಯಕ್ಕ ಮಾತ್ರ ಹುರುಪಳಿಸಿಬಿಟ್ಟಿದ್ದಳು. 'ಹಿಂಗೆ ಹೇಳ್ದೆ ಕೇಳ್ದೆ ಹೋಗೂಕೆ ನಾಯೇನ ಮಾಡ್ದ್ನೆ ನಿಮ್ಗೆ' ಅಂತ ಗೋಳಾಡಿದ್ದಳು. ಈಗಲೂ ದೇವರ ಮುಂದೆ ದೀಪ ಹಚ್ಚಿ "ದೇವ್ರೆ, ನನ್ನ ಗಂಡಗೆ ಮಕ್ಕಳಿಗೆ ಗನಾದಾಗಲಪ್ಪ" ಅಂತ ಬೇಡಿಕೊಳ್ಳುವಾಗ, ಲಗಾಯ್ತಿನಿಂದ ತಾನೇ ಹೆಣೆದುಕೊಂಡ ಆ ಸಾಲಿನಲ್ಲಿ ಗಂಡ ಅನ್ನೋ ಪದವ ಬಿಡಲಾಗದೆ ಗಂಟಲು ಬಿಗಿದು ಕೂತುಬಿಡುತ್ತಾಳೆ. ಹಾಗಂತ ಸಣ್ಣಪ್ಪ ಮಾಸ್ತರೇನು ಬಾಯಕ್ಕನನ್ನು ಉರಿಸ್ಯಾಡಿದವರಲ್ಲ ಅಂತಲ್ಲ. ನೆನಪಾದರೆ ಇಂಥ ದಿನ ಇಂಥದ್ದು ಅಂತ ಹೇಳುವಷ್ಟು ಅವಳ ಮೆದುಳಲ್ಲಿ ಹುಣ್ಣಿನ ಖಾನೆಗಳಿವೆ. ಈಗ ಮಾದೇವಿಯ ಮೀನುಹೊರೋ



ಕನಸಿಗವಳು ಮರುಕುತ್ತಾಳಾದರೂ ಆಗ ಆ ದಿನಗಳಲ್ಲಿ 'ಮೀನು ಬುಟ್ಟಿ ಹೊತ್ತು ಓಡುನಡಿಗೆಯಲಿ ಬರೋ ಹೆಣ್ಣುಗಳ ನೋಡಿ ಜೊಲ್ಲು ಸುರಿಸಲು ಅಂತಾನೇ ಇಂವ ಮೀನುರುಚಿ ಹಚ್ಚಿಕೊಂಡಿದ್ದು' ಅಂತ ನಂಬಿದ್ದಳು. ಮಾಸ್ತರು ಆಸ್ಥೆಯಿಂದ ಮುಳ್ಳುಬೇಪುವಾಗ ಇವನ ಕಣ್ಣೊಳಗೆ ಯಾವ ಅಂಬಿಗತಿಯ ತೆಳುಹೊಟ್ಟೆ ನುಲೀತಿರಬಹುದೆಂದು ಕನಲಿಬಿಡುತ್ತಿದ್ದಳು. ತಲೆಕೆಟ್ಟದಿನ ಪಳದಿಗೆ ಖಾರ ಮುಂದುಮಾಡಿ ಹಾಕಿ ಮಾಸ್ತರು ಉಸ್‌ಗುಡುವಾಗ ಖುಷಿಗೊಂಡದ್ದೂ ಇದೆ. ಯಾವ ಉಪ್ಪು ಖಾರವೂ ದಿನಾ ಮೀನು ತಿನ್ನೋ ಸಣ್ಣಪ್ಪ ಮಾಸ್ತರ ವ್ರತ ಕೆಡಿಸದಿದ್ದಾಗ ಬಾಯಕ್ಕನೇ ಮೆತ್ತಗಾದಳು. ಇಷ್ಟಕ್ಕೂ, ಹೆತ್ತ ಇಬ್ಬರು ಗಂಡು ಪೋರಗೋಳ ದೇಖರೇಕಿ', ಗಣತಿ–ಇಲೆಕ್ಷನ್ನು–ಮಣ್ಣು ಮಸಿ ಅಂತ ಉರುಲು ಬರೋ ನೌಕರಿ; ಎಷ್ಟು ತಿಕ್ಕಿದರೂ ತೀಡಿದರೂ ಮುಗಿಯದೆ ಬಾಯಿ ತೆಗೆವ ಮನೆಗೆಲಸಗಳ ತೂರಾಟದಲ್ಲಿ ಬೇರೆಲ್ಲ ಯೋಚಿಸುವ ಪುರುಸೊತ್ತು ಎಲ್ಲಿತ್ತು? ಅಥವಾ ಯೋಚಿಸಿಯಾದರೂ ಬಾಯಕ್ಕ ಏನು ಮಾಡಬಹುದಿತ್ತು?

ಸುಕ್ರು ಸಣ್ಣಪ್ಪ ಮಾಸ್ತರರಿಗೆ ಮೀನು ಕೊಡಿಸೋ ದೋಸ್ತ. ಹಾಂಗಾಗಿ ಬಾಯಕ್ಕ ಒಂಟಿಯಾದಾಗ 'ಮಾಸ್ತ್ರ ಮನಿ ಕೆಲ್ಸಕ್ಕೆ' ಮಾದೇವಿಯನ್ನ ಕಳಿಸಿದ್ದ. ಇದೇ ಸುಮಾರಿಗೆ ಮಚವೆಗೆ ಹೋದಾಗ ಕಲ್ಗದ ಚಿಪ್ಪು ಪಾದಹರಿದು ಬರೋಬ್ಬರಿ ಆರುತಿಂಗಳು ಸುಕ್ರು ತನ್ನ ಕಾಲು ಎತ್ತಿಟ್ಟುಕೊಂಡು ಪೂಜೆ ಮಾಡ್ಕೊಳ್ಳಬೇಕಾಯ್ತು. ಇನ್ನಿವ ಮಚವೆ ಕೆಲ್ಸಕ್ಕೆ ಹೋಗದಿರುದೇ ಪಾಡು ಅಂತ ಮಾದೇವಿಗೆ ಅನ್ನಿಸ್ತು. ಗಂಡ ಹೆಣ್ತಿ ತಾರಿಬಾಗಿಲಲ್ಲಿ ಸಣ್ಣ ಗೂಡಂಗಡಿ ಪ್ಲ್ಯಾನು ಹಾಕಿದರು. 'ಸಣ್ಣ ಗಂಟೇ ಆದ್ರೂ ಕೂಡ್ಸೋದು ನಮ್ಮಂಥೋರಿಗೆ ಭರಮವೇ' ಅಂತ ಮಾದೇವಿ ಕಣ್ಣೀರು ಹಾಕಿದಾಗ ಬಾಯಕ್ಕನೇ ಹತ್ತು ಸಾವಿರ ಕೊಟ್ಟು "ಅಂಗಡಿ ಹಾಕ್ಕಣಿ. ದಿನಾ ಮನಿ ಕೆಲ್ಸ ಮಾಡಕುಟ್ಟ ಮುಟ್ಸಕ್‌ತಗ" ಅಂತ ಕೈಹಿಡಿದಿದ್ದಳು. ಮಾದೇವಿಗೆ ಗುಡಿಯಮ್ಮ ಬ್ಯಾರೆಯಲ್ಲ ಬಾಯಮ್ಮ ಬ್ಯಾರೆಯಲ್ಲ ಅಂತಾಗಿತ್ತು.

ಮಾದೇವಿಗೆ ಉರುಲು ಬಂದದ್ದು 'ಖಾಯಂ ಕೆಲ್ಸ' ಸುರುಮಾಡಿದಾಗ. ಅಲ್ಲೀವರ್ಗೂ ಹಿತ್ತಲ ಗುಡ್ಸೋದು, ಕಾರ್ಯದ ಪಾತ್ರಿ ತೊಳ್ಯೋದು, ಮಕ್ಕಳು ಬಂದಿದ್ದಾಗ ಮೀನು ಮಾಡಿಕೊಡೋದು, ಕರಂಟ ಕೈಕೊಟ್ರೆ ಅರ್ಯೋ ಕಲ್ಲು ತೊಳ್ದು ಮಸಾಲಿ ಗಂಧ ಮಾಡಿಕೊಡೋದು.. ಹೀಗೆ ಕೆಲ್ಸ ಮಾಡಿ ಕೊಡುತ್ತಿದ್ದಳು. ಈಗ 'ಎಂಟಕ್ಕೆ ಬಾ ಮಾದೇವಿ' ಅಂತ ಬರಲು ಹತ್ತು ಮಿನಿಟು ತಡವಾದರೆ ಬಾಗಿಲಲ್ಲಿ ನಿಂತು ಬಿಟ್ಟಿರುತ್ತಿದ್ದ ಬಾಯಕ್ಕನ ಮಾಸ್ತರಿಣಿ ಘೋಸಿಗೆ ಮಾದೇವಿ ರೋಸಿದ್ದಳು. ಇರೋಳೊಬ್ಬಳು, ಇರೋದು ನಾಕು ಪಾತ್ರೆ! ಆದ್ರೆ ಬಾಳೆಬುಡದಲ್ಲಿ ಮಾದೇವಿ ಬೂದಿ–ಹೊಯಿಗೆ–ಸಬಕಾರ ಪುಡಿಯ 'ಬಾಯಕ್ಕನ ಸ್ಪೆಷಲ್ ಮಿಕ್ಸ ಬ್ರ್ಯಾಂಡ್' ನಲ್ಲಿ ತಪ್ಪಲಿ ತಿಕ್ಕತೊಡಗಿದರೆ, ಹಿತ್ತಲ ಬಾಗಲ ಮೆಟ್ಟಿಲ ಮೇಲೆ ಕೂತ ಬಾಯಕ್ಕ ತಪ್ಪಲಿ ಪುರಾಣ ಸುರುಮಾಡುತ್ತಿದ್ದಳು. ಇದನ್ನ ಯಾವಾಗ ತಗಂಡೆ, ಎಲ್ಲಿ ತಗಂಡೆ... ಈಗ್ಲೂ ಹಾಂಗೇ ಈ್ಯದ ಅನ್ನುವವರೆಗೆ ಹೂಂ ಹೂಂ ಅನ್ನುತ್ತ ಅನ್ನುತ್ತ ತಾನು ಕೈಲಿ ಹಿಡ್ದ ಈ ಪಾತ್ರೆ ದ್ರೌಪದಿ ಅಕ್ಷಯ ಪಾತ್ರೆಯಷ್ಟೇ ಪವಿತ್ರವಾದದ್ದು ಮುಂದೊಂದು ದಿನ ಬಾಯಕ್ಕ ಇರಲಿಕ್ಕಿಲ್ಲ, ಮಾದೇವಿ ಇರಲಿಕ್ಕಿಲ್ಲ, ಈ ಪಾತ್ರೆ ಉಳೀತದಲ್ಲವಾ? ಅಂತ ಏನೇನೋ ಯೋಚ್ನೆಗೆ ಸಿಕ್ಕು, ಚಿಟ್ಟಾಣಿಯ ಕುಣತಕ್ಕೆ ಆಟದಪದ ಎಳಿವಂತೆ ಮನಸ್ಸು ಬದುಕಿನ ತಳಾತಳದತ್ತ ಹೋಗುತ್ತಿತ್ತು. ಮೊದಮೊದಲೆಲ್ಲ ಕೆಲ್ಸ ಮಾಡುವಾಗ ಹಿಂದೆ ಹಿಂದೆ ನಿಲ್ಲುತ್ತಿದ್ದ ಬಾಯಕ್ಕನಲ್ಲಿ ಮಕ್ಕಳು ಪರೀಕ್ಷೇಲಿ ನಕಲು ಮಾಡದಂತೆ ತಡಿವ ಮಾಸ್ತರಿಕೆ ಇದೆಯಾ ಎಂಬ ಗುಮಾನಿಗೆ ಬಿದ್ದಿದ್ದಳು. ಆದರೆ ಬಾಯಕ್ಕ ತನ್ನ ಜೊತೆ ಮಾತಾಡುತ್ತ ಎಂಥದೋ ಖುಷಿಪಡೋದು ಮಾದೇವಿಯ ಅರಿವಿಗೂ ಬರತೊಡಗಿತು. ಪ್ರಿಜ್ಜಿನಲ್ಲಿಟ್ಟ ದೋಸೆ ಹಿಟ್ಟಿನಿಂದ ಅಪಶಕುನದಂತೆ ಎರಡು ದೋಸೆ ಹೊಯ್ದುಕೊಳ್ಳಲು ಬಾಯಕ್ಕಗೆ ಮನಸ್ಸು ಬರುತ್ತಿರಲಿಲ್ಲ. ನಾಲ್ಕು ದೋಸೆಹೊಯ್ದು ಚಾ ಇಡಲು ಮಾದೇವಿಯ ಹಾದಿ ಕಾಯುತ್ತಿದ್ದಳು. ಮೀನು ತರಲು ಹೋದರೆ ಯಾರೇನು ಅಂದುಕೊಳ್ಳುವರೋ ಅಂತ ನಾಚಿಕೊಂಡು, ಗಂಡ ಹತ್ತಿಸಿದ್ದ ಮೀನು ಪಳದಿಯ ರುಚಿಯನ್ನೂ ಮೀರಲಾಗದೆ ಬಾಯಕ್ಕ ಒದ್ದಾಡುತ್ತಿದ್ದಾಳೆಂದು ಮಾದೇವಿ ಗ್ರಹಿಸಿಕೊಂಡಿದ್ದಳು. ಆಗೀಗ ಬೆಳಂಜೆ, ಸಮದಾಳಿಯಂತ ಗನಾ ಜಬ್ಬು ಬಂದರೆ ನಾಕು ತರೋದು ರೂಢಿಮಾಡಿಕೊಂಡಳು. ಬಾಯಕ್ಕನೂ ತಲೆಬೊಂಡದಂಥ ತೆಂಗಿನಕಾಯನ್ನ ಕೊಟ್ಟಳೇ, ಬಾಯಕ್ಕನಿಗಂತೂ ಈಗೀಗ ತಮ್ಮ

ಸಂಕಟವನ್ನೇ ಹೇಳಿಕೊಳ್ಳುವ ಮಕ್ಕಳ ಫೋನಿಗೆ ಕಾಯುವುದಕ್ಕಿಂತ ಮಾದೇವಿಯ ಜೊತೆ ಹಂಚಿಕೊಳ್ಳುವುದರಲ್ಲೇ ನಿಸೂರತೆ ಸಿಗತೊಡಗಿತ್ತು.

ಊರದೇವಿ ಗುಡಿಯ ಜೀರ್ಣೋದ್ಧಾರ ಕಮಿಟಿಗೆ ಮೆಂಬರಾಗುವುದನ್ನು, ಪಂಚಾಯತಿಗೆ ಅವಿರೋಧವಾಗಿ ಆಯ್ಕೆ ಮಾಡ್ತೀವಿ ಅನ್ನೋದನ್ನ ಸಾಫ್‌ಸಾಫ್ ನಿರಾಕರಿಸಿದ ಬಾಯಕ್ಕನ ಒಳಗಿಗೆ ಚೂರು ಚೂರೇ ಇಳಿಯತೊಡಗಿದಂತೆ ಮಾದೇವಿಯೂ ಏನೋ ಊರ ಉಸಾಬರಿ ತಿಳಿದವಳಂತಾಗಿದ್ದಳು. ಈಗೀಗ ತನ್ನೊಳಗೇನೋ ಬದಲಾದಂತೆಯೂ ಅವಳಿಗೆ ಅನ್ನಿಸುತ್ತಿತ್ತು. ಪರಪರ ಅಂತ ಕಸಬರಿಗೇಲಿ ಅಂಗಳ ಕೆರೀತಿದ್ದವಳು ಮಗಳ ತಲೆ ಬಾಚಿದಷ್ಟು ಹಗೂರವಾಗಿ ಕಸಹೊಡೀತಿದ್ದಳು. ನೆಲ ಒರಸೋದು ಅಂದ್ರೆ ಕೂಸಿನ ಕುಂಡೆ ಒರೆಸುವಂಥದ್ದು ಅನ್ನೋ ಆಪ್ತತೆ ಒದಗಿತ್ತು. ಇದನ್ನೆಲ್ಲ ಬಾಯಕ್ಕ ತನಗೆ ಹೇಗೆ ಕಲಿಸಿದಳೆಂಬುದು ಅವಳಿಗೂ ತಿಳೀದು. ಬಾಯಕ್ಕ ಅಪರೂಪಕ್ಕೆ ಮದ್ವೆ ಮುಂಜಿಗೆ ಹೋದರೆ ಕುಲಸ್ಥೆಯರು ತಾವು ತೊಟ್ಟಿದ್ದ ಹೊಸ ದಾಗಿನ ಅತ್ತಿತ್ತ ಸರಸುತ್ತ "ಬಾಯಕ್ಕಗೇನ ನಮ್ದೆಲ್ಲ ಇಚ್ಚರಕಿ ಆತೀದೆ? ಅಂಬೇರ ಮಾದೇವಿ ಇದ್ರ ಸ್ಯಾಕ" ಅಂತ ರಾಗ ಎಳೆದರೂ ಬಾಯಕ್ಕ ಸೊಪ್ಪು ಹಾಕಿದವಳಲ್ಲ. ಇವರ ಹಾಗೆ ಚೀಟಿ, ಪಾರ್ಟಿ, ಸೀರಿ ತನ್ನ ಲೋಕವಲ್ಲ ಅಂತ ಎಂದೋ ತೀರ್ಮಾನಿಸಿದ್ದಳು. "ಓಡಾಡುಕೆ ಆಗುದಲಪು. ಕಾಲೂ ಇಗೀಗೆ ಹಿಡಕಂಬಿಡ್ತಿದ" ಅಂತ ಹಗೂರ ಸರಿಸಿಬಿಡುತ್ತಿದ್ದಳು.

ದೊಡ್ಡ ತೆರೆಯೆದುರಿನ ತೆಪ್ಪದ ನಡೆಯಂತ ತನ್ನ ಸೆಣಸಾಟ ಹೇಳಿಕೊಳ್ಳುತ್ತ ಮಾದೇವಿ– "ಸಾಕಾಗೋಗೀದ್ರ, ಈಗನ ಮಕ್ಳ ಪೋರಗಳ್ನ ಮಾತಾಡ್ಸುಕಾಗುದಲ, ಹಾಳಬಿದ್ದ ಟಿ.ವಿ. ಮುಂದ ಕೂತರಂದ್ರೆ..." "ಗಂಡಸರದೇನ್ರಾ ಅಮ್ಮ, ಮಾತ ಕೇಳ್ತರೆ?

ಡ್ಡ ಸಾಯಬ್ಯಾಢ ಅಂತಿ. ಉಂದೇ
ಕಿಟ್ ಅಂತ್ಯಾ. ಆಯ್ತು, ಹೊಗ್ಸಾಯ
ತ್ತಾಗರಾ ಅನ್ನೂಕಾತೀದೆ? ಅದೆಂಥದ್ದೋ
ೀಕ್ ಬಂದಿದ ಕಡ್ರಲಾ ಯಾರಿಗೆ ಬೇಕ್
ಸಾಬರಿ? ಸುಮ್ನೆ ಬಿದ್ಕಂತಿ ಬ್ಯಾಡಾದ್ರೂ
ಯಾಡಾ ಅಂಬೂಕಾತೀದ್ರಾ" – ದೇವರ
ಲ್ಲಿನ ಮುಂದೆ ಗೋಳು ಕುಟ್ಟಿಕೊಂಡ
ಾಗೆ ಅವಳು ಹೇಳುವಾಗ ಬಾಯಕ್ಕನ
ಂಗಳಕ್ಕೆಲ್ಲ ಹಸಿಗಿಡದ ಸುಳಿ ಸುಟ್ಟು ಸೀದ
ಾಸನೆ ಕವಿಯುತ್ತದೆ.

ಒಮ್ಮೆ ಬಾಯಕ್ಕ ಪೇಪರಲ್ಲಿ ಬಂದಿದ್ದ
ಂಗಾರದ ಮನುಷ್ಯ'ನೊಬ್ಬನನ್ನು
ಾದೇವಿಗೆ ತೋರಿಸಿದ್ದಳು. ಅವನು
ಂಗಾರ ಹೆಚ್ಚಾಗಿ ಮನಿ ಗೋಡೆ, ನೆಲ,
ಾಗಿಲು ಚಿಲಕ ಎಲ್ಲಕ್ಕೂ ಹಾಕಿಸಿ ಕಡೆಗೆ
ಂಗಾರದ ತೆಳ್ಳನೆಯ ತಗಡನ್ನೇ
ುಟ್ಟುಕೊಂಡಿದ್ದ. ಆ ಫೋಟೋ ಎರಡು
ಣ ನೋಡಿದ ಮಾದೇವಿ 'ಶ್ಯಿ, ಶ್ಯಿ. ಹೇಲ
ಾರ್ಸಿದಾಂಗ ಕಾಣೂದಲೇನ್ರಾ'– ಅಂತ
ಲು ಜಪ್ಪಿಸುತ್ತ ಹಿತ್ತಲಲ್ಲಿ ಬಿದ್ದ ಅಡಕೆ
ೋಗೆಯನ್ನ ಎತ್ತಲು ಹೋಗಿದ್ದಳು.
ವತ್ತೇ ಬಾಯಕ್ಕ ತನ್ನ ಕೈಯಲ್ಲಿದ್ದ ಎರಡು
ಂಗಾರದ ಪಾಟಲಿ ತೆಗೆದಿಟ್ಟು
ಂಪುಗಾಜಿನ ಬಳೆ ಹಾಕಿಕೊಂಡಿದ್ದು.
ುಕ್ರುಗೆ ಮಕ್ಕಳಿಗೆ ಏನಾರೂ ಹೇಳಲು
ೋಗಿ 'ಬಾಯಮ್ಮೋರು ಹೇಳಿರು'
ಂದರೆ ಸಾಕು, "ದುಡ್ಡ ಮುಟ್ಟಿದ್ss ಇಲ್ವಾ
ೀಳ್, ಬಿಟ್ಟಾಕ ಕೆಲ್ಸವಾ" ಅಂತ ಸುಕ್ರುವೂ
ಹದ್ದೂರನ ಹಂಗೆ ದಬಾಯಿಸುತ್ತಿದ್ದ.
ುಕ್ಕಳಂತೂ ಮಾತೆತ್ತಿದರೆ 'ನಮ್ಮವ್ವಿ
ುರಾಣ ಸುರುವಾಯ್ತು' ಅಂತ ಕಿಸಿಕಿಸಿ
ಗುತ್ತಿದ್ದರು.

ಇಂಥ ಗಲಿಬಿಲಿಯ ದಿನಗಳಲ್ಲೇ
ಮಟೇಲಿ ಇಲೆಕ್ಸನ್ನಿನವರು ಹೆಂಗಸರಿಗೆಲ್ಲ
ೀರಿ ಹಂಚ್ತಾರಂಬೋ ಸುದ್ದಿ ಹಬ್ಬಿತು.

ೋಕರ್ಣದಿಂದ ಬಂದ ಮ್ಯಾಲನಕೇರಿ ಸಾತುರಾಮನ ರಿಕ್ಸಾ 'ದೊಡ್ಡ ಸಂಖ್ಯೇಲಿ
ನ್ನೀss' ಅಂತ ಕೂಗುಹಾಕ್ತಾ ತಿರುಗಿತು. ಪುಕ್ಸಟೆ ಸಿಕ್ಕರೆ ನಂಗೊಂದು,
ಮ್ಮಪ್ಪಗೊಂದು ಅನ್ನೋ ಕಾಲದಲ್ಲಿ ಇಟ್ಟುದ್ದss ಇಡಿ ಇಡಿ ಸೀರಿ ಸಿಕ್ಕರೆ ಬ್ಯಾಡ
ಂದೋರ್‍ಯಾರು? ಅಂಬೇರ ಕೊಪ್ಪದ ಹೆಂಗಸರಿಗೆ ಅಂತಾ ಎರಡು ಟೆಂಪೊ
ಡಿಯಾಯ್ತು. ಪಕ್ಕದ ಮನಿ ಕಮಲಿ ಟಿ.ವಿ.ಯಲ್ಲಿ ತೋರ್‍ಸೋ ಸೀರಿ ಜೊತಿ ತನ್ನ
ಡಿ ತುಂಬೋ ಸೀರಿಯನ್ನ ಹೋಲ್ಸಿ ಹೋಲ್ಸಿ ಚಪ್ಪನೀರು ಸುರ್ಸಿದ್ಳು. ಮಾದೇವಿಯೂ
ೊರಟಳು. ಬಾಣಂತನ ಮುಗ್ದ ಮ್ಯಾಲೆ ಹೊಸಸೀರಿ ಅಂತ ತನ್ನ ಮೈ ಉಟ್ಟೇ ಇಲ್ಲ,
ಲ್ಲ ಬಿಟ್ಟು ಉಟ್ಟಿದ್ದೇ ಅನ್ನಿಸಿ ಪೆಚ್ಚಾದಳು.

ಆವತ್ತು ಉಪ್ಪಿಟ್ಟು ಚಾ ಆಗಿ ಭಾಷಣ ಎಲ್ಲ ಮುಗ್ಸಿ ಸೀರಿ ಹಂಚೋ ಹೊತ್ತಿಗೆ
ತ್ತಾಲ ಕವದು ಒಬ್ಬರನ್ನೊಬ್ಬರು ತಟ್ಟಾಡುವಂಗಾಗಿತ್ತು. 'ಸೀರಿ ಗಂಟಿಗಿಂತ ಬಂದ
ಂಗಸ್ರು ದುಪ್ಪಟ್ಟು ಅವ್ರೆ' ಅಂತ ಯಾರು ಯಾರ ಕಿವೀಲಿ ಹೇಳಿದ್ರೋ ? ಅದು
ಲ್ಲರ ಒಳಗೂ ಕತ್ತಿಯಲಗಿನಂಗೆ ಹೊಕ್ಕು ಎಲ್ರೂ ನಾ ಮುಂದು ತಾ ಮುಂದು
ಗ್ಗಿದವರೇ. ಓಓಓ ಅನ್ನೋವಷ್ಟರಲ್ಲಿ ಗಿಬ್‌ಹೈಸ್ಕೂಲ್ ಗ್ರೌಂಡಿನ ಪೆಂಡಾಲ ಕುಸಿದು
... ಅರಿ ಹೊರಗೆ ಹೆಂಗೆ ಅಂತ ದಾರಿಕಾಣದೆ 'ಅಯ್ಯಪ್ಪೋ' ಅಂತ ಬಯಲಿಗೆ
...ವರು ಮೈಮ್ಯಾಲೆ ಸೀರಿ ಇದ್ಯಾ ಇಲ್ಲವಾ ಅಂತ ನೋಡಿಕೊಳ್ಳುವಂತಾಗಿತ್ತು.
ಾರೋ ಸತ್ರು ಅಂತಾನೂ ಗುಲ್ಲು. ಮಕ್ಕು ಮರಿ ಕರ್ಕಂಬಂದವರದಂತೂ

ಯಮನರಕ. ಬಸರಿಯೊಬ್ಬಳಿಗೆ ತರಾಸು ಆಗಿ
ಕುಯ್ಯೋಂ ಮಯ್ಯೋ ಅಂತ ಒರಲುತ್ತಿದ್ದಳು. ನಾವು
ಬದಕೀವಿ ಅಂತ ಗ್ಯಾರಂಟಿ ಮಾಡ್ಕೊಳ್ಳುವವರ ಹಾಗೆ
ಆ ಮಳ್ಳು ಹೆಂಗಸರು ಕಾಮತ ಹೊಟೇಲಿನ ಲೈಟಿನ
ಪಸೆ ಬೀಳೋಕಡೆ ಹೋಗಿ ಹೋಗಿ ಕುಂತರು.
ಮಾದೇವಿಯೂ ಊರ ಹೆಂಗಸರ ಜತಿ ಅಳಲೂ
ಆಗದ ಗಾಭರಿಯಲ್ಲಿದ್ದಳು. ಗುಂಪಿನಲ್ಲಿ ಕಮಲಿ
ಇರಲಿಲ್ಲ. ಬೆಳಕು ತರೋಹೊತ್ತಲ್ಲಿ ನೀರಗಾಡಿಯೂ
ಬಂತು. ಪೆಂಡಾಲಿನೊಳಗೆ ಸ್ಟೇಜಿನ ಕೆಳಗೆ ಮೂರು
ಹೊಸಸೀರಿಯ ಪ್ಲಾಸ್ಟಿಕ್ ಕೊಟ್ಟೆ ಹಿಡಿದದ್ದು ಹಿಡಿದ
ಹಾಂಗೇ ಕಮಲಿ ಸತ್ತುಬಿದ್ದಿದ್ದಳು. ಮರ್‍ಯಾದಿಗೆಟ್ಟು
ಬಿದ್ದ ಕಮಲಿಯ ಹೆಣ ಊರುಕಂಡು
ಮಣ್ಣಾಗುವವರೆಗೂ ಹೋಗಿದ್ದ ಹೆಂಗಸರಿಗಂತೂ
ಮೈಮ್ಯಾಲಿನ ಸೀರಿಯ ದರಕಾರವೂ ಇರಲಿಲ್ಲ. ಹಿಂಗೆ
ಅರ್ಧದಲ್ಲೇ ಕರ್ಕಂಬು ಸಲುವಾಗೇ ಕಮಲಿಗೆ ಮಕ್ಕಳನ್ನ
ಕೊಡದಿದ್ದ ಪರಮಾತುಮನ ದಯಾಗುಣವನ್ನು
ಪಾತಜ್ಜಿ ಹಾಡ್ಯಾಡಿ ಅತ್ತಳು. ಹೆಣ ಬೂದಿಯಾದ
ಮೇಲೂ ಟಿ.ವಿ.ಯಲ್ಲಿ ಬರುತ್ತಿದ್ದ ಕಮಲಿಯ ಹೆಣದ
ಚಿತ್ರಕ್ಕೆ ಒಬ್ಬೊಬ್ಬರು ಒಂದೊಂದು ನಮೂನಿ
ಗಾಲುಮೇಲಾದರು.

ಬಾಯಕ್ಕ ಹೇಳುವ ಹಂಗೆ, ಮಾದೇವಿಗೆ
ಮೈಮ್ಯಾಲ ಭಾರ ಬಂದವರ ಹಂಗೆ ದರದರ
ನಡೆಯೋ ಮಳ್ಳು ಹೆಚ್ಚಿದ್ದು ಈಗಲೇ. ಪಾತಜ್ಜಿ ಮಾತ್ರ
ಇದು ಮುಟ್ಟು ನಿಲ್ಲೋ ಕಾಲದ ಉತಾವಳಿ ಅಂದ್ಲು.
ಡಾಕ್ಟ್ರು ನರಗಳಿಗೆ ಸಂಬಂಧಿಸಿದ್ದು ಅಂತ ಗುಳಿಗಿ
ಕೊಟ್ಟರು. ಸುಕ್ರು ದೇವ್ರ ಮನಿ ಬಾಗ್ಲ ಕಟ್ಸಿದ.
ಮಕ್ಕಳು ಟಿ.ವಿ.ಯಲ್ಲಿ ಗನಾದ ಬರುವಾಗ್ಲೇ 'ಕಾಂಕಿ
ಹಾಂಗೆ ಕೆಲಿವ ಅವ್ವಿ' ಯ ಕಾಟ ಕಮ್ಮಿಯಾದ
ಮೂಡಿನಲ್ಲಿದ್ದರು. ಕಮಲಿಯ ಗಂಡನಿಗೆ ಲಕ್ಸ
ರೂಪಾಯಿ ಸಾಂಕ್ಸನ್ ಆಗಿ ಅಂವ ಮೆರೀತಿರೋದನ್ನ
ಕಣ್ಣಾರೆ ಕಂಡವ ಸುಕ್ರು ತನ್ನ ದರಿದ್ರ ನಸೀಬನ್ನ
ಅದರೊಟ್ಟಿಗೆ ತೂಗಿ ಉಸಿರು ಹಾಕುವುದರಲ್ಲೇ ಬೆಳಗು
ಮಾಡ್ತಿದ್ದ. ಮಾದೇವಿ ಹೊತ್ತಲ್ಲದ ಹೊತ್ತಲ್ಲಿ
ದರಮಳ್ಳಿ ಹಂಗೆ ಧಗಧಗ ನಡೆದ ತಾಸು ಅರ್ಧತಾಸಿನ
ಮೇಲೆ 'ಗಿರಾಸ್ಥ'ನ ಫೋಸಿನಲ್ಲಿ ಆ ಹಾದಿಯಲ್ಲಿ
ನಡೀತಾ ಎದುರಾದವರನ್ನ 'ಈ ಮಳ್ಳ ಮಾದೇವಿ ಎತ್ತಾಗೋಯ್ತ್ರಾ ಒಡ್ಯಾ' ಅಂತ
ಕನಿಕರ ಪಡಕೊಳ್ಳುತ್ತಿದ್ದ. ಬಾಯಕ್ಕ ಸಣ್ಣಪ್ಪ ಮಾಸ್ತರು ಸತ್ತಾಗ ತಂಡು ಹೊಡೆದು
ಕುಂತವಳಂತೆ ಈಗಲೂ... ..

ವಿನಯಾ

'ಬಾಯಾರಿಕೆ', 'ನೂರು ಗೋರಿಯ ದೀಪ' ಕವನ ಸಂಕಲನಗಳು ಹಾಗೂ 'ಊರ ಒಳಗಣ ಬಯಲು' ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಪು.ತಿ.ನ ಕಾವ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ರತ್ನಮ್ಮ ಹೆಗ್ಗಡೆ ದತ್ತಿ ಮುಂತಾದ ಹಲವು ಪುರಸ್ಕಾರಗಳಿಗ ಪಾತ್ರರು. ಪ್ರಸ್ತುತ ಧಾರವಾಡದ ಅಳ್ನಾವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರು.


ಬಿ.ಎಂ.ಟಿ.ಸಿ. ಸಮರ್ಪಣೆ
ಅದ್ಭುತ ಸೇವೆಗಳ ಖಜಾನೆ
ಶ್ರೀ ಆರ್. ಅಶೋಕ
ಬಿಎಂಟಿಸಿ–ಸದಾ ಕ್ರಿಯಾಶೀಲ–ರಾಜ್ಯದ ಪ್ರಗತಿಗೆ ಚಾಲಕ ಶಕ್ತಿ
ರಾಷ್ಟ್ರೀಯ - ಅಂತಾರಾಷ್ಟ್ರೀಯ ಪ್ರಶಸ್ತಿಗಳ ಹೆಮ್ಮೆಯ ಸಾಲು
ಆವಿಷ್ಕಾರಗಳ ಪರಂಪರೆ–ಪ್ರಯಾಣಿಕರಿಗೆ ಅನುಕೂಲಗಳ ಮಹಾಪೂರ
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು 560 027
ದೂರವಾಣಿ : 2295 2522, 2295 2422, 2295 2534
ಉಚಿತ ಕರೆ : 18004251663 ವೆಬ್‌ಸೈಟ್ : www.bmtcinfo.com

ಮೂಳ ಹುಳುವಿನ ಮೂಳ ಗೀತೆ

ಕವನ

ಇದು ಎಂಥ ಹುಳ, ಎಂಥ ಹುಳ!
ಜಗಳಿಗಿಂತ ಮಿಗಿಲಾದ ಜನಾತಿ ಹುಳ!
ಬೆಂಕಿಯೆದುರು ಬೆಂಕಿಯಂತೆ
ವಕ್ರ ವಂಕಿ ವಿನ್ಯಾಸದಲ್ಲಿ ಬಾಗಿ ಬಾಗಿ ಬಳುಕುತ್ತ
ಅಮೋಘವೋ ಅಮೋಘವಯ್ಯಾ
ಬೃಹನ್ನಳೆಯ ಭೌತಿಕ ಚೇಷ್ಟೆಯ ಗುಲಾಮಿ ಭಾಷೆ ಲಯ
ದೇಸೀ ಕುಣಿತದಲ್ಲಿ ಮಾರ್ಗದ ರದ್ದಿಯನ್ನೆ ಗುಡಿಸುತ್ತ
ಮೂಳ ಖೂಳ ಧೂಳ ಹುಳು!

ಕ್ರಿಮಿಯಂತೆ ಸಪೂರ ತೆಳು
ನಕಲಿ ಭಾವೋನ್ಮಾದದಲ್ಲಿ ಮಿಡುಕುತ್ತ ಮುಲುಮುಲು
ನಿಜದ ಬೆಳಕಿನ ಹುಳವಲ್ಲದು; ನೆರಳೆಂಬುದೆ ಅದಕ್ಕಿಲ್ಲ
ಬೆಂಕಿಗೆ ನೆರಳಾಗಲು ವ್ಯರ್ಥ ತಹತಹಿಸುವ
ತೆವಲಿನಮಲು; ಎದೆಗುಡಿಯಲಿ ಮುಚ್ಚಿದ ಗವಗತ್ತಲು
ಒಳಗಿನ ತಣ್ಣನೆಯ ದೀಪದ ಆರಗೊಟ್ಟು
ಕಡ ಪಡೆದ ಬೆಂಕಿಯನ್ನೆ ಮೈಮನಕೆ ಪೂಸಿಕೊಂಡು
ಮಾಸದ ನೆನಪುಗಳೆಲ್ಲ ಧಗಧಗ!

ಮಣ್ಣು, ನೀರು, ಹೆಜ್ಜೆ ಗುರುತುಗಳನ್ನೆಲ್ಲ ಮರೆತು
ಕಣಕಣದಲು ಪಿಸುಗುಡುವ ಪೂರ್ವಿಕ ನನ್ನಿಗೆ ಕಿವುಡಾಗಿ
ವಿಕಲ ನಾಂಟ್ಯವಾಡುವುದಿದು ನೋಡಿರೋ ಈ ಜಾಡ್ಯವ
ಬೆಂಕಿಯ ಛಿಟಛಿಟಲಿಗೆ ಮಿಡುಕಿ ಹಾದರದ ಸೂರ್ಯನಾಡಿ
ಜ್ವಾಲೆ ಕುಣಿವ ರೀತಿಯಲ್ಲೇ ಕುಣಿಸಿ ಕುಂಡಿತಲೆ
ನೀರಿತ್ತ ಜೀವಾದಿಜೀವಗಳ ಚಂದ್ರನಾಡಿಯನ್ನೆ ಮರೆತು
ರವರವ ಉರಿಯುತ್ತದಲ್ಲ ಈ ಜಲಕಂದ, ಎಂಥ ಮೂಳ?
ಇದೆಂಥ ಮೂಲ?!

ಮಣ್ಣ ಹುಳು ತೊರೆದಿಲ್ಲ ಅದರ ಕಾಯಕ ವಿನಯ
ಕಂಬಳಿ ಹುಳ, ಕಡಜೇರಿಗೆ, ರೇಷಿಮೆ ಹುಳ ನಯವೋ ನಯ
ಹಿರಿ ಘನತೆಯಲೆ ಕಿರಿಜೀವಗಳು ಧನ್ಯವೋ ಧನ್ಯ
ಇದ್ದೀತು ಹೇನು, ನೊಣಗಳಿಗೂ ಅದರದೇ ಘನತೆ ಮಾನ್ಯತೆ
ಹುಳು ಕ್ರಿಮಿಗಳಾದರೇನು ಬಿಡವು ಆತ್ಮ ಸಮ್ಮಾನತೆ
ಆದರಿದು ಎಂಥ ಹುಳ! ವಿಲಕ್ಷಣ ಕುಳ!
ಹೊಲಸು ನಾತವುಂಡೇ ನಲಿವ ನಿಕೃಷ್ಟ ಛಲ!
ಇರಲಿ ಇಂಥ ಹುಳುವಾದ ಹುಳವೂ
ಕಾಲದಗ್ನಿ ಪರೀಕ್ಷೆಯಲ್ಲಿ ಕಡೆಗಾದರೂ ಗೆಲ್ಲುವ
ಅದಕೆಂದೇ ಮೀಸಲಾದ ಮತ್ತೊಂದು ಅವಕಾಶವೂ!

ಲಕ್ಷ್ಮೀಪತಿ ಕೋಲಾರ



ಕವಿ, ಚಿಂತಕ, ಹವ್ಯಾಸಿ ಪತ್ರಕರ್ತ, ಚಿತ್ರ ಸಾಹಿತಿ, ವಿಮರ್ಶಕ, ಅನುವಾದಕ, ಸಂಶೋಧಕ, ನಾಟಕಕಾರ ಹೀಗೆ ಬಹುಮುಖ ಪ್ರತಿಭೆಯ ಬರಹಗಾರ. ಜನಪ್ರಿಯ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಿನಿಮಾ ರಂಗದಲ್ಲೂ ಛಾಪು ಮೂಡಿಸಿದ್ದು ಅನೇಕ ಚಿತ್ರಗಳಿಗೆ ಕಥೆ, ಚಿತ್ರಕಥೆ ಸಂಭಾಷಣೆ ರಚಿಸಿದ್ದಾರೆ. ಇವರ ಸಂಭಾಷಣೆಯ 'ಮುನ್ನುಡಿ' ರಾಷ್ಟ್ರ ಪ್ರಶಸ್ತಿ, [illegible] ರಾಜ್ಯ ಪ್ರಶಸ್ತಿ ಗಳಿಸಿ. ಬಹಳಷ್ಟು ಸಾಕ್ಷ್ಯ ಚಿತ್ರಗಳಿಗೆ ಸಾಹಿತ್ಯ ರಚನೆ ಹಾಗೂ ನಿರ್ದೇಶನ ಮಾಡಿದ್ದಾರೆ.

ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಕಂದಕ

ಡಾ॥ ಡೊಮಿನಿಕ್. ಡಿ

ಭಾರತ ಸರ್ಕಾರವೂ ಸೇರಿದಂತೆ ವಿಶ್ವದ 72 ಪ್ರಮುಖ ಸಂಸ್ಥೆಗಳ ಮೇಲೆ ಚೀನಾ ಮೂಲದ ಹ್ಯಾಕರ್‌ಗಳು ಸೈಬರ್ ದಾಳಿ ನಡೆಸಿವೆ ಎಂದು ಅಮೇರಿಕಾ ಚೀನಾ ದೇಶವನ್ನು ದೂಷಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ 'ಬಾರೀ ಪ್ರಮಾಣದ ಸೈಬರ್ ದಾಳಿಗಳಿಗೆ ತಾನೂ ಕೂಡಾ ಈಡಾಗಿದ್ದು, ಅವುಗಳಲ್ಲಿ ಅರ್ಧಕ್ಕಿಂತಲೂ ಅಧಿಕ ಪ್ರಮಾಣದ ದಾಳಿಗಳು ವಿದೇಶಗಳಲ್ಲಿ, ಅದರಲ್ಲೂ ಅಮೇರಿಕಾ ಮತ್ತು ಭಾರತದಲ್ಲಿ ರೂಪುಗೊಂಡಿವೆ' ಎಂದು ಚೀನಾ ಆರೋಪಿಸಿದೆ.

ಈಚೆಗೆ ಕನ್ನಡ ಪತ್ರಿಕೆಯೊಂದರಲ್ಲಿ "ಕಾರ್ಖಾನೆಗಳ ಕೀಲು ಮುರಿಯುವ ಹುನ್ನಾರದ ಹುಳ" ಎನ್ನುವ ಲೇಖನ ಪ್ರಕಟವಾಗಿತ್ತು. ಈ ಲೇಖನದ ಶೀರ್ಷಿಕೆಯಲ್ಲಿ 'ಹುಳ' ಎನ್ನುವ ಪದ ನನಗೆ ಕುತೂಹಲಕಾರಿ ಎನಿಸಿತು. ಆ ಲೇಖನ ಓದಿದಾಗಲೇ ಅದೊಂದು ಕಂಪ್ಯೂಟರ್ ವೈರಸ್ ಎಂದು ಗೊತ್ತಾದುದು. ಅದಿರಲಿ, ನನಗೆ ಬಹುವಾಗಿ ಕಾಡಿದ ಸಂಗತಿ ಎಂದರೆ ಅವರು ಬಳಸಿದ 'ಮುಸ್ಲಿಂ ಬಾಂಬ್' ಎನ್ನುವ ಪದ. ಅಂದರೆ ಆ ಲೇಖನದ ಐಡಿಯಾಲಾಜಿಕಲ್ ನೆಲೆ ಮಾತ್ರ ಆ್ಯಂಟಿ-ಮುಸ್ಲಿಂ ಆಗಿತ್ತು. ಇವರು ಮಾಹಿತಿ ತಂತ್ರಜ್ಞಾನ ಬರೆಯುತ್ತಿದ್ದಾರೋ ಅಥವಾ ಅವರು ಮಾಹಿತಿ ತಂತ್ರಜ್ಞಾನದಲ್ಲಿ ಆಗಿರುವ ಬದಲಾವಣೆಯನ್ನು ವಿವರಿಸುತ್ತಿದ್ದಾರೋ ಎನ್ನುವ ಗುಮಾನಿ ಓದುಗರಿಗೆ ಬಂದುಬಿಡುತ್ತದೆ. ಅದೇನೇ ಇರಲಿ ಆ ಬಗ್ಗೆ ಆಕ್ಷೇಪಗಳಿದ್ದರೂ ಸಹ, ಅದು ಮಾಹಿತಿ ತಂತ್ರಜ್ಞಾನವನ್ನು 'ಪತ್ತೆದಾರಿ' ತಂತ್ರಜ್ಞಾನವನ್ನಾಗಿ ಬಳಸುವ ವಿಧಾನದ ಬಗ್ಗೆ ಅಚ್ಚರಿ ಮತ್ತು ಎಚ್ಚರಿಕೆಯ ವಿಚಾರಗಳನ್ನು ಒಳಗೊಂಡಿತ್ತು. ಇದಕ್ಕೆ ಪೂರಕವೆಂಬಂತೆ ಇನ್ನೊಂದು ಪತ್ರಿಕೆಯಲ್ಲಿ ಅದೇ ದಿನದಂದು 'ಸೈಬರ್ ದಾಳಿ: ಭಾರತವನ್ನು ದೂಷಿಸಿದ ಚೀನ' ಎನ್ನುವ ವರದಿ ಪ್ರಕಟವಾಗಿತ್ತು. ಕೆಲವು ದಿನಗಳ ಹಿಂದೆ ಭಾರತ ಸರ್ಕಾರವೂ ಸೇರಿದಂತೆ ವಿಶ್ವದ 72 ಪ್ರಮುಖ ಸಂಸ್ಥೆಗಳ ಮೇಲೆ ಚೀನಾ ಮೂಲದ ಹ್ಯಾಕರ್‌ಗಳು

ೖಬರ್ ದಾಳಿ ನಡೆಸಿವೆ ಎಂದು ಅಮೇರಿಕಾ ೀನಾ ದೇಶವನ್ನು ದೂಷಿಸಿತ್ತು. ಇದಕ್ಕೆ ್ರತಿಕ್ರಿಯೆಯಾಗಿ 'ಬಾರೀ ಪ್ರಮಾಣದ' ೖಬರ್ ದಾಳಿಗಳಿಗೆ ತಾನೂ ಕೂಡಾ ಡಾಗಿದ್ದು, ಅವುಗಳಲ್ಲಿ ಅರ್ಧಕ್ಕಿಂತಲೂ ಧಿಕ ಪ್ರಮಾಣದ ದಾಳಿಗಳು ವಿದೇಶಗಳಲ್ಲಿ, ದರಲ್ಲೂ ಅಮೇರಿಕಾ ಮತ್ತು ಭಾರತದಲ್ಲಿ ೂಪುಗೊಂಡಿವೆ' ಎಂದು ಚೀನಾ ರೋಪಿಸಿದೆ.

ಈ ಮೇಲಿನ ವರದಿಗಳು ಯಾವುದೋ ಲ್ಪನಿಕ 'ಸ್ಟಾರ್ ಟ್ರೆಕ್'ನಂಥ ಸಿನೆಮಾಗಳಲ್ಲ. ದಲಾಗಿ ನಮ್ಮೆದುರೇ, ನಮಗೆ ಗೊತ್ತಿಲ್ಲದೆ ಡೆಯುವ ವಿದ್ಯಮಾನವಾಗಿದೆ. ಆದ್ದರಿಂದ, ವಿಚಾರಗಳ ಒಳಮರ್ಮ ಏನೇ ಇರಲಿ, ಾವೆಲ್ಲಾ ಇಂದು ಬಹುವಾಗಿ ತುಕೊಂಡಿರುವ 'ಇಂಟರ್‌ನೆಟ್' ನ್ನುವುದನ್ನು ಮೊದಲು ಬಳಸಿದ್ದೇ ಮೇರಿಕ. ರಹಸ್ಯವಾಗಿ ಯುದ್ಧ ಾಹಿತಿಗಳನ್ನು ರವಾನಿಸುವ ಲುವಾಗಿಯೇ ಇಮೇಲ್ ಅನ್ನು ಹುಟ್ಟುಹಾಕಿದ್ದು ಮೇರಿಕ. ಅಂದರೆ ಯಾವುದೇ ಆಧುನಿಕ ತಂತ್ರಜ್ಞಾನದ ೂಲದಲ್ಲಿ ಜನಸಾಮಾನ್ಯರಿಗೆ ಅಥವಾ ಎಲ್ಲರಿಗೂ ಪಯೋಗವಾಗುವ ಆವಿಷ್ಕಾರದ ಬದಲಾಗಿ, ಂಸೆಯನ್ನು ಹರಡುವ ಅಥವಾ ಅಸಮಾನತೆಯ ವಿಧಿ–ಧಾನಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಹುನ್ನಾರಗಳು ದ್ದು, ಅವು ವ್ಯಕ್ತಿಗತ ಲಾಭವನ್ನು ಹೆಚ್ಚಿಸಿಕೊಳ್ಳುವುದೇ ಗಿವೆ ಎನ್ನುವುದನ್ನು ನಾವು ಗಮನಿಸಲೇ ಬೇಕಾಗುತ್ತದೆ. ದಕ್ಕೆ '2ಜಿ ಸ್ಪೆಕ್ಟ್ರಂ' ನಂಥ ಉದಾಹರಣೆಗಳು ಧಿಕವಾಗಿ ಸಿಗುತ್ತವೆ. ಆದರೆ ಇವನ್ನು ಮರೆಮಾಚುವ ುವಾಗಿಯೇ ವಿಜ್ಞಾನ–ತಂತ್ರಜ್ಞಾನವನ್ನು ಇಂದು ಲ್ಲರೂ ಇಷ್ಟಪಡುವ ಮತ್ತು ಆರಾಧಿಸುವ ದೈವವನ್ನಾಗಿ ಟ್ಟಿಕೊಡಲಾಗಿದೆ. ಆದ್ದರಿಂದ ಪ್ರಸ್ತುತ ಲೇಖನ ಈ ಾಹಿತಿ ತಂತ್ರಜ್ಞಾನ'ದ ಸ್ವರೂಪವನ್ನು ಅರಿಯಲು ಯತ್ನಿಸುತ್ತದೆ.

ಇತ್ತೀಚಿಗೆ ನಾವು **'ಇ ಲಿಟರೇಟ್'** ಎನ್ನುವ ಿಭಾಷೆಯನ್ನು ಸಾಮಾನ್ಯವಾಗಿ ಬಳಸುತ್ತಿರುತ್ತೇವೆ. ದೆ ನಾವು **ಲಿಟರೇಟ್** ಎನ್ನುವುದನ್ನು ಅಕ್ಷರಸ್ತರು ನ್ನುವುದನ್ನು ವಿವರಿಸಲು ಬಳಸುತ್ತಿದ್ದೆವು. ಅನಕ್ಷರಸ್ತರನ್ನು ಚಿಸಲು 'ಇಲ್ಲಿಟರೇಟ್' ಎನ್ನುವ ಪದವನ್ನು ಚಿಸುತ್ತಿದ್ದೆವು. ಆದರೆ, ಮಾಹಿತಿಯನ್ನು ಆಧರಿಸಿದ ವಹನಾ **ತಂತ್ರಜ್ಞಾನ** ಬಳಕೆ ಬಂದ ಮೇಲೆ, ಅದನ್ನು ಳಸುವವರನ್ನು **'ಇ ಲಿಟರೇಟ್'**ಗಳೆಂದೂ, ಬಳಸಲು ರದವರನ್ನು **'ಇ ಇಲ್ಲಿಟರೇಟ್'**ಗಳೆಂದು ಇಂದು ಯಲಾಗುತ್ತದೆ. ಸುಮಾರು ಮೂರು ದಶಕಗಳ ದೆಯೇ ಅನೌಪಚಾರಿಕವಾಗಿ ನಾನು ಕಂಪ್ಯೂಟರ್ ಯಲು ಆರಂಭಿಸಿದ್ದೆ. ಆದರೆ, ನಾನೇನು ಸೈನ್ಸ್ ್ಯಾರ್ಥಿಯಾಗಲಿ ಅಥವಾ ಇಂಗ್ಲಿಷ್ ಮಾಧ್ಯಮದ ್ಯಾರ್ಥಿಯಾಗಲಿ ಆಗಿರಲಿಲ್ಲ. ಈ ಸನ್ನಿವೇಶದಲ್ಲಿ ಅರ್ಧ ುಕ ಮತ್ತು ಅರ್ಧ ಭಯದಿಂದಲೇ ಈ ್ಯಮಾನಗಳಿಗೆ ನಿಧಾನವಾಗಿ ತೆರೆದುಕೊಳ್ಳುತ್ತಿದ್ದೆ. ಆಗ ಚಾರಿಕ'ವಾಗಿ ಕಲಿಯಲು ಸಾವಿರಗಟ್ಟಳೆ ಫೀಸು



ಮಾಹಿತಿ ಎನ್ನುವುದನ್ನು ನಾವು ಮೊದಲಿನಿಂದಲೂ ತಿಳಿದಿದ್ದರೂ ಸಹ ಅದನ್ನು ತಂತ್ರಜ್ಞಾನದೊಟ್ಟಿಗೆ ಬೆರೆಸಿಕೊಂಡದ್ದು ಮಾತ್ರ ಇತ್ತೀಚೆಗೆ. ಇದನ್ನು ನಾವು ಡಾಟಾಬೇಸ್ ಎಂದು ಕರೆಯುತ್ತೇವೆ. ಅಂದರೆ ಬೇಕೆಂದಾಗ ತ್ವರಿತವಾಗಿ ಮಾಹಿತಿಯನ್ನು ಹೊರತೆಗೆಯಲು, ಇರುವ ಮಾಹಿತಿಯನ್ನು ಸುಲಭವಾಗಿ ಬದಲಾಯಿಸಲು ಮತ್ತು ಹೊಸ ಮಾಹಿತಿಯನ್ನು ಸೇರಿಸಲು ಅನುಕೂಲವಾಗುವಂತೆ ಒಂದು ಕ್ರಮವನ್ನು ಬಳಸಿ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿಡುವುದೇ ಡಾಟಾಬೇಸ್. ತಂತ್ರಜ್ಞಾನದ ಬೆಳವಣಿಗೆಯ ವೇಗವನ್ನು ಅನುಸರಿಸಿ ಈ ಡಾಟಾಬೇಸ್ ಎನ್ನುವುದು ಸಾಧ್ಯವಾಗಿದ್ದು ಮಾಹಿತಿ ಸಂಸ್ಕರಣ ಎನ್ನುವುದು ಮತ್ತಷ್ಟು ಸುಧಾರಿಸಿದೆ.

ತೆಗೆದುಕೊಳ್ಳುತ್ತಿದ್ದದ್ದನ್ನು ನಾನು ಬೆಂಗಳೂರಿನಲ್ಲಿ ಗಮನಿಸುತ್ತಿದ್ದೆ. ಹೀಗಿರುವಾಗ, ಬಹು ಬೇಗನೆ ಬೆಂಗಳೂರಿನ ಸುತ್ತಮುತ್ತಲು ಐಟಿ ಇಂಡಸ್ಟ್ರಿಗಳು ಬರಲಾರಂಭಿಸಿ, ಎಲ್ಲಾ ಕಡೆ ಅವುಗಳದ್ದೇ ಕಾರುಬಾರು ಶುರುವಾಗಿಬಿಟ್ಟಿತು. ಅದರಲ್ಲೂ ಇನ್ಫೋಸಿಸ್ ಮತ್ತು ವಿಪ್ರೋ ಸಂಸ್ಥೆಗಳ ವಹಿವಾಟನ್ನು ಮಾಧ್ಯಮಗಳಲ್ಲಿ ಓದಲಾರಂಭಿಸಿದಾಕ್ಷಣ, ಇಂಥ ಸಂಸ್ಥೆಗಳ ಬಗ್ಗೆ ಅತಿರಂಜಕವಾದ ಕಥೆಗಳನ್ನು ಅಕ್ಷರಸ್ತರೇ ಹರಡುತ್ತಿದ್ದರು. ಆದರೆ, ಈ ಸಂಸ್ಥೆಗಳಿಗೆ ಭೂಮಿ, ನೀರು ಮುಂತಾದ ಸಂಪನ್ಮೂಲಗಳನ್ನು, ಸರ್ಕಾರ 'ಹೂಡಿಕೆಯನ್ನು ಉತ್ತೇಜಿಸುವ' ಹೆಸರಿನಲ್ಲಿ, ಪುಕ್ಕಟೆಯಾಗಿ ನೀಡುತ್ತಿದ್ದದ್ದನ್ನಾಗಲಿ ಅಥವಾ ಆ ಇಂಡಸ್ಟ್ರಿಗಳೊಳಗೆ ಮಾಡುತ್ತಿದ್ದ ಕೆಲಸಗಳ ವೈಖರಿ ಬಗ್ಗೆಯಾಗಲಿ ಯಾರೂ ಚರ್ಚಿಸುತ್ತಿರಲಿಲ್ಲ. ಆದರೆ ಅಲ್ಲಿ ನಡೆಯುತ್ತಿದ್ದದ್ದು ಬಹು ಪಾಲು 'ಸಾಫ್ಟ್‌ವೇರ್' ಕಾರ್ಯಕ್ರಮಗಳನ್ನು ಸೃಷ್ಟಿಸಿ, ಅವುಗಳ ಮೂಲಕ ಯಾವುದೋ ದೇಶದ ಡಾಟಾ ಎಂಟ್ರಿ ಮಾತ್ರ ಮಾಡಿಕೊಟ್ಟು, ಅದನ್ನೇ ದೊಡ್ಡ ಸಾಧನೆ ಎಂದು ಬಿಂಬಿಸುವುದನ್ನು ಯಾರೂ ಸಹ ಯಾರೂ ಚರ್ಚಿಸುತ್ತಿರಲಿಲ್ಲ. ಹಾಗೆ ಚರ್ಚಿಸಿದರೆ ಅದು ಕೆಟ್ಟ ಕೆಲಸವೆಂದೇ ಪರಿಗಣಿತವಾಗಿತ್ತು. ಈ ಎಲ್ಲಾ ಸಂಕೀರ್ಣತೆಯಲ್ಲೇ ಇವತ್ತಿನ ತೃತೀಯ ವಲಯ ಅಥವಾ ಸೇವಾ ವಲಯವೆಂದು ಖ್ಯಾತಿವೆತ್ತ 'ಮಾಹಿತಿ–ಸಂವಹನ ತಂತ್ರಜ್ಞಾನ' ಜಗತ್ತಿನಾದ್ಯಂತ ಕಾಣಿಸಿಕೊಂಡಿರುವುದು ಎನ್ನುವುದನ್ನು ನಾವು ಅರಿಯಬೇಕಾಗುತ್ತದೆ.

ಹಾಗಾದರೆ, ಈ 'ಮಾಹಿತಿ–ಸಂವಹನ



ಸೈ

ಮಂಟಪಗಳ ಮುಂದೆ
ಮೆರಗಾಗಿ ನಿಲ್ಲುವ
ಸಿಂಗಾರದ ಬಾಳೆ
ನೆರವಾಗಿ ನಿಲ್ಲಲಿಲ್ಲ
ಯಾವ ಹಕ್ಕಿ ಪಿಕ್ಕಿ ಗೂಡಿಗು
ಯಾರ ಮನೆಯ ಮಾಡಿಗು



ಮೊನೆ ಮೊನೆ ಮುಳ್ಳಿನ
ಬುರ ಬುರ ಕಳ್ಳಿನ
ಈಚಲ ಮೈ
ಈಡಿಗನ ಮೆಟ್ಟಲಾಗಿ
ಗೀಜಗನ ತೊಟ್ಟಿಲಾಗಿ
ಎಲ್ಲದಕು ಸೈ

ಜರಗನಹಳ್ಳಿ ಶಿವಶಂಕರ್

ತಂತ್ರಜ್ಞಾನ'ದ ಹಿಂದಿರುವ ಅರಿವು ಅಥವಾ ತಿಳುವು ಯಾವುದು? ಅಥವಾ ಇದು ಬರೀ ಒಂದು ವಿಧಧ ಪರಿಣಾಮವನ್ನು ಮಾತ್ರ ಒಳಗೊಂಡಿದ್ದು, ಈ ಪರಿಣಾಮವನ್ನೇ ನಿಜವಾದ ಅರಿವು ಅಥವಾ ತಿಳುವು ಎಂದು ಬಿಂಬಿಸಲಾಗಿದೆಯೇ ಎನ್ನುವ ಪ್ರಶ್ನೆಗಳು ಸೂಕ್ತ ಉತ್ತರವನ್ನು ಪಡೆಯಲು ಸೋಲುತ್ತವೆ. ಕಾರಣ ಈ ಪರಿಣಾಮವನ್ನೇ ನಾವು ವಿಜ್ಞಾನ ಎಂದು ಕರೆದು ಮಾನ್ಯಮಾಡಿ, ಅದನ್ನೇ ನಾವು ಇಂದು **'ಮಾಹಿತಿ-ಸಂವಹನ ತಂತ್ರಜ್ಞಾನ'** ಎಂದು ಕರೆಯುತ್ತಿರುವುದು ಅಲ್ಲವೇ?

ಈ ಪ್ರಶ್ನೆಗಳಿಗೆ ಎದುರಾಗುವ ಮುನ್ನ **'ಮಾಹಿತಿ-ಸಂವಹನ ತಂತ್ರಜ್ಞಾನ'** ವಿದ್ಯಮಾನದ ಬಗ್ಗೆ ನಾವು ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಇಂಟರ್‌ನೆಟ್ ಮೂಲಕ ವೈವಿಧ್ಯಮಯ ಮಾಹಿತಿಯನ್ನು ಪಸರಿಸುವುದು, ಅದರ ಮೂಲಕ ವಹಿವಾಟು, ಸಂಪರ್ಕ ಇತ್ಯಾದಿ ದೈನಂದಿನ ಚಟುವಟಿಕೆಗಳನ್ನು ನೆಟ್‌ನ ಮೂಲಕವೇ ನಡೆಸುವುವ ಕಾರ್ಯಗಳು ಇಂದು ಕ್ಷಿಪ್ರವಾಗಿ ಜಗತ್ತಿನಾದ್ಯಂತ ಹರಡಿದೆ. ನಮ್ಮ ನಾಗರಿಕತೆಯಲ್ಲಿ ಈ ಹಿಂದೆ ವ್ಯವಸಾಯ ಕಂಡುಹಿಡಿದದ್ದು ಮೊದಲ ದೊಡ್ಡ ಕ್ರಾಂತಿಯಾದರೆ, 17ನೇ ಶತಮಾನದಲ್ಲಿ ಆದ ಯಂತ್ರೀಕರಣ ಮತ್ತು ಕೈಗಾರೀಕರಣವನ್ನು ನಾವು ಎರಡನೆಯ ಕ್ರಾಂತಿ ಎಂದು ಕರೆಯುತ್ತೇವೆ. ಹಾಗೆಯೇ ಈ ಶತಮಾನದ ಆದಿಯಲ್ಲಿ ಮೂರನೆಯ ಹಂತದ **'ಮಾಹಿತಿ ಕ್ರಾಂತಿ' ಎನ್ನುವ ಸೇವಾ ವಲಯ ಅಥವಾ ಭ್ರಮಾ-ವಾಸ್ತವ(ವರ್ಚ್ಯುವಲ್ ರಿಯಾಲಿಟಿ) ನಮ್ಮೆದುರು ನಿಲ್ಲುತ್ತದೆ.** ಮಾಹಿತಿ ಎನ್ನುವುದನ್ನು ನಾವು ಮೊದಲಿನಿಂದಲೂ ತಿಳಿದಿದ್ದರೂ ಸಹ ಅದನ್ನು ತಂತ್ರಜ್ಞಾನದೊಟ್ಟಿಗೆ ಬೆರೆಸಿಕೊಂಡದ್ದು ಮಾತ್ರ ಇತ್ತೀಚೆಗೆ. ಇದನ್ನು ನಾವು ಡಾಟಾಬೇಸ್ ಎಂದು ಕರೆಯುತ್ತೇವೆ. ಅಂದರೆ ಬೇಕೆಂದಾಗ ತ್ವರಿತವಾಗಿ ಮಾಹಿತಿಯನ್ನು ಹೊರತೆಗೆಯಲು, ಇರುವ ಮಾಹಿತಿಯನ್ನು ಸುಲಭವಾಗಿ ಬದಲಾಯಿಸಲು ಮತ್ತು ಹೊಸ ಮಾಹಿತಿಯನ್ನು ಸೇರಿಸಲು ಅನುಕೂಲವಾಗುವಂತೆ ಒಂದು ಕ್ರಮವನ್ನು ಬಳಸಿ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿಡುವುದೇ ಡಾಟಾಬೇಸ್. ತಂತ್ರಜ್ಞಾನದ ಬೆಳವಣಿಗೆಯ ವೇಗವನ್ನು ಅನುಸರಿಸಿ ಈ ಡಾಟಾಬೇಸ್ ಎನ್ನುವುದು ಸಾಧ್ಯವಾಗಿದ್ದು ಮಾಹಿತಿ ಸಂಸ್ಕರಣ ಎನ್ನುವುದು ಮತ್ತಷ್ಟು ಸುಧಾರಿಸಿದೆ.

ಹೀಗೆ, ಇಂದು ನಮಗೆ ಬೇಕಾದ ಮಾಹಿತಿಯನ್ನು ವೇಗವಾಗಿ ರವಾನಿಸುವ, ಅದನ್ನು ಶೇಕರಿಸಿಡುವ ಮತ್ತು ಅದನ್ನು ರಕ್ಷಿಸುವ ಜವಾಬ್ದಾರಿಯನ್ನು ಮಾಹಿತಿ ತಂತ್ರಜ್ಞಾನ ಮಾಡುತ್ತಿದೆ. ಆದ್ದರಿಂದಲೇ, ಅದನ್ನು ಮಾಹಿತಿ-ತಂತ್ರಜ್ಞಾನದ ಕ್ರಾಂತಿ ಎಂದು ಕರೆದದ್ದು. ಈಗ ಇದರ ನೇರ ಪರಿಣಾಮವನ್ನು ನಾವು ಕಾಣುವುದು ಮೊಬೈಲ್ ಫೋನ್ ಮತ್ತು ಇಂಟರ್‌ನೆಟ್ ಮೂಲಕ. ಇವೆರಡರ ಸಂಪರ್ಕಜಾಲದಿಂದಾಗಿ ಇಡೀ ಜಗತ್ತು ತನ್ನ ಸ್ಪೇಸ್ ಮತ್ತು ಟೈಮ್‌ಅನ್ನು ಸಾಂದ್ರಗೊಳಿಸಿಕೊಳ್ಳುತ್ತಾ ಒಂದು ಪುಟ್ಟ ಗ್ರಾಮವಾಗಿಬಿಟ್ಟಿದೆ. ಇದನ್ನೇ ನಾವು 'ಜಾಗತೀಕರಣ' ಎಂದು ಕರೆಯುತ್ತಿರುವುದು. ಇತ್ತೀಚೆಗೆ ಮಾಹಿತಿಯನ್ನು ಡಿಜಿಟಲ್ ಆಗಿ ಪರಿವರ್ತಿಸಿಬಿಟ್ಟಿರುವುದರಿಂದ ಅದು ನಮ್ಮ ದೇಶದ ಆರ್ಥಿಕ ಚಟುವಟಿಕೆಗಳನ್ನು ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳನ್ನು ಮರುಸಂಘಟಿಸುತ್ತಿದೆ ಎಂದು ನಾವೆಲ್ಲ ತಿಳಿದಿದ್ದೇವೆ!

ಅಲ್ಲದೆ, ಈ ಮಾಹಿತಿ-ಸಂಪರ್ಕ-ಸಂವಹನ ತಂತ್ರಜ್ಞಾನವು ಎಷ್ಟು ಬೇಗ ನಮ್ಮ ಎಲ್ಲಾ ಹಾಗು-ಹೋಗುಗಳನ್ನು ನಿಯಂತ್ರಿಸಲು ಆರಂಭಿಸಿತೆಂದರೆ ನಮಗೆ ಅಚ್ಚರಿಯಾಗುತ್ತದೆ. ಕಳೆದ ವರ್ಷ ಭಾರತದಲ್ಲಿ ಐಟಿ ಕ್ಷೇತ್ರ ಶೇ.14ರಷ್ಟು ಪ್ರಗತಿಯನ್ನು ಸಾಧಿಸಿ, ಅದು ಸುಮಾರು 67 ಬಿಲಿಯನ್ ಡಾಲರ್ ವ್ಯವಹಾರವನ್ನು ಮುಟ್ಟಿತ್ತು. ಅಂದರೆ ಈ ಕ್ಷೇತ್ರ ರಿಟೇಲ್ ಮಾರ್ಕೆಟ್, ಸರ್ಕಾರಿ ಇಲಾಖೆಗಳು, ಕಂಪ್ಯೂಟರ್ ಹಾರ್ಡ್‌ವೇರ್, ತಂತ್ರಜ್ಞಾನ ಆಧಾರಿತ ಸೇವೆಗಳು ಮತ್ತು ಟೆಲಿಕಾಮ್ ಸೇವೆಗಳನ್ನು ಈ ಕ್ಷೇತ್ರ ಒಳಗೊಂಡಿದ್ದು ಇದು 2013ರ ವೇಳೆಗೆ 89 ಬಿಲಿಯನ್ ಡಾಲರ್ ತಲುಪಲಿದೆ ಎಂದು ಸಂಶೋಧನಾ ಸಂಸ್ಥೆ ಗಾರ್ಟ್‌ನರ್ ತಿಳಿಸಿದೆ.

ವಿಶ್ವಸಂಸ್ಥೆಯ ಪ್ರಕಾರ ಮಾಹಿತಿ-ಸಂವಹನ ತಂತ್ರಜ್ಞಾನ ಹೇಗೆ ಜನರನ್ನು ಒಳಗೊಳ್ಳುತ್ತಿದೆ ಎನ್ನುವುದನ್ನು ಮೂರು ಮಾನದಂಡಗಳ ಮೂಲಕ ಅಳೆಯಬಹುದು: ಒಂದು ತಲಾದಾಯ (ಪರ್‌ಕ್ಯಾಪಿಟಲ್) ಅಂಕಿ-ಅಂಶಗಳನ್ನು ಬಳಸಿ ಇಂಟರ್‌ನೆಟ್ ಒದಗಿಸುವವರು, ವೈಯಕ್ತಿಕವಾಗಿ ಕಂಪ್ಯೂಟರ್ಸ್, ಟೆಲಿಫೋನ್ ಸಂಪರ್ಕ ಮತ್ತು ಮೊಬೈಲ್





'ಗ್ರಾಮೀಣ ಜನತೆಗೆ ಇಂಗ್ಲಿಷ್ ಕಲಿಸಬೇಕು' ಎಂದು ಘೋಷಿಸುವ ಮಟ್ಟಕ್ಕೂ ಹೋದೆವಲ್ಲವೇ! ಆದರೆ ಘೋಷಣೆಗಳು ಏನೇ ಇರಲಿ, ಇಂದಿಗೂ ಸಹ ಕಂಪ್ಯುಟರ್‌ಗಳು ಮಾತ್ರ ಜನಸ್ನೇಹಿಯನ್ನಾಗಿ ಮಾಡುವುದರಲ್ಲಿ ಸರ್ಕಾರವನ್ನೊಳಗೊಂಡಂತೆ, ನಮ್ಮ ನಾಗರಿಕ ಸಮಾಜ ಸೋತಿದೆ ಎನ್ನುವುದನ್ನು ಮರೆಯುವಂತಿಲ್ಲ.

ೇನ್‌ಗಳನ್ನು ಹೊಂದಿರುವವರ ಖಚಿತತೆಯನ್ನು ಷ್ಟಪಡಿಸಿಕೊಳ್ಳುವುದು, ಎರಡು, ಈ ಸಂಪರ್ಕಜಾಲವನ್ನು ಾಂದಲು ಎಷ್ಟುಮಂದಿಗೆ ಸಾಧ್ಯವಾಗಿದೆ ಎನ್ನುವುದನ್ನು ಾದಾಯ ಮತ್ತು ಸ್ಥಳೀಯ ಕರೆಗಳ ದರ, ಟರ್‌ನೆಟ್ ಬಳಕೆದಾರರು ಮತ್ತು ಸಾಕ್ಷರತೆಗೂ ುವೆ ಇರುವ ಸಂಬಂಧವನ್ನು ಗುರುತಿಸುವುದು ಮತ್ತು ೂರನೇಯದಾಗಿ, ಈ ಸಂಪರ್ಕಜಾಲದ ಬಗ್ಗೆ ರ್ಕಾರದ ನೀತಿ(ಪಾಲಿಸಿ)ಗಳು ಮತ್ತು ಪರ್ಧಾತ್ಮಕತೆಯನ್ನು ಅರಿಯುವುದು. ಈ ನದಂಡಗಳನ್ನು ಅನುಸರಿಸಿ ಭಾರತದಲ್ಲಿ ಮಾಹಿತಿ ತ್ರಜ್ಞಾನ ಯಾವ ಮಟ್ಟದಲ್ಲಿ ಪಸರಿಸುತ್ತಿದೆ ನ್ನುವುದನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಈ ಮೇಲಿನ ಮಾನದಂಡಗಳ ಹಿನ್ನೆಲೆಯಲ್ಲಿ ರತದಲ್ಲಿ ಈ ಮಾಹಿತಿ ತಂತ್ರಜ್ಞಾನದ ವಣಿಗೆಯನ್ನು ಗಮನಿಸೋಣ. ಕೆಳಗಿನ ಚಿತ್ರ 1993–0ದ ನಡುವೆ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ನ, ಭಾರತ, ರಷ್ಯಾ, ಬ್ರೆಝಿಲ್ ಮತ್ತು ಡೋನೇಶಿಯಾ ದೇಶಗಳಲ್ಲಿ ಹೇಗೆ ಆಯಿತು ನ್ನುವುದನ್ನು ಸೂಚಿಸುತ್ತದೆ.

ವ್ಯಾಪಾರ

ನಕ್ಷತ್ರಗಳ ಸಂತೆಯಲ್ಲಿ
ಚಂದಿರ ನಡೆಸಿದ್ದಾನೆ
ಬೆಳಕಿನ ವ್ಯಾಪಾರ
ಪಾಪ ಹೊರಲಾರದೆ
ಸೋರಿ ಬೀಳುತ್ತಿದೆ
ದಾರಿಯುದ್ದಕ್ಕೂ ಬೆಳದಿಂಗಳು



ಜರಗನಹಳ್ಳಿ ಶಿವಶಂಕರ್

ಇತರೆ ದೇಶಗಳಿಗೆ ಹೋಲಿಸಿದರೆ ಭಾರತದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ನಿರಾಶಾದಾಯಕವೇನೂ ಆಗಿಲ್ಲ.

2008ರಲ್ಲಿ ಇಂಟರನೆಟ್ ಬಳಕೆದಾರರ ಸಂಖ್ಯೆ 5.52 ಮಿಲಿಯನ್‌ಗೆ ಬೆಳೆದು ಅದು 2010ರಲ್ಲಿ 88 ಮಿಲಿಯನ್‌ಗೆ ಬೆಳೆಯಿತು. ಆದರೂ ದೇಶದ ಜನಸಂಖ್ಯೆಯನ್ನು ಗಮನದಲ್ಲಿಟ್ಟು ನೋಡಿದಲ್ಲಿ ಈ ಬೆಳವಣಿಗೆ ಸಾಕಷ್ಟಿಲ್ಲ ಎನ್ನುವುದು ತಿಳಿಯುತ್ತದೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ಬ್ರಾಡ್‌ಬ್ಯಾಂಡ್ ದರ ಹೆಚ್ಚಾಗಿರುವುದು. ಆದ್ದರಿಂದ ಚೀನ, ಜಪಾನ್, ಯೂರೋಪ್ ಮತ್ತು ಅಮೇರಿಕಾ ದೇಶಗಳಿಗೆ ಹೋಲಿಸಿ ನೋಡಿದರೆ, ನಮ್ಮಲ್ಲಿ ಒಂದು ಗಂಟೆಗೆ ಕನಿಷ್ಠ ಕೂಲಿ ರೂ.10/– ಇದೆ. ಆದರೆ ಇದು ಅಮೇರಿಕಾದಲ್ಲಿ ರೂ.327/– ಇದೆ. ಅಂದರೆ ನಾವು ಒಂದು ಬ್ರಾಡ್‌ಬ್ಯಾಂಡ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ನಾವುಗಳಿಸುವುದಕ್ಕಿಂತಲೂ ಹೆಚ್ಚು ದರವನ್ನು ಪಾವತಿಸಬೇಕಾಗುತ್ತದೆ. ಅಂದರೆ ನಮ್ಮ ತಲಾದಾಯಕ್ಕೂ ಮತ್ತು ಮಾಹಿತಿ ತಂತ್ರಜ್ಞಾನಕ್ಕೂ ನಡುವೆ ದೊಡ್ಡ ಕಂದಕ ಇದೆ.

ಕೆಳಗಿನ ಇನ್ನೊಂದು ರೇಖಾ ಚಿತ್ರ ತಲಾದಾಯ ಮತ್ತು ಸಂಪರ್ಕಜಾಲಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸವನ್ನು ತೋರಿಸುತ್ತದೆ:

ಮೊದಲಿಗೆ ಚಿತ್ರದಲ್ಲಿ ದೇಶಗಳ ಪಟ್ಟಿ ಇದೆ. ಎರಡನೇ ಭಾಗದಲ್ಲಿ ಸೆಕೆಂಡಿಗೆ 100ಕಿ.ಬೈ. ಮಾಹಿತಿ ಬಳಕೆಗೆ ಬೇರೆ ಬೇರೆ ದೇಶಗಳಲ್ಲಿ ವಿಧಿಸುವ ದರ – ಡಾಲರ್ ಮೊತ್ತದಲ್ಲಿ ನೀಡಿರುವುದನ್ನು ನೋಡುತ್ತೇವೆ. ಉದಾಹರಣೆಗೆ ಚೀನದಲ್ಲಿ 10.80 ಡಾಲರ್ ಆದರೆ, ಅದರ ತಲಾದಾಯದಲ್ಲಿ ಅದರ ವೆಚ್ಚ 7.585 ಆಗುತ್ತದೆ. ಅಂದರೆ ಅಭಿವೃದ್ಧಿಹೊಂದಿದ ದೇಶಗಳು ಮತ್ತು ಅಭಿವೃದ್ಧಿಹೊಂದುತ್ತಿರುವ ದೇಶಗಳಿಗೂ ಇರುವ ವ್ಯತ್ಯಾಸ ನಮಗೆ ಈ ಚಿತ್ರದಲ್ಲಿ ತಿಳಿಯುತ್ತದೆ. ಭಾರತವೂ ಚೀನಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ದರ ವಿಧಿಸುತ್ತಿದೆ ಎಂದರೆ ತಪ್ಪಾಗಲಾರದು. ಆದ್ದರಿಂದಲೇ, **ಬ್ರಿಟಿಷ್ ರಿಸ್ಕ್ ಅನಾಲಿಸಿಸ್ ಫರ್ಮ್** ಎನ್ನುವ ಸಂಸ್ಥೆ ಮಾಡಿರುವ ಅಧ್ಯಯನದ ಪ್ರಕಾರ ಭಾರತ ಅಂಥ ಹೇಳಿಕೊಳ್ಳುವಂಥ ಸ್ಥಿತಿಯಲ್ಲಿ ಇಲ್ಲ ಎನ್ನುವುದು ತಿಳಿಯುತ್ತದೆ. ಅದು ಈ ಮಾಹಿತಿಯನ್ನು ಪಡೆಯಲು 10 ಸೂಚಕಗಳನ್ನು ಅನುಸರಿಸಿತ್ತು (include numbers of mobile cellular and broadband subscriptions; fixed telephone lines; households with a PC and television; internet users and secure internet servers; internet bandwidth; secondary education enrolment; and adult literacy). ಅದರ ಪ್ರಕಾರ ಮಾಹಿತಿ–ಸಂವಹನ–ತಂತ್ರಜ್ಞಾನದಲ್ಲಿ ಭಾರತ 39ನೇ ಸ್ಥಾನವನ್ನು ಹೊಂದಿದ್ದು ಅದು ಬಹು ಅಪಾಯಕಾರಿ ಮಟ್ಟದಲ್ಲಿದೆ (extreme risk). ಅಂದರೆ ಈ ಮಾಹಿತಿ–ಸಂವಹನ–ತಂತ್ರಜ್ಞಾನವನ್ನು ಭಾರತದ ಜನತೆ ಇನ್ನೂ ಸಹ ಅತ್ಯಂತ ಕನಿಷ್ಠ ಮಟ್ಟದಲ್ಲೇ(**India (39) is the only country to be classified as 'extreme risk**) ಬಳಸುತ್ತಾ ಇದೆ. ಇದೇ ಸಂದರ್ಭದಲ್ಲಿ ಚೀನಾ 110, ರಷ್ಯಾ 134 ನೇ ಸ್ಥಾನಗಳಲ್ಲಿ ಇದ್ದು ಈ ದೇಶಗಳ ರಿಸ್ಕ್‌ನ್ನು ನಿಬಾಯಿಸಿಕೊಳ್ಳಬಹುದೆಂದು ಅಧ್ಯಯನ ತಿಳಿಸುತ್ತದೆ. ಇದೇ ಅಧ್ಯಯನದ ಪ್ರಕಾರ ಇಡೀ ಜಗತ್ತಿನಲ್ಲಿ ನೆದರ್‌ಲ್ಯಾಂಡ್ಸ್ 186ನೇ ಸ್ಥಾನದಲ್ಲಿದ್ದು ಮೊದಲ ಶ್ರೇಣಿಯಲ್ಲಿದೆ. ಡೆನ್ಮಾರ್ಕ್ 185, ಸ್ವೀಡನ್ 183 ಮತ್ತು ಇಂಗ್ಲೆಂಡ್ 182 – ಈ ದೇಶಗಳು ನಂತರದ ಸ್ಥಾನಗಳಲ್ಲಿ ನಿಂತಿವೆ.

ಅಂದರೆ ಭಾರತದಲ್ಲಿ **ಡಿಜಿಟಲ್ ಕಂದಕ** ಮತ್ತಷ್ಟು ಆಳವಾಗಿ ಬೇರುಬಿಟ್ಟಿದೆ ಎನ್ನುವುದನ್ನು ಅಂಕಿ–ಅಂಶಗಳು ಸ್ಪಷ್ಟಪಡಿಸಿವೆ. ಆದರೂ ನಮ್ಮ ಮಾಧ್ಯಮಗಳು ಮತ್ತು ಸರ್ಕಾರ ಇದರ ಬಗ್ಗೆ ಬಡಾಯಿಕೊಚ್ಚಿಕೊಳ್ಳುತ್ತಾ ಇವತ್ತು ಎಲ್ಲರೂ ಸಹ ಕಂಪ್ಯಟರ್ ಬಗ್ಗೆ ಖಚಿತವಾದ ತಿಳುವಳಿಕೆ ಹೊಂದಿದ್ದಾರೆ ಎಂದು ಹೇಳುತ್ತಿವೆ. ಅಂದರೆ ಬೆರಳೆಣಿಕೆ ಮಂದಿಯ **'ಡಿಜಿಟಲ್ ಉನ್ಮಾದ'**ವನ್ನು ನಿಜವಾದ ಮಾಹಿತಿ–ಸಂವಹನ–ತಂತ್ರಜ್ಞಾನದ ಬೆಳವಣಿಗೆ ಎಂದು ನಂಬಿಸಲಾಗುತ್ತಿದೆಯಲ್ಲವೇ! (ಆದರೆ **ಏಕ್‌ಗಾಂವ್ ಟೆಕ್ನಾಲಜೀಸ್** ಎನ್ನುವಂಥ ಸಂಸ್ಥೆ ಎಲ್ಲಾ ಗ್ರಾಮೀಣ ಜನತೆಯ ಬದುಕನ್ನು ಸುಧಾರಿಸಲು ಇದೇ ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಬಹುದು ಎಂಬುದನ್ನು ತೋರಿಸಿರುವುದನ್ನು ನಾವು ಮರೆಯುವಂತಿಲ್ಲ. ಆದರೆ ಇದು 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವಂತೆ ಇದೆ).

ಹಾಗಾದರೆ, ಈ **ಡಿಜಿಟಲ್** ಕಂದಕದ ಹಿಂದಿನ ಕಾರಣಗಳನ್ನು ವಿಶ್ಲೇಷಿಸಿ, ದೇಶದ ಎಲ್ಲರೂ ಮಾಹಿತಿ–ಸಂವಹನ–ತಂತ್ರಜ್ಞಾನದಲ್ಲಿ ಸಮಾನವಾಗಿ ಪಾಲ್ಗೊಳ್ಳುವತ್ತ ಯೋಚಿಸುವುದು ಒಳಿತಲ್ಲವೇ? ಈ ಕಾರಣಗಳನ್ನು ನಾವು ಅರಿಯಬೇಕಾದರೆ, ಕಂಪ್ಯುಟರ್ ತಂತ್ರಜ್ಞಾನ ಬರುತ್ತಿದ್ದಂತೆ ಅದರ ಬಗ್ಗೆ ಇದ್ದಂಥ ನಡಾವಳಿ/

ವರ್ತನೆಗಳನ್ನು ನಾವು ಗಮನಿಸಬೇಕು. ನಿದರ್ಶನಕ್ಕೆ, ಈ ಕಂಪ್ಯೂಟರ್ ಕ್ಷೇತ್ರದಲ್ಲಿ ಮೊದಮೊದಲು ತರಬೇತು ಪಡೆಯುವಾಗ ಎಲ್ಲರೂ ಚಪ್ಪಲಿ ಮತ್ತು ಶೂಗಳನ್ನು ಬಾಗಿಲ ಹೊರಗೆ ಬಿಟ್ಟು ಒಳಗೆ ಹೋಗಬೇಕಾಗುತ್ತಿತ್ತು. ಇವತ್ತೂ ನಮ್ಮ ದೇವಾಲಯಗಳಲ್ಲಿ ಇದನ್ನು ಕಾಣುತ್ತೇವೆಯಲ್ಲವೇ! ಅಂದರೆ ಅಷ್ಟು ಭಯ ಭಕ್ತಿಯಿಂದ ಕಂಪ್ಯೂಟರ್ ಅನ್ನು ನಾವು ಜನಸಾಮಾನ್ಯರಿಂದ ತಪ್ಪಿಸಿ, ಅದನ್ನು ಮುಚ್ಚಿಕೊಳ್ಳಲು ಅಷ್ಟೆ ಮುಗ್ಧರಾಗಿ 'ಗ್ರಾಮೀಣ ಜನತೆಗೆ ಇಂಗ್ಲಿಷ್ ಕಲಿಸಬೇಕು' ಎಂದು ಘೋಷಿಸುವ ಮಟ್ಟಕ್ಕೂ ಹೋದೆವಲ್ಲವೇ! ಆದರೆ ಘೋಷಣೆಗಳು ಏನೇ ಇರಲಿ, ಇಂದಿಗೂ ಸಹ ಕಂಪ್ಯೂಟರ್‌ಗಳು ಮಾತ್ರ ಜನಸ್ನೇಹಿಯನ್ನಾಗಿ ಮಾಡುವುದರಲ್ಲಿ ಸರ್ಕಾರವನ್ನೊಳಗೊಂಡಂತೆ, ನಮ್ಮ ನಾಗರಿಕ ಸಮಾಜ ಸೋತಿದೆ ಎನ್ನುವುದನ್ನು ಮರೆಯುವಂತಿಲ್ಲ. ಇದನ್ನು ಮತ್ತಷ್ಟು ತಿಳಿಯಬೇಕಾದರೆ ನಾವು ಚಾರ್ಲಿಚಾಪ್ಲಿನ್ ತಯಾರಿಸಿದ 'ಮಾರ್ಡನ್ ಟೈಮ್ಸ್' ಚಲನ ಚಿತ್ರವನ್ನು ನೆನಪಿಸಿಕೊಳ್ಳಬೇಕು. ಇಂದು ಚಾರ್ಲಿಚಾಪ್ಲಿನ್ ಬದುಕಿದ್ದು ಈ ಡಿಜಿಟಲ್ ತಂತ್ರಜ್ಞಾನದ ಬಗ್ಗೆ ಆತ ಒಂದು ಸಿನೇಮಾ ತಯಾರಿಸುತ್ತಿದ್ದನೆಂದು ಭಾವಿಸಿ. ಆತ ಅದನ್ನು ಹೇಗೆ ನಿಭಾಯಿಸಬಹುದಿತ್ತು ಎನ್ನುವುದನ್ನು ನಾವು ಊಹಿಸಿಕೊಳ್ಳಬಹುದು.



ಮಾಹಿತಿ ತಂತ್ರಜ್ಞಾನ ಪ್ರಚುರ ಪಡಿಸುವ ಅಬಿವೃದ್ಧಿ-ಪ್ರಗತಿ ಎನ್ನುವ ಪರಿಭಾಷೆಗಳ ಹಿಂದೆ ಇರುವ 'ಲಾಭಕೋರತನ'ವನ್ನು ನಾವು ಗಮನಿಸುತ್ತಿಲ್ಲವೇ? ಖಂಡಿತವಾಗಿಯೂ ಹೌದು. ನಾವು ಈ ಲೇಖನದ ಮೊದಲಿಗೆ ವಿವರಿಸಿಕೊಂಡ 'ಸೇವಾ ವಲಯ' ಎನ್ನುವುದು ಬರೀ ಕಂಪ್ಯುಟರ್‌ಗಳು ಮತ್ತು ಮಾರುಕಟ್ಟೆ ಸೃಷ್ಟಿಸುತ್ತಿರುವ 'ಭ್ರಮಾ-ವಾಸ್ತವ' (ವರ್ಚ್ಯುವಲ್ ರಿಯಾಲಿಟಿ) ವಾಗಿ ಅದು **ಬುದ್ಧಿಯನ್ನು ದೇಹದಿಂದ ಬೇರ್ಪಡಿಸಿ** ಜನತೆಯನ್ನು ಬೌದ್ಧಿಕ ದಿವಾಳಿತನಕ್ಕೆ ತಳ್ಳುತ್ತಿದೆ ಎಂಬುದನ್ನು ನಾವು ಅರಿಯಬೇಕಾಗುತ್ತದೆ. ಅಂದರೆ ಇಲ್ಲಿ ನಾವು ಮೆದುಳಿನ ಕೈಗಾರೀಕರಣವನ್ನು ಮಾತ್ರ ನೆಚ್ಚಿಕೊಳ್ಳುತ್ತಾ, ಅದರ ಶೋಷಣಾತ್ಮಕ ಆಯಮಗಳನ್ನು ವಿವರಿಸಿಕೊಳ್ಳುತ್ತಿಲ್ಲ. ಆದ್ದರಿಂದ, ಮಾಹಿತಿ ತಂತ್ರಜ್ಞಾನ ಎನ್ನುವುದು ನಿಜವಾದ ವಿಜ್ಞಾನವಾಗಿರದೆ, ಅದು ವಿಜ್ಞಾನದ **ಪರಿಣಾಮ** ಮಾತ್ರ ಎಂದು ನೋಡಬೇಕಾಗಿದೆ. ಅಲ್ಲದೆ ಎಲ್ಲಿಯ ತನಕ ಈ ತಂತ್ರಜ್ಞಾನ ಎನ್ನುವುದು ಖಾಸಗಿಯಾಗಿ ಉಳಿಯುತ್ತದೆಯೋ ಅಲ್ಲಿಯ ತನಕ, ನಾವು ಅದರಲ್ಲಿ ಸಮಾನವಾಗಿ ಪಾಲುದಾರಿಕೆಯನ್ನು ವಹಿಸಲು ಸಾಧ್ಯವಿಲ್ಲ.

ಇಂದು ಇಡೀ ಜಗತ್ತಿನಲ್ಲಿ ಮಾಹಿತಿ-ಸಂವಹನ-ತಂತ್ರಜ್ಞಾನದಲ್ಲಿ "ಫ್ರೀ ಸಾಫ್ಟ್‌ವೇರ್" ಎನ್ನುವ ಜನ ಸ್ನೇಹಿ **ಲೈನಕ್ಸ್** ಅಥವಾ **ಉಬುಂಟು** ಎನ್ನುವ ತಂತ್ರಜ್ಞಾನಗಳು ಸಮಾನತೆಯನ್ನು ಬಯಸುವ ಎಲ್ಲರಿಗೂ ವರದಾನವಾಗಿ ಬೆಳೆಯುತ್ತಿದೆ. ಆದರೆ ನಮ್ಮ ಸರ್ಕಾರ ಇಂಥದ್ದನ್ನು ಗಮನಿಸದೆ ಭ್ರಷ್ಟಾಚಾರವನ್ನು ಪೋಷಿಸುವ ಖಾಸಗಿ ಉದ್ಯಮಗಳತ್ತಲೇ ಮಣೆಹಾಕುತ್ತಿದೆ. ಆದರೆ ತನ್ನ ಆಡಳಿತದಲ್ಲಿ ಸರ್ಕಾರ ಈ ಲೈನಕ್ಸ್ ಅಥವಾ ಉಬುಂಟು ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ಈಗಾಲೇ ಬೇರುಬಿಟ್ಟಿರುವ ಡಿಜಿಟಲ್ ಕಂದಕವನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದಾಗಿದೆ. ಇದರ ಬಗ್ಗೆ ನಾವು ಯೋಚಿಸಬಹುದಲ್ಲವೇ?

ಡಾ॥ ಡೊಮಿನಿಕ್. ಡಿ



ನಮ್ಮ ನಡುವಿನ ಜನಪರ ಕಾಳಜಿಯ ಚಿಂತಕರಲ್ಲಿ ಒಬ್ಬರು. ಮಹಿಳೆ, ಮಕ್ಕಳು, ನಿರ್ಲಕ್ಷಿತ ಬುಡಕಟ್ಟುಗಳು, ಶಿಕ್ಷಣ ಪದ್ಧತಿ, ಸಾಹಿತ್ಯ ವಿಮರ್ಶೆ ಮುಂತಾದ ಅವರ ಆಸಕ್ತಿಯ ಕ್ಷೇತ್ರಗಳು ಹತ್ತು ಹಲವು. ಬಹು ಭಾಷೆಗಳನ್ನು ಬಲ್ಲ, ಬಹುಜನರ ಸಂಪರ್ಕವಿರುವ ಇವರ ಅನುಭವಗಳು ಅಪಾರ. ಆಳವಾದ ಅಧ್ಯಯನ, ಜೀವನಾನುಭವ ಅವರ ಬರವಣಿಗೆಯ ಮುಖ್ಯಧಾತು.

ಕವನ

ಬಿಡಿ ಬಿಡಿ ಕವಿತೆ

೧

ಭುವಿಯೊಡಲು ಬಿರಿದಿದೆ
ಯಾರದೋ ದಾಳಿಗೆ
ಸದ್ದು ಬೇಡ ಜಗವೇ
ಮಗು ಮಲಗಿದೆ ನನ್ನವಳ ಒಡಲೊಳಗೆ

೨

ಧಡಿಯನ ಕಾಲ್ತುಳಿತಕೆ
ಪುಟ್ಟ ಇರುವೆಯ ಹೊಟ್ಟೆ ಒಡೆಯಿತು
ಮುಂದಡಿಯಿಡುವ
ಇಚ್ಛಾಶಕ್ತಿ ಒಡೆಯಲಾಗಲಿಲ್ಲ

೩

ಆ ಜನನಿಬಿಡ ಬೀದಿಯಲ್ಲಿ
ಕಣ್ಣಲ್ಲೇ ಜೀವ ಹಿಡಿದ ಹಸುಳೆ
ಅಲವತ್ತುಕೊಳ್ಳುತ್ತಿದೆ
ತುತ್ತು ಅನ್ನ ನೀಡಿ ನನ್ನ ಬದುಕಿಸಿ
ಬದುಕಿರುವವರ‍್ಯಾರೂ ಕಾಣುತ್ತಿಲ್ಲ

೪

ಹೆದೆಯೇರಿಸಿ
ಹಿಂದಕ್ಕೆಳೆದೇ ಹೊಡೆಯಬೇಕು ಬಾಣ
ಆವಾಗಲೇ ಬೇಟೆ
ಹಸಿದ ಹೊಟ್ಟೆಯ ಸಿಟ್ಟು
ರಟ್ಟೆಗೆ ತಂದುಕೊಂಡು
ಧಾವಿಸಿ ಓಡಿದರೆ ಸಿಕ್ಕುವುದಿಲ್ಲ ರೊಟ್ಟಿ



೫

ನನ್ನ ಕೆನ್ನೆ
ಮೇಲೊಂದು ಹನಿ ಮೂಡಿದೆ
ಅದು ಅವಳು ಕೊಟ್ಟ ಮುತ್ತು
ಎಂದು ಲೋಕದ ಆಪಾದನೆ
ಯಾರಿಗೇನು ಗೊತ್ತು
ಅದು ಅವಳು ಕೊಡದಿರುವುದಕ್ಕೆ
ಜಾರಿದ ಕಣ್ಣ ಹನಿಯೆಂದು

೬

ಈ ರಾತ್ರಿ
ಒಂದು ಕನಸು ಹುಟ್ಟಿತು
ಗೊತ್ತೇ ಆಗಲಿಲ್ಲ
ಕಮರಿ ಹೋಯಿತು
ಮರೆಯಲಾಗುತಿಲ್ಲ...

೭

ಕಣ್ಣು ಕಾಣದ ಕಡಲು
ಎಷ್ಟಿದೆಯೊ
ನೀನು ತೋರದ ಸೋಜಿಗ
ಇನ್ನೂ ಅದೆಷ್ಟಿದೆಯೊ

೮

ಉಸಿರು
ನಿಂತರೆ ಸಾಕೆಂದು
ಮಣ್ಣು ಹಿಡಿದು ನಿಂತಿದ್ದಾರೆ
ನಿನ್ನ ಪ್ರೀತಿ ಒಳಗಿದೆ
ನಾನು ಮತ್ತೆ
ಮೊಳೆಯುತ್ತೇನೆ

ವೀರಣ್ಣ ಮಡಿವಾಳರ

ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕಲಕೇರಿಯವರಾದ ವೀರಣ್ಣ ಮಡಿವಾಳರ ಇತ್ತೀಚಿನ ತಲೆಮಾರಿನ ಯುವ ಲೇಖಕರಲ್ಲಿ ಅತ್ಯಂತ ಗಮನ ಸೆಳೆಯುತ್ತಿರುವ ಪ್ರತಿಭೆ. ಇವರ 'ನೆಲದ ಕರುಣೆಯ ದನಿ' ಕವನ ಸಂಕಲನಕ್ಕೆ ಬೇಂದ್ರೆ ಗ್ರಂಥ ಬಹುಮಾನ, ಅರಳು ಕಾವ್ಯ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಲೇಖನ ಕವಿತೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ವಿಶೇಷ ಮನ್ನಣೆ ಪಡೆದಿವೆ.



ಲಿಂಗಸ್ವಾಮಿಯು ಎಷ್ಟೋ ವರ್ಷಗಳಾದ ಮೇಲೆ ಶ್ರೀಲಿಂಗಸ್ವಾಮಿಯ ರೂಪದಲ್ಲಿ ಸ್ವಗ್ರಾಮಕ್ಕೆ ಬರುತ್ತಿರುವರೆಂಬ ವರ್ತಮಾನದ ಗಳಿಗೆಯಲ್ಲಿ ಇಡೀ ಗ್ರಾಮದ ಶ್ರೀಲಿಂಗಸ್ವಾಮಿಯವರ ಜಾತಿ ಬಾಂಧವರೆಲ್ಲ ಅವರ ಬರುವಿಕೆಯೊಂದು ಊರಹಬ್ಬವೇನೋ ಎಂಬಂತೆ ಸಿಂಗಾರಗೊಂಡಿರುವುದನ್ನು ಇತರೆ ಕೇರಿಗಳ ಜನರು ಕಾಣುತ್ತಲೂ 'ಓಹೋ ಈ ಲಿಂಗಸ್ವಾಮಿ ಏನಾಗಿದ್ದನೆಂಬುದನ್ನು ನಾವು ಬಲ್ಲೆವು ಎಂದುಕೊಂಡು ನಗೆಯಾಡಿದ್ದು ಇಂದು ಸುಳ್ಳಾಗಿದೆ.

ಆರ್ಮುಗ ಕುರುಜು ಮತ್ತು ಶ್ರೀಲಿಂಗ ಸ್ವಾಮಿ

ಮಂಜುನಾಥ್‌ಲತಾ

ಮೊದಲಿಗೆ ಶ್ರೀಲಿಂಗಸ್ವಾಮಿಯ ಪುರಾಣವು

ಶ್ರೀಲಿಂಗಸ್ವಾಮಿ ಎಂದರೆ ಈಗ ಸುಮ್ಮನೆ ಅಲ್ಲ.

ಅವರೀಗ ಈ ನಾಡ ಗೃಹಮಂತ್ರಿಗಳ ಸಾಕ್ಷಾತ್ ಸಖರು. ಒಂದು ವೇಳೆ ಸನ್ಮಾನ್ಯ ಗೃಹಮಂತ್ರಿಗಳ ಮಾತು ನಡೆಯದೆ ಹೋಗಬಹುದು; ಆದರೆ ಅವರ ಆತ್ಮಸಖರಂತಿರುವ ಶ್ರೀಲಿಂಗಸ್ವಾಮಿಯವರ ಮಾತು ನಡೆಯದೆ ಹೋಗುವುದು ಪವಾಡವೇ ಸರಿ ಎಂಬುದು ಸದ್ಯ ಪ್ರಚಲಿತದಲ್ಲಿರುವ ನಂಬುಗೆ.

ಆ ಅಂತಹ ಶ್ರೀಲಿಂಗಸ್ವಾಮಿ ಎಂದರೆ ಈಗ ಸುಮ್ಮನೆ ಅಲ್ಲ... ಆದರೆ ಆಗ? ಹದಿನೈದು ವರ್ಷಗಳ ಹಿಂದೆ ಎಂದು ಒಂದು ಅಂದಾಜು ಇಟ್ಟುಕೊಂಡು ಹಿಂದಕ್ಕೆ ನೋಡುತ್ತಾ ಹೋದಾಗ?

ಈಗ ಶ್ರೀಲಿಂಗಸ್ವಾಮಿ ಎಂಬ ಹೊಸ ನಾಮಾಂಕಿತದ ಅಂದಿನ ಲಿಂಗಸ್ವಾಮಿಯನ್ನು ಇದೀಗ ದೇವರ ಕಳಶವೋ ಎಂಬಂತೆ ತಲೆಯ ಮೇಲೆ ಹೊತ್ತು ಮೆರೆಯುತ್ತಿರುವ ಅವರ ಕುಲಬಾಂಧವರೇ ಹಾಲಿನ ಡೈರಿ ಹಣ ತಿಂದ ಕಾರ್ಯದರ್ಶಿ ಎಂದು ನ್ಯಾಯ-ಪಂಚಾಯ್ತಿಗಳನ್ನು ಮಾಡಿ ಊರಿಂದಾಚೆಗೆ ಕಳಿಸುವುದಕ್ಕೂ ಮುನ್ನ ಉದುರಿಸಿದ ಬೈಗುಳಗಳ ಸ್ಯಾಂಪಲ್ಲುಗಳು ಇಂತಿದ್ದವು:

'ಅರರೆ... ಕತ್ತಲ್ಲಿ ಮಾತ್ರ ಲಿಂಗ...ಹೆಸರಿಗೆ ಲಿಂಗಸ್ವಾಮಿ... ಮಾಡೋದು ನೋಡಿದ್ರೆ ರೈತರ ಹಾಲಿನ ದುಡ್ಡು ತಿನ್ನೋ ಹಲ್ಕಾ ಕೆಲಸ...ಇವನ್ಗೆ 'ನುಂಗಸ್ವಾಮಿ' ಅಂತ ಹೆಸರಿಡ್ಬೇಕಿತ್ತು...ಈ ಲೋಫರ್ ಸೂಳೆ ಮಗನ್ಗೆ..!'

'ನೋಡೋಕೆ ಮಾತ್ರ ಲಿಂಗವಂತ...ಭಾರಿ ಆಸಾಮಿ ಕನ್ರುಡ ಇವ! ಊರಿಂದಾಚ್ಗೆ ಕಳಿಸೋಕೆ ಮುಂಚೆ ಇವನ ಬೀಜ ನುಲ್ದು ಕಳಿಸಬೇಕು ಕಣ್ರೋ...!'

'ಅಂಬ್ಯೋ ಪೆದ್ದರಾ... ಅವನಿಗೆ ಬೀಜ ಇದ್ರೆ ತಾನೆ ನುಲಿಯೋದು...ಅವನು ಹೆಣ್ಣಿಗನ ಹಾಗೆ ನುಲಿಯೋದು ಕಾಣಿಸೋಲ್ವ... ಅಡಸಂಡಿ ಬಡ್ಡೇದ...!'ಹಾಗೆ ಉಟ್ಟುಡುಗೆಯಲ್ಲಿ ತನ್ನೂರಿನಿಂದ ಬೀಳ್ಕೊಂಡ ಲಿಂಗಸ್ವಾಮಿಯು ಮೈಸೂರು ಪಟ್ಟಣವನ್ನು ಸೇರಿ, ಅಲ್ಲಿ ಮುತ್ತೂರು ಸ್ವಾಮೀಜಿಯವರ ಅನಾಥಾಲಯವನ್ನು ಹುಡುಕಿ, 'ತಾನೋರ್ವ ಅನಾಥ' ಎಂಬ ಮೌಖಿಕ ಸರ್ಟಿಫಿಕೇಟನೊಂದಿಗೆ ಪ್ರವೇಶ ಪಡೆದನಷ್ಟೆ.

ಅಲ್ಲಿನ ಪಾಕಶಾಲೆಯಲ್ಲಿ ಅಡುಗೆ ಸಹಾಯಕನಾಗಿ ಉಣ್ಣುವುದಕ್ಕೂ ತಿನ್ನುವುದಕ್ಕೂ ತತ್ವಾರವಾಗದೆ ಬದುಕಿಕೊಂಡಿದ್ದ ಕಾಲದಲ್ಲೇ ಲಿಂಗಸ್ವಾಮಿಗೆ ತುರುಗಜ್ಜಿ ತಗುಲಿಕೊಂಡಿತು. ಕೈಬೆರಳುಗಳ ಸಂದಿಯಲ್ಲಿ ನುಚ್ಚಕ್ಕಿಯಾಕಾರದಲ್ಲಿ ಸಣ್ಣನೆಯ ನವೆಯೊಂದಿಗೆ ಮೊದಲಿಗೆ ಕಾಣಿಸಿಕೊಂಡ ಆ ತುರುಗಜ್ಜಿಯು ಯಾವ ಪರಿ ಲಿಂಗಸ್ವಾಮಿಯನ್ನು ಆವರಿಸಿಕೊಂಡಿತೆಂದರೆ ಇಡೀ ಅನಾಥಾಲಯದ ಸದಸ್ಯರು ಲಿಂಗಸ್ವಾಮಿಯ ಹಗಲೂ ರಾತ್ರಿಯ ಕೆರೆತವನ್ನು ಕಂಡು ಬೆಕ್ಕಸಬೆರಗಾದರು. ಕೈಬೆರಳುಗಳ ಸಂದಿಯಿಂದ ಮೊದಲ್ಗೊಂಡ ತುರುಗಜ್ಜಿಯು ಹತ್ತಾರು ದಿನಗಳಲ್ಲೇ ಯಾವ ಔಷಧಿಗೂ ಅಲ್ಲಾಡದೆ ಶಾಶ್ವತ ಕೆರೆತವಾಗಿ ಲಿಂಗಸ್ವಾಮಿಯ ಒಡಲನ್ನಾವರಿಸಲು; ಅರೆಗಳಿಗೆಯೂ ಪುರುಸೊತ್ತಿಲ್ಲದಂತೆ ಲಿಂಗಸ್ವಾಮಿಯ ಉಗುರುಗಳು ದೇಹದ ಎಲ್ಲಾ ಅವಯವಗಳ ಕೆರೆತದಲ್ಲಿ ನಿರತವಾಗುವಂತಾಗಲು

ಲಿಂಗಸ್ವಾಮಿಯು 'ತುರುಗಜ್ಜಿ ಲಿಂಗಸ್ವಾಮಿ' ಎಂಬ ಹೊಸ ನಾಮಧೇಯಕ್ಕೆ ಶಿಫ್ಟಾದನು.

ಕೆರೆತ, ಕೆರೆತ ಮತ್ತು ಕೆರೆತದಿಂದಾಗಿ ಮೈಯೆಲ್ಲ ರಣಗಾಯದ ಹಕ್ಕಳೆಗಳಾಗುವುದು, ಒಣಗುವುದು, ಗಾಯದ ಕಲೆಯನ್ನು ಲಿಂಗಸ್ವಾಮಿಯ ಮೈಗೆ ಅಲಂಕರಿಸಿ ತೆರಳುವುದು; ಕೆಲವೇ ದಿನಗಳಲ್ಲಿ ಮರಳುವುದು– ಇವಿಷ್ಟೂ ಲಿಂಗಸ್ವಾಮಿಯ ನಿತ್ಯಬದುಕಿನ ಮಾಮೂಲಿ ಪ್ರಕ್ರಿಯೆಯಂತಾಗಲು

ಇದೇ ಕಾರಣದಿಂದಾಗಿ ಲಿಂಗಸ್ವಾಮಿಯು ಅನಾಥಾಲಯದ ಉಸ್ತುವಾರಿಗಳಾದ ಚಿಕ್ಕಬುದ್ಧಿಯವರ ಅವಕೃಪೆಗೆ ತುತ್ತಾಗಿ ಪಾಕಶಾಲೆಯಿಂದ ಗೋಶಾಲೆಗೆ ಶಿಫ್ಟಾದನು. ಗೋಶಾಲೆಯ ಗೋಮೂತ್ರದ ದೆಸೆಯಿಂದಲೋ ಏಕಾಂತ ದೊರೆತ ಕಾರಣದಿಂದಲೋ ಅವನ ಮೈಯ ಕಜ್ಜಿಗಳೆಲ್ಲ ಮಾಯವಾಗಿ ಮೊದಲಿನಂತಾದರೂ ತುರುಗಜ್ಜಿಯ ಅಡ್ಡನಾಮ ಅವನಿಗೆ ಹಾಗೆಯೇ ತಗುಲಿಕೊಂಡಿತ್ತು.

ಅನಾಥಾಲಯದಿಂದ ಗೋಶಾಲೆಗೆ ಶಿಫ್ಟಾಗುತ್ತಲೂ ಸಿಟ್ಟಿಗೆದ್ದ ಲಿಂಗಸ್ವಾಮಿಯು ಪಾಕಶಾಲೆಯಲ್ಲಿ ತಟ್ಟೆ–ಲೋಟ, ಅಕ್ಕಿ–ಬೇಳೆ ಇತ್ಯಾದಿಗಳನ್ನೂ ಗೋಶಾಲೆಯಲ್ಲಿ ಹೊಟ್ಟು–ಬೂಸಾ, ಹಾಲು–ಬೆಣ್ಣೆ ವಗೈರೆಗಳನ್ನು ಕಳವು ಮಾಡತೊಡಗಿದನು; ಪರಿಣಾಮ ಒಂದು ದಿನ ಸಿಕ್ಕಿಬಿದ್ದನು...

ಲಿಂಗಸ್ವಾಮಿಯ ಕುರಿತಾದ ಮತ್ತೊಂದು ಮುಖ್ಯವಾದ ಸಂಗತಿ ಬಿಟ್ಟುಹೋಗಿದ್ದು ಅದನ್ನು ಇಲ್ಲಿಯೇ ಸೇರಿಸಿಕೊಳ್ಳಬಹುದು. ಅದು ಸಾಮಾನ್ಯವಾಗಿ ರಾತ್ರಿಯ ಕತ್ತಲಿನಲ್ಲಿ ಜರುಗುತ್ತಿದ್ದ ಸಂಗತಿಯಾಗಿದ್ದರಿಂದ ಲಿಂಗಸ್ವಾಮಿ ಅನಾಥಾಲಯ ಬಿಟ್ಟು ಹೋದ ಎಷ್ಟೋ ದಿನಗಳ ನಂತರ ಬೆಳಕಿಗೆ ಬಂದಿತ್ತು; ಅದೇನೆಂದರೆ,

ಈ ಲಿಂಗಸ್ವಾಮಿಯು ಒಂದು ಬಗೆಯಲ್ಲಿ ಸ್ತ್ರೀಲಿಂಗದ ನಡವಳಿಕೆಗೂ ಮತ್ತೊಂದು ಬಗೆಯಲ್ಲಿ ಪುಲ್ಲಿಂಗದ ನಡವಳಿಕೆಗೂ ಸಮಾನಪ್ರಮಾಣದಲ್ಲಿ ಸಲ್ಲುವ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದುದರಿಂದ; ಅಥವಾ ಅದು ಯಾವ ಪರಿಯೋ ಅಂತಹ ಎರಡೊಂದು ಸ್ವಭಾವ ಹುಟ್ಟನಿಂದಲೂ ಅವನೊಡಲೊಳಗೆ ರೂಢಿಗತವಾಗಿಬಿಟ್ಟಿದ್ದುದರಿಂದ ಅನಾಥಾಲಯದ ಸದಸ್ಯರುಗಳಿಂದ 'ಸ್ತ್ರೀಲಿಂಗಸ್ವಾಮಿ' ಎಂದೇ ಬಿರುದು ಪಡೆದುಬಿಟ್ಟಿದ್ದನಲ್ಲದೆ ನಡುವಯಸ್ಸು ಮೀರದ ಅಲ್ಲಿನ ಎಷ್ಟೋ ಮಂದಿ ಸದಸ್ಯರಿಗೆ ರಾತ್ರಿಯ ವೇಳೆಯಲ್ಲಿ ಸಖ್ಯ ನೀಡುವವನಾಗಿದ್ದು 'ತುರುಗಜ್ಜಿ ಲಿಂಗಸ್ವಾಮಿ'ಯಾದ ನಂತರದಲ್ಲಿ ತನ್ನೆಲ್ಲ ಸಖರಿಂದಲೂ ದೂರ ಸರಿಸಲ್ಪಟ್ಟಿದ್ದನು.

ಹಾಗೆ ಅನಾಥಾಲಯದಿಂದಲೂ ಹೊರಟ ಲಿಂಗಸ್ವಾಮಿಯು ಬದುಕಿನ ನೆಲೆಯರಸಿ ಬೆಂಗಳೂರು ತಲುಪಿ ಅಲ್ಲೆಲ್ಲೋ ಕಣ್ಣುಬಿಟ್ಟು ನೋಡಿದರೆ,

ಅಲ್ಲೊಂದು ಅಧ್ಯಾತ್ಮ ಶಿಬಿರ ನಡೆಯುತ್ತಿದ್ದಿತು; ಬಿಳಿ ದಿರಿಸುಗಳ ಧರಿಸಿದವರು, ಕೆಂಪನೆಯ ನಿಲುವಂಗಿಗಳನ್ನು ತೊಟ್ಟವರು ಅಲ್ಲಿ ಧ್ಯಾನಾಸಕ್ತರಾಗಿದ್ದರು.

ಲಿಂಗಸ್ವಾಮಿಯು ಅನಾಥಾಲಯದ ಉಸ್ತುವಾರಿಗಳಾದ ಚಿಕ್ಕಬುದ್ಧಿಯವರ ಅವಕೃಪೆಗೆ ತುತ್ತಾಗಿ ಪಾಕಶಾಲೆಯಿಂದ ಗೋಶಾಲೆಗೆ ಶಿಫ್ಟಾದನು. ಗೋಶಾಲೆಯ ಗೋಮೂತ್ರದ ದೆಸೆಯಿಂದಲೋ ಏಕಾಂತ ದೊರೆತ ಕಾರಣದಿಂದಲೋ ಅವನ ಮೈಯ ಕಜ್ಜಿಗಳೆಲ್ಲ ಮಾಯವಾಗಿ ಮೊದಲಿನಂತಾದರೂ ತುರುಗಜ್ಜಿಯ ಅಡ್ಡನಾಮ ಅವನಿಗೆ ಹಾಗೆಯೇ ತಗುಲಿಕೊಂಡಿತ್ತು.

ಕಥೆ

ವೋಟು ನೀಡಿದವರ ಸೇವೆ ಮಾಡಿ ದಣಿದು ಹೈರಾಣಾಗಿದ್ದ ಅವರೆಲ್ಲರೂ ಒಂದಿಷ್ಟು ನೆಮ್ಮದಿಯನ್ನೂ, ಮನಃಶಾಂತಿಯನ್ನೂ, ಸ್ಫೂರ್ತಿಯನ್ನೂ ಅರಸಿಬಂದು ಅಲ್ಲಿ ಸೇರಿದ್ದರು. ದಣಿದ ಮೈಮನಸ್ಸುಗಳನ್ನು ನಿರಾಳವಾಗಿಸುವ ಮಸಾಜ್ ಥೆರಪಿಯೂ ಅಲ್ಲಿ ನಡೆಯುತ್ತಿದ್ದು ಅದರ ಉಸ್ತುವಾರಿ ನೋಡಿಕೊಂಡಿದ್ದ ತಾಂಬೂಲ ಜಗಿದ ಕೆಂಪು ತುಟಿಗಳ ಕೆಂಪನೆಯ ವ್ಯಕ್ತಿಯೊಬ್ಬನನ್ನು ಕಂಡದ್ದೇ ತಡ ಪುಳಕಿತನಾದ ಲಿಂಗಸ್ವಾಮಿಯು ತನ್ನೊಳಗಿನ ವೈಯಾರ ಮೈಮುರಿದು ಎದ್ದಂತಾಗಿ ಮತ್ತಷ್ಟು ವೈಯಾರಭರಿತನಾಗಿ ಆ ವ್ಯಕ್ತಿಯ ಕಾಲಿಗೆ ಸಾಷ್ಟಾಂಗವೆರಗಲು ಅವನು ಎರಗಿದ ಭಂಗಿ ಅದೆಂತೋ ಶಿಲಾಬಾಲಿಕೆಯನ್ನು ನಾಚಿಸಿದಂತೆ ಕಂಡು ಆ ಕೆಂಪನೆಯ ವ್ಯಕ್ತಿಯು ರೋಮಾಂಚನಗೊಂಡು 'ಆಹಾ ನೀನಾರೋ ನನ್ನ ಪೂರ್ವಜನ್ಮದ ಬಂಧುವೇ ಇರಬೇಕು; ಆತ್ಮಸಖನೇ ಇರಬೇಕು. ನೀನಿನ್ನು ನಮ್ಮವನು' ಎಂದುಬಿಟ್ಟವನೇ 'ಇದೋ ಈ ಮಸಾಜ್ ಪರಿಕರಗಳನ್ನೆಲ್ಲ ತೆಗೆದುಕೊಂಡು ನಡೆ...ಶಾಸಕ ಗಣ್ಯರೊಬ್ಬರಿಗೆ ಮಸಾಜ್ ಮಾಡುವುದಿದೆ...' ಎಂದು ನುಡಿಯಲು ಲಿಂಗಸ್ವಾಮಿಯ ಮಸಾಜ್‌ನ ನಾಜೂಕುತನಕ್ಕೆ, ಅವನ ವೈಯಾರಕ್ಕೆ ಮರುಳಾದ ಆ ಗಣ್ಯವ್ಯಕ್ತಿಯು 'ಏನು ಮರಿ ನಿನ್ನ ಹೆಸರು?' ಎಂದು ಕೇಳಿದರು. ಲಿಂಗಸ್ವಾಮಿಯು ಮತ್ತಷ್ಟು ವೈಯಾರದೋರಿ 'ಶ್ರೀಲಿಂಗಸ್ವಾಮಿ' ಎಂದುಲಿದನು.

ಅವನ ವೈಯ್ಯಾರದ ದೆಸೆಯಿಂದಲೂ, ಅವನ ದನಿಯ ಮೆದುವಿನಿಂದಲೂ ಅವನ ಹೆಸರನ್ನು ತಪ್ಪಾಗಿ ಗ್ರಹಿಸಿದ ಆ ಗಣ್ಯರು 'ಅರೆ! ಸ್ತ್ರೀಲಿಂಗಸ್ವಾಮಿ!...ಚೆನ್ನಾಗಿದೆ ಮರಿ...ನಿನಗೆ ತಕ್ಕನಾಗಿ ಹ್ಹಹ್ಹಹ್ಹಾ!' ಎಂದು ದೊಡ್ಡದಾಗಿ ನಕ್ಕರಲ್ಲದೆ ಚಪ್ಪಾಳೆ ತಟ್ಟಿ ಮತ್ತೆ ಮತ್ತೆ ನಕ್ಕರು.

ಅವರ ತಪ್ಪು ಉಚ್ಚಾರದಿಂದ ಕೊಂಚವೂ ವಿಚಲಿತನಾಗದ ಲಿಂಗಸ್ವಾಮಿಯು ಅದೇ ನಿರ್ಲಿಪ್ತ ವೈಯಾರದೊಡನೆ 'ಇಲ್ಲ ಸಾರ್... ನಾನು 'ಶ್ರೀಲಿಂಗಸ್ವಾಮಿ' ಎಂದು ನುಡಿಯುವಾಗ 'ಶ್ರೀ'ಎನ್ನುವುದನ್ನು ಒತ್ತಿ ನುಡಿದನು.

'ಓಕೆ ಓಕೆ ಮರಿ... ಸಾರಿ... ನಿನ್ನ ನೋಡಿದರೆ ಮುಖದ ಮೇಲೆ ಯೋಗಾಯೋಗದ ಕಳೆ ಇರುವಂತಿದೆ... ಎಲ್ಲಿ ನೀನು ಮೊದಲು ಬಂದಾಗ ಕಾಣಲಿಲ್ಲವಲ್ಲ?' ಎಂದು ಕುಶಲ ವಿಚಾರಿಸಿದರು.

ಅವರು ಹಾಗೆ ಕಷ್ಟ–ಸುಖ ಕೇಳುತ್ತಲೂ ಕನಲಿದ ಲಿಂಗಸ್ವಾಮಿಯು ಕಣ್ಣುಗಳಿಗೆ ನೀರು ತಂದುಕೊಂಡು ತನ್ನ ಹಿನ್ನೆಲೆಗಳನ್ನೆಲ್ಲವನ್ನೂ ಹೇಳಿಕೊಂಡು ತನ್ನ ಬದುಕಿಗೊಂದು ನೆಲೆ ಕಲ್ಪಿಸಿಕೊಡಬೇಕೆಂದು ಅವರ ಕಾಲಿಗೆ ಸಾಷ್ಟಾಂಗವೆರಗಿ ಕೇಳಿಕೊಳ್ಳಲು ಆ ಗಣ್ಯರು 'ಇಂದಿನಿಂದ ನೀನು ನನ್ನ ಆಪ್ತಸೇವಕ... ನನ್ನ ದೇಹಪ್ರಕೃತಿಯ ಗಮನವಿನ್ನು ನಿನ್ನದು... ನಡೆ ನನ್ನೊಂದಿಗೆ' ಎಂದು ಅವನ ಬೆನ್ನು ಸವರಿದ ನಾಲ್ಕಾರು ದಿನಗಳಲ್ಲೇ ಲಿಂಗಸ್ವಾಮಿಯಾಗಿದ್ದ ಲಿಂಗಸ್ವಾಮಿಯು ತನ್ನನ್ನು ತಾನು ಶ್ರೀಲಿಂಗಸ್ವಾಮಿಯೆಂದು ಕರೆದುಕೊಂಡು ಆ ಗಣ್ಯಶಾಸಕರ ಮನೆಗೆ ಕಾಲಿರಿಸಿ ಅಲ್ಲೇ ಪರ್ಮನೆಂಟಾದನು.

ಹಾಗೊಂದು ಅಚಾನಕ್ಕೆಂಬಂತಹ ಕ್ಷಣದೊಳಗೆ ಅಲ್ಲಿ ತಳವೂರಿದ ಶ್ರೀಲಿಂಗಸ್ವಾಮಿಯು ಆ ಶಾಸಕರ ಆಜ್ಞಾನುವರ್ತಿಯಾಗಿ, ಅಂತರಂಗದ ಸಖನಾಗಿ, ಬೇಕು–ಬೇಡಗಳ ಪೂರೈಕೆದಾರನಾಗಿ. ಒಳಿತು–ಕೆಡುಕುಗಳ ವಿಚಾರಕನಾಗಿ ಅಲ್ಲಿ ಬೆಳೆಬೆಳೆಯುತ್ತಿರುವಾಗಲೇ

ಆ ಶಾಸಕರ ಪಕ್ಷವು ಮುಂದಿನ

ಚುನಾವಣೆಯಲ್ಲಿ ಸರ್ಕಾರ ರಚಿಸುವಂತಾಗಿ ಅವರು ಮುಖ್ಯಮಂತ್ರಿಗಳಿಗೆ ಆಪ್ತರಾಗಿ ಗೃಹಮಂತ್ರಿಯ ಸೀಟನ್ನು ಅಲಂಕರಿಸಿದರು ಎನ್ನುವ ಹೊತ್ತಿಗೆ

ಶ್ರೀಲಿಂಗಸ್ವಾಮಿಯು ತಾನೇ ಗೃಹಮಂತ್ರಿಯಂತಾದನು.

* * *

ಲಿಂಗಸ್ವಾಮಿಯು ಎಷ್ಟೋ ವರ್ಷಗಳಾದ ಮೇಲೆ ಶ್ರೀಲಿಂಗಸ್ವಾಮಿಯ ರೂಪದಲ್ಲಿ ಸ್ವಗ್ರಾಮಕ್ಕೆ ಬರುತ್ತಿರುವರೆಂಬ ವರ್ತಮಾನದ ಗಳಿಗೆಯಲ್ಲಿ ಇಡೀ ಗ್ರಾಮದ ಶ್ರೀಲಿಂಗಸ್ವಾಮಿಯವರ ಜಾತಿ ಬಾಂಧವರೆಲ್ಲ ಅವರ ಬರುವಿಕೆಯೊಂದು ಊರಹಬ್ಬವೇನೋ ಎಂಬಂತೆ ಸಿಂಗಾರಗೊಂಡಿರುವುದನ್ನು ಇತರೆ ಕೇರಿಗಳ ಜನರು ಕಾಣುತ್ತಲೂ 'ಓಹೋ ಈ ಲಿಂಗಸ್ವಾಮಿ ಏನಾಗಿದ್ದನೆಂಬುದನ್ನು ನಾವು ಬಲ್ಲೆವು ಎಂದುಕೊಂಡು ನಗೆಯಾಡಿದ್ದು ಇಂದು ಸುಳ್ಳಾಗಿದೆ. ನಿಜವಾಗಿಯೂ ಶ್ರೀಲಿಂಗಸ್ವಾಮಿಯವರು ಸಾಕ್ಷಾತ್ ಗೃಹಮಂತ್ರಿಗಳೇ; ಅಥವಾ ಅವರಿಗಿಂತ ಒಂದು ಗುಲಗಂಜಿಯಷ್ಟು ಹೆಚ್ಚೆಂದರೂ ಸರಿಯೇ; ಅವರು ನಮ್ಮ ಊರು ಉದ್ಧಾರ ಮಾಡಲೆಂದೇ ಮತ್ತೊಮ್ಮೆ ಹುಟ್ಟಿಬಂದವರೆಂದರೂ ಸರಿಯೇ' ಎಂದೆಲ್ಲ ಆಲೋಚಿಸುತ್ತಾ ಅವರ ಸ್ವಾಗತ ಸಮಾರಂಭಕ್ಕೆ ಅವರ ಕೇರಿಯತ್ತ ಸುಳಿಯಬಾರದೆಂದುಕೊಂಡವರ ಕಾಲುಗಳು ತಮಗೆ ತಾವೇ ಅತ್ತ ಚಲಿಸುತ್ತಲೂ

ಐದಾರು ಕಾರುಗಳ ಪೈಕಿ ಮಧ್ಯದ ವಿಮಾನದಂಥ ಕಾರಿನ ಹಿಂಬದಿ ಸೀಟಿನಲ್ಲಿ ಒರಗಿದ್ದ ಶ್ರೀಲಿಂಗಸ್ವಾಮಿಗಳು ತಮ್ಮ ತೊಡೆಯ ಮೇಲೆ ತೆರೆದಿಟ್ಟುಕೊಂಡಿದ್ದ ಸೂಟುಕೇಸಿನಿಂದ ಐನೂರರ ನೂರಾರು ನೋಟುಗಳನ್ನು ಎಡಗೈ ಮುಷ್ಟಿಯಲ್ಲಿ ತೆಗೆದು ಹಿಡಿದವರೇ ಕಾರಿನ ಕಿಟಕಿಯಾಚೆ ಕೈಚಾಚಿ ಊರ ಗಾಳಿಗೆ ತೂರುತ್ತಲೇ

'ಓಹೋ ಇದೇನು ಕಲಿಗಾಲದ ಮಹಿಮೆ! ಈವರೆಗೆ ನಮ್ಮೂರಿಗೆ ಬಂದ ಯಾವ ಎಮ್ಮೆಲ್ಲೆ; ಎಂಪಿಗಳ್ಯಾರೂ ನಾವು ಹುಟ್ಟಿ ಬೆಳೆದ ಕಾಲದಿಂದಲೂ ಈ ತೆರನಾಗಿ ನೋಟುಗಳನ್ನು ಲಾಟರಿ ಟಿಕೆಟುಗಳ ಹಾಗೆ ಗಾಳಿಗೆ ತೂರಿಬಿಟ್ಟವರಲ್ಲ... ಇದೇನು ಈ ಶ್ರೀಲಿಂಗಸ್ವಾಮಿಯವರ ಮಹಿಮೆ! ಇವರ ಈ ವೈಖರಿ ನೋಡಿದರೆ ಇವರು ನಮ್ಮೂರಲ್ಲೊಂದು ದುಡ್ಡಿನ ಗಿಡಗಳ ತೋಟವನ್ನೇ ಸೃಷ್ಟಿಸಿ ಹೋಗುವಂತಿಹುದಲ್ಲಾ!' ಎಂದು ತಂತಮ್ಮ ಹೃದಯಗಳನ್ನು ಬಾಯಿಗೆ ತಂದುಕೊಂಡ ಊರ ಸಮಸ್ತ ಜನರೂ 'ಜನಗಣಮನ'ದ ವೇಳೆ ಹಾರಾಡುವ ಧ್ವಜದ ಹಾಗೆ ತೂರಾಡಿ ತಾರಾಡಿ ಬೀಳುತ್ತಿರುವ ನೋಟುಗಳ ಹಿಡಿಯಲು 'ನಾ ನೆಗೆದೆ, ನೀ ನೆಗೆ' ಎಂಬಂತೆ ಗಾಳಿಗೆ ನೆಗೆಯುತ್ತಲೂ

ಶ್ರೀಲಿಂಗಸ್ವಾಮಿಯವರ ಕುಲಬಾಂಧವರು, ಜಾತಿಬಾಂಧವರು, ನೆಂಟರಿಷ್ಟರು ಯಾವ ಬೇಧಭಾವವೂ ಇಲ್ಲದೆ ಚಪ್ಪಾಳೆ ತಟ್ಟಿದರು. ಅವರು ಕಾರಿನಿಂದಿಳಿಯುತ್ತಲೂ ಅವರನ್ನು ಆಲಂಗಿಸಿಕೊಳ್ಳಲು, ಕೈಕುಲುಕಲು, ಹೆಬ್ಬಾವಿನಂಥ ಹೂವಿನ ಹಾರಗಳಿಂದ ಅಲಂಕರಿಸಲು ಕಾಲ ಹೆಬ್ಬೆರಳುಗಳ ಮೇಲೆ ನಿಂತರು....

ಕುರುಜೆಂಬ ರಥದ ಪ್ರಸಂಗವಿದು...

ಊರಾಗಿದ್ದ ಊರಿಗೆ ಹತ್ತಾರು ವರ್ಷಗಳಿಂದಲೂ ತಲೆನೋವಾಗಿ ನಿಂತುಬಿಟ್ಟಿದ್ದ ಕುರುಜು ಎಂಬ ಸಿದ್ದೇಶ್ವರಸ್ವಾಮಿಯ ರಥಕ್ಕೀಗ ಚಲನೆ ಬಂದುಬಿಟ್ಟಿತ್ತು. ಪ್ರತಿ ವರ್ಷದ ಕಾರ್ತೀಕ ಮಾಸದಲ್ಲಿ ನಡೆಯುತ್ತಲಿದ್ದ ಸಿದ್ದೇಶ್ವರಸ್ವಾಮಿಯ ಕುರುಜೋತ್ಸವ ಹತ್ತಾರು ವರ್ಷಗಳ ಹಿಂದೆ ಥಟ್ಟನೆ ನಿಂತುಹೋದ ಪರಿ ಹೇಗಿತ್ತೆಂದರೆ

'ನಾವೂ ಕುರುಜೋತ್ಸವಕ್ಕೆ ಹಣ ಕೊಡುತೀವಿ
ನಾವೂ ಕುರುಜು ಕಟ್ಟಲು ಬರುತೀವಿ
ನಾವೂ ತಳಿರು ತೋರಣ ಕಟ್ಟುತೀವಿ
ಆದರೂ ನಮ್ಮನ್ನೇಕೆ ನೀವು ಕುರುಜೆಳೆಯಲು ಬಿಡಲಾರಿರಿ'

–ಹೀಗೆಂದು ಹರಿಜನರ ಕೇರಿಯವರೂ, ಪರಿವಾರ ಕೇರಿಯವರು ಕೇಳಲಾಗಿ ಕುರುಜೋತ್ಸವದ ಉಸ್ತುವಾರಿ ಹೊರುತ್ತಿದ್ದ ಲಿಂಗಾಯತ ಮುಖಂಡರ ಬಾಯಿ ಕಟ್ಟಿತ್ತು.

'ಓಹೋ ಕಾಲ ಈಗ ಇವರದ್ದೇ ಅಲ್ಲವೇನಪ್ಪ
ಅವರೇ ಎಳೆಯಲಿ ಕುರುಜ...
ಅವರ ಕೈಗೇ ಕೊಡಿ ಹಗ್ಗವ...
ಅವರೇ ಮಾಡಿಕೊಳ್ಳಲಿ ಉತ್ಸವವ'

ಎಂದವರೇ ಆ ಮುಖಂಡರು ತಾವು ಹಿಡಿದ ಕುರುಜಿನ ಹಗ್ಗವ ಬಿಟ್ಟರು.

ಆಗ ಆ ಕುರುಜೆಂಬ ರಥದ ಹಗ್ಗ ಎಳೆಯುವ ಧೈರ್ಯ ಪ್ರಕಟಿಸಿದ ಪರಿವಾರ ಕೇರಿಯ, ಹರಿಜನರ



ಕೇರಿಯ ಹುಡುಗರು ಇದ್ದುದೇ ಏಳೆಂಟು ಮಂದಿ. ಉಳಿದವರಿಗೆ ಆ ರಥದ ಹಗ್ಗವ ತಾವೂ ಮುಟ್ಟಬೇಕೆಂಬ ಆಸೆಯಿದ್ದರೂ 'ಎಂದೂ ಮುಟ್ಟದ ರಥದ ಹಗ್ಗವ ನಾವು ಇಂದು ಮುಟ್ಟುವುದುಂಟೆ' ಎಂದು ಹೆದರಿ ಹಿಂದೆ ನೆಗೆದು ನಿಲ್ಲಲಾಗಿ

ಹಾಗೂ ಹೆದರದ ಏಳೆಂಟು ಹುಡುಗರು ಹಗ್ಗವ ಹಿಡಿದು ರಥವ ಎಳೆಯಲು ಮುಂದಾದರಾದರೂ ಊರುಭಾರದ ಆ ರಥ ಅವರ ಹದಿನಾರಿಪ್ಪತ್ತು ಕೈಗಳಿಗೆ ಜಗ್ಗುವುದಾದರೂ ಉಂಟೆ? ಹಾಗಾಗಿ ಅದು ನಿಂತಲ್ಲೇ ನಿಂತಿತು.

ಈ ಹಗ್ಗಜಗ್ಗಾಟ ಮುಂದಿನ ವರ್ಷವೂ ಮರುಕಳಿಸಿ ಕುರುಜು ಎಂಬ ಆ ಊರ ರಥ ಅಲ್ಲಿಯೇ ನಿಂತುಬಿಟ್ಟಿತು...

ಆದರೀಗ ಏನಾಗಿತ್ತೆಂದರೆ,

ಸಾಕ್ಷಾತ್ ಶ್ರೀಲಿಂಗಸ್ವಾಮಿಯವರೇ; ಗೃಹಮಂತ್ರಿಗಳ ಸಾಕ್ಷಾತ್ ಸಖ, ಮುಂದೆ ಮುಖ್ಯಮಂತ್ರಿಗಳಾಗಲಿರುವ ಗೃಹಮಂತ್ರಿಗಳ ಆತ್ಮಸಖ ಶ್ರೀಲಿಂಗಸ್ವಾಮಿಯವರೇ, ತಮ್ಮೂರ ದೇವರು ಸಿದ್ದೇಶ್ವರಸ್ವಾಮಿಯ ವರಪುತ್ರನಾಗಿ ಅವತರಿಸಿರುವ ಶ್ರೀಲಿಂಗಸ್ವಾಮಿಯವರೇ ಅಂದೆಂದೋ ನಿಂತ ರಥವನ್ನು ಇಂದು ಮುನ್ನಡೆಸಲು ನಿಶ್ಚಯಿಸಿರುವರೆಂದು ಅವರ ಕೇರಿ ಬಾಂಧವರೆಲ್ಲರೂ ಊರನ್ನೆಲ್ಲ ನಾಕಾರು ಸುತ್ತು ಹಾಕಿ ಸಾರಿಕೊಂಡು ಬಂದರು.

ಹಾಗೆ ಸುತ್ತು ಹಾಕಿ ಬಂದವರೆಲ್ಲರೂ ಶ್ರೀಲಿಂಗಸ್ವಾಮಿಯ ಅಣ್ಣ–ತಮ್ಮಂದಿರು, ದಾಯಾದಿ–ಬಂಧುಗಳು, ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳು ಮತ್ತಿತ್ಯಾದಿಗಳಾಗಿದ್ದರು ಹಾಗೂ ಅವರೆಲ್ಲರೂ ಹಾಗೆ ಊರನ್ನೆಲ್ಲ ಸುತ್ತು ಹಾಕಿ ಬರಲೆಂದು ಹೊರಟಾಗ ಅವರ ಕೈಗಳಲ್ಲಿ ಐನೂರು–ಸಾವಿರ ರೂಪಾಯಿಗಳ ಹತ್ತಾರು ಕಟ್ಟುಗಳಿದ್ದವು.

ಹಾಗೆ ಹೋಗುವಾಗ ಕೈತುಂಬ ಕಂತೆಗಳ ಹೊತ್ತು ಹೋದ ಅವರು ಬರುವಾಗ ಬರಿಗೈಲಿ ಬಂದರೂ ಮುಗುಳುನಗೆಗಳ ಹೊತ್ತು ತಂದರು...

'ಊರಂಗಳದ ಮಧ್ಯೆ ಹೂತೇ ಹೋಗಿದ್ದ ಸಿದ್ದೇಶ್ವರಸ್ವಾಮಿಯ ಕುರುಜೆಂಬ ರಥ ಮತ್ತೆ ತನ್ನೆಲ್ಲ ಅದ್ದೂರಿಯ ಗತ ವೈಭವದೊಂದಿಗೆ ಚಲಿಸುತ್ತದೆಯಂತೆ... ಹೊಸ ರಥವಾಗಿ ಕಂಗೊಳಿಸಲು ಅದಕ್ಕೆ ಖರ್ಚಾಗುತ್ತಿರುವ ಮೊತ್ತ ಇಪ್ಪತ್ತು ಲಕ್ಷ ರೂಪಾಯಿಗಳಂತೆ! ಈ ಇಪ್ಪತ್ತು ಲಕ್ಷಗಳನ್ನೂ ಸಾಕ್ಷಾತ್ ಶ್ರೀಲಿಂಗಸ್ವಾಮಿಯವರೇ ತಮ್ಮ ತನುಮನಪೂರ್ವಕವಾಗಿ ದಯಪಾಲಿಸಿರುವರಂತೆ ಎಂಬ ವರ್ತಮಾನವು ಊರೊಳಗೆ

ಅತ್ತೆಯ ಊರ ತುಂಬಾ ಓಡಾಡಿಕೊಂಡಿದ್ದ ಆರ್ಮುಗ ಎಂಬ ಒಕ್ಕಾಲಿನ ಹರಿಜನ ಕೇರಿಯ ಅಳಿಯ ಆ ಕಾರ್ತೀಕಮಾಸದ ಕೊನೆಯ ಸೋಮವಾರದ ಹಿಂದಿನ ರಾತ್ರಿ ಕುತ್ತಿಗೆಯವರೆಗೂ ಕುಡಿದು; ರಥೋತ್ಸವದ ಹಿಂದಿನ ರಾತ್ರಿ ಹೊಸದಾಗಿ ಸಿದ್ಧಗೊಂಡು; ಸರ್ವಾಲಂಕೃತಗೊಂಡು, ನಾಳೆಯ ಉತ್ಸವಕ್ಕೆ ತಳಿರು ತೋರಣಗಳಿಂದ ಸಿಂಗಾರಗೊಂಡು ಆಕಾಶ ಮುಟ್ಟುವಂತೆ ನಿಂತುಕೊಂಡಿದ್ದ ಕುರುಜು ಎಂಬ ಆ ರಥದ ಮೇಲೆ ತನ್ನ ಒಂಟಿಕಾಲಿನ ನೆರವಿನಿಂದ ಹತ್ತಿ, ರಥದ ಮಧ್ಯಭಾಗದ ಹಲಗೆಯ ಮೇಲೆ 'ಅಲಕ್ ನಿರಂಜನ' ಎಂದು ವಿರಾಜಮಾನನಾಗಿಬಿಟ್ಟ

ಬ್ಬದಡಿಗೆಯ ಹೊಗೆಯ ತೆರದಿ ಹಬ್ಬುತ್ತಲೂ ಹತ್ತಾರು ವರ್ಷಗಳ ಹಿಂದೆ ಸದರಿ ರುಜೆಂಬ ರಥವ ಹಿಡಿದು ನಿಲ್ಲಿಸಿದ್ದ ಹುಡುಗರೆಲ್ಲರೂ ಮುಖಮುಖ ೋಡಿಕೊಳ್ಳಲಾಗಿ; ಕಟಕಟನೆ ಹಲ್ಲು ಕಡಿದುಕೊಳ್ಳಲಾಗಿ

ಸದ್ಯ ಅವರೆಲ್ಲರಿಗೂ ಮದುವೆಗಳಾಗಿ, ಮಕ್ಕಳು ಮರಿಗಳಾಗಿ, ಬಾಳೆಂಬುದು ೂರಾಬಟ್ಟೆಯಾಗಿ, ಹೊಟ್ಟೆಪಾಡು ನಡೆದಿರುವುದೇ ಪವಾಡವೆಂಬಂತಾಗಿರಲಾಗಿ

'ಅಯ್ಯೋ ನಾವೇನೋ ಅವತ್ತು ಬಿಸಿನೆತ್ತರಿನವರು... ಈಗ ನಮ್ಮ ಪಾಡೇ ನಮಗೆ... ಮಗೆ ಆ ಛಾತಿ ಇದ್ದರೆ; ನೀವು ನಂಜನಗೂಡು–ಮೈಸೂರವರೆಗೆ ಹೋಗಿ ಕಾಲೇಜು–ಸ್ತಕ ಮುಟ್ಟಿಬಂದವರಾಗಿದ್ದರೆ; ಅಂಬೇಡ್ಕರರ ಮುಖವಿರುವ ಪೆನ್ನನ್ನು ಜೇಬಿಗೆ ಕ್ಕಿಸಿಕೊಂಡಿರುವುದು ನಿಜವೇ ಆಗಿದ್ದರೆ, ನಮ್ಮನ್ನು ಮುಟ್ಟಿಸಿಕೊಳ್ಳದೆ ಆ ಕುರುಜು ಂದಕ್ಕೆ ಚಲಿಸಕೂಡದು ಎಂಬ ಛಲ ನಿಮ್ಮಲ್ಲಿದ್ದರೆ ತಡೆದು ನಿಲ್ಲಿಸಿ ಈ ರಥವ!' ಂದು ಇದೀಗ ಕಾಲೇಜಿಗೆ ಹೋಗಿಬರುತ್ತಿರುವ ಹೈಕಳನ್ನು ಅಲ್ಲೇ ಬಸ್‌ಸ್ಟ್ಯಾಂಡಿನಲ್ಲೇ ತೆದು ನಿಲ್ಲಿಸಿ ಅವರೆಲ್ಲ ಕೇಳಲಾಗಿ

ಕಿವಿಗೆ ವೈರುಗಳ ಸಿಕ್ಕಿಸಿ ಎಫೆಮ್ಮು ಕೇಳುತ್ತಿದ್ದ ಆ ಹೈಕಳೆಲ್ಲರೂ ಹಾಗೆ ಳಿದವರನ್ನು ಮಿಕಿಮಿಕಿ ನೋಡುತ್ತ 'ನೀವು ಹೇಳಿದ್ದು ಕೇಳಿಸುತ್ತಿಲ್ಲ' ಎಂಬಂತೆ ಕತ್ತು ೆಸಿ, ತಾವು ಕಿವಿಕೊಟ್ಟ ಎಫೆಮ್ಮಿನ ಹಾಡುಗಳಿಗೆ ಕೈಕುಣಿಸುತ್ತ ತಮ್ಮ ತಮ್ಮ ಹಟ್ಟಿಗಳ ಕ್ಕಗೆ ನಡೆದರು ಎನ್ನುವಾಗಲೇ

ಕಾರ್ತೀಕ ಮಾಸದ ಕೊನೆಯ ಸೋಮವಾರದಂದು ಸಿದ್ದೇಶ್ವರಸ್ವಾಮಿಯ ವಸ್ಥಾನದ ಸುತ್ತ ದೇವಸ್ಥಾನದ ಎತ್ತರಕ್ಕೂ ಮಿಗಿಲಾಗಿ ಕಂಗೊಳಿಸುತ್ತಿದ್ದ ಕಟೌಟುಗಳಲ್ಲಿ ಕ್ಷಾತ್ ಶ್ರೀಲಿಂಗಸ್ವಾಮಿಯೇ ರಾರಾಜಿಸುತ್ತಿದ್ದರು. ಊರೊಳಗೆಲ್ಲ 'ಸಿದ್ದೇಶ್ವರಸ್ವಾಮಿಯ ರಪುತ್ರ ಶ್ರೀಲಿಂಗಸ್ವಾಮಿ', 'ರಥ ಮುನ್ನಡೆಸಿದ ವೀರಾಗ್ರಣಿ' ಮುಂತಾಗಿ ಫಲಕಗಳು ೋಷಣೆಗಳನ್ನು ಕೂಗುತ್ತಿದ್ದವು...

ಆರ್ಮುಗನ ಅಂತಿಮ ಪ್ರವೇಶದ ಕಥಾನಕವು

ಆರ್ಮುಗನು ತನ್ನ ಬಲಗಾಲನ್ನು ಕಳೆದುಕೊಂಡಿದ್ದ ಕಥೆಯು ಹೇಗಿತ್ತೆಂದರೆ:

ಅದೊಂದು ದಿನ ಎಂದಿನಂತೆ ಕುಡಿದು ಚಿತ್ತಾಗಿದ್ದ ಆರ್ಮುಗನು ಎಂದಿನಂತೆ ತನ್ನ ೀಕರ ಎದುರು ಬೀಗುತ್ತಿರಲು ಇವನಿಗಿಂತಲೂ ಚಿತ್ತಾಗಿದ್ದ ಇನ್ನೊಬ್ಬನು 'ಲೇ ರ್ಮುಗನೇ, ಅಷ್ಟೆಲ್ಲ ಬೊಂಬಡಾ ಹೊಡಿತೀಯಲ್ಲಾ ನಿನಗೆ ಧೈರ್ಯ ಇದ್ದರೆ ಇಕೋ ಈ ಯರ್ ಬಾಟಲನ್ನು ನಿನ್ನ ಹೀರೋ ಶಂಕರ್‌ನಾಗ್ ಕಾಲತತ್ತಿಗೆ ಹೊಡೆದು ಚೂರಿ ಿಡಿಕೊಳ್ಳುತ್ತಾನಲ್ಲ ಹಾಗೆ ಮಾಡು ನೋಡುವಾ; ಹಾಗೆ ಹೊಡೆದರೆ ಎರಡು ಕ್ವಾಟರು ಗೆ ಫ್ರೀ!' ಎಂದು ಸವಾಲು ಹಾಕಿದನು.

ಶಂಕರ್‌ನಾಗ್ ಹೆಸರು ಎತ್ತಿದೊಡನೆಯೇ ಕುಡಿಯದಿದ್ದರೂ ಟೈಟಾಗುತ್ತಿದ್ದ ಆರ್ಮುಗನು ತನ್ನ ಗೆಳೆಯ ಎಸೆದ ಸವಾಲನ್ನು ಕ್ಯಾಚ್ ಹಿಡಿದು, ಆತ ತೋರಿದ ಬಿಯರ್ ಬಾಟಲಿಯ ಕುತ್ತಿಗೆಯನ್ನು ಹಿಡಿದು, ತನ್ನ ಬಲಗಾಲನ್ನು ಹಿಂದಕ್ಕೆ ಮಡಚಿ ಮೊಣಕಾಲಿಗೆ ಬಾಟಲಿಯನ್ನು ಚಚ್ಚಲು...

ರಣಗಾಯವಾದ ಆರ್ಮುಗನ ಬಲಗಾಲು ವರ್ಷ ಕಳೆದರೂ ವಾಸಿಯಾಗದೆ ಹಾಗೆಯೇ ಕೊಳೆತು ಮಂಡಿಯವರೆಗೆ ಮಾತ್ರ ತನ್ನ ಅಸ್ತಿತ್ವವುಳಿಸಿಕೊಳ್ಳುವಲ್ಲಿ ಸಫಲವಾಯಿತು.

ತನ್ನ ಕಾಲು ಹೋದ ಕಾಲದಿಂದಲೂ ಕುರುಜೋತ್ಸವ ನಡೆಯುವ ತನ್ನ ಅತ್ತೆಯ ಊರನ್ನೇ ಶಾಶ್ವತ ಠಿಕಾಣಿಸ್ಥಾನವನ್ನಾಗಿ ಮಾಡಿಕೊಂಡ ಆರ್ಮುಗನು ಇದೋ ಇದೇ ಊರಿನಲ್ಲಿ ಹುಟ್ಟಿ ಬೆಳೆದವನಿರಬೇಕು ಎಂದು ಕಂಡವರೆಲ್ಲರೂ ಅಂದುಕೊಳ್ಳುವಂತೆ ಕಾಣಲು ಇದ್ದ ಕಾರಣವೇನೆಂದರೆ,

ಈ ಆರ್ಮುಗನು ಆರಂಭದಿಂದಲೂ ತೀಟೆ ತೆಗೆದು ಜಗಳವಾಡುವುದಕ್ಕೂ ಆರು ಕಾಸು ಕೊಟ್ಟರೆ ಆ ಕಡೆ, ಮೂರು ಕಾಸು ಕೊಟ್ಟರೆ ಈ ಕಡೆ ಎಂಬುದಕ್ಕೂ ಹೆಸರುವಾಸಿಯಾಗಿದ್ದವನು. ಯಾರಿಗಾದರೂ ಯಾರ ಮೇಲಾದರೂ ಜಗಳ ತೆಗೆದು ಗಲಾಟೆ ಎಬ್ಬಿಸುವ ಇರಾದೆ ಇದ್ದಲ್ಲಿ ಅಂತಹವರು ಒಂದೆರಡು ಬಾಟಲಿಗಳೊಂದಿಗೂ ನೂರು ರೂಪಾಯಿಗಳೊಂದಿಗೂ ಆರ್ಮುಗನನ್ನು ಭೇಟಿಯಾಗುವುದಿತ್ತು. ಆ ಆರ್ಮುಗ ಸಣ್ಣದೊಂದು ತೀಟೆ ತೆಗೆದು ಜಗಳ ಆರಂಭಿಸಿ ಜನರನ್ನು ಗುಂಪು ಸೇರುವಂತೆ ಮಾಡಿ ಪರಾರಿಯಾಗುವ ಕೆಲಸ ಮಾಡಿದರೆ ಸಾಕಿತ್ತು; ಉಳಿದುದನ್ನು ಜಗಳ ತೆಗೆಸಿದವರು ನೋಡಿಕೊಳ್ಳುತ್ತಿದ್ದರು.

ಹಾಗೆ ಜಗಳಕ್ಕೆ ನಾಂದಿಯಾಡುವ ಕಾಯಕದ ಆರ್ಮುಗನೇ ಮುಂದೆ ತಾನು ಜಗಳ ತೆಗೆದವರು ಎದುರಾದಲ್ಲಿ 'ಬುದ್ಧಿ ನಂಗ ಆವತ್ತು ಗೊತ್ತಾಗ್ಲಿಲ್ಲ; ಯಾವನೋ ಬೋಳಿಮಗ ಕುಡಿಸಿ ಕಳಿಸಿಬುಟ್ಟಿದ್ದ... ಅವನ ಮಾತು ಕೇಳ್ಕಂಡು ಹೇಲು ತಿನ್ನೋ ಕೆಲಸ ಮಾಡ್ಬುಟ್ಟೆ...ತಪ್ಪು ತಿಳೀಬ್ಯಾಡಿ' ಅನ್ನುತ್ತಲೂ 'ಸಾರ್ ನಾನ್ಯಾವತ್ತಾದ್ರೂ ನಿಮ್ಮೊಂದಿಗೆ ಜಗಳ ತೆಗೆದಿದ್ದೆನಾ? ಅವತ್ತೇನೋ ಮಿಸ್ಟೇಕ್ ಆಗ್ಬುಡ್ತು ಸಾರ್.... ಸಾರಿ ಸಾರ್... ನಿಮ್ಮ ಕಾಲನ್ನು ಬೇಕಾದರೂ ಹಿಡಿತೀನಿ' ಎಂದು ನಿಂತಲ್ಲೇ ಕಾಲು ಹಿಡಿಯುತ್ತಲೂ ಅವರನ್ನು ಕಕ್ಕಾಬಿಕ್ಕಿಯಾಗಿಸುತ್ತಿದ್ದನು.

ಅವರು ಹಾಗೆ ತಣ್ಣಗಾಗಿ 'ಹೋಗ್ಲಿಬಿಡು ಆರ್ಮುಗ... ಇನ್ನಾದ್ರೂ ಬುದ್ಧಿ ಕಲಿ' ಅನ್ನುವುದೇ ತಡ 'ಒಂದ್ಹತ್ತು ರೂಪಾಯಿ ಇದ್ರೆ ಹಾಕಿ ಮತ್ತೆ... ನಾಷ್ಟಕ್ಕೆ' ಎಂದು ಅವರ ಹಿಂದೆ ಹಿಂದೆ ಬಿದ್ದು ವಸೂಲಿ ಮಾಡಿಕೊಂಡು ಹಿಂದಿರುಗುತ್ತಿದ್ದನು.

ದಿನವೂ ತಪ್ಪದೆ ಕುಡಿಯುತ್ತಿದ್ದ ಆರ್ಮುಗನು ಸಖತ್ ಟೈಟಾಗುತ್ತಿದ್ದುದು ದಿನ ಬಿಟ್ಟು ದಿನ ಮಾತ್ರ. ಹಾಗೆ ಟೈಟಾದಾಗಲೆಲ್ಲ ತನಗೆ ಅಭ್ಯಾಸವಾಗಿ ಹೋಗಿದ್ದ ತೀಟೆಜಗಳವನ್ನು ಎದುರು ಸಿಕ್ಕಿದವರ ಮೇಲೆಲ್ಲ ಪ್ರಯೋಗಿಸುವುದನ್ನು ಅಭ್ಯಾಸ ಮಾಡಿಕೊಂಡುಬಿಟ್ಟಿದ್ದನು. ಹಾಗೆ ಪ್ರಯೋಗಕ್ಕೊಳಗಾದ ಕೆಲವರು ಪೊಲೀಸ್‌ನವರಿಗೆ ದೂರು ಕೊಟ್ಟು ಆರ್ಮುಗನನ್ನು ಸ್ಟೇಷನ್ನಿಗೆ ಎಳೆದೊಯ್ದರೆ ಅಲ್ಲಿ ಅವನು ಎತ್ತುತ್ತಿದ್ದ ಅವತಾರಗಳು ಎಂತಿದ್ದವೆಂದರೆ...

'ನನ್ನ ಮಗನೇ... ಕುಡ್ದು ರೌಡಿಸಂ ಮಾಡ್ತೀಯಾ? ಒಂದು ಕಾಲು ಇಲ್ಲದಿದ್ರೂ ಎಷ್ಟು ಕೊಬ್ಬು ನಿಂಗೆ... ಇನ್ನೊಂದು ಕಾಲು ನೆಟ್ಟಗಿರ್ಬೇಕೋ ಬೇಡ್ವೋ ಸುವ್ವರ್!' ಎಂತೆಂದು ಪೊಲೀಸರು ಆರ್ಮುಗನ ಜುಟ್ಟು ಹಿಡಿದು ಲಾಠಿಯೇಟು ಕೊಡುತ್ತಲೂ ಎರಡೇ ಏಟಿಗೆ ಕುಂತಲ್ಲೇ ಮಲಮೂತ್ರಾದಿಗಳನ್ನು

ಝುನಾಯಣ

ಕ್ಕೆರಡಾದರೂ ದೃಷ್ಟಿವೊಂದೇ
ಗೇನು? ಮೇಲೇನು? ಸೃಷ್ಟಿವೊಂದೇ
ಲ್ಲರನು ನಮ್ಮೊಳು, ನಮ್ಮೊಳಗೆಲ್ಲರನು
ಣುವುದು ಪ್ರೇಮವೊಂದೇ

ನಬಣ್ಣ ಅಮರಚಿಂತ





KARNATAKA POWER CORPORATION LTD

KPCL

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

KARNATAKA POWER CORPORATION LTD

ಕೆ.ಪಿ.ಸಿ.ಎಲ್: ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ

ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ(ಕವಿನಿನಿ)ವು ನೂತನ ಉಪಕ್ರಮಗಳಿಗೆ ಚಾಲನೆ ನೀಡಿ ಈ ದಿಸೆಯಲ್ಲಿ ಸತತ ಮುಂಚೂಣಿ ಪಾತ್ರವಹಿಸಿರುವ ನಿಗಮ ಸುಮಾರು 6000 ಮೆಗಾವಾಟ್ (ಮೆ.ವಾ) ಸ್ಥಾಪಿತ ಸಾಮರ್ಥ್ಯ ಹೊಂದಿದೆ ಮತ್ತು ರಾಜ್ಯದ ವಿದ್ಯುತ್ ಜಾಲದಲ್ಲಿರುವ ಪ್ರತಿಶತ 63ರಷ್ಟು ಪಾಲು ನಿಗಮದ್ದಾಗಿದೆ. ಪ್ರಸ್ತುತ ನಿಗಮ 34 ಅಣೆಕಟ್ಟುಗಳನ್ನು ಮತ್ತು 0.35 ಮೆ.ವಾ. ನಿಂದ 1720 ಮೆ.ವಾ. ವರೆಗೆ ವಿವಿಧ ಗಾತ್ರದ ಘಟಕಗಳನ್ನು ಹೊಂದಿರುವ 27 ವಿದ್ಯುದಾಗಾರಗಳನ್ನು ಹೊಂದಿದ್ದು ಇವುಗಳು ಕಾರ್ಯಾಚರಣೆಯಲ್ಲಿವೆ. ಇದರಲ್ಲಿ ತಲಾ 210 ಮೆ.ವಾ. ಸಾಮರ್ಥ್ಯದ 7 ಘಟಕಗಳು ಮತ್ತು 8ನೇ ಘಟಕ 250 ಮೆ.ವಾ. ಹೊಂದಿರುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮತ್ತು 500 ಮೆ.ವಾ. ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಕಪ್ಪತ ಗುಡ್ಡದಲ್ಲಿ 4.55 ಮೆ.ವಾ. ಪವನ ಶಕ್ತಿ ಕೇಂದ್ರ ಮತ್ತು ಯಲಹಂಕದಲ್ಲಿ 108ಮೆ.ವಾ. ಸಾಮರ್ಥ್ಯದ ಒಂದು ಡೀಸಲ್ ಕೇಂದ್ರ ಹಾಗು ಕೋಲಾರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಪ್ರತಿ 3ಮೆ.ವಾ. ಸೌರಶಕ್ತಿ ಸ್ಥಾವರಗಳು ಒಳಗೊಂಡಿವೆ.

ನಿಗಮ ಕರ್ನಾಟಕದ ವಿದ್ಯುತ್ ಯೋಜನೆಗಳನ್ನು ನಿರಂತರವಾಗಿ ಅಭಿವೃದ್ಧಿಗೊಳಿಸುವ ಮೂಲಕ ವಿದ್ಯುತ್ ವಲಯದಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿದೆ. ತನ್ನ 42 ವರ್ಷಗಳ ಕಾಲಾವಧಿಯಲ್ಲಿ ಕವಿನಿನಿ ದಾಖಲೆಯ ಸಾಧನೆಗೈದಿರುವುದು ಸಂಸ್ಥೆಯ ಉತ್ಕೃಷ್ಟ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಪ್ರಸಕ್ತ ಕರ್ನಾಟಕ ಸರ್ಕಾರ ಕವಿನಿನಿಗೆ ಗುರುತರ ಜವಾಬ್ದಾರಿಯನ್ನು ವಹಿಸಿರುವ ಕಾರಣ ಮುಂದಿನ ಐದು ವರ್ಷಗಳಲ್ಲಿ ಈ ಹಿಂದೆಂದಿಗಿಂತ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ನ್ನು ಉತ್ಪಾದಿಸುವ ಗುರಿ ಹೊಂದಿದೆ.

* ನಿರ್ಮಾಣದಲ್ಲಿರುವ ಪ್ರಸ್ತುತ ಬಳ್ಳಾರಿ ಶಾಖೊತ್ಪನ್ನ ವಿದ್ಯುತ್ ಕೇಂದ್ರದ 500 ಮೆ.ವಾ. ಸಾಮರ್ಥ್ಯದ 2ನೇ ಘಟಕ, 700 ಮೆ.ವಾ. ಸಾಮರ್ಥ್ಯದ ಬಳ್ಳಾರಿ ಶಾಖೊತ್ಪನ್ನ ವಿದ್ಯುತ್ 3ನೇ ಘಟಕ, ನಾಗಝರಿಯ 15ಮೆ.ವಾ. ಸಾಮರ್ಥ್ಯದ ಆರ್ ಮತ್ತು ಎಂ, ಹಾಗು 8 ಮೆ.ವಾ. ಸಾಮರ್ಥ್ಯದ ಗ್ರಿಡ್ ಸಂಪರ್ಕಿತ ಸೋಲಾರ್ ಫೋಟೋ ವೋಲ್ಟಾಯಿಕ್ ಯೋಜನೆಗಳು.
* ಪ್ರಸ್ತಾಪಿತ ನೂತನ ಜಲ, ಕಲ್ಲಿದಲು ಆಧಾರಿತ ಶಾಖೊತ್ಪನ್ನ . ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಗಳು, ಸೋಲಾರ್ ಫೋಟೋ ವೋಲ್ಟಾಯಿಕ್ ಮತ್ತು ಪವನ ಶಕ್ತಿ ಯೋಜನೆಗಳ ಪೂರ್ವ ಸಿದ್ದತೆ ಮತ್ತು ಸ್ಥಾಪನಾ ಪೂರ್ವ ಕೆಲಸಗಳು ಪ್ರಗತಿಯಲ್ಲಿವೆ. 11ನೇ ಮತ್ತು 12ನೇ ಯೋಜನಾ ಆರಂಭದ ಅವಧಿಯಲ್ಲಿ 9500ಕ್ಕೂ ಅಧಿಕ ಮೆ.ವಾ. ಸಾಮರ್ಥ್ಯವು ರಾಜ್ಯದಲ್ಲಿ ಸ್ಥಾಪನೆಗೊಳ್ಳಲಿದೆ.

ಕವಿನಿನಿ ಪ್ರಪ್ರಥಮ ಬಾರಿಗೆ ಛತ್ತೀಸ್‌ಘಡ ರಾಜ್ಯದಲ್ಲಿ ಅಲ್ಲಿನ ಸರ್ಕಾರದ ಸಹಕಾರದೊಂದಿಗೆ 1200 ಮೆ.ವಾ. ಸಾಮರ್ಥ್ಯದ ಪಿಟ್‌ಹೆಡ್ ಆಧಾರಿತ ಶಾಖೋತ್ಪನ್ನ ಯೋಜನೆಯನ್ನು ಸ್ಥಾಪಿಸಲು ಒಡಂಬಡಿಕೆ ಮಾಡಿಕೊಂಡಿದೆ. ನಿಗಮ ಇತ್ತೀಚೆಗೆ ಯರಮರಸ್ ಮತ್ತು ಯಡ್ಲಾಪುರದಲ್ಲಿ 2400 ಮೆ.ವಾ. ಬಳ್ಳಾರಿಯಲ್ಲಿ 700 ಮೆ.ವಾ. ಸಾಮರ್ಥ್ಯದ 3ನೇ ಘಟಕ ಮತ್ತು ಶಿವನಸಮುದಂನಲ್ಲಿ 5ಮೆ.ವಾ. ಸೌರಶಕ್ತಿ ಫೋಟೋವೋಲ್ಟಾಯಿಕ್ ಸ್ಥಾವರ ಇವುಗಳ ಶಿಲಾನ್ಯಾಸ ನೆರವೇರಿಸಿದೆ. ಈ ಯೋಜನೆಗಳೊಂದಿಗೆ ಘಟಪ್ರಬಾವದಿಂದ 20ಮೆ.ವಾ. ಮುನಿರಾಬಾದ್‌ನಿಂದ 10ಮೆ.ವಾ. ಶಿವನಸಮುದ್ರಂ ಜಲವಿದ್ಯುತ್ ಯೋಜನೆತಿಂದ 345 ಮೆ.ವಾ., ಪವನ ಶಕ್ತಿಯಿಂದ 500 ಮೆ.ವಾ. ಮತ್ತು ತದಡಿ ಅನಿಲ ಆಧಾರಿತ ವಿದ್ಯುತ್ ಸ್ಥಾವರದಿಂದ 2100 ಮೆ.ವಾ ವಿದ್ಯುತ್ ಉತ್ಪಾದಿಸಲು ನಿಗಮ ಯೋಜನೆಗಳನ್ನು ಕೈಗೊಳ್ಳಲಿದೆ. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳ ಘನ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಇಂಧನ ಸಚಿವರ ಉಪಾಧ್ಯಕ್ಷತೆಯಲ್ಲಿ ಕವಿನಿನಿ ತನ್ನ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮುಂದುವರೆದಿದೆ.

ಕರ್ನಾಟಕ ವಿದ್ಯುತ್ ನಿಗಮನಿಯಮಿತ

ಶಕ್ತಿ ಭವನ, ಪ್ರಧಾನ ಕಚೇರಿ ನಂ.82, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001
ದೂರವಾಣಿ: 080-22256568, 22269930-37, ಫ್ಯಾಕ್ಸ್: 080-22252144
Website: www.karnatakapower.com

ಡಿಕೊಳ್ಳುತ್ತಿದ್ದ ಅವನು ಪೊಲೀಸರು ನಿಂತ ಕಾಲಲ್ಲೇ ಹಿಂದಕ್ಕೆ ನೆಗೆಯುವಂತೆ ಡುತ್ತಿದ್ದನು.

'ಎತ್ಹಾಕೋ ಬೋಳಿಮಗ್ನೆ' ಎಂದರೆ,

'ನೀವು ತಾನೇ ಸಾರ್ ಹೇತ್ಕಳೋ ಹಂಗೆ ಹೊಡ್ದಿರೋರು... ನಾನು ಕುಂಟ; ಗವಿಕಲ ಸಾ...ಕೂತ್ಕೊಳ್ಳಾರೆ ನಿಂತ್ಕೊಳ್ಳಾರೆ...ಏನಾದ್ರೂ ಮಾಡ್ಕಳ್ಳಿ ಸಾ...' ಎಂದು ಕ್ಕಷ್ಟು ಮಲಮೂತ್ರಗಳನ್ನು ವಿಸರ್ಜಿಸಿ ಠಾಣೆಯೆಲ್ಲ ಗಬ್ಬುನಾತ ಬೀರುವಂತೆ ಮಾಡಿ ಮ್ಮಳವಾಗಿ ನಿದ್ರೆಗೆ ಜಾರುತ್ತಿದ್ದನು.

ಪೊಲೀಸರು 'ಥೂ! ಈ ಕೊಳಕು ನನ್ನ ಮಗನ್ನ ಎಳ್ಕೊಂಡ್ಹೋಗಿ ಬಿಸಾಕ್ರಿ ಆಚೆ' ನ್ನುತ್ತಿದ್ದರಲ್ಲದೆ ಅವನ ಮೇಲೆ ಮತ್ತೊಂದು ದೂರು ತಂದವರನ್ನು 'ಆ ಹಲ್ಕಾ ನ್ನರ್‌ನ ಬೇಕಾದ್ರೆ ನೀವು ಕತ್ತರಿಸಿ ಹಾಕಿಬಿಡಿ...ನಾವು ನಿಮ್ಮನ್ನೇನೂ ಕೇಳಲ್ಲ... ನಾವು ತ್ರ ಅವನ್ನ ಬೆಂಡ್ ಮಾಡೋಕ್ಕಾಗಲ್ಲ... ಆ ಬೋಳಿಮಗನ್ನ ಮೇಲೆ ಕಂಪ್ಲೇಂಟ್ ಪ್ಲೇಂಟ್ ತರಬೇಡಿ' ಎಂದು ಹೇಳಿ ಕಳುಹಿಸುತ್ತಿದ್ದರು.

ಇಂತೆಲ್ಲ ಪೂರ್ವಪೀಠಿಕೆಗಳನ್ನು ಧರಿಸಿ; ಕಂಕುಳಲ್ಲಿ ಒಂದೇ ಒಂದು ದೊಣ್ಣೆ ಇರಿಸಿ ಅತ್ತೆಯ ಊರ ತುಂಬಾ ಓಡಾಡಿಕೊಂಡಿದ್ದ ಆರ್ಮುಗ ಎಂಬ ಒಕ್ಕಾಲಿನ ಹರಿಜನ ಯ ಅಳಿಯ ಆ ಕಾರ್ತೀಕಮಾಸದ ಕೊನೆಯ ಸೋಮವಾರದ ಹಿಂದಿನ ರಾತ್ರಿ ಗೆಯವರೆಗೂ ಕುಡಿದು; ರಥೋತ್ಸವದ ಹಿಂದಿನ ರಾತ್ರಿ ಹೊಸದಾಗಿ ಸಿದ್ಧಗೊಂಡು; ರ್ವಾಲಂಕೃತಗೊಂಡು, ನಾಳೆಯ ಉತ್ಸವಕ್ಕೆ ತಳಿರು ತೋರಣಗಳಿಂದ ಾರಗೊಂಡು ಆಕಾಶ ಮುಟ್ಟುವಂತೆ ನಿಂತುಕೊಂಡಿದ್ದ ಕುರುಜು ಎಂಬ ಆ ರಥದ ಲೆ ತನ್ನ ಒಂಟಿಕಾಲಿನ ನೆರವಿನಿಂದ ಹತ್ತಿ, ರಥದ ಮಧ್ಯಭಾಗದ ಹಲಗೆಯ ಮೇಲೆ ಕ್ ನಿರಂಜನ' ಎಂದು ವಿರಾಜಮಾನನಾಗಿಬಿಟ್ಟ ಎಂಬ ಸುದ್ದಿ ಬೆಳಗಾಗುವುದರೊಳಗೆ ರಿಗೆಲ್ಲ ಹಬ್ಬಿತು ಎನ್ನುವುದಕ್ಕೂ ಮೊದಲು ಲಿಂಗಾಯಿತರ ಕೇರಿಯಲ್ಲೊಂದು ಾದ ವಾದ-ವಿವಾದ ನಡೆದಿದ್ದು ಅದೇನಾಗಿತ್ತೆಂದರೆ:

'ಹತ್ತಾರು ವರ್ಷಗಳಿಂದಲೂ ಊರಿನಲ್ಲಿ ನಮ್ಮವರೆಲ್ಲ ತಲೆತಗ್ಗಿಸಲು ಕಾರಣವಾಗಿದ್ದ ಜೋತ್ಸವಕ್ಕೆ ಮತ್ತೆ ಗೌರವ ದಕ್ಕಿಸಿಕೊಟ್ಟಿರುವ ಶ್ರೀಲಿಂಗಸ್ವಾಮಿಯವರೇ ನಮ್ಮ ಮುತ್ತಲ ಭಾಗದ ಲಿಂಗಾಯತ ಸಮುದಾಯದ ನಾಯಕರಾಗಿ ರಹೊಮ್ಮಿರುವುದು ಸರ್ವವಿದಿತವಾಗಿಬಿಟ್ಟಿರುವಾಗ, ಈ ಇಡೀ ಉತ್ಸವವನ್ನು ಂತರ ರೂಪಾಯಿಯನ್ನು ನೀರಿನಂತೆ ಹರಿಸಿ ನಡೆಸುತ್ತಿರುವಾಗ, ಹೊಸದಾಗಿ ರ್ಮಿಸಿರುವ ರಥದಲ್ಲಿ ಇಟ್ಟಿರುವ ಪಲ್ಲಕ್ಕಿಯಲ್ಲಿ ಶ್ರೀಲಿಂಗಸ್ವಾಮಿಯವರನ್ನು ಕುಳ್ಳಿರಿಸಿ ವಣಿಗೆ ಮಾಡುವುದು ನಾವು ಅವರಿಗೆ ಸಲ್ಲಿಸುವ ಗೌರವವಾಗಿದೆ...'

-ಎಂಬುದು ಶ್ರೀಲಿಂಗಸ್ವಾಮಿಯವರ ಅನುಯಾಯಿಗಳು, ಅಭಿಮಾನಿಗಳು, ಯಾದಿಗಳು ಇತ್ಯಾದಿಗಳ ವಾದ.

'ಇದೆಲ್ಲಾದರೂ ಉಂಟಾ? ಶ್ರೀಲಿಂಗಸ್ವಾಮಿಯವರು ಈಗ ನಮ್ಮ ಪಾಲಿಗೆ ವ್ಯಕ್ತಿಯೇನೋ ನಿಜ. ಹಾಗೆಂದು ಅವರು ಸಿದ್ದೇಶ್ವರಸ್ವಾಮಿಗಿಂತಲೂ ದೊಡ್ಡವರೆ? ನ ಮೇಲೆ ಶ್ರೀಲಿಂಗಸ್ವಾಮಿಯವರನ್ನು ಕೂರಿಸುವುದೆಂದರೇನು, ಜನ ಆ ರಥವ ಯುವುದೆಂದರೇನು? ಅಭಿಮಾನಕ್ಕೂ ಪ್ರೀತಿಗೂ ಒಂದು ಮಿತಿ ಬೇಡವೆ?'

-ಹೀಗೆಂಬುದು ಲಿಂಗಾಯಿತರ ಪೈಕಿ ಒಂದಿಷ್ಟು ಸ್ವಾಭಿಮಾನವೂ ಇನ್ನೊಂದಿಷ್ಟು ಭವವೂ ಇದ್ದ ಒಂದೆರಡು ಮಂದಿ ಹಿರಿಯರ ವಾದ.

ಆದರೆ ಅಂತಹ ತಲೆಗಳು ಬೆರಳೆಣಿಕೆಯಷ್ಟೇ ಇದ್ದುದರಿಂದ ಹಾಗೂ ಅವರಿಗೂ ಳು-ಮೊಮ್ಮಕ್ಕಳುಗಳೆಲ್ಲ ಇದ್ದು ಅವರಿಗೂ ಮುಂದೆ ಮದುವೆ-ಮುಂಜಿ, ಕೆಲಸ-ರ್ಯಗಳೆಲ್ಲ ಆಗಬೇಕಾಗಿದ್ದುದರಿಂದ ಅವರ ನಾಲಿಗೆಗಳು ಮುಂದೆ ನಿಜ ನುಡಿಯುವ ಾಗಳು ಗೋಚರಿಸಲಿಲ್ಲ...

ಉಪಸಂಹಾರವೆಂಬ ಪ್ರಹಸನವು

ಹಾಗೆ ಮರುದಿನ ಬೆಳಿಗ್ಗೆ ಶ್ರೀಲಿಂಗಸ್ವಾಮಿಯವರನ್ನು ರಥದ ಮೇಲಿನ ಪಲ್ಲಕ್ಕಿಯಲ್ಲಿ ಸಲು ಸರ್ವಸಿದ್ಧತೆಗಳೊಂದಿಗೆ ಸರ್ವರೂ ಸನ್ನದ್ಧರಾಗುತ್ತಿದ್ದಾರೆನ್ನುವಾಗಲೇ ರಥದ ಮುಕ್ಕಾಲು ಭಾಗದ ತುದಿಯನ್ನು ತಲುಪಿಬಿಟ್ಟಿದ್ದ ಆರ್ಮುಗಂ ಅಲ್ಲೇ ತನ್ನ ನ ನಿತ್ಯಕರ್ಮಗಳನ್ನು ಪೂರೈಸಿ ಆ ರಥಕ್ಕೆ ಸಿಂಗರಿಸಿದ್ದ ಹೊಚ್ಚ ಹೊಸ ಗಳಿಂದಲೇ ತನ್ನ ಹಿಂಭಾಗ-ಮುಂಭಾಗಗಳೆಲ್ಲವನ್ನು ಸ್ವಚ್ಛಗೊಳಿಸಿ; ಮತ್ತೊಮ್ಮೆ ಮೂತ್ರ ವಿಸರ್ಜಿಸಿ ಅದೆಲ್ಲವೂ ಕೆಳಗಿನ ಪಲ್ಲಕ್ಕಿಯ ಹಲಗೆಗಳನ್ನೆಲ್ಲ ಅಲಂಕರಿಸಿ ದ ಕಣ್ಣುಗಳನ್ನೂ ಕುಕ್ಕತೊಡಗುವಂತೆ ಶೋಭಿಸುತ್ತಿರಲು

ಸರಿಸುಮಾರು ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆಲ್ಲ ಊರ ಮಧ್ಯಭಾಗದ ಆ ಾಸದಲ್ಲಿ ಕಂಡುಬಂದ ದೃಶ್ಯವೇನೆಂದರೆ...

ಕೆಳಗೆ ಊರಿನ, ಪರವೂರಿನ ಸಮಸ್ತ ಜನಾಂಗಗಳ ಸಮಸ್ತ ಪರಿವಾರವೂ

ಮೇಲೆ; ಸರ್ವಾಲಂಕೃತಗೊಂಡ ರಥದ ತುದಿಯಲ್ಲಿ ತನ್ನ ಒಂಟಿಕಾಲು ಅಲ್ಲಾಡಿಸುತ್ತ ವಿರಾಜಮಾನನಾಗಿರುವ ಆರ್ಮುಗನೆಂಬ ಆಸಾಮಿಯೂ.

"ನಿನಗೇನು ಬೇಕಪ್ಪಾ ಆರ್ಮುಗ?" ಎಂದರು ಮುಖಂಡರು ಕೆಳಗಿನಿಂದ ಕತ್ತೆತ್ತಿ.

" ನಂಗಾ? ನಂಗೆ ಶ್ರೀಲಿಂಗಸ್ವಾಮಿಯವರು ಬೇಕು... ಕರೆಸಿ" ಎಂದನು ಆರ್ಮುಗ ಬಗ್ಗಿ ನೋಡದೆ ಆಕಾಶ ನೋಡುತ್ತಾ.

"ಆಯ್ತು ಸಾಹೇಬ್ರು ಬತ್ತಾರೆ... ನೀನು ಕೆಳಕ್ಕೆ ಇಳಿ...ನೀನು ಕೇಳಿದ್ದು ಕೊಡಿಸೋಣ... ರಥೋತ್ಸವಕ್ಕೆ ಲೇಟಾಗುತ್ತೆ"

"ಇನ್ನೆಂಥದಯ್ಯಾ ರಥೋತ್ಸವ? ಒಬ್ಬ ಕೀಳುಜಾತಿಯವ್ನು ಕುರುಜು ಹತ್ತಿ ಕುಂತು ಅದರ ಮೇಲೆ ಹೇತ ಮೇಲೆ ಕುರುಜು ಹೊಲಸಾಗ್ಹೋಯ್ತು... ಅದನ್ನು ಶುದ್ಧೀಕರಿಸದೆ ಎಂಥ ರಥೋತ್ಸವ? ನೀವೆಲ್ಲ ಹೊಟ್ಟೆಗೆ ಏನು ತಿಂತೀರಿ?" ಎಂದರು ಸಿಡಿಮಿಡಿಗೊಂಡ ಒಂದಿಬ್ಬರು ಹಿರಿಯರು.

" ಈ ಸೂಳೆಮಕ್ಕಳ್ನು ಆಗಿನ್ ಕಾಲದಿಂದ್ಲೂ ಇದೇ ಆಗ್ಹೋಯ್ತು... ಏನಾದ್ರೂ ಒಳ್ಳೆ ಕಾರ್ಯ ಮಾಡ್ಬೇಕಾದ್ರೂ ಹಿಂಗೇ ಮಾಡ್ತಾರೆ... ಇವರನ್ನೆಲ್ಲ ಸುಮ್ನೆ ಬಿಟ್ಟಿದ್ದೇ ತಪ್ಪಾಯ್ತು... ಎಳೆದ್ಹಾಕ್ರೋ ಆ ಲೋಫರ್‌ನ...!' ಎಂದರು ಇನ್ನೊಂದಿಬ್ಬರು.



ಶ್ರೀ ಡಿ.ವಿ. ಸದಾನಂದ ಗೌಡ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮಳೆ ನೀರು ಸಂಗ್ರಹಿಸಿ

ನೀರಿನ ಅಭಾವ ತಪ್ಪಿಸಿ

ಶ್ರೀ ಎಸ್. ಸುರೇಶ್ ಕುಮಾರ್
ಮಾನ್ಯ ಬೆಂಗಳೂರು ಜಲಮಂಡಳಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳು,
ನಗರಾಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಭಾರತದಲ್ಲೇ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ನಗರಗಳಲ್ಲಿ ಬೆಂಗಳೂರು ಒಂದು. ಬೃಹದಾಕಾರವಾಗಿ ಬೆಳೆಯುತ್ತಿರುವ ಈ ಬೃಹತ್ ಬೆಂಗಳೂರಿಗೆ ನೀರೊದಗಿಸುವುದು ಬೆಂಗಳೂರು ಜಲಮಂಡಲಿಗೆ ಸವಾಲಾಗಿದೆ. ದೂರದ ಕಾವೇರಿ ನದಿಯಿಂದ ಎತ್ತರದ ಉದ್ಯಾನನಗರಿಗೆ ನೀರಿನ ಪೂರೈಕೆ ಮಾಡಲು ಅತ್ಯಂತ ಶ್ರಮವಹಿಸಲಾಗುತ್ತಿದೆ. ನೀರಿನ ಅಭಾವವನ್ನು ತಪ್ಪಿಸಲು ನಮಗೆ ಉಳಿದಿರುವ ಪರ್ಯಾಯ ಮಾರ್ಗವೆಂದರೆ ಮಳೆ ನೀರು ಕೊಯ್ಲು ಪದ್ಧತಿ. ಈ ವಿಧಾನವನ್ನು ಅಳವಡಿಸುವ ಮೂಲಕ ಮಳೆ ನೀರು ಸಂಗ್ರಹಣೆ ಮತ್ತು ಅದರ ಪುನರ್‌ಬಳಕೆ ಮಾಡಬಹುದಾಗಿದೆ.

ಮಳೆ ಕೊಯ್ಲು ಒಂದು ಸರಳ, ಮಿತವ್ಯಯ ಮತ್ತು ಪರಿಸರಸ್ನೇಹಿ ವಿಧಾನವಾಗಿದ್ದು, ಭೂಮಿಗೆ ಬೀಳುವ ಪ್ರತಿ ಹನಿಯನ್ನೂ ಸಂರಕ್ಷಿಸಬಹುದಾಗಿದೆ. ನಿಮ್ಮ ಮನೆಯ ತಾರಸಿ ಮೇಲೆ ಬೀಳುವ ಮಳೆ ನೀರನ್ನು ಸಂಗ್ರಹಿಸಿ ಪುನರ್ ಬಳಸಬಹುದು. ಅಥವ ಕೊಳವೆ ಬಾವಿ ಮರುಪೂರಣ ಮಾಡಬಹುದು. ಹಾಗೂ ಭೂಮಿಯಲ್ಲಿ ಇಂಗಿಸಿ ಅಂತರ್ಜಲದ ಮಟ್ಟವನ್ನು ಹೆಚ್ಚಿಸಬಹುದು.

ಇದು ಕೇವಲ ಒಬ್ಬಿಬ್ಬರಿಂದ ಆಗುವ ಕೆಲಸವಲ್ಲ, ಬದಲಿಗೆ ನಗರದ ಪ್ರತಿಯೊಬ್ಬರೂ ಮಳೆ ನೀರು ಕೊಯ್ಲು ವಿಧಾನವನ್ನು ತಮ್ಮ ಮನೆಯ ಕಟ್ಟಡಗಳಿಗೆ ಅಳವಡಿಸಿಕೊಳ್ಳಬೇಕಿದೆ. ಬನ್ನಿ, ಎಲ್ಲರೂ ಒಂದಾಗಿ ಇಂದೇ ಮಳೆ ಕೊಯ್ಲು ವಿಧಾನವನ್ನು ಯಶಸ್ವಿಗೊಳಿಸೋಣ. ಆ ಮೂಲಕ ನಿಸರ್ಗದತ್ತವಾದ ಅತ್ಯಮೂಲ್ಯ ಮಳೆ ನೀರನ್ನು ಸಂಗ್ರಹಿಸಿ ನಾಳೆ ಎದುರಾಗಲಿರುವ ಜಲಕ್ಷಾಮವನ್ನು ತಪ್ಪಿಸೋಣ...

ನೀರನ್ನು ಮಿತವಾಗಿ ಬಳಸಿ



ಪ್ರಯೋಜನಗಳು

- ಜಲ ಮೂಲವನ್ನು ವೃದ್ಧಿಸಿಕೊಳ್ಳಬಹುದು
- ಬಾವಿಗಳು ಮತ್ತು ಕೊಳವೆ ಬಾವಿಗಳ ನೀರಿನ ಮಟ್ಟದಲ್ಲಿ ಹೆಚ್ಚಳ
- ಅಂತರ್ಜಲದ ಗುಣಮಟ್ಟವನ್ನು ಸುಧಾರಿಸಬಹುದು
- ಭವಿಷ್ಯದಲ್ಲಿ ಉದ್ಭವಿಸುವ ಜಲಕ್ಷಾಮವನ್ನು ತಪ್ಪಿಸಬಹುದು
- ಮಣ್ಣಿನ ಸವೆತ ಮತ್ತು ರಸ್ತೆಗಳು ಹದಗೆಡುವುದನ್ನು ತಡೆಗಟ್ಟಬಹುದು.

ಪಿ.ಬಿ. ರಾಮಮೂರ್ತಿ, ಐ.ಎ.ಎಸ್
ಅಧ್ಯಕ್ಷರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009. ದೂ: 22945100, 22945114, 22238888

ಹನಿ ನೀರು ಉಳಿಸಿ – ಮಳೆ ನೀರು ಬಳಸಿ

ಅವನನ್ನು ಆಂತು ನೋಡಿ ನೋಡಿ ಕತ್ತು ನೋವು ಬಂದಿದ್ದ ಶ್ರೀಲಿಂಗಸ್ವಾಮಿಯವರು "ನಂಗೆ ಎಲ್ಲಾ ಜನಾನೂ ಒಂದೇ ಕಣಪ್ಪಾ...ನಿಂಗೇನು ಬೇಕೋ ಅದೆಲ್ಲ ಮಾಡ್ಸೋಣ ಬಾ... ದೇವರ ಕೆಲಸಕ್ಕೆ ಅಡ್ಡಿ ಮಾಡ್ಬಾರ್ದು..." ಎಂದು ಕೈ ಮುಗಿದರು.



"ನೀವೇನು ಸ್ವಾಮಿ ಎಳೆದ್ದಾಕೋದು? ನಾನೇ ಮೇಲಿಂದ ನೆಗೆದು ಬೀಳ್ತೀನಿ ಜೈಶ್ರೀಲಿಂಗಸ್ವಾಮಿ ಅಂತ!" ಎಂದ ಆರ್ಮುಗ ತನ್ನ ಒಂಟಿ ಕಾಲು ಎಣಿಸಿದನು.

"ಹೇ ಹೇ ಹಂಗೆಲ್ಲ ಮಾಡ್ಬೇಡ ಕಣಯ್ಯ! ಆಯ್ತು ಸಾಹೇಬ್ರನ್ನ ಕರಿಸ್ತೀವಿ... ಅಲ್ಲೇ ಇರು..." ಎಂದು ಕೆಲವರು ಕೂಗಿಕೊಂಡವರೇ ಶ್ರೀಲಿಂಗಸ್ವಾಮಿಯವರ ಮನೆಯತ್ತ ಓಡುತ್ತಲೂ ಕಾರಿನಿಂದ ಬಂದಿಳಿದ ಶ್ರೀಲಿಂಗಸ್ವಾಮಿಯವರು ಎಲ್ಲರಿಗೂ ಕೈಮುಗಿದರು; "ಏನಪ್ಪಾ ನಿನ್ನ ಪ್ರಾಬ್ಲಂ? ಏನಾಗ್ಬೇಕು?" ಅಂದರು ಕತ್ತೆತ್ತಿ ಆರ್ಮುಗನತ್ತ.

"ಹಲೋ ಸಾರ್... ನಮಸ್ಕಾರ... ನಾನು ನಿಮ್ಮನ್ನ ನೀವು ಡ್ರೈರಿಲಿದ್ದಾಗಿಂದ್ಲೂ ನೋಡಿದ್ದೀನಿ ಸಾರ್... ನಾವಿಬ್ರೂ ಎಷ್ಟೋ ಸಲ ಒಟ್ಟಿಗೇ ಟೀ ಕುಡ್ದಿದ್ದೀವಿ ಸಾರ್... ಮರ್‍ತುಹೋಯ್ತಾ ಸಾರ್?" ಎಂದ ಆರ್ಮುಗ ಮೇಲಿನಿಂದ ಕೈಯಾಡಿಸುತ್ತಾ.

"ಆಯ್ತಯ್ತು... ಈಗ ನಿಂಗೇನಾಗ್ಬೇಕು ಹೇಳಪ್ಪ...ಹಿಂಗೆಲ್ಲ ಮಾಡೋದು ತಪ್ಪಲ್ವಾ?"

"ಸಾರ್ ನಂಗೇನೂ ಬ್ಯಾಡ ಸಾರ್... ನಮ್ಮ ಅತ್ತೆಯವರಿಗೆ ಒಂದು ಮನೆ ಬೇಕು ಸಾರ್... ನನ್ನ ಬಾಮ್ಮೈದ ಡಿಗ್ರಿ ಓದಿದಾನೆ ಸಾರ್, ಅವನಿಗೊಂದು ಕೆಲ್ಸ ಕೊಡ್ಸಿ ಸಾರ್..." ಎಂದು ಆರ್ಮುಗಂ ಕೂಗು ಹಾಕುತ್ತಲೂ ಸಮಸ್ತ ಪರಿವಾರವೂ ಗೊಳ್ಳೆನ್ನಲು ಶ್ರೀಲಿಂಗಸ್ವಾಮಿಯವರು ಮುಗುಳ್ನಕ್ಕರು ಹಾಗೂ "ಅಷ್ಟೇ ತಾನೇ? ಇವತ್ತೇ ಮಾಡಿಸಿಕೊಡ್ತೀನಿ ಬಾಪ್ಪಾ" ಎಂದರು.

"ಅಷ್ಟೇ ಅಲ್ಲ ಸಾರ್... ನೀವು ಮಿನಿಷ್ಟರ್ ಮನೆ ಸೇರ್‍ಕೊಂಡ ಮೇಲೆ ನಮ್ಮ ಜನಗಳ್ಗೆ ಏನ್ ಮಾಡ್ಸಿದರಿ ಸಾರ್? ನಿಮ್ಮ ನಿಮ್ಮವರಿಗೇ ಮಾಡಿಕೊಟ್ಟಿದ್ದೀರಿ...ಈಗ ಈ ಕುರುಜೂ ನಿಮ್ಮವ್ರದೇ ತಾನೆ? ನಾವೆಲ್ಲ ದುಡ್ಡು ಕೊಟ್ರೆ ನಾವೂ ಕುರುಜು ಎಳೀಬೇಕಾಗ್ತದೆ ಅಂತ ನೀವೊಬ್ರೆ ದುಡ್ಡು ಹಾಕಿದ್ದೀರಿ ಅಲ್ವಾ ಸಾರ್? ನಮ್ಗೆ ಬೇಕಾಗಿಲ್ದೆ ಇರೋ ಕುರುಜಿಗೆ ಇಪ್ಪತ್ತು ಲಕ್ಷ ಅಂದ್ರೆ ಏನ್ಸಾ? ನಮಗೆಲ್ಲ ಎಷ್ಟು ಮನೆ ಬತ್ತಿದ್ವೋ ಏನೋ? ನಮ್ಮ ಷಡ್‌ಗಳ ನೋಡಿದೀರಾ ಸಾ ನೀವು..." ಎಂದೆಲ್ಲ ಆರ್ಮುಗಂ ಮೇಲ್ತುದಿಯಿಂದ ಕಿರುಚಿಕೊಳ್ಳುತ್ತಿರುವಾಗಲೇ ಅವನನ್ನು ಆಂತು ನೋಡಿ ನೋಡಿ ಕತ್ತು ನೋವು ಬಂದಿದ್ದ ಶ್ರೀಲಿಂಗಸ್ವಾಮಿಯವರು "ನಂಗೆ ಎಲ್ಲಾ ಜನಾನೂ ಒಂದೇ ಕಣಪ್ಪಾ...ನಿಂಗೇನು ಬೇಕೋ ಅದೆಲ್ಲ ಮಾಡ್ಸೋಣ ಬಾ... ದೇವರ ಕೆಲಸಕ್ಕೆ ಅಡ್ಡಿ ಮಾಡ್ಬಾರ್ದು..." ಎಂದು ಕೈ ಮುಗಿದರು.

ಇವೆಲ್ಲ ನಡೆಯುತ್ತಿರುವ ಹೊತ್ತಿನಲ್ಲೇ ಹಿಂಬದಿಯಿಂದ ಸದ್ದಿಲ್ಲದೆ ರಥವನ್ನೇರಿದ ಒಂದಿಬ್ಬರು ಪೊಲೀಸರು ಹಾಗೂ ಮತ್ತೊಂದಿಬ್ಬರು ಆರ್ಮುಗ ಕುಳಿತಿದ್ದ ಜಾಗ ತಲುಪಿ ಹಿಂದಿನಿಂದ ಅವನನ್ನು ಗಪ್ಪನೆ ಹಿಡಿದುಕೊಂಡರು ಎಂಬಲ್ಲಿಂದ

ರಥದ ಶುದ್ಧೀಕರಣ ಕಾರ್ಯಗಳೆಲ್ಲವೂ ಮುಗಿದ ಮೇಲೆ, ಪೂಜೆ ಪುನಸ್ಕಾರಗಳನ್ನು ಮಾಡಿಯಾದ ಮೇಲೆ ರಥೋತ್ಸವ ಆರಂಭಗೊಂಡಿತು...

ಶ್ರೀಲಿಂಗಸ್ವಾಮಿಗಳು ಯಾರು ಏನೆಂದರೂ ಪಲ್ಲಕ್ಕಿಯನ್ನೇರಲು ಸುತಾರಾಂ ಒಪ್ಪದೆ ಆರ್ಮುಗನ ಹೆಗಲ ಮೇಲೆ ಕೈಯಿಟ್ಟರು; ಐನೂರರ ಹತ್ತಾರು ನೋಟುಗಳನ್ನು ಮಡಚಿ ಅವನ ಜೇಬಿನಲ್ಲಿಟ್ಟರು. ತಾವೇ ತಮ್ಮ ಕೈಯಾರೆ ರಥದ ಹಗ್ಗವನ್ನು ಸಾಂಕೇತಿಕವಾಗಿ ಎಳೆದು, ಎಲ್ಲರಿಗೂ ಕೈಮುಗಿದು ಕಾರು ಏರಿದರು.

'ಶ್ರೀ ಸಿದ್ದೇಶ್ವರಸ್ವಾಮಿಗೆ ಜಯವಾಗಲಿ', 'ಶ್ರೀಲಿಂಗಸ್ವಾಮಿಗಳಿಗೆ ಜಯವಾಗಲಿ' ಎಂಬ ಘೋಷಣೆಗಳೆರಡೂ ಒಂದೇ ತೆರನಾಗಿ ಜನರಿಗೆಲ್ಲ ಕೇಳಿಸಲಾಗಿ... ರಥದೊಡಲನ್ನು ಅಲಂಕರಿಸಿದ್ದ ಸಣ್ಣ ಸಣ್ಣ, ಬಣ್ಣ ಬಣ್ಣದ ವಸ್ತ್ರಗಳೆಲ್ಲ ಐನೂರು–ಸಾವಿರ ರೂಪಾಯಿಗಳ ನೋಟುಗಳ ಹಾಗೆ ಅಲ್ಲಿದ್ದ ಜನರಿಗೆಲ್ಲ ಗೋಚರಿಸಲಾಗಿ...

ಕಥಾನಕವೆಲ್ಲದರ ಕೊನೆಯ ತುಣುಕು

ಅಪಾರ ಜನಜಂಗುಳಿಯ ನಡುವೆ ಮೂರು ಗಂಟೆ ತಡವಾಗಿ ಆರಂಭಗೊಂಡು ಸಾಗಿದ ರಥೋತ್ಸವದ ನಡುವೆ ಒಂದು ದೊಣ್ಣೆ ಹಾಗೂ ಒಂದು ಕಾಲಿನ ಸಹಾಯದಿಂದ ಟೈಟಾಗಿ ನಡೆಯುತ್ತಿದ್ದ ಆರ್ಮುಗನ ಒಂಟಿ ಕಾಲಿಗೆ ಅವನು ಹಿಡಿದಿದ್ದ ದೊಣ್ಣೆಯನ್ನೇ ಅಡ್ಡಲಾಗಿ ಕೊಟ್ಟು ರಥದ ಹಿಂದಿನ ಚಕ್ರಕ್ಕೆ ನೇರವಾಗಿ ಬೀಳಿಸಲಾಯಿತು ಹಾಗೂ 'ಶ್ರೀಲಿಂಗಸ್ವಾಮಿಯವರಿಗೆ ಜಯವಾಗಲಿ' ಎಂಬ ಘೋಷದೊಂದಿಗೆ ಮತ್ತಷ್ಟು ಹುಮ್ಮಸ್ಸಿನಿಂದ ರಥವನ್ನು ವೇಗವಾಗಿ ಎಳೆಯಲಾಯಿತು.

ಮಂಜುನಾಥ್‌ಲತಾ

ಮೈಸೂರು ಜಿಲ್ಲೆಯ ತಗಡೂರಿನವರು. ವೃತ್ತಿಯಿಂದ ಹವ್ಯಾಸಿ ಪತ್ರಕರ್ತ; ಕಲಾವಿದ. 'ಸಕಾಲ', 'ಕನ್ನಡ ಟೈಮ್ಸ್', 'ಉಷಾ ಕಿರಣ', ಮುಂತಾದ ಪತ್ರಿಕೆಗಳಲ್ಲಿ ಸಹ ಸಂಪಾದಕರಾಗಿ, ಉಪಸಂಪಾದಕರಾಗಿ ದುಡಿದ ಅನುಭವ. 'ತೆಂಕಲಕೇರಿ', 'ಸನ್ ಆಫ್ ಸಿದ್ದಪ್ಪಾಜಿ' (ಕಥಾ ಸಂಕಲನಗಳು), 'ಪರದೇಸಿ ಮಗನ ಪದವು', 'ಆಹಾ ಅನಿಮಿಷ ಕಾಲ' (ಕವನ ಸಂಕಲನಗಳು),'ಪಲ್ಲಂಗ' (ಕಾದಂಬರಿ), 'ತರಾವರಿ' (ಲೇಖನಗಳು) –ಪ್ರಕಟಿತ ಕೃತಿಗಳು.



ಇಸ್ಲಾಂ ಇಲ್ಲದ ಜಗತ್ತು ಹೇಗಿರುತ್ತಿತ್ತು?



ಆಂಗ್ಲ ಮೂಲ: **ಅಸ್ಗರ್ ಅಲಿ ಎಂಜಿನಿಯರ್**
ಕನ್ನಡಕ್ಕೆ : **ಹಸನ್ ನಯೀಂ ಸುರಕೋಡ**

ಇತ್ತೀಚೆಗೆ ಅಮೇರಿಕನ್ ವಿದ್ವಾಂಸ ಗ್ರಾಹಂ. ಇ. ಫುಲರ್ ಅವರ A World Without Islam ಎನ್ನುವ ಪುಸ್ತಕ ಪ್ರಕಟಗೊಂಡಿದೆ. ಗ್ರಾಹಂ ಫುಲರ್ ಒಬ್ಬ ವಿದ್ವಾಂಸರಾಗಿದ್ದು ದೀರ್ಘ ಕಾಲದವರೆಗೆ CIA ದಲ್ಲಿ ಸೇವೆ ಸಲ್ಲಿಸಿದ್ದಾರೆ. ಇದೊಂದು ಕುತೂಹಲಕರ ಪುಸ್ತಕ, ಅಷ್ಟೇ ಅಲ್ಲ ತುಂಬ ವಿದ್ವತ್ ಪೂರ್ಣವಾಗಿದೆ. ಇದು ಓದಲರ್ಹವಾದದ್ದು. ಇಸ್ಲಾಂ ಇದ್ದಿರದಿದ್ದರೂ ಜಗತ್ತು ಹಿಂಸೆ ಹಾಗೂ ಯದ್ಧರಹಿತವಾಗಿರುತ್ತಿರಲಿಲ್ಲ ಎನ್ನುವುದು ಗ್ರಂಥಕರ್ತನ ವಾದ. ಇಸ್ಲಾಂ ಅಸ್ತಿತ್ವಕ್ಕೆ ಬರುವ ಎಷ್ಟೋ ಮೊದಲು ನಡೆದ ಅನೇಕ ಯದ್ಧಗಳನ್ನು ಅವರು ಬಣ್ಣಿಸಿದ್ದಾರೆ.

ಅದೇನೇ ಇರಲಿ ನಾನು ಇಲ್ಲಿ ಫುಲರ್ ಅವರ ಪುಸ್ತಕದ ವಿಷಯ ಕುರಿತು ಚರ್ಚಿಸುತ್ತಿಲ್ಲ. ಪುಸ್ತಕದ ಪರಿಕಲ್ಪನೆಯೇ ತೀರ ಕುತೂಹಲಕರವಾಗಿದೆ. ನಾನು ಅದನ್ನು ಬೇರೊಂದು ವಿಧದಲ್ಲಿ ಚರ್ಚಿಸಬಯಸುತ್ತೇನೆ. ತಮ್ಮ ಮಾಧ್ಯಮಗಳ ಮೂಲಕ ಪಾಶ್ಚಾತ್ಯ ಶಕ್ತಿಗಳು, ಇಸ್ಲಾಂ ಹಿಂಸೆಯಲ್ಲಿ ನಂಬಿಕೆ ಇರಿಸಿದ್ದು ಜಿಹಾದ್ ಒಂದು ಧಾರ್ಮಿಕ ಕರ್ತವ್ಯ, ಹಾಗಾಗಿ ಆಧುನಿಕ ಜಗತ್ತಿನಲ್ಲಿನ ಹಿಂಸೆಗೆ ಇಸ್ಲಾಂ ಕಾರಣ; ಇಸ್ಲಾಮನ್ನು ಅಂಕೆಯಲ್ಲಿರಿಸಬೇಕಾದರೆ ಇಲ್ಲಾ ಅದು ಅಸ್ತಿತ್ವಕ್ಕೆ ಬರದಿರುತ್ತಿದ್ದರೆ ಜಗತ್ತಿನಲ್ಲಿ ಹಿಂಸೆಯೇ ಇರುತ್ತಿರಲಿಲ್ಲವೆಂದು ವಾದಿಸುತ್ತಲಿವೆ. ಇದು ಹಾಸ್ಯಸ್ಪದವಾಗಿದ್ದರೂ ಅನೇಕ ಪಾಶ್ಚಾತ್ಯ ವಿದ್ವಾಂಸರು ಅದನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ನಿಜಕ್ಕೂ ಈ ಪುಸ್ತಕ ಅವರ ಕಣ್ಣು ತೆರೆಸಬಲ್ಲದು.

ಆದರೆ ನಾನು ಈ ಚಿಂತನೆಯನ್ನು ಬೇರೆ ರೀತಿಯಲ್ಲಿ ವಿಶ್ಲೇಷಿಸುವ ಉದ್ದೇಶ ಹೊಂದಿದ್ದೇನೆ. ಇಸ್ಲಾಂ ಅಸ್ತಿತ್ವಕ್ಕೆ ಬರದಿರುತ್ತಿದ್ದರೆ ನಮ್ಮ ಜಗತ್ತು ಏನನ್ನು ಕಳೆದುಕೊಳ್ಳಬಹುದಿತ್ತು? ಇಸ್ಲಾಂ ಇಲ್ಲದೆ ನಮ್ಮ ಜಗತ್ತು ಇನ್ನೂ ಒಳ್ಳೆಯದಾಗಬಹುದಿತ್ತೆ ಇಲ್ಲಾ ಕೆಟ್ಟಿರುತ್ತಿತ್ತೆ? ಹಿಂದೂ ಧರ್ಮ, ಬೌದ್ಧ ಧರ್ಮ ಹಾಗೂ ಕ್ರಿಶ್ಚಿಯನ್ ಧರ್ಮ ಮುಂತಾದ ಇತರ ಧರ್ಮಗಳಿಗೂ ಇದು ಅನ್ವಯಿಸುತ್ತದೆ ಎನ್ನುವುದನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ.

ಪ್ರತಿಯೊಂದು ಧರ್ಮ ನೀತಿಶಾಸ್ತ್ರ, ನೈತಿಕತೆ, ಸೃಜನಶೀಲ ಕಲೆಗಳು ಹಾಗೂ ಆಧ್ಯಾತ್ಮಿಕತೆ ಕ್ಷೇತ್ರಗಳಲ್ಲಿ ನಮ್ಮ ಜಗತ್ತನ್ನು ಶ್ರೀಮಂತಗೊಳಿಸುವಲ್ಲಿ ಸಾಕಷ್ಟು ಕೊಡುಗೆ ನೀಡಿದೆ. ಬೇರೆ ವಿಧದಲ್ಲೇ ಆದರೂ ಇಸ್ಲಾಂ ಸಹ ಈ ಕ್ಷೇತ್ರಗಳಲ್ಲಿ ಅರ್ಥಪೂರ್ಣ ಕೃಷಿ ಮಾಡಿದೆ. ನೀತಿಶಾಸ್ತ್ರ ಹಾಗೂ ನೈತಿಕತೆಯ ವಿಷಯವಾಗಿ ನ್ಯಾಯ ಹಾಗೂ ಸಮಾನತೆಯ ಪರಿಕಲ್ಪನೆ ಇಸ್ಲಾಮಿನ ಅತ್ಯಂತ ಮಹತ್ವದ ಕೊಡುಗೆಯಾಗಿದೆ. ಎರಡೂ ಇಸ್ಲಾಮಿನ ತಿರುಳಾಗಿವೆ. ಕುರ್‌ಆನ್ ನ್ಯಾಯವನ್ನು ದೈವ ಭಕ್ತಿ ಹಾಗೂ ಪ್ರಾರ್ಥನೆಯ ವಿಧಿಗೆ ಸಮಾನಗೊಳಿಸಿದ್ದು, ಯಾವನೇ ಆಗಲಿ ನ್ಯಾಯವಂತನಾಗದೆ ದೈವ ಭಕ್ತನಾಗಲಾರನು, ತನ್ನ ಸ್ವಂತ ಹಿತಾಸಕ್ತಿ ಇಲ್ಲಾ ತನ್ನ ಆಪ್ತರಿಗೆ ವಿರುದ್ಧವಾಗಿದ್ದರೂ ಅವನು ನ್ಯಾಯವನ್ನು ಪಾಲಿಸತಕ್ಕದ್ದು ಎಂದು ವಿಧಿಸಿದೆ.



ಇಸ್ಲಾಂ ನಿಸ್ಸಂದೇಹವಾಗಿ ಆಧ್ಯಾತ್ಮಿಕ ಧರ್ಮವಾಗಿತ್ತು. ಅದು ಬರಿ ಆಧ್ಯಾತ್ಮಿಕ ಧರ್ಮವಾಗಿರಲಿಲ್ಲ. ಅದಕ್ಕಿಂತಲೂ ಹೆಚ್ಚಿನದಾಗಿತ್ತು. ಜಗತ್ತಿನಲ್ಲಿ ಒಂದು ನ್ಯಾಸಮ್ಮತ ವ್ಯವಸ್ಥೆಯನ್ನು ಸ್ಥಾಪಿಸಲು ಅದು ಪ್ರಯತ್ನಿಸಿತು. ಅರಸೊತ್ತಿಗೆ ಹಾಗೂ ಪಾಳೇಗಾರಿ ವ್ಯವಸ್ಥೆಯ ವಿದ್ಯಮಾನಗಳಿಂದಾಗಿ ಕೆಲವು ವಿಕೃತಿಗಳು ಘಟಿಸಿದರೂ ಇಸ್ಲಾಂ ಒಂದು ನೈತಿಕ ವ್ಯವಸ್ಥೆಯಾಗಿ ಬೇರೆ ಮಾರ್ಗಗಳ ಮೂಲಕ, ವಿಶೇಷವಾಗಿ ಸೂಫಿ ಸಂಪ್ರದಾಯದ ಮೂಲಕ ತನ್ನತನವನ್ನು ಮೆರೆಯಿತು.

ಎಲ್ಲ ಆಸ್ತಿಕರು ಪರಸ್ಪರರ ಸಹೋದರರು, ಸಕಲ ಮಾನವರು ಸಮಾನ ಘನತೆ ಉಳ್ಳವರಾಗಿದ್ದು ಅದನ್ನು ಆಚರಣೆಯಲ್ಲಿ ತರತಕ್ಕದ್ದೆನ್ನುವ ಘೋಷಣೆ ಮೂಲಕ ನೈತಿಕತೆಗೆ ನೀಡಿದಷ್ಟು ಒತ್ತನ್ನು ಸಮಾನತೆ ಹಾಗೂ ಮನುಷ್ಯ ಘನತೆಗೆ ನೀಡಿಲ್ಲ. ಸಮಾನತೆ ಹಾಗೂ ಸಮಾನ ಘನತೆಯನ್ನು ಎತ್ತಿ ಹಿಡಿಯುವ ಹಾಗೆ ಪ್ರಾರ್ಥನಾ ವಿಧಾನವನ್ನು ಸಹ ರೂಪಿಸಲಾಗಿದೆ. ತಮ್ಮ ಸೃಷ್ಟಿಕರ್ತನೆದುರು ಪ್ರಾರ್ಥನೆ ಸಲ್ಲಿಸಲು ಎಲ್ಲ ಆಸ್ತಿಕರು ಒಂದೇ ಸಾಲಿನಲ್ಲಿ ನಿಲ್ಲಬೇಕು. ಸಣ್ಣವ ದೊಡ್ಡವ ಎನ್ನುವ ಭೇದವೆಣಿಸಕೂಡದು. ಅಲ್ಲಾಹು ಅಕಬರ್ (ಅಲ್ಲಾಹ್ ದೊಡ್ಡವನು) ಎನ್ನುವ ಶಬ್ದಗಳು ಇದನ್ನು ಸಂಕೇತಿಸುತ್ತದೆ. ದೇವರೊಬ್ಬನೇ ದೊಡ್ಡವನು, ಎಲ್ಲ ಮಾನವರು ಅವನೆದುರು ಸಮಾನವಾಗಿ ದೀನರು.

ಯಾವುದೇ ವ್ಯಕ್ತಿ, ಯಾವುದೇ ಅರಸ ಸಹ ಉಳಿದ ಮನುಷ್ಯರಿಗಿಲ್ಲದ ವಿಶೇಷ ಹಕ್ಕು ತನಗಿದೆ ಎಂದು ವಾದಿಸುವಂತಿಲ್ಲ. (ಆಚರಣೆಯಲ್ಲಿ ದೇವರೆದುರು ಎಲ್ಲರ ಸಮಾನ ವಿಧೇಯತೆಯ ಪರಿಕಲ್ಪನೆಯನ್ನು ಮೂಲೆಗುಂಪು ಮಾಡಿದ, ಉಳಿದ ಮನುಷ್ಯರ ಮೇಲಿನ ತಮ್ಮ ರಾಜ ಪ್ರಭುತ್ವವನ್ನು ಹೇರಲಾರಂಭಿಸಿದ ಪಾಳೇಗಾರ ಪ್ರಭುಗಳು ಅಸ್ತಿತ್ವಕ್ಕೆ ಬಂದಿದ್ದರೂ ಸಹ). ಆರಂಭದ ಖಲೀಫರು ಗುಲಾಮಗಿರಿ ವಿಷಯವಾಗಿ ಈ ಸಮಾನತೆ ಹಾಗೂ ಉತ್ತರದಾಯಿತ್ವವನ್ನು ಪಾಲಿಸಿಕೊಂಡು ಬಂದಿದ್ದರು.

ಇಸ್ಲಾಂ ನಿಸ್ಸಂದೇಹವಾಗಿ ಆಧ್ಯಾತ್ಮಿಕ ಧರ್ಮವಾಗಿತ್ತು. ಅದು ಬರಿ ಆಧ್ಯಾತ್ಮಿಕ ಧರ್ಮವಾಗಿರಲಿಲ್ಲ. ಅದಕ್ಕಿಂತಲೂ ಹೆಚ್ಚಿನದಾಗಿತ್ತು. ಜಗತ್ತಿನಲ್ಲಿ ಒಂದು ನ್ಯಾಸಮ್ಮತ ವ್ಯವಸ್ಥೆಯನ್ನು ಸ್ಥಾಪಿಸಲು ಅದು ಪ್ರಯತ್ನಿಸಿತು. ಅರಸೊತ್ತಿಗೆ ಹಾಗೂ ಪಾಳೇಗಾರಿ ವ್ಯವಸ್ಥೆಯ ವಿದ್ಯಮಾನಗಳಿಂದಾಗಿ ಕೆಲವು ವಿಕೃತಿಗಳು ಘಟಿಸಿದರೂ ಇಸ್ಲಾಂ ಒಂದು ನೈತಿಕ ವ್ಯವಸ್ಥೆಯಾಗಿ ಬೇರೆ ಮಾರ್ಗಗಳ ಮೂಲಕ, ವಿಶೇಷವಾಗಿ ಸೂಫಿ ಸಂಪ್ರದಾಯದ ಮೂಲಕ ತನ್ನತನವನ್ನು ಮೆರೆಯಿತು. ಯಾವುದೇ ಧರ್ಮ ಇಲ್ಲಾ ಲಿಖಿತ ನೈತಿಕತೆಯೇ ಇಲ್ಲದಿದ್ದ ಬುಡಕಟ್ಟು ಅರೇಬಿಯಾದಲ್ಲಿ ಮೂಲತ: ಮೈವೆತ್ತಿತ್ತು. ಪ್ರವಾದಿ ವಾಸಿಸುತ್ತಿದ್ದ ಮಕ್ಕಾ ವಾಣಿಜ್ಯ ಕೇಂದ್ರವಾಗಿದ್ದುದರಿಂದ ಅಲ್ಲಿ ವಣಿಕ ನೀತಿ ಸಂಹಿತೆ ಇದ್ದಿರಲಿಲ್ಲ. ಸುಳ್ಳು ಹೇಳುವುದು, ಮೋಸ ಮಾಡುವುದು ಹಾಗೂ ಮೋಸದ ವ್ಯವಹಾರಗಳು ಸರ್ವೇ ಸಾಮಾನ್ಯವಾಗಿದ್ದವು. ಕುರ್‌ಆನ್ ಅವರಿಗೆ ಸಮಗ್ರ ವಣಿಕ ನೀತಿ ಸಂಹಿತೆಯನ್ನು ಒದಗಿಸಿತು. ಅದು ಲಾಭಕೋರತನ, ಸಂಗ್ರಹಣೆ, ಎಲ್ಲ ವಿಧದ ಅನ್ಯಾಯದ ವ್ಯವಹಾರಗಳನ್ನು ಖಂಡಿಸಿತು. ಅದು ಸರಿಯಾಗಿ ತೂಕ ಮಾಡುವುದಕ್ಕೆ ಒತ್ತು ಕೊಟ್ಟಿತೆ ವಿನಾ ಕಡಿಮೆ ಕೊಟ್ಟು ಹೆಚ್ಚಿಗೆ ಪಡೆಯುವುದಕ್ಕಲ್ಲ.

ವಿಜ್ಞಾನ, ತಂತ್ರಜ್ಞಾನ ಒತ್ತಟ್ಟಿಗಿರಲಿ ಜ್ಞಾನಾರ್ಜನೆಯಲ್ಲಿ ಅರಬರಿಗೆ ಆಸಕ್ತಿ ಇದ್ದಿರಲಿಲ್ಲ. ಕುರ್‌ಆನ್ 'ಇಲ್ಮ್'(ಜ್ಞಾನ)ಕ್ಕೆ-ಅದೂ ಇಡೀ ವಿಶ್ವದ ಜ್ಞಾನಕ್ಕೂ ಒತ್ತು ನೀಡಿತು. ಇಸ್ಲಾಮ್ ಪ್ರವಾದಿ ಹೇಳಿದಂತೆ ದೇವರು ಮೊದಲು ಸೃಷ್ಟಿಸಿದ್ದು ಜ್ಞಾನ ಅಥವಾ ತರ್ಕ. ಜ್ಞಾನಕ್ಕೆ ಇಸ್ಲಾಮಿನಲ್ಲಿ ಇಂಥ ಮಹತ್ವವಿದೆ. ವಿಶ್ವದಲ್ಲಿನ ಪ್ರತಿಯೊಂದು ಸಂಗತಿ ಕುರಿತು ಚಿಂತಿಸಬೇಕು, ಹೇಗೆ ಅದು ಸೃಷ್ಟಿಸಲ್ಪಟ್ಟಿತು, ನೈಸರ್ಗಿಕ ಘಟನೆಗಳಿಗೆ ಯಾವ ಕಾರಣಗಳಿವೆ ಎನ್ನುವುದರ ಕುರಿತು ಚಿಂತಿಸಬೇಕು ಎಂದು ಅದು ಮುಸಲ್ಮಾನರನ್ನು ಆಹ್ವಾನಿಸುತ್ತದೆ. ಅಲ್ಲಿಯವರೆಗೆ ಎಲ್ಲವನ್ನು ಪವಾಡವೆಂದೆ ಪರಿಗಣಿಸಲಾಗಿತ್ತು. ಕುರ್‌ಆನ್ ಘಟನೆಗಳಿಗೆ ನಿರ್ದಿಷ್ಟ ಕಾರಣಗಳಿರುತ್ತವೆ ಹಾಗೂ ಕಾರಣಗಳು ಹಾಗೂ ಪರಿಣಾಮಗಳು ಬದಲಾಗುವುದಿಲ್ಲವೆಂದು ಒತ್ತಿ ಹೇಳಿತು.

ಇದು ಜಗತ್ತಿನಲ್ಲಿ ಆಗ ಚಾಲ್ತಿಯಲ್ಲಿದ್ದ ಅಜ್ಞಾನದ ವಿಧಾನಗಳಿಗೆ ಬದಲಾಗಿ ವೈಜ್ಞಾನಿಕ ವಿಧಾನವನ್ನು ಪ್ರೋತ್ಸಾಹಿಸಿತು. ಹಾಗಾಗಿ ಅವಿಸೆನ್ನಾ, ಅವಿರ್ರಾಸ್, ಜಾಬಿರ್ ಬಿನ್ ಹಯ್ಯಾನ್, ಅಲ್-ಕಿಂದಿ, ಅಲ್-ಫರಾಬಿ, ಇಬ್ನೆ ಮಸ್ಕವೈಯ, ಇಬ್ನೆ ಹಿಶ್ಯಾಂ, ಇಬ್ನೆ ತುಫೈಲ್, ಇಬ್ನೆ ಖಲದೂನ್ ಅವರಂಥ ಮಹಾನ್ ಚಿಂತಕರು, ತತ್ವಜ್ಞಾನಿಗಳು, ವಿಜ್ಞಾನಿಗಳು ಹಾಗೂ ಗಣಿತಜ್ಞರು ಮುಸ್ಲಿಮರಲ್ಲಿ ಹೊರಹೊಮ್ಮಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಮಹಾನ್ ಪ್ರತಿಭಾವಂತರೇ ಯುರೋಪಿನಲ್ಲಿ ಅಂಧಯುಗವಿದ್ದಾಗ ವಿಜ್ಞಾನವನ್ನು ವಿಕಾಸಗೊಳಿಸಿದರು ಹಾಗೂ ಮಹತ್ವದ ಸಂಶೋಧನೆಗಳನ್ನು ಮಾಡಿದರು.

ಇವರ ಮೂಲಕವೇ ಯುರೋಪ್ ವಿಜ್ಞಾನ ಹಾಗೂ ತತ್ವಜ್ಞಾನ ಕಲಿಯಿತು. ಈ ಮಹಾನ್ ಚಿಂತಕರು, ವಿಜ್ಞಾನಿಗಳು ಹಾಗೂ ತತ್ವಜ್ಞಾನಿಗಳಿಂದಾಗಿಯೇ ಗ್ರೀಕ್ ಜ್ಞಾನ ಬದುಕಿ ಉಳಿಯಿತು ಹಾಗೂ ಯುರೋಪಿನ್ ವಿಶ್ವ ವಿದ್ಯಾಲಯಗಳು ಅವರನ್ನು ಕಲಿಸಿದವು. ರಕ್ತ ಸಂಚಾರವನ್ನು ಕಂಡು ಹಿಡಿದವನು ಅವಿಸೆನ್ನಾ. ಅವನೇ ತತ್ವಜ್ಞಾನ ಕುರಿತು ವಿಸ್ತೃತವಾಗಿ ಬರೆದವನು. ಮುವತಜಿಲಾ ಸಂಪ್ರದಾಯವೇ ವೈಚಾರಿಕತೆ ಹಾಗೂ ಚಿಂತನೆಯ ವೈಚಾರಿಕ ವಿಧಾನವನ್ನು ಜನಪ್ರಿಯಗೊಳಿಸಿದ್ದು.

ಮುವತಜಿಲಾ ಚಿಂತಕರಿರದಿದ್ದರೆ ಇಡೀ ದೈವಶಾಸ್ತ್ರ ಅಜ್ಞಾನದ ಅಡಿಯಾಳಾಗಿರುತ್ತಿತ್ತು. ಜೊತೆಗೆ ಇಖ್ವಾನುಸ್‌ಸಫಾ ತತ್ವಜ್ಞಾನದ ವಿಶ್ವಕೋಶ ರೂಪಿಸಿತು, ಗಣಿತ, ಸಂಗೀತ ಹಾಗೂ ಖಗೋಳವಿಜ್ಞಾನದ ಸಂಕೇತಗಳನ್ನು ರಚಿಸಿತು. ಅರಿಸ್ಟಾಟಲ್‌ನ ಡಿಡಕ್ಟಿವ್ ಲಾಜಿಕ್‌ಗೆ ಬದಲಾಗಿ ಇಂಡಕ್ಟಿವ್ ಲಾಜಿಕ್‌ಅನ್ನು ಅಭಿವೃದ್ಧಿಪಡಿಸಿದ್ದು ಕುರ್‌ಆನ್. ವಿಜ್ಞಾನದ ವಿಕಾಸ ಇಂಡಕ್ಟಿವ್ ಲಾಜಿಕ್‌ದಿಂದಾಗುತ್ತದೆ.

ಕುರ್‌ಆನ್‌ನ ಅನುಪಸ್ಥಿತಿಯಲ್ಲಿ ಮಧ್ಯ ಯುಗ ಅಜ್ಞಾನದ ಯುಗವಾಗಿ ಉಳಿಯಬಹುದಿತ್ತು. ಮುಸಲ್ಮಾನರಿಂದಾಗಿಯೇ ಗ್ರೀಕ್ ಜ್ಞಾನ ಬದುಕಿ ಉಳಿಯಿತು. ಅಬ್ಬಾಸಿ ಅರಸು ಮನೆತನ ಜ್ಞಾನದ ಮಹತ್ವವನ್ನು ಅರಿತುಕೊಂಡಿತ್ತು. ಹಾಗಾಗಿ ಅದು ಗ್ರೀಕ್



ಮಧ್ಯ ಯುಗದಲ್ಲಿ ಜ್ಞಾನದ ಬೆಳಕು ಹರಡಿದ್ದು ಇದೇ ಇಸ್ಲಾಂ. ಕುರ್ ಆನ್ ಜ್ಞಾನವನ್ನು ಬೆಳಕು ಎಂದೂ ಅಜ್ಞಾನವನ್ನು ಕತ್ತಲು ಎಂದೂ ಬಣ್ಣಿಸಿದೆ. ಮುಸಲ್ಮಾನರು ಪದೇ ಪದೇ ಉಲ್ಲೇಖಿಸುವ ಪ್ರವಾದಿಯ ಹೇಳಿಕೆ – ವಿದ್ವಾಂಸನ ಮಸಿ ಹುತಾತ್ಮನ ರಕ್ತಕ್ಕಿಂತಲೂ ಹೆಚ್ಚು ಪವಿತ್ರವಾದದ್ದು. ಈಹಾದ್‌ನ ಮಿಥ್‌ಅನ್ನು ಪ್ರವಾದಿಯ ಈ ಹೇಳಿಕೆ ಭೇದಿಸಬಲ್ಲದು. ಪಟ್ಟಭದ್ರ ಹಿತಾಸಕ್ತಿಗಳು ಪ್ರಚುರಪಡಿಸಿರುವಂತೆ ಜಿಹಾದ್ ಎಂದೂ ಶಸ್ತ್ರಸಜ್ಜಿತ ಯುದ್ಧವಾಗಿರಲಿಲ್ಲ.

ಗ್ರಂಥಗಳಿಗಾಗಿ ಚಿನ್ನ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಸಂದಾಯ ಮಾಡಿತು. ಗ್ರೀಕ್ ಪ್ರಭುಗಳಿಂದ ಒಂಟೆ ಭಾರದ ಗ್ರೀಕ್ ಗ್ರಂಥಗಳ ಬದಲಾಗಿ ಒಂಟೆ ಭಾರದ ಚಿನ್ನವನ್ನು ವಿನಿಮಯ ಮಾಡಿಕೊಳ್ಳಲಾಯಿತು. ಬಾಗ್ದಾದ್‌ನ ಅಬ್ಬಾಸಿಯರು ಹಾಗೂ ಕೈರೋದ ಫಾತಿಮಿಯರು ಸಾಮಾನ್ಯ ಜನರ ಕಲ್ಪನೆಗೂ ಮೀರುವಷ್ಟರ ಮಟ್ಟಿಗೆ ಜ್ಞಾನಲೋಕವನ್ನು ಶ್ರೀಮಂತಗೊಳಿಸಿದರು.

ಇಬ್ನೆ ಖಲದೂನ್‌ನನ್ನು ಯಾವ ಜನಾಂಗ ಸೃಷ್ಟಿಸಿತು? ಅವನು ಇತಿಹಾಸದ ಮಹಾನ್ ತತ್ವಜ್ಞಾನಿ ಹಾಗೂ ಮಹಾನ್ ಸಮಾಜವಿಜ್ಞಾನಿಯಾಗಿದ್ದ. ಒಂದು ವಿಧದಲ್ಲಿ ಅವನು ಮಾರ್ಕ್ಸ್‌ನ ಪ್ರತಿರೂಪವಾಗಿದ್ದ-ಅದೂ ಮಧ್ಯೆ ಯುಗದಲ್ಲಿ. ತತ್ವಜ್ಞಾನ ಹಾಗೂ ಸಮಾಜವಿಜ್ಞಾನದ ಇತಿಹಾಸಕ್ಕೆ ಅವನ ಕೊಡುಗೆಯನ್ನು ಯಾವ ಕಾರಣಕ್ಕೂ ಕಡೆಗಣಿಸಲಾಗದು. ಅವನ ಮುಕದ್ದಿಮಾವನ್ನು ಇತಿಹಾಸ ಲೇಖನದ ಶ್ರೇಷ್ಠ ಕೃತಿಯೆಂದು ಪರಿಗಣಿಸಲಾಗುವುದು. ಮುಸಲ್ಮಾನರು ಇಲ್ಮ್ ಅಲ್‌ಕಲಾಮ್, ಎಂದು ಕರೆಯಲ್ಪಡುವ ವೈಚಾರಿಕ ದೈವಶಾಸ್ತ್ರಕ್ಕೆ ಸಹ ಕೊಡುಗೆ ನೀಡಿದ್ದಾರೆ.

ಅಂದು ಜಗತ್ತಿನಲ್ಲಿ ಲಭ್ಯವಿದ್ದ ಅತ್ಯುತ್ಕೃಷ್ಟವಾದ ಜ್ಞಾನದೊಂದಿಗೆ ಇಸ್ಲಾಂ ತತ್ವಗಳನ್ನು ಬೆರಕೆ ಮಾಡಿದ ಹಾಗೂ ತಮ್ಮ ಕೊಡುಗೆಗಳ ಮೂಲಕ ಜಗತ್ತನ್ನು ಶ್ರೀಮಂತಗೊಳಿಸಿದ ಈ ಚಿಂತಕರ ಅನುಪಸ್ಥಿತಿಯಲ್ಲಿ ಜಗತ್ತು ತೀರ ಬಡವಾಗಿರುತ್ತಿತ್ತು. ಅವರು ಹಿಂಸೆಯನ್ನು ಬಳಸಲಿಲ್ಲ, ಹಿಂಸೆ ಕುರಿತು ಚಕಾರವೆತ್ತಲಿಲ್ಲ. ಅಂದ ಮೇಲೆ ಪಾಶ್ಚಿಮಾತ್ಯರು ಮಾತ್ರ ಏಕೆ ಇಸ್ಲಾಮಿನ ಜೊತೆಗೆ ಹಿಂಸೆಯನ್ನು ತಳುಕು ಹಾಕುತ್ತಿದ್ದಾರೆ? ಇದು ರಾಜಕೀಯದಿಂದ ಪ್ರೇರಿತವಾಗಿಲ್ಲವೆ? ಇಸ್ಲಾಮನ್ನು ದೂಷಿಸಲು ಹಾಗೂ ಪಶ್ಚಿಮವನ್ನು ಜಗತ್ತಿನ ಏಕೈಕ ನಾಗರೀಕ ಪ್ರದೇಶವೆಂದು ವೈಭವೀಕರಿಸಲು ಉದ್ದೇಶಪೂರ್ವಕವಾಗಿ ಹೀಗೆ ಮಾಡಲಾಗುತ್ತಿದೆ. ಇದು ವಸಾಹತುಶಾಹೀ ಯಗದಿಂದಲೇ ಆರಂಭವಾಯಿತು. ತಮ್ಮ ಸ್ವಂತ ದುರಾಸೆ, ಸಂಪತ್ತು ಮತ್ತು ಅಧಿಕಾರ ದಾಹ ಹಾಗೂ ಅದೆಲ್ಲವನ್ನು ಈಡೇರಿಸಿಕೊಳ್ಳಲು ಅವರು ಬಳಸಿದ ಹಿಂಸೆಯನ್ನು ಮರೆಮಾಚಲೆಂದೇ ಹೀಗೆ ಮಾಡಲಾಯಿತು.

ಇಸ್ಲಾಮಿನ ಅನುಪಸ್ಥಿತಿಯಲ್ಲಿ ಜಗತ್ತು ರೂಮಿ ಹಾಗೂ ಇಬ್ನೆ ಅರಬಿಯಂಥ ಸೂಫಿಗಳನ್ನು ಕಾಣಬಹುದಿತ್ತೆ? ಮೌಲಾನಾ ರೂಂ(ರೂಮಿ ಎಂದೇ ಜನಪ್ರಿಯ) ಪ್ರೀತಿ ಹಾಗೂ ಶಾಂತಿಯ ದಾರ್ಶನಿಕನಾಗಿದ್ದ ಅವನು ತೀರಿಕೊಂಡಾಗ ಯಹೂದಿಯರು, ಕ್ರಿಶ್ಚಿಯನ್‌ರು ಹಾಗೂ ಝುರೊಸ್ಟ್ರಿಯನ್‌ರು ಅವನ ಶವಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಅವರು ರೋದಿಸುತ್ತಿದ್ದರು, ದುಃಖದಿಂದ ಎದೆ ಎದೆ ಬಡಿದುಕೊಳ್ಳುತ್ತಿದ್ದರು. ತಮ್ಮ ತಮ್ಮ ಧರ್ಮ ಗ್ರಂಥಗಳನ್ನು ಪಠಿಸುತ್ತಿದ್ದರು ಹಾಗೂ ಇಂದು ನಮ್ಮ ಪ್ರವಾದಿ ನಮ್ಮನ್ನಗಲಿದ ಎಂದು ಹೇಳುತ್ತಿದ್ದರು. ಅವನು ಎಲ್ಲ ಜನಾಂಗದವರಲ್ಲಿ ಅಪಾರ ಜನಪ್ರಿಯವಾಗಿದ್ದ. ಅವನು ಆದರ್ಶ ಮುಸಲ್ಮಾನರ ಪ್ರತೀಕವಾಗಿದ್ದ.

ನನ್ನ ಏಕೈಕ ಅಸ್ಮಿತೆ ಪ್ರೀತಿ ಎಂದು ಸಾರಿದವನು ಅವನು. ಇಬ್ನೆ ಅರಬಿಯಂಥ ಸೂಫಿಯ ಅನುಪಸ್ಥಿತಿಯಲ್ಲಿ ಜಗತ್ತು ಸಾಕಷ್ಟು ಬಡವಾಗಿರುತ್ತಿತ್ತು. ಪ್ರೀತಿಯೇ ನನ್ನ ದೀನ್(ಧರ್ಮ) ಹಾಗೂ ಶರಿಯ ಎಂದು ಘೋಷಿಸಿದವನು ಅವನು. ತನ್ನ ವಿದ್ವತ್‌ಪೂರ್ಣ ಕೃತಿಗಳ ಮೂಲಕ ಅವನು ಅಪಾರ ಕೊಡುಗೆ ನೀಡಿದವನು. ಈ ಸೂಫಿಗಳು ಬಾಹ್ಯ ಜಗತ್ತಿಗಿಂತ ಆಂತರಿಕ ಲೋಕವನ್ನು ಜಯಿಸಬೇಕು ಎನ್ನುವುದರಲ್ಲಿ ವಿಶ್ವಾಸವುಳ್ಳವರಾಗಿದ್ದರು. ಹಾಗಾಗಿ ಅವರು ಹಿಂಸೆಯನ್ನು ಅದರೆಲ್ಲ ರೂಪಗಳಲ್ಲಿ ಧಿಕ್ಕರಿಸಿದರು. ಬದಲಾಗಿ ತಮ್ಮ ಸ್ವಾರ್ಥದ ಬಯಕೆಗಳನ್ನು ಅಂಕೆಯಲ್ಲಿಟ್ಟುಕೊಂಡರು, ಲೋಭವನ್ನು ನಿಯಂತ್ರಿಸಿಕೊಂಡರು.

ಅವರು ಲೋಕದಲ್ಲಿ ಉಳಿದುಕೊಂಡರು. ಆದಾಗ್ಯೂ ಈ ಲೋಕದವರಾಗಿರಲಿಲ್ಲ. ಇಸ್ಲಾಂ ವೈರಾಗ್ಯವನ್ನು ಬೋಧಿಸುವುದಿಲ್ಲವಾದ್ದರಿಂದ ಅವರು ಈ ಲೋಕವನ್ನು ತ್ಯಜಿಸಲಿಲ್ಲ. ಆದರೆ ಎಂದೂ ಅದರ ವ್ಯಾಮೋಹದಲ್ಲಿ ಮುಳುಗಿದವರಲ್ಲ. ಅವರು ಜಗತ್ತಿಗೆ ಮಣಿಯಲಿಲ್ಲ. ಆದರೆ ಅವರು ಇತರರ ಹೃದಯ, ಆತ್ಮಗಳನ್ನು ಗೆದ್ದುಕೊಂಡರು. ಅವರು ಎರವಲು ಪಡೆದ ಲೋಕದಲ್ಲಿ ಬದುಕಲಿಲ್ಲ. ಹೆಚ್ಚು ಆಧ್ಯಾತ್ಮಿಕ, ಹೆಚ್ಚು ಭೌತಿಕವಾದಂಥ ತಮ್ಮದೇ ಆದ ಲೋಕವನ್ನು ಅವರು ಸೃಷ್ಟಿಸಿಕೊಂಡರು. ಜುನೈದ್ ಈ ಸೂಫಿಗಳಲ್ಲೊಬ್ಬನಾಗಿದ್ದ. ಅವನು ತನ್ನ ಕೋಣೆಯಲ್ಲಿ ಇರುವೆಯೊಂದು ಬಸವಳಿಯುವುದನ್ನು ಕಂಡು ಚಡಪಡಿಸಿದನಂತೆ. ಯಾರಾದರೂ ಅದನ್ನು ತುಳಿದಾರೆಂದು ಆತಂಕಕ್ಕೀಡಾದನಂತೆ. ಅವನು ಅದನ್ನು ಮೆಲ್ಲನೆ ಎತ್ತಿಕೊಂಡು ಗೋಧಿ ಹಿಟ್ಟಿನ ಪಾತ್ರೆಯಲ್ಲಿ ಬಿಟ್ಟನಂತೆ.

ಇಸ್ಲಾಮಿಗಿಂತ ಮುಂಚೆ ಪರ್ಶಿಯಾದಲ್ಲಿ ಸಮೃದ್ಧ ನಾಗರಿಕತೆ ಇತ್ತಾದರೂ ಇಸ್ಲಾಂ ಪರ್ಶಿಯಾದಲ್ಲಿ ಆಗಮಿಸುತ್ತಲೇ ಅದರ ಬದುಕಿನ ಪ್ರತಿಯೊಂದು



ಕ್ಷೇತ್ರವನ್ನೂ ಅದು ಶ್ರೀಮಂತಗೊಳಿಸಿತು. ಅದು ಒಂದೆಂದಿಗಿಂತಲೂ ಹೆಚ್ಚು ಶ್ರೀಮಂತವಾದ ಸಂಕರ ಸಂಸ್ಕೃತಿಯನ್ನು ಹುಟ್ಟು ಹಾಕಿತು. ಅದು ಹಾಫಿಜ್ ಹಾಗೂ ಸಾದಿ –ಇಬ್ಬರೂ ಶಿರಾಜ್‌ದವರೇ–ಯನ್ನು ಸೃಷ್ಟಿಸಿತು. ಈ ಈರ್ವರು ಕವಿಗಳ ಗಜಲ್(ಪ್ರೇಮ ಗೀತೆ)ಗಳು ಶತಮಾನಗಳ ನಂತರವೂ ಜೀವಂತವಾಗಿವೆ. ಇನ್ನೂ ಶತಮಾನಗಳ ಕಾಲ ಮನುಕುಲವನ್ನು ರಂಜಿಸುತ್ತಲಿರುವವು. ಇಸ್ಲಾಮೋತ್ತರ ಯುಗದಲ್ಲಿ ಪರ್ಶಿಯಾದ ಗಜಲ್ ಕಾವ್ಯ ಜಗತ್ತಿನಲ್ಲೇ ಅನನ್ಯವಾಗಿದೆ. ಸಾಕಷ್ಟು ಹೆಸರು ಮಾಡಿದ ನೂರಾರು ಕವಿಗಳ ಪೈಕಿ ಇವರಿಬ್ಬರನ್ನು ಹೆಸರಿಸಲಾಗಿದೆ, ಅಷ್ಟೇ.

ಅಸ್ಫಹಾನ್‌ನಂಥ ವಾಸ್ತುಕಲೆಯ ಅನುಪಸ್ಥಿತಿಯಲ್ಲಿ ಜಗತ್ತು ಅತ್ಯಂತ ಬಡವಾಗಿರುತ್ತಿತ್ತು. ಅಸ್ಫಹಾನ್ ನಿಸ್ಫ ಜಹಾನ್(= ವೈಭವದಲ್ಲಿ ಅಸ್ಫಹಾನ್ ಅರ್ಧ ಜಗತ್ತು) ಎಂದು ಸೂಕ್ತವಾಗಿಯೆ ಹೇಳಲಾಗಿದೆ. ಅದರ ವಾಸ್ತುಕಲೆ ನಿಜಕ್ಕೂ ಅನುಪಮವಾದದ್ದು. ತಾಜ್ ಮಹಲ್‌ನ ವೈಭವವನ್ನು ಎಂದಾದರೂ ಮರೆಯುವುದು ಸಾಧ್ಯವೇ? ಇಡೀ ಜಗತ್ತಿನ ಪ್ರೇಮಿಗಳು ವಾಸ್ತುಕಲೆಯ ಈ ರತ್ನವನ್ನು ಒಮ್ಮೆಯಾದರೂ ಬಂದು ನೋಡಲು ಚಡಪಡಿಸುತ್ತಾರೆ.

ಇದಷ್ಟೇ ಅಲ್ಲ. ಮಧ್ಯೆ ಏಷ್ಯಾ, ಅದರಲ್ಲೂ, ತಾಶ್ಕೆಂಟ್, ಬುಖಾರಾ, ಹಾಗೂ ಇಸ್ಲಾಮಿಕ್ ಜಗತ್ತಿನಾದ್ಯಂತ ಹಲವಾರು ಇಂಥ ಇತರ ಸ್ಥಳಗಳಲ್ಲಿ ವಾಸ್ತುಕಲೆಯ ಇನ್ನೂ ಹೆಚ್ಚಿನ ಚಮತ್ಕಾರಗಳಿವೆ. ಮುಸಲ್ಮಾನರು ಚಿತ್ರವತ್ತಾದ ಬರವಣಿಗೆಗೆ ಕಲೆಯನ್ನು ಅಭಿವೃದ್ಧಿಪಡಿಸಿ ಅದರ ಉತ್ತುಂಗಕ್ಕೇರಿಸಿದ್ದಾರೆ. ಹೀಗೆ ಬರೆಯಲಾದ ಲಕ್ಷಾಂತರ ಗ್ರಂಥಗಳು ಓದುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಈ ಬರವಣಿಗೆ ಕಲೆ ಇಸ್ಲಾಮಿಕ್ ವಾಸ್ತುಕಲೆಯ ಅನಿವಾರ್ಯ ಅಂಗವಾಗಿ ಬಿಟ್ಟಿದೆ. ಕುರ್‌ಆನ್‌ನ ಶ್ಲೋಕಗಳನ್ನು ಹಲವಾರು ಕಟ್ಟಡಗಳ ಮೇಲೆ ಬರೆಯಲಾಗಿದೆ. ಕಾಗದದ ಮೇಲೆ ಬರೆದಷ್ಟೇ ಸುಂದರವಾಗಿ ಈ ಕಟ್ಟಡಗಳ ಮೇಲೆ ಅವುಗಳನ್ನು ಬರೆಯಲಾಗಿದೆ.

ಮಧ್ಯ ಯುಗದಲ್ಲಿ ಜ್ಞಾನದ ಬೆಳಕು ಹರಡಿದ್ದು ಇದೇ ಇಸ್ಲಾಂ. ಕುರ್ ಆನ್ ಜ್ಞಾನವನ್ನು ಬೆಳಕು ಎಂದೂ ಅಜ್ಞಾನವನ್ನು ಕತ್ತಲು ಎಂದೂ ಬಣ್ಣಿಸಿದೆ. ಮುಸಲ್ಮಾನರು ಪದೇ ಪದೇ ಉಲ್ಲೇಖಿಸುವ ಪ್ರವಾದಿಯ ಹೇಳಿಕೆ – ವಿದ್ವಾಂಸನ ಮಸಿ ಹುತಾತ್ಮನ ರಕ್ತಕ್ಕಿಂತಲೂ ಹೆಚ್ಚು ಪವಿತ್ರವಾದದ್ದು. ಈಹಾದ್‌ನ ಮಿಥ್‌ಅನ್ನು ಪ್ರವಾದಿಯ ಈ ಹೇಳಿಕೆ ಭೇದಿಸಬಲ್ಲದು. ಪಟ್ಟಭದ್ರ ಹಿತಾಸಕ್ತಿಗಳು ಪ್ರಚುರಪಡಿಸಿರುವಂತೆ ಜಿಹಾದ್ ಎಂದೂ ಶಸ್ತ್ರಸಜ್ಜಿತ ಯುದ್ಧವಾಗಿರಲಿಲ್ಲ. ಅದರ ಮೂಲಾರ್ಥ ಸೂಚಿಸುವಂತೆ ಅದು ಪ್ರಾಮಾಣಿಕವಾಗಿ ಸೌಹಾರ್ದವನ್ನು ಮೂಡಿಸುವುದಾಗಿದೆ. ಸೂಫಿಗಳಿಗೆ ಜಿಹಾದೆ ಅಕಬರ್(ಮಹಾ ಜಿಹಾದ್) ಎಂದರೆ ವ್ಯಕ್ತಿ ತನ್ನ ಮೋಹ, ಲೋಭ, ಆಕ್ರೋಶ ಹಾಗೂ ವೈಯಕ್ತಿಕ ಮಹಾತ್ವಾಕಾಂಕ್ಷೆಗಳನ್ನು ಹದ್ದುಬಸ್ತಿನಲ್ಲಿಡುವುದಾಗಿತ್ತು.

ಈ ಅಮಾನುಷ ಭಾವನೆಗಳನ್ನು ಅಂಕಿತದಲ್ಲಿಟ್ಟುಕೊಂಡ ಮೇಲೆ ಖಡ್ಗದಿಂದ ಯುದ್ಧ ಮಾಡುವ ಪ್ರಶ್ನೆ ಹೇಗೆ ಉದ್ಭವಿಸುತ್ತದೆ? ಶಸ್ತ್ರಾಸ್ತ್ರಗಳಿಂದ ಹೋರಾಡುವುದು ಯಾಕೇ? ವೈಯಕ್ತಿಕ ಮಹಾತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲೆತ್ನಿಸುವುದು ಪಾಪ ಕೃತ್ಯವೇ ವಿನಾ ಅದು ಜಿಹಾದ್ ಅಲ್ಲ. ಶಸ್ತ್ರಾಸ್ತ್ರಗಳಿಂದ ಜಿಹಾದ್‌ಅನ್ನು ಹೆಚ್ಚೆಂದರೆ ಆತ್ಮ ರಕ್ಷಣೆಗಾಗಿ ಸಮ್ಮತಿಸಬಹುದು. ಕಾರಣ ಅಲ್ಲಾಹ್ ಆಕ್ರಮಣಕಾರರನ್ನು ಇಷ್ಟಪಡುವುದಿಲ್ಲವಾದ್ದರಿಂದ ಆಕ್ರಮಣ ಮಾಡದಿರುವಂತೆ ಕುರ್‌ಆನ್ ಮುಸಲ್ಮಾನರನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುತ್ತದೆ. ಇಷ್ಟಾಗಿಯೂ ಯಾವನಾದರೂ ಆಕ್ರಮಣ ಮಾಡಿದ್ದೇ ಆದರೆ ಅದು ಇಸ್ಲಾಮಿನ ಜವಾಬದಾರಿಯಲ್ಲ.

ತನ್ನ ವೈಯಕ್ತಿಕ ಮಹಾತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಯಾರಾದರೂ ಜಿಹಾದ್‌ನ ಅರ್ಥವನ್ನು ತಿರುಚಿದರೆ, ಪ್ರಜ್ಞಾವಂತರು ಅದಕ್ಕೆ ಇಸ್ಲಾಮಿನ ಬೋಧನೆಗಳನ್ನು ಹೊಣೆಮಾಡಲಾರರು. ಪಾಶ್ಚಾತ್ಯ ಮಾಧ್ಯಮ ಹಾಗೂ ರಾಜಕಾರಣಗಳ ಒಂದು ಸಮೂಹ ಮಾಡುತ್ತ ಬಂದಿರುವಂತೆ ಯಾರೇ ಮಾಡಿದರೂ ಅದು ಬರಿ ಅವರ ಅಜ್ಞಾನವಷ್ಟೇ ಅಲ್ಲ, ಅವರ ಪಟ್ಟ ಬದ್ರ ಹಿತಾಸಕ್ತಿಗಳು ಅದಕ್ಕೆ ಕಾರಣವಾಗುತ್ತದೆ. ಒಬ್ಬ ಪ್ರಾಮಾಣಿಕ ವಿದ್ವಾಂಸ ಎಂದೂ ಇಂಥ ಅಗ್ಗದ ಪ್ರಚಾರಕ್ಕಾಗಿ ಹಾತೊರೆಯುವುದಿಲ್ಲ. ಆದರೆ ದುರಾದೃಷ್ಟವೆನ್ನುವಂತೆ ಮಾಧ್ಯಮಗಳ ಸಾಮಾನ್ಯ ಓದುಗರು ಹಾಗೂ ವೀಕ್ಷಕರು ಅದಕ್ಕೆ ಬಲಿಯಾಗುತ್ತಾರೆ, ಇಸ್ಲಾಂ ಹಾಗೂ ಮುಸಲ್ಮಾನರ ಬಗ್ಗೆ ಪೂರ್ವಗ್ರಹ ಬೆಳೆಸಿಕೊಳ್ಳುತ್ತಾರೆ.

ಪಾಶ್ಚಾತ್ಯ ಮಾಧ್ಯಮ ತನ್ನ ಹಿತಾಸಕ್ತಿಗಳಿಗನುಗುಣವಾಗಿ ಬಣ್ಣ ಬದಲಿಸುತ್ತದೆ ಎನ್ನುವುದು ಸಹ ಇಲ್ಲಿ ಕುತೂಹಲಕರವೆನಿಸುತ್ತದೆ. ಕಳೆದ ಶತಮಾನದ ಎಪ್ಪತ್ತರದ ದಶಕದಲ್ಲಿ ಇಜಿಪ್ಟ್ ಹಾಗೂ ಇಸ್ರೇಲ್ ನಡುವಣ ಯುದ್ಧದ ನಂತರ ತೈಲ ಒಂದು ಬೆಲೆಬಾಳುವ ಸರಕಾಗಿ ಪರಿಣಮಿಸಿದಾಗ, ಪಶ್ಚಿಮದ ದೇಶಗಳಿಗೆ ಅರಬರ ತೈಲದ ವಿನಾ ಅನ್ಯ ವಿಧಿ ಇಲ್ಲವೆಂದು ಖಚಿತವಾದಾಗ ಲಂಡನ್‌ನಲ್ಲಿ ಒಂದು ತಿಂಗಳು ಕಾಲದಷ್ಟು ಸುದೀರ್ಘವಾದ ಇಸ್ಲಾಮಿಕ್ ಫೆಸ್ಟಿವಲ್‌ಅನ್ನು ಏರ್ಪಡಿಸಲಾಯಿತು, ವಿಶ್ವ ನಾಗರೀಕತೆಗೆ ಇಸ್ಲಾಮಿನ ಕೊಡುಗೆಯನ್ನು ತುಂಬ ಧನಾತ್ಮಕವಾಗಿ ಪ್ರಸ್ತುತಪಡಿಸಲಾಯಿತು ಹಾಗೂ ಮಾಧ್ಯಮಗಳು ಇಸ್ಲಾಂ ಹಾಗೂ ಅದರ ಕೊಡುಗೆಗಳನ್ನು ಕೊಂಡಾಡಿ ನೂರಾರು ಲೇಖನಗಳನ್ನು ಪ್ರಕಟಿಸಿದವು.

ಅದೇನೇ ಇರಲಿ ಅಮೇರಿಕಾದ ಬೇಶರತ್ ಆದ ಬೆಂಬಲದಿಂದಾಗಿ ಇಸ್ರೇಲ್ ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಿದ ಮೇಲೆ, ಅರಬ್ ರಾಷ್ಟ್ರಗಳನ್ನು ಹದ್ದುಬಸ್ತಿನಲ್ಲಿಟ್ಟ ಮೇಲೆ ಅಮೇರಿಕಾದ ಆಡಳಿತಗಾರರ ಸಮಗ್ರ ದೃಷ್ಟಿಕೋನವೇ ಬದಲಾಯಿತು, ಅದರಲ್ಲೂ ಸೋವಿಯೆಟ್ ಯೂನಿಯನ್‌ನ ಪತನದ ನಂತರ ಅವರಿಗೆ ಮತ್ತೊಂದು ಬಲಾಢ್ಯ ಶತ್ರು ರಾಷ್ಟ್ರ ಬೇಕಿತ್ತು. ಅದಕ್ಕಾಗಿ ಅವರು ಈ ಹಿಂದೆ ಕಮ್ಯುನಿಜಂ ಒಂದು 'ಪೀಡೆ' ಆಗಿದ್ದಂತೆಯೆ ಇಸ್ಲಾಮನ್ನು ಒಂದು 'ಪೀಡೆ'ಯಾಗಿ ಬಿಂಬಿಸಲಾರಂಭಿಸಿದರು. ಮೊದಲು ಅವರು ಸೋವಿಯೆಟ್ ಯೂನಿಯನ್ ಅನ್ನು ಮಣಿಸಲು ಒಸಾಮಾ ಬಿನ್ ಲಾಡೆನ್‌ನನ್ನು ಬಳಸಿಕೊಂಡರು. ನಂತರ ಇಸ್ಲಾ ಒಂದು 'ಪೀಡೆ' ಎಂದು ಚಿತ್ರಿಸಲು ಅವರು ಒಸಾಮಾನನ್ನು ಗುರಿಯಾಗಿಸಿಕೊಂಡರು.

ಇದೆಲ್ಲ ವೈಯಕ್ತಿಕ ಹಿತಾಸಕ್ತಿಗಳ ಕಿತಾಪತಿಯೇ ವಿನಾ ಯಾವುದೇ ಬದ್ಧತೆಯ ಕ್ರಿಯಾಶೀಲತೆಯಲ್ಲ. ಈಗ ಪಶ್ಚಿಮ ಏಷ್ಯಾದಲ್ಲಿ ರಾಜಕೀಯ ವಿದ್ಯಮಾನಗಳು ಶೀಘ್ರ ಬದಲಾಗುತ್ತಿರುವುದರಿಂದ ಮಾಧ್ಯಮ ಇಸ್ಲಾಮನ್ನು ಚಿತ್ರಿಸುತ್ತದೆ ಎಂದು ಕಾದು ನೋಡಬೇಕಾಗಿದೆ. ಆ ಪ್ರದೇಶದ ಕೆಲವು ನಿರಂಕುಶ ಪ್ರಭುಗಳನ್ನು ಬೆಂಬಲಿಸದೇ ಇರುವುದು ಅಮೇರಿಕಾದ ಆಡಳಿತಗಾರರಿಗೆ ಕಷ್ಟ ಸಾಧ್ಯವಾಗಲಿದೆ. ಈಗ ಜನಸಾಮಾನ್ಯರ ಪ್ರತಿನಿಧಿಗಳೊಂದಿಗೆ ಅವರು ವ್ಯವಹರಿಸಬೇಕಾಗಿ ಬಂದಿದೆ. ಇಸ್ರೇಲ್‌ಗೆ ನೀಡಿರುವ ತಮ್ಮ ಬೇಶರತ್ತಾದ ಬೆಂಬಲ ಕುರಿತು ಪುನರಾವಲೋಕನ ಮಾಡುವುದು ಸಹ ಅನಿವಾರ್ಯವಾಗಿ ಬಿಟ್ಟಿದೆ.

ವಿಶ್ವ ನಾಗರೀಕತೆಗೆ ಇಸ್ಲಾಮಿನ ಕೊಡುಗೆ ಅದೆಷ್ಟು ಮಹತ್ತರವಾದದ್ದೆಂದರೆ ಕೇವಲ ಸಂಕುಚಿತ ಮನಸ್ಸಿನವರು ಮಾತ್ರ ಅದನ್ನು ಒಸಾಮಾನ ಹೊಲಬುಗೆಟ್ಟ ಕೃತ್ಯಗಳ ಮಟ್ಟಕ್ಕೆ ಇಳಿಸಬಲ್ಲರು ಇಲ್ಲಾ ಪ್ರಬಲವಾದ ಪಟ್ಟಭದ್ರರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಾಗೆ ಮಾಡಬಹುದು. ಇಸ್ಲಾಂ ಅಷ್ಟೇ ಅಲ್ಲ, ಯಾವುದೇ ಧರ್ಮವನ್ನು ಕೇವಲ ಹಿಂಸೆಯ ಮಟ್ಟಕ್ಕೆ ಇಳಿಸುವುದು ಸಾಧ್ಯವಿಲ್ಲ. ಅದು ಸಾಧ್ಯವಾಗಿದ್ದರೆ ಶತ ಶತಮಾನಗಳಿಂದ ಲಕ್ಷಾಂತರ ಜನ ಅದನ್ನು ಹೇಗೆ ಪಾಲಿಸಿಕೊಂಡು ಬರುತ್ತಿದ್ದರು? ಹಿಂಸೆಯನ್ನಾಧರಿಸಿದ ರಾಜಕೀಯ ವಿಚಾರಧಾರೆಯನ್ನು

ರುಚಿ

ಕಾಶ್ಮೀರದ ಸೇವು
ಕನ್ಯಾಕುಮಾರಿಯ ಮಾವು
ನಮ್ಮೂರಿನ ಅಂಜೂರ
ಹೊರ ದೇಶದ ಕರ್ಜೂರ
ಎಲ್ಲದರಲ್ಲು ಎಂಥ ರುಚಿ
ಇವು ಮಣ್ಣು ಹಡೆದ ಮಕ್ಕಳು
ಹೀಗೆ ಇರಬೇಕಲ್ಲವೆ ನಾವು
ನಮ್ಮ ನಮ್ಮ ಮಕ್ಕಳು



ಜರಗನಹಳ್ಳಿ ಶಿವಶಂಕರ್




ರಕ್ತಹೀನತೆ ಅಪಾಯಕಾರಿ
ರಕ್ತಹೀನತೆಯನ್ನು ತಡೆಗಟ್ಟಲು
ಕಬ್ಬಿಣಾಂಶ ಹೇರಳವಾಗಿರುವ ಸೊಪ್ಪು,
ಕಾಳುಗಳು, ಬೆಲ್ಲ ಆಹಾರದಲ್ಲಿ ಸೇವಿಸಿ
ಪ್ರಕಟಣೆ : ಯೋಜನಾ ನಿರ್ದೇಶಕರು, (ಆರ್‌ಸಿಹೆಚ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದರಾವ್ ವೃತ್ತ, ಬೆಂಗಳೂರು-560 009

ಹಿಂಸೆ, ದ್ವೇಷ ಹಾಗೂ ವಿನಾಶ ಜೊತೆಗೆ ಸಾಗುವಂಥವು. ಹಿಟ್ಲರ್ ಹಾಗೂ ಮುಸೋಲಿನ ಈ ಗುಣಗಳ ಸಾಕಾರ ಮೂರ್ತಿಗಳಾಗಿದ್ದರು. ಮೊಹಮ್ಮದ್ ಹಾಗೂ ಮತ್ತಿತರರ ಲೋಕಮಾನ್ಯ ಧಾರ್ಮಿಕ ವ್ಯಕ್ತಿತ್ವಗಳು ಎಂದೂ ಇಂಥ ಗುಣಗಳನ್ನು ತೋರ್ಪಡಿಸಲಿಲ್ಲ.

ದು ಬಿಕ್ಕಟ್ಟಿನ ಸಂದರ್ಭದಲ್ಲಿ ಪಾಲಿಸಬಹುದು. ತ್ತಮ ನಿದರ್ಶನಗಳೆಂದರೆ ನಾಝೀವಾದ ಹಾಗೂ ಸಿಜಂ. ಸಾಮಾನ್ಯ ಸಂದರ್ಗಳಲ್ಲಿ ಇಂಥ ಾರಧಾರೆಗಳನ್ನು ಸಹ ಧಿಕ್ಕರಿಸಲಾಗುತ್ತದೆ.

ಆದರೆ ಧರ್ಮ ಆಧ್ಯಾತ್ಮಿಕ ಅನುಭೂತಿಯನ್ನಾಧರಿ ತ್ತದೆ, ಅದು ಆಂತರಿಕ ವಿಕಾಸದ ಉದ್ದೇಶ ಂದಿರುತ್ತದೆ. ಅದರ ಶಾಶ್ವತ ಮೂಲಧ್ಯೇಯ ಪ್ರೀತಿ ಗೂ ಆಧ್ಯಾತ್ಮಿಕ ವಿಕಾಸವಾಗಿರುತ್ತದೆಯೆ ವಿನಾ ಹಿಂಸೆ ಗೂ ವಿನಾಶವಲ್ಲ. ಪ್ರಭುತ್ವ ಹಾಗೂ ಹಿಂಸೆ ಜತೆಗೇ ಬಹುದು. ಕಾರಣ ಪ್ರಭುತ್ವ ಆಳುವ ವರ್ಗಗಳ ನದ ಅಂಗಸಂಸ್ಥೆಯಾಗಿರುತ್ತದೆ. ಆದರೆ ಧರ್ಮ ಗೂ ಹಿಂಸೆ ಜೊತೆಗೇ ಸಾಗುವುದಿಲ್ಲ. ಧರ್ಮ ಅತೃಪ್ತ ಗಳಿಗೆ ಸಾಂತ್ವನ ನೀಡುತ್ತದೆ. ಅವರ ಆಂತರಿಕ ಟ್ಟನ್ನು ಪರಿಹರಿಸುವಲ್ಲಿ ಅದು ನೆರವಾಗಬಲ್ಲದು. ರ ಮೂಲಾಧಾರ ಒಳಿತು ಹಾಗೂ ಉನ್ನತ ಲ್ಯಗಳಲ್ಲಿನ ನಂಬಿಕೆಯಾಗಿದೆ.

ಧರ್ಮದ ಅಂತಿಮ ಉದ್ದೇಶ ಸೂಫಿಗಳು ಸಿರುವಂತೆ **ಇನ್ಸಾನೆ ಕಾಮಿಲ್** (ಪರಿಪೂರ್ಣ ನವ)ನನ್ನು ರೂಪಿಸುವುದಾಗಿದೆ. ಪ್ರವಾದಿ ಹಮ್ಮದ್ ಇಂಥ ಮನುಷ್ಯರಾಗಿದ್ದರೆಂದು ಸಲಾಗುತ್ತದೆ. ಆದ್ದರಿಂದ ಅವರನ್ನು **ರಹಮತುನ್ ಆಲಮೀನ್**, ಅಂದರೆ ಎರಡೂ ಲೋಕಗಳ ಣೆ ಎಂದು ಕರೆಯಲಾಗುತ್ತದೆ. ಕರುಣೆ ಅನುಕಂಪ ತ್ರ ಮನುಷ್ಯನನ್ನು ಪರಿಪೂರ್ಣತೆಯತ್ತ ಡೊಯ್ಯಬಲ್ಲದೆ ವಿನಾ ದ್ವೇಷವಲ್ಲ. ಸತ್ಯ, ಅನುಕಂಪ, ತು ಹಾಗೂ ವಿವೇಕಗಳು ಇತರ ಧರ್ಮಗಳಂತೆ ಮಿನ ಮೌಲ್ಯಗಳಾಗಿವೆ. ಇಸ್ಲಾಂ ವಿಶ್ವ ನಾಗರಿಕತೆಗೆ ರ ಕೊಡುಗೆ ನೀಡುವಂತೆ ಮಾಡಿದ್ದೂ ಈ ಲ್ಯಗಳೇ. ಈ ಮಹತ್ವದ ಕೊಡುಗೆಗಳಲ್ಲಿ ಹಿಂಸೆಗೆ ಇಲ್ಲವೇ ಇಲ್ಲ.

ಹಿಂಸೆ, ದ್ವೇಷ ಹಾಗೂ ವಿನಾಶ ಜೊತೆಗೆ ವಂಥವು. ಹಿಟ್ಲರ್ ಹಾಗೂ ಮುಸೋಲಿನ ಈ ಗಳ ಸಾಕಾರ ಮೂರ್ತಿಗಳಾಗಿದ್ದರು. ಮೊಹಮ್ಮದ್ ೂ ಮತ್ತಿತರರ ಲೋಕಮಾನ್ಯ ಧಾರ್ಮಿಕ ವ್ಯಕ್ತಿತ್ವಗಳು ಎಂದೂ ಇಂಥ ಗುಣಗಳನ್ನು ತೋರ್ಪಡಿಸಲಿಲ್ಲ. ಒಸಾಮಾ ಬಿನ್ ಲಾಡೆನ್ ವಿಧ್ವಂಸಕಾರಿ ವ್ಯಕ್ತಿತ್ವವುಳ್ಳವನು. ಅವನು ಮುಸಲ್ಮಾನರು ಪಶ್ಚಿಮದ ವಿರುದ್ಧ ಸೇಡು ತೀರಿಸಿಕೊಳ್ಳಬೇಕು ಎನ್ನುವುದು ಮಾತ್ರ ಅವನ ಆಗ್ರಹವಾಹಿಗಿದೆ. ಆದರೆ ಇಸ್ಲಾಂ ವಿವೇಕದೊಂದಿಗೆ ಸಹನೆ ಹಾಗೂ ಸತ್ಯಕ್ಕೆ ಬದ್ಧವಾಗಿರಿ ಎಂದು ಅನುಯಾಯಿಗಳಿಗೆ ಬೋಧಿಸುತ್ತದೆ. ಕುರ್‌ಆನ್ ವಿವೇಕವನ್ನು **ಖೈರಾಂ ಕಸೀರಾ**(ಅಸೀಮಿತ ಒಳಿತು)ಎಂದು

ಎರಡೂ ಎಂದಾದರೂ ಏಕರೂಪವಾಗಬಹುದೆ? ರಾಜಕಾರಣಗಳು ಮಾಡುವುದೆಲ್ಲ ಯಾವತ್ತೂ ಲೌಕಿಕ ಹಿತಾಸಕ್ತಿಗಳನ್ನವಲಂಬಿಸಿರುತ್ತದೆ ಹಾಗೂ ಪ್ರವಾದಿಗಳು, ಸಂತರು ಹಾಗೂ ಸಾಧುಗಳು ಸಾಧಿಸಬಯಸುವುದು ಮನುಷ್ಯ ಕಲ್ಯಾಣ ಹಾಗೂ ಆಂತರಿಕ ತೃಪ್ತಿ. ಇದನ್ನು ಕೇವಲ ತ್ಯಾಗ, ದಾನದ ಮೂಲಕ ಮಾತ್ರ ಸಾಧಿಸಬಹುದೆ ವಿನಾ ಇನ್ನೊಬ್ಬರಿಂದ ಕಿತ್ತುಕೊಳ್ಳುವುದರಿಂದಲ್ಲ. ನಿಜವಾದ ಧಾರ್ಮಿಕ ವ್ಯಕ್ತಿ ಎಂದರೆ ಅವನು ಯಾವುದೇ ನಿರೀಕ್ಷೆ ಇಲ್ಲದೆ ಇನ್ನೊಬ್ಬರಿಗೆ ಕೊಡಮಾಡುವವನು. ಇತರರು ಅವನಿಗೆ ಋಣಿಯಾಗಿರುವರೇ ವಿನಾ ಅವನು ಯಾರಿಗೂ ಋಣಿಯಾಗಿರುವುದಿಲ್ಲ.

ಜೆಹಾದ್ ಎಂದೂ ಸೇಡು ತೀರಿಸಿಕೊಳ್ಳುವುದಕ್ಕಲ್ಲ ಎನ್ನುವುದು ಮಾತ್ರ ಶತಃಸಿದ್ಧ. ಸೇಡು ಆಕ್ರೋಶದಿಂದ ಹುಟ್ಟಿಕೊಳ್ಳುತ್ತದೆ. ಆಕ್ರೋಶ ಹಾಗೂ ಸೇಡು ಎರಡೂ ಸಂಕುಚಿತ ಹಾಗೂ ಕೀಳು ಪ್ರವೃತ್ತಿಗಳಾಗಿದ್ದು ಪರಿಪೂರ್ಣ ಮನುಷ್ಯನಲ್ಲಿ ಇವುಗಳಿಗೆ ಅವಕಾಶವಿರುವದಿಲ್ಲ. ಇಂಥ ಮನುಷ್ಯ ತನ್ನ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾನೆ/ ಹೊಂದಿರುತ್ತಾಳೆ. ನಾಗರಿಕತೆಗೆ ಕೊಡುಗೆ ನೀಡುವವನು ಉನ್ನತ ಮೌಲ್ಯಗಳು ಹಾಗೂ ರಚನಾತ್ಮಕ ಪ್ರವೃತ್ತಿಗಳಿಂದ ನಿರ್ದೇಶಿಸಲ್ಪಡುತ್ತಾನೆ. ಮೇಲೆ ವಿವರಿಸಿರುವಂತೆ ಇಸ್ಲಾಂ ಹಾಗೂ ಮುಸಲ್ಮಾನರು ವಿಶ್ವ ನಾಗರಿಕತೆಗೆ ಅಪಾರ ಕೊಡುಗೆ ನೀಡಿದ್ದಾರೆ. ಇಸ್ಲಾಂ ಇಲ್ಲದ ಜಗತ್ತು ನಿಶ್ಚಿತವಾಗಿಯೂ ಬದುಕಲು ತೀರ ಬಡವಾದ ಸ್ಥಳವಾಗಿರುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ.

ಅಸ್ಗರ್ ಅಲಿ ಎಂಜಿನಿಯರ್



ಭಾರತೀಯ ಸಮಾಜದಲ್ಲಿ ಧರ್ಮ ನಿರಪೇಕ್ಷತೆಯ ಮೌಲ್ಯಗಳ ಬಗ್ಗೆ ಜನಜಾಗೃತಿ ಮೂಡಿಸುತ್ತಿರುವ ಇವರು ಪ್ರಮುಖ ವಿದ್ವಾಂಸರು. ಮುಸ್ಲಿಮರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವರ ಹಕ್ಕುಗಳು ಕುರಿತಂತೆ ಸುಮಾರು 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ 'ಇಂಡಿಯನ್ ಜರ್ನಲ್ ಆಫ್ ಸೆಕ್ಯುಲರಿಸಂ' ಪತ್ರಿಕೆಯ ಸಂಪಾದಕರು. ಕೋಮುಸೌಹಾರ್ದತೆ ಮೂಡಿಸಲು ಇವರು ವಹಿಸಿದ ಅಪಾರ ಪರಿಶ್ರಮವನ್ನು ಗುರುತಿಸಿ ಕೊಲ್ಕತ್ತಾ ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಹಸನ್ ನಯೀಂ ಸುರಕೋಡ

ಬೆಳಗಾವಿ ಜಿಲ್ಲೆ ರಾಮದುರ್ಗದವರಾದ ಸುರಕೋಡ ಸಮಾಜವಾದಿ ಚಿಂತಕರು. ಬೇರೆಬೇರೆ ಭಾಷೆಗಳ ಅತ್ಯುತ್ತಮವಾದ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ತರ್ಜುಮೆ ಅನ್ನಿಸದ ರೀತಿಯಲ್ಲಿ ಕನ್ನಡದ ನೇಟಿವಿಟಿಗೆ ಹೊಂದಿಕೊಳ್ಳುವಂತೆ ಅನುವಾದಿಸುವಲ್ಲಿ ಸಮರ್ಥರು. ಇವರ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಕೆಲಕಾಲ ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬಾಲ ಜಂಗಮ ಬಂದನೆ

ವಡ್ಡಗೆರೆ ನಾಗರಾಜಯ್ಯ

ಕವನ



'ಭೋ! ಶಂಭೋ!
ಭವತಿ ಭಿಕ್ಷಾಂದೇಹಿ'
ಕಾವಿ ಕಮಂಡಲ ರುದ್ರಾಕ್ಷಿ
ಬಗಲಲ್ಲಿ ಜೋಳಿಗೆ ಕೈಯಲ್ಲಿ ನಾಗಬೆತ್ತ
ಭವನಾಶಿ ಹಿಡಿದು
ಸವೆಯದ ಬಯಲ ದಾರಿಯಲ್ಲಿ
ಸೋತ ನಡಿಗೆ
ಸೋಜಿಗದ ಶಿಶುವು
ತಾಯಿಯ ಗರ್ಭಯಾತ್ರೆಯ ಮುಗಿಸಿ
ಲೋಕ ಯಾತ್ರೆಗೆ ಬಂದಂತೆ
ಬಾಲ ಜಂಗಮನು ಬಾಗಿಲಿಗೆ ಬಂದವನೆ!

"ನೀವು ಯಾವ ನಾಡಿನ ಅಯ್ಯಗೋಳು
ನಿಮ್ಮ ಮಠಮನೆ ಎಲ್ಲಿ?"
ಅರಮನೆಯಿಲ್ಲ
ಗುರು ಮನೆಯಿಲ್ಲ
ಮೆಚ್ಚುವವರು ನೆಚ್ಚುವವರು ಮೊದಲಿಲ್ಲ
ಪಟ್ಣ–ಪಾಳ್ಯದಲಿ ನಿಲ್ಲದೆ
ಮನೆ–ಮಾಳಿಗೆ ಕಟ್ಟದೆ
ಊರಾಡಿಕೊಂಡು ಕೇರ್ಯಾಡಿಕೊಂಡು
ಕೋಶದಲಿ ಕಾಣದ ಕತೆ ಹೇಳ್ತಾ
ದೇಸದಮ್ಯಾಲೆ ದೇಸಾಂತರ ಹೊರಟು
ಮೂರು ಬೆಟ್ಟ ಹತ್ತಿ ಆರು ಗುಡ್ಡ ಇಳಿದು
ಕಗ್ಗಲ್ಲ ಕಣಿವೆ ದಾಟಿ
ಏಳು ಸಮುದ್ರದಲಿ ಮುಳುಗಿ
ಕೀಳು ಸಮುದ್ರದಲೆದ್ದು
ಮೂಡಲ ಮೇಲು ಸಮುದ್ರದಾಚೆಯ
ದೀಪಾಂತರದ ದ್ರಿವಿ ದಿಡ್ಡೆಯ
ಬಟಾಬಯಲಲ್ಲಿ ಕಿರುಜಟೆ ಬಿಟ್ಟು
ಬೇಸಿಗೆ ಉರಿ ಬಿಸಿಲ ಕೆಂಧೂಳ ದಾರಿಯಲಿ
ಗಾವುದ ಗಾವುದ ನಡೆದು
ಏಳು ನೂರು ಮಂದಿ ಗಾರುಡಿಗರ ಮೆಟ್ಟಿ
ಭಂಗಿ ಭೋಜನ ಭಂಗಿ ಬಾಡಿನ
ಸೇವೆಯ ಹೊತ್ತಿಗೆ ಬಾಲಜಂಗಮ ಬಂದವನೆ
ಬವನಾಶಿ ಹಿಡಿದು 'ಭವಂನಾಸ್ತಿ' ಎಂದು

ಬಲಗೈಲಿ ಬಾಡಿನ ಮಡಕೆ
ಎಡಗೈಲಿ ಹೆಂಡದ ಗಡಿಗೆ
ಕಿವಿಯಲ್ಲಿ ಭಂಗಿ ಸೊಪ್ಪು
ಭಸ್ಮ ಧೂಳುತ ಮೈಯುಂಡು

ನಗುತ್ತಾನೆ ಆದಿಸಿದ್ಧ;
ಬಸವನ ಪತ್ರೆಯ ಭಿಕ್ಷೆ ಬೇಡಿ!
ಪಡುವಣದ ಗಾಳಿ ತೀಡಿ
ರೆಕ್ಕೆಬಿಚ್ಚಿ ನವಿಲುಗಳಾಡಿ
ಮುಗಿಲುಗಳು ತೇಲಿ
ಬಳ್ಳಿ ಮಿಂಚುಗಳು ನರ್ತಿಸಿ
ಜಲಲ ಜಲಲ ಜಲಧಾರೆಯೆರೆದು
ಉಸಿರುಗೋಳದ ಉರಿಬತ್ತಿ
ಕುಡಿಜೀವದ
ತನ್ನೊಡಲ ಕಣ್ಣು ಕಂಗೆಟ್ಟು
ಕರುಳ ಸೆರಗನು ಹಿಡಿದು
ಹಾಲುಗಲ್ಲದ ಹಸುಗೂಸು ಜಂಗಮ
ನಾಲ್ಕು ಪಾದದ ಜೋಳಿಗೆ ಒಡ್ಡಿ
ಬೇಡುತ್ತಾನೆ ಭಿಕ್ಷೆ





ದಲಿತ ಲೋಕದ ಎದೆಹಾಲು ಕುಡಿದು ಅಲ್ಲಿನ ಸಾಂಸ್ಕೃತಿಕ ಜಗತ್ತಿನೊಂದಿಗೆ ಹೊಕ್ಕುಳ ಬಳ್ಳಿಯ ನಿಕಟ ಸಂಬಂಧವನ್ನು ಹೊಂದಿರುವ ವಡ್ಡಗೆರೆಯವರ ಬಹುಪಾಲು ಚಿಂತನೆಗಳು ವಿಶಾಲ ಭಿತ್ತಿಯನ್ನು ಒಳಗೊಂಡು ದ್ರಾವಿಡ ಪೂರ್ವ ಸಮಾಜಕ್ಕೂ ನಮ್ಮನ್ನು ಕೊಂಡೊಯ್ಯಬಲ್ಲವು. ಅಸ್ಪೃಶ್ಯ ಮನೋಲೋಕದ ತವಕ-ತಲ್ಲಣಗಳನ್ನು ದಾಖಲಿಸುವ ಹಾಗೂ ಅಸ್ಪೃಶ್ಯತೆಯನ್ನು ತೊಡೆದುಹಾಕ ಬಯಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಬರೆಯಬಲ್ಲವರಲ್ಲಿ ಪ್ರಮುಖರು. ಸಮಾಜಮುಖಿ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿ ಬುದ್ಧ ಜಗತ್ತನ್ನು ಮುಂದಿಟ್ಟುಕೊಂಡು ನಡೆಯುತ್ತಿರುವ ಇವರ ಸಾಹಿತ್ಯ ಕೃಷಿ ಹಲವು ಸ್ಥರದ್ದು.

ಭೋ ಶಂಭೋ!
ಭವತಿ ಭಿಕ್ಷಾಂದೇಹಿ
ಜಂಗು ಜಾಗಟೆ ಸದ್ದು
ಆಕಾಶದ ಘಂಟೆ ಘಲಿರೆಂದು
ಮಹಾಮೌನದ ಗುಹೆಯಿಂದ ಬಂದಂತೆ
ಬಂದಳು ಒಡತಿ.
ಬಂಜೆ ಕೈ ಭಿಕ್ಷೆ
ಹತ್ತೆಲೆ ಐದಡಿಕೆ ಒಂದು ಹಣದ ಮುಡಿಪು
ಜೊತೆಗೆ ಒಂದು ಮೊರ
ರಾಗಿ, ಭತ್ತ, ಬರಗು, ನವಣೆ, ಸಾಮೆ, ಕೊರಲೆ, ಆರಕದ ಪಡಿ
ಅಟ್ಟ ಬೆಟ್ಟವ ಸುತ್ತಿ
ಏಳು ಹಟ್ಟಿ ದನ ಕಾದು
ಗಾಳಿ ಗಿಡದ ಸೊಡರಂತೆ
ಒಂದು ಕಣ್ಣು ನಿದ್ರೆ
ಒಂದು ಕಣ್ಣು ಎಚ್ಚರ ಮಡಗಿ
ಗಂಡನ ಮೆಟ್ರೆ ಹಿಡಿದು
ಅರವತ್ತು ಏರು ಕಟ್ಟಿಸಿಕೊಂಡು
ಆರಂಬ ಮಾಡುವ ಬಂಜೆ
ಬೆವರು ಬಸಿದು ಬೀಜ ಬಿತ್ತುವಳು
ಬೀಜದೇವತೆ ಇವಳು ಜೀವಜಾಲದ ತಾಯಿ
ಹಾಡುವಳು ನೆಲದ ಹಾಡು
ಕೋಟಿವಿದ್ಯೆಗಿಂತ ಮೇಟಿವಿದ್ಯೆಯೇ ಮೇಲು
'ಕೃಷಿತೋ ನಾಸ್ತಿ ದುರ್ಭಿಕ್ಷಂ'

ಭೂಮಿಗೆ ಬಿತ್ತಿದ ಬೀಜ
ಎದೆಗೆ ಬಿತ್ತಿದ ಅಕ್ಷರ
ಫಲವಾಗುವುದು ದಿಟ
ಬಾಲ ಜಂಗಮನು ಬಾಗಿಲಿಗೆ ಬಂದವನೆ
ನೆಲಕ್ಕೂ ಎದೆಗೂ ಬಿತ್ತುವ
ಬೀಜದ ಭಿಕ್ಷೆಯ ಬೇಡಿ

ಕನ್ನಡ ಮತ್ತು ಇಂಗ್ಲಿಶ್

ಶೈಕ್ಷಣಿಕ ಸವಾಲುಗಳು

ಡಾ. ಮೇಟಿ ಮಲ್ಲಿಕಾರ್ಜುನ



ಅನಾದಿ ಕಾಲದಿಂದ ಹಿಡಿದು ಇವತ್ತಿನವರೆಗಿನ ಶಿಕ್ಷಣ ವ್ಯವಸ್ಥೆ ಹಾಗೂ ಅದರ ಕ್ರಮಗಳನ್ನು ಬಿಡಿಬಿಡಿಯಾಗಿ ಬಿಡಿಸಿ ನೋಡಿದರೆ, ಅದು ಎದುರಿಸುತ್ತ ಬಂದಿರುವ ಸಮಸ್ಯೆಗಳು ಎಂತಹವು ಎಂಬುದು ನಮ್ಮ ಅರಿವಿಗೆ ಬರದೇ ಇರಲಾರವು. ಶಿಕ್ಷಣ ವ್ಯವಸ್ಥೆ ಮತ್ತು ಆ ಪ್ರಕ್ರಿಯೆಯನ್ನು ಕಟ್ಟುವ ಕ್ರಮದಲ್ಲಿಯೇ ಹಲವು ಗೊಂದಲಗಳಿರುವುದು ದಿಟವಾದರೂ, ಅತ್ಯಂತ ಗಂಭೀರವಾದ ಬಿಕ್ಕಟ್ಟುಗಳು ಭಾಷೆಗೆ ಸಂಬಂಧಿಸಿದ್ದು ಎನ್ನುವುದು ಈ ಮುಂದಿನ ಚರ್ಚೆಗಳಿಂದ ಗಮನಿಸೋಣ.

ಶಿಕ್ಷಣ ಪ್ರಕ್ರಿಯೆಯಲ್ಲಿ ಭಾಷೆಯನ್ನು ಎರಡು ಮುಖ್ಯ ನೆಲೆಗಳಲ್ಲಿ ಗುರುತಿಸಬೇಕು. ಅವುಗಳೆಂದರೆ, ಒಂದು **ಗ್ರಹಿಕೆಯ ಕ್ರಮವಾಗಿ** ಮತ್ತೊಂದು **ಅಭಿವ್ಯಕ್ತಿಯ ಮಾಧ್ಯಮವಾಗಿ** ಭಾಷೆಯ ಮಹತ್ವವನ್ನು ಕಾಣಬಹುದಾಗಿದೆ. ಗ್ರಹಿಕೆಯು ಆಲೋಚನಾ ಕ್ರಮಕ್ಕೆ ಸಂಬಂಧಿಸಿದರೆ, ಅಭಿವ್ಯಕ್ತಿಯು ಅಂತಹ ಆಲೋಚನೆ ಹಾಗೂ ತಿಳುವಳಿಕೆಯನ್ನು ಹರಡುವ ಮತ್ತು ಬಳಕೆಗೆ ಒಗ್ಗೂಡಿಸುವ ಮಾದರಿಗೆ ಸಂಬಂಧಿಸಿದ್ದಾಗಿದೆ. ಈ ಎರಡೂ ನೆಲೆಗಳನ್ನು ಬಹಳ ವ್ಯಾಪಕವಾಗಿ ಚರ್ಚಿಸುವ ಅಗತ್ಯ ಈಗ ನಿಚ್ಚಳವಾಗಿ ಕಾಣುತ್ತದೆ. ಈ ಚರ್ಚೆಯು ಕಲಿಕೆಯ ನೆಲೆಗಳು, ಮಾಧ್ಯಮದ ಕ್ರಮಗಳು ಹಾಗೂ ಬೋಧನಾ ವಿಧಾನಗಳನ್ನು ಆಶ್ರಯಿಸಿಕೊಂಡಿರುತ್ತದೆ. **ಜ್ಞಾನಶಿಸ್ತು** ಹಾಗೂ **ಆಲೋಚನಾಕ್ರಮಗಳ** ನಡುವೆ ಹೊಂದಾಣಿಕೆಯನ್ನೂ ಬೆಸೆಯುವ ಹೊಣೆಗಾರಿಕೆಯು ಭಾಷೆಯ ಮೇಲಿಯೇ ಇರುತ್ತದೆ. ಇದು ಯಾವುದೇ ಶೈಕ್ಷಣಿಕ ನಿಲುವುಗಳನ್ನು ರೂಪಿಸುವವರ ಗಮನಕ್ಕೆ ಬಾರದೇ ಇರುವುದು ದುರಂತವೇ ಸರಿ.



ಕೇವಲ ಕನ್ನಡ ಮಾಧ್ಯಮದಲ್ಲಿ ಕಲಿಕೆ ಹಾಗೂ ಬೋಧನೆ ಮಾಡುವುದರಿಂದ ಎಲ್ಲವೂ ಸರಿ ಆಗುತ್ತದೆ ಎನ್ನುವುದೇ ಒಂದು ಭ್ರಮೆ. ಏಕೆಂದರೆ, ಕನ್ನಡವನ್ನು ಜ್ಞಾನಶಿಸ್ತೀಯ ಭಾಷೆಯಾಗಿ ರೂಪಿಸದೇ ಇರುವುದು ಇಂತಹ ಭ್ರಮೆಗೂ ಕಾರಣವಾಗುತ್ತೆ. ಹಾಗಾಗಿ, ಇವತ್ತು ಶಿಕ್ಷಣ ವಲಯದಲ್ಲಿ ಭಾಷೆಗೆ ಸಂಬಂಧಿಸಿದ ಬಿಕ್ಕಟ್ಟುಗಳು ಕೇವಲ ಮಾಧ್ಯಮಕ್ಕೆ ಮಾತ್ರ ಸಂಬಂಧಿಸಿದವುಗಳಲ್ಲ. ಅವು ಲೋಕಗ್ರಹಿಕೆ ಹಾಗೂ ಆಲೋಚನಾಕ್ರಮಕ್ಕೂ ಸಂಬಂಧಿಸಿವೆ. ಉದಾಹರಣೆಗೆ ವಿಜ್ಞಾನವನ್ನು ಬೋಧಿಸುವುದಕ್ಕೆ ವೈಜ್ಞಾನಿಕ ಪರಿಕಲ್ಪನೆ–ಪರಿಭಾಷೆಗಳನ್ನು ಕನ್ನಡ ಅಕ್ಷರಗಳಲ್ಲಿ ಬರೆದು ಹೇಳುವುದರಿಂದ ಅದು ಕನ್ನಡದ್ದೇ ತಿಳುವಳಿಕೆಯನ್ನು ಕೊಡಲಾರದು.

ಮಾತ್ನಾಡುವ, ಕೇಳುವ, ಓದುವ ಹಾಗೂ ಬರೆಯುವ ಎಂಬೆಲ್ಲ ಭಾಷಿಕ ಚಳಕಗಳು ಕೇವಲ ಭಾಷಿಕವಾದವುಗಳಲ್ಲ. ಅವು ಸಾಮಾಜಿಕ–ಸಾಂಸ್ಕೃತಿಕ–ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವ ಬಗೆಗಳೂ ಆಗಿರುತ್ತವೆ. ಇವುಗಳನ್ನು ರೂಢಿಸಿಕೊಳ್ಳುವ ಕ್ರಮವೇ ಆಲೋಚನಾ ಮಾದರಿಗಳನ್ನು ಹುಟ್ಟುಹಾಕುವ ಬಗೆಯಾಗಿರುತ್ತದೆ. ಇದು ಜ್ಞಾನಶಿಸ್ತುಗಳನ್ನು ಕಟ್ಟಿಕೊಳ್ಳುವ ಬಗೆಯೂ ಆಗಿರುತ್ತದೆ. ನಾಗರಿಕತೆಯ ಆರಂಭ ಕಾಲದಲ್ಲಿ ವ್ಯಾಖ್ಯಾನಿಸಿದಂತೆ, ಶಿಕ್ಷಣವೆಂದರೆ ಅದು ಕೇವಲ ಓದು, ಬರಹ ಮತ್ತು ಗಣಿತದಂತಹ [ತ್ರೀ ಆರ್ಸ್ – ರೀಡಿಂಗ್, ರೈಟಿಂಗ್ ಮತ್ತು ಅರ್ಥ್‌ಮೆಟಿಕ್ಸ್] ಸಂಕುಚಿತ ನೆಲೆಗಳಿಗೆ ಸೀಮಿತಗೊಳಿಸಿದ್ದೇ, ಇವತ್ತಿನ ಶೈಕ್ಷಣಿಕ ಬಿಕ್ಕಟ್ಟುಗಳಿಗೂ ಕಾರಣವಾಗಿದೆ. ಇದು ಕೇವಲ ಗುರುತಿಸುವ ಹಾಗೂ ಲೆಕ್ಕಿಸುವ ಮಾದರಿ ಮಾತ್ರವಾಗಿತ್ತು. ಶಿಕ್ಷಣದ ಹೊಣೆಗಾರಿಕೆ ಇಷ್ಟೇಯಲ್ಲ ಎಂಬ ತಿಳುವಳಿಕೆ ಇವತ್ತು ಎಲ್ಲರದೂ ಆಗಿದೆ. ಮತ್ತೊಂದು ಗ್ರಹಿಕೆಯೇನೆಂದರೆ ನುಡಿ ಚಳಕಗಳು ಕೇವಲ ಭಾಷೆಯನ್ನು ಕಲಿಯುವ ಬಗೆಗಳೆಂದೂ ಅರ್ಥೈಸಿರುವುದು ಇದೆ. ಹೌದು, ಈ ಚಳಕಗಳ ಪ್ರಾಥಮಿಕ ಉದ್ದೇಶ ಭಾಷೆಯನ್ನೇ ಕಲಿಯುವುದಾದರೂ ಅವುಗಳ ಕೆಲಸ ಅಷ್ಟಕ್ಕೆ ನಿಲ್ಲುವುದಿಲ್ಲ. ಅವುಗಳು ಜ್ಞಾನವನ್ನು ಕೊಡು–ಪಡೆಯುವ ಕ್ರಮಕ್ಕೆ ಪೂರಕವಾಗಿ ಕಿಳಕಿಂಡಿಗಳಾಗಿಯೂ ಕೆಲಸ ಮಾಡುತ್ತವೆ.

ಯಾವುದೇ ಒಂದು ಭಾಷೆಯ ವೈಚಾರಿಕ ಕಿಚ್ಚುಗಾರಿಕೆ ನೆಲೆಯೂರುವುದು ಆ ಭಾಷೆಯ ಬಳಕೆ ಇಂತಹ ವಲಯದೊಳಗೆ ಎಷ್ಟರಮಟ್ಟಿಗೆ ಇರುತ್ತದೆ ಎಂಬುದನ್ನು ಆಧರಿಸಿಕೊಂಡು ತೀರ್ಮಾನವಾಗುತ್ತದೆ. ಇಂತಹದೊಂದು ವೈಚಾರಿಕ ಸ್ವರೂಪವನ್ನು ಯಾವುದೇ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದದಿಂದ ನೇರವಾಗಿ ಪಡೆದುಕೊಳ್ಳುವುದು ಸಾಧ್ಯವಿಲ್ಲ. ಆದೊಂದು ಅನುಭವವಾಗಿ ಸಿಗಲಾರದು. ಏಕೆಂದರೆ ಅದು ಕೇವಲ ಅನುವಾದವಾಗಿರುತ್ತದೆ ಹೊರತು ಆಲೋಚನಾಕ್ರಮವಾಗಿ ಒದಗಿಬರಲಾರದು. ಪ್ರತಿಯೊಬ್ಬ ಭಾಷಿಕನು ತನ್ನ ವೈಚಾರಿಕ ಮಾದರಿಗಳನ್ನು ತನ್ನ ಭಾಷೆಯಿಂದಲೇ ರೂಪಿಸಿಕೊಂಡಿರುತ್ತಾನೆ. ಆಯಾ ಭಾಷಿಕನಿಗೆ ತನ್ನ ಭಾಷೆಯಿಂದ ಇಂತಹ ವೈಚಾರಿಕ ನೆಲೆಗಳು ಸಿದ್ಧಿಸದೇ ಹೋದರೆ, ಲೋಕಗ್ರಹಿಕೆಯಲ್ಲಿ ಏರುಪೇರುಗಳಾಗುತ್ತವೆ. ಆದರೆ ಬಹುಭಾಷಿಕ ಸನ್ನಿವೇಶದಲ್ಲಿ ಸಿಗುವ ಲೋಕಾನುಭವ ಯಾವುದೇ ಒಂದು ಭಾಷೆಗೆ ಮಾತ್ರ ಸೀಮಿತವಾಗದೇ ಇರುವ ಸಾಧ್ಯತೆಗಳಿರುತ್ತವೆ. ಆ ಪರಿಸರದ ಹಲವು ಭಾಷೆಗಳ ನಡುವಣ ಒಡನಾಟದ ಪರಿಣಾಮದಿಂದ ಒಂದು ಬಗೆಯ ಸಮಾನ ನಲೆಯ ಲೋಕಗ್ರಹಿಕೆಯನ್ನು ಮೇಲ್ನೋಟದಲ್ಲಿ ಕಾಣಬಹುದು. ಉದಾ.ಗೆ ಕನ್ನಡ, ಸಂಸ್ಕೃತ, ತುಳು ಹಾಗೂ ಲಂಬಾಣಿ ಭಾಷೆಗಳ ನಡುವಿನ ಸಂಬಂಧವನ್ನು ಗಮನಿಸಬಹುದು. ಇಂತಹ ಗ್ರಹಿಕೆಗಳು ಕೂಡ ಅಧಿಕಾರ ಸಂಬಂಧದ ನೆಲೆಯಿಂದ ಕೂಡಿರುತ್ತವೆ ಎಂಬುದು ಗಮನಾರ್ಹ. ಆದರೆ, ಇಂಗ್ಲಿಶ್ ಭಾಷೆ ಯಾವತ್ತೂ ನಮ್ಮ ಪರಿಸರದ ಭಾಷೆಯಾಗಿಲ್ಲವೆಂಬುದನ್ನು ಗಮನಿಸಬೇಕು. ಹಾಗಾಗಿ ಇಂಗ್ಲಿಶ್ ಮೂಲಕ ಗಳಿಸುವ ಲೋಕಾನುಭವನ್ನು ನಮ್ಮ ದೇಶೀ ಅನುಭವದೊಂದಿಗೆ ಹೋಲಿಕೆ ಮಾಡಿ ನೋಡುವ ಕ್ರಮವೇ ತಪ್ಪು. ಯುರೋಪಿನ ಬಹುಭಾಷಿಕತೆಗೂ ಭಾರತದ ಬಹುಭಾಷಿಕತೆಗೂ ಹೋಲಿಕೆ ಮಾಡಿ, ಯುರೋಪಿನಲ್ಲಿ ಫ್ರೆಂಚ್ ಮೂಲಕ ಪಡೆಯುವ ತಿಳುವಳಿಕೆ ಹೇಗೆ ಸಹಜವಾಗಿರುತ್ತದೆಯೋ, ಹಾಗಿಯೇ ಭಾರತದಲ್ಲಿ ಇಂಗ್ಲಿಶ್ ಮೂಲಕ ಪಡೆಯುವ ತಿಳುವಳಿಕೆಯೂ ಸಹಜವಾಗಿರುತ್ತೆಂಬ ವಾದಗಳನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಭಾರತ ಹಾಗೂ ಯುರೋಪಿನ ಬಹುಭಾಷಿಕತೆಯ ನಡುವೆ ರಾಚನಿಕವಾದ ಭಿನ್ನತೆಗಳಿವೆ. ಈ ಭಿನ್ನತೆಗಳ ನಡುವೆ ಸಮಾನ ನೆಲೆಯ ಹೊಂದಾಣಿಕೆಯನ್ನು ತರುವುದಕ್ಕೆ ಯಾವುದೇ ಸಾಮಾಜಿಕ–ಭಾಷಾಶಾಸ್ತ್ರೀಯ ಸಿದ್ಧಾಂತಗಳು ಇದುವರೆಗೂ ರೂಪಗೊಂಡಿಲ್ಲ.

ಕೇವಲ ಕನ್ನಡ ಮಾಧ್ಯಮದಲ್ಲಿ ಕಲಿಕೆ ಹಾಗೂ ಬೋಧನೆ ಮಾಡುವುದರಿಂದ ಎಲ್ಲವೂ ಸರಿ ಆಗುತ್ತದೆ ಎನ್ನುವುದೇ ಒಂದು ಭ್ರಮೆ. ಏಕೆಂದರೆ, ಕನ್ನಡವನ್ನು ಜ್ಞಾನಶಿಸ್ತೀಯ ಭಾಷೆಯಾಗಿ ರೂಪಿಸದೇ ಇರುವುದು ಇಂತಹ ಭ್ರಮೆಗೂ ಕಾರಣವಾಗುತ್ತೆ. ಹಾಗಾಗಿ, ಇವತ್ತು ಶಿಕ್ಷಣ ವಲಯದಲ್ಲಿ ಭಾಷೆಗೆ ಸಂಬಂಧಿಸಿದ ಬಿಕ್ಕಟ್ಟುಗಳು ಕೇವಲ ಮಾಧ್ಯಮಕ್ಕೆ ಮಾತ್ರ ಸಂಬಂಧಿಸಿದವುಗಳಲ್ಲ. ಅವು ಲೋಕಗ್ರಹಿಕೆ ಹಾಗೂ ಆಲೋಚನಾಕ್ರಮಕ್ಕೂ ಸಂಬಂಧಿಸಿವೆ. ಉದಾ.ಗೆ ವಿಜ್ಞಾನವನ್ನು ಬೋಧಿಸುವುದಕ್ಕೆ ವೈಜ್ಞಾನಿಕ ಪರಿಕಲ್ಪನೆ–ಪರಿಭಾಷೆಗಳನ್ನು ಕನ್ನಡ ಅಕ್ಷರಗಳಲ್ಲಿ ಬರೆದು ಹೇಳುವುದರಿಂದ ಅದು ಕನ್ನಡದ್ದೇ ತಿಳುವಳಿಕೆಯನ್ನು ಕೊಡಲಾರದು. ಜ್ಞಾನಶಿಸ್ತುಗಳು ರೂಪಗೊಳ್ಳುವ ಮಾದರಿಗಳನ್ನು ಕೇವಲ ಎರವಲು ಪಡೆದುಕೊಳ್ಳುವುದರಿಂದ ಸಾಕಷ್ಟು ಅವಘಡಗಳು ಹುಟ್ಟಿಕೊಂಡಿವೆ. ಪ್ರತಿಯೊಬ್ಬ ಭಾಷಿಕನ ತಿಳುವಳಿಕೆ ಕುಡಿಯೊಡೆಯುವ ಬಗೆಗಳು ಅವನ ಭಾಷಿಕ–ವೈಚಾರಿಕ ನೆಲೆಗಳಿಂದಲೇ ಹೊರ ಹೊಮ್ಮುತ್ತವೆ. ಪ್ರತಿಯೊಂದು ಭಾಷೆಯು ತನ್ನ ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ಮಾಧ್ಯಮವಾಗಬೇಕು ಹೊರತು ಎಲ್ಲವನ್ನೂ ಬೇರೊಂದು ಭಾಷೆಯಿಂದ ಪಡೆಯುವ ಇಕ್ಕಟ್ಟಿಗೆ ಸಿಲುಕಬಾರದು. ಇಂತಹ ಪರಿಸ್ಥಿತಿಗೆ ಕನ್ನಡ ಸಿಲುಕಿಕೊಂಡಿದೆ. ಒಂದು ಕಾಲದಲ್ಲಿ ಕನ್ನಡವನ್ನು ಸಂಸ್ಕೃತದ ಹಂಗಿಗೆ

ಪರಿಣಾಮ

ಹೊಲಸು ನೀರು ಹರಿವ ಕಡೆ
ಹಲಸು ಹಣ್ಣಾಗಿ
ಊರಿಗೆ ತುಂಬಿತು ಪರಿಮಳ
ಗಂಗೆ ತುಂಗೆ ಕಾವೇರಿ
ಮಿಂದು ಬಂದರು
ಕಳೆದು ಹೋಗಲಿಲ್ಲ
ಮನದ ಮಡಿ ಮೈಲಿಗೆ
ಆಚಾರ ವಿಚಾರ



ಜರಗನಹಳ್ಳಿ ಶಿವಶಂಕರ್

ಸಿಲುಕಿಸಿದರೆ. ಇವತ್ತು ಕನ್ನಡವನ್ನು ಇಂಗ್ಲಿಶಿನ ಹಂಗಿಗೆ ಸಿಲುಕಿಸಲಾಗಿದೆ. ಕನ್ನಡ ಮಾತು ತಲೆಯೆತ್ತುವ ಬಗೆಗೆ ಪಣತೊಟ್ಟ ವೀರ ಕನ್ನಡಿಗರೆ ಇದಕ್ಕೆ ಹೊಣೆಗಾರರು ಬೇರೆ ಯಾರು ಅಲ್ಲ ಎಂದೇ ಹೇಳಬೇಕು.

ಭಾಷೆ ಅಂದರೆ ನಮ್ಮ ಸುತ್ತಲಿನ ಇಡೀ ಲೋಕವನ್ನು ಅರಿಯುವುದಕ್ಕೆ ಇರುವ ಮಾಧ್ಯಮ. ಕನ್ನಡವನ್ನು ಕೇವಲ ಒಂದು ಸಂವಹನ ಭಾಷೆಯಾಗಿ, ಕೇವಲ ಒಂದು ಆಡಳಿತ ಭಾಷೆಯಾಗಿ, ಕೇವಲ ಒಂದು ಕಛೇರಿ ಭಾಷೆಯನ್ನಾಗಿ ಮಾತ್ರ ಸೀಮಿತಗೊಳಿಸಿ ನೋಡಬಾರದು. ಇವತ್ತು ಈ ಸ್ಥಿತಿಗೆ ಕನ್ನಡವನ್ನು ತಳ್ಳಲಾಗಿದೆ. ಇಂತಹ ಸ್ಥಿತಿಯಿಂದ ಕನ್ನಡವನ್ನು ಹೊರಗೆ ತರುವ ನೆಲೆಗಳನ್ನು ಮರು ರೂಪಿಸುವ ಜರೂರಿದೆ. ಇಡೀ ಲೋಕದ ಎಲ್ಲ ವ್ಯವಹಾರಗಳನ್ನು ಬೌದ್ಧಿಕವಾಗಿ, ಭಾವನೆಗಳ ಮೂಲಕ ಗ್ರಹಿಸೋಕೆ ಇರುವ ಒಂದೇ ಒಂದು ಮಾಧ್ಯಮವೆಂದರೆ ಭಾಷೆ ಮಾತ್ರ. ಅದು ಲೋಕಗ್ರಹಿಕೆ ಹಾಗೂ ವಿವಿಧ ಜ್ಞಾನವನ್ನು ಪಡೆದುಕೊಳ್ಳಬೇಕಾದಂತಹ ದಾರಿಯೂ ಆಗಿದೆ. ಹಾಗಾಗಿ ಭಾಷೆಯೆಂಬುದು ದಾರಿಯು ಹೌದು ದೀಪವೂ ಹೌದು. ಆದರೆ ಕೆಲವು ವರ್ಗಗಳು ಶತಮಾನಗಳಿಂದಲೂ ತಮ್ಮ ಅಸ್ತಿತ್ವವನ್ನು ಅಮರವಾಗಿಸಿಕೊಳ್ಳುವ ಇರಾದೆಯಿಂದ ಭಾಷೆಗಳನ್ನು ಬೆಂಕಿಯಾಗಿಯೂ ಬಳಸಿಕೊಂಡ ನಿದರ್ಶನಗಳಿವೆ ಇದೊಂದು ಚಾರಿತ್ರಿಕ ವಿಪರ್ಯಾಸ. ಇಂತಹ ಅಪಾಯಗಳಿಂದ ಕನ್ನಡ ನುಸುಳಿ ಬಂದರೂ ತನ್ನ ಅಂತಸತ್ವವನ್ನು ಬಲಿ ಕೊಟ್ಟಿರುವುದು ಮಾತ್ರ ದಿಟ. ಈ ನಡುವೆ ಇಂತಹ ಅಂತಸತ್ವವನ್ನು ಜೋಪಾನ ಮಾಡುವ ಕೆಲವು ಪ್ರಯತ್ನಗಳನ್ನೂ ಕಾಣಬಹುದು ಆದರೆ ಇವು ಯಾವತ್ತು ಮುಖ್ಯವಾಹಿನಿಗೆ ಬರಲೇ ಇಲ್ಲ. ಕನ್ನಡ ಎನ್ನುವುದು ಕೇವಲ ಒಂದು ಭಾಷೆಯಲ್ಲ. ಅದೊಂದು ಆಲೋಚನಾಕ್ರಮ ಹಾಗೂ ಲೋಕಗ್ರಹಿಕೆಯ ಬಗೆ ಎನ್ನುವುದನ್ನು ಮನಗಾಣಬೇಕಿದೆ. ಕನ್ನಡವನ್ನು ಹೊರಗಿಟ್ಟು ಕರ್ನಾಟಕದಲ್ಲಿ ಶಿಕ್ಷಣ ನಡೆಯುತ್ತಿದೆ. ಹಾಗೂ ಇದಕ್ಕೆ ಪೂರಕವಾದ ಸಿದ್ಧತೆಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ಇತ್ತೀಚಿಗೆ ನಡೆಯುತ್ತಿವೆ. ರಾಜ್ಯಂಗ ನೀತಿಗಳು ಮತ್ತು ಭಾಷಾ ನೀತಿಗಳು ಇದಕ್ಕೆ ಒತ್ತಾಸೆಯಾಗಿ ನಿಲ್ಲುತ್ತಿವೆ. ಇದರಿಂದಾಗಿಯೇ ಕನ್ನಡದಲ್ಲಿ ವ್ಯವಹರಿಸುವ ನೆಲೆಗಳಲ್ಲಿ ಮತ್ತಷ್ಟು ಗೋಜಲುಗಳು ಹುಟ್ಟಿಕೊಂಡಿವೆ. ಪರಿಣಾಮವಾಗಿ ಕೆಲವು ಭಾಷೆಗಳಿಗೆ ಅಧಿಕಾರ ಹಾಗೂ ಅವಕಾಶಗಳು ಸಿಕ್ಕಿವೆ. ಉದಾ.ಗೆ ಸಂಸ್ಕೃತ, ಇಂಗ್ಲಿಶ್ ಹಾಗೂ ಹಿಂದಿ ಮುಂತಾದ ಭಾಷೆಗಳನ್ನು ಈ ನೆಲೆಯಲ್ಲಿ ಗುರುತಿಸಬಹುದು. ಎಲ್ಲಾ ವಲಯಗಳಲ್ಲೂ ಕನ್ನಡದಲ್ಲೇ ಜ್ಞಾನವನ್ನು ಪಡೆಯುವ ನೆಲೆಗಳನ್ನು ಹೆಚ್ಚು ಹೆಚ್ಚು ಹುಟ್ಟುಹಾಕಬೇಕಾದರೆ, ಕನ್ನಡವನ್ನು ಕೇವಲ ಎರವಲು ತಿಳುವಳಿಕೆಗಾಗಿ ಮಾತ್ರ ಸೀಮಿತಗೊಳಿಸಬಾರದು. ಬದಲಾಗಿ ತನ್ನ ನೆಮ್ಮಿರುವ ಸಮುದಾಯಗಳ ಇಡೀ ತಿಳಿವಿನ ಲೋಕವನ್ನು ಪ್ರತಿನಿಧಿಸುವ ಭಾಷೆಯನ್ನಾಗಿ ರೂಪಿಸಬೇಕಾಗುತ್ತದೆ. ಆವಾಗ ಬೇರೆ ಭಾಷೆಗಳ ಮೊರೆಹೋಗುವ ಅನಿವಾರ್ಯ ಇರುವುದಿಲ್ಲ. ಜ್ಞಾನಶಿಸ್ತು ಮತ್ತು ಭಾಷೆಗಳ ನಡುವಣ ನಂಟು ಕೇವಲ ಭಾಷಾ ಮಾಧ್ಯಮಕ್ಕೆ ಸೀಮಿತವಾಗಿರುವುದಿಲ್ಲ ಎಂಬುದು ಈ ಮೇಲಿನ ಚರ್ಚೆಗಳಿಂದ ನಿಚ್ಚಳಗೊಳ್ಳುತ್ತದೆ. ಇದು ಜ್ಞಾನ ಪರಂಪರೆಯನ್ನು ಚಲನಶೀಲಗೊಳಿಸುವ ಬಗೆಯೂ ಆಗಿರುತ್ತದೆ. ಈ ನೆಲೆಯಲ್ಲಿ ಕನ್ನಡ ಪರವಾದ ಚಿಂತನೆಗಳು ಮೂಡಬೇಕಾದ ಅಗತ್ಯವಿದೆ.



ಭಾಷೆ ಕೇವಲ ಒಂದು ಸಾಧನವಲ್ಲ. ಅದೊಂದು ಆಲೋಚನಾ ಕ್ರಮ, ಸಾಂಸ್ಕೃತಿಕ ಅರಿವು ಹಾಗೂ ವಿವೇಕವನ್ನೂ ಅದು ಒಳಗೊಂಡಿರುತ್ತದೆ. ಪ್ರತೀ ಭಾಷೆಯು ತನ್ನಷ್ಟಕ್ಕೇ ತಾನು ಒಂದು ಜ್ಞಾನಶಿಸ್ತೂ ಆಗಿರುವಂತಹದು. ಜ್ಞಾನದ ನೆಲೆಗಳನ್ನು ಗುರುತಿಸುವ ಮಾದರಿಗಳನ್ನು ಹೇಗೆ ಕಂಡುಕೊಳ್ಳಲಾಗಿದೆ ಎಂಬುದರ ಆಧಾರದ ಮೇಲೆ ಆಯಾ ಭಾಷೆಗಳ ಬೌದ್ಧಿಕ ಕಸುವು ಎಷ್ಟೆಂಬುದು ನಮ್ಮ ಅರಿವಿಗೆ ಬರುತ್ತದೆ. ಮಗು ತನ್ನ ಲೋಕಾನುಭವವನ್ನು ಪಡೆಯುವ ಬಗೆಗೂ ಶಾಲೆಯಲ್ಲಿ ಗಳಿಸಿಕೊಳ್ಳುವ ತಿಳುವಳಿಕೆಯ ನಡುವೆ ಒಂದು ನಂಟು ಏರ್ಪಡುವುದು ಭಾಷೆಯ ಮೂಲಕ ಮಾತ್ರ, ತನ್ನ ಪರಿಸರದಲ್ಲದ ಯಾವುದೇ ಒಂದು ಭಾಷೆಯ ಮೂಲಕ ಪಡೆಯುವ ತಿಳುವಳಿಕೆಯನ್ನು ತನ್ನ ನೆಲದ ಅನುಭವವಾಗಿ ಮೂರ್ತಗೊಳಿಸುವ ಮಾದರಿಗಳು ನಾಪತ್ತೆಯಾಗುತ್ತವೆ. ಇಂತಹ ತಿಳಿವು ಕೇವಲ ಅಮೂರ್ತರೂಪದಲ್ಲಿಯೇ ನೆಲೆನಿಂತಾಗ ಮಗುವಿನ ಬೌದ್ಧಿಕ ವಿಕಾಸಕ್ಕೆ ತೊಡಕುಗಳುಂಟಾಗುತ್ತವೆ. ಇದರಿಂದ ಸಾಂಸ್ಕೃತಿಕ ಹೊಂದಾಣಿಕೆಯಲ್ಲಿ ಏರುಪೇರುಗಳು ಉಂಟಾಗುತ್ತವೆ. ಕಾರಣ ಪ್ರತೀ ಮಗುವಿನಲ್ಲಿ ಮೂಡುವ ಮೂಲ ಗ್ರಹಿಕೆಯ ನೆಲೆಗಳು, ಆಯಾ ಮಗುವಿನ ಪರಿಸರದ ಭಾಷಿಕ ವಿನ್ಯಾಸಕ್ಕೆ ತಕ್ಕುದಾಗಿರುತ್ತವೆ. ಯಾವ ಬಗೆಯ ತಿಳುವಳಿಕೆ ಆದರೂ ಸರಿ ಅದನ್ನು ತನ್ನ ಭಾಷೆಗೆ ರೂಪಾಂತರಿಸಿಕೊಳ್ಳುವ/ಕಸಿ ಮಾಡುವ ಬೌದ್ಧಿಕ ಚಳಕಗಳು ಇನ್ನೂ ಸಿದ್ಧಿಸದೇ ಇರುವ ಇಂತಹ ಆವಸ್ಥೆಯಲ್ಲಿ ಇಂಗ್ಲಿಶ್ ಮಾಧ್ಯಮ ಎಷ್ಟೂ ಯುಕ್ತ?

ಭಾರತದಲ್ಲಿಯೂ ಇ.ಎಲ್.ಟಿ. [ಇಂಗ್ಲಿಶ್ ಭಾಷಾ ಬೋಧನೆ] ಒಂದು ಅಧ್ಯಯನ ಶಿಸ್ತಾಗಿ ಬೆಳದಿದೆ ಸರಿ. ಆದರೆ ಇದರಿಂದ ಇಂಗ್ಲಿಶನ್ನು ಹೇಗೆ ಕಲಿಸಬೇಕು ಎನ್ನುವ ಅನುಮಾನಗಳನ್ನೇ ಇನ್ನೂ ತೀರಿಸಿಕೊಳ್ಳಲು ಸಾಧ್ಯವಾಗಿಲ್ಲ. ಹಾಗೂ ಇಂಗ್ಲಿಶನ್ನು ಭಾಷೆಯಾಗಿ ಕಲಿಸಬೇಕೋ ಅಥವಾ ಅದನ್ನು ಮಾಧ್ಯಮದ

ಕನ್ನಡ ಭಾಷೆಯು ತನ್ನೊಳಗೆ ಇಡೀ ಪ್ರಪಂಚವನ್ನು ಕಂಡು ಕಾಣಿಸಬಲ್ಲದು ಎನ್ನುವ ವಿಶ್ವಾಸ ಕವಿರಾಜಮಾರ್ಗಕಾರನದ್ದಾಗಿತ್ತು ಎನ್ನುವ ನಂಬಿಕೆಯ ಮಾತುಗಳು ಇವತ್ತು 21ನೇ ಶತಮಾನದಲ್ಲಿಯೂ ಕೇಳಿ ಬರುತ್ತಿವೆ. ಇಂತಹ ನಂಬಿಕೆಯ ಮಾತುಗಳನ್ನು ಕೂಡ ಸೀಳಿ ನೋಡುವ ಅಗತ್ಯವಿದೆ. ಕೇವಲ ಅಭಿಮಾನ ಮತ್ತು ಉತ್ಸಾಹದ ಮಾತುಗಳಿಂದ ಯಾರಿಗೂ ಲಾಭವಿಲ್ಲ. ಕನ್ನಡ ಭಾಷೆಯನ್ನು ಜ್ಞಾನಶಿಸ್ತೀಯ ಭಾಷೆಯನ್ನಾಗಿ ರೂಪಿಸದೇ ಹೋದರೆ, ಇಂಗ್ಲಿಶಿನಂತಹ ಭಾಷೆಗಳ ಪ್ರಾಬಲ್ಯದಿಂದ ತಪ್ಪಿಸಿಕೊಳ್ಳುವುದು ದುಸ್ತರವೇ ಸರಿ.



ಭಾಷೆಯನ್ನಾಗಿ ಬಳಸಿಕೊಳ್ಳಬೇಕೋ ಎಂಬ ಪ್ರಶ್ನೆಗಳು ಇತ್ಯರ್ಥವಾಗುವುದಾದರೂ ಹೇಗೆ? ಹಾಗಿದ್ದಾಗ ಇಂಗ್ಲಿಶನ್ನು ಯಾಕಾಗಿ, ಯಾರಿಗಾಗಿ, ಯಾವಾಗ, ಎಲ್ಲಿ, ಹೇಗೆ ಕಲಿಸಬೇಕು ಎಂಬಿತ್ಯಾದಿ ಪ್ರಶ್ನೆಗಳನ್ನು ಕುರಿತು ಚರ್ಚಿಸುವ ಕಾಲಕ್ಕಾಗಿ ಕಾಯಬೇಕಿದೆ. ಏಕೆಂದರೆ ಇಂಗ್ಲಿಶ್ ಭಾಷೆ ನಮಗೇಕೆ ಬೇಕು ಎನ್ನುವುದನ್ನು ಕುರಿತ ಗುರಿಗಳು ಇನ್ನೂ ನಿಚ್ಚಳವಾಗಿಲ್ಲ ಎಂದೇ ಅರ್ಥ. ಕರ್ನಾಟಕದಲ್ಲಿ ಇಂಗ್ಲಿಶ್ ಬೋಧಿಸುವ ಬಹುತೇಕ ಅಧ್ಯಾಪಕ ಹಾಗೂ ಪ್ರಾಧ್ಯಾಪಕರಿಗೆ ಇ.ಎಲ್.ಟಿ ಎಂಬ ಪರಿಕಲ್ಪನೆಯೇ ಗೊತ್ತಿಲ್ಲ. ಇದರ ಅಗತ್ಯವು ಯಾರಿಗೂ ಇಲ್ಲವೆಂದೇ ಅರ್ಥ. ಜೊತೆಗೆ ಭಾಷೆ ಮತ್ತು ಸಾಹಿತ್ಯವನ್ನು ಬೋಧಿಸುವ ಕ್ರಮದಲ್ಲಿ ಇರಬೇಕಾದ ಸಾಮಾನ್ಯ ವ್ಯತ್ಯಾಸಗಳ ಪರಿಚಯವೂ ಅವರಿಗೆ ಇರುವುದಿಲ್ಲ. ಇನ್ನೂ ಯಾವ ಯಾವ ಬೋಧನಾ ಪದ್ಧತಿಗಳನ್ನು ಯಾವಾಗ? ಎಲ್ಲಿ? ಹೇಗೆ? ಬಳಸಿಕೊಳ್ಳಬೇಕು ಎಂಬ ಭಾಷಾ ಬೋಧನೆಯ ಮೂಲತತ್ವಗಳ ಮೊದಲ ಪಾಠಗಳನ್ನು ಇವರಿಗೆ ಹೇಳುವವರಾದರೂ ಯಾರು? ಇದಕ್ಕಿಂತ ಹೆಚ್ಚಿನ ಮಟ್ಟದ ನ್ಯೂನ್ಯತೆಗಳನ್ನು ಕನ್ನಡ ಭಾಷಾ ಬೋಧನೆಯಲ್ಲೂ ಕಾಣಬಹುದು. ಒಟ್ಟಿನಲ್ಲಿ ಭಾಷೆಯ ಕಲಿಕೆ ಕುರಿತು ಇಷ್ಟೊಂದು ಸಮಸ್ಯೆಗಳಿರುವಾಗ, ಮಾಧ್ಯಮ ಕುರಿತ ಪ್ರಶ್ನೆಗಳನ್ನು ಯಾವ ನೆಲೆಯಿಂದ ಬಿಡಿಸಿ ನೋಡಬೇಕು ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿಯೇ ಕಾಡುತ್ತದೆ.

ಯಾವುದೇ ಎರಡು ಭಾಷೆಗಳ ನಡುವೆ ನಡೆಯುವ ಕೊಡು – ಕೊಳ್ಳುವ ಸಂಬಂಧವನ್ನು ಹುಷಾರಿತನದಿಂದ ಬಿಡಿಸಿ ನೋಡಬೇಕು. ಅದಕ್ಕಾಗಿ, ಇಂಗ್ಲಿಶ್ ಹಾಗೂ ಕನ್ನಡ ಭಾಷೆಗಳ ನಡುವಣ ಒಡನಾಟ ಎಂತಹದು ಎಂಬುದನ್ನು ತಿಳಿಯುವ ಜರೂರಿದೆ. ಏಕೆಂದರೆ ಭಾಷೆಗಳ ನಡುವಣ ಒಡನಾಟ ಕೇವಲ ಕೊಡು – ಪಡೆಯುವ ನೆಲೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಈ ಪ್ರಕ್ರಿಯೆ ಯಾವುದೇ ಒಂದು ಭಾಷೆಗೆ ಯಜಮಾನಿಕೆಯ ನೆಲೆಯನ್ನು ತಂದು ಕೊಡುತ್ತದೆ. ಪರಿಣಾಮವಾಗಿ ಯಾವುದೇ ಒಂದು ಭಾಷೆ ಕೊಡುವ ಜಾಗದಲ್ಲಿದ್ದರೆ, ಮತ್ತೊಂದು ಭಾಷೆ ಕೇವಲ ಪಡೆಯುವ ಜಾಗದಲ್ಲಿರುತ್ತದೆ. ಕನ್ನಡವನ್ನು ಕೇವಲ ಪಡೆಯುವ ಭಾಷೆಯನ್ನಾಗಿ ಮಾಡಲಾಗಿದೆ. ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ಮಾಡದೇ ಹೋದರೆ ಅಂತಹ ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳುತ್ತಾರೆ. ಇದು ಕೇವಲ ಮಾಧ್ಯಮಕ್ಕೆ ಸೀಮಿತಗೊಂಡಿರದೇ, ಆಲೋಚನಾ ಕ್ರಮಕ್ಕೂ ಹಾಗೂ ಲೋಕಗ್ರಹಿಕೆಗೂ ಸಂಬಂಧಿಸಿದ್ದಾಗಿರುತ್ತದೆ.

ಮಾನವಿಕ, ಸಾಮಾಜಿಕ ವಿಜ್ಞಾನ, ವಿಜ್ಞಾನ, ಗಣಿತ, ತಂತ್ರಜ್ಞಾನ ಹಾಗೂ ವೈದ್ಯಕೀಯದಂತಹ ಶಾಸ್ತ್ರ ಗ್ರಂಥಗಳು, ಕೇವಲ ಕನ್ನಡ ಭಾಷಿಕ ರಚನೆಯಲ್ಲಿ ಅಚ್ಚಾದರೆ ಸಾಲದು. ಅದು ಕನ್ನಡ/ಕರ್ನಾಟಕ ಮೂಲದ ತಿಳಿವಿನಿಂದಲೇ ರೂಪಗೊಳ್ಳಬೇಕು. ಆವಾಗ ಕನ್ನಡದಂತಹ ದೇಶೀ ಭಾಷೆಗಳು ಕೂಡ ಯಾವುದೇ ಬಗೆಯ ತಿಳಿವಿನ ವಲಯವನ್ನು ನಿರ್ಭಿಡೆಯಿಂದ ಪ್ರವೇಶಿಸಬಲ್ಲವು. ಲ್ಯಾಟಿನ್, ಗ್ರೀಕ್, ಸಂಸ್ಕೃತ, ಅರಾಬಿಕ್, ಪರ್ಶಿಯನ್, ಇಂಗ್ಲಿಶ್ ಹಾಗೂ ಫ್ರೆಂಚ್‌ನಂತಹ ಭಾಷೆಗಳು ಮಾತ್ರ ಯಾವುದೇ ಬಗೆಯ ತಿಳುವಳಿಕೆಯನ್ನಾದರೂ ಕೊಡಬಲ್ಲವು, ಈ ಭಾಷೆಗಳಿಂದಲೇ ಜಗತ್ತಿನ ಇನ್ನುಳಿದ ಭಾಷೆಗಳು ಎಲ್ಲಾ ಬಗೆಯ ತಿಳುವಳಿಕೆ/ಜ್ಞಾನವನ್ನು ಪಡೆದುಕೊಳ್ಳುತ್ತವೆ. ಇದು ಶತ– ಶತಮಾನಗಳಿಂದಲೂ ನೆಲೆಗೊಂಡಿರುವ ನಂಬಿಕೆ. ಕೊಡುವ ಭಾಷೆಗಳು ಹಾಗೂ ಪಡೆಯುವ ಭಾಷೆಗಳು ಎನ್ನುವ ನಂಬಿಕೆಯೇ ಒಂದು ಸಾಮಾಜಿಕ ರಚನೆ. ವಾಸ್ತವವಾಗಿ ಯಾವುದೇ ಕೆಲವು ಭಾಷೆಗಳಿಗೆ ಮಾತ್ರ ಎಲ್ಲಾ ರೀತಿಯ ಜ್ಞಾನವನ್ನು ಹುಟ್ಟಿಸುವ ಕಸುವು ಇರುವುದಿಲ್ಲ. ಯಾವ ಭಾಷೆಗೆ ಬೇಕಾದರೂ ಇಂತಹ ಜ್ಞಾನಶಿಸ್ತೀಯ ಕಸುವುವನ್ನು ಬೆಳೆಸುವ ಸಾಧ್ಯತೆ ಇರುತ್ತದೆ. ಆದರೆ ಸಾಂಸ್ಕೃತಿಕ – ರಾಜಕೀಯ ಪ್ರಾಬಲ್ಯದಿಂದ ಇಂತಹ ಅವಕಾಶಗಳು ಕೆಲವೇ ಕೆಲವು ಭಾಷೆಗಳಿಗೆ ಮಾತ್ರ ಸಿಗುತ್ತದೆ. ಹೀಗೆ ಆಯ್ದ ಕೆಲವು ಭಾಷೆಗಳನ್ನು ಮಾತ್ರ ಜ್ಞಾನದ ಭಾಷೆಗಳೆಂದು ಗುರುತಿಸುವ ಕ್ರಮವೇ ಯಜಮಾನಿಕೆಯಿಂದ ಕೂಡಿರುತ್ತದೆ. ಇಂಗ್ಲಿಶ್ ಈಗ ಜ್ಞಾನವನ್ನು ಕೊಡುವ ಜಾಗದಲ್ಲಿದೆ.

ಕನ್ನಡ ಭಾಷೆಯು ತನ್ನೊಳಗೆ ಇಡೀ ಪ್ರಪಂಚವನ್ನು ಕಂಡು ಕಾಣಿಸಬಲ್ಲದು ಎನ್ನುವ ವಿಶ್ವಾಸ ಕವಿರಾಜಮಾರ್ಗಕಾರನದ್ದಾಗಿತ್ತು ಎನ್ನುವ ನಂಬಿಕೆಯ ಮಾತುಗಳು ಇವತ್ತು 21ನೇ ಶತಮಾನದಲ್ಲಿಯೂ ಕೇಳಿ ಬರುತ್ತಿವೆ. ಇಂತಹ ನಂಬಿಕೆಯ ಮಾತುಗಳನ್ನು ಕೂಡ ಸೀಳಿ ನೋಡುವ ಅಗತ್ಯವಿದೆ. ಕೇವಲ ಅಭಿಮಾನ ಮತ್ತು ಉತ್ಸಾಹದ ಮಾತುಗಳಿಂದ ಯಾರಿಗೂ ಲಾಭವಿಲ್ಲ. ಕನ್ನಡ ಭಾಷೆಯನ್ನು ಜ್ಞಾನಶಿಸ್ತೀಯ ಭಾಷೆಯನ್ನಾಗಿ ರೂಪಿಸದೇ ಹೋದರೆ, ಇಂಗ್ಲಿಶಿನಂತಹ ಭಾಷೆಗಳ ಪ್ರಾಬಲ್ಯದಿಂದ ತಪ್ಪಿಸಿಕೊಳ್ಳುವುದು ದುಸ್ತರವೇ ಸರಿ. ಇಂಗ್ಲಿಶ್ ಒಂದು ಕಲಿಕೆಯ ವಿಷಯವಾಗಿರುವುದಕ್ಕೂ ಮತ್ತು ಇದು ಕಲಿಕೆಯ ಮಾಧ್ಯಮವಾಗಿರುವುದಕ್ಕೂ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನೇ ಸಂಸ್ಕೃತಿ ಮತ್ತು ಶಿಕ್ಷಣದ ಗೊಂದಲಕ್ಕೆ ಕಾರಣಗಳನ್ನಾಗಿ ಉಪಯೋಗಿಸಿಕೊಳ್ಳಬಾರದು. ಭಾಷೆಯ ಆಯ್ಕೆಯ ಪ್ರಶ್ನೆ, ಸಣ್ಣ – ದೊಡ್ಡ ಭಾಷೆಗಳ ನಡುವಿನ ಚಕಮಕಿ ಹಾಗೂ ಬಹುಭಾಷಿಕ – ಬಹುಸಾಂಸ್ಕೃತಿಕ ಸನ್ನಿವೇಶದ ನಿಲುವುಗಳು ಭಾಷಿಕ–ಸಾಂಸ್ಕೃತಿಕ ಗೊಂದಲಕ್ಕೆ ಕಾರಣವಾಗುತ್ತವೆ. ಇವುಗಳಿಂದ ಹೊರ ಬರುವ ದಾರಿಗಳನ್ನು ಕಂಡುಕೊಳ್ಳಬೇಕಿದೆ.



ಡಾ. ಮೇಟಿ ಮಲ್ಲಿಕಾರ್ಜುನ

ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಭಾಷಾಶಾಸ್ತ್ರ ಪ್ರಾಧ್ಯಾಪಕ. ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತು ಓದು, ಬರೆಹ; ಅರವತ್ತೈದಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ನಲವತ್ತೈದಕ್ಕೂ ಬೇರೆ ಬೇರೆ ರಾಜ್ಯ, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನಕಾರನಾಗಿ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಆಕರ್ಷಕ ತರುಣಿಯ ಕುರಿತು ಧ್ಯಾನಿಸತೊಡಗಿದ ಹಮೀದ ಆಕೆ ಕರಗಿಹೋದ ಕತ್ತಲಿನ ಗವಿಯನ್ನೇ ದಿಟ್ಟಿಸಿದ. ತನ್ನ ಬಗ್ಗೆ ತನಗೇ ವಾಕರಿಗೆ ಹುಟ್ಟಿಸಿತು. ತನ್ನನ್ನಾಕೆ ಅಸಹ್ಯದಿಂದ; ಕುಹಕದಿಂದ ನೋಡಿದ್ದು ನಿಜವೇ ಇರಬೇಕು, ಎಂದುಕೊಂಡ ಆತನ ಬಾಯಿ ಒಣಗಿತು. ದಿನಕ್ಕೊಂದಕ್ಕಿಂತ ಹೆಚ್ಚು ಸಲ ಬಾಯಿ ಮುಕ್ಕಳಿಸುವ ಪ್ರಮೇಯವಾದರೂ ಎಲ್ಲಿತ್ತು? ಆತನ ಹಾಸಿಗೆಯಿಂದ ಅಂಗಡಿಗೆ ತೆಗೆದುಕೊಳ್ಳುತ್ತಿದ್ದ ಪಯಣದ ಸಮಯ ಒಂದು ನಿಮಿಷಕ್ಕಿಂತ ಕಡಿಮೆ. ಹೀಗಾಗಿ, ಆತ ಎಲ್ಲಿಗೂ ಹೋಗುವ ಪ್ರಸಂಗವೇ ಬರುತ್ತಿರಲಿಲ್ಲ. ಹೀಗಿದ್ದಾಗ, ಸ್ನಾನ ಮಾಡುವ ಆವಶ್ಯಕತೆಯೂ ಬೀಳುತ್ತಿರಲಿಲ್ಲ. ಕೈಕಾಲುಗಳಿಗೆ ಸರಿಯಾದ ಕೆಲಸವಿಲ್ಲದೆ ಅವು ಜಂಗು ತಿಂದಂತೆ ಇರುತ್ತಿದ್ದವು.

ಕಥೆ

ಅಂಗಡಿಯಲ್ಲಿ ಹೀಗೇ ಕುಳಿತು, ಕುಳಿತು, ಕೊಳೆತು ತನ್ನ ಬದುಕೇ ಮುಗಿದುಹೋಗಿಬಿಡಬಹುದು ಎಂದು ಹಮೀದನಿಗೆ ಇದ್ದಕ್ಕಿದ್ದಂತೆ ಒಮ್ಮೊಮ್ಮೆ ದಿಗಿಲಾಗುತ್ತದೆ. ಸಹಜವಾಗಿ ಆಗುವ ಕಿರಿಕಿರಿ, ನಡುರಾತ್ರಿಯ ಕತ್ತಲಿನ ಲೋಕದ ಶಾಚರರ ಸದ್ದುಗದ್ದಲ ಇವಾವುದೂ ಕೇಳಿಸಿಕೊಳ್ಳದಷ್ಟು ಆತನ ಹೃದಯ ಸಂವೇದನಾಶೂನ್ಯವಾಗಿತ್ತು. ಅತನಿಗೆ ತಿಳಿದುದೆಲ್ಲ ಆ ಜನ ಬರುತ್ತಿದ್ದುದು ನಗರದ ವಸತಿಪ್ರದೇಶವನ್ನು ಬೇರ್ಪಡಿಸುತ್ತಿದ್ದ ಇಳಕಲಿನಲ್ಲಿದ್ದ ಕುರುಚಲು ಕಾಡಿನಿಂದ. ಅಂಗಡಿ ಇದ್ದುದು ಉಪನಗರದ ಕೂಡು ರಸ್ತೆಗಳು ಸೇರುವ ಆಯಕಟ್ಟಿನ ಜಾಗದಲ್ಲಿ. ಆತ ಅಂಗಡಿ ತೆರೆಯುತ್ತಿದ್ದುದು ಇನ್ನೂ ನಸುಕಿರುವಾಗಲೇ ಕೆಲಸ ಹುಡುಕಿ ಹೊರಡುವ ಜನ ಎದ್ದು ಮೈಮುರಿಯುವ ಸಮಯದಲ್ಲಿ. ಮುಚ್ಚುತ್ತಿದ್ದುದು, ಕಟ್ಟಕಡೆಯ ವ್ಯಕ್ತಿ ಬದುಕು ಅರಸುತ್ತ ಅಲೆದಾಡಿ ಸುಸ್ತಾಗಿ ಮನೆ ಸೇರುವ ಸಮಯದಲ್ಲಿ. ಇಲ್ಲಿ ಕುಳಿತು ಬದುಕಿನ ಎಲ್ಲ ಬವಣೆಯನ್ನೂ ಕಂಡೀದೀನಿ ಎಂದು ಹೇಳಿಕೊಳ್ಳಲು ಅವನಿಗೆ ಹೆಮ್ಮೆ. ವ್ಯಾಪಾರ ಜೋರಾಗಿರುವ ಸಂದಣಿಯ ಸಮಯದಲ್ಲಿ ತನ್ನ ಕಾಲ ಕಿರುಬೆರಳಲ್ಲಿ ಓಡಾಡುತ್ತ, ಗಿರಾಕಿಗಳೊಂದಿಗೆ, ಹರಟೆ ಹೊಡೆಯುತ್ತ, ಲೇವಡಿ ಮಾಡುತ್ತ, ಎಲ್ಲವನ್ನೂ ಸಂಭಾಳಿಸುವ ತನ್ನ ಚಾಕಚಕ್ಯತೆಯ ಬಗ್ಗೆಯೂ ಆತನಿಗೆ ಗರ್ವವೇ. ಎಲ್ಲ ಮುಗಿದದ್ದೇ ಜೀವರಸ ಬತ್ತಿಹೋದಂತಾಗಿ ಆತನನ್ನು ಯಾವತ್ತು ಸಲಹುತ್ತ ಬಂದ ಕುರ್ಚಿಯಲ್ಲಿ ಉಸ್ಸಪ್ಪಾ ಅಂತ ಕುಳಿತುಕೊಳ್ಳುವುದು ಹಮೀದನ ವಾಡಿಕೆ.



ಬಂದಿ

ಮೂಲ: ಅಬ್ದುಲ್‌ರಜಾಕ್ ಗುರ್ನಾ

ಕನ್ನಡಕ್ಕೆ: ಕೇಶವ ಮಳಗಿ

ಇನ್ನೇನು ವ್ಯಾಪಾರ ಮುಗಿದಹಾಗೆ, ಅಂಗಡಿ ಮುಚ್ಚಲೇ ಎಂದು ಯೋಚಿಸುತ್ತ ಕುಳಿತಿದ್ದ ಒಂದು ಇಳಿಸಂಜೆ ಆ ಹುಡುಗಿ ಬಂದಿದ್ದಳು. ಹಮೀದ, ಗಿರಾಕಿಗಳಿಲ್ಲದ ಬೇಸರದ ಸಮಯದಲ್ಲಿ ಮಾಡುವಂತೆ ತೂಕಡಿಸುತ್ತಿದ್ದ. ಯಾರೋ ತನ್ನನ್ನು ಎಳೆಯುತ್ತಿದ್ದಾರೆಂದು ಗಾಬರಿಯಲ್ಲಿ ಕಣ್ಣು ಬಿಟ್ಟಾಗ, ಹುಡುಗಿ ಮುಖದಲ್ಲಿ ಖಿನ್ನತೆ ತುಂಬಿ ನಿಂತಿದ್ದಳು.

ಒಂದು ಅಸಹನೀಯ ಗಳಿಗೆಯ ಕಾಯುವಿಕೆಯ ಬಳಿಕ ಆಕೆ ಹೇಳಿದಳು: 'ತುಪ್ಪ, ಇನ್ನೂರು ಗ್ರಾಂ'. ಆತನ ನೋಟ ಕಿರಿ ಕಿರಿ ಮಾಡುತ್ತಿದೆ ಎಂಬಂತೆ ಮಾತನಾಡುತ್ತಲೇ ತನ್ನ ಕತ್ತನ್ನು ಆಚೆ ಹೊರಳಿಸಿದಳು. ಆಕೆಯ ದೇಹದ ಸುತ್ತ ಬಟ್ಟೆಯನ್ನು ಬಿಗಿದೆಳೆದು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದಳು. ಮೆತ್ತನೆಯ ಅರಳೆಯ ಬಟ್ಟೆ ಆಕೆಯ ಮಾಟವನ್ನು ಕಟ್ಟಿದಂತೆ ಕಾಣುತ್ತಿತ್ತು. ಬರಿದಾಗಿದ್ದ ತೋಳುಗಳು ಬೆಳಕಿಗೆ ಹೊಳೆಯುತ್ತಿದ್ದವು. ಆಕೆಯ ಕೈಯಿಂದ ಪಾತ್ರೆಯನ್ನು ತೆಗೆದುಕೊಂಡ ಹಮೀದ ತುಪ್ಪವನ್ನು ಅಳೆದು ಸುರಿದ. ಹಮೀದನಿಗೆ ಇದ್ದಕ್ಕಿದ್ದಂತೆ ಉತ್ಕಟ ಬಯಕೆ ಆವರಿಸಿ, ಯಾತನೆ ಅನುಭವಿಸಿದ. ಪಾತ್ರೆಯನ್ನು ಇಸಿದುಕೊಳ್ಳುವಾಗ ಬೇಕಾಬಿಟ್ಟಿ ಎಂಬಂತೆ ಆತನತ್ತ ನೋಡಿದ ಆಕೆಯ ಹೊಳೆವ ಕಂಗಳು ಆಯಾಸದಿಂದ ಬಳಲಿದಂತೆ ಕಂಡವು. ಚಿಕ್ಕ ದುಂಡುಮುಖ, ಉದ್ದ ಕೊರಳಿನ ಆಕೆ ಇನ್ನೂ ತರುಣಿ ಎಂದು ಹಮೀದ್ ಗ್ರಹಿಸಿದ. ಒಂದೂ ಮಾತನ್ನು ಆಡದೆ ಲಗುಬಗೆಯಲ್ಲಿ ಇಳುಕಲಿನತ್ತ ದಾಪುಗಾಲು ಹಾಕಿ ಆಕೆ ಕಣ್ಮರೆಯಾದಳು. ಆಕೆಯ ಧಾವಂತವನ್ನು ಗಮನಿಸಿದ ಹಮೀದ್, ಹುಶಾರಾಗಿ ಹೋಗು ಎಂದು ಕೂಗಿ ಹೇಳಬೇಕೆಂದುಕೊಂಡ. ಕತ್ತಲಿನೊಳಗಿಂದ ಒಂದು ಸಣ್ಣ ನರಳಿಕೆ ಕೇಳಿದಂತಾಯಿತು. ಇನ್ನೇನು ಚೀತ್ಕಾರ ಬರಬಹುದು ಎಂದು ನಿರೀಕ್ಷಿಸುತ್ತಿದ್ದ ಹಮೀದನಿಗೆ ಆಮೇಲೆ ಕೇಳಿಸಿದ್ದು ಕತ್ತಲಿನೊಳಗೆ ಕರಗಿಹೋದ ಆಕೆ ಚಪ್ಪಲಿಯ ಚರಚರ ಸದ್ದು ಮಾತ್ರ.



ಆಕರ್ಷಕ ತರುಣಿಯ ಕುರಿತು ಧ್ಯಾನಿಸತೊಡಗಿದ ಹಮೀದ ಆಕೆ ಕರಗಿಹೋದ ಕತ್ತಲಿನ ಗವಿಯನ್ನೇ ದಿಟ್ಟಿಸಿದ. ತನ್ನ ಬಗ್ಗೆ ತನಗೇ ವಾಕರಿಗೆ ಹುಟ್ಟಿಸಿತು. ತನ್ನನ್ನಾಕೆ ಅಸಡ್ಡೆಯಿಂದ; ಕುಹಕದಿಂದ ನೋಡಿದ್ದು ನಿಜವೇ ಇರಬೇಕು, ಎಂದುಕೊಂಡ ಆತನ ಬಾಯಿ ಒಣಗಿತು.

ದಿನಕ್ಕೊಂದಕ್ಕಿಂತ ಹೆಚ್ಚು ಸಲ ಬಾಯಿ ಮುಕ್ಕಳಿಸುವ ಪ್ರಮೇಯವಾದರೂ ಎಲ್ಲಿತ್ತು? ಆತನ ಹಾಸಿಗೆಯಿಂದ ಅಂಗಡಿಗೆ ತೆಗೆದುಕೊಳ್ಳುತ್ತಿದ್ದ ಪಯಣದ ಸಮಯ , ಒಂದು ನಿಮಿಷಕ್ಕಿಂತ ಕಡಿಮೆ. ಹೀಗಾಗಿ, ಆತ ಎಲ್ಲಿಗೂ ಹೋಗುವ ಪ್ರಸಂಗವೇ ಬರುತ್ತಿರಲಿಲ್ಲ. ಹೀಗಿದ್ದಾಗ, ಸ್ನಾನ ಮಾಡುವ ಆವಶ್ಯಕತೆಯೂ ಜೀಳುತ್ತಿರಲಿಲ್ಲ. ಕೈಕಾಲುಗಳಿಗೆ ಸರಿಯಾದ ಕೆಲಸವಿಲ್ಲದೆ ಅವು ಜಂಗು ತಿಂದಂತೆ ಇರುತ್ತಿದ್ದವು. ದಿನ, ತಿಂಗಳು, ವರ್ಷಗಳು ನೊಗಕ್ಕೆ ಕಟ್ಟಿದ ಎತ್ತಿನಂತೆ ಅಂಗಡಿಗೆ ಬಂದಿಯಾಗಿ ಆತ ಬದುಕಿದ್ದ. ಇರುಳಿನ ತನ್ನ ಕೊಳಕು ಸ್ಥಿತಿಯನ್ನು ನೆನಪಿಸಿಕೊಳ್ಳುತ್ತ ಆತ ಅಂಗಡಿಯನ್ನು ಮುಚ್ಚಿದ.

ಮರುದಿನ ಸಂಜೆ ಕೂಡ ಆ ಹುಡುಗಿ ಅಂಗಡಿಗೆ ಬಂದಳು. ಅಲ್ಲೇ ಅಕ್ಕಪಕ್ಕ ವಾಸಿಸುವ ಖಾಯಂ ಗಿರಾಕಿ, ಹರಟೆ ಹೊಡೆಯಲೆಂದು ಆಗೀಗ ಅಂಗಡಿಯ ಕಟ್ಟೆಗೆ ಬರುವ ಮನ್ಸೂರನ ಜತೆಗೆ ಹಮೀದ್ ಪಟ್ಟಾಂಗ ಹೊಡೆಯುತ್ತಿದ್ದ. ಕಣ್ಣಿಗೆ ಪೊರೆ ಬಂದು ಅರೆಕುರುಡನಾಗಿದ್ದ ಆತನನ್ನು ಕಿಚಾಯಿಸಿ ಜನ ಮಜಾ ತೆಗೆದುಕೊಳ್ಳುತ್ತಿದ್ದರು. ಆತನ ನೋಟದಲ್ಲಿ ಬರೀ ಕೊಳಕೇ ತುಂಬಿರುವುದರಿಂದ ಮನ್ಸೂರ್ ಕುರುಡನಾಗುತ್ತ ಹೋಗುತ್ತಿದ್ದಾನೆ, ಎಂದೂ ಜನ ಆಡಿಕೊಳ್ಳುತ್ತಿದ್ದರು. ಹುಡುಗಿ ಬಂದಿದ್ದೇ ಮನ್ಸೂರ್ ಮಾತನಾಡುವುದನ್ನು ನಿಲ್ಲಿಸಿದ. ಕುರುಡು ಬೆಳಕಲ್ಲಿ ಆಕೆಯನ್ನು ಅಂದಾಜಿಸಲು ತನ್ನ ಕುರುಡುಗಣ್ಣನ್ನು ತೇಲುಮೇಲು ಮಾಡಿದ.

'ನಿಮ್ ಅಂಗಡೀಲಿ ಶೂ ಪಾಲಿಶ್ ಇದೆಯಾ, ಕಪ್ಪು ಬಣ್ಣದ್ದೂ?' ಆಕೆ ಕೇಳಿದಳು.

'ಇದೆ' ಎಂದು ಹೇಳುವಾಗ ಗಂಟಲು ಕಟ್ಟಿದಂತಾಗಿ, ಸರಿಪಡಿಸಿಕೊಂಡು 'ಇದೆ' ಎಂದು ಹಮೀದ್ ಮತ್ತೊಮ್ಮೆ ಹೇಳಿದ. ಹುಡುಗಿ ನಕ್ಕಳು.

'ಬಾರಮ್ಮ ಬಾ. ಹೇಗಿದ್ದೆ ನಿನ್ನ ಆರೋಗ್ಯ ಇವತ್ತು?' ಮನ್ಸೂರ್ ಕುಶಾಲಿನ ಧ್ವನಿಯಲ್ಲಿ ಕೇಳಿದಾಗ, ಇದೊಂದು ತಮಾಶೆಯಾಗಿರಬಹುದೆ, ಎಂದು ಹಮೀದ್ ಅಚ್ಚರಿಯಿಂದ ನೋಡಿದ. 'ಆಹಾ! ಎಂಥ ಸುವಾಸನೆ ಬರ್ತಾಯಿದೆ ಮೈಯಿಂದ. ಒಳ್ಳೆ ಅತ್ತರನ್ನೇ ಸಿಂಪಡಿಸಿಕೊಂಡಿದೀಯ. ಕೋಗಿಲೆ ಥರ ಧ್ವನಿ, ನವಿಲಿನ ಥರ ಮಾಟ. ಸಂಜೆ ಎಷ್ಟು ಗಂಟೆಗೆ ಬಿಡುವಾಗ್ತೀಯ. ಸ್ವಲ್ಪ ನನ್ನ ಬೆನ್ನಿಗೆ ಮಾಲೀಸು ಮಾಡಬೇಕು' ಮನ್ಸೂರ ಮಾತು ಮುಗಿಸಿದ.

ಹುಡುಗಿ ಆತನ ಮಾತಿಗೆ ಬೆಲೆ ಕೊಡಲಿಲ್ಲ. ಇಬ್ಬರಿಗೂ ಬೆನ್ನು ಹಾಕಿ ನಿಂತಿದ್ದ ಹಮೀದ, ಮನ್ಸೂರ ಬಾಲಿಶ ಹೊಗಳಿಕೆಗಳ ಸುರಿಮಳೆ ಸುರಿಸುತ್ತ ಆಕೆಯೊಂದಿಗೆ ಸಮಯ ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ತನಗಾದ ಗೊಂದಲದಲ್ಲಿ ಪಾಲಿಶ್ ಡಬ್ಬ ಎಲ್ಲಿದೆ ಎಂಬುದನ್ನೇ ಹಮೀದ ಮರೆತ. ಡಬ್ಬ ಸಿಕ್ಕು ಇತ್ತ ತಿರುಗಿದಾಗ ಅಷ್ಟೂ ಹೊತ್ತು ಹುಡುಗಿ ತನ್ನನ್ನೇ ನೋಡುತ್ತಿದ್ದಳು ಎಂಬುದನ್ನು ಊಹಿಸಿ ಸಡಗರಗೊಂಡ. ನಗುತ್ತ ಡಬ್ಬ ನೀಡಿದಾಗ, ಆಕೆ ಮುಖ ಗಂಟಿಕ್ಕಿಕೊಂಡೆ ದುಡ್ಡು ನೀಡಿದಳು. ಮನ್ಸೂರ್ ತನ್ನ ಕಿಸೆಯಲ್ಲಿನ ಚಿಲ್ಲರೆಯೊಂದಿಗೆ ಆಟವಾಡುತ್ತ, ಆಕೆಯನ್ನು ಹೊಗಳುತ್ತ, ಪೋಲಿ ಮಾತುಗಳಿಂದ ಕಿಚಾಯಿಸುತ್ತಿದ್ದರೂ ಅದಕ್ಕೆ ಸೊಪ್ಪು ಹಾಕದ ಆಕೆ ಏನೊಂದೂ ಮಾತನಾಡದೆ ಜಾಗ ಖಾಲಿಮಾಡಿದಳು.

'ಸೂರ್ಯನ ಕಿರಣ ಕೂಡ ನನ್ನ ಕೆನ್ನೆ ಸೋಕಲಾರದು ಅನ್ನೋ ಅವಳ ಧಿಮಾಕು ನೋಡ್ದ್ಯಾ? ನಿಜ ಅಂದ್ರೆ, ಸುಲಭದಲ್ಲಿ ಕೈಗೆ ದಕ್ಕೋ ಹೆಣ್ಣು' ತನ್ನ ಮುಖದ ಮೇಲೆ ವಿಚಿತ್ರ ಅಚ್ಚರಿಯ ನಗುವನ್ನು ತಂದುಕೊಂಡು ಮನಸೂರ ಹೇಳಿದ. 'ಬಹಳ ಹಿಂದೆ ಒಂದು ಕೈಯಿಂದ ಆಕೆಯ ರುಚಿ ನೋಡಿದೋನೆ ನಾನು. ಎಷ್ಟು ತಗೊಳ್ತಾಳೆ ಅನ್ಕೊಂಡಿದ್ದೀಯ? ಈ ಹೆಂಗುಸರೆ ಹಿಂಗೆ, ಧಿಮಾಕಿನ ನೋಟ, ತಿರಸ್ಕಾರದ ನಗೆ, ಆದ್ರೆ, ಮಾಡೋದು ಮಾತ್ರ . . ಒಂದು ಸಲ ಅವರನ್ನ ಹಾಸಿಗೆಗೆ ಸೆಳೆದೆ, ಒಂದು ಅವರೊಳಗೆ ಸೇರ್ಕೊಂಡೆ ಅನ್ನು ಆವಾಗ ಗೊತ್ತಾಗುತ್ತೆ, ಯಾರು ನಿಜವಾಗಿ ಆಳುವವರು ಅಂತ' ಮನಸೂರ ಬಡಬಡಿಸುತ್ತಲೇ ಇದ್ದ.

ಹಮೀದ ಪುರುಷರ ಸಹನೆಯ ಪ್ರತಿನಿಧಿ ಎಂಬಂತೆ ಮನತುಂಬಿ ನಕ್ಕ. ಆದರೆ, ದುಡ್ಡು ಬಿಸಾಕಿ ಆ ಹುಡುಗಿಯನ್ನು ಪಡೆಯಲಾಗದು, ಎಂದು ಒಳಗೇ ಅನ್ನಿಸಿತು. ಮನಸೂರ ಎಲ್ಲ ಹುಸಿಮಾತುಗಳೂ ಆಕೆಯ ಗಾಂಭೀರ್ಯ, ಘನತೆ' ತುಂಬಿದ ನಡತೆ ನಿವಾಳಿಸಿ ಒಗೆಯುತ್ತದೆ, ಎಂದು ಮನಸ್ಸಲ್ಲೇ ಅಂದುಕೊಂಡ. ಆತನ ಗಮನವೆಲ್ಲ ಮತ್ತೆ ಮತ್ತೆ ಆ ಹುಡುಗಿಯತ್ತಲೇ ಸುತ್ತತೊಡಗಿತು. ಒಬ್ಬನೇ ಇದ್ದಾಗ ಆಕೆಯೊಂದಿಗೆ ಸರಸವಾಡುತ್ತಿರುವಂತೆಯೂ ಹಮೀದ ಕನಸಿದ. ರಾತ್ರಿ ಅಂಗಡಿಯನ್ನು ಮುಚ್ಚಿದ ಮೇಲೆ, ಪಕ್ಕದ ಅಂಗಡಿಯ ಫಜೀರ್ ಅಜ್ಜನೊಡನೆ ಮಾತಿಗಿಳಿದ. ಅಜ್ಜನಾದರೂ ತನ್ನನ್ನು ತಾನೇ ಸಂಭಾಳಿಸಿಕೊಳ್ಳಲಾರದಷ್ಟು ಹಣ್ಣಾಗಿದ್ದ. ಯಾವಾಗಲೂ ಹಾಸಿಗೆಗೆ ಅಂಟಿರುತ್ತಿದ್ದ. ಹಗಲು ಹೊತ್ತು ಅಲ್ಲೇ ಪಕ್ಕದಲ್ಲಿ ವಾಸಿಸುತ್ತಿದ್ದ ಹೆಂಗಸೊಂದು ಅಡುಗೆ ಬೇಯಿಸಿಟ್ಟು ಹೋಗುತ್ತಿದ್ದಳು. ಬದಲಿಗೆ, ದಿನಸಿ ಸಾಮಾನು ಪಡೆದುಕೊಳ್ಳುತ್ತಿದ್ದಳು. ಅಜ್ಜನಿಗೆ ಇರುಳಲ್ಲಿ ಹಮೀದನೊಂದಿಗೆ ಎರಡು ಗಳಿಗೆ ಕಳೆದರೆ ಏನೋ ಸಮಾಧಾನವಾಗುತ್ತಿತ್ತು. ಅವರು ಮಾತಿಗೆ ತೊಡಗಿದಂತೆ ಸಾಯುತ್ತಿರುವ ವಯಸ್ಸಾದ

ಮುದುಕನ ಸಾವಿನ ವಾಸನೆ ಕೋಣೆಯನ್ನು ತುಂಬಿತು. ಹಾಗೆ ನೋಡಿದರೆ, ಕಮ್ಮಿಯಾಗುತ್ತಿರುವ ವ್ಯಾಪಾರ, ಆರೋಗ್ಯ ಸುಧಾರಿಸಲು ಮಾಡುತ್ತಿರುವ ಪ್ರಾರ್ಥನೆ ಇಂಥವು ಬಿಟ್ಟರೆ ಮಾತಾಡುವಂಥದ್ದೇನೂ ಇರುತ್ತಿರುತ್ತಿರಲಿಲ್ಲ. ಉತ್ಸಾಹ ಪೂರ್ತಿ ಕುಂದಿದಾಗ ಫಜೀರ್ ಅಜ್ಜ ತನ್ನ ಸಾವಿನ ಬಗ್ಗೆ, ಆ ಲೋಕದಲ್ಲಿ ಕಾದಿರುವ ಬದುಕಿನ ಬಗ್ಗೆ ಮಾತಿಗೆ ಬೀಳುತ್ತಿದ್ದ. ಆಗ ಹಮೀದ್ ಅಜ್ಜನನ್ನು ಎಬ್ಬಿಸಿ, ಬಚ್ಚಲು ಮನೆಗೆ ಕರೆದೊಯ್ದು ಕಾಲು ತೊಳೆಸಿ ಕರೆತಂದು ಮಲಗಿಸುತ್ತಿದ್ದ.

ಹಮೀದ್, ಅಂಗಡಿಯೊಳಗೇ ಹಿತ್ತಲಿನಂತಿದ್ದ ಜಾಗದಲ್ಲಿ ಮಲಗುತ್ತಿದ್ದ. ಇರುಳೆಲ್ಲ ಏಕಾಂಗಿಯಾಗಿ, ಎಲ್ಲೂ ಹೊರಗೆ ಹೋಗದೆ ಕಳೆಯುತ್ತಿದ್ದ. ಹಿಂದೆ, ಫಜೀರ್ ಅಜ್ಜ ಹಾಸಿಗೆ ಕಚ್ಚುವ ಮೊದಲು ಅಲ್ಲಲ್ಲಿ ಹೋಗುತ್ತಿದ್ದುದುಂಟು. ಪ್ರತಿ ಶುಕ್ರವಾರ ನಮಾಜಿಗೂ ತೆರಳುತ್ತಿದುದುಂಟು. ಆದರೆ, ಈ ಒಂದು ವರ್ಷದಿಂದಲಂತೂ ಆತ ಹೊರಗೆ ಅಡಿಯಿಟ್ಟಿರಲಿಲ್ಲ. ಹಮೀದನಿಗೆ ಮಸೀದಿಯಲ್ಲಿನ ಜನರ ಗೌಜು, ಮಳೆಯಿಂದ ನೆನೆಯುತ್ತಿದ್ದ ಮೆಟ್ಟಿಲು ನೆನಪಾದವು. ಹಿಂದೊಮ್ಮೆ, ಮಸೀದಿಯಿಂದ ಮನೆಗೆ ಮರಳುವಾಗ ಅವರು ಮಾರುಕಟ್ಟೆಗೆ ಹೋದದ್ದು, ಅಜ್ಜ ಬಣ್ಣಬಣ್ಣದ ತರಕಾರಿ, ಹಣ್ಣುಗಳನ್ನು ಮುಟ್ಟಿಸಿ ಅವುಗಳ ಸುಗಂಧ, ಮೃದುತನವನ್ನು ಅನುಭವಿಸುವಂತೆ ಮಾಡಿದ್ದು, ನೆನಪಿಗೆ ಬಂತು. ಈ ಪಟ್ಟಣಕ್ಕೆ ಬಂದ ಎಳವೆಯಿಂದ ಹಮೀದ್ ಅಜ್ಜನ ಬಳಿ ಕೆಲಸ ಮಾಡಿದ್ದ. ಅಜ್ಜ ಆತನಿಗೆ ಉಳಿಯಲು ಜಾಗ ಕೂಡ ನೀಡಿದ್ದ. ರಾತ್ರಿ ಒಬ್ಬನೇ ಉಳಿದಾಗ ಅಮ್ಮ, ಅಪ್ಪ, ತಾನು ಹುಟ್ಟಿದ ಊರಿನ ನೆನಪು ಮುತ್ತುತ್ತಿದ್ದವು. ಈಗ ಆತನೇನೂ ಬಾಲಕನಾಗಿರದಿದ್ದರೂ ಅಂತಹ ನೆನಪು ಬಂದಾಗಲೊಮ್ಮೆ ಕಣ್ಣೀರು ಹನಿಸುತ್ತಿದ್ದ. ನೆನಪುಗಳು ಆತನನ್ನು ಹಿಂಡಿಹಿಪ್ಪೆ ಮಾಡಿಬಿಡುತ್ತಿದ್ದವು.

* * *

ಹುಡುಗಿ ಮತ್ತೊಮ್ಮೆ ಸಕ್ಕರೆ, ತರಕಾರಿ ಕೊಳ್ಳಲು ಅಂಗಡಿಗೆ ಬಂದಾಗ, ಹಮೀದ ತೂಕ ಮಾಡುವಾಗ ತುಸು ಧಾರಾಳಿಯೇ ಆಗಿದ್ದ. ಅದನ್ನು ಗಮನಿಸಿದ ಆಕೆ ಮುಗುಳು ಚೆಲ್ಲಿದಳು. ಆಕೆಯ ನಗುವಿನಲ್ಲಿ ಒಂಚೂರು ಕೊಂಕು ಅಂಟಿರುವುದನ್ನು ಕಂಡಿದ್ದರೂ ಹಮೀದ ತುಂಬು ಖುಷಿಯನ್ನೇ ಅನುಭವಿಸಿದ್ದ. ಮುಂದಿನ ಸಲ ಬಂದಾಗ ಆಡಿದ್ದು ಒಂದೇ ಮಾತಾಗಿದ್ದರೂ ಪ್ರಸನ್ನಳಾಗಿದ್ದು ಆತನ ಸಂತಸವನ್ನು ಮತ್ತಷ್ಟು ಹೆಚ್ಚಿಸಿತ್ತು. ಇನ್ನೊಮ್ಮೆ ವ್ಯಾಪಾರಕ್ಕೆ ಬಂದಾಗ ತನ್ನ ಹೆಸರು ರುಕಿಯಾ ಎಂದೂ, ತನ್ನ ಸಂಬಂಧಿಕರೊಂದಿಗೆ ವಾಸ ಮಾಡಲು ಇತ್ತೀಚೆಗಷ್ಟೇ ಇಲ್ಲಿಗೆ ಬಂದಿರುವುದಾಗಿಯೂ ಆಕೆ ಹೇಳಿದ್ದಳು.

'ನಿಮ್ಮ ಮನೆ ಎಲ್ಲಿ?' ಸಹಜವಾಗಿ ಹಮೀದ ಮಾತು ಬೆಸೆದಿದ್ದ.

'ಇಳುಕಲಿನ ತೋಪಿನಾಚೆ' ತುಂಬ ದೂರ ಎನ್ನುವಂತೆ ತನ್ನ ಕೈಗಳನ್ನು ಚಾಚಿ ಆಕೆ ಹೇಳಿದ್ದಳು.

ಒಮ್ಮೆ ಹಗಲಿನಲ್ಲಿ ಬಂದಾಗ ಆಕೆ ತೊಟ್ಟಿರುವ ನೀಲಿಬಟ್ಟೆಗಳಿಂದ ಮನೆವಾರ್ತೆಯ ಕೆಲಸಗಾರ್ತಿ ಎಂದು ಹಮೀದ ಅಂದಾಜಿಸಿದ್ದ. 'ನೀನು ಕೆಲಸ ಮಾಡುವುದು ಎಲ್ಲಿ?' ಎಂದು ಆತ ಕೇಳಿದಾಗ, ಅದೇನು ಅಷ್ಟು ಮುಖ್ಯವಲ್ಲ ಎನ್ನುವಂತೆ ಆಕೆ ಗಂಟಲನ್ನು ಸರಿಮಾಡಿಕೊಳ್ಳುವ ನಾಟಕ ಮಾಡಿದ್ದಳು. 'ಒಂದು ಒಳ್ಳೇ ಕೆಲಸ ಸಿಕ್ಕುವವರೆಗೂ ಯಾವುದಕ್ಕೂ ಇರಲಿ ಅಂತ ಇಲ್ಲೇ ಪಟ್ಟಣದ ಹೊಟೇಲೊಂದರಲ್ಲಿ ಕೆಲಸ ಮಾಡ್ತಾ ಇದೀನಿ', ಎಂದು ಹೇಳಿದ್ದಳು.

'ಹೊಟೇಲ್ ಬೃಂದಾವನ. ಈ ಪಟ್ಟಣದಲ್ಲೇ ಹೆಸರುವಾಸಿ. ಅಲ್ಲಿ ಈಜುಕೊಳ ಇದೆ, ಆಮೇಲೆ, ಇಡೀ ಹೊಟೇಲಿಗೆ ಕೆಂಪು ಹಾಸು ಹಾಕಿದ್ದಾರೆ, ಗೊತ್ತ.' ಅಂದಿದ್ದಳು.

ರಾತ್ರಿ ಅಂಗಡಿ ಮುಚ್ಚಿದ ಮೇಲೆ ಹಮೀದ, ಹಿತ್ತಲಿಗೆ ಹೋಗುವ ಮೊದಲು ಬಾಗಿಲಲ್ಲಿ ನಿಂತ. ರಸ್ತೆಗಳೆಲ್ಲ ನಿರ್ಜನವಾಗಿದ್ದು, ಬರೀ ಮೌನ ತುಂಬಿತ್ತು. ಮತ್ತೆ ಮತ್ತೆ ರುಕಿಯಾ ಮನಸ್ಸನ್ನು ತುಂಬಿದಳು. ಇದರಿಂದ ಆತನ ಒಂಟಿತನ ಇನ್ನಷ್ಟು ಜಾಗ್ರತಗೊಂಡು, ತನ್ನ ಶ್ವಪಚತನವನ್ನು ಎಚ್ಚರಗೊಳಿಸಿತು ಅಷ್ಟೇ ಎಂದು ಅವನಿಗೆ ಅನಿಸತೊಡಗಿತು. ಮೊದಲ ಭೇಟಿಯಲ್ಲಿ ಕತ್ತಲೆಯಲ್ಲಿ ಕರಗುತ್ತ ತನ್ನನ್ನು ಆಕೆ ನೋಡಿದ ಬಗೆ ನೆನಪಿಗೆ ಬಂತು. ಹಮೀದ ಆಕೆಯನ್ನು ಮುಟ್ಟ ಬಯಸಿದ್ದ. . . ವರ್ಷಗಳ ಒಂಟಿತನ ತನ್ನನ್ನು ಆ ಭಾವನೆಗೆ ತಳ್ಳುತ್ತಿದೆ ಎಂದುಕೊಂಡ ಆತ, ಈ ಅಪರಿಚಿತ ನಗರದ ಮೌನ ತುಂಬಿಕೊಂಡ ರಸ್ತೆಗಳನ್ನೇ ನಿಟ್ಟಿಸಿದ. ಅಪರಿಚಿತ ಹುಡುಗಿಯೊಬ್ಬಳನ್ನು ಮುಟ್ಟುವುದೇ ತನ್ನ ಬದುಕಿಗೆ ಬಿಡುಗಡೆ ತಂದುಕೊಡುತ್ತದೆ ಎಂದು ತನ್ನಲ್ಲೇ ಪ್ರತಿಪಾದಿಸಿಕೊಂಡ.

ಸುರುಳಿ

ಈ ಮಾಗಿಯ
ಪೋಲಿ ಚಳಿ
ಮೈಗೆಲ್ಲ ಇಡುತ್ತೆ
ಕಚಗುಳಿ
ಬಿಚ್ಚುತ್ತೆ
ಬೆಚ್ಚನೆಯ
ನೆನಪುಗಳ ಸುರುಳಿ

ಜರಗನಹಳ್ಳಿ ಶಿವಶಂಕರ್

* * *

ಒಂದಿರುಳು ರಸ್ತೆಗಡಿಯಿಟ್ಟವನೇ ಬೆನ್ನಹಿಂದಿನ ಬಾಗಿಲನ್ನು ಎಳೆದುಕೊಂಡ. ನಿಧಾನಕ್ಕೆ ದೀಪದ ಕಂಬದ ಬಳಿ ನಡೆದ. ಹಾಗೆ ಕಂಬಗಳನ್ನು ದಾಟುತ್ತ ನಡೆದ. ಅಚ್ಚರಿ ಎಂಬಂತೆ ಆತನಿಗೆ ಗಾಬರಿಯಾಗಲಿಲ್ಲ. ಏನೋ ಸರಿದಂತಾದರೂ ತಿರುಗಿ ನೋಡಲಿಲ್ಲ. ತಾನು ಎಲ್ಲಿ ಹೋಗುತ್ತೇನೆ ಎಂಬುದೇ ಗೊತ್ತಿಲ್ಲದಿರುವುದರಿಂದ ಅಂಜಿಕೆ ಇನ್ನೇಕೆ ಎಂದುಕೊಂಡ. ಅಂಥ ಭಾವನೆ ಭದ್ರತೆ ನೀಡಿತು.

ದೀಪಗಳು ಬೆಳಗುತ್ತಿದ್ದ ಸಾಲು ಅಂಗಡಿಗಳ ಕಡೆಗೆ ಹಮೀದ್ ಹೆಜ್ಜೆ ಹಾಕಿದ. ಬಳಿಕ ಬೆಳಕಿನಿಂದ ತಪ್ಪಿಸಿಕೊಳ್ಳಲೋ ಎಂಬಂತೆ ಮೂಲೆಗೆ ನಡೆದ. ವೃತ್ತದಲ್ಲಿ ಹಾಕಿದ್ದ ಬೆಂಚಿನ ಮೇಲೆ ತುಸು ಹೊತ್ತು ಕುಳಿತ. ಎಲ್ಲವೂ ಎಷ್ಟೊಂದು ಪರಿಚಿತ ಎಂಬ ಭಾವನೆ ಉಕ್ಕಿಬಂದಿತು. ವೃತ್ತದ ಮಧ್ಯೆ ಗಡಿಯಾರದ ಗೋಪುರವಿತ್ತು. ಬಸ್ಸುಗಳನ್ನು ಸರತಿಯಲ್ಲಿ ನಿಲ್ಲಿಸಿದ್ದರು. ದೂರದಲ್ಲಿ ಉಕ್ಕುತ್ತಿದ್ದ ಕಡಲಿತ ಭರತಿಯ ಸದ್ದು ಅವನ ಕಿವಿ ತುಂಬಿತು. ಕಡಲು ತನ್ನಿಂದ ಬಹಳ ದೂರವೇನೂ ಇಲ್ಲ ಎಂದು ತಿಳಿಯಿತು. ನೀರಿನ ವಾಸನೆ ಆತನ ತಂದೆಯ ಊರನ್ನು ನೆನಪಿಗೆ ತಂದಿತು. ಕಡಲಿನ ಭರತಿಯನ್ನು ತಡೆಯಲು ಕಟ್ಟಿದ ಗೋಡೆಯ ತಳಕ್ಕೆ ನೀರು ಬಂದು ಬಡಿದು ತುಳುಕುವ ಸದ್ದು ಕಿವಿಗೆ ಹಿತವಾಗಿತ್ತು.

ದಂಡೆಯ ಗುಂಟ ದೀಪಗಳು ಬೆಳಗುತ್ತಿದ್ದವು. ಕತ್ತಲಿನಲ್ಲಿ ಅಲ್ಲೊಂದು ಮಿಣುಕು ಎಂಬಂತೆ ಹೊಸ ಬೆಳಕು ಮಿಂಚುತ್ತಿತ್ತು. ಯಾರು ಬದುಕು ನಡೆಸುತ್ತಿರಬಹುದು ಅಲ್ಲಿ? ಎಂದು ಹಮೀದ ಅಚ್ಚರಿಗೊಂಡ. ಆತನ ಮೈಯಲ್ಲಿ ಛಳಕು. ನಗರದ ಕತ್ತಲು ತುಂಬಿದ ಆ ಮೂಲೆಯಲ್ಲಿ ಯಾರು ವಾಸಿಸುತ್ತಿರಬಹುದು? ಕ್ರೂರ ಮುಖಗಳ ಕಟ್ಟುಮಸ್ತಾದ ಗಂಡಸರು ಆತನ ಕಲ್ಪನೆಯನ್ನು ತುಂಬಿ ಗಹಗಹಿಸಿ ನಕ್ಕರು. ಮಂದ ಬೆಳಕಿನಲ್ಲಿ ನೆರಳುಗಳು ಅಪರಿಚಿತನಿಗಾಗಿ ಕಾಯುತ್ತಿರುವಂತೆ ಕಂಡವು. ಗಂಡಸರು-ಹೆಂಗಸರು ದೇಹದ ಮೇಲೆ ಕಿಕ್ಕಿರಿದಿದ್ದರು. ಅವರ ಕಾಲುಗಳು ಪುರಾತನ ಸಂಪ್ರದಾಯವೊಂದಕ್ಕೆ ತಾಳ ಹಾಕುತ್ತಿರುವುದನ್ನು ಆತ ಕಂಡ. ಅವರ ಚೀತ್ಕಾರಗಳು ಮುಗಿಲು ಮುಟ್ಟಿದ್ದೇ ಅವರ ಶತ್ರುಗಳ ನೆತ್ತರು ನೆಲದಲ್ಲಿ ಹರಿದಾಡಿತು. ದಡದಾಚೆಯಿದ್ದ ಮಾನವರು ಕೇವಲ ದೈಹಿಕವಾಗಿ ಮಾತ್ರ ದಿಗಿಲು ಹುಟ್ಟಿಸುವಂತಿರಲಿಲ್ಲ. ಅವರಿಗೆ ತಾವು ಎಲ್ಲಿದ್ದೇವೆ ಎಂದು ತಿಳಿದಿದೆ ಎಂಬಂತೆ ಆ ಅಂಜಿಕೆಯಿತ್ತು. ಆತ ಮಾತ್ರ, ಇದೀಗ ಇಲ್ಲಿ ಇದ್ದ.

ಆತ ಲಗುಬಗೆಯಲ್ಲಿ ಅಂಗಡಿಯತ್ತ ಹೆಜ್ಜೆ ಹಾಕಿದ. ಮನಸ್ಸಿನಲ್ಲಿ ಏನನ್ನೋ ಮಾಡಿ ತೀರುವ ಸಂಕಲ್ಪ ಇದ್ದಂತಿತ್ತು. ಅಂಗಡಿಯನ್ನು ಮುಚ್ಚಿ, ಫಜೀರ್ ಅಜ್ಜನ ದಿನಕರ್ಮ ಮುಗಿಸಿದ್ದೇ ಕಡಲತಡಿಗೆ ಹೋಗುವುದು ಆತನ ದಿನದ ಅಭ್ಯಾಸವಾಯಿತು. ಅಜ್ಜನಿಗೆ ಇದೇನು ಇಷ್ಟವಾಗದೇ, ನನ್ನನ್ನು ಒಂಟಿಯಾಗಿ ಬಿಟ್ಟು ಎಲ್ಲೋ ಹೋಗ್ತೀಯ ಎಂದು ಗೊಣಗುತ್ತಿದ್ದ. ಆದರೆ, ಹಮೀದ, ಇವಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ. ಹಗಲಿನಲ್ಲಿ ತನ್ನ ಮನಸ್ಸನ್ನು ತುಂಬಿದ ಹುಡುಗಿಗಾಗಿ ಕಾಯುತ್ತ ಕುಳಿತಿರುತ್ತಿದ್ದ. ಇರುಳಲ್ಲಿ ಒಂಟಿಯಾಗಿ ರಸ್ತೆಗಳನ್ನು ತುಳಿವಾಗ ಆಕೆ ತನ್ನೊಂದಿಗೆ ಇದ್ದಾಳೆ ಎಂಬಂತೆ ಕನಸುತ್ತಿದ್ದ.



ಈ ಹಬ್ಬದ ಸಂಭ್ರಮ ಸದಾ ನಿಮ್ಮೊಂದಿಗಿರಲಿ
ಹಬ್ಬದ
ಅದ್ದೂರಿ
ಕೊಡುಗೆ
ಬಡ್ಡಿದರದಲ್ಲಿ ಕಡಿತ !
ಗೃಹ ಸಾಲ
1% ರಷ್ಟು ಕಡಿತ
ಪರಿಷ್ಕರಣಾ ಶುಲ್ಕದ ಮೇಲೆ 50% ರಿಯಾಯಿತಿ
ವಾಹನ ಸಾಲ
0.25% ಕಡಿತ
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ
ಅಥವಾ ಶುಲ್ಕ ರಹಿತ ದೂರವಾಣಿ 1800 425 3555 ಗೆ ಕರೆಮಾಡಿ
(ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ)
ತ್ವರೆ ಮಾಡಿ!
ಈ ಕೊಡುಗೆ ಡಿಸೆಂಬರ್ 31, 2011ರ ವರೆಗೆ ಮಾತ್ರ
www.corpbank.in
ಕಾರ್ಪೊರೇಶನ್ ಬ್ಯಾಂಕ್
Corporation Bank
ಸಾರ್ವಜನಿಕ ರಂಗದ ಪ್ರಮುಖ ಬ್ಯಾಂಕ್

ಆಕೆಯ ಕೊರಳ ಸುತ್ತ ಕೈಗಳನ್ನು ಬಳಸಿ ಆಕೆಯೊಂದಿಗೆ ನಡೆಯುತ್ತಿರುವಂತೆ ಕಲ್ಪಿಸಿಕೊಂಡು ಸುಖಿಸುತ್ತಿದ್ದ. ಆಕೆ ಅಂಗಡಿಗೆ ಕೊಳ್ಳಲು ಬಂದಾಗಲೆಲ್ಲ, ಏನಾದರೂ ಒಂದಿಷ್ಟು ಕೊಸರು ಸೇರಿಸಿ, ಆಕೆಯ ಹಸನ್ಮುಖವನ್ನು ನಿರೀಕ್ಷಿಸುತ್ತಿದ್ದ. ಆಗೀಗ, ನಗು, ಒಂದೆರಡು ಸಲುಗೆಯ ಮಾತು ಅವರ ನಡುವೆ ಘಟಿಸುತ್ತಿದ್ದವು. ಮಾತ್ರವಲ್ಲ, ವಿಶೇಷ ಗಿರಾಕಿಗಳಿಗೆಂದು ತೆಗೆದಿಟ್ಟಿರುತ್ತಿದ್ದ ಸರಂಜಾಮನ್ನು ವಿಶೇಷ ಕಾಳಜಿಯೆಂಬಂತೆ ಹಮೀದ ಆಕೆಗೆ ನೀಡುತ್ತಿದ್ದ. ತುಸು ಧೈರ್ಯ ಬಂದಾಗಲೆಲ್ಲ ಆಕೆಯ ಚೆಲುವು-ನಿಲುವುಗಳನ್ನು ಮೃದು ಮಾತುಗಳಲ್ಲಿ ಹೊಗಳುತ್ತಿದ್ದ. ಆಕೆಯಿಂದ ಹೊಳೆವ ನಗು ಸಿಕ್ಕಾಗ, ಇದರರ್ಥವೇನು ಎಂದು ಮತ್ತೆ ಗೊಂದಲಕ್ಕೆ ಒಳಗಾಗುತ್ತಿದ್ದ. ಮನಸೂರ ಹುಡುಗಿಯ ಕುರಿತು ಹೇಳುತ್ತಿದ್ದ ಗಾಳಿಮಾತನ್ನು ನೆನಪಿಸಿಕೊಂಡು ಹಮೀದ ತನ್ನಲ್ಲೇ ನಗುತ್ತಿದ್ದ. ಕೇವಲ ಕೆಲವು ದುಡ್ಡಿಗೆ ಸೆರಗು ಹಾಸುವ ಹುಡುಗಿಯಲ್ಲ ಈಕೆ. ಬದಲಿಗೆ, ಅನುರಾಗ, ಗಂಡೆದೆಯ ಮೂಲಕ ಗೆಲ್ಲಬೇಕಾದ ಬಾಲೆ ಎಂದು ಸಮರ್ಥಿಸಿಕೊಳ್ಳುತ್ತಿದ್ದ.

ಒಂದು ಇಳಿಸಂಜೆ ರುಕಿಯಾ ಸಕ್ಕರೆ ಕೊಳ್ಳಲೆಂದು ಹಮೀದನ ಅಂಗಡಿಗೆ ಬಂದಳು. ಆಕೆಯಿನ್ನೂ ತನ್ನ ಕೆಲಸದ ಸಮಯದಲ್ಲಿ ತೊಡುವ ನೀಲಿ ಸಮವಸ್ತ್ರದಲ್ಲಿಯೇ ಇದ್ದಳು. ಕಂಕುಳ ಬೆವರಿನಿಂದ ತೊಯ್ದಿದ್ದವು. ಅಂಗಡಿಯಲ್ಲಿ ಬೇರಾರೂ ಗಿರಾಕಿಗಳಿರಲಿಲ್ಲ. ಆಕೆ ಕೂಡ ಏನೂ ಅವಸರದಲ್ಲಿರುವಂತೆ ಕಾಣಲಿಲ್ಲ. ಆಕೆ ಹಮೀದನನ್ನು ಹಗುರವಾಗಿ ಚುಡಾಯಿಸಿದಳು. 'ನೀನು ಎಷ್ಟೊಂದು ಕಷ್ಟಪಟ್ಟು ಕೆಲಸ ಮಾಡ್ತೀಯ', ಎಂದು ಪೂಸಿ ಹೊಡೆದಳು.

'ದಿನದ ಇಷ್ಟೊಂದು ಸಮಯ ಅಂಗಡಿಯಲ್ಲಿ ಕೀಳುತಿಯಲ್ಲ. ನೀನು ತುಂಬಾ ದುಡೀತಿರಬೇಕು. ಚೆನ್ನಾಗಿ ಕಾಸೂ ಮಾಡಿರಬಹುದು, ಅಲ್ವ? ನಿನ್ನ ಕಾಸನ್ನೆಲ್ಲ ಇಡೋಕೆ ಹಿತ್ತಲಲ್ಲಿ ತಿಜೋರಿನೂ ಇಟ್ಟಿರಬಹುದು ಅಲ್ವ? ವ್ಯಾಪಾರಿಗಳ ಹತ್ರ ತಿಜೋರಿ ಇರೋದನ್ನ

ಎಲ್ಲರೂ ಬಲ್ಲರು. ದುಡ್ಡು ಉಳಿಸಿ ವಾಪಸ್ಸು ಊರಿಗೆ ಹೋಗಿ ಬದುಕು ಕಟ್ಟಿಕೋಬೇಕೂಂತ ಯೋಚನೆಯೆ? ಎಂದೆಲ್ಲ ಮಾತು ಹರಿಸಿದಳು.

'ನನ್ನ ಹತ್ರ ಎಂಥದ್ದೂ ಇಲ್ಲ. ಇಲ್ಲಿರೋದು ಯಾವುದೂ ನನಗೆ ಸೇರಿದ್ದಲ್ಲ.' ಆತ ದುಃಖದಿಂದ ಎಂಬಂತೆ ಸ್ಫೋಟಗೊಂಡ.

ಆಕೆ ನಂಬಲು ಅಸಾಧ್ಯವೆನ್ನುವಂತೆ ಕಣ್ಣು ಅಲಗಿಸಿದಳು. 'ಆದರೆ, ನೀನು ಎಷ್ಟೊಂದು ಕಷ್ಟ ಪಡ್ತೀಯ ಅಲ್ವ?' ಎಂದು. 'ನಿನಗೆ ಕುಶಾಲು ಮಾಡೋಕೆ ಬರೋಲ್ಲ' ಎನ್ನುತ್ತ, ಹಮೀದ, ಕೊಸರಿನ ಸಕ್ಕರೆ ಹಾಕುತ್ತಿರುವುದನ್ನು ಗಮನಿಸಿ ನಕ್ಕಳು.

'ತುಂಬಾ ಥ್ಯಾಂಕ್ಸ್' ಎಂದು ಆತನಿಂದ ಪೊಟ್ಟಣ ತೆಗೆದುಕೊಳ್ಳಲು ಬಾಗಿದಳು. ಅಗತ್ಯಕ್ಕಿಂತ ಒಂದು ಕ್ಷಣ ಹೆಚ್ಚಿಗಿಯೇ ಹಾಗೇ ಬಾಗಿ, ನಿಧಾನಕ್ಕೆ ಹಿಂದೆ ಸರಿದಳು. 'ನೀನು ಯಾವಾಗಲೂ ಒಂದಲ್ಲ ಒಂದನ್ನು ನನಗಾಗಿ ಕೊಡ್ತಾನೇ ಇದೀಯ. ಅದಕ್ಕೆ ಪ್ರತಿಯಾಗಿ ಏನೋ ಅಪೇಕ್ಷಿಸುತ್ತೀಯ ಅಂತನೂ ಗೊತ್ತು. ಹಾಗಿದ್ದಾಗ, ಈ ಸಣ್ಣಪುಟ್ಟ ವಸ್ತುಗಿಂತ ದೊಡ್ಡದಾಗಿರೋದನ್ನ ಏನಾದ್ರೂ ಕೊಡಬೇಕು'.

ಹಮೀದ ಪ್ರತಿಯಾಗಿ ಏನು ಹೇಳಲಿಲ್ಲ. ಅವಮಾನದಿಂದ ಆತನ ಮೈ ತುಂಬಿ ತುಲುಕುತ್ತಿತ್ತು. ಹುಡುಗಿ ಹಗುರವಾಗಿ ನಕ್ಕು, ನಿಧಾನಕ್ಕೆ ನಡೆದಳು. ಕತ್ತಲಿನಲ್ಲಿ ಕರಗುವ ಮೊದಲು ಆತನನ್ನು ಕುಹಕದಿಂದ ಎಂಬಂತೆ ನೋಡುತ್ತ ಹಲ್ಲು ಕಿರಿದಳು.

ಅಬ್ದುಲ್‌ರಜಾಕ್ ಗುರ್ನಾ

ಆಫ್ರಿಕಾ ಖಂಡದ ಮುಖ್ಯ ಲೇಖಕರಲ್ಲಿ **ಒಬ್ಬರಾದ ಅಬ್ದುಲ್‌ರಜಾಕ್ ಗುರ್ನಾ ಹುಟ್ಟಿದ್ದು 1948ರಲ್ಲಿ, ಇಂದಿನ ಪೂರ್ವ ಆಫ್ರಿಕಾದ ತಾಂಜೇನಿಯದ ಭಾಗವಾಗಿರುವ ಜಂಜಿಬೀರ್‌ನಲ್ಲಿ. ಇಂಗ್ಲೆಂಡಿನ ಕೆಂಟ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯವನ್ನು ಬೋಧಿಸುವ ಅವರು ಈವರೆಗೆ ಏಳು** ಕಾದಂಬರಿಗಳನ್ನು, ಅಸಂಖ್ಯ **ಕಥೆಗಳನ್ನು, ಸಾಹಿತ್ಯ ವಿಮರ್ಶೆಯನ್ನು** ಪ್ರಕಟಿಸಿದ್ದಾರೆ. ಆಫ್ರಿಕನ್ **ಸಮಾಜದ ಬದುಕನ್ನು ಅತ್ಯಂತ ಸೂಕ್ಷ್ಮ**ವಾಗಿ ಹಿಡಿದಿಡುವ ಇವರ ಕಥೆ-**ಕಾದಂಬರಿಗಳು, ಅಲ್ಲಿನ ಜನರ ಅಸ್ಮಿತೆ,** ಆಶೋತ್ತರಗಳು, ಸ್ಥಿತ್ಯಂತರಗೊಂಡ ಜನಗಳ ಮನಸ್ಥಿತಿಗಳು ಅತಿ ಕಡಿಮೆ ಪದಗಳಲ್ಲಿ ಶಕ್ತಿಶಾಲಿಯಾಗಿ ಹಿಡಿದಿಡುತ್ತವೆ. ಪಶ್ಚಿಮದ ಜಗತ್ತಿನಲ್ಲಿಯೂ ಗುರ್ನಾ ಚಿರಪರಿಚಿತ ಲೇಖಕರು.

ಕೇಶವ ಮಳಗಿ



ಇವರದು ವಿಭಿನ್ನ ಕಥನ ಮಾರ್ಗ. ವಿಜಾಪುರ, ಬಳ್ಳಾರಿ ಮತ್ತು ಕಲಬುರುಗಿ ಜಿಲ್ಲೆಗಳ ಭಾಷೆ, ಸಂಸ್ಕೃತಿಗಳ ಬನಿಯನ್ನು ತಮ್ಮ ಕಥನದಲ್ಲಿ ಹಿಡಿದಿಡಲು **ಪ್ರಯತ್ನಿಸಿದ್ದಾರೆ. ಹೊಸ ಬಗೆಯ ಅಭಿವ್ಯಕ್ತಿ ಶೈಲಿ, ವಸ್ತು ನಿರೂಪಣೆಗಳು ಮಳಗಿ ಅವರ** ಕಥಾನಕದ ವಿಶಿಷ್ಟಗುಣವಾಗಿದೆ. **'ಕಡಲ ತೆರೆಗೆ ದಂಡೆ', 'ಮಾಗಿ** ಮೂವತ್ತೈದು', 'ವೆನ್ನೆಲ **ದೊರೆಸಾನಿ', ಅವರ ಕಥಾಸಂಕಲನಗಳು.** 'ಕುಂಕುಮ ಭೂಮಿ' 'ಅಂಗದ ಧರೆ' **ಕಾದಂಬರಿಗಳು. ನೇರಳೆ ಮರ-** ರೂಪಕ ಲೋಕದ ಕಥನಗಳನ್ನು **ತೆರೆದಿಡುವ ವಿಶಿಷ್ಟ ಕೃತಿ. ಅನೇಕ** ಕೃತಿಗಳನ್ನು ಅನುವಾದಿಸಿದ್ದಾರೆ. **ಪ್ರತಿಷ್ಟಿತ ಪುರಸ್ಕಾರಗಳು ಇವರನ್ನು** ಅರಸಿ ಬಂದಿವೆ.

ಆಸ್ತಿ ನಾಸ್ತಿ

**ಒಂದು ಬೆಟ್ಟದ ಮೇಲೆ
ಬೆತ್ತಲಾಗಿ ನಿಂತಿದ್ದಾನೆ ಗೊಮ್ಮಟ
ಮತ್ತೊಂದು ಬೆಟ್ಟದ ಮೇಲೆ
ತಿರುಪತಿ ತಿಮ್ಮಪ್ಪ
ಹೊರಲಾಗದೆ ಹೊರುತ್ತಿದ್ದಾನೆ
ಚಿನ್ನ ವಜ್ರ ವೈಡೂರ್ಯ
ರತ್ನ ಖಚಿತ ಕಿರೀಟ
ತೊರೆದು ಬೇಡುವ
ಭಕ್ತರ ಪಾಲಿಗೆ
ಎಲ್ಲವೂ ತೊಳಲಾಟ**

ಜರಗನಹಳ್ಳಿ ಶಿವಶಂಕರ್



ವೈಚಾರಿಕ ಲೇಖನ

ವಿಜ್ಞಾನವೆನ್ನುವ ಅಂತಿಮ ಪರಿಕರ

ಅಗ್ನಿ ಶ್ರೀಧರ್

ಅಷ್ಟೆಲ್ಲಾ ವಿಜ್ಞಾನ ಮಾನವನ ಪ್ರಗತಿಗಾಗಿ ಶ್ರಮಿಸುತ್ತಿದ್ದರೂ ಏಕೆ ಎಲ್ಲರೂ ವೈಜ್ಞಾನಿಕ ಆಲೋಚನೆಗಳನ್ನು ಮೈಗೂಡಿಸಿಕೊಳ್ಳುತ್ತಿಲ್ಲ? ಕಾರಣ ಸರಳ: ವಿಜ್ಞಾನದಲ್ಲಿ ಅಂಧಾನುಕರಣೆಗೆ ಎಡೆಯಿಲ್ಲ. ಅಲ್ಲಿನ ವಿವರಗಳನ್ನು ಅರಿವಿಗೆ ತಂದುಕೊಳ್ಳಲು ಸಾಕಷ್ಟು ಸಿದ್ಧತೆ ಬೇಕಾಗುತ್ತದೆ. ಇಂದು ನಾವು ವ್ಯಾಪಕವಾಗಿ ಬಳಸುತ್ತಿರುವ ಸೆಲ್ ಫೋನ್‌ಗಳ ಹಿಂದಿರುವ ತಂತ್ರಜ್ಞಾನವನ್ನು ತಿಳಿದುಕೊಂಡಿರುವವರು ತೀರ ವಿರಳ.

ಬಹಳಷ್ಟು ಜನಗಳಲ್ಲಿ ವಿಜ್ಞಾನ ಮತ್ತು ಕಲಾ ಪ್ರಕಾರಗಳು ಭಿನ್ನ, ವಿರುದ್ಧ ಪ್ರಕಾರಗಳೆನ್ನುವ ತಪ್ಪು ತಿಳಿವಳಿಕೆಯಿದೆ. ಮನುಷ್ಯ ತನ್ನ ಸುತ್ತಲಿನ ವಿಶ್ವವನ್ನು ಅರಿಯಲು, ಅದರೊಡನೆ ವ್ಯವಹರಿಸಲು ನಾಟಕ, ಕಾವ್ಯ, ಸಂಗೀತ, ಚಿತ್ರಕಲೆ ಮತ್ತು ಸಾಹಿತ್ಯವನ್ನು ಬಳಸಿಕೊಂಡನೆಂದು, ಬೆಳೆಸಿದನೆಂದೂ ನಂಬುವ ಪ್ರಬುದ್ಧರೂ ಸಹ ವಿಜ್ಞಾನವೆಂದರೆ ಮುಖ ಸಿಂಡರಿಸುತ್ತಾರೆ. ಆದರೆ ಆಳದಲ್ಲಿ ವಿಜ್ಞಾನವೂ ಸಹ ಸುತ್ತಲಿನ ವಾಸ್ತವವನ್ನು ಅರಿಯಲು ಇರುವ ಒಂದು ಮಹತ್ತರ, ಅರ್ಥಪೂರ್ಣ ಪರಿಕರ. ಮತ್ತು ಇತರ ಎಲ್ಲ ಶಾಸ್ತ್ರಗಳಿಂದಲೂ ಅದು ಭಿನ್ನವೆನಿಸಿಕೊಳ್ಳುವುದು ಒಂದೇ ಒಂದು ಕಾರಣಕ್ಕಾಗಿ: ಅದರ ಹುಡುಕಾಟ ಆಲೋಚನಾ ಅಥವಾ ಆಂಶಿಕ ಸತ್ಯಗಳಲ್ಲ; ಪರಿಪೂರ್ಣ ಸತ್ಯ. ಪ್ರಯೋಗಗಳ ಮೂಲಕ ಖಚಿತಪಡಿಸಿಕೊಳ್ಳಬಹುದಾದ ಸತ್ಯ.

ಈ ಹಂತದಲ್ಲಿ ವಿಜ್ಞಾನ ಸಾಮಾನ್ಯರ ಬದುಕಿನ ಮೇಲೆ ಉಂಟುಮಾಡಬಹುದಾದ ಪರಿಣಾಮಗಳನ್ನು ಒಂದು ಬಾರಿ ಗಮನಿಸುವುದು ಅಗತ್ಯವೆನಿಸುತ್ತದೆ. ತೀರ ಇತ್ತೀಚಿನವರೆಗೂ ನಮ್ಮಲ್ಲಿದ್ದ ಒಂದು ತಪ್ಪು ಕಲ್ಪನೆಯೆಂದರೆ: ವಿಜ್ಞಾನ ಪಶ್ಚಿಮಕ್ಕೆ ಸೇರಿದ್ದು ಎಂಬುದು. ಧಾರ್ಮಿಕ ಪ್ರವೃತ್ತಿಯವರಿರಲಿ, ಸಾಕಷ್ಟು ವೈಚಾರಿಕ ಮನೋಭಾವ ಹೊಂದಿರುವವರೂ ಸಹ ಸಾಕಷ್ಟು ಸಂದರ್ಭಗಳಲ್ಲಿ ಅಂತಹ ಅಭಿಪ್ರಾಯವನ್ನೆ ವ್ಯಕ್ತಪಡಿಸುತ್ತಿದ್ದರು. ಈಗಲೂ ಸಹ ಅದು ಸಂಪೂರ್ಣವಾಗಿ ಕರಗಿಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಬಹುತೇಕ ಎಲ್ಲ ಇಂಗ್ಲಿಷ್ ದಿನಪತ್ರಿಕೆಗಳು ಈ ಕ್ಷಣದ ವೈಜ್ಞಾನಿಕ ಸಂಶೋಧನೆಗಳಿಗೆ ಸಾಕಷ್ಟು ಮಹತ್ವ ನೀಡುತ್ತಿವೆ. ಸ್ಥಳೀಯ ಭಾಷೆಗಳ ಪತ್ರಿಕೆಗಳೂ ಸಹ ಕಣ್ಣು ತೆರೆಯುತ್ತಿವೆ.

ಸುಮಾರು ಏಳೆಂಟು ತಿಂಗಳುಗಳ ಹಿಂದೆ ನಮ್ಮ ನಡುವಿನ ಅತ್ಯಂತ ಪ್ರಖರ ಸಾಹಿತಿಯೊಬ್ಬರು ಇತ್ತೀಚಿನ ಚುನಾವಣೆಗಳಲ್ಲಿ ಸ್ಥಾಪಿತ ಪಕ್ಷಗಳು ಯಾವ ರೀತಿ ಪರಿಶಿಷ್ಟ ಜಾತಿಗಳಿಗೆ ಮೀಸಲಾಗಿರುವ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಸ್ಪೃಶ್ಯರೆಂದು ಪರಿಗಣಿತವಾಗಿರುವ ಅಸ್ಪೃಶ್ಯ ಜಾತಿಗಳ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಅವರನ್ನು ಗೆಲ್ಲಿಸುವ ತಂತ್ರ ಮಾಡುತ್ತಿರುವುದನ್ನು ಕುರಿತು ಸಾಕಷ್ಟು ಖೇದ ವ್ಯಕ್ತಪಡಿಸಿದ್ದರು. ನಾನು



ಇಂದು ಧಾರ್ಮಿಕ ಮೂಲವಾದ, ಅಂಧ ಮೌಢ್ಯಗಳು ನಮ್ಮನ್ನು ಎಷ್ಟೆ ಬಾಧಿಸುತ್ತಿರಲಿ, ವೈಯಕ್ತಿಕ ನೆಲೆಯಲ್ಲಿ ಅವುಗಳು ನೆಲೆ ಕಳೆದುಕೊಂಡಿವೆ. ಯಾವುದೆ ಧರ್ಮದ ಕಟ್ಟಾ ಅಭಿಮಾನಿ ಅಥವಾ ಅನುಯಾಯಿಯೂ ಸಹ ವೈಜ್ಞಾನಿಕ ಉಪಕರಣಗಳನ್ನು ದೂರ ಸರಿಸಿಲ್ಲ.

ಅದನ್ನು ಒಡೆದು ಹೇಳಬೇಕಿಲ್ಲ. ನಮ್ಮ ರಾಜ್ಯದಲ್ಲಿ ಹೊಲೆಯ-ಮಾದಿಗರು ಗಣನೀಯ ಸಂಖ್ಯೆಯಲ್ಲಿದ್ದರೂ ಅಷ್ಟೇನೂ ಗಣನೀಯ ಪ್ರಮಾಣದಲ್ಲಿರದ ಇತರ ಪರಿಶಿಷ್ಟ ಜಾತಿಯವರು ಸ್ಪರ್ಧಿಸಿದಾಗ, ಸಹಜವಾಗಿಯೆ ಜಾತಿಗ್ರಸ್ತ ಮನಸ್ಸುಗಳು ಅಂತಹ ಅಭ್ಯರ್ಥಿಗಳನ್ನು ಬೆಂಬಲಿಸುತ್ತಿವೆ. ಇದು ಮತ್ತೊಂದು ರೀತಿಯಲ್ಲಿ ನೈಜ ಅಸ್ಪೃಶ್ಯರನ್ನು ರಾಜಕೀಯವಾಗಿ ಅಸ್ಪೃಶ್ಯರನ್ನಾಗಿಸುವ ಜಾಣ್ಮೆ. ಅಂತಹ ತಂತ್ರಕ್ಕೆ ಪ್ರತಿತಂತ್ರವನ್ನು ಹೇಗೆ ಹೆಣೆಯಬಹುದೆಂದು ಮಾತನಾಡುತ್ತಿರುವಾಗ ಪ್ರಾಸಂಗಿಕವಾಗಿ ಮಹಾದೇವ ಹೇಳಿದರು: '.... ನನಗೆ ಅನ್ನಿಸುತ್ತೆ... ಈ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಏನು ಮಾಡಿದರೂ ಬದಲಿಸಲು ಸಾಧ್ಯವಿಲ್ಲ... ನಾವು ಎಷ್ಟೆ ತೀವ್ರವಾಗಿ ಹೋರಾಟ ಮಾಡಿದರೂ ಅಂತಿಮವಾಗಿ ಮೇಲುಜಾತಿಗಳ ಗುತ್ತಿಗೆ ಪಡಿದಿರುವವರು ಕೀಳುಜಾತಿಗಳನ್ನು ಶೋಷಿಸುತ್ತಲೆ ಇರುತ್ತಾರೆ...' ಪದಗಳು ಸ್ವಲ್ಪ ಬದಲಿವೆ; ಅವರು ಮಾತನಾಡಿದ್ದನ್ನು ನೆನಪಿನಿಂದ ದಾಖಲಿಸುತ್ತಿದ್ದೇನೆ.

ಸಾಕಷ್ಟು ಡಿಸ್ಟರ್ಬ್ ಆಗಿದ್ದ ಅವರಿಗೆ ಹೇಳಿದೆ: '...ಅಷ್ಟೆಲ್ಲಾ ನಿರಾಶರಾಗುವ ಅವಶ್ಯಕತೆಯಿಲ್ಲ ಸಾರ್... It is just a matter of time.... ಇಂದಲ್ಲಾ ನಾಳೆ ವೈಜ್ಞಾನಿಕ ಸತ್ಯಗಳು ಈ ಜಾತಿ... ಈ ಮೌಢ್ಯಗಳನ್ನು ಒಡೆದು ಹಾಕುತ್ತವೆ... ನಾವು ತಾಳ್ಮೆಯಿಂದ ಕಾಯಬೇಕು...' ಒಂದು ಕ್ಷಣ ಮೌನಕ್ಕೆ ಇಳಿದು ನಂತರ ಹೇಳಿದರು: 'ಓಹ್... ಹಾಗಂತೀರ...? ನನಗೆ ಈಗ ಸ್ವಲ್ಪ ರಿಲ್ಯಾಕ್ಸ್ ಆಯ್ತು...' ಅವರ ಧ್ವನಿಯಲ್ಲಿನ ಭಾರ ಸಾಕಷ್ಟು ಇಳಿದಿತ್ತು.

ನಾನು ಅವರನ್ನು ಸಮಾಧಾನಿಸಲು ಹಾಗೆ ಹೇಳಿರಲಿಲ್ಲ; ಅದು ನನ್ನ ನಂಬಿಕೆಯ ಆಳದ ಸತ್ಯ. ಇಂದಲ್ಲಾ ನಾಳೆ ವಿಜ್ಞಾನ ಮತ್ತು ತಂತ್ರಜ್ಞಾನ ಮನುಷ್ಯರ ನಡುವಿನ ಭೇದಗಳನ್ನು ತೊಡೆದು ಹಾಕುತ್ತದೆ. ಅದಕ್ಕೆ ಮುಖ್ಯ ಕಾರಣ ಏನು ಗೊತ್ತೆ? ವಿಜ್ಞಾನವೂ ಸಹ ಮನುಷ್ಯ ಆಲೋಚನೆಗಳ ಖಚಿತ ಅಭಿವ್ಯಕ್ತಿಯಾಗಿರುವುದು! ಹೌದು, ಮನುಷ್ಯ ತನ್ನ ಇರುವಿಕೆಯನ್ನು ಕುರಿತು ಅರ್ಥ ಮಾಡಿಕೊಳ್ಳಲು ಬುದ್ಧಿ'ವಂತಿಕೆ ಬಲಿಯತೊಡಗಿದಾಗಿನಿಂದಲೆ ತೀವ್ರವಾಗಿ ಯತ್ನಿಸುತ್ತಿದ್ದಾನೆ. ಭಾಷೆಯ ಮೇಲಿನ ಪ್ರಬುದ್ಧತೆ, ಗಣಿತಗಳೂ ಸಹ ಅಂತಹ ಪ್ರಯತ್ನಗಳೆ. ವರ್ಣಮಾಲೆಯ ಮೂಲಕ ತನ್ನ ಮತ್ತು ಸುತ್ತಲ ಜಗತ್ತಿನ ಅರ್ಥ ಕಂಡುಹಿಡಿದುಕೊಳ್ಳಲು ಆತ ಎಸಗಿದ ಪ್ರಯತ್ನಗಳ ಫಲವೆ ರೂಢಿಗತ ಧರ್ಮಗಳು. ಇಂದು ನಾವು ಏನೇ ಹೇಳಲಿ, ಅಂದು ಆ ಧರ್ಮಗಳಲ್ಲಿ ದಾಖಲೆಯಾಗಿರುವ ಗ್ರಂಥಗಳು ಅಂದಿಗೆ ವೈಜ್ಞಾನಿಕವೆ; ಪರಮ ಸತ್ಯಗಳೆ. ಆದರೆ ಅವುಗಳನ್ನು ಸತ್ಯಗಳಲ್ಲವೆಂದು ಅರ್ಥ ಮಾಡಿಸುವ ಪರಿಕರಗಳು ಆತನಿಗೆ ಇನ್ನೂ ದೊರಕಿರಲಿಲ್ಲ. ಎಷ್ಟು ಸಹಸ್ರಮಾನಗಳ ಕಾಲ ಮನುಷ್ಯ ಭೂಮಿಯನ್ನು ವಿಶ್ವದ ಕೇಂದ್ರವೆಂದು ನಂಬಿದ್ದ? ಮತ್ತು ಆ ನಂಬಿಕೆ ಆ ಕಾಲಕ್ಕೆ ಅಪ್ರಸ್ತುತವಾಗಿರಲಿಲ್ಲ. ಆಗಾಗ ಅನುಮಾನಗಳು ಮೂಡಿದರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಹಾಗಾಗಿಯೆ ಗೆಲಿಲಿಯೊ ಸೂರ್ಯ ಭೂಮಿಗಿಂತಲೂ ಬೃಹತ್ತಾಗಿದ್ದಾನೆ; ಅವನ ಸುತ್ತಲೂ ಭೂಮಿ ಸುತ್ತುತ್ತಿದೆ ಎನ್ನುವ ವೈಜ್ಞಾನಿಕ ಸತ್ಯಕ್ಕೆ ಧಾರ್ಮಿಕ ಸಂಸ್ಥೆಗಳಿಂದ ತಕರಾರು ಉಂಟಾಗಿದ್ದು. ಭೂಮಿಗೆ ಬೆಳಕನ್ನು ನೀಡುವ ಕೆಲಸವನ್ನು ಸೂರ್ಯ ನಿರ್ವಹಿಸುತ್ತಿದ್ದಾನೆಂದು ಎಲ್ಲ ಧರ್ಮಗಳೂ ಬಗೆದಿದ್ದವೆ ಹೊರತು ಭೂಮಿ ಆತನ ಮರ್ಜಿಯಲ್ಲಿದೆಯೆಂದಲ್ಲ.

* * *

ಇಂದು ಧಾರ್ಮಿಕ ಮೂಲವಾದ, ಅಂಧ ಮೌಢ್ಯಗಳು ನಮ್ಮನ್ನು ಎಷ್ಟೆ ಬಾಧಿಸುತ್ತಿರಲಿ, ವೈಯಕ್ತಿಕ ನೆಲೆಯಲ್ಲಿ ಅವುಗಳು ನೆಲೆ ಕಳೆದುಕೊಂಡಿವೆ. ಯಾವುದೆ ಧರ್ಮದ ಕಟ್ಟಾ ಅಭಿಮಾನಿ ಅಥವಾ ಅನುಯಾಯಿಯೂ ಸಹ ವೈಜ್ಞಾನಿಕ ಉಪಕರಣಗಳನ್ನು ದೂರ ಸರಿಸಿಲ್ಲ. ಬುರ್ಖಾ ತೊಡಿಸುವ ಧರ್ಮವೂ ಸಹ ಕಾರು, ಮೋಟಾರು, ಇಂಟರ್‌ನೆಟ್ ಮತ್ತು ಸೆಲ್ ಫೋನ್‌ಗಳನ್ನು ಬಳಸುತ್ತದೆ. ಹಾಗೆಯೆ, ಶ್ರುತಿಗಳು ಸಾರುವ ಸಿದ್ಧಾಂತಗಳೆ ತಆಖೈರು ಸತ್ಯಗಳೆಂದು ವಾದಿಸುವವರೂ ಸಹ ಅವುಗಳಿಗೆ ಸಾಮಾನ್ಯರಷ್ಟೆ ಶರಣಾಗಿದ್ದಾರೆ. ಮೌಲ್ವಿ, ಪೂಜಾರಿ ಮತ್ತು ಪಾದ್ರಿಗಳ ನಡುವೆ ಏನೆ ವ್ಯತ್ಯಾಸಗಳಿದ್ದರೂ ಅವರು ಬಳಸುತ್ತಿರುವ ಸೆಲ್ ಫೋನ್‌ಗಳಲ್ಲಿ ವ್ಯತ್ಯಾಸಗಳಿಲ್ಲ. ಹಾಗೆಯೆ ಇಂಟರ್‌ನೆಟ್ ಬಳಸಿ ಅವರು ಏನನ್ನೆ ಸಾರುತ್ತಿದ್ದರೂ, ಆ ತಂತ್ರಜ್ಞಾನ ತಮ್ಮ ಧಾರ್ಮಿಕ ಶಾಸ್ತ್ರಗಳಲ್ಲಿ ಇಲ್ಲದಿರುವುದು ಅವರಿಗೆ ಕೊರತೆ ಎನಿಸಿಲ್ಲ! ಇತರ ಯಾವುದೆ ಸಂಗತಿಗಳನ್ನು ಕುರಿತು ಕೇಳಿದರೂ, ತಮ್ಮ ಧರ್ಮಗ್ರಂಥಗಳಿಗೆ ಅನುಗುಣವಾಗಿ ಅವನ್ನು ಪರಿಶೀಲಿಸಬೇಕೆಂದು ಹೇಳಿದರೂ, ತಂತ್ರಜ್ಞಾನ ಕುರಿತು ಅಪದ್ಧ ನುಡಿಯುವುದಿಲ್ಲ! ಇಡೀ ಜಗತ್ತನ್ನು ಇಸ್ಲಾಮಿಕರಣಗೊಳಿಸಲು ತನ್ನ ಬದುಕನ್ನೆ ಮುಡಿಪಾಗಿಟ್ಟು, ಅದಕ್ಕಾಗಿ ಸಾವಿರಾರು ಮುಗ್ಧರ ಜೀವಹರಣ ಮಾಡಿದ ಬಿನ್ ಲಾಡೆನ್ ಹೆಚ್ಚಾಗಿ ಅವಲಂಬಿಸಿದ್ದುದು ಪಶ್ಚಿಮದಿಂದ ರೂಪುಗೊಂಡ ಸೆಲ್ ಫೋನ್ ಮತ್ತು ಇಂಟರ್‌ನೆಟ್‌ಗಳನ್ನು! ಮತ್ತು ಆತನ ಪತನಕ್ಕೆ ಅವೆ ಕಾರಣವಾದವು.

ಒಂದು ಕ್ಷಣ ಮನುಷ್ಯನನ್ನು ಅವನ ಧಾರ್ಮಿಕ ಮತ್ತು ಸಾಮಾಜಿಕ ನೆಲೆಯಿಂದ ಪ್ರತ್ಯೇಕಿಸಿ ವೈಜ್ಞಾನಿಕ ನೆಲೆಯಿಂದ ನೋಡಿ, ಆಗ ಆ ಆಲೋಚನೆಯ ಗಹನತೆ ಅರಿವಿಗೆ ಬರುತ್ತದೆ. ಅದರ ಕಣ್ಣಿನಲ್ಲಿ ಯಾರು ಯಾರಿಗಿಂತಲೂ ಶ್ರೇಷ್ಠರಲ್ಲ; ಎಲ್ಲ ಮನುಷ್ಯರ ಒಳಗೂ ಅಡಗಿರುವ ಜೀವಸತ್ವಗಳು ಒಂದೆ; ಎಲ್ಲರ ಮಿದುಳನ್ನು ನ್ಯೂರಾನ್‌ಗಳೆ ನಿಯಂತ್ರಿಸುತ್ತಿರುವುದು. ಧಾರ್ಮಿಕ ನೆಲೆಯಲ್ಲಿ ನಿಂತಿರುವಾಗ, ಒಬ್ಬ ಮುಸಲ್ಮಾನನಿಗೂ, ಹಿಂದೂವಿಗೂ ಮತ್ತು ಕ್ರಿಶ್ಚಿಯನ್‌ಗೂ ನಡುವೆ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಹಾಗೆಯೆ ಒಬ್ಬ ಬ್ರಾಹ್ಮಣ ಮತ್ತು ಒಬ್ಬ ದಲಿತನ ನಡುವೆ ಎಂದೂ ಮುಚ್ಚಲಾಗದ ಕಂದಕ ಕಾಣುತ್ತದೆ. ಆದರೆ ವಿಜ್ಞಾನದ ಕಣ್ಣಲ್ಲಿ?

ನಿಮಗೆ ಅಚ್ಚರಿಯೆನಿಸಬಹುದು: ಒಬ್ಬ ಪ್ರಖ್ಯಾತ ವಿಜ್ಞಾನಿಗೂ ಮತ್ತು ಒಬ್ಬ ಅನಕ್ಷರಸ್ಥನಿಗೂ ನಡುವೆ ಇರಬಹುದಾದ ವ್ಯತ್ಯಾಸ ಎಷ್ಟು ಗೊತ್ತೆ? ಅರ್ಧ ಪರ್ಸೆಂಟ್‌ಗೂ ಕಡಿಮೆ! ಒಬ್ಬ ಆಟೋ ಚಾಲಕನಿಗೂ, ವೈಮಾನಿಕ ಪೈಲಟ್‌ಗೂ ನಡುವಿನ ವ್ಯತ್ಯಾಸ ಶೇಕಡ ಕಾಲುಭಾಗ! ಅಷ್ಟಿರಲಿ, ನಮಗೂ ನಮ್ಮ ಮೂಲಬೇರಾದ ಚಿಂಪಾಂಜಿಗೂ ನಡುವಿನ ವ್ಯತ್ಯಾಸ ಎಷ್ಟು ಗೊತ್ತೆ? ಕೇವಲ ಎರಡು ಪರ್ಸೆಂಟ್! ಅಂದರೆ ಇಂದು ನಮ್ಮ ನಡುವೆ ಇರುವ ಚಿಂಪಾಂಜಿಗಳು ತಮ್ಮ ಒಟ್ಟಾರೆ ಅಸ್ತಿತ್ವದಲ್ಲಿ ಎರಡು ಪರ್ಸೆಂಟ್ ಬದಲಾದರೆ ಸಾಕು, ಮನುಷ್ಯರನ್ನು ಮೀರಿಸುತ್ತವೆ! ಅಂದರೆ ನಮ್ಮ ಸನಿಹದ ಪ್ರಾಣಿಯಿಂದ ಕೇವಲ ಎರಡು ಪರ್ಸೆಂಟ್ ಭಿನ್ನವಾಗಲು ನಾವು ಅನಾದಿ ಕಾಲದಿಂದಲೂ ಭಾಷೆಯನ್ನು ಬಳಸಿ ಯತ್ನಿಸುತ್ತಿದ್ದೇವೆ ಮತ್ತು ಆ ಭಾಷೆಗೆ ಪೂರಕವಾಗಿ ವಿಜ್ಞಾನ ರೂಪುಗೊಂಡಿದೆ. ಬಹುಶಃ ವೈಜ್ಞಾನಿಕ ಬೆಳವಣಿಗೆ ಭೂಮಿಯನ್ನು ದಾಟಿ ಇತರ ನಕ್ಷತ್ರವ್ಯೂಹಗಳಲ್ಲಿ ಜೀವಿಸುವ ಹಂತಕ್ಕೆ ನಾವು ಜಿಗಿದಾಗ, ಚಿಂಪಾಂಜಿಗಳಿಗಿಂತಲೂ ಮೂರು ಪರ್ಸೆಂಟ್ ಉನ್ನತ ಹಂತವನ್ನು ತಲುಪುತ್ತೇವೆ!

* * *

ಅಷ್ಟೆಲ್ಲಾ ವಿಜ್ಞಾನ ಮಾನವನ ಪ್ರಗತಿಗಾಗಿ ಶ್ರಮಿಸುತ್ತಿದ್ದರೂ ಏಕೆ ಎಲ್ಲರೂ ವೈಜ್ಞಾನಿಕ ಆಲೋಚನೆಗಳನ್ನು ಮೈಗೂಡಿಸಿಕೊಳ್ಳುತ್ತಿಲ್ಲ? ಕಾರಣ ಸರಳ: ವಿಜ್ಞಾನದಲ್ಲಿ ಅಂಧಾನುಕರಣೆಗೆ ಎಡೆಯಿಲ್ಲ. ಅಲ್ಲಿನ ವಿವರಗಳನ್ನು ಅರಿವಿಗೆ ತಂದುಕೊಳ್ಳಲು ಸಾಕಷ್ಟು ಸಿದ್ಧತೆ ಬೇಕಾಗುತ್ತದೆ. ಇಂದು ನಾವು ವ್ಯಾಪಕವಾಗಿ ಬಳಸುತ್ತಿರುವ ಸೆಲ್ ಫೋನ್‌ಗಳ ಹಿಂದಿರುವ ತಂತ್ರಜ್ಞಾನವನ್ನು ತಿಳಿದುಕೊಂಡಿರುವವರು ತೀರ ವಿರಳ. ಏಕೆಂದರೆ ಆ ಭಾಷೆಯಲ್ಲಿ ಅಕ್ಷರಗಳು ಕೇವಲ ಅಕ್ಷರಗಳಾಗಿ ಬಳಕೆಯಾಗುವುದಿಲ್ಲ; ಸಂಕೇತಗಳಾಗುತ್ತವೆ. ಸಾಮಾನ್ಯ ಜನಗಳಿರಲಿ, ಬಹುಶಃ ಇದ್ದಕ್ಕಿದ್ದ ಹಾಗೆ ನ್ಯೂಟನ್ ಅಥವಾ ಐನ್‌ಸ್ಟೈನ್‌ರವರು ಇಂದು ಎದ್ದು

ಉಚಿತ ವಿಮೆಯೊಂದಿಗೆ ಹೆಚ್ಚಿನ ಲಾಭ ಪಡೆಯಿರಿ



ಎಸ್‌ಬಿಎಮ್ ಉಚಿತ ಅಪಘಾತ ಮೃತ್ಯು ವಿಮಾ* ರಕ್ಷೆಯೊಂದಿಗೆ
ಠೇವಣಿ ಯೋಜನೆಗಳನ್ನು ಪ್ರಸ್ತುತಪಡಿಸುತ್ತಿದೆ.

₹ 5 ಲಕ್ಷಗಳ
ಉಚಿತ ಅಪಘಾತ ಮೃತ್ಯು ವಿಮೆ*

ಮೈಬ್ಯಾಂಕ್ ಸುರಕ್ಷಾ ಸೇವಿಂಗ್ಸ್ ಪ್ಲಸ್ ಖಾತೆ
ಕನಿಷ್ಠ ತ್ರೈಮಾಸಿಕ ಸರಾಸರಿ ಶಿಲ್ಕು - ₹ 25,000/-

ಮೈಬ್ಯಾಂಕ್ ಸುರಕ್ಷಾ ಅವಧಿ ಠೇವಣಿ ಖಾತೆ
ಕನಿಷ್ಠ ಠೇವಣಿ - ₹ 1 ಲಕ್ಷ

₹ 2 ಲಕ್ಷಗಳ
ಉಚಿತ ಅಪಘಾತ ಮೃತ್ಯು ವಿಮೆ*

ಮೈಬ್ಯಾಂಕ್ ಸುರಕ್ಷಾ ಉಳಿತಾಯ ಖಾತೆ
ಕನಿಷ್ಠ ತ್ರೈಮಾಸಿಕ ಸರಾಸರಿ ಶಿಲ್ಕು - ₹ 10,000/-

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ನಾಳಿನ ಉತ್ತಮ ಭವಿಷ್ಯಕ್ಕಾಗಿ

ಪ್ರಧಾನ ಕಛೇರಿ: ಮೈಸೂರು ಬ್ಯಾಂಕ್ ವೃತ್ತ, ಕೆಂಪೇಗೌಡ ರಸ್ತೆ, ಬೆಂಗಳೂರು - 560 254 www.statebankofmysore.co.in
ಸಹಾಯವಾಣಿ : 1800 - 425 - 2244

*ಷರತ್ತುಗಳು ಅನ್ವಯ

1913 ರಿಂದ ನಿಮ್ಮ ವಿಶ್ವಾಸದ ಬ್ಯಾಂಕ್

ಬಂದರೆ, ಅವರೂ ಸಹ ಬಹುಕಾಲ ಪರದಾಡಬೇಕಾಗುತ್ತದೆ! ಏಕೆಂದರೆ, ವಿಜ್ಞಾನದ ಭಾಷೆ ನಿಂತ ನೀರಲ್ಲ: ಸದಾ ಹರಿಯುತ್ತಿವ, ಹರಿಯುತ್ತಲೆ ಇರುವ ನದಿ. ಆ ನದಿ ಪ್ರವಹಿಸುವುದು ಕಾಲನ ದಡಗಳಲ್ಲಿ. ಧಾರ್ಮಿಕ ವಿಚಾರಣೆಗಳ ಮೂಲಕವೂ ನದಿ ಹರಿಯುತ್ತಿರುತ್ತದೆ. ಆದರೆ ಅದು ಬಹುತೇಕ ನಿಂತನೀರಾಗಿರುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ಸತ್ಯವೆಂದು ಘೋಷಿಸಿದ್ದನ್ನು ಇಂದೂ ಸತ್ಯವೆನ್ನುವ ಸಾವಿರಾರು ಕುಡುಗಳಿರುತ್ತವೆ. ಅದರಲ್ಲಿ ಮೀಯುವ ಮನಸ್ಸುಗಳು ಮನುಷ್ಯ ಬುದ್ಧಿವಂತಿಕೆಗೆ ಹೆಚ್ಚು ಬೆಲೆ ನೀಡುವುದಿಲ್ಲ. ಪ್ರಶ್ನಿಸುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಬದಲಾವಣೆಗೆ ಎಡೆಯಿರುವುದಿಲ್ಲ. ಮನಸ್ಸುಗಳನ್ನು ಮುಚ್ಚಿಕೊಂಡಿರಲು ಆಗ್ರಹಿಸುತ್ತವೆ.

ಆದರೆ ವಿಜ್ಞಾನದ ನದಿ ಹಾಗಲ್ಲ. ಪ್ರತೀ ಹೆಜ್ಜೆಗೂ ಸಂಶಯವನ್ನು ವ್ಯಕ್ತಪಡಿಸುತ್ತಿರುತ್ತದೆ. ಬದಲಾವಣೆ ಅದರ ಜೀವಾಳ. ಬುದ್ಧಿವಂತಿಕೆ ಅದರ ಬುನಾದಿ, ಮನಸ್ಸುಗಳನ್ನು ತೆರೆದಿಡಲು ಒತ್ತಾಯಿಸುತ್ತದೆ. ಹಾಗೆಂದು ವಿಚಾರವಂತಿಕೆಯ ಒರೆಗಲ್ಲಿನಿಂದ ಹೊರಹೊಮ್ಮಿದ ಎಲ್ಲವನ್ನೂ ವಿಜ್ಞಾನ ತಿರಸ್ಕರಿಸುವುದಿಲ್ಲ. ತನ್ನ ಪ್ರಯೋಗಗಳ ಫಲಿತಾಂಶಗಳಿಗೆ ಅವು ಪೂರಕವಾಗಿದ್ದಾಗ, ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತದೆ. ಇಂದು ಆರ್ಕಿಮಿಡಿಸ್, ಪ್ಲೇಟೊ, ಬುದ್ಧ ಮತ್ತು ಕಣಾದ ಪ್ರತಿಪಾದಿಸಿದ ಸಂಗತಿಗಳನ್ನು ಕುರಿತು ಪ್ರಶಂಸಿಸುತ್ತಿದೆ. ಹಾಗೆಯೆ ಮನುಷ್ಯರ ನಡುವಿನ ಸಮಾನತೆಯನ್ನು ಪ್ರತಿಹಿಡಿಯಲು ಹೆಣಗುತ್ತಿದೆ.

ಒಂದು ಜಟಿಲ ಪ್ರಕರಣವನ್ನು ತೆಗೆದುಕೊಂಡು ನೋಡೋಣ. ಶ್ರೇಣೀಕೃತ ವರ್ಣಾಶ್ರಮ ವ್ಯವಸ್ಥೆ. ಹಿಗಾಯ್ತಿನಿಂದಲೂ ಸಾಕಷ್ಟು ಪ್ರಗತಿಪರರು ಅದರ ವಿರುದ್ಧ ಧ್ವನಿ ಎತ್ತಿದ್ದಾರೆ. ಬುದ್ಧ ಅದನ್ನು ತರ್ಕಪೂರ್ಣವಾಗಿ ಖಂಡಿಸುತ್ತಾನೆ. ಅದರ ಪ್ರತಿಪಾದಕರು, ಅಂದಿರಲಿ ಇಂದೂ ಸಹ ಎಂತಹ ಉಗ್ರತೆಯಲ್ಲಿ ಅದನ್ನು ಸಮರ್ಥಿಸಿಕೊಳ್ಳುತ್ತಾರೆಂದರೆ; ಹಿಂದಿನ ಜನ್ಮದಲ್ಲಿ ಮೇಲುಜಾತಿಯಲ್ಲಿ ಹುಟ್ಟಿರುವವನು ಮುಂದಿನ ಜನ್ಮದಲ್ಲಿಯೂ ಅದೇ ಜಾತಿಯಲ್ಲಿದ್ದ ಮುಂದಿನ ಜನ್ಮದಲ್ಲಿಯೂ ಅದೇ ಜಾತಿಯಲ್ಲಿ ಜನಿಸುತ್ತಾನೆ! ಅಂದರೆ ಕೀಳು ಜಾತಿಯಲ್ಲಿ ಜನಿಸಿ, ನಿಕೃಷ್ಟವೆನಿಸುವಂತಹ ಉದ್ಯೋಗದ ಮೂಲಕ ಜೀವನ ನಿರ್ವಹಿಸುತ್ತಿದ್ದರೆ; ಮುಂದಿನ ಜನ್ಮದಲ್ಲಿಯೂ ಅವನಿಗೆ ಅದೇ ಗತಿ. ಅಂದರೆ, ಸಾವಿನಲ್ಲೂ ಆತನಲ್ಲಿ ಬಿಡುಗಡೆಯಿಲ್ಲ. ಸಾವಿನ ಪರಿಹಾರವೂ ಇಲ್ಲ. ಈ ಬದುಕಿನಲ್ಲಿ ಅನುಭವಿಸಿರುವ ಯಾತನೆಗಳನ್ನು ಮುಂದಿನ ಜನ್ಮಗಳಲ್ಲಿಯೂ ಅನುಭವಿಸುತ್ತಿರಬೇಕು. ಅಂತಹ ಸಿದ್ಧಾಂತವನ್ನು ಕುರಿತು ಅತಿರೀತವಾದ ಒಲವು, ಒಪ್ಪಿಗೆಗಳನ್ನು ಹಿಂದೂ ಸಮಾಜ ಇದ್ದರಿಂದಲೆ ಸಾವಿರಾರು ವರ್ಷಗಳ ಕಾಲ ಅಸಂಖ್ಯಾತ ಜನಸಮೂಹ ಜೀತದಲ್ಲಿ, ಇತರರ ಮರ್ಜಿಯಲ್ಲಿ ಬದುಕುವಂತಾಯಿತು.

ಅದರ ವಿರುದ್ಧ ದಾಸರೊಬ್ಬರು ಮನೋಜ್ಞವಾಗಿ ಹಾಡಿದರು: 'ಜಾತಿ ಹೀನನ ಮನೆಯ ಜ್ಯೋತಿ ತಾ

ಹೀನವೆ...' ಅಂದರೆ ದಡ್ಡಶಿಖಾಮಣಿಗಳೆ ಬೆಂಕಿಯಾಗಲಿ, ನೀರಾಗಲಿ, ಮರಗಿಡಗಳಾಗಲಿ ಅಥವಾ ಪಶುಪಕ್ಷಿಗಳ ಮೇಲಾಗಲಿ ನಿಮ್ಮ ನಡುವಿರುವ ವ್ಯತ್ಯಾಸ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅಂದಮೇಲೆ ನೀವೇಕೆ ಹೀಗೆ ಹೊಡೆದಾಡುತ್ತಿದ್ದೀರಿ? ಆದರೆ ಅದು ಶ್ರೇಣೀಕೃತ ವ್ಯವಸ್ಥೆಯನ್ನು ಒಪ್ಪಿರುವವರ ಕಣ್ಣು ತೆರೆಸಲಿಲ್ಲ. ಹೊರಗಿನ ಪ್ರಪಂಚದ ಬಗ್ಗೆ ನಾವು ಮಾತನಾಡುತ್ತಿಲ್ಲ. ಅಂತರಂಗದಲ್ಲಿರುವ ಕೊರತೆಗಳ ಬಗ್ಗೆ ಮಾತನಾಡುತ್ತಿದ್ದೇವೆ, ಜ್ಯೋತಿ ಒಂದೇ ಆಗಿದ್ದ ಮಾತ್ರಕ್ಕೆ ಮನುಷ್ಯರ ನಡುವೆ ಭೇಧ? ಇರಬಾರದೆಂದಿಲ್ಲ ಎಂದು ದಾಸರ ಹಿತೋಕ್ತಿಯನ್ನು ತಿರಸ್ಕರಿಸಿದರು. ಇಂದೂ ಸಹ ದೇಶದ ಎಲ್ಲೆಡೆ ಮೀಸಲಾತಿಯಲ್ಲಿ ಪಾಸಾಗುತ್ತಿರುವ ವಿದ್ಯಾರ್ಥಿಗಳು ಸಾಮಾನ್ಯ ಕೆಟಗರಿಯಲ್ಲಿ ಪಾಸಾದವರ ಬುದ್ಧಿಮತ್ತೆಗೆ ಸಮನಲ್ಲವೆನ್ನುವ ವಾದವನ್ನು ಮಂಡಿಸುತ್ತಿದ್ದಾರೆ. ತಮಾಷೆಯೆಂದರೆ, ನೂರಕ್ಕೆ ತೊಂಬತ್ತೊಂಬತ್ತು ಅಂಕ ಪಡೆದಿರುವ ಮೀಸಲಾತಿ ವಿದ್ಯಾರ್ಥಿಯ ಪ್ರತಿಭೆಯನ್ನೂ ಸಂಶಯದಿಂದ ನೋಡುತ್ತಾರೆ.

ಇದನ್ನು ವಿಜ್ಞಾನ ಯಾವ ರೀತಿ ನಿರ್ವಹಿಸಬಲ್ಲದು?

ಇಂದು ಕಣ(Particle)ಗಳು ಈ ವಿಶ್ವದ ಎಲ್ಲವುಗಳ ಮೂಲ ಎಂದು ವಿಜ್ಞಾನ ಸಂಶಯಕ್ಕೆಡೆಯಿಲ್ಲದಂತೆ ನಿರೂಪಿಸಿದೆ. ಕೇವಲ ಅರವತ್ತು ವರ್ಷಗಳ ಹಿಂದೆ ಇನ್ನೂ ಸಾಂಪ್ರದಾಯಿಕ ಹಾದಿಯನ್ನು ವಿಜ್ಞಾನ ತುಳಿಯುತ್ತಿದ್ದಾಗ ವಿಧಿ, ಅದೃಷ್ಟ ಮತ್ತು ಮನುಷ್ಯರ ಮೇಲೆ ದೇವರ ಪ್ರಭಾವ, ಹಿಡಿತಗಳನ್ನು ಕುರಿತು ವೈಜ್ಞಾನಿಕ ಸಮುದಾಯ ಸಹ ಸಾಕಷ್ಟು ನಂಬುಗೆಯನ್ನು ಬೆಳೆಸಿಕೊಂಡಿತ್ತು. ಆದರೆ ಕಣ ವಿಜ್ಞಾನ ಅವೆಲ್ಲವನ್ನೂ ಒಂದೇ ಪೆಟ್ಟಿನಲ್ಲಿ ಹೊಡೆದು ಹಾಕಿತು. ಪ್ರತೀ ಕ್ಷಣ ಕಣಗಳು ಅತ್ಯಂತ ವೇಗವಾಗಿ ಚಲಿಸುತ್ತಿರುತ್ತವೆ; ಹಾಗೆ ಚಲಿಸುವಾಗ ಎಲ್ಲ ಸಂದಿಗೊಂದಿಗಳಲ್ಲೂ ತಂಗಿ ಸಾಗುತ್ತಿರುತ್ತವೆ. ಅದು ಪ್ರಸಕ್ತ ಸಮಸ್ಯೆಗೆ ಹೇಗೆ ಸ್ಪಂದಿಸುತ್ತದೆಂದು ಅರ್ಥವಾಯಿತೆ?

ಸರಳವಾಗಿ ಹೇಳುವುದಾದರೆ, ಬ್ರಾಹ್ಮಣರ ಮನೆಯ ಎದುರಿಗೆ ದೂರದಲ್ಲಿ ನಿಂತು ಅವರು ಕೊಟ್ಟಿದ್ದನ್ನು ಸ್ವೀಕರಿಸುತ್ತಿದ್ದ ಹೊಲೆ-ಮಾದಿಗರ ದೇಹಗಳಲ್ಲಿ ಕಣ-ಅಣುಗಳು ಆ ಬ್ರಾಹ್ಮಣರ ದೇಹಗಳನ್ನು ಹೊಕ್ಕುತ್ತಿದ್ದವು! ಮನೆಯನ್ನು ಬೀದಿಗೆ, ಬೀದಿಯನ್ನು ಕೇರಿಗೆ, ಕೇರಿಯನ್ನು ಊರಿಗೆ, ಊರನ್ನು ದೇಶಕ್ಕೆ, ದೇಶವನ್ನು ವಿಶ್ವಕ್ಕೆ ವಿಸ್ತರಿಸಿಕೊಳ್ಳಬಹುದು.

ಇಂದು ಪ್ರತಿಯೊಬ್ಬನಲ್ಲಿಯೂ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಸಿಖ್ ಕಣಗಳು ಬೆರೆತು ಹೋಗಿರುವುದು ಮಾತ್ರವಲ್ಲ; ಹಲ್ಲಿ, ಹುಳು, ಹುಪ್ಪಟೆಗಳಲ್ಲಿರುವ ಅಣುಗಳೂ ಬೆರೆತಿವೆ! ಒಬ್ಬ ಭೌತಶಾಸ್ತ್ರಜ್ಞ ಮನಕ್ಕೆ ತಾಕುವಂತೆ ಹೇಳುತ್ತಾನೆ: ನೀವು ಕುಡಿಯುತ್ತಿರುವ ಒಂದು ಲೋಟ ನೀರಿನಲ್ಲಿ ಬುದ್ಧ, ಪೈಗಂಬರ್, ಜೀಸಸ್, ಸ್ಟಾಲಿನ್ ಮತ್ತು ಹಿಟ್ಲರ್ ದೇಹಗಳಲ್ಲಿದ್ದ ಕನಿಷ್ಠ ನೂರು ಕಣಗಳಾದರೂ ಇರುತ್ತವೆ...!

ಬುದ್ಧನಾಗಲಿ, ಅಂಬೇಡ್ಕರ್‌ರವರಾಗಲಿ ಇಂದು ನಮ್ಮ ತಿಳಿವಿನ ಹದವನ್ನು ವಿಸ್ತರಿಸುತ್ತಿರುವ ಖಗೋಳ ಶಾಸ್ತ್ರಜ್ಞರಿಗಿಂತಲೂ ಭಿನ್ನವಾಗಿ ಆಲೋಚನೆ ಮಾಡುತ್ತಿರಲಿಲ್ಲ. ಅವರ ಆಲೋಚನೆಗಳು ವೈಚಾರಿಕ ಪ್ರಖರತೆಯಿಂದ ಮಾತ್ರ ಕೂಡಿಲ್ಲ; ವೈಜ್ಞಾನಿಕ ಒಳನೋಟದಿಂದಲೂ ಕೂಡಿವೆ. ಪ್ರತಿಯೊಬ್ಬ ಮನುಷ್ಯನೂ ಅರಿವಿನ ಪರಿಪೂರ್ಣತೆಯನ್ನು ಅಂತಿಮವಾಗಿ ಸಾಧಿಸುತ್ತಾನೆ ಎನ್ನುವ ಬುದ್ಧನ ಸಂದೇಶ, ಸಮಾನತೆಯೆನ್ನುವುದು ಪ್ರಕೃತಿಯ ಕೊಡುಗೆ ಎಂದು ಅಂಬೇಡ್ಕರ್ ಹೇಳುವುದರ ಹಿಂದಿರುವ ವೈಜ್ಞಾನಿಕ ಖಚಿತತೆಯನ್ನು ನಾವು ಅರಿಯಬೇಕಿದೆ. ಪ್ರತಿಯೊಂದು ಜೀವಿಯ ಮೇಲೂ ಗುರುತ್ವಾಕರ್ಷಣ ಶಕ್ತಿ ಪರಿಣಾಮ ಬೀರಿಯೆ ತೀರುತ್ತದೆ ಎನ್ನುವುದಕ್ಕಿಂತಲೂ ಭಿನ್ನವಾದ ದೃಷ್ಟಿಕೋನಗಳಲ್ಲ ಅವು.

ಏನೆನ್ನುವಿರಿ?



ಅಗ್ನಿ ಶ್ರೀಧರ್



ಕನ್ನಡದ ಪ್ರಖರ ಚಿಂತಕ. ಸಾಮಾಜಿಕ ಹೋರಾಟಗಾರ. ಅಗ್ನಿ ಪತ್ರಿಕೆಯ ಸಂಸ್ಥಾಪಕ ಸಂಪಾದಕ. ಇವರ 'ದಾದಾಗಿರಿಯ ದಿನಗಳು' ಹಾಗೂ 'ಎದೆಗಾರಿಕೆ' ಕೃತಿಗಳು ಅಪಾರ ಜನಮನ್ನಣೆಗಳಿಸಿವೆ. ಇವರ ಬರಹಗಳನ್ನು ಆಧರಿಸಿ ತಯಾರಾದ ಸಿನಿಮಾಗಳು ಯಶಸನ್ನು ಪಡೆದಿವೆ. 'ತಮಸ್ಸು' ಎಂಬ ಸದಭಿರುಚಿ ಚಲನಚಿತ್ರವನ್ನು ನಿರ್ದೇಶಿಸಿದ್ದಾರೆ. ವೈಚಾರಿಕ ತಳಹದಿಯ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಅನುಭವ ಕಥನ 'ಆಧುನಿಕ ಮಾಂತ್ರಿಕರ ಚಾಡಿನಲ್ಲಿ' ಓದುಗರನ್ನು ವಿಶಿಷ್ಟ ಲೋಕಕ್ಕೆ ಕೊಂಡೊಯ್ಯುವ ಕೃತಿಯೆಂದು ಹೆಗ್ಗಳಿಕೆ ಪಡೆದಿದೆ.

ಅಭಿನಂದನೆಗಳೊಂದಿಗೆ

Bharat Electronics Employees Co-op House Building Society Ltd.

C-92, BEL Colony, Jalahalli, Bangalore-560013

ಭಾರತ ಎಲೆಕ್ಟ್ರಾನಿಕ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಆಡಳಿತ ಮಂಡಳಿಯ ಸದಸ್ಯರು

ಅಧ್ಯಕ್ಷರು	ಡಾ॥ ವಿಜಯಸಾರಥಿ ಟಿ.ಕೆ
ಉಪಾಧ್ಯಕ್ಷರು	ಶ್ರೀ ಗೋಪಿನಾಥ್ ಬಿ.ಎಸ್.
ಆಡಳಿತಾತ್ಮಕ ನಿರ್ದೇಶಕರು	ಶ್ರೀ ಎಂ. ಬೊಮ್ಮೇಗೌಡ
ನಿರ್ದೇಶಕರು	ಶ್ರೀ ಸಿ.ವಿ ಎಸ್. ರೆಡ್ಡಿ
ನಿರ್ದೇಶಕರು	ಶ್ರೀ ಬಿ. ಬೈರೇಗೌಡ
ಕೋ-ನಿರ್ದೇಶಕರು	ಶ್ರೀ ಕರಿಯಪ್ಪ, ಎಚ್
ನಿರ್ದೇಶಕರು	ಶ್ರೀಮತಿ ಅನಿತಾ ಆರ್. ಆಳ್ವ
ನಿರ್ದೇಶಕರು	ಶ್ರೀ ಮಹದೇವಯ್ಯ
ನಿರ್ದೇಶಕರು	ಶ್ರೀ ಕುಮಾರ ಸೆಲ್ವನ್ ಪಿ
ಕಾರ್ಯದರ್ಶಿ	ಶ್ರೀ ಹೆಚ್. ಸಿ. ದುರ್ಗಯ್ಯ
ಆರ್ಥಿಕ ಸಲಹೆಗಾರರು	ಶ್ರೀ.ಎಚ್. ಎ. ರಾಮಕೃಷ್ಣ ಉಪಪ್ರಧಾನ ವ್ಯವಸ್ಥಾಪಕರು (ಹಣಕಾಸು ಎಂ.ಸಿ.ಇ)

ಬಡಾವಣೆ ಪೂರ್ಣಗೊಂಡ ವಿವರ

ಜಲದರ್ಶಿನಿ, ವಿದ್ಯಾರಣ್ಯಪುರ, ಭಾರತ್ ನಗರ, ನಗರೂರು, ಯಲಹಂಕ ಸುಮಾರು 5300 ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ.

ಹೊಸ ಬಡಾವಣೆ ನಿರ್ಮಾಣ ಯೋಜನೆ

1. ಮೈಸೂರು ರಸ್ತೆ ದೊಡ್ಡ ಆಲದ ಮರ, ಅಜ್ಜನಹಳ್ಳಿ ಸುಮಾರು 1600 ನಿವೇಶನಗಳ ನಿರ್ಮಾಣ ಯೋಜನೆ ಪ್ರಗತಿಯಲ್ಲಿದೆ.
2. ಭಾರತ್ ನಗರ ಬಡಾವಣೆಯಲ್ಲಿ 46 ಬಹುಮಹಡಿ ಕಟ್ಟಡದ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ.

Soma is a ₹ 32000 million multidisciplinary engineering and construction company. It is one of India's few companies with proven expertise and experience in providing innovative solutions for specialised infrastructure development. Soma has been building the Nation's Infrastructure for fourteen years with notable projects in Energy, Highways, Irrigation, Rail and Metro, Industrial & Engineering and Environmental Sectors.

INFRASTRUCTURE
EPC
REALTY
TECHNOLOGY
NATURAL RESOURCES
SPECIALIST SERVICES

soma

SOMA ENTERPRISE LTD
2, Avenue-4, Banjara Hills
Hyderabad, AP 500 034
tel 91 40 6653 8899
fax 91 40 2332 1286
info@soma.co.in

www.soma.co.in

Over 10,000 strong team developing over 30 projects across 18 States

With Best Compliments From

Kamal Yadav.B

NO.35, Sri Shaila Nilaya,
J C R Extn. 15th Cross, Chitradurga- 577501

MANIYKAM
Engineering Industries

Malaganhatti, Chitradurga
Ph: 9742766776/ 9481643292

With Best Compliments From

R.M.SUBBEGOWDA

CLASS-1 CONTRACTOR, REG. NO. 370.

Pro. M. M. G Industries

Res: 'Mathru Shree Nilaya', 4th Cross,
K. Marigowda Layout,
MANDYA-571401
TEL: 91-08232-224829
MOB: 9448484099

With Best Compliments From

M/s. Simplex Infrastructures Limited

Kolkata – Delhi – Mumbai – Chennai – Bangalore

Simplex Infrastructures Limited is one of the largest infrastructure solutions providers in India, with a presence across eight fast – growing industry verticals.

- *Ground Engineering*
- *Power*
- *Industrial*
- *Transportation*
  Highways, Railways & Bridges (Flyovers & River Bridges)
- *Building & Housing*
- *Urban Utilities*
- *Marine Structures*
- *Water Resources & Management*

WITH BEST WISHSES FROM

KARTHIK INDUSTRIES

Tumkur

ಕವನ

ನೀ ಹಾಡಿದ ರಾಗ ಇದೇನಾ?

ಚಂದ್ರಶೇಖರ ತಾಳ್ಯ

ಗದ್ಯ, ಪದ್ಯ– ಎರಡೂ ಪ್ರಕಾರಗಳಲ್ಲಿ ವಿಶಿಷ್ಟ ಬರಹಗಾರ. ಉತ್ತಮ ಅನುವಾದಕ. ನಾಡಿನ ಪತ್ರಿಕೆಗಳಲ್ಲಿ ಕಥೆ, ಕವನ, ಲೇಖನಗಳು ಪ್ರಕಟ. ಕ ಕವನ ಸಂಕಲನ, ಗದ್ಯ ಕೃತಿಗಳ ಪ್ರಕಟಣೆ: ಜನ ಮೆಚ್ಚುಗೆ, ಹಲವು ಪುರಸ್ಕಾರಗಳ ಮನ್ನಣೆ. ಹಲವಾರು ಕವಿಗೋಷ್ಠಿಗಳ ಅಧ್ಯಕ್ಷತೆ, ಶ್ರೇಷ್ಠ ಉಪನ್ಯಾಸಕರೆಂಬ ಗೌರವ.



1

ಹಾಡಿದ ರಾಗ ಯಾವುದು?
ಉಸಿರು ಕಟ್ಟುವ ಹಾಗೆ
ನರ ಉಬ್ಬಿ, ಮೈ ಹಳದಿಗಟ್ಟಿ
ಕರುಳು ಬಳ್ಳಿಯ ತುದಿಗೆ ಲಯವೋ, ವಿಲಯವೋ

ಪುರಾತನ ತನನಗಳ ಹಾಡೋ
ಪಳೆಯುಳಿಕೆಯ ಮೈ ಸವರಿ
ಬೆಚ್ಚನೆಯ ಕನವರಿಕೆಯಲಿ ನೆನೆಸಿ
ಬಣ್ಣಗಳ ಬಳಿದು
ಕಣ್ಣು ತುಂಬಿಕೊಳ್ಳುವ ಹಾಗೆ
ಇಂಪು ಶೃತಿ ಬೆರೆಸಿ
ಕಿವಿಗಿಳಿಸಿದ ಹಾಗೆ
ಹಂಗು ತೊರೆದ
ಅಮೇಧ್ಯ ಮಡಕೆಯ ಹೊರ ಶೃಂಗಾರಕ್ಕೆ
ಕೊನೆಯೆಲ್ಲಿ, ಮೊದಲೆಲ್ಲಿ

ವರ್ತಮಾನದ ಹಸಿಹಸಿ ಮಣ್ಣು ಮಿದ್ದು
ಭವಿಷ್ಯದ ಕೊಂಡಿ ಕೂಡಿಸುವಾಟಕ್ಕೆ
ಅದರದೇ ಲಯ, ಅದರದೇ ಗೇಯ

2

ಮತ್ತ ಪ್ರಮದಿನೀ, ಪ್ರಮೀಳೆ, ಸುಂದರೀ
ಉಸಿರ ಗಂಧ ಸುವಾಸಿನೀ
ಭ್ರಮೆಯ ಆವೃತ ಆವೃತ್ತಿಗಳ
ನಿರಂತರ ಬದಲಾವಣೆಯ ಆವಾಸಿನೀ
ಹುಟ್ಟು ಸಾವುಗಳ ಆ ತುದಿಗೂ ಈ ತುದಿಗೂ
ತಿರು ತಿರುಗಿ ತಿರುಗು ತಿರುಗಣೀ
ಅಮೂರ್ತ ಮೂರ್ತ ರೂಪಿಣೀ
ಭುವನ ಹಂಸಿಣೀ
ಆ ಹಾಡೂ ಅದೇ, ಈ ಹಾಡೂ ಅದೇ
ಯಾ ಹಾಡೂ ಅದೇ
ಇರಬಹುದೇ
ತುದಿಯಿರದ, ಮೊದಲಿರದ
ಸಿಕ್ಕು ಸಿಕ್ಕು ಇಕ್ಕಟ್ಟಿನ ಕತೆಯ
ಹಾದರಕ್ಕೆ
ಸಿಕ್ಕ ಉಸಿರ ಸಾತತ್ಯದ
ಹಲ್ಕಾ ಹಾಡಿನ
ಗಂಧರ್ವಗಾನ
ಅದೇ ಅದೇ ವಿತಾನ
ನೀ ಹಾಡಿದ ರಾಗ ಇದೇನಾ?



ಜಗದ ತಂದೆ ತಾಯಿಗಳಿಗೆ
ನಮ್ಮದೊಂದೆ ಮನವಿ
ದುಡಿದುಡಿದು ನರಳುತಿರುವ
ನಮ್ಮ ಕಣ್ಣ ಕಂಬನಿ

ನಾವು ಮಕ್ಕಳಲ್ಲವೆ?
ನಮಗೆ ಹಕ್ಕುಇಲ್ಲವೇ?

ನಲಿವ ಕಲಿವ ಮನಸಿದ್ದು
ದುಡಿವ ಬಲೆಗೆ ಬಿದ್ದವರು
ಆಡಿ ಕುಣಿವ ವಯಸಿನಲಿ
ಹೊಡೆತ ಬಡಿತ ತಿನ್ನುವವರು

ಅಪ್ಪ ಅಮ್ಮ ಬಂಧುಬಳಗ
ಕೂಡಿ ಆಡೋ ಗೆಳೆಯ ಬಳಗ
ಎಲ್ಲರಿಂದ ದೂರವಿದ್ದು
ದುಡಿದುಡಿದು ಸಾಯುವವರು

ಯಾವ ತಪ್ಪಿಗಾಗಿ ನಮಗೆ
ಈ ದುಡಿವ ಶಿಕ್ಷೆಯು?
ಯಾವ ಪಾಪಕಾಗಿ ನಮಗೆ
ಈ ನೋವು ನರಕವು?

ಮಕ್ಕಳೇ ದೇವರೆಂದು
ಹೇಳುತ್ತಾರೆ ದೊಡ್ಡವರು
ನಾವು ಮಕ್ಕಳಲ್ಲವೇ?
ನಮಗೆ ಬಾಲ್ಯ ಇಲ್ಲವೇ?

ಮನೆಗೆಲಸದ ಹೆಣ್ಣುಮಗಳು

ಕುಡುಕ ಅಪ್ಪ ಸಾಲ ಮಾಡಿ
ನನ್ನ ಜೀತಕಿಟ್ಟನು
ಪಟ್ಟಣಕ್ಕೆ ಕರೆತಂದು
ಮನೆಕೆಲಸಕೆ ಬಿಟ್ಟನು

ಕಸಮುಸುರೆ ತೊಳೆಯುತೀನಿ
ಬಟ್ಟೆ ಬರೆ ಒಗೆಯುತೀನಿ
ನೀರೊಳಾಡಿ ಕೈಯಿಸೆಲೆತು
ಕಾಲುಹುಣ್ಣು ಮೈಯಿ ನೋವು

ಯೂನಿಫಾರಂ ಹುಡುಗನನ್ನು
ಶಾಲೆಗೆಂದು ಬಿಡುತೀನಿ
ಶಾಲೆ ಮಕ್ಕಳನ್ನು ನೋಡಿ
ಮೂಕಳಾಗಿ ನಿಲ್ಲುತೀನಿ

ಅವರಂತೆ ನಾನಿಲ್ಲ
ಅವರ ನಗುವು ನನ್ನಲಿಲ್ಲ
ಆ ಪುಸ್ತಕ ಆ ಸ್ಲೇಟು
ಯಾಕೆ ನನಗೆ ಸಿಕ್ಕಲಿಲ್ಲ?

ಹೆಣ್ಣೊಂದು ಕಲಿತಾರೆ
ಶಾಲೆಯೊಂದು ತೆರೆದಂತೆ
ಮನೆಯೆ ಮೊದಲ ಪಾಠಶಾಲೆ
ತಾಯಿ ಮೊದಲ ಗುರುವು
ಮಕ್ಕಳೆ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ
ನಮಗೆ ಹಕ್ಕು ಇಲ್ಲವೇ?

ಹೋಟೆಲ್ ಬಾಲ

ಹೊಟ್ಟೆತುಂಬ ಅನ್ನವಿಲ್ಲ
ಮೈತುಂಬಾ ಬಟ್ಟೆಯಿಲ್ಲ
ಜೀತಕಿಟ್ಟ ಹೋಟೆಲಲ್ಲಿ
ಜೀವ ಹಿಂಡೋ ನೋವು ನರಕ

ತಟ್ಟೆ ಲೋಟ ತೊಳೆಯಬೇಕು
ಕೊಳಕು ನೆಲವ ಗುಡಿಸಬೇಕು
ಎಂಜಲನ್ನ ಚೂರುಪಾರು
ಕದ್ದು ಮುಚ್ಚಿ ತಿನ್ನಬೇಕು

ಗೋಣಿಚೀಲದೊಳಗೆ ತೂರಿ
ರಾತ್ರಿನಿದ್ರೆ ಮಾಡಬೇಕು
ಕತೆ ಹೇಳುವ ಅಜ್ಜಿ ಇಲ್ಲ
ತೊಡೆತೊಟ್ಟಿಲ ಜೋಗುಳಿಲ್ಲ

ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ಏಳುವುದು ತಡವಾದರೆ
ಬಡಿಯುತ್ತಾನೆ ನಮ್ಮ ದಣಿಯು

ಚಿಂದಿ ಆಯೋ ಬಾಲಕರು

ಬೆಳಗಿನಿಂದ ಸಂಜೆವರೆಗೆ
ಬೀದಿ ಬೀದಿ ಸುತ್ತುತೀವಿ
ಚಿಂದಿಚೂರು ಆಯುತೀವಿ
ತಿಪ್ಪೆರಾಶಿ ಕೆದಕುತೀವಿ
ನೊಣನೊರಜು ಹಾರುತಾವೆ
ಕೈಯಿಮೈಯಿ ಕಚ್ಚುತಾವೆ
ಗೊಣ್ಣೆ ಮೂಗು ಕಣ್ಣುಪಿಸುರು
ತಿನ್ನೋ ತುತ್ತು ಕಸಾಕಸುರು
ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ
ನಮಗೆ ಬಾಲ್ಯ ಇಲ್ಲವೇ?

ಗ್ಯಾರೇಜ್ ಬಾಲ

ಗೆಳೆಯರೆಲ್ಲ ಕೂಡಿಕೊಂಡು
ಚಿನ್ನಿದಾಂಡು ಆಡುತಾರೆ
ಬಣ್ಣಬುಗುರಿ ಎನ್ನುತ್ತಾರೆ
ಟ್ವಿಂಕಲ್ ಟ್ವಿಂಕಲ್ ಹಾಡುತಾರೆ

ನನ್ನ ಮಾತ್ರ ಇಲ್ಲಿ ತಂದು
ಗ್ಯಾರೇಜಿಗೆ ಹಾಕಿದಾರೆ
ನಟ್ಟುಬೋಲ್ಟು ಸ್ಪ್ಯಾನರೆಂದು
ಬೆಳ್ಳು ತಲೆಗೆ ಮಟ್ಟುತಾರೆ
ಕೈಯಿ ಮೈಯಿ ಗ್ರೀಸು ಮೆತ್ತಿ
ತಿನ್ನೋ ತುತ್ತು ಕಪ್ಪುಮಸಿ
ಮಕ್ಕಳೆಲ್ಲ ದೇವರೆಂದು
ಹೇಳುತಾರೆ ದೊಡ್ಡವರು.

ಭಿಕ್ಷುಕ ಬಾಲ

ಗೂಡೆ ಮಾರಮ್ಮನನ್ನು
ಅವ್ವ ಹೊತ್ತು ತಿರುಗುತಾಳೆ
ಅಪ್ಪ ಕೈಲಿ ಚಾಟಿಹಿಡಿದು
ಮೈಯೀಗೆ ಹೊಡಕೋತಾನೆ
ಕೈಲಿ ತಟ್ಟೆ ಹಿಡಿದು ನಾನು
ಅಮ್ಮ ತಾಯಿ ಬೇಡುತೇನೆ
ಹರಿವ ಕಾರು ಪಕ್ಕದಲ್ಲಿ

ನಾವು ಮಕ್ಕಳಲ್ಲವೆ?

ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ

ರಿಂಗಿನೊಳಗೆ ಉರುಳುತೇನೆ
ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ಗೂಡೆ ಮಾರಮ್ಮನನ್ನು
ಅವ್ವ ಹೊತ್ತು ತಿರುಗುತಾಳೆ

ಊರು ಇಲ್ಲ ಸೂರು ಇಲ್ಲ
ಬಯಲೆ ನಮ್ಮ ಜಾಗವು
ಇಂದು ಇಲ್ಲಿ ನಾಳೆ ಅಲ್ಲಿ
ನಮಗೆ ಕೂನು ಇಲ್ಲವು.

ಸ್ಲಂ ಬಾಲ

ಸ್ಲಮ್ಮಿನ ಲೋಕದ
ಮಕ್ಕಳು ನಾವು
ಹರಿವ ಚರಂಡಿಯೆ
ನಮ್ಮಯ ಜಗವು

ಎದ್ದರು ಬಿದ್ದರು
ಹೇಲು ಉಚ್ಚೆ
ಈಜಿಗು ಮೋಜಿಗು
ಇರುವುದೆ ಕೊಚ್ಚೆ

ಕಾನ್ವೆಂಟ್ ಮಕ್ಕಳ
ಅಪ್ಪ ಅಮ್ಮ
ಅವರ ಜೊತೆಯಲಿ
ಸ್ಕೂಟರು ಮೋಟರು

ನಮಗೆ ಶಾಲೆಯು
ಏಕಿಲ್ಲ?
ದೇವರ ಮಕ್ಕಳು
ನಾವಲ್ಲ?

ಪ್ರೊ॥ ಎಸ್. ಜಿ. ಸಿದ್ಧರಾಮಯ್ಯ

ನಿರಂತರ ಪ್ರಯೋಗಶೀಲತೆಯ ಪ್ರಮುಖ ಅನುಭಾವಿ ಕವಿ. ಸಮಕಾಲೀನ ಆಗುಹೋಗುಗಳನ್ನು ಕಟ್ಟಿಕೊಡುವಲ್ಲಿ ಎದ್ದು ಕಾಣುವ ಪ್ರತಿಭೆ. ತಮ್ಮ ಆಧುನಿಕ ವಚನಗಳ ಮೂಲಕ ಕನ್ನಡ ಜಗತ್ತಿಗೆ ಮೂಡಿಸಿದ ಅರಿವು ಅಪಾರ. ಅನೇಕ ಪ್ರತಿಷ್ಠಿತ ಸಾಹಿತ್ಯ ಪುರಸ್ಕಾರಗಳಿಗೆ ಭಾಜನರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.



ರುಕ್ಮಿಣಿ

ಡಾ. ಮೊಗಳ್ಳಿ ಗಣೇಶ

ಗವ್ಗತ್ಲು ಮುತಂದು ಇಟ್ನೊತ್ತಾಗಿತ್ತು. ಪಂಚಾಯ್ತಿಗೆ ವೋಗುದೊ ಬ್ಯಾಡ್ವೋ ಅಂತಾ ಪುಟ್ಟೇಗೌಡ್ರು ಡಿಕ್ಕೆಟ್ಟಿದ್ರು. ವಲ್ಗೇರಿ ಪುಡಾರಿ ಹನ್ಮಂತ ಪುಟ್ಟೇಗೌಡ್ರು ಮಗ ರಮೇಸ್ನ ಮ್ಯಾಲೆ ಕೇಸ ಕೊಟ್ಟಿದ್ದ. ಅದಾ ಯಂಗಾರ ಮಾಡಿ ತಗಿಸ್ವ ಅಂತ್ಲೇ ಪಂಚಾಯ್ತಿ ಸೇರಿತ್ತು. ಹನ್ಮಂತ ರಮೇಸ್ನ ಮಟ್ಟ ಆಕುಕೇ ಇಂಗ್ಮಾಡವನೆ ಅಂತಾ ಕೆಲ ಜನ ಮಾತಾಡತಿದ್ರು. ಗೌಡ್ರೆಡ್ತಿ ಸಂಕಮ್ಮ ದೇವುರ್ಗೆ ಕೈ ಮುಗ್ದು ಅಡ್ಬೀಳ್ತಿದ್ಲು. ಅಡ್ಗೊಡೆ ಮ್ಯಾಲೆ ವುರೀತಿದ್ದ ದೀಪ್ದ ಬೆಳ್ಕು ಅತ್ಲಗೊ ಇತ್ಲಗೊ ಯತ್ಲಗೊ ಅನ್ನುವಂಗೆ ತೂರಾಡ್ತಿತ್ತು.

ಒಂದ್ಕಾಲ್ಕೆ ಪುಟ್ಟೇಗೌಡ್ರ ಯರೀಕ್ರು ವೂರ್ನ ಆಳ್ತಿದ್ರು. ಕಾಲ ಬದ್ಲಾಗಿ ವೂರು ಬೆಳಕಂದು, ಅಳೇಕಾಲ್ದ ಆಸ್ತಿ ಪಾಸ್ತಿ ಕರ್ಗಿ; ಪುಟ್ಟೇಗೌಡ್ರು ಸುಸ್ತಾಗಿ, ಮುಪ್ಪಿಡಿಯುವಾಗ ಬ್ಯಾಡ ಬ್ಯಾಡ ಅಂದ್ರೂ; ಐದೆಣ್ಣಾದ ಮ್ಯಾಲೆ ಯೀ ರಮೇಸ ಯಂಗೊ ವುಟ್ಬುಟ್ಟಿದ್ದ. ಐದೆಣ್ಣಾದ ಮ್ಯಾಲೆ ವಂಸುಕ್ಕೊಂದು ಗಂಡಾಯ್ತಲ್ಲಾ ಅಂತ ಪುಟ್ಟೇಗೌಡ್ರು ರಮೇಸ್ನ ನ್ಯೆಲದ ಮ್ಯಾಲ ನೆಡ್ಸಿಯೇ ಯಿರ್ಲಿಲ್ಲ. ಅವ್ನೊ...... ಅಯಿಸ್ಕೂಲ್ಗೇ ಯೇಗ್ಲಾರ್ದೆ ಕಲ್ಲಿಪಿಲ್ಲಿ ತಿರಿಕಂದು ಸೋಕಿ ಪಾಕಿ ಮಾಡ್ಕಂದು ಹದ್ಮೀರಿ ಯೀಗ ಬಲೆಗ್ಬಿದ್ದ ಮಿಕವಾಗಿದ್ದ.



ರುಕ್ಮಿಣಿ ಬ್ಯಾರೆ ಆರ್ತಿಂಗ್ಳಾದ್ರೂ ಯೆದುರ್ಕಂದು ಗುಟ್ಟ ಬಿಡ್ದೆನೆ ರಮೇಸುನ್ನೂ ಯೇಳ್ದೆನೆ ಕಳ್ಳಾಟ ಮಾಡಿದ್ಲು. ರುಕ್ಮಿಣಿಗೆ ಸುತ್ತಿ ಬಳ್ಸಿ ಸ್ವಾದುರ್ಮಾನಾಗ್ಬೇಕಿದ್ದ ಹನ್ಮಂತ ಇದಾ ತಿಳಿದು ರಮೇಸರೇಪ ಬಲಿ ಆಕುಕೆ ರುಕ್ಮಿಣಿ ಪರ್ವಾಗಿ ನಿಂತಿದ್ದ. ಯದುರ್ಸಿ ಬೆದುರ್ಸಿ ಕದ್ಕಂದೊಗಿ ರಮೇಸ ಮಾಡವನೆ ಅಂತಾ ಕಂಪ್ಲೇಂಟ ಬರ್ಸಿದ್ರು. ಯೇನಾರ ಇಂಗಾಯ್ತು ಅಂತಾ ಯಾರ್ಗಾರ ಯೇಳ್ದೋ ಅಮ್ಯಾಕೆ ನಿಂಜೀವ ತಗಿತಿನಿ ಅಂತಾ ಯೆದುರ್ಸಿದ್ದ ಅಂತ್ಲೂ ಕೇಸ ಮಾಡಿದ್ರು.

ಕಥೆ

ಅಟ್ಟೊತ್ತಿಂದ ಪಂಚಾಯ್ತಿ ಕಾಯ್ತಾದೆ ಬರ್‍ರಪಾ ಅಂತಾ ಗಡ್ಸಾಗಿಯೇ ಆಳು ಕರ್‍ದ. ಅಂಕೂಗಿದ್ದು ಗೌಡ್ರೆದೆಗೆ ಗುದ್ದಂಗಾಯ್ತ. ಅನ್ನಾಯ್ದ ಪಂಚಾಯ್ತಿಲಿ ನಂದೇನ್ನ್ಮಾತೂ; ನಾಬರುದಿಲ್ಲಕನೋಲಾ ಅಂತಾ ಗೌಡ್ರು ಗದುರುದ್ರು. ಅಯ್ಯಯ್ಯೋ ಪಂಚಾಯ್ತಿಲಿ ಮಾತಾಡ್ದೆ ನಾವೀಗ ಯಿನ್ನೆಲ್ಲಿ ಮಾತಾಡುಕಾದದೊ ಯಜ್ಮಾನಾ.... ಕೇಸ ತಗುಸುದು ಬ್ಯಾಡ್ವೇನೊ ..... ನಡಿಯೊ ನಾವೂ ನಮ್ದ ಯೇಳ್ವ ಅಂತಾ ಸಂಕಮ್ಮ ಸಿಟ್ಟಾದ್ಲು. ದುರುದುರನೆ ಪುಟ್ಟೇಗೌಡ್ರು ಸಂಕಮ್ನ ನೋಡಿ, ಹಲ್ಲಲ್ಲ ಕಡುದು; ಪಂಚಾಯ್ತಿಲೀ ಯಲ್ಲಾನು ನಿಲ್ಲಿಸ್ಕಂದು ಬಿಚ್ತಾರೇ ...... ಅದಾ ನಾ ನೋಡುಕೆ ಬರ್‍ಬೇಕೇ... ನೀನಲ್ಲೋಗಿ ನಿತ್ಕಬೇಕೇ... ಇದ್ನೆಲ್ಲ ನಾನು ನೋಡ್ಕಂದು ಬದ್ಕಿರ್‍ಬೇಕೇ... ಅಂತಾ ದಮದಮನೆ ಯದಿಯ ಗುದ್ಕಂದ್ರು. ಸಂಕಮ್ನೇ ತಡುದ್ರು. ರಮೇಸ ನಡುಗ್ತಿದ್ದ. ನೆರೆ ವೊರೆ ಮಗುಮ್ಮಾಗಿತ್ತು. ಯಾರ್‍ನೊವೂ ಯಾರ್‍ನೂ ಬೇಕಿರ್‍ಲಿಲ್ಲ. ಅಯ್ಯೊ ಮಾರಾಯಾ; ಬಿಡೊ ಅಗ್ಗವಾ; ನನ್ಮಾತ್ಕೇಳು; ಅಂತಾ ಸಂಕಮ್ಮ ಗಂಡ್ನ ಕೈಯ ಯಿಡ್ಕಂಡು ತಡೀತಿದ್ಲು. ರಮೇಸ ಮಾಡುದ್ನೆಲ್ಲ ಮಾಡ್ಬುಟ್ಟು ಲಪ್ಪಾ ಅಂತ ತತ್ತರಿಸ್ತಿದ್ದ.

ಸಂಕಮ್ಮಾ; ಸಂಕಮ್ಮ, ಬಾಗ್ಲತಗಿಯಮ್ಮಾ ಅಂತಾ ಅಳೇ ಕಾಲ್ದ ಪಟೇಲ್ರು, ಕೂಗುದ್ರು. ಪೋಲಿಸ್ರೇ ಬಂದ್ರೇನೊ ಅಂತಾ ರಮೇಸ ಸಂಕಮ್ನ ಕಡೆಗೆ ನೋಡ್ದ. ಸಂಕಮ್ನೆ ಬಾಗ್ಲ ತಗುದ್ಲು. ಯೇನ್ಮಾಡ್ಬೇಕು ಅಂತಾ ಇಂಗೆ ಅಗ್ಗವ ಬಿಚ್ಕಂದಿದ್ದಿಯೊ ಪುಟ್ಟೇಗೌಡಾ; ಬಿಸಾಕೊ ಅದಾ ಅತ್ತಾಗಿ. ವೂರ್‍ಮಂದಿ ಸೇರಿ ಪಂಚಾಯ್ತಿ ಕರಿತು ಅಂದ್ಮೇಲೆ ಬೈಲೆ ಕೊಡ್ಬೇಕು. ಅದ್ನು ಬ್ಯಾಡ ಅಂದ್ರೆ ಯೀಗ ಯಿನ್ನೆಲ್ಲೊಗ್ಗಿ ವೋಗುಕಾದದೂ.... ನಡಿಯೊ ಅಂತಾ ಪಟೇಲ್ರು ಪುಟ್ಟೇಗೌಡ್ರ ಪಂಚಾಯ್ತಿಗೆ ಕರ್‍ಕಬಂದ್ರು. ಪಂಚಾಯ್ತಿ ತುಂಬುದು ಬಸ್ರಿಯಂಗೆ ತುಂಬಿತ್ತು. ಹನ್ಮಂತ ದಿಮಾಕೆಲೇ ಮುಂದೆನೇ ಕುಂತಿದ್ದ. ರಮೇಸ ದೀಪುದ್ಮುಂದಾಡೊ ವುಳ ರೆಕ್ಕೆಯಾ ಸುಟ್ಕಂದು ಕೈಕಾಲ್ನೂ ಆಡ್ಸುಕಾಗ್ದೆ ಮಿಳ್ಳಾಡುವಂಗೆ ಕುತ್ಕಂದ. ಪುಟ್ಟೇಗೌಡ್ರು ಮೇದುಸುರ ಬಿಡ್ತಿದ್ರು ಸುಟ್ಟುಳೀನಂಗೆ ಕಾಣ್ತಿದ್ದ ರಮೇಸ್ನ ಕಡೆಗೆ ಹನ್ಮಂತ್ನ ಕಾಲ್ತವೇ ಕುಂತಿದ್ದ ರುಕ್ಮಿಣಿ ಮೆಲ್ಗೆ ತಲೆಯೆತ್ತಿ ಕಣ್ರಪ್ಪಿಯಾ ವಸಿತಗ್ದು ನೋಡಿ ಸೆರ್‍ಗ ಮುಚ್ಕಂದಂಗೆ ರೆಪ್ಪಿಯಾ ಪಳಕ್ಕಂತ ಮುಚ್ಕಂದ್ಲು.

ಆ ರುಕ್ಮಿಣಿಯೇ ಯೀಗ ಯಿದೆಲ್ಲ ರಗಳೆಗೂ ಮೂಲವಾಗಿದ್ದ ಯೆಣ್ಣುಡುಗಿ. ಅವುಳ ಪರ್‍ವಾಗಿಯೇ ಹನ್ಮಂತ ರೇಪುಕೇಸ ಆಕ್ಸಿದ್ದೂ. ಅದು ಬರೀ ರೇಪ್ಕೆಸಾಗಿದ್ರೆ; ಅದು ಮೊದ್ಲೆ ಗೊತ್ತಾಗಿದ್ರೆ ವೊಂತರ್‍ಪಿತ್ತು. ರುಕ್ಮಿಣಿಯರವ್ವ ಬೆಳ್ಳಿ ಮಗಳ ಬಸರ ಮುಚ್ಚಿಟ್ಕಂದಿದ್ಲು ಅಂತ್ಲೇ ಜನ ಮಾತಾಡ್ಕತಿದ್ರು. ವಟ್ಟೆ ಮುಂದುಕ್ಕೆ ಬಂದ್ಮೇಲೆ ಇಂತೆವುನು ಇಂಗೆ ಮಾಡವನೆ ಅಂತಾ ಯಿಂಡ್ಕಂಡು ಕಂಪ್ಲೇಂಟ ಕೊಟ್ರೆ ಆಗ ನ್ಯಾಯ ಸಿಕ್ತದೆ ಅಂತಾ ಅದೆಂಗೊ ಅವಳ ತಲೆಗೆ ಬಂದಿತ್ತು. ರುಕ್ಮಿಣಿ ಬ್ಯಾರೆ ಆರ್‍ತಿಂಗ್ಳಾದ್ರೂ ಯೆದುರ್‍ಕಂದು ಗುಟ್ಟ ಬಿಡ್ದೆನೆ ರಮೇಸುನ್ನೂಗ್ಗ ಯೇಳ್ದೆನೆ ಕಳ್ಳಾಟ ಮಾಡಿದ್ಲು. ರುಕ್ಮಿಣಿಗೆ ಸುತ್ತಿ ಬಳ್ಸಿ ಸ್ವಾದುರ್‍ಮಾವ್ನಾಗೇಕಿದ್ದ ಹನ್ಮಂತ ಇದಾ ತಿಳಿದು ರಮೇಸರೇಪ ಬಲಿ ಆಕುಕೆ ರುಕ್ಮಿಣಿ ಪರ್‍ವಾಗಿ ನಿಂತಿದ್ದ. ಯದುರ್‍ಸಿ ಬೆದುರ್‍ಸಿ ಕದ್ಕಂದೊಗಿ ರಮೇಸ ಮಾಡವನೆ ಅಂತಾ ಕಂಪ್ಲೇಂಟ ಬರ್‍ಸಿದ್ರು. ಯೇನಾರ ಇಂಗಾಯ್ತು ಅಂತಾ ಯಾರ್‍ಗಾರ ಯೇಳ್ದೋ ಅಮ್ಯಾಕೆ ನಿಂಜೀವ ತಗಿತಿನಿ ಅಂತಾ ಯೆದುರ್‍ಸಿದ್ದ ಅಂತ್ಲೂ ಕೇಸ ಮಾಡಿದ್ರು. ಇದೆಲ್ಲ ಸಾಯಲು ಅಂತಾ ಅಪ್ರಾಪ್ತ ವಯಸ್ಸಿನ ಅಮಾಯಕ ದಲಿತ ಹೆಣ್ಣು ಮಗಳ ಮೇಲೆ ಅತ್ಯಾಚಾರ ಎಸಗಲಾಗಿದೆ ಅಂತಾ ಪೋಲೀಸ್ರು ಯೆಪ್ಪೈಯಾರೆಲಿ ಬರ್‍ಕಂದಿದ್ರು.

ಇದ್ಕೇನಾರ ಒಂದಾರಿ ಮಾಡ್ರಪಾ ಅಂತಾ ಪಟೇಲ್ರು ಪಂಚಾಯ್ತಿಯ ಕೋರುದ್ರು. ದೊಡ್ಮನ್ಸ್ ಮಾಡೋ ಹನ್ಮಂತಾ ಅಂತಾ ಯಾರ್‍ಯಾರೋ ಗೋಗರುದ್ರು. ಬಿಂದ್ದುದ್ನೆಲ್ಲ ಮರ್‍ತೇನೊ ಹನ್ಮಂತಾ.. ಪುಟ್ಟೇಗೌಡ್ರ ತಂದೆ ಕಾಲ್ದಲಿ ಅಂತಾ ಬರ್‍ಗಾಲೆಲಿ ನಿಮ್ಗೆಲ್ಲ ವುಪ್ಕಾರವ ಮಾಡಿರುದಾ ಮರಿಬ್ಯಾಡ ಹನ್ಮಂತಾ.... ಕಾಲ ಬದ್ಲಾಯ್ತು ಅಂತಾ ಯಲ್ಲಾನು ಮರ್‍ತಕಬುಡುದೇ... ಕೇಸ ವಾಪಸ್ತಕಂದು ಯೆನಾರ ಪರಿಯಾರ ತಕಂದು ಯೀ ಕೇಸ ಇಲ್ಲೇ ಬಿಡೊ ಹನ್ಮಂತಾ ಅಂತ ಪಟೇಲ್ರು ವೊತ್ತಾಯ್ಸುದ್ರು. ಕ್ವಾಪವ ನೆತ್ತಿ ಮ್ಯಾಲೆ ಮಡಿಕಂಡು ಮಾತಾಡೊ ಹನ್ಮಂತ; ಯೀಗಾ ಅಳೇ ಪುರಾಣಯಲ್ಲ ಯಾಕೆ; ನಮ್ಮಪ್ಪ ಸಾಯುಗಂಟಾ ಜೀತಾ ಮಾಡಿ ಸತ್ರ. ನೀವು ನಮ್ಗೇನ್ಮಾಡಿದ್ದೀರಿ ಅನ್ನುದೂ ನಮಗೆ ಚೆನ್ನಾಗಿ ಗೊತ್ತದೆ. ದೊಡ್ಡಗೌಡರ ಬಾಗಿಲೀಗೆ ನಮ್ಮ ಮೂಳೆಯ ತ್ವಾರಣ ಅಂತಾ ನಮ್ಮೋರು ಪದಕಟ್ಟಿ ಆಡವರೆ. ಯಾವತ್ತು ನ್ಯಾಯ ಇವತ್ಗೆ. ನಿಮ್ಮಿಂದ ನಮಗ್ಯಾವ ನ್ಯಾಯನೂ ಸಿಗೂದಿಲ್ಲ. ನಾವೀ ಕೇಸ ವಾಪಸ್ಸು ತಕೋದಿಲ್ಲ ಅಂತಾ ಹನ್ಮಂತ ಪಟ್ಟಿಡಿದ.

ಸಂಕಮ್ಮ ಕಣ್ಣೀರಾಕ್ತಾ; ನನ್ಮಗುಂದೊಂದೇ ತಪ್ಪೇನ್ರಪ್ಪಾ... ಇದ್ರೆಲಿ ರುಕ್ಮಿಣಿದು ಯೇನೂ ಇಲ್ವೇ... ನಾನೊಂದೆಣ್ಣಾಗಿ ಯೇಳ್ತಿನಿ ಕೇಳ್ರಪ್ಪಾ.. ಯಾವ್ದೆ ವೊಂದೆಣ್ಣು ವಪ್ದನೇ ಯಾವ್ದೆ ಒಂದ್ಗಂಡ್ಸು ಕೂಡುಕೆ ಆದದೇ... ತಂದಿಲ್ದ ತಬ್ಲಿ ಐದ್ಲು ಅಂತಾ ಕೆಲ್ಸಕೆ ಬಂದಾಗ್ಲೆಲ್ಲ ಕರ್‍ದು; ತಂಗಳೊ ಬೆಂಗಳೊ ಕಾಸೊ ಕರಿಮಣಿನೊ ಏನ್ನೊ ವಸಿ ಕೊಟ್ಟು ರುಕ್ಮಿಣಿಯ ನೋಡ್ಕತಿದ್ನಲ್ಲಾ... ಅದ್ಯಾರ್‍ಗೂ ಗೊತ್ತಿಲ್ಲುವೇ... ಇದೆಲ್ಲ ಮನ ಮುರಿಯುರಾ ಕಿತಾಪತಿ ಕನ್ರಪ್ಪಾ... ಅನ್ನಾಯ ಮಾಡ್ಬೇಡಿ... ನನ್ಮಗುನ್ನಾ ವುಳಿಸ್ಕೊಡ್ರಪ್ಪಾ ಅಂತ ಸಂಕಮ್ಮ ಗೋಳಾಡುದ್ಲು. ಬೆಳ್ಳಿ ಕಿಡಿಕಾರ್‍ತ; ಅಯ್ಯಯ್ಯೋ ತಾಯೀ ನಿನ್ಮಗ ಬೊ ಸಾಚಾನೊಡೂ; ವಳ್ಗಿಂದೊಳ್ಗೆ ಯೆದುರ್‍ಸಿ ಕೆಲ್ಸಕೆ ಬಂದಾಗ ನನ್ಮಗಳ ವಟ್ಟೆಯಾ ತುಂಬುಸ್ಬುಟ್ಟು ಇಂಗೆ ಮಾಡವನಲ್ಲಾ.. ಯೀಗ ನನ್ಮಗಳ ಯಾರ್‍ಮದ್ವೇಯಾದರೂ... ಕಂಪ್ಲೆಂಟ ತಕಂದಿನುವೇ ವೂರಾಚ್ಗೆ ನಮ್ಮ ಯತ್ತಾಕಿಸ್ತಿರಿ ನೀವೂ... ಅಂತಾ ಬೆಳ್ಳಿ ರಂಪ ಮಾಡುದ್ಲು.

ಯೀ ಕೇಸು ಕೋರ್ಟಿಗೊಯ್ತು ಅಂದ್ರೆ ರಮೇಸ ಜೈಲ್ಗೋಗುದು ಗ್ಯಾರಂಟಿ; ಹನ್ಮಂತ ಅದೇನ್ಕೇಳ್ತನೊ ಅದ್ರಂತೆ ಮಾಡೊಕೆ ಯೀ ಪುಟ್ಟೇಗೌಡ್ರುಗ್ರೇನ್ಬಂದಿದ್ದದೊ ಅಂತಿದ್ರೆ; ಇನ್ನಾರೊ, ಅಂದೆಗಯ್ಯ ವಪ್ಪೋಕಾದದೂ.. ಮನೆವೊಳಕೆ ವಲೇರೋಳ ಯಂಗಯ್ಯಾ ಕರ್‍ಕಂದು ಸೊಸೆ ಅಂತಾ ವೊಪ್ಕೋಕಾದದೂ ಅಂತಾ ರಾಗ ಎಳೀತಿದ್ರು. ಯಿಸ್ಗೊಲ ಬುಟುಬುಟ್ಟು, ಪೇಲಾಕಂದು ಚಂಗ್ಲುಬುದಿಯಾ ಕಲಕಂದು ವಲಮಾಳ್ದಲಿ ಯಂಗಂದ್ರಂಗೆ ತಿರೀಕಂದು ಚಕುಂ ಅಂತಾ ನೆಗ್ದಾಡ್ತಿದ್ದೆಣ್ಣೈದ್ಲಲ್ಲುವೆ ಅವುಳು. ಯೀಗ ಯೀ ರಮೇಸ ಸಿಕಾಕಂದ. ನೀರ್‍ಕುಡ್ದೋರೆಲ್ಲ ಅವುತ್ಕಂದ್ರು; ದಂಡೇಲ್ಕುಂತಿದ್ದ ಇವ್ನ ಇಡ್ಕಂದ್ಲು. ಇದ್ಕೀಗ ಜಾತಿಪಾತಿ ರೇಪುಗೀಪು ಅನ್ನಾಯ ಪನ್ನಾಯ ಅಂತಾ ರಗಳೆಯೆಲ್ಲ ಯಾಕೆ ಬೇಕು. ಆದ್ದಾಯ್ತು ವೋದ್ದೋಯ್ತು ಅಂತಾ ಬದ್ಕುಕೆ ಯೇನ್ಬೇಕೊ ಅದಾ ಮಾಡ್ಕಬೇಕಷ್ಟೇ ಅಂತಾ ಪಂಚಾಯ್ತಿ ಗುಜುಗುಜಂತು.

ಆ ಯೆಣ್ಮಗಳು ತಿಳ್ದೊ ತಿಳಿದೆನೊ ತಪ್ನೊ ಒಪ್ನೊ ಮಾಡ್ಕಂದು ಗರ್ಭಿಣಿಯಾಗದೆ. ರಮೇಸ್ನು ತಪ್ಪ ವಪ್ಕಂಡು ಪಂಚಾಯ್ತಿಗೆ ತಲೆ ಬಾಗ್ತಿನಿ ಅಂದವನೆ. ಕೇಸಾಡಿ ಯಾರ್‍ತಾನೆ ವುದ್ದಾರ ಆಗಿದ್ದಾರೂ.. ಬದ್ಕಿರು ತನ್ಕ ರುಕ್ಮಿಣಿಯ ರಮೇಸ ಮಡಿಕಂದು ನೋಡ್ಕತನೆ. ಅವುಳೊಟ್ಟೆಲಿರುದ್ನೂ ಮುಂದೆ ಅವ್ನೇ ಒಂದಾರಿ ತೋರಿಸ್ತನೆ. ಇದಾ ಇಲ್ಗೇ ಮುಗುಸ್ಕಮನ್ರಪಾ ಅಂತಾ ಪಟೇಲ್ರು ಯಲ್ರಿಗೂ ವಿನಂತಿಸಿದ್ರು. ಸಂಕಮ್ನ ಸಂಕ್ಟ ಸಿಡೀತಿತ್ತು. ಕಾಲಾ ಮುಟ್ಟಾ ನಾವು ನಿಮ್ತೆವುಲ್ಗೆ ನಮ್ಮೆಣ್ಮಕ್ಕಳ್ನ ಬಿಟ್ಟಾಗ ಬರುಕೇ ಯಿದೇನೀಗ ಪಾಳ್ಳೇಗಾರ್‍ರ ಕಾಲ ಅಲ್ಲ. ಆಗೋದಾದ್ರೆ ರಿಜಿಸ್ತ್ರು ಮ್ಯಾರೇಜಾಗ್ಬೇಕು. ಸೊಸೆ ಅಂತಾ ರುಕ್ಮಿಣಿಯಾ ಮನೆವೊಳಾಕೆ ಕರ್‍ಕಬೇಕು. ಅವುಳೆಸ್ರೆಲಿ ಮನೇನ್ನೊ, ಜಮೀನ್ನೊ ಬರಿಸ್ಬೇಕು. ರುಕ್ಮಿಣಿ ಜೀವಕ್ಕೇನಾರ ತೊಂದ್ರೆ ಆದ್ರೆ ನಾವೇ ಜವಾಬ್ದಾರು ಅಂತಾ ಪತ್ರ ಬರ್‍ಕೊಡ್ಬೇಕು. ಅಂತಾ ಹನ್ಮಂತ ಪಂಚಾಯ್ತಿನ್ನೇ ಜಗ್ಗಸ್ದ. ಸಂಕಮ್ಮ ಬಾಯ್ಬಡಕಂಡು ಇದನ್ನಾಯಾ;

ಪುಟ್ಟೇಗೌಡ್ರ ಪಾಲ್ಗೆ ಯಾರ್‍ಯಾರು ಇರ್‍ಲಿಲ್ಲ. ವೂರ್‍ತುಂಬ ಇದೇ ಒಂದ್ವಿಸ್ಯ ಮೋಜಾಗಿತ್ತು. ಪ್ಯಾಟೆ ಕ್ಯಾಟೆನೆಲ್ಲಾ ಸುತ್ತಿ ಸುತ್ತಿ ಸುಸ್ತಾದ ಪುಟ್ಟೇಗೌಡ್ರು ಪರ್‍ದೇಸಿಯಂಗೆ ಟವಲ ತಲೆ ಮ್ಯಾಲೆ ಆಕಂದು ಬಸ್ಟಾಂಡಿನ ಮೂಲೆಲಿ ಕೂತ್ಕಂದು ಸಾಯುದೊ ಬ್ಯಾಡ್ವೊ ಅಂತಾ ಚಿಂತೆ ಮಾಡ್ತಿದ್ರು



ನಾನಿದ್ಕಲ್ಲಿ ವಪ್ಪುದಿಲ್ಲಾ. ಇಂತಿಂತವ್ನು ಸೇರ್ಕೆಂದು ನನ್ಮಗೆ ಮುಳುಗುಸ್ತ[illegible] ಅಂತಾ ಯೆಸರ ಬರುಸ್ಬುಟ್ಬು ನಾನ್ಯಾಣಾಕಂದು [illegible] ಅಂತಾ ಕೂಗಾಡುದ್ಲು. ವಕ್ಕುಲ್ಗೇರಿಯವ್ರೂ ವಲ್ಗೇರಿಯೋರು ದೊಂಜಿ ಮಾಡ್ಕಂದು ಯಾರ್ಮಾತೂ ಯಾರ್ಗೂ ಬೇಡ್ವಾದ್ದು. ನಂಪಲ್ಗೆ ಕೋರ್ಟುರ್ಕ ಕಚೇರಿ ಅದೇ ಅಂತಾ ಹನ್ಮಂತ ತನ್ನೋರ ಕರ್ಕಂದು ವಂಟೋದ.

ಪುಟ್ಟೇಗೌಡ್ರ ದಾಯಾದಿಗಳು ಮಗುಮ್ಮಾಗಿದ್ರು. ಯಾರ್ಗೇನಾರ ಕೆಟ್ಟುದ್ದಾದ್ರೆ ಅದಾ ನೋಡಿ ವೋಳ್ಗೊಳ್ಗೆ ಕುಸಿ ಪಡುದು ಸಲೀಸಾಗಿತ್ತು. ದೈರ್ಯಕಳ್ಕಬ್ಯಾಡ ಪುಟ್ಟೇಗೌಡ; ಯೀಗ ತಕ್ಡಿ ಅವುರ್ಕೈಲದೇ ಯೇನಾರ ವೊಂದಾಯ್ತದೆ ಸುಮ್ಮಿರು ಅಂತಾ ಪಟೇಲ್ರು ಯೆಳ್ಬೀಟ್ರು; ರಮೆಸ್ನಿಗೆ ಒಂದ್ಮಾತ ಕಿವಿಗಾಕುದ್ರು. ನೋಡಪ್ಪಾ ಪೋಲೀಸ್ಕೇಸಾಗದೆ. ಅವುರ್ಬಂದು ಅರೆಸ್ಟು ಮಾಡುದ್ರೆ ನಾವೇನು ಮಾಡುಕಾಗುದಿಲ್ಲಾ... ಯಿದೇನಾರ ಆಗುಗಂಟ ವಸಿ ಕಣ್ಣಿಗೆ ಮರೆಯಾಗಿ ಇರು ಅಂದ್ರು. ಅದ್ರಂತೆಯೇ ಆ ರಾತ್ರಿಯೇ ರಮೇಸ್ನ ಸಂಕಮ್ನೂ ಪುಟ್ಟೇಗೌಡ್ರೂ ಕಿರಿ ಮಗುಳ್ಮನೆಗೆ ಕಳಿಸುದ್ರು. ಸಪ್ಪಟ್ಟು ಸರ್ರಾತ್ರಿಯಾದ್ರೂ ಮುಪ್ಪಾದ ಆ ತಂದೆ ತಾಯ್ಗಳ್ಗೆ ನಿದ್ದೆ ಬರ್ಲಿಲ್ಲ. ಗೂಬೆ ಗುಬಿಗುಬಿ ಗ್ಯೂಕ್ ಅಂತಾ ಕೂಗ್ತಿದ್ದೊ. ರಮೇಸ್ನ ಯದಿಯ ಬಗುದು ರಣದ್ದುಗಳು ತಿಂತಿರುವಂಗೆ ಕನುಸ್ಬಿದ್ದು ಸಂಕಮ್ಮ ದಡಾರ್ನೆದ್ದು ಸುದಾರಿಸ್ಕಂದ್ರು. ಪುಟ್ಟೇಗೌಡ್ರು ಜೀವ ಬೆಂಡಾಗಿ ದೀನವಾಗಿ ಯೇನ್ನೋ ಕನವರಿಸ್ತಿತ್ತು. ಮೂಡ್ಲೆಲಿ ಮುಂಬೆಳಕು ಮೂಡ್ತಿತ್ತು.

ವತಾರೆಲೇ ಯೆದ್ದೋರು ಚಳಿಗೆ ಬೆಂಕಿ ಕಾಯ್ತಿದ್ದೋರು ಅಂಗಾಯ್ತಂತೆ ಇಂಗಾಯ್ತಂತೇ ಅಂತಾ ಮಾತಾಡ್ತಿದ್ರು. ಬೀದಿಕಸ ಗುಡ್ಸುಕೂ ಆಗ್ದೆನೆ ಸಂಕಮ್ಮ ಇತ್ಲುಗೋಗಿ ಅಳ್ತಾ ಕುಂತಿದ್ಲು. ಅಜಾರ್ದೆಲಿ ರುಕ್ಮಿಣಿ ತೊಟ್ಲು ತೂಗ್ತಿರುವಂಗೆ ಕಂಡು ಸಂಕಮ್ಮ ಬೆಚ್ಚುದ್ಲು. ಯಾರ್ನೊ ನೋಡ್ಕ ಬತ್ತಿನಿ ಅಂತಾ ಪುಟ್ಟೇಗೌಡ್ರು ಪ್ಯಾಟೆಗೆ ವೋದ್ರು. ಮೆತ್ಗೆ ಯಾರೊ ಯೇನ್ರವಾ ಅಂತ ಕರ್ದಂಗಾಯ್ತು. ವಲ್ಗೇರಿಯ ಸಿದ್ದಕ್ಕ ಸಂಕಮ್ಮಿಗೆ ಬೇಕಾಗಿದ್ದೋಳು ಬಂದಿದ್ಲು. ವಲ್ಗೇರಿಲಿ ಯೇನೇನ್ಮಾತಾಡ್ಕತವರೆ ಅನ್ನುದ ಸಂಕಮ್ಮಿಗೆ ಸಿದ್ದಕ್ಕ ಯೇಳುದ್ಲು. ಕೊರ್ಟುಗೊದ್ರೆ ಹತ್ತೊರ್ಸ ಜೈಲೇ ಗತಿಯಂತೇ... ಯಂಗೊ ಯಂತದೊ ಒಂತಾಳಿಯ ಕಟ್ಬುಟ್ಟು ಮದ್ವೆ ಆಯ್ತು ಅಂತಾ ತೋರ್ಬುಟ್ಟು ಯಂಗೊ ಒಬ್ಳು ಜೀತ ಮಾಡುಕೆ ಸಿಕ್ಕುದ್ಲು ಅಂತಾ ಕೈತೊಳ್ಕೊಕೆ ಆಗುದಿಲವೇನವ್ವ ಅಂತ ಸಿದ್ದಕ್ಕ ಸಂಕಮ್ನ ಮನ್ಸ ಬದ್ಲಾಯಿಸುದ್ಲು. ಆಯ್ತು ಸಿದ್ದೀ... ನಮ್ಮಟ್ಟಿಯೋನ್ಗು ಒಂದ್ಮಾತ ಯೇಳುಬುಟ್ಟು ನೀನೇಳುವಂಗೇ ಮಾಡ್ತೀನಿ ಅಂತಾ ಸಂಕಮ್ಮ ಕಣ್ಣೀರೊರಿಸ್ಕಂದ್ಲು.

ಅಲ್ಲಿ ವಲ್ಗೇರಿಲಿ ಹನ್ಮಂತ; ನೋಡ್ತಾಯಿರು ರುಕ್ಮಿಣಿ; ನಿನ್ನಾ ಆ ಪುಟ್ಟೇಗೌಡ್ರ ಮನಿಯಾ ಸೊಸೆಯಾಗಿಸ್ದೆಯಿದ್ರೆ ನಾನ್ಗಂಡ್ಸೇ ಅಲ್ಲಾ ಅಂತಂದುಬುಟ್ಟು; ಸಂಗ್ದೋರ ಜೊತೆ ಮಾತಾಡ್ಕ ಬತ್ತಿನಿ ಅಂತಾ ಪ್ಯಾಟೆಗೆ ಬಂದಿದ್ದ. ಮಗುನ್ನಾ ಎಲ್ಲೊ ಅವುಸವರೆ ಅಂತಾ ಆಗ್ಲೆ ಪುಕಾರು ಅಬ್ಬಿತ್ತು. ಐದ್ದೇನ್ನಕ್ದೀರಲ್ವೆ ರಮೇಸುನ್ಗೆ. ಅವ್ರೆಲ್ಲ ಸುಮ್ನೆ ಬುಟ್ಬುಟ್ಟರೇ... ಯಾರ್ಯಾರ್ನ ಯೆಲ್ಲೆಲಿ ಬುಕ್ಮಾಡ್ಬೇಕೊ ಅದಾ ಆಗ್ಲೇ ಮಾಡ್ತಿದ್ದರಂತೇ.. ಅಂತಾ ಬೆಳ್ಳಿಕಿವಿಗೆ ಆಗ್ದೋರು ಸುದ್ದಿಯ ಮುಟ್ಟಿಸಿದ್ರು. ತಡಾ ಮಾಡುದ್ರೆ ವೋಯ್ತು ಅಂತಾ ಆಗ್ಲೆ ಬೆಳ್ಳಿ ಪ್ಯಾಟೆಗೋಗಿ ಮಯಿಳಾ ಸಂಗ್ದೊರ ಕಂಡ್ಲು. ಅಲ್ಲಾಲೆ ಹನ್ಮಂತ ಯೇಳುದೆಲ್ಲನು ಯೇಳಿ

ವ್ಯಾನೆಲಿ ಬಂದಿದ್ದ ಸಂಗ್ದೋರು ವರುಟ್ನಿಂತ್ರು. ಪೋಲಿಸ್ನೋರೆ ಬರೂರಿದ್ರು. ನಾವೇ ಬ್ಯಾಡ ಅಂತಾ ತಡುದ್ವಿ ಅಂತಾ ಸಂಗದೋರು ಯೇಳ್ತಿದ್ರು. ನಾಳೆ ವತಾರಕೇ ಬತ್ತಿವಿ ಕಂತಾಯೀ ಯಲ್ಲಾ ನಿಮ್ಮಂತ್ಲೇ ಆಯ್ತು. ಇನ್ನು ಕೇಸೊಂದ ತಗುಸ್ಬುಟ್ರೆ ಅಲ್ಲೆ ಯೆಲ್ಲ ಸರೋಯ್ತದೆ ಅಂತಾ ಪಟೇಲ್ರು ಕೇಳ್ಕಂದ್ರು.



ಮುಗ್ಸಿದ್ದ. ನಾ ಗಂಡಿಲ್ದ ಮುಂಡೆ ಕನ್ರವ್ವಾ, ನನ್ಮಗಳು ತಂದಿಲ್ದ ತಬ್ಲಿ ಕನ್ರವ್ವಾ, ನಮುಗ್ಯಾರೂ ಗತಿ ಇಲ್ಲ ಕಂತಾಯ್ತಿರಾ... ನಮಗೆ ನ್ಯಾಯವಾ ಕೊಡಿಸ್ರವಾ ಅಂತಾ ಸಂಗ್ದೋರ ಮುಂದೆ ಬೆಳ್ಳೀ ಕಿಚ್ಚ ಕಾರಿದ್ಲು. ಮಯಿಳಾ ಸಂಗ್ದೋರು ಕರುಗೋದ್ರು, ಇಂತಾ ಕಾಲ್ದೆಲೂ ಅಮಾಯಕ ದಲಿತ ಹೆಣ್ಣು ಮಗಳಿಗೆ ಇಷ್ಟು ಅನ್ಯಾಯವೇ ಅಂತಾ ಯಾರೊ ಪೇಪರ್ನವ್ರು ಯಲ್ಲನು ಬರ್ಕಂದೋದ್ರು.

ಪುಟ್ಟೇಗೌಡ್ರು ಪಾಲ್ಗೆ ಯಾರ್‍ಯಾರು ಇರ್‍ಲಿಲ್ಲ. ವೂರ್‍ತುಂಬ ಇದೇ ಒಂದ್ವಿಸ್ಯ ಮೋಜಾಗಿತ್ತು. ಪ್ಯಾಟೆ ಕ್ವಾಟೆನೆಲ್ಲಾ ಸುತ್ತಿ ಸುತ್ತಿ ಸುಸ್ತಾದ ಪುಟ್ಟೇಗೌಡ್ರು ಪರ್‍ದೇಸಿಯಂಗೆ ಟವಲ ತಲೆ ಮ್ಯಾಲೆ ಆಕಂದು ಬಸ್ಟಾಂಡಿನ ಮೂಲೆಲಿ ಕೂತ್ಕಂದು ಸಾಯುದೊ ಬ್ಯಾಡ್ವೊ ಅಂತಾ ಚಿಂತೆ ಮಾಡ್ತಿದ್ರು, ವೊತ್ತು ಮುಳುಗ್ತಾಯಿತ್ತು. ಹನ್ಮಂತ್ನೂ ಬೆಳ್ಳಿನೂ ಆದ್ದೆಲ್ಲನು ರುಕ್ಮಿಣಿ ಮುಂದೆ ಯೇಳ್ತಿದ್ರು, ಅದ ತಿಳ್ದ ಸಿದ್ದಕ್ಕ ತಡೀಲಾರ್ದೆ; ನಾಳೆ ವತಾರಕೇ ಮಯಿಳಾ ಸಂಗ್ದೋರು ಬಂದು ಸ್ಟ್ರೇಕ್ ಮಾಡರಂತೇ ...ಪೋಲಿಸೋರ್‍ನೂ ಜೊತೆಗೆ ಕರ್ಕಬಂದರಂತೇ, ಯಂಗಾರ ಆಲಿ ಇವತ್ತೇ ನೀವು ಯಲ್ಲಾರ ಕಣ್ಣುಗೆ ಮರ್‍ಯಾಗಿ ವೋಗ್ರಲ್ವಾ ಅಂತಾ ಯೇಳ್ಬೇಟ್ಟು ಮಾಯವಾದ್ಲು. ಅದ ಕೇಳಿಯೇ ಸಂಕವ್ವ ಕುಸ್ದುಬಿದ್ಲು. ಮಕ್ಮಕ ಮೊಕ್ಕತ್ಲಾಗಿದ್ರೂ ಪುಟ್ಟೇಗೌಡ್ರಿನ್ನೂ ಯಿಂತಿರುಗಿರ್‍ಲಿಲ್ಲ. ಯಾರೊಬ್ರಾದ್ರೂ ಬಂದು ಯೇನು ಯತ್ತ ಅಂತಾ ಇಚಾರಿಸ್ಲಿಲ್ಲ. ವಿನಾಕಾರ್‍ಣ ಅಂಗೇ ಆಗ್ಲಿ ಅಂತಾ ಅನ್ಕೊಳೊರೇ ಸುತ್ಮುತ್ತ ಇದ್ರು, ಕಡೇ ಬಸ್ಗೆ ಗೌಡ್ರು ಬಂದ್ರು, ಐದೆಣ್ಮಕ್ಳಿದ್ರೂ ಅವ್ರು ದೂರ್‍ದವೂರೆಲಿ ಅವುರ್‍ದೇ ಪಾಡೆಲಿ ಇಂಗಾಯ್ತಲ್ಲ ನಮ್ಮಪ್ಪನ ಮನೆ ಅಂತಾ ಚಿಂತೇಲಿ ಮರೇಲಿದ್ರು, ವೂರು ರಮೇಸ್ನ ವಿಸ್ಯನೆಲ್ಲ ವಟ್ಟೆತುಂಬ ಮಾತಾಡ್ಕಂದು ಮಲಿಕತು. ಪುಟ್ಟೇಗೌಡ್ರು ಬಾಗ್ಲು ಬಡುದ್ರು, ಉಂಡಾ ತಿಂದ್ಯಾ, ನೀರ್‍ಕುಡ್ದಾ ಅಂತಾ ವೊಂದ್ಮಾತಾ ಕೇಳ್ದೆನೆ; ಸಂಗ್ದೋರು ಪೋಲಿಸ್ನೋರ ಕರ್ಕ ಬಂದರಂತೆ ನಡಿಯೊ ಯಜ್ಮಾನಾ.. ಯಲ್ಲಾರ ಕಣ್ಣುಗ್ಮರೆಯಾಗಿ ಜೀವ ಬಿಡ್ಮ ನಡಿಯೊ ಅಂತಾ ಸಂಕಮ್ಮ ಗಂಡುನ್ನ ಕೈಯ ಇಡ್ಕಂದು ಯಳುದ್ಲು.

ಪುಟ್ಟೇಗೌಡ್ರೆದೆ ದಸುಕ್ಕಂತು. ನಿರ್‍ತಕಬಾ ಅಂತಂದ್ರು, ಗಟಗಟ್ನೆ ಚೊಂಬ್ನಿರೆಲ್ಲನು ಕುಡುದ್ರು, ಒಂದ್ಮಾತ ಪಟೇಲ್ರುಗೆ ಯೇಳುಬುಟ್ಟು ತಲೆ ಮರಿಸ್ಕಮ ನಡೀ ಅಂತಾ ಅನ್ಕಂದು ಬಾಗ್ಲುಗೆ ಬೀಗವ ಮೆತ್ಗೆ ಆಕಂದು ಪಟೇಲ್ರುತಕೆ ಬಂದ್ರು, ಪಟೇಲ್ರು ಆಗ್ತಾನೆ

> **ಇದ್ಕಿದ್ದಂಗೆ ಹನ್ನೇಡ್ಗಂಟೆ ರಾತ್ರೀಲಿ ಪೋಲೀಸ್ರು ಬಾಗ್ಲು ಬಡುದ್ರು, ಅಂಗೆಲ್ಲ ಪ್ರಚಾರ ಆಗಿ ಎಪ್ಪ್ಯಯಾರಾದ ಕೇಸು ಕೋರ್ಟಿಗೆ ಬಂದಿತ್ತು. ರಮೇಸ್ನ ಅರೆಸ್ಟ್ ಮಾಡ್ಲೇ ಬೇಕಿತ್ತು. ಯಾರು ಅಂತಾ ನದ್ಗಣ್ಣೆಲೇ ರಮೇಸ್ನೆ ಬಂದು ಬಾಗ್ಲು ತಗದಿದ್ದ. ಪಟ್ಟಂತ ಪೋಲಿಸ್ರು ಅವ್ನ ಕೈಯ ಇಡ್ಕಂದು ಬಂದ್ನಿಮ್ಸನೂ ಬಿಡ್ದಂಗೆ ಕೈಗೆ ಬೇಡಿಯ ಆಕ್ಬುಟ್ರು**

ಸಡ್ಸಾಲೆಲಿ ಮಲಿಕತಿದ್ರು, ಇಂಗಿಗೇ ಅಂತಾ ಪಟೇಲ್ರುಗೆ ಯೇಳುದ್ರು, ಅಂಗಿದ್ಮೇಲೆ ಬಂದೆರುಡ್ದಿನಾ ಮರ್‍ಯಾಗಿರಿ; ಬಂದೋರ ನಾ ಇಚಾರಿಸ್ಕತಿನಿ ಅನುಬುಟ್ಟು ಕಚ್ಚೇಲಿದ್ದ ಸಂಟ ಬಿಚ್ಚಿ ಪುಟ್ಟೇಗೌಡ್ರು ಕೈಗೆ ದುಡ್ಡ ಕೊಟ್ಟು ಜಾಪಾನ ಅಂದ್ರು, ಕತ್ಲೇಲೇ ಅವ್ರಿಬ್ರೂ ತ್ರಗೆ ಕರುಗುದ್ರು, ಮುಪ್ಪಾದ ಅವರು ಆ ಸರ್‍ರಾತ್ರಿಲೇ ಕಾಲ್ದಾರಿ ಇಡ್ಕಂದು ಮಗಳ ಮನೆಯ ತಲುಪುವೊತ್ಗೆ ಮುಂಗೋಳಿ ಕೂಗಿತ್ತು. ಮಬ್ಬು ಮೆಲ್ಗೆ ಕಣ್ಣ ಬಿಡ್ತಿತ್ತು. ಹಗ್ಗೊಳು ವರ್‍ಗುಟ್ತಿದ್ವು ಬಿಸ್ಲು ಬಾಯ್ಬುಡ್ತಿತ್ತು. ಮಾರಿಗುಡಿತಾವಾಗ್ಲೇ ಜನ ಜಮಾಯ್ಸಿದ್ರು. ಮಯಿಳಾ ಸಂಗ್ದೋರು ಬಂದಾಗಿತ್ತು. ರುಕ್ಮಿಣಿಯಾ ಮುಂದೆನೇ ನಿಲಿಸ್ಕಂದಿದ್ರು, ಯ್ಯಾಸ್ದೋರು ಮಡ್ಮಿಡಿ ನೋಡ್ತಿದ್ರು, ಅನ್ನೇಡ್ಗಂಟೆಗೆ ಪೋಲಿಸ್ರು ವ್ಯಾನೆಲಿ ಬತ್ತರೆ ಅಂತಾ ಯೇಳ್ತಿದ್ರು, ಮಯಿಳಾ ಸಂಗದ ಲಿಡ್ರು ಬಾಸ್ಣ ಮಾಡುದ್ಲು. ಇನ್ನೊಬ್ಳು ಕೂಗಾಡ್ದಾಂಗೆ ಅದೇನೊ ಚರಿತ್ರೆ ಅಂತಾ ಕಿರುಚುದ್ಲು. ಜನ ಜಾತ್ರೆಯಾಯ್ತು. ಟೀವಿಯೋರು ಸೂಟಿಂಗ್ಮಾಡ್ಕತಿದ್ರು, ಮಾರಿಗುಡಿತಾವಿಂದ ವಂಟ ಮೆರ್‍ವಣ್ಗೆ ಪುಟ್ಟೇಗೌಡ್ರು ಮನೆತಕೇ ಬತ್ತು. ಬಾಗ್ಲುಗ್ಬೀಗ ಆಕಿತ್ತು. ಅವುರ್‍ಯಾರೂ ಇಲ್ಲಾ ಅಂತ್ಯಾರೊ ಯೇಳುದ್ರು, ತಪ್ಪಿಸ್ಕಂದು ಮೋಸ ಮಾಡ್ತಾವರೆ ಅಂತಾ ಸಂಗ್ದೋರು ಕಿಡಿಯಾದ್ರು, ಮನೆ ಮುಂದೆನೆ ದರ್‍ಣಿ ಕೂತ್ಕೊತಿವಿ ಅಂತಾ ಸಂಗ್ದೋರು ರುಕ್ಮಿಣಿಯ ಮುಂದೆ ಕೂರಿಸ್ಕಂದು ಧಿಕ್ಕಾರ ಕೂಗುದ್ರು, ಹನ್ಮಂತ್ನ ಯಿಡ್ದು ನಿಲ್ಸುಕೆ ಯಾರಿಂದ್ಲೂ ಆಗಿರ್‍ಲಿಲ್ಲ.

ಸೂರ್‍ಯ ನೆತ್ತಿ ಮ್ಯಾಕೆ ಬಂದಿದ್ದ. ಯಿಲ್ಯಾರೂ ಪುಟ್ಟೇಗೌಡ್ರ ಕಡೆಯೋರು ಇಲ್ಲವೇನ್ರೀ ಅಂತಾ ಸಂಗ್ದೋರು ಕರುದ್ರು, ಯೇನೇಳ್ತಾಯೀ ಅಂತಾ ಪಟೇಲ್ರು ಮುಂದೆ ಬಂದ್ರು, ಈಗಿಂದಿಗ್ಲೇ ನಿಮ್ಮವರು ಯೆಲ್ಲವರೂ ಅವರ ಕರೀಸ್ಬೇಕು. ನಮ್ಮುಂದೆನೇ ಇಂದೇ ಮದ್ವೆ ಆಗ್ಬೇಕು ಅಂತಾ ಸಂಗ್ದೋರು ಪಟ್ಟಿಡುದ್ರು, ಮಗುಳ್ಮನೆಗೋಗವರೆ ತಾಯೀ ನಾಳೆ ನಾಳಿದ್ರಲಿ ಬಂದ್ಬುಟ್ತಾರೇ... ಅಟ್ಟೊತ್ತಂಟ ವಸಿ ತಡ್ಕಳ್ರವ್ವಾ ಒಂದ್ಸಣ್ಣ ತಪ್ಪ ಬೆಟ್ಟಮಾಡ್ಬೇಡಿ ಕಂದ್ರವ್ವಾ ಅಂತ ಪಟೇಲ್ರು ಕೋರುದ್ರು, ಗಡದವನ್ಯಾರೊ ಡೊಡ್ಯಾಯ ತಗುಡು;

ಇದೇನು ಸಣ್ಣ ತಪ್ಪೇನ್ರೀ; ಇಷ್ಟೊಂದು ವಯ್ಸಾಗಿ ಗಾಂಧಿ ಕಾಲ್ದೊರಂಗೆ ಕಾಣ್ತೀರಿ ಬುದ್ದಿ ಇಲ್ವೆ ನಿಮಗೆ ನಿಮ್ಮ ಹೆಣ್ಮಕ್ಕಳಿಗೆ ಇಂಗೇ ಆಗಿದ್ರೆ ಸುಮ್ನೆ ಇರ್‍ತಿದ್ರೇನ್ರೀ... ಅಂತಾ ಪಟೇಲ್ರಿಗೆ ಚುಚ್ಚ. ನಮ್ಮೂರ್‍ವಿಸ್ಯವ ನಾವೆ ಬಗೆಅರಿಸ್ಕತಿವಿ. ನಮ್ಮೂರ್‍ಗೆ ಬಂದು ದಬ್ಯಾಳ್ಕೆ ಮಾಡುದು ಸರಿಯಲ್ಲಾ ಅಂತಾ ಯಾರೋ ಬಿರ್‍ಸಾಗಿ ಮಾತಾಡುದ್ರು, ಆ ಮಧ್ಯೆ ಯಾರೊ ವಲ್ಗೇರಿಯವುರ್‍ಗೆ ಬೈಯ್ದು ಮಾತುಗ್ಮಾತು ಸಿಕ್ಕಾಕಂದು ಕೂಗಾಟ ಯೆಚ್ಚಾಗಿ ಕೈಕೈ ಮಿಲಾಯ್ಸುವಂಗಾಯ್ತು.

ಯಿಡೀ ವೂರ್‍ನೇ ನುಂಕೋವಂಗೆ ಸಂಗ್ದ ಲೀಡರ್‍ರು ಕೂಕ್ಕಂದ್ಲು. ನೋಡ್ರೀ ನೀವಿಂಗೆ ಕೈಮಾಡಿ ಎದುರ್‍ಸಿ ಬೆದುರ್‍ಸುಕೆ ಬಂದ್ರೆ; ನಾನೀಗ್ಲೆ ಡಿಸಿ ಯೆಸ್ಪಿಗೆ ಪೋನ್ಮಾಡಿ ಪೋಲೀಸ್ರ ಯೀಗ್ಲೇ ಕರ್‍ಸಿ ಯೆಲ್ರುನೂ ಅರೆಸ್ಟ್ ಮಾಡಿಸ್ತಿನಿ ಅಂತಾ ಮೊಬೈಲ ಕೈಗೆತ್ಕಂದ್ಲು. ಪಟೇಲ್ರು ಎಲ್ರುನೂ ತಡ್ದು; ತಾಯೀ ತಾಯೀ ತಡಿಯವ್ವಾ....

ವಿಕೋಪುಕ್ಕೆ ಯಾಕೋದಿರೀ... ಪರೂರ್‍ಗೆ ವೋಗಿರುರು ಬರ್‍ಬೇಕಲುವೇನ್ರವ್ವಾ ಅಂತಾ ವಿನಂತಿ ಮಾಡ್ಕಂದ್ರು, ಅರೇ ಕರೀರೀ.... ಅವುರು ಇಲ್ಲೇ ಎಲ್ಲೋ ಅವಿತ್ಕಂದಿರ್‍ತರೆ ಅಂತಾ ಗಡ್ಡದವನು ಗುಟುರು ಆಕ್ದ. ಹನ್ಮಂತ ಏನೇನೂ ಅವರ ಕಿವಿಗೆ ಯೇಳ್ತಿದ್ದ. ರುಕ್ಮಿಣಿ ಯಾಕೊ ಯೇದುಸ್ರಿಂದ ಅದುರ್‍ತಿದ್ಲು. ಅವರವ್ವ ಬೆಳ್ಳಿ ಬೈವುರ್‍ತಿದ್ಲು. ವೊತ್ತು ಜಾರ್‍ತಿತ್ತು. ವೋರ್‍ಬಾಯ ಸಂಗ್ದೋರು ಕಟ್ಟಾಕಿದ್ರು, ಆಯ್ತು ಅಂತಾ ನಾಕಾರ್‍ಜನುದ್ಜೊತೆ ಪಟೇಲ್ರು ಮಾತಾಡಿ; ರಮೇಸ್ನ ಕರ್ಕಬರೋಗಿ ಅಂತಾ ಸ್ಕೊಟ್ರೆಲಿ ವಬ್ಬುನ್ನ ಕಳುಸುದ್ರು, ಪುಟ್ಟೇಗೌಡ್ರುನ್ನು ಸಂಕಮ್ಮುನ್ನೂ ಕರ್ಕಬರುವಂತೆ ಇನ್ನಿಬ್ರ ಕರ್ಕಂದು ಪಟೇಲ್ರೇ ಮುಸ್ಸಂದೆಲೇ ದಾರಿ ಯಿಡುದ್ರು, ಸಂಗ್ದೋರು ಅದೆಂತವೊ ವೋರಾಟದ ಪದಗಳ ಆಡ್ತಾ, ನಗ್ತಾಡ್ತ ದಿಕ್ಕಾರ ಕೂಗ್ತಾ ಬಾಸ್ಣವ ಬಿಗೀತಾ ಇರುವಂಗೆನೇ ಸ್ಕೊಟ್ರೆಲಿ ವೋಗಿದ್ದೋರು ರಮೇಸ್ನ ಕರ್ಕ ಬಂದ್ರು, ಪಟೇಲ್ರು ಇನ್ನೂ ಬಂದಿಲ್ಲ. ಅಂತಾ ಸಂಗ್ದೋರು ರೇಗಾಡ್ತಿದ್ರು,

ಅಂತೂ ಪಟೇಲ್ರು ಪುಟ್ಟೇಗೌಡ್ರ ಕಂಡು; ಯಿನ್ನೆನು ದಾರಿಯಿಲ್ಲ ಪುಟ್ಟೇಗೌಡಾ ಎದ್ನಡಿ; ಬೀಸೊಕತ್ತಿ ತಪ್ಪಿಸ್ಕೊಕೆ ಇರೋದಿದೊಂದೇ ದಾರಿ ಅಂತಾ ಬಂದಾರಿಲೇ ಒಂದರ್‍ಗಳ್ಗೆಯೂ ನಿಲ್ದೆನೆ ಕರ್ಕಂಬಂದ್ರು, ಅಮಾಸೆ ಕತ್ಲಾಗ್ಲೇ ಅಗುತ್ಕಂದಿತ್ತು. ಸಂಗ್ದೋರು ಗಡಿಬಿಡಿ ಮಾಡ್ತಿದ್ರು, ಸಂಕಮ್ಮ ಬಾಯಿ ಕಟ್ಟುತು. ಪುಟ್ಟೇಗೌಡ್ರೆದೆ ದರ್‍ಗುಟಿತ್ತು. ದಡದಡ್ನೆ ಯಲ್ರು ಮಾರಿಗುಡಿ ತಕೆ ಬಂದ್ರು, ಪೂಜಾರಪ್ಪ ಪೂಜೆಯ ಮಾಡ್ತಿದ್ದ. ಕಟ್ಟು ತಾಳಿಯಾ ಅಂತ ಸಂಗ್ದೋರು ರಮೇಸ್ನ ಕೈಗೆ ಯಂತದೋ ಒಂದು



ಕವನ

ಕವಿತೆ ಓದೋಣ ಬನ್ನಿ

ವಿ. ಹರಿನಾಥ ಬಾಬು

ಓದ ಬನ್ನಿ
ಕವಿತೆ
ಹ್ಞಾಂ, ಹಾಗೆ
ಇನ್ನೂ ಗಟ್ಟಿಯಾಗಿ

ಈ ತಣ್ಣನೆಯ ತನುಗಳಲಿ
ಒಂದಷ್ಟು ರಕ್ತ ಸಂಚರಿಸಿ
ಮೈ ಬಿಸಿಯೇರಿ
ಮೂಗಿನ ಹೊಳ್ಳೆಗಳು ಉಸಿರಾಡಿ
ಬಿದ್ದುಹೋದ ಕೈ
ಕಾಲುಗಳಲ್ಲಿ ಚೈತನ್ಯ ಮೂಡಿ
ಪಿಸುರುಗಟ್ಟಿದ ಕಣ್ಣುಗಳು
ಮೆಲ್ಲಗೆ ತೆರೆದುಕೊಂಡು
ಸುತ್ತಲೂ ನೋಡಿ ಹೆದರದೆ
ಪಸೆಯಾರಿದ ಗಂಟಲಲಿ
ದನಿ ಗುಡುಗಾಗಿ
ನಿಶ್ಶಕ್ತ ಮುಂಗೈ ಮುಷ್ಟಿ ಬಿಗಿಹಿಡಿದು
ಪಶ್ಚಿಮದಿ
ಎಂದೋ ಮುಳುಗಿ ಹೋದ
ನಿಗಿ ನಿಗಿ ಉರಿವ ಸೂರ್ಯನನು
ಮುಂದಲೆಯ ಕೂದಲು ಹಿಡಿದು
ಜರಜರನೆ ಎಳೆದು ತಂದು
ಮಾರಿ ತೊಳೆದು
ಹೋರಾಟದ ಅಂಗಳಕೆ ನಿಲ್ಲಿಸಬೇಕಿದೆ

ನಾನು
ನೀವು
ಮತ್ತು 'ಅವರು'
ಬದುಕುವುದಕ್ಕೆ ಲಾಯಕ್ಕು ಎನ್ನಿಸಬೇಕಿದೆ

ಆಗಲೂ ಸಾಧ್ಯವಾಗದಿದ್ದರೆ???

'ಥೂ! ಹೆಣಗಳು'
ಎಂದೊದರಿ ಈ ಕವಿತೆಯೂ
ನಮ್ಮಂತೆಯೇ ಉದ್ದಕ್ಕೆ
ಹೊದ್ದುಕೊಂಡು ಮಲಗಿಬಿಡಬಹುದು
ಗಣಿ ಗೋರಿಗಳೊಳಗೆ

ಆಗ ಎಚ್ಚರಿಸಲು
ಈ ಕವಿತೆಯೂ ಇರುವುದಿಲ್ಲ!

ಇದ್ಕಿದ್ದಂಗೆ ಹನ್ನೇಡ್ಗಂಟೆ ರಾತ್ರೀಲಿ ಪೋಲೀಸ್ರು ಬಾಗ್ಲು ಬಡುದ್ರು, ಅಂಗೆಲ್ಲ ಪ್ರಚಾರ ಆಗಿ ಎಪ್ಪೈಯಾರಾದ ಕೇಸು ಕೋರ್ಟಿಗೆ ಬಂದಿತ್ತು. ರಮೇಸ್ನ ಅರೆಸ್ಟ್ ಮಾಡ್ಲೇ ಬೇಕಿತ್ತು. ಯಾರು ಅಂತಾ ನಿದ್ಗಣ್ಣಿಲೇ ರಮೇಸ್ನೆ ಬಂದು ಬಾಗ್ಲು ತಗದಿದ್ದ. ಪಟ್ಟಂತ ಪೋಲಿಸ್ರು ಅವ್ನ ಕೈಯ ಇಡ್ಕಂದು ಬಂದ್ನಿಮ್ಸನೂ ಬಿಡ್ದಂಗೆ ಕೈಗೆ ಬೇಡಿಯ ಆಕ್ಬುಟ್ರು, ಆ ಕಾಳ್ರಾತ್ರೀಲಿ ಯೇನ್ನೂ ಮಾಡುಕಾಗ್ದೆ ಸಂಕಮ್ನೂ ಪುಟ್ಟೇಗೌಡ್ರೂ ವಿಲವಿಲ್ನೆ ವದ್ದಾಡುದ್ರು, ರಮೇಸ್ನ ತಕಂದೊಗಿ ಜೈಲ್ಗೆ ಯಸುದ್ರು

ತಾಳಿಯಾ ಕೊಟ್ರು, ರಮೇಸ್ನ ಮೈಯೆಲ್ಲ. ಬೆವುತ್ಕಂದು ಮೈಯ್ಯಾದ ಮೈಯೆಲ್ಲ ಅದುರ್ತಿತ್ತು. ಸಂಕಮ್ಮ ನೋಡ್ಲಾರದೆ ಸೆರ್ಗಲಿ ಕಣ್ಣೀರ ವರಿಸ್ಕಂದ್ಲು. ಮಾರವ್ವಾ ನಿನ್ಗೀಗ ಸಂತೋಷ ಆಯ್ತೇನವ್ವಾ ಅಂತ ಪುಟ್ಟೇಗೌಡ್ರು ಮಾರವ್ವನ ನೋಡುದ್ರು, ನ್ಯಾಯಕ್ಕೆ ಜಯವಾಗಲೀ ಅಂತಾ ವೂರಾದ ವೂರೇ ಮೊಳ್ಗುವಂಗೆ ಸಂಗ್ತೋರು ಜೈಕಾರ ಆಕುದ್ರು, ಬೆಳ್ಳಿಗೆ ಆನೆ ಬಲ ಬಂದಂಗಾಗಿತ್ತು. ಕ್ಷಣ ಮಾತ್ರದೇವೇ ಮದ್ವೆ ಮುಗ್ದೋಗಿತ್ತು. ಆಕೂಡ್ಲೆ ಅಲ್ಲೊಂದು ವಪ್ಪಂದನೂ ಆಯ್ತು. ರುಕ್ಮಿಣಿ ಗರ್ಭಿಣಿ ಆಗಿರುದ್ರಿಂದ ಅವುಳು ತಾಯಿ ಜೊತೆಲೇ ಇರ್ತಾಳೆ. ಆಗಾಗ ಅವಳಾ ನೋಡ್ಕೊಕೆ ರಮೇಸ ವೋಯ್ತಾ ಬರ್ತಾ ಇರ್ಬೇಕು ಅಂತ್ಲೂ ಮಾತಾಯ್ತು. ದುಡುಕಿ ಗೌಡ್ರು ಮನೆಗೆ ಮಗಳ ಕಳಿಸುದ್ರೆ ಏನೋ ಯತ್ತೊ ಅಂತಾ ಮೊದ್ಲೇ ಬೆಳ್ಳಿಗೂ ಬಯಿತ್ತು.. ಹನ್ಮಂತ ನಗನಗ್ತಾ ಸಂಗ್ತೋರ ಜೊತೆಲಿ ಅದೇನೊ ಯೇಳ್ತಿದ್ದ. ವ್ಯಾನೆಲಿ ಬಂದಿದ್ದ ಸಂಗ್ತೋರು ವರುಟ್ನಂತ್ರು, ಪೋಲಿಸ್ನೋರೆ ಬರೂರಿದ್ರು, ನಾವೇ ಬ್ಯಾಡ ಅಂತಾ ತಡುದ್ವಿ ಅಂತಾ ಸಂಗದೋರು ಯೇಳ್ತಿದ್ರು, ನಾಳೆ ವತಾರಕೇ ಬತ್ತಿವಿ ಕಂತಾಯೀ ಯಲ್ಲಾ ನಿಮ್ಮಂತ್ಲೇ ಆಯ್ತು. ಇನ್ನು ಕೇಸೊಂದ ತಗುಸ್ಬುಟ್ರೆ ಅಲ್ಲೆ ಯೆಲ್ಲ ಸರೋಯ್ತದೆ ಅಂತಾ ಪಟೇಲ್ರು ಕೇಳ್ಕಂದ್ರು, ಅಂಗೇ ಆಗ್ಲಿ ಅಂತಾ ಸಂಗ್ತೋರು ಬರ್ರಂತ ವಂಟೋದ್ರು

ಅಮಾಸೆ ರಾತ್ರಿಯೂ ಕಳೀತು, ಅದರಾಚೆಯಾಚೆಯ ರಾತ್ರಿಗಳೂ ಕಳುದ್ವು, ವಾರ್ರೂ ಆಗೋಯ್ತು. ಪುಟ್ಟೇಗೌಡ್ರು ಪಟೇಲ್ರೂ ಪ್ಯಾಟೆಗೋಗಿ ಸಂಗ್ತೋರ ಕಂಡ್ರು; ಅಯ್ಯೋ ಅದ್ಯಾವ ಕೇಸು ಬಿಡ್ರೀ.... ನಿಂಪಾಡ್ಗೆ ನೀವಿರೋಗ್ರಿ ... ಅದರ್ಪಾಡ್ಗೆ ಅದು ಮುಗುದೋಯ್ತದೆ ಅಂತಾ ಕಡೆಗಣಿಸಿ ಕಳಿಸ್ಬುಟ್ರು, ಯೀ ಗಾಳವಾ ಬಿಡಿಸ್ಕದಿದ್ರೆ ಪ್ರಾಣುಕ್ಕೆ ಅಪಾಯ ಅಂತಾ ಸಂಕಮ್ನೂ ಪಟೇಲ್ರೂ ಸೇರ್ಕಂದು ಮತ್ತೆ ಮತ್ತೆ ಸಂಗ್ತೋರ ಕಂಡ್ರು ಯಾವ್ದೋ ಸಮಾವೇಸ ಅಂತಾ ಸಂಗದ ಲೀಡರ್ರು ಬೊಂಬಾಯ್ಗೆ ವಂಟೋಗಿದ್ರು, ನೀನಾದ್ರೂ ಬಾರಪ್ಪ ಅಂತ ಹನ್ಮಂತ್ನ ಕರುದ್ರು, ಸಂಗ್ತೋರಿಲ್ದೆ ನಾ ಮಾತ್ರ ಟೇಸನ್ಗೆ ಬರುದಿಲ್ಲ ಅಂತಾ ತಲೆ ವಗ್ದ. ದಿನ್ನೊಂದಿರಾ ರುಕ್ಮಿಣಿಯ ವಿಸ್ಯ ಸುತ್ಕತಿತ್ತು. ಬೆಳ್ಳಿ ತಲೆಯ ಕೆಡ್ಸುರ್ಗೇನು ಬರ್ತಿಲ್ಲಿಲ್ಲ. ನಿನ್ನಾ ತಾಳೀಸ್ಕೊಟ್ವರೇನಮ್ಮೀ; ಗುಮ್ಮಕ್ಕಿಯ ಯಿಸುಕ್ದಂಗೆ ನಿನ್ಕುತ್ಗೆಯ ಚಿಮುಕ್ಬುಟ್ಟು ಪ್ಯಾಣಾಕಂದ್ಲು ಅಂತಾ ಸುಟ್ಪಾಕ್ಬುಡ್ತರೇ. ಯೆಲ್ಲಾರ ಮರೇಲಿ ಯೆರ್ಗೆ ಮಾಡಿಸ್ಕಂದು ಮಗಾವ ಸಾಕ್ಕಳಿ. ಅದೇ ನಿಮುಗಾದಾರ. ಅದೇನಾರ ಗಂಡಾಯ್ತು ಅಂದ್ರೆ ನಾಗತಕಬೋದು... ಮುಂದೆ ಹಕ್ಕ ಚಲಾಯಿಸ್ಬೋದು. ತಾಯಿ ಮಗೂ ಬದ್ಕಿದ್ರೆ ತಾನೆ ಮುಂದೆ ಯೇನಾರ ಸಿಗುದೂ... ವೋಗಿ ವೋಗಿ ಮಗಳಾ ಅದೂ ಬಸುರಿ ಮಗಳಾ ವುಲಿ ಜೋನೋಳಾಕೆ ಕಳಿಸ್ತಿದ್ದಿಯಲ್ಲಾ ಅಂತ ಬೆಳ್ಳಿಯ ತಲೆಯಾ ಕೆಡ್ಸಿದ್ರು, ಅಡ್ನನಂತಲೆಗೇ ಬಂದಿರ್ಲಿಲ್ವಲ್ಲಾ ಅಂತ ಬೆಳ್ಳಿ; ಇನ್ನ್ಯಾವ ಕಾರ್ಣುಕೂ ಅವುರ್ಮನೆಗೆ ಯೀಗ ಮಗಳ ಕಳ್ಸುದು ತರವಲ್ಲ ಅನ್ನಂದು ಹನ್ಮಂತ್ನುಗೂ ಯೇಳ್ಬುಟ್ಟು ರಾತ್ರೋರಾತ್ರಿ ರುಕ್ಮಿಣಿಯ ಕರ್ಕಂಡು ಮರೆಗೆ ಪರಾರಿಯಾದ್ಲು.

ಕೇಸ ತಗ್ಸುಗಂಟಾ ತಲ್ನೋವು ತಪ್ಪುದಿಲ್ಲಾ ಅಂತಾ ಅವ್ರು ಇವ್ರೂ ಯೇಳಿ; ಸಂಗ್ತೋರು ಕೈ ಬಾಂಯ್ಗೆ ಸಿಗದೆ ತಪ್ಪಿಸ್ಕಂದ ಮ್ಯಾಲೆ ಒಂದಿನ ಪುಟ್ಟೇಗೌಡ್ರೇ ಪಟೇಲ್ರು



ಕರ್ಕಂದು ಪೋಲಿಟೇಸನ್ಗೆ ಬಂದ್ರು, ಇಂಗಿಂಗಾಯ್ತು ಅಂತಾ ವಪ್ಸಿ ಕೇಸ ವಾಪಸ್ತಕಳಿ ಅಂದ್ರು, ಯೆಸ್ಸಐ ಕಕಕಾ ಅಂತ ನಕ್ಕು ಬುಟ್ರು, ಒಂದ್ಸಲಾ ಯೆಪ್ಪೈಯಾರೆಲಿ ಕೇಸು ಬುಕ್ಕಾಯ್ತು ಅಂದ್ರೆ ಅದಾ ಬ್ರಮ್ಮ ಬಂದ್ರೂ ತಗ್ಸುಕಾಗುದಿಲ್ಲಾ. ಕೇಸಕೊಟ್ಟಿರುರೇ ಬಂದ್ರೂ ಅದಾ ತಗಿಯಿಕೆ ಯಾರ್ಗೂ ಅಧಿಕಾರ ಇಲ್ಲ. ಇನ್ನೇನಿದ್ರೂ ಕೋರ್ಟಿಲೆ ಇತ್ಯರ್ಥ ಆಗಬೇಕು. ಅಲ್ಲಿ ಶಿಕ್ಷೆ ಆಗದಂಗೆ ಯೇನು ಮಾಡ್ಕಬೇಕೊ ಅದಾ ವೋಗಿ ಮಾಡ್ಕಳಿ... ಆದ್ರೆ ಆ ರಮೇಸ ನಮಗೆ ಬೇಕೇ ಬೇಕು. ಸ್ಟೇಸನ್ಗೆ ಬಂದು ಅವುನು ಸಹಿ ಮಾಡ್ಬೇಕು. ನಿವಾಗಿದ್ದು ನೀವೇ ಅವ್ನ ಕರ್ಕಬಂದ್ರೆ ಸರಿ.... ಇಲ್ಲಾಂದ್ರೆ... ಮುಂದೆ ಇದ್ದೇ ಇದೇ.. ವೋಗಿ ಯೇನಾರ ಒಂದಾರಿ ಮಾಡ್ಕಂಡು ಬರೋಗಿ ಅಂತಾ ಯೆಸ್ಸೈ ಕಳಿಸ್ಬುಟ್ರು,

ಇಸ್ತ್ರೆಲೀ ಒಂದೆಡವಟ್ಟಾಗಿತ್ತು. ಪಟೇಲ್ರು ವಳ್ಳೇದ್ಮಾಡ್ಬೇಕು ಅಂತಾ ರಮೇಸುನ್ಗೆ ಯೇಳಿದ್ದ ಬುದ್ದಿ ಮಾತೇ ತಪ್ಪಾಗಿತ್ತು. ವೋಲಾ ರಮೇಸಾ; ಸುಮ್ನಾದ್ರೂ ರುಕ್ಮಿಣಿಯ ಮಾತಾಡಿಸ್ದಂಗೆ ಮಾಡಿ; ಕೇಸ ವಾಪಸ್ತಕೋವಂಗೆ ವಯ್ನ ಮಾಡಿ ವಪ್ಸಿ ಮೆಚ್ಚಿಸ್ಕಂದು ಬರೋಗು ಅಂತಾ ಕಳಿಸಿದ್ರು, ಮಗಳ ಮನೆಲೆ ಇರಿಸ್ಬುಟ್ಟು ಬತ್ತಿನಿ ತಾಡು ಅಂತಾ ಯತ್ತಗೂ ವೋಗಿದ್ದ ಬೆಳ್ಳಿ ಬಂದ್ನೋಡಿ ದಂಗಾಗಿದ್ಲು. ರುಕ್ಮಿಣಿ ಬೆದುರ್ಕಂದಿದ್ಲು. ರಮೇಸ್ನೂ ಅವುಳೂ ಕಿತ್ತಾಡ್ದೊರಂಗೆ ಬುಸುಗುಡ್ತಿದ್ರು, ನಾನಿನ್ನೇನಾರ ಸರ್ರಂತ ಬರ್ದೆಯಿದ್ರೆ ನನ್ಮಗಳ ಕತ್ತ ಚಿಮಿಕಿ ಸಾಯ್ಸಿಯೇ ಬಿಡ್ತಿದ್ದ ಅಂತಾ ರಮೇಸ್ನ ಮ್ಯಾಲೆ ಕಿಡಿಕಾರಿ; ನಾನಿಲ್ದ ವೊತ್ತೆಲಿ ನನ್ಮಗಳ ಕತ್ತಚಿಮ್ಮುಕೆ ಬಂದಿದ್ದೇನು ಅಂತಾ ಕೂಗಾಡಿ ಕಳಿಸ್ಬುಟ್ಟಿದ್ಲು. ಮರ್ದಿನ್ವೇ ಇದಾ ಅವುರಿವುರ್ಗೆ ಯೇಳಿ ಸಂಗ್ತೋರ್ಗು ತಲುಪ್ಸಿ ನಮ್ಮ ಮುಗ್ಸುಕೆ ಸಂಚ ಮಾಡ್ತಾವರೆ ಅಂತಾ ಬೆಳ್ಳೀ ಯೇನೆನೋ ಚಾಡಿ ಯೇಳುದ್ಲು. ಪೋಲಿಸ್ನೊನೊಬ್ಬ ವೋರ್ಗೆ ಬಂದು ರಮೇಸ್ನ ವುಡ್ಕಾಡ್ದ. ವುಸಾರಿಲ್ಲ ಅಂತ ಅವ್ನ ಆಸ್ಪತ್ರೆಗೋಗಿದ್ದೋನು ಯಂಗೋ ತಪ್ಪಿಸ್ಕಂದಿದ್ದ. ರಮೇಸ ಅನ್ನಾ ನೀರ್ಬಿಟ್ಟು ತಲೆಕೆದುರ್ಕಂದು ವುಚ್ಚಿಡ್ದೋನಂಗಾಗಿದ್ದ. ಇದೆಲ್ಲ ಸಂಗ್ತೋರ್ಕೈಲೇ ಅದೇ ಅಂತ ಪುಟ್ಟೇಗೌಡ್ರು ಸಂಕಮ್ನ ಕರ್ಕಂದು ಪ್ಯಾಟೆಗೆ ಬಂದ್ರು, ವತಾರಿಂದ ಸಂದ್ಗಂಟ ಸಂಗ್ದ ಲಿಡರ್ರ ಕಾದ್ಕಾದು ಸುಸ್ತಾದ್ರು, ಲೀಡ್ರು ಕೊನ್ಗೂ ಬಂದ್ರು, ಇವ್ರು ಕಂಡೇಟ್ಗೆ ಕಿಡ್ಕಿಡಿಯಾಗಿ; ಏನ್ರೀ; ಸುಖವಾಗಿರುಸ್ಕತಿವಿ ಅಂತಾ ತಾಳಿಯಾ ಕಟ್ಟಿ; ಆವುಡ್ಗಿಯಾ ಕತ್ತ ಹಿಸ್ಕೊಕೆ ವೋಗಿದ್ನಂತಲ್ಲಾ ನಿಮ್ಮಗ.... ನೀವೆಂತಾ ಜನಾರ್ರೀ... ನೀನೂ ಒಂದೆಂಗ್ಸೇನಮ್ಮಾ... ಐದೆಣ್ಮಕ್ಕಳ ಎತ್ತಿದ್ದಿಯಲ್ಲಾ...ನಿನ್ಗೆ ಒಂದೆಣ್ಣಿನ ಕಸ್ಟ ಗೊತ್ತಿಲ್ಲವೇನಮ್ಮಾ... ನಿಮ್ಮಂತೋರ್ಗೆ



ಸಹಕಾರ ವಲಯದಲ್ಲಿ
ಐತಿಹಾಸಿಕ ಹೆಜ್ಜೆಗಳು
ಕರ್ನಾಟಕ ಮುನ್ನಡೆಯುತ್ತಿದೆ
ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ
ಪ್ರತ್ಯೇಕ ಕೃಷಿ ಬಜೆಟ್ ಅನ್ನು ಮಂಡಿಸಲಾಗಿದೆ
ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು
ಸಹಕಾರ ರಂಗ - ಸಮಾಜದ ಅಂಗ
ಕರ್ನಾಟಕ ವಾರ್ತೆ

ೂೀರ್ಟೆ ಸರಿ. ಇನ್ಮೇಲೆ ನಮ್ಮತ್ರ ಬರ್ಬೇಡಿ; ಕೋರ್ಟೆಲೆ ತೀರ್ಮಾನ ಮಾಡ್ಕಳಿ ಅಂತಾ ಲೀಡ್ರಮ್ಮ ಕೆಂಡ್ವಾದ್ರು ನೀವೇ ತಾನೇ ತಾಯಿ ಯಲ್ಲಾನು ಮಾಡ್ದೋರು. ಮೀಗ ನಮ್ಗು ನಿಮ್ಗು ಯಾವ್ಸಂಬಂಧ್ವನೂ ಯಿಲ್ಲಾ ಅಂತೀರಲ್ಲವ್ವಾ ಅಂತ ಸುಟ್ಟೇಗೌಡ್ರು ಮುಂದುಕ್ಕೆ ಮಾತ್ಬರ್ದ್ನೆ ದೀನವಾದ್ರು, ಸಂಕಮ್ನ ಕಿಚ್ಚು ನೆತ್ತಿಗೇರ್ತು. ೀನ್ಯಾವ ಸೀಮೆ ಯೆಂಗ್ಸಮ್ಮಾ..... ಇದೇನೇನು ನಿನ್ನೇಗ್ತಿ. ನಿನ್ನೊಟ್ಟೆಲೇನರಾ ಮಕ್ಕಳು ಅಂತಾ ವುಟ್ಲಲ್ಲುವೇನಮ್ಮಾ... ತಾಳಿಯಾ ಬಲವಂತವಾಗಿ ಕಟ್ಟಿಸ್ಬುಟ್ಟು ಮನೆಯಾಳ್ಕೆಲ್ಸ ಮಾಡುಕೆ ನಿಂದಿದ್ದಿಯಲ್ಲಾ... ನೀನುದ್ದಾರ ಆದಿಯಾ... ನಮ್ಗಾ ಇಂಗಿಂಗೆ ಅನ್ಯಾಯ ಮಾಡ್ತಾವರೆ ಅಂತಾ ನಾವೂ ನಿಮ್ಮೇಲೆ ಕಂಪ್ಲೇಂಟ್ ಕೋಡ್ತಿವೀ.. ಅಂತ ಸಂಕಮ್ಮ ಮೆದೆ ಚೆಚ್ಕೆಂದು ಬಾಯ್ಬಡಕಂಡ್ಲು. ಇಂಗನ್ಯಾಯ ಮಾಡ್ಬೇಡ ತಾಯಿ ಅಂತ ಸುಟ್ಟೇಗೌಡ್ರು ದನಿಗೊಡ್ಸುದ್ರು, ಲೀಡ್ರು ಜೊತೇಗಿದ್ದ ಅವ್ರು ಇವ್ರೆಲ್ಲ ಸಂಕಮ್ಮ ಮ್ಯಾಲೆ ೂಗಾಡುದ್ರು, ನಾವೇನ್ರೀ ಅನ್ಯಾಯ ಮಾಡಿರುದ್ದ್ಯೂ; ನಾವಿನ್ನೂ ನಿಮ್ಮಗುನ್ನಾ ರೆಸ್ಟು ಮಾಡಿಸ್ದೆ ಸುಮ್ನೆ ಬಿಟ್ಟವಲ್ಲಾ; ಅದಾ ಅನ್ಯಾಯ... ನಾನೀಗ್ಲೇ ಪೋಲೀಸ್ರ ರಿಸ್ತನಿ ತಾಡ್ರೀ, ಅಂತಾ ಆ ಲೀಡ್ರು ಯೆಸ್ಸೈಗೆ ಪೋನ್ಮಾಡುದ್ರು, ಇನ್ನಿಲ್ಲಿರೂದು ರವಲ್ಲಾ ಅನ್ಕಂದು; ಆಯ್ತು ತಾಯೀ ನಮ್ನೆಲ್ಲ ಜೈಲ್ಗಾಕ್ಸಿ ಸುಕುವಾಗಿರವ್ವಾ ೂೀರ್ವಾದ ಅನ್ಯಾಯವ ಮಾಡಿವಿ ನೋಡೀ.... ಅದೇನೇನ್ಸಿಕ್ಷೆಯ ಕೊಡ್ಸಿರೊ ಕೊಡ್ಸಿ ಂತಾ ಯೇಳ್ಬುಟ್ಟು ಸಂಕಮ್ನ ಕರ್ನಂಡು ಪುಟ್ಟೇಗೌಡ್ರು ಬರಬರ್ನೆ ಪ್ಯಾಟೆ ಬೀದಿಗೆ ಂದು ನಿತ್ಕಂದ್ರು, ಕೋರ್ಟುರ್ಗೆ ಅಂತಂದ್ರು ತಾನೇ.. ಇದ್ಕೇನ್ಮಾಡುದು ಅಂತಾ ಾಯರ್ರ ಕೇಳ್ಮನಡೀ ಅಂತಾ ಸಂಕಮ್ಮ ಗಂಡುನ್ನ ಕರ್ಕಂಡು ಲಾಯರೊಬ್ರ ಕಂಡ್ಲು. ವ್ಸಿವಾ.. ಯೆಂತೆಂತಾ ಲಾಯರ್ಗೊಳೊ.. ಆ ಕಾನೂನು, ಕಟ್ಲೆ ಪೀಜುಗೀಜು, ಾಪಾಯಿಂಟು, ಸೆಕ್ಷನ್ನು, ಇಯರಿಂಗು, ಎನ್ಕೊಯಿರಿ ಅದೂ ಇದೂ ಅಂತೆಲ್ಲನು ೀಳಿ ಸುಸ್ತಾದ್ರು, ಇದ್ದಬದ್ದ ಆಸ್ತಿ ಪತ್ರುಗೊಳಾ ತಕ್ಕಂದೋಗಿ ಬ್ಯಾಂಕಲಿಟ್ಟು ಲಕ್ಸುಗಟ್ಲೆ ಡ್ಡ ತಕಬಂದು ಯಾರ್ಯಾರ್ಗೆ ಕೊಡ್ಬೇಕೊ ಅವುರ್ಗೆಲ್ಲ ಚೆಲ್ಲುದ್ರು, ಬೆಳ್ಳಿ ಮಗಳ ರೇಲಿರಿಸ್ಕಂದು ಯೆರ್ಗೆದಿನವಾ ಕಾಯ್ತುದ್ಲು. ಇಂಗೆಲ್ಲ ಆದ್ಮೇಲೆ ನನ್ಮಗಳ ಅವುರು ಾಳಿಸ್ಕೊಟ್ಟರೇ... ಯಂಗಾರ ಮಾಡಿ ನನ್ಮಗುಳ್ಗೆ ಒಂಜೀವ್ನಾಂಸ ಸಿಕ್ಕುದ್ರು ಸಾಕು... ದುರ್ಮೇಲೆ ಯಂಗೊ ಬದಿಕಬೌದು ಅಂತಾ ಲೆಕ್ಕಾ ಆಕ್ತಿದ್ಲು. ಹನ್ಮಂತ ಯಾವ್ದೊ ಂಡ್ಲು ಪಂಚಾಯ್ತಿ ಟ್ರೈನಿಂಗು ಅಂತಾ ಬೆಂಗ್ಳೂರ್ಗೆ ವಂಟೊಗಿದ್ದ.

ಇದ್ಕಿದ್ದಂಗೆ ಹನ್ನೇಡ್ಗಂಟೆ ರಾತ್ರೀಲಿ ಪೋಲೀಸ್ರು ಬಾಗ್ಲು ಬಡುದ್ರು, ಅಂಗೆಲ್ಲ ಚಾರ ಆಗಿ ಎಪ್ಪೈಯಾರಾದ ಕೇಸು ಕೋರ್ಟಿಗೆ ಬಂದಿತ್ತು. ರಮೇಸ್ನ ಅರೆಸ್ಟ್ ಾಡ್ಲೇ ಬೇಕಿತ್ತು. ಯಾರು ಅಂತಾ ನಿದ್ಗಣ್ಣಿಲೇ ರಮೇಸ್ನೆ ಬಂದು ಬಾಗ್ಲು ತಗದಿದ್ದ. ಟ್ಟಂತ ಪೋಲಿಸ್ರು ಅವ್ನ ಕೈಯ ಇಡ್ಕಂದು ಬಂದ್ನಿಮ್ಸನೂ ಬಿಡ್ದಂಗೆ ಕೈಗೆ ೀಡಿಯ ಆಕ್ಬುಟ್ರು, ಆ ಕಾಳ್ರಾತ್ರೀಲಿ ಯೇನ್ನೂ ಮಾಡುಕಾಗ್ದೆ ಸಂಕಮ್ನೂ ಟ್ಟೇಗೌಡ್ರೂ ವಿಲವಿಲ್ನೆ ವದ್ದಾಡುದ್ರು, ರಮೇಸ್ನ ತಕಂದೊಗಿ ಜೈಲ್ಗೆ ಯಸುದ್ರು, ಬ್ರುಗಾದ ನೋವ ನೋಡ್ಕಂದು; ಬಾಯ್ತುಂಬ ಅದಾ ಮಾತಾಡ್ಕಂದು; ಇಂದಲ್ಲಾ ಳೆ ನಮಗೂ ಅಂತೆದೊಂದು ಅನ್ಯಾಯ ಆಗ್ಬೋದು ಅನ್ನುದಾ ಯೋಚಿಸ್ದೆನೆ ಮೇಸನ ಜೈಲ್ಪಾಲಾದ ಅಂತಾ ಅವ್ರಿವ್ರು ಮರೇಲಿ ಮಾತಾಡ್ಕಂದು ಮಾತು ಳ್ತಾಯ್ತು. ಬೇಲ್ತಕೋದೆಂಗೆ ಅಂತಾ ಲಾಯರ್ರು ಯೇಳಿ ಪೀಜ ತಕಂದು ಂಗ್ಳುಗಳೇ ಕಳ್ದೋಗಿದ್ದೊ. ಚಿಂತೇಲಿ ಪುಟ್ಟೇಗೌಡ್ರು ಮೆತ್ತಾಗಿದ್ರು. ಇಂಗೇ ಕಾಲ ರ್ದೊಯ್ತು. ಇದ್ಕಿದ್ದಂಗೆ ಒಂದಿನ ಸುದ್ದಿ ಬಂತು. ಕದ್ದು ಬ್ಚಿ ಆರೈಕೆ ಯಿಲ್ದೆಲೇ ದೂರ್ದ ಕೊಂಪೆಲಿದ್ಕಂದು ರ್ಗೆ ದಿನವಾ ಕಾಯ್ತಿದ್ದ ರುಕ್ಮಿಣಿ ವಟ್ಟೆವೊಳುಗಲಾ ಸು ಯೆದೆಗೇರ್ಕಂದು; ವೊಳ್ಗೇ ಅದು ಲ್ಕಂದು, ವುಸುರ್ಕಟ್ಕಂದು ಆ ಸಣ್ಣ ವಯ್ಸಿನ ಕ್ಮಿಣಿ ನಡು ರಾತ್ರೀಲಿ ಜೀವ ಬಿಟ್ಟಿದ್ಲು. ನ್ನೆಲ್ಲೂ ಮಣ್ಮಾಡುಕಾಗ್ದೆನೆ ಬೆಳ್ಳಿ ಮಗಳ ಣವ ಗಾಡಿಗಾಕ ಬಂದು ವೂರ್ಮುಂದೆ ಯ್ಬುಡಕಂದ್ಲು. ಹನ್ಮಂತ ಗರಬಡ್ದಂಗೆ





ಕೂತಿದ್ದ. ಮತ್ತದೇ ಮಾತು, ಮತ್ತದೇ ಜನ ಸೇರ್ಕಂದು ಲೋಚಗುಟ್ತಿದ್ರು, ಅಂತೂ ಯಂಗೊ ಒಂದಂಡೆಗೆ ಬಂದಂಗಾಯ್ತು ನಡೀರಪ್ಪಾ ಅಂತ ಅದೇ ಪಟೇಲ್ರು ರುಕ್ಮಿಣಿಯ ಯಣವಾ ಮಸಾಣ್ಗಾಡ್ಗೆ ಸಾಗ್ಸಿ ಸುಡುಸುದ್ರು, ಯಿಡೀ ವೂರ್ಗೆ ಸೂತ್ಕ ಬಡದಂಗೆ ಆಗಿ ಬೆಳ್ಳಿ ಗೊಳೋ ಅಂತಾ ಒಬ್ಬೇ ಅಳ್ತಿದ್ಲು. ರುಕ್ಮಿಣಿಯ ರೂಪ ಸಂಕಮ್ನ ಮುಂದೆ ಬಂದು; ಯೇನ್ರವ್ವಾ ವಟ್ಟಸಿತಾದೆ ವಸಿ ತಂಗ್ಳಿದ್ರೆ ಕೊಡ್ರವ್ವಾ ಅಂತಾ ಆಗಾಗ ಬಂದವಳು ಕೇಳ್ತಿದಂಗೆನೇ ಕೇಳ್ದಂಗಾಗಿ ಕಳ್ಳ ಕಿವಿಚ್ದಂಗಾಯ್ತು. ಅಲ್ಲಿ ಜೈಲೆಲಿ ರಮೇಸ ಕುಕ್ಕುರುಗಾಲೆಲಿ ಕುತ್ಕಂದು ಮಂಡಿ ಮ್ಯಾಲೆ ಗದ್ದವ ಮಣಕಂದು ಕತ್ಲೆಲೇ ಮಿಸ್ಕಾಡ್ತಿದ್ದ. ಲೋಕ ತನ್ಪಾಡ್ಗೆ ತಾನದು ಸಾಗ್ತಾ ಇತ್ತು.

ಡಾ॥ ಮೊಗಳ್ಳಿ ಗಣೇಶ



ಕನ್ನಡದ ಅತ್ಯುತ್ತಮ ಕಥೆಗಾರರಲ್ಲಿ ಪ್ರಮುಖರು. ಉತ್ತಮ ವಿಮರ್ಶಕರು. ಪ್ರಗತಿಪರ ವಿಚಾರಧಾರೆಯ ದಲಿತ ಚಿಂತಕರು. ಸಾಹಿತ್ಯ-ಸಂಸ್ಕೃತಿ ಒಳಗೊಂಡಂತೆ ಎಲ್ಲಾ ವಿಷಯಗಳ ಕುರಿತು ನಿರಂತರವಾಗಿ ವಿವಿಧ ಪತ್ರಿಕೆಗಳಿಗೆ ಬರೆಯುತ್ತಿದ್ದಾರೆ. ಆಳವಾದ ಅಧ್ಯಯನದ ಫಲವಾಗಿ ವೈವಿಧ್ಯತೆಗಳನ್ನು ವಿಸ್ತಾರವಾಗಿ ಮನ ಮುಟ್ಟುವಂತೆ ಕಟ್ಟಿಕೊಡುವಲ್ಲಿ ಸಫಲರಾಗಿದ್ದಾರೆ. ಪ್ರಸ್ತುತ ಹಂಪಿ ವಿವಿಯಲ್ಲಿ ಅಧ್ಯಾಪಕರು.

ನಾವು ಮರೆತ ನಾಯಕ: ಬಾಲು ಪಲವಣಕರ್

ಡಾ|| ಎಚ್. ಎಸ್. ಅನುಪಮಾ

3

ಕ್ರಿಕೆಟ್ ಎಂಬ ಇಂಗ್ಲೆಂಡಿನ ಆಟ ಸಂಪೂರ್ಣ ಭಾರತವನ್ನು ಆವರಿಸಿದ್ದು ಒಂದು ಕುತೂಹಲಕಾರಿ ಕತೆ. ಭಾರತೀಯ ಸಮಾಜ ಎದುರಿಸುತ್ತಿದ್ದ ಎಲ್ಲ ಗೊಂದಲ, ತಾರತಮ್ಯ, ಸುಧಾರಣೆಗಳನ್ನು ಕ್ರಿಕೆಟ್ ಆಟವೂ ಎದುರಿಸಿತ್ತು. 'ಲಗಾನ್' ಸಿನಿಮಾದಂತೆಯೇ ಆ ಆಟದ ಗಂಧಗಾಳಿ ಗೊತ್ತಿಲ್ಲದ ಜನ ಕ್ರಿಕೆಟ್ ಕಲಿಕೆಯನ್ನು ಸವಾಲಾಗಿ ಸ್ವೀಕರಿಸಿ, ಕಲಿತು, ಈಗ ಆ ಆಟದ ಅನಭಿಷಿಕ್ತ ದೊರೆಗಳಾಗಿ ಹಣದ ಹೊಳೆಯಲ್ಲಿ ಮುಳುಗೇಳುತ್ತಿದ್ದಾರೆ. ಮೇಲ್ಜಾತಿ ಸಿರಿವಂತರ, ಮೇಲ್ವರ್ಗದವರ ಟೈಂಪಾಸ್ ಆಟವಾಗಿದ್ದ ಕ್ರಿಕೆಟ್ ಈಗ ದೇಶದ ಹಳ್ಳಿಹಳ್ಳಿಯ ಗಲ್ಲಿಗಳಲ್ಲಿ ಜನಪ್ರಿಯವಾಗಿ, ಆಟಗಾರರ ಹೆಸರಲ್ಲಿ ಜನ ಗುಡಿ, ಸಂಘ, ಪೂಜೆ, ಹೋಮ ಮಾಡುವಷ್ಟು ಭಾರತೀಯವಾಗಿ ಹೋಗಿದೆ. ಕ್ರಿಕೆಟ್ ಆಟ ದೇಶದ ಧರ್ಮವೆಂಬಂತೆ ಬೆಳೆದಿದೆ. ಹೀಗೆ ಹಲವು ಮಜಲುಗಳನ್ನು ದಾಟಿ ಬಂದ ಭಾರತೀಯ ಕ್ರಿಕೆಟ್‌ನ ಮೊತ್ತಮೊದಲ ಶ್ರೇಷ್ಠ ಬೌಲರ್ ರೂಪುಗೊಂಡಿದ್ದು ಹೆಚ್ಚು ಕಡಿಮೆ ಲಗಾನ್ ಸಿನಿಮಾದ ಕಚ್ರಾನ ಮಾದರಿಯಲ್ಲೇ. ಕ್ರೈಸಿಸ್ ಸಮಯದಲ್ಲೂ ಸನಾತನವಾಗುಳಿಯಬಯಸುತ್ತಿದ್ದ ತಾರತಮ್ಯದ ಸಮಾಜದಲ್ಲಿ ಬಹುಪಾಲು ಜನರ ಬದುಕುವ ಹಕ್ಕುಗಳೇ ಮೊಟಕುಗೊಂಡಿದ್ದಾಗ, ಅಂಥ ಸಮುದಾಯದಿಂದ ಬಂದ ಹುಡುಗನೊಬ್ಬ ಶ್ರೇಷ್ಠ ಬೌಲರ್ ಆಗಿ ರೂಪುಗೊಂಡಿದ್ದು ಒಂದು ಸಾಹಸಗಾಥೆ. ಆತ ಬಾಲು ಪಲವಣಕರ್. ಈಗಿನ ಚಳ್ಳೆಪಿಳ್ಳೆಗಳಿಗೆ ಕ್ರಿಕೆಟ್ ಆಟಗಾರರೇ ಕಲಿಗಳು, ರಾಷ್ಟ್ರೀಯ ಹೀರೋಗಳು. ಅವರಿಗೆ ಬಾಲು ಹೆಸರು ತಿಳಿದಿರುವ ಸಾಧ್ಯತೆಯಿಲ್ಲ. ಅವರಷ್ಟೇ ಅಲ್ಲ, ಕ್ರಿಕೆಟ್ ಬಗ್ಗೆ ಓದಿ ಬರೆಯುವ ಆಸಕ್ತರಿಗೂ ಹೆಚ್ಚು ಕಡಿಮೆ ಬಾಲು ಅನಾಮಧೇಯರೇ. ಈ ನೆಲ ರೂಪಿಸಿದ ಮೊತ್ತಮೊದಲ ಶ್ರೇಷ್ಠ ಬೌಲರ್, ಮೊತ್ತ ಮೊದಲ ದಲಿತ ಕ್ರಿಕೆಟರ್ ಬಾಲು. ಇತ್ತೀಚೆಗೆ ಕ್ರಿಕೆಟ್‌ಪ್ರೇಮಿ ಬಂಧುವೊಬ್ಬರು ಆಟದಲ್ಲಿ ಸಾಮಾಜಿಕ ನ್ಯಾಯ–ತಾರತಮ್ಯ ಕುರಿತು ಮಾತನಾಡುವಾಗ ಮೊದಲ ದಲಿತ ಕ್ರಿಕೆಟರ್ ಯಾರು ಗೊತ್ತೆ ಎಂದು ಕೇಳಿದರು. 1906ರಿಂದ 1920ರವರೆಗೆ ಮೊದಲ ದರ್ಜೆ ಕ್ರಿಕೆಟ್ ಆಡಿದ, ಅಂಬೇಡ್ಕರ್ ಸಮಕಾಲೀನರಾಗಿದ್ದ, ಅವರ ವಿರುದ್ಧ ಮೊದಲ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಹಾಗೂ ಕರ್ನಾಟಕದಲ್ಲಿ ಹುಟ್ಟಿದ್ದ ಬಾಲು ಬಗೆಗೆ ಮತ್ತಷ್ಟು ಹೇಳಿ ಕುತೂಹಲ ಕೆರಳಿಸಿದರು.

'ಲೆಫ್ಟ್ ಆರ್ಮ್ ಆರ್ಥೊಡಾಕ್ಸ್ ಸ್ಪಿನ್' ಬಾಲುವಿನ ಬೌಲಿಂಗ್ ಶೈಲಿ. ಈ ಶೈಲಿಯ ಬೌಲಿಂಗ್‌ನಲ್ಲಿ ಅದ್ಭುತ ಪರಿಣತಿಯಿದ್ದ ಬಾಲು ಬ್ಯಾಟ್ಸ್‌ಮನ್ ಆಗಿ ಅಷ್ಟೇನೂ ಹೆಸರು ಮಾಡಲಿಲ್ಲ. ಬಾಲು ಅಷ್ಟೇ ಅಲ್ಲ, ಅವರ ಕುಟುಂಬವೇ ಕ್ರಿಕೆಟ್ ಕುಟುಂಬ. ಅವರ ನಾಲ್ವರು ಸೋದರರೂ ಕ್ರಿಕೆಟ್‌ನಲ್ಲಿ ಹೆಸರು ಮಾಡಿದವರು. ಬಾಲು ಮಗ ವೈ. ಬಿ. ಪಲವಣಕರ್ ಕೂಡಾ ಕ್ರಿಕೆಟ್ ಆಟಗಾರರೇ. ವರ್ಷವಿಡೀ ಕ್ರಿಕೆಟ್ ಆಡುವುದನ್ನೇ ವೃತ್ತಿಯಾಗಿಸಿಕೊಂಡ ಕೋಟ್ಯಾಧಿಪತಿ ಆಟಗಾರರ ಅಂಕಿಅಂಶಗಳೆದುರು ಅವರ ಸಾಧನೆಗಳು ಮಹತ್ವದ್ದಾಗಿ ಕಾಣಿಸದಿರಬಹುದು. ಆದರೆ ಆಡಿದ ಸಮಯ, ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡರೆ ಅದು ಶ್ರೇಷ್ಠ ಸಾಧನೆ.

ಕ್ರಿಕೆಟ್ ಇತಿಹಾಸದ ಕುರಿತು 'ಎ ಕಾರ್ನರ್ ಆಫ್ ಎ ಫಾರಿನ್ ಫೀಲ್ಡ್' ಎಂಬ ಪುಸ್ತಕ ಬರೆದ ರಾಮಚಂದ್ರ ಗುಹಾ ಪ್ರಕಾರ ಭಾರತದ ಮೊದಲ ಶ್ರೇಷ್ಠ ಕ್ರಿಕೆಟರ್ ಬಾಲು. ಆತ ಆಟಗಾರನಾಗಿಯಷ್ಟೇ ಅಲ್ಲ, ಶೋಷಿತ ಸಮುದಾಯಗಳ ಕುರಿತೂ ಕೆಲಸ ಮಾಡಿದ್ದರಿಂದ ಹಾಗೂ ಸಂಪೂರ್ಣ ಅವಜ್ಞೆಗೊಳಗಾಗಿದ್ದರಿಂದ ತನ್ನ ಗಮನ ಸೆಳೆದುದಾಗಿ ಹೇಳಿಕೊಂಡಿದ್ದಾರೆ. ಅವರ ಕುರಿತ ದಾಖಲೆಗಳನ್ನು ಕಷ್ಟಪಟ್ಟು ಕಲೆಹಾಕಿ ತನ್ನ ಪುಸ್ತಕದಲ್ಲಿ ನಾಲ್ಕು ಅಧ್ಯಾಯಗಳನ್ನು ಗುಹಾ ಬರೆದಿದ್ದಾರೆ. ಅವರ ಕುರಿತು ನೆಟ್ ಮತ್ತು ಗುಹಾ ಪುಸ್ತಕದಿಂದ ಕಲೆಹಾಕಿದ ಮಾಹಿತಿ ಇಲ್ಲಿದೆ:

* * * * *

ಬಾಲು ಬಾಬಾಜಿ ಪಲವಣಕರ್ (ಪಲವಂಕರ್ ಎಂದೂ ಕರೆಯುವುದಿದೆ) ಹುಟ್ಟಿದ್ದು 1876 ಮಾರ್ಚ್ 19ರಂದು, ಕರ್ನಾಟಕದ ಧಾರವಾಡದಲ್ಲಿ. ನಂತರ ಅವರ ಕುಟುಂಬ ಪೂನಾದಲ್ಲಿ ನೆಲೆಸಿತು. ತಂದೆ ಕಿರ್ಕಿಯ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ, 112ನೇ ಇನ್‌ಫ್ಯಾಂಟ್ರಿ ರೆಜಿಮೆಂಟಿನಲ್ಲಿ ಕೆಲಸ ಮಾಡಿದ್ದರು. ಪಲ್ವಾಣ್ ಎಂಬ ಹಳ್ಳಿಯ ಮೂಲದವರಾದ್ದರಿಂದ ಪಲ್ವಣಕರ್ ಹೆಸರು ಬಂತು. ಬಾಲು ಹೆಚ್ಚು ವಿದ್ಯಾಭ್ಯಾಸ ಪಡೆಯಲಿಲ್ಲ. ಆತ ಮೊದಲ ವೃತ್ತಿಯನ್ನಾರಂಭಿಸಿದ್ದು ಪೂನಾದ ಪಾರ್ಸಿ ಕ್ರಿಕೆಟ್ ಕ್ಲಬ್‌ನಲ್ಲಿ. ಕ್ರಿಕೆಟ್ ಪಿಚ್ ಸರಿಯಾಗಿಡುವುದು, ಎಲ್ಲಾದರೊಮ್ಮೆ ಕ್ಲಬ್ ಸದಸ್ಯರಿಗೆ ಬೌಲ್ ಮಾಡುವುದು ಅವರ ಕೆಲಸ. ಹೀಗೆ ತಿಂಗಳಿಗೆ ಮೂರು ರೂಪಾಯಿ ಸಂಬಳಕ್ಕೆ ಕೆಲಸ ಮಾಡುತ್ತಿದ್ದ ಬಾಲು 1892ರ ಹೊತ್ತಿಗೆ ಪೂನಾದ ಯೂರೋಪಿಯನ್ ಕ್ಲಬ್‌ನಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿಯೂ ಪಿಚ್ ಹರಡುವುದು, ಗುಡಿಸುವುದು, ಅಭ್ಯಾಸಕ್ಕೆ ನೆಟ್ ಕಟ್ಟುವುದು ಮತ್ತು ಟೆನಿಸ್ ಕೋರ್ಟ್‌ಗೆ ಮಾರ್ಕ್ ಮಾಡುವುದು ಅವರ ಕೆಲಸ. ಅಲ್ಲಿ ಸಂಬಳ ಕೊಂಚ ಹೆಚ್ಚಾಗಿ ತಿಂಗಳಿಗೆ 4 ರೂಪಾಯಿಯಷ್ಟಾಯಿತು.

ನೆಟ್ ಅಭ್ಯಾಸದ ವೇಳೆ ಟ್ರಾಸ್ ಎಂಬ ಯೂರೋಪಿಯನ್ ಆಟಗಾರ ಬಾಲುವಿಗೆ ಬೌಲ್ ಮಾಡುವಂತೆ ಉತ್ತೇಜಿಸಿದ. ಅವರ ನಿಧಾನಗತಿಯ ಎಡಗೈ ಬೌಲಿಂಗ್ ಉಳಿದ ಆಟಗಾರರಿಗೂ ಪ್ರಿಯವಾಗಿ ಅವರು ತಮಗೂ ಬೌಲ್ ಮಾಡುವಂತೆ ಕೇಳುತ್ತಿದ್ದರು. ನಾಯಕರಾಗಿದ್ದ, ಉತ್ತಮ ಬ್ಯಾಟ್ಸ್‌ಮನ್ ಆಗಿದ್ದ ಜೆ.ಜಿ.ಗ್ರೆಗ್ ಪ್ರತಿ ಸಾರಿ ಅವರನ್ನು ಔಟ್ ಮಾಡಿದಾಗಲೂ ಬಾಲುವಿಗೆ ಎಂಟಾಣೆ ಭಕ್ಷೀಸು ಕೊಡುತ್ತಿದ್ದರು. ಹೀಗೆ ಯೂರೋಪಿಯನ್ನರಿಗೆ ಗಂಟೆಗಟ್ಟಲೆ ಬೌಲ್ ಮಾಡಿ ಬೌಲಿಂಗ್ ಕರಗತ ಮಾಡಿಕೊಂಡರೂ ಬ್ಯಾಟ್ ಮಾಡಲು ಯಾರೂ ಪ್ರೋತ್ಸಾಹಿಸಲಿಲ್ಲ. ಬ್ಯಾಟಿಂಗ್ ಏನಿದ್ದರೂ ಮೇಲ್ವರ್ಗದವರ ಸೊತ್ತು ಎಂಬ ಭಾವನೆ ಚಾಲ್ತಿಯಲ್ಲಿದ್ದ ಕಾಲ ಅದು.

ಆಗ ಕ್ರಿಕೆಟ್ ಕ್ಲಬ್‌ಗಳು ಧರ್ಮಾಧಾರಿತವಾಗಿ ನಡೆಯುತ್ತಿದ್ದವು. ಹಿಂದೂ ತಂಡ, ಯೂರೋಪಿಯನ್ ತಂಡ, ಪಾರ್ಸಿ ತಂಡ, ಮುಸ್ಲಿಂ ತಂಡ ಹೀಗೆ ನಾಲ್ಕು ಪ್ರಮುಖ ತಂಡಗಳು ಕ್ರಿಕೆಟ್ ಆಡುತ್ತಿದ್ದವು. ಪೂನಾದ ಹಿಂದೂ ತಂಡ ಮತ್ತು ಯೂರೋಪಿಯನ್ ತಂಡಗಳ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಯೂರೋಪಿಯನ್

ಕ್ರಿಕೆಟ್ ಇತಿಹಾಸದ ಕುರಿತು 'ಎ ಕಾರ್ನರ್ ಆಫ್ ಎ ಫಾರಿನ್ ಫೀಲ್ಡ್' ಎಂಬ ಪುಸ್ತಕ ಬರೆದ ರಾಮಚಂದ್ರ ಗುಹಾ ಪ್ರಕಾರ ಭಾರತದ ಮೊದಲ ಶ್ರೇಷ್ಠ ಕ್ರಿಕೆಟರ್ ಬಾಲು. ಆತ ಆಟಗಾರನಾಗಿಯಷ್ಟೇ ಅಲ್ಲ, ಶೋಷಿತ ಸಮುದಾಯಗಳ ಕುರಿತೂ ಕೆಲಸ ಮಾಡಿದ್ದರಿಂದ ಹಾಗೂ ಸಂಪೂರ್ಣ ಅವಜ್ಞೆಗೊಳಗಾಗಿದ್ದರಿಂದ ತನ್ನ ಗಮನ ಸೆಳೆದುದಾಗಿ ಹೇಳಿಕೊಂಡಿದ್ದಾರೆ. ಅವರ ಕುರಿತ ದಾಖಲೆಗಳನ್ನು ಕಷ್ಟಪಟ್ಟು ಕಲೆಹಾಕಿ ತನ್ನ ಪುಸ್ತಕದಲ್ಲಿ ನಾಲ್ಕು ಅಧ್ಯಾಯಗಳನ್ನು ಗುಹಾ ಬರೆದಿದ್ದಾರೆ. ಅವರ ಕುರಿತು ನೆಟ್ ಮತ್ತು ಗುಹಾ ಪುಸ್ತಕದಿಂದ ಆಧಾರಿತ ಮಾಹಿತಿ ಇಲ್ಲಿದೆ:

ಕ್ಯಾಪ್ಟನ್ ಗ್ರೆಗ್ ಬಾಲುವನ್ನು ತಮ್ಮ ತಂಡದಲ್ಲಿ ಸೇರಿಸಿಕೊಳ್ಳಲು ಉತ್ಸುಕರಾಗಿದ್ದರು. ಹಿಂದೂ ತಂಡದವರಿಗೆ ಪ್ರತಿಭಾನ್ವಿತ ಬಾಲೂವನ್ನು ಬೌಲರ್ ಆಗಿ ತೆಗೆದುಕೊಳ್ಳಬೇಕೋ ಬೇಡವೋ ಎಂಬ ದ್ವಂದ್ವ. ಬ್ರಾಹ್ಮಣ ಆಟಗಾರರು ಬಾಲು ಸೇರ್ಪಡೆಗೆ ವಿರುದ್ಧವಾಗಿದ್ದರು. ಆದರೆ ಕೆಲ ತೆಲುಗು ಆಟಗಾರರು ಅವರನ್ನು ಸೇರಿಸಿಕೊಳ್ಳಬೇಕೆಂದು ಒತ್ತಾಯ ತಂದಾಗ ಹಿಂದೂ ತಂಡದಲ್ಲಿ ಸೇರಿಸಿಕೊಳ್ಳಲಾಯಿತು.

ಹೀಗೆ ಕ್ರಿಕೆಟ್ ಮೈದಾನಕ್ಕಿಳಿದ ಬಾಲು, ಮೈದಾನದಲ್ಲಿ ಉಳಿದವರ ಸರಿಸಮವಾಗಿ ಕ್ರಿಕೆಟ್ ಆಡುತ್ತಿದ್ದರು. ಆದರೆ ವಿರಾಮ ಮತ್ತು ಊಟದ ಸಮಯದಲ್ಲಿ ಯೂರೋಪಿಯನ್ನರಿಂದ ಮತ್ತು ಹಿಂದೂಗಳಿಂದ ಪ್ರತ್ಯೇಕಿಸಲ್ಪಡುತ್ತಿದ್ದರು. ಅವರ ಸಹ ಆಟಗಾರರು ಪೆವಿಲಿಯನ್‌ನಲ್ಲಿ ಚೈನಾ ಡಿಷ್ ಪಾತ್ರೆಗಳಲ್ಲಿ ಊಟ ಮಾಡುತ್ತಿದ್ದರೆ, ಬಾಲು ಮಣ್ಣಿನ ತಾಟು ಲೋಟಗಳಲ್ಲಿ ಉಂಡು ಅವನ್ನು ಬಿಸಾಡಬೇಕಿತ್ತು. ಈ ತಾರತಮ್ಯದಿಂದ ವಿಚಲಿತರಾಗದೇ ಉತ್ತಮವಾಗಿ ಬೌಲ್ ಮಾಡಿ ಹಲವು ವಿಕೆಟ್ ಗಳಿಸಿದ ಬಾಲು ಕೆಲ ಪಂದ್ಯಗಳ ಗೆಲುವಿಗೂ ಕಾರಣರಾದರು. ಹಿಂದೂ ಕ್ಲಬ್ ಸದಸ್ಯರ ಸ್ನೇಹ ಗಳಿಸಿದ ಅವರು ತಮ್ಮ ಪ್ರತಿಭೆಯಿಂದ ಪೂನಾ ಕ್ರಿಕೆಟ್ ವಲಯದಲ್ಲಿ ಗೌರವಾನ್ವಿತ ಸ್ಥಾನ ಪಡೆದರು. ಆದರೆ ಪೂನಾ ಪ್ರದೇಶವನ್ನು ಬಾಧಿಸುತ್ತಿದ್ದ ಪ್ಲೇಗ್ ಹಾಗೂ ದೊಡ್ಡ ನಗರದಲ್ಲಿ ಸಿಗಬಹುದಾದ ಹೆಚ್ಚಿನ ಅವಕಾಶಗಳು 1896ರಲ್ಲಿ ಬಾಲು ಕುಟುಂಬ ಸಮೇತ ಮುಂಬೈಗೆ ವಲಸೆ ಹೋಗಲು ಕಾರಣವಾದವು. ಅಲ್ಲಿ ಸೈನ್ಯ ಸೇರಿದ ಬಾಲು ಹೊಸದಾಗಿ ಶುರುವಾಗಿದ್ದ ಪರಮನದಾಸ್ ಜೀವನ್‌ದಾಸ್ ಹಿಂದೂ ಜಿಮ್ಖಾನಾ ಕ್ರಿಕೆಟ್ ಕ್ಲಬ್‌ಗಾಗಿ ಕ್ರಿಕೆಟ್ ಆಡಿದರು. ಅಲ್ಲೂ ತಾರತಮ್ಯ ಎದುರಿಸಬೇಕಾಯಿತು. ಕೆಲ ದಿನಗಳ ನಂತರ ಸೈನ್ಯದ ಕೆಲಸ ಬಿಟ್ಟು ರೈಲ್ವೆ ಸೇರಿದರು. ರೈಲ್ವೆ ತನ್ನ ತಂಡದಲ್ಲಿ ಮಾತ್ರವಲ್ಲ, ಜಿಮ್ಖಾನಾಗೂ ಆಡಲು ಒಪ್ಪಿಗೆ ನೀಡಿತು.

1906 ಮತ್ತು 1907ರ ಬಾಂಬೆ ಜಿಮ್ಖಾನಾ ಮತ್ತು ಯೂರೋಪಿಯನ್ ತಂಡಗಳ ನಡುವಿನ ಆಟದಲ್ಲಿ ಬಾಲು ಆಡಿದರು. ಅದರಲ್ಲಿ ಹಿಂದೂಗಳು ಯೂರೋಪಿಯನ್ನರನ್ನು 109 ಮತ್ತು 238 ರನ್‌ಗಳಿಂದ ಸೋಲಿಸಿದರು. ದೇಶೀ ತಂಡದ ಈ ಗೆಲುವು ಮಾಧ್ಯಮಗಳಲ್ಲಿ ಎರಡು ರೀತಿ ವಿಶ್ಲೇಷಣೆಗೊಳಪಟ್ಟಿತು: ಜಾತಿ ಪೂರ್ವಾಗ್ರಹ ತೊರೆದ ಹಿಂದೂ ತಂಡ ಗೆದ್ದಿತು ಎಂದು ಕೆಲವರು ಗ್ರಹಿಸಿದರೆ, ರಾಷ್ಟ್ರೀಯ ತಂಡ ಯೂರೋಪಿಯನ್ನರನ್ನು ಗೆದ್ದು ರಾಷ್ಟ್ರೀಯತೆಯನ್ನು ಎತ್ತಿಹಿಡಿಯಿತು ಎಂದು ಮತ್ತೆ ಕೆಲವರು ಬರೆದರು. 1911ರಲ್ಲಿ ಭಾರತ ತಂಡ ಇಂಗ್ಲೆಂಡ್ ಪ್ರವಾಸಕ್ಕಾಗಿ ತೆರಳಿತು. ಈ ತಂಡ ಧರ್ಮಾತೀತವಾಗಿ ಹಿಂದೂ, ಮುಸ್ಲಿಂ, ಪಾರ್ಸಿ ಮತ್ತು ಸಿಖ್ ಆಟಗಾರರನ್ನೊಳಗೊಂಡಿತ್ತು. ಫಲಿತಾಂಶದ ಲೆಕ್ಕದಲ್ಲಿ ಈ ಪ್ರವಾಸ ವಿಫಲ, ಆದರೆ ಬಾಲು ಮಟ್ಟಿಗೆ ಅದು ಯಶಸ್ವಿ ಪ್ರವಾಸವಾಗಿತ್ತು. ಈ ಪ್ರವಾಸದಲ್ಲಿ 114 ವಿಕೆಟ್ ಗಳಿಸಿದ ಅವರು 75 ವಿಕೆಟ್‌ಗಳನ್ನು ಮೊದಲ ದರ್ಜೆ ಆಟದಲ್ಲಿ 18.84ರ

ಮುಹೂರ್ತ

ಸಿಹಿ ಬೆಲ್ಲವಾಗಲು
ಗಾಣದಲ್ಲಿ ನುಗ್ಗಿ
ಒಲೆಯಲ್ಲಿ ಮಿಂದು
ಬೆಂದು ಬರಬೇಕು

ಎಲ್ಲೋ ಹೊಲದಲ್ಲಿ
ಬೆಳೆವ ಎಳ್ಳು
ಕೂಡಿ ಬೆರೆಯಲು
ಸಂಕ್ರಾಂತಿಯೇ ಬರಬೇಕು



ಜರಗನಹಳ್ಳಿ ಶಿವಶಂಕರ್

ರನ್ ಸರಾಸರಿಯಲ್ಲಿ ಗಳಿಸಿದ್ದರು. ಇದು ಉತ್ತಮ ಸಾಧನೆಯೇ.

ಮುಂಬಯಿಯ ಚತುಷ್ಕೋನ ಕ್ರಿಕೆಟ್ ಸರಣಿ (ಕ್ವಾಡ್ರಾಂಗ್ಯುಲರ್ ಸೀರೀಸ್) ಆಗ ಪ್ರಸಿದ್ಧವಾಗಿತ್ತು. ಅದು ಹಿಂದೂ, ಪಾರ್ಸಿ, ಮುಸ್ಲಿಂ ಮತ್ತು ಯೂರೋಪಿಯನ್ ತಂಡಗಳ ನಡುವೆ ಪ್ರತಿವರ್ಷ ನಡೆಯುತ್ತಿತ್ತು. ಬಾಲು 1912ರಿಂದ 1919ರವರೆಗೆ ಚತುಷ್ಕೋನ ಸರಣಿಯಲ್ಲಿ ಪಾಲ್ಗೊಂಡಿದ್ದರು. ಹಿಂದೂ ತಂಡದ ನಾಯಕನಾಗಲು ಅರ್ಹತೆ ಪಡೆದಿದ್ದರೂ ಕೆಲವರಿಂದ ಒತ್ತಾಯ, ಮತ್ತೆ ಕೆಲವರಿಂದ ವಿರೋಧ ವ್ಯಕ್ತವಾಗುತ್ತಿತ್ತು. ಜಾತಿ ಮುಖ್ಯ ಅಡಚಣೆಯಾಗಿ ಕೆಲಸ ಮಾಡುತ್ತಿತ್ತು. 1920ರಲ್ಲಿ ಮುಸ್ಲಿಂ ತಂಡದ ವಿರುದ್ಧದ ಪಂದ್ಯದಲ್ಲಿ ಬಾಲು ಅವರನ್ನು ಕೈಬಿಡಲಾಗಿತ್ತು. ಆದರೆ ಆಯ್ಕೆ ಸಮಿತಿ ಸಭೆಯ ನಂತರ ಉಳಿದ ಆಟಗಾರರು, ಕ್ಲಬ್ ಸದಸ್ಯರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ದೇವಧರ್ ಅವರನ್ನು ಉಪನಾಯಕ ಹುದ್ದೆಯಿಂದ ಕೆಳಗಿಳಿಸಿ ಬಾಲುವನ್ನು ಆ ಸ್ಥಾನಕ್ಕೆ ತರಬೇಕೆಂದು ಒತ್ತಾಯಿಸಿದರು. ನಂತರ ಪಾರ್ಸಿಗಳ ವಿರುದ್ಧ ನಡೆದ ಪಂದ್ಯದಲ್ಲಿ ದೇವಧರ್ ಬದಲು ಉಪನಾಯಕರಾಗಿದ್ದ ಎಂ.ಡಿ.ಪೈ ಉದ್ದೇಶಪೂರ್ವಕವಾಗಿ ಮೈದಾನ ತೊರೆದು ತನ್ನ ಅನುಪಸ್ಥಿತಿಯಲ್ಲಿ ಬಾಲು ಉಪನಾಯಕನಾಗಿ ಆಡಲು ಕಾರಣರಾದರು. ಹೀಗೆ ಉಚ್ಚಜಾತಿಯವರಿಂದ ವಿರೋಧ ಎದುರಿಸುತ್ತಿರುವಾಗಲೇ ಬಾಲು ಬೆಂಬಲವನ್ನೂ ಪಡೆದರು.

1920ರಲ್ಲಿ ನಾಯಕ ಎಂ.ಡಿ.ಪೈ ಅಸ್ವಸ್ಥರಾಗಿದ್ದಾಗ ಸೀನಿಯರ್ ಆಟಗಾರ ಬಾಲು ನಾಯಕರಾಗಬೇಕಿತ್ತು. ಆದರೆ ದೇವಧರ್ ಅವರನ್ನು ನಾಯಕರನ್ನಾಗಿ ಮಾಡಿ ಬಾಲುವನ್ನು ತಂಡದಿಂದ ಕೈಬಿಡಲಾಯಿತು. ಈ ವೇಳೆಗೆ ಬಾಲು ಸೋದರರು ಕ್ರಿಕೆಟ್ ಆಡತೊಡಗಿದ್ದರು. ಶಿವರಾಮ್, ವಿಠಲ್ ಮತ್ತು ಗಣಪತ್ ಪಲವಣಕರ್ ಚತುಷ್ಕೋನ ಸರಣಿಯಲ್ಲಿ ಹಿಂದೂ ತಂಡಕ್ಕಾಗಿ ಆಡಿದ್ದರು. ಇವರನ್ನೆಲ್ಲ ಬಿಟ್ಟು ದೇವಧರ್ ನಾಯಕರಾದಾಗ ಕ್ರಿಕೆಟ್ ಪ್ರೇಮಿಗಳು ಪ್ರತಿಭಟಿಸಿದರು. ತಂಡದಲ್ಲಿದ್ದ ಶಿವರಾಮ ಮತ್ತು ವಿಠಲ್ ತಂಡದಿಂದ ಹಿಂತೆಗೆದು ಆಯ್ಕೆದಾರರಿಗೆ ಬಹಿರಂಗ ಪತ್ರ ಬರೆದು ಕ್ರೀಡಾ ಮನೋಭಾವರಹಿತ ನಡವಳಿಕೆ ಮತ್ತು ತಪ್ಪು ಆಯ್ಕೆಗಾಗಿ ಆಯ್ಕೆ ಸಮಿತಿಯನ್ನು ಟೀಕಿಸಿದರು. ಅದೇ ವೇಳೆಗೆ ಗಾಂಧಿ ಅಸ್ಪೃಶ್ಯತಾ ವಿರೋಧಿ ಆಂದೋಲನ ಶುರುಮಾಡಿದ್ದರು. ಸುಧಾರಣೆಯ ಹುಮ್ಮಸ್ಸಿನಲ್ಲಿದ್ದ ಜನ ಈ ಸೋದರರಿಗೆ ಧನಸಂಗ್ರಹ ಮಾಡಿ ಕೊಟ್ಟಿದ್ದಲ್ಲದೆ ಅವರನ್ನು ತಂಡದಲ್ಲಿ ಮತ್ತೆ ಸೇರಿಸಿಕೊಳ್ಳಬೇಕೆಂದು ಮನವಿ ಸಲ್ಲಿಸಿದರು. ಎಂ.ಡಿ.ಪೈ ವಾಪಸಾದ ಕೂಡಲೇ ಮೂವರೂ ಸೋದರರು ತಂಡದಲ್ಲಿ ಮರಳಿ ಸ್ಥಾನ ಪಡೆದರು. 1923ರಲ್ಲಿ ಬಾಲು ಸೋದರ ವಿಠಲ್ ಪಲವಣಕರ್ ಹಿಂದೂ ತಂಡದ ನಾಯಕರಾಗಿದ್ದರು. ವಿಠಲ್ ಪಲವಣಕರ್ ನಾಯಕನಾಗಿ 1923ರಲ್ಲಿ ಚತುಷ್ಕೋನ ಸರಣಿ ಗೆದ್ದಾಗ ಹರ್ಷಗೊಂಡ ಆಟಗಾರರು ವಿಠಲರನ್ನು ತಮ್ಮ ಹೆಗಲ ಮೇಲೆ ಹೊತ್ತು ಮೈದಾನವನ್ನು ಸುತ್ತಿಬಂದರಂತೆ. ಹೀಗೆ ಆಟದ ಮೈದಾನದ ಮಟ್ಟಿಗೆ ಮೇಲ್ಜಾತಿ ಮನಸ್ಸುಗಳು ದಲಿತ ನಾಯಕತ್ವವನ್ನು ಒಪ್ಪಿಕೊಂಡು ಆತನ ಯಶಸ್ಸಿಗೆ ಸಂಭ್ರಮಿಸಿದ್ದವು.

ಇಂಥ ಎಲ್ಲ ಏಳುಬೀಳು, ಗೊಂದಲ, ಬೆಂಬಲಗಳ ನಡುವೆ ಕ್ರಿಕೆಟ್ ಆಡಿದ ಪಿ. ಬಾಲು ಅವರ ಮೊದಲ ದರ್ಜೆ ಕ್ರಿಕೆಟ್ ಅಂಕಿಅಂಶಗಳು ಹೀಗಿವೆ:

ಪಂದ್ಯಗಳು: 33
ರನ್: 753
ಅರ್ಧ ಶತಕ: 3
ಅತಿ ಹೆಚ್ಚು ಸ್ಕೋರ್: 75
ಬೌಲಿಂಗ್: 1072 ಓವರ್‌ಗಳು
ವಿಕೆಟ್: 179
ಬೌಲಿಂಗ್ ಸರಾಸರಿ: 15.21
ಇನ್ನಿಂಗ್ಸ್ ಒಂದರಲ್ಲಿ 5 ವಿಕೆಟ್: 17 ಸಲ
ಪಂದ್ಯವೊಂದರಲ್ಲಿ 10 ವಿಕೆಟ್: 4
ಅತ್ಯುತ್ತಮ ಬೌಲಿಂಗ್: 8/103
ಕ್ಯಾಚ್: 12

1930ರ ಹೊತ್ತಿಗೆ ನಾಗರಿಕ ಅಸಹಕಾರ ಹಾಗೂ ನಂತರ ಉಪ್ಪಿನ ಸತ್ಯಾಗ್ರಹ ಶುರುವಾದ ಹಿನ್ನೆಲೆಯಲ್ಲಿ 1933ರ ತನಕ ಮುಂಬಯಿಯಲ್ಲಿ ಚತುಷ್ಕೋನ ಸರಣಿ ನಡೆಯಲಿಲ್ಲ. ಈ ವೇಳೆಗೆ ಅದು ಪಂಚಕೋನ ಸರಣಿಯಾಗಿ ಐದನೆಯ ತಂಡವು 'ಇತರೆ' ಎಂದು ಕರೆಸಿಕೊಂಡಿತ್ತು. 1934ರಲ್ಲಿ ಮತ್ತೆ ಶುರುವಾದಾಗ ರಾಷ್ಟ್ರೀಯವಾದಿಗಳಿಂದ ಈ ಸರಣಿ ವಿರೋಧಕ್ಕೊಳಗಾಯಿತು. ಮುಸ್ಲಿಮರು ಧರ್ಮದ ಆಧಾರದ ಮೇಲೆ ಒಂದು ಪ್ರತ್ಯೇಕ ತಂಡ ರಚಿಸಿಕೊಂಡು ಆಡಬಲ್ಲರಾದರೆ ಅವರು ಅದೇ ಉಸಿರಿನಲ್ಲಿ ಪ್ರತ್ಯೇಕ ದೇಶ ಬೇಕೆಂದೂ ಕೇಳಬಹುದೆಂದು ಕ್ರಿಕೆಟ್‌ನಲ್ಲಿದ್ದ ಗಾಂಧಿವಾದಿಗಳು ವಾದಿಸಿದರು. ಧರ್ಮಾಧಾರಿತ ಕ್ರಿಕೆಟ್ ತಂಡಗಳಿರಬಾರದೆಂದು 1940ರ ವೇಳೆಗೆ ಗಾಂಧೀಜಿಯಿಂದ ಹೇಳಿಕೆ ಕೊಡಿಸುವಲ್ಲಿ ಅವರು ಸಫಲರಾದರು. ಮುಂಬಯಿಯ ಕ್ರೀಡಾಪ್ರೇಮಿ ಜನತೆ ತಮ್ಮ ಕ್ರೀಡಾ ನೀತಿ ಸಂಹಿತೆಯನ್ನು ಬದಲಿಸಿಕೊಳ್ಳಬೇಕೆಂದೂ, ಧರ್ಮಾಧಾರಿತ ಪಂದ್ಯಗಳನ್ನು ಆಡುವುದನ್ನು ನಿಲ್ಲಿಸಬೇಕೆಂದೂ ಗಾಂಧಿ ಹೇಳಿದರು. 'ಕಾಲೇಜು ಮತ್ತು ಸಂಸ್ಥೆಗಳ ನಡುವೆ ಪಂದ್ಯ ನಡೆಯುವುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಹಿಂದೂ, ಪಾರ್ಸಿ, ಮುಸ್ಲಿಂ, ಯೂರೋಪಿಯನ್ ಎಲೆವೆನ್ ಎಂಬ ಧಾರ್ಮಿಕ ತಂಡಗಳು ಆಟ ಆಡುವುದರ ಅರ್ಥ ನನಗಿನ್ನೂ ಆಗಿಲ್ಲ. ಕ್ರೀಡಾ ಮನೋಭಾವ ತೋರಿಸದ ಈ ತೆರನ ವಿಭಜನೆ ಕ್ರೀಡಾ ಭಾಷೆಗೆ, ಕ್ರೀಡಾ ಸಂಹಿತೆಗೇ ಕಳಂಕ ಎಂದು ಭಾವಿಸಬೇಕು' ಎಂದು ಗಾಂಧಿ ಹೇಳಿದರು. ಆದರೆ ಪಂಚಕೋನ ಸರಣಿ ಆಯೋಜಿಸಿದ್ದ ಶಕ್ತಿಗಳು ಎಷ್ಟು ಪ್ರಬಲವಾಗಿದ್ದವೆಂದರೆ 1946ರವರೆಗೂ ಸರಣಿ ಹಾಗೇ

ತನ್ನ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೂ, ಗಾಂಧಿ ಕ್ಯಾಂಪಿನಲ್ಲಿ ಗುರ್ತಿಸಿಕೊಂಡಿದ್ದರೂ ಅಂಬೇಡ್ಕರ್ ಬಾಲುವಿನ ಮೇಲೆ ವೈಯಕ್ತಿಕ ದ್ವೇಷ ಸಾಧಿಸಲಿಲ್ಲ. ಮೇಲ್ಜಾತಿ ಹಿತಾಸಕ್ತಿಗಳಿಗೆ ದಲಿತ ರಾಜಕಾರಣ ಹೇಗೆ ಬಲಿಯಾಗಬಹುದೆಂದು ಊಹಿಸಿದ್ದರೋ ಅದಕ್ಕೆ ಉದಾಹರಣೆಯಾಗಿ ಬಾಲು ಅವರ ಕಣ್ಣೆದುರೇ ಇದ್ದರು.

ಪೂನಾ ಒಪ್ಪಂದ ಸಮಯದಲ್ಲಿ ಬಾಲು ತಾವೂ ಶೋಷಿತ ಸಮುದಾಯಗಳ ಪ್ರತಿನಿಧಿ, ಆದ್ದರಿಂದ ತಮಗೂ ತಮ್ಮ ನಿಲುವುಗಳನ್ನು ವಿವರಿಸುವ ಹಕ್ಕಿದೆ ಎಂದು ಎಂ.ಸಿ. ರಾಜಾ ಜೊತೆ ಸೇರಿ ಪ್ರತಿಪಾದಿಸಿದರು. ಪೂನಾ ಒಪ್ಪಂದದ ಸಮಯದಲ್ಲಿ ಅಂಬೇಡ್ಕರ್ ಜೊತೆಗೆ ಇತರ ದಮನಿತ ಸಮುದಾಯಗಳ ನಾಯಕರೂ ಇದ್ದರು ಎಂದು ಎಂ.ಸಿ. ರಾಜಾ ಮತ್ತು ಪಿ. ಬಾಲು ಅವರನ್ನು ಹೆಸರಿಸಲಾಗುತ್ತದೆ. ಆದರೆ ಆ ಪಿ. ಬಾಲು ಯಾರೆಂದು ಹೆಚ್ಚಿನವರು ಗುರುತಿಸುವುದಿಲ್ಲ.



ಮುಂದುವರೆಯಿತು. ಮುಂದೆ ಪಾಕಿಸ್ತಾನವೂ ಹುಟ್ಟಿಕೊಂಡಿತು. ಒಗ್ಗೂಡಿದ ಕ್ರಿಕೆಟ್ ಆಗಲೀ, ಗಾಂಧಿಯಾಗಲೀ ದೇಶವಿಭಜನೆಯನ್ನು ತಡೆಯುವುದು ಸಾಧ್ಯವಾಗಲಿಲ್ಲ.

* * *

ಗಾಂಧಿ ಅಸ್ಪೃಶ್ಯತೆ ವಿರುದ್ಧ ಮಾತೆತ್ತುವ ವೇಳೆಗೆ ಬಾಲು ಸಹಾ ಆಟದಲ್ಲಿ ಜಾತಿ ಗೋಡೆಗಳನ್ನು ಕೆಡವಿ ಮುಂದೆ ಬರುವಲ್ಲಿ ಯಶಸ್ವಿಯಾಗಿದ್ದರು. ಬಾಲು ಸಮುದಾಯದ ಒಳಗೆ ಮತ್ತು ಹೊರಗೆ ಗೌರವಾನ್ವಿತ ವ್ಯಕ್ತಿಯಾಗಿ ಬೆಳೆದರು. ಡಾ.ಬಿ.ಆರ್.ಅಂಬೇಡ್ಕರ್ ಅವರನ್ನೂ ಭೇಟಿಯಾದರು. ದಲಿತರಿಗೆ ಬಾಲು ಹೀರೋ ಇದ್ದಹಾಗೆ ಎಂದು ಅಂಬೇಡ್ಕರ್ ಬಣ್ಣಿಸಿದ್ದರು. ತನಗೂ, ಶೋಷಿತ ಸಮುದಾಯಗಳಿಗೂ ಅವರು ಸ್ಫೂರ್ತಿಯ ಸೆಲೆ ಎಂದೂ ಹೇಳಿದ್ದರು. ಅಂಬೇಡ್ಕರ್ ವಿದ್ಯಾರ್ಥಿಯಾಗಿದ್ದಾಗ ಬೌಲರ್ ಆಗಿ ಹೆಸರು ಗಳಿಸಿದ್ದ ಧೃಢ ಮೈಕಟ್ಟಿನ ಅಸ್ಪೃಶ್ಯ ಜನಾಂಗದ ಬೌಲರ್ ಚಿತ್ರವನ್ನು ಹೆಮ್ಮೆಯಿಂದ ನೋಡುತ್ತಿದ್ದರಂತೆ. ಮುಂಬಯಿಯ ಸಿಡೆನ್‌ಹ್ಯಾಮ್ ಕಾಲೇಜಿನಲ್ಲಿ ಬೋಧಕರಾಗಿ ಕೆಲಸ ಮಾಡುತ್ತಿದ್ದಾಗ ಬಾಲು ಅವರನ್ನು ಸನ್ಮಾನಿಸಲು ಹಾಗೂ ಮುಂಬಯಿ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಅವರ ಯಶಸ್ಸಿಗಾಗಿ ಅಂಬೇಡ್ಕರ್ ಸಭೆಗಳನ್ನು ಏರ್ಪಡಿಸಿದ್ದರು. 'ಶೋಷಿತರು ಎಲ್ಲ ರಂಗಗಳಲ್ಲಿಯೂ ಮುನ್ನೆಲೆಗೆ ಬರಬೇಕು. ಬರೀ ರಾಜಕೀಯದಲ್ಲಷ್ಟೆ ಅಲ್ಲ. ವಿಜ್ಞಾನ, ಕಲೆ, ಸಂಶೋಧನೆ, ರಾಜಕೀಯ, ಸೈನ್ಯ ಹೀಗೆ ಎಲ್ಲ ಕಡೆ ಶೋಷಿತ ವರ್ಗ ತಾನೂ ಸ್ಥಾನಗಳಿಸಿ ಉಳಿದವರ ಜೊತೆ ಸಮಸಮವಾಗಿ ನಿಲ್ಲಬೇಕು' ಎಂದು ಅಂಬೇಡ್ಕರ್ ಯಾವಾಗಲೂ ಹೇಳುತ್ತಿದ್ದರು. 1927–28ರ ಹೊತ್ತಿಗೆ ಹಳ್ಳಿಗಳಲ್ಲಿ



Where the mind is without fear and the head is held high:
Where knowledge is free:
Where the world has not been broken up into fragments by narrow domestic walls:
Where words come out from the depth of truth:
Where tireless striving stretches its arms towards perfection:
Where the clear stream of reason has not lost its way into the dreary desert sand of dead habit:
Where the mind is led forward by thee into ever-widening thought and action -
Into that heaven of freedom my Father, let my country awake."

Rabindranath Tagore



With best Compliments from

Praxis

1038, Kacherakanahalli,
5th Cross Hennur Main Road,
Bangalore 560 084.

ಅಂತರ

ುರಿದರೆ
ಮಂಚ, ಗದ್ದುಗೆ, ಸಿಂಹಾಸನ
ಸೆಚ್ಚಿಂದರೆ
ುರಡು ಮೂರಡಿ ಮೇಲೆ
ಾರಿದರೆ
ೋರಿ, ಸಮಾಧಿ, ಬೃಂದಾವನ
ಸೆಚ್ಚಿಂದರೆ
ುರಡು ಮೂರಡಿ ಕೆಳಗೆ

ವರಗನಹಳ್ಳಿ ಶಿವಶಂಕರ್



ಸಂಘಟನೆಗಾಗಿ ಓಡಾಡುವಾಗಲೂ ಬಾಲು ಬಗೆಗೆ ಹೇಳುತ್ತಿದ್ದರು.

ಆದರೆ ಬರಬರುತ್ತ ಬಾಲು ಮತ್ತು ಅಂಬೇಡ್ಕರ್ ದಾರಿಗಳು ಬೇರೆಯಾದವು. ಅಂಬೇಡ್ಕರರ ಅಸ್ಪೃಶ್ಯತೆ ಿವಾರಣೆ ಮತ್ತು ಜಾತಿವಿನಾಶದ ಮಾರ್ಗಗಳು ಪೂರ್ಣ ಿನ್ನವಾಗಿದ್ದವು. ಬಾಲು ಗಾಂಧಿಯ ಅಸ್ಪೃಶ್ಯತಾ ಿವಾರಣಾ ಕಾರ್ಯಗಳಿಂದ ಸ್ಫೂರ್ತಿಗೊಂಡು ಕಾಂಗ್ರೆಸ್ ಸೇರಿದರು. ಚಮಾರ್ ಸಮುದಾಯಕ್ಕೆ ಸೇರಿದ ಬಾಲು ಅವರನ್ನು ರಾಜಕೀಯ ದಾಳವಾಗಿಯೂ ಕಾಂಗ್ರೆಸ್ ಬಳಸಿಕೊಂಡಿರುವ ಸಾಧ್ಯತೆಯಿದೆ. ರಾಜಕೀಯವಾಗಿ ಮಹಾರ್ ಗುಂಪಿನ ಪ್ರತಿಸ್ಪರ್ಧಿ ಚಮಾರ್ ಸಮುದಾಯ ಎಂದು ಆಗಲೇ ಒಡಕು ಕೇಳಿಬರತೊಡಗಿತ್ತು. ದುಂಡುಮೇಜಿನ ಪರಿಷತ್‌ಗೆ ಲಂಡನ್ನಿಗೆ ತೆರಳುತ್ತಿದ್ದ ಅಂಬೇಡ್ಕರ್ ಸ್ನೇಹಿತನಿಗೆ ಬರೆದ ಪತ್ರದಲ್ಲಿ ಮಹಾರ್–ಚಮಾರ್ ನಡುವಣ ಭಿನ್ನಾಭಿಪ್ರಾಯದಿಂದ ಖೇದಗೊಂಡು ಬರೆದಿದ್ದರು. ಶೋಷಿತ ಸಮುದಾಯ ಒಂದೇ ಗುಂಪಾಗಿ ಒಟ್ಟಾಗಿರಬೇಕೆನ್ನುವುದು ಅವರ ನಿಲುವಾಗಿತ್ತು. ಆದರೆ ಅದಕ್ಕೆ ಅಂಬೇಡ್ಕರ್ ಕಾಲದಲ್ಲಿಯೇ ವಿರೋಧವೂ ಶುರುವಾಗಿ ಭಿನ್ನಮತೀಯ ಬಣಗಳು ಹುಟ್ಟಿಕೊಳ್ಳತೊಡಗಿದ್ದವು.

ಕಾಂಗ್ರೆಸ್ ಸೇರಿದ ಬಾಲು ಗಾಂಧಿ ಕಲ್ಪನೆಯ ಸ್ವರಾಜ್ಯದ ಕಟ್ಟಾ ಪ್ರತಿಪಾದಕರಾದರು. ದಲಿತರನ್ನು ಭಾರತೀಯ ಸಮಾಜದಲ್ಲಿ ಅಂತರ್ಗತಗೊಳಿಸಬೇಕೇ ಹೊರತು ಪ್ರತ್ಯೇಕ ಅಸ್ತಿತ್ವವನ್ನು ಪ್ರೋತ್ಸಾಹಿಸಬಾರದು ಎನ್ನುವುದು ಅವರ ನಿಲುವಾಗಿತ್ತು. ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ಕೇಳುತ್ತ ಬ್ರಿಟಿಷ್ ಸರ್ಕಾರದ ಜೊತೆ ಅಂಬೇಡ್ಕರ್ ಚರ್ಚೆಯಲ್ಲಿ ತೊಡಗಿದ್ದ ಹೊತ್ತಿನಲ್ಲಿ ಬಾಲು ಭಾರತೀಯ ಸಮಾಜದಲ್ಲಿ ದಲಿತರನ್ನು ಲೀನಗೊಳಿಸುವ ಘಾತನಾಡುತ್ತಿದ್ದರು.

ಇಲ್ಲಿ ಅಂಬೇಡ್ಕರ್ ಮತ್ತು ಗಾಂಧಿ ಅವರ ದಲಿತ ವಿಮೋಚನೆ ಕಲ್ಪನೆಗಳ ಮೂಲ ಭಿನ್ನತೆಯನ್ನು ಗುರುತಿಸಬಹುದು. ಅಂಬೇಡ್ಕರ್ ದ್ವಿಮತದಾನ ಪ್ರತಿಪಾದಿಸಿ, ಈ ವಿಶೇಷ ಮತದಾನ ವ್ಯವಸ್ಥೆಯ ಮೂಲಕ ತಮ್ಮ ಸಮುದಾಯದ ಅರ್ಹ ನಾಯಕನನ್ನು ತಾವೇ ಆಯ್ದುಕೊಳ್ಳುವ ದಲಿತರ ಹಕ್ಕಿಗಾಗಿ ಹೋರಾಡುತ್ತಿದ್ದರು. ರಾಜಿಯಾಗದ, ದಲಿತರಿಗಾಗಿಯೇ ರಾಜಕೀಯದಲ್ಲಿರುವುದು ಅವಶ್ಯವಾಗಿರುವ ದಲಿತ ನಾಯಕರನ್ನು ಅಂಥ ವ್ಯವಸ್ಥೆ ಬೆಳೆಸುತ್ತದೆ ಎನ್ನುವುದು ಅಂಬೇಡ್ಕರ್ ನಿಲುವಾಗಿತ್ತು. ದಲಿತ ಮತದಾರರು ದಲಿತೇತರ ಪ್ರತಿನಿಧಿಯನ್ನೂ ದ್ವಿಮತದಾನ ಹಕ್ಕಿನಿಂದ ಚುನಾಯಿಸುತ್ತಿದ್ದುದರಿಂದ ಅವರೂ ದಲಿತ ಹಿತಾಸಕ್ತಿಯನ್ನು ಕಾಯುವ ಅನಿವಾರ್ಯತೆ ಉಂಟಾಗುತ್ತಿತ್ತು. ಹೀಗೆ ಎರಡು ಮತಮೌಲ್ಯ ದೊರಕುತ್ತಿದ್ದ ಕಾರಣ ದಲಿತ ಹಿತಾಸಕ್ತಿ ಉತ್ತಮ ದಲಿತ ನಾಯಕತ್ವದ ಕೈಯಲ್ಲೂ, ದಲಿತೇತರ ರಾಜಕಾರಣಿಯ ಕೈಯಲ್ಲೂ ಸುರಕ್ಷಿತವಾಗಿರುತ್ತದೆ ಎನ್ನುವುದು ಅಂಬೇಡ್ಕರ್ ದೂರದೃಷ್ಟಿಯಾಗಿತ್ತು. ಆದರೆ ಈ ತೆರನ ವಿಭಾಗಿಸುವಿಕೆಯಿಂದ ದಲಿತರು ಸವರ್ಣೀಯರಿಂದ ಇನ್ನಷ್ಟು ಪ್ರತ್ಯೇಕಗೊಂಡು ಕೊನೆಗೆ ದೇಶ ಸಿವಿಲ್‌ವಾರ್‌ನಲ್ಲಿ ನಾಶವಾಗುತ್ತದೆ ಎಂದು ಗಾಂಧಿ ಅದರ ರದ್ದತಿಗೆ ಪಟ್ಟುಹಿಡಿದರು. ಅಸ್ಪೃಶ್ಯತೆಯನ್ನು ಕೊನೆಗೊಳಿಸಲು ಇರುವ ಒಂದೇ ದಾರಿ ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ಅಂತರ್ಗತಗೊಳಿಸುವುದೇ ಹೊರತು ಪ್ರತ್ಯೇಕಿಸುವುದಲ್ಲ ಎನ್ನುವುದು ಗಾಂಧಿ ನಿಲುವು. ಬ್ರಿಟಿಷರು ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಶೋಷಿತ ಸಮುದಾಯಗಳಿಗೆ ಕೊಡಲು ಒಪ್ಪಿದ ವಿಶೇಷ ಮತದಾನ ಹಕ್ಕನ್ನು ಶತಾಯಗತಾಯ ವಿರೋಧಿಸಿದ ಗಾಂಧಿ, ಅದಕ್ಕೆ ಅಂಬೇಡ್ಕರ್ ಮತ್ತು ಬ್ರಿಟಿಷರನ್ನು ಒಂದೇ ಹೊಡೆತಕ್ಕೆ ಒಪ್ಪಿಸಲು ಉಪವಾಸ ಕುಳಿತರು. ಪೂನಾದ ಯರವಾಡಾ ಜೈಲಿನಲ್ಲಿ ಆಮರಣಾಂತ ಉಪವಾಸ ಕುಳಿತ ಮಹಾತ್ಮನನ್ನೂ, ತನ್ನ ಸಮುದಾಯದ ಸುರಕ್ಷತೆಯನ್ನೂ ಗಮನದಲ್ಲಿಟ್ಟುಕೊಂಡ ಅಂಬೇಡ್ಕರ್ ಇಷ್ಟವಿಲ್ಲದಿದ್ದರೂ ದ್ವಿಮತದಾನ ಹಕ್ಕು ಬಿಟ್ಟುಕೊಟ್ಟು ವಿಶೇಷ ಮೀಸಲು ಸ್ಥಾನಗಳಿಗೆ ತೃಪ್ತಿಪಡುವಂತಾಯಿತು. ಅಂಬೇಡ್ಕರ್ ಹಾಗೂ ಗಾಂಧೀವಾದಿಗಳ ನಡುವೆ ತುಂಬಲಾಗದಷ್ಟು ಆಳದ ಕಂದರ ಉಂಟಾಗಲು ಇವೆಲ್ಲ ಕಾರಣವಾದವು.

ಪೂನಾ ಒಪ್ಪಂದ ಸಮಯದಲ್ಲಿ ಬಾಲು ತಾವೂ ಶೋಷಿತ ಸಮುದಾಯಗಳ ಪ್ರತಿನಿಧಿ, ಆದ್ದರಿಂದ ತಮಗೂ ತಮ್ಮ ನಿಲುವುಗಳನ್ನು ವಿವರಿಸುವ ಹಕ್ಕಿದೆ ಎಂದು ಎಂ.ಸಿ.ರಾಜಾ ಜೊತೆ ಸೇರಿ ಪ್ರತಿಪಾದಿಸಿದರು. ಪೂನಾ ಒಪ್ಪಂದದ ಸಮಯದಲ್ಲಿ ಅಂಬೇಡ್ಕರ್ ಜೊತೆಗೆ ಇತರ ದಮನಿತ ಸಮುದಾಯಗಳ ನಾಯಕರೂ ಇದ್ದರು ಎಂದು ಎಂ.ಸಿ.ರಾಜಾ ಮತ್ತು ಪಿ.ಬಾಲು ಅವರನ್ನು ಹೆಸರಿಸಲಾಗುತ್ತದೆ. ಆದರೆ ಆ ಪಿ. ಬಾಲು ಯಾರೆಂದು ಹೆಚ್ಚಿನವರು ಗುರುತಿಸುವುದಿಲ್ಲ. ಪೂನಾ ಒಪ್ಪಂದದ ನಂತರ 1933ರ ಮುಂಬಯಿ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಹಿಂದೂ ಮಹಾಸಭಾ ಟಿಕೆಟ್‌ನಿಂದ ಬಾಲು ಚುನಾವಣೆಗೆ ನಿಂತರು. ಅವರ ವಿರುದ್ಧ ಮೇಲ್ಜಾತಿ ವ್ಯಕ್ತಿಯೊಬ್ಬ ನಿಂತು ಬಾಲು 900 ಮತಗಳ ಅಂತರದಲ್ಲಿ (2179/3030) ಸೋತರು. ನಂತರ ಕಾಂಗ್ರೆಸ್ ಬಾಲು ಅವರನ್ನು 1937ರಲ್ಲಿ ಬಾಂಬೆ ಲೆಜಿಸ್ಲೇಟಿವ್ ಅಸೆಂಬ್ಲಿ ಚುನಾವಣೆಗೆ ಅಂಬೇಡ್ಕರ್ ಎದುರು ನಿಲ್ಲಿಸಿತು. ರಾಜಕೀಯದ ಎಲ್ಲ ವರಸೆಗಳನ್ನು ಆ ವೇಳೆಗೆ ಕರಗತ ಮಾಡಿಕೊಂಡಿದ್ದ ಗಾಂಧಿ ಹಾಗೂ ಕಾಂಗ್ರೆಸ್ ದಲಿತರ ಒಳಪಂಗಡಗಳ ಭಿನ್ನತೆ ಮುನ್ನೆಲೆಗೆ ಬರುವಂತೆ ನೋಡಿಕೊಂಡರು. ಆದರೆ ಅಲ್ಲೂ ಸೋಲನುಭವಿಸಿದ (11225 ಮತ, ಅಂಬೇಡ್ಕರ್ 13245 ಮತಗಳು) ಬಾಲು ರಾಜಕೀಯ ಜೀವನ ಯಾವುದೇ ಗುರುತು ಉಳಿಸದೆ ಅಲ್ಲಿಗೆ ಮುಕ್ತಾಯವಾಯಿತು.

ತನ್ನ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೂ, ಗಾಂಧಿ ಕ್ಯಾಂಪಿನಲ್ಲಿ ಗುರ್ತಿಸಿಕೊಂಡಿದ್ದರೂ ಅಂಬೇಡ್ಕರ್ ಬಾಲುವಿನ ಮೇಲೆ ವೈಯಕ್ತಿಕ ದ್ವೇಷ ಸಾಧಿಸಲಿಲ್ಲ. ಮೇಲ್ಜಾತಿ ಹಿತಾಸಕ್ತಿಗಳಿಗೆ ದಲಿತ ರಾಜಕಾರಣ ಹೇಗೆ ಬಲಿಯಾಗಬಹುದೆಂದು ಊಹಿಸಿದ್ದರೋ ಅದಕ್ಕೆ ಉದಾಹರಣೆಯಾಗಿ ಬಾಲು ಅವರ ಕಣ್ಣೆದುರೇ ಇದ್ದರು. ಜುಲೈ 1955ರಲ್ಲಿ ಬಾಲು ತೀರಿಹೋದಾಗ ಅಂಬೇಡ್ಕರ್ ಪ್ರಯತ್ನ ಮತ್ತು ಒತ್ತಾಯದ ಮೇರೆಗೆ ಎಲ್ಲ ದಲಿತ ಸಂಸತ್ ಸದಸ್ಯರು, ಶಾಸಕರು ಅವರ ಅಂತ್ಯ ಸಂಸ್ಕಾರ ನಡೆದ ಸಾಂತಾಕ್ರುಜ್ ರುದ್ರಭೂಮಿಯಲ್ಲಿ ಸೇರಿದ್ದರೆಂದು ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿತ್ತು.

* * *

ಕ್ರೀಡೆ ಅಫೀಮಿನಂತೆ, ಅದರ ಎದುರು ವಾಸ್ತವದ ಸಮಸ್ಯೆ, ಸತ್ಯಗಳೆಲ್ಲ ಮಸುಕಾಗಿಬಿಡುತ್ತವೆ. ಅದು ಸಮಾಜದ ಕಿರುಚಿತ್ರವನ್ನು ಒದಗಿಸುತ್ತದೆ. ಸಮಾಜದ ಒಳಗುಟ್ಟು, ಭೇಧಭಾವಗಳಿಗೆ ಕನ್ನಡಿ ಹಿಡಿಯುತ್ತದೆ. ಆಟ ಸಮಾನತೆ, ಕ್ರೀಡಾ ಮನೋಭಾವ ಬೆಳೆಸಬೇಕೆನ್ನುವುದು ಆಶಯವಾಗೇ ಉಳಿದು ವರ್ಣ, ವರ್ಗ, ಅಂತಸ್ತು ಆಟದ ಮೈದಾನದಲ್ಲೂ ತಾರತಮ್ಯಕ್ಕೆ ಕಾರಣವಾಗುತ್ತವೆ. ಮಕ್ಕಳು ಆರಿಸಿಕೊಳ್ಳುವ ಕ್ರೀಡೆಗಳತ್ತ ಒಮ್ಮೆ ಗಮನ ಹರಿಸಿದರೆ ಅದು ಅವರ ಸಂಸ್ಕೃತಿಯ ಹಿನ್ನೆಲೆಯನ್ನೂ, ಸಮಕಾಲೀನ ಆಸಕ್ತಿಗಳನ್ನೂ ಬಿಂಬಿಸುವಂತಿರುವುದು ತಿಳಿಯುತ್ತದೆ.

ಕ್ರೀಡಾ ಸಮಾಜಶಾಸ್ತ್ರದತ್ತ ಒಮ್ಮೆ ಕಣ್ಣು ಹಾಯಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಇದು ಅಧ್ಯಯನಗಳ ವರದಿ ಆಧಾರಿತ ಅಬ್ಸರ್ವೇಷನ್ ಅಷ್ಟೇ. ಇದಕ್ಕೆ ಅಪವಾದಗಳೂ ಇರಬಹುದು. ಅಧ್ಯಯನಗಳ ಪ್ರಕಾರ ಖುಷಿ ಮತ್ತು ಆರಾಮಕ್ಕಾಗಿ ಆಡುವ

With Best Compliments From

"Better Education to create better professionals"

Laxmi Memorial Education Trust (R)
- Our Parent Institution

Laxmi Memorial Education Trust (R), was established in the year 1992 by the well-known industrialist and philanthropist, Mr. A.J. Shetty, in memory of his beloved mother, Late Smt. Laxmi Shetty. During the last one decade of its functioning, the Trust has been successful in establishing a multi-campus network of paramedical and management education institutions, all of which enjoy a high reputation well known for their academic excellence, discipline and conducive academic environment.
The various institutons managed by the Trust form a well-knit and well co-ordinated support structure to create a comprehensive management system.

Institutes Managed by LMET

A.J. HOSPITAL & RESEARCH CENTRE
A 400-bed tertiary care super speciality Hospital

A.J. INSTITUTE OF MEDICAL SCIENCES
Offers 5-1/2 years MBBS programme

A.J. INSTITUTE OF DENTAL SCIENCES
Offers 5 years BDS programme

MOTI MAHAL COLLEGE OF HOTEL MANAGEMENT
Offers 4 years Bachelors Degree in Hotel Management

LAXMI MEMORIAL COLLEGE OF PHYSIOTHERAPY
Offers Graduate and Post-Graduate programmes in Physiotherapy

LAXMI MEMORIAL INSTITUTE OF NURSING
Offers Diploma programme in Nursing Science

LAXMI MEMORIAL COLLEGE OF NURSING
Offers Graduate and Post-Graduate certificate programmes in Nursing

TRANSFORMATIONAL INSTITUTE OF MANAGERIAL EXCELLENCE (TIME)
Offers Post-Graduate Degree in Business Adminstration (MBA)

LAXMI MEMORIAL COLLEGE OF HOTEL MANAGEMENT
Offers, Bachelors Degree in Hospitality ScienceBSC(HS)
Post Graduate Diploma in Tourism & Hotel Management (PGDTHM)

ಕ್ರೀಡೆಗಳಲ್ಲಿ ಬಡವರಿಗೆ ಆಸಕ್ತಿ ಮೂಡುವುದಿಲ್ಲ. ಅದು ಆರ್ಥಿಕ ಅಭಿವೃದ್ಧಿಯ ದ್ಯೋತಕವೂ ಅಲ್ಲ. ಹೀಗಾಗಿ ಬಡವರು ತಾವೇ ಕಲಿಯುವಂಥ ಆಟ ಆಡುತ್ತಾರೆ. ತಂಡ ಕಟ್ಟಿ ಆಡುವ ಆಟ ಆಡುತ್ತಾರೆ. ಅಪಾಯಕಾರಿ ಆಟಗಳನ್ನು ಆಯ್ದುಕೊಳ್ಳುತ್ತಾರೆ. ತಮ್ಮನ್ನು ಕೀಳೆಂದು ಪರಿಗಣಿಸುವುದನ್ನು ಪ್ರತಿಭಟಿಸಲೋ ಎಂಬಂತೆ ದೈಹಿಕ ದಂಡನೆ ಹೆಚ್ಚಿರುವ ಕಬಡ್ಡಿ, ಫುಟ್‌ಬಾಲ್, ಖೋಖೋ, ಬಾಕ್ಸಿಂಗ್, ಕುಸ್ತಿಯಂಥ ಆಟಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಸಿರಿವಂತರು ಆರಾಮದಲ್ಲಿ ಆಡುವ; ದುಬಾರಿ ಕೋಚಿಂಗ್, ಸಾಮಗ್ರಿ ಬಯಸುವ; ಒಬ್ಬರೇ ಆಡುವಂಥ; ಸುರಕ್ಷಿತ; ವಿರಾಮ ಕಾಲದ ಆಟವಾಡಲು ಬಯಸುತ್ತಾರೆ. ಅದು ಅವರ ಆರ್ಥಿಕ ಅಭಿವೃದ್ಧಿಯ ದ್ಯೋತಕವಾಗಿರಲೂಬಹುದು. ಗಾಲ್ಫ್, ಟೆನಿಸ್, ಕ್ರಿಕೆಟ್, ಈಜು ಇಂತಹ ಆಟಗಳಲ್ಲಿ ಸಿರಿವಂತ ಮೇಲ್ವರ್ಗದ ಜನ ತೊಡಗಿಕೊಳ್ಳಬಯಸುತ್ತಾರೆ.

ಈ ಹಿನ್ನೆಲೆಯಲ್ಲಿ ಇಂದಿನ ಭಾರತದ ಕ್ರೀಡಾಕ್ಷೇತ್ರದತ್ತ, ಅದರಲ್ಲೂ ಕ್ರಿಕೆಟ್‌ನತ್ತ ಒಮ್ಮೆ ಗಮನ ಹಾಯಿಸಬಹುದು. ಬಾಲು ತಮ್ಮ ಸಮುದಾಯದಲ್ಲಿ ಅಷ್ಟು ಪ್ರಸಿದ್ಧ ವ್ಯಕ್ತಿಯಾದರೂ, ಅವರ ಕುಟುಂಬವೇ ತಮ್ಮನ್ನು ಕ್ರಿಕೆಟ್‌ನಲ್ಲಿ ತೊಡಗಿಸಿಕೊಂಡರೂ ನಂತರ ದಲಿತರು ಕ್ರಿಕೆಟ್‌ನತ್ತ ಆಕರ್ಷಿತರಾಗಲಿಲ್ಲ. ಅಲ್ಲಿ ಅವಕಾಶ ಸಿಗುತ್ತಿಲ್ಲವೋ ಅಥವಾ ಅವಕಾಶದಲ್ಲಿ ಸಿಂಹಪಾಲನ್ನು ಮೇಲ್ಜಾತಿಯ, ಹಣ-ರಾಜಕೀಯ ಪ್ರಭಾವ ಹೊಂದಿರುವವರೇ ಈಗಲೂ ಕಬಳಿಸುತ್ತಿದ್ದಾರೆಯೋ ಅಥವಾ ಅಂಬೇಡ್ಕರ್ ಪ್ರಭಾವಕ್ಕೊಳಗಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರಿಂದ ದಲಿತ ಸಮುದಾಯ ಆಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿಲ್ಲವೋ-ಅಂತೂ ರಾಷ್ಟ್ರೀಯ ಕ್ರಿಕೆಟ್ ತಂಡದಲ್ಲಿ ಆಡಿದ ದಲಿತ ಆಟಗಾರರು ಬೆರಳೆಣಿಕೆಯಷ್ಟು, ಅದರಲ್ಲೂ ಉತ್ತರ ಭಾರತದ ಕ್ರಿಕೆಟಿಗರು ಮಧ್ಯಮ, ಕೆಳ ಜಾತಿಗಳಿಗೆ ಸೇರಿದ್ದರೂ, ದಕ್ಷಿಣ ರಾಜ್ಯಗಳಿಂದ ಹೋದ ಕ್ರಿಕೆಟಿಗರೆಲ್ಲರೂ ಹೆಚ್ಚಾಗಿ ಮೇಲ್ಜಾತಿಯವರೇ ಆಗಿದ್ದಾರೆ!

ಇದನ್ನೆಲ್ಲ ವಿಷದವಾಗಿ 'ಬ್ರಾಹ್ಮನ್ಸ್ ಅಂಡ್ ಕ್ರಿಕೆಟ್' ಪುಸ್ತಕದಲ್ಲಿ ಎಸ್. ಆನಂದ್ ಚರ್ಚಿಸಿದ್ದಾರೆ. ಆಸಕ್ತರು ನವಯಾನ ಪಬ್ಲಿಕೇಷನ್ಸ್‌ನ ಈ ಪುಸ್ತಕ ಗಮನಿಸಬಹುದು.



ಡಾ|| ಎಚ್.ಎಸ್. ಅನುಪಮಾ

ಈಚಿನ ಕನ್ನಡದ ವೈಚಾರಿಕ ಬರಹಗಾರರಲ್ಲಿ ಮಂಚೂಣಿ ಸಾಲಿನಲಿ ನಿಲ್ಲುವ ಇವರು ಶಿವಮೊಗ್ಗ ಜಿಲ್ಲೆಯವರು. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದು ಕಳೆದ 18 ವರ್ಷಗಳಿಂದ ವೈದ್ಯವೃತ್ತಿ ನಡೆಸುತ್ತಿದ್ದಾರೆ. ಕಥೆ, ಕವಿತೆ, ಅನುವಾದ, ಪ್ರವಾಸ ಕಥನ, ವೈದ್ಯಕೀಯ ಬರಹ ಹೀಗೆ ಅವರ ಸಾಹಿತ್ಯಕೃಷಿ ಹಲವು ಹರವಿನಲ್ಲಿ ಸಾಗಿದೆ. ಇತಿಹಾಸ, ಖಗೋಳ ಶಾಸ್ತ್ರ, ಪರಿಸರ-ಇವುಗಳ ಬಗ್ಗೆ ಆಳವಾದ ಜ್ಞಾನ ಹೊಂದಿದ್ದಾರೆ. ಅನೇಕ ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆಯುತ್ತಿದ್ದಾರೆ.

ಕವನ

ಫೆಬ್ರವರಿ ಒಂದು ಹಕ್ಕಿ.

ತೆಲುಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ ಮಾಲೂರು.

ಫೆಬ್ರವರಿ ಒಂದು ಹಕ್ಕಿ
ಗಾಯವಾಗಿ ನದಿ ತೀರದಲ್ಲಿ ಬಿದ್ದುಹೋಗಿ,
ಕೈಯೊಳಗೆ ತೆಗೆದುಕೊಂಡ ನನಗೆ
ಗಾಯವಾಗಿ ಬಿದ್ದಿರುವುದು ಪಕ್ಷಿಯೊ, ನದಿಯೊ.

ಪಕ್ಷಿಗೆ ಗಾಯವಾಗಿ ನದಿಯಾಗಿದೆ
ನದಿಗೆ ಗಾಯವಾಗಿ ಪಕ್ಷಿಯಾಗಿದೆ
ನದಿ ಪಕ್ಷಿ ಎರಡೂ ಗಾಯವಾಗಿ ನನ್ನ ಕೈಯೊಳಗೆ:

ಜನರಿಗೆಲ್ಲಾ ವಿಭ್ರಮೆ
ನದಿ ಪಕ್ಷಿಯಾಗುವುದೆಂದರೇನು
ಪಕ್ಷಿ ನದಿಯಾಗುವುದೆಂದರೇನು,
ಗಾಯವಾಗುವುದೆಂದರೇನು,

ಸರ್ವ ವಿಭ್ರಮೆಗಳ ಮಧ್ಯೆ ದಾರಿಗಳೆಲ್ಲಾ ಅಪಾಯಗಳು
ಅಪಾಯಗಳಿಗೆ ಅಳತೆಗಳೆನಿರುತ್ತವೆ.
ಅಳತೆಗಳಿಗೊಳಪಡುವ ಪ್ರತಿಯೊಂದು
ಅಪಾಯಕರವಾದುದ್ದೆ.

ಗಾಯವಾಗಿರುವುದು ರಸ್ತೆಯೊ, ನದಿಯೊ, ಪಕ್ಷಿಯೊ ಅರ್ಥವಾಗುತ್ತಿಲ್ಲ
ಕೈಗಳೆಲ್ಲಾ ರಕ್ತಸಿಕ್ತ ಕೈ ಕತ್ತಿಗಳು
ಈಗ ಈ ಕೈಗಳಿಂದ ಏನನ್ನು ಮುಟ್ಟಿದರು
ಅದು ರಕ್ತರಂಜಿತವೆ

ಸೈದೂರನ ಮೀನು ಶಾಸ್ತ್ರಿಗಳ ಬೆಕ್ಕು...

ಡಾ॥ ನಾ. ಡಿಸೋಜ

ಕಥೆ

ಮೀನು ತುಂಬಿಕೊಂಡ ಪೆಟ್ಟಿಗೆಯನ್ನ
ಸೈಕಲ್ಲಿನ ಹಿಂದೆ ಕಟ್ಟಿ, ಕೊಂಚ ದೂರ ಅದನ್ನು
ತಳ್ಳಿಕೊಂಡು
ಬಂದು ನಂತರ ಚಲ್ ಬೇಟಾ ಎಂದು ನುಡಿದು ಅದರ ಮೇಲೆ
ಹಾರಿ ಕುಳಿತ ಸೈದೂರ ನೆಹರು ನಗರದ
ಮೂರನೇ ತಿರುವಿಗೆ ಅದನ್ನು ತಿರುಗಿಸುತ್ತ ಸೈಕಲ್ಲಿನ ಮುಂಬಾಗದಲ್ಲಿ ತಾನು
ಕಟ್ಟಿದ ಹಾರ್ನನ್ನ ತನ್ನದೇ
ಆದ ರೀತಿಯಲ್ಲಿ ಪೋಂಯಂ ಪೋಂಯಂ ಎಂದು ಅದುಮಿದ. ಇದರ ಸದ್ದು
ಕೇಳಿದ್ದೇ ಮೂರನೇ
ತಿರುವಿನಲ್ಲಿ ಎನೋ ಸಂಚಲನವಾಗಿ ಹೆಂಗಸರು ಮನೆ ಅಂಗಳಕ್ಕೆ ಬಂದು ನಿಂತರು. ಕೆಲವರು
ಮನೆ
ಮುಂದಿನವರಿಗೆ, ಪಕ್ಕದ ಮನೆಗಳವರಿಗೆ, "ಮೀನ್ ಸಾಬಿ ಬಂದ ಬಾಯಮ್ಮ" "ಮೀನು ಸೈದೂರ
ಬಂದ"
ಎಂದು ಹೇಳುತ್ತಿರಲು ಸೈದೂರ ಸದಾ ತಾನು ಸೈಕಲ್ ನಿಲ್ಲಿಸುವಲ್ಲಿ ಸೈಕಲ್ ನಿಲ್ಲಿಸಿ ಮತ್ತೊಮ್ಮೆ
ಪೋಂಯಂ
ಪೋಯಂ ಮಾಡಿದ.

ಇವನ ಸೈಕಲ್ಲು ಅಲ್ಲಿ ನಿಲ್ಲುತ್ತಿರಲು ಅಂಗಡಿ ಕೈತಾನನ ಹೆಂಡತಿ, ಸೋಜಾ ಮಾಸ್ತರರ
ಸೊಸೆ, ಕರಿಯಪ್ಪನ
ಮಗಳು, ಮಾಮೂ ಕಾಕನ ಹೆಂಡತಿ, ಮುನಿಯಪ್ಪನ ತಾಯಿ ಎಂದೆಲ್ಲ ನಿತ್ಯ ಅವನಿಂದ ಮೀನು
ಕೊಳ್ಳುವವರು
ಸೈಕಲ್ಲಿನ ಸುತ್ತ ಸೇರಿ=

"ಏನು ಮೀನು ತಂದಿದೀಯ? ಬಂಗಡೆ ಬಂದಿದೆಯಾ? ಭೂತಾಯಿ ಇದೆಯಾ? ಮೋರಿ ಇದೆಯಾ?ಹಸಿ ಶೀಂಗಡಿ ತರತೀಯ ಅಂತ ನನ್ನ ಮಗಳು ಕಾಯ್ತಿದಾಳೆ, ತಂದಿದೀಯ, ಸೌಂದಾಳೆ ಈಗ ಸಿಗೋದಿಲ್ವಾ?"ಎಂದೆಲ್ಲ ಕೇಳುತ್ತ ಅವನ ಸೈಕಲ್ಲಿಗೆ ಕಟ್ಟಿದ ಪೆಟ್ಟಿಗೆಯ ಮುಚ್ಚಳ ತೆಗೆದು ಅದರಲ್ಲಿ ಕೈ ಆಡಿಸ ತೊಡಗಿದಾಗ ಸೈದೂರ= "ಛೆ ಛೆ ಛೆ ಹಾಗೆಲ್ಲ ಮೀನನ್ನ ಮೇಲೆ ಕೆಳಗೆ ಮಾಡ ಬೇಡಿ....ಬೇರೆಯವರು ಕೊಳ್ಳೋದು ಬೇಡವಾ? ಮೀನೆಲ್ಲ ಮೆದುಪಾದರೆ ನಾನು ಮಾರೋದು ಏನನ್ನ?" ಎಂದು ಕೂಗುತ್ತಿರಲು ಕೈತಾನನ ಹೆಂಡತಿ ಪೆಟ್ಟಿಗೆಯಿಂದ ನಾಲ್ಕು ಬಂಗಡೇ ತೆಗೆದುಕೊಂಡು ಆಗಿತ್ತು. ಸೋಜಾ ಮಾಸ್ತರರ ಸೊಸೆ ಬೂತಾಯಿ ಬಾಚಿಕೊಂಡು ಆಗಿತ್ತು. ಉಳಿದವರು ಕೂಡ ತಮಗೆ ಬೇಕಾದುದನ್ನ ಬಳಿದು ಕೊಂಡಿದ್ದರು.

"ಅರೆ ದೇವರೇ ರೇಟು ಮಾಡಿ ತಕೋಳೋದಲ್ವಾ? ಬಂಗಡೆ ಕೆ. ಜಿ.ಗೆ ಐವತ್ತು, ಭೂತಾಯಿ ನಲವತ್ತು, ಇದು ನೋಡಿ ಇದು ಸಂಗಾಟ....ರುಚಿಕರವಾದ್ದು ನೂರೈವತ್ತು ಕೆ. ಜಿ..ಗೆ" "ರೇಟು ಆಮೇಲೆ ನೋಡುವಾ...ಮೊದಲು ಮೀನು ಕೊಡು. ಎಲ್ಲಿ ಕೈ ತೆಗಿನೋಡುವಾ..ನಿನ್ನ ಮೀನನ್ನ ಇಲ್ಲಿ

ಈ ಹೆಂಗಸರ ಮಾತು ನಡೆದಿರುವಾಗಲೇ ಸೈಕಲ್ಲಿನ ಹಿಂದೆ ಮುಂದೆ ಐದಾರು ಬಿಳಿ, ಕರಿ, ಬೂದಿ ಬಣ್ಣದ ಬೆಕ್ಕುಗಳು ಬಾಲ ಆಡಿಸುತ್ತ, ಕಿರುದನಿಯಲ್ಲಿ ಕುಸುಗುಡುತ್ತ,, ಸೈಕಲ್ಲಿಗೆ ಬೆನ್ನು ಉಜ್ಜುತ್ತ, ಸೈದೂರನ ಮುಖ ನೋಡುತ್ತ ಮಿಯಾಂವಂ ಗುಡುತ್ತಿರಲು ಸೈದೂರ ಹಂ ಹಂ ತಾಳಿ ತಾಳಿ ಮೊದಲು ನಮ್ಮ ಖಾಯಂ ಗಿರಾಕಿಗಳು ಆಮೇಲೆ ನೀವು ಇನಾಂ ಗಿರಾಕಿಗಳು ಎಂದು ನುಡಿಯುತ್ತ ಬಂದಿರುವ ಬೆಕ್ಕುಗಳನ್ನ ಸೂಕ್ಷ್ಮವಾಗಿ ನೋಡಿದ.

ಯಾರು ತಿಂದು ಹಾಕತಾರೆ
ಮಾರಾಯ...ನಿನ್ನೆ ಮೀನನ್ನ ಐಸಲ್ಲಿ
ಹಾಕಿಇಟ್ಟು ತಾಜಾ ತಾಜಾ
ಅಂತಮಾರುವವನಲ್ವಾ ನೀನು...."

ಈ ಹೆಂಗಸರ ಮಾತು ನಡೆದಿರುವಾಗಲೇ ಸೈಕಲ್ಲಿನ ಹಿಂದೆ ಮುಂದೆ ಐದಾರು ಬಿಳಿ, ಕರಿ, ಬೂದಿ ಬಣ್ಣದ ಬೆಕ್ಕುಗಳು ಬಾಲ ಆಡಿಸುತ್ತ, ಕಿರುದನಿಯಲ್ಲಿ ಕುಸುಗುಡುತ್ತ,, ಸೈಕಲ್ಲಿಗೆ ಬೆನ್ನು ಉಜ್ಜುತ್ತ, ಸೈದೂರನ ಮುಖ ನೋಡುತ್ತ ಮಿಯಾಂವಂ ಗುಡುತ್ತಿರಲು ಸೈದೂರ ಹಂ ಹಂ ತಾಳಿ ತಾಳಿ ಮೊದಲು ನಮ್ಮ ಖಾಯಂ ಗಿರಾಕಿಗಳು ಆಮೇಲೆ ನೀವು ಇನಾಂ ಗಿರಾಕಿಗಳು ಎಂದು ನುಡಿಯುತ್ತ ಬಂದಿರುವ ಬೆಕ್ಕುಗಳನ್ನ ಸೂಕ್ಷ್ಮವಾಗಿ ನೋಡಿದ. ಅವನ ಕಣ್ಣಿಗೆ ಒಂದು ಬಿಳಿ ಬೆಕ್ಕು ತಟ್ಟನೆ ಬಿದ್ದು ದೇವರೇ ಎಂದು ಆತ ಬೊಬ್ಬೆ
ಹೊಡೆದ. ತಿರುಗಿ ನೋಡಿದಾಗ ಶಾಸ್ತ್ರಿಗಳು ಅವರ ಮನೆ ಬಾಗಿಲಲ್ಲಿ ನಿಂತು ಕಾಮಿ ಬಾ, ಕಾಮಿ ಬಾ, ಪುಸ್ ಪುಸ್ ಬಾ ಎಂದು ಆ ಗುಂಪಿನಲ್ಲಿನ ಒಂದು ಬೆಕ್ಕನ್ನು ಸಿಟ್ಟು, ಅಸಹನೆಯಿಂದ ಕರೆಯ ತೊಡಗಿದ್ದರು.
ಉಳಿದ ಬೆಕ್ಕುಗಳ ಹಾಗೆ ಈ ಬೆಕ್ಕು ಕೂಡ ಮೀನಿನ ಪೆಟ್ಟಿಗೆಯನ್ನ ನೋಡುತ್ತ, ಸೈದೂರನ ಮುಖ, ಕೈ ಗಮನಿಸುತ್ತ, ಮಿಯಾಂವ್ ಎಂದು ಗೋಗರೆಯ ತೊಡಗಿತ್ತು.

ಸೈದೂರ ಬೆಕ್ಕುಗಳನ್ನ ಗಮನಿಸುತ್ತಲೇ ಸುತ್ತ ನೆರೆದ ಹೆಂಗಸರ ಜೊತೆ ವ್ಯಾಪಾರ ಮುಗಿಸಿದ. ಹಾಂ ಹಣ ಕೊಡಿ ಬೇಗ, ನನಗೆ ಮತ್ತೂ ಜನ ಕಾಯ್ತಿದಾರೆ. ನಾನು ಇಲ್ಲೇ ನಿಂತರೆ ಮೀನೆಲ್ಲ ಮೆದುವಾಗಿ ಹುಳ ಬೀಳುತ್ತೆ...ಬೇಗ ಹಣ ಕೊಡಿ ಬೇಗ...ಎಂದು ಅವಸರ ಮಾಡಿಯೇ ಎಲ್ಲರಿಂದ ಹಣ ಪಡೆದ. ಎಲ್ಲರಿಂದ ಹಣ ಬಂದಿದೆ ಅನ್ನುವುದು ಖಚಿತವಾಗಿ ಮೀನಿನ ಪೆಟ್ಟಿಗೆಯ ಮುಚ್ಚಳ ಹಾಕ ಬೇಕು ಅನ್ನುವಾಗ ಪೆಟ್ಟಿಗೆಗೆ ಕೈ ಹಾಕಿ ಒಂದೆರಡು ಭೂತಾಯಿ ಮತ್ತೆರಡು ಬಿಳಿ ಜೆಬ್ಬು ತೆಗೆದು ಹಿಡಿ ಎಂದು ನುಡಿದು ಸುತ್ತ ಸೇರಿದ ಬೆಕ್ಕುಗಳಿಗೆ ಹಾಕುವಾಗ ಬಾಗಿಲಲ್ಲಿ ನಿಂತ ಶಾಸ್ತ್ರಿಗಳು ಓಡಿ ಬಂದು ಗಬಕ್ಕನೆ ತಮ್ಮ ಬೆಕ್ಕನ್ನು ಎತ್ತಿಕೊಂಡು ಮನೆಯತ್ತ ಧಾವಿಸಿದರು. ಉಳಿದ ಬೆಕ್ಕುಗಳು ಸೈದೂರ ಹಾಕಿದ ಮೀನನ್ನು ಗಬಗಬನೆ ತಿನ್ನುತ್ತಿರಲು ಶಾಸ್ತ್ರಿಗಳ ಬೆಕ್ಕು ಶಾಸ್ತ್ರಿಗಳ ಕೈಯಿಂದ ತಪ್ಪಿಸಿಕೊಂಡು ಬರಲು ಕೊಸರಾಡುತ್ತ, ಜಗ್ಗಾಡುತ್ತ, ಕೆಳಗೆ ಹಾರಲು ಶತ ಪ್ರಯತ್ನ ಮಾಡಿ, ಶಾಸ್ತ್ರಿಗಳ ಬಿಗಿ ಹಿಡಿತದಲ್ಲಿ ಸಿಲುಕಿ ಪರದಾಡುವುದನ್ನ ನೋಡಲು ಸೈದೂರನ ಕೈಯಲ್ಲಿ ಆಗಲಿಲ್ಲ. ಶಾಸ್ತ್ರಿಗಳು ಸುಟ್ಟು ಬಿಡುವಂತೆ ಅವನನ್ನ ನೋಡುತ್ತ ಬೆಕ್ಕಿನ ರಕ್ಷಣೆಯನ್ನ ಮಾಡಿಕೊಂಡು ಅದನ್ನು ತಮ್ಮ ಮನೆಯೊಳಗೆ ತೆಗೆದು ಕೊಂಡು ಹೋದರು.

ಸೈದೂರ ಅಲ್ಲಿಯ ತನ್ನ ವ್ಯಾಪಾರ ಮುಗಿಸಿ ಕೊಂಡು ಮತ್ತೊಮ್ಮೆ ತನ್ನ ಸೈಕಲ್ಲಿಗೆ ಚಲ್ ಬೇಟಾ ಹೇಳಿ, ಹಾರ್ನಅನ್ನ ಮತ್ತೊಮ್ಮೆ ಅದುಮಿ ಪೋಂಯಂ ಪೋಂಯಂ ಅನಿಸಿ ತನ್ನ ಮುಂದಿನ ನಿಲ್ದಾಣಕ್ಕೆ ನಡೆದ.

ಶಾಸ್ತ್ರಿಗಳು ಈ ಕ್ರಾಸಿಗೆ ಬಂದ ದಿನದಿಂದ ಸೈದೂರನಿಗೆ ಇದೇ ಒಂದು ಸಮಸ್ಯೆಯಾಗಿತ್ತು. ಅವನು ಕೇರಿಗೆ ಬಂದ ತಕ್ಷಣ ಹೊಸದಾದ ಒಂದು ಬೆಕ್ಕು ಹಳೇ ಬೆಕ್ಕುಗಳ ಜೊತೆಯಲ್ಲಿ ಸೇರಿ ಕೊಂಡಿತ್ತು.

"ಸಂತಾನ ಬಾಯಿ ಇದು ಯಾರ ಬೆಕ್ಕು, ಹೊಸದು ?" ಎಂದು ಕೇಳಿದ ಮೀನು ಕೊಳ್ಳುವ ಸಂತಾನ ಬಾಯಿಗೆ. ಆಕೆ ತುಟಿಗೆ ಕೈ ಅಡ್ಡ ಹಿಡಿದು ತುಸು ನಗುತ್ತ "ಅದಾ? ಹೊಸದಾಗಿ ಶಾಸ್ತ್ರಿಗಳು ಅಂತ ಬಂದಾರೆ, ಅವರ ಬೆಕ್ಕು...ಮೀನಿನ ವಾಸನೆ ಹಿಡಿದು ಅದೂ ಬಂದದೆ ನೋಡು" ಅಂದಿದ್ದಳು ಆಕೆ. ಕೇವಲ ಇಲಿಗಳನ್ನು ಹಿಡಿಯುತ್ತಿದ್ದ ಈ ಬೆಕ್ಕು ಮೀನಿನ ವಾಸನೆಗೆ ಸೈದೂರನ ಸೈಕಲ್ಲಿನ ಬಳಿ ಬಂದಿತ್ತು. ಸೈದೂರ ಇತರೇ ಬೆಕ್ಕುಗಳಿಗೆ ನೀಡುವಂತೆ ಅದಕ್ಕೂ ಮೀನನ್ನ ಎಸೆದಿದ್ದ. ಆತಯಾವುದೇ ಬೀದಿಗೆ ಹೋದರೂ ಅಲ್ಲಿ ಬೆಕ್ಕುಗಳು ಇವನ ಸೈಕಲ್ಲಿನ ಹಾರ್ನ ಕೇಳಿ ಓಡಿ ಬರುತ್ತಿದ್ದವು. ಹೀಗೆಬಂದ ಬೆಕ್ಕುಗಳಿಗೆ ಆತ ತಪ್ಪದೆ ಮೀನು ಹಾಕುತ್ತಿದ್ದ. ಇದರಿಂದ ಅವನಿಗೆ ನಷ್ಟವೇನೂ ಇರಲಿಲ್ಲ. ಪಾಪಮೂಕ ಪ್ರಾಣಿಗಳು ತಿನ್ನಲಿ ಅಂದು ಕೊಂಡು ಆತ ಸಂತಸ ಪಡುತ್ತಿದ್ದ. ಇವನು ಹೀಗೆ ಬೆಕ್ಕುಗಳಿಗೆ ಮೀನು ಹಾಕುವುದನ್ನು ಕೂಡ ಯಾರೂ ವಿರೋಧಿಸಿರಲಿಲ್ಲ. ಆದರೆ ನೆಹರು ನಗರದ ಮೂರನೇ ಕ್ರಾಸಿನಲ್ಲಿ ಮೊದಲ ವಿರೋಧ ಅವನ ಕಿವಿಗೆ ಬಿದ್ದಿತು.

ಸಂಜೆ ಆತ ಪೇಟೆಯ ಕಡೆ ಹೋದಾಗ ಯಾರೋ ಯಜಮಾನರೊಬ್ಬರು ಅವನನ್ನ ತಡೆದು ನಿಲ್ಲಿಸಿಕೊಂಡರು."ನಮ್ಮ ರಸ್ತೆಗೆ ಮೀನು ತರುವವನು ನೀನೇ ಅಲ್ವಾ ?"ಎಂದವರು ಕೇಳಿದರು."ಹೌದು ಸ್ವಾಮಿ, ಯಾಕೆ ?" "ಅಲ್ಲ ನೀನು ಎಲ್ಲ ಬೆಕ್ಕುಗಳಿಗೂ ಮೀನು ಹಾಕು ಆದರೆ ನಮ್ಮ ಪುಸ್ಸಿಗೆ ಮಾತ್ರ ಹಾಕ ಬೇಡ "ನಿಮ್ಮ ಪುಸ್ಸಿ ?" "ಅದೇ ಮೂರನೇ ಕ್ರಾಸಿನ ಬಿಳಿ ಬೆಕ್ಕು.....ನಾವು ಅದಕ್ಕೆ ನಿತ್ಯ ಎರಡು ಪ್ಯಾಕೇಟ್ ಹಾಲು ಕೊಳ್ಳುತ್ತೇವೆ...ನಿನ್ನ ಮೀನು ಅದಕ್ಕೆ ಬೇಡ...."ಏನು ಹೇಳಬೇಕು ಅನ್ನುವುದು ಇವನಿಗೆ ತಿಳಿಯಲಿಲ್ಲ. ಎದಿರು ನಿಂತವರು ಸಾಮಾನ್ಯರಲ್ಲ ಅನ್ನುವುದು ಅವರ ಉಡಿಗೆ, ಮಾತು, ನಿಂತ ನಿಲುವಿನಿಂದಲೇ ತಿಳಿಯುತ್ತಲಿತ್ತು. ಅವರ ಜೊತೆಯಲ್ಲಿ ಮಾತು, ವಾದ ಏಕೆ ಅನಿಸಿ ಆತ ತಲೆ ದೂಗಿದ.

ಮಾರನೇ ದಿನ ಈ ಕ್ರಾಸಿಗೆ ಬಂದಾಗ ತಟ್ಟನೆ ಅವರ ನೆನಪಾಯಿತು. ತನ್ನ ಎಂದಿನ ಸ್ಥಾನಕ್ಕೆ ಬಂದಾಗ ಅವರು ಮನೆಯ ಮುಂದೆ ನಿಂತಿದ್ದರು. ಎಂದಿನಂತೆ ಇವನ ಸೈಕಲ್ಲಿನ ಬಳಿ ಬೆಕ್ಕುಗಳ ಹಿಂಡು. ಸೈದೂರ ಮೀನು ಹಾಕುವಾಗ ಆ ಬಿಳಿ ಬೆಕ್ಕಿಗೆ ಮೀನು ಹಾಕಲಿಲ್ಲ. ಆದರೆ ಆ ಬೆಕ್ಕು ಹಾರಿ, ನೆಗೆದು ಬೇರೆ ಬೆಕ್ಕಿಗೆ ಹಾಕಿದ್ದ ಮೀನನ್ನ ಎಗರಿಸಿಕೊಂಡು, ಅದನ್ನು ಬಾಯಲ್ಲಿ ಕಚ್ಚಿ ಕೊಂಡು ಓಡಿ ಹೋಯಿತು. ಸೈದೂರನಿಗೆ ತಮ್ಮ ಮನೆಯ ಗೇಟಿನ ಬಳಿ ನಿಂತ ಶಾಸ್ತ್ರಿಗಳನ್ನ ನೋಡುವ ಧೈರ್ಯ ಬರಲಿಲ್ಲ.

ಶಾಸ್ತ್ರಿಗಳು ಈ ಕೇರಿಗೆ ಬಂದ ನಂತರವೇ ಅವರಿಗೆ ಈ ಸಮಸ್ಯೆ ಕಾಡ ತೊಡಗಿತ್ತು. ಈ ವರೆಗೆ ಅವರು ಊರಿನ ಬೇರೊಂದು ಕಡೆಯಲ್ಲಿ ಇದ್ದರು.



ಶಾಸ್ತ್ರಿಗಳ ಅವಸ್ಥೆ ಕಂಡು ಸೈದೂರನಿಗೇ ಅಯ್ಯೋ ಅನಿಸಿತು. ಅವರ ಬೆಕ್ಕು ಮೀನು ಸಿಕ್ಕ ಕೂಡಲೇ ಅದನ್ನು ಅವರ ಮನೆಗೇನೆ ಕೊಂಡೊಯ್ಯುವುದು, ಜನ ಇದನ್ನ ನೋಡಿ ನಗುವುದು, ಶಾಸ್ತ್ರಿಗಳ ಬೆಕ್ಕಿನ ಮೇಲೆ ಜನ ಜೋಕ್ಸ ಹೇಳುವುದು ಇವನಿಂದ ನೋಡಲಾಗಲಿಲ್ಲ.

ಅಲ್ಲಿ ನೀರಿನ ತೊಂದರೆ. ನೀರೇ ಬರುತ್ತಿರಲಿಲ್ಲ. ನೀರು ಬರುವ ಒಂದು ಒಳ್ಳೆಯ ಮನೆಯನ್ನ ಹುಡುಕಿ ಕೊಡಿ ಎಂದು ತಮ್ಮ ಕಛೇರಿಯ ಜನರಿಗೆ ಕೇಳಿ ಕೊಂಡಾಗ ದೊರೆತದ್ದು ಈ ಮನೆ. ಮನೆ ಚೆನ್ನಾಗಿತ್ತು. ಪುರಸಭೆ ನಲ್ಲಿಯ ನೀರು ಜೊತೆಗೆ ಬಾವಿ ಬೇರೆ. ಆದರೆ ದಿನನಿತ್ಯ ಈ ಮೀನಿನ ಸೈಕಲ್ಲಿನ ಸದ್ದು. ಮನೆಗೆ ಅನತಿ ದೂರದಲ್ಲಿ ಸೈಕಲ್ ನಿಲ್ಲಿಸಿ ಕೊಂಡು ಮಾಡುವ ಮೀನಿನ ವ್ಯಾಪಾರ ಅವರ ಕಸಿವಿಸಿಗೆ ಕಾರಣವಾಗಿತ್ತು. ಅವರ ಪಾಡಿಗೆ ಅವರು ಮೀನಿನ ವ್ಯಾಪಾರ ಮಾಡಿ ಕೊಂಡು ಹೋಗಲಿ ಅಂದರೆ ತಾವು ಸಾಕಿದ ಒಂದು ಬೆಕ್ಕು ಹೊಸದೊಂದು ತಲೆ ನೋವಿಗೆ ಕಾರಣವಾಗಿತ್ತು. ಈ ಬೆಕ್ಕಿಗಾಗಿ ದಿನಕ್ಕೆ ಎರಡು ಲೀಟರ್ ಹಾಲನ್ನ ಅವರು ಕೊಳ್ಳುತ್ತಿದ್ದರು. ಬೆಕ್ಕು ಅದು ಯಾವಾಗಲೋ ಒಂದು ಸಾರಿ ಮನೆಯಲ್ಲಿಯ ಇಲಿಯನ್ನ ಹಿಡಿದು ತಿನ್ನುತ್ತಿತ್ತು. ಅದು ಅದರ ಸ್ವಭಾವ. ಆದರೆ ಹೀಗೆ ರಸ್ತೆಗೆ ಹೋಗಿ, ಮೀನು ಮಾರುವವನು ಬರುವತನಕ ಕಾದು, ಅವನಿಂದ ಮೀನು ಪಡೆದು ತಿನ್ನುವುದು ಏಕೋ ಸರಿ ಅನಿಸಲಿಲ್ಲ. ಜೊತೆಗೆ ಇದು ಶಾಸ್ತ್ರಿಗಳ ಬೆಕ್ಕು ಅನ್ನುವುದು ಕೇರಿಯಲ್ಲಿ ಒಂದು ತಮಾಷೆಯ ವಿಷಯವಾಗಿತ್ತು. ಬೆಕ್ಕುಗಳು ಮೀನಿನವನ ಬಳಿ ಹೋಗಿ ನಿಂತಾಗ ಯಾರು ಯಾರೋ ತಮ್ಮ ಬೆಕ್ಕನ್ನು ಬೆರಳು ಮಾಡಿ ತೋರಿಸಿ ಏನೇನೋ ಹೇಳಿ ನಗುವುದು ಅವರ, ಅವರ ಹೆಂಡತಿ, ಸೊಸೆಯ, ಮಗನ ಕಿವಿಗೆ ಬಿದ್ದು ಒಂದು ಬಗೆಯ ಅವಮಾನ ಆಗುತ್ತಲಿತ್ತು.

ಮೀನಿನವನು ಬರುತ್ತಾನೆ ಅನ್ನುವಾಗ ಬೆಕ್ಕನ್ನ ಹೊರಗೆ ಬಿಡದಂತೆ ನೋಡಿಕೊಂಡರು, ಅದನ್ನ ಒಂದು ಕೋಣೆಯಲ್ಲಿ ಕೂಡಿ ಹಾಕಿದರು, ಬುಟ್ಟಿಯೊಂದನ್ನು ಕವಚಿ ಹಾಕಿ ಅದರಲ್ಲಿ ಬೆಕ್ಕನ್ನ ಬಂಧಿಸಿ ಅದರ ಮೇಲೆ ಒಂದು ಕಲ್ಲನ್ನ ಇರಿಸಿ ನೋಡಿದರು. ಬೆಕ್ಕಿನ ಕುತ್ತಿಗೆಗೆ ಒಂದು ಹಗ್ಗ ಕಟ್ಟಿ ನೋಡಿದರು. ನೋಡಿದ ಅದಾರೋ ಹೀಗೆ ಬೆಕ್ಕನ್ನ ಕಟ್ಟಿಹಾಕಬಾರದು ಎಂದರು. ಅಂತು ಈ ಬೆಕ್ಕೇ ಒಂದು ಸಮಸ್ಯೆಯಾಯಿತು. ಕೋಣೆಯಲ್ಲಿ ಕೂಡಿ ಹಾಕಿದಾಗ ಅದರ ಕೂಗು, ಬಾಗಿಲು ಕೆರೆಯುವುದು, ಸೈದೂರನ ಪೋಂಯಂ ಕೇಳಿದ ಕೂಡಲೇ ಅದು ಮಾಡುವ ಅವತಾರ, ಅವನು ಹೋದ ಮೇಲೆ ಅದು ಅವನನ್ನ ಹುಡುಕಾಡುವ ರೀತಿ ಇದೆಲ್ಲ ಶಾಸ್ತ್ರಿಗಳ ತಲೆ ಕೆಡಿಸಿ ಬಿಟ್ಟಿತು. ಕೊನೆಗೆ ಶಾಸ್ತ್ರಿಗಳು ಮೀನು ಮಾರುವವನನ್ನ ಕಂಡು ಅವನ ಹತ್ತಿರ ಮಾತನಾಡಿ ಕೂಡ ನೋಡಿದರು. ಅವರ ಮನೆ ಬೆಕ್ಕು ಮೀನನ್ನ ತಿನ್ನುವುದನ್ನ ಮಾತ್ರ ಬಿಡಲಿಲ್ಲ.

ಆದರೆ ಶಾಸ್ತ್ರಿಗಳ ಅವಸ್ಥೆ ಕಂಡು ಸೈದೂರನಿಗೇ ಅಯ್ಯೋ ಅನಿಸಿತು. ಅವರ ಬೆಕ್ಕು ಮೀನು ಸಿಕ್ಕ ಕೂಡಲೇ ಅದನ್ನು ಅವರ ಮನೆಗೇನೆ ಕೊಂಡೊಯ್ಯುವುದು, ಜನ ಇದನ್ನ ನೋಡಿ ನಗುವುದು, ಶಾಸ್ತ್ರಿಗಳ ಬೆಕ್ಕಿನ ಮೇಲೆ ಜನ ಜೋಕ್ಸ ಹೇಳುವುದು ಇವನಿಂದ ನೋಡಲಾಗಲಿಲ್ಲ. ಕೊನೆಗೆ ಈತ ಒಂದು ನಿರ್ಧಾರಕ್ಕೆ ಬಂದ. ತಾನು ಮೀನು ಮಾರಲು ಆ ಕ್ರಾಸಿಗೆ ಬಂದಾಗ ಹಿಂಡು ಗಟ್ಟಿ ಬರುವ ಬೆಕ್ಕುಗಳಿಗೆ ಮೀನು ಹಾಕಬಾರದು ಎಂದು ನಿರ್ಧರಿಸಿದ.

ಎಂದಿನಂತೆ ಪೋಂಯಂ ಪೋಂಯಂ ಅಂದ ಕೂಡಲೇ ಬೆಕ್ಕುಗಳು ಓಡಿ ಓಡಿ ಬಂದವು. ಸೈಕಲ್ಲಿನ ಸುತ್ತ ನೃತ್ಯ ಮಾಡಿದವು, ಪದ ಹೇಳಿದವು, ಬಾಲ ಆಡಿಸಿ ಸೈದೂರನ ಕಾಲಿಗೆ ಮೈ ಒರೆಸಿದವು. ಸೈದೂರ ವ್ಯಾಪಾರ ಮುಗಿಸಿ ಸೈಕಲ್ ಹತ್ತಿದ. ಬೆಕ್ಕುಗಳು ಅವನನ್ನ ಹಿಂಬಾಲಿಸಿ ಕೊಂಡು ಬಂದವು. ಮುಂದಿನ ಕ್ರಾಸಿನ ವರೆಗೆ ಅವನನ್ನ ಹಿಂಬಾಲಿಸಲು ಅವುಗಳಿಂದ ಆಗಲಿಲ್ಲ. ಮಾರನೇ ದಿನ ಮತ್ತೆ ಬಂದವು. ಅದೇ ಕತೆ ಪುನರಾವರ್ತನೆ ಆಯಿತು. ಕ್ರಮೇಣ ಬೆಕ್ಕುಗಳ ಕಿವಿಗೆ ಪೋಂಯಂ ಪೋಂಯಂ ಬೀಳಲೇ ಇಲ್ಲ. ಸೈದೂರ ಗೆದ್ದೆ ಅಂದುಕೊಂಡ. ಶಾಸ್ತ್ರಿಗಳು ಕೂಡ ಅವನಿಗೆ ಕೃತಜ್ಞತೆ ಹೇಳುವ ಹಾಗೆ ನಕ್ಕರು. ಅಬ್ಬ ಎಂದು ಸೈದೂರ ಎದೆ ನೀವಿಕೊಂಡ.

ಸೈದೂರ ಮೂರನೇ ಕ್ರಾಸಿನಲ್ಲಿ ಬೆಕ್ಕಿಗೆ ಮೀನು ಹಾಕುವುದನ್ನ ನಿಲ್ಲಿಸಿದ. ಆದರೆ ನೆಹರು ನಗರದಲ್ಲಿ ಮತ್ತೂ ಕ್ರಾಸುಗಳು ಇದ್ದವು. ಅಲ್ಲಿ ಬೆಕ್ಕುಗಳು ಅವನ ದಾರಿ ಕಾಯುತ್ತ ನಿಲ್ಲುತ್ತಿದ್ದವು. ಅವುಗಳಿಗೆ ಈತ ತಪ್ಪದೆ ಮೀನು ಹಾಕುತ್ತಿದ್ದ. ಅಲ್ಲಿ ವಿರೋಧಿಸಲು ಯಾರೇ ಶಾಸ್ತ್ರಿಗಳು ಇಲ್ಲವಲ್ಲ ಅನ್ನುವುದು ಇವನ ನೆಮ್ಮದಿಯಾಗಿತ್ತು.

ಮೊನ್ನೆ ಈತ ಮೂರನೇ ಕ್ರಾಸಿನಿಂದ ಐದನೆಯ ಕ್ರಾಸಿಗೆ ಬಂದ. ಎಂದಿನಂತೆ ಪೋಂಯಂ ಪೋಂಯಂ ಮಾಡಿದ. ಆ ಸದ್ದಿಗೆ ನರ್ಸ ಜಾಕಲೀನ, ಮೂರನೆ ಮನೆ ಗಂಗಮ್ಮ, ಗೂಡಂಗಡಿ ಪಾತಮ್ಮ. ಗುತ್ತಿಗೆದಾರಿಣಿ ವೆಂಗಡಮ್ಮ ಮೊದಲಾದವರೆಲ್ಲ ಬಂದು ಸೈಕಲ್ಲಿನ ಸುತ್ತ ಘೇರಾಯಿಸಿಕೊಂಡರು. ಹಿಂದೆಯೇ ಬೆಕ್ಕುಗಳ ದಂಡು ಕಂಡಿತು. ಆ ದಂಡಿನಲ್ಲಿ ಒಂದು ಬಿಳಿಯ ಬೆಕ್ಕು. ಅರೆ ಇದು ಮೂರನೇ ಕ್ರಾಸಿನ ಶಾಸ್ತ್ರಿಗಳ ಬೆಕ್ಕಲ್ಲವೇ? ಹೌದು ಬಿಳಿ ಬಣ್ಣ, ತೀಕ್ಷ್ಣ ಕಣ್ಣು, ಅದೇ ಪ್ರೀತಿಯ ದನಿ. ಅರೆ ಮೇಡಮ್ ಇದು ಯಾರ ಬೆಕ್ಕು ? ಎಂದು ಸೈದೂರ ಕಾನ್ವೆಂಟಿನ ಕಲ್ಲಿ ಮೇಡಂಗೆ ಕೇಳಿದ.

"ಇದಾ, ಮೂರನೇ ಕ್ರಾಸಿನಲ್ಲಿ ಇದಾರಲ್ಲ ಶಾಸ್ತ್ರಿಗಳು ಅವರ ಬೆಕ್ಕು...ಇದು ಅಂತಿಂತಹಾ ಬೆಕ್ಕಲ್ಲ ಮಾರಾಯ, ಮನೇಲಿ ಎಲ್ಲೇ ಮೀನು ಇರಲಿ ಹುಡುಕಿ ಎತ್ತಿಕೊಂಡು ಮನೆಗೆ ಓಡುತ್ತೆ...ಈ ಬೆಕ್ಕಿನ ಕಾಟದಿಂದ ನಾವು ಮೀನು ತಿನ್ನುವ ಹಾಗೇ ಇಲ್ಲ ನೋಡು....ನಾನು ಒಂದು ಸಾರಿ ಶಾಸ್ತ್ರಿಗಳ ಮನೆಗೆ ಹೋಗಿ ಜಗಳ ಕೂಡ ಮಾಡಿ ಬಂದೆ"ಎಂದು ತನ್ನ ಸಾಹಸವನ್ನ ಬಣ್ಣಿಸಿದಳು ಕಲ್ಲಿ ಮೇಡಂ. ಮಾರನೇ ದಿನ ಮೂರನೇ ಕ್ರಾಸಿಗೆ ಬಂದ ಸೈದೂರ ತನ್ನ ಹಾರ್ನ ಅದುಮಿ ಪೋಂಯಂ ಪೋಂಯಂ ಅಂದ. ಅದರ ಜೊತೆಗೆ ಪುಸ್ಸಿ ಪುಸ್ಸಿ ಎಂದು ಕರೆದ. ಈ ಕ್ರಾಸಿನ ಬೆಕ್ಕುಗಳಿಗೆ ತಾನು ಮೀನು ಹಾಕದೆ ತಪ್ಪು ಮಾಡುತ್ತಿದ್ದೇನೇನೋ ಅನಿಸಿತು ಅವನಿಗೆ. ತಾನು ಮೀನು ಹಾಕದಿರುವುದರಿಂದ ಶಾಸ್ತ್ರಿಗಳ ಬೆಕ್ಕು ಮೀನು ಕದಿಯಲು ಹೊರಟಿರಬಹುದೇ ? ಮೀನಿನ ಆಸೆಗೆ ಈ ಬೀದಿ ಬಿಟ್ಟು ಬೇರೆ ಬೀದಿಗೆ ಅದು ಹೋಗುತ್ತಿರಬಹುದೆ? ಇದರಿಂದಾಗಿ ಶಾಸ್ತ್ರಿಗಳಿಗೆ ಈಗ ಮತ್ತೂ ಕೆಟ್ಟ ಹೆಸರು ಬಂತಲ್ಲ ಪಾಪ ಎಂದು ಆತ ಯೋಚನೆ ಮಾಡಿದ. ಈಗ ಅವನ ಹಾರ್ನ ಸದ್ದು ಕೇಳಿದ್ದೇ ಹಲವಾರು ದಿನಗಳಿಂದ ಬಾರದ ಬೆಕ್ಕುಗಳು ದಂಡಿಯಾಗಿ ಓಡಿ ಬಂದವು. ಈ ಬೆಕ್ಕುಗಳ ನಡುವೆ ಶಾಸ್ತ್ರಿಗಳ ಬೆಕ್ಕೂ ಇತ್ತು. ವ್ಯಾಪಾರ ಮುಗಿದು ಪೆಟ್ಟಿಗೆ ಬಾಗಿಲು ಹಾಕುವ ಮುನ್ನ ಬೆಕ್ಕುಗಳಿಗೆ ಮೀನು ಉಣಿಸಲು ಮುಂದಾದ. ಶಾಸ್ತ್ರಿಗಳು ಅವರ ಮನೆಯಿಂದ ಹೊರ ಬಿದ್ದು ಇವನ ಬಳಿ ಬಂದರು. ಅವರ ಕೈಯಲ್ಲಿ ಹತ್ತರ ಒಂದು ನೋಟಿತ್ತು.

"ಇನ್ನ ದಿನಾ ನಮ್ಮ ಪುಸ್ಸಿಗೆ ಮೀನು ಹಾಕು, ನಾನು ಹಣ ಕೊಡತೇನೆ....ನಮ್ಮ ಅಭಿಪ್ರಾಯಾನ ನಾವು ಪ್ರಾಣಿಗಳ ಮೇಲೆ ಹೇರಬಾರದು ....ಅವು ಏನಂದ್ರೂ ಮೂಕ ಪ್ರಾಣಿಗಳು...." ಸೈದೂರ ಅವರನ್ನ, ಅವರ ಕಾಲಿಗೆ ಮೈ ಉಜ್ಜುತ್ತಿದ್ದ ಬೆಕ್ಕನ್ನ ನೋಡುತ್ತ ನಿಂತ.

ಡಾ॥ ನಾ. ಡಿಸೋಜಾ

ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖ ಹೆಸರು. ಸುಮಾರು 40 ರಷ್ಟು ಕಾದಂಬರಿ, 400ರಷ್ಟು ಕತೆಗಳು ಹಾಗು 20ರಷ್ಟು ಮಿನಿ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಬರಹಗಳು ಬಹಳಷ್ಟು ಭಾಷೆಗಳಿಗೆ ತರ್ಜುಮೆಗೊಂಡಿವೆ. ಅನೇಕವು ಚಲನಚಿತ್ರಗಳಾಗಿ ಮನ್ನಣೆಗೆ ಪಾತ್ರವಾಗಿವೆ. 'ಕಾಡಿನ ಬೆಂಕಿ' ಸಿನಿಮಾ ರಾಜ್ಯ ಪ್ರಶಸ್ತಿ, ರಜತ ಕಮಲ, 'ದ್ವೀಪ' ಚಲನ ಚಿತ್ರಕ್ಕೆ ಸುವರ್ಣ ಪದಕ ಪಡೆದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಸೇರಿದಂತೆ ಅನೇಕ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.ಕುವೆಂಪು ವಿವಿಗೌರವ ಡಾಕ್ಟರೇಟ್ ಸಿಕ್ಕಿದೆ.



ಮಾನವೀಯತೆ ಮಾನವೀಯತೆ ಅಂತಾರಲ್ಲ- ಅದರ ಬಗ್ಗೆ

ದೇವನೂರ ಮಹಾದೇವ

ನಾನು ಅಕಸ್ಮಾತ್ ಓದಿದವನು. ಹಾಗೇನೆ ಅಕಸ್ಮಾತ್ ಕಥೇನೊ ಕವನಾನೊ ಬರೆದವನು. ಈ ಆಕಸ್ಮಿಕ ಸಂಭವಿಸದಿದ್ದರೆ ನಾನು ಇಲ್ಲಿರ್ತ ಇರಲಿಲ್ಲ. ಎಲ್ಲೋ ನಮ್ಮೂರಲ್ಲೋ ಜೀತ ಮಾಡ್ತ ಇರಬೇಕಿತ್ತು. ಯಾರ್ದೊ ಹೊಲದ ದುಡೀತಾ ಆ ದುಡಿಮೆಗೂ ಅದರ ಫಲಕ್ಕೂ ಆ ದುಡಿಯುವ ನನಗೂ ಎಂಥದೂ ಸಂಬಂಧಾನೆ ಇಲ್ದೆ ಇರಬೇಕಿತ್ತು. ಬಹುತೇಕ ಎಲ್ಲಾ ಶೂದ್ರರ ಕತೆಯೂ ಹೀಗೇ ಇರಬಹುದು.

ಈಗ ನಂಗೆ ಅಕ್ಷರ ಗೊತ್ತಿದೆ. ಗೊತ್ತಿರುವವರ ಒಡನಾಟದಿಂದ ಒಂದಿಷ್ಟು ತಿಳಿದಿದೆ. ಈ ತಿಳುವಳಿಕೆಯಿಂದ ಅಷ್ಟಿಷ್ಟ ನಂಗೂ ಕಾಣ್ತಿದೆ. ಇದ ಕಂಡಾಗ ಒಂದೊಂದು ಸಲ ಅನ್ಸುತ್ತೆ ಈ ಓದೋ ಚಾನ್ಸೇ ಬರಬಾರದಿತ್ತು. ಯಾಕೆ ಹಿಂಗೆ ಹೇಳ್ತ ಇದ್ದೀನಿ ಅಂದ್ರೆ ಇಂದು ಒಬ್ಬ ಆದಿ ಜನಾಂಗದೋನು ತಳಸಮುದಾಯದವನು ಅಲ್ಪ ಸ್ವಲ್ಪ ಪ್ರಜ್ಞೆ ಪಡೆಯೋದೆ ಅಪರೂಪ. ಪಡೆದರೆ ಅದೊಂದು ರೌರವ ನರಕ. ಅವನಿಗೆ ಕಾಣುತ್ತೆ – ತನ್ನ ಸಂಬಂಧಿಗಳು ಹಸಿವಿನಿಂದ ಸಾಯ್ತ ಇರೋದು, ಬೀದೀಲಿ ಭಿಕ್ಷೆ ಬೇಡೋದು, ಜೀವಂತ ಸುಡಿಸಿಕೊಳ್ಳೋದು, ಪಶುಥರ ದುಡಿಯೋದು, ಅವ ದುಡಿಯೋದು ಅವಗೆ ದಕ್ಕದೆ ಇರೋದು, ಇದರ ಜೊತೆಗೇನೆ ಹುಟ್ಟಿದ ತಪ್ಪಿಗೆ ಥೂ ಛೀ ಅನ್ನಿಸಿಕೊಳ್ಳೋದು ಕೂಡ ಸೇರುತ್ತದೆ. ಇಷ್ಟೆಲ್ಲ ಆಗ್ತಾ ಇರೋದು ನನ್ನ ಸಂಬಂಧಿಗಳಿಗೇನೆ. ಈ ಸಂಬಂಧ ಇಲ್ಲದಿದ್ದರೆ ನನಗೆ ಭಾವನಾತ್ಮಕ ನೋವು ಇರ್ತ ಇರಲಿಲ್ಲವೇನೊ. ಆಗ ನಾನು ವಿಚಾರ ಮಾಡಬಹುದಿತ್ತು, ವಿಶ್ಲೇಷಣೆ ಮಾಡಬಹುದಿತ್ತು, ಆದರೆ ಇದು ನಂಗೆ ಕಷ್ಟ, ನನ್ನ ಕಷ್ಟ ಇದು.

ಈ ನನ್ನ ಹಿನ್ನೆಲೇಲಿ ಒಂದೆರಡು ಮಾತಿಗೆ ಬರ್ತೇನೆ: ಸಾಮಾನ್ಯವಾಗಿ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಅನ್ನೊ ಮಾತನ್ನ ನಾವು ಆಗಾಗ ಹೇಳ್ತೇವೆ, ಕೇಳ್ತೇವೆ–ಇವಕ್ಕೂ ಸಾಹಿತಿಗೂ ಹುಟ್ಟಾಸಂಬಂಧ ಇದೆಯೇನೊ ಎಂಬಷ್ಟು. ಜಾತಿಯ ಈ ಅಸಮಾನತೆಯ ಇಂಡಿಯಾದಲ್ಲಿ ವ್ಯಕ್ತಿಸ್ವಾತಂತ್ರ್ಯ, ಸ್ವಾತಂತ್ರ್ಯ ಈ ಮಾತುಗಳು ಅವು ಯಮದೂತರ ಥರ ಕಾಣುತ್ತೆ. ಇದೆಲ್ಲಾ ಯಾರಿಗೆ ಇದೆ? ನಮ್ಮ ಬೆನ್ನ ಹಿಂದೆ ಏನೇನೂ ಎಳ್ಳಷ್ಟು ಅರಿವೆ ಇಲ್ಲದ ಕೋಟಿ ಕೋಟಿ ನಮ್ಮ ನಿಮ್ಮಂಥ ನರಮನಸರು ಇದ್ದಾರೆ. ಇದನ್ನು ಮರೆತೇ ಇಲ್ಲಿ ಚಿಂತನೆ ನಡೆದಿದೆ. ಅಸಮತೆ ಪಾತಾಳ ಆಕಾಶದಷ್ಟು ಇರೋ ಇಲ್ಲಿ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ ಅಂದ್ರೆ ಜಾತಿ ಮೇಲ್ಮೆ–ಆಸ್ತಿ ಮೇಲ್ಮೆ ಉಳ್ಳವರ ಸ್ವಾತಂತ್ರ್ಯ ಎಂದೇ



ಇಂಡಿಯಾದ 'ಸನಾತನ ಸುಲಿಗೆಮನಸ್ಸು' ಬಂಡವಾಳಶಾಹಿಗಿಂತಲೂ ಕ್ರೂರವಾಗಿ, ಕುಟಿಲವಾಗಿ ಇದೆಯೇನೋ ಅನಿಸುತ್ತದೆ. ಜಾತಿ–ವರ್ಣವ್ಯವಸ್ಥೆಯನ್ನು ಏರ್ಪಡಿಸಿ ಹುಟ್ಟುವ ಮಕ್ಕಳ ಸಾಮಾಜಿಕ ಚಲನೆಯ ಕಾಲು ಕತ್ತರಿಸಿ ಚಲನೆಯೇ ಇಲ್ಲದಂತೆ ಮಾಡಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಸ್ಪರ್ಧೆಯ ಏರಿಳಿತದಿಂದ ಬಡವ ಬಲ್ಲಿದನೂ ಆಗಬಹುದು, ಕೀಳಾದವನು ಮೇಲೂ ಆಗಬಹುದು.

ಅರ್ಥವಲ್ಲವೇ? ಅಸಮತೆಯಲ್ಲಿ ನಿಜವಾದ ಸ್ವಾತಂತ್ರ್ಯವು ಉಂಟಾಗುವುದೂ ಇಲ್ಲ. ಇಲ್ಲಿ ನಾವು ನಿಲ್ಲಬೇಕಾಗಿದೆ. ನಿಂತು ಅರ್ಥ ಮಾಡಿಕೊಳ್ಳಬೇಕಾಗಿದೆ.

ಮತ್ತೂ ಭೀಕರತೆ ಎಂದರೆ ಇಂಡಿಯಾದ 'ಸನಾತನ ಸುಲಿಗೆಮನಸ್ಸು' ಬಂಡವಾಳಶಾಹಿಗಿಂತಲೂ ಕ್ರೂರವಾಗಿ, ಕುಟಿಲವಾಗಿ ಇದೆಯೇನೋ ಅನಿಸುತ್ತದೆ. ಜಾತಿ–ವರ್ಣವ್ಯವಸ್ಥೆಯನ್ನು ಏರ್ಪಡಿಸಿ ಹುಟ್ಟುವ ಮಕ್ಕಳ ಸಾಮಾಜಿಕ ಚಲನೆಯ ಕಾಲು ಕತ್ತರಿಸಿ ಚಲನೆಯೇ ಇಲ್ಲದಂತೆ ಮಾಡಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಸ್ಪರ್ಧೆಯ ಏರಿಳಿತದಿಂದ ಬಡವ ಬಲ್ಲಿದನೂ ಆಗಬಹುದು, ಕೀಳಾದವನು ಮೇಲೂ ಆಗಬಹುದು. ಇಲ್ಲಿ ಅಸಮಾನ ವ್ಯವಸ್ಥೆಯ ಬಗ್ಗೆ ಅಸಮಾಧಾನವಾದರೂ ಇರುತ್ತದೆ. ಆದರೆ ಈ ಮೇಲು ಕೀಳಿನ ಜಾತಿಯ ಚಾತುರ್ವರ್ಣ್ಯದ ವ್ಯವಸ್ಥೆಯಲ್ಲಿ ಮಗು ಹುಟ್ಟುಟ್ಟುತ್ತಲೇ ಅದರ ಮಿದುಳಲ್ಲಿ ಅಸಮಾನತೆಯನ್ನೂ ಮೇಲು ಅಥವಾ ಕೀಳ್ತನವನ್ನೂ ಒಪ್ಪಿತ ಮೌಲ್ಯವಾಗಿಸಿ ಮಾನವತೆಯನ್ನು ಕೊಂದು ಹುಟ್ಟಿಸುವಂಥ ಯಶಸ್ವೀ ಶಸ್ತ್ರಚಿಕಿತ್ಸೆ ಇಲ್ಲಿ ಜರುಗುತ್ತದೆ. ಇಂಥದು ಭೂಮಿ ಮೇಲೆ ಮತ್ತೆಲ್ಲು ಇರಲಾರದು. ಸುಲಿಗೆಯ ಅಮೇರಿಕವೂ ಸುಲಿಗೆಯನ್ನು ಶಾಶ್ವತಗೊಳಿಸಲು ಇಲ್ಲಿಂದಲೇ ಕಲಿಯುವುದು ಬಹಳವಿದೆ.

ಸುಮ್ಮನೆ ಒಂದು ಉದಾಹರಣೆಗೆ– ಇಂಡಿಯಾದಲ್ಲಿ ಅವಮಾನಿತ ದಲಿತರು, ಅರಳದಂತೆ ಕುಗ್ಗಿದ ಮಹಿಳೆಯರು, ತುಳಿತಕ್ಕೊಳಗಾದ ತಳಸಮುದಾಯದವರು, ಅನುಮಾನಿತ ನರಳಿಕೆಯ ಮುಸ್ಲಿಮರೂ ಸೇರಿದರೆ ಅದೇ ಜನಸಂಖ್ಯೆಯ ಶೇಕಡ ಎಂಬತ್ತರಷ್ಟಾಗಬಹುದೇನೋ. ಇವರಲ್ಲಿ ಶೇಕಡಾ ಹತ್ತರಷ್ಟು ಹೊಟ್ಟೆ ಬಟ್ಟೆಗೆ ನೇರ ಇರೋರು, ಕಲಿತವರು ಸುಲಿಗೆ ಮಾಡ್ತ ಇರೋರು ಸಿಕ್ತಾರ? ಅದೂ ಕಷ್ಟವೇ. ಹೋಗಲಿ, ಇವರನ್ನ ಬಿಟ್ಟಬಿಡ್ರಪ್ಪ. ಉಳಿದವರು ಬಡತನ ಅವಮಾನ ಜತೆಗೆ

ಅವಕಾಶವಂಚಿತರಾಗಿ ಸತ್ತೂ ಹುಟ್ಟೀ ಬದುಕ್ತಾ ಅವ್ರೆ. ಹುಟ್ಟಿದ ತಪ್ಪಿಗೆ ಸತ್ತು ಹುಟ್ಟಿ ಬದುಕ್ತಾ ಇರೋರೆ ಈ ದೇಶದ ಜನಸಂಖ್ಯೆಯಲ್ಲಿ ಮುಕ್ಕಾಲು ಮೀರುತ್ತೆ, ಅಂದರೆ ಬಹುಸಂಖ್ಯಾತ ಜನಸಂಖ್ಯೆ ಆಗುತ್ತೆ. ಈ ಬಹುಸಂಖ್ಯಾತ ನೊಂದವರು ಈ ದೇಶದ ನಿಜವಾದ ಮಾಲಿಕರಾಗಬೇಕಾಗಿತ್ತು. ಒಂದು ಕಾನೂನು ಅಥವಾ ಸಮಸ್ಯೆಯನ್ನು ನಿರ್ಧರಿಸುವಲ್ಲಿ ಇವರ ನಿರ್ಧಾರವೇ ಮೇಲುಗೈ ಆಗಬೇಕಾಗಿತ್ತು. ಇವರ ಹಿತಕ್ಕೆ ತಕ್ಕಂತೆ ಬದಲಾವಣೆ ಜರುಗಬೇಕಾಗಿತ್ತು. ಪ್ರಜಾಪ್ರಭುತ್ವ ಅಂದರೆ ಇದೇ ಅಲ್ಲವೇ?. ಆದರೆ ಇರೋದು ಏನು? ಈ ನರಕದೊಳಗೂ ಮೇಲು ಜಾತಿ ಭ್ರಮೆಯ ಬಡವರೂ ಮಡಿ ಬಿಟ್ಟಿಲ್ಲ ಯಾಕೆ ? ಹಸಿದು ಸತ್ತರೂ ಬಡವರು ಒಂದಾಗುವುದಿಲ್ಲವೇನೂ ಎಂಬಂಥ ಭೀಕರ ಅಸಹಜ ಸಂಬಂಧ ಇಲ್ಲಿದೆ.

ಇದೆಲ್ಲ ಯಾಕೆ ಹೇಳ್ದೆ ಅಂದ್ರೆ ಲೇಖಕ ಸ್ವಲ್ಪ ಒಳಹೊಕ್ಕು ನೋಡಬೇಕು. ವ್ಯಕ್ತಿಯ ಪರಕೀಯತೆಯನ್ನು ಕಾಣುವುದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಇಲ್ಲಿ – ಈ ನಮ್ಮ ಸಮಾಜದಲ್ಲಿ ಇಡೀ ಒಂದು ಸಮುದಾಯವೇ ಅಸ್ಪೃಶ್ಯವಾಗಿ ಊರಾಚೆ ಬಿದ್ದು ಪರಕೀಯವಾಗಿ (ಏಲಿಯನೇಷನ್) ನರಳುತ್ತಿದೆಯಲ್ಲ– ಇದನ್ನು ಒಂದಿಷ್ಟು ನೋಡಿ ಎಂದಷ್ಟೆ ನನ್ನ ವಿನಂತಿ. ಸಮಷ್ಟಿಯ ಸ್ವಾತಂತ್ರ್ಯದ ಒಳಗೇನೆ ತನ್ನ ಹಿತವನ್ನು ಕಾಣದಿದ್ದರೆ ಆತ ಸ್ಪಂದನೆಯನ್ನು ಕಳೆದುಕೊಂಡು ಆತನ ಸಂವೇದನೆಗೆ ಒಂದಲ್ಲ ಒಂದು ಬಗೆಯ ಕುಷ್ಠ ತಗುಲಿದೆ ಎಂದೇ ಅರ್ಥ. ನಾವು ಹುಟ್ಟಿದಾಗಲೇ ನಮ್ಮ ಎಳೆಮೆದುಳಿನ ರಚನೆಯನ್ನು ಇಲ್ಲಿನ ಸುಲಿಗೆಗೆ ಅಣಿಗೊಳಿಸುವಂಥ ಜಾತಿವ್ಯವಸ್ಥೆಯಲ್ಲಿ ನಾವು ಹಾಯ್ದು ಬಂದವರಾದ್ದರಿಂದ ನಮ್ಮ ಸ್ಪಂದನೆಯೇ ಜಡವಾಗಿರಬಹುದು. ಆದರೆ ಲೇಖಕ, ಇನ್ನೊಂದು ಜೀವವಾಗುವ ಲೇಖಕ, ಈ ಜಾತಿಮೂಲವಾದ ಅಸಮತೆಯ ಕೊಳಕಿನಿಂದ ಬಂದ ವ್ಯಕ್ತಿತ್ವವನ್ನು ತನ್ನೊಳಗಿಂದಲೂ ಕಳೆದುಕೊಳ್ಳುತ್ತಾ, ಸಮಾಜವನ್ನೂ ರೂಪಿಸುತ್ತಾ ಕೇವಲ ಮನುಷ್ಯನಾಗಬೇಕಾಗುತ್ತದೆ.

ಇಲ್ಲಿ ಸಾಹಿತ್ಯ ಯಾವ ರೀತೀಲಿ ಹರಿದು ಬಂತು ಅನ್ನೋದನ್ನ ನೋಡಿದರೂ ಕೂಡ, ಇಲ್ಲಿ ಸಮುದಾಯದ ಕತೆಯಾಗಲಿಲ್ಲ. ವಚನಯುಗ ಇದಕ್ಕೆ ಹೊರತು. ವಚನಯುಗ ಮುಗಿದಮೇಲೆ ಮತ್ತದೆ ಹಳೆ ಕಥೆಯಾಯ್ತು. ಅದಿರಲಿ, ಇಲ್ಲಿ ಜನತೆ ತಿಳಿಯದ ಭಾಷೆಯಾದ ಸಂಸ್ಕೃತದಲ್ಲಿ ಸೃಷ್ಟಿಯಾದುದರ ನೆರಳಂತೆ ತನ್ನನ್ನು ರೂಪಿಸಿಕೊಂಡು ಬಂದ ಕನ್ನಡ ಸಾಹಿತ್ಯ ಮನುಜನನ್ನು ಕುಗ್ಗಿಸುವ ಜನ್ಮ, ಕರ್ಮ, ವರ್ಣ, ಜಾತಿಕಟ್ಟುಪಾಡು, ಸತ್ಯಕ್ಕೆ ಬಂದರೂ ಅದರೊಳಗೂ ಪಾರಮಾರ್ಥಿಕ ಸತ್ಯ, ಲೌಕಿಕ ಸತ್ಯ ಎಂದು ಸತ್ಯವನ್ನೂ ಇಬ್ಬಂದಿ ಮಾಡಿ ಒಡಲುಪಡೆದ ಕೃತಿಗಳೇ ಇಲ್ಲಿ ಹೆಚ್ಚಾಗಿ ಹುಟ್ಟಿದವು. ಇಲ್ಲಿನ ಸಾಹಿತ್ಯದಲ್ಲಿ ಸಮಾನತೆಯನ್ನು ಹುಡುಕುವುದೆಂದರೆ ಈ ಜಾತಿಯ ರಣರಂಗದ ಹೆಣಗಳ ರಾಶಿಯಲ್ಲಿ ಅಲ್ಲಿ ಇಲ್ಲಿ ಉಳಿದಿರಬಹುದಾದ ಜೀವ ಹುಡುಕುವ ಕೆಲಸದಂತಾಗುತ್ತದೆ.

ಇನ್ನು ಇಪ್ಪತ್ತನೇ ಶತಮಾನಕ್ಕೆ ಬಂದರೆ, ಹೆಚ್ಚು ಮಾನವೀಯರಾದ ಕುವೆಂಪು ಮತ್ತು ಕಾರಂತರನ್ನು ಉದಾಹರಣೆಗೆ ಕೊಟ್ಟು ಹೇಳುವೆ. ಕುವೆಂಪು ಸಮಬಾಳು ಸಮಪಾಲು ಇತ್ಯಾದಿ ಅನೇಕ ಕವನಗಳನ್ನು ಬರೆದಂಥವರು. ಅವರ ಕಾದಂಬರಿ 'ಮಲೆಗಳಲ್ಲಿ ಮದುಮಗಳು'ನಲ್ಲಿ ಹೊಲತಿ ತಿಮ್ಮಿಯಲ್ಲೂ ದಾರ್ಶನಿಕತೆ ಕಾಣಲು ಸಾಧ್ಯ ಎಂಬಂಥ ನಂಬಿಕೆಯನ್ನು ಹುಟ್ಟಿಸಿದವರು. ದಾರ್ಶನಿಕತೆಯನ್ನು ಕಾಣುವುದು ಬಿಡುವುದು ಪ್ರಶ್ನೆ ಇದ್ದೇ ಇದೆ. ಆದರೆ ಮೇಲು ಕೀಳು ಅನ್ನದೆ ಎಲ್ಲರಿಗೂ ಸಾಧ್ಯ ಅನ್ನೋ ಏಕದೃಷ್ಟಿ ಇಲ್ಲಿದೆ. ಆದರೆ ಅಲ್ಲೇ ಅವರು ಜನ್ಮಥಿಯರಿಯನ್ನು ಕೂಡ ತರ್ತಾರೆ. ಸರ್ವರಿಗೂ ಎನ್ನೋ ಸಂಜಿಕೆ ಸಾರಿದರೂ ಸರ್ವರಿಗೂ



With Best Compliments From

DURGA MINING

50, OLD THARAGUPET,
BANGALORE-560053, INDIA
PH: Off: 22281141/22870369, fax: 91-80-23511590

Email: nareshb@bgl.vsnl.net.in
bajajmullite@airtelmail.in
bajajassociates@airtelmail.in

ದಕ್ಕದಂತೆ ಮಾಡಿರುವ ಅಂಶವನ್ನೇ ಇಲ್ಲಿ ಆರಾಧಿಸುವ ಅನುಮಾನ ಹುಟ್ಟುತ್ತದೆ. ಹಾಗೆ ಕಾರಂತರಿಗೆ ಬಂದರೆ, 'ಚೋಮನ ದುಡಿ'ಯಲ್ಲಿ ಚೋಮನ ಮನಸ್ಸಿನ ಭಾವನೆಗೆ ಪ್ರಾಮುಖ್ಯತೆ ಕೊಟ್ಟು ಅವನ ಏರಿಳಿತಗಳು ಕಾದಂಬರಿ ವಸ್ತುವಾಗಿದೆ. ಚೋಮನ ಜಾತಿಯವನೆ ಆದ ನನಗೆ ಚೋಮನ ಸ್ಥಿತಿಗೆ ಕಾರಣವಾಗುವ ಕಾರಣಗಳ ಮೇಲೆ ನನ್ನ ಕಣ್ಣು ಹೆಚ್ಚಿರುತ್ತದೆ. ಚೋಮನ ಸುತ್ತಲಿನ ಪ್ರಪಂಚ -ಎಲ್ಲರೂ ಕಾಲಿಗೆ ಜಾತಿಯ ಸರಪಳಿ ಕಟ್ಟಿಕೊಂಡು ಒಬ್ಬರ ಕತ್ತನ್ನು ಮತ್ತೊಬ್ಬರು ಹಿಸುಕುತ್ತಿರುವ ಬುದ್ಧಿ ಮಾಂದ್ಯರ ಲೋಕದಂತೂ ದರ್ಶನವಾಗುತ್ತದೆ. ಇಲ್ಲಿ ವ್ಯತ್ಯಾಸಕ್ಕಾಗಿ ಹೀಗೆ ಹೇಳಿದೆ. ಹಾಗೆಯೆ ಪ್ರಗತಿಶೀಲ ಉದ್ದಿಶ್ಯ ಇಟ್ಟುಕೊಂಡು ಪ್ರಗತಿಶೀಲಸಾಹಿತ್ಯ ಹೊರಟರೂ ಕೂಡ ತಲೆ ಒಳಗೇ ಪ್ರಗತಿಶೀಲತೆ ನಡೆದು ನೆಲ ಕಾಣದಿದ್ದುದರ ಪರಿಣಾಮವಾಗಿ ಅದು ಹೆಳವನಾಗಿಯೇ ತೆವಳಿತು. ಇಂದು ನಮ್ಮ ನೆಲ ಬೇಡುತ್ತಿರುವುದು, ಪ್ರಗತಿಶೀಲ ಸಾಹಿತ್ಯವನ್ನೇ ಅನ್ನಿಸುತ್ತದೆ. ಈ ಹಿಂದೆ ತಲೆಯಲ್ಲಿ ಹುಟ್ಟಿ ತಲೆಯಲ್ಲೇ ಸತ್ತ ಪ್ರಗತಿಶೀಲತೆಗೆ ಇಂದು ಹೃದಯ ಮತ್ತು ಒಡಲನ್ನೂ ಕೊಡಬೇಕಾಗಿದೆ. ಇಂಥ ಲಕ್ಷಣಗಳು ತೀರಾ ಇತ್ತೀಚೆಗೆ ಕಂಡುಬರುತ್ತಲೂ ಇವೆ.

ಇಂದು ನವ್ಯ ಎಂದು ಕರೆಯಲ್ಪಡುತ್ತಿರುವ ನವ್ಯಕ್ಕೆ ಬಂದರೆ ನವ್ಯವು ವ್ಯಕ್ತಿಯನ್ನೇ ಜಗತ್ತು ಎಂದು ತೋರಿಸಿತು. ಜಗತ್ತು ಇವರಿಗೆ ಕಾಣಲೇ ಇಲ್ಲ. ನಾನು ಇವರೊಡನೆಯೇ ಇದ್ದರೂ ನಾನು ಸಮುದಾಯದೊಳಗೆ ವ್ಯಕ್ತಿ ನೋಡುತ್ತಿದ್ದೆ ಎಂದು ಕಾಣುತ್ತದೆ. ನಾನು ಇವರ ಜತೆಗಿದ್ದರೂ ನಿಂತ ನೆಲೆ ವಿರುದ್ಧದಂತಿದೆ. ಅದಕ್ಕಾಗೇ ನವ್ಯ ಸಾಹಿತ್ಯದ ಬಂಧ, ಕೇಂದ್ರ, ಪರಕೀಯತೆ, ಇಂಥವುಗಳಿಂದ ನಾನು ಹೊರಗೇ ನಿಂತೆ. ಯಾಕೆಂದರೆ ಹರಿಯುವ ಬದುಕಿಗೆ ಯಾವ ಬಂಧವಿದೆ? ಯಾವ ಕೇಂದ್ರವಿದೆ?

ಈಚೆಗೆ ನಡೆದ ಒಂದು ಚರ್ಚೆ: ನಮ್ಮ ಸಾಹಿತಿಗಳು ಹೇಗೆ ಸ್ಪಂದಿಸುವರು ಎಂಬುದಕ್ಕೆ ಉದಾಹರಣೆಯಾಗಿ- ಅವರು ಇಂದಿನ ಸ್ಥಿತಿಯ ಬಗ್ಗೆ ವಿವರಿಸುತ್ತಾ- "ಇಂದಿನ ನಮ್ಮ ಜೀವನದಲ್ಲಿ ನಾವು ಬಯಸಿದ್ದೆಲ್ಲ ತಕ್ಷಣ ಸಿಗುತ್ತದೆ. ಆಸೆ ಮತ್ತು ನೆರವೇರಿಕೆಯ ನಡುವೆ ಅಂತರ ಕಡಿಮೆಯಾಗಿದೆ" ಎಂದಿದ್ದಾರೆ. ತಮ್ಮ ಸುತ್ತಮುತ್ತಲ ಪರಿಚಯ ಇಲ್ಲದೇನೆ ತಾವೇತಾವಾಗಿ ಸಂತೃಪ್ತರಾದ ವ್ಯಕ್ತಿ ಮಾತ್ರ ಇಂಥ ಮಾತು ಆಡಬಹುದು. ಇಂಡಿಯಾ ತಾರತಮ್ಯ-ಅಸಮಾನತೆಯಲ್ಲಿ ಬೇಯ್ತಾ ಇದೆ, ನನಗೆ ದಿಗಿಲು ಆಗುತ್ತೆ, ಇವರ ಆಸೆ ಎಂಥದೋ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ದಲಿತರ ಬಗ್ಗೆ ಮಾತಾಡುತ್ತಾ 'ಪ್ರತಿಯೊಬ್ಬನೂ ತನ್ನನ್ನು ತಾನೇ ಮೇಲೆತ್ತಿಕೊಳ್ಳುವ ಸ್ಪರ್ಧೆ ಈ ದೇಶದಲ್ಲಿ ಉಂಟಾಗಬೇಕು. ದಲಿತರಿಗೆ ದೊಡ್ಡ ದೊಡ್ಡ ಅಧಿಕಾರ ಕೊಟ್ಟ ಮಾತ್ರಕ್ಕೆ ಅವರ ಉದ್ಧಾರವಾಗುತ್ತದೆಯಾ?' ಎನ್ನುತ್ತಾರೆ. ಇಂಡಿಯಾದಲ್ಲಿ ಒಬ್ಬರ ಮೇಲೊಬ್ಬರು, ಒಬ್ಬರ ಮೇಲೊಬ್ಬರು ಹೀಗೆ ಗೋಪುರದ ಥರಾ ನಿಂತ ರಚನೆಯಿದೆ. ಇಲ್ಲಿ ಹೆಂಗೆ ನ್ಯಾಯಯುತವಾದ ಸ್ಪರ್ಧೆ? ಅಥವಾ ಈ ಗೋಪುರ ರಚನೆ ಕಿತ್ತು ಆರ್ಥಿಕ ಸ್ಥಿತಿಯ ಗತಿಯನ್ನು ಸಮ ಮಾಡಿದರೂ ಕೂಡ ಅಲ್ಲೂ ಸ್ಪರ್ಧೆ ಯಾಕೆ? ಸ್ಪರ್ಧೆಯು ಒಬ್ಬನ ದುಡಿಮೆಯ ಇನ್ನೊಬ್ಬನು ದೋಚಲು ಇರುವ ನೀತಿಯಲ್ಲವೆ? ಇದನ್ನು ಅವರು ಅಪೇಕ್ಷಿಸುತ್ತಾರೆಯೇ? ಈ ದುರಂತಕ್ಕೆ ಏನು ಹೇಳಬೇಕೊ ನಂಗೆ ತಿಳಿಯದು. ಹಾಗೆ ಇಂದು ದಲಿತರಿಗೆ ದೊಡ್ಡ ದೊಡ್ಡ ಅಧಿಕಾರ ಕೊಟ್ಟಮಾತ್ರಕ್ಕೆ ಅವರ ಉದ್ಧಾರ ಸಾಧ್ಯ ಇಲ್ಲಾ ಎಂದು ನಾನೆ ಮೊದಲು ಹೇಳುವೆ. ಆದರೆ ಈ ಕಲಸುಮೇಲೋಗರದೊಳಗೂ ಈ ಸಮಾಜದಲ್ಲಿ ಇದರಿಂದಲೂ ಒಂದಿಷ್ಟು ಬದಲಾವಣೆ ಆಗುತ್ತಿರುವುದನ್ನೂ ನಾವು ಕಡೆಗಣಿಸುವಂತಿಲ್ಲ.

ಅವರೇ ಮುಂದೆ "ಈ ದೇಶದಲ್ಲಿ ಬುದ್ಧಿಯ ವಿರುದ್ಧ, ಉತ್ತಮ ಮೌಲ್ಯಗಳ ವಿರುದ್ಧ ಒಂದು ಹೋರಾಟ ನಡೆಯುತ್ತಾ ಇದೆ. ಅದನ್ನು ನಾವು ಎದುರಿಸಬೇಕು" ಎಂದಿರುವರು. ಈ ದೇಶದಲ್ಲಿ ಯಾವ ತರದ ಬುದ್ಧಿಯಿದೆ? ಸ್ವಲ್ಪ ನೋಡಿದರೆ ಕಾಣುತ್ತೆ. ಸೋಮಾರಿಯಾದ ಪರಾವಲಂಬಿಯಾದ ತರ್ಕದ ಅಪಾಯಕಾರಿ ಬುದ್ಧಿಯನ್ನೇ ಇದುವರೆಗೂ ಕೂಡ ಕಂಡಿರೋದು. ಈ ಬುದ್ಧಿಗೂ ದುಡಿಮೆಗೂ ಎಲ್ಲೂ ಸಂಬಂಧ ಕಾಣುವುದೇ ಇಲ್ಲ. ಇಲ್ಲೂ ಮತ್ತೆ ವಚನಕಾರರ ಯುಗ ಇದಕ್ಕೆ ಹೊರತು. ದುಡಿಮೆ ಮೂಲಕ ಚಿಂತಿಸುವ ಯತ್ನ ನಡೆದ ಅಪೂರ್ವ ಕಾಲ ಅದು. ಇಂದು ಬುದ್ಧಿಗೆ ವಿವೇಕ, ಅಂತಃಕರಣ, ಮಾನವೀಯತೆ ಕೂಡಿಸಬೇಕಾಗಿದೆ.

ಮುಂದೆ ದಲಿತ ಸಾಹಿತ್ಯಕ್ಕೆ ಅವರ ಚರ್ಚೆ ಬರುತ್ತದೆ. ದಲಿತರು ಬರೆದರೂ ಸ್ವಲ್ಪ ಕಾಲ ಪ್ರತಿಭಟನೆಗಾಗಿ ಬರೆದು ಅನಂತರ ನಮ್ಮಂತೆಯೆ ಬರೆದಾರು ಎಂಬ ತೀರ್ಮಾನಕ್ಕೆ ಬರುತ್ತಾರೆ. ಇದು ಒಳ್ಳೆಯದೊ ಕೆಟ್ಟದೊ ನನಗೆ ಗೊತ್ತಾಗುತ್ತಿಲ್ಲ ಮತ್ತು ಇನ್ನೊಂದು ವಿಚಾರ. ಬರಹಗಾರರ ಒಕ್ಕೂಟದ ಬಗ್ಗೆ ಯಾರೋ ಈ ಪ್ರಶ್ನೆ ಕೇಳೀದರು-"ಒಕ್ಕಲಿಗರು, ಲಿಂಗಾಯಿತರೂ ದಲಿತರನ್ನು ಶೋಷಣೆ ಮಾಡುತ್ತಾ ಇರುವರು, ಇವರೊಟ್ಟಿಗೆ ಸಾಮರಸ್ಯ ಹೆಂಗೆ ಸಾಧ್ಯ?" ಅಂತ. ಇಲ್ಲಿ ಶೋಷಣೆ ಎರಡೂ ರೀತಿಯಲ್ಲಿ ಇದೆ. ಒಂದು ಕಾಣೋದು. ಇನ್ನೊಂದು ಕಾಣ್ದೆ ಇರೋದು. ಪ್ರತ್ಯಕ್ಷ ತೆರಿಗೆ, ಅಪ್ರತ್ಯಕ್ಷ ತೆರಿಗೆ ಅಂತಾರಲ್ಲ ಹಂಗೆ. ಇಲ್ಲಿ ಬ್ರಾಹ್ಮಣರು, ಶೂದ್ರರು, ದಲಿತರು ಎಂದು ವಿಂಗಡಿಸಿದರೆ ಅವು ಬುದ್ಧಿ, ಹೃದಯ, ಹೊಟ್ಟೆಯ ಥರ ರಫ್ಆಗಿ ಇದ್ದಂತೆ ಇಲ್ಲಿನ ಸಂಬಂಧ ಎಂದುಕೊಳ್ಳಬಹುದೇನೋ. ಆದರೆ ಬ್ರಾಹ್ಮಣರದು ಕೇವಲ ಒಂದು ಜಾತಿಯಾಗದೆ ಬ್ರಾಹ್ಮಣರೂ ಕೂಡ ಹೇಸುವಂಥ ತಾರತಮ್ಯವನ್ನೇ ಮೌಲ್ಯವಾಗಿಸಿದ ಒಂದು ನೀತಿಯೂ ಆಗಿದೆ. ತಾರತಮ್ಯವೇ ನೀತಿ ಮೌಲ್ಯ ಆಗುವುದು ಹೆಚ್ಚು ದುರಂತಮಯ- ಹೀಗೆ ಅವರಿಗೆ ಹೇಳಿದ ನೆನಪು.

ಕೊನೆಗೆ -ನನ್ನ ಮಾತನ್ನು- ಊರಾಚೆ ಪರಕೀಯವಾಗಿ ಬಿದ್ದು ನರಳುತ್ತಿರುವ ಅಸ್ಪೃಶ್ಯತೆಯ ಆಕ್ರಂದನ, ಕೋಪ, ತಾಪ ಚೀರುತ್ತಿರುವುದು ಪ್ರೀತಿಗಾಗಿ, ಸಮಾನತೆಗಾಗಿ, ಮಾನವತೆಯ ಸ್ಪರ್ಶಕ್ಕಾಗಿ- ಎಂದು ಹೇಳಿ ಮುಗಿಸುತ್ತೇನೆ.

(ಬಹುಶಃ 1974ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ ಒಂದು ಒರಟು ಭಾಷಣ ಆಧಾರಿತ ಲೇಖನ ರೂಪ -ದೇಮ)

ದೇವನೂರ ಮಹಾದೇವ

ದಲಿತ ಸಾಂಸ್ಕೃತಿಕ ಜಗತ್ತಿನ ಸಾಕ್ಷಿ ಪ್ರಜ್ಞೆಯಂತಿರುವ ದೇಮ ಯಾವುದೇ 'ಇಸಂ' ಗಳನ್ನು ಮೀರಿ ನಿಂತವರು. ಗದ್ಯ ಕಾವ್ಯ ಎಂದೇ ಹೆಸರಾದ 'ಕುಸುಮ ಬಾಲೆ' ಕಾದಂಬರಿ ಈವರೆಗೆ ಎಂಟು ಮುದ್ರಣಗಳನ್ನು ಕಂಡಿದೆ. 'ದ್ಯಾವನೂರು' ಮತ್ತು 'ಒಡಲಾಳ' ಇವೆರಡು ಇವರ ಕಥಾ ಸಂಕಲನಗಳು. ತಮ್ಮ ನಡೆ-ನುಡಿಗಳಿಂದ ಸಂತನಂತೆ ಬದುಕುತ್ತಿರುವ ದೇಮ ರಾಷ್ಟ್ರದ ಪರಮೋಚ್ಚ ಪ್ರಶಸ್ತಿಗಳಲ್ಲೊಂದಾದ 'ಪದ್ಮಶ್ರೀ' ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ದಲಿತ ದನಿಯನ್ನು ಸ್ವೋಪಜ್ಞವಾದ ರೀತಿಯಲ್ಲಿ ಬಿಂಬಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ.

ನವಉದಾರೀಕರಣ ವಿರೋಧಿ ಹೋರಾಟ:

ಲ್ಯಾಟಿನ್ ಅಮೇರಿಕಾದ ಪಾಠಗಳು

ಡಾ|| ವಿ.ಎಸ್. ಶ್ರೀಧರ

ಲ್ಯಾಟಿನ್ ಅಮೇರಿಕಾ ದೇಶಗಳ ವಿದ್ಯಮಾನಗಳು ನಮಗೆ ಪ್ರಸ್ತುತವಾಗಬೇಕಿಲ್ಲ; ಈ ದೇಶಗಳು ನಮಗೆ ಅನೇಕ ಚಾರಿತ್ರಿಕ ಕಾರಣಗಳಿಗಾಗಿ ಕೂಡ ಪ್ರಸ್ತುತವೇ. ನಮ್ಮ ದೇಶದಲ್ಲಿ ನಡೆದ ರಾಷ್ಟ್ರೀಯತೆಯ ಹೋರಾಟಕ್ಕೆ ಪಶ್ಚಿಮದಲ್ಲಿ, ಅದರಲ್ಲೂ ಯುರೋಪಿನಲ್ಲಿ, ಉದಯಿಸಿದ ರಾಷ್ಟ್ರೀಯತೆಯ ಸೈಧಾಂತಿಕ ಪ್ರೇರೇಪಣೆ ಇತ್ತು ಎಂಬುದು ಸಾಮಾನ್ಯವಾಗಿ ಇಂದು ಎಲ್ಲೆಡೆ ಸ್ವೀಕೃತವಾಗಿರುವ ವಾದ. ಆದರೆ ಭಾರತದಂಥ ವಸಾಹತು ವಿರೋಧಿ ರಾಷ್ಟ್ರೀಯತೆಯ ಚಳವಳಿಗಳಿಗೆ ದಕ್ಷಿಣ ಅಮೇರಿಕಾದ ಜನರ ಹೋರಾಟವೂ ಸಾಕಷ್ಟು ಕಾಣ್ಕೆಯನ್ನು ನೀಡಿದೆ.

ಜಾಗತೀಕರಣದ ವಿಷ ವರ್ತುಲದೊಳಗೆ ಭಾರತ ಸಿಲುಕಿ ಸುಮಾರು ಎರಡು ದಶಕಗಳು ಕಳೆದಿದೆ. 90ರಲ್ಲಿ ಅಧಿಕೃತವಾಗಿ ಉದ್ಘಾಟಿಸಲ್ಪಟ್ಟ ಈ ಕಾರ್ಯಕ್ರಮದ ಫಲಶೃತಿ ಈಗ ಒಂದೊಂದಾಗಿ ನಮ್ಮ ಮುಂದೆ ಅನಾವರಣಗೊಳ್ಳುತ್ತದೆ. ನೋಡ ನೋಡುತ್ತಿದ್ದಂತೆಯೇ ಸಾರ್ವಜನಿಕ ಕ್ಷೇತ್ರಗಳೆಲ್ಲಾ ಖಾಸಗಿಯವರ ಸ್ವತ್ತಾಗುತ್ತಿದೆ. ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿ ಮೂಲಭೂತ ಸಾರ್ವಜನಿಕ ಸೌಕರ್ಯಗಳಿಗೆ ಎಂದೋ ತಿಲಾಂಜಲಿ ನೀಡಿದ್ದರಿಂದ ಅವು ದಿನೇ ದಿನೇ ದುಬಾರಿಯಾಗುತ್ತಾ ಇವೆ. ಬಡ ರಾಷ್ಟ್ರಗಳ ಆಧಾರ ಸ್ತಂಭವಾಗಿದ್ದ ಕೃಷಿ ಕ್ಷೇತ್ರವಂತೂ ಹಿಂದೆಂದೂ ಕಂಡರಿಯದ ಸಂದಿಗ್ಧತೆಗೆ ಗುರಿಯಾಗಿದೆ. ರೈತರ ಆತ್ಮಹತ್ಯೆಗಳು, ಕಾರ್ಮಿಕರ ಅತಂತ್ರತೆ, ಉದ್ಯೋಗದ ಅಸ್ಥಿರತೆ – ಎಲ್ಲವೂ ಅಬಾಧಿತವಾಗಿ ಮುಂದುವರೆದಿದೆ. ಇಷ್ಟಾದರೂ ಪ್ರಭುತ್ವ ಖಾಸಗೀಕರಣ – ಉದಾರೀಕರಣದ ನೀತಿಯನ್ನು ಮುಂದುವರಿಸಿಕೊಂಡು ಬಂದಿದೆ. ಅಷ್ಟೇ ಅಲ್ಲ ನವಉದಾರೀಕರಣದ ಈ ಯೋಜನೆಗಳನ್ನು ಪ್ರಜೆಗಳ ಹಿತದೃಷ್ಟಿಯಿಂದಲೇ ಕೈಗೆತ್ತಿಕೊಂಡಿರುವುದಾಗಿ ಜನರನ್ನು ನಂಬಿಸಲು ಪ್ರಯತ್ನಿಸುತ್ತಿದೆ. ಈ ಪ್ರಯತ್ನಕ್ಕೆ ನಮ್ಮ ಮಾಧ್ಯಮಗಳು ಕೂಡ ಪೂರಕವಾಗಿಯೇ ಕೆಲಸಮಾಡುತ್ತಿವೆ. ಉದಾಹರಣೆಗೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಒಳ್ಳೆಯದೋ ಕೆಟ್ಟದ್ದೋ ಎಂಬ ಚರ್ಚೆಯನ್ನು ನಮ್ಮ ಮಾಧ್ಯಗಳು ಎಷ್ಟೇ ಬಿರುಸಾಗಿ ನಡೆಸಿಕೊಟ್ಟರೂ, ಈ ವಿದೇಶಿ ಬಂಡವಾಳದ ಹಿಂದೆ ಇರುವ



ಅಂತರರಾಷ್ಟ್ರೀಯ ವಾಣಿಜ್ಯ ಸಂಸ್ಥೆಗಳ ಕೈವಾಡವನ್ನು ಬಯಲಿಗೆಳೆಯಲು ಅವುಗಳಿಗೆ ಇಷ್ಟವಿಲ್ಲ; ಈಗಿರುವ ಮಾಧ್ಯಮಗಳ ಸ್ವರೂಪ ಮತ್ತು ವರ್ಗಹಿತಾಸಕ್ತಿಗಳನ್ನು ನೋಡಿದರೆ ಇಂಥದೊಂದು ಪ್ರಯತ್ನ ಸಾಧ್ಯವೂ ಇಲ್ಲ.

ಇದರಿಂದಾಗಿ ಇಂದು ಒಂದು ಕಡೆ ಬವಣೆಗೊಳಗಾದ ಸಾಮಾನ್ಯ ಪ್ರಜೆಗಳು ವಿಭಿನ್ನ ರೀತಿಯ ಹೋರಾಟಕ್ಕೆ ತೊಡಗಿದ್ದರೆ, ಇನ್ನೊಂದು ಕಡೆ ವಿದ್ಯಾವಂತ, ಮಧ್ಯಮ ವರ್ಗದ ಜನ ಅತ್ಯಂತ ಗೊಂದಲದ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದಾರೆ. ಹೀಗಾಗಿ ಜಾಗತೀಕರಣದ ನಾಗಾಲೋಟಕ್ಕೆ ಪರ್ಯಾಯವೇ ಇಲ್ಲ; ಬದಲಿಗೆ ಈಗಿನ ಪರಿಸ್ಥಿತಿಯಲ್ಲಿ ಅದರಿಂದ ಸಿಗುವ ಲಾಭವನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದಷ್ಟೇ ನಮ್ಮ ಮುಂದಿರುವ ಆಯ್ಕೆಯೆಂದು ಭಾರತದ ಮಧ್ಯಮವರ್ಗ ತನ್ನನ್ನೂ, ತನ್ಮೂಲಕ ಇತರರನ್ನೂ ನಂಬಿಸಲು ಯತ್ನಿಸುತ್ತಿದೆ. ಒಟ್ಟಿನಲ್ಲಿ ಗೊಂದಲ, ಸಂಶಯ, ಸಂಕಟದ ಪರಿಸ್ಥಿತಿಯಲ್ಲಿ ಪ್ರಸ್ತುತ ನಮ್ಮ ಬದುಕು ಸಾಗಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಸಮಾಜದ ಭವಿಷ್ಯವೇನು ಎಂಬ ಪ್ರಶ್ನೆ ಸಹಜವಾಗಿಯೇ ನಮ್ಮ ಮುಂದೆ ಏಳುತ್ತದೆ. ಇದಕ್ಕೆ ಕೇವಲ ಊಹಾಪೋಹದಿಂದಾಗಲೀ ಅಥವಾ ಸಿದ್ಧಮಾರ್ಗದ, ಪೂರ್ವನಿರ್ದೇಶಿತ ಸಿದ್ಧಾಂತಗಳ ಅನ್ವಯದಿಂದಾಗಲೀ ಪರಿಹಾರವನ್ನು ಸೂಚಿಸಲು ಸಾಧ್ಯವಿಲ್ಲ. ಆದರೆ ಇಂದು ಭಾರತ ಅನುಭವಿಸುತ್ತಿರುವ ಜಾಗತೀಕರಣ–ಖಾಸಗೀಕರಣ-ಉದಾರೀಕರಣದ ದುಷ್ಪರಿಣಾಮಗಳನ್ನು ಈಗಾಗಲೇ ಅನುಭವಿಸಿ, ಅವುಗಳಿಂದ ವಿವಿಧ ಸಂಕಷ್ಟಗಳಿಗೆ ಸಿಲುಕಿ ನಲುಗಿಹೋದ ಮತ್ತು ಈ ಅಪಾಯಗಳ ವಿರುದ್ಧ ಹೋರಾಡುತ್ತಿರುವ ಸಮಾಜಗಳ ವಸ್ತುನಿಷ್ಠ ವಿಶ್ಲೇಷಣೆಯಿಂದ ನಮ್ಮ ಸಮಾಜದ ಭವಿಷ್ಯದ ಸ್ವರೂಪ ಹೇಗಿರಬಹುದು ಎಂಬುದನ್ನು ಅರಿಯಲು ಸಾಧ್ಯ.

ಈ ದೃಷ್ಟಿಯಿಂದ ದಕ್ಷಿಣ ಅಮೇರಿಕಾ ದೇಶಗಳ ಸದ್ಯದ ಪರಿಸ್ಥಿತಿ ಅಧ್ಯಯನ ಬಹಳ ಮುಖ್ಯ. ಅನೇಕ ರೀತಿಗಳಲ್ಲಿ ಈ ರಾಷ್ಟ್ರಗಳು ಹಾದು ಹೋದ ದಾರಿಯಲ್ಲೇ, ನಾವು ಈಗ ಸಾಗಿ ಬರುತ್ತಿದ್ದೇವೆ. 80ರ ದಶಕದಲ್ಲಿ ನಮ್ಮ ದೇಶ ಹೆಚ್ಚಿನ ಸಾಲದ ಹೊರೆ ಬೆಳೆಸಿಕೊಂಡು, ಒಂದು ದೊಡ್ಡ ಆರ್ಥಿಕ ಕ್ರೈಸಿಸ್ ಎದುರಿಸುತ್ತಿತ್ತು. ಲ್ಯಾಟಿನ್ ಅಮೇರಿಕಾ ದೇಶಗಳೂ ಇಂಥದೇ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದರಿಂದ ಅವುಗಳನ್ನು ಈ ಸಂಕಟದಿಂದ "ಪಾರು" ಮಾಡಲು, ಉತ್ತರ ಅಮೇರಿಕಾ ನವಉದಾರೀಕರಣದ (ನಿಯೋಲಿಬರಲಿಸಂ) ಸೂತ್ರವನ್ನು ಮುಂದೊಡ್ಡಿತು. ಸಾಲದ ಹೊರೆಯನ್ನು ಹೇರಿಸಿದ ವಿಶ್ವ ವಾಣಿಜ್ಯ ಸಂಸ್ಥೆಗಳೇ ಈ ಸಂಕಷ್ಟದಿಂದ ವಿಮೋಚನೆಯನ್ನು ಒದಗಿಸಬಲ್ಲ ಮಾರ್ಗವನ್ನೂ ಹಾಕಿಕೊಟ್ಟವು. ಅದೆಂದರೆ ತನ್ನೆಲ್ಲಾ ಷರತ್ತುಗಳಿಗೆ ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳು ಒಪ್ಪಿ, ತಮ್ಮ ಸಂಪನ್ಮೂಲಗಳನ್ನು ಮುಕ್ತ ಮಾರುಕಟ್ಟೆಯ ಕಾಲುಬುಡಕ್ಕೆ ಸಮರ್ಪಿಸಿಕೊಳ್ಳಬೇಕು. ಹೀಗೆ ಆ ದೇಶಗಳು ನವಉದಾರೀಕರಣದ ಸಾಮಾಜಿಕ, ಆರ್ಥಿಕ ಬದಲಾವಣೆಗಳ ಪ್ರಥಮ ಪ್ರಯೋಗ ಶಾಲೆಗಳಾದವು. ಪ್ರಪಂಚದ ಇನ್ಯಾವುದೇ ಭಾಗದಲ್ಲಿ ಆಗದಷ್ಟು ವ್ಯಾಪಕವಾಗಿ ಮತ್ತು ಆಳವಾಗಿ ಜಾಗತೀಕರಣದ ಬೇರುಗಳು ಈ



ಲ್ಯಾಟಿನ್ ಅಮೇರಿಕಾದ ದೇಶಗಳು ಒಂದಾದ ಮೇಲೆ ಒಂದರಂತೆ ಈ ನವಉದಾರೀಕರಣದ ತೆಕ್ಕೆಗೆ ಬೀಳತೊಡಗಿದವು. ಮಿಲಿಟರಿ ಆಳ್ವಿಕೆಗಳಿಂದ ಬೇಸತ್ತ ಜನರಿಗೆ, ಉದಾರೀಕರಣದ ಆರ್ಥಿಕನೀತಿ ಮುಕ್ತ ಸ್ವಾತಂತ್ರ್ಯವನ್ನು ತಂದು ಕೊಡುವ ಭರವಸೆಯ ಹಾಗೆ ಕಾಣತೊಡಗಿತು. ಆದರೆ ಇದರಿಂದ ಜನರ ನಿತ್ಯ ಬದುಕಿನ ಬವಣೆ ಹೆಚ್ಚಾಗತೊಡಗಿತು. 1985ರಲ್ಲಿ ವೆನಿಜುವೆಲಾದ ರಾಜಧಾನಿ ಕಾರಕಾಜೇದಲ್ಲಿ ಉದಾರವಾದಿ ಧೋರಣೆ ವಿರೋಧಿಸಿ ದೊಡ್ಡ ಪ್ರಜಾ ಪ್ರತಿಭಟನೆಯ ರ್‍ಯಾಲಿ ನಡೆಯಿತು.

ದೇಶಗಳಲ್ಲಿ ಊರಿಕೊಂಡವು. ಬಹುಶಃ ಇದೇ ಕಾರಣಕ್ಕಾಗಿಯೇ ಜಾಗತೀಕರಣದ ವಿರುದ್ಧ ಬಹಳ ಸ್ಪಷ್ಟ ಹಾಗೂ ಉಗ್ರವಾದ ಹೋರಾಟವೂ ಅಲ್ಲೇ ಹುಟ್ಟಿಕೊಂಡಿತು.

ಜಾಗತೀಕರಣದ ಪರಿಣಾಮಗಳ ಬಗ್ಗೆ ಇನ್ನೂ ಗೊಂದಲವಿರುವ, ಅದಕ್ಕೆ ಪರ್ಯಾಯ ಮಾರ್ಗಗಳು ಇರಲು ಸಾಧ್ಯವೇ ಇಲ್ಲ ಎನ್ನುವ ಹತಾಶ ಮನೋಭಾವವೇ ಪ್ರಧಾನವಾಗಿರುವ ನಮ್ಮ ಈಗಿನ ಸನ್ನಿವೇಶಕ್ಕೆ, ಲ್ಯಾಟಿನ್ ಅಮೇರಿಕಾದ ವಿವಿಧ ರಾಷ್ಟ್ರಗಳಲ್ಲಿ ನಡೆದ, ನಡೆಯುತ್ತಿರುವ ಹೋರಾಟ ಒಂದು ದಿಕ್ಸೂಚಿಯಾಗಬಹುದು.

ಆದರೆ ಇದೊಂದೇ ಕಾರಣಕ್ಕೆ ಲ್ಯಾಟಿನ್ ಅಮೇರಿಕಾ ದೇಶಗಳ ವಿದ್ಯಮಾನಗಳು ನಮಗೆ ಪ್ರಸ್ತುತವಾಗಬೇಕಿಲ್ಲ; ಈ ದೇಶಗಳು ನಮಗೆ ಅನೇಕ ಚಾರಿತ್ರಿಕ ಕಾರಣಗಳಿಗಾಗಿ ಕೂಡ ಪ್ರಸ್ತುತವೇ. ನಮ್ಮ ದೇಶದಲ್ಲಿ ನಡೆದ ರಾಷ್ಟ್ರೀಯತೆಯ ಹೋರಾಟಕ್ಕೆ ಪಶ್ಚಿಮದಲ್ಲಿ, ಅದರಲ್ಲೂ ಯುರೋಪಿನಲ್ಲಿ, ಉದಯಿಸಿದ ರಾಷ್ಟ್ರೀಯತೆಯ ಸೈದ್ಧಾಂತಿಕ ಪ್ರೇರೇಪಣೆ ಇತ್ತು ಎಂಬುದು ಸಾಮಾನ್ಯವಾಗಿ ಇಂದು ಎಲ್ಲೆಡೆ ಸ್ವೀಕೃತವಾಗಿರುವ ವಾದ. ಆದರೆ ಭಾರತದಂಥ ವಸಾಹತು ವಿರೋಧಿ ರಾಷ್ಟ್ರೀಯತೆಯ ಚಳುವಳಿಗಳಿಗೆ ದಕ್ಷಿಣ ಅಮೇರಿಕಾದ ಜನರ ಹೋರಾಟವೂ ಸಾಕಷ್ಟು ಕಾಣ್ಕೆಯನ್ನು ನೀಡಿದೆ. ಸ್ಪಾನಿಷ್ ವಸಾಹತು ಆಳ್ವಿಕೆಯ ವಿರುದ್ಧ ಸೈಮನ್ ಬೊಲಿವಾರ್ ನೇತೃತ್ವದಲ್ಲಿ ನಡೆದ ಹೋರಾಟ, ದಕ್ಷಿಣ ಅಮೇರಿಕಾದ ಜನ ಈ ಹೋರಾಟದಲ್ಲಿ ಪಾಲ್ಗೊಂಡ ರೀತಿ, ಇವೆಲ್ಲವೂ 19ನೆಯ ಶತಮಾನದಲ್ಲೇ ರಾಜರಾಮ ಮೋಹನ್‌ರಾಯ್ ಅಂಥವರ ಗಮನ ಸೆಳೆದಿತ್ತು. ವೈವಿಧ್ಯಮಯವಾದ ಸಾಂಸ್ಕೃತಿಕ ವಿನ್ಯಾಸಗಳಿಂದ ಕೂಡಿದ್ದ ವಿವಿಧ ರಾಷ್ಟ್ರೀಯತೆಗಳು ವಸಾಹತುಶಾಹಿ ಜತೆ ಹೋರಾಡುತ್ತಲೇ ತಮ್ಮ ತಮ್ಮ ರಾಷ್ಟ್ರಗಳನ್ನು ರಚಿಸಿಕೊಂಡ ರೀತಿ, ರಾಯ್ ಮತ್ತು ಇತರ ರಾಷ್ಟ್ರೀಯ ನೇತಾರರಿಗೆ ಭಾರತದಲ್ಲೂ ಅದೇ ರೀತಿಯ ಭಿನ್ನ ಮಾದರಿಯ ರಾಷ್ಟ್ರೀಯತೆಯಿಂದ ಕೂಡಿದ ಸ್ವರಾಜ್ಯವನ್ನು ಕಟ್ಟುವ ಪ್ರೇರೇಪಣೆ ನೀಡಿತ್ತು.

ಈಗ ನೂರು ವರ್ಷಗಳ ನಂತರ ಚರಿತ್ರೆಯ ಪುನರಾವರ್ತನೆಯಾಗುತ್ತಿದೆ. ನವವಸಾಹತುಶಾಹಿಯ ಕೂಸಾದ ಜಾಗತೀಕರಣ ವಿರೋಧಿ ಹೋರಾಟಕ್ಕೆ ಬೇಕಾದ ಪರ್ಯಾಯ ಆರ್ಥಿಕ ನೀತಿ ಮತ್ತು ಕಾರ್ಯಯೋಜನೆಗಳ ಕಾಣ್ಕೆಯನ್ನೂ ನಾವು ಈ ದೇಶಗಳ ವರ್ತಮಾನದ ವಿದ್ಯಮಾನಗಳಿಂದಲೇ ಪಡೆದುಕೊಳ್ಳಬಹುದು! ಉದಾಹರಣೆಗೆ ವಸಾಹತುಸಾಹಿಯ ಅದಿಮ ದಿನಗಳಿಂದ, ಎರಡನೇ ಮಹಾಯುದ್ಧದವರೆಗೂ, ಪ್ರಪಂಚದ ಎಲ್ಲಾ ದೇಶಗಳೂ ಯೂರೋಪ್ ಮತ್ತು ಉತ್ತರ ಅಮೇರಿಕಾಗಳಿಗೆ ಬೇಕಾದ ಕಚ್ಚಾ



ಸಾಮಗ್ರಿಗಳನ್ನು ಒದಗಿಸುವ ಆದರೆ ವ್ಯಾಪರದ ಸಕಲ ಹಿಡಿತವನ್ನೂ ಈ ಕೇಂದ್ರಗಳಿಗೇ ಬಿಟ್ಟು ಕೊಟ್ಟಿರುವ ದಾಸ ರಾಷ್ಟ್ರಗಳಾಗಿಯೇ ಮುಂದುವರೆದಿದ್ದವು. ಶೋಷಣೆಯ ಸ್ವರೂಪದಲ್ಲಿ ಎಂಥ ಬದಲಾವಣೆಗಳು ಬಂದರೂ, ಈ ಕೇಂದ್ರ-ಪರಿಧಿಯ ಮಾದರಿಮಾತ್ರ ಎಳ್ಳಷ್ಟೂ ಬದಲಾಗದೆ, ಬೆಳೆದುಕೊಂಡು ಬಂದಿತ್ತು. ಪ್ರಪಂಚದ ನಾನಾ ಕಡೆ ಈಗಲೂ ಈ ಮಾದರಿಯೇ ಶೋಷಣೆಯ ಮೂಲ ಪ್ರೇರಣೆಯಾಗಿ ಮುಂದುವರೆದಿದೆ ಕೂಡ. ಆದರೆ ಇದಕ್ಕೆ ನಿಜವಾಗಿಯೂ ಧಕ್ಕೆ ಉಂಟಾಗಿದ್ದು, ಕೆರೇಬಿಯನ್ ಮತ್ತು ಲ್ಯಾಟಿನ್ ಅಮೇರಿಕಾದ ಆರ್ಥಿಕ ಕಮಿಷನ್ ತಯಾರು ಮಾಡಿದ ಬದಲೀ ಆಮದು ಉದ್ಯೋಗೀಕರಣ ನೀತಿ (Import Substitution Industrialization Strategy). ಇದರ ಪ್ರಕಾರ 'ಕಚ್ಚಾ ಸಾಮಗ್ರಿಗಳ ಪೂರೈಕೆ, ಸಿದ್ಧ ವಸ್ತುಗಳ ಆಮದು' ಎಂಬ ಆರ್ಥಿಕ ಮಾದರಿಯಿಂದ ಹೈರಾಣಾಗಿದ್ದ ರಾಷ್ಟ್ರಗಳು, ತಮ್ಮ ವ್ಯಾಪಾರದ ನೀತಿಯನ್ನೇ ಬದಲಿಸಿಕೊಂಡು, ಹೆಚ್ಚಿನ ದರಗಳಿಗಾಗಿ ತಮ್ಮಲ್ಲೇ ಒಕ್ಕೂಟ ರಚಿಸಿಕೊಂಡು, ಕೇಂದ್ರ-ಪರಿಧಿಯ ಸಿದ್ಧ ಸೂತ್ರಕ್ಕೆ ಬಲವಾದ ಪೆಟ್ಟುಕೊಡುವ ರಣತಂತ್ರವನ್ನು ರೂಪಿಸಲು ಮುಂದಾದವು. ಇದು ಅಲಿಪ್ತ ರಾಷ್ಟ್ರಗಳ ರಾಜಕೀಯ ಆರ್ಥಿಕ ಚೌಕಟ್ಟನ್ನೇ ಬದಲಿಸಿ ಅಲಿಪ್ತ (ನ್ಯಾಮ್) ಚಳುವಳಿಯ ದಿಕ್ಕನ್ನೇ ಬದಲಿಸಬಲ್ಲ ಶಕ್ತಿಯನ್ನು ಪಡೆದುಕೊಂಡಿತ್ತು. ಈ ಚಳುವಳಿಯ ಮುಖ್ಯ ಧ್ವನಿಗಳಲ್ಲಿ ಒಂದಾದ ಪ್ರೆಬಿಶ್ಚ್ ಎಂಬ ವ್ಯಕ್ತಿ ಮುಂದೆ ವ್ಯಾಪಾರ, ಅಭಿವೃದ್ಧಿಗಾಗಿ ವಿಶ್ವಸಂಸ್ಥೆಯ

ಲ್ಯಾಟಿನ್ ಅಮೇರಿಕಾ ದೇಶಗಳು ವಿಮೋಚನೆಯ ಹೋರಾಟಕ್ಕೆ ಮಾದರಿಯಾಗಿವೆ. ಆದರೆ ಹೀಗೆಂದ ಕೂಡಲೇ ಇವೆಲ್ಲಾ ದೇಶಗಳ ಒಳರಚನೆ, ರಾಜಕೀಯ/ಆರ್ಥಿಕ ಸ್ವರೂಪ ಒಂದೇ ತೆರನಾದದ್ದು ಎಂದು ಹೇಳುವಂತಿಲ್ಲ. ಅಥವಾ ನಮ್ಮ ಎಲ್ಲ ಸಂಕಷ್ಟಗಳಿಗೆ ಲ್ಯಾಟಿನ್ ಅಮೆರಿಕ ಒಂದು ಸಿದ್ಧಮಾದರಿಯ ಪರ್ಯಾಯವನ್ನು ಒದಗಿಸುತ್ತದೆ ಅನ್ನುವುದೂ ಕೂಡ ಹುಂಬತನದ ಮಾತಾಗುತ್ತದೆ.

ಒಕ್ಕೂಟದ (UNCTAD) ಮುಖ್ಯಸ್ಥನೂ ಆದ. ಆದರೆ ಈ ಹೊಸ 'ಬದಲು ಆಮದು ನೀತಿ' ತಮ್ಮ ಯಾವತ್ತೂ ಅಧಿಕಾರವನ್ನು ನಿರ್ನಾಮ ಮಾಡಬಹುದೆಂಬ ಅರಿವಿದ್ದ ವಿಶ್ವ ವಾಣಿಜ್ಯ ಸಂಸ್ಥೆ ಮತ್ತು ಅದನ್ನು ಸದಾ ಪೋಷಿಸುವ ಉತ್ತರ ಅಮೇರಿಕಾ, ಈತನನ್ನು ಹೆಚ್ಚು ಕಾಲ ಅಧಿಕಾರದಲ್ಲಿರಲು ಬಿಡಲಿಲ್ಲ. ಹಾಗಾಗಿ 1969ರಲ್ಲಿ ಪ್ರೆಬಿಶ್ಚ್ ತನ್ನ ಹುದ್ದೆಗೆ ರಾಜಿನಾಮೆ ನೀಡಿ ಹೊರಬರಬೇಕಾಯಿತು. ಆದರೆ ಆತ ಮತ್ತು ಈ ನೀತಿಯ ವಕ್ತಾರರಾಗಿದ್ದ ಅನೇಕರಿಗೆ ಒಂದು ಜ್ಞಾನೋದಯವಾಯಿತು. ಅದೇನೆಂದರೆ, ಜಾಗತಿಕ ಅಸಮತೋಲನ, ವಿಶ್ವ ವಾಣಿಜ್ಯ ಸಂಸ್ಥೆಗಳ ಹಿಡಿತ ಇತ್ಯಾದಿಗಳನ್ನು ಬದಲಾಯಿಸುವುದಕ್ಕೆ ಕೇವಲ ಪರ್ಯಾಯ ಆರ್ಥಿಕ ಅಭಿವೃದ್ಧಿ ಮಾದರಿ ಮಾತ್ರ ಸಾಲದು. ಅದಕ್ಕೆ ಹೊಂದಿಕೊಳ್ಳುವ ಪರ್ಯಾಯ ಸಾಮಾಜಿಕ ಬದಲಾವಣೆಯೂ ಅಗತ್ಯ. ಸಾಮಾಜಿಕ ಸಂರಚನೆಯನ್ನು ಪುನರ್ ರೂಪಿಸಿಕೊಳ್ಳದ ಯಾವ ಅರ್ಥಿಕತೆಯೂ ದೀರ್ಘಕಾಲಿನ ಪರಿಣಾಮವನ್ನು ನೀಡಲಾಗದು ಎಂಬ ಸತ್ಯದ ಅರಿವು.

ಈ ತಿಳುವಳಿಕೆ ಆಲಿಪ್ತ ಚಳುವಳಿಯ ಭಾಗವಾಗಿ ಮುಂದುವರೆದಿದ್ದರೆ ಪ್ರಪಂಚದ ರಾಷ್ಟ್ರಗಳ ಸಂಬಂಧ ಬೇರೆಯದೇ ಆಗಿ ಬೆಳೆಯಲು ಸಾಧ್ಯವಾಗುತ್ತಿತ್ತೋ ಏನೋ. ಭಾರತ ಕೂಡ, ಸ್ವಾತಂತ್ರ್ಯ ಬಂದ ಮೊದಲ ಕೆಲವು ದಶಕಗಳಲ್ಲಿ, ತನ್ನ ರಾಷ್ಟ್ರೀಯತೆಯ ಭಾಗವಾಗಿ ಬದಲೀ ಆಮದು ನೀತಿಯನ್ನು ಅನುಸರಿಸಿತು; ತನ್ಮೂಲಕ ವಿದೇಶ ಹೊಡೆತದಿಂದ ದೇಶಿ ಆರ್ಥಿಕತೆಯನ್ನು ರಕ್ಷಿಸುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಯಿತ್ತು ಕೂಡ. ಸ್ವತಂತ್ರ ಭಾರತದ ಮೊದಲ ಕೆಲವು ದಶಕಗಳ ಆರ್ಥಿಕ ಪ್ರಗತಿ ಮತ್ತು ಸಂರಕ್ಷಣೆಗೆ, ಲ್ಯಾಟಿನ್ ಅಮೇರಿಕಾ ದೇಶಗಳ ನೇತಾರರ ಪರೋಕ್ಷ ಕೊಡುಗೆಯೂ ಕಾರಣ. ಆದರೆ ಈ ಆರ್ಥಿಕ ಪ್ರಗತಿ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯ ಜತೆ ಜತೆಗೆ ಸಾಗದೇ ಇದ್ದದ್ದರಿಂದ, ಅದರ ಉದ್ದೇಶ ವಿಫಲವಾಯಿತು. ಉಳ್ಳವರ-ಉಳ್ಳದವರ ನಡುವಿನ ಅಂತರ ಹೆಚ್ಚಾಯಿತು. ಇನ್ನೊಂಡು ಕಡೆ ಅಧಿಕಾರಿಶಾಹಿಯ ಹಿಡಿತ ಹೆಚ್ಚಾಗಿ 'ಲೈಸನ್ಸ್ ರಾಜ್' ಶುರುವಾಯಿತು. ಇದಕ್ಕೆ ಪರ್ಯಾಯವಾಗಿ, ಮೂಲೆಯಲ್ಲಿ ಹೊಂಚುಹಾಕಿ ಕುಳಿತಿದ್ದ 'ಮುಕ್ತ ಮಾರುಕಟ್ಟೆ' ನೀತಿ ಕೇಂದ್ರ ಸ್ಥಾನಕ್ಕೆ ಜಿಗಿದು, ವಿಶ್ವ ವಾಣಿಜ್ಯ ಸಂಸ್ಥೆ ಮತ್ತು ಉತ್ತರ ಅಮೇರಿಕಾ ಸಾಮ್ರಾಜ್ಯ ಶಾಹಿಯ ಸಹಾಯದಿಂದ ಮನ್ನಣೆಗಳಿಸಿಕೊಂಡಿತು. ಈಗಲೂ ಸಾಮಾಜಿಕ ಸಂರಚನೆಯ ಮೂಲಭೂತ ಬದಲಾವಣೆಯ ಹಂಗಿಲ್ಲದ ಆರ್ಥಿಕ ಬೆಳವಣಿಗೆ ಎಂಥ ದುಷ್ಪರಿಣಾಮಗಳನ್ನು ಉಂಟುಮಾಡಬಲ್ಲದು ಎಂಬುದಕ್ಕೆ ವರ್ತಮಾನದ ಭಾರತ ಸಾಕ್ಷಿಯಾಗಿದೆ. ಸಾಮಾಜಿಕ ಬದಲಾವಣೆ, ಆರ್ಥಿಕ ಪ್ರಗತಿಗಿಂತಲೂ ಮುಖ್ಯ ಎಂಬ ಕ್ಯೂಬಾ ದೇಶದ ರಾಜಕೀಯ ನೀತಿ – ಅದರ ಎಲ್ಲ ಎಡವಟ್ಟುಗಳೊಂದಿಗೆ – ಈಗಲೂ ಒಂದು ಪರ್ಯಾಯ ಮಾದರಿಯಾಗಿ ನಮ್ಮ ಮುಂದಿದೆ. ಸಾರಾಂಶದಲ್ಲಿ ಹೇಳುವುದಾದರೆ, ವಸಾಹತು ವಿರೋಧಿ ಹೋರಾಟದಿಂದ, ಜಾಗತೀಕರಣ ವಿರೋಧಿ ಹೋರಾಟದವರೆಗೂ ಲ್ಯಾಟಿನ್ ಅಮೇರಿಕಾ ದೇಶಗಳು



ವಿಮೋಚನೆಯ ಹೋರಾಟಕ್ಕೆ **ಮಾದರಿಯಾಗಿವೆ.** ಆದರೆ ಹೀಗೆಂದ ಕೂಡಲೇ ಇವೆಲ್ಲಾ **ದೇಶಗಳ** ಒಳರಚನೆ, ರಾಜಕೀಯ/ಆರ್ಥಿಕ ಸ್ವರೂಪ ಒಂದೇ ತೆರೆನಾದದ್ದು ಎಂದು ಹೇಳುವಂತಿಲ್ಲ. ಅಥವಾ ನಮ್ಮ ಎಲ್ಲ ಸಂಕಷ್ಟಗಳಿಗೆ ಲ್ಯಾಟಿನ್ ಅಮೆರಿಕ ಒಂದು ಸಿದ್ಧಮಾದರಿಯ ಪರ್ಯಾಯವನ್ನು ಒದಗಿಸುತ್ತದೆ ಅನ್ನುವುದೂ ಕೂಡ ಹುಂಬತನದ ಮಾತಾಗುತ್ತದೆ. ಅಲ್ಲದೇ ಭಾರತದಂಥ ರಾಷ್ಟ್ರಗಳಿಗೂ, ಲ್ಯಾಟಿನ್ ಅಮೇರಿಕಾದ ದೇಶಗಳು ಎದುರಿಸಿದ ಬಿಕ್ಕಟ್ಟಿಗೂ ಅನೇಕ ವಿಭಿನ್ನತೆಗಳಿವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಉತ್ತರ ಅಮೇರಿಕಾದ ಸಾಮ್ರಾಜ್ಯಶಾಹಿ ವಿಸ್ತರಣೆಗೆ ಮೊದಲ ಅಡುಂಬೊಲವಾಗಿದ್ದು ಈ ದಕ್ಷಿಣ ಅಮೇರಿಕಾ ರಾಷ್ಟ್ರಗಳೇ ಆದ್ದರಿಂದ ಒಂದೊಂದಾಗಿ ಅಲ್ಲಿ ಚುನಾಯಿತ ಸರ್ಕಾರಗಳನ್ನು ಮುರಿದು ಬೆಳೆಸುತ್ತಾ ಆ ಜಾಗದಲ್ಲೇ ತನ್ನ ಕೈಗೊಂಬೆಗಳನ್ನು ಕೂರಿಸುತ್ತಾ ಬಂತು. ಹೀಗೆ ಅಧಿಕಾರಕ್ಕೆ ಬಂದವರೆಲ್ಲಾ ಮಿಲಿಟರಿ ಡಿಕ್ಟೇಟರ್‌ಗಳೋ ಅಥವಾ ಮೇಲ್ನೋಟಕ್ಕೆ ಪ್ರಜಾಪ್ರಭುತ್ವವಾದಿಗಳ ಥರ ಇದ್ದುಕೊಂಡು, ಒಳಗೊಳಗೆ ತಮ್ಮ ಅಧಿಕಾರವನ್ನು ಉತ್ತರ ಅಮೆರಿಕಾದ ಪದತಳದಲ್ಲಿ ಅಡವಿಟ್ಟಂತಹ ಬನಾನಾ ರಿಪಬ್ಲಿಕ್‌ಗಳೋ ಆಗಿದ್ದುದು ಕಾಕತಾಳಿಯವಲ್ಲ. ವಾಣಿಜ್ಯ ಸಂಸ್ಥೆಗಳಿಂದ ಯದ್ವಾತದ್ವಾ ಹಣ ಸಾಲಮಾಡಿದ ಈ ಸರ್ವಾಧಿಕಾರಿಗಳು ತಮ್ಮ ದೇಶಗಳನ್ನು ಆರ್ಥಿಕ ಮುಗ್ಗಟ್ಟಿನ ಅಂಚಿಗೆ ತಂದು ನಿಲ್ಲಿಸಿದರು. ಇದನ್ನು ವಿರೋಧಿಸಿದ ಜನರ ಗುಂಪುಗಳು ಅಲ್ಲಿ ಒಂದು **ಆಂತರಿಕ** ಯುದ್ಧದ ಪರಿಸ್ಥಿತಿಯನ್ನು ನಿರ್ಮಾಣ **ಮಾಡಿದ್ದವು.**

1965ರಲ್ಲೇ ಡೊಮಿನಿಯತ್ ರಿಪಬ್ಲಿಕ್‌ನ ಮೇಲೆ **ಲಿಂಡನ್ ಜಾನ್‌ಸನ್** ಸರ್ಕಾರ ಮಿಲಿಟರಿ ದಬ್ಬಾಳಿಕೆ **ನಡೆಸಿತು.** ಆಗಿನ ಜನಪ್ರಿಯ **ನಾಯಕರಾಗಿದ್ದ ಜುವಾನ್ ಬೋಶ್ಚ್** ಅನ್ನು ಪದಚ್ಯುತಗೊಳಿಸಿದ ಅಮೆರಿಕ, ನಂತರ **ನಡೆಸಿದ ಚುನಾವಣೆಗಳೆಲ್ಲವನ್ನೂ** ತನಗೆ ಬೇಕಾದ ಹಾಗೆ ರಿಗ್ ಮಾಡುತ್ತಾ ಬಂತು. ಈ ಚುನಾವಣೆಗಳ ಸ್ವತಂತ್ರ ವೀಕ್ಷಕರಾಗಿ ಹೋಗಿದ್ದ ಇಬ್ಬರು ಅಮೆರಿಕಾ ದೇಶದ **ಪ್ರಜೆಗಳು ಈ ಚುನಾವಣೆಯ ಪ್ರಹಸನಕ್ಕೆ** ಬೇಸತ್ತು ಅಲ್ಲಿನ **ವಿದ್ಯಮಾನವನ್ನು ತಮ್ಮ ದೇಶದಲ್ಲಿ** (ಅಂದರೆ ಉತ್ತರ **ಅಮೇರಿಕಾದಲ್ಲಿ) ಪ್ರಚಾರಮಾಡುತ್ತಾ** ಬಂದರು. ಇವರ **ಪ್ರಯತ್ನದ ಫಲವಾಗಿ 65ರ ಕೊನೆಗೆ** ನಾರ್ತ್ **ಅಮೇರಿಕನ್ ಕಾಂಗ್ರೆಸ್ ಆನ್ ಲ್ಯಾಟಿನ್** ಅಮೇರಿಕಾ **(NACLA)** ಎಂಬ ಬಳಗವನ್ನು ನ್ಯೂಯಾರ್ಕ್ ನಗರದಲ್ಲಿ **ಹುಟ್ಟುಹಾಕಿದರು. ಈ** ಸಂಸ್ಥೆ ಮುಂದೆ **ಲ್ಯಾಟಿನ್ ಅಮೇರಿಕಾದಲ್ಲಿ ಉತ್ತರ** ಅಮೇರಿಕಾ **ನಡೆಸುತ್ತಿದ್ದ ದಂದೆಯನ್ನು ಒಂದೊಂದಾಗಿ ಬಯಲಿಗೆಳೆಯಲು ಮುಂದಾಯಿತು.** ಈ ಸಂಸ್ಥೆ **ತರುತ್ತಿದ್ದ ಪತ್ರಿಕೆ, ಅಮೇರಿಕಾ ತನ್ನ** ವಿದೇಶಿ ನೀತಿಯ **ಗುರಿಯನ್ನು ಸಾಧಿಸಲು (ಅಂದರೆ** ತನ್ನ ಅಧಿಪತ್ವವನ್ನು **ಸ್ಥಾಪಿಸಲು) ಹೇಗೆ ಕೆಲವು ಕಡೆ ಚುನಾವಣೆಗಳನ್ನು ಕೆಲವೆಡೆ ಮಿಲಿಟರಿ ಕ್ಷಿಪ್ರ ಕ್ರಾಂತಿಯನ್ನು** ಬಳಸುತ್ತದೆ ಎಂಬುದರ ಬಗ್ಗೆ ಬರೆಯುತ್ತಾ **ಹೋಯಿತು.** ಹಾಗೆಯೇ **ಉತ್ತರ ಅಮೇರಿಕಾ ಬಡದೇಶಗಳಿಗೆ** ಕೊಡುತ್ತಿದ್ದ **ಧನಸಹಾಯ, ಆಹಾರ–ಔಷಧಿ** ನೆರವು ಇತ್ಯಾದಿ **ಎಲ್ಲರೀತಿಯ "ಮಾನವೀಯ" ಕಾರ್ಯಕ್ರಮಗಳ** ಹಿಂದೆ **ಇದ್ದ ಅಮಾನವೀಯ, ದೂರ್ತ** ಸಾಮಾಜ್ಯಶಾಹಿ **ಉದ್ದೇಶಗಳನ್ನು ಪ್ರಪಂಚಕ್ಕೆ** – ಮುಖ್ಯವಾಗಿ ಉತ್ತರ **ಅಮೇರಿಕಾದ ಜನತೆಗೆ – ತಿಳಿಸುತ್ತಾ ಹೋಯಿತು.** ಈ **ಹೊತ್ತು ಜಾಗತೀಕರಣವನ್ನು** ಶತಾಯಗತಾಯ **ಜಾರಿಗೊಳಿಸುತ್ತೇವೆ ಎಂದು ಅಮೆರಿಕಾಗೆ** ಭಾಷೆಕೊಟ್ಟು, **ಅದನ್ನು ಚಾಚೂತಪ್ಪದೆ** ನಡೆಸಿಕೊಡುತ್ತಿರುವ **ಮನಮೋಹನಸಿಂಗ್, ಮೋಂಟೆಕ್** ಸಿಂಗ್‌ಗಳ **'ಮಾನವೀಯ'** ಮುಖದ ಹಿಂದೆ, ಇದೇ ಸಾಮ್ರಾಜ್ಯ **ಶಾಹಿ ಹಿಡಿತದ** ರಣತಂತ್ರವೇ ಅಡಗಿದೆ ಎನ್ನುವುದು **ಅಮೇರಿಕಾ ವಿದೇಶಿ** ನೀತಿಯ ಮುಂದುವರಿಕೆ ನಮ್ಮ **ದೇಶದಲ್ಲೂ** ಅನಿರ್ಭಂದಿತವಾಗಿ ಮುಂದುವರೆಯುತ್ತಿದೆ **ಎಂಬುದಕ್ಕೆ ಸಾಕ್ಷಿ.**

'ನಾಕ್ಲಾ' ಸಂಘಟನೆ ಮುಂದೆ ತನ್ನ ವರದಿಯನ್ನು ಕ್ಷೇತ್ರವನ್ನು ವಿಸ್ತರಿಸಿ ಅಮೆರಿಕಾ ಸರ್ಕಾರದ ಕಿರುಕುಳದ **ನಡುವೆಯೂ, ತನ್ನ ಕೆಲಸವನ್ನು ಮುಂದುವರಿಸಿಕೊಂಡು ಹೋಯಿತು.** ಅಮೆರಿಕಾದ ಹುನ್ನಾರದ **ಜತೆಗೆ, ಲ್ಯಾಟಿನ್ ಅಮೇರಿಕಾದ** ದೇಶಗಳಲ್ಲಿ ಭುಗಿಲೇ**ಳುತ್ತಿದ್ದ ಜಾಗತೀಕರಣ ವಿರೋಧಿ ಚಳುವಳಿ** ಬಗ್ಗೆ ಕೂಡ **ವರದಿ ಮಾಡುತ್ತಾ ಬಂತು. ಹಾಗೆಯೇ ಈ** ನವ ಉದಾರೀಕರಣವೆಂಬ ಬಂಡವಾಳಶಾಹಿಯ ಹೊಸ ಅವತಾರದ ಬಗ್ಗೆಯೂ ಬರೆಯಿತು.

ಈ **ಮೊದಲೇ ಸೂಚಿಸಿದ** ಹಾಗೆ 70ರ ನಂತರ ಜಾಗತಿಕ ಬಂಡವಾಳಶಾಹಿ ಎದುರಿಸುತ್ತಿದ್ದ ಸಂಕಷ್ಟಗಳಿಂದ ಪಾರಾಗುವ ಮಾರ್ಗಕ್ಕೆ 'ನವಉದಾರೀಕರಣ' ಎನ್ನಲಾಗುತ್ತದೆ. ಇದರ ಮುಖ್ಯ ಐಡಿಯಾಲಜಿ ಎಂದರೆ 'ಮುಕ್ತ' ಮಾರುಕಟ್ಟೆಯನ್ನು ಸಮಾಜದ ರಚನೆಯ ಭಾಗವನ್ನಾಗಿಸುವುದು. ಅಂದರೆ, ಮನಷ್ಯನ ಜೀವನಕ್ಕೆ ಬೇಕಾದ ಎಲ್ಲ ವಸ್ತು–ಸಂಪನ್ಮೂಲಗಳನ್ನು ಖಾಸಗಿಯವರಿಗೆ ವಹಿಸಿ, ಖಾಸಗೀಕರಣ ಮಾತ್ರ ಸಮಾಜದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂಬ ಹೊಸ ಮಿಥ್ಯೆಯನ್ನು ಸೃಷ್ಟಿಸುವುದು. ಇದಾಗಬೇಕೆಂದರೆ, ಅಂತರಾಷ್ಟ್ರೀಯ ವಾಣಿಜ್ಯ ಸಂಸ್ಥೆ (IMF) ವಿಶ್ವಬ್ಯಾಂಕ್, ವಾಲ್‌ಸ್ಟ್ರೀಟ್‌ನ ಹಣಕಾಸು ವ್ಯವಹಾರ ಇತ್ಯಾದಿಗಳು ರೂಪಿಸುವ ನೀತಿಯನ್ನು ಅಧೀನ ರಾಷ್ಟ್ರಗಳ ಮೇಲೆ ಹೇರಬೇಕಾಗುತ್ತದೆ. ರಾಷ್ಟ್ರೀಯ ಬಜೆಟ್‌ನಲ್ಲಿ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಧನ ಸಹಾಯ ನಿಲ್ಲಿಸುವಿಕೆ, ಸಾರ್ವಜನಕ ವಲಯದಿಂದ ಸರ್ಕಾರದ ಹಿಂತೆಗೆತ, ಹೊರ ರಾಷ್ಟ್ರಗಳ ಬಂಡವಾಳ ಒಳಸುರುವಿಗೆ ಉತ್ತೇಜನ, ಲೈಸನ್ಸ್ ಇತ್ಯಾದಿ ನಿಯಮಗಳ **ಸಡಲೀಕರಣ,** ಸರ್ಕಾರಿ ಉದ್ದಿಮೆಗಳನ್ನು ಖಾಸಗೀಯವರಿಗೆ **ಕಡಿಮೆ** ಬೆಲೆಗೆ ಪರಭಾರೆಮಾಡುವಿಕೆ – ಅಂದರೆ ಸಕಲ ವ್ಯವಹಾರಗಳನ್ನೂ ಮಾರುಕಟ್ಟೆಯ ಸುಪರ್ದಿಗೆ ವಹಿಸಿ ಬಂಡವಾಳದ ಕೇಂದ್ರೀಕರಣಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಸುವುದು. ಹಾಗೆಯೇ 'ಮುಕ್ತ ಮಾರುಕಟ್ಟೆ' ಯ ವಿಕಾಸಕ್ಕೆ ಅನುವಾಗುವಂತೆ ಕಾರ್ಮಿಕರ ಹಿತಾಸಕ್ತಿಯ ಕಾನೂನುಗಳನ್ನು ಸಡಿಲಗೊಳಿಸಿ, ಕಾರ್ಮಿಕ ವರ್ಗ ಕಷ್ಟಪಟ್ಟು ಸಂಪಾದಿಸಿದ ದುಡಿಮೆ ಹಕ್ಕನ್ನು ನಿರಾಕರಿಸುವುದು– ಇವೇ ಮುಂತಾದ 'ಕಲ್ಯಾಣ' ಕಾರ್ಯಕ್ರಮಗಳಿಂದಾಗಿ, ಆರ್ಥಿಕಯೋಜನೆಗಳು ಒಂದು ದೇಶದ ರಾಜಕೀಯ, ಸಾಮಾಜಿಕ ಅಗತ್ಯಗಳನ್ನು ಪೂರೈಸುವುದರ ಬದಲು, ಜಾಗತಿಕ ಬಂಡವಾಳ ಹೂಡಿಕೆಗೆ ಬೇಕಾದ ಸುರಕ್ಷತೆಯನ್ನು ಒದಗಿಸುವತ್ತ ಒಲವು ತೋರುವುದು ಇಂದಿನ ನವಉದಾರೀಕರಣದ ಸಾಮಾನ್ಯ ಲಕ್ಷಣವಾಗಿದೆ.

ಲ್ಯಾಟಿನ್ ಅಮೇರಿಕಾದ ದೇಶಗಳು ಒಂದಾದ ಮೇಲೆ ಒಂದರಂತೆ ಈ ನವಉದಾರೀಕರಣದ



ತೆಕ್ಕೆಗೆ **ಬೀಳತೊಡಗಿದವು**. ಮಿಲಿಟರಿ **ಆಳ್ವಿಕೆಗಳಿಂದ ಬೇಸತ್ತ ಜನರಿಗೆ**, ಉದಾರೀಕರಣದ **ಆರ್ಥಿಕನೀತಿ** ಮುಕ್ತ ಸ್ವಾತಂತ್ರ್ಯವನ್ನು ತಂದು ಕೊಡುವ ಭರವಸೆಯ ಹಾಗೆ ಕಾಣತೊಡಗಿತು. ಆದರೆ ಇದರಿಂದ ಜನರ ನಿತ್ಯ ಬದುಕಿನ ಬವಣೆ ಹೆಚ್ಚಾಗತೊಡಗಿತು. 1985ರಲ್ಲಿ ವೆನಿಜುವೆಲಾದ ರಾಜಧಾನಿ ಕಾರಕಾಜೀದಲ್ಲಿ ಉದಾರವಾದಿ ಧೋರಣೆ ವಿರೋಧಿಸಿ ದೊಡ್ಡ ಪ್ರಜಾ ಪ್ರತಿಭಟನೆಯ ರ್‍ಯಾಲಿ **ನಡೆಯಿತು. ಅದೇ** ರೀತಿ 1994ರಲ್ಲಿ ಜಪಾಟ **ಸಶಸ್ತ್ರ ದಂಗೆ ನಡೆಯಿತು.**

ನವಉದಾರವಾದಿ ಯೋಜನೆಯ ವಿರೋಧದ ಹವಾ ಹಲವಾರು ಹಳೆಯ ಚಳುವಳಿಗೆ ಪುನರ್‌ಜೀವನ ಕೊಟ್ಟಿದ್ದೇ ಅಲ್ಲದೇ ಅನೇಕ ಹೊಸ ಚಳುವಳಿಯನ್ನೂ ಹುಟ್ಟುಹಾಕಿತು. ಉದಾಹರಣೆಗೆ 70ರ ದಶಕದ ಮೊದಲಿನಿಂದಲೂ ಕ್ರಿಯಾಶೀಲವಾಗಿದ್ದು ನಂತರ ನೇಪತ್ಯಕ್ಕೆ ಸರಿದಿದ್ದ ಎಡಪಂಥೀಯ ಚಳುವಳಿಗಳು **ಮರುಹುಟ್ಟು ಪಡೆದರೆ**, ವರ್ಗಾಧಾರಿತದಲ್ಲದ ಬೇರೆ **ರೀತಿಯ (ಮಹಿಳಾ**, ಪರಿಸರ, ಮಾನವ ಹಕ್ಕು ಇತ್ಯಾದಿ) **ಹೋರಾಟಗಳೂ ಮೂಡಿ**ಬಂದವು.

ಈ ಚಳುವಳಿಗಳು ಒಟ್ಟಾರೆಯಾಗಿ ನವಉದಾರೀಕರಣದ **ಹಿಂದೆ** ಕೆಲಸ ಮಾಡುವ ಬಂಡವಾಳಶಾಹಿಯನ್ನು **ಬಯಲು** ಮಾಡುವಲ್ಲಿ ಯಶಸ್ವಿಯಾಗಿವೆ. 2000 ದಲ್ಲಿ ಪೆರುವಿನಲ್ಲಿ ನಡೆದ ಮುಷ್ಕರ, 2001ರಲ್ಲಿ ಅರ್ಜೆಂಟೀನಾದಲ್ಲಿ ಹಾಗೂ 1997, 2000 ಮತ್ತು 2005ರಲ್ಲಿ ಈಕ್ವಡಾರ್‌ನಲ್ಲಿ ಆದಿವಾಸಿಗಳನ್ನೊಳಗೊಂಡಂತೆ ನಡೆದ ಪ್ರಜಾ ಚಳುವಳಿ, 2003 ಮತ್ತು 2005ರಲ್ಲಿ ಬೋಲಿವಿಯಾದಲ್ಲಿ ನಡೆದ ಚಳುವಳಿಗಳು, ಅಮೇರಿಕಾ ಪೋಷಿತ ಭ್ರಷ್ಟ ಹಾಗೂ ದಮನಕಾರಿ ಆಡಳಿತವನ್ನು ಆಚೆ ಹಾಕುವುದರಲ್ಲಿ ಮೇಲುಗೈ ಸಾಧಿಸಿದವು. ವಿಶಾಲ ತಳಹದಿಯ ಎಡಪಂಥಿಯ ಗುಂಪುಗಳು ಚುನಾವಣೆಯಲ್ಲಿ ಜಯಗಳಿಸತೊಡಗಿದವು. ಅರ್ಜೆಂಟೀನಾ, ಬ್ರೆಜಿಲ್, ವೆನಿಜುವೆಲಾ ಮತ್ತು ಉರುಗ್ವೇಗಳಲ್ಲಿ ಎಡ ಸರ್ಕಾರಗಳು **ಅಸ್ತಿತ್ವಕ್ಕೆ ಬಂದವು.**

ದಕ್ಷಿಣ ಅಮೇರಿಕಾದಲ್ಲಿ ನವಉದಾರೀಕರಣದ **ವಿರೋಧಿ ಅಲೆ** ಎಷ್ಟು ಬಿರುಸಾಗಿದೆ ಎಂದರೆ, ಉತ್ತರ **ಅಮೇರಿಕಾಗೆ ಅ**ತ್ಯಂತ ನಿಕಟವಾಗಿದ್ದ ಕೊಲಂಬಿಯಾದಲ್ಲಿ **ಕೂಡ ಅಲ್ಲಿ**ನ ರಾಜಧಾನಿ ಬೋಗೋಟಾದ 2004ರ **ಮೇಯರ್ ಚುನಾವಣೆ**ಯಲ್ಲಿ ಕಮ್ಯೂನಿಸ್ಟ್ ಯೂನಿಯನ್ **ಲೀಡರ್ ಲೂ**ಯಿ ಎಡುರಾಡೋ ಗಾರ್ಜಾನ್ ಅವರು ಜಯಗಳಿಸಿದರು. ಉರುಗ್ವೇ ಕೂಡ ತನ್ನ ಮೊದಲ ಎಡ ಪಂಥೀಯ ಅಧ್ಯಕ್ಷರನ್ನು ಗಾದಿಯಲ್ಲಿ ಕುಳ್ಳರಿಸಿತು. ತಮ್ಮೊಳಗೆ ಅನೇಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ, ಈ ಪಕ್ಷಗಳು ರಾಷ್ಟ್ರೀಯ ಸ್ವಾಯತ್ತತೆ ಆಧಾರಿತ ವಿದೇಶಿ ನೀತಿಯನ್ನು ಅನುಸರಿಸುತ್ತಿರುವುದರಿಂದ ಅಮೇರಿಕಾದ ದಬ್ಬಾಳಿಕೆಯನ್ನು ಎದುರಿಸಿ ನಿಂತಿವೆ. ಈ ವಿದೇಶಿ ನೀತಿಯಲ್ಲಿ ಪ್ರಮುಖವಾದುದು, ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳು ಕ್ಯೂಬಾ ಜತೆ ತಮ್ಮ ಸಂಬಂಧವನ್ನು ಗಟ್ಟಿಕೊಳಿಸಿಕೊಂಡಿದ್ದು. ಉತ್ತರ ಅಮೇರಿಕಾಗೆ ಮೊದಲಿನಿಂದಲೂ ಕಮ್ಯೂನಿಸ್ಟ್ ಕ್ಯೂಬಾ ಕಂಡರೆ ಆಗದು. ಬೇರೆ ರಾಷ್ಟ್ರಗಳು ಅದರ ಜತೆ ಸೇರದಂತೆ ಅಮೇರಿಕ ಎಂದಿನಿಂದಲೂ ಪ್ರಯತ್ನಿಸುತ್ತಿದ್ದುದರಿಂದ, ಕ್ಯೂಬಾ ದಕ್ಷಿಣ ಅಮೇರಿಕಾ ಉಪಖಂಡದ ಭಾಗವಾಗಿದ್ದರೂ, ಅವರೊಡನಿದ್ದೂ ಅವರಂತಾಗದ ದ್ವೀಪದ ಹಾಗಾಗಿಬಿಟ್ಟಿತ್ತು. **ಆದರೆ, ಒಂದೊಂದಾಗಿ ಎಡ ಪಂಥೀಯ ಪಕ್ಷಗಳು ಅಧಿಕಾರಕ್ಕೆ ಬರತೊಡಗಿದ ಮೇಲೆ ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳು ಉತ್ತರ ಅಮೇರಿಕಾದ ಒತ್ತಡವನ್ನು ಲೆಕ್ಕಿಸದೆ, ಕ್ಯೂಬಾ ಜತೆ ವಿದೇಶಾಂಗ ಮತ್ತು ಆರ್ಥಿಕ ಸಂಬಂಧಗಳನ್ನು ಪುನರ್‌ಸ್ಥಾಪಿಸಿಕೊಂಡವು.** ವೆನಿಜ್ಯುವೆಲಾದಲ್ಲಿ ಕ್ರಾಂತಿಕಾರಿ ಪಕ್ಷ ಅಸ್ತಿತ್ವಕ್ಕೆ ಬಂದಮೇಲೆ ಆ ದೇಶವನ್ನು **ಮೂಲೆಗುಂಪಾಗಿಸಲು ಉತ್ತರ ಅಮೇರಿಕಾ ಮಾಡಿದ ಪ್ರಯತ್ನ ಕೂಡ ವಿಫಲವಾಯಿತು. ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ರಮ್ಸ್‌ಫೀಲ್ಡ್ ಮುಂದಿಟ್ಟಿದ್ದ 'ಲ್ಯಾಟಿನ್ ಅಮೇರಿಕಾ ಮಲ್ಟಿನ್ಯಾಷನಲ್ ಪಡೆ'ಯನ್ನು ರಚಿಸುವ ಪ್ರಸ್ತಾಪ ಕೂಡ ತಿರಸ್ಕೃತವಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ಜನವರಿ 2005ರಲ್ಲಿ ಅರ್ಜೆಂಟೀನಾದಲ್ಲಿ ನಡೆದ** ಶೃಂಗ ಸಭೆ 'ಅಮೇರಿಕಾ ಮುಕ್ತ ವ್ಯಾಪರ ಒಪ್ಪಂದ'ವನ್ನು ಸಂಪೂರ್ಣವಾಗಿ ತಿರಸ್ಕರಿಸಿತು. ಇದು ಉತ್ತರ ಅಮೇರಿಕಾ ಪ್ರಣೀತ ವ್ಯಾಪಾರಿ ಒಪ್ಪಂದಕ್ಕೆ ಬಲವಾದ ಪೆಟ್ಟು ನೀಡಿತು.

ಬ್ರೆಜಿಲ್ ಕೂಡ ಈ ಒಪ್ಪಂದವನ್ನು ವಿರೋಧಿಸಿತ್ತಲ್ಲದೆ, ಕ್ಯೂಬಾ ಮತ್ತು ವೆನಜ್ಯುವೆಲಾಗಳ ಆಂತರಿಕ ವಿಷಯದಲ್ಲಿ ಅಮೇರಿಕಾ ಕೈ ಹಾಕದಂತೆ ಪ್ರತಿರೋಧ ಒಡ್ಡಿತು. ಅದೇ ಸಮಯದಲ್ಲಿ ಬ್ರೆಜಿಲ್ ಭಾರತ, ಚೀನಾ, ಮಧ್ಯ ಪ್ರಾಚ್ಯ ಮತ್ತು ದಕ್ಷಿಣ ಆಫ್ರಿಕಾದ ದೇಶಗಳೊಡನೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವ ಮುನ್ನೋಲವನ್ನು ತೋರಿಸಿತು. ವೆನಿಜ್ಯುವೆಲಾದ ಅಧ್ಯಕ್ಷ ಹೂಗೋ ಶಾವೇಜ್ ತಮ್ಮ ದೇಶದ ಮುಖ್ಯ ಸಂಪನ್ಮೂಲವಾಗಿರುವ ತೈಲವನ್ನು ಕೆರೇಬಿಯನ್ ರಾಷ್ಟ್ರಗಳ ಜತೆ ರಾಜಕೀಯ ಮತ್ತು ಆರ್ಥಿಕ ಸಂಬಂಧವನ್ನು ಬೆಳೆಸುವ ಸಾಮಗ್ರಿಯಾಗಿ ಬೆಳೆಸಿಕೊಂಡರು. ಹಾಗೆ ಮಾಡುವುದರ ಮೂಲಕ **ಉತ್ತರ ಅಮೇರಿಕಾದ ದಬ್ಬಾಳಿಕೆಗೆ ಸೆಡ್ಡು ಹೊಡೆದರು. ಉದಾರೀಕರಣದ ಪ್ರಮುಖ ಅಂಗವಾದ ವಿಶ್ವ ವಾಣೀಜ್ಯ ಸಂಸ್ಥೆಗೆ ಕೂಡ, ಲ್ಯಾಟಿನ್ ಅಮೇರಿಕಾದಲ್ಲಿ ಬೀಸಿರುವ** ಬದಲಾವಣೆಗಳಿಂದ ದೊಡ್ಡ ಪೆಟ್ಟು ಬಿದ್ದಿದೆ. ಉದಾಹರಣೆಗೆ ದೊಡ್ಡ ಬಂಡಾಯದ ಮೂಲಕ ಅರ್ಜೆಂಟೀನಾದ ಅಧ್ಯಕ್ಷನಾಗಿದ್ದ, ಅಮೇರಿಕಾ ಪರವಾಗಿದ್ದ ಫರ್‌ನಾಂಡೋ ಡಿಲಾ ರೂವ ಎಂಬುವವನನ್ನು ಪದಚ್ಯುತಿಗೊಳಿಸಿ, ಆ ದೇಶದ ಅಧ್ಯಕ್ಷನಾದ ನೆಸ್ಟರ್ ಕಿರ್ಚ್‌ನರ್ ತಾನು ಅಧಿಕಾರಕ್ಕೆ ಬಂದ ಕೂಡಲೇ ಸಾಲ ಮರುಪಾವತಿಯನ್ನು ನಿಷೇಧಿಸಿದ. ಬೆಲೆ ಏರಿಕೆ ವಿರೋಧಿಸಿ ಬಹುರಾಷ್ಟ್ರೀಯ ತೈಲ ಕಂಪನಿಗಳಾದ



ಎಸ್ಸೊ ಮತ್ತು ಷೆಲ್‌ಗಳನ್ನು **ಬಹಿಷ್ಕರಿಸಲು** ಜನರಿಗೆ ಕರೆಕೊಟ್ಟ. ಈ ಕರೆಗೆ **ಓಗೊಟ್ಟ** ಅಸಂಖ್ಯಾತ ಜನ ಅರ್ಜೆಂಟೀನಾದ ಎಲ್ಲ ಪೆಟ್ರೋಲ್ ಬಂಕ್‌ಗಳಿಗೂ ಮುತ್ತಿಗೆ ಹಾಕಿ ದೊಡ್ಡ ಪ್ರತಿಭಟನೆ ನಡೆಸಿದರು.

ಅಂತೆಯೇ ಬೊಲಿವಿಯಾದಲ್ಲಿ ಅಮೇರಿಕಾ ಕೃಪಾ ಪೋಷಿತ ಅಧ್ಯಕ್ಷನಾಗಿದ್ದ ಗೊನ್ಸಾಲೋ ಡಿ ಲೊಜಾಡಾ, ತನ್ನ ದೇಶದಲ್ಲಿರುವ ಅಪಾರ ತೈಲ ನಿಕ್ಷೇಪಗಳನ್ನು ಚಿಲಿ ಮೂಲಕ ಉತ್ತರ ಅಮೇರಿಕಾಗೆ ಪರಭಾರೆ ಮಾಡುವ ಯೋಜನೆ ಹಾಕಿದ್ದ. ಇದಕ್ಕೆ 2003ರಲ್ಲಿ ಭಾರಿ ಪ್ರತಿಭಟನೆ ಮೂಡಿ ಬಂತು. ಸುಮಾರು 80 ಜನ ಸಾವನ್ನಪ್ಪಿ, **ನೂರಾರು ಜನ** ಗಾಯಗೊಂಡ ಈ ಪ್ರಜಾ ಚಳುವಳಿ **ಕೊನೆಗೂ ತನ್ನ ದೇಶದ** ತೈಲವನ್ನು ರಕ್ಷಿಸಿಕೊಳ್ಳುವುದರಲ್ಲಿ **ಯಶಸ್ವಿಯಾಯಿತು.**

ತಮ್ಮ ದೇಶದ ಸಂಪನ್ಮೂಲಗಳನ್ನು – ಅದರಲ್ಲೂ ತೈಲ ಸಂಪತ್ತನ್ನು –ಉಳಿಸಿಕೊಳ್ಳುವುದಕ್ಕಾಗಿ ಈಕ್ವಡಾರ್‌ನಲ್ಲಿ ಕೂಡ ಭಾರಿ ಹೋರಾಟ ನಡೆದು, ಕಳೆದ ಎರಡು **ಅಧ್ಯಕ್ಷರುಗಳು ರಾಜೀನಾಮೆ** ಕೊಡಬೇಕಾಯಿತು. **ಚಿಲಿಯಲ್ಲಿ** ಕಳೆದ ದಶಕದಲ್ಲಿ **ದೂಪೂಚೆ ಬುಡಕಟ್ಟಿನ ಆದಿವಾಸಿಗಳು**, ಬಹುರಾಷ್ಟ್ರೀಯ **ಕಂಪನಿಗಳು ನಡೆಸುತ್ತಿದ್ದ ಗಣಿಗಾರಿಕೆ ಮತ್ತು** ನಾಟಾ **ಉದ್ಯಮದ ವಿರುದ್ಧ ಸಶಸ್ತ್ರ ಹೋರಾಟವನ್ನು ನಡೆಸುತ್ತಿದ್ದಾರೆ. ಇವೆಲ್ಲಾ ಚಳುವಳಿಗಳ ಪರಿಣಾಮವಾಗಿ ಬಹಳ ಕಾಲದಿಂದಲೂ ಚಳುವಳಿ ನಡೆಸುತ್ತಿದ್ದ ವಿವಿಧ ಎಡವಾದಿ ರಾಜಕೀಯ ಪಕ್ಷಗಳು ಮುಂಚೂಣಿಗೆ** ಬರಲಾರಂಭಿಸಿವೆ. ಅವುಗಳಲ್ಲಿ ಕೆಲವು 'ಹಳೆಯ ಕಮ್ಯೂನಿಸ್ಟ್' ಸಂಘಟನೆಗಳು, ಟ್ರೇಡ್ ಯೂನಿಯನ್‌ಗಳು ಸಹ ಇವೆ.

ಆದರೆ, ಈ ಎಡವಾದಿ ಸಂಘಟನೆಗಳ ಚಿಂತನಾ ಕ್ರಮದಲ್ಲಿ ಅನೇಕ ಬದಲಾವಣೆ ಬಂದಿದೆ ಎಂಬುದು ಗಮನಾರ್ಹ. **ಹಳೆಯ**ಕಾಲದ ಎಡಪಕ್ಷಗಳ ಹಾಗಲ್ಲದೆ, ವರ್ತಮಾನದ **ಹೊಸ** ಚಳುವಳಿಗಳು ಕೇವಲ ವರ್ಗಾಧಾರಿತ **ಹೋರಾಟವನ್ನಷ್ಟೇ** ಅಲ್ಲದೆ ಆದಿವಾಸಿಗಳ,





ಮಹಿಳೆಯರ ಮತ್ತು ಕೃಷಿಕಾರ್ಮಿಕರ ಹಿತಾಸಕ್ತಿಗಳನ್ನು ಒಳಗೊಳ್ಳುವ, ಬಹುಮುಖೀ ಸ್ವರೂಪವನ್ನು ಪಡೆದುಕೊಂಡಿವೆ. ಏಕಸ್ವರೂಪೀ ರಾಜಕೀಯದ ಬದಲಿಗೆ, 'ಕಾರ್ಯಕ್ರಮಗಳಲ್ಲಿ ಏಕತೆ, ಕಾರ್ಯಸೂಚಿಯಲ್ಲಿ ಬಹುತ್ವ' – ಇದು ಅಲ್ಲಿನ ಸಾಮಾಜಿಕ–ರಾಜಕೀಯ ಚಳುವಳಿಗಳ ಮುಖ್ಯ ಘೋಷಣೆಯಾಗಿದೆ. ಹೀಗಾಗಿ ಅಲ್ಲಿ ಒಂದು ಕೇಂದ್ರದ ಸುತ್ತಾ ತಿರುಗುವ ಚಳುವಳಿಗಳಿಗಿಂತಲೂ ತಮ್ಮೊಳಗೇ ಅನೇಕ ಭಿನ್ನ ಸ್ವರಗಳನ್ನು ಹೊತ್ತಿರುವ, ಬಹು ಕೇಂದ್ರಿತ ಚಳುವಳಿಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಇದರಿಂದ ಅನುಕೂಲಗಳಿರುವಂತೆಯೇ ಸಮಸ್ಯೆಗಳೂ ಇವೆ. ರಾಜಕೀಯ ಅಧಿಕಾರದ ವಿರುದ್ಧ ಎದ್ದ ಹೋರಾಟದ ಅಲೆ, ಅನೇಕ ಬುಡಕಟ್ಟುಗಳ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳದೇ ಇದ್ದದ್ದು ಒಳ ಘರ್ಷಣೆಗೆ ಕಾರಣವಾಗಿದೆ. ಉದಾಹರಣೆಗೆ ಈಕ್ವಾಡಾರ್‌ನಲ್ಲಿ ಕೆಲವು ಪಾರ್ಲಿಮೆಂಟ್ ಮತ್ತು ಕ್ಯಾಬಿನೆಟ್ ಸದಸ್ಯರುಗಳ ಮುಂದಾಳತ್ವದಲ್ಲಿ 2005ರಲ್ಲಿ ನಡೆದ ಚಳುವಳಿ, ಆ ದೇಶದ ಬುಡಕಟ್ಟು ಜನಾಂಗದವರನ್ನು ನಿರ್ಲಕ್ಷಿಸಿತು. ಕೇವಲ ಅಧ್ಯಕ್ಷರ ಪದಚ್ಯುತಿ ಒಂದೇ ಗುರಿಯಾಗಿದ್ದ ಈ ಚಳುವಳಿ ನಂತರ ತೀವ್ರ ಟೀಕೆ ಮತ್ತು ಮರುವಿಮರ್ಶೆಗೆ ಗುರಿಯಾಯಿತು. ಆದರೆ ಬೊಲಿವಿಯಾದ ಅಧ್ಯಕ್ಷ ಮೆಸಾನ ಪದಚ್ಯುತಿಗೆ ನಡೆದ ದಂಗೆಯಲ್ಲಿ, ಹಲವಾರು ರಾಜಕೀಯ ವೈಮನಸ್ಯಗಳ ನಡುವೆಯೂ, ವಿಭಿನ್ನ ನೆಲೆಯ **ರಾಜಕೀಯ** ಮತ್ತು ಸಾಮಾಜಿಕ ಗುಂಪುಗಳು **ಭಾಗಿಯಾಗಿದ್ದವು.**

ಲ್ಯಾಟಿನ್ **ಅಮೇರಿಕಾ**ದಲ್ಲಿ ನಡೆಯುತ್ತಿರುವ ವಿವಿಧ ರೀತಿಯ ಜಾಗತೀಕರಣ ವಿರೋಧಿ ಚಳುವಳಿ ಪೈಕಿ ಅತ್ಯಂತ ಮಹತ್ತರವಾದ, ಭಾರತದಂಥ ದೇಶಗಳಿಗೆ ಅನೇಕ ರೀತಿಯಲ್ಲಿ ಮಾದರಿ ಆಗಬಹುದಾದ ಹೋರಾಟವೆಂದರೆ ಜಪಾಟಸ್ಟ್ ಆರ್ಮಿ ಆಫ್ ನ್ಯಾಷನಲ್ ಲಿಬರೇಷನ್ (EZLN). ಹೊಸ ಸಮಾಜವಾದೀ ದೃಷ್ಟಿಕೋನವುಳ್ಳ, ಬುಡಕಟ್ಟು ಸಮುದಾಯಗಳ ಪಾಲುದಾರಿಕೆ ಇರುವ, ಪ್ರಜಾತಾಂತ್ರಿಕ ಆಚರಣೆಯನ್ನು ಒಳಗೊಂಡಿರುವ ಚಳುವಳಿಯಾಗಿ ಜಪಾಟಸ್ಟ್ ಸೇನೆ ಬೆಳೆದಿದೆ. ಉತ್ತರ ಅಮೆರಿಕಾ, ಮೆಕ್ಸಿಕೋ ಮತ್ತು ಕೆನಡಾ ದೇಶಗಳ ನಡುವಿನ ವ್ಯಾಪಾರ ಸಂಬಂಧಿ ಒಪ್ಪಂದ (ಉತ್ತರ ಅಮೇರಿಕಾ ಮುಕ್ತ ವ್ಯಾಪಾರ ಒಪ್ಪಂದ – NAFTA) ಜಾರಿಗೆ ಬಂದ ದಿನವೇ, ಜಪಾಟಸ್ಟ್ ನ್ಯಾಷನಲ್ ಆರ್ಮಿ ಅಸ್ತಿತ್ವಕ್ಕೆ ಬಂದಿದ್ದು, (ಜನವರಿ 1, 1994) ಕೇವಲ ಕಾಕತಾಳೀಯವಲ್ಲ. ಅಷ್ಟೇ ಅಲ್ಲದೇ ಅದು ನವ ಉದಾರವಾದ ಎಲ್ಲೆಡೆ ವಿಜೃಂಭಿಸುತ್ತಿದ್ದ ಕಾಲ ಕೂಡ. ಎಲ್ಲಕ್ಕಿಂತಲೂ ಹೆಚ್ಚಾಗಿ ಸಮಾಜವಾದ, ಸಾಮೂಹಿಕ ಕ್ರಿಯೆ, ಸಮಾಜದ ಮೂಲಭೂತ ಬದಲಾವಣೆ ಸಮಸಮಾಜದ ರಚನೆ... ಇತ್ಯಾದಿ ಆಶಯಗಳು ತಮ್ಮ ಅರ್ಥಕಳೆದುಕೊಂಡು, ಬಂಡವಾಳಶಾಹಿಗೆ ಪರ್ಯಾಯವೇ ಇಲ್ಲವೇನೋ ಎಂಬ ನಂಬಿಕೆ ಎಲ್ಲೆಡೆ ಬೆಳೆಯುತ್ತಿದ್ದ ಸಮಯವೂ ಅದಾಗಿತ್ತು. ಇಂಥ ಸಂದಿಗ್ಧ ಮತ್ತು ತೀವ್ರ ನಿರಾಶೆಯ ಕಾಲಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಜಪಾಟ ರಾಷ್ಟ್ರೀಯ ಸೇನೆ, ಒಂದು ಹೊಸ ಯುಗ ಪರಿವರ್ತನೆಯ ಭರವಸೆಯನ್ನು ಹುಟ್ಟಿಸಿತು. ಇದರ ಗೆಲುವಿಗೆ ಮೂಲ ಕಾರಣ ಅದು ಎಲ್ಲ ಜಾತಿ / ಜನಾಂಗದ ದಮನಿತರ ಮತ್ತು ಅಂತ್ಯಜರನ್ನು ಒಳಗೊಂಡಿದ್ದು, ಮತ್ತು ಅವರ ಆಶೋತ್ತರಗಳಿಗೆ ಧ್ವನಿಯಾಗಿದ್ದು, ಜಪಾಟ ರಾಷ್ಟ್ರೀಯ ಸೇನೆ ಆದಿವಾಸಿಗಳ ಸ್ವಾಯತ್ತತೆಗೆ ಮತ್ತು ಮೂಲಭೂತ ಹಕ್ಕುಗಳಿಗೆ ವಿಶೇಷವಾದ ಒತ್ತು ನೀಡಿದ ಪಕ್ಷವಾಗಿತ್ತು. ಹೀಗಾಗಿ ಇದಕ್ಕೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂದೆಂದೂ ಇರದ ಅಭೂತಪೂರ್ವ ಬೆಂಬಲ ದೊರಕಿತು.

ಅಂತೆಯೇ ತನ್ನ ವಸಾಹತು ವಿರೋಧಿ, ನವಉದಾರವಾದ ವಿರೋಧಿ ನಿಲುವಿನಿಂದ ಮತ್ತು ಅಧಿಕಾರಕ್ಕೆ ಆಸೆ ಪಡದೆ ಸ್ಥಳೀಯ ಪ್ರಜಾತಾಂತ್ರಿಕ ಶಕ್ತಿಗಳನ್ನು ಒಗ್ಗೂಡಿಸುವ ಅದರ ಪ್ರಯತ್ನಗಳು ಅದಕ್ಕೆ **ಮತ್ತಷ್ಟು ಮನ್ನಣೆಯನ್ನು ದೊರಕಿಸಿಕೊಟ್ಟವು.** ಹೀಗೆ ಈ **ಚಳುವಳಿಗೆ ಸ್ಥಳೀಯ ಕಾರ್ಯಕರ್ತರಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದ** ಬುದ್ಧಿಜೀವಿಗಳನ್ನೂ ಸಹ ತನ್ನತ್ತ ಸೆಳೆಯಲು ಸಾಧ್ಯವಾಯಿತು.

ಅದು ಚಿಯಾಪಾಸ್ ಕಾಡುಗಳಲ್ಲಿ ನವಉದಾರವಾದದ ವಿರುದ್ಧ ನಡೆಸಿದ ಚಳುವಳಿ ಮುಂದೆ ವಿಸ್ತರಿಸಿ, ಬೆಳೆದು ವಿಶ್ವ ಸಮಾಜಿಕ ವೇದಿಕೆ (World Social Forum)ಯಾಗಿ ಬೆಳೆಯಿತು. "ಇನ್ನೊಂದು ಜಗತ್ತು ಸಾಧ್ಯ" ಎಂಬ ಘೋಷಣೆಯೊಂದಿಗೆ, ಜಾಗತೀಕರಣದ ವಿರುದ್ಧದ ಜಾಗತಿಕ ಸಮರ ಸಾರಿರುವ ಈ ವೇದಿಕೆ ಇಂದ ವಿಶ್ವದ ಹಲವೆಡೆ ಕಾರ್ಯಕ್ರಮಗಳನ್ನು ರೂಪಿಸಿ, ಜಾಗತೀಕರಣದ ವಿರುದ್ಧದ ಎಲ್ಲ ರೀತಿಯ ಜನಾಂದೋಲಗಳನ್ನು ಒಂದೆಡೆ ಕಲೆಹಾಕುತ್ತಿದೆ. ವಿಶ್ವ ಸಾಮಾಜಿಕ ವೇದಿಕೆ ಇಂದು ಹಲವು ಸ್ತರಗಳ, ಹಲವು ರಂಗಿನ, ಬೇರೆ ಬೇರೆ ಹಿತಾಸಕ್ತಿಗಳನ್ನು ಒಡಲೊಳಗೆ ಒಟ್ಟುಕೊಂಡ ವೇದಿಕೆಯಾಗಿದೆ. ಇದು ಅದರ ಸಾಧ್ಯತೆ ಹೇಗೋ ಅದರ ಮಿತಿಯನ್ನೂ ಸೂಚಿಸುತ್ತದೆ. ಬಹುತ್ವ ತನ್ನಷ್ಟಕ್ಕೆ ತಾನೇ ಒಂದು ಮೌಲ್ಯವಲ್ಲ. ಕೇಂದ್ರಿಕೃತ ಸಂಘಟನೆಗಳು ತಮ್ಮ ಬಿಗು ನಿಲುವಿನಿಂದ ಸರ್ವಾಧಿಕಾರಿ ಗುಣವನ್ನು ಪಡೆದುಕೊಳ್ಳುವ ಹಾಗೆ, ಬಹುಕೇಂದ್ರಿತ ನೆಲಗಳು ಸೂತ್ರವೇ ಇಲ್ಲದ ಅರಾಜಕ ದೊಂಬಿಯಾಗಿಬಿಡಬಹುದು. ಸಧ್ಯಕ್ಕೆ ಅಂತರ **ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿಶ್ವ ಸಾಮಾಜಿಕ ವೇದಿಕೆ ಒಂದು ಅರಾಜಕ ಗುಂಪಾಗುತ್ತಿದೆ** ಎಂಬ **ಆರೋಪ ಗಂಭೀರವಾಗಿ ಪರಿಗಣಿಸಬೇಕಾದ್ದದ್ದೇ.** ಇದೇ **ಮಾತನ್ನು ಲ್ಯಾಟಿನ್ ಅಮೇರಿಕಾದಲ್ಲಿ ಇಂದು ಚಾಲ್ತಿಯಲ್ಲಿರುವ ಅನೇಕ ಚಳುವಳಿಗಳ** ಬಗ್ಗೆಯೂ **ಹೇಳಬಹುದು.**

ಲ್ಯಾಟಿನ್ ಅಮೇರಿಕಾದ ಸಾಮಾಜಿಕ ರಾಜಕೀಯ ಪರಿಸ್ಥಿತಿಗೂ, ಪ್ರಸ್ತುತ ಭಾರತದ ಸನ್ನಿವೇಶಕ್ಕೂ ಅನೇಕ ಸಾಮ್ಯತೆಗಳಿವೆ. ಹಾಗೆಯೇ ವ್ಯತ್ಯಾಸಗಳು ಕೂಡ. ಭಾರತಕ್ಕಿಂತಲೂ ಹೆಚ್ಚಿಗೆ ಶೋಷಣೆಗೆ ಒಳಗಾದ ದೇಶಗಳು ಅಲ್ಲಿವೆ. ರಾಜಕೀಯವಾಗಿ ತೀರಾ ಅಸ್ಥಿರವಾದ, ಸರ್ವಾಧಿಕಾರಿಗಳ ಕೈನಲ್ಲಿ ನಲುಗಿಹೋದ, ಸದಾ ಆಂತರಿಕ ಸಮರದಲ್ಲಿ ಮುಳುಗಿ ಹೋಗಿದ್ದ ಉಪಖಂಡ ಅದು. ಬಹುಶಃ ಈ



With Best Compliments From

ANAGHA
ENGINEERING

AN ISO 9001-2008 COMPANY
NO.22, 17th Cross,

Doddanna Industrial Estate,
Near Peenya 2nd Stage,
Bangalore-560091

Fax: 28363286
Off: 32930133
Mob: 9845700582

Email: anagha engg@yahoo.com

ಕಾರಣಕ್ಕಾಗಿಯೇ ಅಲ್ಲಿ ಜಾಗತೀಕರಣದ ಮತ್ತು ಉತ್ತರ ಅಮೇರಿಕಾದ ಹಿಡಿತಕ್ಕೆ ಪ್ರಬಲವಾದ, ಕೆಲಮೊಮ್ಮೆ ಉಗ್ರವಾದ, ವಿರೋಧವು ಹುಟ್ಟಲು ಸಾಧ್ಯವಾಗಿದೆ. ಆದರೆ ನವಉದಾರೀಕರಣ ವಿರೋಧಿ ಹೋರಾಟದಲ್ಲಿ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳು ಮುಂಚೂಣಿಯಲ್ಲಿರುವುದು ಮಾತ್ರ ಅಲ್ಲಗಳೆಯಲಾರದ ಸತ್ಯ.

ಅಷ್ಟೇ ಮುಖ್ಯವಾದದ್ದು ಅಲ್ಲಿನ ಹೋರಾಟದ ಸ್ವರೂಪ ಮತ್ತು ಬೆಳೆದು ಬಂದ ದಾರಿ. ಮಧ್ಯಮ ಮತ್ತು ತೀವ್ರ ಎಡಪಂಥೀಯ ಚಿಂತನೆಗಳನ್ನು ಹೊಂದಿರುವ ವಿವಿಧ ನಿಲುವಿನ ಪಕ್ಷ ಮತ್ತು ಸಂಘಟನೆಗಳ ವಿಶಾಲವಾದ ಹೊಂದಾಣಿಕೆ ಸಾಧ್ಯ ಎಂಬ ಲ್ಯಾಟಿನ್ ಅಮೇರಿಕದ ಅನುಭವ ನಮ್ಮ ದೇಶದ ಪ್ರಗತಿಪರ ಸಂಘಟನೆಗಳಿಗೆ ಒಂದು ಒಳ್ಳೆಯ ಪಾಠವಾಗಬಲ್ಲದು. ಒಂದು ಸಮಾಜವಾದಿ ಸಮಾಜದ ರಚನೆಯಲ್ಲಿ ಪೂರ್ವ ಯೋಜಿತ ಸೈದ್ಧಾಂತಿಕತೆಗಿಂತಲೂ ಇಂಥ ಸಹಯೋಗಗಳಿಂದ ನಡೆಸಬಹುದಾದ ಪ್ರಯೋಗಗಳು ಹೆಚ್ಚು ಅರ್ಥಪೂರ್ಣ ಎಂಬ ಸತ್ಯವನ್ನು ಆ ದೇಶಗಳು ಎತ್ತಿ ತೋರಿಸಿವೆ. ಎರಡನೆಯದಾಗಿ, ದೇಶದ ಸ್ವಾಯತ್ತತೆಯ ಮಹತ್ವ ಮತ್ತು ಅದಕ್ಕೆ ಅಲ್ಲಿ ಸಿಕ್ಕುತ್ತಿರುವ ಅಪಾರ ಜನ ಬೆಂಬಲ. ಜಾಗತೀಕರಣ ರಾಷ್ಟ್ರ ಪ್ರಭುತ್ವಗಳನ್ನು ಮೆತ್ತಗಾಗಿಸಿ, ಅವುಗಳನ್ನು ತಮ್ಮ ಕೈಗೊಂಬೆಯನ್ನಾಗಿಸಿಕೊಂಡಿರುವ ಈ ಹೊತ್ತಿನಲ್ಲಿ, ರಾಷ್ಟ್ರೀಯ ಸ್ವಾಯತ್ತತೆಗೆ ಮತ್ತೆ ಜೀವ ತುಂಬುವುದು, ಆರ್ಥಿಕ/ರಾಜಕೀಯ ಸ್ವಾವಲಂಬನೆಯನ್ನು ಗಳಿಸಿಕೊಳ್ಳಲು ದೇಶಗಳು ಇಡಬೇಕಾದ ಮೊದಲ ಹೆಜ್ಜೆ. ಇದು ಸಾಧ್ಯ ಎಂದು ವೆನೆಜುವೆಲಾದ ಅಧ್ಯಕ್ಷ ಶಾವೇಜ್ ತೋರಿಸಿಕೊಟ್ಟಿದ್ದಾರೆ.

ಈ ಸತ್ಯಗಳನ್ನು ನಮ್ಮ ಸಮಾಜಗಳ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಅರಿತುಕೊಳ್ಳುವುದು ಈ ಹೊತ್ತು ನಮ್ಮ ಮುಂದಿರುವ ದೊಡ್ಡ ಸವಾಲು.

ಡಾ॥ ವಿ.ಎಸ್. ಶ್ರೀಧರ

ಸಾಹಿತ್ಯ, ಸಂಸ್ಕೃತಿ ಅಧ್ಯಯನದ ಜತೆಗೆ ಪರಿಸರ ಮಾನವ ಹಕ್ಕು ಮತ್ತು ಸಮಾಜವಾದ ಹೋರಾಟಗಳಲ್ಲಿ ಆಸಕ್ತಿ. ಕೋಮು ಸೌಹಾರ್ದ ಮೂಡಿಸುವಲ್ಲಿ ಹಾಗೂ ಮಾನವ ಹಕ್ಕು ಕುರಿತಂತೆ ಅನೇಕ ಸತ್ಯ ಶೋಧನಾ ಕಾರ್ಯದಲ್ಲಿ ಭಾಗಿ. 'ಬೇಂದ್ರೆ ಕಾವ್ಯ', 'ಲಂಕೇಶ್ ಸಾಹಿತ್ಯ ವಿಮರ್ಶೆ', 'ಬಾಲಗೋಪಾಲ ಬರಹಗಳು' ಮತ್ತು 'ಕಾಶ್ಮೀರ' ಕುರಿತಂತೆ ಗ್ರಂಥ ಸಂಪಾದನೆ, ಸಾಹಿತ್ಯ, ಸಮಾಜ ಮತ್ತು ಜನಪರ ಹೋರಾಟಕ್ಕೆ ಸಂಬಂಧ ಪಟ್ಟಂತೆ ವಿವಿಧ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟ.

ಭೂಮಿ ಸಣ್ಣದಾಗಿದೆಯಂತೆ.

ಕು. ಸ. ಮಧುಸೂದನ

ಕವನ

ಅವ್ವಾ!
ಭಯವಾಗುತ್ತಿದೆ!
ಅಷ್ಟೂ ಖಂಡಗಳ ಭಂಡ ಮಿಂಡರು
ನನ್ನ ಖಂಡಗಳ ಕಬಾಬ್
ಮಾಡಿ ಪಶ್ಚಿಮ ಏಷ್ಯಾದ
ಎಣ್ಣೆಯಲಿ ಹುರಿ ಹುರಿದು
ಮುಕ್ಕುತ್ತಿದ್ದಾರೆ
ಭೂಮಿ ಸಣ್ಣದಾಯಿತು ಅನ್ನುತ್ತ
ನೆತ್ತಿಯಿಂದ ಪಾದದವರೆಗೆ
ಒಪ್ಪಂದಗಳ ಸರಪಳಿಯಿಂದೆನ್ನ
ಬಿಗಿದಿದ್ದಾರೆ

ತಿನ್ನುವ ಅನ್ನಕ್ಕೆ ಅವರ ಹೆಸರು ಬರೆದು
ಕುಡಿವ ನೀರಿಗೂ ವಿಷ ಬೆರಸಿ
ಗೌರಿ ಹಸುವಿನ ಕರುವಿನ ನೆತ್ತಿಗೂ
ಅವರ ಲಾಂಛನ ಕೆತ್ತಿ
ಗಾಳಿಯೊಂದ ಬಿಟ್ಟು ಮಿಕ್ಕಲ್ಲಕ್ಕೂ
ಪೇಟೆಂಟ್ ಅನ್ನೊ ಬೆದರು ಬೊಂಬೆ
ಕಟ್ಟಿ ಆಡಿಸುತ್ತಿದ್ದಾರೆ ನನ್ನ
ಗಿರಿಗಿಟ್ಲೆ !
ಕಾಡುಗಳ ಕಡಿಸಿ
ಗೋಮಾಳಗಳಲಿ ಅಕೇಶಿಯಾ ಬೆಳೆಸಿ
ಕೆರೆಗಳ ಸೋಸಿ ಕುಡಿವ ನೀರಿಗೂ
ಪ್ಲಾಸ್ಟಿಕ್ ಬಾಟಲಿಯ ಬಿರಟೆ ಜಡಿದು
ನನ್ನ ಇಂಚಿಂಚು ಕೊಲ್ಲುತ್ತಿದ್ದಾರೆ

ನಮ್ಮೂರ ಯಜಮಾನಪ್ಪಗೋಳು
ಅವರ ಹೇಲು ತಿನ್ನುತ್ತಾ 'ಆಹಾ!'
'ಪಶ್ಚಿಮವೇ
ಅಭಿವೃದ್ಧಿಯ ಸಂಕೇತವೇ'
ಅನ್ನುತ್ತಾ ಅವರ ಬೂಟು ನೆಕ್ಕುತ್ತಿದ್ದಾರೆ!
ಅವರು ಕೊಟ್ಟ ಬಂದೂಕನು
ನನ್ನೆದೆಗೆ ಗುರಿಯಿಟ್ಟು ನರಸತ್ತವನನ್ನಾಗಿಸುತ್ತಿದ್ದಾರೆ.
ಹೆಂಗೆ ಹೇಳಲಿ ಅವ್ವಾ?
ಹೆಂಗೆ ತಾಳಲಿ?
ನನ್ನ ಕೈಯಿಂದಲೇ ನನ್ನ ಸಮಾದಿಗೆ
ಗುಂಡಿ ಅಗಿಸಿ
ಅದರ ಸುತ್ತ ಅವರ ಧ್ವಜಗಳನ್ನು
ನೆಡಿಸಿ ಗಹ-ಗಹಿಸುತ್ತಿದ್ದಾರೆ
ಹೆಂಗೆ ತಪ್ಪಿಸಿಕೊಳ್ಳಲೇ ಅವ್ವಾ?
ಏನಾದರು ದಾರಿ ತೋರವ್ವಾ?

ಅವರು ಮತ್ತು ನಾವು

ಪ್ರೊ|| ಟಿ. ಯಲ್ಲಪ್ಪ

ಕನ್ನಡ ಪ್ರಾಧ್ಯಾಪಕ. ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ನಡೆಸುವ ರಾಷ್ಟ್ರಮಟ್ಟದ ಕವಿತಾ ಸ್ಪರ್ಧೆಯಲ್ಲಿ ಆರು ಬಾರಿ ಮತ್ತು 'ಸಂಚಯ' ಸಾಹಿತ್ಯ ಪತ್ರಿಕೆ ನಡೆಸುವ ರಾಜ್ಯಮಟ್ಟದ ಕವಿತಾ ಸ್ಪರ್ಧೆಯಲ್ಲಿ ಸತತ ಆರು ಬಾರಿ ಬಹುಮಾನ. ಇವರ 'ಕಡಲಿಗೆ ಕಳಿಸಿದ ದೀಪ' ಕವನ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಣವಿ ಕಾವ್ಯ ಪ್ರಶಸ್ತಿ, ಜಿ. ಎಸ್. ಶಿವರುದ್ರಪ್ಪ ಕಾವ್ಯ ಪ್ರಶಸ್ತಿ ಬಂದಿವೆ.

ಕವನ

1

ನಾವು ತಿನ್ನುವುದಕ್ಕೆ
ಅನ್ನ ಕೇಳಿದೆವು
ಅವರು ಹುಳ ಬಿದ್ದ ಅಕ್ಕಿ ಕೊಟ್ಟರು!
ನಾವು ಹುಳ ದೇವರಿಗೆ ಕೊಟ್ಟು
ಅಕ್ಕಿಯನ್ನು ಕಣ್ಣಿಗೊತ್ತಿಕೊಂಡು
ಅನ್ನ ಮಾಡಿ ಉಂಡೆವು!
ಈಗ
ಅವರು ತಿನ್ನುವ ಅನ್ನಕ್ಕೇ
ಹುಳ ಬಿದ್ದಿದೆ
ಅವರು ಹುಳುಗಳನ್ನು
ನಿಷ್ಕಾರುಣ್ಯವಾಗಿ ಕೊಂದುಬಿಟ್ಟು
ಅನ್ನಕ್ಕಾಗಿ ದೇವರಿಗೇ
ಕೈ ಚಾಚುತ್ತಿದ್ದಾರೆ!

2

ನಾವು ಉಡುವುದಕ್ಕೆ
ಬಟ್ಟೆ ಕೇಳಿದೆವು
ಅವರು ಹರಿದ ಚಿಂದಿಯ ಕೊಟ್ಟರು
ನಾವು
ಹರಿದ ಚಿಂದಿಯಲ್ಲಿ
ಪರಸ್ಪರ ಮುಖ ನೋಡಿಕೊಂಡು
ಉಳಿದ ಕೌದಿಯಲಿ
ಮಾನವನು ಮುಚ್ಚಿಕೊಂಡೆವು!
ಈಗ
ಅವರ ಬಳಿ
ಉಡುವುದಕ್ಕೂ ಬಟ್ಟೆ ಇಲ್ಲ
ಏಕೆಂದರೆ
ಅವರಿಗೆ ಮಾನವೆಂದರೆ
ಬಟ್ಟೆಯಲಿ ಮುಚ್ಚಿಟ್ಟುಕೊಳ್ಳುವ
ವಸ್ತುವೇನಲ್ಲ!

3

ಸಾಯುವಾಗ
ನಾವು ಕುಡಿಯುವುದಕ್ಕೆ
ನೀರು ಕೇಳಿದೆವು
ಅವರು ಆಕಾಶದಲ್ಲಿ ನಿಂತು
ಪಾತಾಳಕ್ಕೆ ನೀರು ಸುರಿದರು
ಸುರಿದ ನೀರಲ್ಲಿ
ನಾವು ದಣಿವಾರಿಸಿಕೊಂಡು
ಉಳಿದ ನೀರಲ್ಲಿ
ಕಣ್ಣೀರ ತೊಳೆದುಕೊಂಡೆವು
ಈಗ
ಅವರಿಗೆ ಸಾಯುವಾಗ
ಬಾಯಲ್ಲಿ ನೀರು ಬಿಡುವರಿಲ್ಲ
ಅವರು ಸಾಕಿ ಸಲಹಿದ ಮಕ್ಕಳು
ಆಕಾಶದಲ್ಲಿ ಹಾರಿ
ದೂರ ದೇಶ ಸೇರಿದ್ದಾರೆ!
ಅವರ ನೆನಪಿನಲ್ಲಿಯೇ ಇವರು
ಕಣ್ಣೀರು ಸುರಿಸುತ್ತಾ
ಪಾತಾಳಕ್ಕೆ ಇಳಿದು ಹೋಗಿದ್ದಾರೆ!

4

ನಮಗೇನಾದರೂ ಕೊಡುತ್ತಲೇ
ನಮ್ಮಗಳ
ಜೀವ, ಮಾನ, ಪ್ರಾಣಗಳ
ಉಳಿಸಿದ ಅವರ
ನಾವು ಶಪಿಸುವುದೂ ತರವಲ್ಲ!
ಮಾನವನೆದೆ ಬರಡೇನಲ್ಲ
ಪ್ರೀತಿ ಪ್ರೇಮಗಳ
ದವಸ ತುಂಬಿದ ಕಣಜ
ಹಂಚಿ ಉಟ್ಟುಣ್ಣುವ ಸುಖದ ನಿಜ
ತಿಳಿಯಬೇಕಿದೆ ಮನುಜ!

ಸ್ವರ್ಗವೆಂದರೆ

ಬಾನು ಮುಷ್ತಾಕ್

ಆರಿಫ್‌ನ ಪ್ರಸಂಗ ಆ ಮನೆಯ ಒಬ್ಬೊಬ್ಬ ವ್ಯಕ್ತಿಯ ಮೇಲೂ ವಿಭಿನ್ನ ಪರಿಣಾಮವನ್ನು ಬೀರಿತು. ಮೂವರು ಮಕ್ಕಳು ಕೂಡಿ ತಮ್ಮ ತಾಯಿಯ ವರ್ತನೆಯ ಬಗ್ಗೆ ಮೆಲುದನಿಯಲಿ ಚರ್ಚಿಸಿದರು. ಅವರಿಗೆ ಆರಿಫ್ ಚಿಕ್ಕಪ್ಪನ ಬಗ್ಗೆ ತುಂಬಾ ಪ್ರೀತಿ ಇತ್ತು. ಹೀಗಾಗಿ, ಅವಳ ವರ್ತನೆಯ ಬಗ್ಗೆ ತೀವ್ರ ಅಸಮಾಧಾನವು ಕೂಡಾ ಸಹಜವಾಗಿಯೇ ಇತ್ತು. ಸನಾಳ ಕಿಡಿಗೇಡಿ ಬುದ್ಧಿಗೆ ಹೊಳೆದ ಮಾತನ್ನು ಅವಳು ಆಡಿಯೇ ಬಿಟ್ಟಳು.

ಶಮೀಮ್ ಬಾನುವಿನ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರುವುದು ಅತ್ಯಂತ ಕಠಿಣ ಕೆಲಸ ಎಂಬುದು ಆಕೆಯ ಕುಟುಂಬದವರ ಅಭಿಪ್ರಾಯವಾಗಿತ್ತು. ಆಕೆ ಮೊದಲು ಹೀಗಿರಲಿಲ್ಲಾ ಈಗೇಕೆ ಹೀಗಾದಳು ಎಂದು ಸಾದತ್ ಚಿಂತಿತನಾಗಿದ್ದ. ಸರ್ಕಾರಿ ಪ್ರೌಢಶಾಲೆಯಲ್ಲಿ ಉರ್ದು ಭಾಷೆಯ ಅಧ್ಯಾಪಕನಾಗಿದ್ದ ಆತ ತನ್ನ ಬಿಡುವಿನ ವೇಳೆಯನ್ನೆಲ್ಲಾ ಅವಳ ವರ್ತನೆಯ ಬಗ್ಗೆ ವಿಶ್ಲೇಷಿಸಲು ಮೀಸಲಾಗಿಟ್ಟಿದ್ದು, ಆಕೆಗೆ ಜಿನ್ ಏನಾದರೂ ಮೆಟ್ಟಿರಬಹುದೇ ಎಂಬ ತೀವ್ರ ಆಲೋಚನೆಗೂ ಗುರಿಯಾಗಿದ್ದ. ಅಷ್ಟೇನೂ ಓದುವ ಹವ್ಯಾಸವಿಲ್ಲದ ಆತನ ಕಣ್ಣಿಗೆ ಸ್ಟಾಫ್ ರೂಮಿನಲ್ಲಿ ದಿನಪತ್ರಿಕೆಯೊಂದರ ಲೇಖನವೊಂದು ಅಕಸ್ಮಾತ್ತಾಗಿ ಕಣ್ಣಿಗೆ ಬಿದ್ದು, ಈ ಸಮಸ್ಯೆಗೆ ಪರಿಹಾರವನ್ನು ಹುಡುಕುವ ಅವನ ಪ್ರಯತ್ನಕ್ಕೆ ಫಲ ದೊರಕಿದಂತಾಯಿತು. ಹೀಗಾಗಿ ಅವಳು ಮೆನೋಪಾಸ್‌ನ ಸ್ಥಿತ್ಯಂತರಗಳಿಂದ ತೊಂದರೆಗೀಡಾಗಿದ್ದಾಳೆ; ಮತ್ತು ಅವಳಿಗೆ ತನ್ನ ಎಲ್ಲಾ ನೆರವಿನ ಅಗತ್ಯವಿದೆಯೆಂದು ತನ್ನ ಅನುಕೂಲಕ್ಕೆ ತಕ್ಕಂತೆ ಏಕಪಕ್ಷೀಯವಾಗಿ ತೀರ್ಮಾನ ಮಾಡಿದ ಮೇಲೆ ಅವನಿಗೆ ತುಸು ನೆಮ್ಮದಿ ಎನಿಸಿತು. ಹೀಗಾಗಿ ಮನೆಯಲ್ಲಿ ಅವಳು ನಡೆಸುವ ಆರ್ಭಟ, ಚಿಕ್ಕ ಚಿಕ್ಕ ವಿಷಯಗಳಿಗೆಲ್ಲ ನಡೆಸುವ ರಂಪ, ಮಕ್ಕಳ ಮೇಲೆ ಎರಗಿ ಬೀಳುವ ಅವಳ ನಡವಳಿಕೆಯನ್ನು ಕಂಡೂ ಕಾಣದಂತೆ ಇರುವಸ್ವಭಾವವನ್ನು ಮೈಗೂಡಿಸಿಕೊಂಡ. ಮತ್ತು ಸರಳವಾಗಿ ಅವಳನ್ನು ಅರ್ಥೈಸಿಕೊಳ್ಳುವುದು ಅವನಿಗೂ ಬೇಕಾಗಿತ್ತು. ಅವನು ಕಂಡು ಕೊಂಡ ಬಿಡುಗಡೆಯ ಸುಲಭ ಹಾದಿ ಅದಾಗಿತ್ತು.

ಅವಳ ಮೂವರು ಮಕ್ಕಳ ಪೈಕಿ ಹಿರಿಯವನು ಅಜೀಮ. ಹಿರಿಯವನು ಎಂತಲೋ ಅಥವ ಮಗ ಎಂತಲೋ ಅವಳಿಗೆ ಅವನ ಮೇಲೆ ವಿಶೇಷ ಪ್ರೀತಿ; 'ಸಾತ್ ಖೂನ್ ಮಾಫ್ "ಅಂತಾರಲ್ಲಾ ಹಾಗೆ! ಹೀಗಾಗಿ ಅವನ ಬೆನ್ನಿಗಿದ್ದ ಅವನ ತಂಗಿಯರಾಗಿದ್ದ ಆಸಿಮಾ ಮತ್ತು ಸನಾ ದಿನವೊಂದಕ್ಕೆ ಹತ್ತು ಸಾರಿಯಾದರೂ 'ಅಮ್ಮಿ ಪಾರ್ಶಿಯಾಲಿಟಿ ಮಾಡಿದರು' ಎಂದು ದೂರುವುದು ಸಾಮಾನ್ಯ ನೋಟವಾಗಿತ್ತು. ಹಾಗೆ ಎದ್ದು ಕಾಣುವಂತಹ ವರ್ತನೆ ಆಕೆಯದು. ಆದರೆ ಅವಳಿಗೆ ಕೋಪ ಬಂದಾಗ ಮತ್ತು ಆ ಕೋಪ ಆಗಾಗ್ಗೆ ಬರುತ್ತಲೇ ಇತ್ತು. ಹಾಗಾದಾಗ ಆ ಮೂವರನ್ನೂ ಒಂದೇ ತಕ್ಕಡಿಯಲ್ಲಿ ತೂಗಿ, ಶೈತಾನೀ ಕೂಟವೆಂದು ಬ್ರಾಂಡ್ ಮಾಡಿ ಕೈಗೆ ಸಿಕ್ಕಿದವರನ್ನು ಹಿಗ್ಗಾ ಮುಗ್ಗಾ ಬಾರಿಸಿ ತನ್ನ ಕೋಪವನ್ನು ತಣಿಸುವುದಿತ್ತು.

ಆಕೆಯ ಈ ಪರಿಕ್ರಮದಿಂದ ಅಜೀಮ್‌ಗೆ ವಿನಾಯತಿ ಇತ್ತು. ಸನಾ ಕೊನೆಯವಳಾದರೂ ವಿಶೇಷ ಚಾಲಾಕಿಯಾಗಿದ್ದು ಆಕೆಯ ಮೂಡನ್ನು ಗ್ರಹಿಸಿ, ನಿರೀಕ್ಷಣಾ ನಾಪತ್ತೆಯಾಗುತ್ತಿದ್ದಳು. ಅಂತೂ ಇಂತೂ ತಪ್ಪಿರಲಿ ಇಲ್ಲದಿರಲಿ ಸಿಕ್ಕಿ ಬೀಳುತ್ತಿದ್ದವಳೇ ಆಸಿಮಾ. ಆಕೆಯ ಕೋಪಕ್ಕೆ ಒಡ್ಡಿಕೊಳ್ಳಲು ಆಸಿಮಾ ಸನ್ನದ್ಧಳಾಗಿರಲು ಇನ್ನೊಂದು ವಿಚಿತ್ರ ಕಾರಣವೂ ಇತ್ತು. ಕೋಪವಿಳಿದ ಕೂಡಲೇ ಶಮೀಮ್‌ಗೆ ವಿಪರೀತ ಪಶ್ಚಾತ್ತಾಪವಾಗುತ್ತಿತ್ತು. ತನ್ನ ಕೋಪಕ್ಕೆ ಬಲಿಯಾದವಳ ಬಗ್ಗೆ ಇನ್ನಿಲ್ಲದ ಮಮತೆ ಮೂಡುತ್ತಿತ್ತು. ಹೀಗಾದಾಗ ಹೊಸ ಡ್ರೆಸ್, ಹೊಸ ಚಪ್ಪಲಿ ಅಥವ... ಮತ್ತು ಒಂದಿಷ್ಟು ಪಾಕೆಟ್‌ಮನಿ, ಒಳ್ಳೆಯ ಸಿಹಿಯಡಿಗೆ ಮೊದಲಾದ ಆಸಿಮಾಳ ಬಹು ದಿನಗಳ ಬಾಕಿ ಬೇಡಿಕೆ ಈಡೇರುತ್ತಿತ್ತು.

ತಂದೆಯ ವಿಶೇಷ ಸಂಯಮ ಆ ಮಕ್ಕಳಿಗೆ ಆಶ್ಚರ್ಯದ ವಿಷಯವಾಗಿದ್ದಂತೆಯೇ ಆತ 'ಹೆಂಡತಿಬುರುಕ' ಎಂದು ತೀರ್ಮಾನಕ್ಕೆ ಬರಲು ಕಾರಣೀಭೂತವಾಗಿತ್ತು. ಸಾದಾತ್ ಮತ್ತು ಅವನ ತಂಗಿಯರು ಆಕೆಯ ಬಗ್ಗೆ ಹೇಳುತ್ತಿದ್ದ ವಿಷಯಗಳ ಆಧಾರದ ಮೇಲೆ ಅವಳ ಈ ನಡವಳಿಕೆಯ ಬಗ್ಗೆ ಮೂವರು ಮಕ್ಕಳೂ ಒಟ್ಟುಗೂಡಿ ತಮ್ಮದೇ ಆದ ವಿವರಣೆಯನ್ನು ಸಿದ್ಧಪಡಿಸಿಕೊಂಡಿದ್ದು ಪರಸ್ಪರ ಸಾಂತ್ವನ, ಅನುಕಂಪ ಮೊದಲಾದುವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಮೂವರು ಗಂಡು ಮತ್ತು ಮೂವರು ಹೆಣ್ಣುಮಕ್ಕಳಿದ್ದ ಮನೆಗೆ ಹಿರಿಸೊಸೆಯಾಗಿ ಬಂದ ಆಕೆ ನಿರೀಕ್ಷೆಗಳ ಅಪರಿಮಿತ ಆಕಾಶವನ್ನು ತನ್ನ ಕಣ್ಣಿನಲ್ಲಿರಿಸಿಕೊಂಡು ಆ ಮನೆಗೆ ಕಾಲಿಟ್ಟಿದ್ದಳು. ಮೆಹಂದಿಯ ಚಿತ್ತಾರದ ಕೈಯನ್ನು ಗಂಧದಲ್ಲಿ ಅದ್ದಿ, ಮನೆಯ ಪಶ್ಚಿಮದ ಗೋಡೆಯ ಮೇಲೆ ಅಂಗೈಯ ಅಚ್ಚನ್ನು ಮೂಡಿಸಿದಾಗ ಅವಳಿಗೇ ಆಶ್ಚರ್ಯವಾಗುವಂತೆ, ಅದರ ಬದಿಯಲ್ಲಿ ಪುಟ್ಟಪುಟ್ಟ ಅಂಗೈಗಳು ಮೂಡಿ ಬಂದವು. ಹಿಂದಿರುಗಿ ನೋಡಿದಾಗ ನಾದಿನಿಯರು, ಮೈದುನಂದಿರು... ಅವರ ಖರ್ಚು ವೆಚ್ಚ, ಊಟೋಪಚಾರ, ಬಟ್ಟೆಬರೆ, ಸದಾ ಕಾಯಿಲೆಯ ಅತ್ತೆ... ಆಕೆಯ ಪಥ್ಯದಡಿಗೆ, ಮಾವನ ಅಸಂಖ್ಯ ನೆಂಟರಿಷ್ಟರು ಮತ್ತು ಸ್ನೇಹಿತರು... ಆಕೆಯ ಕನಸುಗಳು ಕಮರಿ ಹೋದವು. ಅದೆಲ್ಲವನ್ನೂ ಆಕೆಯು ಮೊದಮೊದಲು ನಗುತ್ತಲೇ ಸಂಭಾಳಿಸಿದಳಂತೆ. ಆದರೆ, ದಿನಗಳೆದಂತೆ ಆ ಮದುವೆಗಳು, ಹೆರಿಗೆಗಳು, ಬಾಣಂತನ, ರೋಗಗಳು, ಅತ್ತೆ ಮಾವಂದಿರ ಸಾವು.. ನಡುವೆ ತನ್ನ ಬಸಿರು ಬಾಣಂತನ ಎಳೆ ಮಕ್ಕಳ ಆರೈಕೆ–ಇವುಗಳೆಲ್ಲಾ ಆಕೆಗೆ ರೇಜಿಗೆ ಹುಟ್ಟಿಸತೊಡಗಿದವು. ಆದರೂ ಆಕೆ ಹೀಗೆ ತಾಳ್ಮೆ ಕಳೆದುಕೊಂಡಿದ್ದ ಪ್ರಸಂಗವಿರಲಿಲ್ಲ

ಕಥೆ

ಇವೆಲ್ಲದರ ನಡುವೆ ಓರಗಿತ್ತಿಯರು ಬಂದು ತನ್ನ ಜವಾಬುದಾರಿ ಸ್ವಲ್ಪವಾದರೂ ಕಡಿಮೆಯಾದೀತೆಂಬ ನಿರೀಕ್ಷೆಯ ಎಳೆಯೂ ಒಂದಿಷ್ಟು ಜಿನುಗುತ್ತಿತ್ತು ಜಲದ ಕಣ್ಣಿನೊಡನೆ.

ಅದರೆ ನಡೆದಿದ್ದಂತೂ ತದ್ವಿರುದ್ಧ; ಅವಳ ಮೊದಲನೆಯ ಓರಗಿತ್ತಿಯಂತೂ ಮದುವೆಯಾದ ಒಂದು ವರ್ಷದೊಳಗ ನಯವಾಗಿ ನಗು ನಗುತ್ತಲೇ ಗಂಡನೊಡನೆ ದುಬಾಯಿಗೆ ಹೋದ ನಂತರ ಅವಳ ಹತಾಶೆ ಮಿತಿ ಮೀರಿತು. ತಾನು ತನ್ನ ಗಂಡ ಮತ್ತು ಮಕ್ಕಳು ಯಾವಾಗ ನೆಮ್ಮದಿಯಿಂದಿರುವುದು? ತಾನು ಸತ್ತ ಮೇಲಾ... ಎಂದು ರಾಜಾ ರೋಷವಾಗಿ ಯಾರ ಮುಲಾಜೂ ಕೂಡಾ ಇಲ್ಲದೆ ಬುಸುಗುಡತೊಡಗಿದಳು. ಹೀಗಾಗಿ ಸಾದಾತ್‌ನ ತಂಗಿಯರು ಮತ್ತು ಇತರೆ ಬಂಧು ಬಳಗದವರು ಅವಳಿಂದ ಒಂದಿಷ್ಟು ಅಂತರವನ್ನು ಕಾಪಾಡಿಕೊಳ್ಳಲೇ ಬೇಕಾಯಿತು.

ತಂದೆ ತಾಯಿ ಇಲ್ಲದ ಅನಾಥ ಎಂದು ಅವಳ ಕೊನೆಯ ಮೈದುನನಾದ ಆರಿಫ್ ನನ್ನು ಪ್ರೀತಿಯಿಂದಲೇ ನೋಡಿಕೊಂಡಳು. ಆದರೆ ಅವನ ಮದುವೆಯಾದದ್ದೇ ತಡ ಮಲ ತಾಯಿಯಾಗಿಬಿಟ್ಟಳು. ಸಾದಾತ್‌ಗೆ ಕೂಡಾ ಆಶ್ಚರ್ಯವಾಗುವಂತೆ, ಆರಿಫ್‌ನ ಮದುವೆಯಾದದ್ದೇ ತಡ ಬೇರೆ ಮನೆಗೆ ಹೋಗು ಎಂದು ಮುಲಾಜಿಲ್ಲದೆ ಹೇಳಿ ಬಿಟ್ಟಳು. ಸಾದತ್ ಪರಿತಪಿಸಿ ಹೋದ. ಆದರೆ ಅವಳು ಬಿಡಬೇಕಲ್ಲಾ.. ಹಿಂದಿನದು ಮುಂದಿನದು ಎಲ್ಲಾ ಜಾಲಾಡಿಸಿ, ಸಾದತ್‌ನನ್ನೂ ಕೂಡಾ ಮನಸೋಇಚ್ಛೆ ದೂರಿ, ಅತ್ತು ಕರೆದು ರಂಪಾಟ ಮಾಡಿ ಧಡಾರೆಂದು ತನ್ನ ಕೋಣೆಯ ಬಾಗಿಲನ್ನು ಬಡಿದುಕೊಂಡಾಗ ಆರಿಫ್ ಮತ್ತು ಅವನ ಹೆಂಡತಿ ಇಬ್ಬರೂ ಕೂಡಾ ವಿಪರೀತ ಸಂಕಷ್ಟಕ್ಕೆ ಒಳಗಾದರು. ಆರಿಫ್ ಪಾಪ! 'ನಾನ್ಯಾಕೆ ಹೊರಹೋಗಲಿ, ನಮ್ಮಪ್ಪನ ಮನೆಯಲ್ಲವಾ... ಬೇಕಾದರೆ ನೀವೇ ಹೋಗಿ' ಎಂದು ಹೇಳಲಿಲ್ಲಾ. ಆದರೆ ಕೊನೆಗೆ ಆರಿಫ್ ಮತ್ತು ಸಾದತ್ ಒಳಗೊಳಗೇ ಅದೇನು ಮಾತನಾಡಿಕೊಂಡರೋ ತಿಳಿಯದು. ಹೆಂಡತಿಯೆದುರು ಆದ ಮುಖಭಂಗ, ಅವಮಾನವೆಲ್ಲವನ್ನೂ ಸಹಿಸಿಕೊಂಡು ಮೂರು ದಿನಗಳೊಳಗೆ ಮನೆ ಬಿಟ್ಟು ಅದೇ ಮೊಹಲಾದ್ಲ ಎರಡನೇ ತಿರುವಿನಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದ.

ಆರಿಫ್‌ನ ಪ್ರಸಂಗ ಆ ಮನೆಯ ಒಬ್ಬೊಬ್ಬ ವ್ಯಕ್ತಿಯ ಮೇಲೂ ವಿಭಿನ್ನ ಪರಿಣಾಮವನ್ನು ಬೀರಿತು. ಮೂವರು ಮಕ್ಕಳು ಕೂಡಿ ತಮ್ಮ ತಾಯಿಯ ವರ್ತನೆಯ ಬಗ್ಗೆ ಮೆಲುದನಿಯಲಿ ಚರ್ಚಿಸಿದರು. ಅವರಿಗೆ ಆರಿಫ್ ಚಿಕ್ಕಪ್ಪನ ಬಗ್ಗೆ ತುಂಬಾ ಪ್ರೀತಿ ಇತ್ತು. ಹೀಗಾಗಿ, ಅವಳ ವರ್ತನೆಯ ಬಗ್ಗೆ ತೀವ್ರ ಅಸಮಾಧಾನವು ಕೂಡಾ ಸಹಜವಾಗಿಯೇ ಇತ್ತು. ಸನಾಳ ಕಿಡಿಗೇಡಿ ಬುದ್ಧಿಗೆ ಹೊಳೆದ ಮಾತನ್ನು ಅವಳು ಆಡಿಯೇ ಬಿಟ್ಟಳು.

"ಇನ್ನೇನು... ನಿನ್ನ ಮದುವೆಯಾದ ಮೇಲೆ ನೀನೂ ಕೂಡಾ ನಿನ್ನ ಹೆಂಡತಿಯ ಜೊತೆಯಲ್ಲಿ ಹೀಗೆಯೇ ಮೂಟೆ ಕಟ್ಟಬೇಕು

"ಅಜೀಮ್‌ಗೆ ಒಳಾಂತರದಲ್ಲಿ ಭಯಮಿಶ್ರಿತ ವಿಷಾದ ಮೂಡಿದ್ದು, ಏನನ್ನೂ ಪ್ರತಿಕ್ರಿಯಿಸಲಿಲ್ಲ. ಬದಲಿಗೆ ಅವಳತ್ತ ದೀರ್ಘ ದೃಷ್ಟಿಯೊಂದನ್ನು ಬೀರಿದ. ಆದರೆ ಆಸಿಮಾ ಆತನ ನೆರವಿಗೆ ಬಂದಳು.

"ಬಿಡ್ತು ಅನ್ನು; ಆಮೆನ್‌ನ ಫರಿಶ್ತಗಳು... ಆಮೆನ್ ಅಂದರೆ ಕಷ್ಟ ಇಂತಹ ದುರ್ದಿನ ಯಾರಿಗೂ ಬರುವುದು ಬೇಡ "ಎಂದು ವಯಸ್ಸಿಗೆ ಮೀರಿದ ಬುದ್ಧಿವಾದವನ್ನು ಹೇಳಿದಳು. ನಂತರ ಅಜೀಮ್ ಮೌನವನ್ನು ಮುರಿದು ಅವರೊಡನೆ ಗುಸುಗುಸು ನಡೆಸಿದ. ಕೊನೆಗೆ ಅವರ ಸೋದರತ್ತೆಯಂದಿರು ಸಿದ್ಧ ಪಡಿಸಿದ ರಾಜಿ ಸೂತ್ರದಂತೆ 'ಪಾಪ! ಭಾಬಿಗೆ ಹೈ ಬಿ.ಪಿ. ಅದಕ್ಕೆ ಒಮ್ಮೊಮ್ಮೆ ಹೀಗಾಡ್ತಾರೆ; ಆದರೆ ಹೃದಯ ತುಂಬಾ ಒಳ್ಳೆಯದು' ಎಂಬ ಉಕ್ತಿಯನ್ನು ಅನ್ವಯಿಸಿ, 'ಪಾಪ! ಅಮ್ಮಿ ಒಳ್ಳೆಯವರು... ಮುಂತಾಗಿ ಪೂರ್ತಾ ವಾಕ್ಯವನ್ನು ಹೇಳಿ ಆಕೆಯ ಹೃದಯದ ಬಗ್ಗೆ ಸರ್ಟಿಫಿಕೇಟ್ ನೀಡಿ, ಇನ್ನೇನೂ ದಾರಿ ಕಾಣದೆ ಆಕೆಯನ್ನು ಮಾಫಿ ಮಾಡಿ ರಾಜಿಯಾಗಿ ಬಿಟ್ಟಿದ್ದರು ಅಷ್ಟೇ ಅಲ್ಲದೆ. ಆರಿಫ್ ಚಿಕ್ಕಪ್ಪನ ಮೋರೆಯನ್ನು ನೋಡಲು ಅವರಿಗೆ ಅತೀವ ನಾಚಿಕೆ ಎನಿಸಿದರೂ ಅವನು ಬೇರೆ ಮನೆಯಲ್ಲಿ ಹಾಲುಕ್ಕಿಸಿದ ಸಂದರ್ಭದಲ್ಲಿ ಅವನು ಕರೆದಿದ್ದ ಊಟಕ್ಕೆ ಅವರೆಲ್ಲಾ ಹೋಗಿದ್ದರು. ಶಮೀಮ್ ಬಾನು ಮಾತ್ರ ಹೋಗಿರಲಿಲ್ಲಾ. ವಿನಾ ಕಾರಣ ಆಕೆ ಹಲವಾರು ದಿನ ಆರಿಫ್ ಮತ್ತವನ ಹೆಂಡತಿಯೊಡನೆ ಮಾತು ಕಥೆಯನ್ನು ನಿಲ್ಲಿಸಿದ್ದು, ಮತ್ತೆ ಏನೂ ನಡೆದೇ ಇಲ್ಲವೇನೋ ಎನ್ನುವಷ್ಟು ನಿರಾಳವಾಗಿ ಅವರೊಡನೆ ಸಾಮರಸ್ಯವನ್ನು ಸಾಧಿಸಿಕೊಂಡು ಬಿಟ್ಟಳು.

ಗಮಗಮ ಸಾರನ್ನು ಕುದಿಸಿದ್ದಾಗ್ಯೂ ಆಕೆಗೆ ಒಂದೇ ಒಂದು ಪೀಸ್ ಸಿಗದಿದ್ದರೂ ಆಕೆ ಜಗಳವಾಡಿದ್ದಿಲ್ಲ; ಪಾತ್ರೆ ತುಂಬಾ ಪಾಯಸವನ್ನು ಮಾಡಿ ಕೊನೆಗೆ ಒಂದು ಟೀ ಸ್ಪೂನಿನಷ್ಟು ಪಾಯಸ ಕೂಡಾ ಉಳಿಯದಿದ್ದಾಗಲೂ ಬೇಸರಗೊಂಡವಳಲ್ಲ. ಮದುವೆಗಳಲ್ಲಿ ಅಸಂಖ್ಯ ಜರತಾರಿ, ರೇಷ್ಮೆ ಸೀರೆಗಳು ಸೂರೆ ಹೋದಾಗಲೂ ಆಸೆಪಟ್ಟವಳಲ್ಲಾ... ಯಃಕಶ್ಚಿತ್ ಹಳೆಯ ಜೂಲು ಜೂಲಾದ ಜಾನಮಾಜಿನ ಸಲುವಾಗಿ ಅವಳು ಹರಿಸುತ್ತಿರುವ ಕಣ್ಣೀರನ್ನು ನೋಡಿ ಶಮೀಮ್ ಬಾನುವಿಗೆ ಆಘಾತವಾಗತೊಡಗಿತು.

ಆದರೆ, ಈ ಬಗ್ಗೆ ತೀರಾ ನೊಂದವನು ಮಾತ್ರ ಸಾದತ್. ಅವನು ತನ್ನನ್ನು ತಾನೇ ನೂರಾ ಒಂದನೆಯ ಬಾರಿ ಹಳಿದುಕೊಂಡ. ತಾನು ಕೈಲಾಗದವನು ಎಂದು ತನ್ನ ಮೇಲೆ ತಾನೇ ದೋಷವನ್ನು ಹೊರಿಸಿ ಕೊಂಡ. ಅವಳ ಮೆನೋಪಾಸ್ ಎಂಬ ನೆಪವನ್ನು ತಾನೇ ಸೃಷ್ಟಿಸಿಕೊಂಡು ಅದರಡಿಯಲ್ಲಿ ಎಲ್ಲಾ ಸಂಬಂಧಗಳನ್ನು ಮತ್ತು ಮಾನವೀಯತೆಯನ್ನು ಗಾಳಿಗೆ ತೂರಿ, ತನ್ನ ದೌರ್ಬಲ್ಯವನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ಹೇಡಿ ಎಂದು ತನ್ನನ್ನು ತಾನೇ ಜರಿದುಕೊಂಡ. ಆರಿಫ್‌ನ ಮತ್ತು ಅವನ ಪತ್ನಿಯ ಎದುರಿಗೆ ತಾನು ಕುಬ್ಜನಾದೆ ಮತ್ತು ಅಣ್ಣಾ ಎಂಬ ತನ್ನ ಪಾತ್ರ ನಿರ್ವಹಣೆಯಲ್ಲಿ ತಾನು ಸೋತು ಹೋದೆ ಎಂಬ ನಿರಂತರ ಸೋಲಿನ ಭಾವದೊಡನೆ ಅವನು ಅಪಾರ ಅವಮಾನವನ್ನು ಅನುಭವಿಸಿದ. ಈ ನಿರ್ವೀರ್ಣ್ಯತೆಯ ಹಿನ್ನೆಲೆಯಲ್ಲಿ ಗತ ವೈಭವದ ಪುರುಷಾಧಿಕಾರವನ್ನು ಮರಳಿ ಪಡೆಯಬೇಕೆಂಬ ಹಟ ಹುಟ್ಟಿ, ಅವಳನ್ನು ಹಿಂದಿನಂತೆ ತನ್ನ ಆಜ್ಞಾ ಧಾರಕಳನ್ನಾಗಿ ಮಾಡಿಯೇ ತೀರಬೇಕೆಂದು ತೀರ್ಮಾನಿಸಿದ. ಆದರೆ ತೀರ್ಮಾನವನ್ನು ಕಾರ್ಯಗತಗೊಳಿಸುವ ಅವಕಾಶಗಳನ್ನು ಬೇಕೆಂತಲೇ ಕಳೆದುಕೊಂಡ. ಹೀಗಾಗಿ, ತನ್ನ ಬಗ್ಗೆ ಇನ್ನಷ್ಟು ಜಿಗುಪ್ಸೆಯನ್ನು ಬೆಳೆಸಿಕೊಂಡ.

ಈ ಹಿಂಸೆಯನ್ನು ತಾನು ಸಹಿಸಲು ಸಾಧ್ಯವೇ ಇಲ್ಲ ಎಂದು ಅವನಿಗೆ ಅಂತಿಮವಾಗಿ ಮನದಟ್ಟು ಆಗುವ ವೇಳೆಗೆ, ತಾನು ಯಾವುದೋ ಭಯದಿಂದ ಅವಳಿಗೆ ಮುಖಾಮುಖಿಯಾಗಲು ಹೆದರುತ್ತಿದ್ದೇನೆ ಎಂದು ಅರಿವಾಗತೊಡಗಿತು. ಆದರೆ, ಯಾವ ಭಯ... ಎಂಬ ಪ್ರಶ್ನೆಗಳಿಗೆ ಅವನಿಗೆ ಉತ್ತರ ದೊರಕಲಿಲ್ಲಾ. ಭಯದ ಕಾರಣದ ಅನ್ವೇಷಣೆಗೆ ತೊಡಗಿದ ಅವನು ವಿಷಾದದ ಚೌಕಟ್ಟನ್ನು ತನ್ನ ಸುತ್ತಲೂ ಕಟ್ಟಿಕೊಂಡ. ಆ ಕೃತ್ರಿಮ ಗೋಡೆಗಳನ್ನು ತಾನು ಎಂದು ಒಡೆಯಲು ಸಾಧ್ಯವೋ ಅಂದೇ ತನಗೆ ಈ ಹಿಂಸೆಯಿಂದ ಬಿಡುಗಡೆಯಾಗುವುದು ಎಂದು ತನಗೆ ತಾನೇ ನಿಬಂಧನೆಗಳನ್ನು ಒಡ್ಡಿಕೊಂಡ. ಅವನ ಬದುಕಿನ ಸೂರ್ಯ ಕಾವನ್ನು ಕಳೆದುಕೊಂಡು ಅವನು ಒಳಗೊಳಗೇ ಕುಸಿಯಲಾರಂಭಿಸಿದ.

ಸಂಜೆಯ ನಮಾಜಿಗೆ ಹೊರಡಲೆಂದು ಅದೊಂದು ಸಂಜೆ ಅವನು ಟೋಪಿಗಾಗಿ ಹುಡುಕಾಟ ನಡೆಸಿದ್ದ. ಸಾಮಾನ್ಯವಾಗಿ ಅವನ ಟೋಪಿ ಅವನ ಕಣ್ಣೆದುರಿಗೆ ಕಾಣುವಂತೆ ಇರುತ್ತಿತ್ತು. ಇಂದು ಅದೆಲ್ಲಿ ಬಿದ್ದಿತ್ತೋ... ಅವನ ಅಸಹನೆ ಹೆಚ್ಚುತ್ತಿತ್ತು. ಮಸೀದಿಯಿಂದ ಅಜಾನ್ (ನಮಾಜಿನ ಹೊತ್ತಿಗೆ ಮಸೀದಿಯಿಂದ ಮಾಡುವ ಕರೆ) ಇನ್ನೇನು

ಮುಗಿಯುವ ಹಂತದಲ್ಲಿತ್ತು. ಅವನು ಟೋಪಿಯನ್ನು ತಲೆಯ ಮೇಲಿಟ್ಟು, ಓಡಿದಲ್ಲಿ ಮಾತ್ರ ಜಮಾತ್‌ನೊಡನೆ ನಮಾಜ್ ಮಾಡುವ ಅವಕಾಶ ಸಿಗುತ್ತಿತ್ತು. ಆದರೆ ಈ ಟೋಪಿ.. 'ನನ್ನ ಟೋಪಿ ಎಲ್ಲಿ?' ತನಗೆ ತಾನೇ ಎಂಬಂತೆ ಅವನು ಜೋರಾಗಿ ಕೂಗು ಹಾಕಿದ. ಅವನಿಗೆ ಉತ್ತರಿಸುವವರ್‍ಯಾರು... ಯಾರಾದರೂ ಉತ್ತರಿಸಬೇಕಿತ್ತು ಎಂದು ಅವನಿಗನ್ನಿಸಿತು... ಕೊನೆಗೆ ಅವಳು ಬಯ್ದು ಟೋಪಿಯನ್ನು ತಂದು ಬಿಸಾಕಿದ್ದರೂ ಅವನಿಗೆ ಒಂದಿಷ್ಟು ನೆಮ್ಮದಿಯೆನಿಸುತ್ತಿತ್ತು. ಉಳಿದ ಎಲ್ಲಾ ಹೊತ್ತಿನ ನಮಾಜಿನಲ್ಲಿ ಅಜಾನ್ ಆದ ನಂತರ ನಮಾಜಿಗೆಂದು ಜನರು ಸೇರಲು ಒಂದರ್ಧ ಗಂಟೆಯಾದರೂ ಕಾಲಾವಕಾಶ ಇರುತ್ತದೆ. ಸಂಜೆಯ ನಮಾಜಿಗೆ ಈ ರೀತಿಯ ಕಾಲಾವಕಾಶ ಇರುವುದಿಲ್ಲ. ಇತ್ತ ಅಜಾನ್ ಆದ ಕೂಡಲೇ ನಮಾಜ್‌ಗೆ ಜನರು ಸೇರಿಯೇ ಬಿಡುತ್ತಾರೆ ಮುಸ್ಸಂಜೆಯ ಆ ಪವಿತ್ರ ಹೊತ್ತಿನಲ್ಲಿ ಅವನಿಗೆ ಪ್ರಾರ್ಥನೆಯ ಅವಕಾಶವೂ ಇಲ್ಲ ಎಂದರೆ.... ಅವನಿಗೆ ಮೈ ಪರಚಿಕೊಳಬೇಕೆನಿಸಿತು. ಅವಳು ಅವನೆದುರಿಗೇ ಹಾಯಾಗಿ ಕಾಲು ನೀಡಿಕೊಂಡು ಕುಳಿತಿದ್ದು, ಟಿವಿಯಲ್ಲಿ ಮೈ ಮರೆತಿದ್ದಳು.

'ಆ ದರಿದ್ರ ಟೀವಿಯನ್ನು ಬಂದ್ ಮಾಡ್ತೀಯಾ...? ಅಜಾನ್ ಆಗುತ್ತಿದ್ದರೂ ಒಂದಿಷ್ಟೂ ವಾಲ್ಯೂಮ್ ಕಡಿಮೆ ಮಾಡ್ತಿಲ್ಲವಲ್ಲಾ...' ಎಂದವನು 'ನಿನಗಾಗಿ ಅಲ್ಲಾಹನು ವಿಶೇಷ ನರಕವನ್ನು ಸೃಷ್ಟಿಸಿದ್ದಾನೆ' ಎಂದು ನುಡಿಯಲು ನಾಲಿಗೆಯ ತುದಿಯವರೆವಿಗೂ ಬಂದಿದ್ದ ಮಾತನ್ನು ಹಾಗೆಯೇ ತಡೆ ಹಿಡಿದ. ಅವಳಾದರೋ ಅವನತ್ತ ತಿರುಗಲೂ ಇಲ್ಲ ಕ್ಯಾರೇ ಅನ್ನಲೂ ಇಲ್ಲ. ತನ್ನ ತಲೆಯ ಮೇಲಿನ ಟೋಪಿಗಾಗಿ ಪರದಾಡುತ್ತಿರುವ ಅವನ ವರಸೆಯನ್ನು ನೋಡಿ ಅವನ ಮೇಲೆ ದಯೆ ತೋರುವಂತೆ ಮೌನವಾಗಿ ತನ್ನ ಕಾಯಕದಲ್ಲಿ ಮಗ್ನಳಾದಳು. ಇನ್ನೇನು ಅವನು ಆಸ್ಫೋಟಗೊಳ್ಳಬೇಕು... ಅವಳ ಕಪಾಳಕ್ಕೆ ಒಂದು ಬಾರಿಸಬೇಕು... ಆದರೆ ಸಾಧ್ಯವಾಗುತ್ತಿಲ್ಲ.... ಯಾಕೆ ಸಾಧ್ಯವಾಗುತ್ತಿಲ್ಲ... ಅಗೋಚರ ಭಯದ ಎದುರಿನಲ್ಲಿ ಅವನು ಹಿಂಡಿ ಹಿಪ್ಪೆಯಾದಂತೆನಿಸಿ... ವಿಪರೀತವಾಗಿ ಬೆವರುತ್ತಾ ಇನ್ನೇನು ಕುಸಿದು ಬೀಳಬೇಕು... ಎಂದು ಹಾಗೆ ಕುಸಿದು ಬೀಳಬೇಕಾದರೆ ಆಸರೆಗೆ ಕುರ್ಚಿಯೊಂದಾದರೂ ದೊರಕಿದರೆ ಸಾಕೆಂದು ಅವನು ಕಣ್ಣಾಡಿಸುತ್ತಿರುವಾಗಲೇ... ಅವನ ಅಗೋಚರ ಭಯವು ಅವನ ಕಣ್ಣಿಗೆ ನಿಧಾನವಾಗಿ ಗೋಚರವಾಯಿತು. ಬಾಗಿದ ಬೆನ್ನು, ಸುಕ್ಕುಗಟ್ಟಿದ ಚರ್ಮ, ಒಣಗಿದ ಕೈಕಾಲುಗಳು ಆದರೂ ಮೋರೆಯ ಮೇಲೆ ವಿಲಕ್ಷಣವಾದ ಹೊಳಪು, ನೆರೆಗಟ್ಟಿದ ಕೂದಲು... ತಲೆಯ ಮೇಲೆ ಬಿಳಿ ಸೆರಗನ್ನು ಹೊದ್ದ ಹಿರಿಯ ಜೀವವೊಂದು ಸಂಜೆಗತ್ತಲ ಕೋಪೋದ್ರಿಕ್ತ ವಾತಾವರಣದಲ್ಲಿ ಮೆಲ್ಲನೆ ಅಡಿಯಿಡುತ್ತ ಬಂದು ಅವನೆದುರಿಗೆ ಟೋಪಿಯನ್ನು ಚಾಚಿದಾಗ ಅವನು ಅಚೇತನನಾದ.

ಹ್ಹಾ... ಈ ಕಾರಣಕ್ಕಾಗಿ ತಾನೇ ತಾನು ಶಮೀಮ್ ಬಾನುವಿನ ಎಲ್ಲಾ ಹಿಂಸಾಚಾರವನ್ನು ಸಹಿಸುತ್ತಿರುವುದು... ಓ ಅಲ್ಲಾಹನೇ ನನ್ನನ್ನು ಎಂತಹ ಪರೀಕ್ಷೆಯಲ್ಲಿ ಕೆಡವಿದೆ...

'ಇದೇ ತಾನೇ ನನ್ನ ಟೋಪಿ... ತಗೋಪ್ಪಾ ನಮಾಜಿಗೆ ಹೋಗು ಬೇಗ... ನಾನೂ ಕೂಡಾ ನಮಾಜಿಗೆ ಹೋಗಬೇಕು' ಬಲಗೈಯಲ್ಲಿ ಅವನ ಹಳೆಯ ಟೋಪಿಯನ್ನು ಮುಂಚಾಚಿದವಳ ಎಡಗೈಯಲ್ಲಿ ಅವಳಷ್ಟೇ ಜೀರ್ಣವಾದ ಜಾನಮಾಜ್ (ನಮಾಜ್ ಮಾಡುವಾಗ ಹಾಸಿಕೊಳ್ಳುವ ಚಾಪೆ) ಇತ್ತು.

'ಅಯ್ಯೋ! ಅಮ್ಮಾಜಿ ನೀವು ಯಾಕೆ ತೊಂದರೆ ತಗೊಂಡಿರಿ ನಾನು ಹುಡುಕಿಕೊಳ್ಳುತ್ತಿದ್ದೆ' ಎಂದು ಹೇಳಿದರೂ ಅವಳನ್ನು ಸಮೀಪಿಸಿ ಅವಳ ಕೈಯಿಂದ ಇಸಿದುಕೊಂಡ ಹಳೆಯ ಟೋಪಿಯನ್ನೇ ತನ್ನ ತಲೆಗೇರಿಸಿದ. ಬಿಳಿಯ ಬಣ್ಣ ಕಳೆದು ಮಾಸಲು ಹಳದಿ ಬಣ್ಣಕ್ಕೆ ತಿರುಗಿದ್ದ ಆ ಟೋಪಿ ಅವನ ತಲೆಗೇರಿತು. ಆಕೆ ಮಮತೆಯಿಂದ ಅವನ ತಲೆಯ ಮೇಲೆ ಕೈ ಇಟ್ಟು, ಅವನಿಗೆ ಆಶೀರ್ವಚನಗಳನ್ನು ಹೇಳುತ್ತಾ, ನಿಧಾನವಾಗಿ ಕೋಣೆಯತ್ತ ನಡೆದಳು.

ದಾಪುಗಾಲನ್ನಿಟ್ಟ ಸಾದತ್ ಮಸೀದಿಯತ್ತ ಓಡತೊಡಗಿದ. ಮೊದಲು ಆಕೆಯನ್ನು ಅವನು ಅಮ್ಮಾಜಿ ಎಂದು ಕರೆಯುತ್ತಿದ್ದ. ಆದರೆ, ಅವನ ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಅವರು ಆಕೆಯನ್ನು ಬೀದಾದಿ ಎಂದು ಕರೆಯಲಾರಂಭಿಸಿದರು. ಯಾರು ಹೇಳಿಕೊಟ್ಟರೋ ಏನೋ... ಮುಂದೆ ಎಲ್ಲರೂ ಸಾದತ್ ಕೂಡಾ ಬೀದಾದಿ ಎಂತಲೇ ಕರೆಯತೊಡಗಿದ. ಅವಳು ಅವನ ಸೋದರತ್ತೆ. ಬೀದಾದಿಗೆ ಬಾಲ್ಯ ವಿವಾಹವಾಗಿತ್ತು. ಮದುವೆಯಾದ ಒಂದು ತಿಂಗಳಿಗೇ ಆಕೆಯ ಪತಿಯ ಮರಣವಾಯಿತಂತೆ. ಹಾವು ಕಡಿಯಿತು ಎಂದು ಯಾರು ಯಾರೋ ಕಾರಣವನ್ನು ನೀಡುತ್ತಿದ್ದರು. ಆದರೆ, ಅವ ಹೇಗೆ ಸತ್ತ ಎಂದು ಅವಳಿಗೆ ಕೊನೆಯವರೆವಿಗೂ ಗೊತ್ತಾಗಿರಲಿಲ್ಲ. ಗಂಡ ಸತ್ತ ಒಂದು ವರ್ಷಕ್ಕೆ ಅವಳು ಮೈನೆರೆದಳು... ತನ್ನ ತವರು ಮನೆಯಲ್ಲಿ. ಮುಸ್ಲಿಮರಲ್ಲಿ ನಿರ್ಬಂಧವೇನೂ ಇರದಿದ್ದರೂ ಅವರ ಕುಟುಂಬದಲ್ಲಿ ಮರುಮದುವೆಯ ಸಂಪ್ರದಾಯವಿರಲಿಲ್ಲ. ಹೀಗಾಗಿ ಪ್ರತಿ ಮಾಸಿಕದಲ್ಲಿಯೂ ಅವಳ ದೇಹ ಪೊರೆಕಳಚಿ... ಮಣ್ಣು ಪಾಲಾಯಿತು. ಅವಳ ದೇಹ, ಮನಸ್ಸು, ಕನಸು ಯಾವುದೂ ಫಲಿಸಲಿಲ್ಲ. ಅವಳು ಚಿರಕನ್ಯೆಯಾಗಿ ಉಳಿದಳು. ನೆರಳಿನಂತೆ ಬದುಕಿ ಅಣ್ಣನ ಕುಟುಂಬಕ್ಕೆ ನೆರಳಾದಳು. ಅವಳ ಅತ್ತಿಗೆಯ ಅಂದರೆ, ಸಾದತ್‌ನ ತಾಯಿಯ ಕಾಯಿಲೆ –

ತನ್ನ ತವರು ಮನೆಯಲ್ಲಿ. ಮುಸ್ಲಿಮರಲ್ಲಿ ನಿರ್ಬಂಧವೇನೂ ಇರದಿದ್ದರೂ ಅವರ ಕುಟುಂಬದಲ್ಲಿ ಮರುಮದುವೆಯ ಸಂಪ್ರದಾಯವಿರಲಿಲ್ಲ. ಹೀಗಾಗಿ ಪ್ರತಿ ಮಾಸಿಕದಲ್ಲಿಯೂ ಅವಳ ದೇಹ ಪೊರೆಕಳಚಿ... ಮಣ್ಣು ಪಾಲಾಯಿತು. ಅವಳ ದೇಹ, ಮನಸ್ಸು, ಕನಸು ಯಾವುದೂ ಫಲಿಸಲಿಲ್ಲ. ಅವಳು ಚಿರಕನ್ಯೆಯಾಗಿ ಉಳಿದಳು.



WITH BEST COMPLIMENTS FROM

Krishna Enterprises and Infrastructure Pvt. Ltd

Hebbal, Bangalore

ಕಸಾಲೆಗೆ ಒದಗುತ್ತಾ ಒಂದಿನಿತೂ ಬೇಸರಿಸದೆ ಮಲ ಮೂತ್ರವನ್ನು ಬಳಿದಳು... ಅವನು ಒಮ್ಮೊಮ್ಮೆ ಆಲೋಚಿಸುವುದಿತ್ತು... ತಾಯಿಯ ಕಾಯಿಲೆಗಾಗಿಯೇ ಅವಳು ಸೃಷ್ಟಿಯಾದಳೇ ಅಥವಾ ಅವಳನ್ನು ಕಂಡು ತನ್ನ ತಾಯಿ ಕಾಯಿಲೆ ಬಿದ್ದಳೇ. ತನ್ನ ಅಮ್ಮಿ ಹೇಳಿದ ಕೆಲಸವನ್ನು, ಹೇಳದೆ ಹೊರೆ ಬಿದ್ದ ಕೆಲಸಗಳನ್ನು ಹುಡುಕಿ ಹುಡುಕಿ ಮಾಡಿದಳು. ರಾಶಿ ರಾಶಿ ಕಸ ಮುಸುರೆಯನ್ನು ಎಂದೂ ದಿಟ್ಟಿಸಲಿಲ್ಲ... ತಲೆ ಬಗ್ಗಿಸಿ ತೊಳೆದಳು. ಆಮನೆಗೆ ಎಂದೂ ಬೀಗವನ್ನು ಹಾಕಿದ್ದ ನೆನಪೇ ಇರಲಿಲ್ಲ ಅವನಿಗೆ... ಅವಳೇ ಬೀಗವಾದಳು. ಯಾವಾಗ ಬಂದು ಬಾಗಿಲು ತಟ್ಟಿದರೂ ಅವನಿಗೆ ಬಾಗಿಲನ್ನು ತೆರೆಯುತ್ತಿದ್ದವಳು ಅವಳೇ. ರಂಜಾನಿನಲ್ಲಿ ಕೊಡಿಸಿದ ಒಂದು ಜೊತೆ ಬಟ್ಟೆಯನ್ನು ಶುಭ್ರವಾಗಿ ಒಗೆದು ನೀಟಾಗಿ ಮಡಚಿ ತನ್ನ ಕಬ್ಬಿಣದ ಟ್ರಂಕಿನಲ್ಲಿಟ್ಟಳು. ಆ ಟ್ರಂಕಿನ ಮೇಲೆ ತನ್ನ ಮದುವೆಯಲ್ಲಿ ಕೊಟ್ಟಿದ್ದ ಜಾನಮಾಜನ್ನು ಮತ್ತು ನಮಾಜಿನ ಚಾದರವನ್ನು ಮಡಚಿ ಇಡುತ್ತಿದ್ದಳು. ನಮಾಜಿನ ಚಾದರದಲ್ಲಿ ಆಗಾಗ್ಗೆ ಕೆಲವು ಮಲ್ಲಿಗೆ ಹೂವುಗಳು ಬಿರಿಯುತ್ತಿದ್ದವು.

ಇದರೊಟ್ಟಿಗೆ ಅವಳು ಹುಳ ಹುಪ್ಪಟೆಯನ್ನು ಒಂದಿಷ್ಟೂ ಕರುಣೆ ಇಲ್ಲದೆ ಬಡಿದು ಸಾಯಿಸುತ್ತಿದ್ದಳು. ಹೀಗಾಗಿ ಹೆಂಗಸರು ಮತ್ತು ಮಕ್ಕಳಿಗೆ ಆಕೆ ಆಪದ್ಬಾಂಧವಳಾಗಿದ್ದು, ಬಹಳ ಜನಾನುರಾಗಿಯಾಗಿದ್ದಳು. ಯಾರಾದರೂ 'ಬೀದಾದಿ' ಎಂದು ಆರ್ತನಾದ ಹೊರಡಿಸಿದರೆ ಸಾಕು... ಕ್ಷಣಾರ್ಧದಲ್ಲಿ ಅವಳು ಪೊರಕೆಯೊಂದಿಗೆ ಹಾಜರಾಗುತ್ತಿದ್ದಳು. ಹೀಗೆ ಹುಳು ಹುಪ್ಪಟೆಗಳನ್ನು ಬಡಿಯುತ್ತಾ... ಸಾಯಿಸುತ್ತಾ ಅವಳು ಒಂದು ಸಾರಿ ತನ್ನ ಪೊರಕೆಯನ್ನು ಬದಿಗೆ ಸರಿಸಿ ಸೀಳಿದ್ದ ಸೌದೆಯನ್ನು ಕೈಗೆತ್ತಿಕೊಂಡು ಒಂದು ಹಾವನ್ನು ಬಡಿದು ಸಾಯಿಸಿಯೇ ಬಿಟ್ಟಳು. ರಕ್ತ ಸಿಕ್ತವಾಗಿ ಗಾಯಗೊಂಡು ಸತ್ತು ಬಿದ್ದಿದ್ದ ಹಾವನ್ನು ಕಂಡು ಅನೇಕ ಗಂಡಸರು ಕೂಡ ಹೆದರಿದ್ದರು. ನಾಗರಹಾವು ಎಂದು ಕೆಲವರು, ಕೊಳಕುಮಂಡಲ ಎಂದು ಕೆಲವರು ಅ ಸತ್ತ ಹೆಸರಿಗೆ ನಾಮಕರಣ ಮಾಡುತ್ತಿದ್ದರೆ, ಅವಳು ಮಾತ್ರ 'ಈ ಹಾವುಗಳಿಗ್ಯಾಕೆ ಕಚ್ಚುವ ಕೆಲಸ... ಗಂಡಸರನ್ನು ಸಾಯಿಸುವ ಕೆಲಸ...' ಎಂದು ರೊಚ್ಚಿನಿಂದ ಇನ್ನೂ ನಾಲ್ಕಾರು ಸಾರಿ ಬಡಿದಿದ್ದಳು. ಆಗ ಅವಳ ಕಣ್ಣು ತುಂಬಾ ನೀರಿತ್ತು ಎಂದು ಕೆಲವರು ತರ್ಕಿಸಿದ್ದರು.

ಅಂತಹ ಬೀದಾದಿಯ ನೇರ ಮೇಲ್ವಿಚಾರಣೆಯಲ್ಲಿ ಶಮೀಮ್ ಬಾನು ಪಳಗಿದ್ದು. ಮೊದ ಮೊದಲು ಬೀದಾದಿಯ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದ ಆಕೆ ಕಾಲ ಕಳೆದಂತೆ, ಉಡಾಯಿಸಿ ಮಾತನಾಡುವುದನ್ನು ಆರಂಭಿಸಿದ್ದಳು. ಸಾದತ್‌ನ ಚಿಂತೆ ಕೂಡಾ ಆರಂಭವಾದದ್ದು ಇಲ್ಲಿನಿಂದಲೆ. ತಮಗಾಗಿ ಜೀವ ತೆಯ್ದ ಬೀದಾದಿಯನ್ನು ಶಮೀಮ್ ಎಲ್ಲಿ ನಿಂತ ಕಾಲಲ್ಲಿಯೇ ಹೊರಡಿಸಿ ಅಟ್ಟುವಳೋ... ಆರಿಫ್‌ನಂತೆ.. ಅಟ್ಟುವುದಾದರೂ ಎಲ್ಲಿಗೆ? ಅವನಿಗಾದರೋ ಪರವಾಗಿಲ್ಲ... ಉದ್ಯೋಗವಿದೆ, ಹೆಂಡತಿ ಇದ್ದಾಳೆ. ಬೀದಾದಿಯ ಜೊತೆಯಲ್ಲಿ ತಾನಲ್ಲದೆ ಇನ್ಯಾರಿದ್ದಾರೆ? ಆಕೆ ಹಾಗೇನಾದರೂ ನಡೆದುಕೊಂಡರೆ... ಅದನ್ನು ನೆನಸಿಕೊಂಡೇ ಅವನಿಗೆ ನಡುಕ ಬಂದಂತಾಗುತ್ತಿತ್ತು. 'ಎಲ್ಲಾ ಅಲ್ಲಾಹನಿಚ್ಛೆ' ಎಂದು ಹೇಳಿಕೊಂಡು ಸಮಾಧಾನ ಪಟ್ಟರೂ, ನೆಮ್ಮದಿ ಅವನಿಂದ ದೂರವಾಗಿತ್ತು .

ಅದೊಂದು ದಿನ... ಅಜೀಮ್ ಹೊರಗಿನಿಂದ ಕೂಗು ಹಾಕಿದ, 'ಏ... ಸನಾ... ಸನಾ... ಎಲ್ಲಿದ್ದೀಯಾ'

'ಬಂದೆ... ಬಂದೆ... ಏನಾಗಬೇಕೂ?'

'ನೀನು ಬರದೇ ಹೋದರೂ ಪರವಾಗಿಲ್ಲ... ಒಂದು ಹಳೆ ಬಟ್ಟೆಯನ್ನು ತೆಗೆದುಕೊಂಡು ಬಾ... ಬೈಕ್ ಒರೆಸಲು ಬೇಕು'

'ಒಂದೇ ನಿಮಿಷ' ಎಂದವಳೇ ಅವಳು ಓಡಿ ಬಂದು ಅವನ ಕೈಗೆ ಒಂದು ಹಳೆ ಬಟ್ಟೆಯನ್ನಿಟ್ಟು ಮಾಯವಾದಳು. ಕೈಯಲ್ಲಿ ಆ ಬಟ್ಟೆಯನ್ನು ಹಿಡಿದ ಅಜೀಮ್‌ಗೆ ಯಾಕೋ ಅನುಮಾನ ಬಂದಿತು. ಆದರೆ, ಅವನು ಕೂಡಾ ಅರ್ಜೆಂಟಿನಲ್ಲಿದ್ದುದರಿಂದ ಮತ್ತು ಮನಸ್ಸಿಗೆ ಹೆಚ್ಚು ದಣಿವು ಮಾಡಿಕೊಳಬಾರದೆಂಬ ಆಲಸ್ಯದ ಭಾವವೂ ಕೂಡಾ ತಲೆದೋರಿದ್ದರಿಂದ ಚಕಚಕನೆ ತನ್ನ ಬೈಕನ್ನು ಒರೆಸಿದ ಶಾಸ್ತ್ರವನ್ನು ಮಾಡಿ, ಆ ಬಟ್ಟೆಯನ್ನು ಬಾಗಿಲ ಬಳಿ ಎಸೆದು ಹೋದ. ಆದರೆ, ಅವನು ಮಧ್ಯಾಹ್ನ ಮನೆಗೆ ಬಂದಾಗ ಗಂಭೀರ ಅನಾಹುತವೊಂದು ನಡೆದು ಹೋಗಿದೆ ಹಾಗೂ ಆ ಅವಘಡಕ್ಕೆ ತಾನೇ ನೇರ ಕಾರಣ ಎಂದರಿವಾಗಲು ಅವನಿಗೆ ತಡವಾಗಲಿಲ್ಲ.

ಅಂಗಳದಲ್ಲಿ ನಿಂತಿದ್ದ ಬೀದಾದಿ ಮತ್ತು ಆಕೆಯೆದುರಿಗೆ ತನ್ನ ತಾಯಿ. ಎಂದೂ ಅಳದ ಬೀದಾದಿ ಅತ್ತೂ ಅತ್ತೂ ಕಣ್ಣ ಕೋಡಿ ಹರಿದಿತ್ತು. ಆಕೆಯ ಕೈಯಲ್ಲಿ ಅವನು ಬಿಸಾಡಿ ಹೋಗಿದ್ದ ಹಳೆ ಬಟ್ಟೆ... ಆ ಹಳೆ ಬಟ್ಟೆಗೆ ತಗುಲಿದ್ದ ಬೈಕಿನ ಕೊಳೆಯನ್ನು ಮತ್ತು ಕಲೆಗಳನ್ನು ಹೋಗಲಾಡಿಸಲು ಆಕೆ ತನ್ನ ಅಶಕ್ತ ಕೈಗಳಿಂದ ಉಜ್ಜಿ ಉಜ್ಜಿ ಇನ್ನಿಲ್ಲದ ಪ್ರಯತ್ನವನ್ನು ಪಡುತ್ತಿದ್ದಳು. ಅವಳ ಬದಿಯಲ್ಲಿ ವಿಷಣ್ಣಳಾಗಿ ನಿಂತಿದ್ದ ಶಮೀಮ್ ಬಾನು ಅತೀವ ದುಃಖದಿಂದ ಅವಳೆದುರಿಗೆ ಹೊಸದಾದ ರೇಷ್ಮೆಯ ಚಾಪೆಯನ್ನು ಹಿಡಿದುಕೊಂಡು ನಿಂತಿದ್ದು, ಆಕೆಗೆ ಸಮಾಧಾನ ಮಾಡುತ್ತಿದ್ದಳು.

'ಇಗೋ... ಇದು ಹೊಸದಾದ ಜಾನಮಾಜ್... ಇದನ್ನು ತಗೋಳಿ ಬೀದಾದಿ'

ಬೀದಾದಿ ಇನ್ನಷ್ಟು ಕಣ್ಣೊರೆಸಿಕೊಳ್ಳುತ್ತಾ ಬಿಕ್ಕಳಿಸುತ್ತಿದ್ದಳು,' ಬೇಡಾ...ನನಗೆ ಬೇಡಾ... ಸಾಯೋ ಮುದುಕಿಗೆ ಅದೆಲ್ಲಾ ಯಾಕೆ'

'ಬಿಡ್ತು ಅನ್ನಿ.. ಸಾಯಲಿ ನಿಮ್ಮ ದುಷ್ಮನ್‌ಗಳು... ಇದು ಅಂತಿಂತಹ ಜಾನಮಾಜ್ ಅಲ್ಲಾ... ನನ್ನ ಅಕ್ಕ ಹಜ್‌ಗೆ ಹೋಗಿದ್ದಾಗ ನನಗೋಸ್ಕರವಾಗಿ ಹುಡುಕಿ ತಂದಿರೋದು. ಅಲ್ಲಿಯೇ ಝುಮ್ ಝುಮ್ ನೀರನ್ನು ಪ್ರೋಕ್ಷಣೆ ಮಾಡಿ ತಂದಿರೋದು. ನಿಮ್ಮ ದಮ್ಮಯ್ಯ... ಈಗ ಇದನ್ನು ತಗೋಳಿ... ಇದರ ಮೇಲೆ ನಮಜ್ ಮಾಡಿ'

ಅಜೀಮ್‌ಗೆ ತನ್ನ ತಪ್ಪಿನ ಅರಿವಾಯಿತು. ಕಳ್ಳ ಮಾಲು ಸಮೇತ ಸಿಕ್ಕಿ ಬಿದ್ದಂತಾಗಿತ್ತು. ಜಾನಮಾಜಿನ ಮೇಲಿನ ಆಯಿಲ್‌ನ ಕಲೆಗಳು ಎಲ್ಲಾ ಕಥೆಯನ್ನು ಹೇಳುತ್ತಿದ್ದವು.

ಇನ್ನು, ಸುಮ್ಮನಿದ್ದರೆ ಆಗದು ಈ ಸಮಸ್ಯೆಗೆ ಪರಿಹಾರವನ್ನು ಹುಡುಕಲೇ ಬೇಕು ಎಂದು ಅಜೀಮ್ ಆಲೋಚಿಸಿದ. ಆ ದಿನ ಶಮೀಮ್ ಬಾನು ಹೊರಹೋಗಿದ್ದಳು. ಸಾದತ್ ಎಂದಿನಂತೆ ಮನೆಯಿಂದ ಹೊರಗಿದ್ದ. ಅಜೀಮ್ ತನ್ನ ಇಬ್ಬರು ತಂಗಿಯರನ್ನು ಸೇರಿಸಿಕೊಂಡು ಮೀಟಿಂಗ್ ಮಾಡಲು ಆರಂಭಿಸಿದ. ಆದರೆ ಎಂದಿನಂತೆ ಕಿಡಿಗೇಡಿ ಬುದ್ದಿಯ ಸನಾ ತಕರಾರನ್ನು ಆರಂಭಿಸಿದಳು.

ಅವನು ಮಧ್ಯೆ ಪ್ರವೇಶಿಸಿ 'ಅಮ್ಮೀ' ಎಂದು ಏನನ್ನೋ ಹೇಳಲು ಪ್ರಯತ್ನ ಪಟ್ಟ, ಅವಳ ತೀಕ್ಷ್ಣ ನೋಟದೆದುರು ತತ್ತರಿಸಿ ಸುಮ್ಮನಾದ. ಸನಾ ಎಲ್ಲಿ ಎಂದು ಹುಡುಕಾಟ ನಡೆಸಿದವನಿಗೆ ಎಂದಿನಂತೆ ಅವಳು ಅವಘಡದ ಮುನ್ಸೂಚನೆಯನ್ನು ಪಡೆದು ನಾಪತ್ತೆಯಾಗಿರುವಳೆಂದು ಅನಿಸಿದ ಹಿನ್ನೆಲೆಯಲ್ಲಿಯೇ ಬೆದರಿದ ಆಸಿಮಾಳ ಭಣ ಭಣ ನೋಟ... ಬೇಕಾದರೆ ತಾನು ಹರಕೆಯ ಕುರಿಯಾಗಲು ಸಿದ್ಧವೆಂಬ ಸಂದೇಶವನ್ನು ನೀಡಿದ್ದು, ಅವನು ಇನ್ನಷ್ಟು ಅಸ್ತವ್ಯಸ್ತನಾದ.

'ಬೇಡಾ... ಬೇಡಾ ಅಂತ ಹೇಳಲಿಲ್ಲವೇ ನಾನು?... ನಿನ್ನ ಅಕ್ಕ ತಂದಿದ್ದರೆ ನೀನೇ ಇಟ್ಕೋ ನನಗೆ ಯಾಕೆ ಕೊಡ್ತೀಯಾ ನನ್ನ ಜಾನಮಾಜ್ ನನಗೆ ಸಾಕು'

ಅದೇನೋ ಅತೀವ ತಾಳ್ಮೆ ಒದಗಿ ಬಂದಿತ್ತು ಶಮೀಮ್ ಬಾನುವಿಗೆ. 'ನಾನು ನಮಾಜ್ ಮಾಡಿದರೇನು ನೀವು ನಮಾಜ್ ಮಾಡಿದರೇನು... ಯಾರು ಈ ಕೆಲಸ ಮಾಡಿದ್ದಾರೋ ತಿಳಿಯದು... ಮಕ್ಕಳು ಗೊತ್ತಿಲ್ಲದೆ ಮಾಡಿರಬಹುದು... ತೀರಾ ಹಳೆಯದಾಗಿದೆ...'

'ಹೌದೇ.. ಹೌದೇ.. ತೀರಾ ಹಳೆಯದಾಗಿದೆಯೇ... ನಾನೂ ಕೂಡಾ ತೀರಾ ಹಳೆಯದಾಗಿದೀನಲ್ಲಾ' ಬೀದಾದಿ ಹಟಕ್ಕೆ ಬಿದ್ದವಳಂತೆ ಜಗಳವಾಡತೊಡಗಿದಳು. ಯಾವ ಕಾರಣಕ್ಕೂ ಇದುವರೆವಿಗೂ ಜಗಳವಾಡಿದವಳಲ್ಲಾ... ಆ ತುಂಬಿದ ಮನೆಯಲ್ಲಿ ನೆಂಟರಿಷ್ಟರು ಬಂದರು ಎಂದು ಮೂರು ಕೋಳಿಗಳನ್ನು ಕೊಯ್ದರೂ ಶ್ರದ್ಧೆಯಿಂದ ಆಕೆಯೇ ಕ್ಲೀನ್ ಮಾಡಿ ಗಮ ಗಮ ಸಾರನ್ನು ಕುದಿಸಿದ್ದಾಗ್ಯೂ ಆಕೆಗೆ ಒಂದೇ ಒಂದು ಪೀಸ್ ಸಿಗದಿದ್ದರೂ ಆಕೆ ಜಗಳವಾಡಿದ್ದಿಲ್ಲ; ಪಾತ್ರೆ ತುಂಬಾ ಪಾಯಸವನ್ನು ಮಾಡಿ ಕೊನೆಗೆ ಒಂದು ಟೀ ಸ್ಪೂನಿನಷ್ಟು ಪಾಯಸ ಕೂಡಾ ಉಳಿಯದಿದ್ದಾಗಲೂ ಬೇಸರಗೊಂಡವಳಲ್ಲ.





ಮದುವೆಗಳಲ್ಲಿ ಅಸಂಖ್ಯ ಜರತಾರಿ, ರೇಷ್ಮೆ ಸೀರೆಗಳು ಸೂರೆ ಹೋದಾಗಲೂ ಆಸೆಪಟ್ಟವಳಲ್ಲಾ... ಯಃಕಶ್ಚಿತ್ ಹಳೆಯ ಜೂಲು ಜೂಲಾದ ಜಾನಮಾಜಿನ ಸಲುವಾಗಿ ಅವಳು ಹರಿಸುತ್ತಿರುವ ಕಣ್ಣೀರನ್ನು ನೋಡಿ ಶಮೀಮ್ ಬಾನುವಿಗೆ ಆಘಾತವಾಗತೊಡಗಿತು.

'ಬೇಡಾ ಬೀದಾದಿ ಅಳಬೇಡಿ... ಅಜೀಮ್‌ಗೆ ಗೊತ್ತಾಗಲಿಲ್ಲ... ಅದು ನಿಮ್ಮ ಜಾನಮಾಜ್ ಅಂತ. ಅವನೇನೂ ಕೆಟ್ಟ ಹುಡುಗನಲ್ಲ; ಅವನನ್ನು ಕ್ಷಮಿಸಿ. ಈ ಜಾನಮಾಜ್ ತಗೋಳಿ' ಅವಳು ಬೇಡಿಕೊಂಡಷ್ಟೂ ಬೀದಾದಿಯ ದುಃಖ ಜಾಸ್ತಿಯಾಗುತ್ತಿತ್ತು.

ಅವಳ ತಾಳ್ಮೆಯ ಎಲ್ಲೆಗಳು ಕೂಡಾ ಕುಸಿದು ಬಿದ್ದವು. 'ಛೇ! ಇದೊಳ್ಳೆ ಗ್ರಹಚಾರವಾಯಿತಲ್ಲಾ... ದರಿದ್ರ ಜಾನಮಾಜ್... ಒಂದು ಹಳೆ ತುಂಡಿನ ಸಲುವಾಗಿ ಮಕ್ಕಳಂತೆ ಇಷ್ಟೊಂದು ಹಟ ಹಿಡೀತಿದೀರಲ್ಲಾ... ನಿಮಗೇನಾದರೂ ತಲೆ ಕೆಟ್ಟಿದೀಯಾ?'

ಅವಳು ಆ ಮಾತುಗಳನ್ನು ಸಿಡಿಸುವ ವೇಳೆಗೆ ಸಾದತ್ ಮುಂಬಾಗಿಲಿನಿಂದ ಪ್ರವೇಶಿಸಿದ. ಅವನ ಕೈಕಾಲುಗಳು ತಣ್ಣಗಾದೆಂತೆನಿಸಿತು. ಬಹು ದಿನಗಳ ನಿರೀಕ್ಷೆಯ ಮೃತ್ಯು ದರ್ಶನವಾದಂತೆನಿಸಿ ಅವನು ಅಸ್ವಸ್ಥನಾದ. ಅವನು ಇನ್ನೂ ಆ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತರುವಂತೆಯೇ ಬೀದಾದಿ ಬಿಳಿಚಿಕೊಂಡು ಕೆಳಗೆ ಬಿದ್ದಳು. ಹಳೆಯ ಜಾನಮಾಜ್ ಅವಳ ಕೈಯಿಂದ ಜಾರಿ ಬಿದ್ದಿತು. ಸಾದತ್ ಕೂಡಲೇ ಅವಳನ್ನು ಮಗುವಿನಂತೆ ಎದೆಗವಚಿದ. ಅವಳನ್ನು ಯಾವ ಶಬ್ದಗಳಮೂಲಕ ಸಾಂತ್ವನ ನೀಡಬೇಕೆಂದು ಅವನಿಗೆ ತಿಳಿಯಲಿಲ್ಲ. ಅಜೀಮ್ ನೀರಿನ ಲೋಟವನ್ನು ಹಿಡಿದು ಬಂದ. ಒಂದೆರಡು ಗುಟುಕು ನೀರನ್ನು ಕುಡಿದ ಮೇಲೆ ಅವಳು ಸಾವರಿಸಿಕೊಂಡು ಅವನನ್ನು ದಿಟ್ಟಿಸಿ ನೋಡಿದಳು ಮತ್ತು ಸಾಬೀತುಗೊಳಿಸುವ ಧ್ವನಿಯಲ್ಲಿ 'ನಿನಗೆ ಗೊತ್ತಿದೆಯಲ್ಲವಾ ಅದು ಯಾವ ಜಾನಮಾಜ್ ಅಂತಾ' ಎಂದು ಕೇಳಿದಳು.

ಪ್ರಾಮಾಣಿಕವಾಗಿ ಹೇಳಬೇಕೆಂದರೆ ಅವನಿಗೇನೂ ಗೊತ್ತಿರಲಿಲ್ಲ, ಅವಳು ತವರು ಮನೆಗೆ ಹಿಂದಿರುಗಿದ ಹತ್ತು ವರ್ಷಗಳ ನಂತರ ಅವನ ತಂದೆತಾಯಿಯ ಮದುವೆಯಾಗಿದ್ದು ಮತ್ತು ಅವನು ತನ್ನ ತಂದೆತಾಯಿಯರ ಆರನೇ ಮಗ; ಅವನಿಗಾದರೂ ಹೇಗೆ ತಿಳಿಯಲು ಸಾಧ್ಯ ಅವಳ ಮದುವೆಯ ಸಂಗತಿಗಳು! ಆದರೆ ಅವನು ಸುಮ್ಮನೆ ತಲೆಯಾಡಿಸಿದ. 'ನನ್ನ ಮದುವೆಗೆಂದು ನಮ್ಮಪ್ಪ ಅದನ್ನು ಗುಜರಾತಿನಿಂದ ತರಿಸಿದ್ದರು. ನಾನು ನನ್ನ ಅತ್ತೆಯ ಮನೆಗೆ ಹೋದಾಗ ಮೊದಲ ನಮಾಜ್ ಇದೇ ಜಾನಮಾಜಿನ ಮೇಲೆ ಮಾಡಿದ್ದು. ಮತ್ತೆ... ಮತ್ತೆ' ಒಂದಿಷ್ಟು ತಡೆದು ಅವಳೆಂದಳು 'ನಾನು ಆವಾಗ ನನ್ನ ಕೋಣೆಯ ಕಿಟಕಿಯ ಬಳಿ ಸಂಜೆಯ ನಮಾಜಿಗೆಂದು ಈ ಜಾನಮಾಜನ್ನು ಹರವಿದ್ದೆ... ಆಗ ಕಿಟಕಿಯಿಂದ ಯಾರೋ ಕೈತುಂಬ ಆ ಮಲ್ಲಿಗೆ ಮೊಗ್ಗುಗಳನ್ನು ನನ್ನ ಜಾನಮಾಜಿನ ಮೇಲೆ ಎಸೆದರು. ನಾನು ಹೆದರಿ ಹೋದೆ... ಆಗ ಚಿಮಣಿ ದೀಪಗಳಿದ್ದದ್ದು... ಹಾಗೆಯೇ ಗಾಬರಿಯಿಂದ ನಾನು ಎದ್ದು ಕಿಟಕಿಯಿಂದಾಚೆ ನೋಡಿದಾಗ ಅವರು ನಗುತ್ತಾ ನಿಂತಿದ್ದರು' ಈಲೋಕದ ಹಂಗು ತನಗೆ ಇಲ್ಲವೇ ಇಲ್ಲವೆಂಬಂತೆ ಅವಳು ಯಾವುದೋ ಲೋಕದಲ್ಲಿ ತೇಲಿ ಹೋಗುತ್ತಿದ್ದಳು. ಅವಳ ದಾಂಪತ್ಯದ ಗುಟ್ಟುಗಳು... ದೇವರೇ! ಸಾದಾತ್‌ಗೆ ಗಂಟಲು ಹಿಡಿದಂತಾಯಿತು, ಮುಂದೆ ಮಾತನಾಡಲಿಲ್ಲ. ಬೇಡ... ಬೇಡವೆಂದು ಮನದ ಮೂಲೆಯಲ್ಲಿ ಎಚ್ಚರಿಕೆಯ ಗಂಟೆ ಮೊಳಗುತ್ತಿದ್ದರೂ ಅದನ್ನು ಕಡೆಗಣಿಸಿ ಹೆಂಡತಿಯತ್ತ ದೂಷಿಸುವ ನೋಟವನ್ನು ಬೀರಿದ. ಅವಳು ಇದ್ಯಾವುದನ್ನೂ ಗಮನಿಸದಂತೆ ಸ್ಥಬ್ಧಳಾಗಿದ್ದಳು. ಅವಳ ಕಣ್ಣಂಚಿನಲ್ಲಿಯೂ ಕಂಡೂ ಕಾಣದಂತೆ ಇಡೀ ಕುಟುಂಬವು ಚಿತ್ತಾರ್ಪಿತ ಪ್ರತಿಮೆಗಳಂತೆ: ತಮ್ಮ ತಮ್ಮ ಲೋಕದಲ್ಲಿ ಮುಳುಗಿದ್ದ ಅವರೆಲ್ಲರೂ ತಮ್ಮ ಆತ್ಮದ ಕಟಕಟೆಯಲ್ಲಿ ಆರೋಪಿಗಳಾಗಿ ನಿಂತಿದ್ದರು. ಅನುದ್ದೇಶಿತವಾಗಿ ನಡೆದು ಹೋದ ಈ ಘಟನೆ ಆ ಕುಟುಂಬವನ್ನು ತಲ್ಲಣಗೊಳಿಸಬಹುದೆಂಬ ನಿರೀಕ್ಷೆ ಯಾರಿಗೂ ಇರಲಿಲ್ಲ. ಎಲ್ಲರೂ ತಮ್ಮತಮ್ಮ ನೆಲೆಯಲ್ಲಿ ಸಮರ್ಥನೆ ಮಾಡಿಕೊಳ್ಳುವ ಸನ್ನಿವೇಶದಲ್ಲಿದ್ದರು. ಬೀದಾದಿ ತನ್ನ ಹಳೆಯ ಜಾನಮಾಜನ್ನು ನಾಜೂಕಾಗಿ ಒಗೆದು, ಮಲ್ಲಿಗೆ ಹೂವಿನ ಸುವಾಸನೆಯು ಅಳಿಯದಂತೆ ಎಚ್ಚರಿಕೆಯಿಂದ ತಂತಿಯ ಮೇಲೆ ಹರವಿದ್ದು ತಪ್ಪೆಂದು ಯಾರು ಹೇಳಲು ಸಾಧ್ಯ? ಅಜೀಮ್‌ನ ತುರ್ತುಕರೆಗೆ ವೇಗವಾಗಿ ಸ್ಪಂದಿಸಿದ ಸನಾ ಅದೊಂದು ಹಳೆಯ ಬಟ್ಟೆ ... ಬೈಕ್ ಒರೆಸಲು ಬಳಸಬಹುದೆಂದು ತೀರ್ಮಾನಿಸಿ, ಅವನ ಕೈಗೆ ವರ್ಗಾಯಿಸಿದ್ದು ಕೂಡಾ ಅವಳ ತಪ್ಪಾಗಿರಲಿಲ್ಲ. ಆ ಬಟ್ಟೆಯ ಸ್ವರೂಪವೇ

ಅಂತಹದಾಗಿತ್ತು. ಅಜೀಮ್‌ದು ಪಾಪ ಮೊದಲೇ ತಪ್ಪಿರಲಿಲ್ಲ. ಈ ಮುದುಕಿಯಿಂದ ಅರಿಯದ ತನ್ನ ಮಕ್ಕಳಿಗೆ ಯಾವ ಶಾಪ ತಟ್ಟುತ್ತದೆಯೋ ಅದೂ ಆಕೆ ವರ್ಷಾಂತರಗಳಿಂದ ನಮಾಜ್ ಮಾಡಿದ ಜಾನಮಾಜಿನ ಅಪಚಾರದ ದೆಸೆಯಿಂದ ಎಂದು ತಾಯಿಯ ರಕ್ಷಣಾತ್ಮಕ ನಡವಳಿಕೆಯ ಶಮೀಮ್ ಬಾನು ಅಂತಿಮವಾಗಿ ತಾಳ್ಮೆ ಕಳೆದುಕೊಂಡಿದ್ದಕ್ಕೆ... ಹೀಗೆ ಯಾರೊಬ್ಬರೂ ಕೂಡಾ ಯಾರ ಮೇಲೂ ತಪ್ಪನ್ನು ವರ್ಗಾಯಿಸಲು ಸಾಧ್ಯವಾಗದಿದ್ದುದು ಒಂದು ಆಯಾಮವಾದರೆ ಎಲ್ಲರಿಗೂ ಈ ವಿಷಯದ ಬಗ್ಗೆ ದುಃಖವಾಗಿತ್ತು. ಅಸಲಿಗೆ ಈ ಯಾವ ಸಂಗತಿಯನ್ನೂ ಕೂಡಾ ತಿಳಿಯುವ ಗೊಡವೆಗೆ ಹೋಗದ ಸಾದಾತ್ ತನ್ನ ಹೆಂಡತಿಯ ಬಗ್ಗೆ ತನಗೆ ಬೇಕಾದಂತೆ ಕಲ್ಪಿಸಿಕೊಂಡ. ತನ್ನ ಹೆದರಿಕೆ ಹೀಗೆ ನಿಜಸ್ವರೂಪ ಪಡೆಯಬಹುದೆಂಬ ಆತಂಕ ಅದರ ಬೆನ್ನಲ್ಲೇ ಬೀದಾದಿಯ ಮುಂದಿನ ಬದುಕಿನ ವ್ಯವಸ್ಥೆಯ ಬಗ್ಗೆ ಅಪಾರವಾದ ಚಿಂತೆಗೀಡಾದ. ಅಂತೂ ಆಕೆಯನ್ನು ಸಮಾಧಾನ ಪಡಿಸಿ, ಅವಳನ್ನು ನಿಧಾನವಾಗಿ ನಡೆಸಿಕೊಂಡು ಬಂದು ಮಲಗಿಸಿದ ಮೇಲೆ ಕೂಡಾ ಅವನು ಬಹಳ ಹೊತ್ತು ಆಕೆಯ ಕೈಯನ್ನು ಹಿಡಿದುಕೊಂಡು ಕುಳಿತೇ ಇದ್ದ. ಶಮೀಮ್ ಬಾನು ಆ ಜಾನಮಾಜನ್ನು ಏನು ಮಾಡುವುದೆಂದು ತಿಳಿಯದೆ ಇನ್ನಷ್ಟು ಒಗೆದು ಸಾಧ್ಯವಾದಷ್ಟು ಕಲೆಗಳನ್ನು ಹೋಗಲಾಡಿಸಿ, ತಂತಿಯ ಮೇಲೆ ಹರವಿ ಒಳ ನಡೆದಳು.

ಜಾನಮಾಜ್ ಪ್ರಕರಣವು ಸುಸೂತ್ರವಾಗಿ ಬಗೆ ಹರಿಯುವ ಯಾವ ಲಕ್ಷಣಗಳೂ ಕಂಡು ಬರಲಿಲ್ಲ. ಬದಲಿಗೆ ಅತ್ಯಂತ ಆಶ್ಚರ್ಯಕರವಾಗಿ ವಿಚಿತ್ರ ತಿರುವನ್ನು ಪಡೆದುಕೊಳ್ಳತೊಡಗಿತು. ಈ ಘಟನೆಯಾದ ಮೇಲೆ ಬೀದಾದಿಯ ದಿನಚರಿಯು ಸಂಪೂರ್ಣವಾಗಿ ಬದಲಾವಣೆಯಾಯಿತು. ಹೊರಗಡೆ ತಂತಿಯಲ್ಲಿ ತೂಗಾಡುತ್ತಿದ್ದ ತನ್ನ ಜಾನಮಾಜನ್ನು ಅವಳು ಮತ್ತೆ ಮುಟ್ಟಲಿಲ್ಲ. ಅದು ಹಾಗೆಯೇ ತಂತಿಯ ಮೇಲೆ ಬಿಸಿಲಲಿಗೆ ಮೈಯೊಡ್ಡಿಕೊಂಡಿತ್ತು ನಿಯಮಿತವಾಗಿ ನಮಾಜ್ ಮಾಡುತ್ತಿದ್ದ ಬೀದಾದಿ ಹಲವು ದಿನಗಳವರೆಗೆ ನಮಾಜ್ ಮಾಡಲಿಲ್ಲ. ನಮಾಜಿನ ಹೊತ್ತು ಆಗುತ್ತಿದ್ದಂತೆಯೇ ಶಮೀಮ್ ತನ್ನಲ್ಲಿದ್ದ ನಾಲ್ಕಾರು ಜಾನಮಾಜುಗಳ ಪೈಕಿ ಯಾವುದಾದರೊಂದನ್ನು ಅವಳು ಕಾಣುವಂತೆ ಇಡುತ್ತಿದ್ದಳು. ಆದರೆ ಬೀದಾದಿ ಅವುಗಳತ್ತ ತಿರುಗಿಯೂ ನೋಡಲಿಲ್ಲ.

ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದ ಬೀದಾದಿ ಎಲ್ಲೆಂದರಲ್ಲಿ ಕಣ್ಣೀರು ಹಾಕತೊಡಗಿದಳು ಅವಳ ಮೌನ ರೋದನಕ್ಕೆ ಹೊತ್ತು-ಗೊತ್ತು ನೀತಿ-ನಿಯಮ ಯಾವುದೂ ಅನ್ವಯವಾಗುವಂತಿರಲಿಲ್ಲ. ಅಕಾರಣವಾಗಿ ಕಣ್ಣೀರು ಸುರಿಸುವ ಅವಳ ಅಸ್ವಭಾವದಿಂದ ಮಕ್ಕಳ ಮೇಲೆ ಯಾವ ಪರಿಣಾಮವೂ ಆಗಲಿಲ್ಲ ಆದರೆ, ಶಮೀಮ್ ಬಾನು ಮತ್ತು ಸಾದತ್‌ನ ಮೇಲೆ ಅಗಾಧ ಪರಿಣಾಮವುಂಟಾಯಿತು. ಬೀದಾದಿಯ ದುಃಖಕ್ಕೆ ಮೂಲ ಕಾರಣ ತನ್ನ ಹೆಂಡತಿಯೇ ಎಂದು ಅವನು ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದ್ದು, ಪ್ರಕ್ರಿಯಾತ್ಮಕವಾಗಿ ತಾನೇನೂ ಮಾಡಲು ಸಾಧ್ಯವಿಲ್ಲದ ದಯನೀಯ ಪರಿಸ್ಥಿತಿಯಲ್ಲಿ ಅವನು ಇನ್ನಷ್ಟು ಕುಗ್ಗಿ ಹೋದ; ಮತ್ತು ಅಪಾಯಕರ ಮಟ್ಟಕ್ಕೆ ಮೌನಕ್ಕೆ ಶರಣಾದ ಹಾಗೂ ಎಲ್ಲಾ ತಪ್ಪುಗಳನ್ನೂ ರಿಪೇರಿ ಮಾಡುವ ಸಂಕಲ್ಪದೊಡನೆ ಬೀದಾದಿಯತ್ತ ಹೆಚ್ಚು ಹೆಚ್ಚು ಗಮನ ಕೊಡತೊಡಗಿದ.

ಶಮೀಮ್ ಬಾನುವಿಗೆ ಅವಳ ಕಣ್ಣೀರಿನಿಂದ ವಿಪರೀತ ಕಿರಿಕಿರಿಯಾಗತೊಡಗಿತು. ಸಂಸಾರ ಅಂದ ಮೇಲೆ ಎಲ್ಲೋ ಒಂದಿಷ್ಟು ಹೆಚ್ಚು ಕಡಿಮೆಯಾಗುತ್ತದೆ; ಅದನ್ನೇ ಇಷ್ಟೊಂದು ಬೆಳಸುವುದೆಂದರೆ... ಏನು ಹೊಸ ಜಾನಮಾಜನ್ನು ನೀಡಿದರೂ ಅದನ್ನು ಒಪ್ಪದ ಈ ಮುದುಕಿ ಕೆಟ್ಟ ಹಟವನ್ನು ಮುಂದುವರೆಸುತ್ತಿದೆ ಹಾಗೂ ತನ್ನ ಗಂಡ ಇದನ್ನು ಬೆಳೆಸುವುದರಲ್ಲು ಮುಖ್ಯ ಪಾತ್ರನ್ನು ವಹಿಸುತ್ತಿದ್ದಾನೆ ಎಂದು ಅವಳು ಕೂಡಾ ತಿರ್ಮಾನಕ್ಕೆ ಬಂದಿದ್ದು, ಗಂಡನೊಡನೆ ಮಾತನಾಡುವುದನ್ನು ಬಿಟ್ಟಿದ್ದಳು. ಯಾವ ಜಾನಮಾಜ್ ಆದರೆ ಏನು... ಮುಖ್ಯ ನಮಾಜ್ ಮಾಡುವುದಲ್ಲವೇ... ಅದನ್ನೇ ಈ ಮುದುಕಿ ಬಿಟ್ಟು ಕೂತಿದೆ ಎಂದು ಅವಳಿಗೆ ಅಸಮಾಧಾನವೂ ಜೊತೆಯಲ್ಲಿ ಬೇಸರ ಮತ್ತು ಮಗನಿಗೆ ಆಕೆಯ ಶಾಪ ಎಲ್ಲಿ ತಟ್ಟುತ್ತದೆಯೋ ಎಂಬ ಆತಂಕಗಳ ನಡುವೆ ಅವಳು ಕುದಿಯುತ್ತಿದ್ದಳು. ಯಾವ ಶಾಪವು ಕೂಡಾ ತಗುಲದಂತೆ ಅವಳು ನಿಯಮಿತವಾಗಿ ನಮಾಜ್ ಮಾಡುತ್ತಾ ಮಗನ ರಕ್ಷಣೆಗಾಗಿ ಪ್ರಾರ್ಥನೆ ಮಾಡತೊಡಗಿದಳು, ಬೆಳಗಿನ ನಮಾಜ್ ಮುಗಿದ ಕೂಡಲೇ ಶ್ರದ್ಧೆಯಿಂದ ಯಾಸೀನ್ ಸೂರಃವನ್ನು ಪಠಿಸಿ, ಅರ್ಧ ಲೋಟ ನಿರ್ಮಲವಾದ ನೀರಿನ ಮೇಲೆ ಉರುಬಿ ಮಗನಿಗೆ ಕುಡಿಸಲಾರಂಭಿಸಿದಳು. ಕುಟುಂಬದಲ್ಲಿ ತೀರಾ ಬಡವರಾಗಿರುವವರನ್ನು ಕಂಡು ಅವರಿಗೆ ಅಕ್ಕಿ, ಗೋಧಿ ಬೇಳೆಮೊದಲಾದ ಧಾನ್ಯ, ಮೊಟ್ಟೆ ಮತ್ತು ಹೊಸ ಬಟ್ಟೆ ಬರೆಯನ್ನು ವಿತರಣೆ ಮಾಡಿದಳು. ಕರಿ ಕೋಳಿಯೊದನ್ನು ತರಿಸಿ ಮಗನಿಗೆ ಗೊತ್ತಾಗದಂತೆ ಅವನ ತಲೆಯ ಮೇಲಿನಿಂದ ನಿವಾಳಿಸಿ ಮನೆಯ



ಮೇಲಿನಿಂದ ಜೀವಂತವಾಗಿ ಹಾರಿಸಿದಳು ಅಲ್ಲಿಗೂ ಸಮಾಧಾನವಾಗದೆ, ಮೂರು ದಿನಗಳ ಉಪವಾಸವನ್ನು ಮಾಡಿ, ಮಗನ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದಳು.

ಆದರೆ ಇದ್ಯಾವುದೂ ಕೂಡಾ ತನಗೆ ಸಂಬಂಧಿಸಿದ್ದಲ್ಲವೆಂದು ಬೀದಾದಿ ಅನ್ಯಮನಸ್ಕಳಾಗಿದ್ದು ನಿರಂತರವಾಗಿ ಕಣ್ಣೀರುಗರೆಯುವ ಕಾರ್ಯ ಕ್ರಮವನ್ನು ಮುಂದುವರೆಸಿದ್ದಳು. ಅದೆಷ್ಟು ಮಡುಗಟ್ಟಿತ್ತೋ... ಯಾವ ಯಾವ ನೋವುಗಳ ಋಣತೀರಿಸುತ್ತಿದ್ದಳೋ... ವರ್ಷಾಂತರಗಳ ನಿರಾಕರಣೆ ಎಲ್ಲಿ ಹೆಪ್ಪುಗಟ್ಟಿತ್ತೋ... ಆಗಾಗ್ಗೆ ನಿಟ್ಟುಸಿರು ಬಿಡುತ್ತಾ 'ಅಲ್ಲಾಹ್... ಅಲ್ಲಾಹ್... ನೀನೇ ನೋಡ್ಕೊಳಪ್ಪ' ಎಂದು ಅಲ್ಲಾಹನಿಗೆ ನೇರವಾಗಿ ಅಹವಾಲನ್ನು ಸಲ್ಲಿಸುವ ಹೊಸ ವರಸೆ ಕೂಡಾ ಆರಂಭವಾಯಿತು. ಅಲ್ಲಿಗೆ ಶಮೀಮ್ ಬಾನುವಿಗೆ ಇದ್ದಬದ್ದ ಸೈರಣೆಯೂ ಕೂಡಾ ತಪ್ಪಿ ಹೋಯಿತು.

ಮಕ್ಕಳು ಎಷ್ಟೇ ಪ್ರಯತ್ನ ಪಟ್ಟರೂ ಬೀದಾದಿಯ ದುಃಖವನ್ನು ಶಮನಗೊಳಿಸಲು ಸಾಧ್ಯವಾಗಲಿಲ್ಲ. ಅಜೀಮ್ ತಂಗಿಯರೊಡನೆ ಒಳಸಂಚನ್ನು ಮಾಡಿ ಆ ಜಾನಮಾಜನ್ನು ಕೊಂಡೊಯ್ದು ಡ್ರೈ ಕ್ಲೀನಿಂಗ್ ಮಾಡಿಸಿ ತಂದ. ಕಲೆಗಳೇನೋ ಒಂದಿಷ್ಟು ಮಾಯವಾಗಿದ್ದವು. ಆದರೆ ಅದು ಇನ್ನಷ್ಟು ಹಿಂಜಿದಂತಾಗಿ ಜೂಲು ಜೂಲಾಯಿತು. ಅವನು ಬೆದರಿ ಅದರ ಸಹವಾಸ ಬೇಡವೆಂದು ಅದನ್ನು ತಂತಿಯ ಮೇಲೆ ನೇತು ಹಾಕಿದ.

ಹೀಗೆ ಸುಮಾರು ಹದಿನೈದು ಇಪ್ಪತ್ತು ದಿನಗಳ ಕಾಲ ಯಾವುದೋ ದುರ್ವಿಧಿಯಂತೆ ಆ ಜಾನಮಾಜ್ ಪ್ರಕರಣವು ಸಾದತ್‌ನ ಕುಟುಂಬವನ್ನು ತನ್ನ ಅನಿಷ್ಟ ಸುಳಿಯಲ್ಲಿ ಸಿಲುಕಿಸಿಕೊಂಡಿತು. ಆದಿನ... ಆಸಿಮಾ ಬೀದಾದಿಯ ಎದುರಿಗೆ ತಿಂಡಿಯ ತಟ್ಟೆಯನ್ನು ನೀರಿನ ಲೋಟವನ್ನು ಇಟ್ಟು ಅಲ್ಲಿಯೇ ನಿಂತು ಉಪಚರಿಸಿದಳು. ತಿಂಡಿಯ ತಟ್ಟೆಯನ್ನು ಕೂಡಾ ಗಮನಿಸದೆ ಬೀದಾದಿ ತನ್ನದೇ ಯಾವುದೋ ಲೋಕದಲ್ಲಿ ಮಗ್ನಳಾಗಿದ್ದಳು. ಆಸಿಮಾ ಒಂದು ಚೂರು ದೋಸೆಯನ್ನು ಮುರಿದು ಆಕೆಯ ಬಾಯಲ್ಲಿಟ್ಟಾಗ ಬೀದಾದಿ ಅದನ್ನು ಥೂ... ಥೂ... ಎಂದು ಉಗಿದದ್ದೂ ಅಲ್ದೆ, 'ಅಲ್ಲಾಹ್... ಅಲಾಹ್... ನೀನೇ ನೋಡ್ಕೊಳಪ್ಪ' ಎಂಬ ಉದ್ಗಾರವನ್ನು ಹೊರಡಿಸಿದಳು. ಅಡುಗೆ ಮನೆಯಲ್ಲಿ ಮಗುಚುಕಾಯಿಯೊಡನೆ ಸನ್ನದ್ಧಳಾಗಿದ್ದ ಶಮೀಮ್‌ಗೆ ರೇಗಿ ಹೋಯಿತು. ದಡಬಡನೆ ಬಂದವಳೇ ಬೀದಾದಿಯ ಟ್ರಂಕನ್ನು ಒಂದು ಕೈಯಲ್ಲಿ ಎತ್ತಿಕೊಂಡು ಬಂದವಳೇಯಾವುದೇ ಮುಲಾಜಿಲ್ಲದೆ ಬೀದಾದಿಯನ್ನು ಕೂಡಾ ಎಳೆದುಕೊಂಡು ಬಾಗಿಲ ಹತ್ತಿರ ಬಂದಳು. ಆಸಿಮಾ ಕೂಡಲೇ ಮಧ್ಯ ಬಂದು 'ಅಮ್ಮಿ... ಅಮ್ಮಿ ಬೇಡಾ... ಅವರನ್ನು ಬಿಟ್ಟು ಬಿಡಿ' ಎಂದು ಗೋಗರೆಯುತ್ತಿದ್ದರೂ ಲೆಕ್ಕಿಸದೆ ರಸ್ತೆಯಲ್ಲಿ ಹೋಗುತ್ತಿದ್ದ ಆಟೋವನ್ನು ಕೂಗಿ ಕರೆದು ಬೀದಾದಿಯನ್ನ ಜೊತೆಯಲ್ಲಿ ಟ್ರಂಕನ್ನು ಏರಿಸಿ, ಆಟೋದವನ ಕೈಯಲ್ಲಿ ಹಣವನ್ನು ಇರಿಸಿ 'ಇವರನ್ನು ಆರಿಫ್‌ನ ಮನೆಗೆ ಬಿಡಪ್ಪಾ' ಎಂದು ಹೇಳಿದವಳೇ ಒಳ ನಡೆದಳು.

ಆ ಮನೆಯವರನ್ನು ಬಲ ಪರಿಚಯದ ಆಟೋಚಾಲಕನಾಗಿದ್ದ ಅವನು ಶಮೀಮ್ ಬಾನುವಿನ ಕೋಪೋದ್ರಿಕ್ತ ಮುಖವನ್ನು ಒಮ್ಮೆ ನೋಡಿ ತನ್ನ ಆಟೋವನ್ನು ಓಡಿಸಿ ಆರಿಫ್‌ನ ಮನೆಯತ್ತ ನಡೆದ. ಹೀಗೆ ಬೀದಾದಿಯನ್ನು ತನ್ನ ಓರಗಿತ್ತಿಯ ಮನೆಗೆ ಸಾಗ ಹಾಕಿದರೂ ಆಕೆಗೆ ನೆಮ್ಮದಿಯಂತೂ ದೂರವೇ ಉಳಿಯಿತು. ವಿನಾ ಕಾರಣ ಮಕ್ಕಳ ಮೇ ಸಿಡುಕಲಾರಂಭಿಸಿದಳು. ಎಂದಿನಂತೆ ಅವಳ ಕೋಪಕ್ಕೆ ಈಡು ಮಾಡಿಕೊಳ್ಳುತ್ತಿದ್ದ ಆಸಿಮಾಗೆ ಯಾವುದೇ ಸಾಂತ್ವನ ಪೂರಿತ ಉಡುಗೊರೆಗಳು ದೊರಕುತ್ತಿರಲಿಲ ಬದಿಗೆ ಇನ್ನಷ್ಟು ಒದೆಗಳು ಬೀಳಲಾರಂಭಿಸಿದವು ಮಕ್ಕಳೆಲ್ಲಾ ಕಂಗಾಲಾದರೂ, ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಸಂಕಲ್ಪವೂ ಮೂಡಿತು. ಮತ್ತು ಅವರೆಲ್ಲರೂ ಸಮಯ ಸಿಕ್ಕಿದಾಗಲೆಲಾ ಆರಿಫ್‌ನ ಮನೆಗೆ ಹೋಗಲಾರಂಬಿಸಿದರು. ಬೀದಾದಿಯೊಡನೆ ಮಾತನಾಡಲು ಪ್ರಯತ್ನ ನಡೆಸಿದರು. ಆಶ್ಚರ್ಯಕರವಾಗಿ ಆ ಮನೆಯಲಿ

ವಿಪರ್ಯಾಸ

ಒಳಗೆ ಬೇಕು ಅನ್ನ
ಹೊರಗೆ ಬೇಕು ಚಿನ್ನ
ಇದೇನು ಇದರ ಮರ್ಮ

ಹೊರಗೆ ಕಿಸಿವ ಹಲ್ಲು
ಒಳಗೆ ಮಸೆವ ಕಲ್ಲು
ಇದು ಯಾವ ಧರ್ಮ

ತಾನೆ ಬೆಳೆದ ಅತ್ತಿಹಣ್ಣ
ನೋಡಿ
ನಾಚಿ ಕುಳಿತ ಬ್ರಹ್ಮ



ಜರಗನಹಳ್ಳಿ ಶಿವಶಂಕರ

ಬೀದಾದಿ ಸ್ವಲ್ಪ ಸುಧಾರಿಸಿದ್ದಾಳೆ ಎಂದು ಅವರೆಲ್ಲರೂ ತೀರ್ಮಾನಕ್ಕೆ ಬಂದರು. ಎಂದಿನಂತೆ ಆರಿಫ್‌ನ ಜೊತೆಯಲ್ಲಿ ಕುಳಿತು ಊಟ ಮಾಡುತ್ತಾಳೆ ಮತ್ತು ಎಂದಿನಂತೆ ನಮಾಜನ್ನು ನಿಯಮಿತವಾಗಿ ಮಾಡುತ್ತಿದ್ದಾಳೆ ಎಂಬುದನ್ನು ಗಮನಿಸಿ. ಒಳಗೊಳಗೇ ಮಸಲತ್ತನ್ನು ಮಾಡಿದರು.

ಸುಮಾರು ಹದಿನೈದು ದಿನಗಳ ನಂತರ, ಅಜೀಮ್ ಆಟೋದಲ್ಲಿ ಬೀದಾದಿಯನ್ನು ಕೂರಿಸಿ, ತಮ್ಮನೆಗೆ ಕರೆ ತಂದ. ಶಮೀಮ್ ಬಾನು ದುರುಗುಟ್ಟಿ ಅವನನ್ನು ನೋಡಿದಳಷ್ಟೇ... ಏನನ್ನೂ ನುಡಿಯಲಿಲ್ಲ. ತಾಯಿಯ ಮೋರೆಯ ಮೇಲೆ ನೆಮ್ಮದಿಯ ಕುರುಹುಗಳನ್ನು ಕಂಡ ಅಜೀಮ್ ಸದ್ಯ ಬಚಾವಾದೆ ಎಂದು ನಿಸೂರಾದ. ಆಮೇರೆಗೆ ಬೀದಾದಿಯನ್ನು ಮತ್ತು ಆಕೆಯ ಕಬ್ಬಿಣದ ಟ್ರಂಕನ್ನು ಒಳ ಕೋಣೆಗೆ ಸಾಗಿಸಿದ, ಆದರ ದುರದೃಷ್ಟವಶಾತ್, ಆಮನೆಗೆ ಬಂದ ಕೂಡಲೇ ಬೀದಾದಿಯ ದೈನಂದಿನ ಕ್ರಮ ತಪ್ಪತೊಡಗಿತು. ಬೆಳಗಿನ ಜಾವದ ನಮಾಜಿಗೆ ಕುಳಿತವಳು ಮಧ್ಯಾಹ್ನ 12 ಗಂಟೆಯವರೆವಿಗೂ ಕೂತೇ ಇರುತ್ತಿದ್ದಳು. ಯಾವ ನಮಾಜ್ ಮಾಡುತ್ತಿದ್ದಾಳೆ... ಯಾ ಹೊತ್ತಿನ ನಮಾಜ್... ಯಾವ ಸೂರಃವನ್ನು ಪಠಿಸುತ್ತಿದ್ದೇನೆ ಎಂಬುದು ಅವಳಿಗೆ ನೆನಪಿನಲ್ಲಿ ಉಳಿಯುತ್ತಿರಲಿಲ್ಲ. ಊಟ ಮಾಡಿದ ಕೂಡಲೇ 'ಅಲ್ಲಾಹ್... ಅಲ್ಲಾಹ್... ನನಗೆ ಊಟವನ್ನೇ ಕೊಟ್ಟಿಲ್ಲ... ನೀನೇ... ನೋಡಿಕೊಳ್ಳಪ್ಪಾ' ಎಂದು ನೇರವಾಗಿ ಅಲ್ಲಾಹನಿಗೆ ಅಹವಾಲನ್ನು ಸಲ್ಲಿಸಲಾರಂಭಿಸಿದಳು. ಮತ್ತೆ ತಾಪತ್ರಯ ಶುರುವಾಯಿತು.

ಇನ್ನು, ಸುಮ್ಮನಿದ್ದರೆ ಆಗದು ಈ ಸಮಸ್ಯೆಗೆ ಪರಿಹಾರವನ್ನು ಹುಡುಕಲೇ ಬೇಕು ಎಂದು ಅಜೀಮ್ ಆಲೋಚಿಸಿದ. ಆ ದಿನ ಶಮೀಮ್ ಬಾನು ಹೊರಹೋಗಿದ್ದಳು. ಸಾದತ್ ಎಂದಿನಂತೆ ಮನೆಯಿಂದ ಹೊರಗಿದ್ದ. ಅಜೀಮ್ ತನ್ನ ಇಬ್ಬರು ತಂಗಿಯರನ್ನು ಸೇರಿಸಿಕೊಂಡು ಮೀಟಿಂಗ್ ಮಾಡಲು ಆರಂಭಿಸಿದ. ಆದರೆ ಎಂದಿನಂತೆ ಕಿಡಿಗೇಡಿ ಬುದ್ಧಿಯ ಸನಾ ತಕರಾರನ್ನು ಆರಂಭಿಸಿದಳು. ಊಟ ತಿಂಡಿ ಇಲ್ಲದ ಮೀಟಿಂಗ್ ಅದೆಂತಹುದು...? ಬೀದಿಯ ಕೊನೆಯಲ್ಲಿರುವ ಪಾನಿಪುರಿ ಮಾರುವಾತನಿಂದ ಅವನು ಪಾನಿಪುರಿ ತಂದು ಕೊಟ್ಟರೆ ಮಾತ್ರ ತಾನು ಅವನ ಮೀಟಿಂಗ್‌ನಲ್ಲಿ ಭಾಗವಹಿಸುವುದಾಗಿಯೂ ಇಲ್ಲವಾದಲ್ಲಿ ತಾಯಿಗೆ ಸವಿವರ ವೃತ್ತಾಂತವನ್ನು ಅರಹುವುದಾಗಿಯೂ ಅವಳು ಬ್ಲಾಕ್‌ಮೇಲ್ ತಂತ್ರಕ್ಕೆ ಉದ್ಯುಕ್ತಳಾದಳು. ಸಭೆಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆಯೇ ಬರಖಾಸ್ತುಗೊಳಿಸಿ ಅಜೀಮ್ ಹೊರನಡೆದ. ಮತ್ತು ಚಿಕನ್ ಕಬಾಬ್ ಹಾಗೂ ಪೆಪ್ಸಿ ಬಾಟ್ಲಿಯೊಡನೆ ಮರಳಿ ಬಂದ. ಸನಾ



ಮಕ್ಕಳು ಎಷ್ಟೇ ಪ್ರಯತ್ನ ಪಟ್ಟರೂ ಬೀದಾದಿಯ ದುಃಖವನ್ನು ಶಮನಗೊಳಿಸಲು ಸಾಧ್ಯವಾಗಲಿಲ್ಲ. ಅಜೀಮ್ ತಂಗಿಯರೊಡನೆ ಒಳಸಂಚನ್ನು ಮಾಡಿ ಆ ಜಾನಮಾಜನ್ನು ಕೊಂಡೊಯ್ದು ಡ್ರೈ ಕ್ಲೀನಿಂಗ್ ಮಾಡಿಸಿ ತಂದ. ಕಲೆಗಳೇನೋ ಒಂದಿಷ್ಟು ಮಾಯವಾಗಿದ್ದವು. ಆದರೆ ಅದು ಇನ್ನಷ್ಟು ಹಿಂಜಿದಂತಾಗಿ ಜೂಲುಜೂಲಾಯಿತು.



WITH BEST COMPLIMENTS FROM

Venugopal

15th cross, Hegde Nagar,
Bangalore-560064
ph: 9880043752

SE

Mukunda .M B.E (Elec.)

SHAKTHI ELECTRICALS
ENGINEERS AND GOVT. LICENCED CLASS I CONTRACTORS

MOB: 9845357289
#582, 23rd CROSS,
BSK 2nd STAGE,
BANGALORE-560070

ಸಂತುಷ್ಟಳಾದಳು. ಆಸಿಮಾ ಪ್ಲೇಟಿನಲ್ಲಿ ಚಿಕನ್ ತುಂಡುಗಳನ್ನಿಟ್ಟು ಅವರಿಬ್ಬರಿಗೂ ನೀಡಿ ತಾನೂ ಕೂಡಾ ಚಿಕನ್ನನ್ನು ಬಾಯಿಗಿಡುವಷ್ಟರಲ್ಲಿಯೇ ಎಡತಾಕುತ್ತಾ ಬೀದಾದಿ ಅಲ್ಲಿಗೆ ಬಂದಳು. ಅಜೀಮ್ ನಕ್ಕ. 'ಓಹೋ ಅಧ್ಯಕ್ಷರೇ ಇಲ್ಲದೆ ಸಭೆ ಹೇಗಾಗುತ್ತದೆ' ಎಂದು ಸ್ವಲ್ಪ ಸರಿದು ಬೀದಾದಿಯನ್ನು ತನ್ನ ಪಕ್ಕದಲ್ಲಿಯೇ ಕೂರಿಸಿಕೊಂಡ. ಮತ್ತು ಅವಳಿಗೆ ತಿನ್ನಲು ಚಿಕನ್ ಕೊಡಬಹುದೇ ಬೇಡವೇ ಎಂದು ಆಲೋಚಿಸುತ್ತಾ ಆಸೀಮಾಳತ್ತ ನೋಟ ಬೀರಿದ. ಅವರಿಬ್ಬರ ಸಂಜ್ಞಾ ಭಾಷೆಯನ್ನು ಗಮನಿಸುತ್ತಿದ್ದ ಸನಾ ಯಾವ ಮುನ್ಸೂಚನೆಯನ್ನೂ ನೀಡದೇ ತನ್ನ ಕೈಯಲ್ಲಿದ್ದ ಗ್ಲಾಸಿನಲ್ಲಿ ನೊರೆ ಏಳುತ್ತಿದ್ದ ಪಾನೀಯವನ್ನು ಬೀದಾದಿಯ ಕೈಗಿತ್ತು' ಕುಡಿಯಿರಿ... ಕುಡಿಯಿರಿ' ಎಂದು ಪ್ರೋತ್ಸಾಹಿಸಿದಳು. ಎಲ್ಲರೂ ನೋಡನೋಡುತ್ತಿದ್ದಂತೆಯೇ ಬೀದಾದಿ ಆ ಪಾನೀಯವನ್ನು ತುಟಿಗಿಟ್ಟಳು. ಮತ್ತು ಅದರ ಸ್ವಾದವನ್ನು ಆನಂದದಿಂದ ಅನುಭವಿಸುತ್ತಾ ಪೂರ್ಣ ಲೋಟವನ್ನು ಒಂದೇ ಗುಟುಕಿನಲ್ಲಿ ಖಾಲಿ ಮಾಡಿದಳು.

ತುಟಿಗಳ ಮೇಲೆ ನಾಲಿಗೆಯನ್ನಾಡಿಸುತ್ತಾ ಅಜೀಮ್‌ನ ಲೋಟದತ್ತ ಕಣ್ಣನ್ನು ನೆಟ್ಟು 'ಅದೇನೂ...' ಎಂದು ರಾಗವಾಗಿ ಕೇಳಿದಳು. ಅಜೀಮ್ ಉತ್ತರಿಸುವುದಕ್ಕಿಂತ ಮುಂಚೆಯೇ ಸನಾ ತುಂಟ ನಗೆ ಬೀರುತ್ತಾ 'ಈಗಾಗಲೇ ಏರಿ ಬಿಟ್ಟಿದೆ... ಅದು ಆಬ್-ಎ-ಕೌಸರ್' ಎಂದು ಬಿದ್ದು ಬಿದ್ದು ನಕ್ಕಳು. ಉಳಿದವರಿಬ್ಬರಿಗೂ ಅವಳ ಈ ಪರಿಯ ಹಾಸ್ಯ ಒಂದಿಷ್ಟೂ ಇಷ್ಟವಾಗಲಿಲ್ಲ. ಬೀದಾದಿಯ ಮುಖ ಊರಗಲವಾಯಿತು. 'ಆಬೆ ಕೌಸರ್... ಹೌದಾ? ಅದು ಸ್ವರ್ಗದಲ್ಲಿಯಲ್ಲವಾ ಸಿಗುವುದು' ಎಂದು ಬೀದಾದಿ ತರ್ಕಬದ್ಧವಾಗಿ ಪ್ರಶ್ನಿಸಿದಳು.

ಹೌದು-ಹೌದು ಇದು ಸ್ವರ್ಗದ ಪಾನೀಯ. ಪುಣ್ಯವಂತರಿಗೆ ಮಾತ್ರ ಸಿಗುವುದು. ಈಗ ನೀವು ಸ್ವರ್ಗದಲ್ಲಿದ್ದೀರಿ. ಮತ್ತೆ ನಾನು ನಿಮ್ಮ ಸೇವೆಗೆ ಸಿದ್ಧವಿರುವ ಹೂರ್ (ಗಂಧರ್ವ ಕನ್ಯೆ)' ಎಂದು ಅವಳು ನಾಟಕೀಯವಾಗಿ ಉತ್ತರಿಸಿದಳು. ಈಗ ಬೀದಾದಿಗೆ ನಿಜವಾದ ಸಮಸ್ಯೆ ಆರಂಭವಾಗಿತ್ತು.

'ಹಾಗಾದರೆ ನಾನು ಸ್ವರ್ಗದಲ್ಲಿದ್ದರೆ... ಅವರು ಎಲ್ಲಿ?' ಎಂದು ವಿಚಾರಮಗ್ನಳಾದಳು. ಸನಾ ತನ್ನ ಕಿಡಿಗೇಡಿತನವನ್ನು ಬಿಡದೇ ತನ್ನ ಜಡೆಯಲ್ಲಿದ್ದ ಮಲ್ಲಿಗೆಯ ಮಾಲೆಯನ್ನು ಹರಿದು, ಬೀದಾದಿಯ ಹಿಂದಿನಿಂದ ಬಂದು ಅವರ ಮಡಿಲಲ್ಲಿ ಬೀಳುವಂತೆ ಮಲ್ಲಿಗೆ ಹೂವನ್ನು ಎಸೆದು 'ನೋಡಿ, ನೋಡಿ ನಿಮ್ಮ ಹಿಂದೆಯೇ ಇದ್ದಾರೆ, ಮಲ್ಲಿಗೆ ಹೂವನ್ನು ಎಸೆಯುತ್ತಿದ್ದಾರೆ. ಆದರೆ ನೀವು ಮಾತ್ರ ಹಿಂದಿರುಗಿ ನೋಡಬಾರದು' ಎಂದು ಆದೇಶ ಮಾಡಿದಳು. ಬೀದಾದಿಯ ಮೋರೆ ಸಂತಸದಿಂದ ಬಿರಿಯುತ್ತಿತ್ತು. ಆದರೆ ಆಕೆ ಹಿಂದಿರುಗಿ ನೋಡಲಿಲ್ಲ. ತಡವರಿಸುತ್ತಾ ತನ್ನ ಮಡಿಲಲ್ಲಿ ಬಿದ್ದಿದ್ದ ಮಲ್ಲಿಗೆ ಹೂವನ್ನು ಸ್ಪರ್ಷಿಸುತ್ತಿದ್ದಳು. ಕೆಲ ಹೊತ್ತು ಕುಳಿತವಳು ನನಗೆ ಇನ್ನಷ್ಟು 'ಆಬ್-ಎ-ಕೌಸರ್ ಬೇಕು ಎಂದಳು' ಅವರಿಬ್ಬರನ್ನು ಗಮನಿಸುತ್ತಿದ್ದ ಅಜೀಮ್ ಸನಾಳನ್ನು ತಡೆಯಲೂ ಇಲ್ಲಾ, ಅವಳ ಮೇಲೆ ಕೋಪಿಸಲೂ ಇಲ್ಲ. ಬದಲಿಗೆ ಬೀದಾದಿಗೆ ಅತ್ಯಂತ ಖುಷಿ ಕೊಡುತ್ತಿರುವ ಈ ಪ್ರಸಂಗದಲ್ಲಿ ಬೀದಾದಿ ನಿಜವಾಗಿಯೂ ಸಂತೋಷವನ್ನು ಅನುಭವಿಸುತ್ತಿದ್ದಾಳೆಯೋ ಅಥವಾ ಆಕೆಯೂ ಸನಾಳಂತೆ ನಾಟಕವಾಡುತ್ತಿದ್ದಾಳೆಯೋ ಎಂದು ನಿರ್ಧರಿಸಲಾಗದೆ ತನ್ನ ಲೋಟದಲ್ಲಿ ಉಳಿದಿದ್ದ ಪಾನೀಯವನ್ನು ಅವಳ ಕೈಗಿತ್ತ. ಅವಳು ಲೋಟವನ್ನು ತನ್ನ ಬಾಯಿಗಿಟ್ಟು ಸಂತುಷ್ಟಳಾದಳು.

ಹೊರಗೆ ಬೆಲ್ ಆದದ್ದೇ ತಡ ಆಸಿಮಾ ತಟ್ಟೆ ಲೋಟಗಳನ್ನು ಎತ್ತಿಕೊಂಡು ಅಡುಗೆ ಮನೆಗೆ ದೌಡಾಯಿಸಿದಳು. ಅವರೆಲ್ಲರೂ ತಮ್ಮ ಕೈ ಬಾಯನ್ನು ಒರೆಸಿಕೊಂಡು ಕುಳಿತರು. ಅಜೀಮ್ ಕೂಡಾ ಎಚ್ಚರಿಕೆಯಿಂದ ಬಾಗಿಲ ಕಡೆ ಕಣ್ಣು ಹಾಯಿಸಿದ. ಶಮೀಮ್ ಬಾನು ಮನೆಯೊಳಗಡೆ ಪ್ರವೇಶಿಸಿದ್ದರಿಂದ ಅವರ ನಾಟಕಕ್ಕೆ ತೆರೆ ಬಿತ್ತು.

ಆಬ್-ಎ-ಕೌಸರ್ ಕುಡಿದ ನಂತರ ಬೀದಾದಿಯ ಸುಮಾರು 'ಸಂಕಷ್ಟಗಳು ದೂರವಾದವು. ಸ್ವರ್ಗದಲ್ಲಿರುವವರಿಗೆ ಯಾವ ಕಷ್ಟಗಳಿರುತ್ತವೆ? ಅವಳು ಸುತ್ತ ಮುತ್ತಲು ತನ್ನ ಗಂಡನನ್ನು ಕಾಣುತ್ತಿದ್ದಳು. ಅನುಭವಿಸುತ್ತಿದ್ದಳು. ಮತ್ತು ಸ್ವರ್ಗದರಮನೆಯಲ್ಲಿ ನೆಮ್ಮದಿಯನ್ನು ಕಂಡುಕೊಂಡಿದ್ದಳು. ಅವಳು ಒಮ್ಮೆ ಆ ಪಾನೀಯವನ್ನು ಕುಡಿದ ನಂತರ ತನ್ನ ಸ್ವರ್ಗ ಲೋಕದಿಂದ ಮರಳಿ ಬರಲೇ ಇಲ್ಲ. ಯಾವ ಮತ್ತು ಕೂಡ ಇಲ್ಲದ ಆಪಾನೀಯವು ಬೀದಾದಿಗೆ ಹೇಗೆ ಮತ್ತನ್ನು ತರಿಸಿದೆ ಎಂದು ಸನಾ ಕಂಗಾಲಾದಳು. ಬೀದಾದಿ ಆಗಾಗ್ಗೆ 'ನನ್ನ ಹೂರ್ ಎಲ್ಲಿ?' ಎಂದು ಹುಡುಕುವುದು ಯಾರನ್ನು ಎಂಬುದು ಶಮೀಮ್ ಬಾನುವಿಗೆ ತಿಳಿಯಲೇ ಇಲ್ಲ. ತನ್ನ ಕೆಲಸ ಕಾರ್ಯದ ನಿಮಿತ್ತ ಅವು ಹೊರಹೋದಾಗ, ಸನಾ ಹೂರ್‌ನ ರೂಪಧಾರಣೆ ಮಾಡುತ್ತಿದ್ದಳು. ಹಾಗೆ ಅವಳು ಹೂರ್ ಆದಾಗಲೆಲ್ಲ ಕಡ್ಡಾಯವಾಗಿ ಚಮಕಿಯ ಸೀರೆಯನ್ನು ಉಡಬೇಕಿತ್ತು. ಬೀದಾದಿಯ ಹೂರ್‌ನ ಪರಿಕಲ್ಪನೆ ಹಾಗಿತ್ತು, ಇಲ್ಲವಾದಲ್ಲಿ ತನ್ನ ಹೂರನ್ನು ಕಾಣದೆ ಬೀದಾದಿ ಅಸ್ವಸ್ಥಳಾಗಿ, ವಿಶೇಷವಾಗಿ ಪರಿತಪಿಸುತ್ತಿದ್ದಳು. ಹೀಗೆ ತನ್ನ ಸ್ವರ್ಗದ ಪಾನೀಯದ ವಿಶೇಷ ಅನುಭೂತಿಯಲ್ಲಿ ಮತ್ತು ತನ್ನ ಖಾಸಗಿ ಹೂರ್‌ನ ಓಲೈಕೆಯಲ್ಲಿ ಈ ಪ್ರಪಂಚದ ಎಲ್ಲಾ ನಂಟನ್ನು ಕಳೆದುಕೊಂಡು, ತನ್ನ ಪತಿಯ ಸಾಂಗತ್ಯದಲ್ಲಿ ನೆಮ್ಮದಿಯಾಗಿಬಿಟ್ಟಳು. ತನ್ನಲ್ಲಿ ತಾನೇ ಮಾತನಾಡುತ್ತಾ ನಗುತ್ತಾ ಇರುತ್ತಿದ್ದ ಬೀದಾದಿಯನ್ನು ಕಂಡು ಶಮೀಮ್ ಬಾನು ವ್ಯಥೆ ಪಟ್ಟುಕೊಳ್ಳುತ್ತಿದ್ದರೂ. ಅವಳ ಇನ್ನಿತರೆ ರೇಜಿಗೆಗಳು ಇಲ್ಲವಲ್ಲ ಎಂದು ನೆಮ್ಮದಿಯಾಗಿಟ್ಟಳು. ಮತ್ತೆ ಯಾವತ್ತೂ ಕೂಡ ಆರಿಫ್ ಮನೆಗೆ ಕಳುಹಿಸುವ ಪ್ರಯತ್ನವನ್ನೂ

WITH BEST COMPLIMENTS FROM

L. LINGARAJU

HOTEL GURUPRASAD

K. P. AGRAHARA
MAGADI ROAD
BANGALORE-560023

ಮಾಡಲಿಲ್ಲ. ಸಾದತ್‌ಗೆ ಕೂಡ ಶಮೀಮ್ ಬಾನು ಬೀದಾದಿಯನ್ನು ಹೊರ ಹಾಕುತ್ತಿಲ್ಲವಲ್ಲ ಎಂಬುದು ನೆಮ್ಮದಿಯ ಸಂಗತಿಯಾಗಿತ್ತು.

ಕಷ್ಟ ಒದಗಿ ಬಂದದ್ದು ಮಾತ್ರ ಅಜೀಮ್‌ಗೆ. ಯಾವುದೇ ಮುನ್ಸೂಚನೆಯನ್ನು ನೀಡದೆ ಬಂದೆರಗಿದ ಸ್ವರ್ಗದ ನಾಟಕವನ್ನು ಅವನು ಮುಂದುವರೆಸಬೇಕಿತ್ತು. ಕೋಪತಾಪ ಅಳು, ಮತ್ತು ಹಟಮಾರಿತನ ಬೀದಾದಿಯಿಂದ ದೂರವಾಗಿತ್ತು. ಆದರೆ ಅವಳು ಊಟ-ತಿಂಡಿಯನ್ನು ಮಾತ್ರ ಮತ್ತೆ ಮುಟ್ಟಲಿಲ್ಲ. ಆಬ್-ಎ-ಕೌಸರ್‌ನ ವಿನಃ ಅವಳಿಗೆ ಬೇರೆ ಯಾವ ಊಟೋಪಚಾರದ ಅಗತ್ಯವೂ ಇರಲಿಲ್ಲ. ಅವಳಿಗೆ ಆಬ್-ಎ-ಕೌಸರ್‌ನ್ನು ಸರಬರಾಜು ಮಾಡುವುದರಲ್ಲಿ ಅಜೀಮ್ ಸೋತು ಹೋದ. ಅವಳಿಗೆ ಬೇಕೆನಿಸಿದಾಗಲೆಲ್ಲಾ ಅವಳು ಸ್ವರ್ಗದ ಪಾನೀಯಕ್ಕೆ ಬೇಡಿಕೆ ಸಲ್ಲಿಸಲಾರಂಭಿಸಿದಳು. ಎಳೆನೀರು, ಪಾನಕ, ಅಥವಾ ಇನ್ಯಾವುದೇ ಪಾನೀಯವನ್ನು ಕೊಟ್ಟರೂ ಮುಲಾಜಿಲ್ಲದೇ ಎಸೆದುಬಿಡುತ್ತಿದ್ದಳು. ಅವಳ ನಾಲಿಗೆಗೆ ಒಗ್ಗಿ ಹೋಗಿದ್ದು, ವಿಶೇಷ ಆನಂದಾನುಭವವನ್ನು ನೀಡುತ್ತಿದ್ದ ಪಾನೀಯದಿಂದ ಅಜೀಮ್‌ನ ಪಾಕೆಟ್ ಮನಿ ಎಲ್ಲವೂ ಖಾಲಿಯಾಗುತ್ತಿತ್ತು. ಸಾದತ್ ಮತ್ತು ಶಮೀಮ್ ಬಾನು ಎದುರಿಗೂ ಆಕೆ ನಿರಂತರವಾಗಿ ಆಬ್-ಎ-ಕೌಸರ್‌ನ ಬಗ್ಗೆಯೇ ಮಾತಾಡುತ್ತಿದ್ದಳು. ಅವರಿಬ್ಬರೂ ಈಕೆಗೆ ಸಾಕಷ್ಟು ಬುದ್ಧಿ ಭ್ರಮಣೆಯಾಗಿದೆ ಎಂದು ತೀರ್ಮಾನಿಸಿದರು.

ಪೇಚಿಗೆ ಬಿದ್ದ ಅಜೀಮ್ ತನ್ನ ಸ್ನೇಹಿತರ ಬಳಿ ಸಾಲ ಮಾಡಿದ. ದಿನಸಿ ಅಂಗಡಿಯ ಮನೆ ಲೆಕ್ಕದಲ್ಲಿ ಒಂದಿಷ್ಟು ಸುಳ್ಳು ಲೆಕ್ಕ ಬರೆಸಿದ. ಕೊನೆಗೆ ಬೀದಾದಿಯ ವರಾತ ಹೆಚ್ಚಿದಾಗ ಆರಿಫ್‌ನ ಬಳಿ ಹೋಗಿ ಶರಣಾದ. ಆರಿಫ್ ನಕ್ಕು ನಕ್ಕು ಸಾಕಾಗಿ, ಅವನ ಬೆನ್ನಿಗೆ ಎರಡೇಟು ಬಿಗಿದರೂ ದಿನವೊಂದಕ್ಕೆ ಒಂದು ಬಾಟಲಿ ಪಾನೀಯವು ಅವನಿಗೆ ಸಿಗುವಂತೆ ವ್ಯವಸ್ಥೆ ಮಾಡಿದ. ಸ್ವರ್ಗದ ಪಾನೀಯದ ಹಿನ್ನೆಲೆಯಲ್ಲಿ ಮನೆಯಲ್ಲಿ ಸ್ವಲ್ಪ ನೆಮ್ಮದಿ ಮೂಡಿದಂತಾಯಿತು. ಬರಿ ಪಾನೀಯವನ್ನೇ ಕುಡಿದು, ಬೀದಾದಿ ಸತ್ತರೆ ಏನು ಮಾಡುವುದು ಎಂದು ತೀವ್ರ ಚಿಂತಿತನಾಗಿದ್ದ ಅಜೀಮ್‌ನ ಭಯವನ್ನು ಸುಳ್ಳು ಮಾಡುವಂತೆ ಬೀದಾದಿ ಕಳೆದ ಆರು ತಿಂಗಳಿನಿಂದ ಊಟೋಪಚಾರವಿಲ್ಲದೇ ಬದುಕುತ್ತಿದ್ದಾಳೆ. ಶಮೀಮ್ ಬಾನುವಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ! ಅನ್ನಾಹಾರವಿಲ್ಲದೇ ಈ ಮುದುಕಿ ಬರೀ ನೀರಿನ ಮೇಲೆ ಬದುಕಿರುವುದಾದರೂ ಹೇಗೆ... ಎಂಬುದು. ಈ ರೀತಿ ಪವಾಡವನ್ನು ಕಂಡ ಶಮೀಮ್ ಬಾನು ಮತ್ತೆ ಅವಳನ್ನು ಆರಿಫ್‌ನ ಮನೆಗೆ ಸಾಗಿಸುವ ಪ್ರಯತ್ನ ಮಾಡಲಿಲ್ಲ. ಸಾದತ್ ಕೂಡಾ ನೆಮ್ಮದಿಯ ನಿಟ್ಟುಸಿರನ್ನು ಬಿಡುತ್ತಾ ಹಿಂದೆ ನಡೆದ ಜಾನಮಾಜ್ ಪ್ರಕರಣದ ಆಘಾತವನ್ನು ಮರೆಯುವ ಪ್ರಯತ್ನ ಮಾಡುತ್ತಾ ಹೆಂಡತಿಯ ಬಗ್ಗೆ ಆಲೋಚಿಸುತ್ತಲೇ 'ಪಾಪ ಶಮೀಮ್ ಒಳ್ಳೆಯವಳೇ, ಏನೋ ಈ ಮೆನೋಪಾಸ್ ಎಂಬ ಜಿನ್ ಮೆಟ್ಟಿ ಒಮ್ಮೊಮ್ಮೆ ಹೀಗಾಡ್ತಾಳೆ' ಎಂಬ ಅನುಕೂಲಸಿಂಧು ತೀರ್ಮಾನಕ್ಕೆ ಬಂದ. ಆದರೆ ಆರಿಫ್ ಮಾತ್ರ ಬೀದಾದಿಯ ಸಾವನ್ನು ಒಮ್ಮೆ ಬಯಸುತ್ತಾ... ಆ ಸಾವು ಪೌಷ್ಟಿಕಾಂಶದ ಕೊರತೆಯಿಂದ ಮಾತ್ರ ಸಂಭವಿಸಬಾರದು... ಸಹಜ ಸಾವಾಗಿದ್ದರೆ ಮಾತ್ರ ತನ್ನ ಆತ್ಮದ ಗ್ಲಾನಿಯಿಂದ ತಾನು ಬಚಾವಾಗಬಹುದು ಇಲ್ಲವಾದರೆ ತಾನೇ ಕೊಲೆಗಾರನಾಗುವವನೇನೊ ಎಂಬ ಆತಂಕದಲ್ಲಿ....

ಬಾನು ಮುಷ್ತಾಕ್

ಕನ್ನಡ ಸಾಹಿತ್ಯ ವಲಯದಲ್ಲಿ ಪ್ರಮುಖ ಹೆಸರು. ಮುಸ್ಲಿಂ ಜನಾಂಗದ ಸಂಕೀರ್ಣ ಬದುಕಿನ ತಲ್ಲಣಗಳನ್ನು ತಮ್ಮ ಬರಹಗಳಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಭಾನುರವರ ಕಥೆ, ಕಾದಂಬರಿ, ಕವನ ಸಂಕಲನದ ಅನೇಕ ಕೃತಿಗಳು ಪ್ರಕಟಗೊಂಡಿವೆ. ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರು. ಇವರ 'ಕರಿನಾಗರಗಳು' ಕಥೆಯಾದರಿಸಿ ತಯಾರಾದ 'ಹಸೀನಾ' ಚಲನಚಿತ್ರಕ್ಕೆ 3 ರಾಷ್ಟ್ರ ಪ್ರಶಸ್ತಿಗಳು ದೊರಕಿವೆ.

ಕವನ

ಹೀಗೊಂದು ಚಳಿಗಾಲದ ಸಂಜೆ

ಭಾದ್ರಪದ ಸಂಜೆ
ಹಸಿ ಬೆಟ್ಟವ ಹತ್ತಿಳಿದ ಭಾಷೆ
ಕಾಲ ತುಂಬ ಹತ್ತಿಳಿದ ಭಾಷೆ
ಕಾಲ ತುಂಬ ಕೆಸರ ತುಂಬಿಕೊಂಡು ನಿಂತಿತ್ತು
ಹರಿಯುವುದ ಮರೆತಿತ್ತು.

ಜಿಂಕೆ ಕಣ್ಣುಗಳಿದ್ದವು
ಯಾಕೋ ಮಿಂಚು ಮರೆಯಾಗಿತ್ತು
ಮೂಡಿದ ಹೆಜ್ಜೆಗುರುತೆಲ್ಲಾ
ಪ್ಲಾಸ್ಟಿಕ್‌ನ ಅಚ್ಚುಗಳಾಗಿ
ನೆಲಕ್ಕಂಟುತ್ತಿದ್ದವು
ಕೆನ್ನೆಯ ಗುಳಿಯಲ್ಲಿ
ಕಾಡುವ ಒನಪಿತ್ತು.

ದೇವರುಗಳ, ರಾಜರ, ವಿದ್ವಾಂಸರ
ಒಡ್ಡೋಲಗದಿಂದ ಬರುತ್ತಿತ್ತು,
ನನ್ನ ಎದೆ ಹಾಲಿನ ಹಸಿರ ಮರೆತಿತ್ತು.

ಸರಸ್ವತಿ. ಕೆ.ಬಿ



● 19

ಕಾಲಮಾನ

ಡಾ. ಮುಜಾಫರ್ ಅಸ್ಸಾದಿ

"ಅರಬ್ ಸ್ಪ್ರಿಂಗ್" ಪ್ರಜಾಪ್ರಭುತ್ವ ಮತ್ತು ಮೂಲಭೂತವಾದ

ಇತ್ತೀಚಿನ ಜಾಗತೀಕರಣದ ಸಂದರ್ಭದಲ್ಲಿ ಹೊಸ ಹೊಸ ಕ್ರಾಂತಿಗಳು ನಡೆಯುತ್ತಿರುವುದು ಸರ್ವೆ ಸಾಮಾನ್ಯವಾಗುತ್ತಿದೆ. 'ಹಳದಿ ಕ್ರಾಂತಿ', 'ಟುಲೀಪ್ ಕ್ರಾಂತಿ', 'ಪಿಂಕ್ ಕ್ರಾಂತಿ'ಗಳ ಹೆಸರನ್ನು ಕೇಳದವರು ಬಹಳ ವಿರಳ. ಇದರರ್ಥವೆಂದರೆ ಜಾಗತೀಕರಣ ಒಂದೆಡೆ ಹೊಸ ಹೊಸ ಆಸೆ ಹಾಗೂ ಕನಸುಗಳನ್ನು ನಿರ್ಮಿಸುತ್ತಾ, ಮತ್ತೊಂದೆಡೆ ತಲ್ಲಣಗಳನ್ನು ಸೃಷ್ಟಿಸುತ್ತಿರುವುದು ಸ್ಪಷ್ಟ. ಈ ರೀತಿಯ ತಲ್ಲಣಗಳು ಜಾಗತೀಕರಣದ ನವ-ಆಧುನಿಕತೆಯ ವೈರುಧ್ಯದ ಭಾಗವೂ ಹೌದು, ಬಂಡವಾಳಶಾಹಿಯ ಬಿಕ್ಕಟ್ಟಿನ ಫಲಶ್ರುತಿಯೂ ಹೌದು. ಈ ಸಾಲಿನಲ್ಲಿ ಅರಬ್ ಜಗತ್ತಿನಲ್ಲಿ ನಡೆಯುತ್ತಿರುವ ವಿವಿಧ ಕ್ರಾಂತಿಗಳು ಅಥವಾ ಸುಧಾರಣೆಗಳನ್ನು ಸೇರಿಸಬಹುದು. ಇವನ್ನು ಮೂಲಭೂತವಾಗಿ "ಅರಬ್ ಸ್ಪ್ರಿಂಗ್" ಎಂದು ಕರೆಯಲಾಗುತ್ತದೆ. ಅರಬ್ ಸ್ಪ್ರಿಂಗ್ ಅನ್ನು ಕೆಲವೊಮ್ಮೆ "ಅರಬ್ ಜಾಗೃತಿ", ಅರಬ್ "ಚಳಿ"ಎಂದೂ ಕೂಡ ಕರೆಯುತ್ತಾರೆ

ಅರಬ್ ಜಗತ್ತು ಅಂದಾಗಲೆಲ್ಲಾ ತಟ್ಟೆಂದು ನೆನಪಾಗುವುದು "ಅರಬ್ ಕುದುರೆಗಳು" ಅರಬ್ ಒಂಟೆಗಳು ಹಾಗೂ ಅರಬ್ ಜಗತ್ತಿನ ಅದ್ಭುತವಾದ ಅಲ್ಲಾವುದ್ದೀನ್ ಅಥವಾ ಬಾಗ್ದಾದಿನ ಕತೆಗಳು. ಮುಲ್ಲಾ ನಸ್ರುದ್ದೀನ್, ಸೂಫಿ ಸಂತ ರೂಮಿ ಕೂಡ ಈ ಸಂದರ್ಭದಲ್ಲಿ ನೆನಪಾಗುವುದು ಸಹಜ. ಅದರೊಂದಿಗೆ ಅರಬ್ ಜಗತ್ತಿನ ಕುರಿತು ಇರುವ ವಿಸ್ಮೃತಿಯನ್ನು ಮರೆಯಬಾರದು. ಗ್ರೀಕರ ಖ್ಯಾತ ಪ್ಲೇಟೋ ಹಾಗೂ ಅರಿಸ್ಟಾಟಲನ್ನು ಐರೋಪ್ಯರಿಗೆ ಪರಿಚಯಿಸಿದ್ದು ಅರಬರೆಂದು ಬಹಳ ಜನರಿಗೆ ತಿಳಿದಿಲ್ಲ. ಭಾರತೀಯ ಖಗೋಳ ತಜ್ಞ ಖಂಖ ಅಥವಾ ಮಂಕಾ ಕ್ರಿ. 776 ಸುಮಾರಿಗೆ ಅರಬ್ ಖಗೋಳ ತಜ್ಞನಾದ ಇಬ್ನ್ ತಾರೀಕ್‌ನನ್ನು ಅಲ್ ಮನ್ಸೂರ್‌ನ ಆಸ್ಥಾನದಲ್ಲಿ ಭೇಟಿಯಾಗಿ ತನ್ನ ಪುಸ್ತಕ. "ಸಿದ್ಧಾಂತ"ವನ್ನು ಪರ್ಶಿಯನ್‌ಗೆ ತರ್ಜುಮೆ ಮಾಡುತ್ತಾನೆ. ಇದು ಭಾರತೀಯ ಖಗೋಳ ಜ್ಞಾನ, ಗಣಿತ ಹಾಗೂ ಅರಬ್ ಖಗೋಳ ಜ್ಞಾನ ಹಾಗೂ ಗಣಿತದ ವಿನಿಮಯಕ್ಕೆ ಕಾರಣವಾಗುತ್ತದೆ. ವಸಾಹತುಶಾಹಿಗಳು ಬರುವ ಮೊದಲೇ ಭಾರತದೊಂದಿಗೆ ವ್ಯಾಪಾರವನ್ನು ಅರಬ್ ಜಗತ್ತು ಮಾಡುತ್ತಿತ್ತು ಎಂಬುದು ನಮ್ಮ ವಿಸ್ಮೃತಿಯ ಒಂದು ಭಾಗವೂ ಹೌದು. ಅರಬ್ ಜಗತ್ತಿನ ಪ್ರಮುಖ ವಿಜ್ಞಾನಿಗಳೆಂದರೆ ಜಬೀರ್ ಇಬ್ನ್ ಅಯಾನ್, ಅಲ್ ಕಿಂಡಿ, ಅಲ್ ಫರಭಿ, ಅಲ್ ಬಟ್ಟಾನಿ, ಅಲ್ ಮಸೂದಿ, ಅಲ್ ತರಬಿ. ಅಬುಲ್ ವಫ, ಇಬ್ನ್ ಸಿನಾ ಇತ್ಯಾದಿ. ಅರಬ್ ಜಗತ್ತು ಸೂಫಿ ಪರಂಪರೆಗೆ ನೀಡಿದ ಕೊಡುಗೆಯು ಕೂಡ ಅಪಾರ.

ಕಳೆದ ಒಂದು ವರುಷದಿಂದ ಅರಬ್ ಜಗತ್ತಿನಲ್ಲಿ ನಡೆಯುತ್ತಿರುವ "ಅರಬ್ ಸ್ಪ್ರಿಂಗ್" ಅರಬ್ ಜಗತ್ತನ್ನು ತಲ್ಲಣಗೊಳಿಸಿರಬಹುದು, ಆದರೆ ಅದು ನಮಗೆ ಆಶ್ಚರ್ಯವನ್ನು ಉಂಟು ಮಾಡಲಿಲ್ಲವೆಂದೇ ಹೇಳಬಹುದು. ಯಾಕೆಂದರೆ ಅರಬ್ ಸ್ಪ್ರಿಂಗ್ ಎತ್ತಿಕೊಂಡಿರುವ ಮೂಲಭೂತ ವಿಷಯಗಳಾದ ಪ್ರಜಾಪ್ರಭುತ್ವ, ಹಕ್ಕುಗಳು, ಸ್ವಾತಂತ್ರ್ಯ ಇತ್ಯಾದಿಗಳು ನಮಗೆ ಹೊಸತೇನಲ್ಲ.

ವಾಸ್ತವವಾಗಿ, ಅರಬ್ ಜಗತ್ತಿನಲ್ಲಿ ನಡೆಯುತ್ತಿರುವ ಹೋರಾಟಗಳಿಗೆ ಒಂದು ಇತಿಹಾಸವಿದೆ, ಇತ್ತೀಚಿನ ವರುಷದಲ್ಲಿ ಈ

ಹೋರಾಟದ ಆರಂಭದ ಘಟ್ಟವನ್ನು 1980ರ ದಶಕದಿಂದಲೇ ನೋಡಬಹುದು. 1980ರ ದಶಕದ ಆರಂಭದಲ್ಲಿಯೇ ಅಲ್ಜಿರೀಯಾದಲ್ಲಿ ಸಂಘರ್ಷಗಳು ನಡೆದಿದ್ದವು. ಅದನ್ನು "ಬೆರ್ ಬೆರ್ ಸ್ಪ್ರಿಂಗ್" ಎಂದು ಕೂಡ ಕರೆಯಲಾಗುತ್ತದೆ. ಈ ಸಂಘರ್ಷದಲ್ಲಿ "ಬೆರ್ ಬೆರ್ ಐಡೆಂಟಿಟಿ"ಹಾಗೂ ಭಾಷೆಯನ್ನು ರಾಜಕೀಯ ಚೌಕಟ್ಟು ಮಾನ್ಯ ಮಾಡಲಿಲ್ಲವೆಂಬ ವಿಷಯ ಪ್ರಮುಖವಾಗಿತ್ತು. ಈ ಹೋರಾಟ ಒಂದು ರೀತಿಯಲ್ಲಿ ಅಲ್ಜಿರೀಯಾದ "ಅರಬೀಕರಣ"ದ ವಿರುದ್ಧವೂ ಆಗಿತ್ತು. ಇಲ್ಲಿ ಧರ್ಮಕ್ಕಿಂತಲೂ 'ಜನಾಂಗೀಯತೆ"ಯ ವಿಷಯ ಪ್ರಮುಖವಾಗಿತ್ತು, ಅದರಲ್ಲೂ ಕಬೀಲಿ ಜನಾಂಗೀಯತೆಯ ಭಾಷೆ ಹಾಗೂ ಸಂಸ್ಕೃತಿಯ ಐಡೆಂಟಿಟಿ ಪ್ರಶ್ನೆ ಪ್ರಮುಖವಾಗಿತ್ತು. ವಾಸ್ತವವಾಗಿ ಅರಬ್ ಸ್ಪ್ರಿಂಗ್‌ನ ತಳಹದಿಯಲ್ಲಿ ಈ ಪ್ರಶ್ನೆಗಳು

ಅರಬ್ ಸ್ಪ್ರಿಂಗ್‌ನ ಬೇಡಿಕೆಗಳು ಬರೇ ರಾಜಕೀಯ ಸರ್ವಾಧಿಕಾರವನ್ನು ಕೊನೆಗೊಳಿಸುವುದಕ್ಕೆ ಸೀಮಿತಗೊಂಡಿಲ್ಲ. ಅವುಗಳಲ್ಲಿ ಉಳಿದ ರಾಜಕೀಯ ಅಜೆಂಡಾಗಳಿವೆ. ಲೆಬೆನಾನ್‌ನ ಹೋರಾಟದಲ್ಲಿ ರಾಜಕೀಯದ ಚೌಕಟ್ಟಿನ ಮೇಲೆ ಹಿಜ್ಬುಲ್ಲರ ಹಿಡಿತವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಬೇಡಿಕೆಯೊಂದಿಗೆ ಲೆಬೆನಾನ್‌ಗೆ ವಿಶ್ವಸಂಸ್ಥೆಯ ವಿಶೇಷ ಟ್ರಿಬ್ಯೂನಲ್‌ಗೆ ಮಾನ್ಯ ಮಾಡುವ ಬೇಡಿಕೆ ಇದೆ.



ಉದ್ಭವಿಸುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ. ಅಲ್ಲದೇ ಅರಬ್ ಸ್ಪ್ರಿಂಗ್ ಹೋರಾಟಗಾರರಲ್ಲಿ ಸಾಕಷ್ಟು ಹೋರಾಟಗಾರರು 1980ರ ದಶಕದ ಹೋರಾಟದ ಅನುಭವಗಳ ಹಿನ್ನಲೆಯಿಂದ ಬಂದವರೇ ಆಗಿದ್ದಾರೆ. ಇವರನ್ನು ಟ್ಯುನೀಷಿಯಾ, ಲಿಬಿಯಾ ಹೋರಾಟದಲ್ಲೂ ನೋಡಬಹುದು. ಕೆಲವೊಮ್ಮೆ ಅರಬ್ ಸ್ಪ್ರಿಂಗ್ ಅನ್ನು ಬೆರ್ ಬೆರ್- ಅರಬ್ ಸ್ಪ್ರಿಂಗ್ ಅಥವಾ"ಬ್ಲಾಕ್ ಸ್ಪ್ರಿಂಗ್" ಎಂದೆಲ್ಲಾ ಕರೆಯುತ್ತಾರೆ.

ಅಥವಾ "ಕಬೀಲಾ" ತಳಹದಿಗಳ ಮೇಲೆ ನಿಂತಿವೆ. ಈ ಚೌಕಟ್ಟಿನ ಮೇಲ್ಪದರವಾಗಿ ಬಂಡವಾಳಶಾಹಿಯ ಚೌಕಟ್ಟು ಇದೆ. ಅಂದರೆ ಬಂಡವಾಳಶಾಹಿ ಹಾಗೂ ಜನಾಂಗೀಯತೆ ಜೊತೆ ಜೊತೆಯಾಗಿ ಈ ಅರಬ್ ಜಗತ್ತಿನಲ್ಲಿ ಕಂಡುಬರುತ್ತದೆ. ದುರಂತವೆಂದರೆ ಇಲ್ಲಿನ ಅಭಿವೃದ್ಧಿಯ ಹಿನ್ನಲೆಯಲ್ಲಿ ಹಳೆಯ ವಸಾಹತುಶಾಹಿಯ ಹಿಡಿತ ಹಾಗೂ ಪಾಶ್ಚಾತ್ಯಾ ಬಂಡವಾಳಶಾಹಿಯ ಹಿಡಿತ ಈಗಲೂ ಇದೆ. ಇದನ್ನು ಅಭಿವೃದ್ಧಿಯ ವೈರುಧ್ಯವೆಂದರೆ ತಪ್ಪಾಗಲಾರದು. ವಾಸ್ತವವಾಗಿ ಈ



ಟ್ಯುನೀಷಿಯಾದಲ್ಲಿ ಈ ಹೋರಾಟ 2008ರ ಗಫ್ಸ ಎಂಬ ಗಣಿ ಪ್ರದೇಶದಲ್ಲಿ ಆರಂಭಗೊಂಡಿತ್ತು, ಈಜಿಪ್ಟ್‌ನಲ್ಲಿ ಈ ಹೋರಾಟಗಳಿಗೆ ಕಾರ್ಮಿಕ ಸಂಘಟನೆಗಳು ಈ ಮೊದಲೇ ನೆಲೆ ನೀಡಿದ್ದವು. 2004 ರ ನಂತರ ಈಜಿಪ್ಟ್‌ನಲ್ಲಿ ಹೆಚ್ಚು ಕಡಿಮೆ 3000 ಕ್ಕೂ ಹೆಚ್ಚು ಕಾರ್ಮಿಕ ಚಳವಳಿಗಳು ನಡೆದಿದ್ದವು. ಇತ್ತೀಚಿನ ವರುಷಗಳಲ್ಲಿ ಅಲ್ಜಿರೀಯಾದಲ್ಲಿ ಆಹಾರದ ದೊಂಭಿ ದಿನನಿತ್ಯದ ಸಾಮಾನ್ಯ ವಿಷಯವಾಗಿತ್ತು. 2010ರ ವರುಷವೊಂದರಲ್ಲಿಯೇ ಅಲ್ಲಿ ಹೆಚ್ಚು ಕಡಿಮೆ 10,000 ಸಾವಿರಕ್ಕೂ ಹೆಚ್ಚು ದೊಂಭಿಗಳು ನಡೆದಿದ್ದವು ಎಂಬ ಅಂದಾಜಿ ಇದೆ.

ಅರಬ್ ಜಗತ್ತು ನಿಂತಿರುವುದೇ ವೈರುಧ್ಯಗಳ ಮೇಲೆ. ಹೆಚ್ಚು ಕಡಿಮೆ ಎಲ್ಲಾ ದೇಶಗಳು ತೈಲ ದ್ವೀಪಗಳ ದೇಶಗಳು. ಬಹಳ ವಿಚಿತ್ರವೆಂದರೆ ಈ ದೇಶಗಳ ಸಾಮಾಜಿಕ ಸ್ತರಗಳು ಈಗಲೂ ಬುಡಕಟ್ಟಿನ

ಜಗತ್ತನ್ನು ಅರಬ್ ಜಗತ್ತೆಂದರೂ, ಅರಬೇತರರ ಸಂಖ್ಯೆ ಕಡಿಮೆ ಏನಿಲ್ಲ. ಖದೀರ್ಸರು, ಖುರೇಷಿಗಳು, ಬದೌನಿಗಳು, ಇನ್ನಿತರು ಹೇರಳವಾಗಿದ್ದಾರೆ. ಅಷ್ಟು ಮಾತ್ರವಲ್ಲದೇ ಅರಬ್ ಜಗತ್ತು ಆಫ್ರಿಕಾ ಖಂಡ, ಮಧ್ಯಪೂರ್ವ ಖಂಡ ನಡುವೆ ಹರಡಿದೆ. ಈ ಜಗತ್ತಿನಲ್ಲಿ ಮೂಲಭೂತವಾದವನ್ನು ಎತ್ತಿ ಹಿಡಿಯುವ ಸೌದಿ ಅರೇಬಿಯಾದಂತಹ ದೇಶವಿದೆ, ಸಾಕಷ್ಟು ಉದಾರವಾದಿಯಾದ ಈಜಿಪ್ಟ್ ಕೂಡ ಇದೆ. ಜನಾಂಗೀಯ ಘರ್ಷಣೆಗೆ ಹೆಸರುವಾಸಿಯಾದ ಅಲ್ಜಿರೀಯಾ, ಸುಡಾನ್, ಪಶ್ಚಿಮ ಸಹಾಗ ಕೂಡ ಇದೆ. ಅಮೇರಿಕಾಕ್ಕೆ ಜೋತು ಬಿದ್ದ ಅರಸೋತ್ತಿಗೆ ಕೂಡ ಇದೆ.

ಅರಬ್ ಸ್ಪ್ರಿಂಗ್ . ಕಳೆದ ವರುಷ ಡಿಸೆಂಬರ್ 10 ರಂದು ಟ್ಯುನೀಷಿಯಾದ ಆರಂಭಗೊಂಡು. ಇತರೇ ಅರಬ್ ದೇಶಗಳಿಗೆ ಹರಡಿತ್ತು. ಕೆಲವು ದೇಶಗಳಲ್ಲಿ ಈಗಾಗಲೇ ಅಧಿಕಾರದ ಬದಲಾವಣೆ ಆಗಿದೆ. ಈಜಿಪ್ಟ್‌ನ ಹೊಸ್ನಿ ಮುಬಾರಕ್ ತನ್ನ 30 ವರುಷದ ಆಳ್ವಿಕೆಯನ್ನು ಮುಕ್ತಾಯಗೊಳಿಸಬೇಕಾಯಿತು. ಟ್ಯುನೀಷಿಯಾದ ಅಧ್ಯಕ್ಷ ಬೆನ್ ಆಲಿ ಕೂಡ ಅಧಿಕಾರವನ್ನು ಕಳೆದು ಕೊಳ್ಳಬೇಕಾಯಿತು. ಲಿಬಿಯಾದ "ಅಜೀವ" ಅಧ್ಯಕ್ಷ ಮುಮ್ಮರ್ ಗಡಾಫಿ ತನ್ನೂರಿನಲ್ಲಿ ಬಂಡುಕೋರಿಗೆ ಬಲಿಯಾದನು. ಯೆಮೆನ್, ಲೆಬೆನಾನ್ ಜೋರ್ಡಾನ್, ಪಶ್ಚಿಮ ಸಹಾರ, ಸುಡಾನ್ ಮೊರಾಕ್ಕೊ ಒಮನ್, ಮೌರೀಟಾನ, ಬಹರೇನ್, ಸೌದಿ ಅರೇಬಿಯಾ, ಕುವೈಟ್, ಇರಾಕ್ ಹಾಗೂ ಇನ್ನಿತರ ದೇಶಗಳಿಗೂ ಈ ಹೋರಾಟ ಹರಡಿದೆ. ಲೆಬೆನಾನ್‌ನ ಹೋರಾಟವನ್ನು "ದಿ ಲೈಕ್ ಪ್ರೈಡ್"ಎಂದೆಲ್ಲಾ ಕರೆಯುತ್ತಾರೆ. ವಿಚಿತ್ರವೆಂದರೆ ಈ ಹೋರಾಟದಲ್ಲಿ ಭಾಗವಹಿಸಿದರೆಲ್ಲ ಅರಬರಲ್ಲ, ಅವರಲ್ಲಿ ಅರಬೇತರರು ಕೂಡ ಇದ್ದಾರೆ.

ಈ ಅರಬ್ ಸ್ಪ್ರಿಂಗ್‌ನ ಬೇಡಿಕೆಗಳು ಬರೇ ರಾಜಕೀಯ ಸರ್ವಾಧಿಕಾರವನ್ನು ಕೊನೆಗೊಳಿಸುವುದಕ್ಕೆ ಸೀಮಿತಗೊಂಡಿಲ್ಲ. ಅವುಗಳಲ್ಲಿ ಉಳಿದ ರಾಜಕೀಯ ಅಜೆಂಡಾಗಳಿವೆ. ಲೆಬೆನಾನ್‌ನ ಹೋರಾಟದಲ್ಲಿ ರಾಜಕೀಯದ ಚೌಕಟ್ಟಿನ ಮೇಲೆ ಹಿಜ್ಬುಲ್ಲರ ಹಿಡಿತವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಬೇಡಿಕೆಯೊಂದಿಗೆ ಲೆಬೆನಾನ್‌ಗೆ ವಿಶ್ವಸಂಸ್ಥೆಯ ವಿಶೇಷ ಟ್ರಿಬ್ಯೂನಲ್‌ಗೆ ಮಾನ್ಯ ಮಾಡುವ ಬೇಡಿಕೆ ಇದೆ. ಒಮನ್‌ನ ಹೋರಾಟದಲ್ಲಿ ಸಂಬಳ ಹೆಚ್ಚಳ, ಭ್ರಷ್ಟಾಚಾರ ನಿರ್ಮೂಲನೆ, ತೈಲ ಹಣದ ನ್ಯಾಯಬದ್ಧ ಹಂಚಿಕೆ, ಉದ್ಯೋಗಗಳ ಸೃಷ್ಟಿ ಇತ್ಯಾದಿಗಳಿವೆ. ಅಲ್ಲದೇ ಅರಬ್ ಸ್ಪ್ರಿಂಗ್‌ನ ಹೋರಾಟದಲ್ಲಿ ಮಾನವ ಹಕ್ಕುಗಳ ವಿಷಯ, ಪ್ರಜಾಪ್ರಭುತ್ವ, ವಾಕ್ ಸ್ವಾತಂತ್ರ್ಯ, ರಾಜಕೀಯ ಹಕ್ಕುಗಳು ಇತ್ಯಾದಿ ವಿಷಯಗಳು ಒಳಗೊಂಡಿವೆ. ಪಶ್ಚಿಮ ಸಹಾರದಲ್ಲಿ ಹೋರಾಟದ ಬೇಡಿಕೆಗಳು ಕಾರ್ಮಿಕರ ತಾರತಮ್ಯತೆ, ನಿರುದ್ಯೋಗ, ನೈಸರ್ಗಿಕ ಸಂಪನ್ಮೂಲನಗಳ ಲೂಟಿ, ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಸೇರಿಕೊಂಡಿವೆ.

ಎರಡನೇದಾಗಿ ಈ ಹೋರಾಟಗಳು ಅರಬ್ ಜಗತ್ತಿನ ಅರಸೋತ್ತಿಗೆಯನ್ನು ನಾಶಮಾಡುವ ಅಥವಾ ಬದಲಾಯಿಸುವ ಬೇಡಿಕೆಯನ್ನು ಮುಂದಿಡುವುದಿಲ್ಲ. ವಿಚಿತ್ರವೆಂದರೆ ಒಮನ್ ಹಾಗೂ ಎಮಿರೇಟರ್ಸ್‌ನಲ್ಲಿ ಹೋರಾಟಗಾರರು ಸುಲ್ತಾನನ ಕ್ಷಮೆ ಕೇಳುವಷ್ಟು ಮುಂದೆ ಹೋಗುತ್ತಾರೆ.

ಹೋರಾಟಗಳು ವಿವಿಧ ರೂಪಕಗಳನ್ನು ಪಡೆದು ಕೊಂಡದ್ದನ್ನು ನಾವು ಅಲ್ಲಗಳೆಯಬಾರದು. ಮೌರೀ ಟಾನೀಯ ಹಾಗೂ ಟ್ಯುನೀಷಿಯಾದಲ್ಲಿ ಇದು ಆತ್ಮಹತ್ಯೆಯಿಂದ ಆರಂಭಗೊಂಡಿತ್ತು, ಲಿಬಿಯಾದಲ್ಲಿ ಇದು ಅಂತರಿಕ ಕಲಹಕ್ಕೆ ಕಾರಣೀಭೂತವಾಯಿತು. ಉಳಿದೆಡೆ ಇದು ಶಾಂತಿಯುತವಾಗಿತ್ತು. ಈ ಎಲ್ಲಾ ಹೋರಾಟದಲ್ಲಿ ತಾಹೀರ್ ಚೌಕಟ್ಟಿನ ಶಾಂತಿಯುತ ಹೋರಾಟ ಪ್ರಮುಖವೆನ್ನಬಹುದು. ಅದರರ್ಥ ಹೋರಾಟ ಬರೇ [illegible]



ನಗರಗಳಿಗೆ ಮಾತ್ರ ಸೀಮಿತಗೊಳ್ಳಲಿಲ್ಲ. ಕೆಲವೆಡೆ ಹೋರಾಟ ಮುಷ್ಕರ, ಪಾದಯಾತ್ರೆ, ಅಸಹಕಾರ ಚಳವಳಿಗಳ ರೂಪವನ್ನು ಪಡೆಯಿತು. ಒಂದೆರಡು ಕಡೆ ಇದು ಕ್ರಾಂತಿ ರೂಪವನ್ನು ಪಡೆಯಿತು.

ಕೆಲೆವೆಡೆ ಇದು ತತ್‌ಕ್ಷಣವಾಗಿ ರಾಜಕೀಯ ಬದಲಾವಣೆಯನ್ನು ತರದಿದ್ದರೂ, ಬದಲಾವಣೆಯ ಅಶ್ವಾಸನೆಗಳು ದೊರೆತದ್ದು ಹೋರಾಟಕ್ಕೆ ಸಿಕ್ಕ ಜಯ ಅನ್ನಬಹುದು, ಇದನ್ನು ಸುಡಾನಿನ ಸಂದರ್ಭದಲ್ಲಿ ನೋಡಬಹುದು. ಸುಡಾನಿನ ಅಧ್ಯಕ್ಷ ತಾನು 2015 ನಂತರ ಪುನರಾಯ್ಕೆ ಬಯಸುವುದಿಲ್ಲವೆಂದು ಈಗಾಗಲೇ ಘೋಷಣೆ ಮಾಡಿರುವುದು ಇಲ್ಲಿ ನೆನೆಪಿಸಬೇಕು, ಒಮನ್‌ನ ಸುಲ್ತಾನ ಸಂಬಳವನ್ನು ಹೆಚ್ಚಿಸುತ್ತಾನೆ, ನಿರುದ್ಯೋಗ ಭತ್ತೆಯನ್ನು ನೀಡುತ್ತಾನೆ.

ಕೆಲವಡೆ ಇದು ಈಗಲೂ ಬದಲಾವಣೆಯನ್ನು ತಂದಿಲ್ಲ, ಆದರೆ ಅದರ ಬಿಸಿಯನ್ನು ರಾಜಕೀಯಕ್ಕೆ ನೀಡಿದೆ. ವಿಚಿತ್ರವೆಂದರೆ ಕಲ್ಪಸಿಕೊಳ್ಳದಂತಹಾ ದೇಶಗಳಲ್ಲಿ ಹೋರಾಟದ ಧ್ವನಿಗಳು ಕಂಡು ಬಂದಿವೆ. ಒಮನ್‌ನಂತಹ "ಶಾಂತಿಯುತ ಹಾಗೂ ನಿದ್ದೆಯ "ದೇಶದಲ್ಲಿ ಹೋರಾಟಗಾರರು ಹೈಪರ್ ಮಾರುಕಟ್ಟೆಗೆ ಬೆಂಕಿ ಇಟ್ಟು ಪ್ರತಿಭಟನೆ ಮಾಡಿದರು. ಆ ಹೋರಾಟದ ವೈರುಧ್ಯವೆಂದರೆ ಹೋರಾಟಗಾರರು ಸಂಪೂರ್ಣವಾಗಿ ಸುಲ್ತಾನನ ವಿರೋಧಿಗಳಾಗಿರಲಿಲ್ಲ. ಆದಕಾರಣ ಇಲ್ಲಿ ವ್ಯವಸ್ಥೆಯ ಬದಲಾವಣೆಗಿಂತ ದಿನನಿತ್ಯದ ಆರ್ಥಿಕ ವಿಷಯಗಳು ಪ್ರಮುಖವಾಗಿದ್ದವು. ಇಲ್ಲಿ ರಾಜಕೀಯ ವ್ಯವಸ್ಥೆಯ ಬದಲಾವಣೆ ಕಷ್ಟ ಸಾಧ್ಯ. ಅದೇ ರೀತಿಯ ರಾಜಕಾರಣ ಅರಬ್ ಎಮಿರೇಟ್ಸ್‌ನಲ್ಲಿ ನೋಡಬಹುದು. ಇಲ್ಲಿದ್ದ ಬೇಡಿಕೆ ಮತದಾನದ ಹಕ್ಕು ಹಾಗೂ ಫೆಡರಲ್ ನ್ಯಾಶನಲ್ ಕೌನ್ಸಿಲ್‌ನಲ್ಲಿ ಸುಧಾರಣೆ.

ಈ ಸ್ಪ್ರಿಂಗ್ ಉದ್ಭವಿಸಲು ಹಲವು ಕಾರಣಗಳಿವೆ. ಮೊದಲನೆಯದಾಗಿ ಇದನ್ನು ಜಾಗತೀಕರಣದ ನವ–ಆಧುನಿಕತೆಯ ಪ್ರತಿಫಲವಾಗಿ, ಜಾಗತೀಕರಣದ ವೈರುಧ್ಯದ ಭಾಗವಾಗಿ ನೋಡಬಹುದು. ಇದನ್ನು ಆಧುನಿಕತೆಗೆ ಬಂದಿರುವ ವಿರೋಧವಾಗಿ ನೋಡಲು ಸಾಧ್ಯವಿಲ್ಲ. ವಿರೋಧವಾಗಿ ನೋಡಬೇಕಾದರೆ ಅಮೇರಿಕಾ ಹಾಗೂ ಪಾಶ್ಚಿಮಾತ್ಯ ವಿರೋಧಿ ನೆಲೆಗಟ್ಟುಗಳಲ್ಲಿ ನೋಡಬಹುದೇ ಹೊರತು ಈ "ಸ್ಪ್ರಿಂಗ್"ನಲ್ಲಿ ಅಲ್ಲ. ಇಲ್ಲಿ ಅಮೇರಿಕಾ ವಿರೋಧಿ ನೆಲೆಗಳಿಲ್ಲ, ಅಥವಾ ಪಾಶ್ಚಿಮಾತ್ಯ ವಿರೋಧಿ ನೆಲೆಗಳಿಲ್ಲ. ಯಾಕೆಂದರೆ ಇಲ್ಲಿ ಅಮೇರಿಕಾದ ಹಸ್ತಕ್ಷೇಪ ವ್ಯವಸ್ಥಿತವಾಗಿದ್ದರೂ ಅದು ಸೀಮಿತಗೊಂಡ ಹಸ್ತಕ್ಷೇಪ ಎನ್ನಬಹುದು. ಎಲ್ಲೆಲ್ಲಾ ಅಮೇರಿಕಾ ಪರವಾದ ಹಾಗೂ ಕೈಗೊಂಬೆ ಸರಕಾರಗಳಿರುತ್ತವೆಯೋ ಅಲ್ಲೆಲ್ಲಾ ಅಮೇರಿಕಾ ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡುವುದಿಲ್ಲ. ಸೌದಿ ಅರೇಬಿಯಾ, ಕುವೈಟ್, ಎಮಿರೇಟ್ಸ್ ಇತ್ಯಾದಿ ದೇಶಗಳಲ್ಲಿ ಅದು ಸರಕಾರವನ್ನು ಅಥವಾ ಅರಸೊತ್ತಿಗೆಯನ್ನು ಕಿತ್ತೊಗೆಯುವ ಕಾರ್‍ಯಕ್ರಮಗಳನ್ನು ಹಾಕುವುದಿಲ್ಲ. ವಾಸ್ತವವಾಗಿ ಅಮೇರಿಕಾ ವಿರೋಧಿ ಧೋರಣೆಗಳು "ಮ್ಯಾಕ್ ಡೊನಾಲ್ಡ್ ವರ್ಸಸ್ ಜೆಹಾದ್" ಎಂಬ ವಾದಗಳಲ್ಲಿ, ಶ್ಲೋಗನ್‌ಗಳಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. ಮ್ಯಾಕ್ ಡೊನಾಲ್ಡ್ ಜಾಗತೀಕರಣ ಸಂದರ್ಭದ ಆಧುನಿಕತೆಯನ್ನು ಪ್ರತಿಪಾದಿಸುತ್ತದೆ. ಜೆಹಾದ್ ಜಾಗತೀಕರಣದ ಸಂದರ್ಭದಲ್ಲಿ ಸಮುದಾಯದ ತಲ್ಲಣಗಳನ್ನು, ವಿರೋಧವನ್ನು ಪ್ರತಿನಿಧಿಸುತ್ತದೆ. ಈ ತಲ್ಲಣಗಳನ್ನು ಪ್ರತಿನಿಧಿಸುವಂತೆ ಕೋಕಾಕೋಲಕ್ಕೆ ಪರ್ಯಾಯವಾಗಿ "ಝುಮ್ ಝುಮ್ ಕೋಲಾ" ಅರಬ್ ಜಗತ್ತಿನಿಂದ ಹುಟ್ಟಿ ಬಂತು, ಹಾಗೇನೆ ಯಾವುದೇ ತಕರಾರುಗಳಿಲ್ಲದೇ ನೆಲ ಕಚ್ಚಿತು.

ವಾಸ್ತವವಾಗಿ ಅರಬ್ ಸ್ಪ್ರಿಂಗ್ ಒಂದು ಮುಗಿಯದ ಅಧ್ಯಾಯ. ಅರಬ್ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಕೆಲವೇ ದಿನಗಳಲ್ಲಿ ಗಟ್ಟಿಯಾಗಿ ನೆಲೆಯೂರುತ್ತದೆ ಎಂದು ಯಾರದರೂ ಭಾವಿಸಿದರೆ ಅದು ತಪ್ಪಾಗಬಹುದು. ಯಾಕೆಂದರೆ ಪ್ರಜಾಪ್ರಭುತ್ವದೊಂದಿಗೆ ಅನುಸಂಧಾನವನ್ನು ಮಾಡುತ್ತಾ ಮೂಲಭೂತವಾದದೊಂದಿಗೆ ಮುಖಾಮುಖಿಯಾಗುವದೇ ಅರಬ್ ಸ್ಪ್ರಿಂಗ್‌ಗೆ ಇರುವ ಅತ್ಯಂತ ದೊಡ್ಡ ಸಮಸ್ಯೆ.

ಈ ಹೋರಾಟದಲ್ಲಿ ಶೇಕಾಡ 90 ರಷ್ಟು ಹೋರಾಟಗಾರರು ಅರಬ್ ಜಗತ್ತಿನ ನವ–ಆಧುನಿಕತೆಯ ಫಲಶ್ರುತಿಗಳು. ಇದು 1970/1980ರ ದಶಕದ ತೈಲ ನಿಕ್ಷೇಪದ ಮುಖಾಂತರ ಬಂದ ಆಧುನಿಕತೆಯಿಂದ ವಿಭಿನ್ನ. ನವ–ಆಧುನಿಕತೆ ಜಾಗತೀಕರಣದ ಬಂಡವಾಳದ ಭಾಗವಾಗಿ ಬಂತು. ಹೋರಾಟಗಾರರು ಆಧುನಿಕ, ಲಿಬರಲ್ ಶಿಕ್ಷಣವನ್ನು ಪಡೆದ ಶಿಕ್ಷಿತರು. ಆಸಕ್ತಿಯ ವಿಷಯವೆಂದರೆ ಎಲ್ಲೆಲ್ಲಾ ಲಿಬರಲ್ ಶಿಕ್ಷಣವನ್ನು ನೀಡಲಾಗಿತ್ತೋ, ಸೋಶಿಯಲ್ ನೆಟ್‌ವರ್ಕಿಂಗ್‌ಗೆ ಹಾಗೂ ನಾಗರೀಕ ಸಮಾಜಕ್ಕೆ ಅವಕಾಶಗಳಿದ್ದವೋ ಅಲ್ಲೆಲ್ಲಾ ಈ ಹೋರಾಟಗಳು ಹುಟ್ಟಿಕೊಂಡವು. ಅಷ್ಟು ಮಾತ್ರವಲ್ಲದೇ ಸೋಶಿಯಲ್ ನೆಟ್‌ವರ್ಕ್‌ನ ಫೆಸ್ ಬುಕ್ ಇದರಲ್ಲಿ ಬಹಳ ಕೆಲಸ ಮಾಡಿತ್ತು. ಈ ಸೋಶಿಯಲ್ ನೆಟ್ ವರ್ಕ್ ಈಜಿಪ್ಟ್, ಟ್ಯುನೀಷಿಯಾ, ಅಲ್ಜೀರಿಯಾಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಫೇಸ್ ಬುಕ್ ಒಂದು ರೀತಿಯಲ್ಲಿ "ಕಾಫಿ ಹೌಸ್"– ಇಲ್ಲಿನ ಚರ್ಚೆ ಒಂದು ವಿಷಯಕ್ಕೆ ಮಾತ್ರ ಸೀಮಿತಗೊಳ್ಳದೇ ರಾಜಕೀಯಕ್ಕೂ ಹರಡಿದ್ದ ಕಾರಣ ಅರಬ್‌ಸ್ಪ್ರಿಂಗ್ ಆರಂಭಗೊಳ್ಳಲು ಕಷ್ಟವಾಗಲಿಲ್ಲ. ಸರಕಾರಗಳು ಇದರ ಮೇಲೆ ನಿಷೇಧ ಹಾಕಲು ಯತ್ನಿಸಿದರೂ, ಅಸಾಧ್ಯವಾಯಿತು.

ಈ ಸಂದರ್ಭದಲ್ಲಿ ನವ–ಆಧುನಿಕತೆ ತಂದ ಬಿಕ್ಕಟ್ಟನ್ನು ಮರೆಯಬಾರದು. ನವ– ಆಧುನಿಕತೆ ವಾಸ್ತವವಾಗಿ ಅರಬ್ ಜಗತ್ತಿಗೆ ಹೊಸ ಹೊಸ ನೋಟಗಳನ್ನು, ದೃಷ್ಟಿಕೋನಗಳನ್ನು ನೀಡುತ್ತಾ ಹೋದಂತೆಲ್ಲಾ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲಿಲ್ಲ, ಬದಲಿಗೆ ಪ್ರಶ್ನೆಗಳನ್ನು ಎತ್ತುತ್ತಾ ಹೋಯಿತು, ಮಾತ್ರವಲ್ಲದೇ ಜನರ ಆಶೋತ್ತರಗಳಿಗೆ ಪ್ರತಿಸ್ಪಂದಿಸದೇ ಹೋಯಿತು, ಇದಕ್ಕೆ ಸರಿಯಾಗಿ ನವ–ಆಧುನಿಕತೆ ಎಲ್ಲರಿಗೂ ಉದ್ಯೋಗಗಳನ್ನು ಸೃಷ್ಟಿಸಲಿಲ್ಲವೆಂದೇ ಹೇಳಬೇಕು. ಟ್ಯುನೀಷಿಯಾದ 26 ಶೇಕಡಾದಷ್ಟು ಯುವಕರು ನಿರುದ್ಯೋಗಿಗಳು. ಇದೇ ಸ್ಥಿ ಈಜಿಪ್ಟಿನಲ್ಲಿ ನೋಡಬಹುದು. ಅಲ್ಲಿ ಒಂದು ಲೆಕ್ಕಾಚಾರ ಪ್ರಕಾರ 90 ಶೇಕಡಾದಷ್ಟು ಯುವಕರು ನಿರುದ್ಯೋಗಿಗಳು. ವಾಸ್ತವವಾಗಿ ಅರಬ್ ಸ್ಪ್ರಿಂಗ್ ಆರಂಭಗೊಂಡಿದ್ದದ್ದು ಟ್ಯುನೀಷಿಯಾದ ಚಿಕ್ಕ ಪ್ರಾಂತ್ಯದಿಂದ. ಸಿಡಿ ಬೌಜಿಡ್ ಎಂಬ ಪ್ರಾಂತ್ಯದಲ್ಲಿ ಯುವಕನೊಬ್ಬ ಮೈಮೇಲೆ ಬೆಂಕಿಯನ್ನು ಸುರಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ, ಯಾಕೆಂದರೆ ಅವನ ಹ ಹಂಪಲನ್ನು ಮಾರುವ ಪುಟ್ಟಿಯನ್ನು ಸರಕಾರ ಕಸಿದು ಕೊಂಡಿತ್ತು. ಅವನ ಬಳಿ ಮಾರುವ ಪರವಾನಿಗೆ ಇರಲಿ ಅವನೊಬ್ಬ ನಿರುದ್ಯೋಗಿ ಕೂಡ ಹೌದು. ಇದರೊಂದಿ ಭ್ರಷ್ಟಾಚಾರ, ಸರ್ವಾಧಿಕಾರ, ಮಾನವ ಹಕ್ಕುಗಳ ದುರುಪಯೋಗ, ಆರ್ಥಿಕ ಅಲ್ಲೋಲ ಕಲ್ಲೋಲ ಇತ್ಯಾದಿಗಳು ಕೂಡ ಕೆಲಸಮಾಡಿದವು.



ದುರಂತವೆಂದರೆ ಈ ಹೋರಾಟಗಳು ಇವತ್ತು ಮೆಲ್ಲಮೆಲ್ಲನೆ ಮೂಲಭೂತವಾದಿ ಅದರಲ್ಲೂ ಇಸ್ಲಾಂಮಿಸ್ಟುಗಳ ಕಡೆಗೆ ವಾಲುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಇದರರ್ಥ ಈ ಹೋರಾಟಗಳು ಧಾರ್ಮಿಕ ರಾಜ್ಯ ಅಥವಾ ತಿಯೋಕ್ರಟಿಕ್ ರಾಜ್ಯದ ಸ್ಥಾಪನೆಗೆ ಅವಕಾಶ ಮಾಡಿಕೊಡುತ್ತದೆ ಎಂಬರ್ಥವಲ್ಲ. ಯಾಕೆಂದರೆ ಈ ಹೋರಾಟಗಳ ಸಂದರ್ಭದಲ್ಲಿ ಎಲ್ಲಿಯೂ ಅಯಾತುಲ್ಲ ಖೋಮೆನಿ ತರಹ ಧರ್ಮ ರಾಜ್ಯವನ್ನು ಪ್ರತಿಪಾದಿಸುವ ನಾಯಕರು ಹುಟ್ಟಿಕೊಳ್ಳಲಿಲ್ಲ. ಹೋರಾಟಗಳ ಸಂದರ್ಭದಲ್ಲಿ ನೂರಾರು ಹೊಸ ಹೊಸ ನಾಯಕರು ಹುಟ್ಟಿಕೊಂಡರು. ಅದರಲ್ಲಿ ಮಾನವ ಹಕ್ಕುಗಳ ಹೋರಾಟಗಾರರು, ಮಹಿಳಾವಾದಿಗಳು, ಉದಾರವಾದಿಗಳು, ಇತ್ಯಾದಿಗಳು ಇದ್ದದ್ದು ವಾಸ್ತವ. ಅರಬ್ ಸ್ಪ್ರಿಂಗ್‌ನಲ್ಲಿರುವ ಸಂಘಟನೆಗಳನ್ನು "ಸಲಾಡ್" ಎಂದು ಕರೆದರೆ ಅತೀಯೋಕ್ತಿಯಾಗಲಾರದು. ಅಥವಾ ಇದನ್ನು ಬಣ್ಣ ಬಣ್ಣದ ಕಾಮನ ಬಿಲ್ಲಿನ ಸಂಯುಕ್ತತೆಯೆಂದರೂ ತಪ್ಪಾಗಲಾರದು. ಈ ಹೋರಾಟದಲ್ಲಿ ಆದರ್ಶವಾದಿಗಳು ಇದ್ದಾರೆ. ಕಾರ್ಮಿಕ ಸಂಘಟನೆಗಳು, ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಬುದ್ಧಿಜೀವಿಗಳು, ಕಾನೂನು ತಜ್ಞರು ಇತ್ಯಾದಿಯವರು ಇದ್ದಾರೆ. ಅವರಲ್ಲಿ ಕೆಲವರು ಈಗಲೂ ವಿಶಾಲ ಅರಬ್ ಜಗತ್ತಿನ ಸ್ಥಾಪನೆಯ ಕನಸನ್ನು ಕಾಣುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಇವರ ಮೂಲಭೂತ ಧೋರಣೆಯಲ್ಲಿ ಅರಬ್ ರಾಷ್ಟ್ರೀಯತೆ ಹಾಗೂ ಅರಬ್ ಜಗತ್ತು ಒಂದೇ ಎಂಬ ಕಲ್ಪನೆ ಇದೆ. ಈ ಕಲ್ಪನೆ ಹೊಸತೇನಲ್ಲ. ಇದಕ್ಕೊಂದು ಇತಿಹಾಸವಿದೆ. ಇದರ ಪ್ರಪ್ರಥಮ ಪ್ರತಿಪಾದಕರೆಂದರೆ ಶರೀಫ ಇಬ್ನ್ ಆಲಿ, ಮೆಕ್ಕಾದ ಶರೀಫ. ತದನಂತರ ಇದನ್ನು ಜುರ್ಗಿ ಝೆಡಾನ್ ಎತ್ತಿಕೊಂಡನು. ಈಜಿಪ್ಟ್‌ನ ಮಾಜಿ ಅಧ್ಯಕ್ಷ ನಾಸೆರ್‌ನ ಕನಸ್ಸು ಇದರಿಂದ ವಿಭಿನ್ನವಾಗಿರಲಿಲ್ಲ, ವಿಚಿತ್ರವೆಂದರೆ ವಿಶಾಲ ಆರಬ್ ವಾದವನ್ನು ಎತ್ತಿ ಹಿಡಿದವರು ಸಮಾಜವಾದಿಗಳು. ಈ ಸ್ಪ್ರಿಂಗ್‌ನಲ್ಲಿ ಈ ಕನಸು ಕೂಡ ಕಡಕವಾಗಿದೆ

ಈ ಸಂದರ್ಭದಲ್ಲಿ ಕೆಲವು ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇಸ್ಲಾಂ ಪ್ರಜಾಪ್ರಭುತ್ವವನ್ನು ಒಪ್ಪುತ್ತದೆಯೇ? ಒಪ್ಪಿದರೆ ಅದು ಯಾವ ರೂಪದಲ್ಲಿರುತ್ತದೆ. ಎರಡನೇದಾಗಿ ಇಸ್ಲಾಂ ಹಾಗೂ ಪ್ರಜಾಪ್ರಭುತ್ವ ಅನುಸಂಧಾನ ಮಾಡಿಕೊಳ್ಳಬಹುದೇ? ಈ ಪ್ರಶ್ನೆ ಉದ್ಭವಿಸಲು ಕಾರಣವಿದೆ. ಈ ಹೋರಾಟದ ಫಲಶ್ರುತಿಯಾಗಿ ಕೆಲವೆಡೆ ಪ್ರಜಾಪ್ರಭುತ್ವದ ಚೌಕಟ್ಟುಗಳು ನಿರ್ಮಾಣಗೊಂಡರೂ, ಅವು ಉದಾರವಾದಿ ಪ್ರಜಾಪ್ರಭುತ್ವದ ಚೌಕಟ್ಟಾಗಿ ಭವಿಷ್ಯದಲ್ಲಿ ಉಳಿಯುವ ಸಾಧ್ಯತೆಗಳು ಕಡಿಮೆ ಎಂಬ ಗಂಭೀರವಾದ ಆರೋಪ ಇವೆ. ಇದನ್ನು ಪುಷ್ಟೀಕರಿಸುವಂತೆ ಈಜಿಪ್ಟ್, ಟ್ಯುನೀಷಿಯಾದಲ್ಲಿ ಮೂಲಭೂತವಾದಿಗಳ ಅಟ್ಟಹಾಸಗಳು ಮಿತಿಮೀರಿವೆ.

ವಾಸ್ತವವಾಗಿ ಈ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವೇನಿಲ್ಲ. ಇಸ್ಲಾಮಿಕ್ ದೇಶಗಳಲ್ಲಿರುವ ಪ್ರಜಾಭುತ್ವವನ್ನು ಎರಡು ವಿಧವಾಗಿ ವಿಭಾಗಿಸಬಹುದು. ಒಂದನೇ ರೂಪದಲ್ಲಿ ಇಸ್ಲಾಂ ರಾಷ್ಟ್ರವೊಂದರ ಘೋಷಿತ ಧರ್ಮವಾದರೂ, ಅದು ದೇಶದ ಎಲ್ಲಾ ಆಯಾಮಗಳನ್ನು ಒಳಗೊಳ್ಳುವುದಿಲ್ಲ. ಇದಕ್ಕೆ ಮಲೇಶ್ಯಾ, ಮಾಲ್ಡೀವ್ಸ್ ಇತ್ಯಾದಿ ಉತ್ತಮ ಉದಾಹರಣೆ. ಇಲ್ಲಿ ಧರ್ಮ ಹಾಗೂ ಪ್ರಜಾಪ್ರಭುತ್ವ ಜೊತೆ ಜೊತೆಯಾಗಿ ಅನುಸಂಧಾನ ಮಾಡಿ ಕೊಳ್ಳುತ್ತವೆ. ಇನ್ನೊಂದು ರೂಪದಲ್ಲಿ ಧರ್ಮ ಇಡೀ ದೇಶದ ಎಲ್ಲಾ ಚೌಕಟ್ಟನ್ನು ಒಳಗೊಂಡಿರುತ್ತದೆ. ಆದರೂ ಅದು ಆಧುನಿಕ ಪ್ರಜಾಪ್ರಭುತ್ವದ ಸಂಕೇತಗಳಾದ ಚುನಾವಣೆ, ಪಕ್ಷ ಇತ್ಯಾದಿಗಳನ್ನು ಕೂಡ ಒಳಗೊಂಡಿರು ತ್ತದೆ. ಇದನ್ನು ಇಸ್ಲಾಮಿಕ್ ಪ್ರಜಾಪ್ರಭುತ್ವ ಎಂದೆಲ್ಲಾ ಕರೆಯುತ್ತಾರೆ. ಇದರ ಪ್ರಕಾರ ಇವತ್ತಿನ ಪ್ರಜಾಪ್ರಭುತ್ವ ಶೂನ್ಯತೆಯನ್ನು ನಿರ್ಮಿಸುತ್ತದೆ. ಆ ಶೂನ್ಯತೆಯನ್ನು ತುಂಬುವ ಶಕ್ತಿ ಇರುವುದು ಧರ್ಮಕ್ಕೆ ಹೊರತು ಬೇರೆಯವರಿಗಲ್ಲ. ಇರಾನ್ ಇದಕ್ಕೆ ಉತ್ತಮ ಉದಾಹರಣೆ.

ವಾಸ್ತವವಾಗಿ ಇಸ್ಲಾಂನಲ್ಲಿ ಎರಡು ಸಂಪ್ರದಾಯವಿದೆ. ಒಂದನೇ ಸಂಪ್ರದಾಯ ಪ್ರಜಾಪ್ರಭುತ್ವದ ಮೂಲವನ್ನು ಪ್ರವಾದಿಯ ಕಾಲಾವಧಿ ಹಾಗೂ ತದನಂತರದ ಖಲೀಫರ "ಸಿಲ್‌ಸಿಲಾ"ದಲ್ಲಿ ನೋಡುತ್ತದೆ. ಈ ಸಂಪ್ರದಾಯ ಪ್ರಥಮ ಖಲೀಫ ಆಲಿಯಿಂದ ರಶೀದ್ ತನಕ ಸಮರ್ಥವಾಗಿ ಅಸ್ತಿತ್ವದಲ್ಲಿತ್ತು ಎಂದು ವಾದಿಸುತ್ತದೆ. ತದನಂತರ ಅದು ಬೇರೆ ಬೇರೆ ರೂಪಕಗಳನ್ನು ಪಡೆಯಿತು. ಇದನ್ನು ತತ್ವಜ್ಞಾನಿಯಾದ ಅಲ್ ಫರೂಕಿ ಪ್ರಪ್ರಥಮಬಾರಿಗೆ ವಾದಿಸುತ್ತಾನೆ. ಅವನ ಪ್ರಕಾರ ಪ್ರವಾದಿಯ ಮದೀನದ ಆಳ್ವಿಕೆಯು ಆದರ್ಶ ರಾಜ್ಯವಾಗಿತ್ತಲ್ಲದೇ, ಅದು ಪ್ರಜಾಪ್ರಭುತ್ವದ ಎಲ್ಲಾ ಲಕ್ಷಣಗಳನ್ನು ಒಳಗೊಂಡಿತ್ತು. ಪ್ರವಾದಿಯ ಮರಣದ ನಂತರ ಆಲಿಯ ಆಯ್ಕೆ, ಸಾರ್ವಜನಿಕ ನೀತಿಯನ್ನು ಅಳವಡಿಸುವ ಸಂದರ್ಭದಲ್ಲಿ ಕೌನ್ಸಿಲ್‌ಗಳ ಅಭಿಪ್ರಾಯಗಳ ಕ್ರೋಢೀಕರಣ, "ಇಸ್ಲಾಮಿಕ್ ಶೂರ" ,ಚುನಾವಣೆಗಳು, ಚರ್ಚೆಗಳಿಗೆ ಮುಕ್ತ ಅವಕಾಶಗಳು, ಚಿಂತನೆಗಳಿಗೆ ಅವಕಾಶಗಳು, ವಿವಿಧ ರೂಪದ ಹಕ್ಕುಗಳು ಇತ್ಯಾದಿಗಳು ಇದಕ್ಕೆ ಉದಾಹರಣೆ. ಇದರ ಪ್ರಕಾರ ಈ ಸಂಪ್ರದಾಯ ಈಗಲೂ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಇದೆ.. ಎರಡನೇ ಸಂಪ್ರದಾಯ ಪ್ರವಾದಿ ನಂತರ ಹನ್ನೆರಡು ಇಮಾಂಗಳ ' ಸಿಲ್ ಸಿಲಾವನ್ನು" ಒಪ್ಪಿಕೊಳ್ಳುತ್ತದೆಯಲ್ಲದೇ, ಧರ್ಮಾಧಾರಿತ ಪ್ರಜಾಪ್ರಭುತ್ವ ವನ್ನು ಒಪ್ಪಿಕೊಳ್ಳುತ್ತದೆ. ಇವೆರಡರ ನಡುವೆ ಮೊದಲನೇ ಸಾಂಪ್ರದಾಯ ಉದಾರವಾದ ಪ್ರಜಾಪ್ರಭುತ್ವದೊಂದಿಗೆ ಅನುಸಂಧಾನ ಮಾಡಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತದೆ.

ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕಾದರೆ ಧರ್ಮವನ್ನು ಖಾಸಗೀತನದ ಭಾಗವನ್ನಾಗಿಸಬೇಕೆ ಹೊರತು ಅದನ್ನು ರಾಜಕೀಯದ ಭಾಗವನ್ನಾಗಿ ಅಲ್ಲ. ಎಲ್ಲಾ ದೇಶಗಳಲ್ಲಿ ಇಸ್ಲಾಂನ ಪ್ರಭಾವ ಏಕರೂಪಿಯಲ್ಲ. .ಒಂದು ಅಂದಾಜಿನ ಪ್ರಕಾರ ಇಂಡೋನೇಶಿಯಾದಲ್ಲಿ ಇದರ ಪ್ರಭಾವ 91% ಇದ್ದರೆ, ಈಜಿಪ್ಟ್ ನಲ್ಲಿ 85%, ಜೋರ್ಡಾನ್ ನಲ್ಲಿ 76%, ಲೆಬೆನಾನ್ ನಲ್ಲಿ 58% ಹಾಗು ಪಾಕಿಸ್ತಾನದಲ್ಲಿ 69% ಇದೆ, ಇದರರ್ಥ ಧರ್ಮವೇ ದೇಶವನ್ನು ಆಳುತ್ತಿದೆ ಎಂದರ್ಥವಲ್ಲ. ಟರ್ಕಿಯಲ್ಲಿ ಧರ್ಮದ ಪ್ರಭಾವ ಅತ್ಯಂತ ಕಡಿಮೆ: ಅದು ಬರೇ 38% ಇದೆ. ಪ್ರಜಾಪ್ರಭುತ್ವ ಇಲ್ಲಿ ಗಟ್ಟಿಯಾಗಿ ಅನುಸಂಧಾನ ಮಾಡಿಕೊಳ್ಳುತ್ತದೆ. ಉಳಿದೆಡೆ ಅದು ಮೂಲಭೂತವಾದದೊಂದಿಗೆ ಮುಖಾಮುಖಿಯಾಗುತ್ತದೆ.

ವಾಸ್ತವವಾಗಿ ಅರಬ್‌ಸ್ಪ್ರಿಂಗ್ ಒಂದು ಮುಗಿಯದ ಅಧ್ಯಾಯ. ಅರಬ್ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಕೆಲವೇ ದಿನಗಳಲ್ಲಿ ಗಟ್ಟಿಯಾಗಿ ನೆಲೆ ಯೂರುತ್ತದೆ ಎಂದು ಯಾರಾದರೂ ಭಾವಿಸಿದರೆ ಅದು ತಪ್ಪಾಗಬಹುದು. ಯಾಕೆಂದರೆ ಪ್ರಜಾಪ್ರಭುತ್ವದೊಂದಿಗೆ ಅನುಸಂಧಾನವನ್ನು ಮಾಡುತ್ತಾ ಮೂಲಭೂತವಾದದೊಂದಿಗೆ ಮುಖಾಮುಖಿಯಾಗುವದೇ ಅರಬ್ ಸ್ಪ್ರಿಂಗ್‌ಗೆ ಇರುವ ಅತ್ಯಂತ ದೊಡ್ಡ ಸಮಸ್ಯೆ.

ಮುಜಾಪ್ಪರ್ ಅಸ್ಸಾದಿ

ವಿಚಾರವಾದಿ, ಚಿಂತಕ, ಜನಪ್ರಿಯ ಅಂಕಣ ಬರಹಗಾರ. ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ. ಇವರ ಗಾಂಧಿಯ ಹಿಂದ್ ಸ್ವರಾಜ್', 'ಇನ್ನೊಂದು ಮುಖ', 'ಐಡೆಂಟಟಿ ಮತ್ತು ಕಾಲಮಾನದ ಚಿಂತನೆಗಳು' ಕೃತಿಗಳು ಗಮನ ಸೆಳೆದಿವೆ. ಅನೇಕ ಉಪಯುಕ್ತ ಕೃತಿಗಳನ್ನು ಸಂಪಾದಿಸಿದ್ದಾರೆ. ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಅನೇಕ ಆಂಗ್ಲ ಕೃತಿಗಳನ್ನು ರಚಿಸಿದ್ದಾರೆ. ರಾಷ್ಟ್ರ-ಅಂತರಾಷ್ಟ್ರೀಯಗಳಲ್ಲಿ 200 ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ. 'ಕರ್ನಾಟಕದಲ್ಲಿ ಐಡೆಂಟಿಟಿಯ ರಾಜಕೀಯ; ರೈತ ಮತ್ತು ರೈತ ಚಳವಳಿಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ.


With Best Compliments From
M/S. SHARMA TRANSPORTS
Kalasipalyam
Bangalore
Sharma


Mayuri
With Best Compliments From
Govinda Reddy
Mayuri Restaurant
J. C. Road, Bangalore


With Best Compliments From
Hashim Ali
THE Spark
HOUSE OF FASHION
The Spark No. 12-G-1, Ground Floor, Ashoka Enclave, Nethaji Road, Frazer Town, Bangalore-560005. Ph: 080-40911971/72
14, Ground Floor, Venkatappa Corner, Banaswadi Road, Jai Bharath Nagar, Bangalore- 560033. Ph: 41900158
1, Magarath Road Next to Home Shoppe Bangalore-560025. Ph: 080-41126283
Spark No.36, Coles Road, Opp. Shanthi Sagar, Fraser Town, Bangalore-560005. Ph: 41526819
Spark No. 21, Nehru Main Road, Opp. Empire Hotel, Kammanahalli, Bangalore-84. Ph:41733606


With Best Compliments From
LE Brew

With Best Compliments From

R. S.Dhanyakumar
Sr.Liasioning Officer
Mob: 9945052609/ 9008026406
E-Mail: dhanyakumar@gmail.com

SAISUDHIR INFRASTRUCTURE LIMITED.

AN ISO 9001:2008 COMPANY

Regional office
1, 2ND FLOOR, 3RD PHASE,
SHANTHI VANA, KODIGEHALLI,
SAHAKAR NAGARA, BANGALORE-92
PH: 080-22793984. Fax: 080-42031822


With Best Compliments From
N.SRINIVAS
M/S. SAPTHAGIRI ENTERPRISES
NO.72, PEENYA, SRS ROAD,
BANGALORE-560058
PH: 9448082872

With Best Compliments From
Largest producer of Printed Circuit Boards in India
A T &S INDIA Pvt LTD.
12/ A |Nanjangud Industrial Area | Nanjangud -571301| Mysore, Karnataka| India
Ph: +91-8221-304000| Fax: +91-8221-228570 | Email: info@in.ats.net
A T& S Global Presence
Headquarters
Vienna
Plants
Leoben
Fehring
Klagenfurt
Shanghai
Nanjangud
Ansan
Sales offices
Australia
Austria
China
Czech Republic
France
Germany
Hong Kong
Hungary
India
Ireland/ UK
Japan
Malaysia
Singapore
Spain
South Korea
USA
Design Center
Norvenich
AT&S
www.ats.net

With Best Compliments From
DHANALAKSHMI ENTERPRISES
PROP. T. L. RAJENDRAN
P.W.D. CLASS 1 CONTRACTOR AND BODY BUILDERS,
PLOT NO. 31, ANTHRASANAHALLY, INDUSTRIAL AREA,
TUMKUR PH: 0816-2271084,
MOB: 9844233029

PRISTINE BREAKFAST
HEALTHY ORGANIC BREAKFAST CEREAL RANGE
BEGIN-NINGS
BEGIN-NINGS
BEGIN-NINGS
BEGIN-NINGS
Wheat
Net wt : 300g
Rs.150.00
Mixed Millet
Net wt : 300g
Rs.150.00
Corn
Net wt : 300g
Rs.150.00
Ragi
Net wt : 300g
Rs.150.00
Organic Cereal Flakes
~ CORN ~
Customer Care
1800 425 2216
Certified Organic
Rich in Vitamins and Minerals
Pristine Organics Pvt. Ltd. #44/2A, Kodigehalli Gate, Sahakarnagar Post, NH-7, Bengaluru - 560092.
info@pristineorganics.com | www.pristineorganics.com

ಹೊಂಡುನೀರಿನ ಹಳ್ಳಿ

ಕವನ

ನಾನು ಆ ಹಳ್ಳಿಯಲ್ಲಿದ್ದ ಮಧ್ಯಾಹ್ನ...

ಸೊಂಟಿಹುಲ್ಲು ಬೀಸಾಡುವ ಜಾರುಹಾದಿಯಲ್ಲಿ ಕಾಡುಬೆಕ್ಕುಗಳು
ಏಪ್ರಿಲ್ ತಿಂಗಳ ಕತ್ತರಿಯಿಂದ ತಮ್ಮ ಮೀಸೆಗಳನ್ನು ಕತ್ತರಿಸಿಕೊಳ್ಳುತಾ,
ಜೋಡಿ ಜೋಕರ್‌ಗಳಂತೆ ನೆಗೆದಾಡುತ್ತಿದ್ದವು.

ನೀಲಗಿರಿ ತೋಪುಗಳು, ಹೊಂಡುನೀರಿನ ಕೆರೆ;
ಆ ಹೊಂಡಲ್ಲಿ ಮುಳುಗಿ ಸಿಗಡಿ, ಮೀನುಗಳನ್ನು ಕಚ್ಚಿಕೊಂಡು
ಹಾರುತ್ತಾರುತ್ತ ನೀಲಾಕಾಶ ಬಿಚ್ಚಿ ತೋರುವ ಪಕ್ಷಿಗಳು,
ಅಲ್ಲೇ ಆ ದಡದುದ್ದಕ್ಕೂ ತೆಂಗಿನಪಟ್ಟೆಯಲ್ಲಿ ಕ್ರಿಕೆಟ್ ಆಡುವ
ಕೀಟಲೆಕಾರ ಹುಡುಗರ ಗುಂಪು;
ಮಣ್ಣಿನ ರಸ್ತೆಯ ಕಿರುಗುಂಡಿಗಳಲ್ಲೂ, ಉಬ್ಬುಗಳಲ್ಲೂ
ನಿರಾಯಾಸವಾಗಿ ಸಾಗುವ ಟ್ರ್ಯಾಕ್ಟರ್,
ಕಣೆ ಬಿತ್ತರಿಸುವ ಹೆಣ್ಣುಗಳ ತೊನೆಯುವ ಮೊಲೆಗಳೆದುರು
ಗಕ್ಕನೆ ನಿಂತುಬಿಡುವ ಮಜವಾದ ಚಿತ್ರ-
ಒಂದು ಆಹ್ಲಾದಕರ ಕನಸಿನಂತೇನೋ ಇತ್ತು!

ಅಲ್ಲಿನ ಮೇಲ್ವರ್ಗದ ಹೆಣ್ಣುಗಳು,
ಮುಳ್ಳುಸೌದೆಗೆ ಹಾದುಬರುವ ಅಸ್ಪೃಶ್ಯರ ಮಕ್ಕಳನ್ನು ಜಾಲಿದೊಣ್ಣೆಗಳಿಂದ
ನಾಯಿಕುನ್ನಿಗಳಂತೆ ಓಡಿಸಿಕೊಂಡು ಅವರ ಮನೆಗಳವರೆಗೂ ಅಟ್ಟುತ್ತಿದ್ದರು;
ತಿರುಗಿ ಬಂದವರೇ ತಮ್ಮ ಮಕ್ಕಳಿಗೆ ಗುಲಾಬಿ ಕೊಟ್ಟು ರಂಜಿಸುತ್ತಿದ್ದರು.

ಸಂಜೆ ಆ ಹಳ್ಳಿ ಕವಿದುಕೊಳ್ಳುತ್ತಿದ್ದದ್ದು ಬೀಸಿದ ಬಿರುಗಾಳಿಯಲೆಗಳಿಂದ ಮರಗಳು ತುಯ್ದಾಡಿ,
ನೆಲಕ್ಕುರುಳಿದಾಗ ಅಥವಾ ಅಸ್ಪೃಶ್ಯರ ಮಕ್ಕಳು ಮೇಲ್ವರ್ಗದ
ಹೆಣ್ಣುಗಳ ಗುಲಾಬಿ ತೋಟಗಳಿಗೆ ನೀರು ಹನಿಸುವುದರಿಂದ.

ಸೊಂಟಿಹುಲ್ಲು ಬೀಸಾಡುವ ಜಾರುಹಾದಿಯನ್ನು ಏರತೊಡಗಿದೆ,
ಮೀಸೆ ಬದಲು ಕುತ್ತಿಗೆ ಕತ್ತರಿಸಿಕೊಂಡ ಬೆಕ್ಕುಗಳು ಏಪ್ರಿಲ್ ತಿಂಗಳ ರಕ್ತದಲ್ಲಿ
ಎದುರುಗೊಂಡವು.

ಅಸ್ಪೃಶ್ಯರ ಮಕ್ಕಳು ರಕ್ತವರ್ಣದ ಸಂಜೆ ಸೂರ್ಯನನ್ನು ತಮ್ಮ ಮನೆಗಳೊಳಗೆ
ಎಳೆದು ಬೆಳಕಾಗಿಸಿಕೊಳ್ಳುತ್ತಿದ್ದರು;
ನಾನು ಊರುತ್ತಿದ್ದ ಹೆಜ್ಜೆಯಾಳದಲ್ಲಿ ಅವರು ತುಳಿದು ಭೂಗತಗೊಳಿಸಿದ
ಮೋಡದ ತುಣುಕುಗಳು ನನ್ನ ಕೈಗೆಟುಕುವುದು ನಿಲ್ಲುವಂತಿರಲಿಲ್ಲ.





ಮಂಜುನಾಥ. ವಿ. ಎಂ

ಓದುತ್ತಿರುವಾಗಲೇ ಲಂಕೇಶರ ಪ್ರಭಾವಕ್ಕೆ ಒಳಗಾದ ಮಂಜುನಾಥ್ ಕಥೆ, ಕವನ, ನಾಟಕ ಹೀಗೆ ಬಹುಸ್ತರದಲ್ಲಿ ಗುರುತಿಸಿಕೊಂಡ ಬರಹಗಾರ. ನೀನಾಸಂ ಕೇಂದ್ರದಲ್ಲಿ ರಂಗಶಿಕ್ಷಣ ಪದವಿ; 'ಕಿಂಪುಗೂಳಿ' ಮತ್ತು 'ಕ್ರಿಮಿ' ನಾಟಕಗಳನ್ನು ಬರೆದು ನಿರ್ದೇಶಿಸಿದ ಹೆಗ್ಗಳಿಕೆ. ಫಾದರ್ 55 ಮತ್ತು ನೀನಾಸಂ ಡೈರಿಯ ಕವಿತೆಗಳು, ಲೆವೆಲ್ ಕ್ರಾಸಿಂಗ್, ಬ್ರಾಂಡಿ ಕಥಾ ಸಂಕಲನ ಇನ್ನಿತರ ಪ್ರಮುಖ ಕೃತಿಗಳು. ಒನ್‌ವ್ಹೀಲರ್ ಪಬ್ಲಿಕೇಶನ್ ಮತ್ತು ಹೈವೇ ಥಿಯೇಟರ್ಸ್ ಆರಂಭಿಸಿ ಸಾಹಿತ್ಯ ಮತ್ತು ರಂಗಭೂಮಿ ಅಧ್ಯಯನದ ಸಲುವಾಗಿ ಸುತ್ತಾಟ. ಪ್ರಸ್ತುತ ಹಲವು ಪತ್ರಿಕೆಗಳಲ್ಲಿ ಚಿತ್ರ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ದಶಕದ ಕೆಲವು ವೈಚಾರಿಕ ಬೆಳವಣಿಗೆಗಳು

ಡಾ॥ ಎಸ್. ನಟರಾಜ ಬೂದಾಳು

ಬ್ರಾಹ್ಮಣರು ಉಂಡ ಎಂಜಲೆಲೆ ಮೇಲೆ ಟೆಕ್ಕಿಗಳು, ಡಾಕ್ಟರುಗಳು, ಇಂಜಿನಿಯರುಗಳು, ಅಕ್ಷರಸ್ತರು, ಅನಕ್ಷರಸ್ತರು ಹೊರಳಾಡುತ್ತಿದ್ದರೆ, "ಅದು 'ಮಡೆಸ್ನಾನ', ಆದ್ದರಿಂದ ಹೊರಳಾಡಿದವರಿಗೆ ಕೊಂಚ ಮಾನಸಿಕ ಸಮಾಧಾನ ಸಿಗುವುದಿದ್ದರೆ ಸಿಗಲಿಬಿಡಿ" ಎಂದು 'ಪ್ರಮಾಣ' ಭಾಷೆಯಲ್ಲಿ ಪಲುಕುವ ವೈಚಾರಿಕತೆಯ ಮಂತ್ಲಿ, ವೀಕ್ಲಿ ಕಂತ್ರಾಟುದಾರರು.ದುರಂತದ ಸಂಗತಿಯೆಂದರೆ ವೈಚಾರಿಕತೆಯ ನಾಶಕ್ಕೆ ಸಮೂಹ ಮಾಧ್ಯಮಗಳ ನೀಡಿಕೆ ಕೂಡ ದೊಡ್ಡ ಪ್ರಮಾಣದಲ್ಲಿದೆ.

ಈ ದಶಕದಲ್ಲಿ ಕನ್ನಡದಲ್ಲಿ ಬಂದಿರುವ ಸಮಗ್ರ ವಿಚಾರ ಸಾಹಿತ್ಯವನ್ನು ಸಮೀಕ್ಷಿಸಿ ಮಾತನಾಡುವುದು ಕಷ್ಟ ಸಾಧ್ಯ. ಬಂದಿರುವ ಪುಸ್ತಕಗಳ ಮತ್ತು ಲೇಖನಗಳ ಪಟ್ಟಿ ಮಾಡುವುದಕ್ಕಿಂತ ನನ್ನ ಗ್ರಹಿಕೆಗೆ ಬಂದ ಕೆಲವು ಮುಖ್ಯ ವೈಚಾರಿಕ ಬೆಳವಣಿಗೆಗಳನ್ನು ಮಾತ್ರ ದಾಖಲಿಸುವ ಪ್ರಯತ್ನ ಮಾಡುತ್ತೇನೆ. ಈ ದಶಕವಂತೂ ಅನೇಕ ಸಾಂಸ್ಕೃತಿಕ ಶಕ್ತಿಗಳು ವಿಜೃಂಭಿಸಿದ ಕಾಲ. ನಮ್ಮ ಸಮೂಹದ ಬದುಕನ್ನು ನಿಯಂತ್ರಿಸುತ್ತಿರುವ ಈ ದುಷ್ಟ ಶಕ್ತಿಗಳಿಂದ ಬಿಡುಗಡೆ ನೀಡಬಲ್ಲ ವೈಚಾರಿಕತೆ ಎನ್ನುವುದೊಂದು ಇನ್ನೆಂದಾದರೂ ನಮಗೆ ದೊರಕೀತೆ ಎನ್ನುವ ಸಂಶಯವನ್ನು ಹುಟ್ಟಿಸುವಷ್ಟು ತಲ್ಲಣಗಳ ಕಾಲ. ವೈಚಾರಿಕತೆಯನ್ನು ಮತ್ತು ಸಾಮಾನ್ಯ ನಿಸರ್ಗ ವಿವೇಕವನ್ನು ಹತ್ತಿಕ್ಕುವ ಪ್ರಯತ್ನಗಳು ಅಖಿಲ ಭಾರತದ ಮಟ್ಟದಲ್ಲಿ ನಿರಂತರವಾಗಿ ನಡೆಯುತ್ತಲೇ ಬಂದಿವೆ. ಈ ದಶಕವನ್ನು ಗುರಿಯಾಗಿಸಿಕೊಂಡಿರುವ ಈ ಮಾತುಕತೆಗೆ ಒದಗಿ ಬಂದಿರುವ ಹೆಚ್ಚಿನ ಅಂಶವೆಂದರೆ ಈ ಪಾರಂಪರಿಕ ವಸಾಹತುಶಾಹಿಗಳ ಮುಂದುವರಿಕೆಯಾಗಿರುವ ಜಾಗತೀಕರಣ.



ಸಾಮಾನ್ಯ ವೈಚಾರಿಕ ನೋಟಕ್ಕೆ ಸಮೂಹದಲ್ಲಿ ಕಾಣಿಸುವ ಈ ದಶಕದ ದೃಶ್ಯಗಳು ಯಾವುವು? ಮೊದಲಿಗೆ ಎದ್ದು ಕಾಣಿಸುವಂತಹ ಸಂಗತಿಗಳೆಂದರೆ ಅವೈಚಾರಿಕತೆಯ ವಿಜೃಂಭಣೆ. ಸಮಾಜದಲ್ಲಿ ಸಂಭವಿಸುತ್ತಿರುವ ಈ ನೋಟ, ಅಕ್ಷರ ಅಥವಾ ಇನ್ನಾವುದೇ ಮಾಧ್ಯಮಗಳಿಗಿಂತ ಹೆಚ್ಚು ಗಂಭೀರವಾದದ್ದು. ಇನ್ನೂ ದುರಂತದ ಸಂಗತಿಯೆಂದರೆ ವೈಚಾರಿಕತೆಯ ನಾಶಕ್ಕೆ ಸಮೂಹ ಮಾಧ್ಯಮಗಳ ನೀಡಿಕೆ ಕೂಡ ದೊಡ್ಡ ಪ್ರಮಾಣದಲ್ಲಿದೆ. ಈ ದಶಕದ ಮೊದಲ ನೋಟವೆಂದರೆ ಸಾಂಸ್ಕೃತಿಕ ವಸಾಹತುಶಾಹಿಯ ವಿಜೃಂಭಣೆ. ಭಾರತದ ಮಟ್ಟಿಗೆ ಈ ಸಾಂಸ್ಕೃತಿಕ ವಸಾಹತುಶಾಹಿಯ ಆರಂಭ ಮತ್ತು ಮುಂದುವರಿಕೆ ಮಾತ್ರ ಇದೆ. ಸಾಂಸ್ಕೃತಿಕ ವಸಾಹತೋತ್ತರ ಕಾಲವೆಂಬುದು ಭಾರತಕ್ಕೆ ಬರಲೇ ಇಲ್ಲ. ಸಾಂಸ್ಕೃತಿಕ ವಸಾಹತುಶಾಹಿಯ ಅಜೆಂಡಾದ ಮೊದಲ ಅಂಶವೆಂದರೆ ಸಾಮಾನ್ಯ ನಿಸರ್ಗತರ್ಕದ, ಸಾಮಾನ್ಯ ವಿವೇಕದ ಮತ್ತು ವಿಜ್ಞಾನದ 'ಅರಿವನ್ನು' ನಾಶಮಾಡುವುದು. ಇದರ ಮಾದರಿಗಳ ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ;

೧. ಭಾರತೀಯ ವಿಜ್ಞಾನ ಸಂಸ್ಥೆಗಳಲ್ಲೊಂದಾದ ISRO ಗೆ ಹೊಸ ನಿರ್ದೇಶಕರಾಗಿ ನೇಮಕಾತಿ ಆಗಿ ಬಂದವರು ಮೊದಲು ಮಾಡಿದ್ದೇನೆಂದರೆ ಶಬರಿಮಲೈಗೆ ಹೋಗಿ ತುಲಾಭಾರ ಮಾಡಿಸಿಕೊಂಡು ಬಂದದ್ದು!

೨. ಪ್ರತಿ ಮನೆಗೂ ತೋಡಿರುವ ಟಿವಿ ಚಾನೆಲ್ಲುಗಳಲ್ಲಿ ಬೆಳಿಗ್ಗೆ ಎದ್ದರೆ ಅದೆಷ್ಟು ದೇವಸ್ಥಾನಗಳಲ್ಲಿ ಏನೇನನ್ನೋ ತೊಳೆದ ನೀರು ಇತ್ಯಾದಿಗಳು ತೀರ್ಥಪ್ರಸಾದಗಳಾಗಿ ತುಂಬಿ ಹರಿಯುತ್ತಿವೆ!

೩. ಸಂಕಷ್ಟ, ಅಕ್ಷಯ ತೃತೀಯಗಳಲ್ಲಿ, ಮಡೆಸ್ನಾನಗಳಲ್ಲಿ ಮುಳುಗಿರುವ ಸಮೂಹಕ್ಕೆ ಹೊಸಹೊಸ ಪ್ರಮಾಣಗಳನ್ನು ಸೃಷ್ಟಿಸಿ ಒದಗಿಸುವ 'ಬ್ರಹ್ಮಾಂಡ ಭೂಪತಿಗಳು', ಗಂಡ ಹೆಂಡತಿ ನಡುವಿನ ಸಾಮಾನ್ಯ ಕೌಟುಂಬಿಕ ಸಮಸ್ಯೆಗಳಿಂದ ಹಿಡಿದು ಜಾಗತಿಕ ಸಮಸ್ಯೆಗಳವರೆಗೆ ಕ್ಷಣಾರ್ಧದಲ್ಲಿ ಪರಿಹಾರವನ್ನು ಸೂಚಿಸುತ್ತಿದ್ದಾರೆ.

೪. ಬ್ರಾಹ್ಮಣರು ಉಂಡ ಎಂಜಲೆಲೆ ಮೇಲೆ ಟೆಕ್ಕಿಗಳು, ಡಾಕ್ಟರುಗಳು, ಇಂಜಿನಿಯರುಗಳು, ಅಕ್ಷರಸ್ತರು, ಅನಕ್ಷರಸ್ತರು ಹೊರಳಾಡುತ್ತಿದ್ದರೆ, "ಅದು 'ಮಡೆಸ್ನಾನ', ಆದ್ದರಿಂದ ಹೊರಳಾಡಿದವರಿಗೆ ಕೊಂಚ ಮಾನಸಿಕ ಸಮಾಧಾನ ಸಿಗುವುದಿದ್ದರೆ ಸಿಗಲಿಬಿಡಿ" ಎಂದು 'ಪ್ರಮಾಣ' ಭಾಷೆಯಲ್ಲಿ

ಪಲುಕುವ ವೈಚಾರಿಕತೆಯ ಮಂತ್ರಿ, ವೀಕ್ಲಿ ಕಂತ್ರಾಟುದಾರರು.

೫. 'ನಮ್ಮ ಮಠದ ಆಸ್ತಿ ಅಷ್ಟೇನೂ ಹೆಚ್ಚಿಲ್ಲ, ಒಂದು ಏಳೆಂಟು ನೂರು ಕೋಟಿ ಅಷ್ಟೆ, ಇದೆಲ್ಲ ನಾಡಿಯಾ ಥರದ ಹತ್ತಾರು ಜನ ಕೊಟ್ಟ ದಾನ, ಎಲ್ಲವೂ ಶುದ್ಧವಾಗಿ ಸಂಪಾದಿಸಿದ್ದು ಅಥವಾ ಹಾಗೆ ಬಂದ ಹಣವನ್ನು ನಾವು ಶುದ್ಧಿಮಾಡಿ ನಮ್ಮ ಸ್ವಿಸ್ ಬ್ಯಾಂಕುಗಳಲ್ಲಿಟ್ಟುಕೊಂಡಿದ್ದೇವೆ" ಎನ್ನುವ ಜೀವನ ಕಲೆಯ ಮಠಾಧಿಪತಿಗಳು.

೬. ಜಾತಿವಾದವನ್ನು ಪರೋಕ್ಷವಾಗಿ ಒಪ್ಪಿಕೊಳ್ಳಿ ಎಂದು ಒತ್ತಾಯಿಸುತ್ತಲೇ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಜಗದ್ಗುರುಗಳು.

೭. ಜಾತಿ ಎನ್ನುವುದೊಂದು ಬೊಬ್ಬೆಯೇ ಹೊರತು ಅಂಥಾದ್ದೇನೂ ಇಲ್ಲವೇ ಇಲ್ಲ ಎಂಬ ಸಂಶೋಧನಾ ಫಲಿತಾಂಶವನ್ನು ಪ್ರಕಟಿಸುವ ವಿಶ್ವವಿದ್ಯಾಲಯಗಳು ಇತ್ಯಾದಿ.



೮ ಕನ್ನಡದ ರಕ್ಷಣೆಗೆ ಲಾಂಗ್‌ಗಳನ್ನು ಹಿಡಿದು ನಿಂತಿರುವ ರಿಯಲ್ ಎಸ್ಟೇಟ್ ಹೋರಾಟಗಾರರು.

ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅತಿ ಮುಖ್ಯವಾಗಿ ಗೋಚರಿಸುವ ಸಂಗತಿಯೆಂದರೆ ರಾಜಕೀಯ ಅಧಿಕಾರಕೇಂದ್ರಗಳು ಅದೆಷ್ಟೇ ನೀಚವಾಗಿದ್ದರೂ ಅವುಗಳನ್ನು ವಿಧಿ ಬದ್ಧಗೊಳಿಸುವ ಧಾರ್ಮಿಕ ಕೇಂದ್ರಗಳ ವಿಜೃಂಭಣೆ ಈ ದಶಕದ ಬಹಳ ದೊಡ್ಡ ದುರಂತ. ಇವುಗಳ ನಡುವೆ ಗುರುತಿಸಬಹುದಾದ ಕೆಲವು ವೈಚಾರಿಕ ಸಂಗತಿಗಳ ಒಂದು ಅವಲೋಕನವನ್ನು ಮಾಡಲು ಪ್ರಯತ್ನಿಸಬಹುದು.

ಕನ್ನಡದ ಕಾವ್ಯ ಮೀಮಾಂಸೆ, ಜೀವನ ಮೀಮಾಂಸೆ ಮತ್ತು ಕನ್ನಡದ ಅಸ್ಮಿತೆಯನ್ನು ಕಂಡುಕೊಳ್ಳುವ ಗಂಭೀರ ಪ್ರಯತ್ನವೊಂದು ಈ ದಶಕದಲ್ಲಿ ನಡೆಯಿತು. ಮೊದಲನೆಯದಾಗಿ ಬಹುಪಾಲು ಅರ್ಧಶತಮಾನದ ಕಾಲ ವಿಶ್ವವಿದ್ಯಾಲಯಗಳಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ಅಕಾಡೆಮಿಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ವಿಧಾನಸೌಧಗಳಲ್ಲಿ, ಶಾಲೆ ಕಾಲೇಜುಗಳಲ್ಲಿ ಏಕೈಕ ಚಕ್ರವರ್ತಿಯಾಗಿ ಮೆರೆದ 'ಭಾರತೀಯ ಕಾವ್ಯಮೀಮಾಂಸೆ' ಎಂಬ ಹೆಸರಿನ ಸಂಸ್ಕೃತ ಕಾವ್ಯ ಮೀಮಾಂಸೆಯನ್ನು 'ಖಳ' ಸ್ಥಾನಕ್ಕೆ ನಿಲ್ಲಿಸುವ ಗಂಭೀರ ಪ್ರಯತ್ನವೊಂದು ನಡೆಯಿತು. ಸದಾ ಯಜಮಾನಿಕೆಯ 'ಭಾರತೀಯ'ವಾಗುವ ಅದಕ್ಕಿರುವ ಅಧಿಕಾರಶಾಹಿಗುಣದಿಂದಾಗಿಯೇ ಅದೀಗ ಅನಿವಾರ್ಯವಾಗಿ ಖಳಸ್ಥಾನದಲ್ಲಿ ನಿಲ್ಲಬೇಕಾಗಿದೆ. ಸಂಸ್ಕೃತ ಕಾವ್ಯ ಮೀಮಾಂಸೆಯು ಕನ್ನಡ ಕಾವ್ಯಮೀಮಾಂಸೆಯ ಜಾಗ ಆಕ್ರಮಿಸಿಕೊಳ್ಳಲು ಕೆಳಗಿನ ಸಮರ್ಥನೆಗಳನ್ನು ಒದಗಿಸಿಕೊಂಡಿತು:

೧. ಸಂಸ್ಕೃತ ಮೀಮಾಂಸೆಯು ಎಲ್ಲ ಭಾರತೀಯ ಭಾಷೆಗಳ ಮೀಮಾಂಸೆಯ ರೂಪುರೇಖೆಗಳನ್ನು ರೂಪಿಸಿದೆ.

೨. ರಸ, ಧ್ವನಿ, ಔಚಿತ್ಯ, ಆನಂದಗಳೇ ಭಾರತೀಯ ಕಾವ್ಯ ಮೀಮಾಂಸೆಯ ಗುರಿ.

೩. ಭಾರತೀಯ ಭಾಷೆಗಳ ಮೀಮಾಂಸಾ ತಿಳುವಳಿಕೆ ಸಂಸ್ಕೃತ ಕಾವ್ಯ ಮೀಮಾಂಸೆಗೆ 'ಪರಿಶಿಷ್ಟ'ವಾಗಿ ಇರಲಿ.

೪. ಸ್ಥಳೀಯ ಭಾಷೆಗಳಲ್ಲಿ ಪೂರ್ಣ ಪ್ರಮಾಣದ ಮೀಮಾಂಸಾ ಕೃತಿಗಳಿಲ್ಲ.

ಸಂಸ್ಕೃತ ವಸಾಹತುಶಾಹಿಯ ಈ ನಿಲುವುಗಳು ಈ ದಶಕದಲ್ಲಿ ತೀವ್ರವಾಗಿ ಪ್ರಶ್ನಿತವಾಗತೊಡಗಿದವು. ಕನ್ನಡಕ್ಕೆ ಬೇಕು ಕನ್ನಡದ್ದೇ ಆದ ವ್ಯಾಕರಣ/ಮೀಮಾಂಸೆ ಎನ್ನುವ ನಿಲುವು ಅನೇಕ ಸಂಗತಿಗಳನ್ನು ಮುನ್ನೆಲೆಗೆ ತಂದು ನಿಲ್ಲಿಸಿತು. ಮೊದಲನೆಯದಾಗಿ ಕನ್ನಡವಾಗಲೀ, ಇತರ ದೇಶಭಾಷೆಗಳಾಗಲೀ ಸಂಸ್ಕೃತಕ್ಕೆ ಪರಿಶಿಷ್ಟಗಳಾಗಬೇಕಿಲ್ಲ. ಭಾರತವನ್ನು 'ಓದಲು' ಸಂಸ್ಕೃತ, ತಮಿಳು, ಇಂಗ್ಲಿಷ್, ಹಿಂದಿಗಳಷ್ಟೇ ಅಲ್ಲ; ಕನ್ನಡವೂ ಮಾಧ್ಯಮವಾಗಬಲ್ಲದು. ಎರಡನೆಯದಾಗಿ, ಭಾರತೀಯ ಜೀವನ ಮೀಮಾಂಸೆಯ ದೇಶವಾಚಿಕೆಗಳೆನ್ನಬಹುದಾದ ಬೌದ್ಧ ಮಹಾಯಾನ, ಸಿದ್ಧ ಪಂಥಗಳು, ನಾಥಪಂಥ, ದ್ವೈತ ದರ್ಶನಗಳು ಕರ್ನಾಟಕದ ಕೊಡುಗೆ. ಹಾಗಾಗಿ ಕನ್ನಡವನ್ನು ಒಂದು ಮೀಮಾಂಸಾವಲಯವನ್ನಾಗಿ ಪರಿಗಣಿಸಲು ಬಲವಾದ ಕಾರಣಗಳಿವೆ. (ತಮಿಳು ಶಂಗಂ ಸಾಹಿತ್ಯವು ತಮಿಳುನಾಡಿನಲ್ಲಿ ಐದು ಮೀಮಾಂಸಾವಲಯಗಳನ್ನು ಗುರುತಿಸುತ್ತದೆ). ಕನ್ನಡವನ್ನು ಕೇವಲ ಪಡೆಯುವ ಭಾಷೆಯಾಗಿ ನೋಡಲಾಗಿದೆಯೇ ಹೊರತು ನೀಡಬಲ್ಲ ಭಾಷೆಯನ್ನಾಗಿ ನೋಡಿಲ್ಲ.

ಭಾರತೀಯ ಬದುಕನ್ನು 'ಉತ್ತರ ಭಾರತ ಕೇಂದ್ರಿತ' ಮಾದರಿಗಳ ಮೂಲಕ ನೋಡುವ ಕ್ರಮವನ್ನು ನಿರಾಕರಿಸಿ ಕನ್ನಡದ ಅಸ್ಮಿತೆಯನ್ನು ಕಂಡುಕೊಳ್ಳುವ ಗಂಭೀರ ಪ್ರಯತ್ನಗಳೆಂದು ಕೆ.ವಿ. ನಾರಾಯಣ ಅವರ ಬೇರು ಕಾಂಡ ಚಿಗುರು, ಕನ್ನಡ ಜಗತ್ತು – ಅರ್ಧ ಶತಮಾನ, ರಹಮತ್ ತರೀಕೆರೆ ಅವರ 'ಇಲ್ಲಿ ಯಾರೂ ಮುಖ್ಯರಲ್ಲ', ಸೂಫಿ, ನಾಥಪಂಥದ ಬಗೆಗಿನ ಕೃತಿಗಳು, ಷ. ಶೆಟ್ಟರ್ ಅವರು ಶಂಗಂ ತಮಿಳಗಂ, ಮನು ವಿ ದೇವದೇವನ್ ಅವರ ಪೃಥ್ವಿಯಲ್ಲೊದಗಿದ ಘಟವು, ಮತ್ತು ಇದೇ ಲೇಖಕನ ನಾಗಾರ್ಜುನನ ಮೂಲಮಧ್ಯಮಕಾರಿಕಾ ಹಾಗೂ ನಾಗಾರ್ಜುನ–ಅಲ್ಲಮ, ಮುಂತಾದ ಕೃತಿಗಳನ್ನು ಹೆಸರಿಸಬಹುದು. ಶೆಟ್ಟರ್ ಮತ್ತು ಮನು ವಿ ದೇವದೇವನ್ – ಈ ಇಬ್ಬರೂ ಉತ್ತರ ಭಾರತ ಕೇಂದ್ರಿತ ಇತಿಹಾಸ ಮತ್ತು ಸಂಸ್ಕೃತಿ ರಚನೆಯ ಮಾದರಿಯನ್ನು ಪ್ರಶ್ನಿಸುತ್ತಿರುವವರು. ದಕ್ಷಿಣ ಭಾರತದ ಚರಿತ್ರೆ, ಮೀಮಾಂಸೆಗಳು ಸಂಸ್ಕೃತದ, ಉತ್ತರ ಭಾರತದ ಅನುಬಂಧವಾಗುತ್ತಿರುವ ಹಿನ್ನೆಲೆಯಲ್ಲಿ ಅಂತಹ ಮಾದರಿಗಳನ್ನು ನಿರಾಕರಿಸುವ ದೃಷ್ಟಿಯಿಂದ ಈ ಅಧ್ಯಯನಗಳು ಹೆಚ್ಚು ಪ್ರಸ್ತುತ.

ದಕ್ಷಿಣ ಭಾರತವನ್ನು ಒಂದು ಭೌಗೋಳಿಕ ತಾತ್ವಿಕ ಆಕರವನ್ನಾಗಿ ಸ್ವೀಕರಿಸಿ ನಡೆಸಿರುವ, ನಡೆಸುತ್ತಿರುವ ರಹಮತ್ ಅವರ ಅಧ್ಯಯನಕ್ಕೆ ಅಪಾರ ಮಾಹಿತಿ ಸಂಗ್ರಹಣೆಯ ಒಂದು ಹೆಚ್ಚುಗಾರಿಕೆ ಇದೆ. ಆದರೆ ತಾತ್ವಿಕತೆಯನ್ನು ಕಟ್ಟುವ ಅವರ ಕ್ರಮಕ್ಕೆ ಅನೇಕ ಮಿತಿಗಳಿರಲು ಸಾಧ್ಯ. ಇದೊಂದು ಬಹುಮುಖಿಯಾದ ಪ್ರಯತ್ನ. ಆದರೆ ಅವರ ಕೆಲವು ಗೃಹೀತಗಳು ಗಂಭೀರ ತೊಡಕುಗಳನ್ನು ಒಡ್ಡಬಹುದೆನ್ನಿಸುತ್ತದೆ. "ಇಡೀ ಕನ್ನಡ ಸಾಹಿತ್ಯಕ್ಕೆ ಅದರದ್ದೆ ಆದ ಸಾಹಿತ್ಯ ಮೀಮಾಂಸೆ ಎಂಬುದು ಇಲ್ಲ. ಬಂದಿರುವ ಸಾಹಿತ್ಯರಾಶಿಯಲ್ಲಿ ವ್ಯಕ್ತವಾಗಿರುವ ಮೀಮಾಂಸೆಯನ್ನು ಸಮಗ್ರವಾಗಿ ಸಂಗ್ರಹಿಸಿ ಸೂತ್ರೀಕರಿಸಲು ಮತ್ತು ಸಾಧಾರಣೀಕರಿಸಲು ಸಾಧ್ಯವಿಲ್ಲ" ಎನ್ನುವ ಅವರ ನಿಲುವನ್ನು ಗಂಭೀರವಾಗಿ ಪರಿಶೀಲಿಸಬೇಕಾಗುತ್ತದೆ. ಇಂತಹ ಅಭಿಪ್ರಾಯಗಳನ್ನು ಸಂಸ್ಕೃತ ಕಾವ್ಯ ಮೀಮಾಂಸೆಯ ಬಗೆಗೂ ವ್ಯಕ್ತಪಡಿಸಲು ಸಾಧ್ಯವಿದೆ. ಈಗ ಸೂತ್ರೀಕರಿಸಲ್ಪಟ್ಟಿರುವ ಸಂಸ್ಕೃತ ಕಾವ್ಯಮೀಮಾಂಸೆಯು ಇಡಿಯಾಗಿ ಸಂಸ್ಕೃತ ಸಾಹಿತ್ಯರಾಶಿಯಲ್ಲಿ ಸಮಗ್ರವಾಗಿ ವ್ಯಕ್ತವಾಗಿರುವ ಮೀಮಾಂಸೆಯೇನಲ್ಲ. ಆದರೆ ಕನ್ನಡದ ಕವಿಗಳಿಗೆ, ತಾತ್ವಿಕರಿಗೆ ಕಾವ್ಯ ಮೀಮಾಂಸೆಯ ಪ್ರಸ್ಥಾನವೊಂದು ಉತ್ತರಿಸಲೇಬೇಕಾದ ಪ್ರಶ್ನೆಗಳಾವುವು ಎಂಬುದರ ಬಗೆಗೆ ಸ್ಪಷ್ಟ ಗ್ರಹಿಕೆ ಇದೆ. ಈ ಪ್ರಶ್ನೆಗಳನ್ನು ರಹಮತ್ ಅವರು ತಮ್ಮ ಸಾಹಿತ್ಯ ತತ್ವ ಚಿಂತನೆಯಲ್ಲಿ ಎದುರಾದ ಹಾಗೆ ಕಾಣಲಿಲ್ಲ. ಕಾವ್ಯ ಮೀಮಾಂಸೆಯ ಪ್ರಸ್ಥಾನವೊಂದು ಉತ್ತರಿಸಲೇಬೇಕಾದ ಕೆಲವು ಪ್ರಶ್ನೆಗಳೆಂದರೆ:

೧. ಲೋಕಸೃಷ್ಟಿಯ ಬಗೆಗೆ ಅದರ ನಿಲುವೇನು?

೨. ತನ್ನ ಸುತ್ತಲಿನ ಲೋಕ ಮತ್ತು ತನ್ನನ್ನು ಹೇಗೆ ವಿವರಿಸಿಕೊಳ್ಳುತ್ತದೆ?

೩. ಕಾವ್ಯ ಪರಿಕರಗಳು ಮತ್ತು ಕಾವ್ಯಪ್ರಯೋಜನದ ಬಗೆಗೆ ಅದರ ನಿಲುವೇನು?

೪. ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಪ್ರಮಾಣಗಳಲ್ಲಿ ಯಾವ ಪ್ರಮಾಣಗಳನ್ನು ಸ್ವೀಕರಿಸುತ್ತದೆ? ಪ್ರಮಾಣಗಳ ಸ್ವೀಕರಣೆ/ನಿರಾಕರಣೆ ಬಗೆಗೆ ಅದರ ನಿಲುವೇನು?

೫. ಕಾಲ ದೇಶಗಳನ್ನು ಹೇಗೆ ಪರಿಭಾವಿಸುತ್ತದೆ?

೬. ಲೋಕದ ಚಲನೆಯ ಕ್ರಮವನ್ನು ಏನೆಂದು ವಿವರಿಸಿಕೊಳ್ಳುತ್ತದೆ?

೭. ನಡೆ (ಕರ್ಮ) ಮತ್ತು ನುಡಿ (ಕಾವ್ಯ) ಇವುಗಳ ಸಂಬಂಧವನ್ನು ಏನೆಂದು ಪರಿಭಾವಿಸುತ್ತದೆ?

ಇತ್ಯಾದಿ ಪ್ರಶ್ನೆಗಳನ್ನು ಕನ್ನಡ ಕಾವ್ಯಮಾರ್ಗ ಎದುರಾಗಿದೆ. ಒಂದೊಂದು ಪ್ರಶ್ನೆಗೂ ಖಚಿತ ಉತ್ತರಗಳನ್ನು ಕೊಡುವ ಪ್ರಯತ್ನ ಮಾಡಿದೆ. ಕೊಟ್ಟ ಉತ್ತರಗಳಲ್ಲಿ ಏಕತೆಯನ್ನು



WITH BEST COMPLIMENTS FROM

M/S. S. N. C. Lavelin Infrastructure Pvt. Ltd

134, 2nd floor, A. V. Towers,
Mysore Road, Bangalore

ಹುಡುಕುವುದು ಸಂಸ್ಕೃತವನ್ನೂ ಸೇರಿ ಯಾವ ಭಾಷೆಗೂ ಸಾಧ್ಯವಿಲ್ಲದಿರುವುದರಿಂದ ಕನ್ನಡದಲ್ಲೂ ಅದು ಸಾಧ್ಯವಿಲ್ಲ. ಆದರೆ ಸಮಗ್ರವಾಗಿ ಕನ್ನಡದ ದನಿಗಳಲ್ಲಿ ಸಂಸ್ಕೃತದ ಹಾಗೆಯೇ ಕನ್ನಡದ ಕಾವ್ಯಮೀಮಾಂಸೆಯನ್ನು ಕಟ್ಟಲು ಸಾಧ್ಯವಿದೆ. ಭಾರತೀಯ ಮನಸ್ಸನ್ನು ಇಡಿಯಾಗಿ ಬಂಧಿಸಿದ ದ್ವೈತಾದ್ವೈತಗಳಿಂದ ಬಿಡುಗಡೆ ದೊರಕಿಸಿಕೊಡಲು ಜೈನ, ಬೌದ್ಧ, ವಚನಕಾರರು, ಆಜೀವಿಕರು, ಚಾರ್ವಾಕರ ತಾತ್ವಿಕ ಪ್ರಯತ್ನಗಳು ಕೂಡ ಅಷ್ಟೇ ಗಂಭೀರವಾದವುಗಳು. ಆದರೆ ಅವುಗಳನ್ನು ವಿಸ್ಮೃತಿಗೆ ತಳ್ಳುವ ದುಷ್ಟ ಸಾಂಸ್ಕೃತಿಕ ರಾಜಕಾರಣ ಸದಾ ಕ್ರಿಯಾಶೀಲವಾಗಿರುವುದರಿಂದ ಶ್ರಮಣಧಾರೆಗಳಿಂದ ದೊರಕಿರುವ ಮೀಮಂಸಾ ಪರಿಕಲ್ಪನೆಗಳನ್ನು ಮತ್ತೊಮ್ಮೆ ನೆನಪಿಸಿಕೊಡುವ ಅಗತ್ಯವಿದೆ.

ಈ ವಸಾಹತುಶಾಹಿಯಿಂದ ಬಿಡುಗಡೆ ನೀಡಿ, ಸ್ವತಂತ್ರವಾದ ಸರಿದಾರಿಯಲ್ಲಿ ನಡೆಸುವ ಪ್ರಯತ್ನಗಳು ಇಲ್ಲಿ ನಡೆದವೆ ಎನ್ನುವ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿದೆ. ಇದೊಂದು ಸಂಕೀರ್ಣ ಸಮಸ್ಯೆ. ಒಮ್ಮೆ ವಸಾಹತುಶಾಹಿಗೊಳಗಾದ ಜೀವನಕ್ರಮವು ಅನೇಕ ರೀತಿಯ ವ್ಯಾಖ್ಯಾನಗಳಿಗೊಳಪಡುತ್ತದೆ. ನಂತರ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ಹುಡುಕಾಟಗಳು ಶುರುವಾಗುತ್ತವೆ. ಹಾಗೆಯೇ ಅದನ್ನು ಹತ್ತಿಕ್ಕುವ ಪ್ರಕ್ರಿಯೆಯೂ ಅಷ್ಟೇ ಗಂಭೀರವಾಗಿ ನಡೆಯುತ್ತಾ ಬರುತ್ತವೆ. ಈ ಸಂಘರ್ಷದಲ್ಲಿ ಹೈರಾಣಾದ ಭಾರತೀಯ ಮನಸ್ಸು, ದೇಹ, ಜೀವನಕ್ರಮಗಳು ದಣಿದು ಹೋಗಿವೆ. ಕನ್ನಡಕ್ಕೆ ಕನ್ನಡದ್ದೇ ಆದ ಕಾವ್ಯಮೀಮಾಂಸೆಯನ್ನು ಹುಡುಕಿಕೊಳ್ಳುವ ಪ್ರಯತ್ನ ಕನ್ನಡದಲ್ಲಿ ಆರಂಭವಾಗಿರುವುದಂತೂ ನಿಜ.

ಕಳೆದ ದಶಕದ ಮತ್ತೊಂದು ನೆನೆಯಬೇಕಾದ ವೈಚಾರಿಕ ಘಟನೆಯೆಂದರೆ ಕನ್ನಡಕ್ಕೆ ದೊರಕಿದ ಶಾಸ್ತ್ರೀಯ ಭಾಷೆಯ ಸ್ಥಾನಮಾನ. ಇದೇನು ಕನ್ನಡಕ್ಕೆ ದೊರಕಿದ ಹೆಮ್ಮೆಯೋ ಅಥವಾ ಕನ್ನಡದ ಸಮೂಹ ಹೊರಬೇಕಾದ ಭಾರವೋ ಎನ್ನುವುದಿನ್ನೂ ಸ್ಪಷ್ಟವಾಗುತ್ತಿಲ್ಲ. ಉತ್ತರದ ಯಜಮಾನಿಕೆಯ ನಿರಾಕರಣೆಯ ಭಾಗವಾಗಿ ತಮಿಳುನಾಡು ನಡೆಸಿದ ಸಾಂಸ್ಕೃತಿಕ ಸಂಘರ್ಷದ ಉಪಉತ್ಪನ್ನವಾಗಿ ಬಂದಿರುವ ಈ ಸ್ಥಾನಮಾನದ ನಿರ್ವಹಣೆಯ ಬಗೆಗೆ ಕನ್ನಡಕ್ಕಿನ್ನೂ ಸ್ಪಷ್ಟತೆಯಿದ್ದಂತಿಲ್ಲ. ಬಹುದೀರ್ಘಕಾಲೀನ ಚರಿತ್ರೆ ಇರುವ ಭಾಷೆಗಳ ದೊಡ್ಡ ತೊಡಕೆಂದರೆ ಅಲ್ಲೆಲ್ಲ ಗೊಡ್ಡು ಮಾಹಿತಿಯ (non-sensical) ಅಪಾರ ಸಾಹಿತ್ಯ ಸಂಗ್ರಹ ಇರುತ್ತದೆ. ಹಾಗೆ ಇದೆ ಎಂದ ಮಾತ್ರಕ್ಕೆ ಭಾಷೆಯೊಂದು ಶಾಸ್ತ್ರೀಯವೆಂದಾಗಲೀ, ಶ್ರೇಷ್ಠವೆಂದಾಗಲೀ ತೀರ್ಮಾನಿಸಲಾಗದು. ಕೇವಲ ಪ್ರಾಚೀನತೆಯ ಸಮರ್ಥನೆ ಅತಾರ್ಕಿಕ. ಈ ಭಾಷಾಭಾರವನ್ನು ಅನಗತ್ಯವಾಗಿ ಹೊರಬೇಕಾದ ಸಮೂಹ ಆ ಭಾರವನ್ನು ನಿವಾರಿಸಿಕೊಳ್ಳಲು ದೊಡ್ಡ ಹೋರಾಟವನ್ನೆ ಮಾಡಬೇಕಾಗುತ್ತದೆ. (ಹಿಂದಣ ಕಪಿಗಳೆಲ್ಲ ಎನ್ನ ತೊತ್ತಿನ ಮಕ್ಕಳು. . ಮುಂದಣ ಕಪಿಗಳೆನ್ನ ಲೆಂಕ ಡಿಂಗರಿಗರು.. ಎಂಬ ಅಲ್ಲಮನ ವಚನ ನೆನಪಾಗುತ್ತಿದೆ). ಹಾಗೆಯೇ ಯಾವ ದಾಖಲಾತಿಯನ್ನೂ ಮಾಡದ ಹಕ್ಕಿ ಪಿಕ್ಕಿಗಳ ಭಾಷೆ ವರ್ತಮಾನದ ಸತ್ಯವನ್ನು



ಹಿಡಿಯಲಾರದೆಂದು ನನಗೆ ಅನ್ನಿಸುವುದಿಲ್ಲ. ಇನ್ನುಮುಂದೆ ದೊಡ್ಡದರ ಪ್ರಭಾವಲಯದಲ್ಲಿ ಕುಟುಕುಜೀವ ಇಟ್ಟುಕೊಂಡು ಬದುಕುತ್ತಿರುವ ಕಿರುಭಾಷೆಗಳನ್ನು ಯಾರೂ ಮಾತನಾಡಿಸದಂತಾಗುತ್ತದೆ. ಇದರ ನಡುವೆ ಇದುವರೆಗೆ ಭಾಷೆಯಿಲ್ಲದೆ ನುಡಿಯಲಾಗದ ಅನೇಕ ಸಮೂಹಗಳು ತಮ್ಮನ್ನು ಕೇಳಿಸಿಕೊಳ್ಳುವಂತೆ ಮಾಡಬಲ್ಲ ಭಾಷೆಗಾಗಿ ತಡಕಾಡುತ್ತಲೇ ಇವೆ. ಅಂತಹ ಸಮೂಹಗಳಿಗೆ ಒಂದೆರೆಡು ಉದಾಹರಣೆಗಳೆಂದರೆ: ಮಂಗಳಮುಖಿಯರು, ಸಿರಿಧಾನ್ಯಗಳು, ಹೆಣ್ಣುಮಕ್ಕಳು ಮತ್ತು ಕಾಡುಮೇಡುಗಳಲ್ಲಿದ್ದು ಈಗ ಕಾಡೂ ಇಲ್ಲದೆ ನಾಡೂ ಇಲ್ಲದೆ 'ಕಾಡು ಪಾಲಾಗಿರುವ' ಬುಡಕಟ್ಟು ಜನ ಇತ್ಯಾದಿ. ಈ ಆತಂಕಕ್ಕೆ ಇಂಬು ಕೊಡುವ ಸಂಗತಿಯೆಂದರೆ ಕಳೆದ ಶತಮಾನದ ಕನ್ನಡ ಸಾಹಿತ್ಯದ "ಓದು" ನಿಷ್ಪಕ್ಷಪಾತವಾದುದೇನಲ್ಲ. ಸಮೂಹದ ಕಾವ್ಯ ಸಂವೇದನೆಗೂ ಕನ್ನಡದ ಓದನ್ನು ನಡೆಸುವ ಅಕೆಡೆಮಿಕ್ ಸಂಸ್ಥೆಗಳ ಕಾವ್ಯ ನಿರ್ಧಾರಕ್ಕೂ ಯಾವ ತಾಳ ಮೇಳ ಇದ್ದಂತಿಲ್ಲ. ಕನ್ನಡಕಾವ್ಯದ ಸ್ಥಾನಕ್ಕೇರಲು ನಡೆಯುವ ಈ ಪೈಪೋಟಿಯಲ್ಲಿ ಗೆಲುವು ಯಾವಾಗಲೂ ಯಾರದ್ದೆಂದು ಈಗ ಎಲ್ಲರಿಗೂ ಅರಿವಾಗುತ್ತಿದೆ.

ಈ ದಶಕದ ಮಾಧ್ಯಮದ ಒಂದು ದುಷ್ಟ ಬೆಳವಣಿಗೆಯನ್ನು ಇಲ್ಲಿ ದಾಖಲಿಸಬೇಕು. ವಿಶೇಷವಾಗಿ ಇ – ಮಾಧ್ಯಮ ಮತ್ತು ಸಾಂಸ್ಕೃತಿಕ ವಸಾಹತುಶಾಹಿಯ ಅನೈತಿಕ ಸಂಬಂಧದ ಫಲವಾಗಿರುವ ಈ ಬೆಳವಣಿಗೆಯ ಮುಖ್ಯ ಉದ್ದೇಶವೆಂದರೆ ಜನಸಮೂಹದ ನಿಸರ್ಗವಿವೇಕ ಮತ್ತು ಸಾಮಾನ್ಯ ತರ್ಕದ ನಾಶ. ತಂತ್ರಜ್ಞಾನದ ಜಗತ್ತು ಅತ್ಯಂತ ವೇಗವಾಗಿ ಮುನ್ನುಗ್ಗುತ್ತಿದ್ದರೆ, ಅದನ್ನೆ ಬಳಸಿಕೊಂಡು ಸಮೂಹವನ್ನು ಶತಮಾನಗಳಷ್ಟು ಕಾಲ ಹಿಂದಕ್ಕೆ ತಳ್ಳುವ ಹುನ್ನಾರ ನಡೆಯುತ್ತಿದೆ. ದಿನ ಬೆಳಗಾದರೆ ಹೊಸ ಹೊಸ ಪ್ರಮಾಣಗಳನ್ನು, ಸಂಕೇತಗಳನ್ನು ಸೃಷ್ಟಿಸಿ ಮಾರುಕಟ್ಟೆಗೆ ಬಿಡಲಾಗುತ್ತಿದೆ.

ಕಳೆದ ದಶಕದಲ್ಲಿ ಮೂಡಿದ ಒಂದು ವೈಚಾರಿಕ ಎಚ್ಚರ ಒಂದಷ್ಟು ಭರವಸೆಯನ್ನು ಒದಗಿಸಿದೆ. ಕೃಷಿಕ್ಷೇತ್ರದಲ್ಲಿ ಕಂಡುಬಂದ ಈ ಎಚ್ಚರ ನಮ್ಮ ಅನ್ನವನ್ನು ಅನ್ನವಾಗಿ ಉಳಿಸಿಕೊಡುವ ಪ್ರಯತ್ನ ಮಾಡುತ್ತಿದೆ. ಮಸನೊಬು ಫುಕುವೊಕ, ಸುಭಾಷ್ ಪಾಳೇಕಾರ್, ಮುಂತಾದವರಿಂದ ಪ್ರಾರಂಭವಾದ ಈ ಹುಡುಕಾಟದಲ್ಲಿ ತೊಡಗಿರುವ ಶಿವನಂಜಯ್ಯ ಬಾಳೆಕಾಯಿ, ರಂಗಾಪುರದ ಮಹಾಲಿಂಗಯ್ಯ, ತೋಪಿನಕರಯ ಪದ್ಮರಾಜು, ಅಮ್ಮನಘಟ್ಟ ಶಂಕರಪ್ಪ, ಮಾರಗೊಂಡನಹಳ್ಳಿ ಸದಾಶಿವಯ್ಯ, ಬನ್ನೂರು ಕೃಷ್ಣಪ್ಪ, ಡಿ.ಡಿ. ಭರಮಗೌಡರ್, ಸುರೇಶ್ ದೇಸಾಯಿ ಬೇಡಕಿಹಾಳ್ . ಎಲ್. ನಾರಾಯಣರೆಡ್ಡಿ, ಜಿ.ಎಸ್. ಗಿಡ್ಡೇಗೌಡ, ಬನ್ನೂರು ಕೃಷ್ಣಪ್ಪ, ಎ.ಪಿ. ಚಂದ್ರಶೇಖರ್, ಕೈಲಾಸಮೂರ್ತಿ, ಜೋಡಿದಾರ್ ರಾಜಣ್ಣ, ವಿವೇಕ್ ಕಾರಿಯಪ್ಪ, ಜೂಲಿ ಕಾರಿಯಪ್ಪ, ಶಂಕರ ಹೆಗಡೆ ಹಾಲೇನಹಳ್ಳಿ, ಚಿನ್ನ ವಿಠಲರಾವ್, ಅಯ್ಯಪ್ಪ ಮಸಗಿ, ಶಂಕರ ಹೆಗಡೆ, ಚೆನ್ನಬಸಪ್ಪ ಕಂಬಳಿ – (.ಇಂತಹ ನೂರಾರು ಹೆಸರುಗಳನ್ನು ಇಲ್ಲಿ ದಾಖಲಿಸಬೇಕು). ಇವರೆಲ್ಲ ಕೃಷಿಕ್ಷೇತ್ರದಲ್ಲಿ ನಡೆಸುತ್ತಿರುವ 'ನಿಸರ್ಗವಿವೇಕದೊಡನೆ ಅನ್ನದ ಉತ್ಪಾದನೆ' ನಮ್ಮ ತಟ್ಟೆಗೆ ವಿಷರಹಿತ ಅನ್ನವನ್ನೂ ನಮ್ಮ ಬದುಕಿಗೆ ಸರಿಯಾದ ಜೀವನ ಮೀಮಾಂಸೆಯನ್ನೂ ಒದಗಿಸಬಲ್ಲದು. ಕೃಷಿ ವಿಶ್ವ ವಿದ್ಯಾಲಯದಂತಹ ಸಂಸ್ಥೆಗಳು ಮತ್ತು ಕೆಲವು ಇ–ಮಾಧ್ಯಮಗಳು ಇಂತಹ ಬೆಳವಣಿಗೆಗೆ ದನಿ ಒದಗಿಸುತ್ತಿರುವುದು ಮೆಚ್ಚಬೇಕಾದ ಸಂಗತಿಯಾಗಿದೆ. ಈ ಚಳವಳಿ ಸಮೂಹದ ಪಾಲ್ಗೊಳ್ಳುವಿಕೆಯ ನಿರೀಕ್ಷೆಯಲ್ಲಿದೆ. ಇಂತಹ ನಿರೀಕ್ಷೆಗೆ ಅರ್ಹರಾಗಿ ಉಳಿಯುವ ವೈಚಾರಿಕ ಎಚ್ಚರವು ನಮ್ಮಲ್ಲಿ ಉಳಿಯಲಿ ಎಂದು ಆಶಿಸುತ್ತೇನೆ.

(ದಿನಾಂಕ ೧೭ನೇ ಸೆಪ್ಟೆಂಬರ್ ೨೦೧೧ ರಂದು ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧದ ಸಾರರೂಪ)



ಡಾ|| ಎಸ್. ನಟರಾಜ ಬೂದಾಳು

ತತ್ವ ಪದಗಳು, ದಲಿತ ಕಾವ್ಯದ ಸಂಕಲನ, ಬೌದ್ಧ ಧರ್ಮ ಮತ್ತು ಅಲ್ಲಮ ಪ್ರಭುವಿನಲ್ಲಿ ಶೂನ್ಯತೆಯ ಪರಿಕಲ್ಪನೆಯ ಸಂಶೋಧನಾತ್ಮಕ ಕೃತಿಗಳ ಪ್ರಕಟಣೆಯಿಂದ ಗಮನ ಸೆಳೆದಿದ್ದಾರೆ. ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪು. ತಿ. ನ ಶ್ರೇಷ್ಠ ಕಾವ್ಯ ಪ್ರಶಸ್ತಿಗಳನ್ನು ಪಡೆದ ಇವರು ಪ್ರಸ್ತುತ ಗುಬ್ಬಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು.



ದೃಶ್ಯ -೧

(ಸುತ್ತಲೂ ಮಂದ ಬೆಳಕು.)

(ರಾತ್ರಿ ನಿವೇದಕನೊಬ್ಬ ಸರ್ಕಲ್‌ವೊಂದರಲ್ಲಿ ನಿಂತಿದ್ದಾನೆ. ಕೊರಳಲ್ಲಿ ಜೋತು ಬಿಟ್ಟ ಚೀಲ. ಸಾಧಾರಣ ಮುವತ್ತೈದರಿಂದ ನಲವತ್ತು ವಯಸ್ಸಿರಬಹುದು. ಆ ಸರ್ಕಲ್ಲಿನ ಸುತ್ತಲೂ ರಾಜಕಾರಣಿಗಳ ಹೊಗಳಿಕೆಯ ಫ್ಲೆಕ್ಸುಗಳಿವೆ. ಸರಕಾರದ ಯೋಜನೆಗಳು, ಸಂಘಟನೆಗಳ ಕಾರ್ಯಕ್ರಮ ಹೇಳುವವು ಕೂಡ ಇವೆ. ಆ ವೃತ್ತದ ಮಧ್ಯದಲ್ಲಿ ಧ್ಯಾನಸ್ಥನಾಗಿ ಕುಳಿತ ಭಂಗಿಯ ಗಾಂಧೀಜಿ ಪ್ರತಿಮೆಯಿದೆ.)

ನಿವೇದಕ: ನಾನು ಥಲೋ ನಡುರಾತ್ರೀನ ಟಪಕ್ಕಂತ ಈ ಊರಿನ ಸರ್ಕಲ್ಲಿನ್ಯಾಗ ಉದುರಿಬಿದ್ದಿನಲ್ಲ! ಅದು ಸಹ ರಾತ್ರಿ ಖಾಸಗಿ ಮಾಡೋರಹಂಗ, ಜೈಲಿನಿಂದ ಪಲಾಯನಗೈದವರಂಗ. (ಒಮ್ಮೆ ಸುತ್ತಲೂ ನೋಡುವನು.) ಅರೆ ವ್ಹಾ! ಎಮ್ಮೆಲ್ಲೇ ಸಾಹೇಬರು, ಎಂಪಿ ದೊರೆಗಳು ಅದೆಷ್ಟು ಛಂದ ಕಾಣ್ತಾರಲ್ಲ ಈ ಫ್ಲೆಕ್ಸುಗಳೊಳಗ! ಎಂಥ ನಿಲುವು ಏನ್ ಭಂಗಿ! ನಗುಮುಖ ಇದ್ದರ ಈ ನಮ್ಮ ಮಂತ್ರಿ ಮಹೋದ್ಯಯರಂಗ ಇರಬೇಕು ನೊಡ್ರಪ... (ಫ್ಲೆಕ್ಸ್ ಹೋರ್ಡಿಂಗ್ ಒಂದನ್ನು ನಿರುಕಿಸಿ ನೋಡಿ) ಆದರ, ಈ ಡೊಳ್ಳು ಬಡಿ ಕಂಪನಿ ಮಾತ್ರ ನನಗ ಸೇರಲಿಲ್ಲ ನೋಡ್ರಿ.. ರಾವಣನ ತಲಿಯಿದ್ದಂಗ ಈ ಭಟ್ಟಂಗಿಗಳ ಸಾಲು ತಲಿ! ಅಂದರ ಒಂದ ನಮೂನಿ ಫಲಾನುಭವಿಗಳು.. ಹೊಗಳೋದು, ತಲಿ ಹೊಡೆಯೋದು!

ಅರೆರೆ, ಈ ಶಾಸಕ ಮಹಾಶಯರು ಮೊಬೈಲು ಹಿಡಕೊಂಡ್ಯನ ಮುನ್ನುಗ್ಗತಿದಾರ... ಅವರ ಪಕ್ಕದೊಳಗ ದೇಶ ರಕ್ಷಣೆ, ಜನಕಲ್ಯಾಣ, ಸುಭೀಕ್ಷ ರಾಜ್ಯಗಳ ಸ್ಲೋಗನ್ನುಗಳು... ಆಹಾಹಾ! ಓದಲಿಕ್ಕ... ಓದಿ ಅನುಭವಿಸೋದರೊಳಗ್ಯನ ಮಂದಿ ಸುಖಿಸಿ ಸಂತೋಷ ಪಟ್ಟಿರಬೇಕು. ಆದರ ವಾಸ್ತವ ಬ್ಯಾರೇನ್ಯ ಅದ... ತೀರ ಭಯಾನಕಲ್ಲ?

(ತಿರುಗಿ ಬಾಪೂನ ಪುತ್ಥಳಿ ಗಮನಿಸುವನು)

(ವಿನಮ್ರನಾಗಿ) ಬಾಪೂ... ಇವರ ಮಧ್ಯೆ ನೀ ಅದ್ಹೆಂಗ ಇರತಿಯಪ್ಪ! ನಿನಗ ಉಸಿರುಗಟ್ಟೋದಿಲ್ಲೇನು? ನಾನು ಮಾಡಿದ ಹೋರಾಟ ಹುಸಿ ಆತು ಅಂತ ಅನಿಸೋದಿಲ್ಲೇನು? ಇವರು ಮಾಡಿದ ಕಾರುಬಾರು, ಹಗರಣಗಳ ಕಂಡು ಹೇಸಿಗೆ ಅನಿಸೋದಿಲ್ಲೇನು? (ತುಸು ತಡೆದು) ಮರೆತೆ ಬಾಪೂ ಕ್ಷಮಿಸು... ನೀನು ಇವರ ಢೋಂಗಿತನ ನೋಡೋದಕ್ಕ ಆಗದನೆ ಕಣ್ಮುಚ್ಚಿ ಧ್ಯಾನಸ್ಥನಾಗಿ ಕೂತಿದ್ದಿ... ಭೇಷ್ ! ಈ ನಿನ್ನ ಶಾಂತಭಂಗಿಗೆ ನಾ ತಲೆದೂಗಿದ್ನಿ ಆದರ, ನೀ ಹಿಂಗ ಕೂರೋದನ್ನ ಬಯಸೋ ಜನ ಇವರು... ಇವರ ಬಾಯಿ ಚಪಲಕ್ಕ 'ಗಾಂಧಿ' ಶಬ್ದಬೇಕು ಅಷ್ಟ... ಅದನ್ನ ಪಠನ ಮಾಡೀನ ದೇಶಾನ್ಯ ಈ ಸ್ಥಿತಿಗಿ ತಂದಾರು... ಒಮ್ಮಿ ಕಣ್ಣುಬಿಡು... ಬಿಡು ಕಣ್ಣ... ಶಿವನ ಮೂರನೇ ಕಣ್ಣ ಬಿಟ್ಟಾಂಗ ಆಗಬೇಕು ನೋಡು... ಕೆಟ್ಟದ್ದಲ್ಲ ಸುಟ್ಟು ಹೋಗಬೇಕು! ಹಾಳಾಗಿ ಹೋಗಬೇಕು...

(ಪುತ್ಥಳಿ ಕಟ್ಟೆ ಮೇಲೆ ಕೂರುತ್ತ)

ನನಗ ಉಸಿರುಗಟ್ಟಿಂದಂಗ ಅನಿಸಲಿಕ್ಕೆ ಹತ್ತೇದ... ನಾ ಇಲ್ಲೆ... ಇಲ್ಲೆ ಜರಾ ಒರಗುತೀನಿ ಬಾಪೂ...

(ನಿವೇದಕ ಕಟ್ಟೆಯ ಮೇಲೆ ಮಲಗುವನು. ಮಂದ ಬೆಳಕು. ಫ್ಲೆಕ್ಸಿನ ಮೇಲಿದ್ದ ಒಂದಿಬ್ಬರು ಎಮ್ಮೆಲ್ಲೆ ಮತ್ತು ಎಂಪಿ ಸಾಹೇಬರು ತಮ್ಮ ಭಟ್ಟಂಗಿಗಳನ್ನು ಕರೆದುಕೊಂಡು ಕೆಳಗಿಳಿದು ಬರುವರು. ನೀರವ ರಾತ್ರಿ. ದೂರದಲ್ಲೆಲ್ಲೋ ನಾಯಿ ಊಳಿಡುತ್ತಿದೆ)

ಎಮ್ಮೆಲ್ಲೆ : ಇಂವ ಬಾಪೂ ಜೋಡಿ ಮಾತಾಡಿದ್ದು ಕೇಳಿದಿಯೇನು?

ಎಂಪಿ : ಹೌಂದು ಕೇಳಿದ್ನಿ!

ಎಮ್ಮೆಲ್ಲೆ : ಈತ ಮಾತಾಡಿದ ಇಚಾರಗಳನ್ನ ಕೇಳಿದರ ಇವ ಬ್ಯಾರೇನ ಇರಬೇಕು ಅಲ್ಲ?

ಎಂಪಿ : ಈ ನಮ್ಮ ವ್ಯವಸ್ಥಾದೊಳಗಿನ ಬಹುಸಂಖ್ಯಾತ ಫಲಾಪೇಕ್ಷಿ ವರ್ಗದೋನಲ್ಲ... ಅಪೇಕ್ಷೆಯ ವೈರಸ್ ಈತನಿಗೆ ತಗಲಿಲ್ಲ. ಹಂಗಾಗಿ 'ಜೊಲ್ಲು' ರಹಿತನೀತ!

ಎಮ್ಮೆಲೆ : ಹಂಗಂದರ ಯಾರು? ಏನು?

ಎಂಪಿ : (ಸಿಟ್ಟಿಂದ) ಥೂ ನಿಮ್ಮಪ್ಪನ! ಯಾವನು ಮಾಡಿದಲೆ ನಿನ್ನ ಎಮ್ಮೆಲ್ಲೇನ!?

(ಎಮ್ಮೆಲೆ ಸಾಹೇಬರು ಮತ್ತು ಭಟ್ಟಂಗಿಗಳು ಚಕಿತರಾಗುವರು.)

ಜೊಲ್ಲು, ಎಂಜಲು ಗೊತ್ತಿಲ್ಲ?... ಮಡೆಸ್ನಾನಕ್ಕ ಲಾಯಕ್ಕ ನೋಡು! (ತುಸು ಸಹಜನಾಗಿ) ಹಂಗಂದರ, ನಾವುಗಳು ಎಸೆಯೋ ಆಸೆಗಳ ಅಮಲಿಗೆ ಒಳಗಾಗದೋನು... ಜೊಲ್ಲು ಸುರಿಸದ್ಯ ಇರೋನು...

ಭಟ್ಟಂಗಿ ೧ : ಸಾಹೇಬರ... ಇವ ನಕ್ಸಲೈಟ್ ಇರಬೇಕು ಅಂತೀನಿ.

ಭಟ್ಟಂಗಿ ೨ : ಎಡಬಡಂಗಿಯಿರಬೇಕು.

ಭಟ್ಟಂಗಿ ೪ : ಎಡಬಡಂಗಿ ಅಲ್ಲಲೆ ಭೋಸುಡಿಕೆ, ಎಡಪಂಥೀಯ... ಬಡವರ, ದೀನರ ಬಗ್ಗೆ ಥಡಪಡಿಸೋನು...

ಎಂಪಿ : ಸಾಕು ಮಾಡಿರಲೆ ನಾಲಾಯಕ್ಕ ಮಕ್ಕಳಿರ್ಯಾ... ಹೇಳೋದಷ್ಟ ಮಾಡಿರಿ.

ಭಟ್ಟಂಗಿ ೩. : ಏನು ಮಾಡೋದು ಅಂತೀರಿ ಸಾಹೇಬರ?

ಎಂಪಿ : ಎತ್ತರಲೆ ಇವನ್ನ... (ಭಟ್ಟಂಗಿ ೧ ಗೆ) ಗೋಣಿಚೀಲ ತಗೊಂಡು ಬಾ.

ಎಮ್ಮೆಲ್ಲೆ : ಆಂ. ಮೈಮ್ಯಾಲಿ ಬಂದೀತು ರಿ...

ಎಂಪಿ : ಹೂಂ... ಬಾಯಿಗೆ ಅರಿವೆ ತುರುಕಿ ಕೈಕಾಲು ಕಟ್ಟಿರಿ

ನಾಟಕ

ಕಿರುನಾಟಕ

ಆ ಸರ್ಕಲ್ಲು ...

ಡಿ. ಎಸ್. ಚೌಗಲೆ



(ಭಟ್ಟಂಗಿಗಳು ನಿವೇದಕನನ್ನು ಹಿಡಿಯುವರು. ಒಬ್ಬ ಬಾಯಿಗೆ ಕೈ ಹಾಕಿದರೆ ಉಳಿದೋರು ಆತನ ಕೈ ಕಾಲು ಕಟ್ಟುವ ವ್ಯವಸ್ಥೆಗೆ ತೊಡಗುವರು. ನಿವೇದಕ 'ಬಿಡ್ರಿ ನನ್ನ ... ನನ್ನ ಹಿಂಗ ಕಟ್ಟಿ ಎಲ್ಲಿ ಒಯ್ಯಾಕತ್ತೇರಿ... ಅಯ್ಯೋ... ಬಿಡ್ರಪ್ಪೋ... ನಿಮ್ಮ ಕಾಲಿಗೆ ಬೀಳ್ತಿನಿ... ಕಿರುಚುವನು. ಎಚ್ಚರಾಗುವನು. ಬೆಳಕು ಹರಿಯುತ್ತಿದೆ. ಸುತ್ತಲೂ ಫ್ಲೆಕ್ಸು ಹೋರ್ಡಿಂಗ್‌ಗಳನ್ನು ಗಮನಿಸುವನು. ಎಲ್ಲರೂ ಅವರವರ ಸ್ಥಾನದಲ್ಲಿದ್ದಾರೆ. ಬಾಪೂ ಸ್ಥಿತಪ್ರಜ್ಞನಾಗಿ ಧ್ಯಾನಸ್ಥ ಭಂಗಿಯಲ್ಲಿದ್ದಾನೆ. ಸರ್ಕಲ್ಲು ನಿಧಾನಕ್ಕೆ ಬೆಳಕಿಗೆ ಒಡ್ಡುತ್ತಿದ್ದಂತೆ ನಿವೇದಕ ನಿರ್ಗಮಿಸುವನು. ಕತ್ತಲೆ)

ದೃಶ್ಯ ೨

(ರಾತ್ರಿ ನಿವೇದಕ ಮತ್ತೊಂದು ಸರ್ಕಲ್ಲಿಗೆ ಬರುವನು. ಅಲ್ಲಿಯೂ ಸುತ್ತಲೂ ಫ್ಲೆಕ್ಸು ಹಚ್ಚಿದ ಹೋರ್ಡಿಂಗ್‌ಗಳಿವೆ. ಪ್ರವಾಹ ಪೀಡಿತರಿಗೆ ವಾಸದ ಮನೆ, ಹೊಸ ಬಡಾವಣೆಯನ್ನೇ ಸೃಷ್ಟಿಸಿ ಕೊಡುವ ಯೋಜನೆಯ ಚಿತ್ರಗಳು. ಬಿರುಬಿಸಿಲಲ್ಲಿ ಬದುಕುವವರ ತಗಡು ಶೆಡ್ಡಿನ ಚಿತ್ರಗಳು.)

(ಒಮ್ಮೆಲೆ ಮಿಂಚು ಹೊಡೆದಂತೆ ಬೆಳಕು ಚಿಮ್ಮಿತು. ಅಲ್ಲೊಂದು ತಗಡು ಶೆಡ್ಡು ತೆರೆದುಕೊಂಡಿತು. ಅರೆಬೆತ್ತಲೆ ಮಕ್ಕಳು ನೀರಿನ ಹೊಂಡದಲ್ಲಿ ಆಡುತ್ತಿದ್ದಾರೆ. ಹೆಂಗಸರು ಮನೆಗೆಲಸದಲ್ಲಿ ನಿರತರು. ಕೈಲಾಗದವರು, ವೃದ್ಧರು ಬೀಡಿ, ಚಲುಮಿ ಸೇದುತ್ತ ಕುಳಿತಿದ್ದಾರೆ. ಪಕ್ಕದಲ್ಲಿ ಅತಿ ವೃಷ್ಟಿಯಿಂದ ಮನೆಗಳು ಧ್ವಂಸಗೊಂಡಿವೆ.)

(ನಿವೇದಕ, ಬಿದ್ದಮನೆಗಳತ್ತ ಬರುವನು. ಅಲ್ಲಿಬ್ಬರು ಬಿದ್ದ ಹಾಳು ಗೋಡೆಗೆ ಆತು ಫೋಟೋ ತೆಗೆಸಿಕೊಳ್ಳುತ್ತಿದ್ದಾರೆ.)

ನಿವೇದಕ : ಪಾಪ, ಅತಿವೃಷ್ಟಿಗೆ ಇವರ ಮನೆಗಳು ನೆಲಕ್ಕ ಉರುಳ್ಯಾವ... (ಹತ್ತಿರ ಹೋಗಿ) ನಮಸ್ಕಾರ... ನಿಮ್ಮ ಕಷ್ಟ, ಹಾನಿ, ನೋವುಗಳು ಹೇಳತೀರದಷ್ಟ ಆಗ್ಯಾವ... ಕೆಲವರು ಜೀವ ಕಳಕೊಂಡಾರಂತ ಕೇಳೇನಿ, ಓದೇನಿ, ಛೆ ಛೆ... ಪ್ರಕೃತಿ ಹಿಂಗ ಮುನಿಸಿಕೊಬಾರದಿತ್ತು... (ಅವರು ಬೇರೆ ಬೇರೆ ಭಂಗಿಗಳಲ್ಲಿ ಫೋಟೋ ತೆಗೆಸಿಕೊಳ್ಳುವುದರಲ್ಲಿಯೇ ಮಗ್ನರು.)

ನೀವ ಹಿಂಗ ಮಾಡಿರಿ... ಸರಕಾರಕ್ಕೆ ಪರಿಹಾರ ಕೇಳಿ ಅರ್ಜಿ ಬರೀರಿ... ನಾನೂ ನಿಮ್ಮ ಜೋಡಿ ಇರತೀನಿ... ಹೋರಾಟ ಮಾಡಿ ಪರಿಹಾರ ಕೊಡಿಸ್ತೀನಿ... ಬೇಕಾರ ಛಲೋ ಮನೀನ ಕಟ್ಟಿಸಿಕೊಡ್ತೀನಿ...

ಒಬ್ಬ : ಮತ್ತ ನಾವೀಗ ಫೋಟೋ ಯದಕ್ಕ ತೆಗೆಸಿಕೊಳ್ಳಾಕತ್ತೀವಿ... ಛಂದಕ್ಕಂತ ತಿಳಿದಿರೇನು?

ಮತ್ತೊಬ್ಬ: ನೀವ ಹೇಳಾಕ ಹೊಂಟಿರಲ್ಲ... ಅದನ್ನ ಮಾಡಾಕನ!

ನಿವೇದಕ: ಭೇಷ್, ಛಲೋ ಮಾಡಿದಿರಿ... ಸೂಜ್ಞ ನಾಗರಿಕರು ಆಗೇರಿ... ನಾನು ಬೇಕಾದರ ನಿಮಗ ಮದತ ಮಾಡತೀನಿ...

ಒಬ್ಬ : ಏನೂ ಬೇಡ... ನಮ್ಮದು ನಾವು ನೋಡ್ಕೋತೀವಿ... (ಫೋಟೋ ವಿವಿಧ ರೀತಿಯಲ್ಲಿ ಬಿದ್ದಗೋಡೆಗಳ ಹಿನ್ನೆಲೆಯಲ್ಲಿ ತೆಗೆಸಿಕೊಳ್ಳುವರು.)

ಮತ್ತೊಬ್ಬ : (ಫೋಟೋಗ್ರಾಫರನಿಗೆ)ಸಂಜಿಕಂದರ ಫೋಟೊ ತಯಾರಿರಬೇಕು ನೋಡಪ... ತಗೋ ಇದು ಅಡ್ವಾನ್ಸು...
(ದುಡ್ಡು ಕೊಡುವವನು. ಆತ ತಲೆಯಾಡಿಸಿ ಹೊರಡುವನು.)

ಒಬ್ಬ : (ನಿವೇದಕನಿಗೆ) ಈ ಫೋಟೋ ತೆಗೆಸಿದ ಹಾಳು ಮನೆಗಳು ಯಾರದು ಅಂತ... ತಿಳದೇರಿ?

ನಿವೇದಕ : (ಅಚ್ಚರಿಯಿಂದ) ಯಾರದು ಮತ್ತ ?

ಒಬ್ಬ : ಇವು ನಮ್ಮವ ಅಲ್ಲ...

ನಿವೇದಕ : ಹಾಂ!

ಮತ್ತೊಬ್ಬ : ಅಗ್ಹಾ... ಅಲ್ಲಿ ನೋಡ. ಆ ದಿಣ್ಣೆ ಮ್ಯಾಲಿನ ಕರಿಹಂಚಿನ ಸುಣ್ಣಬಡಿದ ಮನಿಗಳ, ನಮ್ಮವು...

ನಿವೇದಕ : ಆದರ... ಇದು ಮೋಸ, ಅನ್ಯಾಯ... ನೀವು ಹಿಂಗ ಮಾಡಬಾರದು. ನಿಮ್ಮನ್ನ ಭಾಳ ಸೂಜ್ಞ, ಒಳ್ಳೆಯವರು ಅಂತ ತಿಳಕೊಂಡ್ನಿ... ಅದ, ತಪ್ಪಾತು...

ಒಬ್ಬ : ರೀ, ಸ್ವಾಮಿ... ಯಾಕ ತಲಿಕೆಡಿಸಿಕೊಳ್ತಿರಿ... ಅಲ್ಲಿ ಸಾವಿರಾರು ಕೋಟಿ ಹೊಡಕೊಂಡ ಕೂತಾವರನ್ನ ಬಿಟ್ಟೇರಿ... ಜುಜುಬಿ ನಾಕಾರ ಸಾವಿರಕ್ಕ ಆಸೆಪಟ್ಟವರಿಗೆ ದೊಡ್ಡ ದೊಡ್ಡ ಮಾತ ಹೇಳಾಕತ್ತಿರಿ... ನಡಿ ನಡಿರಿ... (ಹೊರಡುವರು.)

ನಿವೇದಕ : ಜನಗಳದ, ಇನ್ನೊಂದು ರೂಪದ ಗೆದ್ದಲು ಹಿಡಿದ ಅವಸ್ಥೆ... ಇದರ ಬೇರುಗಳಲ್ಲಿಯೇ ರೋಗದ ಜಡ್ಡುಗಳಿರುವಾಗ ಇನ್ನು ಹುಟ್ಟುವ ಫಲಗಳ ರೂಪಗಳೆಂಥಾವು ?
(ಹುಯ್ಯೋ... ಎಂದು ಪುಟಾಣಿಗಳು ಕಿರುಚುತ್ತ ಸುದ್ದಿವಾಹಿನಿಯ ವಾಹನವೊಂದರ ಹಿಂದೆ ಓಡುವರು. ನಿವೇದಕನು ಸಹ ಅವರ ಹಿಂದೆ ಹೋಗುವನು.)

(ಹೆಲಿಕ್ಯಾಪ್ಟರ್ ಸದ್ದು ಕೇಳಿಸುವುದು. ಮುಗಿಲಿಗೆ ಮುಖ ಮಾಡಿ ಮುದುಕಿಯೊಬ್ಬಳು ಹಣೆಗೆ ಕೈಯಿಟ್ಟು ನೋಡುತ್ತಿರುವಳು. ಸುದ್ದಿವಾಹಿನಿಯ ಛಾಯಾಗ್ರಾಹಕ ಅಲ್ಲಿರುವ ಶೆಡ್ಡಿನ, ಅದರ ಮುಂಭಾಗದ ವಿವರಗಳನ್ನು ಚಿತ್ರಿಸಿಕೊಳ್ಳುವನು. ಅಜ್ಜಿ ಹತ್ತಿರ ಛಾಯಾಗ್ರಾಹಕ ಮತ್ತು ಮೈಕುಹಿಡಿದು ವರದಿಗಾರ ಪ್ರಶ್ನೆ ಮಾಡುವನು.)

ಅಜ್ಜಿ : ನೀವೂ ಬಂದ್ರಿಯಪ... ಅದ್ಯಾನ ಸುಖ ಐತಿ ಅಂತ ಬರಾಕತ್ತಿರೋ ನಮ್ಮಪ್ಪಗೊಳಿರ್ಯಾ... ಮನಿ ಕಟ್ಟಿಸಿಕೊಡೋರು ಇಲ್ಲ... ನೀರು, ಲೈಟ್ ಕೇಳೋರಿಲ್ಲ... ಬರಿ ನಿಮ್ಮಂಥೋರ!

ಮಾಧ್ಯಮದವ : ಅದನ್ನ ಸುದ್ದಿ ಮಾಡಾಕ ಬಂದೇವಿ ಅಜ್ಜಿ...

ಅಜ್ಜಿ : ಏಯ್ ಅದೆಷ್ಟೋ ಮಂದಿ ಹಿಂಗ ಮಾಡಿಕೊಂಡು ಹ್ವಾದ್ರು... ಒಂದಿಂಚೂ ಕದಲಲಿಲ್ಲ. (ಸೆಡವಿಂದ) ಬದ್ನಿಕಾಯಿ!

ಮಾಧ್ಯಮದವ : ಆಗತದ... ಆಗತದ... ಹುಂ, ಅದಿರಲಿ... ನೀನು ಹಣಿಗಿ ಕೈ ಹಚ್ಚಿ ಕುತೂಹಲದಿಂದ ಏನ್ ನೋಡಾಕ ಹತ್ತಿದ್ದಿ ?

ಅಜ್ಜಿ : ಅಲ್ಲಪ್ಪ, ಮನಿ ಕಟ್ಟಿಸಿಕೊಡ್ತೀನಿ ಅಂದೋರು ಹಕ್ಕಿ ಹಂಗ ಈ ಕಬ್ಬಿಣ ಹಕ್ಕ್ಯಾಗ ಕೂತ ಬರಾಕತ್ತಾರೇನೋ ನೋಡಾಕತ್ತಿದ್ನಿ!

ಮಾಧ್ಯಮದವ: ಅವರೆಲ್ಲ ಇಲ್ಲಿಗಿ ಬರಾಕತ್ತಿಲ್ಲ ಅಜ್ಜಿ... ರೆಸಾರ್ಟ ಪ್ರವಾಸ ಮಾಡಿ ಹಿಂತಿರುಗಿ ಹೊಂಟಾರ...

ಅಜ್ಜಿ : 'ರಿಸಾರಟ' ಹಂಗಂದರ ಏನು?

ಮಾಧ್ಯಮದವ : ಅದೊಂದು ದೊಡ್ಡ ಐಶಾರಾಮಿ ಹೊಟೇಲ ಇದ್ದಂಗ ಬಿಡು...

ಅಜ್ಜಿ : ಮತ್ತ ಇಲ್ಲಿಗಿ ಬರದ್ಯಾನ ಎಲ್ಲಿಗಿ ಹೊಂಟಾರು?

ಮಾಧ್ಯಮದವ : ಬೆಂಗಳೂರಿಗಿ ಹೊಂಟಾರ...

ಅಜ್ಜಿ : ಯಾತಕ್ಕ?

ಮಾಧ್ಯಮದವ : ಮತ ಹಾಕಾಕ!

ಅಜ್ಜಿ : (ತಟ್ಟನೆ) ಅಯ್ಯ. ಅವರೆಲ್ಲಿ ಮತ ಹಾಕತಾರು. ಮತ ಹಾಕತಕ್ಕೋರು ನಾವ ಅಲ್ಲೇನು ? ಈ ಮಾರಿ ಹಂಗ ಬಂದ ಮಳಿಗಿ ಪೈಲೆ ನಮ್ಮೂರ ಹೊಳಿ ಹಳ್ಳದ ಮ್ಯಾಲ ಛಂದಂಗ ನಳನಳಿಸುತಿತ್ತು. ಆಗ ಇವರು ಮತ ಕೇಳಲಾಕ ಬಂದಿದ್ರು, ಮನಿಮನಿ ಬಿಡದ ಅಡ್ಡಾಡಿದ್ರು, ಅದ್ಯಾನೋ ಆರತಿ ತಟ್ಟಿಯೊಳಗ ನಾ ಮುಂದು ತಾ ಮುಂದು ಅನ್ನೋರ ಹಂಗ ಬಂದೋರ ಎಲ್ಲ ಐನೂರೋ ಸಾವಿರೋ ಹಸರ ಕೆಂದು ನೋಟ ಹಾಕತಿದ್ರು, ಇನ್ನ ಹಿಂಗ ನೋಟು ಹಾಕೋವಾಗ ಆಸಿಗಿ ರೆಕ್ಕೆ ಪುಕ್ಕ ಹುಟ್ಟಿತು. ಬಾಯೊಳಗ ನೀರ ಊರಿತು. ಸೊಸೆಯಂದಿರಿಗಿ ಹೇಳಿದ್ನಿ, ನೋಡು... ಒಬ್ಬೊಬ್ಬರ ಬಂದು ಬೆಳಗಿ ಬೆಳಗಿದ್ರು... ಬಿದ್ದವು ನೋಡು... ಹಸರಗೆಂದು ನೋಟುಗಳು! (ಮುದುಕಿ ಖುಷಿಗೊಂಡಿದ್ದಳು.)

ಮಾಧ್ಯಮದವ : ಆದರ... ಇದೂ ಒಂದ ನಮೂನಿ ಲಂಚಕೊಟ್ಟಂಗಲ್ಲ?

ಅಜ್ಜಿ : ಏಯ್ ಅದೆಂಗ ಆಗತೈತೋ... ನಮ್ಮ ಮುದಡ್ಯಾ ಒಂದ ಸಲಾನು ಆರತ್ಯಾಗ ನಾಕಾಣೆಗಿಂತ ಒಂದ ದಮ್ಮಡಿ ಹೆಚ್ಚ ಹಾಕಲಿಲ್ಲ. ಬಂದಪ ಹೇಳಾಕ ಲಂಚ ಅಂತ!

ಮಾಧ್ಯಮದವ : ಹೋಗಲಿ ಬಿಡು... ಅಜ್ಜಿ... ನಿನಗ ತಿಳಿಯೋ ಮಾತಲ್ಲ. ಆದರ ನಿಮ್ಮ ಮತ ತಗೊಳ್ಳಾಕ ಆರತ್ಯಾಗೇನೋ ಐನೂರು, ಸಾವಿರ ಚೆಲ್ಲಿದ್ರು... ಅದಽ ಈಗವರು ಸರಕಾರಕ್ಕ ಬೆಂಬಲದ ಮತ ಹಾಕಲು, ಅಂದರಽ ಬರೇ ವಿಧಾನಸಭಾದಾಗ ಕುಂತು ಕೈಯೆತ್ತಲು ಒಬ್ಬೊಬ್ಬರು ಇಪ್ಪತ್ತೈದು ಕೋಟಿ ತಗೊಂಡಾರಂತ! ತಿಳಿತೇನು?

ಅಜ್ಜಿ : ಆಂ! (ಆವಾಕ್ಕಾದಳು) ಭಾಡ್ಯಾನ ಒಯ್ದು ತಂದು! ಕೋಟಿ ಅಂದರನ ಗೊತ್ತಿಲ್ಲ ಬಿಡಪಾ...

(ಕತ್ತಲೆ)

(ಮತ್ತೊಮ್ಮೆ ಝಗ್ಗನೆ ವಾತಾವರಣವೆಲ್ಲ ಬೆಳಗುವುದು. ಅದೇ ಪ್ರವಾಹ ಪೀಡಿತರ ವಾಸದ ಮನೆಗಳು. ಹೊಸಯೋಜನೆಯ ಚಿತ್ರಗಳು. ಬಿರುಬಿಸಲಲ್ಲಿ ಬದುಕುವವರ ತಗಡು ಶೆಡ್ಡಿನ ಚಿತ್ರಗಳು. ಎಲ್ಲವೂ ಸರ್ಕಲ್ಲಿನಲ್ಲಿ ಯಥಾಸ್ಥಿತಿ. ನಿವೇದಕ ತನ್ನ ಮೈಯನ್ನೊಮ್ಮೆ ತಡಕಾಡುವವನು. ಇದು ವಾಸ್ತವವೋ, ಕನಸೋ, ಭ್ರಮೆಯೋ ಎಂಬ ವಿಚಲಿತ ಭಾವದಲ್ಲಿರುವವನು. ನಿಧಾನಕ್ಕೆ ಕತ್ತಲೆ ಆವರಿಸುವುದು.)

ದೃಶ್ಯ ೩

(ಬಾಪೂಸಾಬನ ಮನೆ. ಮಧ್ಯಾಹ್ನದ ಸಮಯ)

(ಸರಕಾರಿ ಕಚೇರಿಯಿಂದ ಅಧಿಕಾರಿಯೊಬ್ಬ ಬಾಪೂಸಾಬನ ಮನೆಗೆ ಬಂದು ಕುಳಿತಿದ್ದಾನೆ. ಪಕ್ಕದಲ್ಲಿ ಬಾಪೂಸಾಬನ ಹೆಂಡತಿ ರುಕ್ಕವ್ವ ಬಾಯಿಗೆ ಸೆರಗಿಟ್ಟು ನಿಂತಿದ್ದಾಳೆ. ಹೊರಗಿಂದ ಬಾಪೂಸಾಬ ಒಳಬರುವವನು. ಅಸ್ವಸ್ಥ ಹಾಗೂ ಚಿಂತಿತನಾಗಿರುವವನು.)

ಬಾಪೂಸಾಬ : *(ಪ್ರವೇಶಿಸುತ್ತ)* ಸಾಹೇಬರ ರಾಮರಾಮರಿ... ನಾನಽ ತಮ್ಮ ಕಚೇರಿಗಿ ಹೋಗಿನ್ರಿ ಆರಾಮದೇರಿ?

ಅಧಿಕಾರಿ : ಎಲ್ಲಿ ಆರಾಮೋ! ನೀನು ಆರಾಮ ಇರಾಕ ಬಿಡಬೇಕಲ್ಲ... ನೀನು ನಿನ್ನ ವಿಷಯ ಹಿಂದಕ್ಕ ಪಡಿತಿಲ್ಲ. ಅದಽ ಒಂದ ತಲಿನೋವಾಗೇದ... ಇಂದ ಬೆಳಗ ಮುಂಜಾನಿ ಏನಾತು ಗೊತ್ತೇನ?

ಬಾಪೂಸಾಬ: *(ಅಚ್ಚರಿ)* ಏನಾತರಿ ಸಾಹೇಬರ?

ಅಧಿಕಾರಿ : ಈ ನಿಮ್ಮ ವಿರೋಧ ಪಕ್ಷದ ಎಮ್ಮೆಲ್ಲೆ ನನ್ನ ಚೆಂಬರ್ ಒಳಗ ನುಗ್ಗಿ ಬಂದರು. ತೋಳು ಏರಿಸಿಕೋತ ಬಂದೋರಽ ಯದ್ವಾ ತದ್ವಾ ಅವಾಚ್ಯ ಬೈದರು. 'ನಿನ್ನ ಎತ್ತಂಗಡಿ ಮಾಡ್ತೀನಿ ನೋಡು'! ಅಂತ ಧಮಕಿ ಕೊಟ್ಟರು.

(ಬಾಪೂಸಾಬ ಮೌನ)

ಹುಂ. ಇಲ್ಲಿ ಹಿಂಗ ಗುಂಬ ನೀರಾಗ ಕಲ್ಲು ಒಗೆದಂಗ ಸುಮ್ಮಕಿರತಿ... ಆದರ ಆ ಎಮ್ಮೆಲ್ಲೆ ಹತ್ತರ ಹೋಗಿ ನಿನ್ನ ತುತ್ತೂರಿ ಬಾರಸುತಿ!

ಬಾಪೂಸಾಬ : ಖರೇನಽ... ನಿಮ್ಮಾಣೇರಿ *(ತಟ್ಟನೆ)* ಮಾಫ ಮಾಡಿರಿ, ಮನಿದ್ಯಾವರ ಆಣಿಗೂ ಹೋಗಿಲ್ಲರಿ...

ಅಧಿಕಾರಿ : ಮತ್ತೆಂಗ ನಿನ್ನ ಪುರಾಣೆಲ್ಲ ಗೊತ್ತಾತೋ?

ಬಾಪೂಸಾಬ: ಅದು ಟಿವ್ಯಾಗ, ಪೇಪರದಾಗ ಬಂತಲ್ಲರಿ ಸಾಹೇಬರ... ಅದನ್ನ ನೋಡಿ, ಓದಿ ಬಂದಿರಬೇಕ್ರಿ... ನಾ ಹ್ವಾದರಽ ನಾಳಿ ಮಂತ್ರಿ ಆಗೋರಿದ್ದಾರಂತಲ್ಲ... ಅವರ ಕಡಿ ಹೋಗೋಣ ಇದಿನಿ.

ಅಧಿಕಾರಿ : *(ಸಮಾಧಾನದಿಂದ)* ಅಲ್ಲಪ, ಗಾಳಿ ಗುದ್ದಿ ಕೈಯಾಕ ನೋಯಿಸಿಕೊಳ್ಳತಿ? ನೀ ಭಾಳ ಅಪೂರ ಬೀಳತಿ... ನಿನಗ ಮುಖ್ಯಮಂತ್ರಿಗಳ ಪ್ಯಾಕೇಜ್ ಕೊಟ್ಟಲ್ಲೇನು? ಮೋಟಾರ ಪಂಪಸೆಟ್ ಕೊಟ್ಟಿವಿ... ನಿಂದು ಇನ್ನೊಂದು ಜಮೀನ ಸಾಗುವಳಿ ಮಾಡಿಕೋ... ಇದನ್ನ ಬಿಟ್ಟುಕೊಡು...

ಬಾಪೂಸಾಬ : *(ತುಸು ಗಂಭೀರವಾಗಿ)* ಹುಂ... ಕೊಟ್ಟೇರಿ... ನಾಕದಿನ ಆಗಲಿಲ್ಲ... ಮುದುಕರ ಹಲ್ಲುದರಿ ಬಿದ್ದಂಗ ಕೆಲಸಕ್ಕ ಬಾರದಂಗ ಭಾಂವಿ ದಂಡಿಗಿ ಬಿದ್ದತಿ... ಸಾಹೇಬರಽ ನಮ್ಮ ಸಂಘಟನಾದೋರು ಬಿಡಿಸಿ ಬಿಡಿಸಿ ಹೇಳ್ಯಾರ... ಮುಖ್ಯಮಂತ್ರಿ ಪ್ಯಾಕೇಜು ಒಂದು ಕಣ್ಣೊರೆಸು ತಂತ್ರ ಅಂತ... *(ತುಸು ತಡೆದು)* ಹೋಗಲಿ... ತಾವು ಹೇಳಿದಂಗ ಖರೆ ಆಗಿದ್ದರ ಗುಣಮಟ್ಟದ್ದು ಕೊಡಬೇಕಲ್ಲರಿ...

ಅಧಿಕಾರಿ : ಪ್ರಧಾನ ಮಂತ್ರಿಗಳ ವಿದರ್ಭ ಪ್ಯಾಕೇಜನಂಗ ಇದೂ ಕೂಡ ಪರಿಣಾಮಕಾರಿ ಅದ... ಅದನ್ನ ಮರೀಬ್ಯಾಡ!

ರುಕ್ಕವ್ವ : ಏಯ್ ಬಿಡ್ರಿ ಸಾಹೇಬರಽ, ವಿದರ್ಭ ಪ್ಯಾಕೇಜು ಖರೋ ಖರ ಜನಕ್ಕ ಮುಟ್ಟಿದ್ದರಽ ಯಾಕ ಎರಡಮೂರ ಸಾವಿರಕ್ಕಿಂತ ಹೆಚ್ಚಿನ ಮಂದಿ ಸಾಯತಿದ್ರು... ಅದು ದಿಲ್ಲಿಂದ ಅಲ್ಲಿಗೆ ಬರೋತನಕ ಸೋರಿ ಸೊಟ್ಟಗ ಆಗೇತ್ರಿ...

ಅಧಿಕಾರಿ : ಆಂ! ಏನ ರುಕ್ಕವ್ವ...? ಇದು ಹಿಂಗ ಹೇಳಾಕತ್ತಿ!

ರುಕ್ಕವ್ವ : ಮಹಿಳಾ ಜಾಗರ ತಂಡದೋರು ಮಹಾರಾಷ್ಟ್ರದಿಂದ ಬಂದು ಕ್ಯಾಂಪ್ ಮಾಡಿದ್ದನ್ನ



ಮರೆತುರಿ ಏನ್ರಿ ಸಾಹೇಬರ...

ಅವರು ಹೆಣ್ಮಕ್ಕಳಿಗಿ ಸ್ವಯಂ ಉದ್ಯೋಗ ಪದ್ಧತಿಯಿಂದ ನಾಕದುಡ್ಡ ಸಿಗೋ ಹಂತಾದ್ದು ಸಂಘ ತೆರೆದಽ ಇದ್ದಿದ್ದರ ಅವರ ಮಕ್ಳು ಮಣ್ಣು ತಿನ್ನಬೇಕಾಗತ್ತಿತ್ತು... ಅವರ ದಯನೀಯ ಸ್ಥಿತಿ ನಮಗೂ ಬರಬಾರದು ನೋಡ್ರಿ... ನೀವ ಕೊಟ್ಟದ್ದು ಎಳ್ಳಕಾಳು ಬಳಕಿ ಆಗಿಲ್ಲರಿ... ಆದರ ನಮ್ಮ ವಿಷಯ ಬ್ಯಾರೇನ ಐತಿ.

ಬಾಪೂಸಾಬ: ಹಾಂಗಲ್ಲರಿ... ಕಿಮ್ಮತ್ತಂದರ ದುಡ್ಡೀಲ ಎಣಿಸೋದಲ್ಲ. ಅದು ನಿಮಗ ತಿಳಿಯೋ ಮಾತಲ್ಲ ತಗಿರಿ...

ಅಧಿಕಾರಿ: ನಿನ್ನ ಛಲೋದಕ್ಕ ಹೇಳಾಕತ್ತೇನಿ... ಸರಕಾರ ಸರಕಾರಽನ ಆಗಿರತತಿ ತಿಳಕೋ... ಪರಿಸ್ಥಿತಿ ಅರ್ಥಾ ಮಾಡಕೋ... ಅದು ಹುಂಬ ಘೂಳಿ ಇದ್ದಂಗ... ಘೂಳಿ ಹೊಲ ಹೊಕ್ಕ ನಾಸ ಮಾಡಿದಂಗ ಯಾವಾಗ ಹೊಕ್ಕತದನೋ ಹೇಳಾಕ ಬರಾಂಗಿಲ್ಲ...

ಬಾಪೂಸಾಬ: ಹಂಗರ... ಜನಾ ಜನಾ ಅಲ್ಲೇನ್ರಿ..? ರೈತರ ಭರವಸೆಗಳೇನಾದವು? ಮತ್ತ ಘೂಳೀನ ತಹಬದಿಗಿ ತರೋದು ಒಂದು ತಂತ್ರ ಇಲ್ಲೇನರಿ!

ಅಧಿಕಾರಿ: ಮಾತ ಬೆಳೆಸೋದ ಬ್ಯಾಡ... ಉಳಿದಾವರಿಗಿ ಒಪ್ಪಿಗಿ ಅದಽ, ನೀನೊಬ್ಬಽನ ಅಡಮುಟ ನೀತಿ ಅನುಸರಿಸಬ್ಯಾಡ... ನೀ ತಿಳಕೊಂಡ ವ್ಯವಸ್ಥೆ ಈಗ ಉಳಿದಿಲ್ಲ... ಇದರ ಮ್ಯಾಲ ನಿನಗ ಬಿಟ್ಟಿದ್ದ... ಬರತೇನಿ... *(ಏಳುವನು. ತಿರುಗಿನೋಡುವನು.)*

ಬಾಪುಸಾಬ: ಸಾ.. ಸಾಹೇಬರಽ ಚಾನಾದ್ರು ಕುಡಿರೆಲ... *(ರುಕ್ಕವ್ವಗೆ)* ಲಗೂ ಲಗೂ ಚಹಾಕ್ಕಿಡು...

ಅಧಿಕಾರಿ: ಬ್ಯಾಡ! ನನ್ನ ಮಾತು ತಣ್ಣಗ ಇಚಾರ ಮಾಡು... ಮತ್ತೊಮ್ಮಿ ಬರತೇನಿ ಆಗ ಕುಡಿತೀನಿ..

(ಅಧಿಕಾರಿ ನಿರ್ಗಮಿಸುವನು. ಬಾಪೂಸಾಬ ಚಿಂತಿತನಾಗಿ ಕೂರುವನು. ರುಕ್ಕವ್ವ ಹತ್ತಿರ ಬರುವಳು.)

ರುಕ್ಕವ್ವ: ಈಗ ಹೆಂಗ ಮಾಡೋದು?

ಬಾಪೂಸಾಬ: ಆದದ್ದು ಆಕ್ಕೇತಿ... ನನ್ನ ಜಮೀನ ನಾ ಬಿಟ್ಟುಕೊಡಾಂಗಿಲ್ಲ...

ರುಕ್ಕವ್ವ: (ನಿಧಾನಕ್ಕೆ) ಅಲ್ಲ, ಈಗ ರೈತಾಪಿಗಿ ಪೈಲೇದ ಹಂಗ ಉಳಿದಿಲ್ಲ... ಆಳುಕಾಳು ಸಿಗತಿಲ್ಲ... ಯಾವುದಕ್ಕ ದರ ಸಿಗತೈತಿ ಅಂತ ಬೆಳೆತಿವಿ... ಅದು ಕುಸದ ಹೋಗಿರತತಿ... ಎಂದ ಬೆಳೆಯೊದಿಲ್ಲ ಆಗ ಭಾರಿ ದರ! ಎಷ್ಟಂತ ಧಡಪಡಿಸತಿ...

ಬಾಪೂಸಾಬ: ನೀನು ಏನು ಹೇಳಾಕ ಹೊಂಟದ್ದಿ ಅದರ ಖಬರ ಐತೇನು? ಎಲ್ಲಾರು ಮಾರಿದಂಗ ಮಾರು ಅಂತಿ... ಆಮ್ಯಾಲ ಎಲ್ಲಿ ಹೋಗೋದು? ಯಾವುದಾದರ ಶಾರಕ... ಅಲ್ಲಿ ನಮಗ ಗೊತ್ತಿರೋ ಧಂದೆ ಯಾವುದು ಐತಿ? ಬಂದಂತಾ ರೊಕ್ಕಾನು ಅಂದಾದುಂಧಿ ಮಾಡಿ ಖಾಲಿ ಆಗಿ ಭಿಕ್ಷಾ ಬೇಡ ಬೇಕಾಗತತಿ... ನಿನಗ ತಿಳಿಯೋ ಮಾತಲ್ಲ... ನಮ್ಮ ತಟ್ಟ್ಯಾಗಿದ್ದ ಅನ್ನ ಯಾವಾಗಲು ನಮ್ಮದಽ! ಬ್ಯಾರೇವರದ ಎಂಜಲು... ಹಂ... *(ಆಕೆ ಯೋಚಿಸುವಳು.)*

ನಾ ಬರತೀನಿ... ಎಮ್ಮೆಲ್ಲೆ ಸಾಹೇಬರ ಮನಿಗಿ ಹೋಗಿ... ಅಂವ ಎಲ್ಲಿ ಹ್ವಾದ ನಿನ್ನ ಅಡ್ನಾಡಿ ಮಗ...? ಬಂದರ ತ್ವಾಟಕ್ಕ ಕಳಸ...

(ಹೊರಡುವನು)

ರುಕ್ಕವ್ವ: ಜರಾ ಸಂಭಾಳಿಸಿರಿ...

(ಹೋದ ದಿಕ್ಕಿಗೆ ದೃಷ್ಟಿ ನೆಡುವಳು. ನಿಧಾನ ಕತ್ತಲೆ)



ದೃಶ್ಯ ೪

(ನಿವೇದಕ ಬರುವನು. ರಂಗದ ಸುತ್ತಲೂ ಪತ್ರಿಕೆ 'ಪೇಜ್ ಥ್ರೀ' ಕಟಿಂಗ್ಸ್‌ನ ಬೃಹತ್ ಹೋರ್ಡಿಂಗ್‌ಗಳಿವೆ. ಅವುಗಳನ್ನು ಒಮ್ಮೆ ಗಮನಿಸುವನು. ರಂಗದ ಮಧ್ಯೆ ಬರುವನು. ಅವನ ಮೇಲೆ ಬೆಳಕು. ಉಳಿದ ಭಾಗದಲ್ಲಿ ಮಂದ ಬೆಳಕು.)

ನಿವೇದಕ: *(ಸಿಗರೇಟೊಂದನ್ನು ತುಟಿಗಿಟ್ಟು ಹೊತ್ತಿಸುವನು.)* ಇವರೆಲ್ಲ ಪೇಜ್ ಥ್ರೀಯಲ್ಲಿ ಕಂಗೊಳಿಸೋ ರೋಗಗ್ರಸ್ತ ಜೀವಿಗಳು. ಜನರ ನಿರ್ಲಕ್ಷ್ಯ ಧೋರಣೆ ಮತ್ತು ಉದಾರತನವನ್ನು ಬಳಸಿಕೊಳ್ಳುತ ತಮ್ಮ ಸಂಪತ್ತನ್ನ ವೃದ್ಧಿಸಿಕೊಳ್ಳುವವರು. ಹಳ್ಳಿ, ಕೃಷಿ ಮತ್ತು ಅರಣ್ಯಗಳನ್ನು ಉಳಿಸಿಕೊಳ್ಳೋದು ಅಂದರ ಒಂದು ಬಹುದೊಡ್ಡ ಸಂಘರ್ಷನ ಮಾಡಬೇಕಾಗತದ... ಜನರ ಅಭ್ಯುದಯ ಕೇವಲ ಹಣದಿಂದಲೇ ಸಾಧ್ಯ ಎಂದು ಸಾರೋ ಆಮೀಷಗಳು ಹೊಸ ಭ್ರಮೆಗಳನ್ನ ಸೃಷ್ಟಿಸುತಾವ. ಇದರೊಳಗ ಎಂಎನ್‌ಸಿಗಳ ಪಾಲು ದೊಡ್ಡದು...

(ಅಷ್ಟರಲ್ಲಿ ಗುಂಪೊಂದು ಕೈಯಲ್ಲಿ ಫಲಕ ಹಿಡಿದು ಘೋಷಣೆ ಕೂಗುತ್ತ ರಂಗದ ಮೇಲೊಂದು ಸುತ್ತು ಹಾಕುತದೆ. 'ಉಳಿಸಿ ಬೆಳೆಸಿ ಅಮೂಲ್ಯ ಸಸ್ಯ ಜಾತಿಗಳನ್ನ ಗಳಿಸಿ'... 'ಎಮ್ಮೆಲ್ಲೆಗೆ ಧಿಕ್ಕಾರ'... 'ಭೂ ಕಬಳಿಕೆ ಎಂದೂ ಸಹಿಸೆವು'... ಮುಂತಾದ ಘೋಷಣೆಗಳು ಮತ್ತು ಫಲಕ ಬರೆಹಗಳು. ಕತ್ತಲೆಯಾಗುವುದು.)

(ಬೆಳಕು. ಎಮ್ಮೆಲ್ಲೆ ಸಾಹೇಬರ ಮನೆ. ಆ ಮನೆಯ ಒಂದು ಭಾಗದಲ್ಲಿ ಅವರನ್ನು ಭೇಟಿ ಮಾಡುವ ಕೋಣೆ. ಬಡರೈತ ಬಾಪೂಸಾಬ ತನ್ನ ಅಹವಾಲು ಜತೆಗೆ ನಿಂತಿದ್ದಾನೆ.)

(ನಿವೇದಕ ಅಲ್ಲಿಗೆ ಹೋಗುವನು.)

ನಿವೇದಕ : *(ಸಣ್ಣಗೆ ಕೆಮ್ಮಿ)* ನೀವು ಎಮ್ಮೆಲ್ಲೆ ಸಾಹೇಬರನ್ನ ನೋಡಾಕ ಬಂದಿರೇನು?

ಬಾಪೂಸಾಬ: ಹೌದು. ಸುಖಾ ಸುಮ್ಮನಽ ನಂದಿಲ್ಲೇನ ಕೆಲಸ?

ನಿವೇದಕ : ಅದು ಸರಿ. ಮತ್ತ ಒಳಗ ಹೋಗಿಲ್ಲ್ಯಾಕ?

ಬಾಪೂಸಾಬ: ನನ್ನ ಸರದಿ ಬಂದಿಲ್ಲಂತ ಕಾಣತೇತಿ... ಒಬ್ಬ ಒಳಗಿನಂವ ಬಂದಿದ್ದ. ಒಳಗ ಮೀಟಿಂಗ್ ನಡದೇತಿ... ಕಾಯಲಿಕ್ಕೆ ಹೇಳ್ಯಾನ...

ನಿವೇದಕ : ನಿಂದೇನು ಸಮಸ್ಯೆ... ಆ ಪ್ರತಿಭಟನ ಮೆರವಣಿಗ್ಯಾಗ ನೀನೂ ಇದ್ದಿ.

ಬಾಪೂಸಾಬ: ಹೌದು...ಆ ಮೆರವಣಿಗೆಗೂ ನನ್ನ ಕೆಲಸಕ್ಕೂ ಸಂಬಂಧ ಐತಿ... ಅಂದಂಗ ನೀವ್ಯಾರು?

ನಿವೇದಕ : ತಾನು! ತಾನು! *(ತಡವರಿಸುವನು. ಕತ್ತಲೆ...)*

ದೃಶ್ಯ ೫

(ಎಮ್ಮೆಲ್ಲೆ ಸಾಹೇಬರ ಕೋಣೆ ನಿಶ್ಯಬ್ದವಾಗಿದೆ. ಅಲ್ಲಿ ಒಂದೇ 'ಅಧಿ'ಕಾರದ ಖುರ್ಚಿ. ಅದರ ಮೇಲೆ ಕುಳಿತು ಫೈಲು ನೋಡುತ್ತಿದ್ದಾರೆ. ಎದುರು ಮೂವರು ಅಧಿಕಾರಿಗಳು ಕೈಯಲ್ಲಿ, ಕಂಕುಳಲ್ಲಿ ಫೈಲು ಕಾಗದ ಪತ್ರ ಹಿಡಿದು ತೆಪ್ಪಗೆ ನಿಂತಿದ್ದಾರೆ. ಅಧಿಕಾರಿಗಳ ಮುಖದಲ್ಲಿ ಆತಂಕ, ದುಗುಡಗಳಿವೆ. ಎಮ್ಮೆಲ್ಲೆ ಸಾಹೇಬರು ಒಮ್ಮೆಲೆ ಮುಖವೆತ್ತಿ ಸಿಡಿದರು.)

ಎಮ್ಮೆಲ್ಲೆ : ಹೇಳಿದ ದಂಥೆ ನಿನ್ನಿಂದಾಗಾಂಗಿಲ್ಲ ಎಂಥವ, ನಾಲಾಯಕ್ ?

ಅಧಿಕಾರಿ ೧: ಸಾಹೇಬರ, ಅದಕ್ಕ ಪರಿಸರವಾದಿಗಳ ವಿರೋಧ ಐತಿ... ಅದು ಟಿವ್ಯಾಗ ಪೇಪರನ್ಯಾಗೆಲ್ಲ ಚರ್ಚೆಯಾಗೇತಿ.

ಎಮ್ಮೆಲ್ಲೆ : ಅವರೇನು ನಾಕ ದಿನ ಒದರಾಡತಾರು. ಆಮ್ಯಾಲ ಬೀಜ ಜಜ್ಜಕೊಂಡ ಹೋರಿ ಹಂಗ ಮೆತ್ತಗಾಗತಾರು... *(ದುಸುಮುಸುಗುಟ್ಟುವರು.)*

ಅಧಿಕಾರಿ ೨: ಅದು ಬ್ರಿಟೀಷ್ ಕಾಲದಾಗಿನ ಫಾರ್ಮ ಐತಿ... ಅಲ್ಲೊಂದು ಕೆರೆನೂ ಐತಿ... ಅದರ ಸುತ್ತ ವಿದೇಶದ ಹಕ್ಕಿಗಳು ಬರತಾವು... ವಿಶಿಷ್ಟ ಸಸ್ಯಗಳು ಜೀವ ಸಂಕುಲಗಳು ಅದಾವಂತ. ಅವಕ್ಕ ಧಕ್ಕೆ ಆಗತೇತಿ ಅಂತ ಜನ ತಕರಾರು ತೆಗದಾರ ಸಾಹೇಬರ...

(ಅವುಗಳಿಗೆ ಸಂಬಂಧಿಸಿದ ಪರಾವೆಗಳನ್ನು ನೀಡಿದ)

(ಎಮ್ಮೆಲ್ಲೆ ಒಮ್ಮೆ ಅವುಗಳನ್ನು ನೋಡಿದರು.)

ಎಮ್ಮೆಲ್ಲೆ : ಆತು... ಎಲ್ಲ ತಣ್ಣಗಾತು. ಇಂಥ ಒಣ ಸಬೂಬು ಹೇಳಿ ನನ್ನ ತಲಿ ಕೆಡಸಬ್ಯಾಡ್ರಿ... ನಾನು ಮಾತ ಕೊಟ್ಟೇನಿ, ಏನ ಹೇಳಲಿ? (ತಡೆದು) ಮಾತು ಕೊಟ್ಟೇನಿ ಅಂದರ ಅರ್ಥ ಆಗತದಲ್ಲ? (ಫೈಲು ಝಾಡಿಸಿ ಒಗೆಯುವನು.) ಹೆಂಗ ಮಾಡ್ತಿರೋ ಗೊತ್ತಿಲ್ಲ... ಧಂದೆ ಆಗಬೇಕಷ್ಟ. ಹುಂ ನಡೀರಿ... ತೊಲಗಿರಿ... ಕೆಲಸ ಆಗದ ಹೊರತು ಮಕಾ

ತೋರಿಸಬ್ಯಾಡ್ರಿ (ಎಮ್ಮೆಲ್ಲೆ ಚಡಪಡಿಸುವನು. ಅಧಿಕಾರಿಗಳು ಬೆವರೊರಿಸಿಕೊಳ್ಳುತ್ತ ನಿರ್ಗಮಿಸುವರು.)

(ಒಬ್ಬ ಮಾಧ್ಯಮದ್ದವನು ಆಗುಂತಕನಂತೆ ಬರುವನು. ಆತ ಒಳಗೆ ಹೋಗುವನು. ಇದೆ ಅವಕಾಶ ಪಡೆದು ಬಾಪೂಸಾಬನೂ ಒಳನುಗ್ಗುವನು.)

ಮಾಧ್ಯಮದವ: ಪಾಯ ಲಾಗೋ ಅಣ್ಣಾರ, ಆರಾಮದೀರಿ? (ಕಾಲಿಗೆ ಎರಗುವನು.)

ಎಮ್ಮೆಲ್ಲೆ : ನನ್ನ ಆರಾಮ ಹಾಳುಗೆಡವು. ನಮ್ಮದs ಪಾರ್ಟಿ ಮನಸ್ಯಾಂದು ಭಾಳ ತೋರಿಸಾಕ ಹತ್ತೇರಿ... ನಾವೇನ ಇಲ್ಲಿ ಉದ್ದು ಹುರ್ಯಾಕತ್ತೇವಿ?

ಮಾಧ್ಯಮದವ: ಹಂಗೇನಿಲ್ಲ ಸಾಹೇಬರ, ಪ್ರವಾಹ ಪೀಡಿತರ ಪರಿಹಾರವನ್ನು ತಾವs ಜಾಸ್ತಿ ಹಂಚೇರಿ ಅಂತ ತೋರಿಸೇವ ಅಲ್ಲರಿ...

ಎಮ್ಮೆಲ್ಲೆ : ದಿಖಲಾತಾ ಹುಂ, ದಿಲಾತಾ ಹುಂ, ಅನ್ನೋ ತರ ಮಾಡೇರಿ... ನಮಗ ನಮ್ಮವರ ಶತ್ರು ಆಗ್ಯಾರಲ... ಅವರಿಗಿ ಮೈಲೇಜು ಭಾಳ ಕೊಟ್ಟೇರಿ

(ಮಾಧ್ಯಮದವನಿಗೆ ಕಸಿವಿಸಿಯಾಗುವುದು. ಇದs ಅವಕಾಶ ಬಾಪೂಸಾಬ ಸಾಹೇಬರ ಕಾಲಿಗೆ ಬೀಳುವನು.)

ಬಾಪೂಸಾಬ : ಸಾಹೇಬರ, ನನ್ನ ಹೊಲ ಉಳಿಸಿರಿ... ಅದು ಜೀಂವಾ ಆಗೇತಿರಿ...

ಎಮ್ಮೆಲ್ಲೆ : (ಅನಿರೀಕ್ಷಿತ ಆಕ್ರಮಣಕ್ಕೆ ಬೆಚ್ಚುವರು.) ಏಯ್ ಏಳ್ ಏಳು... ಇದ್ಯಾನಿದು ಹಿಂಗ! (ಕಾಲುಗಳನ್ನು ಬಿಡಿಸಿಕೊಳ್ಳುವರು.)

(ಬಾಪೂ ಮುಖ ಮೇಲೆತ್ತುವನು.)

ಅರೆ, ಬಾಪ್ಯಾ ಏನಲೆ ? ಅಲ್ಲೋ ಎಷ್ಟು ಸಾರಿ ಬರತಿ ? ನಿನಗ ಹೇಳೇತಿ ಅಲ್ಲ! ಪರಿಹಾರದ ಹಣ ಲಕ್ಷ ಲಕ್ಷ ಸಿಗತದಂತ. ಅದೂ ಅಲ್ಲದ ನಿನ್ನ ಮಗನಿಗಿ ಫ್ಯಾಕ್ಟರಿಯೊಳಗ ನೌಕರಿ ಕೊಡಿಸತದ ಅಲ್ಲ?

ಬಾಪೂಸಾಬ: (ತಳಮಳಿಸುತ್ತ) ಸಾಹೇಬರs ಆ ಹೊಲ ನನ್ನ ಜೀಂವಾ ಆಗೇತಿರಿ, ಅದಿಲ್ಲದ ನಾ ಬದುಕಾಕ ಸಾಧ್ಯಯಿಲ್ಲ. ಹಿರ ಹಿರೇರ ಕಾಲದ ಆ ಜಮೀನಿನ್ಯಾಗ ನನ್ನ ಹಿರೇರ ಆತ್ಮಗಳಿದಾವರಿ ಸಾಹೇಬರs...

ಎಮ್ಮೆಲ್ಲೆ : ಎಂಥ ಆತ್ಮಾನೋ?

ಬಾಪೂಸಾಬ : ಸಾಹೇಬರs ನಮ್ಮ ಸತ್ತು ಹೋದ ಹಿರೇರ ಥಡಿಗಳು ಅದಾವ. ಎಲುವು ಚೂರು ತುಂಬಿದ ಮಡಿಕೆಗಳು ಆ ಹೊಲದಾಗ ತುಂಬ್ಯಾವು. ಪರಂಪರಾಗತ ಅಲ್ಲಿ ಮರದ ಕೆಳಗ ಮೂಲ್ಯಾಗ ಹುಗೀತಾ ಬಂದೇವಿ. ಈ ರಿವಾಜ ಪೀಳಿಗಿಯಿಂದ ಪೀಳಿಗೆಗೆ ನಡೀತಾ ಬಂದದರಿ. ಅದಕ್ಕ ನಮ್ಮ ಹಿರಿ ತಲಿಗಳಾದ ಯಾರು ಮಾರಿಲ್ಲ. ನಿಮ್ಮ ಕಾಲಿಗಿ ಬೀಳತೇನರಿ. ಹೆಂಗಾರ ಮಾಡಿರಿ ಸಾಹೇಬರ ನನ್ನ ಹೊಲ ಉಳಿಸಿರಿ... (*ಗಳಗಳಿಸಿ ಅವರ ಪಾದಗಳನ್ನು ಮತ್ತೊಮ್ಮೆ ಹಿಡಿಯುವನು.*)

ಎಮ್ಮೆಲ್ಲೆ : (ಬಿಡಿಸಿಕೊಳ್ಳುತ್ತ) ಏಯ್ ಬಿಡೋ ಬಾಪೂ... ಇವನಾಪ್ಪನ ಕಾಲನ ಹಿಡಿಕೋತಿಯಲ್ಲೋ...

(ಬಾಪೂ ಅಲ್ಲೆ ಕುಕ್ಕುರಗಾಲಲ್ಲಿ ಕೂರುವನು.) (ಮಾಧ್ಯಮದವ 'ಒಂದು ಒಳ್ಳೆ ಸ್ಟೋರಿ ಮಿಸ್ಸಾಯಿತಲ್ಲ' ಗೊಣಗುವನು.)

(ಮಾಧ್ಯಮದವನಿಗೆ) ಏನಂದ್ರಿ?

ಮಾಧ್ಯಮದವ : ಏನಿಲ್ಲ... ಇವ ಬಾಪೂ... ಅಂತ...

ಎಮ್ಮೆಲ್ಲೆ : ನೆನಪಾತು ಬಿಡ್ರಿ, ಇವನ ಸುದ್ದಿ ನೆನಪಾತು 'ಡಿಸಿ ಕಚೇರಿ ಮುಂದ ಹರತಾಳ ಕೂತ ಆಧುನಿಕ ಬಾಪೂ' ಅಂತ ನಿಮ್ಮ ಚಾನೆಲ್‌ನ್ಯಾಗ ಬಿಗ್‌ನ್ಯೂಜ್ ಅಂತ ಜಡದದ್ದ ಜಡಿದದ್ದು. (ತಡೆದು) ನಿಮಗ ಹೇಳ್ತೀನಿ... ನೀವಂತು ಇಲಿ ಹೋದರ ಹುಲಿ ಹೋಯಿತಂತ ಇಪ್ಪತ್ನಾಲ್ಕು ತಾಸೂ ಕಟಿತೀರಿ ಅಪ'...

ಮಾಧ್ಯಮದವ : (ಕಿರುನಗೆ ಬೀರಿ) ಅದು ನಮ್ಮ ಧಂದೇರಿ ಸಾಹೇಬರ... ಆದರ ಈ ಸುದ್ದಿ ಮಾತ್ರ ರಾಜ್ಯದ ತುಂಬಾ ಚರ್ಚಾ ಮಾಡಿತು. ಎಷ್ಟೋ ಬುದ್ದಿ ಜೀವಿಗಳು, ಸಾಹಿತಿ, ಕಲಾವಿದರು ಪ್ರತಿಭಟಿಸಿದರು.

ಎಮ್ಮೆಲ್ಲೆ : ಈ ಸಾಹಿತಿಗಳ ರಾಜಕಾರಣ ನನಗ ಗೊತ್ತಿಲ್ಯಾನ ಬಿಡು. (ವಿಚಿತ್ರ ರೇಗು ಕಸಿವಿಯಾಗುವುದು.)

(ಬಾಪೂನಿಗೆ)ಬಾಪೂ ನಿನ್ನ ವಿಷಯಾನ ಮುಖ್ಯಮಂತ್ರಿಗಳ ತನಕ ತಗೊಂಡು ಹೋಗೇನಿ... ಅವರು 'ಏನೂ ಮಾಡೋದಕ್ಕ ಬರೋದಿಲ್ಲಂತ' ಕಡ್ಡಿಮುರದು ತುಂಡ ಮಾಡಿದಂಗ ಹೇಳ್ಯಾರು. (ಸಾಂತ್ವನಿಸುವ ಧ್ವನಿಯಲ್ಲಿ) ಅಲಪ, ನಿನ್ನ ಸುತ್ತಲಿನ ರೈತರೆಲ್ಲ ತಮ್ಮ ಜಮೀನು ಕೊಟ್ಟು ರಗಡ ರೊಕ್ಕ ತಗೊಂಡಾರು. ನಿಂದೊಬ್ಬನದs ಅಲ್ಲಿರೋದು. ಅದು ಕಾಲಾಗ ನಟ್ಟಿದ ಮುಳ್ಳ ಆಗೇತಿ. ಕಾಲಾಗ ನಟ್ಟಿದ ಮುಳ್ಳನ ಹಂಗs ಇಟಕೊಂಡರೇನಾಗತದ ಹೇಳು ನೋಡೋಣ ? ಕಾಲsನ ನಂಜು ತುಂಬಿಕೋತದ... ಕೊಳಿತದ... ನಂಜಾದ ಕಾಲನ್ನ ಒಮ್ಮಿ ಕತ್ತರಿಸಿ ಚೆಲ್ಲಬೇಕಾಗತದ ಅಷ್ಟ... ತಿಳಕೋ ಹುಚ್ಚಪ್ಪ...

(ಬಾಪೂ ದಿಕ್ಕುತಪ್ಪಿದಂಗಾಗಿ, ವಿಲಿವಿಲಿಗೊಂಡ.)

ಬಾಪೂಸಾಬ: ನೀವs ಹಿಂಗ ಹೇಳಿದರ ಹೆಂಗ? ನನಗ ಬೇರೆ ಧಂದೆ ಗೊತ್ತಿಲ್ಲರಿ ಮತ್ತು ಬರೋದು ಇಲ್ಲ! ಭಾವನೆಗಳನ್ನ ಒಂದು ವ್ಯಾಳೆ ಕೊಂದು ಬದುಕಬೋದು. ಆದರ ಆತ್ಮಾನ ಕೊಂದ ಬದುಕೋದು ಹೆಂಗ? ಸಾಹೇಬರ ನನ್ನ ಮಗಾನು ಭಾಳ ಕಲಿತಿಲ್ಲರಿ... ಮೆಟ್ರಿಕ್ ನಾಪಾಸ ಆಗ್ಯಾನ.

WITH BEST COMPLIMENTS FROM

New Baldwin Group of Institutions

Sy. no. 128, Budigere Cross,
Old Madras Road, Bangalore-49
Ph: 25559001 (30 lines)
080-25559145 (30 lines)
Telefax: 080-28470837

ಎಮ್ಮೆಲ್ಲೆ : ನಿನ್ನ ಮಗನಿಗಿ ಸಿಪಾಯಿ ನೌಕರಿ ಸಿಗತದ... ಭರಮಸಾಟ ರೊಕ್ಕ ಬರತಾವು.

ಬಾಪೂಸಾಬ: ರೊಕ್ಕ ನಮ್ಮನ್ನ ಹಾಳ್ಗಮಾಡತತರಿ ಸಾಹೇಬರ...
(ಎಮ್ಮೆಲ್ಲಿ ಒಮ್ಮೆಲೆ ಸಿಡಿಯುವಂತೆ)

ಎಮ್ಮೆಲ್ಲೆ : ಏಯ್ ಗಿಣಿಗಿ ಹೇಳಿದಂಗ ಹೇಳಿದ್ರೂನು ತಿಳಿಯೋದಿಲ್ಲ ಅಲ್ಲ... ಅದೆಲ್ಲ ಕತಿಬ್ಯಾಡ... ಹುಂ ನಡಿಯಿನ್ನ... ನನಗ ಹೊರಡೋದದ... (ಧಡಕ್ಕನೆ ಮೇಲೇಳುವರು. ಮಾಧ್ಯಮದವನಿಗೆ ಉದ್ದೇಶಿಸಿ) ಬರ್‍ತಾ ಇರ್‍ರಿ... ಆದರ ಶತ್ರುಗಳ ಬಗ್ಗೆ...

(ನಗೆ ಚೆಲ್ಲಿ ಒಳಗೆ ಹೋಗುವರು. ಬಾಪೂಸಾಬ ನಿಶಕ್ತನಾಗಿ ಅಲ್ಲಿಯೇ ಕುಳಿತಿದ್ದಾನೆ. ಮಾಧ್ಯಮದವ ಒಮ್ಮೆ ಆತನನ್ನು ನೋಡಿ ಹೊರನಡೆಯುವನು. ಕತ್ತಲೆ ಆವರಿಸುವುದು.)

ದೃಶ್ಯ ೬

(ರಂಗದ ಒಂದು ಬದಿಯಲ್ಲಿ ಎಮ್ಮೆಲ್ಲೆ ತನ್ನ ಕೋಣೆಯಲ್ಲಿ 'ಅಧಿ'ಕಾರದ ಖುರ್ಚಿಯಲ್ಲಿ ಅತ್ಯಂತ ಖುಷಿಯ ಭಾವದಲ್ಲಿ ವಿರಾಜಮಾನರಾಗಿದ್ದಾರೆ. ಅವರ ಕಣ್ಣುಗಳು ಫೈಲುಗಳ ಲೆಕ್ಕಣಿಕೆ ಓದಿ ಮಿಂಚುತ್ತಿವೆ. ಅಧಿಕಾರಿಗಳು ಯುದ್ಧಗೆದ್ದ ಯೋಧರಂತೆ ಎಮ್ಮೆಲ್ಲೆ ಎದುರು ನಿಂತಿದ್ದಾರೆ.)

ಎಮ್ಮೆಲ್ಲೆ : ನಿಮಗ ನಾಲಾಯಕ್ಕ ಅಂತ ಬೈದಿದ್ದೆ. ಆದರ ಭೇಷ್! ಇನಾಮು ಕೊಡು ಧಂದೆ ಮಾಡೇರಿ...

ಅಧಿಕಾರಿ ೧ : ನೀವು ಬಹುತೇಕ ಹಂಗ ಬೈದೆ ಇದಿದ್ದರ ಕೆಲಸ ಮಾಡಲಾಕ ಆಗತಿತ್ತೋ ಇಲ್ಲ ಗೊತ್ತಿಲ್ಲ.

ಅಧಿಕಾರಿ ೨ : ನಮ್ಮ ಎಲ್ಲ ಶಾಣ್ಯಾತನಗಳನ್ನ ಪಣಕ್ಕಿಟ್ಟೇವರಿ ಸಾಹೇಬರ...

ಎಮ್ಮೆಲ್ಲೆ : ಗುಡ್ ಗುಡ್ ಕಾಂಗ್ರಾಟ್ಸ್!

ಇಬ್ಬರೂ : ಸಾಹೇಬರ ಅದು ನಿಮಗ ಸಲ್ಲಬೇಕು... (ನಗುವರು)

ಎಮ್ಮೆಲ್ಲೆ : (ನಗು ನಿಲ್ಲಿಸಿ) ಆದರ ಬಾಪೂ... ಗೋಡಸೆ... ಒಂದೂ ತಿಳಿತಿಲ್ಲ.

ಅಧಿಕಾರಿ ೧: ಆದರ ಪತ್ರಿಕೆ ಮುಖಪುಟ ಸುದ್ದಿಯೊಳಗ ಸಾಹೇಬರ ಮಿಂಚಾರ!

ಅಧಿಕಾರಿ ೨: 'ಬ್ರಿಟಿಷ್ ಕಾಲದ ಫಾರ್ಮ ಖಾಸಗಿ ಒಡೆತನಕ್ಕ! ವಿಶಿಷ್ಟ ಸಸ್ಯ-ಜೀವ ಸಂಕುಲಕ್ಕೆ ಧಕ್ಕೆ!' ಮತ್ತ ಅದs ಬಾತಮಿ ಕೆಳಗ- 'ಬ್ರಿಟಿಷ್ ಕಾಲದ ಫಾರ್ಮನ ಕೆರೆಯಲ್ಲಿ ಬಾಪೂನ ಅಂತ್ಯ – ಕೊಲೆಯೋ ಆತ್ಮ ಹತ್ಯೆಯೋ?' ಬಂದದ ಹಹಹ (ನಗು)

ಎಮ್ಮೆಲ್ಲೆ : ಇನ್ನು ಹೆಚ್ಚಿನ ಎಚ್ಚರ ಅಗತ್ಯ... ತಿಳೀತ... ಹೊರಡ್ರಿ...
(ಹೊರಡುವರು... ಮಂದಸ್ಮಿತ ಭಾವದಲ್ಲಿ ಎಮ್ಮೆಲ್ಲೆ... ನಿಧಾನ ಕತ್ತಲೆ)

*(ರಾತ್ರಿ ನಿವೇದಕ ಗಾಂಧೀಜಿ ಧ್ಯಾನಸ್ಥನಾಗಿ ಕುಳಿತ ಆ ಸರ್ಕಲ್ಲಿಗೆ ಬರುವನು. ಸುತ್ತಲೂ ಎಮ್ಮೆಲ್ಲೆ ಸಾಹೇಬರು ಹೊಸದಾಗಿ ಆರಂಭಿಸಲಿರುವ ಉದ್ಯಮದ ಜಾಹೀರಾತು ಹೋರ್ಡಿಂಗ್‌ಗಳಿದ್ದವು. ಅವರಿಗೆ ಶುಭಕೋರುವ ಮರಿ-ಹಿರಿ ಪುಢಾರಿಗಳು, ಬಹುಪರಾಕಿ, ಫಲಾನುಭವಿಗಳ ಚಿತ್ರಗಳಿದ್ದವು. ಒಮ್ಮೆ ಸುತ್ತಲಿನ ಹೋರ್ಡಿಂಗ್‌ಗಳನ್ನೆಲ್ಲ **ತಿರುಗಾಡಿ ನೋಡುವನು** ಮತ್ತು ಬಾಪೂನ **ಪುತ್ಥಳಿಯೆದುರು** ನಿಂತು ಮಾತನಾಡುವನು.)*

ನಿವೇದಕ : ಬಾಪೂ ಕೆರೇಲಿ ತೇಲುವ ಹೆಣವಾದ... ನಾನು ಅವನ ಪಾರ್ಥಿವದೊಳಗ ನಿನ್ನನ್ನ ನೋಡಲಿಕ್ಕೆ ಹತ್ತೇನಿ... ಈ ಬಗಿ ಎಷ್ಟೋ ಬಾಪೂಗಳು ಕೆರೆ, ಬಾವಿ, ನೇಣುಗಳಿಗೆ ನಿನ್ನೆಲ್ಲ ತತ್ವ, ಸಿದ್ಧಾಂತ, ಕನಸುಗಳು ಒಟ್ಟಿಗೆ ಶರಣಾಗತಿದ್ದಾರ... ಅರವತ್ತು ವರ್ಷಕ್ಕ ಮೇಲಾತು ಬಾಪು... ನಮ್ಮನ್ನ ನಾವು ಕಟ್ಟಿಕೊಡಲಿಕ್ಕೆ ಆಗತಿಲ್ಲವಲ್ಲ? ಹರಿದು ಚಿಂದಿಯಾದ ಮನುಷ್ಯ ಮತ್ತು ದೀನರ ಬದುಕಿಗೆ ತೇಪೆಯನ್ನ ಎಲ್ಲಿ ಯಾರು ಹಚ್ಚೋರು? (ಸುತ್ತಲೂ ತೋರಿಸುತ್ತ) ನೋಡು... ನೋಡು... ಇವರನ್ನೆಲ್ಲ ನಾನು ಏನಂತ ಕರೆಯಲಿ...? ಯಾರಂತ... ಹೇಳಲಿ? ಇವರ ಮಾತು ಪೊಳ್ಳು, ವೇಷ ಢೋಂಗಿ... ಸಭ್ಯತೆಯ ಮುಖವಾಡದ ಹಿಂದೆ ರಾಕ್ಷಸಿ ದಾಹ... (ತುಸು ತಡೆದು) ಅದಕ್ಕಂತಲೆ ನೀನು ಕಣ್ಮುಚ್ಚಿ ಧ್ಯಾನಸ್ಥನಾಗಿದ್ದಿ ಏನೋ? ನಿನಗೂ ಸಾಕು ಸಾಕಾಗಿ ಹೀಗೆ ನಿರ್ಧರಿಸಿರಬಹುದು ಅಲ್ಲ!? (ತುಸು ಭಾವುಕನಾಗಿ) ಹೌದು... ನನಗೂ ಸಾಕಾಗಿದೆ... ನೋಡೋದಕ್ಕ ಆಗೋದಿಲ್ಲ... ನಿನ್ನ ಹತ್ತಿರ ಈ ಕಟ್ಟಿಮ್ಯಾಲ ಕೂರತೀನಿ... ಧ್ಯಾನಸ್ಥನಾಗಿ...

(ಬಾಪೂ ಅವರ ಹಾಗೆ ಪುತ್ಥಳಿಯೆದುರು ಕೂರುವನು. ಸುತ್ತಲೂ ಇರುವ ಫ್ಲೆಕ್ಸುಗಳಲ್ಲಿಯ ವ್ಯಕ್ತಿಗಳು ನಿಧಾನಕ್ಕೆ ಜೀವ ಪಡೆವರು. ಅವರ ಮುಖಗಳು ಅಕರಾಳ ವಿಕರಾಳವಾಗುವವು. ಉದ್ದುದ್ದ ನಾಲಿಗೆ ಕೋರೆ ಹಲ್ಲುಗಳು ಮೂಡುವವು. ಅವರೆಲ್ಲ ನಿಧಾನ ಬಂದು ನಿವೇದಕನನ್ನು ಮುತ್ತಿಕೊಳ್ಳುವವರು. ಆತ ಕಿರುಚುವನು. ನಿಧಾನಕ್ಕೆ ಕತ್ತಲೆ.)

ಡಿ.ಎಸ್. ಚೌಗಲೆ

ಸಮಕಾಲೀನ ಕನ್ನಡ ನಾಟಕಕಾರರಲ್ಲಿ ಪ್ರಮುಖ ಹೆಸರು. **ಚಿತ್ರಕಲೆ,** ರಂಗಭೂಮಿ **ಮತ್ತು ಸಾಹಿತ್ಯ** ರಚನೆಯಲ್ಲಿ **ತೊಡಗಿಸಿಕೊಂಡು ಈ ಕ್ಷೇತ್ರಗಳಲ್ಲಿ** ತಮ್ಮದೇ **ಹೆಜ್ಜೆಗಳನ್ನಿಡುತ್ತಿರುವವರು. ಕನ್ನಡ** -ಮರಾಠಿ **ಭಾಷೆಯ ನಡುವಿನ ವಿಶಿಷ್ಟ ಗ್ರಹಿಕೆಯಿಂದ ಸಾಹಿತ್ಯದಲ್ಲಿ ಅನುಸಂಧಾನವೊಂದನ್ನು** ಗಟ್ಟಿಗೊಳಿಸಿ; ಅನುವಾದಿತ ಮಹತ್ವದ ನಾಟಕಗಳು, ಕಥೆ, ಕವನ, ಕಾದಂಬರಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಪ್ರಮುಖ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಬೆಳಗಾವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ.



ಹಳ್ಳಿ ಹೋಟೆಲುಗಳಲ್ಲ
ನಡೆಯುವ ಈ ತಾರತಮ್ಯವ
ಸ್ಥಳೀಯ ದಲಿತರಿಗೆ ಮಾತ್ರ
ನಗರದಿಂದ ಬಂದ ಪ್ಯಾಂಟು
ಶರ್ಟು ತೊಟ್ಟ
ಅಪರಿಚಿತರಾದವರಿಗೆ
ಹೋಟೆಲಿನವರು ಜಾತಿ
ಕೇಳುವುದಿಲ್ಲ

ಲೋಟ ತಟ್ಟೆಯ
ಮೂರು ಪ್ರಸಂಗಗಳು

ಪ್ರೊ|| ರಹಮತ್ ತರೀಕೆರೆ

೧

ಪ್ರಸಂಗ-೧

ಒಮ್ಮೆ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸನ್ನತಿಗೆ ಹೋಗುತ್ತಿದ್ದೆ. ಬುದ್ಧನ ಚೈತ್ಯಾಲಯವಿರುವ ಊರದು. ನಡುವೆ ಯಾವುದೊ ಒಂದು ಪುಟ್ಟಹಳ್ಳಿ ಸಿಕ್ಕಿತು. ಸುಡುಬಿಸಿಲು. ನೀರಡಿಕೆಯೂ ಹಸಿವೂ ಆಗಿತ್ತು. ವಾಹನ ನಿಲ್ಲಿಸಿ ಅಲ್ಲೇ ಇದ್ದ ಒಂದು ತಟ್ಟಿ ಹೋಟೆಲಿಗೆ ಹೋದೆ. ನನ್ನಲ್ಲಿದ್ದ ಕ್ಯಾಮೆರಾ ನೋಟುಬುಕ್ಕು ಇತ್ಯಾದಿ ನೋಡಿ ಹೋಟೆಲು ಮಾಲಕ ಪತ್ರಕರ್ತನೆಂದು ತಿಳಿದನೊ ಏನೊ, ಗಡಿಬಿಡಿಯಿಂದ ಬೆಂಚು ಮತ್ತು ಟೇಬಲನ್ನು ಹೆಗಲ ಮೇಲಿದ್ದ ಅಂಗವಸ್ತ್ರದಿಂದ ಒರೆಸಿ ಸ್ವಾಗತಿಸಿದನು. ಸ್ಟೀಲ್‌ಚೆಂಬಿನಲ್ಲಿ ನೀರು, ಸ್ಟೀಲ್ ಗ್ಲಾಸು ಮತ್ತು ಪ್ಲೇಟಿನಲ್ಲಿ ವಗ್ಗಾಣಿ ಮಿರ್ಚಿ ಬಂತು. ನಂತರ ಸುಡುಸುಡುವ ಟೀ ಸ್ಟೀಲಿನ ಕಪ್ಪಿನಲ್ಲಿ ಬಂತು. ತಿಂಡಿತಿಂದು ಟೀ ಕುಡಿಯುತ್ತ ಕೂತಿದ್ದೆ.

ಅಷ್ಟರಲ್ಲಿ ನಟ್ಟು ಕಡಿಯಲೆಂದು ಹೋಗಿದ್ದ ಕೆಲಸಗಾರರ ತಂಡವೊಂದು ಹೋಟೆಲಿಗೆ ಬಂದಿತು. 'ನಟ್ಟು ಕಡಿಯುವುದು' ಎಂದರೆ, ಎರೆಹೊಲದಲ್ಲಿ ಬೆಳೆದ ಗರಿಕೆಯನ್ನು ಒಣಗುವಂತೆ ಹೆಂಟೆಯೆಬ್ಬಿಸುವುದು. ಹೊಲವನ್ನೆಲ್ಲ ಆವರಿಸಿ ಬೆಳೆಗೆ ತೊಡಕಾಗುವ ಗರಿಕೆಬೇರು ಕೊಂಚ ನೆಲಕ್ಕೆ ತಾಗಿದರೂ ಹೇಗೊ ಬದುಕುವ ಸಾಧ್ಯತೆಯಿದೆಯಾದ್ದರಿಂದ, ಅದರ ಬೇರು ಅಗಸಕ್ಕೆ ಮುಖಮಾಡುವಂತೆ ಹುಶಾರಾಗಿ ಮಗುಚಿ ಹಾಕಲಾಗುತ್ತದೆ. ನಟ್ಟು ಕಡಿಯುವ ಕೆಲಸಗಾರರು ಬಹುಶಃ ದಲಿತರಿರಬೇಕು. ಹೋಟೆಲಿನ ಹೊರಗೆ ಕಲ್ಲಹಾಸಿನ ಮೇಲೆ ಕುಳಿತರು. ಮಾಲಕನು ಸುದ್ದಿಪತ್ರಿಕೆಯ ತುಂಡುಗಳಲ್ಲಿ ವಗ್ಗಾಣಿ ಹಾಕಿ ಕೈಗಿತ್ತನು. ಅವರು ತಿಂದು, ಅದೇ ಪೇಪರಲ್ಲಿ ಬಾಯೊರೆಸಿಕೊಂಡರು. ಮಾಲಕ ಪ್ಲಾಸ್ಟಿಕ್ ಲೋಟಗಳನ್ನು ಕೊಟ್ಟು ಕೆಟಲಿನಿಂದ ಸುಡುಟೀ ಸುರಿದ. ಅದರ ಬಿಸಿಗೆ ಮೆತ್ತಗಾದ ಪ್ಲಾಸ್ಟಿಕ್ ಕಪ್ಪನ್ನು ಹೇಗೊ ಸಂಭಾಳಿಸಿ ಹಿಡಿದು ಅವರು ಟೀ ಕುಡಿದರು. ಬಳಿಕ ಲೋಟವನ್ನು ಅಲ್ಲಿದ್ದ ಪುಟ್ಟಿಯಲ್ಲಿ ಹಾಕಿ, ಹೆಗಲಮೇಲೆ ಸನಿಕೆ ಏರಿಸಿಕೊಂಡು ಹೊಲಗಳತ್ತ ಹೋದರು.

ನನಗೂ ನಟ್ಟುಕಡಿವವರಿಗೂ ಸಿಕ್ಕ ತಿಂಡಿ ಪಾನೀಯ ಒಂದೇ ಪಾತ್ರೆಯಲ್ಲಿ ಬಂದಿದ್ದು. ಆದರೆ ಅವು ಸರ್ವ್ ಆದ ತಟ್ಟೆ ಲೋಟ ಮಾತ್ರ ಬೇರೆಯವು. ನಾನು ಮಾಲಕನಿಗೆ 'ಅಣ್ಣಾ, ಇದು ತಪ್ಪಲ್ಲವಾ?' ಎಂದು ಕೇಳಿದೆ. ಅದಕ್ಕೆ ಆತ 'ತಪ್ಪು ಹೌದರಿ. ಆದರ ನಾನು ಒಳಗ ಕರದು ಜಾಮಿನೊಳಗ ಚಾ ಕೊಟ್ಟರೆ, ಹೋಟಲಿಗ ದೊಡ್ಡಮಂದಿ ಬರಂಗಿಲ್ರಿ, ನಾನೂ ಬದುಕಬೇಕಲ್ಲರಿ. ಗುಲ್ಬುರ್ಗಿಯೊಳಗ ನಮ್ಮದೇ ಲಿಂಗಾಯತ ಖಾನಾವಳಿ ಅದ. ಅಲ್ಲಿ ಎಲ್ಲ ರೀತ್ಯೆತ್ರಿ. ಇಲ್ಲಿ ಪದ್ಧತೀನ ಬ್ಯಾರೆ' ಎಂದನು.

ಪ್ರಸಂಗ-೨

ಈಚೆಗೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ತುಂಗಭದ್ರಾ ನದಿ ತಟದ ಹಳ್ಳಿಯೊಂದಕ್ಕೆ ಗೆಳೆಯರೊಂದಿಗೆ ಹೋಗಿದ್ದೆ. 2009ನೇ ಇಸವಿಯ ಪ್ರವಾಹದಿಂದ ಸಂಪೂರ್ಣವಾಗಿ ನೆಲಸಮವಾಗಿದ್ದ ಊರದು. ಮೊದಲಿಗೆ ಹೊಳೆದಡಕ್ಕೆ ಹೋದೆವು. ದಿಬ್ಬದ ಮೇಲಿದ್ದ ಊರನ್ನೆ ನದಿ ಮುಳುಗಿಸಿಬಿಟ್ಟಿತ್ತು. ಅರ್ಧಮೈಲಿ ದೂರದ ಹೊಲವೊಂದರಲ್ಲಿ ಹೊಸ ಮನೆಗಳನ್ನು ಕಟ್ಟಲಾಗುತ್ತಿತ್ತು. 1992ರ ಪ್ರವಾಹದಲ್ಲೇ ಊರನ್ನು ಸ್ಥಳಾಂತರ ಮಾಡಬೇಕೆಂದು ಸರ್ಕಾರ ನಿರ್ಧರಿಸಿದ್ದರೂ ಜನ ಹೋಗಿರಲಿಲ್ಲ. ಈ ಸಲದ ನೆರೆಯ ಹೊಡೆತಕ್ಕೆ ಸಿಕ್ಕು ನಿರ್ವಾಗಿ ಎಲ್ಲರೂ ಹೊಸ ಊರಿಗೆ ಬಂದಿದ್ದರು. ಹೊಸ ಊರಲ್ಲಿ, ಜಾತಿಕೇರಿಗಳನ್ನು ಕಾಪಾಡಿಕೊಳ್ಳಲು ಆಗಿರಲಿಲ್ಲ. ದಲಿತ ಕೇರಿ ಮಾತ್ರ ಹೊಸ ಊರಲ್ಲೂ ದೂರದಲ್ಲಿ ಪ್ರತ್ಯೇಕವಾಗಿತ್ತು. ಮಾದಿಗ ಸಮುದಾಯವಿರುವ ಕೇರಿಯಲ್ಲಿ ಚರ್ಚಿತ್ತು. ಹೆಚ್ಚುಕಡಿಮೆ ಎಲ್ಲರೂ ಮತಪರಿವರ್ತನೆ ಮಾಡಿಕೊಂಡಿದ್ದರು.

ನಾವು ಮಧ್ಯಾಹ್ನ ಟೀ ಕುಡಿಯಲು ಹೊಸ ಊರಿನ ಹೋಟೆಲಿಗೆ ಹೋದೆವು. ಕೋಮಟಿಗ ಶೆಟ್ಟರ ಹೋಟೆಲದು. ಎರಡು ದಿಕ್ಕಿನಲ್ಲಿ ಕಲ್ಲುಬೆಂಚು ಹಾಕಿದ್ದ ಆ ಹೊಟೆಲಿನಲ್ಲಿ ಒಂದೆಡೆ ಸವರ್ಣೀಯರು. ಇನ್ನೊಂದೆಡೆ ದಲಿತರು ಕೂರುವ ವ್ಯವಸ್ಥೆಯಿತ್ತು. ಮಾತ್ರವಲ್ಲ, ದಲಿತರು ಕೂರುವ ಕಡೆ ಒಂದು ತಗಡನ್ನು ಕಟ್ಟಿ ಮೊಳಕಾಲೆತ್ತರದ ಅಡ್ಡಪಾರ್ಟಿಶನ್ ಮಾಡಲಾಗಿತ್ತು. ಅದು ನನಗೆ ಬರ್ಲಿನ್ ಗೋಡೆಗೂ ಎತ್ತರವಾಗಿದ್ದು ಅನುಲ್ಲಂಘನೀಯವಾಗಿ ಕಂಡಿತು. ಕ್ರಿಸ್ತನಿಗೂ ದಲಿತರನ್ನು ಅಸ್ಪೃಶ್ಯತೆಯಿಂದ ಪಾರುಮಾಡಲು ಆಗಿರಲಿಲ್ಲ. ಅಲ್ಲಿ ಟೀಕುಡಿದ ಒಬ್ಬರನ್ನು-50 ವಯಸ್ಸಿನ ಆತ 5 ಎಕರೆ ಹೊಲದ ರೈತ ಕೂಡ-ಹಿಂಬಾಲಿಸಿಕೊಂಡು ಹೋಗಿ, ಮಾತನಾಡಿಸಿದೆ. ಆತ 'ನೋಡ್ರಿ, ನಂ ಮರ್ಯಾದೆ ನಮಿಗೆ. ಅವರ ಮರ್ಯಾದೆ ಅವರಿಗೆ. ಒಳಗ್ ಹೋದರ ಅವರೇನು ಬ್ಯಾಡನ್ನಂಗಿಲ್ಲ. ಆದರೆ ಯಾಕ್ ಬೇಕ್ರಿ? ಊರಾಗ ನಾವೂ ಬದುಕಬೇಕಲ್ಲರಿ?' ಎಂದನು. ವೈಚಿತ್ರವೆಂದರೆ, ಚಿತ್ತಾಪುರದ ರಸ್ತೆಯಲ್ಲಿದ್ದ ಹೋಟೆಲಿನ ಮಾಲಕನೂ ಇದೇ ಪ್ರಶ್ನೆಯನ್ನು ಕೇಳಿದ್ದ.

ಪ್ರಸಂಗ-೩

ಈಚೆಗೆ ಮೊಹರಂ ನೋಡಲು ಒಂದು ಹಳ್ಳಿಗೆ ಹೋಗಿದ್ದೆ. ಮುಸ್ಲಿಮರು ಹಾಗೂ ಕೋಮಟಿಗ ಶೆಟ್ಟರು ಮಾಲಕರಾಗಿದ್ದ ಅಲ್ಲಿನ ಹೋಟೆಲಲ್ಲಿಯೂ ಟೀ ಕುಡಿಯುವುದಕ್ಕೆ ದಲಿತರಿಗಾಗಿ ಪ್ರತ್ಯೇಕ ವ್ಯವಸ್ಥೆಯಿತ್ತು. ಅಲ್ಲಿದ್ದ ಆ ಊರಿನ ಗೆಳೆಯರಿಗೆ ಇದನ್ನು ದಲಿತರು ಪ್ರತಿಭಟಿಸಲಿಲ್ಲವೇ ಎಂದು ಕೇಳಿದೆ. ಅದಕ್ಕವರು 'ಕೆಲವು ವರ್ಷಗಳ ಹಿಂದೆ ಪ್ರತಿಭಟಿಸಿದರು. ಊರಿನ ಸವರ್ಣೀಯರು 'ಸಣ್ಣಜನ' ಈ ಮಟ್ಟಕ್ಕೆ ಬಂದರೇ ಎಂದು ಹೋಟೆಲು ಬಂದ್ ಮಾಡಿಸಿದರು. ಕೆಲವು ದಲಿತರಲ್ಲಿ ಹಾಲು ಟೀಸೊಪ್ಪು ಸಕ್ಕರೆ ತಂದು ಟೀ ಮಾಡಿ ಕುಡಿಯುವ ಪದ್ಧತಿಯಿಲ್ಲ ಅವರ ಕೂಲಿಗೂ ಕಷ್ಟವಾಯಿತು. 15 ದಿನಗಳ ನಂತರ ದಲಿತರು ರಾಜಿಗೆ ಬಂದರು. ಮತ್ತೆ ಹೋಟೆಲುಗಳು ಶುರುವಾದವು' ಎಂದರು.

೨

ಮೂರು ಹಳ್ಳಿಗಳ ಈ ಹೋಟೆಲ್ ಕತೆ ಹೈದರಾಬಾದ್ ಕರ್ನಾಟಕದ್ದು ಮಾತ್ರವಲ್ಲ. ಕರ್ನಾಟಕದ ನೂರಾರು ಹಳ್ಳಿಗಳ ಹೋಟೆಲುಗಳದ್ದು. ದಲಿತರಿಗೆ ಟೀ ತಿಂಡಿ ಕೊಡುವ ವಿಷಯದಲ್ಲಿರುವ ಈ ಅಘೋಷಿತ ತಾರತಮ್ಯವು, ನಿಸರ್ಗ ಸಹಜವೆಂಬಂತೆ ಈ ಹಳ್ಳಿಗಳಲ್ಲಿ ನೆಲೆಸಿದೆ. ಈ ಪದ್ಧತಿ ಪಟ್ಟಣಗಳಲ್ಲಿ ಇಲ್ಲ. ಪಟ್ಟಣಗಳಿಗೆ ಸಮೀಪವಿರುವ ಹಳ್ಳಿಗಳಲ್ಲಿ ಸಡಿಲವಾಗಿರುತ್ತದೆ. ಆದರೆ ಪಟ್ಟಣಗಳಿಗೆ ದೂರವಿರುವ ಹಳ್ಳಿಗಳಲ್ಲಿ ಹೆಚ್ಚು ಬಿಗಿಯಾಗಿರುತ್ತದೆ. ಹಳ್ಳಿಯಲ್ಲಿ ದಲಿತರು ತಮ್ಮ ಜತೆಗೆ ಕುಳಿತರೆ ಸಹಿಸದ ಜನ, ಪೇಟೆಗೆ ಹೋದಾಗ ಅವರ ಜತೆಯಲ್ಲಿ ಕುಳಿತು ಟೀ ಕುಡಿಯುತ್ತಾರೆ. ಊರು ಮನೆಯಲ್ಲಿ ಮುರಿಯಲಾಗದ್ದನ್ನು ಹೊರಗೆ ಮುರಿಯುತ್ತಾರೆ. ಹೊರಗೆ ಮುರಿದ್ದಿದ್ದರ ಪರಿತಾಪವನ್ನ ಊರುಮನೆಗಳಲ್ಲಿ ಅನುಪಾಲನೆ ಮಾಡಿ ಮುಕ್ತರಾಗುತ್ತಾರೆ. ಹೋಟೆಲ್ ಮಾಲಕರು ತಾರತಮ್ಯ ಆಚರಿಸುತ್ತಿರುವುದು ಊರಿಗೆ ಹೆದರಿಯೊ, ಸಾಮಾಜಿಕವಾಗಿ ಇದು ಸರಿ ಎಂಬ ನಂಬಿಕೆಯಿಂದಲೊ? ಹಿಂದೆ ದಲಿತರು ಹೋಟೆಲಿನ ಸೋಗೆಯ ಮಾಡಿನಲ್ಲಿ ಸಿಕ್ಕಿಸಿದ ತೆಂಗಿನಚಿಪ್ಪಿನಲ್ಲಿ ಟೀ ಹಾಕಿಸಿಕೊಂಡು ಕುಡಿಯುತ್ತಿದ್ದರು. ಈಗ ಪ್ಲಾಸ್ಟಿಕ್ ಕಪ್ಪು ಬಂದಿದೆ. ದಲಿತ ಮಹಿಳೆಯರು ಮಕ್ಕಳನ್ನು ಕಳಿಸಿ, ಟೀ ಹಾಕಿಸಿಕೊಂಡು ಬಂದು ಮನೆಯಲ್ಲಿ ಕುಡಿಯುವುದುಂಟು. ಸಿರುಗುಪ್ಪ ತಾಲೂಕಿನ ಕೆಲವು ಹಳ್ಳಿಗಳಲ್ಲಿ ದಲಿತರೇ ತಮ್ಮ ಕೇರಿಗಳಲ್ಲಿ ಪರ್ಯಾಯವಾದ ಕ್ಯಾಂಟೀನು ಆರಂಭಿಸಿ, ಊರ ಹೋಟೆಲಿನ ಮುಜುಗರ ತಪ್ಪಿಸಿಕೊಂಡಿರುವರು.

ವಿಶೇಷವೆಂದರೆ ಹಳ್ಳಿ ಹೋಟೆಲುಗಳಲ್ಲಿ ನಡೆಯುವ ಈ ತಾರತಮ್ಯವು ಸ್ಥಳೀಯ ದಲಿತರಿಗೆ ಮಾತ್ರ. ನಗರದಿಂದ ಬಂದ ಪ್ಯಾಂಟು ಶರ್ಟು ತೊಟ್ಟ ಅಪರಿಚಿತರಾದವರಿಗೆ ಹೋಟೆಲಿನವರು ಜಾತಿ ಕೇಳುವುದಿಲ್ಲ. ಉದಾಹರಣೆಗೆ ನನಗೆ ಮೊದಲನೇ ಹೋಟೆಲಿನವರು ಕೇಳಲಿಲ್ಲ. ಈ ಕಾರಣಕ್ಕೆ ನಮ್ಮ ಸಾಂಪ್ರದಾಯಕ ಹಳ್ಳಿಗಳು ಎಂಜಲಿನ ಕಾರಣಕ್ಕೆ ಅಸ್ಪೃಶ್ಯತೆಯನ್ನು ಮುಂದುವರೆಸುವ ಜಾಗಗಳು. ದಲಿತರು ಮತ್ತು ಉಳಿದವರು ಕೂರುವ ಜಾಗ, ಬಳಸುವ ತಟ್ಟೆ ಲೋಟಗಳ ವಿಷಯದಲ್ಲಿರುವ ಪದ್ಧತಿ ಕೊಂಚ ಬದಲಾದರೂ ಹಳ್ಳಿ ಹತ್ತಿ ಉರಿಯುತ್ತದೆ. ಊರು ಸುಡುತ್ತದೆಯೆಂದು ಸುಮ್ಮನಿದ್ದರೆ ತರತಮ ಮುಂದುವರೆಯುತ್ತದೆ. ಹೈದರಾಬಾದ್ ಸೀಮೆಗೆ ಹೋಲಿಸಿದರೆ, ದಲಿತರ ಹೋಟೆಲ್ ಪ್ರವೇಶದ ಚರಿತ್ರೆ ಮೈಸೂರು ಕರ್ನಾಟಕದಲ್ಲಿ ಕೊಂಚ ಭಿನ್ನವಾಗಿದೆ. 'ಒಡಲಾಳ' ಕಾದಂಬರಿಯಲ್ಲಿ ಗುರುಸಿದ್ಧನು ಹೋಟೆಲಿಗೆ ಹೋಗಿ, ನನಗೂ ಟೀಕೊಡ್ರಿ ಎಂದು ಜಬರದಸ್ತು ಮಾಡುವ ಸನ್ನಿವೇಶ ನೆನಪಾಗುತ್ತಿದೆ. ಬಸವಣ್ಣ ಹುಟ್ಟಿದ ಹೈದರಾಬಾದ್ ಕರ್ನಾಟಕವು, ನಂಜುಂಡಪ್ಪ ವರದಿಯ ಪ್ರಕಾರ ಆರ್ಥಿಕ ದೃಷ್ಟಿಯಿಂದ ಹಿಂದುಳಿದಿದೆ. ಜತೆಗೆ ಸಾಮಾಜಿಕ ಎಚ್ಚರ ಮತ್ತು ದಲಿತರ ಪ್ರಜ್ಞೆಯ ಆಸ್ಫೋಟದ ದೃಷ್ಟಿಗಳಿಂದಲೂ ಹಿಂದುಳಿದೆ.

೨

ಮನುಷ್ಯ ದೇಹದ ಸ್ಪರ್ಶದಿಂದ ಮೈಲಿಗೆ ಬರುತ್ತದೆ ಎಂದು ನಂಬಿರುವ ಸಾಂಪ್ರದಾಯಕ ಸಮಾಜವು, ಉಣ್ಣುವ ಕುಡಿಯುವ ವಿಷಯದಲ್ಲಿ, ಆಹಾರ ಬಡಿಸುವ ಲೋಟ ತಟ್ಟೆಗಳಿಗೆ ತಾಗುವ ಎಂಜಲಿನಿಂದಲೂ ಮೈಲಿಗೆ ಬರುತ್ತದೆ ಎಂದು ಭಾವಿಸಿದೆ. ಈ ಎಂಜಲಿನ ಆತಂಕವು, ದಲಿತರು ಮತ್ತು ಸವರ್ಣೀಯರ ನಡುವೆ ಮಾತ್ರವಲ್ಲ, ಶೂದ್ರಜಾತಿಗಳ ನಡುವೆ ಕೂಡ ಇದೆ. ದೊಡ್ಡಬಳ್ಳಾಪುರ ಸೀಮೆಯಲ್ಲಿ ಕುರುಬರಲ್ಲೇ ಎರಡು ಪಂಗಡಗಳಿದ್ದು, ಶ್ರೀವೈಷ್ಣವರಾದ ಹೊಸಕುರುಬರ ಮನೆಯಲ್ಲಿ ಊಟ ಮಾಡುವುದಿದ್ದರೆ, ಹಳೇಕುರುಬರು ತಮ್ಮ ತಟ್ಟೆಲೋಟಗಳನ್ನು ಮನೆಯಿಂದ ತೆಗೆದುಕೊಂಡು ಹೋಗುತ್ತಿದ್ದ ಪದ್ಧತಿಯಿತ್ತು. ಈ ಎಂಜಲಿನ ಭಯವು ಬ್ರಾಹ್ಮಣರ ಮನೆಗಳಲ್ಲಿ ಮಡಿ ಮಾಡುವ ಮತ್ತು ಮಾಡದವರ ನಡುವೆ ಇದೆ. ಕೆಲವೊಮ್ಮೆ ಇದು ಬ್ರಾಹ್ಮಣ ಸನ್ಯಾಸಿಗಳು ಮತ್ತು ಲೌಕಿಕರ ನಡುವೆ ಕೂಡ ಇದೆ. ಮಠದ ಸ್ವಾಮಿಗಳು ಬರುತ್ತಾರೆಂದರೆ ಇಡೀ ಮನೆಯಲ್ಲಿ ಗುಡಿಸಿ, ಗೋಮಯದಿಂದ ಸಾರಿಸಿ, ಮಠದಿಂದ ತಂದ ಪ್ರತ್ಯೇಕ ಪಾತ್ರೆಗಳಲ್ಲಿ ಅವರಿಗೆ ಅಡಿಗೆ ಮಾಡುವ ಸನ್ನಿವೇಶವನ್ನು ಶ್ರೀನಿವಾಸ ವೈದ್ಯರ 'ಹಳ್ಳಬಂತು ಹಳ್ಳ' ಕಾದಂಬರಿ ವರ್ಣಿಸುತ್ತದೆ. ಮಲೆನಾಡಿನಲ್ಲಿ ದಲಿತರನ್ನೂ ಒಳಗೊಂಡಂತೆ ಹಿಂದು' ಜಾತಿಗಳ ಎಲ್ಲರೂ ಕ್ರೈಸ್ತರ ಅಥವಾ ಮುಸಲ್ಮಾನರ ವಿಷಯದಲ್ಲಿ ಈ ಎಂಜಲಿನ ಎಚ್ಚರವಹಿಸುತ್ತಿದ್ದರು. ಪ್ರತಿಷ್ಠಿತ ಆಳುವ ವರ್ಗಕ್ಕೆ ಸೇರಿದ ಪಾದ್ರಿ ಜೇವರತ್ನಯ್ಯನು ಮಲೆನಾಡಿನ ಒಕ್ಕಲಿಗ ಗೌಡರ ಮನೆಯೊಂದಕ್ಕೆ ಬಂದಾಗ, ಅವನಿಗೆ ತಟ್ಟೆಯಲ್ಲಿ ಬಡಿಸಬೇಕೊ, ಎಲೆಯಲ್ಲಿ ಬಡಿಸಬೇಕೊ, ಬಾಳೆಲೆಯಲ್ಲಿ ಕುಡಿ ಹಾಕಬೇಕೊ ಹಾಕಬಾರದೊ, ಜಗುಲಿಯಲ್ಲಿ ಕೂರಿಸಬೇಕೊ ಪಡಸಾಲೆಯಲ್ಲಿ ಕೂರಿಸಬೇಕೊ ಎಂದು ಮನೆಯಲ್ಲಿ ಜಿಜ್ಞಾಸೆಯ ಯುದ್ಧವೇ ನಡೆದುಹೋಗುತ್ತದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಈ ನಾಟಕೀಯ ಪ್ರಸಂಗ ಬರುತ್ತದೆ. ಮೈಲಿಗೆ ಈ ಆತಂಕವು ಗಂಡಸರಿಗಿಂತ ಮಹಿಳೆಯರಲ್ಲಿ, ವಯಸ್ಸಿನಲ್ಲಿ ಕಿರಿಯರಿಗಿಂತ ವೃದ್ಧರಲ್ಲಿ ಹೆಚ್ಚು. ಗೊರೂರು ರಾಮಸ್ವಾಮಿ ಅಯ್ಯಂಗಾರರ ಪ್ರವಾಸ ಕಥನದ ('ಅಮೆರಿಕದಲ್ಲಿ ಗೊರೂರು') ಒಂದು ಪ್ರಸಂಗ ಇಲ್ಲಿ ಉಲ್ಲೇಖನೀಯ. ನಯಾಗರ ಜಲಪಾತ ನೋಡಲು ಹೋಗಿದ್ದ ಗೊರೂರು ದಂಪತಿಗಳು, ಮರಳಿ ಬರಲು ಸಕಾಲದಲ್ಲಿ ಬಸ್ಸು ಸಿಗದೆ, ಟ್ಯಾಕ್ಸಿ ಡ್ರೈವರನ ಮನೆಯಲ್ಲಿ ಉಳಿಯುವ ಪ್ರಸಂಗ ಬರುತ್ತದೆ. ಆತ ಇವರು ಸಸ್ಯಾಹಾರಿಗಳೆಂದು ಮನೆಯಲ್ಲಿದ್ದ ಹಣ್ಣಿನರಸ ಹಣ್ಣು ಬ್ರೆಡ್ಡು ಜಾಮುಗಳನ್ನೆಲ್ಲ ಕೊಡುತ್ತಾನೆ. ಗೊರೂರರು ಅವನ ಮನೆಯಲ್ಲಿ ನೀರು ಕಾಫಿ ಕುಡಿಯುತ್ತಾರೆ. ಆದರೆ ಅವರ ಮಡದಿ ತಮ್ಮ ಬ್ಯಾಗಿನಿಂದ ಬೆಳ್ಳಿಯ ಲೋಟ ತಟ್ಟೆ ತೆಗೆದು ಅದರಲ್ಲಿ ಅವರು ಕೊಟ್ಟದ್ದನ್ನೆಲ್ಲ ಬಡಿಸಿಕೊಳ್ಳುತ್ತಾರೆ. 'ನಿಮ್ಮ ಮಡದಿಯೇ ಎಲ್ಲ ಪಾತ್ರೆಗಳನ್ನು ತೊಳೆದರು, ಆದರೂ ಯಾಕೆ ನಿಮ್ಮ ತಟ್ಟೆ ಬಳಸುತ್ತಿದ್ದಾರೆ?' ಎಂದು ಚಾಲಕ ವಿಸ್ಮಯದಿಂದ ಕೇಳುತ್ತಾನೆ. ಸಾಂಸ್ಕೃತಿಕವಾಗಿ ಅನ್ಯನಾದ ಅವನಿಗೆ ತಟ್ಟೆಲೋಟಗಳ ವಿಷಯದಲ್ಲಿ ಬ್ರಾಹ್ಮಣರ ಮಡಿ ಮೈಲಿಗೆ ಸಮಸ್ಯೆ ಹೇಳಲು ಗೊರೂರಿಗೆ ಕಷ್ಟವಾಗುತ್ತದೆ. ಕಡೆಗೆ ಈ ತಟ್ಟೆ ಲೋಟಗಳ ಜತೆ ಅವಳಿಗೆ ಭಾವನಾತ್ಮಕ ಸಂಬಂಧವಿದೆ. ಅದರಲ್ಲಿ ಕುಡಿದರೇನೇ ತೃಪ್ತಿ ಎಂದು ಅವರು ಸಮಜಾಯಿಶಿ ಕೊಟ್ಟು ಪಾರಾಗುತಾ

೩

ವಿಶೇಷವೆಂದರೆ, ಉಚ್ಚಿಷ್ಟ ಅಥವಾ ಎಂಜಲನ್ನು ಒಂದು ಮೈಲಿಗೆಯೆಂದು ಭಾವಿಸಿರುವ ಸಮಾಜದಲ್ಲೇ ಅದನ್ನು ಪವಿತ್ರವೆಂದು ಭಾವಿಸಿರುವ ಆಚರಣೆಗಳೂ ಇವೆ. ಜಾತಿಯನ್ನು ಒಪ್ಪದ ಗುರುಪಂಥಗಳಲ್ಲಿ ದೀಕ್ಷೆ ಪಡೆಯುವವರು, ಗುರುವಿನ ಎಂಜಲನ್ನು ಸ್ವೀಕರಿಸುವ ಆಚರಣೆಯಿದೆ. ಗುರು ಕುಡಿದುಬಿಟ್ಟ ಹಾಲನ್ನು ಕುಡಿಯುವುದು ಸೂಫಿ ದೀಕ್ಷೆಗಳಲ್ಲೂ ಇದೆ. ದೈವದ ಎಂಜಲನ್ನು ಪವಿತ್ರವೆಂದು ಭಾವಿಸುವಿಕೆ ಅನೇಕ ಆಚರಣೆಗಳಲ್ಲಿದೆ. ಗುರು ಅಟ್ಟಿದ ಅಡುಗೆಯ ಮೀಸಲನ್ನು ಮುರಿದ ಬಳಿಕ, ಅದನ್ನು ಪ್ರಸಾದವೆಂದು ಭಾವಿಸುವಿಕೆಯಿದೆ.

ಉಚ್ಚಿಷ್ಟ ಅಥವಾ ಎಂಜಲನ್ನು ಒಂದು
ಮೈಲಿಗೆಯೆಂದು ಭಾವಿಸಿರುವ
ಸಮಾಜದಲ್ಲೇ ಅದನ್ನು ಪವಿತ್ರವೆಂದು
ಭಾವಿಸಿರುವ ಆಚರಣೆಗಳೂ ಇವೆ.
ಜಾತಿಯನ್ನು ಒಪ್ಪದ ಗುರುಪಂಥಗಳಲ್ಲಿ
ದೀಕ್ಷೆ ಪಡೆಯುವವರು, ಗುರುವಿನ
ಎಂಜಲನ್ನು ಸ್ವೀಕರಿಸುವ ಆಚರಣೆಯಿದೆ.
ಗುರು ಕುಡಿದುಬಿಟ್ಟ ಹಾಲನ್ನು
ಕುಡಿಯುವುದು ಸೂಫಿ ದೀಕ್ಷೆಗಳಲ್ಲೂ ಇದೆ.

'ಮಿಕ್ಕಪ್ರಸಾದ' ಎಂಬ ಮಾತು ಶರಣ ಸಂಬಂಧಿಯಾದ ಮಂಟೆಸ್ವಾಮಿ ಪರಂಪರೆಯಲ್ಲಿ ಮತ್ತೆಮತ್ತೆ ಬರುತ್ತದೆ. ಎಂಜಲಿನ ಬಗ್ಗೆ ಇರುವ ಮೇಲ್ಜಾತಿಯವರ ಆತಂಕಕ್ಕೆ ಶರಣರು ನಾವು ದೇವರಿಗೆ ಅರ್ಪಿಸುವ ನೀರು ಮತ್ತು ಹೂವುಗಳು 'ಮೀನಿನೆಂಜಲು' 'ತುಂಬಿಯೆಂಜಲು' ಎಂದು ಪ್ರತಿವಾದ ಮಂಡಿಸುತ್ತಿದ್ದರು. ಮುಗ್ಧಭಕ್ತಿಯಲ್ಲಿ ಮಾಡುವ ಆಚರಣೆಗಳಲ್ಲಿ ಎಂಜಲಿನ ಮಡಿಯನ್ನು ಭಕ್ತಿಪಂಥಗಳು ನಿರಾಕರಿಸುತ್ತವೆ. ರಾಮನಿಗೆ ಕಚ್ಚಿತಿಂದು ರುಚಿನೋಡಿದ ಹಣ್ಣುಗಳನ್ನು ಅರ್ಪಿಸುವ ಶಬರಿಯ ಭಕ್ತಿ, ಮಾಂಸಖಂಡಗಳ ರುಚಿ ನೋಡಿ ಶಿವನಿಗೆ ಅರ್ಪಿಸುವ ಬೇಡರ ಕಣ್ಣಪ್ಪನ ಭಕ್ತಿ ಇಂತಹುದು. ಹರಪನಹಳ್ಳಿಯ ಅರಸೀಕೆರೆಯಲ್ಲಿ ನಡೆಯುವ ಊರಮ್ಮನ ಜಾತ್ರೆಯಲ್ಲಿ ದಲಿತ ಮಹಿಳೆಯೊಬ್ಬಳು ಎಂಜಲು ಮಾಡಿದ ಅನ್ನದ ರಾಶಿಯನ್ನು ಇಡೀ ಜಾತ್ರೆಯ ಜನ ಪ್ರಸಾದವಾಗಿ ಸ್ವೀಕರಿಸುವ ಆಚರಣೆಯಿದೆ. ಎಂಜಲಾಗುತ್ತದೆ ಎಂದು ದಲಿತರಿಗೆ ಮೇಲಿನಿಂದ ಚೆಂಬಿನಲ್ಲಿ ನೀರನ್ನು ಎತ್ತಿ ಬೊಗಸೆಗೆ ಹೊಯ್ಯುವ ಹಳ್ಳಿಗಳಲ್ಲೇ ದಲಿತ ಬಸವಿಯ ಎಂಜಲನ್ನು ಪವಿತ್ರವೆಂದು ಸವರ್ಣೀಯರು ಸ್ವೀಕರಿಸುವ ಈ ಆಚರಣೆ ಏನನ್ನು ಸೂಚಿಸುತ್ತಿವೆ? ವರ್ಷದ ನಿರ್ದಿಷ್ಟ ದಿನ, ದೇವರು ಧರ್ಮದ ಹೆಸರಲ್ಲಿ ಎಂಜಲನ್ನು ತಿಂದು ವರ್ಷವಿಡೀ ಆಚರಿಸುವ ಅಸ್ಪೃಶ್ಯತೆಯನ್ನು ಗಿಲ್ಟನ್ನು ಸಮತೋಲನ ಮಾಡಿಕೊಳ್ಳುವ ಉಪಾಯವೇ?

ꕥ

ಮೊಸರು ಕಡೆಯುವ ಕಡೆಗೋಲು ಕಂಬಕ್ಕೆ ಬಾಯಿ ಬಂದಿದ್ದರೆ ಶತಮಾನಗಳ ಅಡುಗೆ ಮನೆಯಲ್ಲಿ ನಡೆದಿರಬಹುದಾದ ಮಾತುಕತೆಗಳನ್ನು ಅದು ಹೇಳುವಂತಿದ್ದರೆ ಹೇಗಿರುತ್ತಿತ್ತು ಎಂಬ ಊಹೆಯೊಂದು ಕುವೆಂಪು ಕಾದಂಬರಿಯಲ್ಲಿ ಬರುತ್ತದೆ. ಅದರಂತೆ ಹೋಟಲಿಗೆ ಹೋಗಿ ಟೀ ನೀರು ಕುಡಿಯುವಾಗ, ನಾನು ಲೋಟಗಳ ಅಂಚನ್ನೇ ಗಮನಿಸುತ್ತ, ಅವು ತಮ್ಮ ಜೀವಮಾನದಲ್ಲಿ ಎಷ್ಟೆಲ್ಲ ಕೈ ಮತ್ತು ತುಟಿಗಳಿಂದ ಮುಟ್ಟಿಸಿಕೊಂಡಿರಬಹುದು ಎಂದು ಕುತೂಹಲಕ್ಕೆ ಒಳಗಾಗುವುದುಂಟು. ಉಚ್ಚರಿಸಲು ನಗಲು ಉಣ್ಣಲು ಚುಂಬಿಸಲು ಕಚ್ಚಲು ಬೈಯಲು ಮೌನವಹಿಸಲು ಹೀಗೆ ನಾನಾ ಕಾರಣಕ್ಕೆ ಬಳಕೆಯಾಗುವ ಎಷ್ಟೊಂದು ತುಟಿಗಳು ಇವುಗಳಂಚನ್ನು ಸ್ಪರ್ಶಿಸಿರಬಹುದು? ಮಕ್ಕಳ ಮುದುಕರ ತರುಣಿಯರ ಯುವಕರ ಭಿಕಾರಿಗಳ ಅಧಿಕಾರಿಗಳ ಎಷ್ಟೊಂದು ಪರಿಯ ಜನರ ತುಟಿಸಂಗ ಇವು ಮಾಡಿರಬಹುದು? ಸಿಗರೇಟು ಸೇದಿ ಕಪ್ಪಾದ, ರೇಶಿಮೆಯಂತೆ ಮೃದುವಾದ, ಚಳಿಗೆ ಒಡೆದ ತುಟಿ, ಬಣ್ಣ ಹಚ್ಚಿದ, ಎಲೆಅಡಿಕೆ ಮೆದ್ದ ಎಷ್ಟೊಂದು ತುಟಿಗಳು ಇವುಗಳ ತುದಿಯನ್ನು ಮುತ್ತಿಕ್ಕಿರಬಹುದು? ಪ್ರತಿಲೋಟದ ನಡುವಿಗೆ ಕೈಹಾಕಿ ಹಿಡಿದು ಅದರಂಚಿಗೆ ತುಟಿ ತಾಗಿಸಿದ ಜನರನ್ನು ಸೇರಿಸಲು ಸಾಧ್ಯವಾದರೆ, ದೊಡ್ಡ ಕ್ರಿಕೆಟ್ ಮೈದಾನವೇ ತುಂಬೀತು. ಆದರೆ ಜೀವನದಲ್ಲಿ ಒಂದೇ ಬಾರಿ ಒಬ್ಬರ ತುಟಿಗೆ ತನ್ನ ಅಂಚನ್ನು ತಾಗಿಸುವ ಪೇಪರ್ ಇಲ್ಲವೇ ಪ್ಲಾಸ್ಟಿಕ್ ಲೋಟಗಳಿಗೆ ಈ ಭಾಗ್ಯವಿಲ್ಲ. ಆದರೆ ಏಕತುಟಿ ವ್ರತಸ್ಥರಾಗಿ ಪಾವಿತ್ರ್ಯ ಉಳಿಸಿಕೊಂಡಿರುವ ಇವಕ್ಕೆ ಹೋಲಿಸಿದರೆ, ಸಾವಿರಾರು ತುಟಿಗಳ ಸಂಗ ಮಾಡಿ, ಎಂಜಲಿನ ಭಯವನ್ನು ಮೀರಿರುವ ಸ್ಟೀಲು ಮತ್ತು ಗಾಜಿನ ಲೋಟಗಳು, ಸಾಮಾಜಿಕವಾಗಿ ಹೆಚ್ಚು ಪವಿತ್ರವಾದವು. ಆಧುನಿಕ ತಂತ್ರಜ್ಞಾನದ ಮೂಲಕ ನಗರದ ಕಾರ್ಖಾನೆಯಲ್ಲಿ ತಯಾರಾದ ಪ್ಲಾಸ್ಟಿಕ್ ಲೋಟಗಳು, ತೆಂಗಿನ ಚಿಪ್ಪಿನಲ್ಲಿ ಕುಡಿಯಬೇಕಾದ ಅಪಮಾನದ ದಲಿತರ ಮುಜುಗರವನ್ನು ನಿವಾರಿಸಿವೆ; ಹೋಟೆಲು ಮಾಲಿಕರನ್ನು, ದಲಿತರ ಕಪ್ಪನ್ನು ತೊಳೆವ 'ಕಷ್ಟ'ದಿಂದಲೂ ಅಸ್ಪೃಶ್ಯತೆ ವಿರೋಧಿ ಕಾನೂನಿನ ಹಿಡಿತದಿಂದಲೂ ಪಾರುಮಾಡಿವೆ. ಆದರೆ ಅಸ್ಪೃಶ್ಯತೆಯನ್ನು ಮುಂದುವರೆಸುವುದಕ್ಕೆ ಇವು ಹೊಸ ಉಪಾಯವೂ ಆಗಿರುವುದು ಮಾತ್ರ ನಮ್ಮ ಸಮಾಜದ ವೈರುಧ್ಯವಾಗಿದೆ.

ಹಿಂದೆ ಲಾಲೂಪ್ರಸಾದ್ ಯಾದವ್ ರೇಲು ಮಂತ್ರಿಯಾಗಿದ್ದಾಗ, ಮಣ್ಣಿನ ಲೋಟಗಳಲ್ಲಿ ಟೀ ಕಾಫಿ ಒದಗಿಸುವ ಹುಕುಂ ಹೊರಡಿಸಿದ್ದರು. ಪ್ಲಾಸ್ಟಿಕ್ ಹಾವಳಿ ತಗ್ಗಿಸುವುದೊ ಮತ್ತು ಕುಂಬಾರರಿಗೆ ಕೆಲಸ ಕೊಡುವುದೊ ಅವರ ಉದ್ದೇಶವಿರಬಹುದು. (ನನಗೆ ಮುದ್ದಾದ ಆ ಮಣ್ಣಿನ ಲೋಟಗಳನ್ನು ಟೀ ಕುಡಿದ ಬಳಿಕ ಒಡೆದು ಹಾಕಲು ಮನಸ್ಸೇ ಬರುತ್ತಿರಲಿಲ್ಲ.) ಆದರೆ ಈ ಮಣ್ಣಿನ ಪಾತ್ರೆಗಳು ಕೂಡ –ಪ್ಲಾಸ್ಟಿಕ್ ಪೇಪರು ಲೋಟಗಳಂತೆ ಅಥವಾ ಬಾಳೆಲೆ, ಅಡಕೆ ಹಾಳೆ, ಮುತ್ತುಗದ ಎಲೆಯ ತಟ್ಟೆಗಳಂತೆ – ಲೋಹದ ತಟ್ಟೆ ಲೋಟಗಳನ್ನು ತೊಳೆಯುವ ಕಷ್ಟವನ್ನು ನಿವಾರಿಸುತ್ತವೆ. ಆದರೆ ಲೋಹದ ತಟ್ಟೆ ಲೋಟಗಳಿಂದ ಬರುವ ಎಂಜಲು ಪ್ರಶ್ನೆಯನ್ನು ಉಪಾಯವಾಗಿ ದಾಟುತ್ತವೆ. ಸಂಪ್ರದಾಯ ಮುರಿಯುವವರು ಪ್ರತಿರೋಧದ ಹಾದಿಗಳನ್ನು ಹುಡುಕುವಂತೆ, ಸಂಪ್ರದಾಯವಾದವೂ ತನ್ನ ಮುಂದುವರಿಕೆಗೆ ತಂತ್ರಗಳನ್ನು ಹುಡುಕುತ್ತಿರುತ್ತದೆ. ಅದಕ್ಕೆ ಆಗ ಆಧುನಿಕ ತಂತ್ರಜ್ಞಾನವೂ ವರವಾಗಿ ಬಳಕೆಯಾಗುತ್ತದೆ. ಮಾನಸಿಕವಾಗಿ ಸಾಮಾಜಿಕವಾಗಿ ಎಂಜಲು ಮತ್ತು ಅಸ್ಪೃಶ್ಯತೆಗಳನ್ನು ಪವಿತ್ರೀಕರಿಸುವ ಇಲ್ಲವೇ ಅಪವಿತ್ರೀಕರಿಸುವ ಗ್ರಹಿಕೆಗಳು ಹೋಗದಿದ್ದರೆ, ಲೋಟ ತಟ್ಟೆಗಳಾದರೂ ಏನು ಮಾಡುತ್ತವೆ? ಕೆಲವರ ಎಂಜಲು ಮೈಲಿಗೆಯಾದರೆ, ಮತ್ತೆ ಕೆಲವರು ಉಂಡ ಎಂಜಲನ್ನು ರೋಗಪರಿಹಾರಕವಾದ ಔಷಧಿ ಎಂದು ಸಮರ್ಥನೆಗೆ ಒಳಗಾಗಿರುವ ಹೊತ್ತಲ್ಲಿ, ಹೈದರಾಬಾದ್ ಕರ್ನಾಟಕದ ಮೂರು ಹಳ್ಳಿ ಹೋಟೆಲುಗಳಲ್ಲಿ ನಾನು ಕಂಡ ಟೀ ಲೋಟದ ಪ್ರಸಂಗಗಳು ಕಾಡುತ್ತಿವೆ. ದಲಿತರ ಎಂಜಲನ್ನು ಮೇಲುಜಾತಿಯವರ ಮೇಲೆ ಸಿಂಪಡಿಸಿ ರೋಗ ಗುಣಪಡಿಸುವ ಮಿತ್‌ಗಳನ್ನು 12ನೇ ಶತಮಾನದ ಶರಣರು ಸೃಷ್ಟಿಸಿದ್ದರು- ಅಸಮಾನತೆಯ ತಾರತಮ್ಯವಾದದ ಸೊಕ್ಕು ಮುರಿಯಲು. ಅದೇ ಮಿತ್ ಈಗ ಉಲ್ಟಾ ಆಗಿ ಅಭಿನಯಗೊಳ್ಳುತ್ತಿದೆ ಕರ್ನಾಟಕದಲ್ಲಿ.

ಪ್ರೊ|| ರಹಮತ್ ತರೀಕೆರೆ

ಕನ್ನಡದ ಆಲೋಚನೆಯನ್ನು ಭಿನ್ನವಾಗಿ ಕಟ್ಟುತ್ತಿರುವವರಲ್ಲಿ ಪ್ರಮುಖರು. ಪ್ರತಿ ಸಂಸ್ಕೃತಿಯ ಹುಡುಕಾಟ, ಎಲ್ಲಾ ಜ್ಞಾನ ಶಾಖೆಗಳ ಹಾದು ಹಿಡಿದು ಕನ್ನಡದ್ದೇ ಆದ ಚಿಂತನಾ ಮಾದರಿಯನ್ನು ಕಟ್ಟುವಲ್ಲಿ ಅಪಾರ ಶ್ರಮ. ನಾಡಿನಾದ್ಯಂತ ತಿರುಗಾಡಿ ಜನ ಬದುಕಿನ ತಳಮಳಗಳನ್ನು, ಚೈತನ್ಯವನ್ನು ಗುರುತಿಸಿ ಬರೆಯುವಲ್ಲಿ ಸಿದ್ಧ ಹಸ್ತರು. [illegible] ಅನೇಕ [illegible] ಮಹಾಪೂರ. ವರ್ತಮಾನದ ಎಚ್ಚರಕ್ಕೆ ತೆರೆದುಕೊಂಡ ಕನ್ನಡದ ಮಹತ್ವ ಲೇಖಕ.

ಒಂದು ಅಪರೂಪದ ನೀಳ್ಗತೆ



ಒಂದು ಗುಡಿಸಲಿನಿಂದ

ಮೂಲ: ಎಚ್.ಬಿ. ಸೇಂಟ್‌ಪಿಯರ್
ಅನುವಾದ: ಎಸ್. ಶಿವಲಿಂಗಂ

ತಜ್ಞರು ಮಾತ್ರ ತಮ್ಮಷ್ಟಕ್ಕೆ ತಾವು ಸತ್ಯದ ಬಗ್ಗೆ ಗುರುವ ನೀಡಿದ ಮೂರು ಉತ್ತರಗಳನ್ನೇ ಇಟ್ಟುಕೊಂಡು ಆಗಾಗ ಗುರುವನು ನೀಡಿದ್ದ ತಂಬಾಕು ಸೇದುವ ಪೈಪಿನಿಂದ ತಂಬಾಕು ಸೇದುತ್ತಿದ್ದರು. ಹಾಸಿಗೆಯ ಮೇಲೆ ತಲೆ ಇಟ್ಟುಕೊಂಡು ಆ ಹುಕ್ಕಾದ ಹಕ್ಕುದಾರನಾದ ಆ ಸತ್ಯವಂತನ ಬಗ್ಗೆ ಯೋಚನೆ ಮಾಡುತ್ತಾ ಇದ್ದರು. ಅವರ ಕಣ್ಣುಗಳಲ್ಲಿ ಅಶ್ರುಧಾರೆ ಸುರಿಯುತ್ತಿತ್ತು. ಆ ಗುಡಿಸಿಲಿನ ಬೆಳಕು ಇಡೀ ಮಾನವ ಸಮುದಾಯದ ಮೇಲೆ ಹರಡಬೇಕಿದೆ ಎಂದು ಅವರು ಆಲೋಚಿಸುತ್ತಾ ಇದ್ದರು.

ಅದೋ ಅಲ್ಲಿ ನಮಗೆ ಕಾಣುತ್ತಿರುವ ಅರಮನೆಯಂತಹ ಬಂಗಲೆ. ಅದು ಬೇರೆ ಏನಲ್ಲ, ಆಂಗ್ಲ ಕಲಾವಿದರ ಪರಿಷತ್ತು. ಈ ಪರಿಷತ್ತು ಬಹಳ ವಿಶೇಷವಾಗಿ ಕಾಣುತ್ತಿರುವುದಕ್ಕೆ ಒಂದು ಮುಖ್ಯವಾದ ಕಾರಣವಿದೆ. ಪರಿಷತ್ತಿನ ಅಧ್ಯಕ್ಷರ ಆಜ್ಞೆಯಾನುಸಾರ ಕೆಲ ಸದಸ್ಯರು ಜಗತ್ತಿನ ಬೇರೆ ಬೇರೆ ದೇಶಗಳಿಗೆ ಹೊರಡಲು ಸಿದ್ಧರಾಗುತ್ತಿದ್ದಾರೆ. ಹೀಗಾಗಿಯೇ ಪರಿಷತ್ತು ಇಂದು ಬಹಳ ವಿಶೇಷವಾಗಿ ಗೋಚರಿಸುತ್ತಿದೆ.

ಈ ಪರಿಷತ್ತು ಚೆನ್ನಾಗಿ ಬೆಳೆದು ಇಡೀ ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದ ಇಂಗ್ಲೆಂಡಿನಲ್ಲಿರುವ ವಿಶ್ವವಿದ್ಯಾಲಯಗಳು, ಧರ್ಮಸಂಸ್ಥೆಗಳು, ಮಠಗಳು, ಶ್ರೀಮಂತರು, ವ್ಯಾಪಾರಸ್ಥರು, ಪಾದ್ರಿಗಳು ಮತ್ತು ದಾನ-ಧರ್ಮ ಮಾಡುವ ಉದಾತ್ತ ಮನೋಭಾವದವರು, ಹೀಗೆ ಎಲ್ಲರೂ ಯಾವುದೇ

ಪ್ರತಿಫಲಾಪೇಕ್ಷೆಯಿಲ್ಲದೆ ದೇಣಿಗೆ ನೀಡಿದರು. ಇಂಗ್ಲೆಂಡಿನ ರಾಜಕುಟುಂಬದವರು ಸೇರಿದಂತೆ, ಉತ್ತರ ಯೂರೋಪಿನಲ್ಲಿರುವ ಕೆಲವು ರಾಜರು ಸಹ ಇದರಲ್ಲಿ ಭಾಗಿಯಾದರು. ಈ ಪರಿಷತ್ತು ಇಪ್ಪತ್ತು ತಜ್ಞರನ್ನು ಆಯ್ಕೆ ಮಾಡಿ ಪ್ರತಿಯೊಬ್ಬರು ಪ್ರಪಂಚಪರ್ಯಟನೆಯಲ್ಲಿ ಉತ್ತರ ಪಡೆದುಕೊಂಡು ಬರಬೇಕಾದ ಪ್ರಶ್ನಾವಳಿಯಿರುವ ಓಲೆಗಳನ್ನು ಪ್ರತಿಯೊಬ್ಬರಿಗೂ ನೀಡಿತು.

ಆ ಓಲೆಗಳಲ್ಲಿ ಮೂರು ಸಾವಿರದ ಐನೂರು ಪ್ರಶ್ನೆಗಳಿದ್ದವು. ಪ್ರತಿಯೊಬ್ಬ ತಜ್ಞರಿಗೂ ಬೇರೆ ಬೇರೆ ಪ್ರಶ್ನೆಗಳಿದ್ದವು. ಆ ಪ್ರಶ್ನೆಗಳನ್ನು ಅವರು ಹೋಗಿ ಬರಬೇಕಾದ ಪ್ರದೇಶಗಳಿಗನುಗುಣವಾಗಿ ರಚಿಸಲಾಗಿತ್ತು. ಅದೇ ಸಂದರ್ಭದಲ್ಲಿ ಪ್ರಶ್ನೆಗಳನ್ನು ಒಂದಕ್ಕೊಂದು ಸಂಬಂಧ ಇರುವಂತೆಯೂ, ಒಂದರ ಉತ್ತರ ಮತ್ತೊಂದರಲ್ಲಿ ಬರುವಂತೆಯೂ ರಚಿಸಲಾಗಿತ್ತು. ಇವುಗಳನ್ನು ಶ್ರೇಷ್ಠ ವಿದ್ವಾಂಸರು ಮತ್ತಷ್ಟು ಉತ್ತಮಗೊಳಿಸಿ ಪರಿಷತ್ತಿನ ಅಧ್ಯಕ್ಷರು ಹಾಗೂ ತಜ್ಞರಿಗೆ ನೀಡಿದರು. ಪ್ರಪಂಚದಲ್ಲಿ ಯಾವ ದೇಶ ಕೂಡಾ ಇಂತಹ ಪ್ರಯತ್ನಕ್ಕೆ ಇಳಿಯಲಿಲ್ಲವೆಂದು, ಮತ್ತು ನಮ್ಮ ಈ ಪ್ರಯತ್ನವು ಯಶಸ್ಸು ಕಾಣುವ ಸಮಯದಲ್ಲಿ ಯಾವೊಂದು ದೇಶವೂ ಕಟ್ಟಲಾಗದ ಸುಂದರ ಜ್ಞಾನಸೌಧವನ್ನು ನಿರ್ಮಿಸಿರುತ್ತೇವೆ ಎಂದು ವಿವರಿಸಿದರು. ಪ್ರಪಂಚದ ದೂರ ದೂರದ ದೇಶಗಳಲ್ಲಿ ಹರಡಿದ್ದ ನಿಜವಾದ ಜ್ಞಾನದ ಮಾಣಿಕ್ಯಗಳನ್ನು ಒಂದೆಡೆ ಸೇರಿಸುವ ಈ ಕಲಾವಿದರ ಪರಿಷತ್ತಿನ ಮಹತ್ವದ ಸೇವೆಯನ್ನು ಅಧ್ಯಕ್ಷರು ಚೆನ್ನಾಗಿ ಅರಿತಿದ್ದರು. ಮತ್ತು ಅವುಗಳನ್ನು ಸರಳವಾಗಿ ಅರ್ಥಮಾಡಿಸಿದರು.

ಜ್ಞಾನವನ್ನು ಶೇಖರಿಸುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದ ಪ್ರತಿಯೊಬ್ಬರು ತಂತಮ್ಮ ಪ್ರಶ್ನೆಗಳೊಂದಿಗೆ ತಮ್ಮ ಪ್ರಯಾಣದ ಸಂದರ್ಭದಲ್ಲಿ ಬೈಬಲ್, ತಾಳೆಗರಿ ಪುಸ್ತಕಗಳು ಮತ್ತು ಇತರೆ ಶ್ರೇಷ್ಠ ಪುಸ್ತಕಗಳನ್ನು ಖರೀದಿಸಿಕೊಳ್ಳಬೇಕೆಂದು ಆದೇಶಿಸಲಾಯಿತು. ಒಂದು ವೇಳೆ ಹಳೆಯ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಲಿಲ್ಲವಾದರೆ, ಆ ಪುಸ್ತಕಗಳಲ್ಲಿರುವ ವಿಚಾರಗಳನ್ನು ಬರೆದು ತರಬೇಕೆಂದು ಸೂಚಿಸಲಾಯಿತು. ಈ ಪ್ರಯಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ತಜ್ಞರಿಗೆ ಅಗತ್ಯವಾಗಿದ್ದ ಹಣಕಾಸಿನ ನೆರವನ್ನು ನೀಡಬೇಕೆಂದು ಇವರು ಪ್ರಯಾಣಿಸುವ ದೇಶಗಳಲ್ಲಿದ್ದ ಶ್ರೀಮಂತರಿಗೆ, ಬ್ರಿಟಿಷ್ ಸರ್ಕಾರದ ಉನ್ನತ ಅಧಿಕಾರಿಗಳಿಗೆ ಅಲ್ಲಿನ ಗೌರ್ವನರುಗಳಿಗೆ, ಮಂತ್ರಿಗಳಿಗೆ, ರಾಯಭಾರಿಗಳಿಗೆ ಶಿಫಾರಸು ಪತ್ರಗಳನ್ನು ನೀಡಲಾಗಿತ್ತು. ಅಗತ್ಯ ಬಂದ ಸಮಯದಲ್ಲಿ ಹಣ ಪಡೆಯತಕ್ಕ ಲಂಡನ್ ನಗರದ ಬ್ಯಾಂಕ್ ಚೆಕ್‌ಗಳನ್ನು ಎಲ್ಲರಿಗೂ ನೀಡಲಾಗಿತ್ತು.

ಪ್ರಪಂಚದ ಎಲ್ಲ ಕಲೆ–ವಿಜ್ಞಾನದ ಜನ್ಮಸ್ಥಳವಾದ ಭಾರತಕ್ಕೆ ಹಿಬ್ರೋ, ಅರಬ್ ಹಾಗೂ ಹಿಂದಿ ಭಾಷೆಯಲ್ಲಿ ಪರಿಣತಿ ಪಡೆದ ಹಾಗೂ ಇದ್ದಂತಹ ತಜ್ಞರಲ್ಲೇ ಶ್ರೇಷ್ಠ ಪ್ರತಿಭಾನ್ವಿತ ಜ್ಞಾನಿಯೊಬ್ಬರನ್ನು ಕಳುಹಿಸಿದರು. ಹೀಗೆ ಕಳುಹಿಸಲ್ಪಟ್ಟ ವ್ಯಕ್ತಿ ನೆಲಮಾರ್ಗವಾಗಿಯೇ ಭಾರತಕ್ಕೆ ಬಂದರು. ಮೊದಲಿಗೆ ಹಾಲೆಂಡ್‌ನ ಮಾರ್ಗವಾಗಿ ತನ್ನ ಪ್ರಯಾಣವನ್ನು ಆರಂಭಿಸಿ ಆಮ್‌ಸ್ಟರ್‌ಡಾಮ್ ನಗರದ ಯಹೂದಿ ಗುರುಗಳನ್ನು, ಇತರೆ ಶ್ರೇಷ್ಠ ಗುರುಗಳನ್ನು ಭೇಟಿ ಮಾಡಿ ಚರ್ಚಿಸಿದರು. ನಂತರ ಫ್ರಾನ್ಸ್‌ನ ಬೈಬಲ್ ಪರಿಷತ್ತಿನವರನ್ನು ಭೇಟಿಯಾದರು. ಪ್ಯಾರಿಸ್ಸಿನ ಕಲಾ ವಿದ್ಯಾಲಯವನ್ನು ನೋಡಿದರು. ನಂತರ ಇಟಲಿಯ ಕಲಾ ಪರಿಷತ್ತು, ರಂಗ ಮಂದಿರಗಳು, ಗ್ರಂಥಾಲಯಗಳು ಮುಂತಾದವುಗಳನ್ನು ನೋಡಿದರು. ಫ್ಲಾರೆನ್ಸ್ ನಗರದಲ್ಲಿನ ವಿಶ್ರಾಂತಿ ಗೃಹಗಳನ್ನು ನೋಡಿದರು. ನಂತರ ವೆನಿಸ್ ನಗರ, ಸೆಂಟ್‌ಮಾರ್ಕ್ ಗ್ರಂಥಾಲಯ, ರೋಮ್ ನಗರದಲ್ಲಿನ ಪೋಪ್‌ರ ಗ್ರಂಥಾಲಯವನ್ನು ವೀಕ್ಷಿಸಿದರು.

ಸ್ಪೇನ್‌ನಲ್ಲಿರುವ ಸಾಲ್‌ಮಾಗೋ ವಿಶ್ವವಿದ್ಯಾಲಯವನ್ನು ನೋಡಲಿಚ್ಚಿಸಿದರೂ ಕೊನೆಗೆ ಅದನ್ನು ನೋಡಲು ಸಾಧ್ಯವಾಗದೇ ಕಾನ್‌ಸ್ಟಾಂಟಿನೋಪಲ್ ಸೇರಿದರು. ಅಲ್ಲಿ ಸೋಬೀಪ್ ಮಸೀದಿಯಲ್ಲಿನ ಪುಸ್ತಕಗಳನ್ನು ಓದಿದರು. ನಂತರ ಕಾನ್‌ಸ್ಟಾಂಟಿನೋಪಲ್‌ನಿಂದ ಈಜಿಪ್ಟ್‌ಗೆ ಬಂದರು. ಅಲ್ಲಿ ಪುರಾತನ ನಾಗರೀಕತೆ ಇರುವ ಈಜಿಪ್ಟ್ ದೇಶದ ಪ್ರಜೆಗಳನ್ನು ಭೇಟಿಯಾದರು. ನಂತರ ಇಲಿಫಾನ್ ಪರ್ವತದಲ್ಲಿನ ಕ್ರಿಶ್ಚಿಯನ್ನರೊಂದಿಗೆ ಚರ್ಚಿಸಿದರು. ಹಾಗೂ ಕಾರ್ಮಲ್ ಬೆಟ್ಟದಲ್ಲಿದ್ದ ಸನ್ಯಾಸಿಗಳನ್ನು ಭೇಟಿಯಾಗಿ ಚರ್ಚಿಸಿದರು. ಅಲ್ಲಿಂದ ಅರಬ್ ದೇಶದ 'ಸಾನಾ'ವನ್ನು ಸೇರಿದರು. ನಂತರ ಇಸುಬಕಾನ್ ಕಂದಹಾರ್, ದೆಹಲಿ, ಆಗ್ರ, ಮುಂತಾದ ನಗರಗಳಲ್ಲಿ ಪ್ರಯಾಣಿಸಿ ಕೊನೆಯದಾಗಿ ಗಂಗಾನದಿ ತೀರದಲ್ಲಿನ 'ಕಾಶಿ' ಎಂಬ ಪುಣ್ಯ ಕ್ಷೇತ್ರಕ್ಕೆ ಬಂದು ಅಲ್ಲಿ ಹಲವು ಬ್ರಾಹ್ಮಣರೊಂದಿಗೆ ಚರ್ಚಿಸಿದರು.

ಕಥೆ

ಭಾರತದ ಹಲವಾರು ತಜ್ಞರುಗಳನ್ನು ಭೇಟಿಯಾಗಿ ಚರ್ಚಿಸಿದ ನಂತರವೂ ಲಂಡನ್ ನಗರದ ಕಲಾ ಪರಿಷತ್ತಿನ ಮೂರುವರೆ ಸಾವಿರ ಪ್ರಶ್ನೆಗಳಿಗೂ ಸೂಕ್ತವಾದ ಉತ್ತರ ಮತ್ತು ವಿವರಣೆಗಳನ್ನು ಪಡೆಯಲು ಸಾಧ್ಯವಾಗಲಿಲ್ಲವಲ್ಲ ಎಂದು ಮನದೊಳಗೆ ಶಾನೆ ನೊಂದುಕೊಂಡರು.



ಲಂಡನ್ ನಗರವನ್ನು ಬಿಟ್ಟು ಕಾಶಿಯ ತನಕ ಬಂದ ಈ ತಜ್ಞರು ತಾವು ಬಂದ ಉದ್ದೇಶಕ್ಕಾಗಿ ಅದ್ಭುತವಾದ ಪುರಾತನ ಗ್ರಂಥಗಳು, ಹಸ್ತಪ್ರತಿಗಳು, ಕಿರು ಬರೆಹಗಳ ಪ್ರತಿಗಳು ಮತ್ತು ಹಲವು ವಿಚಾರಗಳನ್ನು ಕುರಿತ ಟಿಪ್ಪಣಿಗಳು; ಮುಂತಾದವುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಶೇಖರಿಸಿದ್ದರು. ಅವೆಲ್ಲಾ ಸೇರಿ ಏನಿಲ್ಲವೆಂದರೂ ತೊಂಭತ್ತು ಗೋಣಿಚೀಲಗಳಲ್ಲಿ ತುಂಬುವಷ್ಟಿದ್ದವು. ಅವು ಸುಮಾರು ಒಂಭತ್ತು ಸಾವಿರದ ಐನೂರು ಕೆಜಿಗಳ ತೂಕದಷ್ಟಿದ್ದವು. ತಾವು ಬಯಸಿದ್ದಕ್ಕಿಂತ ಹೆಚ್ಚು ವಿಷಯಗಳು, ಮಾಹಿತಿಗಳನ್ನು ಶೇಖರಿಸಿದ ಸಂತೋಷದೊಂದಿಗೆ ತನ್ನ ತಾಯ್ನಾಡಿಗೆ ಮರಳಲು ಇಚ್ಛಿಸಿದರು. ಆದರೆ ಅವರ ಮನಸ್ಸಿನಲ್ಲಿ ಒಂದು ಸಣ್ಣ ಕೊರಗು ಹುಟ್ಟಿ ಅದು ಅವರನ್ನು ಸಂಕಟದಲ್ಲಿ ಕೆಡವಿತ್ತು.

ಅವರು ತಾವು ಇದುವರೆಗೂ ಹಲವಾರು ದೇಶಗಳಿಗೆ ಭೇಟಿ ನೀಡಿ ವಿವಿಧ ವಿಚಾರಗಳಲ್ಲಿ ಪರಿಣಿತರಾದವರನ್ನು ವಿಶೇಷವಾಗಿ ಧರ್ಮ ಗುರುಗಳನ್ನು, ರಾಜಕೀಯ ನಾಯಕರನ್ನು ಸಂದರ್ಶಿಸಿದ್ದರು. ಯಹೂದಿ ಧರ್ಮದ ನೇತಾರರು, ಪ್ರಾಟಿಸ್ಟಂಟ್ ಧರ್ಮಗುರುಗಳು, ಮಸೀದಿಗಳ ಮುಲ್ಲಾಗಳು, ಕ್ಯಾಥೋಲಿಕ್ ಧರ್ಮದ ಮೇಧಾವಿಗಳು, ಪ್ಯಾರಿಸ್ ಮಹಾನಗರದ ಕಲಾವಿದರು, ಇಟಲಿ ದೇಶದಲ್ಲಿದ್ದ ಗುರುಸುಕ, ಆರ್ಕಾದ್ ಮುಂತಾದ ಹೆಸರಾಂತ ವಿಶ್ವ ವಿದ್ಯಾಲಯಗಳಲ್ಲಿದ್ದ ತಜ್ಞರುಗಳು ಗ್ರೀಕ್ ಧರ್ಮದ ಹಿರಿಯರು, ಟರ್ಕಿ ದೇಶದ ಮುಲ್ಲಾಗಳು, ಅರಬ್ ದೇಶದ ಶೇಕ್‌ಗಳು, ಪಾರ್ಸಿಗಳು, ಭಾರತದ ಹಲವಾರು ತಜ್ಞರುಗಳನ್ನು ಭೇಟಿಯಾಗಿ ಚರ್ಚಿಸಿದ ನಂತರವೂ ಲಂಡನ್ ನಗರದ ಕಲಾ ಪರಿಷತ್ತಿನ ಮೂರುವರೆ ಸಾವಿರ ಪ್ರಶ್ನೆಗಳಿಗೂ ಸೂಕ್ತವಾದ ಉತ್ತರ ಮತ್ತು ವಿವರಣೆಗಳನ್ನು ಪಡೆಯಲು ಸಾಧ್ಯವಾಗಲಿಲ್ಲವಲ್ಲ ಎಂದು ಮನದೊಳಗೆ ಶಾನೆ ನೊಂದುಕೊಂಡರು. ಅನೇಕ ವಿಷಯಗಳ ಬಗ್ಗೆ ಬಗೆಹರಿಯದ ಗೊಂದಲಗಳು ಹೆಚ್ಚಿ ದುಃಖತಪ್ತರಾದರು. ಒಂದು ಪ್ರಶ್ನೆ ಮತ್ತೊಂದು ಪ್ರಶ್ನೆಯೊಂದಿಗೆ ಸಂಬಂಧಪಟ್ಟಿದ್ದರಿಂದ ಒಂದರ ಕುರಿತ ಸ್ಪಷ್ಟತೆ ಮತ್ತೊಂದರ ಗೊಂದಲಕ್ಕೆ ಕಾರಣವಾಗಿದ್ದು ಅವರಿಗೆ ಅರಿವಾಯಿತು. ಸರಳಸತ್ಯಗಳೂ ಗೊಂದಲದ ಗೂಡಾಗಿ ಪರಿಣಮಿಸಿದ್ದು ಅವರಿಗೆ ಮನದಟ್ಟಾಯಿತು. ಭಿನ್ನ ತತ್ವಗಳು ಹಾಗೂ ಭಿನ್ನ ಉತ್ತರಗಳು ಎಂಬ ಸುಂಟರಗಾಳಿಯಿಂದ ಒಂದೇ ಒಂದು ಸತ್ಯವನ್ನೂ ಪ್ರತ್ಯೇಕಿಸಿ ನೋಡಿ ಅರ್ಥಮಾಡಿಕೊಳ್ಳಲು ಕಷ್ಟವಾಗಿದ್ದುದನ್ನು ಅರಿತು ಮತ್ತಷ್ಟು ನೊಂದುಕೊಂಡರು.

ಈ ವಿಚಾರಗಳನ್ನು ತಜ್ಞರು ಎಲ್ಲವನ್ನೂ ಮೇಲುಮಟ್ಟದಲ್ಲಿ ಮಾತ್ರ ಗ್ರಹಿಸಲು ಸಾಧ್ಯವಾಗಿದ್ದರಿಂದ

ಸಾಮಾನ್ಯ ಸ್ಥಿತಿಯಲ್ಲಿಯೇ ಅಂದಾಜಿಸಿದ್ದರು. ಕಲಾವಿದರ ಪರಿಷತ್ತು ನೀಡಿದ ಪ್ರಶ್ನೆಗಳಲ್ಲಿ ಹಿಬ್ರೂ ಧರ್ಮಗ್ರಂಥದ ಬಗ್ಗೆ ಇನ್ನೂರು ಪ್ರಶ್ನೆಗಳು, ಗ್ರೀಕ್, ರೋಮನ್ ದೇವಸ್ಥಾನಗಳ ಬಗ್ಗೆ ನಾನ್ನೂರೆಂಭತ್ತು ಪ್ರಶ್ನೆಗಳು, ವೈದಿಕ ಧರ್ಮದ ಬಗ್ಗೆ ಮುನ್ನೂರ ಹನ್ನೆರಡು ಪ್ರಶ್ನೆಗಳು, ಸಂಸ್ಕೃತದ ಬಗ್ಗೆ ಐನೂರ ಎಂಟು ಪ್ರಶ್ನೆಗಳು, ಭಾರತದ ಸಧ್ಯದ ಬದುಕಿನ ಬಗ್ಗೆ ಮೂರು ಪ್ರಶ್ನೆಗಳು, ಭಾರತದಲ್ಲಿ ಬ್ರಿಟಿಷರ ವಾಣಿಜ್ಯ ವ್ಯವಹಾರದ ಬಗ್ಗೆ ಇನ್ನೂರ ಹನ್ನೊಂದು ಪ್ರಶ್ನೆಗಳು, ಮುಂಬೈಗೆ ಹತ್ತಿರವಿದ್ದ ಎಲಿಫಂಟಾ ಸಾಲ್ಸೆಟ್ ಮುಂತಾದ ಸ್ಥಳಗಳಲ್ಲಿರುವ ಪ್ರಾರ್ಥನಾ ಸೌಧಗಳ ಬಗ್ಗೆ ಏಳುನೂರ ಇಪ್ಪತ್ತು ಪ್ರಶ್ನೆಗಳು, ಈ ಪ್ರಪಂಚದ ಹುಟ್ಟಿನ ಬಗ್ಗೆ ಐದು



ಒಂದು ದೇಶದಲ್ಲಿರಬೇಕಾದ ರಾಜಕೀಯ ವ್ಯವಸ್ಥೆಯ ಬಗ್ಗೆಯೂ, ಇಂದಿನವರೆಗೂ ಬರಹಗಳಲ್ಲಿ ಬರೆದಿಲ್ಲದ ಅಥವಾ ಕೇಳಿರಲಾರದ ಮಾನವನ ಹಕ್ಕುಗಳ ಸಂಬಂಧವಾಗಿಯೂ ಸಂಶೋಧನೆ ಮಾಡುವುದು ಕೂಡ ತುಂಬಾ ಉಪಯೋಗವಾಗುತ್ತದೆಂದು ಅವರು ಯೋಚಿಸಿದರು.

ಪ್ರಶ್ನೆಗಳು ಮತ್ತು
ಹಲವಾರು ಸುಗಂಧ ದ್ರವ್ಯಗಳ ಬಗ್ಗೆ ಆರು ನೂರ ಎಪ್ಪತ್ಮೂರು ಪ್ರಶ್ನೆಗಳಿದ್ದವು. ವರ್ಷದಲ್ಲಿ ಆರು ತಿಂಗಳು ಪೂರ್ವದಿಕ್ಕಿನಲ್ಲೂ ಮತ್ತಾರು ತಿಂಗಳು ಪಶ್ಚಿಮ ದಿಕ್ಕಿನಲ್ಲೂ ಹರಿಯುವ ಹಿಂದೂ ಮಹಾಸಾಗರದ ಪ್ರವಾಹದ ಹರಿವಿನ ಮರ್ಮದ ಬಗ್ಗೆ ಒಂದು ಪ್ರಶ್ನೆ ಇತ್ತು. ಗಂಗಾ ನದಿಯ ಉಗಮದ ಸಮಯದ ಬಗ್ಗೆ, ಮತ್ತು ಹಲವು ಸಂದರ್ಭಗಳಲ್ಲಿ ಉಂಟಾಗುವ ಪ್ರವಾಹಗಳ ಬಗ್ಗೆ ಇದ್ದ ಮುನ್ನೂರ ಎಪ್ಪತ್ತೆಂಟು ಪ್ರಶ್ನೆಗಳಿಗೂ ಉತ್ತರಗಳನ್ನು ಕಂಡುಕೊಳ್ಳಬೇಕಿತ್ತು.

ಹಲವಾರು ಶತಮಾನಗಳಿಂದ ಯೂರೋಪಿನ ತಜ್ಞರು ಸೂಕ್ಷ್ಮವಾಗಿ ಗಮನಿಸಿ ಬಂದ ನೈಲ್ ನದಿಯ ಉಗಮ ಮತ್ತು ಪ್ರವಾಹದ ಬಗ್ಗೆ ತಿಳಿದು ಬರಬೇಕೆಂದು ಇವರಿಗೆ ಆಜ್ಞೆ ಮಾಡಲಾಗಿತ್ತು. ಕಲಾವಿದರು ಪರಿಷತ್ತು ನೀಡಿದ ಪ್ರತಿಯೊಂದು ಪ್ರಶ್ನೆಗೂ ಐದು ಉತ್ತರಗಳನ್ನು ಕಂಡುಹಿಡಿದರು. ಪ್ರತಿಯೊಂದು ಉತ್ತರವು ಮತ್ತೊಂದರಲ್ಲಿ ಬೆರೆತು ಹಲವಾರು ರೀತಿ ಇದ್ದವು. ಇದರ ಕಾರಣವಾಗಿ ಮೂರೂವರೆ ಸಾವಿರ ಪ್ರಶ್ನೆಗಳಿಗೆ ಹದಿನೇಳು ಸಾವಿರದ ಐನೂರು ಸಿಕ್ಕಿದವು. ಇವರಂತೆಯೇ ಪ್ರಪಂಚದ ಬೇರೆ ಬೇರೆ ದೇಶಗಳಿಗೆ ಕಳಿಸಲಾಗಿದ್ದವರಲ್ಲಿ ಉಳಿದ ಹತ್ತೊಂಭತ್ತು ತಜ್ಞರು ಇದೇ ರೀತಿ ಉತ್ತರಗಳನ್ನು ತಂದಲ್ಲಿ ಕಲಾವಿದರ ಪರಿಷತ್ತಿನವರು ಒಂದು ಸತ್ಯವನ್ನು ಕಂಡುಕೊಳ್ಳುವುದಕ್ಕೆ ಮೊದಲು ಮೂರೂವರೆ ಲಕ್ಷ ಸಮಸ್ಯೆಗಳನ್ನು ಸರಿ ಪಡಿಸಬೇಕು; ಇವೆಲ್ಲವನ್ನು ಸರಿಪಡಿಸದಿದ್ದರೆ ತಜ್ಞರುಗಳು ತರುವ ಎಲ್ಲಾ ಉತ್ತರಗಳು ಸಾಮಾನ್ಯ ಸತ್ಯಕ್ಕೆ ಬದಲಾಗಿ ಗೊಂದಲ ಸೃಷ್ಟಿಸುವ ಸಾಧ್ಯತೆಯಿದೆ ಎಂದು ಭಾವಿಸಿದರು.

ಮತ್ತೊಂದು ವಿಚಾರದಲ್ಲಿ ಈ ತಜ್ಞರು ದೊಡ್ಡ ಸಮಸ್ಯೆಗೆ ಒಳಗಾದರು. ಜ್ಞಾನಶೋಧನೆಯ ಪ್ರಯತ್ನದಲ್ಲಿ ತನ್ನ ದೇಶದವರಿಗೆ ವಿಶಿಷ್ಟವಾದ ಶಾಂತಿ ಮತ್ತು ತಾಳ್ಮೆಯನ್ನು ತನ್ನದಾಗಿಸಿಕೊಂಡವರಾಗಿದ್ದರೂ, ಚರ್ಚೆಯ ಭಾಗವಾಗಿ ಇವರ ಪ್ರಶ್ನೆಗಳನ್ನು ಕೇಳಿದವರಲ್ಲಿ ಬಹುಪಾಲು ಜನರು ಇವರಿಗೆ ವಿರೋಧಿಗಳಾದರು.

ಸಂಗ್ರಹಿಸಿದ್ದ ಒಟ್ಟು ತೊಂಭತ್ತು ಗೋಣಿಚೀಲಗಳಲ್ಲಿದ್ದ ವಿಚಾರಗಳು ಮತ್ತು ಮಾಹಿತಿಗಳು ಒಂದು ಸತ್ಯವನ್ನು ಅರಿಯಲು ಸಹಕಾರಿಯಾಗುವ ಬದಲಾಗಿ ಗೊಂದಲ ಮತ್ತು ಜಗಳಕ್ಕೆ ಕಾರಣವಾದರೆ ತನ್ನ ದೇಶದವರ ಜ್ಞಾನ ಶೋಧನೆಯ ಕ್ರಮ ಏನಾಗಬಹುದೆಂದು ಆತಂಕಗೊಂಡರು.

ಇಷ್ಟೆಲ್ಲಾ ಪರಿಶ್ರಮ ಮತ್ತು ದುಡಿಮೆಯಿಂದಾಗಿ ಸಾಕಷ್ಟು ಮಾಹಿತಿ ಮತ್ತು ಗ್ರಂಥಗಳನ್ನು ಸಂಗ್ರಹಿಸಿದ್ದೇವೆ; ಎಂಬ ಅಚ್ಚರಿ ಮತ್ತು ಒಂದು ಸತ್ಯವನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲವೆಂಬ ಗೊಂದಲದಿಂದ ಅಸಹನೆಗಳಿಂದಾಗಿ ಸ್ವದೇಶಕ್ಕೆ ಹಿಂದಿರಗಲು ಸಜ್ಜಾದರು. ಈ ಸಂದರ್ಭದಲ್ಲಿ ಕಾಶಿ ನಗರದಲ್ಲಿ ವಾಸಿಸುವ ಕೆಲವು ಬ್ರಾಹ್ಮಣರನ್ನು ಭೇಟಿಯಾದರು. ಈ ಭೇಟಿಯ ಸಂದರ್ಭದಲ್ಲಿ ಬ್ರಾಹ್ಮಣರು ಕೆಲವು ವಿಚಾರಗಳನ್ನು ತಜ್ಞರಿಗೆ ತಿಳಿಸಿದರು. ಅದರಲ್ಲಿ ಮುಖ್ಯವಾದುದೇನೆಂದರೆ "ಪೂರ್ವ ಸಮುದ್ರದ ತೀರದಲ್ಲಿರುವ ಒರಿಸ್ಸಾ ದಡದಲ್ಲಿ ಗಂಗಾ ನದಿಯಿಂದ ಕವಲೊಡೆದು ಹರಿಯುವ ನದಿ ಸಮುದ್ರದಲ್ಲಿ ಸೇರುವ ಸ್ಥಳದಲ್ಲಿರುವ ಜಗನ್ನಾಥ ದೇವಾಲಯದ ಹಿರಿಯ ಪುರೋಹಿತರು-ಬ್ರಾಹ್ಮಣರು, ಲಂಡನ್ನಿನ ಪರಿಷತ್ತಿನವರ ಎಲ್ಲಾ ಪ್ರಶ್ನೆಗಳಿಗೂ ಸೂಕ್ತ ಉತ್ತರಗಳನ್ನು ನೀಡುವ ಜ್ಞಾನವನ್ನು ಹೊಂದಿದ್ದಾರೆಂದು ತಜ್ಞರಿಗೆ ತಿಳಿಸಿದರು. ಇಂತಹ ವ್ಯಕ್ತಿಯ ಇರುವಿಕೆಯ ಬಗ್ಗೆ ತಜ್ಞರಿಗೆ ತಿಳಿದಿರಲಿಲ್ಲ. ಇಂಡಿಯಾ ದೇಶದ ಹಲವಾರು ಪ್ರದೇಶಗಳಲ್ಲಿ ಇದ್ದು, ಹಾಗೂ ಏಷ್ಯಾದ ಹಲವು ರಾಜಧಾನಿಗಳಲ್ಲಿರುವವರೂ ಸಹ, ಈ ಪೂಜಾರಿಯ ಹತ್ತಿರ ಬಂದು ತಮಗೆ ಗೊತ್ತಿಲ್ಲದ ವಿಚಾರಗಳಿಗೆ ವಿವರಣೆ ಪಡೆಯುತ್ತಾರೆಂದು ಅವರಿಗೆ ತಿಳಿಯಿತು.

ಈ ಪೂಜಾರಿಯ ಬಗ್ಗೆ ಕೇಳಿದ ಕೂಡಲೆ, ಅವರು ಕಲ್ಕತ್ತಾಗೆ ಪ್ರಯಾಣಿಸಿದರು. ಅವರು ಕಲ್ಕತ್ತಾದಲ್ಲಿದ್ದ ಪರಿಷತ್ತಿನ ಭಾರತದ ಅಧ್ಯಕ್ಷರನ್ನು ಕಂಡು ಚರ್ಚಿಸಿದರು. ಚರ್ಚಿಸಿದ ಕೂಡಲೆ ಅಧ್ಯಕ್ಷರು ತಮ್ಮ ದೇಶದ ಹಿರಿಮೆಯನ್ನು ನೆನೆದು ಅದಕ್ಕೆ ತಕ್ಕ ರೀತಿಯಲ್ಲಿ ಅವರನ್ನು ಜಗನ್ನಾಥ ದೇವಾಲಯಕ್ಕೆ ಕಳುಹಿಸಿ ಕೊಡಬೇಕೆಂದು ತೀರ್ಮಾನಿಸಿದರು. ಆದುದರಿಂದ ಜಗನ್ನಾಥ ದೇವಾಲಯಕ್ಕೆ ಅವರು ಹೋಗಿ ಬರಲು ಪಲ್ಲಕ್ಕಿಯೊಂದನ್ನು ಏರ್ಪಾಡು ಮಾಡಿದರು, ಆ ಪಲ್ಲಕ್ಕಿಯು ಕೆಂಪು ಬಣ್ಣದ ರೇಷ್ಮೆ ಬಟ್ಟೆಯಿಂದ ಅಲಂಕೃತವಾಗಿತ್ತು; ಮತ್ತು ಚಿನ್ನದ ಮಣಿಗಳಿಂದ ಜೋಡಿಸಿದ್ದ ಪರದೆಯನ್ನು ಹೊಂದಿತ್ತು. ಅದನ್ನು ಹೊತ್ತೊಯ್ಯಲು ನಾಲ್ಕು ಜನರನ್ನು ಮತ್ತು ಅವರಿಗೆ ಸಮಾನ ಶಕ್ತಿ ಇರುವ ಇನ್ನೂ ಕೆಲವರನ್ನು ಜೊತೆಯಲ್ಲಿ ಕಳುಹಿಸಿದರು, ಮತ್ತು ಕುಡಿಯುವ ನೀರನ್ನು ತೆಗೆದುಕೊಂಡು ಹೋಗಲು ಒಬ್ಬರನ್ನು, ನೀರನ್ನು ಕುಡಿಯಲು ಬೇಕಾದ ಮಣ್ಣಿನ ಬಟ್ಟಲನ್ನು ತೆಗೆದುಕೊಂಡು ಹೋಗಲು ಮತ್ತೊಬ್ಬರನ್ನು ಕಳುಹಿಸಿದರು. ಅಷ್ಟೆ ಅಲ್ಲದೆ ಹುಕ್ಕಾವನ್ನು (ಹೊಗೆ ಸೇದುವ ಕೊಳವೆ) ಸಾಗಿಸಲು ಒಬ್ಬರನ್ನು ಕಳುಹಿಸಿದರು. ಬಿಸಿಲಾದರೆ ಛತ್ರಿ ಹಿಡಿಯಲು ಒಬ್ಬರು, ರಾತ್ರಿ ವೇಳೆಯಲ್ಲಿ ದೀಪವನ್ನು ಹಿಡಿಯಲು ಒಬ್ಬರನ್ನು ಕಳುಹಿಸಿದರು. ಕಟ್ಟಿಗೆ ಕಡಿಯುವ ಕೊಡಲಿಯನ್ನು ತೆಗೆದುಕೊಂಡು ಹೋಗಲು ಒಬ್ಬರು, ಅಡುಗೆ ಮಾಡಲು ಇಬ್ಬರನ್ನು ಕಳುಹಿಸಿದರು. ಧಾನ್ಯಗಳು ಮತ್ತು ಇತರೆ ವಸ್ತುಗಳನ್ನು ತುಂಬಿದ್ದ ಚೀಲಗಳನ್ನು ಹೊತ್ತೊಯ್ಯಲು ಎರಡು ಒಂಟೆಗಳು ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲು ಇಬ್ಬರನ್ನು ಕಳುಹಿಸಿದರು. ಜೊತೆಯಲ್ಲಿ ಮಾಹಿತಿದಾರರಿಬ್ಬರನ್ನು ಸಹ ಕಳುಹಿಸಿದರು. ತಜ್ಞರ ರಕ್ಷಣೆಗಾಗಿ ನಾಲ್ಕು ಜನ ಕುದುರೆ ಸವಾರರನ್ನು ಮತ್ತು ಇಂಗ್ಲೆಂಡಿನ ಧ್ವಜವನ್ನು ಹೊತ್ತೊಯ್ಯಲು ಒಬ್ಬರನ್ನು ಕಳುಹಿಸಿದರು.

ಇಷ್ಟೆಲ್ಲಾ ತಯಾರಿಯೊಂದಿಗೆ ಹೊರಟ ತಜ್ಞ ಆಂಗ್ಲ ದೇಶದವರಾದರೂ ಇಂಡಿಯಾ ದೇಶದವರಂತೆ ಕಂಡು ಬಂದರು. ಭಾರತದಲ್ಲಿ ಇರುವ ಒಬ್ಬರು ಉನ್ನತ ಮಟ್ಟದಲ್ಲಿರುವ ಇನ್ನೊಬ್ಬರನ್ನು ನೋಡಲು ಹೋದಾಗ ಬರಿಗೈಯಲ್ಲಿ ಹೋಗುವುದಿಲ್ಲ. ಎಂಬ ರೂಢಿ ಗೊತ್ತಾದ ಕಾರಣ ಕಲ್ಕತ್ತಾದ ಆಂಗ್ಲ ಅಧಿಕಾರಿ ತನ್ನ ದೇಶದ ಪರವಾಗಿ ಬ್ರಾಹ್ಮಣ ಗುರುವಿಗೆ ಉಡುಗೊರೆಯಾಗಿ ಸುಂದರವಾದ ಕೊಳಲೊಂದನ್ನು, ಪರ್ಷಿಯಾ ದೇಶದ ರತ್ನಗಂಬಳಿಯೊಂದನ್ನು ಕೊಟ್ಟು ಕಳುಹಿಸಿದ್ದರು. ಅಷ್ಟೆ ಅಲ್ಲದೆ ಬ್ರಾಹ್ಮಣ ಗುರುವಿನ ಹೆಂಡತಿಗೆ ಅದ್ಭುತವಾದ ಸೀರೆಗಳನ್ನು ಮತ್ತು ಆ ಬ್ರಾಹ್ಮಣ ಗುರುಗಳ ಬಳಿಯಿದ್ದ ವಿದ್ಯಾರ್ಥಿಗಳಿಗಾಗಿ ಕೆಂಪು, ಬಿಳಿ, ಅರಿಶಿಣ ಬಣ್ಣಗಳಲ್ಲಿರುವ ಚೀನಾ ದೇಶದ ರೇಷ್ಮೆ ಬಟ್ಟೆಗಳನ್ನು ಕೊಟ್ಟು ಕಳುಹಿಸಿದರು. ಇಂತಹ ಉಡುಗೊರೆಗಳನ್ನೆಲ್ಲಾ ಗೋಣಿ



ಚೀಲಗಳಲ್ಲಿ ಕಟ್ಟಿ ಒಂಟೆಯ ಮೇಲೆ ಕಳುಹಿಸಿದರು. ಅವರು **ಕಲ್ಕತ್ತಾದಲ್ಲಿದ್ದ** ಪರಿಷತ್ತಿನ ಪರಿಚಯ ಪತ್ರದೊಂದಿಗೆ ಮತ್ತು ತನ್ನೆಲ್ಲಾ ಪರಿವಾರದೊಂದಿಗೆ **ಹೊರಟರು.**

ಆ ಪೂಜಾರಿಯ ಹತ್ತಿರ ಎಲ್ಲಿಂದ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಯೋಚಿಸುತ್ತಾ ತಜ್ಞ, ಜಗಳಗಳು ಮತ್ತು ಯುದ್ದಗಳಿಗೆ ಕಾರಣವಾದ ವಿಚಾರಗಳ ಬಗ್ಗೆ ಮೊದಲು ಕೇಳಬೇಕೆಂದು ಯೋಚಿಸಿದನು. ಅದೇ ರೀತಿಯಲ್ಲಿ ಏರೊದೊತು ಎಂಬುವರ ಅಭಿಪ್ರಾಯದಂತೆ, ಈಜಿಪ್ಟ್ ದೇಶದ ಧರ್ಮಗುರುಗಳು ಹೇಳುವಂತೆ "ಸೂರ್ಯನು ಪಶ್ಚಿಮದಲ್ಲಿ ಉದಯಿಸಿ ಪೂರ್ವದಲ್ಲಿ ಮುಳುಗುತ್ತಾನೆ" ಎಂಬುದು ಸತ್ಯವೇ? ಎಂದು ತಿಳಿದುಕೊಳ್ಳಬೇಕೆಂದು ಯೋಚಿಸಿದರು. ಭೂಮಿಯ ಉಗಮಕ್ಕೆ ಸಂಬಂಧಿಸಿದಂತೆ ಹಲವು ಕೋಟಿ ವರ್ಷಗಳಿಂದ ಈ ಭೂಮಿ ಅಸ್ತಿತ್ವದಲ್ಲಿದೆ ಎಂಬ ಭಾರತೀಯರ ನಂಬಿಕೆಯ ಬಗ್ಗೆ ಭಾರತೀಯರನ್ನು ಕೇಳಬೇಕೆಂದು ತೀರ್ಮಾನಿಸಿದರು.

ಒಂದು ದೇಶದಲ್ಲಿರಬೇಕಾದ ರಾಜಕೀಯ ವ್ಯವಸ್ಥೆಯ ಬಗ್ಗೆಯೂ, ಇಂದಿನವರೆಗೂ ಬರಹಗಳಲ್ಲಿ ಬರೆದಿಲ್ಲದ ಅಥವಾ ಕೇಳಿರಲಾರದ ಮಾನವನ ಹಕ್ಕುಗಳ ಸಂಬಂಧವಾಗಿಯೂ ಸಂಶೋಧನೆ ಮಾಡುವುದು ಕೂಡ ತುಂಬಾ ಉಪಯೋಗವಾಗುತ್ತದೆಂದು ಅವರು ಯೋಚಿಸಿದರು. ಇಷ್ಟೆಲ್ಲಾ ಯೋಚಿಸಿ ಅಂತಿಮವಾಗಿ ಅವರೊಂದು ತೀರ್ಮಾನಕ್ಕೆ ಬಂದರು. ಅದೇನೆಂದರೆ ಜಗನ್ನಾಥ ದೇವಾಲಯದ ಗುರುಗಳ ಹತ್ತಿರ ಯಾವ ಮಾರ್ಗದ ಮೂಲಕ ಸತ್ಯವನ್ನು ಅರಿಯಲು ಸಾಧ್ಯ ಎಂದು ಕೇಳುವುದೇ ಸೂಕ್ತ ಎಂಬ ತೀರ್ಮಾನಕ್ಕೆ ಬಂದರು. ಏಕೆಂದರೆ ಬುದ್ಧಿಯಿಂದ ಸತ್ಯವನ್ನು ಅರಿತುಕೊಳ್ಳಲು ಪ್ರಯತ್ನಿಸೋಣವೆಂದರೆ, ಮಾನವರಲ್ಲಿ ಬುದ್ಧಿ ಹಲವು ರೀತಿಯಾಗಿದೆಯೆಂದು ಆಲೋಚಿಸಿದರು. ನಂತರ ಸತ್ಯವನ್ನು ಎಲ್ಲಿ ಹುಡುಕುವುದು ಎಂದು ಕೇಳಿ ತಿಳಿಯಬೇಕೆಂದು ತೀರ್ಮಾನಿಸಿದರು. ಅದೇ ಸಂದರ್ಭದಲ್ಲಿ ಸತ್ಯವನ್ನು ಮಾನವರಿಗೆ ಹೇಳಬೇಕೆ ಅಥವಾ ಬೇಡವೆ ಎಂಬುದನ್ನು ಕೇಳಿ ತಿಳಿಯಬೇಕೆಂದು ಯೋಚಿಸಿದರು. ಏಕೆಂದರೆ ಸತ್ಯವನ್ನು ಹೇಳಿದ ಕೂಡಲೆ ಮನುಷ್ಯರ ಹತ್ತಿರ ಮನಸ್ತಾಪ ಉಂಟಾಗುತ್ತದೆ. ಈ ಮೂರು ಪ್ರಶ್ನೆಗಳು ಪರಿಷತ್ತಿನ ಅಧ್ಯಕ್ಷರು ಆಲೋಚಿಸಿ ನೀಡಿದ ಪ್ರಶ್ನೆಗಳ ಪಟ್ಟಿಯಲ್ಲಿ ಇಲ್ಲದಿದ್ದರೂ ಸಂಶೋಧನೆಗೆ ಇವು ಅತ್ಯಗತ್ಯ ಎಂದು ಭಾವಿಸಿದರು. ಆದ್ದರಿಂದ ಜಗನ್ನಾಥ ದೇವಸ್ಥಾನದ ಗುರುಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವುದಾದರೆ, ಬದುಕಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರದ ಕೀಲಿಕೈ ಸಿಕ್ಕಿದಂತಾಗುತ್ತದೆ. ಅದರ ಮೂಲಕ ಜನರಿಗೆ ನೆಮ್ಮದಿಯ ಮತ್ತು ವಿಶೇಷವಾದ ಬದುಕಿಗೆ ದಾರಿಯಾಗುತ್ತದೆಂದು ಭಾವಿಸಿದರು.

ಜಗನ್ನಾಥ ದೇವಸ್ಥಾನದ ಗುರುಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವುದಾದರೆ, ಬದುಕಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರದ ಕೀಲಿಕೈ ಸಿಕ್ಕಿದಂತಾಗುತ್ತದೆ. ಅದರ ಮೂಲಕ ಜನರಿಗೆ ನೆಮ್ಮದಿಯ ಮತ್ತು ವಿಶೇಷವಾದ ಬದುಕಿಗೆ ದಾರಿಯಾಗುತ್ತದೆಂದು ಭಾವಿಸಿದರು.

ಜ್ಞಾನದ ಹಸಿವು ಹೊಂದಿದ್ದ ತಜ್ಞರ ಮನಸ್ಸು ಈ ವಿಶ್ಲೇಷಣೆ ಮಾಡುತ್ತಿತ್ತು. ಈ ಆಲೋಚನೆಗಳೇ ಮನಸ್ಸನ್ನಾವರಿಸಿಕೊಂಡಿದ್ದರಿಂದ **ತಮ್ಮ ಪಯಣವನ್ನು ಆರಂಭಿಸಿ** ಹತ್ತು ದಿನ ಕಳೆದದ್ದೇ ತಿಳಿಯಲಿಲ್ಲ. ಹತ್ತು ದಿನಗಳ **ನಂತರ ಅವರು ಬಂಗಾಳ** ಕೊಲ್ಲಿಯ ತೀರವನ್ನು ಸೇರಿದರು. ದಾರಿಯುದ್ದಕ್ಕೂ **ಜಗನ್ನಾಥ ದೇವಸ್ಥಾನದ ದರ್ಶನ** ಮಾಡಿ ಹಿಂದಿರುತ್ತಿದ್ದ ಜನರನ್ನು ಕಂಡರು. ಆ ಜನರೆಲ್ಲಾ ಜಗನ್ನಾಥ ಗುಡಿಯ ಪೂಜಾರಿಯ ಪ್ರೌಢಿಮೆಯನ್ನು ಕೊಂಡಾಡುತ್ತಿದ್ದರು.

ಹನ್ನೊಂದನೆ ದಿನದಂದು ಆಗಸದಲ್ಲಿ ರವಿಯು ಭೂಮಿಯೆಡೆ ವಾರೆನೋಟ ಬೀರುತ್ತಾ ಕೆಂಬಣ್ಣದಲ್ಲಿ ಸ್ನೇಹಭಾವದಿಂದ ನಗೆ ಸೂಸುತ್ತಿದ್ದ ಹೊತ್ತಿನಲ್ಲಿ ಹೆಸರಾಂತ ಜಗನ್ನಾಥ ದೇವಾಲಯವನ್ನು ಕಂಡರು. ಸಮುದ್ರದಲ್ಲಿ ಮುಳುಗೆದ್ದು ಬರುವ ಎಳೆಯ ಸೂರ್ಯನ ಆ ಜೀವಂತಿಕೆಯ ಕೆಂಬಣ್ಣದಲ್ಲಿ ದೇವಸ್ಥಾನದ ಗೋಡೆಗಳು ರಂಗೋಳಿಸುತ್ತಿದ್ದವು. ಈ ದೇಗುಲದ ಮುಂಭಾಗದಲ್ಲಿ ಎತ್ತರವಾದ ಚಪ್ಪರಗಳೂ, ಅದರ ಮೇಲುಭಾಗದಲ್ಲಿ ಅಮೃತಶಿಲೆಯಿಂದ ಮಾಡಿದ ಗೋಪುರಗಳೂ ಇದ್ದು, ನದಿಯ ದಡದಲ್ಲಿ ದೇವಾಲಯವು ಮೋಹಕವಾಗಿ ಕಾಣುತ್ತಿತ್ತು. ಇಕ್ಕೆಲಗಳಲ್ಲಿ ಹಸಿರು ಹೊದಿಕೆ ಹೊದ್ದು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿದ್ದ ಸಾಲುಮರಗಳಿದ್ದ ಒಂಭತ್ತು ದಾರಿಗಳ ಮಧ್ಯದಲ್ಲಿ ಈ ದೇಗುಲವು ಶೋಭಿಸುತ್ತಿತ್ತು. ಈ ಒಂಭತ್ತು ದಾರಿಗಳು ಒಂಭತ್ತು **ದೇಶಗಳೆಡೆ** ಮುಖಮಾಡಿದ್ದವು. ಅಡಿಕೆ, ತೇಗ, ತೆಂಗು, ಗಂಧ ಮತ್ತು ಕರ್ಪೂರದ ಮರಗಳು ರಸ್ತೆಗಳ ಎರಡು ಬದಿಗಳಲ್ಲಿ ನಿಂತು ಭಕ್ತ ಸಮೂಹವನ್ನು ಬರಮಾಡಿಕೊಳ್ಳುವಂತೆ ತೋರುತ್ತಿದ್ದವು. ಇವೆಲ್ಲಾ ಮೇಳೈಸಿ ಇಡೀ ಪ್ರದೇಶವು ರಮ್ಯ **ಮನೋಹರ ತಾಣವಾಗಿತ್ತು.** ಶ್ರೀಲಂಕ, ಕೋಲ್ಗುಂಡ, ಅರೇಬಿಯ, ಪರ್ಷಿಯ, ಟಿಬೆಟ್, ಚೀನಾ, **ಸಾಲಿ,** ತಾಯ್ನಾಡಿನ ಹಿಂದೂ ಮಹಾ ಸಾಗರದಲ್ಲಿರುವ ದ್ವೀಪಗಳು ಸೇರಿದಂತೆ **9 ದೇಶಗಳನ್ನು** ನೋಡುವಂತೆ ರಸ್ತೆಗಳು ಗೋಚರಿಸುತ್ತಿದ್ದವು.

ಅವರು ಗಂಗಾ ನದಿಯು ಸಾಗರದಲ್ಲಿ ಸಂಗಮವಾಗುವ ಸ್ಥಳದಲ್ಲಿರುವ ರಮ್ಯವಾದ ದಿಬ್ಬಗಳನ್ನು ದಾಟಿ ಬಿದಿರುಮೆಳೆಗಳಿಂದ ಕೂಡಿದ ರಸ್ತೆಯ ಮಾರ್ಗವಾಗಿ ಬಂದು **ದೇವಾಲಯವನ್ನು** ಸೇರಿದರು. ದೇವಸ್ಥಾನವು ಸಮತಟ್ಟಾದ ಪ್ರದೇಶದಲ್ಲಿದ್ದು **ಉತ್ತಮವಾಗಿತ್ತು.** ಬೆಳಿಗ್ಗೆಯಿಂದಲೂ ದೇವಸ್ಥಾನ ಮತ್ತು ಅದರ ಸುತ್ತಲೂ ಇದ್ದ **ಸುಂದರವಾದ** ಪರಿಸರವನ್ನು ಬಹಳ ಸಂತೋಷದಿಂದ ಅನುಭವಿಸಿದರು. **ಸಾಯಂಕಾಲದ** ಹೊತ್ತಿನಲ್ಲಿ ದೇವಸ್ಥಾನದ ವಿಶಿಷ್ಟತೆಯನ್ನು ಮತ್ತು ಹಿರಿಮೆಯನ್ನು ಕೇಳಿ **ಪರಮಾಶ್ಚರ್ಯ**ವಾಗಿ ಅದನ್ನು ಮನದುಂಬಿ ಹೊಗಳಿದರು. ದೇವಾಲಯದ ತಾಮ್ರ **ಮತ್ತು ಕಂಚಿನ ಬಾಗಿಲುಗಳು ಮುಸ್ಸಂಜೆಯ ಸೂರ್ಯನ ಕಿರಣಗಳು ತಾಕಿ ಪ್ರಕಾಶಿಸುತ್ತಿದ್ದವು. ಆಕಾಶದ ಎತ್ತರಕ್ಕಿದ್ದ ಗೋಪುರದ ಸುತ್ತಲೂ ಹದ್ದುಗಳು ಹಾರಾಡುತ್ತಿದ್ದವು.** ದೇವಾಲಯದ **ಸುತ್ತಲೂ ಅಮೃತಶಿಲೆಯಿಂದ ಕೊಳವೊಂದನ್ನು ನಿರ್ಮಿಸಲಾಗಿತ್ತು.** ಅದರ ಕನ್ನಡಿಯಂತಿದ್ದ ನಿರ್ಮಲ ನೀರಿನಲ್ಲಿ ದೇವಾಲಯದ **ಗೋಪುರ, ಬಾಗಿಲು** ಮತ್ತು ಚಪ್ಪರಗಳ ಪ್ರತಿಬಿಂಬ ತೋರತ್ತಿತ್ತು. ಸುತ್ತಲೂ **ಹೂದೋಟಗಳಿದ್ದವು. ಆ ತೋಟಗಳ ಸುತ್ತಲೂ** ಆ ದೇವಾಲಯದಲ್ಲಿ ಕೆಲಸ ಮಾಡುವ **ಬ್ರಾಹ್ಮಣರ ದೊಡ್ಡ ದೊಡ್ಡ ಮನೆಗಳಿದ್ದವು.**

ಇದೆಲ್ಲವನ್ನು ನೋಡಿದ ತಜ್ಞರು ಆನಂದಪುಳಕಿತರಾದರು. ಇಂತಹ ಸಂದರ್ಭದಲ್ಲಿ **ತಜ್ಞರು ಬಂದಿದ್ದ ವಿಚಾರವನ್ನು ಪೂಜಾರಿಗೆ ತಿಳಿಸಲು ಜೊತೆಯಲ್ಲಿ ಬಂದಿದ್ದ ಕೆಲಸಗಾರರು ಲಗುಬಗೆಯಿಂದ ಹೊರಟರು. ದೇವಸ್ಥಾನದಲ್ಲಿ ದೇವರ ಸೇವೆ ಮಾಡುತ್ತಿದ್ದ ಯುವತಿಯರ ಗುಂಪೊಂದು ಹೂದೋಟದ** ನಡುವಿನಿಂದ **ಸಂಗೀತವಾದ್ಯ**ಗಳೊಂದಿಗೆ ಅವರೆದುರು ಹಾಡುತ್ತಾ ನರ್ತಿಸುತ್ತಾ, ತಾವು **ಪೂಸಿಕೊಂಡಿದ್ದ** ಸುಗಂಧ ದ್ರವ್ಯಗಳ ಸುವಾಸನೆಯಿಂದ, ನಾಟ್ಯ- ಸಂಗೀತದಿಂದ **ಜೀವದುಂಬಿಕೊಂಡು** ದೇವಸ್ಥಾನದ ದ್ವಾರದವರೆಗೆ ಬಂದರು. ಅಲ್ಲಿ ಚಿನ್ನ-ಬೆಳ್ಳಿಯಿಂದ **ತಯಾರಿಸಲ್ಪಟ್ಟಿದ್ದ** ದೀಪದ ಬೆಳಕಿನಲ್ಲಿ ಪ್ರಪಂಚವನ್ನು ಕಾಪಾಡಲು, ತನ್ನ ಕೈ ಮತ್ತು **ಕಾಲನ್ನು ಕಳೆದು**ಕೊಂಡ ಬ್ರಹ್ಮದೇವನ ಏಳನೆಯ ಅವತಾರವಾದ ಜಗನ್ನಾಥನ **ಮೂರ್ತಿಯನ್ನು** ನೋಡಿದರು. ಭಕ್ತಾದಿಗಳು ದೇವರಿಗೆ ಅಡ್ಡಬಿದ್ದು ನಮಿಸುವುದನ್ನು ಅಲ್ಲಿ **ಕಂಡರು.**

ಭಕ್ತಾದಿಗಳಲ್ಲಿ ಕೆಲವರು ಬ್ರಹ್ಮದೇವನ ಜಾತ್ರೆಯ ದಿನದಲ್ಲಿ ತಮ್ಮ ಬೆನ್ನಿಗೆ ಉಕ್ಕಿನ **ಕೊಕ್ಕೆಯ ಒಂದು** ತುದಿಯನ್ನೂ ಮತ್ತೊಂದು **ತುದಿಯನ್ನು** ರಥಕ್ಕೆ ಕಟ್ಟಲಾಗಿದ್ದ **ಹಗ್ಗಕ್ಕೆ** ಸಿಕ್ಕಿಸಿಕೊಳ್ಳುವಂತೆ ಜೋರುದನಿಯಲ್ಲಿ **ಹರಕೆ** ಕಟ್ಟುತ್ತಿದ್ದುದನ್ನು ಕೇಳಿಸಿಕೊಂಡರು. ಇನ್ನೂ **ಕೆಲವರು ತೇರಿನ** ಅಡಿಯಲ್ಲಿ **ಮಲಗಿಕೊಂಡು** ಪ್ರಾಣ ಬಿಡುವುದಾಗಿಯೂ ಶಪಥ ಮಾಡುತ್ತಿದ್ದರು. ಭಾವೋನ್ಮಾದಗೊಂಡು ಈ ಬಗೆಯಲ್ಲಿ ಹರಕೆ **ಕಟ್ಟುತ್ತಾ** ಮಾನಸ್ಸಿನ ಆರೋಗ್ಯವನ್ನೇ ಕಳೆದು ಕೊಂಡಂವರಂತೆ ಆಡುತ್ತಿದ್ದ ಭಕ್ತರನ್ನು ಮತ್ತು ಅವರ ಇಂತಹ **ಧರ್ಮಾ**ಚರಣೆಯನ್ನು ನೋಡಿ ತಜ್ಞರಿಗೆ ನಿಜ**ಕ್ಕೂ ದಿಗಿಲಾಯಿತು.** ಈ ದೃಶ್ಯಗಳನ್ನು ನೋಡುತ್ತಲೆ ದೇವಾಲಯದ ಒಳಪ್ರವೇಶಿಸಲು ಅನುವಾದರು. ಕೊಡಲೇ ಬೆಂಕಿಯ ಮೇಲೆ



WITH BEST COMPLIMENTS FROM

A WELL WISHER OF

SAMVAADA
MAGAZINE

AND

SPOORTHI DHAMA

ಕಾಲಿಟ್ಟಂತೆ ಮುದುಕ ಬ್ರಾಹ್ಮಣನೊಬ್ಬ ಓಡೋಡಿ ಬಂದು ತಜ್ಞರನ್ನು ತಡೆದು ನಿಲ್ಲಿಸಿದನು. ತಜ್ಞರು ಬಂದಿರುವುದೇಕೆ ಎಂದು ವಿಚಾರಿಸಿದನು. ತಜ್ಞರು ಕಾರಣಗಳನ್ನು ತಿಳಿಸಿದರು. ಕಾರಣ ತಿಳಿದ ಬ್ರಾಹ್ಮಣನು ಬಂದಿರುವ ಪರಂಗಿಯರು ಶುದ್ಧವಿಲ್ಲದವರು ಎಂಬ ಕಾರಣ ನೀಡಿ ದೇವಾಲಯದ ಕೊಳದಲ್ಲಿ ಮೂರು ಸಲ ಸ್ನಾನ ಮಾಡಿಕೊಂಡು ಪ್ರಾಣಿಗಳಿಗೆ ಸಂಬಂಧವಾದ ಯಾವುದೇ ವಸ್ತು, ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣರಿಂದ ಪೂಜಿಸಲ್ಪಡುವ ಗೋವಿನ ಚರ್ಮ, ಬ್ರಾಹ್ಮಣರು ದ್ವೇಷಿಸುವ ಹಂದಿಯ ಚರ್ಮ ಇತ್ಯಾದಿಗಳು ತಮ್ಮೊಂದಿಗೆ ಇಲ್ಲದಂತೆ ಒಳಪ್ರವೇಶಿಸುವುದಾದರೆ ಮಾತ್ರ ಜಗನ್ನಾಥನ ಮುಂದಾಗಲಿ ಅಥವಾ ಬ್ರಾಹ್ಮಣ ಪೂಜಾರಿಯ ಮುಂದಾಗಲಿ ಹೋಗಲು ಸಾದ್ಯವೆಂದು ತಿಳಿಸಿದರು.

ಇದನ್ನು ಕೇಳಿದ ತಜ್ಞರರಿಗೆ ದುಃಖ ಉಮ್ಮಳಿಸಿ ಬಂದು ಆ ಮುದುಕನಿಗೆ "ಬ್ರಾಹ್ಮಣ ಗುರುಗಳಿಗೆ ಉಡುಗೊರೆಯಾಗಿ ನೀಡಲೆಂದು ಹಂಗೇರಿ ದೇಶದ ಕುರಿಗಳ ಕೂದಲಿನಿಂದ ತಯಾರಿಸಿದ ಪರ್ಷಿಯಾ ದೇಶದ ಹಾಸಿಗೆಯೊಂದನ್ನು, ಚೀನಾ ದೇಶದ ರೇಷ್ಮೆಯ ಬಟ್ಟೆಗಳನ್ನು ತಂದಿದ್ದೇನೆ. ಇವುಗಳನ್ನು ಪ್ರೀತಿಯಿಂದ ಕೊಡಲು ಸಾದ್ಯವಾಗುತ್ತಿಲ್ಲವೆಂದು ಮುದುಕ ಬ್ರಾಹ್ಮಣನಗೆ ಹೇಳಿದನು. ಈ ಮಾತುಗಳನ್ನು ಕೇಳಿದ ಕೂಡಲಾಗುತ್ತಿಲ್ಲ ಎಂದು ದುಃಖವಾಗುತ್ತಿದೆ" ಎಂದರು.

ಆಗ ಮುದುಕ ಬ್ರಾಹ್ಮಣ, "ಜಗನ್ನಾಥ ದೇವಸ್ಥಾನಕ್ಕಾಗಲಿ ಅಥವ ಬ್ರಾಹ್ಮಣ ಗುರುಗಳಿಗಾಗಲಿ ನೀಡುವ ಯಾವ ವಸ್ತುವನ್ನಾದರು ಉಡುಗೊರೆಯಾಗಿ ತಂದಿದ್ದಲ್ಲಿ, ಆ ವಸ್ತುಗಳು ಶುದ್ದವಾಗುತ್ತದೆ. ಆದರೆ ನೀವು ಧರಿಸಿಕೊಂಡಿರುವ ಬಟ್ಟೆಗಳು ಮಾತ್ರ ಆ ರೀತಿ ಶುದ್ಧವಾಗುವುದಿಲ್ಲವೆಂದು" ಎಂದನು. ತಜ್ಞರು ತಾನು ಅದರಂತೆ ತಾವು ಧರಿಸಿಕೊಂಡಿದ್ದ ಕಂಬಳಿಯಿಂದ ತಯಾರಿಸಿದ ಅಂಗಿಯನ್ನು ಮತ್ತು ಕುರಿಯ ಕೂದಲಿನಿಂದ ತಯಾರಿಸಿದ ಪ್ಯಾಂಟನ್ನು, ನೀರು ನಾಯಿಯ ಚರ್ಮದಿಂದ ತಯಾರಿಸಿದ ಟೋಪಿಯನ್ನು ತೆಗೆದಿಟ್ಟರು. ಆ ಬ್ರಾಹ್ಮಣರ ಆಜ್ಞೆಯಂತೆ ಮೂರು ಬಾರಿ ಸ್ನಾನ ಮಾಡಿದರು. ನಂತರ ಹತ್ತಿಯಿಂದ ತಯಾರಿಸಿದ ಗಂಧದ ಬಣ್ಣದ ಬಟ್ಟೆಯನ್ನು ಧರಿಸಿಕೊಂಡ ಮೇಲೆ, ಬ್ರಾಹ್ಮಣರು ಗುರುವನ್ನು ನೋಡಲು ಅವರಿಗೆ ಅನುಮತಿ ದೊರೆಯಿತು. ತಜ್ಞರು ತಾನು ತಂದಿದ್ದ ಪ್ರಶ್ನೆಗಳ ಓಲೆಯೊಂದಿಗೆ ದೇವಸ್ಥಾನ ಪ್ರವೇಸಿಸಿದರು. ಅವರ ಕೈಯಲ್ಲಿ ಪ್ರಶ್ನೆಗಳ ಕಟ್ಟನ್ನು ನೋಡಿ ಬ್ರಾಹ್ಮಣರು " ಇದೇನಿದು?" ಎಂದರು.

"ಇದುವೇ ಪ್ರಶ್ನೆಗಳಿರುವ ಓಲೆ"

"ಅದನ್ನು ಯಾವುದರಿಂದ ಕಟ್ಟಿದ್ದೀರಾ"

"ದನದ ಚರ್ಮದಿಂದ"

ಇದನ್ನು ಕೇಳಿದೊಡನೇ ಬ್ರಾಹ್ಮಣ ವೃದ್ಧರು ಬಹಳ ಆತಂಕದಿಂದ, ದೀಪದ ಉರಿಯ ಮೇಲೆ ಬೆರಳಿಟ್ಟ ಮಗುವಿನಂತೆ ನರಳಾಡಿದರು. "ಗೋವು ಬ್ರಾಹ್ಮಣರಿಂದ ಪೂಜಿಸಲ್ಪಡುವ ಪ್ರಾಣಿಯಲ್ಲವೇ? ಈ ವಿಚಾರವನ್ನು ನಾನು ಮೊದಲೆ ನಿಮಗೆ ತಿಳಿಸಿದ್ದೇನಲ್ಲವೇ? ಇಷ್ಟೆಲ್ಲಾ ಹೇಳಿದ ಮೇಲೂ ಗೋವಿನ ಚರ್ಮದಿಂದ ಕಟ್ಟಿದ ಓಲೆಯೊಂದಿಗೆ ಬ್ರಾಹ್ಮಣ ಮುಖ್ಯಸ್ಥ ಬಳಿಗೆ ಹೋಗುವುದು ಸರಿಯೆ? ಎಂದು ಕೋಪದಿಂದ ಮಾತನಾಡಿದರು.

ತಜ್ಞರ ಮಾತನ್ನು ಕೇಳಿದ ತಕ್ಷಣ ಅಲ್ಲಿ ಸೇರಿದವರ ನಡುವೆ ಗೊಂದಲಗಳು ಮತ್ತು ಕೂಗಾಟಗಳು ಶುರುವಾದವು. ದೇವರು ಆತ್ಮಸಾಕ್ಷಿಯಿಲ್ಲದವನು ಎಂದು ತಜ್ಞರು ಹೇಳಿದಾಗ ಯಾವುದೇ ಒಂದು ಸಣ್ಣ ವಿರೋಧವೂ ಇಲ್ಲದೆ ಶಾಂತವಾಗಿ ಕೂತಿದ್ದ ಸಭಿಕರು ಬ್ರಾಹ್ಮಣರು ಆತ್ಮಸಾಕ್ಷಿಯಿಲ್ಲದವರೆಂದು ಹೇಳಿದ ಕೂಡಲೆ ಅದನ್ನು ಸಹಿಸಿಕೊಳ್ಳಲಿಲ್ಲ.

ಈ ರೀತಿ ಹೊಸದಾಗಿ ಉಂಟಾದ ಬಿಕ್ಕಟ್ಟನ್ನು ಸರಿಪಡಿಸಲು ಕೆಲವು ಚಿನ್ನದ ನಾಣ್ಯಗಳನ್ನು ತಜ್ಞರು ಆ ಮುದುಕ ಬ್ರಾಹ್ಮಣರಿಗೆ ನೀಡಿದರು. ಆ ಚಿನ್ನದ ನಾಣ್ಯಗಳನ್ನು ಪಡೆದುಕೊಂಡ ಬ್ರಾಹ್ಮಣ, ತಜ್ಞರ ಕೈಯಲ್ಲಿದ್ದ ಓಲೆಯ ಕಟ್ಟನ್ನು ಪಲ್ಲಕ್ಕಿಯಲ್ಲಿಟ್ಟು ಬರಲು ತಿಳಿಸಿದರು. "ಸದ್ಯ" ಎಂದುಕೊಂಡ ತಜ್ಞರಿಗೆ ಮತ್ತೆಲ್ಲಿ ಗಂಗಾನದಿಗೆ ಪುನಃ ಕಳುಹಿಸಿ ಮತ್ತೆ ಸ್ನಾನ ಮಾಡಿಕೊಂಡು ಬರುವಂತೆ ಸೂಚಿಸಿದ್ದರೆ ಕಷ್ಟವಾಗುತ್ತಿತ್ತಲ್ಲಾ ಎಂದುಕೊಂಡರು. ಈಗ ನೆಮ್ಮದಿಯೆನಿಸಿ "ಬ್ರಾಹ್ಮಣ ಗುರುಗಳ ಹತ್ತಿರ ನಾನು ಕೇಳುವ ಪ್ರಶ್ನೆಗಳು ಮೂರೇ ಅಲ್ಲವೇ?" ಎಂದು ತಜ್ಞರು ಯೋಚಿಸಿದರು. ಸತ್ಯ ಎಲ್ಲಿದೆ? ಸತ್ಯವನ್ನು ಎಲ್ಲಿ ಹುಡುಕಬೇಕು, ಮತ್ತು ಈ ಸತ್ಯವನ್ನು ಸಾರ್ವಜನಿಕರಿಗೆ ತಿಳಿಸಬೇಕೆ? ಎಂಬ ಮೂರೇ ಪ್ರಶ್ನೆಗಳಲ್ಲವೆ ತಾನು ಕೇಳಬೇಕಿದ್ದುದು ಎಂದು ಯೋಚಿಸಿದ ತಜ್ಞರು, ತಾವು ತಂದಿದ್ದ ಕಟ್ಟನ್ನು ಪಲ್ಲಕ್ಕಿಯಲ್ಲಿಟ್ಟು ಬಂದರು.

ನಂತರ ಆ ಬ್ರಾಹ್ಮಣ, ಆ ತಜ್ಞರನ್ನು ಹತ್ತಿಯಿಂದ ತಯಾರಿಸಿದ ಅಂಗಿ, ಬರಿ ತಲೆ ಮತ್ತು ಬರಿಗಾಲಿನಲ್ಲಿ ಗುರುಗಳ ಹತ್ತಿರ ಕರೆದೊಯ್ದನು. ಗಂಧದ ಮರದ ಸ್ಥಂಭಗಳಿದ್ದ ವಿಶಾಲವಾದ ಕೊಠಡಿಯ ಗೋಡೆಗಳಿಗೆ ಬಣ್ಣಕ್ಕೆ ಬದಲಾಗಿ ಸುಣ್ಣದೊಂದಿಗೆ ಸಗಣಿಯನ್ನು ಮಿಶ್ರಣ ಮಾಡಿ ಬಳಿಯಲಾಗಿತ್ತು. ಆದುದರಿಂದ ಗೋಡೆಗಳು ಹಸಿರು ಬಣ್ಣದಿಂದ ನಯವಾಗಿ ಕಾಣಿಸಿದವು. ಈ ವಿಶಾಲವಾದ ಕೊಠಡಿಯಲ್ಲಿ ಆರಡಿ ಉದ್ದ ಆರಡಿ ಅಗಲವಿದ್ದ ಚಾಪೆಗಳನ್ನು ಸಾಲು ಸಾಲಾಗಿ ಹಾಕಿದರು. ಕೊನೆಯಲ್ಲಿ ಸುಂದರವಾಗಿ ಅಲಂಕರಿಸಿದ್ದ ವೇದಿಕೆಯಲ್ಲಿ ಗುರುಗಳು ಆಸೀನರಾಗಿದ್ದುದನ್ನು ನೋಡಿದರು. ಬಿಳಿಗಡ್ಡ, ಜನಿವಾರವನ್ನು ಧರಿಸಿ, ವೇದಿಕೆಯ ಮೇಲೆ ಅರಿಸಿಣ ಬಣ್ಣದ ಹಾಸಿಗೆಯ ಬ್ರಾಹ್ಮಣ ಗುರುಗಳು ಕುಳಿತಿದ್ದರು. ಅವರು ಎವೆಯಿಕ್ಕದೆ ಒಂದೇ ಕಡೆ ನೋಡುತ್ತಿದ್ದರು. ಕೆಲವು ಶಿಷ್ಯರು ಅವರಿಗೆ ಚಾಮರ ಬೀಸುತ್ತಿದ್ದರೆ ಇನ್ನು ಕೆಲವರು ಚಿಕ್ಕದಾದ ಬೆಳ್ಳಿಯ ಪಾತ್ರೆಯಲ್ಲಿ ಸಾಂಬ್ರಾಣಿಯನ್ನು ಹಾಕುತ್ತಿದ್ದರು. ಇನ್ನು ಕೆಲವರು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ಸ್ವದೇಶಿಯರು, ಮುಸ್ಲಿಮರು, ಸನ್ಯಾಸಿಗಳು ಕೊಠಡಿಯ ಎರಡು ಬದಿಗಳಲ್ಲಿ ಸಾಲು ಸಾಲಾಗಿ ಪ್ರಾಥಮಿಕ ಶಾಲಾ ಮಕ್ಕಳಂತೆ ಕೈಗಳನ್ನು ಕಟ್ಟಿಕೊಂಡು ಕುಳಿತಿದ್ದರು. ಇವರು ಭೂಮಿಯನ್ನೇ ನೋಡುತ್ತ ಧ್ಯಾನದಲ್ಲಿ ಮುಳುಗಿದ್ದರು.

ತಜ್ಞರು ಗುರುಗಳಿಗೆ ಗೌರವವನ್ನು ಸೂಚಿಸಲು ಆ ಗುರುಗಳ ಹತ್ತಿರ ಹೋಗಲು ಬಯಸಿದರು. ಆದರೆ ಅವರನ್ನು ಕರೆತಂದ ಬ್ರಾಹ್ಮಣರು ಒಂಭತ್ತು ಚಾಪೆಗಳಿಂದ ಈಚೆಗೆ ನಿಲ್ಲಿಸಿ ಬಿಟ್ಟರು. ತಜ್ಞರಿಗೆ ಆಶ್ಚರ್ಯವಾಯಿತು.

"ಏಕೆ ಇಲ್ಲಿ ನಿಲ್ಲಿಸಿರುವಿರಿ"

"ಭಾರತದ ದೊಡ್ಡ ದೊಡ್ಡ ಭೂ ಮಾಲೀಕರು ಸಹ ಈ ಆರು ಚಾಪೆಗಳನ್ನು ದಾಟುವಂತಿಲ್ಲ, ರಾಜರು ಮಾತ್ರ ಆರು ಚಾಪೆಗಳನ್ನು ದಾಟಿ ಹೋಗಲು ಅವಕಾಶವಿದೆ. ಮೊಘಲ್ ಯುವರಾಜರು ಮೂರು ಚಾಪೆಗಳಷ್ಟು ಹತ್ತಿರ ಹೋಗಬಹುದೆಂದು ತಿಳಿಸಿದರು. ಮೊಘಲ್ ಸಾಮ್ರಾಜ್ಯದ ಚಕ್ರವರ್ತಿಗಳು ಮಾತ್ರ ಅವರ ಹತ್ತಿರ ಹೋಗಿ ಅವರ ಕಾಲುಗಳಿಗೆ ಮುತ್ತಿಡುವ ಹಕ್ಕನ್ನು ಹೊಂದಿದ್ದಾರೆ. ಇದು ಇಲ್ಲಿನ ಸಂಪ್ರದಾಯ"

ಈ ಸಂದರ್ಭದಲ್ಲಿ ತಜ್ಞರು ಬ್ರಾಹ್ಮಣ ಗುರುಗಳಿಗೆ ಉಡುಗೊರೆಯಾಗಿ ತಂದಿದ್ದ ರೇಷ್ಮೆ ಬಟ್ಟೆಗಳು, ಹಾಲೆಂಡ್ ಮತ್ತು ಚೀನಾ ದೇಶಗಳಿಂದ ತಂದಿದ್ದ ವಿಶೇಷವಾದ ತೊಡುಗೆಗಳು ಮತ್ತು ಕಂಬಳಿಗಳನ್ನು ತಂದು ಕೆಲವು ಬ್ರಾಹ್ಮಣರು ವೇದಿಕೆಯ ಬಳಿ ಇಟ್ಟರು. ಅವುಗಳನ್ನು ಸ್ವೀಕರಿಸಬೇಕೆಂಬ ಯಾವ ಸೂಚನೆಯನ್ನು ಬ್ರಾಹ್ಮಣ ಗುರುಗಳು ನೀಡಲಿಲ್ಲ. ಒಮ್ಮೆ ಅವುಗಳತ್ತ ನೋಟ ಬೀರಿದ್ದಷ್ಟೇ ತಡ ಶಿಷ್ಯರು ಅವುಗಳನ್ನೆಲ್ಲಾ ಒಳಗೆ ತೆಗೆದುಕೊಂಡು ಹೋಗಿಯೇ ಬಿಟ್ಟರು.

ತಜ್ಞರು ಹಿಂದಿಯಲ್ಲಿ ಗುರುಗಳ ಹತ್ತಿರ ಮಾತನಾಡಲು ಪ್ರಾರಂಭಿಸಿದರು ಕೂಡಲೆ, ಆ ವೃದ್ಧ ಬ್ರಾಹ್ಮಣ ತಡೆದು,

"ನಿಲ್ಲಿಸಿ ಗುರುಗಳು ಅಪ್ಪಣೆ ನೀಡುವವರೆಗೆ ನೀವು ಮಾತನಾಡಬಾರದು. ಜೊತೆಗೆ ನೀವೂ ಸಹ ಪದ್ಮಾಸನ ಹಾಕಿ ಕೂಡಿ" ಎಂದನು. ಇದೆಲ್ಲಾ ಇಷ್ಟವಿಲ್ಲದಿದ್ದರೂ ಗೊಣಗುತ್ತಾ, ಭಾರತಕ್ಕೆ ಬಂದಿರುವುದರಿಂದ ಇದೆಲ್ಲವನ್ನು ಸಹಿಸಿಕೊಳ್ಳಬೇಕೆಂದು ಮನಸ್ಸನ್ನು ಗಟ್ಟಿ ಮಾಡಿಕೊಂಡು ಅಂತೆಯೇ ಕುಳಿತರು. ತಜ್ಞರು ನೆಲದ ಮೇಲೆ ಕುಳಿತ ಕೂಡಲೆ ಸಂಗೀತ ನಿಂತಿತು.

ಸೇವಕನೊಬ್ಬನು ತನ್ನ ಕೈಯಲ್ಲಿ ದೊಂದಿ ಹಿಡಿದು ಆ ಬೆಳಕು ಬರುತ್ತಿದ್ದ ಸ್ಥಳವನ್ನು ನೋಡಲು ಹೋದನು. ಸ್ವಲ್ಪ ಹೊತ್ತಿನಲ್ಲಿ ಅವಸರ ಅವಸರವಾಗಿ ಉಸಿರು ಕಟ್ಟಿಕೊಂಡು ಓಡಿ ಬಂದವನೇ, "ಆ ಗುಡಿಸಲಿನ ಹತ್ತಿರ ಹೋಗಬೇಡಿ" ಎಂದು ಕಿರುಚಿಕೊಂಡನು.

ಕೆಲವು ನಿಮಿಷಗಳು ವೇದಿಕೆ ನಿಶ್ಯಬ್ದವಾಗಿತ್ತು. ನಂತರ ಗುರುಗಳು ತಜ್ಞರನ್ನು ನೋಡಿ, " ಈ ಜಗನ್ನಾಥ ದೇವಾಲಯಕ್ಕೆ ಬಂದಿರುವ ಕಾರಣವೇನು? ಎಂದು ಕೇಳಿದರು.

ಬ್ರಾಹ್ಮಣ ಗುರುಗಳು ಹಿಂದಿಯಲ್ಲಿ ಅಲ್ಲಿದ್ದ ಎಲ್ಲರಿಗೂ ಕೇಳುವಂತೆ ಬಹಳ ಚೆನ್ನಾಗಿಯೇ ಮಾತನಾಡಿದರು. ಆದರೂ ಅವರ ಮಾತನ್ನು ಒಬ್ಬ ಫಕೀರನು ಪಕ್ಕದಲ್ಲಿ ಕೂತಿದ್ದ ಮತ್ತೊಬ್ಬ ಫಕೀರನಿಗೆ ವಿವರಿಸಿದನು. ನಂತರ ಇದು ಮೂರನೆಯವನಿಗೂ ಹೋಯಿತು. ಕೊನೆಯದಾಗಿ ಈ ವಿಷಯವನ್ನು ತಜ್ಞರಿಗೆ ತಿಳಿಸಲಾಯಿತು. ಅದರ ಅರ್ಥ ಇಷ್ಟೆ. ಈಗ ತಜ್ಞರು ತಮ್ಮ ಸಂದೇಹಗಳನ್ನು ಕೇಳಬಹುದು ಎಂದು.

"ಗುರುಗಳೇ ಸತ್ಯವನ್ನು ಯಾವ ರೀತಿಯಾಗಿ ತಿಳಿದುಕೊಳ್ಳಬಹುದೆಂದು ತಿಳಿದುಕೊಳ್ಳುವ ಸಲುವಾಗಿಯೇ ಜಗನ್ನಾಥ ದೇವಾಲಯಕ್ಕೆ ಬಂದಿದ್ದೇನೆ"

ಕೆಲಹೊತ್ತು ಯೋಚಿಸಿ ನಂತರ ಗುರುಗಳು, "ಬ್ರಾಹ್ಮಣರ ಮೂಲಕವೇ ಸತ್ಯವನ್ನು ಅರಿಯಬೇಕು" ಎಂದರು.

"ಸತ್ಯವನ್ನು ಎಲ್ಲಿ ಹುಡುಕಬೇಕು?"

"ಒಂದು ಲಕ್ಷ ಇಪ್ಪತ್ತು ಸಾವಿರ ವರ್ಷಗಳಿಗಿಂತ ಮುಂಚಿತವಾಗಿಯೆ ಸಂಸ್ಕೃತದಲ್ಲಿ ಬರೆಯಲ್ಪಟ್ಟಿರುವ ನಾಲ್ಕು ವೇದಗಳಲ್ಲಿ ಸಕಲ ಸತ್ಯಗಳು ಅಡಗಿವೆ. ಅವುಗಳ ಸೂಕ್ಷ್ಮತೆ ಬ್ರಾಹ್ಮಣರಿಗೆ ಮಾತ್ರ ಗೊತ್ತಿರುತ್ತದೆ"

ಗುರುವಿನ ಈ ಉತ್ತರವನ್ನು ಕೇಳಿದ ಆ ಕೊಠಡಿಯಲ್ಲಿದ್ದ ಎಲ್ಲರು ಚಪ್ಪಾಳೆ ತಟ್ಟಿ ಸಂತೋಷದಿಂದ ಕೇಕೆ ಹಾಕಿದರು.

ಇದನ್ನು ಕೇಳಿದ ತಜ್ಞರು ಬಹಳ ಶಾಂತಿಯುತವಾಗಿ "ಬ್ರಾಹ್ಮಣರು ಮಾತ್ರ ವೇದಗಳ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಪುಸ್ತಕದಲ್ಲಿ ದೇವರು ಸತ್ಯವನ್ನು ಹೇಳಿದ್ದಾರೆಂದರೆ, ಬ್ರಾಹ್ಮಣರು ದೇಶದಲ್ಲಿ ಇದ್ದಾರೆ ಎಂಬುದನ್ನು ಅರಿಯದೆ ಇರುವ ಬಹುಸಂಖ್ಯಾತ ಜನರು ಸತ್ಯವನ್ನು ತಿಳಿದುಕೊಳ್ಳಬಾರದೆಂದು ದೇವನು ನಿರಾಕರಿಸಿದಂತೆ ಅರ್ಥವಾಗುವುದಿಲ್ಲವೆ? ಈ ತರಹ ಮಾಡಿದರೆ ದೇವರು ನೀತಿವಂತನು ಹಾಗೂ ಆತ್ಮಸಾಕ್ಷಿ ಇಲ್ಲದವನು ಆಗುತ್ತಾನಲ್ಲವೇ?" ಎಂದರು.

"ಬ್ರಹ್ಮದೇವನ ಇಷ್ಟ ಅದು. ಆ ದೇವನ ಇಷ್ಟಕ್ಕೆ ವಿರುದ್ಧವಾಗಿ ಯಾವುದನ್ನು ಮಾಡಲು ಯಾರಿಂದಲೂ ಸಾಧ್ಯವಿಲ್ಲ"

ಗುರುಗಳ ಈ ಮಾತನ್ನು ಕೇಳಿ ಅಲ್ಲಿದ್ದವರು ಮತ್ತಷ್ಟು ಹುಮ್ಮಸ್ಸಿನಿಂದ ಚಪ್ಪಾಳೆ ತಟ್ಟಿ ಕೇಕೆಹಾಕಿದರು. ಈ ಕೇಕೆಗಳು ನಿಂತ ಮೇಲೆ ತಜ್ಞರು,

"ಮೂರನೆಯದಾಗಿ "ಸತ್ಯವನ್ನು ಸಾರ್ವಜನಿಕರಿಗೆ ತಿಳಿಸಬಾರದೆ?"

"ಎಲ್ಲರಿಗೂ ಸತ್ಯವನ್ನು ಗೊತ್ತಾಗದಂತೆ ಮುಚ್ಚಿಡುವುದೇ ಒಳ್ಳೆಯದು. ಆದರೂ ಆ ಸತ್ಯವನ್ನು ಬ್ರಾಹ್ಮಣರಿಗೆ ಮಾತ್ರ ತಿಳಿಸುವುದು ಕರ್ತವ್ಯ"

ಈ ಮಾತನ್ನು ಕೇಳಿದ ಕೂಡಲೆ ತಜ್ಞರು ಒಳಗೇ ಉರಿದು ಹೋದರು.

"ಏನು? ಸತ್ಯವನ್ನು ಸಾರ್ವಜನಿಕರಿಗೆ ತಿಳಿಸದೆ, ಬ್ರಾಹ್ಮಣರಿಗೆ ಮಾತ್ರ ಹೇಳಬೇಕೆ? ಹಾಗಾದರೆ ಬ್ರಾಹ್ಮಣರು ನಿಜವಾಗಲು ಆತ್ಮ ಸಾಕ್ಷಿಯಿಲ್ಲದವರು" ಎಂದರು.



ತಜ್ಞರ ಈ ಮಾತನ್ನು ಕೇಳಿದ ತಕ್ಷಣ ಅಲ್ಲಿ ಸೇರಿದವರ ನಡುವೆ ಗೊಂದಲಗಳು ಮತ್ತು ಕೂಗಾಟಗಳು ಶುರುವಾದವು. ದೇವರು ಆತ್ಮಸಾಕ್ಷಿಯಿಲ್ಲದವನು ಎಂದು ತಜ್ಞರು ಹೇಳಿದಾಗ ಯಾವುದೇ ಒಂದು ಸಣ್ಣ ವಿರೋಧವೂ ಇಲ್ಲದೆ ಶಾಂತವಾಗಿ ಕೂತಿದ್ದ ಸಭಿಕರು ಬ್ರಾಹ್ಮಣರು ಆತ್ಮಸಾಕ್ಷಿಯಿಲ್ಲದವರೆಂದು ಹೇಳಿದ ಕೂಡಲೆ ಅದನ್ನು ಸಹಿಸಿಕೊಳ್ಳಲಿಲ್ಲ. ಅಲ್ಲಿದ್ದ ಪಂಡಿತರುಗಳು ಫಕೀರರು, ಸನ್ಯಾಸಿಗಳು, ಬ್ರಾಹ್ಮಣ ಗುರುಗಳ ಶಿಷ್ಯರು, ಎಲ್ಲರೂ ಏಕಕಾಲದಲ್ಲಿ ತಜ್ಞರೊಂದಿಗೆ ವಾಗ್ವಾದಕ್ಕೆ ಮುಂದಾದರು. ಇದನ್ನು ಗಮನಿಸಿದ ಗುರು ಸಭೆಯನ್ನು ಉದ್ದೇಶಿಸಿ, "ಐರೋಪ್ಯರ ಹತ್ತಿರ ಬ್ರಾಹ್ಮಣರು ಯಾವಾಗಲೂ ಚರ್ಚಿಸಲೇಬಾರದು" ಎಂದು ಗಂಭೀರ ಧ್ವನಿಯಲ್ಲಿ ತಿಳಿಸುತ್ತ ಸಭೆಯಿಂದ ಹೊರಟೇಬಿಟ್ಟರು.

ಗುರುಗಳ ಈ ಮಾತನ್ನು ಕೇಳಿ ಸಭಿಕರು ಮತ್ತಷ್ಟು ಕೂಗಾಡುತ್ತಾ ವಿಜಯೋತ್ಸಾಹವನ್ನು ಆಚರಿಸಿದರು. ತಜ್ಞರ ಬಗ್ಗೆ ಗುನುಗುತ್ತಾ ಸಭಿಕರು ಬಾಯಿಗೆ ಬಂದಂತೆ ಮಾತನಾಡಿದರು. ಗುರುಗಳೇನಾದರೂ ಈ ಸಂದರ್ಭದಲ್ಲಿ ಆಜ್ಞೆ ಮಾಡದಿದ್ದಿದ್ದರೆ "ಗಂಗಾನದಿ ತೀರದಲ್ಲಿರುವ ಬ್ರಿಟಿಷರಿಗೂ ಹೆದರದೆ, ಈ ತಜ್ಞರ ಮೇಲೆ ಹಲ್ಲೆ ನಡೆಸುವ ಸಾಧ್ಯತೆಯಿತ್ತು. ಇಂತಹ ಪರಿಸ್ಥಿತಿಯನ್ನು ಎದುರಿಸಿದ ತಜ್ಞರು ಸಭೆಯಿಂದ ಹೊರಬಂದರು. ಅವರನ್ನು ದೇವಸ್ಥಾನದ ಒಳಗೆ ಕರೆತಂದ ಮುದುಕ ಬ್ರಾಹ್ಮಣನು ತಜ್ಞರ ಬಳಿ ನಿಂತು "ಗುರುಗಳು, ಬ್ರಾಹ್ಮಣರ ಸಂಪ್ರದಾಯದಂತೆ ಕುಡಿಯಲು ಪಾನಕ, ಒಳ್ಳೆಯ ವಾಸನೆಯ ಗಂಧದ ತಿಳಿ, ಹಾಗೂ ಎಲೆ ಅಡಿಕೆ ಮುಂತಾದವುಗಳನ್ನು ನೀಡುತ್ತಿದ್ದರು. ಆದರೆ ನೀವು ಅವರಿಗೆ ಕೋಪ ಬರುವಂತೆ ಮಾಡಿದಿರಿ" ಎಂದನು.

"ಕೋಪಗೊಳ್ಳಬೇಕಾಗಿರುವವನು ನಾನಲ್ಲವೇ? ಏಕೆಂದರೆ ನನಗೆ ದುಃಖವಾಗಿತ್ತು. ನಿಮ್ಮ ಗುರುಗಳು ಕೋಪಗೊಳ್ಳಲು ಯಾವುದೇ ಕಾರಣ ಇರಲಿಲ್ಲ. ಅಲ್ಲವೆ? "ನೀವು

ಗುಡಿಸಲಿಗೆ ಹಿಂತಿರುಗಿದವನು, ತಜ್ಞರನ್ನು ನೋಡುತ್ತಾ "ಸ್ವಾಮಿ ನಾನು ಮತ್ತೆ ಕೇಳುತ್ತೇನೆಂದು ತಪ್ಪು ತಿಳಿಯಬಾರದು; ನಾನು ನಿರಾಶ್ರಿತನಾದ ಹೊಲೆಮಾದಿಗ. ಆದರೆ ನಿಮ್ಮ ಬಿಳಿಯ ಬಣ್ಣ, ನೀವು ಧರಿಸಿರುವ ಬಟ್ಟೆಗಳನ್ನು ನೋಡಿದರೆ ನೀವು ಭಾರತೀಯರಲ್ಲ ಎಂದೆನಿಸುತ್ತದೆ. ಬಡ ಗುಲಾಮನಾದ ನಾನು ನೀಡುವ ಊಟವನ್ನು ನೀವು ದ್ವೇಷಿಸಲಾರಿರಿ ಎಂದು ಭಾವಿಸುತ್ತಲೇ ನಿಮ್ಮನ್ನು ಸ್ವಾಗತಿಸುತ್ತೇನೆ" ಎಂದನು?

ಗುರುಗಳ ವಿರುದ್ಧ ಚರ್ಚೆ ಮಾಡಲು ಹೊರಟ್ಟಿದ್ದು ತಪ್ಪಲ್ಲವೇ? ಏಕೆಂದರೆ ನಮ್ಮ ಗುರುಗಳ ಬಾಯಿಯಿಂದ ಹೊರಟ ಮಾತು ಇಂಡಿಯಾ ದೇಶದ ಪುಣ್ಯದ ಮಾತಾಗಿರುತ್ತದೆ. ಅವರ ಬಾಯಿಯಿಂದ ಬರುವ ಪ್ರತಿ ಶಬ್ದವೂ ಜ್ಞಾನದ ಭಂಡಾರ ಎಂದು ನೀವು ತಿಳಿಯಲ್ಲಿಲ್ಲವೇ?"

"ಅದರ ಬಗ್ಗೆ ನಾನು ತಿಳಿದುಕೊಳ್ಳುವ ಅಗತ್ಯವಿಲ್ಲ" ಎನ್ನುತ್ತಾ ತಜ್ಞರು ದೇವಸ್ಥಾನದ ಒಳಗೆ ಹೋಗುವಾಗ ತೆಗೆದಿಟ್ಟಿದ್ದ ಬಟ್ಟೆ, ಟೋಪಿ ಮತ್ತು ಚಪ್ಪಲಿ ಧರಿಸಿಕೊಂಡು ಹೊರಡಲು ಮುಂದಾದರು. ಆದರೆ ಅವರು ಹೊರಡುವ ಸಮಯದಲ್ಲಿ ಗಾಳಿ ಮಳೆ ಬರುವ ಸಂಭವವಿತ್ತು. ಆದ್ದರಿಂದ ರಾತ್ರಿ ಸಮಯದಲ್ಲಿ ದೇವಸ್ಥಾನದಲ್ಲಿಯೇ ತಂಗಲು ಬಯಸಿದರು. ಆದರೆ ಅವರು ಪರಂಗಿಯವರಾದ ಕಾರಣ ರಾತ್ರಿ ಅವರಿಗೆ ಅಲ್ಲಿ ಉಳಿದುಕೊಳ್ಳಲು ಅವಕಾಶ ಸಿಗಲಿಲ್ಲ. ಇಂತಹ ಪರಿಸ್ಥಿತಿಯಿಂದ ಅವರಿಗೆ ಬಾಯಾರಿಕೆಯಾಗಿ ಕುಡಿಯಲು ನೀರು ಕೇಳಿದರು. ಒಂದು ಮಡಿಕೆಯಲ್ಲಿ ಅವರಿಗೆ ಕುಡಿಯಲು ನೀರನ್ನು ನೀಡಲಾಯಿತು. ಅವರು ಪರಂಗಿಯವರಾಗಿದ್ದು ಮಡಕೆಯನ್ನು ಮುಟ್ಟಿ ನೀರು ಕುಡಿದ ಕಾರಣ ಅದು ಅಶುದ್ಧವಾಗಿದೆಯೆಂದು ಮಡಕೆಯನ್ನು ಒಡೆದು ಹಾಕಿದರು. ಈ ಘಟನೆಗಳನ್ನು ನೋಡಿ ತಜ್ಞರಿಗೆ ವಿಪರೀತ ಕೋಪ ಬಂದಿತ್ತಾದರೂ ಏನೂ ಮಾತನಾಡದೆ ತನ್ನ ಜೊತೆಯಲ್ಲಿ ಬಂದ ಪರಿವಾರದವರನ್ನು ನೋಡಿದರು. ಅವರೆಲ್ಲರೂ ಸಹ ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದರು. ಅವರನ್ನು ಕರೆದು, ಪಲ್ಲಕ್ಕಿಯಲ್ಲಿ ಕುಳಿತು ಅಲ್ಲಿಂದ ಹೊರಟರು. ಆಗ ಕತ್ತಲೆಯಾವರಿಸಿತ್ತು. ಆಗಸದಲ್ಲಿ ಕಪ್ಪು ಮೋಡಗಳು ದಟ್ಟೈಸಿದ್ದವು. ಆದರೂ ದೇವಸ್ಥಾನವನ್ನು ಬಿಟ್ಟು ಸಮುದ್ರದ ದಡದಲ್ಲಿರುವ ಬಿದಿರುಗಳು ಜೋರಾಗಿ ಬೀಸುವ ಗಾಳಿಯಿಂದ ಒಂದನ್ನೊಂದು ತಬ್ಬಿಕೊಂಡು ಗಾಳಿಗೆ ಸಂಗೀತವನ್ನು ತುಂಬುವಂತೆ ತೋರತ್ತಿದ್ದ ದಾರಿಯಲ್ಲಿ ನಡೆದರು.

ದಾರಿಯಲ್ಲಿ ಸಾಗುತ್ತಿದ್ದಾಗ ತಜ್ಞರ ಮನಸ್ಸಿನಲ್ಲಿ ದೇವಸ್ಥಾನದಲ್ಲಿ ನಡೆದ ಘಟನೆಗಳ ಸುತ್ತ ಹಲವಾರು ಭಾವನೆಗಳು ಮತ್ತೆ ಮತ್ತೆ ಮರುಕಳಿಸುತ್ತಿದ್ದವು. ಸಾವಿರ ರೆಕ್ಕೆಗಳಿರುವ ಪಕ್ಷಿಯಂತೆ ಅವರ ಮನಸ್ಸು ಹಾರಾಡುತ್ತಿತ್ತು. ಇಂತಹ ಸಂದರ್ಭದಲ್ಲೂ ತನ್ನ ಮನಸ್ಸಿನೊಂದಿಗೆ ಅವರು ಮಾತನಾಡುತ್ತಿದ್ದರು. "ಯೂರೋಪಿನಿಂದ ಬರುವ ವ್ಯಕ್ತಿ ಎಷ್ಟೆ ಶಾಂತ ಸ್ವಭಾವದವರಾಗಿದ್ದರೂ, ಭಾರತಕ್ಕೆ ಬಂದ ಕೂಡಲೆ ತನ್ನ ಶಾಂತಿಯನ್ನು ಕಳೆದುಕೊಳ್ಳುತ್ತಾನೆ" ಎಂದು ಮನಸ್ಸಿನಲ್ಲೇ ಹೇಳಿಕೊಂಡರು. "ನನ್ನ ಮಟ್ಟಿಗೆ ನನ್ನ ಮನಃಶಾಂತಿಯನ್ನು ಕಳೆದುಕೊಂಡಿದ್ದೇನೆ. ಎಂತಹ ಪರಿಸ್ಥಿತಿ ಬಂದಿದೆ. ಸತ್ಯವನ್ನು ಯಾವ ಮಾರ್ಗದಿಂದ ತಿಳಿಯುವುದು, ಆ ಸತ್ಯವನ್ನು ಎಲ್ಲಿಂದ ಹುಡುಕುವುದು ಆ ಸತ್ಯವನ್ನು ಸಾರ್ವಜನಿಕರಿಗೆ ತಿಳಿಸಬೇಕೇ? ಬೇಡವೆ? ಎಂಬ ಪ್ರಶ್ನೆಗಳಿಗೆ ನನಗೆ ಉತ್ತರ ಸಿಗಲಿಲ್ಲವಲ್ಲ, ಈ ವಿಶಾಲವಾದ ಭೂಮಿಯ ಉದ್ದಗಲಕ್ಕೂ ಇರುವ ಪರಿಸ್ಥಿತಿ ಮಾನವನನ್ನು ತಪ್ಪುಗಳಿಗೆ, ಜಗಳಗಳಿಗೆ ಪ್ರೇರೇಪಿಸುವಂತೆಯೇ ಇದೆ. ಬ್ರಾಹ್ಮಣರನ್ನು ಕೇಳಿ ತಿಳಿಯೋಣ ಎಂದು ಭಾರತಕ್ಕೆ ಬಂದುದರ ಫಲ ಇಷ್ಟೇನಾ?" ಎಂದು ಚಿಂತಿಸಿದರು. ತಜ್ಞರು ಪಲ್ಲಕ್ಕಿಯಲ್ಲಿ ಈ ರೀತಿ ಯೋಚನಾ ಮಗ್ನರಾಗಿ ಹೋಗುತ್ತಿದ್ದ ಸಂದರ್ಭದಲ್ಲಿ ಎದುರಾದ ಚಂಡಮಾರುತವು ಬರಬರುತ್ತಾ ಉಗ್ರ ರೂಪ ಪಡೆಯಿತು. ಅದು ಸಮುದ್ರದಿಂದ ಬಂದು ಗಂಗಾ ನದಿಯನ್ನು ಹಿಂದಕ್ಕೆ ತಳ್ಳಿತು. ಅಷ್ಟೆ ಅಲ್ಲದೆ ಗಂಗಾ ನದಿಯಲ್ಲಿರುವ ಮಣ್ಣಿನ ದಿಣ್ಣೆಗಳನ್ನು ಹೊತ್ತೊಯ್ಯಿತು. ಸಮುದ್ರದ ದಡದಲ್ಲಿದ್ದ ಮರಳನ್ನು ಎಬ್ಬಿಸುತ್ತಾ ಕಾಡಿನ ಮರದ ಎಲೆಗಳನ್ನು ಆಕಾಶವನ್ನು ಮುಟ್ಟುವಂತೆ ಹೊತ್ತೊಯ್ಯಿತು. ಗಾಳಿ ಈ ರೀತಿ ತನ್ನ ಉಗ್ರ ಸ್ವರೂಪವನ್ನು ವ್ಯಕ್ತಪಡಿಸುತ್ತಾ ನದಿ, ನಾಡು, ಆಕಾಶ ಮುಂತಾದ ಎಲ್ಲವನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ನರ್ತನಗೈದಿತು.

ತಜ್ಞರು ಮತ್ತು ಅವರ ಪರಿವಾರವು ಆ ಕಾಳಕತ್ತಲೆಯಲ್ಲಿ ಏನೊಂದನ್ನೂ ಕಾಣಲಾರದೆ ದಾರಿಯೂ ತಿಳಿಯದ ಸ್ಥಿತಿಯಲ್ಲಿ ಮೂರು ಗಂಟೆಗಳ ಕಾಲ ಆ ದಟ್ಟಾರಣ್ಯದಲ್ಲಿ ನಡೆದರು. ಧಿಡೀರನೆ ಮೋಡಗಳನ್ನು ಸೀಳಿಕೊಂಡು ಮೂಡಣದಿಕ್ಕಿನಲ್ಲಿ ಆಕಾಶ ಗೋಚರಿಸುವಂತೆ ಗುಡುಗು ಮತ್ತು ಸಿಡಿಲು ಬಡಿದು ಮಿಂಚಿತು. ಆ ಮಿಂಚಿನ ಬೆಳಕಿನಲ್ಲಿ ಜಗನ್ನಾಥ ದೇವಸ್ಥಾನ, ಗಂಗಾನದಿ, ಗಜಗಾತ್ರದ ಅಲೆಗಳನ್ನೆಬ್ಬಿಸುತ್ತಿದ್ದ ಅಂಬುಧಿ, ಈ ಎಲ್ಲವು ಕ್ಷಣ ಕಾಲ ಕಾಣಿಸಿದವು. ಬೆಳಕಿನಲ್ಲಿ ಅವರ ಎದುರಿಗಿದ್ದ ಹಳ್ಳಕೊಳ್ಳಗಳು, ಕಾಡುಮೇಡುಗಳೆಲ್ಲಾ ಗೋಚರಿಸಿದವು. ಅವರು ತಮ್ಮನ್ನು ರಕ್ಷಿಸಿಕೊಳ್ಳಲು ಕಾಡಿನೊಳಕ್ಕೆ ನುಗ್ಗಿದರು. ಗುಡುಗಿನ ಶಬ್ದದಿಂದ ಕಿವಿಯ ತಮಟೆಗಳು ಕಂಪಿಸಿದವು. ಎದುರಿಗಿದ್ದ ಹಳ್ಳದಲ್ಲಿ ಪುರಾತನ ಕಾಲದ ಮರಗಳು ಮತ್ತು ಅಲ್ಲಲ್ಲಿ ಕರಿ ಬಂಡೆಗಳಿದ್ದವು. ಈ ಉಗ್ರಪ್ರತಾಪಿ ಚಂಡಮಾರುತದ ಗಾಳಿಯಿಂದ ಆಕಾಶವನ್ನು ಚುಂಬಿಸುವಂತೆ ಬೆಳೆದಿದ್ದ ಮರಗಳ ತುದಿಗಳು ಬಾಗಿ ನೆಲಮುಟ್ಟಿ ನಮಿಸಿದವು. ಆ ಮರಗಳ ಬುಡಗಳು ಮಾತ್ರ ಮಾತ್ರ ಯಾವುದೇ ಚಲನೆಯಿಲ್ಲದ ಕರಿಬಂಡೆಗಳಂತೆ ಇದ್ದವು. ಆ ಕಾಡಿನ ಒಂದೆಡೆ ಅವರ ರಕ್ಷಣೆಗೆ ಸೂಕ್ತವಾದ ಸ್ಥಳ ಸಿಕ್ಕಿತು. ಆದರೆ ಆ ಕಾಡಿನ ಒಳಗೆ ನಡೆಯುವುದು ಬಹಳ ತ್ರಾಸದಾಯಕವಾಯಿತು. ಕಾಡಿನ ಬದಿಯಲ್ಲಿ ಬಳ್ಳಿಗಳು ಮರವನ್ನು ಬುಡದಿಂದ ಸುರುಳಿಯಕಾರದಲ್ಲಿ ಸುತ್ತಿಕೊಂಡು ಹಸಿರು ಎಲೆಗಳಿಂದ ಮರಗಳಿಗೆ ರಕ್ಷಣೆಯೊದಗಿಸಿದ್ದವು. ಇನ್ನೂ ಕೆಲವು ಬಳ್ಳಿಗಳು ಮರದಿಂದ ಮರಕ್ಕೆ ಹಾದು ಹೋಗಿದ್ದವಲ್ಲದೇ ಅಲ್ಲಿ ಗಿಡಗಳಿಂದಲೇ ರಚನೆಯಾಗಿದ್ದ ಗುಹೆಗಳಿದ್ದವು. ಆದರೆ ಆ ಸ್ಥಳಕ್ಕೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ.

ಸೇವಕರು ತಮ್ಮ ಖಡ್ಗದಿಂದ ದಾರಿಯನ್ನು ಮಾಡುತ್ತಾ ಮುಂದೆ ಹೋಗುತ್ತಿದ್ದರೆ ಅವರ ಹಿಂದೆ ಪಲ್ಲಕ್ಕಿಯಲ್ಲಿ ತಜ್ಞರನ್ನು ಹೊತ್ತುಕೊಂಡು ಉಳಿದವರೆಲ್ಲಾ ಹಿಂಬಾಲಿಸಿದರು. ಗಾಳಿಯಿಂದ ತಪ್ಪಿಸಿಕೊಂಡರೂ ಅವರು ಮಳೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಹೀಗೆ ಹೇಳಲಸಾಧ್ಯವಾದ ಈ ಕಷ್ಟವನ್ನನುಭವಿಸುತ್ತಿದ್ದ ಸಮಯದಲ್ಲಿ ಕಾಡಿನ ಮರಗಳ ಸಂದಿನಿಂದ ಅನತಿ ದೂರದಲ್ಲಿ ಅತಿ ಕಿರಿದಾದ ಕಿಂಡಿಯಿಂದ ಬೆಳಕೊಂದು ತೂರಿಕೊಂಡು ಬರುತ್ತಿದ್ದುದು ಕಂಡರು. ಆ ಬೆಳಕು ಒಂದು ಗುಡಿಸಲಿನ ಒಳಗಿನಿಂದ ಬರುತ್ತಿದ್ದುದನ್ನು ನೋಡಿದರು.

ಸೇವಕನೊಬ್ಬನು ತನ್ನ ಕೈಯಲ್ಲಿ ದೊಂದಿ ಹಿಡಿದು ಆ ಬೆಳಕು ಬರುತ್ತಿದ್ದ ಸ್ಥಳವನ್ನು ನೋಡಲು ಹೋದನು. ಸ್ವಲ್ಪ ಹೊತ್ತಿನಲ್ಲಿ ಅವಸರ ಅವಸರವಾಗಿ ಉಸಿರು ಕಟ್ಟಿಕೊಂಡು ಓಡಿ ಬಂದವನೇ, "ಆ ಗುಡಿಸಲಿನ ಹತ್ತಿರ ಹೋಗಬೇಡಿ" ಎಂದು ಕಿರುಚಿಕೊಂಡನು.

"ಅಲ್ಲಿ ಹೊಲೆಮಾದಿಗನಿದ್ದಾನೆ!"

ಕೂಡಲೆ ಆ ಗುಂಪಿನಲ್ಲಿ ಇದ್ದವರು ಭಾರಿ ಭಯದಿಂದ ಕಿರುಚಿದರು. ತಜ್ಞರು ಇವರೆಲ್ಲಾ ಯಾವುದೋ ಒಂದು ಕಾಡು ಪ್ರಾಣಿಯ ಬಗ್ಗೆ ಮಾತನಾಡುತ್ತಿರಬಹುದೆಂದು ಊಹಿಸಿದರು. ಆ ಕಾಡು ಪ್ರಾಣಿಯನ್ನು ಕೊಲ್ಲಲು ತುಪಾಕಿಯೊಂದನ್ನು ಸಿದ್ಧಮಾಡುತ್ತಾ, ದೊಂದಿ ಹಿಡಿದು ಓಡಿ ಬಂದವನನ್ನು ಕರೆದು "ಹೊಲೆಮಾದಿಗ ಎಂದರೆ ಏನರ್ಥ, ಎಂತಹ ಪ್ರಾಣಿ ಅದು?" ಎಂದು ಕೇಳಿದರು.

"ಹೊಲೆಮಾದಿಗ ಎಂದರೆ ನಂಬಿಕೆ ಮತ್ತು ಕಾನೂನಿನ ಶಿಸ್ತು ಇಲ್ಲದ ಮನುಷ್ಯ"

ರಜಪೂತ ವಂಶಕ್ಕೆ ಸೇರಿದ ಒಬ್ಬನು, "ಹೊಲೆಮಾದಿಗ ಎಂದರೆ ಕೀಳು ಜಾತಿಗೆ ಸೇರಿದವನು ಅಂತ. ಅವನು ಯಾರನ್ನಾದರು ಮುಟ್ಟಿದರೆ ಅವನನ್ನು ಸಾಯಿಸಲು ಹಕ್ಕಿದೆ. ಅವನ ಮನೆಯೊಳಗೆ ಆಕಸ್ಮಿಕವಾಗಿ ಪ್ರವೇಶ ಮಾಡಿದರೆ ಒಂಭತ್ತು ಜನ್ಮಗಳು ನಾವು ಯಾವ ದೇವಸ್ಥಾನಗಳನ್ನು ಪ್ರವೇಶಿಸಲು ಅರ್ಹರಲ್ಲ. ಒಂಭತ್ತು ಸಲ ಗಂಗಾನದಿಯಲ್ಲಿ ಸ್ನಾನ ಮಾಡಿ ನಮ್ಮನ್ನು ಶುದ್ಧಿ ಮಾಡಿಕೊಳ್ಳಬೇಕು. ಒಂಭತ್ತು ಸಲ ಗೋಮೂತ್ರವನ್ನು ಬ್ರಾಹ್ಮಣರ ಕೈಯಿಂದ ಪಡೆದು ತಲೆಯ ಮೇಲಿಂದ ಕಾಲಿನವರೆಗೂ ತೊಳೆದುಕೊಳ್ಳಬೇಕು" ಎಂದು ಹೇಳಿದ. ತಜ್ಞರ ಜೊತೆಯಲ್ಲಿದ್ದ ಎಲ್ಲರು ಒಂದೇ ಧ್ವನಿಯಲ್ಲಿ " ನಾವು ಹೊಲೆಮಾದಿಗನ ಮನೆಯ ಒಳಗೆ ಪ್ರವೇಶ ಮಾಡುವುದಿಲ್ಲ" ಎಂದು ಕೂಗಿದರು.

ತಜ್ಞರು ದೀಪವನ್ನು ಹಿಡಿದಿದ್ದ ಸೇವಕನನ್ನು ಕರೆದು, "ನಿಮ್ಮದೇ ದೇಶದವನಾದ ಅವನನ್ನು ನಂಬಿಕೆ ಮತ್ತು ಕಾನೂನಿನ ಶಿಸ್ತು ಇಲ್ಲದವನೆಂದು ನೀವು ಹೇಗೆ ತಿಳಿದುಕೊಂಡಿದ್ದೀರಾ?"

"ಅವನ ಗುಡಿಸಲಿನ ಬಾಗಿಲು ತೆರೆದಾಗ ಅವನು ತನ್ನ ನಾಯಿ ಮತ್ತು ತನ್ನ ಹೆಂಡತಿಯೊಂದಿಗೆ ಒಂದೇ ಚಾಪೆಯಲ್ಲಿ ನಿದ್ದೆ ಮಾಡುತ್ತಿದ್ದನು. ಮತ್ತು ಅವನು ನೀರನ್ನು ಕುಡಿಯಲು ದನದ ಕೊಂಬನ್ನು ಬಳಸುವುದನ್ನು ನಾನು ನೋಡಿದೆ" ಎಂದನು ಆ ಸೇವಕ.

ತಜ್ಞರ ಜೊತೆಯಲ್ಲಿದ್ದ ಎಲ್ಲರೂ ಮತ್ತೊಮ್ಮೆ "ನಾವಂತೂ ಹೊಲೆಮಾದಿಗನ ಮನೆಯೊಳಕ್ಕೆ ಪ್ರವೇಶ ಮಾಡುವುದಿಲ್ಲ" ಎಂದು ಪದೇ ಪದೇ ಒತ್ತಿ ಹೇಳಿದರು.

"ಹಾಗಾದರೆ ನೀವು ಇಲ್ಲಿಯೆ ಇರಬಹುದು. ನಾನು ನನ್ನನ್ನು ಮಳೆಯಿಂದ ರಕ್ಷಿಸಿಕೊಳ್ಳಲು ಭಾರತದಲ್ಲಿರುವ ಎಲ್ಲಾ ಜಾತಿಗಳು ಒಂದೇ" ಎಂದು ಭಾವಿಸುತ್ತೇನೆ. ಎಂದು ಹೇಳುತ್ತಾ ಪಲ್ಲಕ್ಕಿಯಿಂದ ಕೆಳಗಿಳಿದರು. ತನ್ನ ಪ್ರಶ್ನೆಯಿರುವ ಓಲೆಯನ್ನು ಬಗಲಲ್ಲಿ ಇಟ್ಟುಕೊಂಡು ಬಂದೂಕು ಹಾಗೂ ಹೊಗೆ ಸೇದುವ ಭಂಗಿಯನ್ನು ಹಿಡಿದು ಹೊರಟರು.

ಒಂಟಿಯಾಗಿ ನಡೆದು ಹೋಗಿ ಗುಡಿಸಲಿನ ಬಾಗಿಲು ತಟ್ಟಿದರು. ಆಕರ್ಷಕ ಮೈಕಟ್ಟು ಹೊಂದಿದ್ದ ಒಬ್ಬ ಮನುಷ್ಯ ಬಾಗಿಲನ್ನು ತೆರೆದನು. ಬಾಗಿಲ ಎದುರು ನಿಂತಿದ್ದ ತಜ್ಞರನ್ನು ನೋಡಿದೊಡನೆಯೇ ಆ ವ್ಯಕ್ತಿ ಪಕ್ಕಕ್ಕೆ ಸರಿದು ನಿಂತು,

"ಸ್ವಾಮಿ ನಾನು ಬಡವ. ಅಷ್ಟೇ ಅಲ್ಲದೆ ನಾನೊಬ್ಬ ಅಸ್ಪೃಶ್ಯ. ತಮ್ಮನ್ನು ಸ್ವಾಗತಿಸಲು ಭಾರತದ ಸಂಪ್ರದಾಯದಂತೆ ನಾನು ಅರ್ಹನಲ್ಲ. ಆದರೆ ತಾವುಗಳು ಮಳೆಯ ಕಾರಣದಿಂದ ನನ್ನ ಗುಡಿಸಲಿನಲ್ಲಿ ಇರಲು ಇಚ್ಚಿಸುವಿರಾದರೆ ಅದು ನಮಗೆ ಹೆಮ್ಮೆಯ ವಿಚಾರ" ಎಂದು ತನ್ನ ಸಂತೋಷವನ್ನು ವ್ಯಕ್ತಪಡಿಸಿದನು.

ತಜ್ಞರು "ನಿನ್ನ ಸ್ವಾಗತವನ್ನು ನಾನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ, ಅಂದಹಾಗೆ ನಿಮ್ಮ ಹೆಸರೇನು?' ಎಂದು ಕೇಳಿದರು.

"ಗುರುವ ಎಂದು ಸ್ವಾಮಿ"

ನಂತರ ತಜ್ಞರ ರಕ್ಷಣೆ ಮತ್ತು ಸಹಾಯಕ್ಕಾಗಿ ಬಂದಿದ್ದವರ ಬಳಿಗೆ ಗುರುವ ಹೋದ. ಹೋಗುವಾಗ ಕೈಯಲ್ಲಿ ದೊಂದಿ ಹಿಡಿದುಕೊಂಡು ಭುಜದ ಮೇಲೆ ಒಣಗಿದ ಸೌದೆ ಹಾಗೂ ಬಾಳೆ ಹಣ್ಣು ತುಂಬಿದ್ದ ಬುಟ್ಟಿಯನ್ನು ಹೊತ್ತುಕೊಂಡು ಹೋದನು. ತನ್ನ ಗುಡಿಸಲಿಂದ ಸ್ವಲ್ಪ ದೂರದಲ್ಲಿ ಒಂದು ದೊಡ್ಡದಾದ ಮರದ ಕೆಳಗೆ ಇದ್ದ ತಜ್ಞರ ಸೇವಕರ ಮುಂದೆ ತಾನು ತಂದಿರುವ ಹಣ್ಣು, ಕಾಯಿ ಮತ್ತು ಸೌದೆಗಳನ್ನು ಇಟ್ಟು "ಸ್ವಾಮಿಗಳೇ ತಾವೆಲ್ಲರೂ ನನ್ನ ಮನೆಯೊಳಕ್ಕೆ ಬಂದು ನನಗೆ ಗೌರವವನ್ನು ಕೊಡದೆ ಹೋದರು ಅಡ್ಡಿಯಿಲ್ಲ; ಕನಿಷ್ಠ ಚರ್ಮದಿಂದ ಮುಚ್ಚಲ್ಪಟ್ಟಿರುವ ಹಣ್ಣು ಮತ್ತು ಕಾಯಿಗಳನ್ನಾದರು ತಾವುಗಳು ಸ್ವೀಕರಿಸಬೇಕು. ಇವುಗಳನ್ನು ಸ್ವೀಕರಿಸುವುದರ ಮೂಲಕ ನೀವು ಮೈಲಿಗೆಯಾಗದೆ ಹಣ್ಣು ಮತ್ತು ಕಾಯಿಗಳನ್ನು ತಿಂದಂತಾಗುತ್ತದೆ" ಎಂದನು. "ಚಳಿಯಿಂದ ರಕ್ಷಿಸಿಕೊಳ್ಳಲು, ಹುಲಿ ಮುಂತಾದ ಪ್ರಾಣಿಗಳಿಂದ ಕಾಪಾಡಿಕೊಳ್ಳಲು ನಾನು ತಂದಿರುವ ಸೌದೆಯಲ್ಲಿ ಬೆಂಕಿ ಹಾಕಿಕೊಳ್ಳಿರಿ. ದೇವರು ನಿಮ್ಮನ್ನು ಕಾಪಾಡಲಿ" ಎಂದು ಹೇಳಿ ತನ್ನ ಗುಡಿಸಲಿಗೆ ಹಿಂತಿರುಗಿದನು.

ಗುಡಿಸಲಿಗೆ ಹಿಂತಿರುಗಿದವನು, ತಜ್ಞರನ್ನು ನೋಡುತ್ತಾ "ಸ್ವಾಮಿ ನಾನು ಮತ್ತೆ ಕೇಳುತ್ತೇನೆಂದು ತಪ್ಪು ತಿಳಿಯಬಾರದು; ನಾನು ನಿರಾಶ್ರಿತನಾದ ಹೊಲೆಮಾದಿಗ. ಆದರೆ ನಿಮ್ಮ ಬಿಳಿಯ ಬಣ್ಣ, ನೀವು ಧರಿಸಿರುವ ಬಟ್ಟೆಗಳನ್ನು ನೋಡಿದರೆ ನೀವು ಭಾರತೀಯರಲ್ಲ ಎಂದೆನಿಸುತ್ತದೆ. ಬಡ ಗುಲಾಮನಾದ ನಾನು ನೀಡುವ ಊಟವನ್ನು ನೀವು ದ್ವೇಷಿಸಲಾರಿರಿ ಎಂದು ಭಾವಿಸುತ್ತಲೇ ನಿಮ್ಮನ್ನು ಸ್ವಾಗತಿಸುತ್ತೇನೆ" ಎಂದೆನ್ನುತ್ತಾ ಮನೆಯೊಳಗೆ ಹಾಸಿದ್ದ ಚಾಪೆಯಲ್ಲಿ ಮಾವಿನಹಣ್ಣು, ಸೀತಾಫಲಹಣ್ಣು, ಸುಟ್ಟ ಮರಗೆಣಸು ಹಾಗೂ ಬಳ್ಳಿಗೆಣಸು, ಬಾಳೆಹಣ್ಣು ಮತ್ತು ಸಕ್ಕರೆಯಿಂದ ತುಂಬಿದ ತೆಂಗಿನ ಚಿಪ್ಪು, ಹಾಲು ತುಂಬಿದ ಅನ್ನವನ್ನು ಪಕ್ಕದಲ್ಲಿಟ್ಟು ತಜ್ಞರನ್ನು ಊಟಕ್ಕೆ ಕರೆದು ತಾನು ತನ್ನ ಹೆಂಡತಿಯ ಜೊತೆಯಲ್ಲಿ ಪಕ್ಕದಲ್ಲಿ ಕುಳಿತನು. ಅವರ ಮಗು ತೊಟ್ಟಿಲಿನಲ್ಲಿ ನಿದ್ರಿಸುತ್ತಿತ್ತು.

ಅವನ ಸತ್ಕಾರವನ್ನು ನೋಡಿ ತಜ್ಞರು, "ಮಾನವೀಯತೆಯನ್ನು ಸರಳವಾಗಿ ಅರ್ಥಮಾಡಿಕೊಂಡಿರುವ ನೀನು ನನಗಿಂತಲೂ ಶ್ರೇಷ್ಠನಾದವನು. ಏಕೆಂದರೆ ನಿನ್ನನ್ನು ದ್ವೇಷಿಸುವವರಿಗೂ ನೀನು ಒಳ್ಳೆಯದನ್ನೇ ಮಾಡುತ್ತಿರುವೆ. ನಾನು ಕುಳಿತುಕೊಂಡಿರುವ ಈ ಚಾಪೆಯ ಮೇಲೆ ನೀನೂ ಕುಳಿತುಕೊಳ್ಳುವ ಮೂಲಕ ನನ್ನನ್ನು ಗೌರವಿಸದೆ ಹೋದಲ್ಲಿ ನೀನು ನನ್ನನ್ನು ಕೆಟ್ಟವನೆಂದು ಭಾವಿಸಿದ ಹಾಗೆ ಎಂದುಕೊಳ್ಳುತ್ತೇನೆ. ನಾನು ಮಳೆಯಲ್ಲಿ ನೆನೆಯುವುದಾದರು ಸರಿಯೇ, ಹೊರಗೆ ಹೋದ ಮೇಲೆ ಹುಲಿಯಿಂದ ಸತ್ತರು ಸರಿಯೇ; ನಾನು ಈ ಕೂಡಲೆ ಗುಡಿಸಲಿನಿಂದ ಹೊರಗೆ ಹೋಗಿ ಬಿಡುವೆ" ಎಂದರು.

ಈ ಮಾತನ್ನು ಕೇಳಿದ ಕೂಡಲೆ ಗುರುವ ಭಾವುಕನಾದನು. ಏಕೆಂದರೆ ಅವನ ಬದುಕಿನಲ್ಲಿ ಅದುವರೆಗೆ ಯಾವೊಬ್ಬ ಭಾರತೀಯನೂ ಅಂತಹ ಮಾತನ್ನು ಹೇಳಿರಲಿಲ್ಲ. ಆದುದರಿಂದ ಈ ಮಾತುಗಳನ್ನು ಕೇಳಿದ ಕೂಡಲೇ ಅವನ ಮನಸ್ಸಿನಲ್ಲಿ ಮೊಟ್ಟ ಮೊದಲ ಬಾರಿಗೆ ವಿಚಿತ್ರ ಸಂತೋಷವನ್ನನುಭವಿಸಿದನು. ಆ ಸಂತೋಷದೊಂದಿಗೆ ತಾನೂ ತಜ್ಞರು ಕುಳಿತಿದ್ದ ಚಾಪೆಯ ಮೇಲೇ ಕುಳಿತನು. ಇಬ್ಬರೂ ಒಟ್ಟಿಗೆ ಊಟ ಮಾಡಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ತಜ್ಞರು, ಉಗ್ರವಾದ ಚಂಡಮಾರುತದ ನಡುವೆಯೂ ಬಹಳ ರಕ್ಷಣೆ ಹೊಂದಿದ ಸಂತೃಪ್ತಿಯನ್ನನುಭವಿಸಿದರು. ಆ ಗುಡಿಸಲು ಭೀಕರವಾದ ಈ ಚಂಡಮಾರುತದಿಂದ ಕೊಂಚವೂ ವಿಚಲಿತವಾಗದೆ ನಿಂತಿತ್ತು. ಆ ಕಾಡಿನ ತಗ್ಗಿನ ಚಿಕ್ಕ ಜಾಗದಲ್ಲಿ ಆ ಗುಡಿಸಲು ನಿರ್ಮಾಣವಾಗಿತ್ತು. ಒಂದು ಆಲದ ಮರದ ಕೆಳಗೆ ಆ ಗುಡಿಸಲಿತ್ತು. ಆಲದ ಮರದ ಕೊಂಬೆಗಳಿಂದ ಇಳಿ ಬಿದ್ದಿದ್ದ ಬಿಳಲುಗಳು ಸುತ್ತಲು ಇದ್ದು ಮರದ ಎಲೆಗಳು ಒತ್ತೊತ್ತಾಗಿದ್ದ ಕಾರಣ ಮಳೆಯ ಹನಿಗಳು ಸ್ವಲ್ಪವೂ ಕೆಳಗೆ ಬೀಳುತ್ತಿರಲಿಲ್ಲ. ಎಂತಹ ಧೈರ್ಯಶಾಲಿಗೂ ಭಯ ಹುಟ್ಟಿಸಿಬಿಡುವಂತೆ ಆ ಚಂಡಮಾರುತ ಗುಡುಗುಸಿಡಿಲಿನಿಂದ ಉಗ್ರಭಯಂಕರವಾಗಿತ್ತು. ಗುಡಿಸನಿಲಿಂದ ಹೊರಹೋಗುತ್ತಿದ್ದ ಹೊಗೆ ಮತ್ತು ಬೆಳಕು ಈ ಯಾವುದರ ಹಂಗಿಲ್ಲದೇ ನಿರಾತಂಕವಾಗಿ ತನ್ನಪಾಡಿಗೆ ತಾನು ಹೋಗುತ್ತಿತ್ತು.

ಗುರುವ ಮತ್ತು ಅವನ ಹೆಂಡತಿಯು ಹೊಂದಿದ್ದ ಶಾಂತಭಾವವನ್ನು ಕಂಡು ತಜ್ಞರಿಗೆ ಪರಮಾಶ್ಚರ್ಯವಾಯಿತು. ಅವರಿಬ್ಬರ ಈ ಶಾಂತ ಸ್ವಭಾವವು ಎಲ್ಲಾ ನೈಸರ್ಗಿಕ ಭಿನ್ನತೆಗಳನ್ನು ಮೀರಿದ್ದಾಗಿ ತಜ್ಞರಿಗೆ ಕಂಡಿತು. ಆ ದಂಪತಿಗಳ ಮಗುವಂತೂ ವಿಶ್ವದ ಎಲ್ಲಾ ರಹಸ್ಯಗಳನ್ನು ಅರಿತ ಜ್ಞಾನಿಯಂತೆ ನಿದ್ರಿಸುತ್ತಿತ್ತು. ಅವನ ಹೆಂಡತಿಯು ಗುಲಗಂಜಿಯಿಂದ ಮಗುವಿಗೆ ಸುಂದರವಾದ ಸರವೊಂದನ್ನು ಪೋಣಿಸುತ್ತಿದ್ದಳು. ಹಾಗೆ ಪೋಣಿಸುತ್ತಲೇ ತನ್ನ ಕಾಲಿನಿಂದ ತೊಟ್ಟಿಲನ್ನೂ ತೂಗುತ್ತಿದ್ದಳು. ತಂದೆಯು ಪ್ರೀತಿ ತುಂಬಿದ ಕಣ್ಣುಗಳಿಂದ ಮಗು ಮತ್ತು ತಾಯಿಯನ್ನು ಮತ್ತೆ ಮತ್ತೆ ನೋಡುತ್ತಿದ್ದನು. ಆ ಸಂತೋಷದಲ್ಲಿ ಅವರ ನಾಯಿಯೂ ಭಾಗಿಯೇ. ಅದು ಮನೆಯ ಒಂದು ಭಾಗದಲ್ಲಿ ಚಳಿಯೆಂದು ಹಾಕಿದ್ದ ಬೆಂಕಿಯ ಪಕ್ಕದಲ್ಲಿ ಮಲಗಿದ್ದ ಬೆಕ್ಕಿನ ಪಕ್ಕದಲ್ಲಿ ಮಲಗಿತ್ತು. ಹಾಗಾಗಿ ಅದು ತನ್ನ ಕಣ್ಣುಗಳನ್ನು ಅರೆಬರೆ ತೆರೆದು ತನ್ನವರನ್ನು ನೋಡುತ್ತಾ ನೆಮ್ಮದಿಯ ಉಸಿರಾಡುತ್ತಿತ್ತು.

ತಜ್ಞರು ಊಟ ಮುಗಿಸಿದ ಕೂಡಲೆ ಗುರುವನು ಅವರಿಗೆ ಹೊಗೆ ಸೇದುವ ಹುಕ್ಕಾ ಹಚ್ಚಲು ಉರಿಯುವ ಸಣ್ಣ ಬೆಂಕಿಕಡ್ಡಿ ನೀಡಿದನು. ಅದೇ ಹೊತ್ತಿಗೆ ತಾನು ತನ್ನ ಹುಕ್ಕಾವನ್ನೂ ಹೊತ್ತಿಸಿಕೊಂಡು ತನ್ನ ಮಡದಿಗೆ ಸನ್ನೆ ಮಾಡಿದನು. ಆಕೆ ಎರಡು ಪಾತ್ರೆಗಳಲ್ಲಿ ಎಳನೀರು ಮತ್ತು ರಾತ್ರಿ ಊಟದ ನಂತರ ಕುಡಿಯುವ ಮದ್ಯವನ್ನು ಮತ್ತು ನಿಂಬೆ ರಸ ಬೆರೆಸಿ ತಯಾರಿಸಿದ್ದ ಕಬ್ಬಿನ ಹಾಲನ್ನು ತಂದು ತಜ್ಞರ ಮುಂದೆ ಇರಿಸಿದಳು.



ಗುರುವ ಮತ್ತು ಅವನ ಹೆಂಡತಿಯು ಹೊಂದಿದ್ದ ಶಾಂತಭಾವವನ್ನು ಕಂಡು ತಜ್ಞರಿಗೆ ಪರಮಾಶ್ಚರ್ಯವಾಯಿತು. ಅವರಿಬ್ಬರ ಈ ಶಾಂತ ಸ್ವಭಾವವು ಎಲ್ಲಾ ನೈಸರ್ಗಿಕ ಭಿನ್ನತೆಗಳನ್ನು ಮೀರಿದ್ದಾಗಿ ತಜ್ಞರಿಗೆ ಕಂಡಿತು. ಆ ದಂಪತಿಗಳ ಮಗುವಂತೂ ವಿಶ್ವದ ಎಲ್ಲಾ ರಹಸ್ಯಗಳನ್ನು ಅರಿತ ಜ್ಞಾನಿಯಂತೆ ನಿದ್ರಿಸುತ್ತಿತ್ತು.

ತಜ್ಞರು ಮತ್ತು ಗುರುವ ಹುಕ್ಕಾ ಸೇದುತ್ತಾ ಮದ್ಯ ಮತ್ತಿತರ ಪಾನಿಯಗಳನ್ನು ಸೇವಿಸುತ್ತಿದ್ದರು. ತಜ್ಞರು ಗುರುವನನ್ನು ಉದ್ದೇಶಿಸಿ, "ನಾನು ಇದುವರೆಗೂ ಎಲ್ಲೂ ನೋಡದ, ಮಹತ್ವವಾದ ಸಂತೋಷದ ಬದುಕನ್ನು ಬದುಕುವವರಲ್ಲಿ, ನೀನೂ ಕೂಡಾ ಒಬ್ಬನೆಂದು ಅನಿಸುತ್ತಿದೆ" ಎಂದರು. ಮಾತು ಮುಂದುವರೆಸುತ್ತಾ "ನನಗನಿಸಿದ ಪ್ರಕಾರ ಶ್ರೇಷ್ಠ ಮಾನವರಲ್ಲಿ ನೀನು ಕೂಡಾ ಒಬ್ಬ. ನಿನ್ನ ಹತ್ತಿರ ಕೆಲವು ಪ್ರಶ್ನೆಗಳನ್ನು ಕೇಳಲು ಇಚ್ಛೆ ಪಡುತ್ತೇನೆ. ನೀನು ಅದಕ್ಕೆ ಅನುಮತಿ ನೀಡುವೆಯಾ?" ಎಂದು ಕೇಳಿ ಅದಕ್ಕೆ ಮಾದಿಗ ಉತ್ತರಿಸುವ ಮೊದಲೇ "ಇಂತಹ ಭಯಂಕರವಾದ ದಟ್ಟವಾದ ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳನ್ನೇ ಬೇರು ಸಹಿತ ಬೀಳಿಸುವ ಚಂಡಮಾರುತದ ಸಂದರ್ಭದಲ್ಲೂ ನೀನು ಇಷ್ಟು ಶಾಂತವಾಗಿ ಹೇಗೆ ಇರುತ್ತೀಯಾ?" ಒಂದೇ ಒಂದು ಮರ ಮಾತ್ರ ನಿನಗೆ ರಕ್ಷಣೆಯಾಗಿರುತ್ತದೆ. ಅದೂ ಸಹ ಕೂಡ ಸಿಡಿಲನ್ನು ಆಕರ್ಷಿಸುತ್ತವೆ. ಆದರೂ ಸಹ ನೀನು ಹೇಗೆ ಇಷ್ಟೊಂದು ಶಾಂತವಾಗಿರುವೆ"

ಅದಕ್ಕೆ ಗುರುವ "ಈ ಮರವು ನೀವು ಹೇಳಿದ ರೀತಿ ಸಿಡಿಲನ್ನು ಆಕರ್ಷಿಸುವುದಿಲ್ಲ. ಏಕೆಂದರೆ ಇದು ಆಲದ ಮರ"

"ಇದೇನಾಶ್ಚರ್ಯ? ಅಲರಿಯಂತೆ ಇದಕ್ಕೂ ಸಹ ಸಿಡಿಲನ್ನು ಹಿಮ್ಮೆಟ್ಟಿಸುವ ಶಕ್ತಿ ಇದೆಯೇ?"

"ತಮ್ಮ ಮಾತು ನನಗೆ ಅರ್ಥವಾಗುತ್ತಿಲ್ಲ ಸ್ವಾಮೀ. ಬ್ರಹ್ಮದೇವನು ಒಂದು ದಿನ ಈ ಮರದ ಕೆಳಗೆ ವಿಶ್ರಾಂತಿ ಪಡೆದ ಕಾರಣ, ಈ ಆಲದ ಮರದ ಮೇಲೆ ಸಿಡಿಲು ಬಡಿಯುವುದಿಲ್ಲವೆಂದು ನನ್ನ ಹೆಂಡತಿಯು ಹೇಳುತ್ತಾಳೆ" ಎಂದನು. "ಗಾಳಿಯು ಭಯಂಕರವಾಗಿ ಬೀಸುವ ಸಂದರ್ಭಗಳಲ್ಲಿ ಜನರು ಸುರಕ್ಷಿತವಾಗಿ ಇರುವುದಕ್ಕಾಗಿಯೇ ದಪ್ಪನಾದ ಎಲೆಗಳು ಮತ್ತು ಕೊಂಬೆಗಳಿಂದ ಇಳಿ ಬಿದ್ದಿರುವ ಬಿಳಿಲುಗಳನ್ನು ದೇವರು ಈ ಮರಕ್ಕೆ ನೀಡಿದ್ದಾನೆ. ಹಾಗಾಗಿಯೇ ಗಾಳಿ ಮಳೆ ಸಿಡಿಲು ಮುಂತಾದ ನೈಸರ್ಗಿಕ ವಿಕೋಪಗಳಿಂದ ಜನರಿಗೆ ತೊಂದರೆಯಾಗಬಾರದೆಂಬುದು ದೇವರ ಇಚ್ಛೆಯಾಗಿದೆ"

"ನಿನ್ನ ಉತ್ತರವು ಧರ್ಮದ ಆಧಾರದಲ್ಲಿದೆ. ದೇವರ ನಂಬಿಕೆಯು ನಿನಗೆ ಸಮಾಧಾನ ಮತ್ತು ಶಾಂತಿಯನ್ನು ತರುತ್ತದೆ. ಇಂತಹ ಶ್ರೇಷ್ಠ ಮನೋಭಾವ ಹೊಂದಿರುವ ನೀನು ಯಾವ ಧರ್ಮಕ್ಕೆ ಸೇರಿದ್ದೀಯಾ?" ಎಂಬ ಪ್ರಶ್ನೆ ತಜ್ಞರದು. ತಜ್ಞರು ಮುಂದುವರೆದು "ಏಕೆಂದರೆ ಭಾರತೀಯರಲ್ಲಿ ಒಬ್ಬನೂ ಕೂಡ, ನಿನ್ನ ಹತ್ತಿರ ಸಂಬಂಧವನ್ನು ಹೊಂದಲು ಇಷ್ಟಪಡದೆ ಇರುವುದರಿಂದ ಭಾರತದಲ್ಲಿರುವ ಯಾವುದೇ ಧರ್ಮಕ್ಕೆ ನೀನು ಸೇರಿದ್ದವನಲ್ಲ ಎಂದು ಭಾವಿಸುತ್ತೇನೆ. ನನ್ನ ಪ್ರಯಾಣದಲ್ಲಿ ನೋಡಿ, ಚರ್ಚಿಸಿ, ಅಧ್ಯಯನ ಮಾಡಲು ತೀರ್ಮಾನಿಸಿರುವ ಶ್ರೇಷ್ಠ ಸಮುದಾಯಗಳ ಪಟ್ಟಿಯಲ್ಲಿ ನಿಮ್ಮ ಹೊಲೆಮಾದಿಗನನ್ನು ನೋಡಲೇ ಇಲ್ಲ. ಭಾರತದ ಯಾವ ಪ್ರದೇಶದಲ್ಲಿ ನಿಮ್ಮ ದೇವಸ್ಥಾನವಿದೆ? ಎಂದು ಕೇಳಿದನು.

"ಸ್ವಾಮಿ, ನಮ್ಮ ದೇವಾಲಯವು ಎಲ್ಲಾ ಕಡೆ ಇದೆ. ಪ್ರಕೃತಿಯೆ ನಮ್ಮ ಆಲಯ; ನನ್ನ ದೇವಾಲಯವನ್ನು ಸೃಷ್ಟಿಸಿದವನನ್ನು ಸೂರ್ಯೋದಯಕ್ಕೆ ಮೊದಲು ಹಾಗೂ ಸೂರ್ಯಾಸ್ತದ ವೇಳೆಯಲ್ಲೂ ವಂದಿಸುತ್ತೇನೆ. ಕಷ್ಟಗಳಿಂದಲೇ ಬದುಕನ್ನು ಕಳೆಯಬೇಕು ಎಂಬ ನಿರ್ಬಂಧಕ್ಕೊಳಗಾಗಿ ನನಗಿಂತಲೂ ಹೆಚ್ಚಿನ ಕಷ್ಟವನ್ನು ಅನುಭವಿಸುವವರಿಗೆ ಸಹಕಾರವನ್ನು ನೀಡಲು ನಾನು ಯಾವಾಗಲೂ ಸಿದ್ಧನಾಗಿರುತ್ತೇನೆ. ನನ್ನ ಹೆಂಡತಿ, ಮಗು ಹಾಗೂ ನನ್ನ ನಾಯಿ, ಬೆಕ್ಕು ಎಲ್ಲರನ್ನೂ ಸಂತೋಷವಾಗಿಡಲು ನಾನು ಪ್ರಯತ್ನಿಸುತ್ತೇನೆ. ಒಂದು ಸುದಿನ ಮುಂಜಾನೆಯ ಸಿಹಿನಿದ್ರೆಯಂತೆ, ನಾನು ನನ್ನ ಮರಣಕ್ಕಾಗಿ ಕಾಯುತ್ತಾ ಇದ್ದೇನೆ"

"ಅಯ್ಯಾ ಮಾದಿಗನೇ, ಇಂತಹ ಜೀವನ ತತ್ವಗಳನ್ನು ಎಲ್ಲಿಂದ ಕಲಿತೆ?

"ನಾನು ಇವುಗಳನ್ನು ಪ್ರಕೃತಿಯಲ್ಲಿ ಕಲಿತೆ. ಪ್ರಕೃತಿಯನ್ನು ಬಿಟ್ಟರೆ ನನಗೆ ಬೇರೆ ಯಾವುದೂ ಗೊತ್ತಿಲ್ಲ ಸ್ವಾಮಿ"

ಬ್ರಾಹ್ಮಣ ಗುರುಗಳ ಹತ್ತಿರ ಕೇಳಿದ ಮೂರು ಪ್ರಶ್ನೆಗಳ ಬಗ್ಗೆಯೇ ಯಾವಾಗಲು ಯೋಚಿಸುತ್ತಿದ್ದ ತಜ್ಞರು, ಗುರುವನು ನೀಡಿದ ಉತ್ತರವನ್ನು ಕೇಳಿ ಪರಮಾನಂದದಲ್ಲಿ ಮುಳುಗಿದರು. "ಪ್ರತಿಯೊಬ್ಬನು ಸತ್ಯವನ್ನು ಅಧ್ಯಯನ ಮಾಡಬೇಕಾದ ಕರ್ತವ್ಯ ಹೊಂದಿದ್ದಾನೆ ಎಂಬುದು ನಿನ್ನ ಅಭಿಪ್ರಾಯವಾದರೆ ಆ ಸತ್ಯವನ್ನು ಕಂಡುಕೊಳ್ಳಲು ಯಾವ ವಿಧಾನವನ್ನು ಕೈಗೊಳ್ಳಬೇಕೆಂದು ನನಗೆ ನೀವು ಹೇಳಬೇಕು" ಎಂದರು.

"ಆಹಾ! ಪ್ರಕೃತಿಯು ಒಂದು ಮಹತ್ವದ ಗ್ರಂಥವೆ. ಅದನ್ನು ನಿನಗೆ ಕಲಿಸಿದವರಾರು"

'ನಾನು ನನ್ನ ಬದುಕಿನಲ್ಲಿ ಅನುಭವಿಸಿದ ಕಷ್ಟಗಳೇ ಅದನ್ನು ಕಲಿಸಿದವು. ನನ್ನ ಸ್ವಂತ ನಾಡಿನಲ್ಲೆ, ಹೀನ ಎಂದು ಪರಿಗಣಿಸಲ್ಪಡುವ ಸಮುದಾಯಕ್ಕೆ ಸೇರಿದವನಾಗಿ, ಭಾರತೀಯನಾಗಿರಲು ಸಾಧ್ಯವಿಲ್ಲದವನಾಗಿ ಬದುಕಿದ ಕಾರಣ ನಾನು ನನ್ನನ್ನು ಮನುಷ್ಯನನ್ನಾಗಿ ಬದಲಾಯಿಸಿಕೊಂಡಿದ್ದೇನೆ. ಸಮುದಾಯದಿಂದ ತಿರಸ್ಕರಿಸಲ್ಪಟ್ಟಿದ್ದರಿಂದ ಕಾರಣ ನಾನು ನನ್ನ ರಕ್ಷಣೆಯನ್ನು ನಿಸರ್ಗದಲ್ಲಿ ಕಂಡುಕೊಂಡೆ"

"ಒಬ್ಬಂಟಿಯಾಗಿ ಬದುಕಿರುವ ಈ ಪರಿಸರದಲ್ಲಿ ಓದಲಿಕ್ಕೆಂದು ನೀನು ನಿನ್ನ ಬಳಿ ಯಾವುದಾದರು ಪುಸ್ತಕವನ್ನು ಇಟ್ಟುಕೊಂಡಿದ್ದೀಯಾ?"

"ನನ್ನ ಹತ್ತಿರ ಅಂತಹ ಪುಸ್ತಕವು ಒಂದೂ ಇಲ್ಲ. ನನಗೆ ಓದಲಿಕ್ಕಾಗಲೀ ಬರೆಯಲಿಕ್ಕಾಗಲೀ ಬರುವುದಿಲ್ಲ ಸ್ವಾಮಿ, ನಾನು ಅನಕ್ಷರಸ್ಥನಾಗಿದ್ದರೂ ಸಹ ನನ್ನ ಅಭಿಪ್ರಾಯವನ್ನು ಹೇಳಲು ಅವಕಾಶ ಕೊಡುವುದರಿಂದ ಹೇಳುತ್ತೇನೆ. ಪ್ರತಿಯೊಬ್ಬ ವ್ಯಕ್ತಿಯೂ ಆತ್ಮಸಂತೋಷಕ್ಕಾಗಿ ಸತ್ಯವನ್ನು ಅಧ್ಯಯನ ಮಾಡುವ ಕರ್ತವ್ಯವನ್ನು ಹೊಂದಿರುತ್ತಾನೆ ಎಂಬುದು ನನ್ನ ತಿಳಿವಳಿಕೆ. ಹಾಗಿಲ್ಲವಾದರೆ ಅವನನ್ನು ಬೆಳೆಸಿದವರ ಉದ್ದೇಶ ಮತ್ತು ಅವರು ತೋರಿಸಿದ ಪ್ರೀತಿಗೆ ತಕ್ಕಂತೆ ಅವನು ದುರಾಸೆ ತುಂಬಿಕೊಂಡು ನರಭಕ್ಷಕನಾಗಿ ಬದಲಾಗುತ್ತಾನೆ"

ಬ್ರಾಹ್ಮಣ ಗುರುಗಳ ಹತ್ತಿರ ಕೇಳಿದ ಮೂರು ಪ್ರಶ್ನೆಗಳ ಬಗ್ಗೆಯೇ ಯಾವಾಗಲು ಯೋಚಿಸುತ್ತಿದ್ದ ತಜ್ಞರು, ಗುರುವನು ನೀಡಿದ ಉತ್ತರವನ್ನು ಕೇಳಿ ಪರಮಾನಂದದಲ್ಲಿ ಮುಳುಗಿದರು. "ಪ್ರತಿಯೊಬ್ಬನು ಸತ್ಯವನ್ನು ಅಧ್ಯಯನ ಮಾಡಬೇಕಾದ ಕರ್ತವ್ಯ ಹೊಂದಿದ್ದಾನೆ ಎಂಬುದು ನಿನ್ನ ಅಭಿಪ್ರಾಯವಾದರೆ ಆ ಸತ್ಯವನ್ನು ಕಂಡುಕೊಳ್ಳಲು ಯಾವ ವಿಧಾನವನ್ನು ಕೈಗೊಳ್ಳಬೇಕೆಂದು ನನಗೆ ನೀವು ಹೇಳಬೇಕು" ಎಂದರು.

"ಸಹಜವಾದ ಮನಸ್ಸಿನಿಂದಲೇ ಪ್ರತಿಯೊಬ್ಬರೂ ಸತ್ಯವನ್ನು ಅರಿಯಬಹುದು. ಇಂದ್ರಿಯಗಳು ಮತ್ತು ಜ್ಞಾನದ ಪ್ರಭಾವದಿಂದ ಸತ್ಯವನ್ನು ಕಂಡರಿಯಲು ಪ್ರಯತ್ನಿಸಿದರೆ ಅದು ತಪ್ಪಾಗುತ್ತದೆ. ಆದರೆ ಸಹಜವಾದ ಮನಸ್ಸು ತಾನು ಮೋಸಕ್ಕೆ ಒಳಗಾಗುವ ಸಂದರ್ಭವಾದರೂ ಬೇರೆಯವರನ್ನು ಯಾಮಾರಿಸುವುದಿಲ್ಲ"

"ನಿನ್ನ ಉತ್ತರವು ಎಷ್ಟೊಂದು ಮಹತ್ವದ್ದು. ತನ್ನ ಮನಸ್ಸಿನಿಂದಲೆ ಸತ್ಯವನ್ನು ಹುಡುಕಲು ಪ್ರಾರಂಭಿಸಬೇಕು. ಬುದ್ಧಿಯಿಂದ ಸತ್ಯವನ್ನು ಹುಡುಕಬಾರದು. ಎಲ್ಲಾ ಮಾನವರು ಒಂದೇ ರೀತಿಯಲ್ಲಿಯೆ ಇಂದ್ರಿಯ ಜ್ಞಾನವನ್ನು ಹೊಂದಿದ್ದಾರೆ. ಆದರೆ ಪ್ರತಿಯೊಬ್ಬರು ಬೇರೆ ಬೇರೆ ವಿಧಾನದಲ್ಲಿ ಅಧ್ಯಯನ ಮಾಡುತ್ತಾರೆ. ಏಕೆಂದರೆ ಸತ್ಯದ ಉದ್ದೇಶಗಳು ಪ್ರಕೃತಿಯಲ್ಲಿ ಅಡಗಿವೆ. ಅವುಗಳಲ್ಲಿನ ಉಪಯೋಗಗಳು ಮಾನವನ ಹಿತವನ್ನು ಒಳಗೊಂಡಿವೆ. ಆದ್ದರಿಂದ ನೈಜವಾದ ಮನಸ್ಸಿನಿಂದ ಸತ್ಯವನ್ನು ಹುಡುಕಬೇಕು. ಏಕೆಂದರೆ ನೈಜ ಮನಸ್ಸು ತಾನು ಕೇಳದೆ ಇರುವುದನ್ನು ಕೇಳಿದ ಹಾಗೆ ತಾನು ನಂಬದೇ ಇರುವುದನ್ನು ನಂಬುವಂತೆ ನಾಟಕ ಮಾಡುವುದಿಲ್ಲ. ಮತ್ತು ಅದು ತಾನು ಮೋಸಗೊಳ್ಳಲು ಮತ್ತೆ ಬೇರೆಯವರನ್ನು ಮೋಸಗೊಳಿಸಲು ಸಹಕರಿಸುವುದಿಲ್ಲ. ಇಂತಹ ಗುಣವನ್ನು ಹೊಂದಿರುವ ಸ್ವಾಭಾವಿಕವಾದ ಮನಸ್ಸು ಸ್ವಾರ್ಥ ಮತ್ತು ಅಹಂಕಾರದಿಂದ ತುಂಬಿರುವ ಬಹುಪಾಲು ಜನರ ಮನಸ್ಸಿನಂತೆ ದುರ್ಬಲವಾಗಿರದೆ ಸತ್ಯವನ್ನು ಅಧ್ಯಯನ ಮಾಡಲು ಅದನ್ನು ರಕ್ಷಿಸಿ ಕಾಪಾಡಲಿಕ್ಕೆ ಅಗತ್ಯವಿರುವ ಶಕ್ತಿಯನ್ನು ಹೊಂದಿರುತ್ತದೆ"

ಮಾದಿಗನು, "ನೀವು ನನ್ನ ಅಭಿಪ್ರಾಯವನ್ನು ನನಗಿಂತ ತುಂಬ ಅದ್ಭುತವಾಗಿ ವಿವರಿಸಿ ಹೇಳಿದ್ದೀರಿ, ಸತ್ಯವೆಂಬುದು ಆಕಾಶದಿಂದ ಬೀಳುವ



With Best Compliments From

SVE

Sidhi Vinayaka Fab Engineering Pvt. Ltd.

C.S. SRIDHARA
Director -Finance

No.206, 11th Main, 3rd Phase,
Peenya Industrial Area, Bangalore-560058
Unit 1: Tel: 91-80-41171891
TeleFax: 91-80-28390891
Unit 2: Tel: 91-80-41171891
Unit 3: TeleFax: 91-80-28390891
Mob: 09845583969
Email:sve@airtelmail.in
www.sidhivinayakafab.com

ತಜ್ಞರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಗುರುವನು· "ನಮ್ಮ ಸಂತೋಷಕ್ಕೆ ಹಿಂದಿನ ಕಾಲದ ಚರಿತ್ರೆ ಅಗತ್ಯವಿಲ್ಲ, ಈಗಿರುವ ಚರಿತ್ರೆಯೇ ಹಿಂದೆ ಇದ್ದ ಚರಿತ್ರೆಯೂ, ಮುಂದೆ ಬರುವ ಚರಿತ್ರೆಯೂ ಆಗುತ್ತದೆ" ಎಂದನು.

ಇಬ್ಬನಿಯಂತೆ; ಅದನ್ನು ಶುದ್ಧವಾಗಿ ರಕ್ಷಿಸಿಡಬೇಕೆಂದರೆ ಶುದ್ಧವಾದ ಒಂದು ಪಾತ್ರೆಯಲ್ಲಿಯೇ ಹಿಡಿದಿಡಬೇಕು" ಎಂದನು.

"ಸತ್ಯವನ್ನು ಪೂಜಿಸುವವನೆ, ನೀನು ಹೇಳಿದ್ದು ಸರಿ. ಆದರೆ ಇದಕ್ಕಿಂತಲೂ ಕಷ್ಟವಾದದನ್ನು ಇನ್ನೂ ಕಂಡುಹಿಡಿಯಬೇಕಾಗಿದೆ. ಅದೇನೆಂದರೆ ಸತ್ಯವನ್ನು ಎಲ್ಲಿ ಹುಡುಕಬೇಕು? ನೈಜವಾದ ಮನಸ್ಸು ನಮ್ಮನ್ನು ಮಾತ್ರ ಒಳಗೊಂಡಿರುತ್ತದೆ. ಆದರೆ ಸತ್ಯವೆಂಬುದು ಇತರರನ್ನೂ ಒಳಗೊಂಡಿರುತ್ತದೆ. ನಮ್ಮ ಸುತ್ತಲೂ ಇರುವವರಲ್ಲಿ ಬಹುಪಾಲು ಜನರು ಗೊಂದಲಮಯ ಉದ್ದೇಶ ಮತ್ತು ಸ್ವಾರ್ಥಲಾಲಸೆಗಳಿಂದ ತಮ್ಮ ವ್ಯಕ್ತಿತ್ವವನ್ನು ಹಾಳು ಮಾಡಿಕೊಂಡಿರುವುದರಿಂದ ಸತ್ಯವನ್ನು ಎಲ್ಲಿ ತಾನೆ ಕಾಣಲು ಸಾಧ್ಯ? ನಾನು ಹಲವಾರು ದೇಶ ದೇವರನ್ನು ನೋಡಿದ್ದೇನೆ. ಎಲ್ಲ ದೇಶಗಳಲ್ಲಿರುವ ಗ್ರಂಥಾಲಯಗಳಲ್ಲಿ ಅತ್ಯಂತ ಆಳವಾಗಿ ಮತ್ತು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದೇನೆ. ಆ ದೇಶಗಳ ವಿದ್ವಾಂಸರೊಂದಿಗೆ ಚರ್ಚಿಸಿದ್ದೇನೆ. ಆದರೆ ಎಲ್ಲಾ ಕಡೆ ವಿಭಿನ್ನವಾದ ಉದ್ದೇಶಗಳು, ಸಂಶಯಗಳು ಮತ್ತು ಜನರು ತಾವು ಆಡುವ ಮಾತಿಗೆ ಸಾವಿರಪಟ್ಟು ವಿರುದ್ಧದ ತತ್ವಗಳು ಮತ್ತು ಆಚರಣೆಗಳಲ್ಲಿ ಬದುಕುವುದನ್ನು ಕಂಡಿದ್ದೇನೆ. ಮಾನವನ ಶ್ರೇಷ್ಠ ಜ್ಞಾನವನ್ನು ಆರಾಧಿಸುವ ಹೆಸರಾಂತ ದೇಶಗಳಲ್ಲಿಯೂ ಸಹ ಸತ್ಯವನ್ನು ಕಾಣಲು ಕಷ್ಟವಾದರೆ, ಆ ಸತ್ಯವನ್ನು ಇನ್ನೆಲ್ಲಿ ಹುಡುಕುವುದು? ಈ ದುರ್ಬುದ್ಧಿ, ದುರಾಲೋಚನೆ ತುಂಬಿರುವ ಮನುಷ್ಯರಲ್ಲಿ?" ಎಂದು ತಜ್ಞರು ತಮ್ಮ ಸುದೀರ್ಘ ವಿವರಣೆಯ ಪ್ರಶ್ನೆಯನ್ನು ಮುಂದಿಟ್ಟರು.

ಈ ವಿವರಣೆಯನ್ನು ಕೇಳಿದ ಗುರುವನು, "ಜನರಿಂದ ಮಾತ್ರ ಒಬ್ಬನಿಗೆ ಸತ್ಯದ ಅರಿವಾಗುತ್ತದೆ ಎನ್ನುವುದಾದರೆ ಆ ಸತ್ಯವು ಸಂಶಯಾಸ್ಪದವಾದುದು. ಸತ್ಯವನ್ನು ಮಾನಷ್ಯರ ನಡುವೆ ಹುಡುಕಲೇಬಾರದು; ಅದನ್ನು ಪ್ರಕೃತಿಯಲ್ಲಿ ಮಾತ್ರ ಹುಡುಕಬೇಕು. ಪ್ರಪಂಚದಲ್ಲಿನ ಪ್ರತಿಯೊಂದಕ್ಕೂ ಮೂಲ ಪ್ರಕೃತಿ. ಪ್ರಕೃತಿಯ ಮಾತು ಎಂದಿಗೂ ಮನುಷ್ಯನ ಮಾತು ಹಾಗೂ ಅವನ ಗ್ರಂಥಗಳಲ್ಲಿನ ವಿಚಾರಗಳಂತೆ ಗೊಂದಲಪೂರಿತವಾಗಿಯೂ ಮತ್ತು ಇಬ್ಬಂದಿತನದಿಂದಲೂ ಕೂಡಿರುವುದಿಲ್ಲ. ಮಾನವರು ಗ್ರಂಥಗಳನ್ನು ರಚಿಸುತ್ತಾರೆ. ಆದರೆ ಪ್ರಕೃತಿ ಸಮಸ್ತ ಜೀವಚರಗಳನ್ನೂ, ಎಲ್ಲಾ ವಸ್ತುಗಳನ್ನೂ ಸೃಷ್ಟಿಸುತ್ತದೆ. ಗ್ರಂಥ ರಚನೆ ಮಾನವ ಕಲೆ. ಆದರೆ ಪ್ರಕೃತಿ ದೇವರು ರಚಿಸಿದ ಕಲಾಕೃತಿ" ಎಂದು ವಿವರಿಸಿದನು.

"ನೀವು ವಿವರಿಸಿರುವುದೆಲ್ಲವೂ ಸಂಪೂರ್ಣವಾದ ಸತ್ಯವೇ. ನೈಜವಾದ ಸತ್ಯಗಳು ಇರುವುದು ಪ್ರಕೃತಿಯಲ್ಲಿಯೆ. ಆದರೆ ಚಾರಿತ್ರಿಕ ಸತ್ಯಗಳ ಮೂಲವು ಪುಸ್ತಕಗಳಲ್ಲಿ ಇಲ್ಲವಾದರೆ ಆ ಮೂಲವು ಬೇರೆಲ್ಲಿದೆ? ಎರಡು ಸಾವಿರ ವರ್ಷಗಳ ಹಿಂದೆ ನಡೆದ ಒಂದು ಘಟನೆಯ ಸತ್ಯಾಸತ್ಯತೆಯನ್ನು ಈಗಿನ ಸಂದರ್ಭದಲ್ಲಿ ನಾವು ಹೇಗೆ ಸ್ಪಷ್ಟಪಡಿಸಿಕೊಳ್ಳಬೇಕು? ಆ ಘಟನೆಗಳನ್ನು ನಮಗೆ ತಿಳಿಯಪಡಿಸಬೇಕೆಂದು ಅವುಗಳನ್ನು ದಾಖಲಿಸಿರುವವರು ಸ್ಪಷ್ಟವಾದ ಧ್ಯೇಯ ಮತ್ತು ಉದ್ದೇಶಗಳನ್ನು ಹೊಂದಿದವರಾಗಿದ್ದರೇ? ಹೃದಯವು ನೈಜವಾಗಿತ್ತೇ? ಹೌದಾದರೆ ಘಟನೆಗಳನ್ನು ದಾಖಲಿಸಿದ ಪುಸ್ತಕಗಳಿಗೆ ನಂತರ ಬಂದವರು ಬರೆಯುವ ವಿವರಣೆಗಳು ಮತ್ತು ಅನುವಾದ ಮಾಡುವವರು, ಮುದ್ರಿಸುವವರು, ಇವರೆಲ್ಲರೂ ಕೂಡ ಮುಖ್ಯವಲ್ಲವೇ? ಇವರುಗಳು ಸತ್ಯವನ್ನು ಸ್ವಲ್ಪವಾದರೂ ತಿರುಚಿರುವುದಿಲ್ಲವೇ? ಸ್ನೇಹಿತನೆ ನೀನು ಪದೇ ಪದೇ ಒತ್ತಿ ಹೇಳುತ್ತಿರುವಂತೆ ಗ್ರಂಥಗಳು ಮಾನವ ನಿರ್ಮಿತವಾದ ಕಲಾಕೃತಿಗಳೇ ನಿಜ. ಹಾಗಾದರೆ ನಾವು ಚಾರಿತ್ರಿಕ ಸತ್ಯವನ್ನು ನಿರಾಕರಿಸಬೇಕಾಗುತ್ತದೆ. ಏಕೆಂದರೆ ಅದು ತಪ್ಪು ಮಾಡುವ ಮನುಷ್ಯರಿಂದಲೇ ನಮಗೆ ಲಭ್ಯವಾಗಿವೆ" ಎಂದು ತಜ್ಞರು ಹೇಳಿದರು.

ತಜ್ಞರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಗುರುವನು "ನಮ್ಮ ಸಂತೋಷಕ್ಕೆ ಹಿಂದಿನ ಕಾಲದ ಚರಿತ್ರೆ ಅಗತ್ಯವಿಲ್ಲ, ಈಗಿರುವ ಚರಿತ್ರೆಯೇ ಹಿಂದೆ ಇದ್ದ ಚರಿತ್ರೆಯೂ, ಮುಂದೆ ಬರುವ ಚರಿತ್ರೆಯೂ ಆಗುತ್ತದೆ" ಎಂದನು.

"ಸೊಗಸಾಗಿ ಹೇಳಿದಿರಿ. ಒಂದು ಸಮುದಾಯದ ಸಂತೋಷಕ್ಕೆ ಒಳ್ಳೆಯ ಮನೋಭಾವ ಮತ್ತು ಮೌಲ್ಯಗಳನ್ನು ಸ್ವೀಕರಿಸುವ ಸತ್ಯಗಳು ಅಗತ್ಯವೆಂಬುದನ್ನು ನೀವು ಒಪ್ಪಿಕೊಳ್ಳುತ್ತೀರಿ. ಪ್ರಕೃತಿಯಲ್ಲಿ ನಾವು ಅದನ್ನು ಕಂಡುಕೊಳ್ಳುವುದು ಹೇಗೆ? ಪ್ರಾಣಿಗಳು ತಮ್ಮೊಳಗೆಯೆ ಕಚ್ಚಾಡುತ್ತವೆ. ಒಂದನ್ನೊಂದು ಕೊಂದು ತಿನ್ನುತ್ತವೆ. ಪ್ರಕೃತಿಯಲ್ಲಿ ಪರಸ್ಪರ ವೈರುಧ್ಯದ ಅಂಶಗಳು ಆಶ್ಚರ್ಯಕರವಾಗಿ ಒಟ್ಟಿಗೇ ಸಾಗುತ್ತವೆ. ಮನುಷ್ಯನೂ ಹೀಗೇ ನಡೆಯುತ್ತಾನೆಯೇ?"

"ಅದು ಹಾಗಲ್ಲ. ಪ್ರತಿಯೊಬ್ಬನೂ ಒಳ್ಳೆಯ ಮೌಲ್ಯಗಳನ್ನು ತನ್ನ ಮನಸ್ಸಿನಲ್ಲಿಯೇ ಕಾಣುತ್ತಾನೆ: ಇತರರು ನಿನಗೆ ಏನು ಮಾಡಬಾರದೆಂದು ನೀನು ಇಚ್ಛಿಸುತ್ತೀಯೋ ಅದನ್ನು ನೀನೂ ಇತರರಿಗೆ ಮಾಡುವಂತಿಲ್ಲ ಎಂಬ ತತ್ವವನ್ನು ಪ್ರಕೃತಿ ಅಲ್ಲಿ ತುಂಬಿಟ್ಟಿದೆ"

"ಅದು ನಿಜ. ನಿಸರ್ಗವು ಸಮಾಜದ ಹಿತವನ್ನು ನಮ್ಮ ಹಿತದೊಂದಿಗೆ ಸಂಗಮಗೊಳಿಸಿದೆ. ಆದುದರಿಂದ ನಮ್ಮ ಹಿತವನ್ನು ಪಡೆಯಲು ಸರಿಯಾದ ದಾರಿಯನ್ನು ನಾವು ಕಂಡುಕೊಂಡರೆ ಅದುವೆ ಸಮಾಜದ ಹಿತಕ್ಕೆ ಸಹಕರಿಸಿದಂತಾಗುತ್ತದೆ. ಆದರೆ ಜನರನ್ನು ಹಲವು ಗುಂಪುಗಳಾಗಿ ವಿಭಿನ್ನ ರೀತಿಯಲ್ಲಿ ಬದುಕುವಂತೆ ಮಾಡಿರುವ ಲೆಕ್ಕವಿಲ್ಲದಷ್ಟು ಸಂಪ್ರದಾಯಗಳು ಮತ್ತು ಉದ್ದೇಶಗಳು ಆಚರಣೆಯಲ್ಲಿವೆಯಲ್ಲಾ? ಇವುಗಳ ಮೂಲಕ ಧಾರ್ಮಿಕ ಸತ್ಯಗಳು ಹೇಗೆ ಸಿಗುತ್ತವೆ? ತಜ್ಞರ ಮತ್ತೊಂದು ಪ್ರಶ್ನೆ.

"ಅವುಗಳು ಪ್ರಕೃತಿಯಲ್ಲಿಯೇ ದೊರೆಯುತ್ತವೆ. ನೈಜವಾದ ಮನಸ್ಸಿನಿಂದ ಪ್ರಕೃತಿಯನ್ನು ವಿಶ್ಲೇಷಿಸಿದರೆ ಅದರಲ್ಲಿ ದೇವರನ್ನು, ಕಾಣಲು ಸಾಧ್ಯ. ತನ್ನ ಪರಾಕ್ರಮದಲ್ಲಿ, ಜ್ಞಾನದಲ್ಲಿ ಮತ್ತು ಕರುಣೆಯಲ್ಲಿ ದೇವರನ್ನು ಕಾಣಲು ಸಾಧ್ಯ. ಆದರೆ ನಾವು ಶಕ್ತಿಯಿಲ್ಲದವರಾಗಿರುವುದರಿಂದ ಹಾಗು ಅಮಾಯಕರಾಗಿರುವುದರಿಂದ ಹೋರಾಟವಿಲ್ಲದೆ ಆ ದೇವನನ್ನು ದಿನವಿಡೀ ಪ್ರಾರ್ಥಿಸುವವರಾಗಿಯೂ, ಪ್ರೀತಿಯನ್ನು ಕಾಣಿಕೆಯಾಗಿ ನೀಡುವ ಸಾಮರ್ಥ್ಯವಿಲ್ಲದವರಾಗಿಯೂ ಬಿಡುತ್ತೇವೆ." ಉತ್ತರಿಸಿದ ಗುರುವ.

"ಸ್ನೇಹಿತನೆ. ಇನ್ನು ನಿಮ್ಮ ಹತ್ತಿರ ಒಂದೇ ಒಂದು ಪ್ರಶ್ನೆಯನ್ನು ಕೇಳಲು ಇಷ್ಟಪಡುತ್ತೇನೆ. ನಿನ್ನ ಮಾತು ಕೇಳಿದರೆ ಜನರಿಗೆ ಸತ್ಯವು ಬಹಳ ಅಗತ್ಯ ಎಂಬುದು ನಿಜವಾದರೂ, ಅದೇ ಜನರು ಕೆಟ್ಟ ದಾರಿಯಲ್ಲಿಯೇ ಇರುತ್ತಾರೆ ಎಂಬುದು ಸಹ ಗೊತ್ತಾಗುತ್ತದೆ. ಸತ್ಯವನ್ನು ಮಾತನಾಡುವವರಿಗೆ ಇಂತಹ ಜನರು ಕಷ್ಟಗಳನ್ನು ಕೊಡುವ ಕಾರಣ ಜನರಿಗೆ ಸತ್ಯವನ್ನು ಕಲ್ಪಿಸಲು ಯಾವ ಜ್ಞಾನಿಯಾದವರು ಪ್ರಯತ್ನಿಸುತ್ತಾರೆ?"

"ಜನರಿಗೆ ವಾಸ್ತವವನ್ನು ತಿಳಿಸಲು ಮುಂದೆ ಬರುವ ಜ್ಞಾನಿಗಳನ್ನು ಯಾರು ತೊಂದರೆಗೆ ಒಳಪಡಿಸುತ್ತಾರೋ, ಅಂತವರ ಹೆಸರೇ "ಕಷ್ಟ".

"ಪ್ರಕೃತಿಯ ಮಾನವನೆ, ಈ ಬಾರಿ ನೀನು ತಪ್ಪು ಹೇಳುತ್ತಿದ್ದೀಯಾ ಎಂದು ಭಾವಿಸುತ್ತೇನೆ. ಏಕೆಂದರೆ ಕಷ್ಟವೆಂಬುದು ಮನುಷ್ಯರನ್ನು ಮೂಢ ನಂಬಿಕೆಯಲ್ಲಿ ಮುಳುಗಿಸುತ್ತದೆ. ಮನಸ್ಸು ಮತ್ತು ಬುದ್ಧಿ ಎರಡನ್ನು ಅದು ಕೆಡಿಸುತ್ತದೆ. ಜನರು ಎಷ್ಟರ ಮಟ್ಟಿಗೆ ಹೆಚ್ಚಾಗಿ ಕಷ್ಟ ಪಡುತ್ತಾರೋ ಅಷ್ಟರ ಮಟ್ಟಿಗೆ ಅವರು ಹೀನರಾಗುತ್ತಾರೆ. ಏನನ್ನಾದರೂ ಕಣ್ಣುಮುಚ್ಚಿಕೊಂಡು ನಂಬುವವರಾಗಿ ಮತ್ತು ಯಾರಿಗಾದರೂ ಸರಿ ಗುಲಾಮರಂತೆ ಇರುವವರಾಗಿರುತ್ತಾರೆ".

"ಅವರುಗಳು ಸಾಕಷ್ಟು ಕಷ್ಟಗಳನ್ನು ಅನುಭವಿಸಿರುವುದಿಲ್ಲ. ಕಷ್ಟವೆಂಬುದು ಉಷ್ಣ ಹೆಚ್ಚಾಗಿರುವ ಲಾಹೋರ್‌ನ ಗಡಿ ಭಾಗದಲ್ಲಿರುವ ಕರಿಬಣ್ಣದ "ಪೆಂಬರ್" ಬೆಟ್ಟದಂತಹದ್ದು. ಹೇಗೆಂದರೆ ಬೆಟ್ಟದ ಮೇಲೆ ಹತ್ತುವಾಗ ಬಂಜರಾದ ಕಲ್ಲುಬಂಡೆಗಳನ್ನು ಮಾತ್ರ ಕಾಣಲು ಸಾಧ್ಯ. ಆದರೆ ಆ ಬೆಟ್ಟದ ತುದಿಯನ್ನು ಸೇರಿದರೆ ತಲೆಯ ಮೇಲೆ ಸುಂದರವಾದ ಆಕಾಶವನ್ನು ಕೆಳಗೆ ಸುಂದರವಾದ ಕಾಶ್ಮೀರವನ್ನು ಕಾಣುತ್ತೀರಿ" ಗುರುವ ವಿವರಿಸಿದ.

"ಅದ್ಭುತವಾದ ಉದಾಹಣೆ! ಪ್ರತಿಯೊಬ್ಬರೂ ತಮಗೆಂದೇ ಇರುವ ಬೆಟ್ಟದ ಮೇಲೆ ಹತ್ತಬೇಕಾಗಿರುತ್ತದೆ. ಒಂಟಿಯಾಗಿರುವ ಶ್ರೇಷ್ಠ ಬುದ್ಧಿವಂತ ಸ್ನೇಹಿತನೆ, ನೀನು ಹತ್ತುತ್ತಿರುವ ಬೆಟ್ಟ.



ಆಧಾರ

ಬೆಟ್ಟದಿಂದ
ಹೆಬ್ಬೆಟ್ಟು ಗಾತ್ರದ
ಕಲ್ಲ ತಂದು
ಕೊರಳಿಗೆ ಕಟ್ಟಿ
ಲಿಂಗ ಎನ್ನುವರು
ಗಿಡದಿಂದ
ಓಡಿ ಹತ್ತಿಯ ತಂದು
ಹೊಸೆದು
ಒಡಲಿಗೆ ಹಾಕಿ
ಜನಿವಾರ ಎನ್ನುವರು
ಬೆಟ್ಟ ಎಷ್ಟು ಲಿಂಗಗಳ
ಗಿಡ ಎಷ್ಟು ಜನಿವಾರಗಳ
ತಮ್ಮೊಳಗೆ ಇರಿಸಿಕೊಂಡಿವೆ
ನೋಡ



ಜರಗನಹಳ್ಳಿ ಶಿವಶಂಕರ್

ವಿಪರೀತ ಕಲ್ಲುಮುಳ್ಳುಗಳಿಂದ ತುಂಬಿರಬೇಕೆಂದು ಅನ್ನಿಸುತ್ತದೆ. ಏಕೆಂದರೆ ನನಗೆ ಗೊತ್ತಿರುವ ಯಾರೊಬ್ಬರಿಗಿಂತಲೂ ನೀನು ಶ್ರೇಷ್ಠನಾಗಿದ್ದೀಯ. ನೀನು ಬಹಳ ಕಷ್ಟಗಳನ್ನು ಅನುಭವಿಸಿರುವಂತೆ ಕಾಣುತ್ತದೆ. ಭಾರತದಲ್ಲಿ ನಿನ್ನ ಹೊಲೆಮಾದಿಗ ಸಮುದಾಯವು ಇಷ್ಟರ ಮಟ್ಟಿಗೆ ಹೀನಾಯವಾಗಿರುವುದಕ್ಕೂ ಬ್ರಾಹ್ಮಣ ಸಮುದಾಯವು ಅಷ್ಟೊಂದು ಉನ್ನತ ಮಟ್ಟದಲ್ಲಿರುವುದಕ್ಕೂ ಏನು ಕಾರಣ? ಕೂಡಲೇ ಹೇಳು" ಎಂದ ತಜ್ಞರು ಮಾತು ಮುಂದುವರೆಸಿ "ನಾನು ಜಗನ್ನಾಥ ದೇವಸ್ಥಾನದ ಪೂಜಾರಿಯನ್ನೇ ಕಂಡು ಮಾತನಾಡಿ ಬರುತ್ತಿದ್ದೇನೆ. ಅವರು ಪೂಜೆ ಮಾಡುವ ದೇವರ ವಿಗ್ರಹಕ್ಕಿಂತಲೂ ಹೆಚ್ಚಿನ ಆಲೋಚನೆ ಮಾಡುವ ಶಕ್ತಿ ಅವರಿಗಿಲ್ಲ. ಮೂರ್ತಿಗೂ ಅವರಿಗೂ ಯಾವುದೇ ವ್ಯತ್ಯಾಸವಿಲ್ಲ. ಆದರೂ ದೇವರ ಹಾಗೆ ತಮ್ಮನ್ನು ಪ್ರಾರ್ಥಿಸುವಂತೆ ಮಾಡಿಕೊಂಡಿದ್ದಾರೆ" ಎಂದರು.

"ಇದಕ್ಕೆ ಕಾರಣವೇನೆಂದರೆ ಬ್ರಾಹ್ಮಣರು ಬ್ರಹ್ಮ**ದೇವನ** ಬಾಯಿಯಿಂದ ಹುಟ್ಟಿದವರು **ಮತ್ತು ಹೊಲೆ**ಮಾದಿಗರು ಬ್ರಹ್ಮನ ಕಾಲಿನಿಂದ **ಹುಟ್ಟಿದವರು** ಎಂದು ಬ್ರಾಹ್ಮಣರು ಹೇಳುತ್ತಾರೆ. ಬ್ರಹ್ಮನು ಒಂದು ಕಾಲದಲ್ಲಿ ಭೂಮಿಯಲ್ಲಿ ಸಂಚರಿಸುತ್ತಿರುವಾಗ ಅವನಿಗೆ ಹಸಿವಾಯಿತಂತೆ, ಆ ಸಮಯದಲ್ಲಿ ತನಗೆ ಎದುರಾಗಿ ಬರುತ್ತಿದ್ದ ಒಬ್ಬ ಹೊಲೆಮಾದಿಗನ ಹತ್ತಿರ ಬ್ರಹ್ಮ ಊಟ ಕೇಳಿದನಂತೆ. ಆಗ ಹೊಲೆಮಾದಿಗನು ಬ್ರಹ್ಮದೇವನಿಗೆ ನರಮಾಂಸವನ್ನು ನೀಡಿದನಂತೆ, ಇದು ಬ್ರಾಹ್ಮಣರು ಹೇಳುವ ಮಾತುಗಳು. ಈ ಪುರಾತನ ಕಥೆಯಿಂದ ಭಾರತದ ನೆಲದಲ್ಲಿ ಬ್ರಾಹ್ಮಣ ಸಮುದಾಯವು ಶ್ರೇಷ್ಠವಾದುದೆಂದು, ಹೊಲೆಮಾದಿಗ ಸಮುದಾಯವು ಕನಿಷ್ಠವಾದುದೆಂದು ನಂಬಿ ಬರಲಾಗುತ್ತಿದೆ. ಅಷ್ಟೆ ಅಲ್ಲದೆ, ನನ್ನ ಹೊಲೆಮಾದಿಗ ಸಮುದಾಯಕ್ಕೆ ಹಗಲಿನಲ್ಲಿ ಊರೊಳಕ್ಕೆ ಪ್ರವೇಶಿಸಲು ಹಕ್ಕಿಲ್ಲದಂತೆ ಮಾಡಿದ್ದಾರೆ. ಹೊಲೆಮಾದಿಗ ಸಮುದಾಯದ ಉಸಿರಾಟದ ಗಾ**ಳಿ ಮೇಲ್ಜಾತಿಯ** ಬ್ರಾಹ್ಮಣ, ನಾಯರ್, ರಜಪೂತ ಮುಂತಾದ ಜಾತಿಗಳವರಿಗೆ **ಸೋಕಿದರೂ** ಸಹ **ಹೊಲೆಮಾದಿಗನನ್ನು ಕೊಂದು ಹಾಕಬಹುದು** ಎಂಬುದು; ಈ ನೆಲದಲ್ಲಿ ಬ್ರಾಹ್ಮಣರು **ಮಾಡಿರುವ ಧಾರ್ಮಿಕ ನೀತಿ" ಗುರುವ ವಿವರಿಸಿದ.**

"ಓಹ್! ಈ ಭೂಮಿಯಲ್ಲಿ ಹೀಗೂ ನಡೆಯುತ್ತದೆಯೇ? ಇದೆಂತಹಾ ಅನ್ಯಾಯ, ತೀರಾ ಹುಚ್ಚುತನ. ಇಂತಹ ಮೌಢ್ಯವನ್ನು ಇಡೀ ಭಾರತವು ನಂಬುವಂತೆ ಮಾಡಲು ಬ್ರಾಹ್ಮಣರಿಂದ ಹೇಗೆ ಸಾಧ್ಯವಾಯಿತು?"

"ಬ್ರಾಹ್ಮಣರಿಗೆ ಮಗುವಾಗಿರುವಾಗಲೇ, ಆ ಸಮುದಾಯದ ಹಿರಿಯರು ಇಂತಹ ಭಾವನೆಗಳನ್ನು ಕಲಿಸುವುದರೊಂದಿಗೆ, ಅದನ್ನು ಪದೇ ಪದೇ ಹೇಳುವುದರಿಂದಲೂ ಈ ರೀತಿ ಸಮಾಜವನ್ನು ನಂಬಿಸುವುದಕ್ಕೆ ಸಾಧ್ಯವಾಗಿದೆ. ಜನರು ಗಿಳಿಗಳಂತೆ ಇತರರು **ಕಲಿಸುವುದನ್ನು ಕಲಿಯುತ್ತಾರೆ"**

ಈ ಮಾತುಗಳನ್ನು ಕೇಳಿ ಬಹಳ ದುಃಖಿಸಿದ ತಜ್ಞರು "ಗೆಳೆಯಾ, ಹೇಳಲಾರದಷ್ಟು **ಕಷ್ಟಗಳಿಗೆ ಆಳಾಗಿರುವವನು ನೀನು.** ತಾಯಿಯ ಗರ್ಭದಲ್ಲಿ ಇರುವಾಗಲೇ ನಿನ್ನನ್ನು ಹೀನಜನ್ಮದವನೆಂದು ಬ್ರಾಹ್ಮಣರು ಹಳ್ಳದಲ್ಲಿ ತಳ್ಳಿದ್ದಾರೆ. ಅದರಿಂದ ಹೊರಬರಲು ನೀನು ಏನು ಮಾಡಿದೆ? ನನಗೆ ಗೊತ್ತಿರುವ ಮಟ್ಟಿಗೆ ಒಬ್ಬ ಮನುಷ್ಯನನ್ನು ಅವನ ಕಣ್ಣೆದುರಿನಲ್ಲೆ ಕೀಳುಗರೆಯುವುದಕ್ಕಿಂತ ಶೋಚನೀಯವಾದುದು ಈ ಭೂಮಿಯಲ್ಲಿ ಬೇರೊಂದಿಲ್ಲ. ಆ ರೀತಿ ಯಾವುದಾದರು ಇದ್ದಲ್ಲಿ ಅದು ಅವನಿಗೆ ಸಮಾಧಾನವನ್ನು ನೀಡಬಹುದು" ಎಂದರು.

"ಬ್ರಹ್ಮ ದೇವನ ಬಗ್ಗೆ ಇರುವ ಮೇಲಿನ ಕಥೆ ನಿಜವೇ? ತಮಗೆ ದೇವರ ಸ್ಥಾನಮಾನವನ್ನು ಕಲ್ಪಿಸಿಕೊಳ್ಳಬೇಕೆಂಬ ಆಸಕ್ತಿಯಿರುವ ಬ್ರಾಹ್ಮಣರು ಮಾತ್ರವೇ ಈ ಕಥೆಯನ್ನೇ ನಂಬುತ್ತಾರೆ. ತಾವೆ ದೇವರ ಸ್ಥಾನಮಾನವನ್ನು ಕಲ್ಪಿಸಿಕೊಂಡು ಹೇಳುವ ಕಥೆಗಳನ್ನು ನಂಬಲು ನಿರಾಕರಿಸುವ ಹೊಲೆಮಾದಿಗರನ್ನು ಬಲಿ ತೆಗೆದುಕೊಳ್ಳಲು ಕುತಂತ್ರವನ್ನು ರೂಪಿಸಿದವರು ಬ್ರಾಹ್ಮಣರು. ಆ ಕುತಂತ್ರದ ಭಾಗವಾಗಿಯೇ ಹೊಲೆಮಾದಿಗನು ಬ್ರಹ್ಮದೇವನಿಗೆ ನರಮಾಂಸ ತಿನ್ನುವಂತೆ ಮಾಡಲು ಪ್ರಯತ್ನಿಸಿದನು ಎಂದು ಪ್ರಚಾರ. ಒಂದೊಮ್ಮೆ ಈ ಕತೆ ನಿಜವೇ ಎಂದು ಒಪ್ಪೋಣ. ಪಾಪಿಯೊಬ್ಬ ಮಾಡಿದ ತಪ್ಪಿಗಾಗಿ ಅವನ ಇಡೀ ಸಮುದಾಯವನ್ನೇ ಹೀನಾಯಗೊಳಿಸುವುದು ಕೆಟ್ಟದ್ದಲ್ಲವೇ? ಒಂದು ವೇಳೆ ಇಡೀ ಸಮುದಾಯವೇ ಆ ತಪ್ಪಿನಲ್ಲಿ ಭಾಗಿಯಾಗಿದ್ದರೂ ಸಹ ಅವರ ಮುಂದಿನ ಪೀಳಿಗೆ ಆ ತಪ್ಪಿನಲ್ಲಿ ಭಾಗಿಯಾಗಿರುವುದಿಲ್ಲ. ಪೂರ್ವಿಕರು ಮಾಡಿದ ತಪ್ಪಿಗಾಗಿ, ಆ ಪೂರ್ವಿಕರನ್ನೇ ನೋಡಿರದ ಆ ಪೀಳಿಗೆಯ ಮಕ್ಕಳನ್ನು ದೇವರು ಖಂಡಿತವಾಗಿಯು ದಂಡಿಸುವುದಿಲ್ಲ. ಒಬ್ಬ ಹೊಲೆಮಾದಿಗ ಬ್ರಹ್ಮನಿಗೆ ಮಾಡಿದನೆನ್ನಲಾದ ವಂಚನೆಗಾಗಿ ಅವನಿಗೆ ವಿಧಿಸಿದ ದಂಡನೆಯಲ್ಲಿ ನನಗೂ ಒಂದು ಪಾಲಿದೆ ಎಂದರೂ ಕೂಡ ಅವನು ಮಾಡಿದ ತಪ್ಪಿನಲ್ಲಿ ನನ್ನ ಪಾತ್ರವಿಲ್ಲವೆಂಬುದು ಸುಸ್ಪಷ್ಟ. ಇದುವರೆಗೂ ಸಾವಿರ ಸಾವಿರ ವರ್ಷಗಳು ಕಳೆದು ಹೋದವು. ದೇವರಿಂದ ದ್ವೇಷಕ್ಕೆ ಒಳಗಾದ ಮೇಲೆ ಆ ಕ್ಷಣದಲ್ಲೇ ಅದು ನಾಶವಾಗದೇ ಇರಲು ಸಾಧ್ಯವೇ? ಒಂದೊಮ್ಮೆ ದೇವರು ನನ್ನನ್ನು ದ್ವೇಷಿಸುತ್ತಿರುವುದೇ ನಿಜವಾದಲ್ಲಿ ನಾನು ಮಾಡುವ ಯಾವುದೂ ಕೈಗೂಡಬಾರದು. ಆದರೆ ನಾನೀಗ ಎಲ್ಲ ರೀತಿಯಿಂದಲೂ ನೆಮ್ಮದಿಯಿಂದಲೇ ಇದ್ದೇನಲ್ಲವೇ? ನನಗೆ ಲೇಸನ್ನು ಬಯಸಬೇಕಾದ ದೇವರಿಂದಲೇ ನಾನು ದ್ವೇಷಕ್ಕೆ ಒಳಗಾಗುತ್ತೇನೆಂದೇ ಎಂದಿಟ್ಟುಕೊಂಡರೂ, ನಾನು ಯಾರನ್ನು ದ್ವೇಷಿಸಬೇಕಿತ್ತೋ ಅಂತವರಿಗೂ ಒಳ್ಳೆಯದನ್ನೇ ಮಾಡಿ ಆ ದೇವರಿಗೆ ಇಷ್ಟದವನಾಗಿರಲು ಪ್ರಯತ್ನಿಸುವೆ" ಎಂದ ಗುರುವ.

"ಎಲ್ಲರಿಂದಲೂ ನಿರಾಕರಣೆಗೊಳಗಾಗಿ ಸಮಾಜದಿಂದ ಸಂಪೂರ್ಣವಾಗಿ ಹೊರಗಿಡಲ್ಪಟ್ಟ ನಂತರವೂ ನೀವು ಬದುಕಿರಲು ಹೇಗೆ ಸಾಧ್ಯವಾಯಿತು".

ತಜ್ಞರ ಈ ಪ್ರಶ್ನೆಗೆ ಗುರುವ ಹೀಗೆ ಉತ್ತರಿಸಿದನು. "ಎಲ್ಲರೂ ನಿನಗೆ ಶತ್ರುವಾದಾಗ ನೀನೇ ನಿನಗೆ ಮಿತ್ರ. ನಿನ್ನ ಕಷ್ಟವು ಮಾನವನ ಶಕ್ತಿಗಿಂತಲೂ ಮಿಗಿಲಾದುದಲ್ಲ.

ತಜ್ಞರ ಪ್ರಶ್ನೆಗೆ ಗುರುವ ಹೀಗೆ ಉತ್ತರಿಸಿದನು. "ಎಲ್ಲರೂ ನಿನಗೆ ಶತ್ರುವಾದಾಗ ನೀನೇ ನಿನಗೆ ಮಿತ್ರ. ನಿನ್ನ ಕಷ್ಟವು ಮಾನವನ ಶಕ್ತಿಗಿಂತಲೂ ಮಿಗಿಲಾದುದಲ್ಲ. ಚಂಡಮಾರುತದೊಂದಿಗೆ ಮಳೆ ಭೋರ್ಗರೆಯುವಂತೆ ಸುರಿದರೂ ಒಂದು ಚಿಕ್ಕ ಪಕ್ಷಿಯ ಮೇಲೆ ಒಂದು ಸಲಕ್ಕೆ ಒಂದು ಹನಿ ಮಾತ್ರ ಬೀಳಲು ಸಾಧ್ಯ ಎಂಬುವುದನ್ನು ನೋಡಿ ನಾನು ಬದುಕನ್ನು ಅರ್ಥಮಾಡಿಕೊಂಡೆ.



ಚಂಡಮಾರುತದೊಂದಿಗೆ ಮಳೆ ಭೋರ್ಗರೆಯುವಂತೆ ಸುರಿದರೂ ಒಂದು ಚಿಕ್ಕ ಪಕ್ಷಿಯ ಮೇಲೆ ಒಂದು ಸಲಕ್ಕೆ ಒಂದು ಹನಿ ಮಾತ್ರ ಬೀಳಲು ಸಾಧ್ಯ ಎಂಬುವುದನ್ನು ನೋಡಿ ನಾನು ಬದುಕನ್ನು ಅರ್ಥಮಾಡಿಕೊಂಡೆ. ಅನ್ನಕ್ಕಾಗಿ ಕಾಡುಗಳಲ್ಲಿ ಅಲೆದಾಡಿದೆ. ನದಿಗಳ ನಡೆಯೊಂದಿಗೆ ನಾನೂ ನಡೆದೆ. ಬಹಳ ಸಮಯ ಕಾಡಿನ ಹಣ್ಣುಗಳನ್ನು ತಿನ್ನುತ್ತಿದ್ದೆ. ಕಾಡಲ್ಲಿ ಪಯಣಿಸುವಾಗ ಪ್ರಾಣಿಗಳಿಗೆ ಭಯಪಡಬೇಕಾಗಿತ್ತು. ಈ ರೀತಿ ಒಂಟಿಯಾದ ನನಗೆ ನಿಸರ್ಗವು ಎಂದೂ ಯಾವ ತೊಂದರೆಯನ್ನೂ ಮಾಡಲಿಲ್ಲ. ಯಾವ ಪ್ರಕೃತಿ ನನ್ನ ಬದುಕನ್ನು ಜನಸಮುದಾಯದಿಂದ ನಿರಾಕರಣೆಗೆ ಎಡೆಮಾಡಿ ಕೊಟ್ಟಿತ್ತೋ ಅದೇ ಪ್ರಕೃತಿ ಆ ಸಮುದಾಯದೊಂದಿಗೆ ನನ್ನನ್ನು ಅವಿನಾಭಾವ ಸಂಬಂಧ ಹೊಂದುವಂತೆ ಮಾಡಿರುವುದನ್ನು ಅರಿತುಕೊಂಡೆ ಕೆಲವು ಸಂದರ್ಭಗಳಲ್ಲಿ ಯಾರೂ ಅರಿಯದ ನಿರ್ಜನ ಪ್ರದೇಶದಲ್ಲಿ ಓಡಾಡಿದೆ. ಭಾರತದಲ್ಲಿ ಅಂತಹ ಪ್ರದೇಶಗಳು ಹೇರಳವಾಗಿವೆ. ರೈತನ ಕಣ್ತಪ್ಪಿಸಿಕೊಂಡ, ತಿನ್ನಲು ಯೋಗ್ಯವಾದ ಕೆಲವು ಗಿಡಗಳು, ಗೆಣಸುಗಳು ಯಾವಾಗಲೂ ನನಗೆ ಸಿಗುತ್ತಿದ್ದವು. ಇವು ಸಿಕ್ಕಿದ ಕಾರಣ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗುತ್ತಾ ಬಂದೆ. ಮನುಷ್ಯನಿಗೆ ಉಪಯೋಗವಾಗುವ ಗಿಡಗಳ ಬೀಜ ದೊರೆತರೆ ನನಗಲ್ಲದಿದ್ದರೂ ಬೇರೆಯವರಿಗಾದರೂ ಉಪಯೋಗವಾಗಲೆಂದು ಅವುಗಳನ್ನು ಪುನಃ ಭೂಮಿಯಲ್ಲಿ ಹೂಳುತ್ತಿದ್ದೆ. ನಾನೇ ದುಡಿದು ಬೆಳೆಸಿದ ಬೆಳೆಯನ್ನು ಉಪಯೋಗಿಸಿಕೊಳ್ಳಲು ಕಲಿತೆ".

"ಮತ್ತೊಬ್ಬರ ದುಡಿಮೆಯಲ್ಲಿ ನಾನು ಬದುಕಬಾರದೆಂಬ ತೀರ್ಮಾನಕ್ಕೆ ಬಂದೆ. ಬೇರೆಯವರಿಗೆ ಎಷ್ಟೇ ಸಣ್ಣಮಟ್ಟದಲ್ಲಾದರು ಸಹಾಯ ಮಾಡಲು ಸಾಧ್ಯವಾಯಿತೆಂದು ನೆನಪಿಸಿಕೊಂಡಾಗ, ನನ್ನ ಕಷ್ಟ ಕಡಿಮೆಯಾದಂತೆ ಅನಿಸಿತು. ತುಂಬಾ ದಿನಗಳಿಂದಲೂ ನನ್ನ ಮನಸ್ಸಿನಲ್ಲಿ ಒಂದು ಸಣ್ಣ ಆಸೆಯಿತ್ತು. ಅದೇನೆಂದರೆ ಊರೊಳಗೆ ಪ್ರವೇಶಿಸಿ ನೋಡಬೇಕೆಂಬುದಾಗಿತ್ತು. ದೂರದಲ್ಲಿದ್ದರೂ ಪಟ್ಟಣಗಳನ್ನು, ಕೋಟೆಗಳು ಮತ್ತು ಗೋಪುರಗಳನ್ನು, ಪಕ್ಕದಲ್ಲಿ ಹರಿಯುವ ನದಿಗಳಲ್ಲಿ ಅಚ್ಚರಿ ಹುಟ್ಟಿಸುವ ದೋಣಿಗಳನ್ನು, ಎಲ್ಲಾ ದಿಕ್ಕುಗಳಿಂದಲೂ ನಗರಾಭಿಮುಖವಾಗಿ ಬರುತ್ತಿದ್ದ ವ್ಯಾಪಾರಸ್ಥರನ್ನು, ಪಟ್ಟಣವನ್ನು ಕಾಯುತ್ತಿರುವ ಕಾವಲುಗಾರರನ್ನು, ಹೊರ ದೇಶಗಳಿಂದ ಬಂದ ರಾಯಭಾರಿಗಳನ್ನು ನೋಡಿ ಆನಂದ ಪಡುತ್ತಿದ್ದೆ. ಆ ನಗರಗಳಲ್ಲಿನ ರಸ್ತೆಗಳಿಗೆ ಎಷ್ಟು ಹತ್ತಿರ ಹೋಗಲು ನನಗೆ ಸ್ವಾತಂತ್ರ್ಯವಿರುತ್ತಿತ್ತೋ, ಅಷ್ಟು ಹತ್ತಿರ ಹೋಗುತ್ತಿದ್ದೆ. ಸಮುದ್ರದ ಅಲೆಗಳ ಭೋರ್ಗರೆತವನ್ನು ಕೇಳಿ ಆನಂದ ಪಡುತ್ತಿದ್ದೆ. ಈ ಅಲೆಗಳ ಶಬ್ದಕ್ಕೆ ತಕ್ಕಂತೆ ಸಮುದ್ರದ ಪಕ್ಕದಲ್ಲಿರುವ ಗ್ರಾಮ ಮತ್ತು ನಗರಗಳಿಂದ ಬರುವ ಸಂಗೀತವನ್ನು ಕೇಳಿ ಖುಷಿ ಪಡುತ್ತಿದ್ದೆ. ಬೇರೆ ಬೇರೆ ದೇಶಗಳಿಂದ ಬಂದು ಸೇರುವವರು ನಗರವನ್ನು ತುಂಬಾ ಸಂತೋಷದಲ್ಲಿರಿಸುತ್ತಾರೆಂದುಕೊಂಡಿದ್ದೆ. ಹಗಲಿನಲ್ಲಿ ನಗರದ ಹತ್ತಿರ ಬರಲು ನನಗೆ ಹಕ್ಕಿಲ್ಲದ ಕಾರಣ ಕತ್ತಲು ತುಂಬಿರುವ ರಾತ್ರಿವೇಳೆ ಪಟ್ಟಣದೊಳಗೆ ಪ್ರವೇಶ ಮಾಡಿದೆ. ಆ ಸಮಯದಲ್ಲಿ ನನ್ನ ತಡೆಯುವರು ಯಾರು? ಹಲವಾರು ವಿರೋಧಿಗಳನ್ನು ಹೊಂದಿರುವ ಚಿಕ್ಕ ಇಲಿಯೊಂದು ಕತ್ತಲೆಯ ಸಹಕಾರ ಪಡೆದು ತಾನು ಇಷ್ಟ ಪಡುವ ಜಾಗಗಳಿಗೆಲ್ಲಾ ಓಡಾಡುತ್ತದೆ. ಆ ಇಲಿಯು ಬಡವನ ಗುಡಿಸಲಿನಿಂದ ರಾಜನ ಅರಮನೆಯವರೆಗೆ ರಾಜಾರೋಷವಾಗಿ ಓಡಾಡುತ್ತಿತ್ತು. ಬದುಕಿನ ಸಂತೋಷವನ್ನು ಅನುಭವಿಸಲು ನಕ್ಷತ್ರಗಳ ಬೆಳಕೇ ಅದಕ್ಕೆ ಸಾಕಾಗಿತ್ತು. ಹೀಗಿರುವಾಗ ನನಗೆ ಸೂರ್ಯನ ಕಿರಣಗಳೇ ಏಕೆ ಬೇಕು ಎಂದು ಆಲೋಚಿಸಿದೆ. ಇಂತಹ ಯೋಚನೆಗಳೇ ನನಗೆ ನಗರದೊಳಗೆ ಪ್ರವೇಶ ಮಾಡುವಷ್ಟು ಉತ್ಸಾಹ ಮತ್ತು ಧೈರ್ಯವನ್ನು ತಂದುಕೊಟ್ಟವು. ಲಾಹೋರ್ ನಗರದ ಹೆಬ್ಬಾಗಿಲಿನ ಕಡೆಯಿಂದ ನಾನು ನಗರದೊಳಗೆ ಹೋದೆ. ಮೊದಲಿಗೆ ಒಂದು ನೇರವಾದ ಬೀದಿಯಲ್ಲಿ ನಡೆದೆ. ಆ ಬೀದಿಯ ಎರಡೂ ಕಡೆಗಳಲ್ಲಿರುವ ಬಂಗಲೆಗಳನ್ನು ಮತ್ತು ಅಲ್ಲಿರುವ ಅಂಗಡಿಗಳನ್ನು ನೋಡಿದೆ. ಇನ್ನೂ ಸ್ವಲ್ಪ ದೂರದಲ್ಲಿ ಸಮುದಾಯಗಳು ವಾಸಿಸುವ ಬೀದಿಗಳನ್ನು ದಾಟಿ ನಡೆದು ನಗರದ ಮಧ್ಯಭಾಗಕ್ಕೆ ಬಂದೆ. ಅಲ್ಲಿ ಮನಸೂರೆಗೊಳ್ಳುವ ಸುಂದರವಾದ ಪ್ರದೇಶವನ್ನು ನೋಡಿದೆ. ಅದರ ಪಕ್ಕದಲ್ಲಿ ಹರಿಯುತ್ತಿರುವ ಯಮುನೆಯ ದಂಡೆಯುದ್ದಕ್ಕೂ ಇರುವ ಮಾಳಿಗೆಗಳನ್ನೂ, ಅವುಗಳನ್ನಲಂಕರಿಸಿದ ಹೂದೋಟಗಳನ್ನೂ ನೋಡಿದೆ. ನದಿಯ ದಡದಲ್ಲಿ ಪಂಜಿನ ಬೆಳಕಿನಲ್ಲಿ ಸಂಗೀತ ವಾದ್ಯಗಳೊಂದಿಗೆ ನೃತ್ಯ ಮಾಡುತ್ತಾ ವೇಶ್ಯೆಯರು ಹಾಡುವ ಹಾಡುಗಳನ್ನು ಕೇಳಿದೆ. ಇಂತಹ ಅದ್ಭುತ ದೃಶ್ಯವನ್ನು ತುಸು ಹತ್ತಿರ ಹೋಗಿ ನೋಡಬೇಕೆನ್ನುವ ಆಸೆಯಿಂದ ಒಂದು ತೋಟದ ಬಂಗಲೆಯ ಬಾಗಿಲ ಹತ್ತಿರ ಹೋದೆ. ಆದರೆ ಬಡವರನ್ನು ದೊಣ್ಣೆಯಿಂದ ಹೊಡೆದು ಓಡಿಸುವ ಗುಲಾಮರು ನನ್ನನ್ನು ಆಚೆ ತಳ್ಳಿದರು. ಕೊನೆಗೆ ಇಂತಹ ಶ್ರೀಮಂತ ಜನರಿರುವ ಬೀದಿಯಿಂದಲೇ ಬೇರೆ ಕಡೆ ದೂರ ಹೋದೆ".

ಮಾಳಿಗೆಗಳಲ್ಲಿ ಔತಣ ಕೂಟಗಳು ನಡೆಯುತ್ತಿದ್ದವು. ಆ ಔತಣ ಕೂಟದ ನಂತರ ಅಲ್ಲಿ ಬಿಸಾಡುವ ಎಂಜಲಿಗಾಗಿ ಬಾಗಿಲಿನ ಎದುರು ತನ್ನ ಮೇಲೆ ಬೀಳುವ ದೊಣ್ಣೆ ಏಟುಗಳನ್ನು ಲೆಕ್ಕಿಸದೆ ಮುಗಿಬಿದ್ದಿರುವ ಭಿಕ್ಷುಕರ, ದರಿದ್ರರ ಗುಂಪನ್ನು ನೋಡಿದೆ. ಜೀವನಕ್ಕಾಗಿ ತನ್ನನ್ನೇ ಮಾರಿಕೊಳ್ಳುವ ಬೆಲೆವೆಣ್ಣುಗಳನ್ನು ಎಲ್ಲೆಡೆ ನೋಡಿದೆ.



"ದೂರದಲ್ಲಿ ಹಲವಾರು ದೇವಸ್ಥಾನಗಳಿರುವುದನ್ನು ಕಂಡೆ. ಆ ದೇವಸ್ಥಾನಗಳ ಹತ್ತಿರ ಹೋಗಿ ನೋಡಿದರೆ ಅಲ್ಲಿ ಹೇರಳವಾಗಿ ಭಿಕ್ಷುಕರು, ಬಡವರು ಮಕಾಡೆ ಬಿದ್ದು ಭೂಮಿ ನೆನೆಯುವ ಹಾಗೆ ಕಣ್ಣೀರ್ಗರೆಯುತ್ತಾ ಪ್ರಾರ್ಥಿಸುತ್ತಿದ್ದರು. ಮೂಢನಂಬಿಕೆಗಳಿಗೆ ಮತ್ತು ಅಂಜಿಕೆಗೆ ಕಾರಣವಾಗಿರುವ ಆ ಕಟ್ಟಡಗಳನ್ನು ನೋಡಿ ಲಗುಬಗೆಯಿಂದ ಬೇರೆಡೆ ಹೋದೆ. ನಂತರ ಮಸೀದಿಯಿಂದ ರಾತ್ರಿಯ ಸಮಯವನ್ನು ಗುರುತಿಸುವ ಮುಲ್ಲಾಗಳ ಪ್ರಾರ್ಥನೆಯ ಕೂಗು ಕೇಳಿಸಿತು. ಅದರಿಂದ ಸ್ವಲ್ಪ ದೂರದಲ್ಲಿ ಧ್ವಜಗಳು ಮತ್ತು ಕಾವಲುಗಾರರನ್ನು ಹೊಂದಿರುವ ಯುರೋಪಿಯನ್ನರ ಕಾರ್ಖಾನೆಗಳಿರುವುದನ್ನು ಕಂಡೆ. ಆ ಕಾವಲುಗಾರರು ಎಡೆಬಿಡದೆ 'ಎಚ್ಚರ...ಎಚ್ಚರ....' ಎಂದು ಕೂಗುತ್ತಿದ್ದರು. ನಂತರ ಸ್ವಲ್ಪ ದೊಡ್ಡದಾದ ಕಟ್ಟಡದ ಹತ್ತಿರ ಹೋದೆ. ಆ ಕಟ್ಟಡದ ಒಳಗಿನಿಂದ ಬರುವ ಗುಲಾಮರ ಕೂಗಿನಿಂದಲೂ, ಹಾಗೂ ಜನರು ಅಳುತ್ತಿರುವ ಧ್ವನಿಯಿಂದಲೂ ಅದು ಒಂದು ಕಾರಾಗೃಹ ಎಂದು ತಿಳಿದುಕೊಂಡೆ. ಅದನ್ನು ದಾಟಿ ನಡೆದಾಗ ಸ್ವಲ್ಪ ದೂರದಲ್ಲಿ ಇದ್ದ ಆಸ್ಪತ್ರೆಯಿಂದ ಅರಚಾಟದ ಶಬ್ದವನ್ನು ಕೇಳಿದೆ. ಆ ಆಸ್ಪತ್ರೆಯಿಂದ ಹೆಣಗಳನ್ನು ಎತ್ತಿಕೊಂಡು ಹೋದರು. ಮತ್ತೂ ಸ್ವಲ್ಪ ದೂರ ನಡೆದೆ. ಬೀದಿಗಳಲ್ಲಿ ಕಳ್ಳರು ತಪ್ಪಿಸಿಕೊಂಡು ಓಡಿ ಹೋಗುವುದನ್ನು ಮತ್ತು ಅವರನ್ನು ಹಿಡಿಯಲು ಅಟ್ಟಿಸಿಕೊಂಡು ಕಾವಲುಗಾರರು ಹೋಗುವುದನ್ನು ನೋಡಿದೆ. ಮಾಳಿಗೆಗಳಲ್ಲಿ ಔತಣ ಕೂಟಗಳು ನಡೆಯುತ್ತಿದ್ದವು. ಆ ಔತಣ ಕೂಟದ ನಂತರ ಅಲ್ಲಿ ಬಿಸಾಡುವ ಎಂಜಲಿಗಾಗಿ ಬಾಗಿಲಿನ ಎದುರು ತನ್ನ ಮೇಲೆ ಬೀಳುವ ದೊಣ್ಣೆ ಏಟುಗಳನ್ನು ಲೆಕ್ಕಿಸದೆ ಮುಗಿಬಿದ್ದಿರುವ ಭಿಕ್ಷುಕರ, ದರಿದ್ರರ ಗುಂಪನ್ನು ನೋಡಿದೆ. ಜೀವನಕ್ಕಾಗಿ ತನ್ನನ್ನೇ ಮಾರಿಕೊಳ್ಳುವ ಬೆಲೆವೆಣ್ಣುಗಳನ್ನು ಎಲ್ಲೆಡೆ ನೋಡಿದೆ. ಅದೇ ರಸ್ತೆಯಲ್ಲಿ ಮೊಗಲ್ ಸಾಮ್ರಾಜ್ಯದ ಚಕ್ರವರ್ತಿಯ ಕೋಟೆ ಮತ್ತು ಅದರ ಸುತ್ತಲೂ ಇರುವ ವಿಶಾಲ ಪ್ರದೇಶವನ್ನು ನೋಡಿದೆ. ಆ ಪ್ರದೇಶದಲ್ಲಿ ಚಕ್ರವರ್ತಿಗಳ ಅಂಗರಕ್ಷಕರ ಗುಡಾರಗಳು ಹಾಗೂ ಕುದುರೆ ಪಡೆಯ ಸೈನಿಕರ

ಮಹಮದ್ ಪೈಗಂಬರ್ ಅವರ ಬೋಧನೆಗೆ ವಿರುದ್ಧವಾಗಿ ಚಕ್ರವರ್ತಿಗಳು ಮದ್ಯ ಸೇವನೆ ಮಾಡಿ, ಧರ್ಮ ನಂಬಿಕೆಗಳನ್ನು ಹಾಳು ಮಾಡುತ್ತಾರೆಂದು ತನ್ನ ಧರ್ಮಭಾಷಣದಲ್ಲಿ ಬಹಿರಂಗವಾಗಿ ಆರೋಪ ಮಾಡಿದ ಕಾರಣಕ್ಕಾಗಿ ಚಕ್ರವರ್ತಿಯು ಮುಲ್ಲಾ ಒಬ್ಬರನ್ನು ಕಾರಾಗೃಹದಲ್ಲಿಟ್ಟಿದ್ದಾರೆಂದು ಗೊತ್ತಾಯಿತು. ಚಕ್ರವರ್ತಿಯು ತನ್ನನ್ನು ವಿರೋಧಿಸಿದ ತನ್ನ ಮಗನಿಗೆ ಬೆಂಬಲವನ್ನು ನೀಡಿದ್ದರು ಎಂಬ ಕಾರಣಕ್ಕಾಗಿ ತನ್ನ ಹೆಂಡತಿಯೊಬ್ಬಳನ್ನು ಹಾಗೂ ತನ್ನ ಅಂಗರಕ್ಷಕ ಪಡೆಯ ಇಬ್ಬರನ್ನು ಕತ್ತುಹಿಸುಕಿ ಕೊಂದು ಯಮುನಾ ನದಿಯಲ್ಲಿ ಎಸೆಯಬೇಕೆಂದು ಆದೇಶ ನೀಡಿದ್ದರೆಂದು ಗೊತ್ತಾಯಿತು.



ಗುಡಾರಗಳಿರುವುದನ್ನು ನೋಡಿದೆ. ಗುಡಾರಗಳ ಮೇಲೆ ಧ್ವಜಗಳು ಹಾರಾಡುತ್ತಿದ್ದವು. ಕೋಟೆಗಳ ಸುತ್ತಲೂ ಫಿರಂಗಿ ಪಡೆಗಳಿದ್ದವು. ಕಾವಲುಗಾರರ ಕೈಯಲ್ಲಿರುವ ಪಂಜಿನ ಬೆಳಕಿನ ಸಹಾಯದಿಂದ ನೋಡಿದರೆ ಆಕಾಶವನ್ನು ಚುಂಬಿಸುವಂತಹ ಅರಮನೆ ಗೋಪುರಗಳಿದ್ದವು. ಈ ಕೋಟೆಗಳ ಒಳಗೆ ಹೋಗಬೇಕೆಂಬ ಆಸೆಯಾಯಿತು ನನಗೆ. ಆದರೆ ಕೋಟೆಯ ಹೊರಗಡೆ ಕಂಬಗಳಲ್ಲಿ ತೂಗು ಹಾಕಿರುವ ಛಾಟಿಗಳು ನನ್ನ ಆಸೆಗೆ ತಣ್ಣೀರೆರಚಿದವು. ಆದುದರಿಂದ ನಾನು ಒಂದು ಮೂಲೆಯಲ್ಲಿ ನಿಂತು ಬಿಟ್ಟೆ. ಆ ಸ್ಥಳದಲ್ಲೂ ಕೆಲ ನೀಗ್ರೋ ಗುಲಾಮರಿದ್ದರು, ಅವರ ಮಧ್ಯದಲ್ಲಿ ಬೆಂಕಿ ಉರಿಯುತ್ತಿತ್ತು. ತುಂಬಾ ಚಳಿಯಾಗಿದ್ದ ಕಾರಣ ನನಗೂ ಅಲ್ಲಿ ಇರಬೇಕೆಂದು ಇಚ್ಛೆಯಾಗಿ ಅಲ್ಲಿಗೆ ಹೋದೆ. ಅವರೂ ಸಹ ಅಲ್ಲಿ ನನಗೆ ಸ್ಥಳವನ್ನು ನೀಡಿ ವಿಶ್ರಾಂತಿ ಪಡೆಯಲು ಅನುಮತಿ ನೀಡಿದರು".

"ಅಲ್ಲಿದ್ದು ಚಕ್ರವರ್ತಿ ಅರಮನೆಯನ್ನು ಕಂಡೆ. ಈ ಅರಮನೆಯಲ್ಲಿ ಮನುಷ್ಯರಲ್ಲಿ ಯಾರು ಉನ್ನತವಾದ ಸಂತೋಷದ ಬದುಕನ್ನು ಅರಸಿಕೊಂಡಿರುತ್ತಾನೋ ಅಂತ ವ್ಯಕ್ತಿ ಬದುಕುತ್ತಿರುತ್ತಾನೆ. ಇವರ ಆಜ್ಞೆಯನ್ನು ಒಪ್ಪಿಕೊಂಡು ನಡೆಯಲಿಕ್ಕೆಂದೇ ಧರ್ಮಾಧರ್ಮದ ಅನೇಕ ವಿಚಾರಗಳನ್ನು ಸಾರ್ವಜನಿಕರಿಗೆ ಕಲಿಸಲಾಗುತ್ತದೆ. ಅವನ ಹಿರಿಮೆಗಾಗಿಯೆ ಎಷ್ಟೊಂದು ರಾಯಭಾರಿಗಳು ಬರುತ್ತಿರುತ್ತಾರೆ. ಇವನ ಸಂಪತ್ತಿಗಾಗಿ ಎಷ್ಟೋ ದೇಶಗಳು ಬಡತನವನ್ನು ಅನುಭವಿಸುತ್ತವೆ. ಅವನ ಸಂತೋಷದ ಬದುಕಿಗಾಗಿಯೆ, ಇಷ್ಟೊಂದು ವ್ಯಾಪಾರಸ್ಥರು, ನದಿಗಳು ಬಂದು ಸಮುದ್ರದಲ್ಲಿ ಸಂಗಮವಾಗುವಂತೆ ನಗರದಲ್ಲಿ ಬಂದು ಸೇರುತ್ತಾರೆ. ಅವನೊಬ್ಬನ ರಕ್ಷಣೆಗಾಗಿಯೆ ಎಷ್ಟೊಂದು ಆಯುಧಗಳನ್ನು ಹಿಡಿದು ಕಾವಲು ಕಾಯುತ್ತಾರಲ್ಲಾ ಎಂದು ಯೋಚಿಸಿದೆ. ನಾನು ಈ ರೀತಿ ಆಲೋಚನೆಯಲ್ಲಿರುವಾಗ ಕೋಟೆಯ ಸುತ್ತಲೂ ಕುತೂಹಲದಿಂದ ಕೂಡಿದ ಸಂತೋಷದ ಶಬ್ದ ಕೇಳಿತು. ಅದೇ ಸಂದರ್ಭದಲ್ಲಿ ಅಲಂಕರಿಸಲ್ಪಟ್ಟ ಎಂಟು ಒಂಟೆಗಳು ಹೋಗುವುದನ್ನು ನೋಡಿದೆ. ಅವುಗಳಲ್ಲಿ ರಾಜನ ವಿರುದ್ಧವಾಗಿ ದಂಗೆಯೆದ್ದ ಎಂಟು ದಂಗೆಕೋರರ ತಲೆಗಳನ್ನು ಹೊತ್ತುಕೊಂಡು ಹೋಗುವುದನ್ನು ತಿಳಿದೆ. ಆ ತಲೆಗಳನ್ನು ಮೊಘಲ್ ಸಾಮ್ರಾಜ್ಯದ ಚಕ್ರವರ್ತಿಯ ಸೇನಾಪತಿಗಳು ದಖನ್ ಕಡೆಯಿಂದ ಕಳುಹಿಸಿದ್ದಾರೆ ಎಂದು ಮತ್ತು ಆ ಪ್ರದೇಶದ ಉಸ್ತುವಾರಿಯನ್ನು ನೋಡಿಕೊಳ್ಳಲು ಚಕ್ರವರ್ತಿಯಿಂದ ಕಳುಹಿಸಿದ ಅವನ ಮಕ್ಕಳಲ್ಲಿ ಒಬ್ಬನು ಚಕ್ರವರ್ತಿಗೇ ತಿರುಗಿ ಬಿದ್ದು ಮೂರು ವರ್ಷಗಳಿಂದ ಯುದ್ಧ ಸಾರಿದ್ದಾನೆ ಎಂದ ತಿಳಿದುಕೊಂಡೆ. ಸ್ವಲ್ಪ ಸಮಯದ ನಂತರ ಒಬ್ಬ ಓಲೆಕಾರನು ಶರವೇಗದಲ್ಲಿ ಒಂಟೆಯ ಮೇಲೆ ಬಂದನು. ಚಕ್ರವರ್ತಿಯ ಸೇನಾಪತಿಗಳಲ್ಲಿ ಒಬ್ಬ ಪರ್ಷಿಯಾದ ರಾಜನೊಂದಿಗೆ ಸೇರಿ ಸಂಚು ಮಾಡಿದ ಕಾರ ಗಡಿಭಾಗದ ನಗರವೊಂದನ್ನು ಕೈಬಿಡಬೇಕಾಯಿತು ಎಂಬ **ಮಾಹಿತಿಯನ್ನು ತಿಳಿಸಲು** ಬಂದಿದ್ದಾನೆಂದು **ತಿಳಿಯಿತು**. ಈ ಓಲೆಕಾರ ಬಂದ ಮೇಲೆ ಬಂಗಾಳದ ಗವರ್ನರನು ಕಳುಹಿಸಿದ ಮತ್ತೊಬ್ಬ ಓಲೆಕಾ ಬಂದನು. ವ್ಯಾಪಾರದ ಉದ್ದೇಶದಿಂದ ಮೊಘಲ ಚಕ್ರವರ್ತಿ ಗಂಗಾ ನದಿ ಸಮುದ್ರವನ್ನು ಸೇರುವ ಸ್ಥಳದಲ್ಲಿ ಯುರೋಪಿಯನ್ನರಿಗೆ ನೀಡಿದ ಪ್ರದೇಶದಲ್ಲಿ ಚಕ್ರವರ್ತಿಯ ಅನುಮತಿಯಿಲ್ಲದೆ ಕೋಟೆಯೊಂದನ್ನು ಕಟ್ಟಿರುವುದಾಗಿಯೂ, ಆ ಪ್ರಾಂತ್ಯದಲ್ಲಿ ಇದ್ದ ಮೊಘಲ್ ಸಾಮ್ರಾಜ್ಯದ ಹಡಗಿನ ವ್ಯಾಪಾರವನ್ನು ಕಿತ್ತುಕೊಂಡಿರುವ ವಿಷಯವನ್ನು ತಂದನು. ಈ ಇಬ್ಬರು ಓಲೆಕಾರರು ಬಂದ ಸ್ವಲ್ಪ ಹೊತ್ತಿಗೆ ಅರಮನೆಯಿಂದ ಕಾವಲು ಅಧಿಕಾರಿ ಕಾವಲುಗಾರರೊಂದಿಗೆ ಹೊರಗೆ ಹೋಗುವುದನ್ನು ನೋಡಿದೆ".

"ಚಕ್ರವರ್ತಿಯ ವಿರೋಧಿಗಳೊಂದಿಗೆ ಸಂಬಂಧ ಹೊಂದಿರುವ ದ್ರೋಹಕ್ಕಾಗಿ ಮೂವರನ್ನು ಸೆರೆಹಿಡಿದು ಬರುವಂತೆ ಚಕ್ರವರ್ತಿ ಕಾವಲುಗಾರನಿಗೆ ಆದೇಶ ನೀಡಿದ್ದಾನೆ ಎಂಬದು ತಿಳಿಯಿತು. ಪರ್ಷಿಯಾ ರಾಜನ ಕೀರ್ತಿಯ ಬಗೆಗೂ, ಮಹಮದ್ ಪೈಗಂಬರ್ ಅವರ ಬೋಧನೆಗೆ ವಿರುದ್ಧವಾಗಿ ಚಕ್ರವರ್ತಿಗಳು ಮದ್ಯ ಸೇವ ಮಾಡಿ, ಧರ್ಮ ನಂಬಿಕೆಗಳನ್ನು ಹಾಳು ಮಾಡುತ್ತಾರೆಂದು ತನ್ನ ಧರ್ಮಭಾಷಣದಲ್ಲಿ ಬಹಿರಂಗವಾಗಿ ಆರೋಪ ಮಾಡಿದ ಕಾರಣಕ್ಕಾಗಿ ಚಕ್ರವರ್ತಿಯು ಮುಲ್ಲಾ ಒಬ್ಬರನ್ನು ಕಾರಾಗೃಹದಲ್ಲಿಟ್ಟಿದ್ದಾರೆಂದು ಗೊತ್ತಾಯಿತು. ಚಕ್ರವರ್ತಿಯು ತನ್ನನ್ನು ವಿರೋಧಿಸಿದ ತನ್ನ ಮಗನಿಗೆ ಬೆಂಬಲವನ್ನು ನೀಡಿದ್ದರು ಎಂಬ ಕಾರಣಕ್ಕಾಗಿ ತನ್ನ ಹೆಂಡತಿಯೊಬ್ಬಳನ್ನು ಹಾಗೂ ತನ್ನ ಅಂಗರಕ್ಷಕ ಪಡೆಯ ಇಬ್ಬರನ್ನು ಕತ್ತುಹಿಸುಕಿ ಕೊಂದು ಯಮುನಾ ನದಿಯಲ್ಲಿ ಎಸೆಯಬೇಕೆಂದು ಆದೇಶ ನೀಡಿದ್ದರೆಂದು ಗೊತ್ತಾಯಿತು".

"ಇಂತಹ ಎಲ್ಲಾ ಘಟನೆಗಳ ಬಗ್ಗೆ ನಾನು ಯೋಚನೆಮಾಡುತ್ತಿರುವಾಗ ದಿಢೀರನೆ ಅರಮನೆಯ ಅಂತಃಪುರದ ಅಡುಗೆ ಮನೆಯಲ್ಲಿ ಹೊತ್ತಿ ಉರಿಯುವ ಜ್ವಾಲೆಗಳು ಆಕಾಶವನ್ನು ಮುಟ್ಟಿದವು. ಅದರ ಹೊಗೆ ಮೋಡದಲ್ಲಿ ಭಾಗಿಯಾದವು. ತಕ್ಷಣವೇ ಭಾರೀ ಸದ್ದಿನೊಂದಿಗೆ ಶಬ್ದದೊಂದಿಗೆ ರಕ್ಷಣಾ ಕೊಠಡಿಯಿಂದ ಗಂಟೆಗಳು ಮೊಳಗಿದವು. ಆ ಗಂಟೆಯ ಸದ್ದು ಅಪಾಯ ಹಾಗೂ ಕಷ್ಟಗಳನ್ನು ಸೂಚಿಸುವ ಸಂದೇಶಗಳನ್ನು ತಿಳಿಸುವುದಾಗಿತ್ತು. ಕೂಡಲೆ ಅಶ್ವಾರೋಹಿ ವೀರರು ನಗರದ ಎಲ್ಲಾ ಕಡೆಯೂ ಹರಡಿದರು. ಅರಮನೆಯ ಸುತ್ತ ಮುತ್ತಲಿನಲ್ಲಿ ಇರುವ ಮನೆಗಳ ಬಾಗಿಲುಗಳನ್ನು ಒಡೆದು ಸೈನಿಕರು ಒಳಗೆ ನುಗ್ಗಿದರು. ಹೀಗೆ ನುಗ್ಗಿದ ಸೈನಿಕರು ಮನೆಗಳಲ್ಲಿ ನಿದ್ದೆ ಮಾಡುತ್ತಿದ್ದ ಜನರನ್ನು ಛಾಟಿಯಿಂದ ಹೊಡೆದು ಅರಮನೆಯ ಅಡುಗೆ ಮನೆಯಲ್ಲಿ ಹೊತ್ತಿ ಉರಿಯುವ ಬೆಂಕಿಯನ್ನು ನಂದಿಸಲು ಓಡಿಸಿದರು. ದೊಡ್ಡ ಮನುಷ್ಯರ ಸನಿಹದಲ್ಲಿರುವುದು ಬಡವರಿಗೆ ಎಂತಾ ಕಷ್ಟಕರವಾದದ್ದು ಎಂದು ನಾನಾಗ ಅರಿತೆ. ಸುಗಂಧ ದ್ರವ್ಯಗಳನ್ನೇ ನೀಡುವವರಾದರೂ ಬಹಳ ಹತ್ತಿರ ಬಂದರೆ ಅವರುಗಳನ್ನು ಸುಟ್ಟು ಭಸ್ಮ ಮಾಡುವ ಬೆಂಕಿಯಂತಹವರು ಶ್ರೀಮಂತರು. ಇದನ್ನು ನೋಡಿದ ಕೂಡಲೆ ನಾನು ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಿಸಿದೆ. ಆದರೆ ಎಲ್ಲಾ ರಸ್ತೆಗಳು ಮುಚ್ಚಿದ್ದವು. ದೇವರಿಚ್ಛೆಯೋ ಏನೋ ನನಗೆ ಒಂದು ಅವಕಾಶ ಸಿಕ್ಕಿತು. **ಅಂತಃಪುರದಿಂದ ಮಹಿಳೆಯರನ್ನು ಆನೆಗಳ ಮೇಲೆ ಕೂರಿಸಿಕೊಂಡು** ಸೈನಿಕರು ಬಂದರು. ಆದ್ದರಿಂದ ನಾನು **ತಪ್ಪಿಸಿಕೊಂಡು ಓಡಿ ಹೋಗುವುದು ಸಾಧ್ಯವಾಯಿತು.** ಕಾವಲುಗಾರರು ಅರಮನೆಗೆ **ಹೊತ್ತಿರುವ ಬೆಂಕಿಯನ್ನು ನಂದಿಸಲು ಸಹಾಯಕ್ಕೆ** ಬರುವಂತೆ **ಛಾಟಿಯಿಂದ ಹೊಡೆದು** ಓಡಿಸುತ್ತಿದ್ದರು. ಇನ್ನೊಂದು ಕಡೆ ಅರಮನೆಯಿಂದ ಆಚೆ ಬರುವ ಆನೆಗಳು ಜನರನ್ನು **ಸೊಂಡಿಲಿನಿಂದ ಹೊಡೆದು ಬಿಸಾಕಿದವು.** ಆದ್ದರಿಂದ



ಒಂದು ಕಡೆ ಮುಂಭಾಗದಲ್ಲಿದ್ದವರೂ ಮತ್ತೊಂದು ಕಡೆ ಹಿಂಭಾಗದಲ್ಲಿದ್ದವರೂ ಬೇರೆ ಬೇರೆ ರೀತಿಯಲ್ಲಿ, ಓಡಿಸಲ್ಪಟ್ಟರು".

"ಇಂತಹ ಕ್ರೂರ ಪರಿಸ್ಥಿತಿಯಿಂದ ತಪ್ಪಿಸಿಕೊಂಡು ನಾನು ನಗರದ **ಹೊರಭಾಗಕ್ಕೆ** ಬಂದೆ. ಅಲ್ಲಿ ಗುಡಿಸಲುಗಳಲ್ಲಿ ಬಡವರು ಶಾಂತಿಯಿಂದ ತಂತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಈ ಗುಡಿಸಲುಗಳು ಶ್ರೀಮಂತರ ಪ್ರದೇಶದಿಂದ ಬಹಳ ದೂರದಲ್ಲಿದ್ದವು. ಅಲ್ಲಿ ಹೋದ ಮೇಲೆಯೇ ನನ್ನ ಜೀವವು ಒಂದು ಸ್ಥಿತಿಗೆ ಬರಲಾರಂಭಿಸಿತು. ಒಂದು ನಗರವನ್ನು ನೋಡಿದೆ, ನಾಡಿನ ನಾಯಕರ ಶ್ರೀಮಂತಿಕೆಯನ್ನು ತನ್ನದಾಗಿಸಿಕೊಂಡಿರುವ ಮಾಳಿಗೆಗಳನ್ನು ಕಂಡೆ. ಆ ನಾಯಕರುಗಳಲ್ಲಿ ಎಷ್ಟೋ ನಾಯಕರು ಇತರೆ ನಾಯಕರಿಗೆ ಗುಲಾಮರಾಗಿ ಇರುವುದನ್ನು ಕಂಡೆ. ಈ ನಾಯಕರು ಸಂತೋಷ ಮತ್ತು ದುರಾಸೆಗಳಿಗೆ ಗುಲಾಮರಾಗಿರುವುದನ್ನು ನೋಡಿದೆ. ಅಷ್ಟೆ ಅಲ್ಲದೆ ಮೂಢನಂಬಿಕೆಗಳಲ್ಲಿ ಮುಳುಗಿಹೋಗಿರುವುದನ್ನು ನೋಡಿದೆ. ಇವರು ಹೀನ ಆಲೋಚನೆಗಳನ್ನು ಹೊಂದಿದವರಾಗಿದ್ದಾರೆ. ಮಲಗುವಾಗಲೂ ಭಯವನ್ನು ತಬ್ಬಿಕೊಂಡೇ ನಿದ್ರೆ ಮಾಡುತ್ತಾರೆ. ಅವರುಗಳ ಸುತ್ತಲೂ ಇರುವ ಪ್ರತಿಯೊಂದಕ್ಕೂ ಪ್ರತಿಕ್ಷಣವೂ ಹೆದರಿ ಹೆದರಿ ಸಾಯುತ್ತಿದ್ದರು. ಅಷ್ಟೆ ಅಲ್ಲದೆ ಕಳ್ಳತನ ಮಾಡುವವರು ಭಿಕ್ಷುಕರು, ವೇಶ್ಯೆಯರು, ಮನೆಗಳಿಗೆ ಬೆಂಕಿಯಿಡುವ ವಂಚಕರು ಮುಂತಾದವರನ್ನು ನೆನೆದು ನೆನೆದು ಈ ನಾಯಕರು ನಡುಗುತ್ತಾ ಇರುತ್ತಾರೆ. ಹೊರಗಡೆ ಹೋಗಲು ಸೈನಿಕರು ಬಿಡುವುದಿಲ್ಲವೆಂದು ಅಳುತ್ತಾ ಇರುತ್ತಾರೆ. ಇವರುಗಳಿಗೆ ಧರ್ಮ ಗುರುಗಳು ಕೂಡ ಭಯವನ್ನು ಸೃಷ್ಟಿಸುವವರಂತೆ ಕಾಣಿಸುತ್ತಾರೆ. ರಾತ್ರಿಯಲ್ಲಿ ಈ ರೀತಿ ಅಲ್ಲೋಲ ಕಲ್ಲೋಲವಾಗಿರುವ ನಗರವು ಹಗಲಿನಲ್ಲಿ ಹೇಗಿರಬಹುದು? ಮನುಷ್ಯನಲ್ಲಿ ಕೆಟ್ಟದು ಎಂದು ಯಾವುದಿರುತ್ತದೆಯೋ ಅದು ಅವನು ಬದುಕನ್ನು ಅನುಭವಿಸುವ ರೀತಿಯಿಂದಲೂ ಮತ್ತು ಅವನ ಆಸೆಗಳಿಂದಲೂ ಬೆಳೆಯುತ್ತವೆ. ಎಲ್ಲಾ ರೀತಿಯಲ್ಲೂ ಬದುಕನ್ನು ಅನುಭವಿಸುವ ಚಕ್ರವರ್ತಿ ತನ್ನ ನಾಡಿನೊಳಗಿನ ದಂಗೆಗಳು ಹೊರ ದೇಶಗಳೊಂದಿಗೆ ನಡೆಸುವ ಯುದ್ಧಗಳು ಹಾಗೂ ತನಗೆ ರಕ್ಷಣೆ ಮತ್ತು ಅಶ್ವಾಸನೆ ನೀಡಬಲ್ಲ ವಸ್ತುಗಳನ್ನು ತನ್ನ ಸೇನಾಧಿಪತಿಯನ್ನು, ಅಂಗರಕ್ಷಕರನ್ನು, ನಾಡಿನ ಮುಲ್ಲಾಗಳನ್ನು ಅಷ್ಟೆ ಅಲ್ಲದೆ ತನ್ನ ಹೆಂಡತಿ ಮಕ್ಕಳನ್ನು ನೋಡಿ ಅಂಜುವವನಾಗಿ ಬದುಕುತ್ತಾನೆ. ಅವನ ಕೋಟೆಗಳಿಗೂ ಸಹ ಮೌಢ್ಯದ ನೆರಳನ್ನು ತಡೆಯುವ ಶಕ್ತಿ ಇಲ್ಲದಾಗಿದೆ. ಅವನ ಆನೆಗಳು ಎಷ್ಟೆ ಬಲಶಾಲಿಯಾಗಿದ್ದರೂ ಸಹ ಅವನ ದುಃಖದಲ್ಲಿ ಒಂದು ಕೂದಲಿನಷ್ಟೂ ಕಡಿಮೆ ಮಾಡುವ ಶಕ್ತಿಯಿಲ್ಲದಾಗಿವೆ. ಆದರೆ ನಾನು ಇವ್ಯಾವುದಕ್ಕೂ ಭಯ ಪಡುವವನಲ್ಲ. ಎಂತಹ ಕ್ರೂರಿಯೂ ಕೂಡ ನನ್ನ ಪ್ರಾಣ ಮತ್ತು ದೇಹದ ಮೇಲೆ ಅಧಿಕಾರ ಚಲಾಯಿಸಲಾರ. ನನ್ನಿಚ್ಛೆಯಂತೆ ಹಾಗೆ ದೇವರಿಗೆ ಪೂಜೆ, ಪ್ರಾರ್ಥನೆ ಸಲ್ಲಿಸಬಹುದು. ಆದರೆ ಯಾವ ನರಪಿಳ್ಳೆಗೂ ನಾನು **ಭಯಪಡಬೇಕಾದುದಿಲ್ಲ**".

"**ಈ ರೀತಿ ನಾನು** ಬದುಕುತ್ತಾ ಇದ್ದ ಸಂದರ್ಭದಲ್ಲಿ ದೆಹಲಿಯ ಗಡಿ ಪ್ರದೇಶಗಳಿಗೆ ಹೋಗಿ ಬರಲು ಪ್ರಾರಂಭಿಸಿದೆ. ಅಲ್ಲಿ ವಾಸಿಸುತ್ತಿರುವ ಜನರ ವಸತಿಗೃಹಗಳು ಆಕಾಶದಲ್ಲಿ ಮಿಂಚುವ ನಕ್ಷತ್ರಗಳ ಹಾಗೆ ಮಿಂಚುತ್ತಿದ್ದವು. ಈ ದೃಶ್ಯವು ಆಕಾಶ ಮತ್ತು ನಗರವು ಒಂದೇ ಆಡಳಿತಕ್ಕೆ ಒಳಪಟ್ಟಂತೆ ಕಾಣಿಸಿತು. ನದಿಯ ದಡದಲ್ಲಿರುವ ಗೋಪುರಗಳ ನೆರಳು ನದಿಯ ನೀರಿನಲ್ಲಿ ಬಿಳಿ ರೇಷ್ಮೆಬಟ್ಟೆಯಿಂದ ಅಲಂಕರಿಸಿದಂತೆ, ನನಗೆ ನಯನ ಮನೋಹರವಾಗಿ ಕಾಣಿಸಿತು. ಪ್ರತ್ಯೇಕವಾಗಿಯೂ ಮತ್ತು ನಿಶ್ಶಬ್ದವಾಗಿಯೂ ಇದ್ದ ರಸ್ತೆಗಳಲ್ಲಿ ನಾನು ಯಾವುದೇ ಅಡೆತಡೆಯಿಲ್ಲದೆ **ಹೋಗುತ್ತಿದ್ದೆ**. ಆ ಸಂದರ್ಭದಲ್ಲಿ ಇಡೀ ನಗರವೇ ನನಗೆ ಸ್ವಂತವಾಗಿರುವಂತೆ ಭಾಸವಾಯಿತು. ಆದರೂ ನನಗೆ ಒಂದು ಹೊತ್ತಿನ ಅನ್ನವನ್ನು ಕೊಡಲು ಈ ಸಮುದಾಯವು ನಿರಾಕರಿಸಿತ್ತು. ಈ ನೆಲದ ಧರ್ಮವೆಂಬುದು ನನ್ನನ್ನು ಅಸಹ್ಯದಲ್ಲಿ ಇಟ್ಟಿತ್ತು. ಬದುಕಿರುವವರಲ್ಲಿ ನನಗೆ ಪ್ರೀತಿ ತೋರಿಸುವ ಸ್ನೇಹಿತರೇ ಸಿಗದ ಕಾರಣ ಸತ್ತವರಲ್ಲಿ ಸ್ನೇಹಿತರನ್ನೇ ಹುಡುಕಿದೆ. ಹಸಿವನ್ನು ತಡೆಯಲಾರದೆ ಮಸಣಕ್ಕೆ ಹೋಗಿ ಅಲ್ಲಿ **ಹೆಣಗಳನ್ನು ಹೂತಿರುವ ಸ್ಥಳದಲ್ಲಿ ಸತ್ತವರಿಗಾಗಿ ಅವರ ಒಕ್ಕಲಿನವರು ಇಟ್ಟಿರುವ ಅನ್ನ** ತಿಂದೆ. ಆ ಸ್ಥಳದಲ್ಲಿ ನಿಂತು ಇಡೀ ವಿಶ್ವದ ಚಲನವಲನಗಳು ಹಾಗೂ ಬದುಕನ್ನು ಕುರಿತು **ಆಲೋಚಿಸಿದೆ**".

"**ಆ ಸಮಯದಲ್ಲಿ** ನನ್ನ ನೆನಪಿನಲ್ಲಿ ಈ ಸ್ಮಶಾನದ ವಿಭಿನ್ನವಾದ ಮಹತ್ವಗಳು ಮಿಂಚಿನಂತೆ ಬಂದು ಹೋದವು. ಈ ಸ್ಥಳವೇ ಶಾಶ್ವತವಾದ ಪ್ರಶಾಂತವಾದ ನಗರ. ಇಲ್ಲಿ ಅಧಿಕಾರ ಮತ್ತು ಅಹಂಕಾರ ನಾಶವಾಗುತ್ತವೆ. ಇಬ್ಬನಿಯ ಹನಿಯಂತೆ ಹೃದಯವು ನಿರ್ಮಲವಾಗಿ ಮತ್ತು ಪರಿಶುದ್ಧವಾಗಿರುವುದರೊಂದಿಗೆ ನ್ಯಾಯದ ಮೌಲ್ಯಗಳು ಜೋಪಾನಾವಾಗಿರುತ್ತವೆ. ಇಲ್ಲಿ ಬದುಕಿನ ಭೀತಿ, ಆತಂಕಗಳು ಎಲ್ಲವೂ ಸತ್ತು ಹೋಗುತ್ತವೆ. ಮರಣದ ಭಯವು ಸಹ ಮಾಯವಾಗುತ್ತದೆ. ಇದು ಬದುಕಿನ ಬಂಡಿ ಓಡಿಸುವವನು, ತನ್ನ ಬಂಡಿಯನ್ನು ಕೊಟ್ಟ ಕೊನೆಯದಾಗಿ ತಂದು ನಿಲ್ಲಿಸುವ ಸ್ಥಳವಾಗಿದೆ. ಇದೇ ತಾಣವೇ ಹೊಲೆಮಾದಿಗನೂ ಸಹ ವಿಶ್ರಾಂತಿ ಪಡೆವ ನೆಲೆ ಎಂದು ನೆನೆದೆ. ಇಂತಹ ನೆನಪುಗಳಿಂದ ಮರಣವೂ ಸಹ ನನಗೆ ತುಂಬಾ ಇಷ್ಟವಾದುದಾಗಿತ್ತು. ಅದೇ ಸಂದರ್ಭದಲ್ಲಿ ಜಗತ್ತನ್ನು ಮತ್ತು ಬದುಕನ್ನು ದ್ವೇಷಿಸಬೇಕೆಂಬ ಭಾವನೆಯೂ ಬಂತು. ಸಮಯದ ಓಟಕ್ಕೆ ತಕ್ಕಂತೆ ಹಂತ ಹಂತವಾಗಿ ನಕ್ಷತ್ರಗಳು ಕಾಣುವ ಮೂಡಣ ದಿಕ್ಕಿನೆಡೆ ನೋಟ ಹರಿಸಿದೆ. ಚುಕ್ಕೆಗಳೊಂದಿಗೆ ನನ್ನ ಆತ್ಮವೂ ಆಕಾಶದಲ್ಲಿ ಲೀನವಾಯಿತು. ಗ್ರಹಗಳಲ್ಲೆಲ್ಲಾ ಅತ್ಯಂತ ಮನೋಹರವೂ, ಶಾಶ್ವತವೂ ಆದ ಗ್ರಹದ ಬೆಳಕಿಲ್ಲಿ ಮುಂಜಾನೆಯ ಎಳೆಗೆಂಪಿನ ಕಿರಣಗಳು ಸಂಗಮವಾಗುವಾಗ ನಾನು ಸ್ವರ್ಗದ ಹೆಬ್ಬಾಗಿಲಿನ ಬಳಿಯಿರುವಂತೆ ಭಾಸವಾಯಿತು. ಆದರೆ ಮುಂಜಾನೆಯ ಸೂರ್ಯಕಿರಣಗಳು ದೇವಾಲಯದ ಗೋಪುರಗಳ ಮೇಲೆ ಬಿದ್ದು ಚಿನ್ನದಂತೆ ಪ್ರಕಾಶಮಾನವಾಗಿ ಮಾಡುವ ಸಂದರ್ಭದಲ್ಲಿ ನಾನು, ನೆರಳು ಕಣ್ಮರೆಯಾಗುವಂತೆ ಕಣ್ಮರೆಯಾದೆ. ಮನುಷ್ಯರನ್ನು ಬಿಟ್ಟು ಬಹುದೂರ ಹೋಗಿ ಕಾಡಿನ ಒಂದು ಮರದ ಕೆಳಗೆ ವಿಶ್ರಾಂತಿ ಪಡೆದೆ. ಅಲ್ಲಿ ಪಕ್ಷಿಗಳ ಕಲರವವನ್ನು ಕೇಳುತ್ತಾ ಹಾಗೇ ನಿದ್ರೆಗೆ ಜಾರಿದೆ".

ಗುರುವನ ಈ ಸುದೀರ್ಘ ಅನುಭವಕತೆಯನ್ನು ಕೇಳಿದ ತಜ್ಞರು ಹೇಳಿದರು, "ಓ ಸುಖ–ದುಃಖ ತುಂಬಿರುವವನೆ, ನಿನ್ನ ಕತೆ ಹೃದಯವನ್ನು ಕರಗಿಸುವಂತಿದೆ. ಕೆಲವು ನಗರಗಳಲ್ಲಿ ರಾತ್ರಿವೇಳೆ ನೋಡುವುದಕ್ಕೆ ಮಾತ್ರ ಸೂಕ್ತವಾಗಿರುತ್ತವೆ. ಪ್ರಕೃತಿ ರಾತ್ರಿಯಲ್ಲಿ ಬಹಳ ಸುಂದರವಾಗಿಯೇ ಇರುತ್ತದೆ. ಸಂತೋಷವನ್ನು ನೀಡುವುದರಲ್ಲಿ ಅದು ಯಾವುದಕ್ಕೂ ಕಮ್ಮಿಯಿಲ್ಲ. ಹೀಗಾಗಿಯೇ ನನ್ನ ದೇಶದ ಪ್ರಸಿದ್ಧ ಮಹಾಕವಿಯೊಬ್ಬರು ರಾತ್ರಿಯ ಸೌಂದರ್ಯವನ್ನು ಮಾತ್ರವೆ ಕೊಂಡಾದರೇ ವಿನಃ ಬೇರಾವುದನ್ನೂ ಅವರು ಹೊಗಳಲಿಲ್ಲ" ಎಂದು ಹೇಳುತ್ತಾ, "ಅದೆಲ್ಲಾ ಸರಿ, ಹಗಲಿನಲ್ಲಿ ಸಂತೋಷವಾಗಿರಲು ನೀನು ಏನು ಮಾಡಿದೆ?" ಎಂದು ಕೇಳಿದರು ತಜ್ಞರು.

"ರಾತ್ರಿಯಲ್ಲಿ ಸಂತೋಷವಾಗಿ ಇರುವುದು ಮಹತ್ವವಾದ ಕೆಲಸ. ಪ್ರಕೃತಿ ಬಹಳ ವಿಚಿತ್ರವಾದುದು. ಅದು ಕೀಳು ಮಗನೊಬ್ಬನಿಗೆ ಆಕರ್ಷಿಸುವ ತನ್ನ ಹೊರಗಿನ ಸೌಂದರ್ಯವನ್ನು ಮಾತ್ರ ತೋರಿಸಿ ರಾತ್ರಿಯಲ್ಲಿ ತನ್ನ ಪ್ರೇಮಿಗೆ ಸಂಪೂರ್ಣ ಸೌಂದರ್ಯವನ್ನು ತೋರಿಸುವ ಸುಂದರ ಯುವತಿಗೆ ಸಮಾನವಾದುದು. ಈ ಏಕಾಂತದ ಪರಿಸ್ಥಿತಿ ಸಂತೋಷದಾಯಕವೇ ಆದರೂ ಅದರಲ್ಲಿ ಕೆಲವು ಕೊರತೆಗಳಿವೆ. ದುಃಖ ಮತ್ತು ಕಷ್ಟದಲ್ಲಿರುವ ಒಬ್ಬನಿಗೆ ಒಂಟಿತನವು ಶಾಂತವಾಗಿರುವ ಬಂದರಿನಂತೆ ಅನಿಸುತ್ತದೆ. ಚಲನೆಯಿಲ್ಲದ ತನ್ನ ಸ್ಥಿತಿಯನ್ನು ನೆನೆದು ಸಂತೋಷವಾಗಿರುವಾಗಲೇ ಕಾಲವು ಅವನನ್ನೇ **ಎಳೆದುಕೊಂಡು ಹೋಗುತ್ತದೆ**. ಬದುಕು ಎಂಬ ಮಹಾ ನದಿಯಲ್ಲಿ ಹಾಕುವುದಿಲ್ಲ. **ಆ ನದಿ ತನ್ನ ದಿಕ್ಕನ್ನೆ** ಎದುರಿಸಿ

ಅರಿವಿಲ್ಲದಿರುವವನು ಸಾಸಿವೆಯಷ್ಟು ಸಂತೋಷವನ್ನು ಅನುಭವಿಸದೆ ತಮ್ಮ ಬದುಕಿನ ಗಡಿಯನ್ನು ಸೇರುತ್ತಾನೆ.ನಾನು ಪ್ರಕೃತಿಗಿಂತ ಹೆಚ್ಚಿನ ಬುದ್ಧಿವಂತನಾಗಿರಲು ಇಷ್ಟ ಪಡುವುದಿಲ್ಲ. ಅಲ್ಲದೆ ಪ್ರಕೃತಿ ಮನುಷ್ಯನಿಗೆ ವಿಧಿಸಿರುವ ನಿಯಮಗಳನ್ನೇ ಮೀರಿ ನಾನು ಸಂತೋಷ ಪಡೆಯಲು ಇಚ್ಚಿಸುವುದಿಲ್ಲ.



With Best Compliments From

A.VEERABHADRAPPA
Advocate

CHITRADURGA
Ph:9448013348
Ph: 222882

With Best Compliments From

LIONS INTERNATIONAL

LION. C. CHANDRA SHEKAR

CHANDRU AUTOMOBILE ENGG WORKS
SHREE SAPTHAGIRI ENTERPRISES
(EARTH MOVERS)

FACTORY: 608//A, 1ST MAIN ROAD, 2ND BLOCK,
DR. RAJKUMAR ROAD, RAJAJINAGAR, BANGALORE-10
OFF: 564. 4TH CROSS, 2ND MAIN, 2ND BLOCK,
RAJAJINAGAR, BANGLORE-10
MAIL ID: CCSHEKAR 1964@YMAIL.COM

With Best Compliments From

YAMAHA

Bangalore Wheels
#1016/1, Mani Complex, 1st Main,
Dr. Rajkumar Road, 4 Block, Rajajinagar,
Bangalore-560010

Phone: 91-80-23150561, 23158562,
23159563 Fax:+ 91-80-23119598
E-mail: info@bangalorewheels. co.in
Web: www.bangalorewheels.in

Authorized dealers for
India Yamaha Motor Pvt. Ltd.

ನಿಲ್ಲುವವರನ್ನು, ತನ್ನ ದಿಕ್ಕನ್ನೆ ಸ್ವೀಕರಿಸಿ ನಿಲ್ಲುವವರನ್ನು, ಎಲ್ಲರನ್ನೂ ಒಂದೇ ರೀತಿಯಲ್ಲಿ ಕೊಂಡೊಯ್ಯುತ್ತದೆ. ಅರಿವಿರುವವನು ತನ್ನ ಬದುಕನ್ನು ಹೆಚ್ಚಿನ ಸಂತೋಷದಿಂದ ಅನುಭವಿಸುತ್ತಾನೆ. ಅರಿವಿಲ್ಲದಿರುವವನು ಸಾಸಿವೆಯಷ್ಟು ಸಂತೋಷವನ್ನು ಅನುಭವಿಸದೆ ತಮ್ಮ ಬದುಕಿನ ಗಡಿಯನ್ನು ಸೇರುತ್ತಾನೆ. ನಾನು ಪ್ರಕೃತಿಗಿಂತ ಹೆಚ್ಚಿನ ಬುದ್ಧಿವಂತನಾಗಿರಲು ಇಷ್ಟ ಪಡುವುದಿಲ್ಲ. ಅಲ್ಲದೆ ಪ್ರಕೃತಿ ಮನುಷ್ಯನಿಗೆ ವಿಧಿಸಿರುವ ನಿಯಮಗಳನ್ನೇ ಮೀರಿ ನಾನು ಸಂತೋಷ ಪಡೆಯಲು ಇಚ್ಚಿಸುವುದಿಲ್ಲ. ಇದರೊಂದಿಗೆ ನನ್ನ ಕಷ್ಟ ಮತ್ತು ಸುಖಗಳನ್ನು ಹಂಚಿಕೊಳ್ಳಲು ಸ್ನೇಹಿತನೊಬ್ಬನನ್ನು ಪಡೆಯಲು ಬಯಸಿದೆ. ನನ್ನಂತೆ ಇರುವವರಲ್ಲಿ ನನಗೆ ಸೂಕ್ತವಾದ ಸ್ನೇಹಿತನನ್ನು ಹುಡುಕಿದೆ. ಬಹಳ ಹುಡುಕಾಟದ ನಂತರ ಪ್ರೀತಿ, ವಿಶ್ವಾಸ, ನಂಬಿಕೆ ಮುಂತಾದ ಮೌಲ್ಯಗಳನ್ನು ಹೊಂದಿದ್ದು ಮತ್ತು ಕೆಟ್ಟ ಆಲೋಚನೆಗಳು ತನ್ನಲ್ಲಿ ಸ್ವಲ್ಪವೂ ಇಲ್ಲದ ಒಬ್ಬ ಸ್ನೇಹಿತನನ್ನು ಕಂಡು ಹಿಡಿದೆ. ಆದರೆ ಅವನು ಮನುಷ್ಯ ಜಾತಿಗೆ ಸೇರಿದವನಲ್ಲ. ಪ್ರಾಣಿಗಳ ಜಾತಿಗೆ ಸೇರಿದವನು. ಇಲ್ಲಿ ನೀವು ನೋಡುತ್ತಿದ್ದೀರಲ್ಲ; ಆ ನಾಯಿಯೇ **ಅಂತಹ ನನ್ನ ಸ್ನೇಹಿತ. ಇದು ಹುಟ್ಟಿದ ಕೆಲವೆ ತಿಂಗಳಲ್ಲಿ ಹಸಿವಿನಿಂದ** ಸಾಯುವ **ಸ್ಥಿತಿಯಲ್ಲಿತ್ತು. ಯಾರೋ ಒಬ್ಬರು ಇದನ್ನು ಬೀದಿಯಲ್ಲಿ ಅನಾಥವಾಗಿ ಬಿಟ್ಟಿದ್ದರು. ಇದನ್ನು ನೋಡಿದ ಕೂಡಲೆ** ಇದರ ಮೇಲೆ ನನಗೆ ಕರುಣೆ ಹುಟ್ಟಿತು. ಇದನ್ನು ಎತ್ತಿಕೊಂಡು ಬಂದು ಸಾಕಿದೆ. ನನ್ನ ಮೇಲೆ ಈ ನಾಯಿ ತುಂಬಾ ವಿಶ್ವಾಸವನ್ನು ತೋರಿಸಿತು. ಇದನ್ನೇ ಪ್ರಾಣಸ್ನೇಹಿತನನ್ನಾಗಿ ಭಾವಿಸಿ ಸಾಕುತ್ತಿದ್ದೇನೆ. ಅಷ್ಟೇ ಅಲ್ಲದೆ ಇನ್ನೊಬ್ಬ ಸ್ನೇಹಿತನು ಬೇಕೆಂದು ಇಷ್ಟಪಟ್ಟೆ. ಆ ಸ್ನೇಹಿತನು ಈ ನಾಯಿಗಿಂತ ಹೆಚ್ಚಿನ ಕಷ್ಟವನ್ನು ಅನುಭವಿಸಿರುವನಾಗಿಯೂ ಮಾನವ ಸಮುದಾಯದ ಕಷ್ಟಗಳು ಮತ್ತು ದುಃಖಗಳನ್ನು ಅರಿತವನಾಗಿಯೂ ಅಂತಹ ಕಷ್ಟಗಳನ್ನು ಸಹಿಸಿಕೊಳ್ಳಲು ಸಹಕಾರ ನೀಡುವವನಾಗಿಯೂ, ಪ್ರಕೃತಿಯ ಹಿತವನ್ನೇ ಕಾಪಾಡುವವನಾಗಿಯೂ ಅವನೊಂದಿಗೆ ನಾನು ಸಂತೋಷವನ್ನು ಹಂಚಿಕೊಳ್ಳಲು ಅರ್ಹತೆಯಿರುವವನಾಗಿಯೂ ಇರುವ ಸ್ನೇಹಿತನ್ನೇ ಪಡೆಯಲು ಇಷ್ಟ ಪಟ್ಟೆ".

ಹೊಲೆಮಾದಿಗರು ತಿನ್ನುವುದನ್ನು ತಡೆಯಲಿಕ್ಕಾಗಿ ಬ್ರಾಹ್ಮಣರು ಸ್ಮಶಾನದಲ್ಲಿ ಇಡುವ ತಿಂಡಿ ತಿನಿಸುಗಳಲ್ಲಿ ವಿಷವನ್ನು ಬೆರೆಸಿ ಇಡುವುದು ಸ್ವಭಾವವಾಗಿತ್ತು. ಆದುದರಿಂದ ನನಗೆ ನಂಬಿಕೆ ಬರಲಿ ಎಂದು ಅವಳು ಹಣ್ಣುಗಳನ್ನು ತಂದಿಟ್ಟಿದ್ದಳು.

"ಬಹಳ ಸಣ್ಣವಾದರೂ ಲತೆಗಳೆರಡು ಒಂದನ್ನೊಂದು ತಬ್ಬಿಕೊಂಡಿರುವುದರಿಂದ ಗಾಳಿಯ ಹೊಡೆತವನ್ನು ಎದುರಿಸಿ ನಿಲ್ಲುತ್ತವೆ. ಈ ರೀತಿ ಬದುಕಲು ನನಗೆ ಒಬ್ಬ ಒಳ್ಳೆಯ ಹೆಣ್ಣು ಮಗಳನ್ನು ಜೊತೆಯಿರಲು ನೀಡಿ ದೇವನು ನನ್ನ ಆಸೆಯನ್ನು ಈಡೇರಿಸಿದನು. ನನ್ನ ದುಃಖದ ಮೂಲದಲ್ಲಿಯೇ ನಾನು ಸಂತೋಷದ ಬೇರುಗಳನ್ನು ಕಂಡೆ. ಒಂದು ರಾತ್ರಿ ಬ್ರಾಹ್ಮಣರ ಸ್ಮಶಾನಕ್ಕೆ ಹೋದೆ. ಬೆಳದಿಂಗಳ ಬೆಳಕು ಭೂಮಿಯನ್ನು ಆವರಿಸಿತ್ತು. ಆ ಸಮಯದಲ್ಲಿ ಅರಿಸಿನ ಬಣ್ಣದ ಸೀರೆಯಲ್ಲಿ ಮುಸುಕು ಹಾಕಿಕೊಂಡು ತನ್ನ ಸೌಂದರ್ಯವನ್ನು ಚಂದಿರನ ಕಿರಣಗಳಿಗೆ ತೋರಿಸುತ್ತಾ ನಿಂತಿರುವ ಬ್ರಾಹ್ಮಣ ಮಹಿಳೆಯೊಬ್ಬಳನ್ನು ನೋಡಿದೆ. ನನಗೆ ಕಷ್ಟವನ್ನು ಮಾತ್ರ ನೀಡುವ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಅವಳನ್ನು ನೋಡಿದ ಕೂಡಲೆ ಮನಸ್ಸಿನ ಅಂತರಾಳದಲ್ಲಿ ಭಯವಾಯಿತು. ಆದ್ದರಿಂದ ಸ್ವಲ್ಪ ಹಿಂದೆ ಸರಿದೆ. ಆದರೆ ಬಹಳ ಜಾಗರೂಕತೆಯಿಂದ್ದ ಎಚ್ಚರದಿಂದ ಅವಳು ಮಾಡುತ್ತಿರುವ ಕಾರ್ಯಗಳನ್ನು ನೋಡಿ ಕರುಣೆಯಿಂದ ಅವಳ ಹತ್ತಿರ ಹೋದೆ. ತನ್ನ ಜಾತಿಯ ನಿಯಮಗಳ ಪ್ರಕಾರ ಸತ್ತು ಹೋದ ತಂದೆಯ ಶವದೊಂದಿಗೆ ಜೀವಂತವಾಗಿದ್ದ ತಾಯಿಯನ್ನೂ ಸೇರಿಸಿ ಬೆಂಕಿಯಲ್ಲಿ ಸುಟ್ಟ ಸ್ಥಳವನ್ನೇ ನೋಡುತ್ತಿದ್ದಳು. ನಂತರ ತಾಯಿಯನ್ನೇ ಸುಟ್ಟ ಬೂದಿಯ ಹತ್ತಿರ ತಿಂಡಿ ತಿನಿಸುಗಳನ್ನು ಇಟ್ಟು ತಾಯಿಯನ್ನು ನೆನೆದು ನಮಸ್ಕರಿಸಿದಳು. ನನ್ನ ಬದುಕಲ್ಲೇ ಮೊಟ್ಟ ಮೊದಲ ಬಾರಿಗೆ ನನಗಿಂತ ಹೆಚ್ಚಿನ ದುಃಖದಲ್ಲಿರುವ ಇನ್ನೊಬ್ಬಳನ್ನು ನೋಡಿದಾಗ ನನ್ನ ಕಣ್ಣುಗಳಲ್ಲಿ ಕಣ್ಣೀರು ತುಂಬಿಕೊಂಡವು. 'ಹೀನ ಮತ್ತು ಕೀಳು ಎಂಬ ಬೇಡಿಯಿಂದ ನಾನು ಬಂಧಿಸಲ್ಪಟ್ಟಿದ್ದೇನೆ. ಆದರೂ ನನ್ನ ಪರಿಸ್ಥಿತಿಯಲ್ಲಿ ನಾನು ಸಮಾಧಾನದಿಂದಲಾದರೂ ಬದುಕುತ್ತೇನೆ. ಆದರೆ ನೀನಾದರೋ ಈ ಭೂಮಿಯ ಮೇಲೆ ಯಾವಾಗಲೂ ಕಂಪಿಸುತ್ತಿರುವೆ. ಯಾವ ಕರ್ಮವು ನಿನ್ನ ತಾಯಿಯನ್ನು ನಿನ್ನಿಂದ ಕಿತ್ತುಕೊಂಡಿತ್ತೋ ಅದೇ ಕರ್ಮವು ಮುಂದೊಂದು ದಿನ ನಿನ್ನನ್ನೂ ಕರೆದುಕೊಳ್ಳುತ್ತದೆ. ನಿನಗಿರುವುದು ಒಂದೇ ಜನ್ಮ. ಸಾವು ತಾನಾಗಿ ನಿನ್ನ ಬಳಿ ಸುಳಿಯದಿದ್ದರೂ ನಿನ್ನ ಗಂಡನ ಮರಣವು ನಿನ್ನನ್ನು ಜೀವಂತವಾಗಿಯೇ ಸಾವಿನ ಚಿತೆಗೆ ಕರೆದೊಯ್ಯುವುದು ತಪ್ಪುವುದಿಲ್ಲ'.

"ಹೀಗೆಂದು ಮನಸ್ಸಿನಲ್ಲಿಯೇ ಅವಳೊಂದಿಗೆ ಮಾತಾಡಿದೆ. ಅವಳ ಈ ಪರಿಸ್ಥಿತಿಯನ್ನು ನೆನೆದು ಅತ್ತೂಬಿಟ್ಟೆ. ಅವಳೂ ಸಹ ಮನದಲ್ಲಿಯೇ ತನ್ನ ದುಃಖವನ್ನು ತೋಡಿಕೊಂಡು ಅತ್ತಳು. ಕಣ್ಣೀರು ತುಂಬಿದ ನಮ್ಮಿಬ್ಬರ ಕಣ್ಣುಗಳು ಕೂಡಿದವು. ಬಡವರ ಹಾಗೆ ಅವು ಪ್ರೀತಿಯಿಂದ ಪಿಸುಗುಟ್ಟಿದವು. ಕೂಡಲೇ ತನ್ನ ನೋಟದ ದಿಕ್ಕನ್ನು ಬದಲಾಯಿಸಿಕೊಂಡು, ತಲೆಯ ಮೇಲೆ ಮುಸುಕು ಧರಿಸಿ ಆ ಸ್ಥಳದಿಂದ ಹೊರಟುಹೋದಳು. ಎರಡನೆಯ ರಾತ್ರಿಯೂ ನಾನು ಅದೇ ಸ್ಥಳಕ್ಕೆ ಹೋದೆ. ಈ ಬಾರಿ ತನ್ನ ತಾಯಿಯ ಸುಟ್ಟ ಬೂದಿಯಿರುವ ಸ್ಥಳದಲ್ಲಿ ಹಿಂದಿನ ದಿನಕ್ಕಿಂತಲೂ ಹೆಚ್ಚಿನ ತಿಂಡಿ ತಿನಿಸುಗಳನ್ನು ಇಟ್ಟಿದ್ದಳು, ಅವುಗಳು ನನಗೆ ಅಗತ್ಯವೆಂದು ಅವಳು ತೀರ್ಮಾನಿಸಿರಬಹುದೆಂದು ಅನಿಸಿತು. ಹೊಲೆಮಾದಿಗರು ತಿನ್ನುವುದನ್ನು ತಡೆಯಲಿಕ್ಕಾಗಿ ಬ್ರಾಹ್ಮಣರು ಸ್ಮಶಾನದಲ್ಲಿ ಇಡುವ ತಿಂಡಿ ತಿನಿಸುಗಳಲ್ಲಿ ವಿಷವನ್ನು ಬೆರೆಸಿ ಇಡುವುದು ಸ್ವಭಾವವಾಗಿತ್ತು. ಆದುದರಿಂದ ನನಗೆ ನಂಬಿಕೆ ಬರಲಿ ಎಂದು ಅವಳು ಹಣ್ಣುಗಳನ್ನು ತಂದಿಟ್ಟಿದ್ದಳು. ಮಾನವತೆ ತುಂಬಿದ ಅವಳ ಈ ಇಂತಹ ವರ್ತನೆಯಿಂದ ನನಗೆ ಹೃದಯ ತುಂಬಿಬಂದಿತ್ತು. ಅವಳು ತೋರಿದ ಮಾನವೀಯ ಕಳಕಳಿಯನ್ನು ಗೌರವಿಸಲು ಹಣ್ಣುಗಳನ್ನು ಸ್ವೀಕರಿಸಲು ತೀರ್ಮಾನಿಸಿದೆ. ಆದ್ದರಿಂದ ಹಣ್ಣುಗಳಿದ್ದ ಸ್ಥಳಗಳಲ್ಲಿ ಕಸೆಕಸೆಯ ಹೂಗಳನ್ನು ಇಟ್ಟೆ. ಅವಳ ದುಃಖದಲ್ಲಿ ನಾನೂ ಭಾಗಿಯಾಗುತ್ತೇನೆಂಬುದನ್ನು ಕಸಕಸೆಯ ಗಿಡದ ಹೂಗಳು ಸೂಚಿಸಿದವು".

"ಮೂರನೆ ದಿನದ ರಾತ್ರಿ ನನ್ನ ಮನಸ್ಸನ್ನು ಅವಳು ಅರ್ಥಮಾಡಿಕೊಂಡಿರುವುದನ್ನು ತಿಳಿದೆ. ಹೇಗೆಂದರೆ ನಾನು ಇಟ್ಟಿದ್ದ ಹೂಗಳ ಮೇಲೆ ನೀರನ್ನು ಎರಚಿದ್ದಳು. ಅಷ್ಟೇ ಅಲ್ಲದೆ ಬೂದಿಯಿರುವ **ಸ್ಥಳದಿಂದ** ಸ್ವಲ್ಪ ದೂರದಲ್ಲಿ ಹಣ್ಣುಗಳನ್ನು ಇಟ್ಟಿದ್ದಳು. **ಅವಳು ತೋರಿಸಿದ** ಪ್ರೀತಿ ಮತ್ತು ವಿಶ್ವಾಸದ ಭಾವನೆಗಳು ನನ್ನ ಮನಸ್ಸಿನಲ್ಲಿ ಧೈರ್ಯವನ್ನೇ **ತುಂಬಿದವು**. ಆದರೂ ಅವಳ ಭಾವನೆಗಳಿಗೆ ಯಾವುದೇ ಕಷ್ಟ ನೀಡಬಾರದೆಂದು ತೀರ್ಮಾನಿಸಿದೆ. ಆದುದರಿಂದ ಹೊಲೆಮಾದಿಗನಂತೆ ಮಾತನಾಡಲು ಪ್ರಯತ್ನಿಸದೆ, ಮಾನವನಂತೆ ನನ್ನ ಮನಸ್ಸಿನ ಅಂತರಾಳದಲ್ಲಿ ಅವಳು ತುಂಬಿದ ಪ್ರೀತಿಯ ಬಗ್ಗೆ ಅವಳಿಗೆ ವಿವರಿಸಲು ಪ್ರಾರಂಭಿಸಿದೆ. ಭಾರತದ ಸಂಪ್ರದಾಯದಂತೆ ಹೂಗಳ ಮೂಲಕವೇ ಮಾತನಾಡಲು ಪ್ರಾರಂಭಿಸಿದೆ. ಕಸಕಸೆ ಹೂಗಳ ಜೊತೆಯಲ್ಲಿ ಸೂರ್ಯಕಾಂತಿ ಹೂಗಳನ್ನು ಇಟ್ಟಿದ್ದೆ. ಮರುದಿನ ರಾತ್ರಿ ನೋಡಿದಾಗ ಕಸಕಸೆ ಹೂವು ಮತ್ತು ಸೂರ್ಯಕಾಂತಿ ಹೂವು ಸಹ ನೀರಿನಲ್ಲಿ ನೆನೆದಿರುವುದನ್ನು ನೋಡಿದೆ. ನಾಲ್ಕನೆಯ ದಿನ ಮತ್ತಷ್ಟು ಧೈರ್ಯದಿಂದ ಕಸಕಸೆ, ಸೂರ್ಯಕಾಂತಿ ಹೂಗಳೊಂದಿಗೆ ಚಮ್ಮಾರರು, ಚರ್ಮವನ್ನು ಕರಿಬಣ್ಣಕ್ಕೆ ಬದಲಾಯಿಸಲು ಬಳಸುವ ಪಾಪಸ್ ಕಳ್ಳಿಯ ಹೂವನ್ನು ಸೇರಿಸಿ **ಇಟ್ಟಿದ್ದೆ. ಇದು ನನ್ನ ತಾಳ್ಮೆಯಿಂದ ಕೂಡಿದ** ಪ್ರೀತಿಗೆ **ಸಾಕ್ಷಿಯಾಗಿತ್ತು. ಮಾರನೆಯ ದಿನ ಮುಂಜಾನೆಯೆ** ಸ್ಮಶಾನಕ್ಕೆ ಓಡಿದೆ. ಪಾಪಸ್‌ಕಳ್ಳಿಯ ಹೂವಿನ ಮೇಲೆ ನೀರು ಹಾಕದ ಕಾರಣ ಆ ಹೂವು ಬಾಡಿ ಹೋಗಿರುವುದನ್ನು ನೋಡಿದೆ. ಆ ದಿನದ ರಾತ್ರಿವರೆಗೂ ಕಷ್ಟಪಡುತ್ತಾ ಮೌನದೊಂದಿಗೆ ಹೋರಾಡುತ್ತಿದ್ದೆ. ಐದನೆ ದಿನದ ರಾತ್ರಿಯೂ ಬಂತು. ರಾತ್ರಿಯಾದ ಕೂಡಲೆ ಸ್ಮಶಾನಕ್ಕೆ ಹೋದೆ.

ಈ [illegible] ಹೂಗಳನ್ನೇ [illegible]. ಹೂವಿನ ದಳಗಳು. ಕಪ್ಪುಬಣ್ಣವಾಗಿರುವ ಅದರ ಮಧ್ಯಭಾಗವು ನನ್ನನ್ನು ಉರಿಸುತ್ತಿರುವ ಬೆಂಕಿಯನ್ನೇ ಗುರುತಿಸಿತ್ತು. ಈ ಬಾರಿ ಈ ಹೂವು ಸಹ ಪಾಪಸ್ ಕಳ್ಳಿಯ ಹೂವಿನಂತೆ ಇತ್ತು. ಹಗಲು-ರಾತ್ರಿ ಬದಲಾಗಿ, ಭೂಮಿಗೆ ಬೆಳಕು ಮತ್ತು ಕತ್ತಲನ್ನು ನೀಡಿದರೆ ನನ್ನ ಮನಸ್ಸು ಮಾತ್ರ ದುಃಖದ ಕತ್ತಲಲ್ಲಿ ಮುಳುಗಿ ಹೋಗಿತ್ತು. ಮರುದಿನ ಭಯ ಮತ್ತು ಆಸೆಯ ಗುರುತಾಗಿ ಮುಳ್ಳಿನೊಂದಿಗೆ ಇರುವ ಗುಲಾಬಿ ಹೂವಿನ ಮೊಗ್ಗನ್ನು ಆ ಸ್ಥಳದಲ್ಲಿ ಇಟ್ಟು ಬಂದೆ. ಮಾರನೆಯ ದಿನ ಮುಂಜಾನೆಯಲ್ಲಿ ಹೋಗಿ ನೋಡಿದಾಗ ಆ ಗುಲಾಬಿಯ ಹೂವು ಬೂದಿಯಿರುವ ಸ್ಥಳದಿಂದ ದೂರದಲ್ಲಿ ಬಿಸಾಡಿರುವುದನ್ನು ನೋಡಿ ಮನಸ್ಸಿಗೆ ತಡೆಯ್ಲುಲಾರದಷ್ಟು ನೋವಾಯಿತು. ಮನಸ್ಸು ಸ್ಥಿರತೆಯನ್ನು ಕಳೆದುಕೊಂಡರೆ ಮಾಡುವುದೇನೆಂಬ ಆತಂಕ ಹೆಚ್ಚಾಯಿತು. ಏನೇ ಆಗಲಿ ಇಂದು ಅವಳೊಂದಿಗೆ ಭಾಷೆಯಲ್ಲಿಯೇ ಮಾತನಾಡಬೇಕೆಂದು ತೀರ್ಮಾನಿಸಿಕೊಂಡೆ. ಅದಕ್ಕಾಗಿ ರಾತ್ರಿಯು ಬೇಗನೆ ಬರಲಿ ಎಂದು ಪ್ರಾರ್ಥಿಸುತ್ತಿದ್ದೆ. ರಾತ್ರಿಯಾಯಿತು. ಅವಳನ್ನು ಕಂಡ ಕೂಡಲೆ ಅವಳ ಪಾದಗಳಿಗೆ ಶರಣಾದೆ. ನಾನು ಕೊಂಡು ಹೋದ ಗುಲಾಬಿ ಹೂವನ್ನು ಅವಳಿಗೆ ಕೊಟ್ಟು ಅಡ್ಡ ನಿಂತೆ".

"ಅದಕ್ಕೆ ಅವಳು, ಓ ದುಃಖಿತನೆ, ನೀನು ನನ್ನ ಬಳಿ ಪ್ರೀತಿಯ ಬಗ್ಗೆ ಪ್ರೀತಿಯಿಂದ ಮಾತನಾಡುತ್ತೀಯ. ನಿನಗೆ ನಾನೆಂತಹ ಪರಿಸ್ಥಿತಿಯಲ್ಲಿದ್ದೇನೆಂದು ಗೊತ್ತಿಲ್ಲ. ಇನ್ನು ಕೆಲವೆ ಗಂಟೆಗಳಲ್ಲಿ ನಾನು ಈ ಭೂಮಿಯ ಮೇಲೆ ಜೀವಂತವಾಗಿ ಇರುವುದೇ ಇಲ್ಲ. ನಾನು ಇಲ್ಲಿ ಬರುವುದಕ್ಕೆ ಸ್ವಲ್ಪ ಸಮಯ ಮುಂಚಿತವಾಗಿಯೆ ನನ್ನ ಗಂಡ ತೀರಿಕೊಂಡನು. ಸತ್ತು ಹೋದ ನನ್ನ ಗಂಡನೊಂದಿಗೆ ನಾನು ಕೂಡ ನನ್ನ ತಾಯಿಯಂತೆ ಸಹಗಮನ ನಿಯಮಕ್ಕೆ ಒಳಪಟ್ಟು ಬೆಂಕಿಯ ಜ್ವಾಲೆಯನ್ನೆ ತಬ್ಬಿಕೊಳ್ಳಲು ಸಿದ್ಧವಾಗುತ್ತಿದ್ದೇನೆ. ನನ್ನ ಗಂಡನು ವಯಸ್ಸಿನಲ್ಲಿ ಮುದುಕನಾಗಿದ್ದ. ನಾನು ಚಿಕ್ಕ ಮಗುವಾಗಿರುವಾಗಲೆ ನನಗೆ ವಿವಾಹ ಮಾಡಿದರು. ಆದ್ದರಿಂದ ನನ್ನ ಬಿಳ್ಕೊಡುಗೆಯನ್ನೇ ಪಡೆದು ನನ್ನಿಂದ ದೂರ ಪ್ರದೇಶಕ್ಕೆ ಹೋಗು. ನನ್ನನ್ನು ಮರೆತುಬಿಡು ಇನ್ನು ಮೂರೇ ದಿನಗಳಲ್ಲಿ ನಾನು ಒಂದು ಹಿಡಿಯಷ್ಟು ಬೂದಿಯಾಗಿ ಬಿಡುವೆ ಎಂದು ನಿಟ್ಟುಸಿರಿಟ್ಟಳು".

"ನನಗಾದ ಸಂಕಟವನ್ನು ತಡೆಯಲಾಗಲಿಲ್ಲ. ಆದರೂ ಮಾತನಾಡಿದೆ. ಬಡ ಬ್ರಾಹ್ಮಣ ಹೆಣ್ಣು ಮಗಳೇ, ಈ ಸಮುದಾಯವು ನಿನಗೆ ಹಾಕಿರುವ ಸಂಕೋಲೆಗಳನ್ನೇ ಪ್ರಕೃತಿಯು ಒಡೆದು ಹಾಕಿದೆ. ಮೂಢನಂಬಿಕೆಯ ಕಟ್ಟುಗಳನ್ನು ನೀನು ಕಿತ್ತು ಬಿಸಾಡಿ ನನ್ನನ್ನು ವರಿಸುವ ಮೂಲಕ ನೀನು ಈ ಸಂಕೋಲೆಗಳಿಂದ ಹೊರಬರಬೇಕು ಎಂದೆ. ಈ ಮಾತುಗಳನ್ನು ಕೇಳಿದೊಡನೆ ಅವಳು ಕಣ್ಣೀರು ಸುರಿಸುತ್ತಾ ನನ್ನ ಈ ಪರಿಸ್ಥಿತಿಯಲ್ಲಿ ಎಂತಹಾ ಮಾತಾಡಿದೆ ನೀನು. ನಿನ್ನೊಂದಿಗೆ ಅಪಮಾನದಲ್ಲಿ ಬದುಕಲು ನಾನು ಸಾವಿನಿಂದಲೇ ತಪ್ಪಿಸಿಕೊಂಡು ಬರಬೇಕು ಎಂದು ಹೇಳುವುದು ಸರಿಯಲ್ಲ. ನಿಜವಾಗಲೂ ನೀನು ನನ್ನನ್ನು ಸಾಯಲು ಸಹಕರಿಸಿ ಬಿಟ್ಟು ಬಿಡು ಎಂದಳು. ಈ ಮಾತನ್ನು ಕೇಳಿದ ನಾನು 'ನಿನ್ನನ್ನು ಕಷ್ಟಗಳಿಂದ ಕಾಪಾಡುವುದು ನನ್ನ ಕಷ್ಟಗಳಲ್ಲಿ ನಿನ್ನ ಮುಳುಗಿಸುವುದಕ್ಕೆ ಅಲ್ಲ. ಪ್ರೀತಿಯ ಬ್ರಾಹ್ಮಣ ಹೆಣ್ಣುಮಗಳೆ ನಾವಿಬ್ಬರೂ ಕಾಡಿನೊಳಗೆ ಹೋಗೋಣ. ಮನುಷ್ಯರಿಗಿಂತಲೂ ಹುಲಿಯನ್ನು ನಂಬಬಹುದು. ನಾವು ನಂಬುವ ದೇವನು ನಮ್ಮನ್ನು ಕೈಬಿಡುವುದಿಲ್ಲ. ಬಾ. ಇಲ್ಲಿಂದ ಓಡಿ ಹೋಗೋಣ. ನಮ್ಮ ಪ್ರೀತಿ, ಈ ರಾತ್ರಿಯ ಕತ್ತಲೆ, ನಿನ್ನ ಕಷ್ಟ, ನಿನ್ನ ನಿರ್ಮಲವಾದ ಮನಸ್ಸು ಇವೆಲ್ಲವೂ ನಮಗೆ ಸಹಕರಿಸುತ್ತವೆ. ಸುಖವನ್ನೇ ಕಾಣದಿರುವ ವಿಧವೆಯಾದ ಹೆಣ್ಣೇ, ಬಾ ಓಡಿ ಹೋಗೋಣ. ನಿನ್ನ ಸಹಗಮನಕ್ಕೆ ಸಿದ್ಧತೆ ನಡೆಯುತ್ತಿದೆ. ಸತ್ತು ಹೋದ ನಿನ್ನ ಗಂಡ ಆ ಬೆಂಕಿಗೆ ನಿನ್ನನ್ನು ಕರೆಯುತ್ತಾ ಇದ್ದಾನೆ. ಗಾಳಿಗೆ ಬಳಕುವ ಒಂಟಿ ಬಳ್ಳಿಯಂತೆ ಇರುವಳೇ, ನನ್ನ ಆಸರೆ ಪಡೆದುಕೊ. ನಾನು ನಿನಗೆ ತಾಳಿ ಮರವಾಗಿರುತ್ತೇನೆ" ಎಂದು ಅವಳ ಹತ್ತಿರ ಜೋರಾಗಿ ಹೇಳಿದೆ".

"ನನ್ನ ಮಾತು ಕೇಳಿದ ಅವಳು ಮತ್ತೊಮ್ಮೆ ನಿಟ್ಟುಸಿರುಬಿಟ್ಟಳು. ಒಂದು ಕ್ಷಣ ತನ್ನ ತಾಯಿಯ ಬೂದಿಯನ್ನೇ ನೋಡುತ್ತಾ ನಿಂತಿದ್ದಳು, ನಂತರ ನಕ್ಷತ್ರಗಳು ಮಿನುಗುವ ಆಕಾಶವನ್ನು ನೋಡಿದಳು. ನಂತರ ಒಂದು ಕೈಯಲ್ಲಿ ನನ್ನನ್ನು ಹಿಡಿದಳು; ಇನ್ನೊಂದು ಕೈಯಲ್ಲಿ ಗುಲಾಬಿ ಹೂವನ್ನು ಹಿಡಿದು ನನ್ನ ತಬ್ಬಿಕೊಂಡಳು. ಇಬ್ಬರೂ ಅಲ್ಲಿಂದ ಹೊರಟೆವು. ಇಬ್ಬರೂ ವೇಗವಾಗಿ ನಡೆದೆವು. ಮುಸುಕು ಹಾಕಿದ ಅವಳು ಗಂಗಾನದಿಯಲ್ಲಿ ಬಿದ್ದು ಸತ್ತು ಹೋದಳು ಎಂದು ಅವಳ ಬಂಧುಗಳು ತಿಳಿದುಕೊಳ್ಳಲಿ ಎಂದು ಅವಳು ಮುಸುಕು ಹಾಕಿರುವ ಬಟ್ಟೆಯನ್ನು ಗಂಗಾನದಿಯಲ್ಲಿ ಬಿಸಾಡಿದೆವು. ನಂತರ ಇಬ್ಬರು ಹೊಸ ದಿಕ್ಕಿನಲ್ಲಿ ಯಾರೊಬ್ಬರ ಕಣ್ಣಿಗೂ ಬೀಳದಂತೆ ನಡೆದೆವು. ಹಗಲಿನಲ್ಲಿ ಕಾಡಿನಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದೆವು. ರಾತ್ರಿಗಳಲ್ಲಿ ನದಿ ತೀರದ ದಾರಿಯಲ್ಲೇ ನಡೆದೆವು. ಕೊನೆಯದಾಗಿ ಈ ಪ್ರದೇಶಕ್ಕೆ ಬಂದು ಸೇರಿದೆವು. ಈ ದೇಶವು ಹಿಂದೊಂದು ಕಾಲದಲ್ಲಿ ಯುದ್ಧದಿಂದ ಎಲ್ಲರೂ ಸತ್ತು ನಿರ್ಜನವಾಗಿತ್ತು. ಇಲ್ಲಿ ಸೇರಿದ ಮೇಲೆ ಗುಡಿಸಲನ್ನು ಕಟ್ಟಿಕೊಂಡು ಚಿಕ್ಕದಾಗಿ ಒಂದು ತೋಟವನ್ನು ನಿರ್ಮಿಸಿಕೊಂಡು ಸಂತೋಷವಾಗಿ ಬದುಕುತ್ತಿದ್ದೇವೆ. ಸೂರ್ಯನನ್ನು ಆರಾಧಿಸುವಂತೆ ನಾನು ನನ್ನ ಹೆಂಡತಿಯನ್ನೇ ಆರಾಧಿಸುತ್ತೇನೆ. ಚಂದ್ರನನ್ನು ಪ್ರೀತಿಸುವಂತೆ ನಾನು ಅವಳನ್ನು ಪ್ರೀತಿಸುತ್ತೇನೆ. ಯಾರು ಇಲ್ಲದ ಈ ಪ್ರದೇಶದಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದೇವೆ. ಇಡೀ ಸಮುದಾಯವು ನಮ್ಮನ್ನು ನಿರಾಕರಿಸಿತ್ತು. ಆದರೆ ನಾವಿಬ್ಬರೇ ಒಬ್ಬರನ್ನೊಬ್ಬರು ಗೌರವಿಸಿಕೊಳ್ಳುತ್ತೇವೆ. ಆದುದರಿಂದ ನಾನು ಅವಳ ಹತ್ತಿರ ತೋರಿಸುವ ಗೌರವ ಮತ್ತು ಪ್ರೀತಿ, ಅವಳು ನನಗೆ ನೀಡುವ ಗೌರವ ಇವುಗಳು ನಮಗೆ ಒಂದು ದೇಶದ ಜನರ ಹೊಗಳಿಕೆಗಿಂತಲೂ ಹೆಚ್ಚಿನದಾಗಿರುತ್ತದೆ. ಅಷ್ಟೆ ಅಲ್ಲದೆ ಬಹಳ ಸಂತೋಷವಾಗಿರುತ್ತದೆ" ಎಂದೆನ್ನುತ್ತಾ ಗುರುವ ತೊಟ್ಟಿಲಿನಲ್ಲಿ ಮಲಗಿರುವ ಮಗುವನ್ನು, ಆನಂದಬಾಷ್ಪಗಳಿಂದ ತುಂಬಿರುವ ತನ್ನ ಹೆಂಡತಿಯ ಕಣ್ಣುಗಳನ್ನು ನೋಡುತ್ತಿದ್ದನು.

ಇದೆಲ್ಲವನ್ನು ಕೇಳಿದ ತಜ್ಞರ ಕಣ್ಣುಗಳು ಹನಿಗೂಡಿದವು. ಅವರು ತಮ್ಮ ಕಣ್ಣೀರನ್ನು ಒರೆಸಿಕೊಳ್ಳುತ್ತಾ "ವಾಸ್ತವದಲ್ಲಿ ಮನುಷ್ಯನ ಹತ್ತಿರ ಯಾವುದು ಶ್ರೇಷ್ಠವಾಗಿರುತ್ತದೆಯೋ, ಅದು ಅವರ ದ್ವೇಷಕ್ಕೆ ಒಳಗಾಗಿರುತ್ತದೆ. ಯಾವುದನ್ನು ಅವರು ದ್ವೇಷಿಸುತ್ತಾರೊ ಅದು ಅವರುಗಳಿಂದ ಶ್ರೇಷ್ಠತೆಯೆಂದು ಗೌರವಿಸಲ್ಪಡುತ್ತದೆ. ದೇವನು ನ್ಯಾಯವಂತ. ಹೆಸರಾಂತ ಜಗನ್ನಾಥ ದೇವಾಲಯದ ಪೂಜಾರಿಗಿಂತ, ನಿನ್ನನ್ನು ಸುತ್ತಿರುವ ಈ ಕತ್ತಲು ಪ್ರದೇಶದಲ್ಲಿ ನೀನು ಸಾವಿರಪಟ್ಟು ಆನಂದವನ್ನು ಅನುಭವಿಸುತ್ತೀಯ. ಆ ಪೂಜಾರಿ, ಅವರ ಸಮುದಾಯವು ಬದಲಾವಣೆಗೆ ಒಳಪಡಬೇಕಾಗಿದೆ. ಇಷ್ಟು ಶತಮಾನಗಳಿಂದಲೂ ನಿನ್ನ ಈ ಸುಂದರವಾದ ದೇಶವನ್ನು ಹಾಳು ಮಾಡಲು ಕಾರಣವಾಗಿರುವ ಒಳಜಗಳಗಳಿಗೂ, ಈ ದೇಶದ ಮೇಲೆ ಬೇರೆ ದೇಶದವರು ಮಾಡಿದ ಹಾನಿಗಳಿಗೂ ಈ ಬ್ರಾಹ್ಮಣರೇ ಕಾರಣರಾಗಿದ್ದಾರೆ. ಬಹಳ ಕ್ರೂರವಾದುದೇನೆಂದರೆ ಮಾನವತೆಯಿಲ್ಲದ ಅವರ ಧರ್ಮಕ್ಕೆ ಅವರೇ ಮೊದಲ ಬಲಿಯಾಗುತ್ತಾರೆ. ಜನರಿಗೆ ತಪ್ಪುಗಳನ್ನು ಕಲಿಸುತ್ತಾ ಬರುತ್ತಾರೆ. ಈ ಕಾರಣದಿಂದ ಸತ್ಯ, ಧರ್ಮ, ನ್ಯಾಯ, ನೀತಿ, ಮಾನವೀಯತೆ, ದೇವರ ಮೇಲಿನ ನಿಜವಾದ ಭಕ್ತಿ ಮುಂತಾದ ಮನುಕುಲಕ್ಕೆ ಅಗತ್ಯವಾದ ಮೌಲ್ಯಗಳು ಮತ್ತು ಭಾವನೆಗಳು ಎಲ್ಲವೂ ಇಲ್ಲದಂತಾಗಿ ಬ್ರಾಹ್ಮಣರೇ ತಪ್ಪುಗಳಲ್ಲಿ ಮುಳುಗಿ ಹೋಗಿದ್ದಾರೆ. ಈ ದೇಶದ ಜನರು ಮೂಢನಂಬಿಕೆ ಎಂಬ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾರೆ. ಆ ಸಂಕೋಲೆಗಳಿಂದ ಬ್ರಾಹ್ಮಣರು ಜನರನ್ನು ತಮ್ಮ ಇಚ್ಛೆಗೆ ತಕ್ಕಂತೆ ನಡೆಯುವ ಹಾಗೆ ಮಾಡುತ್ತಾರೆ. ಆಗಾಗ ಸ್ನಾನ ಮಾಡಲು, ಶುದ್ಧವಾಗಿರಲು ಮತ್ತು ವಂಚನೆಯಿಲ್ಲದ ಸಂತೋಷವನ್ನು ಅನುಭವಿಸದಂತೆ ಜನರನ್ನು ನಿರ್ಬಂಧಿಸುತ್ತಾರೆ. ಯಾವ ಭಾಷೆಯೂ ಒಪ್ಪಲಾರದ ಯಾವ ಮಾನವರೂ ಒಪ್ಪಲಾರದ ಕೃತಕವಾದ, ಕ್ರೂರವಾದ ಧರ್ಮದ ನಿಯಮಗಳ ಹೆಸರಿನಲ್ಲಿ ತಮ್ಮ ಬಂಧುಗಳಾಗಿರುವ ತಾಯಂದಿರನ್ನು, ಒಡಹುಟ್ಟಿದ ಹೆಣ್ಣುಮಕ್ಕಳನ್ನು, ತಮ್ಮ ಪುತ್ರಿಯರನ್ನು ಜೀವಂತವಾಗಿ ಬೆಂಕಿಯಲ್ಲಿಟ್ಟು ಸುಡುತ್ತಾರೆ. ಈ ರೀತಿ ಮಾಡುವುದು ಧರ್ಮದ ಶ್ರೇಷ್ಠತೆ ಎಂದು ಹೇಳುತ್ತಿದ್ದಾರೆ. ಇಂತಹ ಪ್ರಕೃತಿಯ



ನಿಯಮಗಳನ್ನು ಮೀರುವ ಬ್ರಾಹ್ಮಣರನ್ನು ಪ್ರಕೃತಿಯೇ ದಂಡಿಸುತ್ತದೆ. ಆದರೆ ನೀನು ಸತ್ಯವಂತನಾಗಿ, ಒಳ್ಳೆಯವನಾಗಿ, ನೀತಿವಂತನಾಗಿ ಅತಿಥಿ ಸತ್ಕಾರವನ್ನು ಮಾಡುವವನಾಗಿ, ಎಂತಹದರೂ ನಿರ್ಮಲ ಮನಸ್ಸಿನಿಂದ ಉಪಚಾರ ಮಾಡುವವನಾಗಿ ಇರಲಿಕ್ಕೆ ಸ್ವಾತಂತ್ರ್ಯ ಹೊಂದಿದ್ದೀಯ, ನಿನ್ನ ತಾಳ್ಮೆಯಿಂದಲೇ ನೀನು ದೇವರ ದಂಡನೆಯಿಂದಲೂ ದೇಶದ ಬ್ರಾಹ್ಮಣರ ನಿಯಮಗಳಿಂದ ನಿನ್ನ ಮೇಲಾಗುವ ದೌರ್ಜನ್ಯಗಳಿಂದಲೂ, ಕ್ರೂರತೆಯಿಂದಲೂ ವಿಮೋಚನೆಯನ್ನು ಪಡೆದಿರುವೆ ಎಂದರು. ಒಂದೇ ದಿನದಲ್ಲಿ ನಾವು ಒಬ್ಬರನ್ನು ಒಬ್ಬರು ಗೌರವಿಸುವ ಸ್ನೇಹಿತರಾದೆವು" ಎಂದರು ತಜ್ಞರು.

ಊಟ ಮುಗಿಸಿ ತುಂಬಾ ಹೊತ್ತು ಮಾತನಾಡಿದ ನಂತರ ತಜ್ಞರಲ್ಲಿ ಅನುಮತಿ ಪಡೆದು, ಅವರು ವಿರಮಿಸಲು ಅವಕಾಶ ಮಾಡಿಕೊಟ್ಟು ತಾನು ತನ್ನ ಹೆಂಡತಿ, ಮಗುವಿನೊಂದಿಗೆ ವಿಶ್ರಾಂತಿ ಪಡೆಯಲು ಹೋದನು. ಮಾರನೆ ಮುಂಜಾನೆಯ ಜೀವರಾಶಿಗಳಿಗೆಲ್ಲ ಹೊಸ ಬದುಕನ್ನು ನೀಡುತ್ತಿತ್ತು. ಆಲದ ಮರದ ಕೊಂಬೆಗಳಲ್ಲೂ ಗೂಡು ಕಟ್ಟಿ ಬಾಳುವ ಪಕ್ಷಿಗಳ ರಮ್ಯವಾದ ಸಂಗೀತದೊಂದಿಗೆ ಗುರುವ ಮತ್ತು ಅವನ ಹೆಂಡತಿಯು ದೇವರನ್ನು ಪ್ರಾರ್ಥಿಸುತ್ತಾ ಹಾಡುವ ಧ್ವನಿ ಕೇಳಿ ತಜ್ಞರು ನಿದ್ರೆಯಿಂದ ಎದ್ದರು. ಅವರು ನಿದ್ರೆಯಿಂದ ಎಚ್ಚರಗೊಂಡ ನಂತರ ಗುರುವನ ಹೆಂಡತಿಯು ಬಾಗಿಲನ್ನು ತೆರೆದು ಬಂದು ತಜ್ಞರಿಗೆ ನಮಸ್ಕರಿಸಿದಳು. ಇದು ಅವರಿಗೆ ಮನಸ್ಸಿನಲ್ಲಿ ತುಂಬಾ ಬೇಸರವನ್ನು ಉಂಟುಮಾಡಿತು. ಏಕೆಂದರೆ ಆ ಗುಡಿಸಲಿನಲ್ಲಿ, ಕುಟುಂಬಕ್ಕೆ ಒಂದೇ ಒಂದು ಚಾಪೆಯಿತ್ತು. ಆ ಚಾಪೆಯನ್ನು ಹಾಗೂ ಕೊಠಡಿಯನ್ನು ತಜ್ಞರಿಗೆ ಒದಗಿಸಿದ ಗುರುವನ ಕುಟುಂಬವು ಇಡೀ ರಾತ್ರಿ ಗುಡಿಸಲಿನ ಹೊರಗೆ ಇದ್ದುದನ್ನು ಕಂಡು ತಜ್ಞರು ಭಾವುಕಗೊಂಡರು.

ಸತಿಪತಿಯಿಬ್ಬರೂ ತಜ್ಞರಿಗೆ ನಮಸ್ಕರಿಸಿ ಬೆಳಿಗಿನ ಉಪಾಹಾರ ತಯಾರಿಸಲು ಮುಂದಾದರು. ಆ ಸಮಯದಲ್ಲಿ ತಜ್ಞರು ಗುರುವನ ತೋಟವನ್ನು ನೋಡಿ ಬಂದರು. ತೋಟ ಹಾಗೂ ಗುಡಿಸಲು ಎರಡೂ ಸಹ ಆಲದ ಮರದ ಬೇರುಗಳ ಮಧ್ಯದಲ್ಲಿ ಭದ್ರ ಕೋಟೆಯಂತೆ ಇದ್ದುದನ್ನು ಕಂಡರು. ಸಂತೋಷದ ಸಮಯದಲ್ಲಿ ಸೇರುವ ಜೋಡಿ ನಾಗರ ಹಾವುಗಳು ಒಂದನೊಂದು ಸುತ್ತಿಕೊಳ್ಳುವಂತೆ ಆ ಬೇರುಗಳು ಒಂದನೊಂದು ಸುತ್ತಿಕೊಳ್ಳುತ್ತ, ಆ ಗುಡಿಸಲು ಮತ್ತು ತೋಟಕ್ಕೆ ನೈಸರ್ಗಿಕ ಬೇಲಿಯಂತಿದ್ದವು. ಯಾವ ಬೇಲಿಯನ್ನು ದಾಟಿ ದೃಷ್ಟಿ ಹಾಯಿಸಲಾಗದಂತೆ ಆ ಬೇರುಗಳಿದ್ದವು. ನೇರವಾಗಿ ನಿಂತಿದ್ದ ಬಂಡೆಗಳು ಮಾತ್ರ ಮೇಲೆ ಕಾಣಿಸಿದವು. ಈ ಬಂಡೆಗಳಿದ್ದ ಕಡೆಯಿಂದ ಅಡ್ಡಾದಿಡ್ಡಿಯಾಗಿ ಬರುತ್ತಿದ್ದ ನೀರು ಗುರುವನ ತೋಟವನ್ನು ಸೇರುತ್ತಿತ್ತು. ಆ ತೋಟದಲ್ಲಿ ಕಿತ್ತಳೆ ಮರ, ತೆಂಗಿನ ಮರ, ಹಲಸಿನ ಮರ, ಮಾವಿನ ಮರ ಮತ್ತು ಬಾಳೆಗಳು ಬೆಳೆದು ಹೂವು, ಹಣ್ಣುಗಳಿಂದ ತುಂಬಿ ತುಳುಕುತ್ತಿದ್ದವು. ಅಲ್ಲದೆ ಇನ್ನು ಹಲವಾರು ರೀತಿಯ ಗಿಡಮರಗಳು ತೋಟದಲ್ಲಿ ಬೆಳೆದಿದ್ದವು. ಎಲೆಬಳ್ಳಿಯು ಅಡಿಕೆ ಮರವನ್ನು ಸುತ್ತಿಕೊಂಡಿದ್ದವು. ಸೂರ್ಯನ ಕಿರಣಗಳು ಅವುಗಳ ಮೇಲೆ ಮಿನುಗುತ್ತಿದ್ದವು. ಆ ತೋಟದ ಮರಗಳಲ್ಲೂ ಗೀಜಗಗಳು ಹಾಡುತ್ತಿದ್ದವು. ಮರಗಳು ತಮ್ಮ ಬುಡದಲ್ಲಿಯೂ ಸಹ ಹೂವು ಮತ್ತು ಹಣ್ಣುಗಳನ್ನು ಹೊತ್ತುಕೊಂಡು ನಿಂತಿದ್ದವು. ಕಬ್ಬಿನ ತೋಟದಲ್ಲಿ ಮೆಣಸಿನ ಬಳ್ಳಿಗಳು ಕಬ್ಬುಗಳನ್ನು ಸುತ್ತಿಕೊಂಡಿದ್ದವು. ಇವೆಲ್ಲವುಗಳ ಪರಿಮಳವನ್ನು ಹೊತ್ತೇ ತಂಗಾಳಿಯು ಬೀಸುತ್ತಿತ್ತು. ಬಂಗಾಳದ ಗುಬ್ಬಚ್ಚಿಗಳು ಇನೂರೆಂಬ ಪಕ್ಷಿಯೂ ಸಹ ಮರದ ಕೊಂಬೆಗಳಲ್ಲಿದ್ದ ತಮ್ಮ ಗೂಡುಗಳಿಂದ ಇಂಪಾಗಿ ಹಾಡುತ್ತಿದ್ದವು. ತಜ್ಞರು, ಕಲೆಯ ಬಗೆಗಿನ ನೆನಪುಗಳನ್ನು ಹಾಗೂ ಪ್ರಪಂಚದ ಆಸೆಗಳನ್ನೆಲ್ಲಾ ಬಿಟ್ಟು ಆ ತೋಟದ ಮರಗಳ ನೆರಳಿನಲ್ಲಿ ನಡೆಯುತ್ತಿದ್ದರು. ಆ ಸಂದರ್ಭದಲ್ಲಿ ಉಪಾಹಾರವನ್ನು ಮಾಡಲು ತಜ್ಞರನ್ನು ಗುರುವನು ಕರೆದನು. ನಿನ್ನ ತೋಟವು ಸುಂದರವಾಗಿದೆ. ನೋಡಲು ತುಂಬಾ ಖುಷಿಯಾಗಿದೆ. ತುಂಬಾ ಚಿಕ್ಕದಾಗಿರುವುದನ್ನು ಬಿಟ್ಟರೆ ಬೇರೆ ಯಾವ ಕೊರತೆಯನ್ನು ಕಾಣಲೂ ಸಾಧ್ಯವಿಲ್ಲ. ಈ ತೋಟವು ಸಣ್ಣದಾಗಿದ್ದರೆ ಪಕ್ಕದ ಜಾಗದಲ್ಲಿ ಹಸಿರಿನ ಉದ್ಯಾನವನವನ್ನು ಇನ್ನಷ್ಟು ವಿಶಾಲವಾಗಿ ಮಾಡುತ್ತಿದ್ದೆ ಎಂದು ತಜ್ಞರು ಹೇಳಿದರು. ಅವರಿಗೆ ಉತ್ತರಿಸಿದ ಗುರುವ. "ಪ್ರದೇಶವು ಎಷ್ಟು ಚಿಕ್ಕದಾಗಿರುತ್ತದೆಯೋ ಅಷ್ಟು ಸುರಕ್ಷಿತವಾಗಿರುತ್ತದೆ. ಒಂದು ಗುಬ್ಬಚ್ಚಿಯ ಗೂಡಿಗೆ ಒಂದೇ ಒಂದು ಎಲೆ ಸಾಕಾಗುತ್ತದೆ" ಎಂದನು.

ಮಾತನಾಡುತ್ತಲೇ ಇಬ್ಬರೂ ಗುಡಿಸಲಿಗೆ ಬಂದರು. ಗುಡಿಸಲಿನ ಒಂದು ಮೂಲೆಯಲ್ಲಿ ಗುರುವನ ಹೆಂಡತಿ ತನ್ನ ಮಗುವಿಗೆ ಹಾಲುಣಿಸುತ್ತಿದ್ದಳು. ನಂತರ ಸ್ವಲ್ಪ ಹೊತ್ತಿನಲ್ಲಿ ಉಪಾಹಾರ ತಯಾರು ಮಾಡಿದಳು. ಸಮಾಧಾನದಿಂದ ತಿಂಡಿ ಮುಗಿಸಿದ ನಂತರ ತಜ್ಞರು ಹೊರಡಲು ಸಿದ್ದರಾದರು. ಆ ಸಂದರ್ಭದಲ್ಲಿ ಗುರುವನು, "ಸ್ನೇಹಿತರೆ ರಾತ್ರಿಯೆಲ್ಲಾ ಸುರಿದ ಮಳೆಯಿಂದ ದಾರಿಯ ತುಂಬೆಲ್ಲಾ ನೀರು ತುಂಬಿ ನಡೆಯಲು ಸೂಕ್ತವಾಗಿಲ್ಲ. ಆದ್ದರಿಂದ ಇನ್ನೊಂದು ದಿನ ನಮ್ಮ ಗುಡಿಸಲಿನಲ್ಲಿಯೇ ಉಳಿದುಕೊಳ್ಳಬೇಕು" ಎಂದು ತಜ್ಞರನ್ನು ಬೇಡಿಕೊಂಡನು.

"ಇಲ್ಲ ಗೆಳೆಯ, ಇನ್ನೊಂದು ದಿನ ಉಳಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ನನ್ನೊಂದಿಗೆ ಇನ್ನು ಕೆಲವರು ಬಂದಿದ್ದಾರೆ ಎಂಬುದು ನಿಮಗೂ ಗೊತ್ತಿರುವ ವಿಚಾರ" ಎಂದುತ್ತರಿಸಿದರು ತಜ್ಞರು.

"ತಾವುಗಳು ಬ್ರಾಹ್ಮಣರಿರುವ ದೇಶವನ್ನೇ ಮೊದಲು ದಾಟಿಹೋಗಿ ಮನುಷ್ಯರೆಲ್ಲರನ್ನು ಸೋದರರಂತೆ ಭಾವಿಸಿ ಬದುಕುವ ನಿಮ್ಮ ನಾಡನ್ನೇ ಸೇರಲು ಇಚ್ಚಿಸಪಡುತ್ತಿದ್ದೀರಿ" ಎಂದ ಗುರುವ.

ತಜ್ಞರು ಎದ್ದು ನಿಂತು ನಿಟ್ಟುಸಿರಿಟ್ಟರು. ಇದನ್ನು ಗಮನಿಸಿದ ಗುರುವನು ತನ್ನ ಪತ್ನಿಗೆ ಸಂಜ್ಞೆ ಮಾಡಿದನು. ಅವಳು ಭೂಮಿಯನ್ನೇ ನೋಡುತ್ತಾ ಹೂವು, ಹಣ್ಣುಗಳಿಂದ ತುಂಬಿದ ಬುಟ್ಟಿಯನ್ನು ತಜ್ಞರಿಗೆ ನೀಡಿದಳು. "ಸ್ವಾಮಿ ನಾವು ಬಡವರು; ನಮ್ಮ ಬಡತನವನ್ನು ತಾವು ಇಲ್ಲಿ ಸಹಿಸಿಕೊಳ್ಳಬೇಕೆಂದು ಕೋರುತ್ತೇವೆ. ಭಾರತದ ಸಂಪ್ರದಾಯದಂತೆ ನಮ್ಮ ಮನೆಗೆ ಬಂದ ಬಂಧುಗಳಿಗೆ ಪರಿಮಳ ದ್ರವ್ಯಗಳನ್ನು ಕೊಡುವುದಕ್ಕೆ ನನ್ನಲ್ಲಿ ಹೂವುಗಳು ಹಣ್ಣುಗಳನ್ನು ಬಿಟ್ಟರೆ ಯಾವುದೂ ಇಲ್ಲ. ನನ್ನ ಹೆಂಡತಿಯ ಕೈಗಳಿಂದ ಹೂವುಹಣ್ಣುಗಳಿಂದ ತುಂಬಿರುವ ಬುಟ್ಟಿಯನ್ನು ಸ್ವೀಕರಿಸಲು ತಾವು ನಿರಾಕರಿಸುವುದಿಲ್ಲವೆಂದು ಭಾವಿಸುತ್ತೇನೆ. ಕಸಕಸೆ ಮತ್ತು ಸೂರ್ಯಕಾಂತಿ ಹೂಗಳು ನಮ್ಮಲ್ಲಿ ಇಲ್ಲ. ಆದರೆ ಮಲ್ಲಿಗೆ, ನುಗ್ಗೆ ಹೂಗಳು, ಕಿತ್ತಳೆ ಹೂಗಳು ನನ್ನ ಬಳಿ ಇವೆ. ಇವುಗಳು ನಮ್ಮ ಪ್ರೀತಿಯ ಗುರುತಾಗಿರುತ್ತವೆ. ಆ ಪ್ರೀತಿಯ ನೆನಪುಗಳು ನೀವು ನಮ್ಮ ಕಣ್ಣೆದುರು ಇರದಿದ್ದರೂ ಇರುತ್ತವೆ ಸ್ವಾಮಿ" ಎಂದು ಪ್ರೀತಿ ತುಂಬಿದ ಮಾತುಗಳಿಂದ ಹೇಳಿದ.

ತಜ್ಞರು ಗುರುವ ನೀಡಿದ ಹೂವುಹಣ್ಣಿನ ಬುಟ್ಟಿಯನ್ನು ತೆಗೆದುಕೊಂಡು, "ಅತಿಥಿಗಳನ್ನು ಗೌರವಿಸುವ ನಿಮ್ಮ ಗುಣಕ್ಕೆ ಹೇಗೆ ಸ್ಪಂದಿಸಬೇಕೆಂದು ಮತ್ತು ನಿನ್ನ ಬಗ್ಗೆ ನನಗಿರುವ ಗೌರವವನ್ನು ಹೇಗೆ ವ್ಯಕ್ತಪಡಿಸಬೇಕೆಂದೇ ತಿಳಿಯುತ್ತಿಲ್ಲ. ಯಾವುದೋ ಒಂದು ರೀತಿಯಲ್ಲಿ ನನ್ನ ಪ್ರೀತಿಯನ್ನು ನಿಮ್ಮ ಮೇಲಿರುವ ಗೌರವವನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಆದುದರಿಂದ ನಾನು ಕೊಡುವ ಈ ಚಿನ್ನದ ಗಡಿಯಾರವನ್ನು ಸ್ವೀಕರಿಸಬೇಕೆಂದು ಬೇಡಿಕೊಂಡರು. ಇದು ಗಿರಗಾಮಿಯವರದು; ಅವರು ಲಂಡನ್ ಮಹಾನಗರದಲ್ಲೂ ಹೆಸರುವಾಸಿಯಾದವರು. ಈ ಗಡಿಯಾರದ 'ಕೀ'ಯನ್ನು ವರ್ಷಕ್ಕೆ ಒಂದು ಬಾರಿ ತಿರುಗಿಸಿದರೆ ಸಾಕು. ಅದು ವರ್ಷ ಪೂರ್ತಿ ಓಡುತ್ತದೆ" ಎಂದರು.

"ಸ್ವಾಮಿ, ನಮಗೆ ಗಡಿಯಾರದ ಅಗತ್ಯವಿಲ್ಲ. ಯಾವಾಗಲೂ ಚಲಿಸುತ್ತಿರುವ ಗಡಿಯಾರವೊಂದು ನಮ್ಮ ಬಳಿ ಇದೆ. ಅದು ಎಂದಿಗೂ ಕೆಡದ ಗಡಿಯಾರ. ಅದುವೇ ಸೂರ್ಯ"

"ಈ ಗಡಿಯಾರವು ಗಂಟೆ ಹೊಡೆದು ಸಮಯ ತೋರಿಸುತ್ತದೆ"

"ಪಕ್ಷಿಗಳು ಹಾಡುವುದರ ಮೂಲಕ ನಮಗೆ ಗಂಟೆ ತೋರಿಸುತ್ತಿವೆ ಸ್ವಾಮೀ"

ನಾನು ಅವಳ ಹತ್ತಿರ ತೋರಿಸುವ ಗೌರವ ಮತ್ತು ಪ್ರೀತಿ, ಅವಳು ನನಗೆ ನೀಡುವ ಗೌರವ ಇವುಗಳು ನಮಗೆ ಒಂದು ದೇಶದ ಜನರ ಹೊಗಳಿಕೆಗಿಂತಲೂ ಹೆಚ್ಚಿನದಾಗಿರುತ್ತದೆ. ಅಷ್ಟೆ ಅಲ್ಲದೆ ಬಹಳ ಸಂತೋಷವಾಗಿರುತ್ತದೆ ಎಂದೆನ್ನುತ್ತಾ ಗುರುವ ತೊಟ್ಟಿಲಿನಲ್ಲಿ ಮಲಗಿರುವ ಮಗುವನ್ನು, ಆನಂದಬಾಷ್ಪಗಳಿಂದ ತುಂಬಿರುವ ತನ್ನ ಹೆಂಡತಿಯ ಕಣ್ಣುಗಳನ್ನು ನೋಡುತ್ತಿದ್ದನು. ಇದೆಲ್ಲವನ್ನು ಕೇಳಿದ ತಜ್ಞರ ಕಣ್ಣುಗಳು ಹನಿಗೂಡಿದವು.



"ಹಾಗಾದರೆ ನಿನ್ನ ಪತ್ನಿ ಹಾಗು ಮಗುವಿಗಾಗಿ ಹಾರಗಳನ್ನು ಮಾಡಲು ಮಣಿಗಳನ್ನು ತೆಗೆದುಕೊಳ್ಳಿ"

"ನಮ್ಮ ತೋಟದಲ್ಲಿ ಗುಲಗಂಜಿ ಇರುತ್ತವಲ್ಲಾ. ಅದರಿಂದ ನನ್ನ ಹೆಂಡತಿ ಮತ್ತು ಮಗುವಿಗೆ ಹಾರದ ಕೊರತೆಯಿಲ್ಲ"

"ಏಕಾಂಗಿಯಾಗಿರುವ ಈ ಸ್ಥಳದಲ್ಲಿ ಕಳ್ಳರಿಂದ ನಿಮ್ಮನ್ನು ರಕ್ಷಿಸಿ ಕೊಳ್ಳಲು ಈ ತುಪಾಕಿಯನ್ನು ತೆಗೆದುಕೊಳ್ಳಿರಿ"

"ಬಡತನವೆ ಕಳ್ಳರನ್ನು ನಮ್ಮಿಂದ ದೂರದಲ್ಲಿ ನಿಲ್ಲಿಸುವ ಗೋಡೆಯಾಗಿದೆ. ಯಾವ ದೇವರಿಂದ ಪ್ರೀತಿಯನ್ನೇ ಬಯಸುತ್ತೇವೆಯೋ, ನಮ್ಮನ್ನು ಹಾಗೂ ನಿಮ್ಮನ್ನು ಕಾಪಾಡುವ ಆ ದೇವರ ಹೆಸರಿನಲ್ಲಿ ನಿಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಅತಿಥಿಗಳನ್ನು ಗೌರವಿಸಿದ ಫಲವನ್ನು ನನ್ನಿಂದ ಕಿತ್ತುಕೊಳ್ಳಬೇಡಿ"

"ಆದರೂ ನೀನು ಯಾವುದನ್ನಾದರು ನನ್ನಿಂದ ತೆಗೆದುಕೊಳ್ಳಬೇಕೆಂದು ಆಸೆಪಡುತ್ತೇನೆ ಗೆಳೆಯಾ"

"ಈ ರೀತಿ ನೀವು ಇಷ್ಟ ಪಡುವುದಾದರೆ ನಾನು ಒಂದು ವಿಷಯವನ್ನು ಹೇಳಲು ಇಷ್ಟಪಡುತ್ತೇನೆ. ನಿಮ್ಮ ತಂಬಾಕು ಸೇದುವ ಪೈಪನ್ನು ನನಗೆ ಕೊಡಬೇಕು. ಅದೇ ರೀತಿ ನನ್ನ ಬಳಿಯಿರುವ ಹುಕ್ಕಾವನ್ನು ನೀವು ತೆಗೆದುಕೊಳ್ಳಬೇಕು. ನಿಮ್ಮ ಹುಕ್ಕಾ ಕೊಳವೆಯಲ್ಲಿ ನಾನು ಹೊಗೆ ಸೇದುತ್ತಾ ಯೂರೋಪಿನ ವಿದ್ವಾಂಸರು ಭಾರತದ ಬಡ ಹೊಲೆಮಾದಿಗನೊಬ್ಬನ ಉಪಚಾರವನ್ನು ಸ್ವೀಕರಿಸಲು ಅಸಹ್ಯಪಟ್ಟುಕೊಳ್ಳಲಿಲ್ಲ ಎಂದು ನೆನಪಿಸಿಕೊಳ್ಳುತ್ತಿರುತ್ತೇವೆ" ಎಂದ ಗುರುವ.

ಈ ಮಾತು ಕೇಳಿದ ಕೂಡಲೇ ಆ ವಿದ್ವಾಂಸರು ಚರ್ಮದಿಂದ ಮಾಡಿದ ಮತ್ತು ತುದಿಯಲ್ಲಿ ಬೆಳ್ಳಿಯ ಕಟ್ಟಿನಿಂದ ಕೂಡಿದ ಹುಕ್ಕಾವನ್ನು ಗುರುವನಿಗೆ ನೀಡಿ, ಬಿದಿರಿನಿಂದ ಮಾಡಿದ ಮತ್ತು ತುದಿಯನ್ನು ಮಣ್ಣಿನಿಂದ ತಯಾರಿಸಿದ ಪೈಪನ್ನು ಗುರುವನಿಂದ ಪಡೆದರು. ನಂತರ ಹಿಂದಿನ ರಾತ್ರಿಯನ್ನು ಸಂತೋಷವಾಗಿ ಅನುಭವಿಸದೆ, ಮಂಜಿನ ಚಳಿಯಲ್ಲಿ ನಡುಗುತ್ತಾ ಒಣಗಿದ ಸೌದೆಯಂತೆ ಬಿದ್ದಿದ್ದ ತನ್ನ ಸೇವಕರನ್ನು ಕರೆದರು. ಪ್ರೀತಿ ಗೌರವದಿಂದ ಗುರುವನನ್ನು ಅಪ್ಪಿಕೊಂಡ ನಂತರ ಪಲ್ಲಕ್ಕಿಯಲ್ಲಿ ಕುಳಿತರು. ಗುರುವನ ಹೆಂಡತಿ ತನ್ನ ಮಗುವನ್ನು ಎತ್ತಿಕೊಂಡು ಅಳುತ್ತಾ ಬಾಗಿಲ ಬಳಿಯಲ್ಲಿ ನಿಂತಿದ್ದಳು. ಆದರೆ ಅವಳ ಗಂಡ ಕಾಡಿನ ಹೊರವಲಯದವರೆಗೆ ತಜ್ಞರನ್ನು ಶುಭಹಾರೈಸುತ್ತಾ ಜೊತೆಯಲ್ಲಿಯೇ ನಡೆದನು. ಬೀಳ್ಕೊಡುವ ಸಮಯದಲ್ಲಿ "ಬಡವರ ಮೇಲೆ ತಾವುಗಳು ತೋರಿಸಿದ ಪ್ರೀತಿಗೆ ದೇವನೆ! ನಿಮಗೆ ಸನ್ಮಾನವಾಗಲಿ. ನನ್ನ ಪ್ರೀತಿ ನಿನಗೆ ಉಡುಗೊರೆಯಾಗಲಿ. ಜನರ ಸಂತೋಷದ ಬದುಕಿಗಾಗಿ ಪ್ರಪಂಚದ ಎಲ್ಲಾ ಕಡೆ ಸುತ್ತಾಡಿ ಸತ್ಯವನ್ನು ಹುಡುಕುವ ವಿದ್ವಾಂಸರು ಹಾಗೂ ಸ್ನೇಹಿತರು ಇರುವ ಇಂಗ್ಲೆಂಡ್ ದೇಶಕ್ಕೆ ದೇವರು ನಿಮ್ಮನ್ನು ಸಂತೋಷದಿಂದ ಸೇರಿಸಲಿ" ಎಂದು ಗುರುವ ಹಾರೈಸಿದ.

ಗುರುವನ ಈ ಮಾತುಗಳನ್ನು ಕೇಳಿದ ತಜ್ಞರು, "ಈ ಭೂಮಿಯಲ್ಲೂ ಅರ್ಧದಷ್ಟು ದೇಶಗಳನ್ನು ಸುತ್ತಿ ಬಂದಿದ್ದೇನೆ. ನಾನು ಹೋಗಿ ಬಂದ ಎಲ್ಲಾ ಕಡೆ ಜನರಲ್ಲಿ ತಪ್ಪುಗಳು, ಭಿನ್ನಾಭಿಪ್ರಾಯಗಳು ಮತ್ತು ಮನಸ್ತಾಪಗಳನ್ನೆ ನೋಡಿದೆ. ಆದರೆ ನಿನ್ನ ಗುಡಿಸಲಿನಲ್ಲಿ ಮಾತ್ರ ಸತ್ಯವನ್ನು ಮತ್ತು ಸಂತೋಷವನ್ನು ನೋಡಿದೆ" ಎಂದರು. ನಂತರ ಇಬ್ಬರೂ ಒಬ್ಬರಿಗೊಬ್ಬರು ಕಣ್ಣೀರು ತುಂಬಿದ ಕಣ್ಣುಗಳನ್ನೇ ನೋಡುತ್ತಾ ಅವರವರ ದಿಕ್ಕಿನಲ್ಲಿ ವಾಪಾಸ್ಸಾದರು. ವಿದ್ವಾಂಸರು ಬಹಳಷ್ಟು ದೂರ ಹೋಗಿಬಿಟ್ಟರು. ಆದರೂ ಒಂದು ಮರದ ನೆರಳಿನಲ್ಲಿ ನಿಂತು "ಹೋಗಿ ಬನ್ನಿರಿ" ಎಂದು ಗುರುವನು ತನ್ನ ಕೈಗಳನ್ನು ಬೀಸುತ್ತಿದ್ದನು. ವಿದ್ವಾಂಸರು ಕಲ್ಕತ್ತಾಗೆ ಬಂದ ನಂತರ ಅಲ್ಲಿಂದ ಚಂದ್ರನಾಗೂರಿಗೆ ಹೋಗಿ ಅಲ್ಲಿಂದ ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಲಂಡನ್ ನಗರ ತಲುಪಿದ ಮೇಲೆ ಅವರು ಸಂಗ್ರಹಿಸಿ ತಂದಿದ್ದ 90 ಗೋಣಿ ಚೀಲಗಳಲ್ಲಿ ತುಂಬಿದ್ದ ಗ್ರಂಥಗಳನ್ನು ಮತ್ತೆ ಮಾಹಿತಿಗಳನ್ನು ಅಕಾಡಮಿಗೆ ಒಪ್ಪಿಸಿದರು.

ಪರಿಷತ್ತಿನ ಅಧ್ಯಕ್ಷರೇ ಅವುಗಳನ್ನು ವಸ್ತುಸಂಗ್ರಹಾಲಯದಲ್ಲಿ ಇಟ್ಟರು. ಇಂದಿಗೂ ಕೂಡ ವಿದ್ವಾಂಸರು, ಲೇಖಕರು ಅವುಗಳನ್ನು ಭಾಷಾಂತರ ಮಾಡುತ್ತಿದ್ದರು. ಅದರ ಬಗ್ಗೆ ಹೊಗಳಿಕೆಗಳು, ಟೀಕೆ, ವಿಮರ್ಶೆಗಳು, ಟಿಪ್ಪಣಿಗಳನ್ನು ಬರೆಯುತ್ತಿದ್ದರು. ತಜ್ಞರು ಮಾತ್ರ ತಮ್ಮಷ್ಟಕ್ಕೆ ತಾವು ಸತ್ಯದ ಬಗ್ಗೆ ಗುರುವ ನೀಡಿದ ಮೂರು ಉತ್ತರಗಳನ್ನೇ ಇಟ್ಟುಕೊಂಡು ಆಗಾಗ ಗುರುವನು ನೀಡಿದ್ದ ತಂಬಾಕು ಸೇದುವ ಪೈಪಿನಿಂದ ತಂಬಾಕು ಸೇದುತ್ತಿದ್ದರು. ಹಾಸಿಗೆಯ ಮೇಲೆ ತಲೆ ಇಟ್ಟುಕೊಂಡು ಆ ಹುಕ್ಕಾದ ಹಕ್ಕುದಾರನಾದ ಆ ಸತ್ಯವಂತನ ಬಗ್ಗೆ ಯೋಚನೆ ಮಾಡುತ್ತಾ ಇದ್ದರು. ಅವರ ಕಣ್ಣುಗಳಲ್ಲಿ ಅಶ್ರುಧಾರೆ ಸುರಿಯುತ್ತಿತ್ತು. ಆ ಗುಡಿಸಿಲಿನ ಬೆಳಕು ಇಡೀ ಮಾನವ ಸಮುದಾಯದ ಮೇಲೆ ಹರಡಬೇಕಿದೆ ಎಂದು ಅವರು ಆಲೋಚಿಸುತ್ತಾ ಇದ್ದರು.

ಗುರುವನ ಮಾತುಗಳನ್ನು ಕೇಳಿದ ತಜ್ಞರು, "ಈ ಭೂಮಿಯಲ್ಲೂ ಅರ್ಧದಷ್ಟು ದೇಶಗಳನ್ನು ಸುತ್ತಿ ಬಂದಿದ್ದೇನೆ. ನಾನು ಹೋಗಿ ಬಂದ ಎಲ್ಲಾ ಕಡೆ ಜನರಲ್ಲಿ ತಪ್ಪುಗಳು, ಭಿನ್ನಾಭಿಪ್ರಾಯಗಳು ಮತ್ತು ಮನಸ್ತಾಪಗಳನ್ನೆ ನೋಡಿದೆ. ಆದರೆ ನಿನ್ನ ಗುಡಿಸಲಿನಲ್ಲಿ ಮಾತ್ರ ಸತ್ಯವನ್ನು ಮತ್ತು ಸಂತೋಷವನ್ನು ನೋಡಿದೆ" ಎಂದರು.



ಎಸ್. ಶಿವಲಿಂಗಂ

ತಮಿಳು ನಾಡಿನ ನಾಮಕಲ್ ಜಿಲ್ಲೆಯವರು. ಚೆನ್ನೈ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮಿಳು ಸಾಹಿತ್ಯ ಕುರಿತು ಎಂ.ಎ.ವ್ಯಾಸಂಗ. ತಮಿಳಿನ ಉತ್ತಮ ಕೃತಿಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವಲ್ಲಿ ಆಸಕ್ತಿ. ಪ್ರಸ್ತುತ ಬೆಂಗಳೂರು ನಗರದ ಬಸವನಗುಡಿಯಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ತಮಿಳು ಉಪನ್ಯಾಸಕರಾಗಿರುವ ಶಿವಲಿಂಗಂ ಜನಪರ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಎಚ್.ಬಿ. ಸೇಂಟ್‌ಪಿಯರ್



ಫ್ರಾನ್ಸ್ ದೇಶದ ಪ್ರಸಿದ್ಧ ಬರಹಗಾರ. 18ನೇ ಶತಮಾನದ ಜೀವಿಸಿದ್ದ ಈತ ವಿಶ್ವ ಪರ್ಯಟನೆ ಮಾಡಿ ಅಲ್ಲಿನ ಜನಜೀವನವನ್ನು ಕಣ್ಣಿಗೆ ಕಟ್ಟುವಂತೆ ಬರೆಯುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಭಾರತದ ಬಗ್ಗೆ ಅತ್ಯಂತ ಕುತೂಹಲ ಹೊಂದಿದ್ದ ಇವರು ಇಲ್ಲಿಗೂ ಭೇಟಿ ನೀಡಿ ಅಂದಿನ ದಿನಮಾನಗಳಲ್ಲಿ ಈ ದೇಶದ ಜನರ ಜೀವನ ಕ್ರಮಗಳನ್ನು, ಅಸಮಾನತೆಯ ರೀತಿ-ರಿವಾಜುಗಳನ್ನು ತಮ್ಮ ಬರಹಗಳಲ್ಲಿ ಹೃದಯಸ್ಪರ್ಶಿಯಾಗಿ ಕಟ್ಟಿಕೊಟ್ಟಿದ್ದಾರೆ.

'ಸ್ಫೂರ್ತಿಧಾಮ' ಕೊಡಮಾಡುವ
'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಗಳು

'ಸ್ಫೂರ್ತಿಧಾಮ'ವನ್ನು ನಿರ್ವಹಿಸುತ್ತಿರುವ 'ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್', ಏಪ್ರಿಲ್ 14, 2012 ರಂದು ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ನೀಡಲಾಗುವ ಒಂದು ಲಕ್ಷ ರೂ. ಮೌಲ್ಯದ ಒಂದು 'ಬೋಧಿ ವೃಕ್ಷ' ಮತ್ತು ತಲಾ 20 ಸಾವಿರ ರೂ. ಮೌಲ್ಯದ ಐದು 'ಬೋಧಿ ವರ್ಧನ' ಪ್ರಶಸ್ತಿಗಳಿಗಾಗಿ ಅರ್ಹ ವ್ಯಕ್ತಿಗಳ ಆಯ್ಕೆಗೆ ಸೂಕ್ತ ಪ್ರಸ್ತಾವನೆ (Proposal)ಗಳನ್ನು ಆಹ್ವಾನಿಸುತ್ತಿದೆ.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ-ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲಿಲ್ಲ. "A great man is different from an eminent one, in that he is ready to be a servant of soceity" ಎಂದು ಅಂಬೇಡ್ಕರ್ ಹೇಳಿದ ಈ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ.





2009ರ 'ಅಂಬೇಡ್ಕರ್ ಹಬ್ಬ'ದಲ್ಲಿ ಬೆಂಗಳೂರಿನ 'ಮಹಾಬೋಧಿ ಸೊಸೈಟಿ' ಸ್ಥಾಪಕರಾದ ಬೌದ್ಧ ಬಿಕ್ಕು ಆಚರಿಯ ಬುದ್ಧರಕ್ಖಿತ ಹಾಗೂ 2010ರಲ್ಲಿ ಖ್ಯಾತ ಅಂಕಣಕಾರ ಚಂದ್ರಭಾನ್ ಪ್ರಸಾದ್ ಅವರು 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದುಕೊಂಡರು. ಕಾಗೋಡು ಹೋರಾಟದ ರೂವಾರಿ ಸಾಗರದ ಗಣಪತಿಯಪ್ಪ, ಜಲ ತಜ್ಞ ಕೋಲಾರದ ಕೆ. ನಾರಾಯಣ ಸ್ವಾಮಿ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ತಳಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದ ಕನಕಪುರದ ಶ್ರೀ ಶ್ರೀನಿವಾಸಯ್ಯನವರು ಹಾಗೂ ಸ್ವತಃ ದೇವದಾಸಿಯಾಗಿದ್ದರೂ, ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿದ ಬಿಜಾಪುರದ ಶ್ರೀಮತಿ ಮಹಾದೇವಮ್ಮ ಅವರು 'ಬೋಧಿವರ್ಧನ' ಪ್ರಶಸ್ತಿಯನ್ನು ಪಡೆದುಕೊಂಡ ಕೆಲವರು. 2011ರಲ್ಲಿ 'ಬೋಧಿವೃಕ್ಷ' ಪ್ರಶಸ್ತಿಯನ್ನು, ಅಂಬೇಡ್ಕರ್ ಬರಹ ಮತ್ತು ಭಾಷಣಗಳನ್ನು ಜಗತ್ತಿಗೆ ಪರಿಚಯಿಸಿದ ಭಗವಾನ್ ದಾಸ್(ಮರಣೋತ್ತರ) ಹಾಗೂ 'ಬೋಧಿವರ್ಧನ' ಪ್ರಶಸ್ತಿಗಳನ್ನು, ಪೌರಕಾರ್ಮಿಕರ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುತ್ತಿರುವ ಶ್ರೀ ಎಸ್.ಕೆ. ಕಾಂತ, ಬಿಳಿಗಿರಿರಂಗನ ಬೆಟ್ಟದ ದೇಶೀ ಪ್ರಸೂತಿ ತಜ್ಞೆ ಶ್ರೀಮತಿ ಕೇತಮ್ಮ, ಅಲೆಮಾರಿಗಳ ಸಂಘಟನೆಗಾಗಿ ಶ್ರಮಿಸುತ್ತಿರುವ ಡಾ॥ ಕೆ. ಎಂ. ಮೇತ್ರಿ, ಹಿರಿಯ ಹೋರಾಟಗಾರ ಶ್ರೀ ಎನ್.ವೆಂಕಟೇಶ್ ಹಾಗೂ ದಲಿತ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಶ್ರಮಿಸಿದ ಡಿ.ವೆಂಕಟಯ್ಯ (ಮರಣೋತ್ತರ) ಅವರಿಗೆ ನೀಡಿ ಗೌರವಿಸಿದೆ.

ಬುದ್ಧ, ಮೋಕ್ಷವನ್ನು ಹುಡುಕುತ್ತಾ ಸಮುದಾಯದ ಪ್ರೀತಿಯ ಬಂಧನದಲ್ಲಿ ಅದನ್ನು ಕಂಡುಕೊಂಡ. ನಮ್ಮ ಕಾಲಘಟ್ಟವೂ ಒಂದು ಆಧ್ಯಾತ್ಮಿಕ ಪಯಣಕ್ಕೆ ಹಾತೊರೆಯುತ್ತಿದೆ. ಈ ಆಧ್ಯಾತ್ಮಿಕ ಪಯಣ ಆರಂಭವಾಗುವುದೇ ಈ ನೆಲದ ಬದುಕಿನೊಟ್ಟಿಗಿನ ಸಾವಯವ ಸಂಬಂಧದೊಂದಿಗೆ.

ಈ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಯಸುತ್ತದೆ. ಇಂಥವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮಗೆ ಅವರ ಬಗ್ಗೆ ಪೂರ್ಣಮಾಹಿತಿಯನ್ನು ನೀಡಿ. ಅಥವಾ ನೀವೇ ಅಂಥವರಾಗಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

ಬೋಧಿ ವೃಕ್ಷ

ಬೋಧಿ ವರ್ಧನ

ವಿಳಾಸ: 'ಸ್ಫೂರ್ತಿಧಾಮ', ಅಂಜನಾನಗರ,
ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು- 560091
ದೂರವಾಣಿ: 080- 23480278

ಕೇವಲ ತುತ್ತಿನ ಚೀಲದ ಹಸಿವ
ಆ ಕ್ಷಣಕ್ಕೆ ಹಿಂಗಿಸುವುದಷ್ಟೆ ಬದು
ತುರ್ತು. ಇದರ ಪರಿಣಾ
ಅರವತ್ತೈದು ವರ್ಷಗಳ ಸ್ವತ
ಭಾರತದಲ್ಲಿ ಒಟ್ಟು ಭಾರತದ
ಯಾವುದೇ ಭಾಗದಲ್ಲಿ ಸಾಮಾ
ನ್ಯಾಯದ ಹಂಚಿಕೆಯಲ್ಲಿ
ಅಲೆಮಾರಿ ಕೂಡ ಶಾಸನ
ರೂಪಿಸುವ ಕಡೆ ಸುಳಿದಾಡಿ



ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ

ಬಾಲಗುರುಮೂರ್ತಿ

ಭಾರತದ ಅಲೆಮಾರಿಗಳ Anthropology ಯ ಬಗ್ಗೆ ಸ್ಪಷ್ಟವಾದ ಅಧ್ಯಯನಗಳು ಮತ್ತು ಫಲಿತಗಳು ಅಲೆಮಾರಿಗಳು ಇರುವ ಸ್ಥಿತಿಯಲ್ಲೇ ಇರುವುದು ಸಾಮಾಜಿಕ ನ್ಯಾಯದ ಬಹು ದೊಡ್ಡ ವಿಪರ್ಯಾಸ.

ಬಹಳ ನಾಜೂಕಾಗಿ ಈ ತಬ್ಬಲಿ ಸಮುದಾಯಗಳ ಚರಿತ್ರೆಯನ್ನು ನಿರ್ವಚಿಸುವ ಸಂಶೋಧಕರು ತಾವು ಪರಿಭಾವಿಸಿದ ಕ್ರಮವೇ Ultimate ಎನ್ನುವ ಹಾಗೆ ಹಲವು ಕೃತಿಗಳನ್ನು ಬರೆದಿರುವುದು ಸಂಶೋಧನೆಯ ವ್ಯಂಗ್ಯವಾಗಿದೆ.

ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯೂ ಸೇರಿದಂತೆ ಸರ್ಕಾರಿ ಸಾಮಾಜಿಕ ನ್ಯಾಯದ ನಿಯೋಗಿಗಳು ಈಗಲು ಉಲ್ಲೇಖಿಸುವುದು ವಸಾಹತು ಅಧ್ಯಯನಕಾರರನ್ನು ಎಂದು ಅವರು ಹೊರಡಿಸುವ ಸುತ್ತೋಲೆಗಳಲ್ಲಿನ ಉಲ್ಲೇಖಗಳು ವಿವರಿಸುತ್ತವೆ. ಮತ್ತು ಆಂತ್ರೋಪಾಲಜಿಕಲ್ ಸರ್ವೇ ಆಪ್ ಇಂಡಿಯಾದ **ಮಾಜಿ ಮುಖ್ಯಸ್ಥ** ಕೆ.ಎಸ್.ಸಿಂಗ್ ರವರ ಮಾನವ ಶಾಸ್ತ್ರೀಯ ಅಧ್ಯಯನಗಳನ್ನು ನಮ್ಮಲ್ಲಿನ ಕೆಲವರು ಅಸಹನೆಯಿಂದ ಈ Modernity ಯಲ್ಲಿ ಇವರು ಅಪ್ರಸ್ತುತರು ಎಂದು ಟೀಕಿಸುತ್ತಾ ತಾವು ಮಾತ್ರ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ತಮ್ಮ ಜಾತಿಯನ್ನು ಮಾತ್ರ ಪ್ರೀತಿಸುವ ಜಾತಿವಾದಿಗಳಾಗಿಯೇ ಉಳಿದಿದ್ದಾರೆ. ಆದರೆ ಈಗಲೂ ವಿಚಾರ ನಿಷ್ಠ ಪ್ರಾಜ್ಞರು ತುಡಿಯುತ್ತಲೇ ಇರುವುದು ಶ್ಲಾಘನೀಯ.

ಅಲೆಮಾರಿಗಳ ಶಾಪಗ್ರಸ್ಥ ಪ್ರಯಣ

ಹಲವು **ಆದಿವಾಸಿ ಬುಡಕಟ್ಟುಗಳು** ಮೂಲ ಕಾಡನ್ನು ತೊರೆದು ನಾಡಿನತ್ತ **ತೆವಳುತ್ತ** ಬಂದ ಪ್ರಯಾಣದ ವಿವರಗಳಿವೆ. **ಆದರೆ ನಾಡಿನಲ್ಲಿದ್ದ ನಾಗರಿಕ ಜಾತಿಗಳು** ಈ **ಆದಿಮರನ್ನು ತಮ್ಮೊಳಗೆ ಬಿಟ್ಟುಕೊಳ್ಳಲಿಲ್ಲ. ಮತ್ತು** ಈ **ಆದಿವಾಸಿಗಳು ನಾಗರಿಕ ಜಗತ್ತಿನ ಯಾವುದೇ** ಸಾಮಾಜೀಕರಣದ ಪ್ರಕ್ರಿಯೆಗೆ ತೊಡಗಲಿಲ್ಲ ಎನ್ನುವದಕ್ಕಿಂತ ಅಜ್ಞಾನ ಮತ್ತು ಆತಂಕದಿಂದ ಸ್ಪಂದಿಸಲಿಲ್ಲ.

ಅದರ ಫಲವಾಗಿ ಊರಾಚೆಯ ಬಯಲುಗಳಲ್ಲಿ ನಿರ್ಜನ ಪ್ರದೇಶದಲ್ಲಿ ಟೆಂಟು ಗುಡಾರಗಳಲ್ಲಿ ಬದುಕುತ್ತಾ ಬಂದವರು ಈ ಅಲೆಮಾರಿಗಳು.

ಕೆಲವರು ಪಶುಪಾಲಕರಾಗಿ ಉಳಿದುಕೊಂಡರೆ ಉಳಿದವರು ಧಾರ್ಮಿಕ ಭಿಕ್ಷಾವೃತ್ತಿಗೆ ಆತುಕೊಂಡರು **ಮತ್ತು ಕೆಲವರು ಆಧುನಿಕ ವೈಪರೀತ್ಯ**ಗಳ ಫಲವಾಗಿ **ರಾಜಕೀಯ ಪಲ್ಲಟಗಳಿಂದ ಅಲೆಮಾರಿ**ಗಳಾಗಿ **ರೂಪುಗೊಂಡರು.**

ಅಲೆಮಾರಿಗಳ ಸೂರಿಲ್ಲದ- ಶಿಕ್ಷಣವಿಲ್ಲದ- ಯಾವುದೇ ಸಾಮಾಜಿಕ ಸವಲತ್ತಿನ ಹಿನ್ನಲೆಯಿಲ್ಲದ ಇವರ ಸ್ಥಿತಿಗತಿಗಳನ್ನು ವಿವರಿಸುವುದಕ್ಕಿಂತ ಈ ಅಲೆಮಾರಿ ನಿರ್ದೇಶಕರು ಅಪೂರ್ಣವಾದ ಪಟ್ಟಿಯೊಂದನ್ನು ಘೋಷಿಸಿರುತ್ತಾರೆ. ಈ ಪಟ್ಟಿಯಲ್ಲಿ ಒಂದೇ ಬುಡಕಟ್ಟಿನ ಪರ್ಯಾಯ ಪದಗಳು (Synonyms)ಪುನರಾವರ್ತನೆಯಾಗಿ 56 **ಸಮುದಾಯ**ಗಳೆಂದು **ಘೋಷಿಸಿರುವುದನ್ನು** ಪ್ರಸ್ತುತ **ಬಿ.ಜೆ.ಪಿ ಸರ್ಕಾರ** ಅದನ್ನೇ **ಅಲೆಮಾರಿ ಪಟ್ಟಿ**ಯೆಂದು **ಒಪ್ಪಿಕೊಂಡಿ**ದೆ.

ಉದಾಹರಣೆಗೆ ಗೊಂದಳಿ, ಬುಡುಬುಡಿಕೆ, ಜೋಷಿ, ವಾಸುದೇವ ಇವೆಲ್ಲ ಒಂದೇ ಸಮುದಾಯವಾದರೂ ನಾಲ್ಕೈದು ಪರ್ಯಾಯ ಪದಗಳು ಪಟ್ಟಿಯನ್ನು ಉಬ್ಬಿಸಿವೆ. ಇಂತಹ ಅವೈಜ್ಞಾನಿಕ ಪಟ್ಟಿ ರದ್ದುಗೊಳಿಸಬೇಕಾಗಿದೆ.

ಕಿಳ್ಳೇಕ್ಯಾತ- ಕಟಬು, ಬುಂಡೇಬೆಸ್ತ, ಗೊಂಬೆರಾಮ, ಈ ನಾಲ್ಕು ಪರ್ಯಾಯ ಪದಗಳು ಶಿಳ್ಳೇಕ್ಯಾತ ಸಮುದಾಯವನ್ನು ಜನಪದರು ಕರೆದ ಹೆಸರುಗಳಾಗಿದ್ದು ಈ ಪಟ್ಟಿಯಲ್ಲಿ ಹೀಗೆ ಪರ್ಯಾಯ ಪದಗಳಿಂದ ತುಂಬಿಹೋಗಿರುವ ಅಪೂರ್ಣ ಸರಕಾಗಿದೆ.

1871ರಲ್ಲಿ ಬ್ರಿಟಿಷ್ ಸರ್ಕಾರ ತನ್ನ ನಿಯಂತ್ರಣಕ್ಕೆ ಬಾರದ ಮತ್ತು ತನ್ನ ಸಾಮ್ರಾಜ್ಯಶಾಹಿಯ ವಿರುದ್ಧ ದನಿಯಾದ ಇಂತಹ ಅಲೆಮಾರಿ ಗುಂಪುಗಳನ್ನು ಬಂಧಿಸಿ ಅಪರಾಧಿ ಬುಡಕಟ್ಟುಗಳೆಂದು ಘೋಷಿಸಿತು. ಮುಂದೆ ಈ ಕ್ರಿಮಿನಲ್ ಟ್ರೈಬ್ಸ್‌ಗಳನ್ನು ಅಪರಾಧಿ ಬುಡಕಟ್ಟುಗಳು ಎಂಬ

ಅಂಶಗಳು ತಿಳಿಯುವುದೇ ಇಲ್ಲ.

ಕೇವಲ ತುತ್ತಿನ ಚೀಲದ ಹಸಿವನ್ನು ಆ ಕ್ಷಣಕ್ಕೆ ಹಿಂಗಿಸುವುದಷ್ಟೆ ಬದುಕಿನ ತುರ್ತು. ಇದರ ಪರಿಣಾಮ ಅರವತ್ತೈದು ವರ್ಷಗಳ ಸ್ವತಂತ್ರ ಭಾರತದಲ್ಲಿ ಒಟ್ಟು ಭಾರತದಲ್ಲಿನ ಯಾವುದೇ ಭಾಗದಲ್ಲಿ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ಒಬ್ಬ ಅಲೆಮಾರಿ ಕೂಡ ಶಾಸನಸಭೆ ರೂಪಿಸುವ ಕಡೆ ಸುಳಿದಾಡಿಲ್ಲ. ಆದರೆ ಪಶುಪಾಲಕ ಅಲೆಮಾರಿಗಳೆಂದವರು ಕೇವಲ ಜಾತಿ ಪ್ರತಿನಿಧಿಗಳಾಗಿದ್ದು ಪ್ರಧಾನ ಧಾರೆಯ ಮೂಲಿಗ

ಗಂಟಿಚೋರ್ ಸಮುದಾಯದ ಯುವಕರ ತಿಕಕ್ಕೆ ಖಾರದ ಪುಡಿ ಹಾಕಿ ಹಿಂಸಿಸುತ್ತಿದ್ದ ಪೊಲೀಸರ ದೌರ್ಜನ್ಯವನ್ನು ಇಂದಿಗೂ ಸಮುದಾಯ ಮರೆತಿಲ್ಲಾ.

ಜಗತ್ತಿಗೆ ಬೆನ್ನುಹಾಕಿದ ಜಾಣಕುರುಡಿನ ವ್ಯವಸ್ಥೆಯ ಚರಿತ್ರೆ ವಾಸ್ತವ ರಾಜಕಾರಣವಾಗಿ ಮುಂದುವರೆದಿದೆ.

ಇಷ್ಟಾಗಿಯೂ ಅಲೆಮಾರಿಗಳನ್ನು ಕುರಿತು ನಡೆದಿರುವ ಅಧ್ಯಯನಗಳು ಅಧ್ಯಯನಕಾರರಿಗೆ ಮಾಹಿತಿಯಾಗಿ ಅವರ ಸಂಶೋಧನಾ ಡಿಗ್ರಿಗಳಿಗೆ ಸರಕಾಗಿ ಕಂಡಿದ್ದರೂ ಮತ್ತೊಂದೆಡೆ ಈ ಸಂಶೋಧನಾ ಕೃತಿಗಳ ಅಪೂರ್ಣ ವಿವರಗಳು ಸರ್ಕಾರದ ಕಾಟಾಚಾರದ ಉಲ್ಲೇಖಗಳಾಗಿ ಪಳೆಯುಳಿಕೆಗಳಾಗಿವೆ. ಆದರೂ ಅವರ ಪ್ರಯತ್ನಗಳು 'ಏನು ಇಲ್ಲದ ಕಡೆ' ಎನ್ನುವಂತೆ ಶ್ಲಾಘನೀಯವೂ ಆಗಿದೆ.

ಕಳೆದ ವರ್ಷಗಳಲ್ಲಿ ಭಾರತ ಸರ್ಕಾರ ನೇಮಿಸಿದ ರಾಷ್ಟ್ರೀಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗ ಈ ದೇಶದ ಒಟ್ಟು ಅಲೆಮಾರಿಗಳ ಜನಸಂಖ್ಯೆ ಹದಿನೈದು ಕೋಟಿಗೂ ಹೆಚ್ಚು ಎಂದು ಅಂಕಿಸಂಖ್ಯೆಗಳನ್ನು ನೀಡಿದೆ.

ಮಹಾರಾಷ್ಟ್ರದಲ್ಲಿ 73 ಅಲೆಮಾರಿ ಸಮುದಾಯಗಳಿದ್ದು ಮಹಾರಾಷ್ಟ್ರ ಸರ್ಕಾರ ಅಲೆಮಾರಿಗಳಿಗೆ ಪ್ರತ್ಯೇಕವಾದ ಮೀಸಲಾತಿ ಪಟ್ಟಿಯನ್ನು ಇಂದಿಗೂ ಚಾಲ್ತಿಯಲ್ಲಿರಿಸಿದೆ.

ಅಲೆಮಾರಿಗಳ ಜನಸಂಖ್ಯೆಯ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಅಲೆಮಾರಿ **ಸಮುದಾಯಗಳು ಮೂವತ್ತರ ಆಸುಪಾಸಿನಲ್ಲಿದ್ದು 1966ರಲ್ಲಿ ಕರ್ನಾಟಕದಲ್ಲಿ 56 ಅಲೆಮಾರಿ ಬುಡಕಟ್ಟು**ಗಳು ಇದ್ದವೆಂದು ಅಂದಿನ ಸಮಾಜ ಕಲ್ಯಾಣ ಇಲಾಖೆಯ ಹಣೆಪಟ್ಟಿಯನ್ನು ತೆಗೆದು ವಿಮುಕ್ತ ಬುಡಕಟ್ಟುಗಳು ಎಂದು ಮರು **ನಾಮಕರಣ ಮಾಡಲಾಯಿತು.**

ಪಾರ್ಧಿ, **ದೊಂಬರು, ಗಂಟಿಚೋರ್**, ಕೊರವರ್ ನಂತಹ **ಹಲವಾರು ಬುಡಕಟ್ಟುಗಳು** ವಿಮುಕ್ತ ಬುಡಕಟ್ಟುಗಳಾದರೂ ಪ್ರತೀ ಹದಿನೈದು ದಿವಸ- ತಿಂಗಳಿಗೆ ಪೊಲೀಸು ಸ್ಟೇಷನ್ನಿಗೆ ಹೋಗಿ ಸಹಿ ಮಾಡಿ ಬರಬೇಕಿತ್ತು. ಆ ಪ್ರದೇಶಗಳಲ್ಲಿ ಆಗುವ ಕಳ್ಳತನಗಳಿಗೆ ಈ ಅಲೆಮಾರಿಗಳನ್ನೇ ಹೊಣೆಮಾಡಿ ಘೋರವಾಗಿ ಹಿಂಸಿಸಲಾಗುತಿತ್ತು.

ಗಂಟಿಚೋರ್ ಸಮುದಾಯದ ಯುವಕರ ತಿಕಕ್ಕೆ ಖಾರದ ಪುಡಿ ಹಾಕಿ ಹಿಂಸಿಸುತ್ತಿದ್ದ ಪೊಲೀಸರ ದೌರ್ಜನ್ಯವನ್ನು ಇಂದಿಗೂ ಸಮುದಾಯ ಮರೆತಿಲ್ಲಾ.

ಹೀಗೆ ಸಾಗಿಬಂದ ಶಾಪಗ್ರಸ್ಥ ಪ್ರಯಾಣದಲ್ಲಿ ದೇಶ- ಸಂವಿಧಾನ- ಹಕ್ಕು ಬಾಧ್ಯತೆಗಳ ಪ್ರಜ್ಞೆಯಾಗಲೀ- ಪರಿಸರವಾಗಲಿ ದಕ್ಕದ ಈ ನತದೃಷ್ಟ ಸಮುದಾಯಗಳು ಅಂಬೇಡ್ಕರ್ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಸಂಘಟಿತವಾಗುವ ಯಾವುದೇ ಚಾರಿತ್ರಿಕ ಪ್ರಯತ್ನಗಳಿಗೆ ಸಾಕ್ಷಿಯಾಗಲಿಲ್ಲ.

ಹೀಗಾಗಿಯೇ ಇಂದಿಗೂ ಅಲೆಮಾರಿ ತಾಯಂದಿರು ಮಕ್ಕಳನ್ನು ಕಟ್ಟಿಕೊಂಡು ಸರಿ ರಾತ್ರಿಗಳಲ್ಲಿ ಈ **ದೇಸವೆಂಬೋ ದೇಸದಾಗೆ ಮನೆಗಳ ಮುಂದೆ** ಅನ್ನಕ್ಕೆ **ದೈನ್ಯವಾಗಿ ಬೇಡುತ್ತಾ ಕೈ ಒಡ್ಡುತ್ತಾರೆ.** ಇವರಿಗೆ ಸ್ಪೃಶ್ಯ- ಅಸ್ಪೃಶ್ಯ ಎನ್ನುವ ಯಾವುದೇ ಅಮಾನವೀಯ ತಾರ್ಕಿಕ ಅಲೆಮಾರಿಗಳ ಬಗ್ಗೆ ಅವರಿಗೆ ತಿಳಿದೇ ಇಲ್ಲ.

ಇನ್ನೂ ಭೂ ಹಂಚಿಕೆಯ **ಇಲ್ಲ ಭೂ** ಒಡೆತನದ ಪ್ರಶ್ನೆಯಿರಲಿ, ಭೂಮಿಯೊಡನೆ **ಸಂಬಂಧ** ಏರ್ಪಡಿಸಿಕೊಳ್ಳದ ಈ **ಅಲೆಮಾರಿಗಳು ದಲಿತ**ರಂತೆ ಭೂ ಸಂಘರ್ಷಗಳ ಚರಿತ್ರೆಯಲ್ಲಿ **ದಾಖಲಾಗಲಿಲ್ಲ.** ಇಂತಹ ವಿಚಿತ್ರಗಳ ಕೀಳರಿಮೆಯ ಮನಸ್ಥಿ**ತಿಯಿಂದ** ಅಲೆಮಾರಿಗಳು ಬಳಲುತ್ತಿ**ದ್ದಾರೆ.**

ಇಂತಹ **ಅಪೂರ್ಣ** ಹಿನ್ನೆಲೆಯನ್ನು ಧ್ಯಾನಿಸುತ್ತಲೇ ಕರ್ನಾಟಕ**ದ ಅಲೆಮಾರಿ** ಬುಡಕಟ್ಟು**ಗಳನ್ನು** ಚರ್ಚೆಗೆ ಒಳಪಡಿಸಿ**ಕೊಳ್ಳಬಹುದು.**

ವಸಾಹತು ಅಧ್ಯಯನಕಾರರಿಂದ ಇಂದಿನ ಉಪಸಂಸ್ಕೃ**ತಿ ಅಧ್ಯಯನ ಮಾಲೆ**, ಅಲೆಮಾರಿ ಅಧ್ಯಯನ ಮಾಲೆ- ವಿಶ್ವವಿದ್ಯಾಲಯಗಳ ಸಂಶೋಧನಾ ಕೃತಿಗಳೆಲ್ಲವನ್ನು ಮನಸಿನಲ್ಲಿಟ್ಟುಕೊಂಡು ಸರಳವಾಗಿ ಅಲೆಮಾರಿ ಯಾರು ಎಂದು ಪ್ರಶ್ನಿಸಬೇಕಾಗುತ್ತದೆ. ಸಂಘಟನೆಯ ಅನುಭವದಲ್ಲಿ ನೀಡುವ ಉತ್ತರಗಳು ಪ್ರಾಮಾಣಿಕತೆಗೆ ಹೆಚ್ಚು ಹತ್ತಿರವಾಗಲಿದ್ದು ಅದರಂತೆ ಅಲೆಮಾರಿ ಮುಖ್ಯಸ್ತರಕ್ಕೆ ಸೇರದ ಜೋಳಿಗೆ

With Best Compliments From

COMMON THREADS

VENKATESWARA LAYOUT
SAMPIGEHALLI
BANGALORE

With Best Compliments From

SARVODAYA FINVEST PVT.L.T.D

NO.1002, 40TH CROSS, 10TH MAIN
2ND BLOCK NEAR OLD POLICE STATION,
RAJAJINAGAR, BANGALORE-10
PH: 23522779

ಹೆಗಲೇರಿಸಿಕೊಂಡು ಅನ್ನಕ್ಕೆ ಬೇಡಿ –ಊರಾಚೆಯ ಬಯಲುಗಳಲ್ಲಿ ಬದುಕುತ್ತಾ ಬೇಟೆ– ಭಿಕ್ಷಾಟನೆ– ಪ್ರದರ್ಶನ ಕಲೆಗಳಲ್ಲಿ ಬೆಳೆದು ಬಂದವನು ಅಲೆಮಾರಿ. ಯಾವುದೇ ನಾಗರೀಕ ಸಂಪತ್ತಿನ (amenities) ಸನಿಹವಿಲ್ಲದೆ, ಧರ್ಮದ ಹಂಗಿಲ್ಲದೆ, ಆದಿಮ ಸ್ಥಿತಿಯಲ್ಲಿ ಬದುಕಿದ್ದ ಈ ಬುಡಕಟ್ಟುಗಳ ಮೂಲರೂಪಗಳು ಇಂದಿಗೂ ಗ್ರಾಮೀಣ ಭಾರತದಲ್ಲಿ ಕಾಣುತ್ತವೆ. ಯಾವುದೇ ಸಮುದಾಯ ತನ್ನನ್ನು ಅಲೆಮಾರಿ ಎಂದು ಕರೆದುಕೊಳ್ಳುವ ಮುನ್ನ ಈ ಮೇಲಿನ ವಿವರಗಳನ್ನು ಪ್ರಾಮಾಣಿಕವಾಗಿ ಪರೀಕ್ಷಿಸಿಕೊಳ್ಳಬೇಕು. ಕಾರಣ ಇಂದು ರಾಷ್ಟ್ರೀಯ ಮಟ್ಟದಲ್ಲಿ ಅಲೆಮಾರಿಗಳ ಬಗ್ಗೆ ಚರ್ಚೆಯಾಗುತ್ತಿದ್ದು ಕಲವು ಬಲಿಷ್ಟ ಸಮುದಾಯಗಳು ನಾವು ಅಲೆಮಾರಿಗಳೆಂದು ಘೋಷಿಸಿಕೊಳ್ಳುತ್ತಿದ್ದು ಇಲ್ಲಿಯೂ ಕಣ್ಣು– ಕಿವಿ–ಬಾಯಿ ಇಲ್ಲದ ಅಲೆಮಾರಿ ತಬ್ಬಲಿ ಸಮುದಾಯಗಳು ಮತ್ತದೇ ವಂಚನೆಗೆ ಒಳಗಾಗುವುದು ನಿಚ್ಚಳವಾಗುತ್ತಿದೆ.

ಕರ್ನಾಟಕದಲ್ಲಿ ಒಂದು ಹಂತಕ್ಕೆ ಈಗ ಗುರುತಿಸಿ ಸಂಘಟಿತವಾಗುತ್ತಿರುವ ಅಲೆಮಾರಿಗಳ ಪಟ್ಟಿ ಇಂತಿದೆ.

1. ಬುಡ್ಗಜಂಗಮ್(ಜಂಗಾಲರು)	12. ಪಾರ್ಧಿ
2. ಚೆನ್ನ ದಾಸರ್	13. ರಾಜಗೊಂಡ
3. ದಕ್ಕಲಿಗ	14. ಬೈಲ ಪತ್ತಾರ್
4. ಗೋಸಂಗಿ	15. ದೊಂಬಿದಾಸ
5. ಹಂಡಿಜೋಗಿ	16. ಘಿಸಾಡಿ
6. ಕೊರಮ	17. ಗೊಂದಳಿ
7. ಶಿಳ್ಳೆಕ್ಯಾತ	18. ಕಂಜಾರಬಾಟ
8. ಸಿಂಧೋಳ್ಳು	19. ಸಿಕ್ಕಲಿಗಾರ
9. ಸುಡುಗಾಡು ಸಿದ್ದ	20. ಕಾಡುಗೊಲ್ಲ
10. ಡುಂಗ್ರಿ ಘರಾಸಿಯಾ	21. ಹೆಳವ
11. ಹಕ್ಕಿಪಿಕ್ಕಿ	22.ಜೋಗಿ

ಅಲೆಮಾರಿ ಬುಡ್ಗಜಂಗಮ್‌ರಿಗೆ ತಮ್ಮ ಐಡೆಂಟಿಟಿಯನ್ನು ದಕ್ಕಿಸಿಕೊಳ್ಳಲಾಗುತ್ತಿಲ್ಲ. ಇವರು ಭಿಕ್ಷೆ ಬೇಡಲು ಹಾಕುವ ವೇಷಗಳನ್ನು ಸ್ಥಳೀಯ ಜನಪದರು ಕರೆದಂತೆ ಭಾವಿಸಲಾಗಿದೆ. ಬೈರಾಗಿ ವೇಷ, ಬಹುರೂಪಿ, ಹಗಲುವೇಷ, ಬುರ್ರಕಥೆ, ಇಂತಹ ಹೆಸರುಗಳಲ್ಲೆ ಈ ಅಲೆಮಾರಿಗಳು ಸಾಗುತ್ತಿದ್ದು ಇದರ ಬಗ್ಗೆ ಸ್ಪಷ್ಟೀಕರಣ ನೀಡಿ ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯ ದಕ್ಕಿಸಿಕೊಡಬೇಕಾದದ್ದು ಸಾಮಾಜಿಕ ನ್ಯಾಯದ ನಿಯೋಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ.

ಆದರೆ ಇನ್ನೂ **ಸಂಘಟನೆಗೆ ದಕ್ಕದ ಚಪ್ಪರಬಾಂದ್**, ಗಂಟಿಚೋರ್, ನಾಂಗ್‌ಗಾರುಡಿ, **ಹಾವಾಡಿಗ(ಮದಾರಿ), ಕರಡಿ** ಖಲಂದರ್, ದರವೇಶಿ, ಡೌರಿ ಗೋಸಾಯಿ, ಗೋಸಾಯಿ, ಮೊಂಡರು, ಪರ್ವತ ಮಲ್ಲಯ್ಯ ಇವನ್ನೂ ಕೂಡಿಕೊಂಡರೆ 32 ಅಲೆಮಾರಿ ಬುಡಕಟ್ಟುಗಳು ಕರ್ನಾಟಕದಲ್ಲಿದ್ದು ಇನ್ನು ಕಣ್ಣಿಗೆ ಕಾಣದ (Invisible) ಗುಂಪುಗಳನ್ನು ಹುಡುಕಾಡಲಾಗುತ್ತಿದೆ. ಈ ಮೇಲೆ ಹೇಳಿದ ಅಲೆಮಾರಿಗಳನ್ನು ಮೂರು ಗುಂಪುಗಳಲ್ಲಿ ಪ್ರತ್ಯೇಕಿಸಲಾಗಿದೆ.

ಬುಡ್ಗಜಂಗಮ್, ಚೆನ್ನದಾಸರ್, ದಕ್ಕಲಿಗ, ಗೋಸಂಗಿ, ಹಂಡಿಜೋಗಿ, ಕೊರಮ, ಶಿಳ್ಳೇಕ್ಯಾತ, ಸಿಂಧೋಳ್ಳು, ಸುಡುಗಾಡುಸಿದ್ದ ಇವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿಡಲಾಗಿದೆ.

ಡುಂಗ್ರಿ ಘರಾಸಿಯಾ, ಹಕ್ಕಿಪಿಕ್ಕಿ, ಪಾರ್ಧಿ, ರಾಜಗೊಂಡ ಇವುಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಿದ್ದು ಉಳಿದ ಹದಿನಾಲ್ಕು– ಹದಿನೈದು ಸಮುದಾಯಗಳನ್ನು ಹಿಂದುಳಿದ ವರ್ಗದ ಪ್ರವರ್ಗ–1 ರಲ್ಲಿ ಸೇರಿಸಲಾಗಿದೆ.

ಸೋಜಿಗವೆಂದರೆ ಈ ಎಲ್ಲಾ ಸಮುದಾಯಗಳು ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದು ಇವುಗಳನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಬೇಕಾಗಿತ್ತು. ಹಲವೆಡೆ ಒಂದೇ ಪ್ರದೇಶದಲ್ಲಿ ಟೆಂಟು ಹಾಕಿಕೊಂಡು ಬದುಕುವ ಅಲೆಮಾರಿಗಳಿಗೆ ತಮ್ಮ ಕೆಟಗರಿ (Category)ಗಳು ಗೊತ್ತೇ ಇಲ್ಲದೇ 'ಜಾತಿ' ಎನ್ನುವುದು ಕೇವಲ ತಮ್ಮ ಸಾಂಸ್ಕೃತಿಕ ಜೈವಿಕ ಸಂಬಂಧಗಳಿಗಾಗಿ ವಿನಾ ಇವುಗಳ ಹೆಸರಿನಲ್ಲಿ ತಮ್ಮ ಅಭಿವೃದ್ಧಿ ಇದೆ ಎಂಬ ಪ್ರಾಥಮಿಕ ಎಚ್ಚರವೂ ಇಲ್ಲ.

ಅಲೆಮಾರಿಗಳು ಮತ್ತು ಐಡೆಂಟಿಟಿ

ಇಂದು ಅಲೆಮಾರಿಗಳು ಅನುಭವಿಸುತ್ತಿರುವ ಗಭೀರ ಸಮಸ್ಯೆ 'ಐಡೆಂಟಿಟಿ' ಯನ್ನು ತಿಳಿಯುವುದಾಗಿದೆ. **ಇಂತಹ ಐಡೆಂಟಿಟಿ ಸಮಸ್ಯೆಯಲ್ಲಿ ಬುಡ್ಗಜಂಗಮರು, ಚೆನ್ನದಾಸರ್**, ಸಿಂಧೋಳ್ಳು, **ಶಿಳ್ಳೆಕ್ಯಾತ ರಂತಹ ಅಲೆಮಾರಿ ಸಮುದಾಯಗಳು ನರಳುತ್ತಿದ್ದಾರೆ.** ಇದು ಬೆಕ್ಕಿಗೆ ಚೆಲ್ಲಾಟವಾದರೆ ಇಲಿಗೆ ಪ್ರಾಣ ಸಂಕಟದ ಪ್ರಹಸನವಾಗಿದೆ.

ಒಂದುಕಡೆ ತಮ್ಮ ಸಮುದಾಯಗಳ ಐಡೆಂಟಿಟಿಯ ಯಾವುದೇ ಸಮಸ್ಯೆ ಇಲ್ಲದೆ ಸಂವಿಧಾನ ಬದ್ದ ಮೀಸಲಾತಿ ಸವಲತ್ತನ್ನು ಪಡೆಯುತ್ತಿರುವ ಸಮುದಾಯಗಳು ಇದ್ದರೆ ಮತ್ತೊಂದೆಡೆ ತಮ್ಮ ಲಿಖಿತ ಚರಿತ್ರೆಯನ್ನು ಕಾಣದ ತಮ್ಮನ್ನು ಪ್ರತಿನಿಧಿಸುವವರಾರೂ ಇಲ್ಲದೆ ತಮ್ಮ ಐಡೆಂಟಿಟಿ ತಿಳಿಯದೆ, ತಿಳಿದರೂ ಆತಂಕದಿಂದ ಈ 'ಗಂಡಬೇರುಂಡ' ಮೀಸಲು **ವ್ಯವಸ್ಥೆಯನ್ನು** ಅಸಾಹಾಯಕತೆಯಿಂದ ನೋಡುವ ಅಲೆಮಾರಿಗಳು ಬದಿಗೆ **ತಳ್ಳಲ್ಪಟ್ಟಿದ್ದಾರೆ.**

ಉದಾಹರಣೆಗೆ 'ಬುಡ್ಗಜಂಗಮ್'ರ ಸಂಪೂರ್ಣ Antropological ವಿವರಗಳನ್ನು Edgar thruston, ಕೆ.ಎಸ್.ಸಿಂಗ್, ಉಪಸಂಸ್ಕೃತಿ ಅಧ್ಯಯನ ಮಾಲೆ– ಅಲೆಮಾರಿ ಅಧ್ಯಯನ ಮಾಲೆ– ವಿಶ್ವ ವಿದ್ಯಾಲಯಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಕೃತಿಗಳು ಸರ್ಕಾರಿ ಆದೇಶಗಳು ಇವೆಲ್ಲವುಗಳಿಗಿಂತ ಇಂದಿಗೂ ಸ್ಪಷ್ಟಪಡಿಸುವ ಕ್ಷೇತ್ರಾಧ್ಯಯನ ಅಂದರೆ ಅದರ 'ಎತ್ನೋಗ್ರಫಿ'ಯನ್ನು ಪರಿಶೀಲಿಸುವ ಕ್ರಮ, ಮೀಸಲಾತಿ/ ಜಾತಿಯನ್ನು ತಿಳಿಯದ ಬುಡ್ಗಜಂಗಮ್‌ರು ಬಳಸುವ 'ಬುಡ್ಗ' ಸಮುದಾಯದ ಉಪಕರಣ ನಮ್ಮ ಬುರ್ರಕಥೆ ಈರಮ್ಮ ತನ್ನ ಬುರ್ರಕಥೆ ಹಾಡುವಾಗ ಬಳಸುತ್ತಾಳೆ. ಆಂಧ್ರದಲ್ಲಿ ಗಂಡಸರು ನುಡಿಸುತ್ತಾರೆ. **ಈ** ಜಂಗಮ ಸಂಚಾರಿ ಜಿಂಗಾಲ. ಆದರೆ ಈ ಅಲೆಮಾರಿಗಳ **ಮೀಸಲಾತಿಯನ್ನು** ಕೆಲವು ಲಿಂಗಾಯಿತ ಜಂಗಮರು ವಂಚಿಸಿದ ಪ್ರಕರಣಗಳು ನಾಡಿಗೆ **ತಿಳಿದಿದೆ.**

ಕೆ.ಎಸ್.ಸಿಂಗ್‌ರ ಮೊದಲ ವರದಿಯ ಮೂರು ಪುಟಗಳಲ್ಲಿ ಅಲೆಮಾರಿ ಬುಡ್ಗ ಜಂಗಮರ ಬೆಡಗು– ಆಚಾರ– ವಿಚಾರ– ಸಂಸ್ಕೃತಿ ವಿವರಿಸುತ್ತಾನೆ. ಆದರೆ ನಾಲ್ಕನೆಯ **ಪುಟದಿಂದ ವಿಭಿನ್ನ ಮಾಹಿತಿ ಕಾಣುತ್ತದೆ.** ಇದನ್ನೇ ಕೆಲವು ಲಿಂಗಾಯಿತರು **ಸಮರ್ಥಿಸಿಕೊಳ್ಳಲಾರಂಭಿಸಿದರು. ಮಹತ್ವದ** ವಿಷಯವೆಂದರೆ ಬುಡ್ಗಜಂಗಮ/ ಬೇಡ**ಜಂಗಮರನ್ನು ಕುರಿತು ಎರಡನೇ** ಬಾರಿ Anthropological survey of India ದಿಂದ ಅಧ್ಯಯನಕ್ಕೆ ಒಳಪಡಿಸಲಾಯಿತು. ಭಾರತ ಸರ್ಕಾರ ಪ್ರಕಟಿಸಿದ ಈ ವರದಿಯನ್ನು ಸಾರ್ವಜನಿಕವಾಗಿ ಚರ್ಚಿಸಲಾಗಿಲ್ಲ. ಇದರಲ್ಲಿ ಬುಡ್ಗ/ಬೇಡ ಜಂಗಮರ್‍ಯಾರು ಎಂದು ಸ್ಪಷ್ಟವಾಗಿ ತಿಳಿಸಿರುವ ಈ ವರದಿ ಇಂತಿದೆ.

A Restudy of the Beda Jangam

Following a complaint that the Jangam, uppercrust of the Lingayat, had passed themselves of as Beda Jangam in order to corner the benefits of the scheduled castes, a fresh study was conducted of the Beda Jangam.



The word beda is derived from vedh which means to pierceor trap. The Beda/ Budga Jangam were a community of hunters and burd trappers and originally belong to Andra Pradesh where they are called Budaga Jangam.Distributed in all the three regions of Andhra Pradesh, viz. coastal Andhra. Rayalseema and Telangana, they are notified as Beda Jangam, Budga Jangam, According to the 1981 census, their population in Andhra Pradesh is 12,024. They use the Telugu language and Telugu script for both inter and intra group communication. The Beda Jangam are non vegetarian, and their staple food is rice. Alcoholic drinks are also consumed. They have surnames like Gandham, Bhoota, Toorapati, Pasthamvallu, Kallemvallu, Muggollu; chirpati, Bailupadollu, etc.. and these surnames regulate marriage alliances.



The Beda Jangam are endogamous and follow the rule of surname (intiperu) exogamy. Bride price (oli) is in yogue. In addition to house hold work the Beda Jangam women help the men in their traditional occupation of soothsaying and seeking alms, and also work as labour picking cotton in the cotton fields. They are also engaged in activities such as weaving mats with date palm leaves, etc. An auspiciouis day is fixed for the marriage which is solemnized on the advice of the community elder (Kula pedda).

The Beda Jangam are mainly landless. The children help their parents in seeking alms and in mat-weaving. There has been an increase in the number of daily- wage casual labourers. The Beda Jangam are Hindu and Pedda Gussayi is their kula demudu and Perantalu their kula devata. In every family, it is customary to keep formented buttermilk in a pot (Pulineella kunda) for worship. They have traditional as well as modern linkages with various communities. Their literacy rate, accor to the 1981 census, is 18.54 per cent, Although they pref indigenous medicate, modern medicate is also availed of. T prefer three children,and their attitude towards fami planning is positive.

In Karnataka the nomadic Budaga or Beda Jangam are presently living in the districts of Bid Gulbarga, Raichur and Bellary, and their populati according to the 1981 census is 3035.

Traditionally officiating priesta for some of th Holeya and Madiga communities, they are religious mendicants, soothsayers, and wa laborers as well. Their literacy rate is 27.6 per cent (1981 census). The Beda Jang are entirely different from the Jangam group of Lingayat, a numerically dominar community in Karnataka.

In Maharashtra,the Beda Jangam/ Bud Jangam are notified as a scheduled caste. They however, could not be traced in sou Maharashtra, but a small number are officially reported to exist in the Aurangabad distinct. It is also officia acknowledged that some Jangam individuals have secured scheduled ca certificates as Beda , Budga and Mal Jangam to corner the benefits of scheduled caste status.

It may be mentioned that t Beda/ Budaga Jangam were no included in the 1931 list of Depressed classes/ Exterior castes.The term Beda/ Budga Jangam was not used. Instea the Jangam of the Bhandara district of the erstwhile centr provinces and Berer(now in Maharashtra) were included a Depressed class; also the Jangam in Maharashtra are now an O.B.Ccommunity p to 1950, THE Beda/Buda Jangam were mentioned as a scheduled caste in the Hyderabad area(i.e.former Niz territories) In 1976 the Beda Jangam/Budaga Jangam were notified as a scheduled caste only in Aurangabad which includes the districts of Aurangabad, Parbhani, Bhir, Nanded and Osmanabad, and in the Rajura ta of Chandrapur distict.



ಪ್ರಸ್ತುತ ಕರ್ನಾಟಕ ಸರ್ಕಾರ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ಮತ್ತು ರಾಜ್ಯದ ಇಲಾಖೆಗಳು ಐಡೆಂಟಿಟಿ ಸಮಸ್ಯೆಯನ್ನು ಪರಿಹರಿಸಬಹುದಿತ್ತು. ಆದರೆ ಹಲವರಿಗೆ ಇಂತಹ ಸಮಸ್ಯೆಗಳ ಬಗ್ಗೆ ಕೇವಲ ಅನುಕಂಪ ಮಾತ್ರವಿದ್ದು ಕಾನೂನಿನ ಪರಿಹಾರ ಕೊಡಿಸಲು ಮುಂದಾಗುತ್ತಿಲ್ಲ. ವೈಜ್ಞಾನಿಕವಾದ ಅಲೆಮಾರಿ ಪಟ್ಟಿಯನ್ನು ರಚಿಸಬೇಕು. ಮತ್ತು ಅಲೆಮಾರಿ ಐಡೆಂಟಿಟಿ ಸಮಸ್ಯೆಯನ್ನು ಆದ್ಯತೆಯಾಗಿ ಪರಿಹರಿಸಬೇಕು.



The population of the Beda/Budga Jangam which was 16 during the 1961 census, sharply increased to 455 by 1971 and to 27,994 in 1981. These sudden increases between 1971 and 1981 are not consistent with the natural population growth pattern in those districts. Also between 1971 and 1981, area restrictions were removed as far as this community was concerned.

The Beda Jangam as well as the Mala Jangam categories have been heavily infiltrated by the Jangam of the Veershaiva/ Lingayat group. The stigma of unsociability does not attach to these Jangam as it does to the Jangam/ Mala Jangam. The Jangam are also vegetarian. They treat communities as untouchables thus perpetuating caste division yet to be irony is that some of them pass themselves off as Beda Jangam is to avail the benefits of protective discrimination given to the scheduled castes .These Jangam even claim that the Kannada word Beda affixed to their community name Jangam, means to beg and that seeking alms is their age old practice. This goes against the traditional meaning in the Kannda language of the root word beda which means hunter and which also means not needed.

Thurston, E., Castes and Tribes of Southern India (Madras: Government Press, 1909; rpt. 1975, Delhi: Cosmo Publications).

ಇಷ್ಟಾಗಿಯೂ ಅಲೆಮಾರಿ ಬುಡ್ಗಜಂಗಮ್‌ರಿಗೆ ತಮ್ಮ ಐಡೆಂಟಿಟಿಯನ್ನು ದಕ್ಕಿಸಿಕೊಳ್ಳಲಾಗುತ್ತಿಲ್ಲ. ಇವರು ಭಿಕ್ಷೆ ನೀಡಲು ಹಾಕುವ ವೇಷಗಳನ್ನು ಸ್ಥಳೀಯ ಜನಪದರು ಕರೆದಂತೆ ಭಾವಿಸಲಾಗಿದೆ. ಬೈರಾಗಿವೇಷ, ಬಹುರೂಪಿ, ಹಗಲುವೇಷ, ಬುರ್ರಕಥೆ, ಇಂತಹ ಹೆಸರುಗಳಲ್ಲೆ ಈ ಅಲೆಮಾರಿಗಳು ಸಾಗುತ್ತಿದ್ದು ಇದರ ಬಗ್ಗೆ ಸ್ಪಷ್ಟೀಕರಣ ನೀಡಿ ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯ ದಕ್ಕಿಸಿಕೊಡಬೇಕಾದದ್ದು ಸಾಮಾಜಿಕ ನ್ಯಾಯದ ನಿಯೋಗಿ ಸಂಸ್ಥೆಗಳ ಜವಾಬ್ದಾರಿಯಾಗಿದೆ.

ಈ ಮಧ್ಯೆ ಇಂತಹ ಅನಾಥ ಸಮುದಾಯಗಳ ಬಗ್ಗೆಯೂ ಅಸಹನೆಯಿಂದ ನಡೆದುಕೊಳ್ಳುವ ಸಂಶೋಧಕರು ಇದ್ದಾರೆ.

ಮುಖ್ಯವಾದ ಮತ್ತೊಂದು ಸಂಗತಿ ಎಂದರೆ ಬುಡ್ಗಜಂಗಮರು ಮತ್ತು ಸುಡುಗಾಡು ಸಿದ್ದರು ಒಂದೇ ಆಗಿದ್ದಾರೆ. ಬೆಡಗು– ಆಚಾರ– ವಿಚಾರ– ಮದುವೆ– ಸಂಬಂಧಗಳು ಭಾಷೆಯಿಂದ ಒಂದೇ ಆದರೂ ಐಡೆಂಟಿಟಿಯ ನೆಲೆಯಲ್ಲಿ ಬೇರೆ ಬೇರೆ ಸಾಗುತ್ತಿದ್ದಾರೆ. ಇದನ್ನು ಯಾರೇ ಕ್ಷೇತ್ರಾಧ್ಯಯನದಲ್ಲಿ ಪರೀಕ್ಷಿಸಬಹುದು.

ಇಂತಹ ಐಡೆಂಟಿಟಿ ಸಮಸ್ಯೆ ಶಿಳ್ಳೆಕ್ಯಾತರನ್ನು ಕಾಡುತ್ತಿದೆ. ಭಾರತ ಸರ್ಕಾರದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಅಲೆಮಾರಿ ಶಿಳ್ಳೆಕ್ಯಾತರು ತಮ್ಮ ಕುಲಕಸುಬಾದ ತೊಗಲುಗೊಂಬೆ ಮತ್ತು ಮೀನು ಹಿಡಿಯುವ ವೃತ್ತಿಗೆ ಅಂಟಿಕೊಂಡವರು. ಮೂಲತಃ ಮರಾಠಿ ನೆಲದಿಂದ ವಲಸೆ ಬಂದ ಶಿಳ್ಳೆಕ್ಯಾತರು ಮರಾಠಿಯನ್ನು ಮಾತನಾಡಿದರೂ ಅವರದೇ ಆದ ಮರಗು ಭಾಷೆ ಇದೆ. ಸ್ಥಳೀಯವಾಗಿ ವಿವಿದೆಡೆ ಇವರನ್ನು ಕಿಳ್ಳೆಕ್ಯಾತ, ಕಟಬು, ಗೊಂಬೆರಾಮ, ಬುಂಡೆಬೆಸ್ತ, ಎಂದೆಲ್ಲ ಕರೆದಿದ್ದು ಈ ಪರ್ಯಾಯ ಹೆಸರುಗಳೆಲ್ಲಾ ಪ್ರವರ್ಗ–1 ರಲ್ಲಿ ದಾಖಲಾಗಿದೆ. ಜಾತಿಪತ್ರ ನೀಡುವ ತಹಶೀಲ್ದಾರ್ ಶಿಳ್ಳೆಕ್ಯಾತರಿಗೆ ಕಿಳ್ಳೆಕ್ಯಾತ ಎಂದು ನೀಡುತ್ತಾ ಸಂವಿಧಾನ ಬದ್ದ ಹಕ್ಕನ್ನು ಹೀಗೆ ತಿರಸ್ಕರಿಸುತ್ತಾ ಅಲೆಮಾರಿಗಳಿಗೆ ದ್ರೋಹವೆಸಗಿದ್ದಾರೆ.

ಸುತ್ತಾಡುವ ಈ ಅನಾದಿಗಳ ಪರವಾಗಿ ಇಂತಹ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಬೇಕಾದ ಆಯೋಗಗಳು ಬಲಿಷ್ಟರ ಧ್ವನಿಯಾಗಿವೆ. ಇನ್ನೂ ಅಸಂಘಟಿತ ಅನಕ್ಷರಸ್ತ ಅಲೆಮಾರಿಗಳು ಕನಿಷ್ಟ ಕಾನೂನಿನ ಹೋರಾಟ ಮಾಡುವ ಶಕ್ತಿಯನ್ನೂ ಪಡೆದಿಲ್ಲ. ಇವರ ಪರವಾಗಿ ಕನಿಷ್ಟ ಮಾನವೀಯ ಕಾರಣದಿಂದಾದರೂ ವಕೀಲರು ದನಿಯಾಗಬೇಕಿತ್ತು.

ಇಂತಹದೇ ಸಮಸ್ಯೆ ಸಿಂಧೋಳ್ಳು ಸಮುದಾಯಕ್ಕಿದೆ. ಜಗತ್ತಿನ ಯಾವುದೇ ಸಮುದಾಯ ಇವರಷ್ಟು ಬಡತನದಿಂದ ಇರಲು ಸಾಧ್ಯವಿಲ್ಲ. ಇಂದಿಗೂ ಕನಿಷ್ಟ ಹತ್ತನೆಯ ತರಗತಿಯ ವಿದ್ಯಾರ್ಥಿಯನ್ನು ನೀಡದ ಈ ಸಮುದಾಯವನ್ನು ಸ್ಥಳೀಯ ದುರ್ಗಮುರ್ಗಿ, ಬೂರ್‌ಬೂರ್‌ಶಾ, ಪೋತರಾಜ ಎಂತೆಲ್ಲಾ ಕರೆದು ಹಾವನೂರು ವರದಿಯಲ್ಲಿ ಈ ಪರ್ಯಾಯ ಹೆಸರುಗಳನ್ನು ಹಿಂದುಳಿದ ವರ್ಗದ ಪ್ರವರ್ಗ–1 ರ ಪಟ್ಟಿಯಲ್ಲಿ ಇಡಲಾಗಿದೆ. ತಮ್ಮ ಬೆನ್ನಿಗೆ ಛಡಿ ಏಟಿನಿಂದ ಬಾರಿಸಿಕೊಳ್ಳುವ ಈ ಅಲೆಮಾರಿಗಳಿಗೆ ಸಂವಿಧಾನ ಸಾಮಾಜಿಕ ನ್ಯಾಯ ಮರೀಚಿಕೆಯಾಗಿದೆ.

ಉಪಸಂಸ್ಕೃತಿ ಮಾಲೆಯಲ್ಲಿ ಇಂತಹ ಅಲೆಮಾರಿ ಸಿಂಧೋಳ್ಳು ಸಮುದಾಯವನ್ನು ನಾಡೋಜ ಗೀತಾ ನಾಗಭೂಷಣರವರು ದುರ್ಗಮುರ್ಗಿ ಎಂತಲೇ **ಗುರುತಿಸಿದ ಪರಿಣಾಮ** ಅದರ ಮೂಲ ಸಿಂಧೋಳ್ಳು **ಐಡೆಂಟಿಟಿ ಮರೆ**ಮಾಚಿದಂತಾಗಿ ಪರಿಶಿಷ್ಟ ಜಾತಿಯ **ಹಕ್ಕುಗಳು ದಕ್ಕಲಿಲ್ಲ.**

ಈಗೆ **ಹಲವಾರು ಅಲೆಮಾರಿ ಸಮುದಾಯ**ಗಳು ಇಂದಿಗೂ **ಐಡೆಂಟಿಟಿ ಸಮಸ್ಯೆ**ಯಿಂದ ಬಳಲುತ್ತಿದ್ದು ಇದೀಗ ಎಚ್ಚರವಾಗುತ್ತಿದ್ದಾರೆ. ಒಮ್ಮೆ ಹಾವನೂರರ ಜೊತೆ ಸಹವರ್ತಿಯಾಗಿ ಕೆಲಸ ಮಾಡಿದ ಶ್ರೀ ಸಣ್ಣೀರರನ್ನು ಕೇಳುತ್ತಾ ಏಕೆ ಹಾವನೂರರು ಅಲೆಮಾರಿಗಳ ಪರ್ಯಾಯ ಹೆಸರುಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರು? ಎಂದಾಗ ಹಾವನೂರರು ಅತ್ಯಂತ ವಿಷಾದದಿಂದ



With Best
Compliments From

V.A.MOIDEEN
Proprietor

RAHIMANIYA
RESTAURANT
Veg- Non Veg

H.K.P. Broad Way Road,
Bangalore-560051
Ph: 080-22866997

With Best Compliments From:

Ashok Dawane
No.31, Coconut Garden,
Nagarabhavi,
Bengaluru-560072

With Best Compliments From

KALYAN
JEWELLERS

Kalyan Jewellers Salem Pvt Ltd

No.17, Dickenson Road, Bangalore
Tel: 080-25550533, 25550633
Registered Office:
Sreekrishna Building,
West Palace Road,
Thrissur- 680022, Kerala.
www.kalyanjewellers.net

With Best Compliments From

Sri Venkatadri Enterprises
Kalasipalyam
Bangalore

ಅಲೆಮಾರಿಗಳು ಅಲ್ಲಿಯೂ ಇರಲಿ ಮತ್ತು ಅತೀ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೂ ಇರಲಿ ಎಂದು ಅನುಕಂಪದಿಂದ ಸೇರಿಸಿದರು ಎಂದು ಹೇಳಿದರು.

ಪ್ರಸ್ತುತ ಕರ್ನಾಟಕ ಸರ್ಕಾರ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ಮತ್ತು ರಾಜ್ಯದ ಇಲಾಖೆಗಳು ಐಡೆಂಟಿಟಿ ಸಮಸ್ಯೆಯನ್ನು ಪರಿಹರಿಸಬಹುದಿತ್ತು. ಆದರೆ ಹಲವರಿಗೆ ಇಂತಹ ಸಮಸ್ಯೆಗಳ ಬಗ್ಗೆ ಕೇವಲ ಅನುಕಂಪ ಮಾತ್ರವಿದ್ದು ಕಾನೂನಿನ ಪರಿಹಾರ ಕೊಡಿಸಲು ಮುಂದಾಗುತ್ತಿಲ್ಲ.

ಕೂಡಲೇ ಕರ್ನಾಟಕದಲ್ಲಿ ಒಂದು ಶಾಶ್ವತ ಅಲೆಮಾರಿ ಆಯೋಗವನ್ನು ರಚಿಸಿ ಅತ್ಯಂತ ವೈಜ್ಞಾನಿಕವಾದ ಅಲೆಮಾರಿ ಪಟ್ಟಿಯನ್ನು ರಚಿಸಬೇಕು. ಮತ್ತು ಅಲೆಮಾರಿ ಐಡೆಂಟಿಟಿ ಸಮಸ್ಯೆಯನ್ನು ಆದ್ಯತೆಯಾಗಿ ಪರಿಹರಿಸಬೇಕು.

ಪರಿಶಿಷ್ಟ ಜಾತಿಯ ಲಂಬಾಣಿಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ 'ಬಂಜಾರ' ಪದವನ್ನು ಉಪಯೋಗಿಸದಷ್ಟು ಎಚ್ಚರದಿಂದಿದ್ದಾರೆ. ಆದರೆ ಇಂತಹ ಎಚ್ಚರ ದ್ರಾವಿಡ ಅಲೆಮಾರಿಗಳಿಗೆ ಇಲ್ಲ ಎನ್ನುವುದು ವಾಸ್ತವ.

ವಸತಿ ಸಮಸ್ಯೆ

ವಿಶ್ವ ಸಂಸ್ಥೆಗೆ ಭಾರತ ಸರ್ಕಾರ ಒಂದು ಮುಚ್ಚಳಿಕೆಯನ್ನು ನೀಡಿದ್ದು ಅದರಂತೆ ಭಾರತದಲ್ಲಿ 2015ರ ವೇಳೆಗೆ ಗುಡಿಸಲು ಟೆಂಟುಗಳು ಇಲ್ಲದೆ ಪ್ರತಿಯೊಬ್ಬನಿಗೂ ಸೂರು ನೀಡುತ್ತೇವೆ ಎಂದು ಸುಳ್ಳು ಹೇಳಿದೆ. ವಾಸ್ತವವಾಗಿ ಶೇ 80% ರಷ್ಟು ಅಲೆಮಾರಿಗಳಿಗೆ ರೇಷನ್ ಕಾರ್ಡು, ಮತದಾನದ ಹಕ್ಕು, ಜಾತಿಪತ್ರ ಗಳಿಲ್ಲದೇ ಟೆಂಟುಗಳಲ್ಲೇ ಬದುಕಿದೆ.

ಕರ್ನಾಟಕದಲ್ಲಿ ಸರಾಸರಿ ಅರವತ್ತೈದು ಸಾವಿರ ಮನೆಗಳು ನೀಡಿದ್ದೇ ಆದರೆ ಅಲೆಮಾರಿಗಳು ತಮ್ಮ ಅಲೆಮಾರಿತನವನ್ನು ಬಿಡುತ್ತಾರೆ. ಮನೆ ನೀಡಿದರೆ ಅವರು ಅದರಲ್ಲಿ ವಾಸಿಸುವುದಿಲ್ಲ ಎಂಬುದು ಶುದ್ಧ ಸುಳ್ಳಾಗಿದೆ. ಅಂತಹ ಅಪಪ್ರಚಾರ ಇನ್ನಷ್ಟು ನಕಾರಾತ್ಮಕವಾಗಿ ನಿರುತ್ಸಾಹಗೊಳಿಸಿ ಅಲೆಮಾರಿತನವನು ಮುಂದುವರೆಸುತ್ತಿದೆ.

ತುರ್ತು ಆದ್ಯತೆಗಳು

ಭಾರತ ಸರ್ಕಾರ ಶಾಶ್ವತ ಅಲೆಮಾರಿ ಆಯೋಗವನ್ನು ರಚಿಸಿ ಭಾರತದ ಎಲ್ಲಾ ಅಲೆಮಾರಿ ಸಮುದಾಯಗಳ ಸರ್ವಾಂಗೀಣ ಪ್ರಗತಿಗೆ ಬದ್ಧತೆ ತೋರಿಸಬೇಕು. ಬಹಳ ಮುಖ್ಯವಾಗಿ ಅಲೆಮಾರಿ ಬುಡಕಟ್ಟುಗಳು ಪರಿಶಿಷ್ಟ ಜಾತಿ– ವರ್ಗ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಂಚಿಹೋಗಿದ್ದು ಇಂತಹ ಪಟ್ಟಿಗಳಿಂದ ಅಲೆಮಾರಿ ಬುಡಕಟ್ಟುಗಳನ್ನು ಹೊರತೆಗೆದು 3ನೇ ಪರಿಶಿಷ್ಟವನ್ನು ರಚಿಸಬೇಕು. ಈ 3rd schedule ರಚಿಸಲು ಸಂವಿಧಾನ ತಿದ್ದುಪಡಿಯಾಗಬೇಕಿದೆ.

ಬಲಿಷ್ಟರೊಡನೆ ಪೈಪೋಟಿ ಮಾಡಲಾಗದ ಅಲೆಮಾರಿಗಳಿಗೆ ಮೂರನೇ ಅಲೆಮಾರಿ ಪರಿಶಿಷ್ಟ ಸಂಜೀವಿನಿಯಾಗುತ್ತದೆ.

ಆದರೆ ಇಷ್ಟೆಲ್ಲಾ ಸಾಧ್ಯವಾಗಲು ರಾಜಕೀಯ ಇಚ್ಛಾಶಕ್ತಿಯನ್ನು ಕಟ್ಟಿಕೊಡುವ ಒತ್ತಡಗುಂಪುಗಳು (Pressure groups) ಅಲೆಮಾರಿಗಳಿಗೆ ಇಲ್ಲದ ಕಾರಣ ಅಲೆಮಾರಿಗಳು ಧ್ವನಿ ಕಳೆದುಕೊಂಡಿದ್ದಾರೆ.

ಹದಿನೈದು ಕೋಟಿ ಅಲೆಮಾರಿಗಳು ತಳ ಕಚ್ಚಿದ್ದು ಇದನ್ನು ಯಾವುದೇ ವ್ಯವಸ್ಥೆ ಮೂಕವಾಗಿ ಮನಿಸುತ್ತಿದೆ ಎಂದರೆ ಇದು ಆ ದೇಶದ ಅಂಗವಿಕಲ ಶಾಸಕಾಂಗವಾಗಿರುತ್ತದೆ ಎಂದು ಎಲ್ಲೋ ಓದಿದ ನೆನಪು.

ವಸತಿ– ಶಿಕ್ಷಣ– ಮೀಸಲಾತಿ– ಈ ಮೂಲಕ ಅಲೆಮಾರಿ ಜಗತ್ತನ್ನು ಬೆಳಗುವ ಅಂಬೇಡ್ಕರ್‌ರಾಗಿ ಈ ಆಂದೋಲನ ಕಾಯುತ್ತಿದೆ. ಇದನ್ನು ಸ್ಪಂದಿಸುವ ಈ ದೇಶದ ಸಾಹಿತಿಗಳು ಅಕಾಡೆಮಿಗಳು/ ಆಯೋಗಗಳು ಕಡೆಗೆ ಪ್ರಜ್ಞಾವಂತರು ಸಹ ನಮ್ಮನ್ನು ಮರೆತವರೆಂದು ಅಲೆಮಾರಿಗಳು ಭಾವಿಸಿದರೆ ತಪ್ಪೇನಿಲ್ಲ.

ಬಾಲಗುರುಮೂರ್ತಿ

ಕವಿ, ಕಥೆಗಾರ, ಚಿಂತಕ, ಸಂಘಟಕ. ಇಂಗ್ಲೀಷ್ ಅಧ್ಯಾಪಕ. ಅಲೆಮಾರಿ ಬುಡಕಟ್ಟು ಮಹಾಸಭಾ ಅಧ್ಯಕ್ಷರಾಗಿ ಸೇವೆ. ಅಲೆಮಾರಿ ಗುಂಪುಗಳ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದ ಹೆಗ್ಗಳಿಕೆ ಹಾಗೂ ಆ ಜನಾಂಗಗಳ ಬಗ್ಗೆ ಅಧ್ಯಯನ: ಕೆಲ ಕೃತಿಗಳ ರಚನೆ; ಪ್ರಕಟಣೆ.

ಸಿಗುತ್ತವೆ ಇಲ್ಲಿ ಪುಣ್ಯಭೂಮಿ ಭಾರತದಲ್ಲಿ
ತಾಯಂದಿರ ಗರ್ಭಗಳು ಬಾಡಿಗೆಗೆ
ತಾಯ್ತನದ ಬಯಕೆಗಳ ಅದುಮಿಟ್ಟು
ದುಡ್ಡು ಕೊಟ್ಟವರಿಗೆ ಹೆತ್ತು ಕೊಡುತ್ತಾರೆ
ಇಲ್ಲಿ ಬಾಡಿಗೆ ತಾಯಂದಿರು

ಬಸಿರಲ್ಲಿ ಮೂಡಿದ ಮಗುವಿನ
ಒದ್ದು ಮೈ ಬದಲಿಸುವ ಚಲನೆ
ತಾಯ್ತನದ ಖುಷಿಯ ಘಳಿಗೆಯಲ್ಲಿ
ಕಲ್ಲಾಗಿ ಕನಸಿಗೆ ನಿಷೇಧ ಹೇರುತ್ತಾರೆ
ಹಿಂಸೆಯ ಶಿಲುಬೆಗೇರುತ್ತಾರೆ
ಇಲ್ಲಿ ಬಾಡಿಗೆ ತಾಯಂದಿರು

ಮಗು ಕನಲುತ್ತದೆ, ಮಗ್ಗಲು ಬದಲಿಸುತ್ತದೆ
ಮುಲುಕುತ್ತದೆ, ಹೊಟ್ಟೆಗೆ ಒದೆಯುತ್ತದೆ,
ಮಮತೆಯ ಕೈಸವರಬೇಕೆಂದರೆ
ಅಲ್ಲಿಯ ಅಮ್ಮ ಸತ್ತು ಹೋಗಿದ್ದಾಳೆ
ಗಂಡನ ಸಾಲ ತೀರಿಸಲು
ಕೇವಲ ಬಾಡಿಗೆ ಗರ್ಭವಾಗಿದ್ದಾಳೆ

ಹೆತ್ತ ಮಗುವಿಗೆ ಅವಡುಗಚ್ಚಿ ಕೊಡುತ್ತಾಳೆ
ಉಕ್ಕಿ ಬರುವ ಹಾಲಿನ ತೊರೆಗೆ ಎದೆಯಲೇ
ಇಂಗಿಸಿ, ಮನಸು ಕಲ್ಲಾಗಿಸಿ ಆವಿಯಾಗಿಸುತ್ತಾಳೆ
ಹೆತ್ತು ಕೊಟ್ಟ ಮಕ್ಕಳಿಗೆ ನೋಡಬೇಕೆನಿಸುವುದಿಲ್ಲ
ಅವಳು ಹೊಟ್ಟೆ ಹೊರೆಯಲು
ಸಂತೆಯಲ್ಲಿ ಗರ್ಭವಿಟ್ಟಿದ್ದಾಳೆ

ಹೊಕ್ಕಳ ಬಳ್ಳಿ ಸಂಬಂಧ ಕಡಿದುಕೊಳ್ಳುವ
ಅವಳದೆಂತಹ ಹಣೆಬರಹ ನೋಡು
ಹೆತ್ತ ಮಗುವಿಗೆ ಎತ್ತಿ ಮುದ್ದಿಸಲಾರಳು
ರಕ್ತಮಾಂಸ ಹಂಚಿಕೊಂಡ
ತನ್ನಾತ್ಮದ ತುಣುಕನ್ನು ಮಾರಿಕೊಳ್ಳುವಳು
ಕರುಳಿಲ್ಲದ ಮಾರುಕಟ್ಟೆಯಲ್ಲಿ
ತನ್ನ ಅನಿವಾರ್ಯ ಬದುಕಿಗೆ ಎರವಾಗುವಳು
ಜಾಗತೀಕರಣದ ಹೊಸ ಉದ್ಯಮದಲ್ಲಿ...
ಕೇವಲ ಬಾಡಿಗೆ ತಾಯಿಯಾಗಿದ್ದಾಳೆ

ಪ್ರಭುವೇ! ಕಣ್ಣಲ್ಲಿ ಕನಸುಗಳ ಕೊಡಬೇಡ
ರೆಪ್ಪೆ ಗಟ್ಟಿಯಾಗಿ ಕಣ್ಣು ಮುಚ್ಚಿಕೊಳ್ಳುತ್ತಾಳೆ ಅವಳು
ತೇಲಿ ಬರುವ ಕನಸುಗಳಿಗೆ ನಿಷೇಧ ಹೇರುತ್ತಾಳೆ
ಬಸಿರೋದ್ಯಮದಲ್ಲಿ ಗರ್ಭ ಮಾರಾಟಕ್ಕಿಟ್ಟಿದ್ದಾಳೆ
ಮಮತೆಯ ಕತ್ತು ಹಿಸುಕಿದ್ದಾಳೆ ಅವಳು
ಕೇವಲ ಬಾಡಿಗೆ ತಾಯಿಯಾಗಿದ್ದಾಳೆ

ಹೆಣ್ಣು ದೇವತೆಯೆಂದು ಪೂಜಿಸುತ್ತೀರಿ
ಮತ್ತೇಕೆ ಕಂಪನಿಗಳಿಗೆ ರತ್ನಗಂಬಳಿ ಹಾಸಿದಿರಿ
ನಮ್ಮವರ ಗೋಣು ನೇಣಿಗೇಕೆ ನೀಡಿದಿರಿ?
ಅವಳನ್ನೇಕೆ ಅನಿವಾರ್ಯದ ಬದುಕಿಗೆ ದೂಡಿದಿರಿ
ಘನತೆಯ ಬದುಕು ಬೀದಿಪಾಲು ಮಾಡಿದಿರಿ?
ತಾಯ್ತನದ ಘನತೆ ಮಾರುಕಟ್ಟೆಯ ಸರಕಾಗಿಸಿದಿರಿ
ಅವಳನ್ನು ಕೇವಲ ಬಾಡಿಗೆ ತಾಯಿಯಾಗಿಸಿದ್ದೀರಿ.

ಬಾಡಿಗೆ ತಾಯಂದಿರು

ಡಾ. ಕೆ. ಷರೀಫಾ

ಮುಸ್ಲಿಮ್ ಸಂವೇದನೆಯನ್ನು ಬಹು ಸೂಕ್ಷ್ಮವಾಗಿ ವಿಶ್ಲೇಷಿಸಿ [illegible] ವಿಚಾರಗಳನ್ನೊಳಗೊಂಡ ಅನೇಕ ವೈಚಾರಿಕ ಕೃತಿಗಳನ್ನ [illegible]

ಕವನ

ನಮ್ಮನೆ ಗೌರಮ್ಮನೆ ಇಷ್

ದು. ಸರಸ್



ಕಕ್ಕಸಿಗೆ ಹೋಗಿ ಬಂದು ಸೋಪು ಹಾಕಿ ಅಚ್ಚುಕಟ
ಕೈ-ಕಾಲು ತೊಳೆದುಕೊಂಡು ಬಂದ ಸಿದ್ದಿ 'ಕಾಯಿ
ತಗೋ ಅಜ್ಜಿ' ಅಂತ ಬುಟ್ಟಿ ತಂದಳು. ಅವಳ
ನೋಡಿ ನಗುತ್ತಾ ಯಂಕ್ಟಮ್ಮ 'ಗುದ್ಮಿ ಸ್ಯಾವ್ಗೆ
ತಿನ್ನೀವೆ. ಸ್ಯಾನೆ ತಿಂದೆ ಏಲಂಗಾತು, ಏತ್ಮ
ಗುಡಿಗೋಗಾಕೆ ಆಗುತ್ತ'? ನಾಳಿಕೋಗಾನ ಎಂ

ಕಡ್ಡಿ-ಕರ್ಪೂರ, ಕಾಯಿ-ಬಾಳೆಣ್ಣು ಇಟ್ಕಂಡಿದ್ದ ಪುಟ್ಟಿನ ಒಂದ್ ಕೈಲಿ ಇಡ್ಕಂಡು ಇನ್ನೊಂದ್ ಕೈಲಿ ಮೊಮ್ಮಗಳು ಸಿದ್ದಿ ಕೈ ಇಡ್ಕಂಡು ವನ್ನಮ್ಮನ ಗುಡಿಗೆ ವಂಟಿದ್ಲು ಯಂಕ್ಟಮ್ಮ. ಜೊತೇಲಿ ನಡಿತಿದ್ದ ಸಿದ್ದಿ, ಆಕ್ಕಂಡಿದ್ದ ರೇಷ್ಮೆ ಲಂಗ ಮ್ಯಾಕೆ ಇಡ್ಕಂಡಿದ್ಲು. ಲಂಗ ಏನು ನೆಲ್ದ್‌ಮ್ಯಾಲೆ ಈಜಾಡ್ತಿರ್ಲಿಲ್ಲ. ಅಂದ್ರು ಮ್ಯಾಕೆ ಇಡ್ಕಂಡಿರದು ನೋಡಿ, 'ಉದ್ದೇನೂ ಇಲ್ವಲ್ಲ ಕೇಳಿಕ್ಬಿಡು' ಅಂದ್ಲು ಯಂಕ್ಟಮ್ಮ. ತನ್ನ ಹೊಸ ಗೆಜ್ಜೆಯ ಅಂದದಲ್ಲೆ ಕಳೆದು ಹೋಗಿದ್ದ ಸಿದ್ದಿ 'ಕೆಳಿಕೆ ಬಿಟ್ರೆ ಗೆಜ್ಜೆ ಕಾಣಲ್ಲ ಕಣಮ್ಮ' ಎಂದಾಗ ನಗು ಬಂತು ಯಂಕ್ಟಮ್ಮಂಗೆ.

'ಗೆಜ್ಜೆ ನೋಡ್ಕೊಂಡು ಅದರ ಸಬ್ದ ಕೇಳ್ಕಂಡು ಬತ್ತಿದ್ರೆ ಎಡ್ವಿ ಬೀಳ್ತೀಯೆ ಅಷ್ಟೆ.'

'ಉ ಹೂ ಎಡ್ವಲ್ಲ ಕಣಮ್ಮ, ನೀನು ಕೈಯಿಡ್ಕಂಡಿದಿಯಲ್ಲ.'

'ಒಬ್ಬೆ ನಡ್ಕಂಡೋಗದ ಕಲ್ತಕಳ್‌ಲಿಲ್ಲ ಅಂದೆ.'

ಸಿದ್ದಿಗಿಲ್ಲ ಬುದ್ದಿ.

'ಅದ್ಕೆ ಎಲ್ಡ್ ಗುದ್ದಿ ಅಂತರೆ.'

'ನಾನಂತೂ ಅಲ್ಲ ಪೆದ್ದಿ. ಪೆದ್ದಿ ಅಂದ್ರೆ ಕೊಡ್ತೀನಿ ಬೀಳಂಗೆ ಲದ್ದಿ' ಅಂತ ಅಜ್ಜಿ ಕೈಬಿಟ್ಟು ಓಡಿದ್ಲು ಸಿದ್ದಿ.

ಮುಂದೆ ದಾರಿ ಮಗ್ಗಿಗೆ ಬಸ್ವಗಳು ಕುಂತಿದ್‌ವು. ಬಸ್ವ ಅಂದ್ರೆ ಬಲೆ ಇಷ್ಟ ಸಿದ್ದಿಗೆ. ಬಂಡೆ ಅಷ್ಟೆ ದೊಡ್ಡೋವಾದ್ರು ಭಯ ಹುಟ್ಟಿಸ್ತಿರ್ಲಿಲ್ಲ ಅವುಕ್ಕೆ ವನ್ನಮ್ಮನ ಪರ್ಸೆ ದಿನ ಕುಚ್ಚು, ಗೆಜ್ಜೆ ಎಲ್ಲ ಆಕಿ ಅಲಂಕಾರ ಮಾಡೋರು. ಬಸ್ವನ ಹೆಗಲ ಮೇಲೆ ದೊಡ್ಡ ನಗಾರಿ ಹಾಕಿ ಅದನ್ನ ಜಗ್ ಜಗ್ಗು ನಕ್ಕು ನಕ್ಕು ಅಂತ ಬಾರ್ಸೊ ಸದ್ದು ಸ್ಯಾನೆ ದೂರುಕ್ಕು ಕೇಳುತ್ತೆ. ಅದೆಲ್ಲ ನೆನಪಾಗಿ 'ಅಮ್ಮೊ ವನ್ನಮ್ಮನ ಪರ್ಸೆ ಯಾವಾಗ ಬರುತ್ತೆ' ಅಂತ ಕೇಳಿದ್ಲು. ದೊಡ್ಡ ಪರಿಕ್ಸೆ ಮುಗ್ದು ರಜೆ ಬತ್ತದಲ್ಲ ಆಗ' ಎಂದ್ಲು ಯಂಕ್ಟಮ್ಮ.

ದೇವಸ್ಥಾನ ಬರ್ತ ಇದ್ದಂಗೆ ಸಿದ್ದಿ ಓಡುದ್ಲು. ಗಾಬರಿ ಬಿದ್ದ ಯಂಕ್ಟಮ್ಮ ಅವಳ ಸಮಕ್ಕೆ ಓಡಿ ಇನ್ನೇನು ಗುಡಿ ವಳೀಕೆ ವೊಗೋಕೆ ಕಾಲು ಎತ್ತಿದ್ದ ಸಿದ್ದಿಯ ಉದ್ದನೆ ಜಡೆಯನ್ನು ಒಂದೇಟ್ಗೆ ಇಡ್ದು ಎಳುದ್ಲು. ದಪ್ಪಗೆ ಕುಂಡಿ ಮೇಲೆ ಬೀಳೋವಷ್ಟ ಉದ್ದ ಇತ್ತು ಸಿದ್ದಿ ಜಡೆ. ಅವಳಿಗಿಂತ ಅವಳ ಜಡೆ ಮೇಲೆ ಎಲ್ಲರ ಕಣ್ಣು ಬೀಳ್ತಾ ಇದ್ದಿದ್ದು. ಜಡೆ ಎಳೆದ ರಭಸಕ್ಕೆ ತಟ್ಟಾಡಿದ ಸಿದ್ದಿಯನ್ನು ಅವುಚಿ ಹಿಡಿದುಕೊಂಡಳು ಯಂಕ್ಟಮ್ಮ. ಎಂದೂ ಕೈಯನ್ನೂ ಎತ್ತದ ಅಜ್ಜಿ, ಜಡೆ ಹಿಡಿದೆಳೆದದ್ದರಿಂದ ಆಘಾತಗೊಂಡ ಸಿದ್ದಿ ಕಣ್ಣಲ್ಲಿ ನೀರ್ ತುಂಬ್ಕಂಡು "ಯಾಕಮ್ಮ" ಎನ್ನುವಂತೆ ನೋಡಿದಾಗ, ಯಂಕ್ಟಮ್ಮನ ಕಳ್ಳು ಚುರುಗುಟ್ಟಿದವು. ಕೆಡುಕೇ ಅರಿಯದ ಹಸುವಿನಂತವಳು ಸಿದ್ದಿ. ತಂಟೆ ತಕರಾರು ಜಗಳ ಜೂಟಿ ಏನೂ ಇಲ್ಲದ ನಿಧಾನವಾಗಿ ಹರಿಯುವ ಹೊಳೆಯಂತವಳು. ಜಾಣೆ, ಇಸ್ಕೋಲಾಗೆ ಪೇಲೆ ಆತಿರ್ಲಿಲ್ಲ. ಬ್ಯಾಸ್ರ ಇಲ್ದೆ ಏಳೋ ಕೆಲ್ಸನೆಲ್ಲ ಅಚ್‌ಕಟ್ಟಾಗಿ ಮಾಡುತ್ತೆ. ಸಿದ್ದಿ ಅಂದ್ರೆ ಯಂಕ್ಟಮ್ಮಂಗೆ ಅಚ್‌ಮೆಚ್ಚು. ಅಂತ ಮಗೀನ್ಕಣ್ಣಾಗೆ ನೀರ್ ಬರಂಗಾತಲ್ಲ ಅಂತ ಬ್ಯಾಸ್ರ ಆತು ಅವಳಿಗೆ. ಸಿದ್ದಿಯ ತಲೆ ಸವರಿ ಮುದ್ ಮಾಡಿ ನೆಟ್ಕೆ ಮುರ್ದು 'ಕಳ್ಳಿ ಇವತ್ತು ನೀರುಯ್ಕೊಂಡಿಲ್ಲ **ಮರತೋತಾ? ವನ್ನಮ್ಮ ಸ್ಯಾನೆ ಕಟ್**ನಿಟ್ಟು ಸಿಟ್ **ಮಾಡ್ಕಂತಳೆ.** ನೀರುಯ್ಕಂಡು **ನಾಳೀಕೆ** ಬರನಂತೆ. ಈಗ ಮಗಳನ್ನು ಹತ್ತನೆ ತರಗತಿಯ ವರೆಗೆ ಓದಿಸಿ ಮದುವೆ ಮಾಡಿದ್ದಳು. ಅಳಿಯ ನಗರದಲ್ಲಿ ಒಳ್ಳೆಯ ಕೆಲಸದಲ್ಲಿದ್ದ. ಯಂಕ್ಟಮ್ಮನಿಗೆ ಆಧಾರವಾಗಿದ್ದು ಗಂಡ ಕಷ್ಟಪಟ್ಟು ಸಂಪಾದಿಸಿದ್ದ ಒಂದೆಕರೆ ಜಮೀನು. ಆ ಜಮೀನಿನಲ್ಲಿ ತೆಂಗಿನ ಮರಗಳು, ಎರಡು ಮಾವಿನ ಮರ, ಒಂದು ಸೀಗೆ ಮರ, ಒಂದು ಹುಣಸೆ ಮರವಿತ್ತು. ಈ ಮರಗಳು ಯಂಕ್ಟಮ್ಮನ ದುಡಿಮೆಗೆ ಎಳ್ಳಷ್ಟು ಮೋಸ ಮಾಡದೆ ಫಲ ನೀಡಿ ಕಾಪಾಡಿದ್ದವು. ಅವಳ ಮಗಳು ಗೌರಮ್ಮ ಆಗಾಗ್ಗೆ ಬಂದು ಹೋಗುತ್ತಿದ್ದಳು. ಅವಳು ಅವ್ವ ಒಬ್ಬಳೆ ಆಗುತ್ತಾಳೆಂಬ ಕಾರಣಕ್ಕೆ ರಜೆಯಲ್ಲಿ ಮಗಳು **ಸಿದ್ದಮ್ಮನನ್ನು ಬಿಟ್ಟು ಹೋಗುತ್ತಿದ್ದಳು.**

ಒಂಟಿಯಾಗಿರುತ್ತಿದ್ದ **ಯಂಕ್ಟಮ್ಮನಿಗೆ ಮೊಮ್ಮಗಳು ಬಂದರೆ ಖುಷಿ. ಬಿಕೋ ಎನ್ನುವ ಮನೆ** ಗಲಗಲ **ಎನ್ನುತ್ತಿತ್ತು. ಒಬ್ಬಳಿಗೆಂದು ಏನೋ ಬೇಯಿಸಿಕೊಂಡರೆ ಒಲೆ ಕತೆ ಮುಗಿಯುತ್ತಿತ್ತು. ಸಿದ್ದಿ** ಬಂದರೆ ಸೌದೆಗಳು ಉರಿದು ಕೆಂಡ ನಿಗಿ ನಿಗಿಸೋದು.

ಕಥೆ

ದಿನ ಚೆನ್ನಾಗಿ ತಿಕ್ಕಿಸಿಕೊಂಡು ಮೈ **ತೊಳೆಸಿಕೊಳ್ಳುತ್ತಿದ್ದ** ರಾಸುಗಳು ಅಲಂಕರಿಸಿಕೊಂಡು ಲಕಲಕಿಸುತ್ತವೆ. **ಹೋಳ್ಗೆ,** ಶ್ಯಾವ್ಗೆ ಮಾಡೋರು **ಎಲ್ಲಾರು.** ಏನೆ ಮಾಡಿರ್ಲಿ **ಮೊದ್ಲು** ರಾಸುಗಳ್ಗೆ ಎಡೆ ಇಕ್ಕಿ **ಪೂಜೆ** ಮಾಡಿ ಆದ್ಮೇಲೆ **ಎಲ್ಲಾರು** ತಿಂತ ಇದ್ದಿದ್ದು. **ಸಂಜ್ಗೆ ಬೆಂಕಿ ಆಕಿ** ರಾಸುಗಳ **ಆಯ್ಸೋರು. ಅದು** ಇದು **ಅಂತ ನೆಪಮಾಡಿ ಹೊನ್ನಾರು ಊಡೋ ಕಡೆ ಸಿದ್ದಿನ ಕರ್ಕಂಡು ವೋಗ್ದೆ** ತಾನೇ **ಒಂದೆಜ್ಜೆ ವೋಗ್**ಬಂದ್ಲು **ಯಂಕ್ಟಮ್ಮ. ಇನ್ನೇನು** ಸಾಂಕಾಲ್ಕೆ **ರಾಸುಗಳು ಬೆಂಕಿ ಆಯೋದ್ನ ನೋಡ್ಕಂಡು** ಸುಮ್ಮಾಗ್ತಾಳೆ **ಅಂದ್ಕಂಡ್ಲು ಯಂಕ್ಟಮ್ಮ.** ಸಿದ್ದಿ **ಬಿಡ್ಬೇಕಲ್ಲ** ಅಮ್ಮೊ **ಕಕ್ಕಸಿಗೆ ವೋಗ್**ಬತ್ತೀನಿ. **ಬಂದ್ಮೇಲೆ ವನ್ನಮ್ಮನ್ನ** ನೋಡಕೋಗನ ಅಂತ ಸಿದ್ದಿ ತಿಪ್ಪಾಳ ಕಡೆ **ವೋಡಿದ್ಲು.** ಅಜ್ಜಿಗೊಂದು **ನೆಪ** ಸಿಕ್ಕಿತು.

ಕಕ್ಕಸಿಗೆ **ಹೋಗಿ** ಬಂದು ಸೋಪು ಹಾಕಿ ಅಚ್ಚುಕಟ್ಟಾಗಿ ಕೈ-ಕಾಲು ತೊಳೆದುಕೊಂಡು ಬಂದ ಸಿದ್ದಿ 'ಕಾಯಿ **ಕಡ್ಡಿ ತಗೋ** ಅಜ್ಜಿ' ಅಂತ ಬುಟ್ಟಿ ತಂದಳು.

ಕೋಳಿ ಕೂಗುವ ಹೊತ್ತಿಗೆ ಎದ್ದ ಯಂಕ್ಟಮ್ಮ ಸಾಕಿದ್ದ ಯಾಟೆಯೊಂದನ್ನು ಕುಯ್ದು ಸಾರು ಮಾಡಲು ಸಿದ್ದ ಮಾಡಿಕೊಂಡಳು. ಸಿದ್ದಿ ಏಳುವ ಹೊತ್ತಿಗೆ ಸಾರು ಗಮಗಮಿಸುತ್ತಿತ್ತು. ಎದ್ದವಳೆ ಸಿದ್ದಿ 'ಐಟ್ಲಾ ಕೋಳಿಸಾರು ಮಟ್ವೆನಂಗೆ, ಈರಿ ನಂಗೆ' ಎಂದು ಹಲ್ಲುಜ್ಜಿ ಮಲ ತೊಳೆಯಲು ಓಡಿದಳು. ಅಜ್ಜಿ ಮೊಮ್ಮಗಳು ಸಾವಧಾನದಿಂದ ಒಂದೆ ಗಂಗಾಳದಲ್ಲಿ ಉಣ್ತಾ ಇದ್ರು, ಯಂಕ್ಟಮ್ಮ ಹುಡ್ಕಿ ಹುಡ್ಕಿ ಮೆತ್ತನೆ ಬಾಡನ್ನೆಲ್ಲ ಮೊಮ್ಮಗಳ ಕಡೆಗೆ ತಳ್ಳುತ್ತಿದ್ದಳು.

ಇಲ್ಲೆ ನಿಂತ್ಕಂಡು ಕೈ ಮುಗ್ದು ಅಣ್‌ಕಾಯ್ ಮಾಡ್ಸಕಂಡು ವೋಗನ' ಅಂದ್ಲು. ಅಯ್ನೋರು ಈಚ್ಗೆ ಬಂದು ಅಣ್‌ಕಾಯ್ ಬುಟ್ಟಿ ಇಸ್ಕಂಡ್ರು. ಯಂಕ್ಟಮ್ಮ ಅಯ್ನೋರ್ಗೆ 'ಒಂದ್ ಕಾಯ್ ವಡೀರಿ ಇನ್ನೊಂದ್ ಕಾಯ ತೇಟ್ಕಾಯಿ ಮಾಡಿ ಕೊಡ್ರಿ ಊರ್ಗೆ ಕಳ್ಸಕ್ಕೆ' ಎಂದ್ಲು. ಪೂಜೆ ಆದ್ಮೇಲೆ ಮಂಗ್ಳಾರ್ತಿ, ತೇರ್ಥ ತಗಂಡು ಗುಡಿ ಸುತ್ತೋವಾಗ ವನ್ನಮ್ಮನ ಮುಖ ಕಾಣೋ ಸಣ್ ಕಿಟ್ಕಿತವ ಸಿದ್ದಿನ ಎತ್ತಿ ತೋರ್ಸಿಳು. ದೊಡ್ಡ ಕಣ್ಣುಗಳ, ಚೂಪು ಮೂಗಿನ, ನಸು ಹಳದಿ ಬಣ್ಣದ ವನ್ನಮ್ಮ ಗಣೇಶ-ಗೌರಿ ಹಬ್ಬದಲ್ಲಿ ಅವ್ವ ತರುತ್ತಿದ್ದ ಗೌರಮ್ಮನಂತೆ ಇದ್ದಾಳೆ ಎನಿಸಿ 'ಅಮ್ಮೊ ವನ್ನಮ್ಮ ಸೇಮ್ ಗೌರಮ್ಮನಂಗೆ **ಅಲ್ವಾ ಅಮ್ಮ' ಎಂದಳು ಸಿದ್ದಿ.**

ಊ ಕಣಮ್ಮ, ವನ್ನಮ್ಮ, ಗೌರಮ್ಮ, ಪಾರ್ವತಿ ಎಲ್ಲ **ಒಂದೆಯ' ಎಂದಳು ಯಂಕ್ಟಮ್ಮ.**

'ಅಮ್ಮೊ ನಾಳೀಕೆ ನೀರು ಉಯ್ಕಂಡು ಬಂದು **ವಳಿಕೋಗಿ ನೋಡನ** ಇಲ್ಲಿಂದ **ಪೂರ್ತಿ** ಕಾಣಲ್ಲ' **ಎಂದಳು ಸಿದ್ದಿ.**

'ನಾಳೆ ವತ್ಗೆ ಇನ್ನೇನಾದ್ರೂ ನೆವ ಉಡ್ಕಿದ್ರಾತು' ಅಂದ್ಕಂಡ್ಲು ಯಂಕ್ಟಮ್ಮ. ಬಹಳ ಹಿಂದೆಯೇ ಗಂಡ ಶೀರಿ ಹೋಗಿದ್ದ ಯಂಕ್ಟಮ್ಮ ಹೊಲ ಮನೆ ನೋಡಿಕೊಂಡು ಹಳ್ಳಿಯಲ್ಲಿ ಒಬ್ಬಳೆ ಇದ್ದಳು. ಇದ್ದ ಒಬ್ಬ

ಆದರೆ ಸಿದ್ದಿ ಮಾತ್ರ ವನ್ನಮ್ಮನನ್ನು ನೋಡುವ **ಸಿದ್ಧತೆಯಲ್ಲಿ**ದ್ದಳು. ಅಮ್ಮ ಒಡೆದು ಕೊಟ್ಟಿದ್ದ ಕಾಯಿಯ **ಜೊತೆ ಬಾಳೆ**ಹಣ್ಣು ತಿನ್ನುತ್ತ 'ಅಮ್ಮ ತ್ವಾಟುಕೋತಿವಲ್ಲ **ಅಲ್ಲಿ ತೆಂಗಿ**ನ್ಮಟ್ಟೆ, ಕುರಂಬಳೆ, ತೆಂಗಿನ್‌ಗರಿ ಎಲ್ಲ **ಆಯ್ಕೊಂಡೋ**ಗನಂತೆ ನೀರ್ಕಾಯ್ಸಕೆ' ಎಂದಳು. ಹೂಂ **ಅನ್ನದೆ ಬೇರೆ** ದಾರಿ ಇರಲಿಲ್ಲ ಯಂಕ್ಟಮ್ಮನಿಗೆ. ಸಿದ್ದಿ ಪುಟ ಪುಟನೆ ಓಡಾಡುತ್ತ ಒಟ್ಟು ಮಾಡಿದ ಸೌದೆಯಲ್ಲಿ ಹತ್ತು ಜನ ಉಯ್ಕೊಳೊವಷ್ಟು ನೀರು ಕಾಯಿಸ್ಬೋದಾಗಿತ್ತು.

ಮಾರನೆ ದಿನ ಕಾರಬ್ಬ. ಆ ಸಂಭ್ರಮದಲ್ಲಿ ದೇವರು **ನೋಡುವು**ದನ್ನು ಮರೆಸಿದರಾಯಿತು ಎಂದುಕೊಂಡಳು **ಯಂಕ್ಟಮ್ಮ.** ಮದಲ್ನೆ ಮುಂಗಾರು ಮಳೆ ಬಿದ್ದ ಮ್ಯಾಲೆ **ಹೊಸ ಆರು** (ನೇಗಿಲು) ಪೂಜೆ ಮಾಡಿ ಮೊದಲು **ಊಳುವು**ದು ಗುಡಿ ಹಿಂದಿನ ಹೊಲವನ್ನು. ಅದನ್ನು **ಕರೆಯುತ್ತಿ**ದ್ದುದೆ ಹೊನ್ನಾರು ಎಂದು. ಹೊನ್ನಾರು ಹೂಡಿದ ಮೇಲೆ ಮಿಕ್ಕೆಲ್ಲರು ತಮ್ಮ ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು. ಹೊನ್ನಾರು ಹೂಡಿದ ಮೇಲೆ ವನ್ನಮ್ಮನ ಗುಡಿ ಸುತ್ತಿಕೊಂಡು ಎಲ್ಲರು ಕಾಳ್ಗಟ್ಟಮ್ಮನ ಗುಡಿಯ ಬಳಿ ಸೇರುತ್ತಿದ್ದರು. ಅಲ್ಲಿ ಬಾಳೆ ಕಂದಿಗೆ ಎತ್ತರದಲ್ಲಿ ಬನ್ನಿ ಸೊಪ್ಪು ಕಟ್ಟಿ ನಿಲ್ಲಿಸುತ್ತಿದ್ದರು. ಕಂದನ್ನು ಕತ್ತರಿಸಿ ಬನ್ನಿ ತೆಗೆದುಕೊಂಡು ಹನುಮಂತನ ಗುಡಿಯ ಬಳಿ ಸಿಂಗಾರಗೊಂಡ ರಾಸುಗಳೊಂದಿಗೆ ಸೇರುತ್ತಿದ್ದರು. ಆ

ಅವಳನ್ನು **ನೋಡಿ ನಗುತ್ತಾ ಯಂಕ್ಟಮ್ಮ** 'ಗುದ್ಮಿ ಸ್ಯಾವ್ಗೆ ವಸಿ ತಿನ್ನೀವೆ. **ಸ್ಯಾನೆ ತಿಂದೆ ಏಲಂಗಾತು, ಏತ್ಮೇಲೆ ಗುಡಿಗೋಗಾಕೆ ಆಗುತ್ತ'? ನಾಳಿಕೋಗಾನ ಎಂದ್ಲು.**

'ದೇವ್ರು ಕಕ್ಕಸ್ಸ್ ಮಾಡಲ್ವ **ಅಮ್ಮ?** ಅಂತ ಕೇಳಿಳು ಸಿದ್ದಿ.

ಯಂಕ್ಟಮ್ಮನಿಗೆ ತಾಕಲಾಟ**ಕ್ಕಿಟ್ಟುಕೊಂಡಿ**ತು. ನಗರದಲ್ಲಿ ಕಷ್ಟ, ಅವಮಾನವೇ ಅರಿಯದ ಮಗುವದು. ಮಹಾ ಸ್ವಾಭಿಮಾನಿ ಮತ್ತು ಪರರ ಕಷ್ಟಕ್ಕೆ ಮಿಡಿಯುತ್ತಿದ್ದ ಯಂಕ್ಟಮ್ಮನನ್ನೂ ಗೌಡ್ರೋಳು, ಕುಂಬಾರು, ಅಯ್ನೋರು ಗೌರವಿಸೋರು. ಅಳಿಯನೂ ಉತ್ತಮ ಸ್ಥಾನದಲ್ಲಿದ್ದರಿಂದ ಊರವರು ನಗರದಲ್ಲಿ ಏನಾದರೂ ಸಹಾಯ ಬೇಕೆಂದರೆ ಹೋಗುತ್ತಿದ್ದರು. ಯಂಕ್ಟಮ್ಮನಾಗಲಿ, ಅಳಿಯ ಮಗಳಾಗಲಿ ಊರಿನ ರೀತಿ ರಿವಾಜುಗಳ ವಿರುದ್ಧ ಎಂದೂ ತಿರುಗಿ ಬಿದ್ದವರಲ್ಲ. ಅಗತ್ಯವಿದ್ದಾಗ ಬಾವಣ್ಕೆಯಿಂದ ಮಾತನಾಡಿಸುತ್ತಿದ್ದರೆ



With Best Compliments From

P. K. RANGANATHAN

NO. 410, 'KRISHNA VIHAR' 5TH MAIN,
8TH CROSS, MICO LAYOUT
BANGALORE-560076

With Best Compliments From

B. H. MANJUNATH M.SC., M.TECH (HYD.)
GEOLOGIST & GEOPHYSICIST

PROPRIETOR

MANJU ROCK DRILLERS

T. B. CIRCLE, HIRIYUR- 572144
MOB: 9448193909, 9449088998

ಹೊರತು ಅವರ ಮನೆಗಳಿಗೆ ಕರೆದರೂ ಹೋಗುತ್ತಿರಲಿಲ್ಲ. ಎಲ್ಲಿ ಕೂರಿಸಿ ಯಾವುದರಲ್ಲಿ ಉಣ್ಣಲು ಇಡುತ್ತಾರೆಂಬುದು ಗೊತ್ತಿತ್ತು. ಅದನ್ನಿ ಮಾತ್ರ ವಿನಯದಿಂದಲೇ ನಿರಾಕರಿಸುತ್ತಿದ್ದರು. ಈ ಸಿದ್ದಿಗೆ ಅದೇನೂ ತಿಳಿಯದು. ಯೋಚನೆಯಿಂದ **ತಟಕ್ಕನೆ** ಈಚೆ ಬಂದ ಯಂಕ್ಟಮ್ಮ **'ಏಳಿ ಕೇಳಿ** ದ್ಯಾವ್ರುಗಳಲ್ವ, ಅವರ್ಗೆ ಸ್ವಾನೆ ಸಕ್ತಿ ಇರುತ್ತೆ; ಏರಿ ಗಾಳಿನೆ ಸಾಕು ಅವರ್ಗೆ ಅದ್ನೆ ತಿಂದು ಅದ್ನೆ ಉಸ್ಕಂಡಿರ್ತರೆ' ಅಂದ್ಲು.

'ಮತ್ತೆ ನೀನು ಚೆನ್ನಾಗಿರದೆಲ್ಲ ಮಾಡಿ ಎಡೆ ಇಕ್ತೀಯಾ'.

'ದ್ಯಾವ್ರು ಮುಟ್ಟಿ ಆಸಿರ್ವಾದ ಮಾಡ್ಲಿ' ಅಂತ ಕಣೆ. ಕಜ್ಜಾಯ ಅಂದ್ರೆ ಇಷ್ಟಪಡುವ ಸಿದ್ದಿ 'ಅಮ್ಮೊ ದ್ಯಾವ್ರುಗೆ ಜ್ಜಾಯ ಅಂದ್ರೂ ಇಷ್ಟ ಇಲ್ವ' ಎಂದು ಳಿದಳು.

'ಮಕ್ಕಂದ್ರೆ ದ್ಯಾವ್ರುಗೆ ಸ್ವಾನೆ ಇಷ್ಟ ನ್ನಂತ ಮಕ್ಳು ತಿಂದ್ರೆ ಅವ್ರೆ ತಿಂದೋಟು ಸಂತೋಸ ಆಗುತ್ತೆ ಅವ್ರಿಗೆ' ಎಂದಳು ಯಂಕ್ಟಮ್ಮ.

'ಅಂಗರೆ **ನಾಳೆ ವತ್ತರನೆ** ರುಯ್ಕಂಡು **ಗುಡಿಗೋಗನಾ**'?

ಆತು **ನಡಿ ಈಗ** ರಾಸ್‌ಗೋಳ್ ನೋಡನಾ ಅಂತ ಕ್ಕೊಂಡು ಹೋದ್ಲು, ನಾಳೆ ಏನು ನೆಪ ಉಡ್ಕನ ಂದ್ಕಂಡು.

ಮಾರನೇ ದಿನ ಕೋಳಿ ಕೂಗುವ ಹೊತ್ತಿಗೆ ಎದ್ದ ಯಂಕ್ಟಮ್ಮ **ಸಾಕಿದ್ದ ಯಾಟೆಯೊಂದನ್ನು ಕುಯ್ದು** ಸಾರು ಮಾಡಲು **ಸಿದ್ಧ ಮಾಡಿಕೊಂಡಳು. ಸಿದ್ದಿ ಏಳುವ ಹೊತ್ತಿಗೆ** ಸಾರು **ಗಮಗಮಿಸುತ್ತಿತ್ತು. ಎದ್ದವಳೆ ಸಿದ್ದಿ 'ಏಟ್ಲಾ** ಕೋಳಿಸಾರು **ಮಟ್ಟೆನಂಗೆ, ಈರಿ ನಂಗೆ'** ಎಂದು ಹಲ್ಲುಜ್ಜ ಮುಖ ತೊಳೆಯಲು **ಓಡಿದಳು. ಅಜ್ಜಿ ಮೊಮ್ಮಗಳು** ಸಾವಧಾನದಿಂದ **ಒಂದೆ ಗಂಗಾಳದಲ್ಲಿ ಉಣ್ತಾ** ಇದ್ರು, ಯಂಕ್ಟಮ್ಮ **ಹುಡ್ಕಿ ಹುಡ್ಕಿ ಮೆತ್ತನೆ ಬಾಡನ್ನೆಲ್ಲ ಮೊಮ್ಮ**ಗಳ ಕಡೆಗೆ ತಳ್ಳುತ್ತಿದ್ದಳು. **ಉಂಡಂಗೆಲ್ಲ ತುತ್ತು ಆಕ್ತ** ಇದ್ಲು. ಮಗ್ನಳಾಗಿ ಉಣ್ಣುತ್ತಿದ್ದ ಸಿದ್ದಿ ಕತ್ತೆತ್ತಿ 'ಅಮ್ಮೊ ಉಂಡಾದ್ಮೇಕೆ ಗುಡಿಗೆ ಕರ್‍ಕೊಂಡೋಗ್ಬೇಕು ಆಯ್ತಾ' ಎಂದಳು.

'ಆಹಾ ಎಂಗೋದೀಯ? ಚಪ್ರಸ್ಕಂಡು ಉಣ್ತಿಲ್ವಾ ಕೋಳಿ ಬಾಡು. ಬಾಡು ತಿಂದ್ರೆ ವೋಗಂಗಿಲ್ಲ. ಮುಟ್ಟು ಚಿಟ್ಟು ಅಂದ್ರೆ ವನ್ನಮ್ಮಂಗೆ ಸ್ವಾನೆ ಸಿಟ್ಟು'.

'ಸರಿ ಬಿಡು ನಾಳಿಕೆ ಸ್ವಾನೆ **ಮಾಡಕೆ ಮೊದ್ಲೆ** ಕಕ್ಕಸ್ಸಿಗೆ ಹೋಗ್ತೀನಿ, ಕೋಳಿ ಬಾಡು, ಮಟ್ಟೆ **ಏನೂ ತಿನ್ನಲ್ಲ'** ಕರ್‍ಕಂಡೋಗ್ತೀಯಾ'?

ಆಯ್ತು ಎಂದ ಯಂಕ್ಟಮ್ಮನ ತಲೆಯೊಳಗಿನ ಹುಳುವಿನ್ನು ತಿರುಗತೊಡಗಿತು **ಉಪಾಯಕ್ಕಾಗಿ. ಸಿದ್ದಿಯನ್ನು** ಜೊತೆಗಿಟ್ಟುಕೊಂಡು ಬದುಕು ಮಾಡುತ್ತ**ಲೆ** ದಿನವೆಲ್ಲ ಕಳೆಯಿತು. ರಾತ್ರಿಗೆ ಬೆಳಗಿನ ಕೋಳಿ **ಸಾರನ್ನೆ** ಬಿಸಿ ಮಾಡಿಕೊಂಡು, ಮುದ್ದೆ ಮಾಡಿ **ಉಂಡ ಮೇಲೆ** ಮಲಗ್ಲಾಗಲು ಸಿದ್ಧರಾದರು ಅಜ್ಜಿ ಮೊಮ್ಮಗಳು. ಅಮ್ಮ ರತ್ತೊ ರತ್ತೊ ಏಳ್ಕಡಮ್ಮ ಊರಿಗೋದ್ಮೇಲೆ ನನ್ನ ಫ್ರೆಂಡ್ಸ್‌ಗೆ **ಏಳ್ಕೊಟ್ಟು ಆಡೋಕೆ–**

ರತ್ತೊ ರತ್ತೊ ರಾಯನ ಮಗಳೆ
ಬಿತ್ತೊ ಬಿತ್ತೊ ಭೀಮನ ಮಗಳೆ
ಹದಿನಾರೆಮ್ಮೆ ಮೇಯ್ಸಾಲಾರೆ
ಬೈಟು ಕಂಬ
ಬಾಳೆ ಕಂಬ
ಕುಕ್ಕರ ಬಸವಿ
ಕೂರೆ ಬಸವಿ

ರಾಗವಾಗಿ ಹಾಡಿದಳು ಯಂಕ್ಟಮ್ಮ. ನಾಳೆ ಸಂಜ್ಗೆ ಮಗ್ಳು ಬರ್‍ತ**ಳೆ. ನಾಡ್ದು ಬೆಳಗಿನ್‌ಜಾವ** ಆರು ಗಂಟೆ ರೈಲ್ಗೆ ಸಿದ್ದಿ ಕರ್‍ಕಂಡು **ವೋಗ್ತಳೆ ಅನ್ನೊದನ್ನು ನೆನಸಿಕೊಂಡಳು** ಯಂಕ್ಟಮ್ಮ.

ಅಮ್ಮ ಅಮ್ಮ ನಂಗೆ ಕಾಗ್ದ ಬರ್‍ಯಕೆ **ಬರುತ್ತೆ.** ನಿಂದು ಅಡ್ರೆಸೇಳು ಬರ್‍ಕತೀನಿ. ಊರಿಗೋದ್ಮೇ**ಲೆ** ಕಾಗ್ದ ಆಗ್ತೀನಿ ಅಂತ ಎಕ್ಸೈಜು, **ಪೆನ್ಸಿಲ್ಲು** ತಂದ್ಲು ಸಿದ್ದಿ.

ಯಂಕ್ಟಮ್ಮ ವಿಳಾಸ **ಹೇಳಿದಳು.**

ಸಿದ್ದಿ **ನಿಧಾನವಾಗಿ ದುಂಡಗೆ** ಬರೆದಳು–

ಯಂ... ಕ... ಟ.... ಮ್ಮ
ಹ... ರಿ... ಜ.... ನ... ಕಾ... ಲೋ... ನಿ
ಅ... ರ... ಕೆ.... ರೆ ಗ್ರಾ... ಮ
ತು... **ರು... ವೆ...** ಕೆ... ರೆ ತಾ... ಲೂ.... ಕು

ಅಡ್ರೆಸ್ ಬರೆದಿಟ್ಟ ಸಿದ್ದಿ ಗಾಂಧಿಜೀ ಪಾಠ **ನೆನಪಿಸಿಕೊಂಡು ಮಲಗಿದಳು.**

ಮಾರನೆ ದಿನ **ಅಜ್ಜಿ** ಸಿದ್ದಿಯನ್ನು **ಕರೆದು**ಕೊಂಡು **ತೋಟಕ್ಕೆ ಹೊರಟಳು. ಹೋಗುವಾಗ** ವನ್ನಮ್ಮನ ಗುಡಿಯನ್ನು ಹಾದು ಹೋಗಬೇಕಾದ್ದರಿಂದ ಏನು ನೆಪ ಹೇಳಬೇಕೆಂದು ಯೋಚಿಸುತ್ತಿದ್ದಳು. ಆದರೆ ಸಿದ್ದಿ ಮಾತ್ರ ಗುಡಿಗೆ ಹೋಗುವ ಮಾತೇ ತೆಗೆಯದೆ ಪುಟು ಪುಟು ಕುಣಿಯುತ್ತ ಬರುತ್ತಿದ್ದಳು. ಗುಡಿ ಸಿಕ್ಕಾಗ ಕೈ ಮುಗ್ದ ಯಂಕ್ಟಮ್ಮ 'ಸಿದ್ದಿ ಇವತ್ತು ತ್ವಾಟಕ್ಕೆ ಬಿರ್‍ನೆ ವೋದ್ರೆ ತಿಮ್ಮಯ್ಯ ಸಿಗ್ತನೆ. ಊರ್‍ಗೆ ಒಂದ್ನಾಕು ಎಳ್ನೀರು ಕೆಡವಿಸ್ಬೇಕು ಅಂಗೆ ನೀನು ಕುಡಿವಂತೆ ದ್ವಾಸೆ ಇರದು ಅದ್ಕೆ ....

'ಈಗ **ಗುಡಿಗೋಗದು ಬ್ಯಾಡ** ಅಲ್ವಾ, **ಗುಡಿಗೋಗದು ಇವತ್ತು** ಬೇಡ ಯಾವತ್ತು ಬೇಡ ಅವ್ವ ಗಣೇಶ–ಗೌರಿ ಅಬ್ಬಕ್ಕೆ ತರ ಗೌರಮ್ಮ ವನ್ನಮ್ಮನಂಗೆ ಇರದು. ಆ ಗೌರಮ್ಮ ನಂಗೆ ಇಷ್ಟ. ಅವ್ಳನ್ನ ನಾನು ಮುಟ್‌ಬೋದು. ಹೂವ ಮುಡ್ಸಿ, ವಡ್ವೆ ಆಕಿ ಅಲಂಕಾರ ಮಾಡ್ಬೋದು ಮತ್ತೆ ನಿಂಗೆ ಗಾಂಧಿಜೀ ಗೊತ್ತ ಅಮ್ಮ. ಗಾಂಧಿ ತಾತ ರಂಗ್ದಾಸಜ್ಜನ ತರನೆ ಪಂಚೆ ಉಟ್ಕಳದು, ಶರ್ಟ್ ಆಕಳಲ್ಲ. ನಂಗೆ ಬುಕ್ಕಲ್ಲಿ ಗಾಂಧಿಜೀ ಪಾಠ ಐತೆ. ಅವರ ಪೂರ್ತ ಹೆಸರು ಮೋಹನದಾಸ ಕರಮಚಂದ ಗಾಂಧಿ, ತಾಯಿ ಪುತಲೀಬಾಯಿ ತಂದೆ ಮೋಹನದಾಸ. ಅವರು ಪೋರಬಂದರಿನ ಕಾಠೆವಾಡದಲ್ಲಿ ಜನಿಸಿದರು. ಅವರು **"ಈ ದೇಶದಲ್ಲಿ** ... . ರಾಮ ರಾಜ್ಯದ ಕನಸು ನನಸಾಗುವುದು"

ಯಂಕ್ಟಮ್ಮನ ಅರಳಿದ ಕಣ್ಣುಗಳು ಅಚ್ಚರಿಯಲ್ಲಿ ಅಗಲವಾಗಿ **ತುಂಬಿಕೊಳ್ಳುತ್ತಿದ್ದವು.**

'ಬಾಳೇಕ್' ಸಿಪ್ಪೆ ಸುಲ್ದಷ್ಟ್ ನಿಸೂರಾಗಿ ಪಾಠ ಒಪ್ಪಿಸಿದ ಜಾಣ್ಮಗೊ **ಅಥವಾ** ಕಾಲದಿಂದ್ಲೂ ಕಾಲ್ಗೆ ತೊಡ್ರಾಗಿರೊ ಸತ್ಯ ಅರ್‍ಗಿಸಿಕಂಡ ಪರಿಗೊ ಗೊತ್ತಿಲ್ಲ.

ದು. ಸರಸ್ವತಿ

ಮಹಿಳಾಹಕ್ಕುಗಳು, ದಲಿತಹಕ್ಕುಗಳು, ಅಸಂಘಟಿತ ಕಾರ್ಮಿಕರ ಹಕ್ಕುಗಳು, ಹಾಗೂ ಮಾನವಹಕ್ಕುಗಳ ಬಗ್ಗೆ ಕೆಲಸಮಾಡುತ್ತಾ, ಹಕ್ಕು ಮತ್ತು ಸಮಾನತೆಯನ್ನು ವಿವಿಧ ದೃಷ್ಟಿಕೋನದಿಂದ ಅರ್ಥಮಾಡಿ ಕೊಂಡಿರುವಂತಹ, ಸರಸ್ವತಿಯವರು ಉತ್ತಮ ಬರಹಗಾರ್ತಿ, ಕವಯಿತ್ರಿ, ರಂಗಭೂಮಿ, ಹಾಗೂ ಚಿತ್ರಕಲಾಸಕ್ತರೂ ಹೌದು.





ಪ್ರಭುತ್ವವೆಂಬ ಆನೆ ಕುರುಡರು ಕಂಡತೆ

ಜಿ. ರಾಜಶೇಖರ್

ಇರೋಮ್ ಶರ್
ಉಪವಾಸ ಸತ್ಯಾ
ಪ್ರಾರಂಭಿಸಿದಾಗ ಸರ
ಅವರ ಮೇಲೆ ಆತ್ಮಹ
ಪ್ರಯತ್ನದ ಕೇಸು
ಬಂಧಿಸಿ, ಕೋ
ಸಲಹೆಯ ಮೇ
ಬಲಾತ್ಕಾರದಲ್ಲಿ ಅ
ನಳಿಕೆ ಮುಖಾಂ
ಆಹಾರ ಪೂ
ಪ್ರಾರಂಭಿಸಿತು.
ಹರೆಯದ ಆಕೆ
ಜೀವಂತ ಶವವಾಗಿದ
ಅಷ್ಟಾಗಿಯು ಅವರು
ಹಜಾರೆಯ
ಆಂದೋಲನಕ್ಕೆ ಬೆಂ
ವ್ಯಕ್ತಪಡಿಸಿದರು.
ಅದಕ್ಕೆ ಪ್ರತಿಯಾಗಿ
ಪಡೆಗಳ ವಿಶೇಷ ಅಧಿ
ಕಾಯ್ದೆಯನ್ನು ರದ್ದು
ಎಂದು ಅಣ್ಣಾ ಹ
ಈವರೆಗೆ ಒತ
ಪಡಿಸಿಲ್ಲ. ಬಹುಷಃ ಅ
ಅದು ಬೇಕಾಗಿಯೂ

ಕುರುಡರು ಆನೆ ನೋಡಿದ ಕತೆಯಲ್ಲಿ, ಆನೆಯ ಕಾಲುಗಳ ಮೇಲೆ ಕೈಯಾಡಿಸಿದ ಕುರುಡನಿಗೆ ಆನೆ ಕಂಬದ ಹಾಗೆ ಇದೆ ಎಂದು ಅನ್ನಿಸುತ್ತದೆ. ಇನ್ನೊಬ್ಬ ಕುರುಡ ಆನೆಯ ಹೊಟ್ಟೆಯ ಗಾತ್ರವನ್ನು ಅಂದಾಜಿಸಿ, ಆನೆ ಒಂದು ದೊಡ್ಡ ಹಂಡೆಯ ಹಾಗಿದೆ ಎಂದು ಭಾವಿಸುತ್ತಾನೆ. ಆನೆಯ ಕಿವಿಗಳನ್ನು ಸವರಿದ ಕುರುಡನಿಗೆ ಆನೆ ಮೊರದ ಹಾಗಿದೆ ಎಂದು ಕಂಡರೆ ಅದರ ಸೊಂಡಿಲು ಮುಟ್ಟಿದ ಕುರುಡನಿಗೆ ಅದು ವಾಲಗದ ಹಾಗೆ ಇದೆ ಎಂದು ಭಾಸವಾಗುತ್ತದೆ. ಆಳುವವರ ನೂರೆಂಟು ಪಾಪ ಕೃತ್ಯಗಳನ್ನು ಮರೆತು ಭ್ರಷ್ಟಾಚಾರದ ಕುರಿತು ಮಾತ್ರ ಯೋಚಿಸುವವರು ಸಹ ಅದೇ ಬಗೆಯ ಕುರುಡರಲ್ಲವೇ?

ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ, ಭ್ರಷ್ಟಾಚಾರದ ವಿರುದ್ಧ ಆಂದೋಲನ ಪ್ರಾರಂಭಿಸಿದ ಮೇಲೆ ಪ್ರಭುತ್ವ ಮತ್ತು ಸಮಾಜದ ವೈಪರೀತ್ಯಗಳನ್ನೆಲ್ಲಾ ಕಡೆಗಾಣಿಸಿ ಭ್ರಷ್ಟಾಚಾರವೇ ದೇಶದ ಅತಿದೊಡ್ಡ ಸಮಸ್ಯೆ ಎಂಬ ಪ್ರಚಾರ ನಡೆದಿದೆ. ಅಣ್ಣಾ ಹಜಾರೆಯವರ ಆಂದೊಲನ, ದೇಶಾದ್ಯಂತ ಜನಸಾಮಾನ್ಯರ ಬೆಂಬಲ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಯಿತು ನಿಜ. ಆದರೆ ಆ ಪ್ರಕ್ರಿಯೆ, ರೈತಾಪಿ ಸರಳತೆಯ, ಇಳಿವಯಸ್ಸಿನ ಗಾಂಧಿವಾದಿಯೊಬ್ಬರು, ಗಾಂಧೀಜಿಯವರಿಗೆ ಒಪ್ಪುವ ರೀತಿಯಲ್ಲೇ ಉಪವಾಸ ಸತ್ಯಾಗ್ರಹ ಕೂತರು; ಜನ ಅವರ ಬೆಂಬಲಕ್ಕೆ ನಿಂತರು ಎನ್ನುವಷ್ಟು ಸರಳವಾಗಿಲ್ಲ. ಜನ ಎಂದರೆ ಎಷ್ಟು ಜನ? ಯಾವ ವರ್ಗದ ಜನ? ಅಥವಾ ಆ ಆಂದೋಲನಕ್ಕೆ ದೇಶದ ಸಮಸ್ತ ಜಾತಿ ವರ್ಗಗಳವರ ಬೆಂಬಲವೂ ಇತ್ತೆ? ಈ ಬಗೆಯ, ಖಚಿತ ಉತ್ತರಗಳನ್ನು ಬಯಸುವ ಪ್ರಶ್ನೆಗಳನ್ನು ಹಾಕಿಕೊಂಡಾಗ ಹಜಾರೆಯವರ ಆಂದೋಲನದ ಮಿತಿಗಳು ಕಾಣ ತೊಡಗುತ್ತವೆ.

ಭ್ರಷ್ಟಾಚಾರ, ಒಂದು ಗಂಭೀರವಾದ ಸಮಸ್ಯೆ ಎಂಬುದು ನಿಜ. ಆದರೆ ಅದು ನಮ್ಮ ಏಕೈಕ ಸಮಸ್ಯೆಯಲ್ಲ, ಅದು ದೇಶದ ಅತಿದೊಡ್ಡ ಸಮಸ್ಯೆ ಎಂಬ ಮಾತು ಕೂಡ ಚರ್ಚಾಸ್ಪದವಾದದ್ದು. ಆಳುವವರ ಭ್ರಷ್ಟಾಚಾರಕ್ಕಿಂತಲೂ ಘೋರವಾದ ಬವಣೆಗಳೊಡನೆ ಭಾರತದ ಬಡವರು ಪ್ರತಿನಿತ್ಯ ಹೇಗೋ ಏಗಿಕೊಂಡು ಬದುಕುತ್ತಿದ್ದಾರೆ. ದೇಶದ ಆದಿವಾಸಿಗಳು, ದಲಿತರು, ರೈತರು, ಕೃಷಿ ಕೂಲಿಗಳು, ಕಾರ್ಮಿಕರು ಮತ್ತು ನಿರುದ್ಯೋಗಿ ಯುವಕರು ಎದುರಿಸುತ್ತಿರುವ ಸಮಸ್ಯೆ ಭ್ರಷ್ಟಾಚಾರವಲ್ಲ; ಅದು ಅವರ ಸಮಸ್ಯೆಗಳ ತೀವ್ರತೆಯನ್ನು ಹೆಚ್ಚಿಸಿರಬಹುದು; ಆದರೆ ಅದೇ ಮೂಲ ಕಾರಣವಲ್ಲ. ದೇಶದ ಹಲವೆಡೆ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಸಂಕಷ್ಟದ ಮೂಲ ಭ್ರಷ್ಟಾಚಾರವಲ್ಲ. ಗುಜರಾತ್‌ನ ನರೇಂದ್ರ ಮೋದಿ ಸರಕಾರ, ರಾಜ್ಯ ಸರಕಾರಗಳ ಪೈಕಿ ಅತ್ಯಂತ ಪ್ರಾಮಾಣಿಕ ಹಾಗೂ ದಕ್ಷ ಎಂದು ಹೆಸರುಗಳಿಸಿದೆ. ಆದರೆ ಆ ರಾಜ್ಯದ ಮುಸ್ಲಿಮರು ಮಾತ್ರ ಈಗಲೂ ಭಯಭೀತರಾಗಿದ್ದಾರೆ.

ಒರಿಸ್ಸಾದ ನವೀನ್ ಪಟ್ನಾಯಕ್‌ರ ಸರಕಾರವೂ ಹೋಲಿಕೆಯಲ್ಲಿ ಭ್ರಷ್ಟಾಚಾರ ಮುಕ್ತವೆಂದು ಭಾವಿಸಲಾಗಿದೆ. ಆದರೆ ರಾಜ್ಯದ ಕಂಧಮಾಲ್ ಜಿಲ್ಲೆಯಲ್ಲಿ ಆದಿವಾಸಿ ಕ್ರೈಸ್ತರ ಮೇಲೆ 2008ರಲ್ಲಿ ಸಾಮೂಹಿಕ ದಾಳಿಗಳು ನಡೆದಾಗ ಸರಕಾರ ನಿಷ್ಕ್ರಿಯವಾಗಿತ್ತು. ಅಮಾಯಕ ಪ್ರಜೆಗಳ ಮೇಲೆ ಸಾಮೂಹಿಕ ಹಿಂಸಾಚಾರ ನಡೆಯದಂತೆ ನೋಡಿಕೊಳ್ಳುವುದು ಸಹ ದಕ್ಷ ಹಾಗೂ ಪ್ರಾಮಾಣಿಕ ಸರಕಾರಗಳ ಕರ್ತವ್ಯವಾಗಿರಬೇಕೆಂದು, ನರೇಂದ್ರ ಮೋದಿಯ ತಥಾಕಥಿತ ದಕ್ಷತೆಯ ಬಗ್ಗೆ ಮಾತನಾಡುತ್ತ ಖ್ಯಾತ ಚಿಂತಕ ಅಶೀಶ್ ನಂದಿ ಹೇಳಿದ್ದರು. ಆದರೆ ನರೇಂದ್ರ ಮೋದಿಯ ದಕ್ಷತೆಯನ್ನು ಅಣ್ಣಾ ಹಜಾರೆ ಸಾರ್ವಜನಿಕವಾಗಿಯೇ ಹೊಗಳಿದ್ದಾರೆ.

ಅಂದರೆ ಆಡಳಿತದ ದಕ್ಷತೆ, ಅಣ್ಣಾ ಹಜಾರೆ ಅವರ ಮಟ್ಟಿಗೆ ಪ್ರಜೆಗಳ ಜೀವ ರಕ್ಷಣೆಯನ್ನು ಒಳಗೊಳ್ಳುವುದಿಲ್ಲ ಎಂದಾಯಿತು. ನರೇಂದ್ರ ಮೋದಿ ಕುರಿತು ಅವರು ಆ ಪ್ರಶಂಸೆಯ ಮಾತಿಗೆ ವ್ಯಾಪಕ ಟೀಕೆ ಎದುರಾದಾಗ, ಅವರು ಅದನ್ನು ಒಲ್ಲದ ಮನಸ್ಸಿನಿಂದ ಹಿಂದಕ್ಕೆ ತೆಗೆದುಕೊಂಡರು. ಆದರೆ ತಮ್ಮದೇ ರಾಜ್ಯವಾದ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ನಡೆದ ದಲಿತರ ಕೊಲೆಗಳ ಕುರಿತಾಗಲಿ, ಆ ರಾಜ್ಯದ ಅನೇಕ ಕಡೆಗಳಲ್ಲಿ ದಲಿತರ ಮೇಲೆ ನಡೆದ ಹಿಂಸಾಚಾರದ ಬಗ್ಗೆಯಾಗಲಿ, ಅಣ್ಣಾ ಹಜಾರೆ ಇದುವರೆಗೆ ಪ್ರಸ್ತಾಪ ಮಾಡಿದ್ದೇ ಇಲ್ಲ.



ಅವರನ್ನು ಈಗ ಗಾಂಧೀಜಿಯವರ ಜೊತೆ ಹೋಲಿಸಲಾಗುತ್ತಿದೆ. ಆದರೆ ಆ ಹೋಲಿಕೆ, ಅಣ್ಣಾ ಹಜಾರೆಯವರ ನೈತಿಕ ಪ್ರಜ್ಞೆ ಸ್ವಲ್ಪ ಊನಗೊಂಡದ್ದು ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಹಜಾರೆ ಒಬ್ಬ ದೇವತೆಯಂತೆ ಇರಬೇಕು ಎಂದು ನಿರೀಕ್ಷಿಸುವ ಹಕ್ಕು ನಮಗೆ ಇಲ್ಲ. ಆದರೆ ಅದುವೇ ಅವರ ಆಂದೋಲನದಲ್ಲಿ ಇರುವ ಗಂಭೀರ ಸಮಸ್ಯೆಗಳನ್ನು ನಾವು ಅಲಕ್ಷಿಸುವಂತೆಯೂ ಇಲ್ಲ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಭ್ರಷ್ಟಾಚಾರ ವಿರುದ್ಧ ಸತ್ಯಾಗ್ರಹ ನಡೆಸಿದ ಅಣ್ಣಾ ಹಜಾರೆಯವರ ಸುತ್ತ ದೊಡ್ಡ ಸಂಖ್ಯೆಯಲ್ಲಿ ಜನ ನೆರೆದದ್ದನ್ನು ನಾವೆಲ್ಲರೂ ನೋಡಿದ್ದೇವೆ–ಟೀವಿಯಲ್ಲಿ. ಈ ಸತ್ಯಾಗ್ರಹಕ್ಕೆ ಕೆಲವೇ ತಿಂಗಳ ಮೊದಲು, ದೇಶದ ಎಡ ಪಂಥೀಯ ಕಾರ್ಮಿಕ ಸಂಘಟನೆಗಳು, ದೆಹಲಿಯಲ್ಲಿ ಬೆಲೆ ಏರಿಕೆ ವಿರುದ್ಧ ನಡೆಸಿದ ಪ್ರತಿಭಟನೆಯಲ್ಲಿ 5 ಲಕ್ಷ ಜನ ಭಾಗವಹಿಸಿದ್ದರು. ಇದು ರಾಮ ಲೀಲಾ ಮೈದಾನದಲ್ಲಿ ಹಜಾರೆಯವರ ಜೊತೆಗಿದ್ದವರ ಸಂಖ್ಯೆಗಿಂತ, ಹಲವು ಪಟ್ಟು ಜಾಸ್ತಿಯಾಗಿದ್ದಿತು. ಆದರೆ ಮಾಧ್ಯಮಗಳ ಕಣ್ಣಿಗೆ ಅದು ಕಾಣಿಸಲೇ ಇಲ್ಲ.

ಮಾಧ್ಯಮಗಳ ಪ್ರಕಾರ, ಹಜಾರೆ ನೇತೃತ್ವದ ಸತ್ಯಾಗ್ರಹದಲ್ಲಿ ಭಾಗವಹಿಸಿದ ಜನ ದೇಶದ ಜನತೆಯನ್ನು ಪ್ರತಿನಿಧಿಸುತ್ತಿದ್ದರು. ದೆಹಲಿಯಲ್ಲಿ ಬೆಲೆ ಏರಿಕೆ ವಿರುದ್ದ ಪ್ರತಿಭಟಿಸಿದ ಕಾರ್ಮಿಕರು ಅಥವಾ ಮುಂಬಯಿಯಲ್ಲಿ ಅಂಬೇಡ್ಕರ್ ಜನ್ಮದಿನ ಆಚರಣೆಗೆ ಪ್ರತಿವರ್ಷ ಸೇರುವ ಲಕ್ಷಾಂತರ ದಲಿತರು, ಬೇರೆ ಯಾರನ್ನು ಅಲ್ಲವಾದರು ಕಡೆಯ ಪಕ್ಷ ತಮ್ಮನ್ನು ತಾವು ಪ್ರತಿನಿಧಿಸುತ್ತಾರೆ ಎಂಬ ಸತ್ಯವನ್ನು ಮಾಧ್ಯಮಗಳು ಉದ್ದೇಶಪೂರ್ವಕವಾಗಿ ಉಪೇಕ್ಷಿಸುತ್ತವೆ. ಯಾರು ಯಾರನ್ನು ಪ್ರತಿನಿಧಿಸುತ್ತಾರೆ ಎಂಬ ವಿಷಯದಲ್ಲಿ ಮಾಧ್ಯಮಗಳು ನಡೆಸುವ ಕುತಂತ್ರ ಸದಾ ಆಳುವ ವ್ಯವಸ್ಥೆಗೆ ಅನುಕೂಲಕರವಾಗಿಯೇ ಇರುತ್ತದೆ. ಆದ್ದರಿಂದಲೇ, ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಮಾಧ್ಯಮಗಳಿಂದ ದೊರೆತ ಬೆಂಬಲ, ಭ್ರಷ್ಟಾಚಾರಕ್ಕಿಂತ ಹೆಚ್ಚು ತೀವ್ರವಾದ, ಹೆಚ್ಚು ನಿರ್ದಿಷ್ಟವಾದ ಮತ್ತು ಹೆಚ್ಚು ತುರ್ತಿನ ಸಮಸ್ಯೆಗಳ ಸುತ್ತ ನಡೆದ ಆಂದೋಲನಗಳಿಗೆ ಯಾವತ್ತು ದೊರೆತಿಲ್ಲ.

ಉದಾಹರಣೆಗೆ ಭಾರತದ, ಯಾಕೆ ವಿಶ್ವದ ಅತಿ ದೊಡ್ಡ ಅಣೆಕಟ್ಟು ಯೋಜನೆಗಳಲ್ಲಿ ಒಂದಾಗಿರುವ ನರ್ಮದಾ ಯೋಜನೆಯ ವಿರುದ್ಧ ಕಳೆದ ಹಲವು ವರ್ಷಗಳಿಂದ ಶ್ರೀಮತಿ ಮೇಧಾ ಪಾಟ್ಕರ್ ನೇತೃತ್ವದಲ್ಲಿ ನರ್ಮದಾ ಬಚಾವೋ ಆಂದೊಲನ ಎಂಬ

ಸಂಘಟನೆ ಪ್ರತಿಭಟನೆ ನಡೆಸುತ್ತಿದೆ. ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ, ಈ ನದಿಯ ಉದ್ದಕ್ಕೂ ಸಣ್ಣದು, ದೊಡ್ಡದು ಎಲ್ಲಾ ಸೇರಿ ಸುಮಾರು 3000 ಅಣೆಕಟ್ಟುಗಳನ್ನು ಕಟ್ಟುವ ಈ ಬೃಹತ್ ಯೋಜನೆಯಲ್ಲಿ ಈಗಾಗಲೇ 60,000ಕ್ಕೂ ಹೆಚ್ಚು ಕುಟುಂಬಗಳು ತಮ್ಮ ನೆಲೆಗಳನ್ನು ಕಳೆದುಕೊಂಡಿವೆ. ಅವುಗಳಲ್ಲಿ ಹೆಚ್ಚಿನವು ಆದಿವಾಸಿ ಕುಟುಂಬಗಳು. ಒಮ್ಮೆ ಯೋಜನೆಯಿಂದ ಮುಳುಗಡೆಯಾಗಲಿದ್ದ ದೋಮ್ ಕೇಡಿ ಎಂಬ ಹಳ್ಳಿಯಲ್ಲಿ ಮೇಧಾ ಪಾಟ್ಕರ್, ಕ್ಷಣ ಕ್ಷಣವೂ ಏರುತ್ತಿದ್ದ ನೀರಿನಲ್ಲಿ ನಿಂತು ಪ್ರತಿಭಟನೆ ನಡೆಸಿದರು. ಆದರೆ ಮಾಧ್ಯಮಗಳು ಅದರತ್ತ ಕಣ್ಣೆತ್ತಿಯೂ ನೋಡಲಿಲ್ಲ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಅಣ್ಣಾ ಹಜಾರೆ ಪ್ರತಿಭಟನೆಗೆ ಧರಣಿ ಕೂತಾಗಲೇ ದೇಶದ ಈಶಾನ್ಯ ಭಾಗದ ಮಣಿಪುರ ರಾಜ್ಯದ ಇಂಫಾಲ್‌ನಲ್ಲಿ ಇರೋಮ್ ಶರ್ಮಿಳ ಎಂಬ ತರುಣಿ ಸಹ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಭಾರತ ಸರಕಾರದ ಕರಾಳ ಶಾಸನ "ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆ"ಯ ವಿರುದ್ಧ ಅವರು ಕಳೆದ ಹತ್ತು ವರ್ಷಗಳಿಂದ ನಿರಂತರ ಉಪವಾಸದಲ್ಲಿದ್ದಾರೆ. ಮಾಧ್ಯಮಗಳು ತಮ್ಮದೇ ಆದ ಕಾರಣಗಳಿಗೆ ಕೊಟ್ಟ ಅತಿ ಪ್ರಚಾರದಿಂದಾಗಿ ಅಣ್ಣಾ ಹಜಾರೆ ಯಾರು ಎಂದು ಇವತ್ತು ಹೆಚ್ಚಿನವರಿಗೆ ಕಡೆಯ ಪಕ್ಷ ಮಧ್ಯಮ ವರ್ಗದ ಹೆಚ್ಚಿನವರಿಗೆ ಗೊತ್ತು. ಅವರ ಆಂದೋಲನದ ಉದ್ದೇಶವೇನು ಎಂಬುದು ಸಹ ಗೊತ್ತು; ಅಥವಾ ತಮಗೆ ಗೊತ್ತು ಎಂದು ಜನ ಭಾವಿಸಿದ್ದಾರೆ.

ಭ್ರಷ್ಟಾಚಾರ ಎಂದರೆ ನಿಖರವಾಗಿ ಏನು? ಲಂಚ ತೆಗೆದುಕೊಳ್ಳುವುದು ಮಾತ್ರ ಭ್ರಷ್ಟಾಚಾರವೋ? ಲಂಚ ಕೊಡುವ ಎಲ್ಲಾರೂ ಅಸಹಾಯಕರೋ? ರಾಜಕಾರಣಿಗಳು ಮತ್ತು ಸರಕಾರಿ ಅಧಿಕಾರಿಗಳು ಮಾತ್ರ ಭ್ರಷ್ಟಾಚಾರಿಗಳೊ? ಅಣ್ಣಾ ಹಜಾರೆ ಆ ಕುರಿತು ಏನೂ ಹೇಳದಿರುವುದರಿಂದ, ಬಹುರಾಷ್ಟ್ರೀಯ ಕಂಪನಿಗಳವರು, ದೇಶೀಯ ಬಂಡವಾಳಶಾಹಿಗಳು, ಶ್ರೀಮಂತರು, ಕ್ಯಾಪಿಟೇಷನ್ ಕುಳಗಳು ಮುಂತಾದವರೆಲ್ಲ ಪುತ್ಥಳಿ ಚಿನ್ನ ಎಂದು ನಾವು ಭಾವಿಸಬೇಕೋ? ಇತ್ಯಾದಿ ಯಾವ ಪ್ರಶ್ನೆಗೂ ಹಜಾರೆಯವರ "ರಾಜಕೀಯವನ್ನು ಹೊರಗಿಟ್ಟ" **ಆಂದೋಲನದಲ್ಲಿ ಉತ್ತರ ಇಲ್ಲ. ಆದರೆ ಆ ಆಂದೋಲನವನ್ನು ಬೆಂಬಲಿಸುವ ಎಲ್ಲರು,** ತಾವು **ಭ್ರಷ್ಟಾಚಾರದ ವಿಷಯದಲ್ಲಿ ಸರ್ವಜ್ಞರು** ಎಂಬ ಭ್ರಮೆಯಲಿದ್ದಾರೆ.

ಇದಕ್ಕೆ ಪ್ರತಿಯಾಗಿ ಇರೋಮ್ ಶರ್ಮಿಳ ಹತ್ತು ವರ್ಷಗಳಿಂದ ನಡೆಸುತ್ತಿರುವ ಉಪವಾಸದ ಸಂಗತಿಯೇ, ಹೆಚ್ಚಿನವರ ಗಮನಕ್ಕೆ ಇದುವರೆಗೆ ಬಂಟಲ್ಲ; ಇರೋಮ್ ಶರ್ಮಿಳ ಯಾರು, ಏನು ಎಂದು ಸಹ ಗೊತ್ತಿಲ್ಲ. ಅಷ್ಟೇ ಯಾಕೆ ಮಣಿಪುರ ಎಂಬ ಪ್ರಾಂತ್ಯವನ್ನು ಭಾರತ ಭೂಪಟದಲ್ಲಿ ಎಲ್ಲಿ ಅರಸಬೇಕು ಎನ್ನುವುದು ಸಹ ಹೆಚ್ಚಿನವರಿಗೆ ಗೊತ್ತಿರಲಾರದು. ಭೂಪಟದಲ್ಲಿ ಮೇಲೆ ಎಂದರೆ ಉತ್ತರದಲ್ಲಿ ಹಿಮಾಲಯ ಶ್ರೇಣಿ, ಅದರ ಕೆಳಗೆ ಕಾಶ್ಮೀರವಿದ್ದರೆ, ನಿಮ್ಮಬಲಕ್ಕೆ ಎಂದರೆ ಉತ್ತರ ಮತ್ತು ಪೂರ್ವ ದಿಕ್ಕುಗಳ ನಡುವಿನ ಈಶಾನ್ಯದಲ್ಲಿ ಅಸ್ಸಾಂ, ತ್ರಿಪುರ, ಮಣಿಪುರ, ಅರುಣಾಚಲ ಪ್ರದೇಶ, ಮುಂತಾದ ಪ್ರಾಂತ್ಯಗಳಿವೆ. ಇವು ಭಾರತದ ಅವಿಭಾಜ್ಯ ಅಂಗಗಳು ಆದರೆ ಅಂಚಿನಲ್ಲಿ ಇರುವಂತಹವು. ಅಂದರೆ ತಾವು ಕೇಂದ್ರದಲ್ಲಿ ಇರುವವರು; ತಮ್ಮದೇ ಪ್ರಧಾನಧಾರೆ. ಮತ್ತು ಅಧಿಕೃತ ಸಂಸ್ಕೃತಿ ಎನ್ನುವವರ ದೃಷ್ಟಿಯಲ್ಲಿ ಅವು ಅಂಚಿನಲ್ಲಿರುವ ಪ್ರಾಂತ್ಯಗಳು. ವಸಾಹತುಶಾಹಿಯಿಂದ ಭಾರತ ಸ್ವತಂತ್ರವಾದಲಾಗಾಯ್ತು ದೇಶದ ಪ್ರದಾನ ಧಾರೆ ಮತ್ತು ಅಂಚಿನಲ್ಲಿರುವವರ ನಡುವೆ ನಿರಂತರ ಸಂಘರ್ಷವೊಂದು ನಡೆದುಕೊಂಡು ಬಂದಿದ್ದು ಅದು ಈಗಲೂ ಮುಂದುವರೆದಿದೆ.

ಈ ಸಂಘರ್ಷ ಅಗಾಧ ಜೀವಹಿಂಸೆಗೂ ಕಾರಣವಾಗಿದೆ. ಸಮುದಾಯಗಳು ವಸಾಹತುಶಾಹಿಯ ಪರಿಣಾಮದಿಂದ ರಾಷ್ಟ್ರ ಪ್ರಭುತ್ವಗಳಾಗಿ ಮಾರ್ಪಡುವ ಹಿಂಸಾಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ತಲೆದೋರುವ ಪ್ರಕ್ಷುಬ್ಧತೆ ಇದು. ಈಶಾನ್ಯ ಭಾರತದ ಅಶಾಂತಿ ಮತ್ತು ವಿಧ್ವಂಸಕ ವಾತಾವರಣವನ್ನು ನಿಭಾಯಿಸಲು ಕೇಂದ್ರ ಸರಕಾರ, ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ಜಾರಿಗೆ ತಂದಿದ್ದು"ಅಂಚಿನಲ್ಲಿರುವ" ಪ್ರಾಂತ್ಯಗಳಾದ ಕಾಶ್ಮೀರ, ಅಸ್ಸಾಂ, ಮಣಿಪುರ, ತ್ರಿಪುರ, ಮಿಜೋರಂ,ಮತ್ತು ಅರುಣಾಚಲ ಪ್ರದೇಶಗಳು ಅದಕ್ಕೆ ಒಳಪಟ್ಟಿವೆ.

ಈ ಎಲ್ಲಾ ರಾಜ್ಯಗಳಲ್ಲೂ ಭಾರತದ ಸೈನಿಕ ಪಡೆ ಭಾರೀ ಪ್ರಮಾಣದಲ್ಲಿ ಬೀಡುಬಿಟ್ಟಿದ್ದು ಮೇಲೆ ಹೇಳಿದ ಕಾಯ್ದೆ ಪ್ರಕಾರ ಸೈನಿಕರು ಈ ರಾಜ್ಯಗಳ ನಾಗರಿಕರ ಮೇಲೆ ನಡೆಸುವ ಯಾವುದೇ ಬಗೆಯ ಹಿಂಸೆ, ಅತಿಕ್ರಮಣ, ಅತ್ಯಾಚಾರ ಇತ್ಯಾದಿ ಕ್ರಿಮಿನಲ್ ಕೃತ್ಯಗಳನ್ನು, ನ್ಯಾಯಲಯದಲ್ಲಿ ಪ್ರಶ್ನಿಸುವ ಹಾಗಿಲ್ಲ. ಸೈನ್ಯದ ಸಮವಸ್ತ್ರದಲ್ಲಿರುವ, ತೀರ ಕೆಳಹಂತದ ಸಾಮಾನ್ಯ ಸಿಪಾಯಿಗೂ ಪ್ರಜೆಗಳ ಮೇಲೆ ನಿರಂಕುಶ ಅಧಿಕಾರ ಚಲಾಯಿಸಲು ಆಸ್ಪದ ಮಾಡಿಕೊಡುವ ಈ ಕಾಯ್ದೆಯ ವಿರುದ್ಧ ಇರೋಮ್ ಶರ್ಮಿಳ 2-11-2000ದಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅದರ ಹಿಂದಿನ ದಿನ ಭಾರತೀಯ ಸೈನ್ಯದ ಕುಖ್ಯಾತ ಅಸ್ಸಾಂ ರೈಫಲ್ಸ್ ದಳದ ಸಿಪಾಯಿಗಳು, ಇಂಫಾಲ್‌ನ ಮುಖ್ಯ ರಸ್ತೆಯೊಂದರಲ್ಲಿ ಇರೋಮ್ ಶರ್ಮಿಳ ಕಣ್ಣೆದುರಿಗೇ, ಹತ್ತು ಜನ ಅಮಾಯಕರನ್ನು ಅವರು ಉಗ್ರಗಾಮಿಗಳು ಎಂಬ ಸಂಶಯದಲ್ಲಿ ಗುಂಡಿಟ್ಟು ಕೊಂದಿದ್ದರು. ಭಾರ ಸೈನಿಕರ ಈ ಬಗೆಯ ಸ್ವೇಚ್ಛಾಚಾರ ಮತ್ತು ಕ್ರೌರ್ಯಗ ಮಣಿಪುರದಲ್ಲಿ ದೊಡ್ಡ ಇತಿಹಾಸವೇ ಇದೆ.

ಕೆಲವು ವರ್ಷಗಳ ಹಿಂದೆ, ಇದೇ ಅಸ್ಸಾಂ ರೈಫಲ್ ಸೈನಿಕರು ಮನೋರಮ ಎಂಬ ಹದಿ ಹರೆಯದ ಹುಡುಗಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿ ಆನಂತರ ಆಕೆ ಶಂಕಿತ ಉಗ್ರಗಾಮಿ ಎಂದು ಕತೆ ಕಟ್ಟಿದ್ದರು. ಈ ಘೋರ ಅತ್ಯಾಚಾರದ ವಿರುದ್ಧ ಮುದಿ ಪ್ರಾಯದ ಅಜ್ಜಿಯವರಿಂದ ಹಿಡಿದು ಎಳೆಯ ಪ್ರಾಯದ ಹುಡುಗಿಯವರೆಗೆ ಎಲ್ಲ ವಯೋಮಾನದ ಸ್ತ್ರೀಯರು ಸಂಪೂರ್ಣವಾಗಿ ಬೆತ್ತಲಾಗಿ,"ಭಾರತದ ಸೈನಿಕರೆ ನಮ್ಮ ಮೇಲೆ ಅತ್ಯಾಚಾ ನಡೆಸಿ"ಎಂಬ ಬ್ಯಾನರ್ ಹಿಡಿದು, ಇಂಫಾಲ್ ನಲ್ಲಿರುವ ಅಸ್ಸಾಂ ರೈಫಲ್ಸ್ ಕಛೇರಿಯ ಎದುರು ಪ್ರತಿಭಟನೆ ನಡೆಸಿದರು. ಆ ದೃಶ್ಯ ಕಂಡು ದೇಶವೇ ನಾಚಿಕೊಂಡಿ ಆದರೆ ಕೇಂದ್ರ ಸರಕಾರ ಮಾತ್ರ ಅದರ ಕುರಿತು ಹೆಣ ಹಾಗೆ ತಟಸ್ಥವಾಗಿತ್ತು.

ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ತಮ ಕೊಡುವ ರಕ್ಷಣೆಯನ್ನು ಬಳಸಿಕೊಂಡು ಸೈನಿಕರು ಪರಮಾವಧಿ ದೌರ್ಜನ್ಯ ನಡೆಸಿರುವ ಇನ್ನೊಂದು ರಾ ಕಾಶ್ಮೀರ. ಅಲ್ಲಿಯೂ ಈ ಕಾಯ್ದೆ ವಿರುದ್ಧ ಜನರ ಆಕ್ರೋಶ ತೀವ್ರಗೊಂಡಿದ್ದು ಒಮ್ಮೊಮ್ಮೆ ಅದು ಹಿಂಸೆ ಆಸ್ಫೋಟಗೊಳ್ಳುವುದೂ ಇದೆ. ಈ ಕಾನೂನಿನ ಸಾಧಕ ಬಾಧಕಗಳನ್ನು ಅಧ್ಯಯನ ಮಾಡಲು ಸರಕಾರ ನೇಮಿ ನ್ಯಾಯಮೂರ್ತಿ ಜೀವನರೆಡ್ಡಿ ಆಯೋಗ ಕೆಲವು ವರ್ಷಗಳ ಹಿಂದೆಯೇ ಈ ಕಾಯ್ದೆಯ ರದ್ದತಿಗೆ ಶಿಫಾರಸ್ಸು ಮಾಡಿದೆ. ಆದಾಗ್ಯು, ಜನತೆಗೆ ಉತ್ತರದಾಯಿ ಹೊಂದಿಲ್ಲದ ಆಡಳಿತ ಮತ್ತು ಸೈನ್ಯದ ಹಿರಿಯ ಅಧಿಕಾರಿಗಳು ಹಾಗೂ ಫ್ಯಾಸಿಸ್ಟ್ ಅಜೆಂಡಾ ಹೊಂದಿ ಬಿ.ಜೆ.ಪಿಯಂತಹ ತೀವ್ರ ಬಲ ಪಂಥೀಯ ಪಕ್ಷಗಳು **ಕಾಯ್ದೆ ಮುಂದುವರಿಯಬೇಕು** ಎಂದು ಒತ್ತಾಯಿಸುತ್ತಿ **ಸರಕಾರಕ್ಕೆ ಸಹ ಈ ಕರಾಳ ಕಾಯ್ದೆಯನ್ನು ರದ್ದುಗೊಳಿಸುವ ಇರಾದೆ ಇಲ್ಲ,**

ಹಾಗಾಗಿ ಇರೋಮ್ **ಶರ್ಮಿ**ಳ ಅವರ ಉಪವಾ ಸತ್ಯಾಗ್ರಹ ಈಗಲೂ **ಮುಂದು**ವರಿದಿದೆ. ಆತ್ಮಹತ್ಯೆ ಒ



ಕೆಲವು ವರ್ಷಗಳ ಹಿಂದೆ, ಇದೇ ಅಸ್ಸಾಂ ರೈಫಲ್ಸ್‌ನ ಸೈನಿಕರು ಮನೋರಮ ಎಂಬ ಹದಿ ಹರೆ ಹುಡುಗಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿ ಆನಂತರ ಆಕೆ ಶಂಕಿತ ಉಗ್ರಗಾ ಎಂದು ಕತೆ ಕಟ್ಟಿದ್ದರು. ಈ ಘೋರ ಅತ್ಯಾಚಾರದ ವಿರುದ್ಧ ಮುದಿ ಪ್ರಾಯದ ಅಜ್ಜಿಯವರಿಂದ ಹಿ ಎಳೆಯ ಪ್ರಾಯದ ಹುಡುಗಿಯವರೆಗೆ ಎಲ್ಲ ವಯೋಮಾನದ ಸ್ತ್ರೀಯರು ಸಂಪೂರ್ಣವಾಗಿ ಬೆತ್ತಲ "ಭಾರತದ ಸೈನಿಕರೆ ನಮ್ಮ ಮೇಲೆ ಅತ್ಯಾಚಾರ ನಡೆಸಿ"ಎಂಬ ಬ್ಯಾನರ್ ಹಿಡಿದು, ಇಂಫಾಲ್ ನಲ್ಲಿ ಅಸ್ಸಾಂ ರೈಫಲ್ಸ್ ಕಛೇರಿಯ ಎದುರು ಪ್ರತಿಭಟನೆ ನಡೆಸಿದರು. ಆ ದೃಶ್ಯ ಕಂಡು ದೇಶವೇ ನಾಚಿಕೊಂಡಿ ಆದರೆ ಕೇಂದ್ರ ಸರಕಾರ ಮಾತ್ರ ಅದರ ಕುರಿತು ಹೆಣದ ಹಾಗೆ ತಟಸ್ಥವಾ

ಕ್ರಿಮಿನಲ್ ಅಪರಾಧ ಎಂದು ಭಾರತದ ಕಾನೂನು ಪರಿಗಣಿಸುತ್ತದೆ. ಇರೋಮ್ ಶರ್ಮಿಳ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ಸರಕಾರ ಅವರ ಮೇಲೆ ಆತ್ಮಹತ್ಯೆಗೆ ಪ್ರಯತ್ನದ ಕೇಸು ಹಾಕಿ ಬಂಧಿಸಿ, ಕೋರ್ಟ್ ಸಲಹೆಯ ಮೇರೆಗೆ ಬಲಾತ್ಕಾರದಲ್ಲಿ ಅವರಿಗೆ ನಳಿಕೆ ಮುಖಾಂತರ, ಆಹಾರ ಪೂರೈಕೆ ಪ್ರಾರಂಭಿಸಿತು. ಶರ್ಮಿಳಾ ಅವರ ಉಪವಾಸ ಸತ್ಯಾಗ್ರಹ ಎಂದು ಮುಗಿಯುತ್ತದೆಯೋ ಯಾರಿಗೂ ಗೊತ್ತಿಲ್ಲ. 30ರ ಹರೆಯದ ಆಕೆ ಈಗ ಜೀವಂತ ಶವವಾಗಿದ್ದಾರೆ. ಅಷ್ಟಾಗಿಯು ಅವರು ಅಣ್ಣಾ ಹಜಾರೆಯವರ ಆಂದೋಲನಕ್ಕೆ ಬೆಂಬಲ ವ್ಯಕ್ತಪಡಿಸಿದರು. ಆದರೆ ಅದಕ್ಕೆ ಪ್ರತಿಯಾಗಿ ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ರದ್ದುಪಡಿಸಿ ಎಂದು ಅಣ್ಣಾ ಹಜಾರೆ ಈವರೆಗೆ ಒತ್ತಾಯ ಪಡಿಸಿಲ್ಲ. ಬಹುಷಃ ಅವರಿಗೆ ಅದು ಬೇಕಾಗಿಯೂ ಇಲ್ಲ.

ಇತ್ತೀಚೆಗೆ ಅವರ ನೇತೃತ್ವದ ಭ್ರಷ್ಟಾಚಾರ ವಿರೋಧಿ ಚಳವಳಿಯ ವಿಶೇಷ ತಂಡದ ಮುಖ್ಯ ಸದಸ್ಯರಲ್ಲಿ ಒಬ್ಬರಾಗಿದ್ದ ಪ್ರಶಾಂತ್ ಭೂಷಣ್ ಕಾಶ್ಮೀರದಲ್ಲಿ ಜನಮತಗಣನೆ ಆಗಬೇಕು ಎಂಬ ಆಶಯ ವ್ಯಕ್ತಪಡಿಸಿದರು. ಆದರೆ ಅಣ್ಣಾ ಹಜಾರೆ ಈ ನಿಲುವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ ಭಿನ್ನಮತ ಹಾಗು ಅಭಿಪ್ರಾಯ ಭೇದಗಳ ಕುರಿತು ಸಹನೆ ತೋರುವ ಮನೋಧರ್ಮವೇ ಅಣ್ಣ ಹಜಾರೆಯವರಿಗಿಲ್ಲ. ಇರೋಮ್ ಶರ್ಮಿಳ ಯಾಕಾಗಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ. ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯ ಸರ್ವಾಧಿಕಾರಿ ನಿರಂಕುಶ ಪ್ರಜಾಪ್ರಭುತ್ವದ ಮೂಲಬೂತ ತತ್ವಗಳನ್ನೇ ಅಲ್ಲಗೆಳೆಯುವಂತದ್ದು ಎನ್ನುವುದಕ್ಕೆ ಕೂಡ ಯವುದೇ ವಿವರಣೆ ಬೇಕಿಲ್ಲ.

ಇರೋಮ್ ಶರ್ಮಿಳ ಅವರ ಪ್ರತಿಭಟನೆಯ ಉದ್ದೇಶ ಇಷ್ಟು ಸ್ಪಷ್ಟವಾಗಿದ್ದರೂ, ಅದರ ನ್ಯಾಯಪರತೆ ಇಷ್ಟು ಖಚಿತವಾಗಿದ್ದರೂ ಅದು ಮಾಧ್ಯಮಗಳಲ್ಲಿ ಪಡೆಯಬೇಕಾದ ಪ್ರಾಶಸ್ತ್ಯ ಪಡೆಯಲಿಲ್ಲ; ಸ್ಪಷ್ಟತೆ ಇಲ್ಲದ ಅಣ್ಣಾ ಹಜಾರೆಯವರ ಚಳವಳಿ ಮಾಧ್ಯಮಗಳಲ್ಲಿ ವಿಜೃಂಭಿಸಿತು. ಅಣ್ಣಾ ಹಜಾರೆ, ಟಾಟಬಿರ್ಲಾ, ಅಂಬಾನಿ, ಮಲ್ಯ, ಜಿಂದಾಲ್, ಮಿತ್ತಲ್ ಇತ್ಯಾದಿ ಉದ್ಯಮಪತಿಗಳ ಅಕ್ರಮಗಳನ್ನೂ ಭ್ರಷ್ಟಾಚಾರದ ವರದಿಗೆ ಸೇರಿಸಿದ್ದರೆ ಅಥವಾ ಭಾರತವನ್ನು ಆಳುವವರ ನಿರ್ಧಾರಕ್ಕೆ ಅನುಗುಣವಾಗಿಯೇ ಜಾಗತಿಕ ಬಂಡವಾಳಶಾಹಿಯ ನಿಯಂತ್ರಣಕ್ಕೆ ಒಳಪಡುವುದು ಸಹ ಭ್ರಷ್ಟಾಚಾರ ಎಂದು ಪರಿಗಣಿಸಿದ್ದರೆ, ಮಾಧ್ಯಮಗಳೂ ಅವರ ಚಳವಳಿಗೆ ಈ ಬಗೆಯ ಪ್ರಚಾರವನ್ನು ಖಂಡಿತ ಕೊಡುತ್ತಿರಲಿಲ್ಲ.

ಸರಕಾರ ಮತ್ತು ರಾಜಕಾರಣಿಗಳಲ್ಲಿ ದೇಶದ ಭ್ರಷ್ಟಾಚಾರವೆಲ್ಲ ಕೇಂದ್ರೀಕೃತವಾಗಿದೆ ಎಂಬುದು ಅಣ್ಣಾ ಹಜಾರೆಯವರ ಚಳವಳಿಯ ಕೇಂದ್ರದಲ್ಲಿರುವ ತಿಳುವಳಿಕೆಯಾಗಿದೆ. ತನ್ನ ಚಳವಳಿಗೂ ರಾಜಕೀಯಕ್ಕೂ ಸಂಬಂಧವಿಲ್ಲ ರಾಜಕೀಯ ಮೂಲಭೂತವಾಗಿ ಕೆಡುಕು ಎಂಬ ಅಣ್ಣಾ ಹಜಾರೆಯವರ ನಿಲುವು ಕೂಡ ಈ ಚಳವಳಿಗೆ ಅನುಗುಣವಾಗಿದೆ. ದೇಶೀಯ ಮತ್ತು ಜಾಗತಿಕ ಬಂಡವಾಳಶಾಹಿಗಳಿಗೆ ಈ ಚಳುವಳಿಯಿಂದ ಯಾವ ತೊಂದರೆಯೂ ಇಲ್ಲ. ಈ ಬಂಡವಾಳಶಾಹಿಯ ಪ್ರತ್ಯಕ್ಷ ಮತ್ತು ಪರೋಕ್ಷ ಒಡೆತನದಲ್ಲಿರುವ ಮಾಧ್ಯಮಗಳು ಅಣ್ಣಾ ಹಜಾರೆಯವರಿಗೆ ಜನ ಬೆಂಬಲವನ್ನು "ಉತ್ಪಾದಿಸುವುದರಲ್ಲಿ" ತಳೆದ ಉತ್ಸಾಹದ ಹಿಂದಿರುವ ರಹಸ್ಯ ಇದು.

ಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ದಾಲ್ ಭಾರತದ **ಅರ್ಥವ್ಯವಸ್ಥೆ ಮತ್ತು ರಾಜಕೀಯ ಕುರಿತ ತನ್ನ 'ಏಷಿಯನ್ ಡ್ರಾಮಾ' ಎಂಬ ಗ್ರಂಥದಲ್ಲಿ ಭ್ರಷ್ಟಾಚಾರ ಭಾರತದ ಸಾಂಕ್ರಾಮಿಕ ರೋಗವಾಗಿರುವುದರ ಜೊತೆ, ದೇಶದಲ್ಲಿ ಅದರ ಕುರಿತೇ ಒಂದು ಜಾನಪದ ಸೃಷ್ಟಿಯಾಗಿರುವುದರ ಬಗ್ಗೆಯೂ ಹೇಳಿದ್ದರು.** ಭ್ರಷ್ಟಾಚಾರ **ಎಲ್ಲೆಡೆ ಹಬ್ಬಿರುವುದು ಪ್ರಜೆಗಳಿಗೆ ಅನುಭವವೇದ್ಯವಾಗಿರುವ ಸತ್ಯ. ಆದರೆ ಅದರ ಆಳ ಅಗಲಗಳು ಏನು** ಎಂಬುದರ ಬಗ್ಗೆ ಯಾರಿಗೂ ನಿಖರವಾದ, ವಿವರ ನಿರ್ದಿಷ್ಟವಾದ ಮಾಹಿತಿ ಇಲ್ಲದಿರುವ ಸನ್ನಿವೇಶದಲ್ಲಿ ಭ್ರಷ್ಟಾಚಾರದ ಕುರಿತು ಕತೆಗಳು ಸೃಷ್ಟಿಯಾಗುತ್ತವೆ. ಗುನ್ನಾರ್ ಮಿರ್ದಾಲ್ ಪ್ರಕಾರ ಈ ಜಾನಪದ ಅತ್ಯಂತ ಅಪಾಯಕಾರಿ. ಇದರಿಂದ ಸಮಾಜದ ನೈತಿಕತೆಯ ಹಂದರವೇ ಕುಸಿದು ಎಲ್ಲವೂ"ಚಲ್ತಾಹೈ" ಎಂಬ ಭಾವನೆ ಜನರಲ್ಲಿ ಮೂಡುತ್ತದೆ. ಗುನ್ನಾರ ಮಿರ್ದಾಲ್ ಹೇಳುವ ಈ ಭ್ರಷ್ಟಾಚಾರದ ಜಾನಪದದಲ್ಲಿ ಈಗೀಗ ಅಣ್ಣಾ ಹಜಾರೆಯವರೂ ಒಬ್ಬ ಪಾತ್ರದಾರಿಯಾಗುತ್ತಿದ್ದಾರೆ. ಅವರ ಉಡುಪು ತೊಡಪು ಮತ್ತು ಹಾವ ಭಾವಗಳು ಹೇಗೂ ಗಾಂಧೀಜಿಯವರ ಅಣಕದಂತಿವೆ.

ತಮ್ಮ ಹುಟ್ಟೂರು ರಾಳೆಗಾಂ ಸಿದ್ಧಿಯಲ್ಲಿ ಅವರು, ಕುಡುಕರಿಗೆ ಚಡಿ ಏಟು ಛಾರಿಸಿ ಚಟ ಬಿಡಿಸಿದ್ದಾರಂತೆ. ಅಣ್ಣಾ ಹಜಾರೆ ಅವರ ಈ ಶಿಕ್ಷಾ ವಿಧಾನವನ್ನು ಗಾಂಧೀಜಿ ಬಹುಷಃ ಒಪ್ಪಿಕೊಳ್ಳಲಾರರು. ಆದರೆ ಮದ್ಯಪಾನದ ಬಗ್ಗೆ ಗಾಂಧೀಜಿಯವರದು ಸಹ ಇದೇ ಬಗೆಯ ಅಸಹನೆಯ ನಿಲುವು. ಅವರ ಈ ತಿಕ್ಕಲು ವರ್ತನೆಗಳಿಂದಲೇ ಈಗ ಅಣ್ಣಾ ಹಜಾರೆ ವ್ಯಕ್ತಿತ್ವದ ಸುತ್ತ ಒಂದು ಪ್ರಭಾವ ನಿರ್ಮಾಣಗೊಂಡಿದ್ದು, ಭ್ರಷ್ಟಾಚಾರವೆಂಬ ಲಾಗಾಯ್ತಿನ ಜಾನಪದವನ್ನು ಇನ್ನಷ್ಟು ರೋಚಕವಾಗಿಸಿದೆ. ಇದರ ತಕ್ಷಣದ ಪರಿಣಾಮವೆಂದರೆ ದೇಶ ಎದುರಿಸುತ್ತಿರುವ ಗಂಭೀರವಾದ ಬಿಕ್ಕಟ್ಟುಗಳು ಈಗ ಹಿನ್ನೆಲೆಗೆ ಸರಿದಿವೆ ಹಾಗು ಅವುಗಳ ಬಗ್ಗೆ ಸುಳ್ಳು ಹೇಳಲು ವ್ಯವಸ್ಥೆಗೆ ಇನ್ನಷ್ಟು ಅನುಕೂಲವಾಗಿದೆ.

ದೇಶದ ಈಶಾನ್ಯ ಮತ್ತು ಉತ್ತರದ ಗಡಿ ಪ್ರಾಂತ್ಯಗಳಲ್ಲಿ ಜನ ಎದುರಿಸುತ್ತಿರುವ ಸಂಕಷ್ಟಗಳನ್ನು ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾನತೆಗಳ ನೆಲೆಯಲ್ಲಿ ಪರಿಹರಿಸಲು ಸರಕಾರ ನಿರಾಕರಿಸುತ್ತಿರುವುದು ಒಂದು ಸಮಸ್ಯೆಯಾದರೆ, ದೇಶದ ಖನಿಜ ಸಮೃದ್ಧ ಜಾರ್ಖಂಡ್, ಚತ್ತೀಸ್‌ಗಡ, ಒರಿಸ್ಸಾ, ಮುಂತಾದ ರಾಜ್ಯಗಳ ಆದಿವಾಸಿಗಳು ಸರಕಾರದ ಆರ್ಥಿಕ ಧೋರಣೆಗಳಿಂದ ನಿರ್ವಸಿತರಾಗುತ್ತಿದ್ದಾರೆ; ತಮ್ಮವರು ಮನೆ ಕೃಷಿಯ ನೆಲೆ, ಪಾರಂಪರಿಕ ಉದ್ಯೋಗಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ಭಾರತದ ಸ್ವಾತಂತ್ರ್ಯವೆಂಬುದು ಆದಿವಾಸಿಗಳಿಗೆ ಒಂದು ಭೀಕರ ದುಃಸ್ವಪ್ನವಾಗಿ ಪರಿಣಮಿಸಿದೆ. ಸ್ವತಂತ್ರ ಭಾರತದ ನೆಹರು ನಾಯಕತ್ವದ ಸರಕಾರ, ಆದಿವಾಸಿ ಸಮುದಾಯದ ಸ್ವಾಯತ್ತೆಯನ್ನು ಗುರುತಿಸಲು ನಿರಾಕರಿಸಿದ್ದು ಮಾತ್ರವೇ ಅಲ್ಲದೆ, ಆದಿವಾಸಿಗಳು ವಾಸಿಸಿಕೊಂಡಿದ್ದ ಅರಣ್ಯ ಪ್ರದೇಶ, ರಾಷ್ಟ್ರದ ಸೊತ್ತು ಎಂದು ಘೋಷಿಸಿ ಅದನ್ನು ಬಂಡವಾಳಶಾಹಿಗಳು ಮತ್ತು ವರ್ತಕರ ಶೋಷಣೆಗೆ ತೆರವು ಮಾಡಿಕೊಟ್ಟಿತು.

ಆದಿವಾಸಿಗಳ ದುರದೃಷ್ಟಕ್ಕೆ ಅವರು ವಾಸಿಸಿಕೊಂಡಿರುವ ನೆಲದಡಿಯಲ್ಲಿ ಕಬ್ಬಿಣ, ಕಲ್ಲಿದ್ದಲು, ಬಾಕ್ಸೈಟ್, ಯುರೇನಿಯಂ, ಮ್ಯಾಂಗನೀಸ್, ಮುಂತಾದ ಬೆಲೆ ಬಾಳುವ ಅದಿರು ನಿಕ್ಷೇಪಗಳಿದ್ದವು; ನೆಲದ ಮೇಲಿನ ಅರಣ್ಯಗಳಲ್ಲಿ ಬೆಲೆ ಬಾಳುವ ಮರ **ಮೋಪುಗಳಿದ್ದವು. ಈ ಅರಣ್ಯಗಳಲ್ಲಿ ಹರಿಯುವ ನದಿಗಳು ಕೂಡ,** ಅಣೆಕಟ್ಟು, ವಿದ್ಯುತ್ ಯೋಜನೆ, ಮುಂತಾದ "ಅಭಿವೃದ್ಧಿ" ಕಾರ್ಯಕ್ರಮಗಳಿಂದಾಗಿ "ಬೆಲೆ ಬಾಳುತ್ತಿದ್ದವು" ಈ ಬೆಲೆ ಬಾಳುವ ಸಂಪನ್ಮೂಲಗಳನ್ನು **ದೇಶದ** "ಪ್ರಧಾನ ಧಾರೆಯ ಜನವರ್ಗಗಳಿಗೆ



With Best Compliments From

Le Papillon

CORPORATE HOUSING AND RELOCATION CONSULTANTS

#414, SHREE COMPLEX, 73, ST. JOHN'S ROAD
BANGALORE- 560042
PH: +91-80-25560875/876 FAX: +91-80-25560877
EMAIL: IP@LEPAPILLONINDIA.COM
WEBSITE:WWW.LEPAPILLONINDIA.COM

With Best Compliments From

VST BAJAJ

Authorised Dealer for Bajaj Auto Limited

593, 2nd Block
Opp. Sathy's Petrol Bunk
Dr. Rajkumar Road, Rajajinagar
Banglore-560010
Tel: +91 80 49062800
Fax: +91 80 49062888
Email: www.bajajauto.com

ದಗಿಸಲು ತಮ್ಮ ಜೀವಗಳನ್ನೇ ಬೆಲೆ ತೆತ್ತವರು ದಿವಾಸಿಗಳು. 1947 ರಿಂದ ಈಚೆಗೆ ಗಣಿಗಾರಿಕೆ, ಣೆಕಟ್ಟು, ಹೆದ್ದಾರಿ, ಮುಂತಾದ ಅಭಿವೃದ್ಧಿ ಯೋಜನೆಗಳಿಗಾಗಿ, ಆದಿವಾಸಿಗಳನ್ನು ಅವರ ಾರಂಪರಿಕ ನೆಲೆಗಳಿಂದ ನಿರ್ದಾಕ್ಷಿಣ್ಯವಾಗಿ ಕ್ಕಲೆಬ್ಬಿಸಲಾಗುತ್ತಿದೆ.

ಒಂದು ಅಂದಾಜಿನ ಪ್ರಕಾರ ಈ ಬಗೆಯ ಅಭಿವೃದ್ಧಿ ನಿರಾಶ್ರಿತರ" ಸಂಖ್ಯೆ ಸುಮಾರು 5 ಕೋಟಿ ್ವತಂತ್ರ ಭಾರತದ ಈ ಅಭಿವೃದ್ಧಿ ಮಾದರಿ ಪರಿಸರ ಾಶಕ್ಕೆ ಮಾತ್ರವಲ್ಲ ಜನಾಂಗ ಹತ್ಯೆಗೆ ಸಹ ಾರಣವಾಗಿದೆ. ಬಹುತೇಕ ಎಲ್ಲ ಸಮೂಹ ಹಿಂಸೆಯ ್ರಕರಣಗಳಂತೆ ಈ ಆದಿವಾಸಿಗಳ ನರಮೇಧ ಸಹ ಪ್ರಧಾನ ಧಾರೆ"ಯ ಜನರ ಸಮ್ಮತಿಯಿಂದಲೇ ಡೆದಿರುವಂತಹುದು.

ದೇಶದ ಎಡ, ಬಲ, ನಡು, ಎಲ್ಲಾ ರಾಜಕೀಯ ಕ್ಷಗಳೂ ಎಗ್ಗಿಲ್ಲದೆ ಈ ಬಗೆಯ ಅಭಿವೃದ್ಧಿಯನ್ನು ತ್ತಿ ಹಿಡಿಯುತ್ತಿವೆ ಮತ್ತು ಅದರಿಂದಾಗುತ್ತಿರುವ ೀವಹಿಂಸೆಯಲ್ಲಿ ಶಾಮೀಲಾಗಿವೆ. ಕಳೆದ ಶತಮಾನದ 0ರ ದಶಕದಲ್ಲಿ, ನಿಖರವಾಗಿ ಹೇಳಬೇಕು ಅಂದರೆ .ವಿ.ನರಸಿಂಹರಾವ್ ದೇಶದ ಪ್ರಧಾನಿಯಾಗಿದ್ದಾಗ ವರ ಮಂತ್ರಿ ಮಂಡಳದಲ್ಲಿ ಅರ್ಥಮಂತ್ರಿಯಾಗಿದ್ದ **ುನಮೋಹನ್ ಸಿಂಗ್, ನಮ್ಮ ದೇಶದ ರ್ಥವ್ಯವಸ್ಥೆಯನ್ನು ಖಾಸಗೀಕರಣ,** ಉದಾರೀಕರಣ **ುತ್ತು ಜಾಗತೀಕರಣಗಳ ಹೊಸ ಆರ್ಥಿಕ** ಧೋರಣೆಗೆ ಳಪಡಿಸಿದರು. ಅದರ ಪರಿಣಾಮವಾಗಿ ದೇಶವನ್ನು ಹುರಾಷ್ಟೀಯ ಕಂಪನಿಗಳು ಮತ್ತು ದೇಶೀಯ ಂಡವಾಳಶಾಹಿಗಳ ಮನಸ್ವೀ ಶೋಷಣೆಗೆ ತೆರವು ಾಡಿಕೊಡಲಾಯಿತು. ದೇಶದ ಖನಿಜ ಸಂಪತ್ತನ್ನು ಲದಾಳದಿಂದ ದೋಚಲು ಖಾಸಗಿ ಕಂಪನಿಗಳಿಗೆ ಮುಕ್ತ ವಕಾಶ ದೊರೆಯಿತು. ಕರ್ನಾಟಕವೂ ಸೇರಿದಂತೆ ೇಶದ ಹಲವು ರಾಜ್ಯಗಳ ಸಹಸ್ರಾರು ಹೆಕ್ಟರ್ ಖನಿಜ ಮೃದ್ಧ ಭೂಮಿ ಎಸ್ಸಾರ್, ಟಾಟ, ಜಿಂದಾಲ್, ಮಿತ್ತಲ್ **ುಂತಾದ ಬಂಡವಾಳಶಾಹಿಗಳು** ಮತ್ತು **ೂಸ್ಕೊದಂತಹ ಬಹುರಾಷ್ಟ್ರೀಯ** ಕಂಪನಿಗಳ **ಶವಾಗಿದೆ. ಆ ಭೂಮಿಯಲ್ಲಿ** ವಾಸಿಸಿಕೊಂಡಿದ್ದ ದಿವಾಸಿಗಳನ್ನು ನಿರ್ದಯವಾಗಿ ಒಕ್ಕಲೆಬ್ಬಿಸಲಾಗುತ್ತಿದೆ.

ಆದರೆ ಈಗ ಆದಿವಾಸಿಗಳು ಮೊದಲಿನಂತೆ ಅಭಿವೃದ್ಧಿ ುಗೆ ತಂದ ಕಷ್ಟಗಳನ್ನು ಮೂಕವಾಗಿ ಅನುಭವಿಸಲು ಾಕರಿಸುತ್ತಿದ್ದಾರೆ. ತಮ್ಮನ್ನು ನಿರ್ಗತಿಕರನ್ನಾಗಿಸಿದ ್ಯವಸ್ಥೆಯ ವಿರುದ್ಧ ಆದಿವಾಸಿಗಳು ನಡೆಸುತ್ತಿರುವ ತಿಭಟನೆಗೆ ವ್ಯವಸ್ಥೆ ಕೊಟ್ಟ ಹೆಸರು–ನಕ್ಸಲ್ ಚಳವಳಿ. ಈ

ನಕ್ಸಲ್ ಪ್ರತಿಭಟನೆಯನ್ನು ಹೇಗೆ ಎದುರಿಸಬೇಕು, ಈ ಸಮಸ್ಯೆಯನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ನಮ್ಮ ಆರಾಮ ಕುರ್ಚಿಯ ಲಿಬರಲ್‌ಗಳು, ಕ್ರಾಂತಿಕಾರಿಗಳು, ಪತ್ರಕರ್ತರು ಮತ್ತು ಲೇಖಕರು ಬಗೆ ಬಗೆಯ ವಿಶ್ಲೇಷಣೆಗಳನ್ನು ಮುಂದಿಡುತ್ತಿದ್ದಾರೆ. ಆದರೆ ಸರಕಾರ ಮಾತ್ರ ಈ ನಕ್ಸಲ್ ಸಮಸ್ಯೆಗೆ ಬಲ ಪ್ರಯೋಗದ ಮಾರ್ಗವನ್ನೇ ಅನುಸರಿಸುತ್ತಿದೆ. ನಕ್ಸಲರನ್ನು ಬಗ್ಗು ಬಡಿಯಬಹುದು. ಆದರೆ ನಮ್ಮ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಶೋಷಣೆಯ ಕುರಿತು ಅವರು ಎತ್ತಿರುವ ಪ್ರಶ್ನೆಗಳಿಗೆ ಸರಕಾರ ಏನೆಂದು ಉತ್ತರಿಸುತ್ತದೆ? ನಮ್ಮ ಬುದ್ಧಿಜೀವಿಗಳು ಏನು ಹೇಳುತ್ತಾರೆ? ಅಹಿಂಸೆ, ಶಾಂತಿಯುತ ಪ್ರತಿಭಟನೆ ಗಾಂಧೀವಾದ ಇತ್ಯಾದಿ ಹಳಸಲು ಮಾತುಗಳನ್ನು ಬಿಟ್ಟು ಬೇರೆ ಏನನ್ನು ತಾನೆ ಇವರು ಹೇಳಬಲ್ಲರು? ಅಣ್ಣಾ ಹಜಾರೆಯವರಾದರು ಈ ಕುರಿತು ಏನು ಹೇಳುತ್ತಾರೆ? ದೇಶದ ಅತಿ ದೊಡ್ಡ ಅನಿಷ್ಟವೆಂಬಂತೆ ಅವರು ಚಿತ್ರಿಸುವ ಭ್ರಷ್ಟಾಚಾರ ನಿರ್ನಾಮವಾಗಿಯೇ ಬಿಟ್ಟಿತು ಎಂದು ವಾದಿಸೋಣ. ಆಗಲೂ ನಕ್ಸಲ್ ಸಮಸ್ಯೆ ಇರುತ್ತದೆ; ಆಗಲೂ ಈ ಸಮಾಜವನ್ನು ನಿತ್ಯ ಕಾಡುವ ನೂರು ಬಗೆಯ ಹಿಂಸೆ ಮತ್ತು ಶೋಷಣೆಗಳು ಮುಂದುವರಿಯುತ್ತದೆ. ನ್ಯಾಯವೆಂಬುದು ಕಾಲ ದೇಶತೀತವಾದದ್ದಲ್ಲವಲ್ಲ. ಯಾರ ದೃಷ್ಟಿಯಲ್ಲಿ ನ್ಯಾಯ ಯಾರ ಮಟ್ಟಿಗೆ ನ್ಯಾಯ ಎಂಬ ಪ್ರಶ್ನೆಗಳನ್ನು ಆಪರಿಕಲ್ಪನೆ ತನ್ನ ಬೆನ್ನಿಗೆ ಕಟ್ಟಿಕೊಂಡೇ ಹುಟ್ಟಿದೆ.

ಹಾಗಾದರೆ ನ್ಯಾಯವೂ ಸಾಪೇಕ್ಷವೋ? ಎಲ್ಲ **ಮೌಲ್ಯಗಳೂ ಹಾಗೆ ಹಂಗಾಮಿಯಾಗಿ** ಬಿಟ್ಟರೆ ಜಗತ್ತಿನಲ್ಲಿ **ನೀತಿ ಎಂಬುದು ಉಳಿದೀತೋ** ಎಂದು ಆತಂಕ **ಪಡುವ ಸಜ್ಜನರಿಗೆ, ಕರ್ನಾಟಕದ** ರಾಜಕೀಯ ಒಂದು ಉದಾಹರಣೆ ಮೂಲಕ ನನ್ನ ಮಾತುಗಳನ್ನು ಸ್ಪಷ್ಟ ಪಡಿಸುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದ ಮೊದಲ ದಶಕಗಳಲ್ಲಿ, ಹಳೆಯ ಮೈಸೂರು ಪ್ರಾಂತ್ಯದ ಕಾಂಗ್ರೆಸ್ ನೇತಾರರಲ್ಲಿ ತೀರ್ಥಹಳ್ಳಿ ತಾಲೂಕಿನ ಕಡಿದಾಳ್ ಮಂಜಪ್ಪ ಒಬ್ಬರಾಗಿದ್ದರು. ಅವರು ಈ ರಾಜ್ಯ ಕಂಡ ಅತ್ಯಂತ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು. ಅವರ ಸುದೀರ್ಘ ರಾಜಕೀಯದ ಬದುಕಿನಲ್ಲಿ ಅವರು ಶಾಸಕರಾಗಿದ್ದರು;ಮಂತ್ರಿಯಾಗಿದ್ದರು; ಒಂದು ಚಿಕ್ಕ ಅವಧಿಗೆ ಮುಖ್ಯಮಂತ್ರಿಯು ಆಗಿದ್ದರು. ಇಷ್ಟಾಗಿಯು ರಾಜಕಾರಣದಿಂದ ನಿವೃತ್ತರಾದ ಮೇಲೆ ತಮ್ಮ ಇಳಿ ವಯಸ್ಸಿನ ಕೊನೆಯ ದಿನಗಳವರೆಗೂ ಅವರು ಸಂಸಾರ ನಿರ್ವಹಣೆಗೆ ವಕೀಲಿ ವೃತ್ತಿಯನ್ನೇ ಅವಲಂಬಿಸಿದ್ದರು. ಬೆಂಗಳೂರಿನ ಪ್ರತಿಷ್ಠಿತವಲ್ಲದ ಬಡಾವಣೆಯೊಂದರಲ್ಲಿ ಅವರು ತೀರ ಸಾಧರಣ ಮನೆಯಲ್ಲಿ ವಾಸಿಸುತ್ತಿದ್ದರು. ಮಂಜಪ್ಪನವರಿಗೆ ಹೋಲಿಸಿದರೆ ಅವರು ರಾಜಕೀಯದಿಂದ ನಿರ್ಗಮಿಸಿದ ಕೆಲಕಾಲಾನಂತರ ರಾಜ್ಯದ ಮುಖ್ಯ ಮಂತ್ರಿಯಾದ ದೇವರಾಜ ಅರಸು ಭ್ರಷ್ಟರಾಗಿದ್ದರು. ಶಾಸಕರ ಖರೀದಿ, ದುಂಡಾವರ್ತಿ, ಚುನಾವಣೆಗಾಗಿ ನಿಧಿ ಸಂಗ್ರಹ ಇತ್ಯಾದಿ ವರಸೆಗಳನ್ನೆಲ್ಲ ಮೊದಲು ಪ್ರಾಯೋಜಿಸಿದವರೇ ದೇವರಾಜ ಅರಸು ಎಂದು ಹೇಳಲಾಗುತ್ತಿದೆ. ಆದಾಗ್ಯೂ ಕರ್ನಾಟಕದ ರಾಜಕೀಯಕ್ಕೆ ಒಂದು ಪ್ರಗತಿಪರ ತಿರುವು ಕೊಟ್ಟದ್ದು ಅರಸು ಅವರೇ ಹೊರತು ಕಡಿದಾಳ್ ಅಲ್ಲ. ಕಡಿದಾಳರ ಹಾಗೆಯೇ ತಮ್ಮ ಚಾರಿತ್ರ್ಯಕ್ಕೆ ಹೆಸರಾಗಿದ್ದ ವೀರೇಂದ್ರ ಪಾಟೀಲರೂ ಅಲ್ಲ. ಕಡಿದಾಳು ಮಂಜಪ್ಪ ರಾಜ್ಯದ ರೆವೆನ್ಯೂ ಮಂತ್ರಿಯಾಗಿದ್ದ ದಿನಗಳಲ್ಲಿ ಜಾರಿಗೊಳಿಸಿದ ಭೂಸುಧಾರಣೆ ಕಾಯ್ದೆ, ಭೂಮಾಲಿಕರಿಗೆ ಮತ್ತು ಮಠ, ದೇವಸ್ಥಾನಗಳಿಗೆ ಅನುಕೂಲ ಮಾಡಿಕೊಡುವಂತಹದ್ದಾಗಿದ್ದರೆ, ದೇವರಾಜ

ಅರಸು ಅವರ ಕಾಲದಲ್ಲೇ ಅವರ ಮಂತ್ರಿ ಮಂಡಳದ ಒಬ್ಬ ಸದಸ್ಯ ಬಿ.ಬಸವಲಿಂಗಪ್ಪ, ದಲಿತರು ತಲೆ ಮೇಲೆ ಮಲಹೊರುವುದನ್ನು ನಿಷೇಧಿಸುವ ಕಾಯ್ದೆಯನ್ನು ದೇಶದಲ್ಲೇ ಪ್ರಥಮ ಬಾರಿಗೆ ಜಾರಿಗೆ ತಂದರು. ಈ ಎಲ್ಲ ಕಾರಣಗಳಿಂದಾಗಿ ಕಡಿದಾಳು ಮಂಜಪ್ಪನವರ ನಿಸ್ಪೃಹ ಪ್ರಾಮಾಣಿಕ ರಾಜಕೀಯಕ್ಕಿಂತ ದೇವರಾಜ ಅರಸು ಅವರ ಕ್ರಿಯಾಶೀಲ ರಾಜಕೀಯ ಹೆಚ್ಚು ಪ್ರಜಾಸತ್ತಾತ್ಮಕವಾಗಿದೆ ಮಾತ್ರವಲ್ಲ; ನೈತಿಕವಾಗಿಯೂ ಹೆಚ್ಚು ಬೆಲೆಯುಳ್ಳದ್ದಾಗಿದೆ.

With Best Compliments From

MANOJ KUMAR
DIRECTOR

BANGALORE SAT LINKS

#9, 2ND FLOOR, KUVEMPU ROAD,
VIGNANA NAGAR,
NEW THIPPASANDRA POST, BANGALORE-560075
PH.080-42000003
EMAIL: BSLCHANNEL@GMAIL.COM
MOB: +91 9845316328

With Best Compliments From

BRIGHT JEWELLERS

274, JAIN TEMPLE ROAD
BANGALORE-560001
PH: 9448008562

With Best Compliments From

KAMAL JAIN

K K ALLIANZE

SUPPLIERS OF : PHARMACEUTICAL, SURGICAL, DIAGNOSTICS, LABORATORY & MEDICAL DEVICES

178/2, GOVIND RAO STREET
BEHIND CANARA BANK, SESHADRIPURAM
BANGALORE-560020
TELEFAX: 23464738, MOB: 9845295400
KKALLIANZE@GMAIL.COM

With Best Compliments From

RAKESH JAIN

RAKESH TRADING COMPANY

DEALERS IN :
COMPUTER PERIPHERALS & CONSUMABLES
37, NEHRU CIRCLE, SHESHADRIPURAM,
BANGALORE-20
PH:23315462, 23444500, 23462360
EMAIL: RAKESHTRADINGCO@VSNL.NET

Seagate hp COMPAQ LAPTOPS AMD DELL SONY TOSHIBA

ರಸು ಜಾರಿಗೆ **ತಂದ ಭೂಸುಧಾರಣೆ** ಶಾಸನ ರಜ್ಯದ ಕೆಲವು **ಜಿಲ್ಲೆಗಳಲ್ಲಾದರೂ ಭೂಮಿಯ** ಾಳೆಯಗಾರಿ ಒಡೆತನವನ್ನು ಶಾಶ್ವತವಾಗಿ ರ್ಮೂಲ ಮಾಡಿತು. ಕೇರಳ ಮತ್ತು ಬಂಗಾಳಗಳ ಕಮ್ಯುನಿಸ್ಟ್ ಸರಕಾರಗಳು ಾರಿಗೊಳಿಸಿದ ಭೂಸುಧಾರಣ ಶಾಸನಗಳನ್ನು ೂರತು ಪಡಿಸಿದರೆ ಇವತ್ತಿಗೂ ದೇಶದ **ಅತ್ಯಂತ** ್ರಾಂತಿಕಾರಿಯಾದ ಭೂಸುಧಾರಣಾ ಶಾಸನವನ್ನು ಾಪಿಸಿ ಜಾರಿಗೆ ತಂದವರು ದೇವರಾಜ ಅರಸು ಾಜ್ಯದ ದಲಿತರು ಮತ್ತು ಹಿಂದುಳಿದ ಜಾತಿಗಳವರನ್ನು ಒಗ್ಗೂಡಿಸಿ ನಿರ್ಣಯಕವಾದ ರಾಜಕೀಯ ಶಕ್ತಿಯನ್ನಾಗಿಸಿದ್ದು ಅರಸು ಅವರ ನ್ನೊಂದು ಮಹತ್ವದ ಸಾಧನೆ. ಅರಸು ಅವರ ಾಲದಲ್ಲೇ ಅವರ ಮಂತ್ರಿ ಮಂಡಳದ **ಒಬ್ಬ ಸದಸ್ಯ** .ಬಸವಲಿಂಗಪ್ಪ, ದಲಿತರು ತಲೆ ಮೇಲೆ ಮಲಹೊರುವುದನ್ನು ನಿಷೇಧಿಸುವ ಕಾಯ್ದೆಯನ್ನು ೇಶದಲ್ಲೇ ಪ್ರಥಮ ಬಾರಿಗೆ ಜಾರಿಗೆ **ತಂದರು. ಈ** ಲ್ಲ ಕಾರಣಗಳಿಂದಾಗಿ ಕಡಿದಾಳು **ಮಂಜಪ್ಪನವರ** ಸ್ಪೃಹ ಪ್ರಾಮಾಣಿಕ ರಾಜಕೀಯಕ್ಕಿಂತ **ದೇವರಾಜ** ರಸು ಅವರ ಕ್ರಿಯಾಶೀಲ ರಾಜಕೀಯ ಹೆಚ್ಚು ಜಾಸತ್ತಾತ್ಮಕವಾಗಿದೆ ಮಾತ್ರವಲ್ಲ; ತಿಕವಾಗಿಯೂ ಹೆಚ್ಚು ಬೆಲೆಯುಳ್ಳದ್ದಾಗಿದೆ. ದರೆ ಈಗ ನಮ್ಮನ್ನು ಆಳುವವರಿಗೆ ಕಡಿದಾಳು ಮಂಜಪ್ಪನವರ ಶುಭ್ರತೆಯೂ ಇಲ್ಲ. ದೇವರಾಜ ರಸು ಅವರ ಪ್ರಗತಿಶೀಲ ಮನೋಧರ್ಮವೂ ಲ್ಲ. ಇವತ್ತಿನ ರಾಜಕೀಯದ ಈ ಶೂನ್ಯತೆಯನ್ನು ತುಂಬುವ ತಾಖತ್ತು ಅಣ್ಣಾ ಹಜಾರೆಯವರ ಳವಳಿಗೆ ಸುತಾರಾಂ ಇಲ್ಲ. ದೇಶದ ಅರ್ಥವ್ಯವಸ್ಥೆ ದೇಶಿ ಲೂಟಿಕೋರರರು ಮತ್ತು ಸಾಮ್ರಾಜ್ಯ ಶಾಹಿ ುಭಬಡುಕರ ಕೈ ವಶವಾಗುತ್ತಿರುವ ಈ ದಿನಗಳಲ್ಲಿ ಭ್ರಷ್ಟಾಚಾರವನ್ನು ಅದರ ಆರ್ಥಿಕ ಮತ್ತು ಸಾಮಾಜಿಕ ಸಂಧರ್ಭಗಳಿಂದ ಬೇರ್ಪಡಿಸುವುದರ ಮೂಲಕ ಅಣ್ಣ ಹಜಾರೆಯವರ ಚಳವಳಿ ರಾಜಕೀಯ ಸಮಸ್ಯೆಯೊಂದನ್ನು ಅ-ರಾಜಕೀಯಗೊಳಿಸುತ್ತಿದೆ. ಇದರಿಂದ ಅನುಕೂಲವಾಗುವುದು ಆಳುವವರಿಗೆ ಮಾತ್ರ.

ಡಿ. ರಾಜಶೇಖರ್



ಜೀವ ವಿಮಾ ಇಲಾಖೆಯ ನಿವೃತ್ತ ನೌಕರರು. ಉಡುಪಿ ಕೋಮು ಸೌಹಾರ್ದ ವೇದಿಕೆ ಅಧ್ಯಕ್ಷರು. ಅಕ್ಷರ ಪ್ರಕಾಶನವು ಕೆ. ವಿ. ಸುಬ್ಬಣ್ಣ ನೆನಪಿನ ಪುಸ್ತಕ ಮಾಲೆಯಲ್ಲಿ ಇವರ ಆಯ್ದ ಬರಹಗಳನ್ನು ಪ್ರಕಟಿಸಿದೆ. 'ಕಾಗೋಡು ಸತ್ಯಾಗ್ರಹ' ಇವರ ಮತ್ತೊಂದು ಪ್ರಮುಖ ಕೃತಿ. 'ಸಂವಾದ'ವೂ ಸೇರಿದಂತೆ ಹಲವಾರು ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆಯುತ್ತಿದ್ದಾರೆ

ಕವನ

ಎಲ್ಲಿ ಅವರೆಲ್ಲಿ?

ನಿಮ್ಮ,
ದೇಹವೆಂಬ ಕಾಯದ
ಬಟ್ಟೆಯ ತೊಳೆದು;
ಶುದ್ಧ ಭಕ್ತಿಗೆ ಬಾಳಿಸಿದ
ನನ್ನ ಮಡಿವಾಳ ಮಾಚಯ್ಯ ಎಲ್ಲಿ...?

ನಿಮ್ಮ,
ರಕ್ತಸಿಕ್ತ ಕರ್ಮ
ಚರಣ ಪಾದಾರವಿಂದಗಳಿಗೆ
ಚಪ್ಪಲಿ ಹೊಲೆದ
ನನ್ನ ಮಾದಿಗರ ಹರಳಯ್ಯ ಎಲ್ಲಿ...?

ನಿಮ್ಮ
ದುಃಖ ಸಾಗರವನು
ದಾಟಿಸಿ; ಆತ್ಮಸುಖದ
ತೀರ ಸೇರಿಸಿದ
ನನ್ನ ಅಂಬಿಗರ ಚೌಡಯ್ಯ ಎಲ್ಲಿ....?

ನಿಮ್ಮ(ನು)
ಶೋಷಣೆಯ ಶೂಲದಿಂದ
ಬಿಡಿಸಿ; ಶೂನ್ಯ ಸಿಂಹಾಸನಕ್ಕೇರಿಸಿದ
ನನ್ನ ಅಲ್ಲಮಪ್ರಭು ಎಲ್ಲಿ....?

ತನ್ನ ದೇಹವನೇ ದೇಗುಲ ಮಾಡಿ
ಶಿವದರ್ಶನಗೈದ,
ನನ್ನ ಬಸವಣ್ಣ ಎಲ್ಲಿ....?

ನಿಮ್ಮ,
ಮನ, ಮನೆ ಬೆಳಗಿದ
ನನ್ನ ಚನ್ನಮಲ್ಲಿಕಾರ್ಜುನನ
ಚೆಲುವೆ ಎಲ್ಲಿ...?

ಎಲ್ಲಿ, ಎಲ್ಲಿ ಅವರೆಲ್ಲಿ...

ಹಳ್ಳಿ ವೆಂಕಟೇಶ್

ಕರ್ನಾಟಕ ರಾಜಕಾರಣ
ಮತ್ತು ಸಾಂಸ್ಕೃತಿಕ ಕ್ರಿಯಾಶೀಲತೆ

ಹುಲಿಕುಂಟೆ ಮೂ

ಇತ್ತೀಚೆಗೆ ಸಾಂಸ್ಕೃತಿಕ ಕ್ರಿಯಾಶೀಲತೆ ಎಂಬ ಪರಿಕಲ್ಪನೆ ಹುಟ್ಟುಹಾಕಿರುವ ಸಾಂಸ್ಕೃತಿಕ ದ್ವಂದ್ವಗಳನ್ನು ಈ ಹೊತ್ತಿನಲ್ಲಿ ಅಂದರೆ– ಬಿಜೆಪಿಯಂಥ ಪಕ್ಷ ಅಧಿಕಾರದಲ್ಲಿರುವ, ಆವರಣ, ಕವಲು ರೀತಿಯ ಪುಸ್ತಕಗಳು ರಾತ್ರೋರಾತ್ರಿ ಸಾವಿರಗಟ್ಟಲೆ ಪ್ರಿಂಟು ಕಾಣುತ್ತಿರುವ, ಕೋಮುವಾದದ ವಿಷದಲ್ಲಿ ನಾಲಿಗೆ ಬುದ್ದಿಗಳನ್ನು ಅದ್ದಿಕೊಂಡು ಅಮಾನವೀಯ ಸಂಸ್ಕೃತಿಯನ್ನು ಪೋಷಿಸುವ ಎಂಥೆಂಥವಕ್ಕೋ ಎಂಥೆಂಥವೋ ಪ್ರಶಸ್ತಿಗಳು ತಗಲಿಕೊಳ್ಳುತ್ತಿರುವ ಹೊತ್ತಿನಲ್ಲಿ ನಾವು ಪರಿಹರಿಸಿಕೊಳ್ಳಲೇಬೇಕಿದೆ ಎಂದು ನನಗನ್ನಿಸುತ್ತದೆ.

ಕನ್ನಡ ಅಥವಾ ಕರ್ನಾಟಕದ ಸಾಂಸ್ಕೃತಿಕ ಕ್ರಿಯಾಶೀಲತೆ ಬಗ್ಗೆ ಮಾತನಾಡುವಾಗ ಪಂಪ, ರನ್ನಾದಿಗಳನ್ನೊಳಗೊಂಡು ಶರಣರು, ಹರಿದಾಸರು, ಮಂಟೇದ–ಮಾದಪ್ಪರು, ಕರಿಬಂಟ–ಕಾಟಮಲ್ಲರು, ಜೋಗಿ–ನೀಲಗಾರರು, ನಮ್ಮ ನೆನಪಿಗೆ ಬಂದರೆ ನಾವು ಸರಿಯಾದ ಹಾದಿಯಲ್ಲಿ ಯೋಚಿಸುತ್ತಿದ್ದೇವೆ ಎಂದರ್ಥ. ಆದರೆ, ಮುಕ್ಕೋಟಿ ದೇವತೆಗಳು ಅದರಲ್ಲೂ ವಿಪ್ರೋತ್ತಮರಿಂದ ಮಂಗಳಾರತಿ ಮಾಡಿಸಿಕೊಳ್ಳುವ ಹಿಂದೂ ದೇವತೆಗಳು, ಸ್ತೋತ್ರಗಳು, ಭಜನೆಗಳು, ಏರಿಳಿತಗಳಿಲ್ಲದ ಸುಗಮ ಸಂಗೀತ, ಬೆಂಗಳೂರಿನ ಪಾರ್ಕುಗಳಲ್ಲಿ ಟಿವಿಯ ಹರಟೆ ಕಾರ್ಯಕ್ರಮಗಳಲ್ಲಿ ಜನರನ್ನು ನಗಿಸುವುದಕ್ಕೆಂದು ಆಯೋಜಿಸುವ ಹಾಸ್ಯಾಸ್ಪದ ಹಾಸ್ಯ ಕಾರ್ಯಕ್ರಮಗಳು, ಕವಲು ರೀತಿಯ ಕಾರ್ಪೊರೇಟ್ ಕಾದಂಬರಿಗಳು, ಮಾನಸಿಕ ನೆಮ್ಮದಿಯನ್ನು ಹಾಳು ಮಾಡುವ ಕಪ್ಪು–ಬಿಳುಪು ಪತ್ರಿಕೆಗಳು, 'ಏನೇನೋ ಮಾಡ್ತೀವಿ' ಎಂದು ಎಗ್ಗಿಲ್ಲದೆ ಹೇಳಿಕೊಂಡು ವಿಷ ಕಕ್ಕುವ ಪತ್ರಿಕೆಗಳಲ್ಲಿ ಆಲ್ಕೋಹಾಲನ್ನೆ ಹಾಲಿನ ರೇಂಜಿನಲ್ಲಿ ಕಕ್ಕುವ ರಾಜ್ಯೋತ್ಸವ ಪ್ರಶಸ್ತಿ 'ವಿಜೇತ' ಬಾಲಕರು.. ಇವೇ ಮೊದಲಾದವನ್ನು 'ಸಾಂಸ್ಕೃತಿಕ ಕ್ರಿಯಾಶೀಲತೆ' ಎಂದೇನಾದರೂ ನಾವು ಒಪ್ಪಿಕೊಂಡುಬಿಟ್ಟರೆ, ನಮ್ಮ ಹಾದಿಯಲ್ಲಿ ಅಪಾಯವಿದೆ ಎಂದರ್ಥ. ಈ ರೀತಿಯ ಅಪಾಯವನ್ನು ಒಪ್ಪಿಕೊಂಡು ಈಗಾಗಲೇ ಬಹುಪಾಲು ಹಾದಿಯನ್ನು ಕ್ರಮಿಸಿಬಿಟ್ಟಿರುವ ಕನ್ನಡದ ಮಧ್ಯಮ ವರ್ಗದ ಜನತೆ ನಾನು ಮೇಲೆ ಹೇಳಿದ ಸಮಕಾಲೀನ ಸಾಂಸ್ಕೃತಿಕ ಎನ್ನಲಾದ ಪ್ರಕ್ರಿಯೆಗಳಿಗಾಗಿಯೇ ಅವುಗ ಪ್ರವರ್ತಕರಿಂದ ತಯಾರಿಸಲ್ಪಟ್ಟವರು. ನಾವೀಗ ಮಾತನಾಡುತ್ತಿರುವ ಕರ್ನಾಟಕ ರಾಜಕಾರಣವೂ ಇದ ಮಧ್ಯಮ ವರ್ಗದ ಜನರ ಬೇಜವಾಬ್ದಾರಿತನದಿಂದ ರೂಪುಗೊಂಡಿ ರುವಂಥಾದ್ದು.

ಈ ದ್ವಂದ್ವಗಳನ್ನು ನಿವಾರಿಸಿಕೊಂಡು ಕರ್ನಾಟಕ ಸಕಲ ಸಂಕಷ್ಟಗಳ ಜತೆಜತೆಗೆ ಹೆಗಲು ಕೊಟ್ಟು ಇಂದಿನವರೆಗೂ ಕನ್ನಡ ಸಾಹಿತ್ಯ– ಸಂಸ್ಕೃತಿಗೆ ಘನತೆ ತಂದುಕೊಟ್ಟಿರುವ ಕ್ರಿಯಾಶೀಲರ ದೊಡ್ಡ ದಂಡೇ ಇ ನಮ್ಮಲ್ಲಿ. ವಿಪರ್ಯಾಸವೆಂದರೆ, ಯಾರು ಇಂದಿನ ಕ ಜಗತ್ತನ್ನು ಕ್ರಿಯಾಶೀಲವಾಗಿ ಮುನ್ನಡೆಸಬೇಕಿತ್ತೋ ಅವರು ಔಸಿಟ್ಟುಕೊಂಡು ತಮ್ಮ ಕಾರ್ಯಸೂಚಿಗಳನ್ನು ತಯಾರಿಸಬೇಕಾದ ಪರಿಸ್ಥಿತಿ ಒದಗಿದೆ. ನಾನು ಹೀಗೆ ಹೇಳುವಾಗ ಇವರ ಸಾಲಿನಲ್ಲಿ ನಾಲ್ಕಾರು ದಶಕಗಳ ಹಿಂದೆ ಜತನದಿಂದ ಕನ್ನಡ ನಾಡನ್ನು ಕಟ್ಟಿ ಈ ಮಣ್ಣಿ ದುಡಿಯುವ, ಶೋಷಿತ ಸಮುದಾಯಗಳಿಗೆ ಈ ಸಮಾಜದ ಮುಖ್ಯವಾಹಿನಿಯ ಬಾಗಿಲು ತೆರೆದಿಟ್ಟ ನೆಲಮೂಲದ ಸಮಾಜಮುಖಿ ರೈತ, ದಲಿತ ಸಂಘಟನೆಗಳ ಕಾರ್ಯಕರ್ತರೂ, ಇವರ ಕ್ರಿಯಾಶೀಲತೆಗೆ ಒರತೆಯನ್ನೊದಗಿಸಿದ ಮಾನವಪ್ರೇ

ಬರಹಗಾರರೂ ಇದ್ದಾರೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಈ ದಿಸೆಯಲ್ಲಿ ಎಪ್ಪತ್ತರ ದಶಕ ಕರ್ನಾಟಕದ ಪಾಲಿಗೆ ಅತ್ಯಂತ ಮಹತ್ವದ್ದು. ದಲಿತರ ಮನೆಯಲ್ಲಿ ಊಟ ಮಾಡಲು ತಯಾರಿರುವ ರೈತರು ಮಾತ್ರ ರೈತಸಂಘದ ಸದಸ್ಯರಾಗಬಹುದೆಂಬ ಮಹತ್ತರ ಕರಾರೊಂದನ್ನು ನಂಜುಂಡಸ್ವಾಮಿಯಂಥವರು ಅಂದು ರೂಪಿಸಿರದಿದ್ದರೆ, 'ಜಾತಿ ಬಿಡಿ, ಮತ ಬಿಡಿ ಮಾನವತೆಗೆ ಜೀವ ಕೊಡಿ' ಎಂದು ನಾಡಿನ ಬೀದಿಬೀದಿಗಳಲ್ಲಿ ಕೂಗಿ ಸಮಾನತೆಯ ಆಶಯ ಈಡೇರಿಕೆಗಾಗಿ ಶತಮಾನಗಳ ನೋವಿನ ನೆನಪನ್ನೇ ಬಿಟ್ಟುಕೊಡಲು ಸಿದ್ಧರಿದ್ದ ಬಿ. ಕೃಷ್ಣಪ್ಪರಂಥ ದಲಿತ ನಾಯಕರು ನಮ್ಮ ವರ್ತಮಾನಗಳನ್ನೂ ಅಂದೇ ಸರಿಯಾದ ರಾಗದಲ್ಲಿ ಕಟ್ಟಿರದಿದ್ದರೆ, ನಮ್ಮ ವರ್ತಮಾನ ಭವಿಷ್ಯತ್ತುಗಳು ಇಂಥ ಸಂದರ್ಭದಲ್ಲಿ ನಮ್ಮನ್ನು ಇನ್ನಷ್ಟು ಗೇಲಿ ಮಾಡುತ್ತಿದ್ದವೇನೋ.

ಇಡೀ ಜಗತ್ತಿನ ಸಮಾನತೆಯ ಆಶಯಗಳ ಸಾರವನ್ನು ಹೀರಿ ಎಲ್ಲ ರೀತಿಯ ಮಾನವಪ್ರೀತಿಗೂ ಭಿತ್ತವನ್ನು ಒದಗಿಸಿ 'ಬದುಕೆಂದರೆ, ಪ್ರೀತಿಯ ಒರತೆಯೇ ಹೊರತು.. ಮನಸುಗಳ ನಡುವಿನ ಸೀಳುಗಳಲ್ಲ' ಎಂಬುದನ್ನು ಸಿದ್ಧಮಾಡಿ ಕಾಣಿಸಿದ ಕನ್ನಡ ನಾಡು, ಅದೆಂಥದೇ ಸಂಸ್ಕೃತಿಹೀನ ದಂಡುಕೋರರು ಹುಟ್ಟಿ ಮನಸ್ಸುಗಳ ಮಧ್ಯೆ ಸಾವಿರ 'ಕವಲು'ಗಳನ್ನು ಸೃಷ್ಟಿಸಿದರೂ ಜೀವಕಾರುಣ್ಯದ ಪಸೆ ಆರದಂತೆ ನೋಡಿಕೊಂಡಿರುವುದು ಸುಲಭದ ಮಾತಲ್ಲ. ಈ ಮಹತ್ಕಾರ್ಯದ ಹಿಂದೆ ನಾವಿಂದು ಚರ್ಚಿಸುತ್ತಿರುವ ಸಾಂಸ್ಕೃತಿಕ ಕ್ರಿಯಾಶೀಲರ ಒಲುಮೆಗಣ್ಣು ಇರಲಿಲ್ಲ ಎಂದು ಹೇಗೆ ಹೇಳುವುದು..?

ಸಮಕಾಲೀನ ಕ್ರಿಯಾಶೀಲತೆ

ಹಾಗೆ ನೋಡಿದರೆ, ಈ ಕ್ರಿಯಾಶೀಲರ ನಡೆಯೊಂದಿಗೆ ಇಂದು ನಮ್ಮೊಂದಿಗೆ ಭೌತಿಕವಾಗಿ ಇಲ್ಲದ ಆದರೆ, ಈ ನೆಲದ ಸಮಾನತೆಯ ದಾಹಕ್ಕೆ ಇನ್ನಿಲ್ಲದಂತೆ ನೀರೆರೆದು ಪೋಷಿಸಿದ ಪೂರ್ವಿಕರ ದೊಡ್ಡ ದಂಡೇ ಇದೆ ಎನ್ನಬಹುದು. ಅವರೂ ನಮ್ಮೊಂದಿಗೆ ಬೆರೆತು ನಮ್ಮ ಭವಿಷ್ಯದ ಮಾನವ ಪ್ರೇಮದ ದೊಂದಿಗಳು ಆರದಂತೆ ನೋಡಿಕೊಳ್ಳುತ್ತಿದ್ದಾರೆಂಬುದಕ್ಕೆ ಯಾವುದೇ ಸಂಶಯವಿಲ್ಲ.

ಕಿರಂ ಹೇಳುತ್ತಿದ್ದ ಹಾಗೇ ಪಂಪ, ರನ್ನ ಕುಮಾರವ್ಯಾಸರು, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮರು, ಮಂಟೇದ, ಮಾದಪ್ಪರು ನಮ್ಮ ಸಮಕಾಲೀನರೇ. ಇವರೆಲ್ಲರ ಪ್ರೀತಿಯೊಂದಿಗೆ ಸಮಕಾಲೀನ ಕನ್ನಡ ಸಂಸ್ಕೃತಿ ಅರಳುತ್ತಿದೆಯೇ ಹೊರತು, ರಾಷ್ಟ್ರೀಯತೆ ಸೋಗಿನಲ್ಲಿ ಜನತೆಯನ್ನು ಒಡೆದು ವಿಚಿತ್ರ ಖುಷಿ ಅನುಭವಿಸುವ ಭೈರಪ್ಪ, ಚಿದಾನಂದಮೂರ್ತಿಯಂಥವರ ಬೌದ್ಧಿಕ ವಿಕಾರಗಳಿಂದಲ್ಲ ಎಂಬುದನ್ನು ನಾವು ಗಮನಿಸಲೇಬೇಕಿದೆ. ಈಗಿವರ ಸಾಲಿಗೆ ಸೇರಲು ಮತ್ತೊಂದಷ್ಟು ಜನ ಸಾಹಿತಿಗಳು, ರಾಜಕಾರಣಿಗಳು, ಮಠಾಧೀಶರು ಸಾಲುಗಟ್ಟಿ ನಿಂತಿದ್ದಾರೆ. ಕನ್ನಡ ನವೋದಯದ ಒಳಗೇ ಇದ್ದೂ ಇಲ್ಲದಂತೆ ಕಾಣಿಸಿದ ನೆಲಮೂಲ ಕಾಳಜಿಯ ಸಾಹಿತ್ಯ ಇಂದಿನ ಎಂಥದೇ ಅವಸ್ಥಾಂತರಗೊಂಡ ಸ್ಥಿತಿಯಲ್ಲಿಯೂ ಜೀವಂತವಾಗಿದೆ ಎಂಬುದನ್ನು ನಾವು ನಂಬಿದರೆ, ಅಧಿಕಾರ ಕೇಂದ್ರಗಳನ್ನು ನಿಂಬೆಹಣ್ಣು ಮಂತ್ರಿಸಿ ಬೆರಳತುದಿಯಲ್ಲಿ ಆಡಿಸುತ್ತಿರುವಂತೆ ಕಾಣುತ್ತಿರುವ, ಕ್ಲೀಶೆಯೇ ಆಗಿಹೋಗಿರುವ ಗರ್ಭಗುಡಿ ಸಂಸ್ಕೃತಿ ನಮ್ಮ ಶ್ರದ್ಧೆಯನ್ನು ಏನೂ ಮಾಡಲಾರದು ಎಂಬುದನ್ನು ಎದೆ ತಟ್ಟಿಕೊಂಡು ಹೇಳಬಹುದು.

ಜಾತಿ ವಿನಾಶಕ್ಕಾಗಿ ಒಂದು ಸಾಹಿತ್ಯ– ಸಾಂಸ್ಕೃತಿಕ ಚಳವಳಿಯನ್ನೇ ಹುಟ್ಟಿಹಾಕಿ, ತಳ ಸಮುದಾಯಗಳ ಸಾಮುದಾಯಿಕ ಶ್ರಮ ಸಂಸ್ಕೃತಿಯನ್ನು ಮುನ್ನಲೆಗೆ ತಂದ ಬಸವಣ್ಣನ ಹುಟ್ಟು ಕುರಿತ 'ಆನುದೇವಾ ಹೊರಗಣವನು..' ಎಂಬ ಪುಸ್ತಕವನ್ನು ಬಸವಣ್ಣನ ಮೇಲೆ ಪ್ರೀತಿಯನ್ನು ನಟಿಸುವ ಈ ರಾಜ್ಯದ ಸಂಸ್ಕೃತಿ ಇಲಾಖೆಯ ಮಂತ್ರಿಯೊಬ್ಬ ಬೀದಿಯಲ್ಲಿ ನಿಂತು ಸುಟ್ಟುಹಾಕುವುದನ್ನು ಕಂಡಿರುವ ನಾವು ಹೇಗೆ ಎದೆತಟ್ಟಿಕೊಳ್ಳುವುದು ಎಂಬ ಅನುಮಾನ ಕಾಡಿದರೂ, ಬಸವಣ್ಣನನ್ನು ನಿಜಕ್ಕೂ ಉಳಿಸುವವರು ಯಾರು ಎಂಬ ಪ್ರಶ್ನೆಗೆ ಉತ್ತರಗಳಾಗಿ ಬದುಕು ನಡೆಸುತ್ತಿಲ್ಲವೇ..?

ಮುಸಲ್ಮಾನರನ್ನು ದೇಶದ್ರೋಹಿಗಳೆಂದು ತನ್ನ ಕಾದಂಬರಿಯಲ್ಲಿ ಘೋಷಿಸಿದ ಒಂದೇ ಅರ್ಹತೆಗಾಗಿ ಆ (ಅ)ಸಾಹಿತಿಗೆ ಜ್ಞಾನಪೀಠ ಪ್ರಶಸ್ತಿ ಕೊಡಿಸಲು ಮುಂದಾಗುವ, ರಾಜ್ಯವನ್ನಾಳುವ ಮುಖ್ಯಮಂತ್ರಿಯ ಜಾತಿಯವರು ಎಂಬ ಕಾರಣಕ್ಕೆ ಅವರಿಗೆ ನೈಜ ಅರ್ಹತೆಗಳಿದ್ದರೂ ಜಾತಿ ಹೊಲಸಿನಲ್ಲಿ ಕರ್ನಾಟಕ ರತ್ನ, ರಾಷ್ಟ್ರಕವಿ ಬಿರುದುಗಳನ್ನು ನೀಡಿ ಅವರನ್ನು ಅವಮಾನಿಸುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ನಮ್ಮ ಕನಸುಗಳಿಗೆ ಅರ್ಥವಿಲ್ಲ ಎಂದುಕೊಂಡು ಸುಮ್ಮನಾಗಿಬಿಡಬೇಕಾಗಬಹುದೇ.. ಹಾಗೆ ಸುಮ್ಮನಾಗಿಬಿಟ್ಟರೆ, ಕನ್ನಡ ಸಂಸ್ಕೃತಿಯ ಶತಮಾನಗಳ ಸಮಾನತೆಯ ಆಶಯ ಮಣ್ಣುಗೂಡುವುದಿಲ್ಲವೇ..?

ಎಡಪಂಥ ಮತ್ತು ಕನ್ನಡ ಸಾಹಿತ್ಯ

ವ್ಯತ್ಯಾಸ

ಪುರಾಣ ಗ್ರಂಥಗಳ
ಹೊತ್ತು ಕೂತರೆ
ವ್ಯಾಸ ಪೀಠಗಳಲ್ಲಿ
ತಾಳೆ ಗರಿಗಳು
ಗುಡಿಸಲು ಗುರುಕುಲಗಳ
ಮೇಲೆ ಒಣಗಿ
ನೆರಳ ನೀಡಿ
ಕಾದವು ಸೂರಲ್ಲಿ
ತೆಂಗಿನ ಗರಿಗಳು



ಜರಗನಹಳ್ಳಿ ಶಿವಶಂಕರ್

ಯಾರನ್ನು ಕನ್ನಡ ಸಾಹಿತ್ಯ ಎಡಪಂಥೀಯರು ಎಂದು ಒಪ್ಪಿಕೊಂಡು ಅವರಿಗೆ ಬೃಹತ್ ಭಿತ್ತಿಯೊಂದನ್ನು ಕಲ್ಪಿಸಿಕೊಟ್ಟಿತ್ತೋ, ಅವರ ಎಲ್ಲಾ ಕಾಲದ ನಡೆ ಈ ನೆಲದ ಒಳಿತನ್ನೇ ಕುರಿತದ್ದಾಗಿದೆ ಎಂಬುದನ್ನು ನಾವು ಯಾವುದೇ ಸಂದೇಹಗಳಿಲ್ಲದೆ ಈ ಹೊತ್ತಿನಲ್ಲಿಯೂ ಒಪ್ಪಿಕೊಳ್ಳಬೇಕಿದೆ. ಅವರೂ ಕಾಲಾಂತರಗಳ ಎಲ್ಲಾ ರೀತಿಯ ಬದಲಾವಣೆಗಳನ್ನು ಒಪ್ಪಿಕೊಂಡು ತಕ್ಷಣದ ಗಾಯಗಳಿಗೆ ಮುಲಾಮು ಹುಡುಕುವ ಕೆಲಸ ಮಾಡಬೇಕಿದೆ; ಮಾಡುತ್ತಿದ್ದಾರೆ. ಜಾತಿ ಸಮಾಜದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ನಿರ್ವಚನದ ಎಲ್ಲಾ ಮಗ್ಗಲುಗಳನ್ನು ಸಮರ್ಥವಾಗಿ ಪರಿಶೀಲಿಸಿ ಭವಿಷ್ಯದ ನಡೆಗೆ ತೊಡಕಾಗದ ಸೈದ್ಧಾಂತಿಕ ಸಂಕರಗಳಿಗೆ ಅವರೂ ಪಕ್ಕಾಗಿದ್ದಾರೆ. ಆದರೆ, ಅವರು ಹಾಗಾಗಿದ್ದೇ ಸರಿ ಎನ್ನುವ ಹುಂಬ ನಿರ್ಧಾರವೂ ನಮ್ಮನ್ನು ಬಹಳ ದೂರ ನಡೆಸಲಾರದು; ಸಿದ್ಧಲಿಂಗಯ್ಯನವರ ಪದ್ಯಗಳಲ್ಲಿರುವಂತೆ ಕುವೆಂಪು ಕಾದಂಬರಿಗಳಲ್ಲಿಯೂ ಸುಳಿಯುವ ಎಡಪಂಥೀಯ ಧೋರಣೆ ಸಮಾನತೆಯ ಕನಸಿನ ಭಿತ್ತದ ಹರಹನ್ನು ಸೂಚಿಸುತ್ತದೆ. ಇಂದು ಅಧಿಕಾರ ಕೇಂದ್ರಗಳ ಮೂಲಕ ಕನ್ನಡ ಸಂಸ್ಕೃತಿಯನ್ನು

ಕನ್ನಡ ಭಾಷೆ, ಸಂಸ್ಕೃತಿ ಬಗ್ಗೆ ಕಾಳಜಿ ಇರುವ ಸಾಂಸ್ಕೃತಿಕ ಕ್ರಿಯಾಶೀಲರು ಎಂದು ನಾವು ಗುರ್ತಿಸಿರುವ ಜನ ಹಿಂದುಳಿದ ಜಾತಿಗೆ ಸೇರಿದ ವ್ಯಕ್ತಿಯೊಬ್ಬರು ನಾಡಿನ ಮುಖ್ಯಮಂತ್ರಿಯಾಗಬೇಕೆಂದು ಕನಸುವುದು ಉಚಿತವಲ್ಲವೇ ಎಂಬುದನ್ನು ನಾವು ಪ್ರಶ್ನಿಸಿಕೊಂಡರೆ, ಪ್ರಜಾಪ್ರಭುತ್ವ ಕುರಿತ ನಮ್ಮ ಸದ್ಯದ ಆಲೋಚನೆಗಳನ್ನು ತಿದ್ದಿಕೊಳ್ಳಬಹುದೇನೋ... ಹಾಗೂ ಆ ಮೂಲಕ ನಮ್ಮ ನಡುವಿನ ಸಾಂಸ್ಕೃತಿಕ ಕ್ರಿಯಾಶೀಲತೆಯ ನಡೆಯ ನಕಾಶೆಯನ್ನು ಪೂರ್ಣಗೊಳಿಸಿಕೊಳ್ಳಬಹುದು.

ಹಿಡಿದಿಟ್ಟುಕೊಳ್ಳಲು ಯತ್ನಿಸುತ್ತಿರುವ ಬಲಪಂಥವನ್ನು ಮೀರಿ ಕನ್ನಡವನ್ನು ಉಳಿಸಿಕೊಳ್ಳಬೇಕಾದರೆ ಎಡಪಂಥೀಯ ಚಿಂತನೆ ಇನ್ನಷ್ಟು ಗಟ್ಟಿಗೊಳ್ಳುವ ಅಗತ್ಯವಂತೂ ಇದೆ.

ನಮ್ಮ ದಾರಿಯಲ್ಲಿರುವ ತೊಡಕುಗಳು

ಕರ್ನಾಟಕ ರಾಜಕಾರಣದ ಬಗ್ಗೆ ಮಾತಾಡಬೇಕಾದ ನಾವು ಕನ್ನಡ ಸಾಹಿತ್ಯ– ಸಂಸ್ಕೃತಿ ಕುರಿತ ಚರ್ಚೆಗೆ ಮುಂದಾದದ್ದು ಆಕಸ್ಮಿಕವೇನಲ್ಲ. ಕರ್ನಾಟಕ ರಾಜಕಾರಣ ನಮ್ಮ ಸಾಹಿತ್ಯ ನಿರ್ಮಿತಿಯ ಮೈಮರೆವಿನಿಂದಲೇ ಸೃಷ್ಟಿಯಾಗಿರಬಹುದು ಎಂಬ ಅನುಮಾನ ನನ್ನದು. ಶರಣರ ಹೆಸರಿನಲ್ಲಿ ಶುರುವಾದ ಲಿಂಗಾಯತ ಮಠಗಳಲ್ಲಿ ಸಂಸ್ಕೃತ ಶಾಲೆಗಳು; ಬಸವ, ಅಲ್ಲಮ, ಅಕ್ಕರಿದ್ದರೂ ತ್ಯಾಗರಾಜರ ಕೀರ್ತನೆಗಳು; ಕುವೆಂಪು ಇದ್ದರೂ ತಕ್ಷಣದ ತುರಿಕೆಯ ಬರೆಹಗಳು ಯಾಕೆ ಈ ಕನ್ನಡದ ಮಧ್ಯಮ ವರ್ಗಗಳಿಗೆ ಮುಖ್ಯವಾಗುತ್ತವೆ ಎಂಬುದನ್ನು ನಾವು ಅರ್ಥ ಮಾಡಿಕೊಂಡರೆ, ನಾವು ಸಾಹಿತ್ಯಕವಾಗಿ ಬೆಳೆದಷ್ಟೆ ಸಲೀಸಾಗಿ ಅವರು ಸಾಂಸ್ಕೃತಿಕ ರಾಜಕಾರಣದಲ್ಲಿ ದೊಡ್ಡ ಜಾಗವನ್ನು ಗಿಟ್ಟಿಸಿಕೊಂಡುಬಿಟ್ಟಿದ್ದಾರೆ. ಈ ಕಾರಣಕ್ಕೆ ಛೀ.. ಥೂ.. ಎನ್ನುವಷ್ಟರ ಮಟ್ಟಿಗೆ ಪ್ರಶಸ್ತಿಗಳ ಪಟ್ಟಿ ಪ್ರಕಟಗೊಳ್ಳುತ್ತದೆ.

ಅಂದರೆ, ಆ ಅಧಿಕಾರ ಕೇಂದ್ರಗಳಲ್ಲಿ ನಮ್ಮವೇ ಶೋಷಿತ ಸಮುದಾಯಗಳಿಂದ ಹೋದವರು ಕುಳಿತಿದ್ದರೆ ಎಲ್ಲಾ ಕಡೆ ನಾವೇ ವಿಜೃಂಭಿಸಬಹುದಿತ್ತು ಎನ್ನಲಾಗುವುದೇ..? ಯಡ್ಯೂರಪ್ಪನವರ ಹಣೆಯ ಕುಂಕುಮದ ಬಗ್ಗೆ ಸುದ್ದಿಮಾಡುವ ಮಾಧ್ಯಮಗಳು ದೇವೇಗೌಡರ ಮುದ್ದೆ–ನಿದ್ದೆಯ ಬಗ್ಗೆ ಸುದ್ದಿ ಮಾಡುತ್ತವೆ; ಸಿ.ಟಿ.ರವಿಯ ಸೀಮೆಎಣ್ಣೆ ಪ್ರಸಂಗಕ್ಕೆ ಮಹತ್ವ ಕೊಡುವ ಅದೇ ಮಾಧ್ಯಮಗಳು ಕುಮಾರಸ್ವಾಮಿ, ಸಿದ್ಧರಾಮಯ್ಯರ ಚರ್ಮದ ಬಣ್ಣದ ಬಗ್ಗೆ ವ್ಯಂಗ್ಯವಾಡುತ್ತವೆ. ಕಟ್ಟಾ ನಾಯ್ಡು ಮತ್ತವರ ಮಗನ ಕುರಿತು ಗಂಭೀರವಾಗಿ ಸುದ್ದಿ ಬಿತ್ತರಿಸುವ ಮಾಧ್ಯಮಗಳು ಶಾಸಕ ಸಂಪಂಗಿಯನ್ನು ಐದು ಲಕ್ಷ ರೂಪಾಯಿಗೆ ಹರಾಜು ಹಾಕುತ್ತವೆ. ಕಾರ್ನಾಡರು ವಯಕ್ತಿಕ ಅಹಂನಿಂದ ಸಿನೆಮಾ ಪ್ರಶಸ್ತಿಯನ್ನು ತಿರಸ್ಕರಿಸಿದ್ದನ್ನು ಸಾಹಿತ್ಯಕ ಘನತೆ ಎಂಬಂತೆ ಚಿತ್ರಿಸುವ ಮಾಧ್ಯಮಗಳು ದೇವನೂರು ಮಹಾದೇವ ನೃಪತುಂಗ ಪ್ರಶಸ್ತಿ ತಿರಸ್ಕರಿಸಲು ಕನ್ನಡ ಭಾಷೆಗೆ ಒಳಿತಾಗುವ ಕಾರಣ ನೀಡಿದರೆ, ಅವರಿಗೂ ಕನ್ನಡಕ್ಕೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತವೆ. ಇಂಥ ಜನಾಭಿಪ್ರಾಯ ಸೃಷ್ಟಿಸುವ ಮಾಧ್ಯಮಗಳು ರಾಜ್ಯದ ಮುಖ್ಯ ಅಧಿಕಾರ ಕೇಂದ್ರಗಳಲ್ಲಿ ಯಾವ ಜಾತಿಯವರಿರಬೇಕು, ಯಾರು ನಮ್ಮನ್ನು ಆಳಬೇಕು ಎಂಬುದನ್ನು ಪರೋಕ್ಷವಾಗಿ ಶಾಸನ ಮಾಡುತ್ತವೆಂದರೆ, ನಾವು ನಮ್ಮ ನಡೆಗೆ ಅವುಗಳನ್ನು ಒಗ್ಗಿಸಿಕೊಳ್ಳುವ ಕಾರ್ಯ ಅಷ್ಟು ಸುಲಬದ್ದೇ..?

ಕನ್ನಡ ಭಾಷೆ, ಸಂಸ್ಕೃತಿ ಬಗ್ಗೆ ಕಾಳಜಿ ಇರುವ ಸಾಂಸ್ಕೃತಿಕ ಕ್ರಿಯಾಶೀಲರು ಎಂದು ನಾವು ಗುರ್ತಿಸಿ[ರು]ವ
ಜನ ಹಿಂದುಳಿದ ಜಾತಿಗೆ ಸೇರಿದ ವ್ಯಕ್ತಿಯೊಬ್ಬರು ನಾ[ಡಿನ]
ಮುಖ್ಯಮಂತ್ರಿಯಾಗಬೇಕೆಂದು ಕನಸುವುದು ಉಚಿತವಲ್ಲವೇ ಎಂಬುದನ್ನು ನಾವು ಪ್ರಶ್ನಿಸಿಕೊಂಡರೆ, ಪ್ರಜಾಪ್ರಭುತ್ವ ಕುರಿತ ನಮ್ಮ ಸದ್ಯದ ಆಲೋಚನೆಗಳನ್ನು ತಿದ್ದಿಕೊಳ್ಳಬಹುದೇನೋ... ಹಾಗೂ ಆ ಮೂಲಕ ನ[ಮ್ಮ]
ನಡುವಿನ ಸಾಂಸ್ಕೃತಿಕ ಕ್ರಿಯಾಶೀಲತೆಯ ನಡೆಯ ನಕಾಶೆಯನ್ನು ಪೂರ್ಣಗೊಳಿಸಿಕೊಳ್ಳಬಹುದು.

ನಮ್ಮ ಮುಂದಿನ ಕರ್ತವ್ಯಗಳು

ಈ ರೀತಿಯ ಕ್ಲಿಷ್ಟಕರ ಸಂದರ್ಭದಲ್ಲಿ ನಮ್ಮ ಕರ್ತವ್ಯಗಳೇನು ಎಂಬುದನ್ನು ಪಟ್ಟಿ ಮಾಡಿಕೊಂಡು ಕಿಸೆಯಲ್ಲಿಟ್ಟುಕೊಂಡು ತಿರುಗಾಡಲು ಬರುವುದಿಲ್ಲ; ಬದಲಾಗಿ ನಾವು ಬದುಕುತ್ತಿರುವ ಸಾಂಸ್ಕೃತಿಕ ಸಮಾಜದಲ್ಲಿ ನಮ್ಮ 'ಜಾಗ'ವನ್ನು ಗುರುತಿಸಿಕೊಂಡು ಸುತ್ತಲೂ ಒಂದು ಜೀವಚೈತನ್ಯದ ಪರಿಸರವನ್ನು ಕಟ್ಟಿಕೊಳ್ಳಬೇಕಿದೆ. ಈ ಪ್ರಕ್ರಿಯೆಯಲ್ಲಿ ನಮ್ಮ ನೆರೆಯೂ[ರು]
ನಮ್ಮಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದರೆ ನ[ಮ್ಮ]
ಕರ್ತವ್ಯಕ್ಕೆ ಘನತೆ ಬರುತ್ತದೆ. ಆದರೆ, ಹಾಗೆ ಜೀವಚೈತನ್ಯದ ಪರಿಸರವನ್ನು ಕಟ್ಟಿಕೊಳ್ಳುವಾಗ ಎಚ್ಚರವಹಿಸಬೇಕಿದೆ. ಅಂದರೆ ಸಮಕಾಲೀನ ಕರ್ನಾಟ[ಕ]
ಸಂದರ್ಭವು ತನ್ನ ಉನ್ನತಿಗಾಗಿ ಬಯಸುವ ಎಲ್ಲವನ[್ನು]
ನಾವು ಒಳಕ್ಕೆ ತೆಗೆದುಕೊಳ್ಳಲು ಯತ್ನಿಸಿದರೆ ನಮ್ಮ

...ಳಿವನ್ನು ಬಯಸುವ ಕೆಲವು ಪ್ರಕ್ರಿಯೆಗಳು ...ಮಾರುವೇಶದಲ್ಲಿ ನಮ್ಮೊಳಗೆ ನುಸುಳಿಬಿಡುತ್ತವೆ. ಇಂಥಾ ...ಸಂದರ್ಭದಲ್ಲಿ ಎಲ್ಲವನ್ನೂ ಅನುಸಂಧಾನದ ಮೂಲಕವೇ ...ಳಗೊಳ್ಳಬೇಕಾದ ಅನಿವಾರ್ಯತೆ ಇದೆ.

ಉದಾಹರಣೆಗೆ ಕನ್ನಡದ ಉಳಿವು ಕುರಿತ ...ಹೋರಾಟ ಮತ್ತು ಜಿಜ್ಞಾಸೆ: ಕನ್ನಡದ ಉಳಿವಿಗಾಗಿ ...ಹೋರಾಟ ಮಾಡುತ್ತಿರುವಂತೆ ಕಾಣುತ್ತಿರುವ ಕೆಲವು ...ಗುಂಪುಗಳು ಮತ್ತು ವ್ಯಕ್ತಿಗಳು ತಮ್ಮ ಸಂಘಟನಾ ...ಶಕ್ತಿಯನ್ನಷ್ಟೇ ನಂಬಿ ನಡೆಸುತ್ತಿರುವ ಹೋರಾಟ ...ನಿರ್ಥವಾದುದು. ಯಾಕೆಂದರೆ, ಅವರು ಕನ್ನಡವನ್ನು ...ಂದು ವಸ್ತುವಿನ ರೀತಿಯಲ್ಲಿ ಅರ್ಥ ಮಾಡಿಕೊಂಡು ...ಅದನ್ನು ಉಳಿಸಿಕೊಳ್ಳಲು ತಾವು ನಡೆಸುತ್ತಿರುವ ...ಹೋರಾಟವನ್ನು 'ವೀರೋಚಿತ'ವಾಗಿ ...ಸಂಭ್ರಮಿಸುತ್ತಿದ್ದಾರೆ. ಆದರೆ, ಕನ್ನಡವನ್ನು ಉಳಿಸುವುದು ...ಎಂದರೆ ಬದುಕುಗಳನ್ನು ಉಳಿಸುವುದು ಎಂಬುದನ್ನು ...ಅವರು ಅರ್ಥಮಾಡಿಕೊಳ್ಳುತ್ತಿಲ್ಲ. ಈ ಕಾರಣದಿಂದ ...ಕನ್ನಡದ ಹೋರಾಟಕ್ಕೆ ಬೆಂಬಲ ಸೂಚಿಸುವ ...ಸರ್ಕಾರವಾಗಲಿ, ಇನ್ನಿತರ ವ್ಯಕ್ತಿ-ಪಕ್ಷಗಳಾಗಲಿ ಹಿಂದೆ ...ಮುಂದೆ ನೋಡದೆ ಇದರೊಳಗೆ ...ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗೆ 'ಹಿಂದೆ-ಮುಂದೆ' ...ನೋಡದೆ ಹೋರಾಟಕ್ಕೆ ದುಮುಕುವ ಮಂದಿಗೆ ಕನ್ನಡ ...ಹೋರಾಟಗಳ 'ಸಾಮರ್ಥ್ಯ'ದ ಅರಿವಿರುತ್ತದೆ. ಅವರು

ರಾತ್ರೋರಾತ್ರಿ ಬೆಂಕಿಗೆ ಆಹುತಿಯಾಗುವ ಬಡವರ ಗುಡಿಸಲುಗಳು, ಸ್ನಾನ ಮಾಡಲು, ಮೈತೊಳೆಯಲು ನೀರಿಲ್ಲದೆ ಚರಂಡಿಗಳನ್ನು ಆಶ್ರಯಿಸಬೇಕಾದ ಕೊಳಗೇರಿ ಜನ, ಕಕ್ಕಸ್ಸು ಗುಂಡಿಗಳಿಗೆ ಬಿದ್ದು ಬಲಿಯಾಗುವ ಶ್ರಮಜೀವಿಗಳು, ಜಾತಿ ವಿಷಕ್ಕೆ ಸಾವಿರ ಸಂಖ್ಯೆಯಲ್ಲಿ ಬಲಿಯಾಗುತ್ತಿರುವ ತಳ ಸಮುದಾಯಗಳು, ತಮ್ಮ ಬೆಳೆಗೆ ಸಮರ್ಪಕ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುವ ರೈತರು, ಜಾಗತೀಕರಣದ ನೇಣಿಗೆ ಕುತ್ತಿಗೆಯೊಡ್ಡುತ್ತಿರುವ ಬೀದಿ ವ್ಯಾಪಾರಿಗಳು, ಮೇಲ್ಜಾತಿಯವರು ಉಂಡ ಎಲೆಗಳ ಮೇಲೆ ಉರುಳಿ ಪಾಪ ಕಳೆದುಕೊಳ್ಳುವ ಭ್ರಮೆಯಲ್ಲಿರುವ ಮೂಢ ಜನರು.. ಇವರೆಲ್ಲರನ್ನು ರಕ್ಷಿಸುವುದು ಕನ್ನಡದ ಕೆಲಸವಲ್ಲ ಎಂದು ತಿಳಿದಿರುವ ಕನ್ನಡ ಹೋರಾಟಗಾರರು... ಹೀಗೆ ಕನ್ನಡದ ಅಳಿವು ತನ್ನ ದಾರಿಯಲ್ಲಿ ಬಹುದೂರ ಸಾಗಿಬಿಟ್ಟಿದೆ. ಇಂಥಾ ಸಂದರ್ಭದಲ್ಲಿ ಕನ್ನಡದ ಉಳಿವಿನ ಹೆಸರಿನಲ್ಲಿ ನಾವು ಇಂದಿನ ಕನ್ನಡ ಹೋರಾಟವನ್ನು ಮಾದರಿಯಾಗಿ ಭ್ರಮಿಸಿಬಿಟ್ಟರೆ ಉಳಿಗಾಲವಿಲ್ಲ.

ದಲಿತ-ರೈತ ಚಳವಳಿಗಳು ಮತ್ತು ಕನ್ನಡದ ಉಳಿವು

ವಾಸ್ತವವಾಗಿ ನೋಡಿದರೆ, ನಮ್ಮ ನಾಡಿನಲ್ಲಿ ಕನ್ನಡ ಕುಲದ ಉಳಿವಿಗಾಗಿ ನಡೆದಿರುವ ಹೋರಾಟಗಳೆಂದರೆ, ಅವು ದಲಿತ ಮತ್ತು ರೈತ ಹೋರಾಟಗಳೇ. ಆಧುನಿಕ ಕರ್ನಾಟಕದಲ್ಲಿ ದಲಿತ ಮತ್ತು ರೈತರಿಗೆ ಆತ್ಮಸ್ಥೈರ್ಯವನ್ನು ತಂದುಕೊಟ್ಟ ಈ ಚಳವಳಿಗಳು

ಮಾತೃಛಾಯಾ

ತೊನೆಯದಿದ್ದರು
ಹಣ್ಣು ಕಾಯಿ ಹೂಗಳನ್ನು
ಬಿದಿರು
ತೊಟ್ಟಿಲಾಗಿ ತೂಗುವುದು
ಮಕ್ಕಳನ್ನು
ಬುಟ್ಟಿಯಾಗಿ ಹೊರುವುದು
ಹಣ್ಣು ಕಾಯಿ ಹೂಗಳನ್ನು



ಜರಗನಹಳ್ಳಿ ಶಿವಶಂಕರ್

ನಾವು ಮರಳಿ ಹೋರಾಟ ಮಾಡಬೇಕು ಎಂದಾಗ ಈಗ ಹೋರಾಟದಲ್ಲಿ ಇರುವವರ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾಗುತ್ತದೆ. ಹಾಗೆ ವರ್ತಮಾನದ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿಕೊಳ್ಳುವುದು ಎಂದರೆ, ಮತ್ತೆ ಎಪ್ಪತ್ತರ ದಶಕದ ಪ್ರಾಮಾಣಿಕ, ಜೀವಂತ ಹೋರಾಟಗಳನ್ನು ರೂಪಿಸುವುದೇ ಆಗಿದೆ. ಅದರ ಹೊತಾಗಿನ ಎಲ್ಲಾ ಉತ್ತರಗಳೂ ಉತ್ತರ ರೂಪದಲ್ಲಿರುವ ಪ್ರಶ್ನೆಗಳೇ ಆಗಿರುತ್ತವೆ ಎಂದು ಬೇರೆ ಹೇಳಬೇಕಿಲ್ಲ. ಎಪ್ಪತ್ತರ ದಶಕದಲ್ಲಿದ್ದ ಸಮಾನತೆಯ ತುರ್ತು ಇಂದಿಲ್ಲವೇ ಎಂದು ಪ್ರಶ್ನಿಸಿಕೊಂಡರೆ ಉತ್ತರ ಯಾವುದಿರಬಹುದು..?

...ಹಾಗೆ ಬೆಂಬಲ ಸೂಚಿಸುತ್ತಲೇ ತಮ್ಮ ಅಧಿಕಾರ ...ಕೇಂದ್ರಗಳಿಂದ ಪ್ರಭುತ್ವವನ್ನು ನಿರ್ದೇಶಿಸುತ್ತಾರೆ.

ಇಂಥಾ ಪ್ರಕ್ರಿಯೆಯನ್ನು ಪ್ರಜ್ಞಾವಂತರು ...ರಿಯಾಗಿಯೇ ಅರ್ಥಮಾಡಿಕೊಂಡು ...ಮುಂದುವರಿಯುತ್ತಿದ್ದಾರೆ ಎಂಬುದು ಸಮಾಧಾನದ ...ವಿಷಯ. ಆದರೆ, ಕನ್ನಡದ ಈ ಪ್ರಜ್ಞಾವಂತ ವರ್ಗದ ...ಶಕ್ತಿಯನ್ನು ಇದೇ ಕನ್ನಡ ಹೋರಾಟಗಳು ದೂರ ...ಇಡುವಂತೆ ಪ್ರಭುತ್ವ ರೂಪಿಸುವ ಷಡ್ಯಂತ್ರಗಳಲ್ಲಿ ಇಂದಿನ ...ಕನ್ನಡ ಹೋರಾಟಗಾರರು ದಾರಿತಪ್ಪಿದ್ದಾರೆ. ಈ ...ಕಾರಣಕ್ಕಾಗಿ ಸ್ಲಮ್ಮುಗಳಲ್ಲಿ ತಮಿಳು ಮಾತನಾಡುವ ...ಲಿತರು, ಬೀದಿಗಳಲ್ಲಿ ಕಸಗುಡಿಸುವ ತೆಲುಗರು ಕನ್ನಡ ...ವಿರೋಧಿಗಳಂತೆ ಕಾಣುತ್ತಾರೆ. ಹೀಗೆ ತಮ್ಮ ಹುಸಿ ...ವೈರಿಗಳನ್ನು ಕಂಡುಕೊಳ್ಳುವ ಭರದಲ್ಲಿ ಈ ...ಹೋರಾಟಗಾರರು ತಾವು ಮಾಡಬೇಕಾದ ನೈಜ ...ಕರ್ತವ್ಯಗಳನ್ನು ಮರೆಯುತ್ತಾರೆ.

ಇಂದು ವಿಚ್ಛಿದ್ರಕಾರಿ ಸ್ಥಿತಿಯಲ್ಲಿವೆ. ಯಾವ ಹೋರಾಟಗಳಿಂದ ನಾಡಿನ ಜನತೆ ತಮ್ಮ ಬದುಕಿಗೆ ಘನತೆ ತಂದುಕೊಂಡು ತಲೆಯೆತ್ತಿ ನಡೆಯುತ್ತಿದ್ದರೋ, ಅದೇ ಜನತೇ ಇಂದು ಆ ಚಳವಳಿಗಳು ತಲುಪಿರುವ ಸ್ಥಿತಿಯಿಂದ ತಲೆ ತಗ್ಗಿಸಿಕೊಂಡು ನಡೆದಾಡುತ್ತಿದ್ದಾರೆ. ಚಳವಳಿಗಳ ಇಂಥಾ ಸ್ಥಿತಿಗೆ ಜಾಗತೀಕರಣವೇ ಕಾರಣ ಎಂದು ಸಮಜಾಯಿಷಿ ಕೊಟ್ಟುಕೊಂಡರೂ ಚಳವಳಿಯಲ್ಲಿದ್ದ ವ್ಯಕ್ತಿಗಳ ವ್ಯಕ್ತಿಗತ ಹಿತಾಸಕ್ತಿಯೇ ಮುಖ್ಯವಾಗಿ ಈ ಚಳವಳಿಗಳ ಪತನಕ್ಕೆ ಕಾರಣವಾಗಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ವಿಷಯ ಕುರಿತು ಇಂದು ನಡೆಯುತ್ತಿರುವ ಚರ್ಚೆಗಳಲ್ಲಿಯೂ ಪೂರ್ವಾಗ್ರಹ ಕೆಲಸ ಮಾಡುತ್ತಿದೆ. ಯಾಕೆಂದರೆ, ಈ ಚಳವಳಿಗಳಿಂದ ಯಾರ್ಯಾರು ಹೊಟ್ಟೆಗೆ ಕಿಚ್ಚು ಹಚ್ಚಿಕೊಂಡು ಶಪಿಸುತ್ತಿದ್ದರೋ ಅವರೆಲ್ಲಾ ಇಂದು ಅವುಗಳ ಪತನವನ್ನು ಸಂಭ್ರಮಿಸುತ್ತಿದ್ದಾರೆ. ಹಾಗೂ ಅವುಗಳ ಪತನಕ್ಕೆ ಇಲ್ಲಸಲ್ಲದ ಕಾರಣಗಳನ್ನು ಹುಡುಕಿ ಜನಮಾನಸದ ಒಳಗೆ ಚಲಾವಣೆ ಮಾಡುತ್ತಿದ್ದಾರೆ. ಒಂದು

ಕಾಲಕ್ಕೆ ಕಣ್ಣು ತಂದುಕೊಟ್ಟ ದಲಿತ-ರೈತ ಚಳವಳಿಗಳು ಈಗ ಸ್ವತಃ ಕಣ್ಣು ಕಳೆದುಕೊಂಡಿರುವುದು ಈ ರೀತಿಯ ಪತನವನ್ನು ಸಂಭ್ರಮಿಸುತ್ತಿರುವ ಮಂದಿಗೆ ಉತ್ತರ ಕೊಡಲಾಗದೆ ಸೊರಗಿರುವುದರಿಂದ ಗೊತ್ತಾಗುತ್ತಿದೆ.

ಚಳವಳಿಗಳು ಸೊರಗಿವೆ ಎಂದರೆ, ಶೋಷಿತರು ಶೋಷಣೆಯನ್ನು ಸಹಿಸಿಕೊಳ್ಳುವುದನ್ನು ಕಲಿತಿದ್ದಾರೆ ಎಂದರ್ಥ ಮಾಡಿಕೊಳ್ಳಬಹುದು. ಅಂದರೆ, ಇದು ಚಳವಳಿಗಳ ಸೋಲು-ಗೆಲವುಗಳ ಚರ್ಚೆಯಲ್ಲ; ಬದಲಾಗಿ ಕಾಲದ ಒತ್ತಡಕ್ಕೆ ಸಿಲುಕಿದ ತಲೆಮಾರುಗಳು ಹೇಗೆ ನೆಲದ ನಿಯಮಗಳಿಂದ ದೂರವಾಗಿ ಒಣ ಬದುಕುಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುವ

With Best Compliments From

Keshava Industrial Area (Small)

Survey no.69/70, Behind Country Club, Pipe line
Vishwaneedam Post, Magadi Main Road,
Gollarahatti, Bangalore-560091.

S.DORAISWAMY
MOB: 9686371169/8880569011

ಚರ್ಚೆ. ಎಪ್ಪತ್ತರ ದಶಕದಿಂದೀಚೆಗೆ ಕನ್ನಡ ಜಗತ್ತು ಕಂಡುಂಡಿರುವ ನೋವು-ನಲಿವುಗಳನ್ನು ಲೆಕ್ಕ ಹಾಕಿದರೆ ಅವುಗಳಲ್ಲಿ ನೋವಿನ ಪಾಲೇ ಹೆಚ್ಚು. ನಿಸರ್ಗದತ್ತವಾದ ನೋವನ್ನು ಸಹಿಸಿಕೊಳ್ಳುವುದು ಮಾನವ ಕುಲದ ಸಹಿಷ್ಣು ಗುಣವೆಂದು ನಾವು ಅಂದುಕೊಂಡರೆ, ಈ ನೋವು ಮಾನವರಿಂದಲೇ ಹುಟ್ಟಿದ್ದು ಎಂಬುದನ್ನು ನೆನೆದಾಗ ಅದರ ವಿರುದ್ದ ಸಿಡಿದು ನಿಂತು ನಲಿವನ್ನು ಕನಸುವ ಸಹಜ ಪ್ರಕ್ರಿಯೆಯಿಂದ ತಲೆಮಾರುಗಳು ದೂರ

ಸರಿಯುತ್ತಿರುವುದನ್ನು ಕಂಡು ದಿಗಿಲಾಗುತ್ತದೆ. ಈ ದಿಗಿಲು ನೀಗಿಕೊಳ್ಳಲು ನಾವು ಮತ್ತೆ ಮತ್ತೆ ನಾಡಿನ ಗತದ ಹಂಗಿಗೆ ಬಿದ್ದು 'ಹೋರಾಟದ ಸಾರಕ್ಕೆ ಸಾವಿರಾರು ನದಿಗಳು...' ಹಾಡು ಗುನುಗುತ್ತಾ ಕೂರಬೇಕಿದೆ.

ಕನ್ನಡದ ಉಳಿವೆಂದರೆ ಕನ್ನಡದ ಬದುಕುಗಳನ್ನು ಉಳಿಸಿಕೊಳ್ಳುವುದು ಎಂಬುದನ್ನು ನಾವು ನಂಬಿದರೆ, ಇಂದು ನಡೆಯುತ್ತಿರುವ ಹೋರಾಟಗಳಿಂದ ಬದುಕುಗಳು ಮರೆತು ಕೇವಲ ಹಿಪೋಕ್ರಸಿ ದೊಡ್ಡದಾಗುತ್ತಿರುವುದನ್ನು ನಾವು ಹೆಂಗೆ ನಿವರಿಸಿಕೊಳ್ಳಬೇಕು ಎಂಬ ಗೊಂದಲ ಉಂಟಾಗುತ್ತದೆ. ಅದಕ್ಕಾಗಿ ಇಂದು ಕನ್ನಡದ ಗತದ ಪ್ರಜ್ಞಾವಂತಿಕೆಯನ್ನು, ಜೀವಂತಿಕೆಯನ್ನು ನೆನೆಯುವ ಯಾವೊಬ್ಬರೂ ದಲಿತ-ರೈತ ಹೋರಾಟಗಳನ್ನು ನೆನೆದು ಕ್ಷಣ ನಿಟ್ಟುಸಿರಾಗುತ್ತಾರೆ. ಇಂದೂ ಅವುಗಳ ಹೆಸರಲ್ಲಿ ನಡೆಯುತ್ತಿರುವ ಹೋರಾಟಗಳಲ್ಲಿ ಆ ಪ್ರಜ್ಞಾವಂತಿಕೆ ಮತ್ತು ಜೀವಂತಿಕೆ ಕಾಣದೆ ಕಂಗಾಲಾಗುತ್ತಾರೆ.

ಮರಳಿ ಹೋರಾಟ..?

ನಾವು ಮರಳಿ ಹೋರಾಟ ಮಾಡಬೇಕು ಎಂದಾಗ ಈಗ ಹೋರಾಟದಲ್ಲಿ ಇರುವವರ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾಗುತ್ತದೆ. ಹಾಗೆ ವರ್ತಮಾನದ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿಕೊಳ್ಳುವುದು ಎಂದರೆ, ಮತ್ತೆ ಎಪ್ಪತ್ತರ ದಶಕದ ಪ್ರಾಮಾಣಿಕ, ಜೀವಂತ ಹೋರಾಟಗಳನ್ನು ರೂಪಿಸುವುದೇ ಆಗಿದೆ ಎಂಬುದು ನನ್ನ ಅನಿಸಿಕೆ. ಅದರ ಹೊತಾಗಿನ ಎಲ್ಲಾ ಉತ್ತರಗಳೂ ಉತ್ತರ ರೂಪದಲ್ಲಿರುವ ಪ್ರಶ್ನೆಗಳೇ ಆಗಿರುತ್ತವೆ ಎಂದು ಬೇರೆ ಹೇಳಬೇಕಿಲ್ಲ. ಎಪ್ಪತ್ತರ ದಶಕದಲ್ಲಿದ್ದ ಸಮಾನತೆಯ ತುರ್ತು ಇಂದಿಲ್ಲವೇ ಎಂದು ಪ್ರಶ್ನಿಸಿಕೊಂಡರೆ ಉತ್ತರ ಯಾವುದಿರಬಹುದು..? ಅಂದಿನ ಶೋಷಿತರು ಅವಿದ್ಯಾವಂತರು, ದಡ್ಡರಿದ್ದರು; ಇಂದು ಅವರೆಲ್ಲಾ ವಿದ್ಯಾವಂತರೂ ಬುದ್ಧಿವಂತರೂ ಆಗಿದ್ದಾರೆ. ಈ ಕಾರಣದಿಂದ ಶೋಷಣೆ ಉಗ್ರವಾದ ಹೋರಾಟ ಮಾಡುವಷ್ಟರ ಮಟ್ಟಿಗೆ ನಡೆಯುತ್ತಿಲ್ಲ ಎಂದು ಹೇಳುವವರಿದ್ದಾರೆ. ಆದರಿದು ನಿಜವೇ..? ದಲಿತ- ರೈತ ಚಳವಳಿಗಳು ಉಚ್ಚ್ರಾಯ ಸ್ಥಿತಿಯಲ್ಲಿದ್ದಾಗ ಕೆಲವರು ಕೆಲವು ವಿಷಯಗಳ ಕುರಿತು ಮಾತನಾಡಲು ಹೆದರುತ್ತಿದ್ದರು. ಕೆಲವನ್ನು ಬಹಿರಂಗವಾಗಿ ಮಾಡಲು ಹಿಂಜರಿಯುತ್ತಿದ್ದರು. ಆದರೆ ಇಂದು ಸಣ್ಣ ಪುಟ್ಟ ಕ್ರಿಮಿ-ಕೀಟಗಳೆಲ್ಲಾ ದಲಿತ ಹೋರಾಟಗಾರರ ಬದ್ಧತೆಯನ್ನು ಪ್ರಶ್ನಿಸುತ್ತವೆ; ಬಾಬಾ ಸಾಹೇಬರ ಕುರಿತು ಬಹಿರಂಗವಾಗಿ ವಿಷ ಕಕ್ಕಿಕೊಳ್ಳುತ್ತವೆ; ಮೀಸಲಾತಿ ವಿರುದ್ಧ ಹೋರಾಟ ಮಾಡಲೂ ಮುಂದಾಗುತ್ತವೆ; ಪ್ರತಿಭೆಯ ಹೆಸರಲ್ಲಿ ಹೇಸಿಗೆ ತಿನ್ನಲೂ ಹೇಸದೆ ಅಸಹ್ಯ ಹುಟ್ಟಿಸುತ್ತವೆ. ಯಾಕೆ ಹೀಗೆ..?

ಈ ಪರಿಸ್ಥಿತಿಯನ್ನು ನಿಭಾಯಿಸಬೇಕಾದರೆ, ಮರಳಿ ಎಪ್ಪತ್ತರ ದಶಕದ ಹೋರಾಟವನ್ನು ಪ್ರಾಮಾಣಿಕವಾಗಿ ಕಟ್ಟಿಕೊಳ್ಳುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಅದು ಸಮಾಜೋ-ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಯಾವುದೇ ಕ್ಷೇತ್ರದ್ದಿರಬಹುದು. ನಮ್ಮ ರಾಜಿರಹಿತ ಹೋರಾಟದ ಫಲದಿಂದಲ್ಲದೆ ಮತ್ಯಾವ ದಾರಿಯಿಂದಲೂ ಸಮಾನತೆ ಸಾಧ್ಯವಿಲ್ಲ. ಹೋರಾಟವೆಂದರೆ, ಬೀದಿಗಿಳಿದು ದಿಕ್ಕಾರವನ್ನು ಕೂಗುವುದಾಗಿರಬಹುದು, ಅಥವಾ ಇನ್ನ್ಯಾವುದೇ ರೀತಿಯ ಕ್ರಿಯಾಶೀಲ ಹೋರಾಟವಾಗಿರಬಹುದು.. ಆದರದು ಪ್ರಾಮಾಣಿಕವಾದ ನೆಲಮೂಲ ಕಾಳಜಿಯಿಂದ ಹುಟ್ಟಿದ್ದಾಗಿರಬೇಕು. ಎಪ್ಪತ್ತರ ದಶಕದಲ್ಲಿ ನಮ್ಮೊಡನೆ ಇಲ್ಲದಿದ್ದ ದೊಡ್ಡದೊಡ್ಡ ಹತಾರಗಳು ಇಂದು ನಮ್ಮೊಂದಿಗಿವೆ. ಅಂದು ನಮ್ಮ ಮೌಢ್ಯಕ್ಕೆ ದೂರಾಗಿದ್ದ ಮಂಟೇಸ್ವಾಮಿ, ಮಾದಪ್ಪ, ಜುಂಜಪ್ಪ, ಕಾಟಮಲ್ಲರು, ದೊಡ್ಡಮ್ಮ, ಸಂಕೆಣ್ಣುಗಳು ಇಂದಿದ್ದಾರೆ. ಅವರ ಕಂಡಾಯಗಳು, ಕಾಲಜ್ಞಾನಗಳು ಇವೆ. ಅವರು ಹಚ್ಚಿಟ್ಟ 'ಭಿನ್ನ ಭೇದವಿಲ್ಲದಂತೆ ಉರಿಯುವ ಪರಂಜ್ಯೋತಿ'ಗಳು ನಮ್ಮ ಹಟ್ಟಿಗಳಲ್ಲಿವೆ. ಇವರ್ಯಾರು ಉಂಡ ಎಲೆಗಳ ಮೇಲೆ ಉರುಳುವುದನ್ನು ಸಹಿಸರು. ಪಾದಕ್ಕೆರಗಿ ಹಿಪೋಕ್ರಸಿಯನ್ನು ತೋರಿದರೆ ಮಾತ್ರ ಕಡುಕಷ್ಟ ತಪ್ಪುವುದಿಲ್ಲ.

ಇದನ್ನು ಅರ್ಥ ಮಾಡಿಕೊಂಡರೆ ನಮ್ಮ ಈಹೊತ್ತಿನ ಸಾಂಸ್ಕೃತಿಕ ಕ್ರಿಯಾಶೀಲತೆಗೆ ಒಂದಷ್ಟು ಬಲ ಬರಬಹುದು.

ಹುಲಿಕುಂಟೆ ಮೂರ್ತಿ

ಶರಣ ಚಳವಳಿ ಬಗ್ಗೆ ಅಪಾರ ಪ್ರೀತಿ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡ ಹಿನ್ನಲೆಯಲ್ಲಿ ಒಡಮೂಡಿದ ಮಂಟೇಸ್ವಾಮಿ ಪರಂಪರೆಯಲ್ಲಿ 'ಜಾತಿ' ಕುರಿತ ಅಧ್ಯಯನದ ಕೃತಿ, 'ಪರಂಜ್ಯೋತಿ' ಹಾಗೂ ಮಂಟೇಸ್ವಾಮಿ ಪರಂಪರೆ; ಕುಲಮೀಮಾಂಸೆ'ಕೃತಿಗಳಿಂದ ಗಮನ ಸೆಳೆದಿದ್ದಾರೆ. ನಿರಂತರ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಇವರು ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಒಂದು ಬೆಳಕಿನ ಕಿರಣ

ನೀಲಾ

ಮುಂಜಾನೆ ಮನೆಗೆ ಬಂದಿದ್ದ ಬಸವರಾಜಪ್ಪ ಬಲು ಕಾಳಜಿಲಿಂದ ಮಾತಾಡಿದ್ದನು. ಹಾಗೆ ನೋಡಿದರೆ ಯಾವತ್ತೋ ಈ ಮನೆಗೆ ಬರಬೇಕಾದವನು. ಆದರೆ ಬಸವರಾಜಪ್ಪ ವರ್ಷಗಟ್ಟಲೆ ತಡ ಮಾಡಿ ಬಂದಿದ್ದ. ಅಂತೂ ಬಂದನಲ್ಲ..... ಸುಮ್ಮನೇನಲ್ಲ..... ದೊಡ್ಡ ಜಾತಿ. ದುಡ್ಡಿದ್ದ ಮನುಷ್ಯ. ಅಷ್ಟಕ್ಕೂ ಲಕ್ಕಮ್ಮನನ್ನು ಬಹುವಾಗಿ ಮೆಚ್ಚಿಕೊಂಡವನು. ನೋಡಿ ಮೆಚ್ಚಿಕೊಂಡ ಕೂಡಲೇ ಈ ಮನೆಗೆ ಖರ್ಚು ಮಾಡಿದ್ದು ಕಮ್ಮಿಯೇನಲ್ಲ.....

ಲಕ್ಕಮ್ಮ ಹೈರಾಣಾಗಿದ್ದಳು. ತಲೆಯ ಮೇಲಿನ ಬುಟ್ಟಿ ಭಾರವಾಗಿತ್ತು. ಅದು ಒಂದು ದಿನದ ಮಾತಾಗಿರಲಿಲ್ಲ. ಪ್ರತಿ ದಿನ ತರಕಾರಿ ತಗೊಂಡು ಹೋಗಿ ಪ್ಯಾಟಿ ಎಲ್ಲ ತಿರುಗಿ ಮಾರಾಟ ಮಾಡಿ, ಹೊರಳಿ ಬರುವಾಗ ಮನೆಗೆ ಬೇಕಾಗಿದ್ದು ಏನಿಲ್ಲ ಏನು ತರುತ್ತಿದ್ದಳು. ಕೆಲವೊಮ್ಮೆ ಖಾಲಿ ಬರಲಾರದೆ ದಾರಿಯಲ್ಲಿ ಬಿದ್ದ ಕಾರಕುಳ್ಳು ತರುತ್ತಿದ್ದಳು. ಹಸಿ ಕಟ್ಟಿಗೆ ಉರಿಯದೆ ಅವ್ವನ ಕಣ್ಣುಗಳು ಒಲೆ ಊದಿ ಊದಿ ಉರಿಯುತ್ತಿದ್ದವು. ಮುಳ್ಳಿನ ಕಟ್ಟಿಗೆ ಒಣಗಿದ್ದಾಗಿದ್ದರೆ ಚುಚ್ಚುವ ಮುಳ್ಳುಗಳು ಅಷ್ಟೇ ಹರಿತವಾಗಿರುತ್ತಿದ್ದವು. ಹೀಗಾಗಿ ಸಾಧ್ಯವಾದಷ್ಟು, ದಾರಿಯಲ್ಲಿ ಅನಾಯಸವಾಗಿ ಸಿಗುವ ಒಣಗಿದ್ದ ಕಾರಕುಳ್ಳು ತರುತ್ತಿದ್ದಳು.

ನಡು ಅಂಗಳದಲ್ಲಿ ಬುಟ್ಟಿ ಇಟ್ಟು, ಅಲ್ಲೇ ಡ್ರಮ್ಮಿನಲ್ಲಿ ತುಂಬಿಟ್ಟಿದ್ದ ನೀರನ್ನು ಬೆಳ್ಳನೆ ಒಡಕು ತಂಬಿಗೆಯಿಂದ ತಗೊಂಡು ಮುಖ ಕೈ ಕಾಲನ್ನು ಗಲಗಲ ತೊಳೆದುಕೊಂಡಳು. ಸೀರೆಯ ಸೆರಗಿನಿಂದ ಮುಖವನ್ನು ಗಟ್ಟಿಯಾಗಿ ಒರೆಸಿಕೊಂಡು ಒಣಗಿದ ಭಾಗದಿಂದ ಕೈಗಳನ್ನು ತಿಕ್ಕಿಕೊಂಡು ಪಡಸಾಲೆಯ ನಡುಗಂಬಕ್ಕೆ ಬೆನ್ನು ಕೊಟ್ಟು ಉಸ್ಸೆಂದು ಕೂತಳು. ತಂಗಿಯ ಮಕ್ಕಳು ಕೋಳಿಗಳೊಂದಿಗೆ ಆಟವಾಡುತ್ತಿದ್ದವು. ಸೋದರ ಸಂಬಂಧಿ ರೇಣುಕ ರೊಟ್ಟಿ ಬಡಿಯುತ್ತಿದ್ದಳು. ಅವ್ವ ಬಹಳ ಸಂಭ್ರಮದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದಳು. ಅಪ್ಪ ಮಗಳು ಬರುವ ದಾರಿ ಕಾಯುತ ಕೂತಂತೆ ಕಾಣುತ್ತಿದ್ದ. 'ಕುಡಿಲಾಕ ನೀರ ಕುಡ ರೇಣು' ಅಂತ ರೇಣುಕಾಳನ್ನುದ್ದೇಶಿಸಿ ಕೇಳಿದಳು. ಅವಳು ಹಣೆಯ ಬೆವರು ಸೆರಗಿನ ಚುಂಗಿನಿಂದ ಒರೆಸಿಕೊಳ್ಳುತ ಗ್ಲಾಸನ್ನು

ಹರವಿಯಲ್ಲದ್ದಿ ನೀರು ಕೊಟ್ಟು 'ಯಕ್ಕಾ ಚಾ ಕಾಸ್ಲೇನು?' ಅಂತ ಕೇಳಿದಳು. 'ಬ್ಯಾಡ ಬಿಡು. ಬರಾಗ ಈರಪ್ಪಣ್ಣನ ಹೋಟಲ್ನಾಗ ಕುಡದು ಬಂದಿನಿ.' ಅಂದು '...... ಆ ಕಡಿ ಮನಿ ಯಲ್ಲಪ್ಪ ಬಂದಿನೇನ ಮನಿಗಿ?' ಅಂತ ಕೇಳಿದಳು. ಅಂಗಳದಲ್ಲಿ ಒಂದು ಕಾಲು ಚಾಚಿಕೊಂಡು ಹಗ್ಗ ಹೊಸೆಯುತ್ತಿದ್ದ ಲಕ್ಕಮ್ಮನ ಅಪ್ಪ ಥಟ್ಟಂತ ಮಾರಿ ಮ್ಯಾಲೆತ್ತಿ ಮಗಳನ್ನು ಒಮ್ಮೆ ಪರೀಕ್ಷಿಸುವಂತೆ ದಿಟ್ಟಿಸಿ ನೋಡಿದನು. ಅವಳು ತನ್ನ ಪಾಡಿಗೆ ತಾನು ನಿರಮ್ಮಳವಾಗಿದ್ದಳು. 'ಅಂವನಿಗಿ ಏನ್ ಕೇಳ್ತಿ...... ದುಮ್ಮನ ಕಾಲ ಬಿಟ್ಟ ಕತ್ತಿ ಹಂಗ ತಿರಗ್ತಾನ. ಮನಿ ಅನ್ನ ಉಂಡು ಇಲ್ಲದ ಭಾನಗಡಿ ಮಾಡಾಂವ.' ಒಮ್ಮೆಲೆ ಅಪ್ಪ ಯಲ್ಲಪ್ಪನ ಬಗ್ಗೆ ಅಸಮಧಾನದಿಂದ ಮಾತಾಡಿದ್ದು ಲಕ್ಕಮ್ಮನಿಗೆ ಸರಿ ಬರಲಿಲ್ಲ. '...... ಯಾಕ? ಅಂವ ಏನ್ ಮಾಡ್ಯಾನ? ಸುಮ್ಮನೆ ಕಾರಣಿಲ್ದೆ ಬಯ್ಯಬಾರದು' ಅಂದು ರೇಣುಕಾಳ ಸಣ್ಣ ಮಗಳು ತನಗೇನಾರಾ ತಿಲ್ಲಾಕ ಬೇಕು ಅಂತ ದುಂಬಾಲು ಬಿದ್ದಿರುವುದರಿಂದ, ಟೊಂಕಕ್ಕೆ ಸಿಕ್ಕಿಸಿಕೊಂಡ ಚಂಚಿಯಿಂದ ಎರಡು ರೂಪಾಯಿಯ ನಂದಿ ಕೊಟ್ಟು 'ಹೋಗು, ಬಿಸ್ಕಿಟ್ ತಂದು ಅಣ್ಣಗನೂ ಕೊಡು ಮತ್ತ ನೀನೂ ತಿನ್ನು. ಮಾರಿ ನೋಡು ಹ್ಯಾಂಗ ಮಾಡ್ಕೊಂಡಿದಿ... ಹೊಲಸ, ಹಳ ಹೊಲಸ' ಅಂತ ಬಯ್ಯುತ, ಮುಗಿನಲ್ಲಿ ಘಳ ಘಳ ಹೊಳೆಯುತ ಮೇಲೆ ಕೆಳಗೆ ಜಿಗ್ ಜಾಗ್ ಆಡುತ್ತಿರುವ ಸಿಂಬಳವನ್ನು ತೆಗೆದು ದೂರದಲ್ಲಿ ಎಸೆದಳು. ಮಗಳು ಹಿಂಗೆ ಇದ್ದಕ್ಕಿದ್ದಂಗೆ ಯಲ್ಲಪ್ಪನ ಪಕ್ಷ ವಹಿಸಿ ಮಾತಾಡುವುದು ಏನೇನೂ ಇಷ್ಟ ಇಲ್ಲವೆಂಬಂತೆ ಹಣೆಗೆ ಗಂಟಿಟ್ಟು 'ಭಾನಗಡಿ ಅಲ್ಲದರ ಮುತ್ತೇನದಾ? ಈ ಊರ ಹೋಟಲ್ನಾಗ ನಾವು ಬಂದಾನಾ ಹೋಗಿ ಎಲ್ಲರ ಸರಿ ಕುಂತು ಚಾ ಕುಡದಿವೇನು? ದೊಡ್ಡವರು ಸಣ್ಣವರು ಅಂತ ಯಾಕ ಮಾಡ್ಯಾರ ಹಿರೇರು? ಇಂವ ನಾಕ್ ಪಡ್ಡ್ಯಾ ಹಾರಗೋಳಿಗಿ ಕರಕೊಂಡು ಬಂದು, ಹೋಟಲ್ನಾಗ ಮಾಡ್ ಗ್ಲಾಸ ಯಾಕ ಇಟ್ಟರಿ? ಅಂತ ಜಗಡಾ ಮಾಡಿ, ಪೋಲಿಸ್ರಿಗಿ ಕರಕೊಂಡು ಬಂದು, ಹೊಟಲ್ದ ಸಿದ್ದಪ್ಪಣ್ಣನ ಮ್ಯಾಲ ಕೇಸ್ ಮಾಡ್ಯಾನ. ಊರಂದಲ್ಲಿ ಒಬ್ಬರ ಮಾರಿ ಒಬ್ಬರು ನೋಡಬೇಕಾಯ್ತುದ. ಈಗ ಊರಾಗ ಬೆಂಕಿ ಹಚ್ಚಿ ಇಟ್ಟಾನ.' ಅಂತ ಹೇಳುತ ಹಗ್ಗದ ಸಿಂದಿಯನ್ನು ಕಾಲಿನ ಹೆಬ್ಬೆರಳಿನಿಂದ ಬಿಡಿಸಿ ಸುರುಳಿ ಸುತ್ತತೊಡಗಿದನು. 'ಹುಂ..... ದುನಿಯಾ ಎಲ್ಲ ಬದಲಾಗಲತದ. ಮತ್ತ ಹೋಟಲ್ದವರ್ರೂ ಬದಲಾಗಬೇಕಿಲ್ಲ?' ಲಕ್ಕಮ್ಮ ನೋಯುತ್ತಿರುವ ಕಾಲನ್ನು ತನ್ನ ಕೈಯಿಂದಲೇ ಒತ್ತಿಕೊಳ್ಳತೊಡಗಿದಳು. ಅಷ್ಟರಲ್ಲಿ ಅವ್ವ ಒಳಖೋಲಿಯಿಂದ ಹಸಿರುಬಣ್ಣದ ಸೀರೆ ತಂದು ಲಕ್ಕಮ್ಮನ ಮುಂದೆ ಹಿಡಿದಳು. ಇವಳು ಮಾರಿ ಮೇಲೆತ್ತಿ 'ಯಾಯಿಗಿ ಸೀರಿ ಏರಸಲಾಕ ತಂದಿದಿ ಏನು?' ಅಂತ ಕೇಳಿದಳು. ಅವ್ವ ಬಲು ಸಂಭ್ರಮದಿಂದ ಲಕ್ಕಮ್ಮನ ಮುಂದೆ ಕುಂತು ಸೀರೆಯನ್ನು ಬಿಡಿಸಿ ತೋರಿಸುತ..... 'ಇಲ್ಲ. ನಿನ್ನ ಸಲ್ಯಾಕ. ನೋಡು ಚಲೊ ಅದಾ ಅಲಾ?' ಕೇಳಿದಳು. 'ಮುಂಜಾನಿ ನೀ ಹೋದ ಮ್ಯಾಲ ಬಸರಾಜಪ್ಪ ಬಂದಿದ್ದ, ಇವತ್ತ ಚೆಂಜೆಗಿ ಮನಿಗಿ ಬರ್ತಿನಿ ಅಂದಾನ. ನಿಂದ ನಸೀಬ್ ತೆರದದ. ಏಳು ಉಂಡು ಸೀರಿ ಉಟ್ಕೊ..... ಮತ್ತ ಮಸಕ ಆದರ ಉಂಬಾದ ತಿಂಬಾದು ಆಗಲ್ಲ...' ಅಂತ ಅವ್ವ ಸುತಿ ಹಚ್ಚಿ ಹೇಳುತ್ತಲೇ ಇದ್ದಳು. ಲಕ್ಕಮ್ಮ ಥಟ್ಟಂತ ಗಪ್ಪಾದಳು. ಬೆರಗಾದಳು. ಒಂದು ಕ್ಷಣ ಮನಸಿನ ಮೂಲೆಯಲ್ಲಿ ಉಲ್ಲಾಸವೊಂದು ಮೊರೆ ಬಿಚ್ಚಿದಂತಾಯಿತು. ಬೆನ್ನ ಹಿಂದೆಯೇ ನೆನಪುಗಳು ಸಾಲಾಗಿ ನಿಂತು ಕೋಟೆ ಕಟ್ಟತೊಡಗಿ, ಅದರ ನೆರಳಲ್ಲಿ ಕತ್ತಲು ಹೆಡೆ ಬಿಚ್ಚತೊಡಗಿತು. ಯಾಕೊ ಒಳಗಿನ ಮನಸು ವಿಲ ವಿಲ ಒದ್ದಾಡತೊಡಗಿತು. ಯಲ್ಲಪ್ಪನ ಬಗ್ಗೆ ಅಪ್ಪ ತೋರಿದ ಅಸಮಧಾನಕ್ಕೆ ಕಾರಣ ಇದೇ ಆಗಿರಬೇಕೆನಿಸಿತು. ಅದೇಕೊ ಮೊದಲ ಬಾರಿಗೆ ಅಪ್ಪನ ಬಗ್ಗೆ ವಿಚಿತ್ರ ಹೇಸಿಗೆ ಬರತೊಡಗಿತು. ಯಲ್ಲಪ್ಪನಾದರೇನು, ಬಸರಾಜಪ್ಪನಾದರೇನು, ಯಾಂವನಾದರೇನು? ಯಾವತ್ತು ನೆಲಸಿಡಿಯಾಡಿಸಿ ತಾಯಿ ಪಾದಕ್ಕೆ ಹಾಕಿದರೋ..... ಅಂದಿನಲಿಂದ ಇವರ ನಿರೀಕ್ಷೆ ಒಂದೇ ಆಗಿತ್ತಲ್ಲವೇ? ಅದು, ತಾನು ಇವರಿಗೊಂದು ಹಾಲು ಕರೆವ ಹೈನವಾಗಬೇಕು ಅಂತ. ಅವಳ ಅಂತರಂಗವೊಂದು ತನ್ನ ತಾನು ಬಗೆಯುತ ಚಡಪಡಿಸತೊಡಗಿತು. ಯಾವುದೋ ಒಂದು ವಿಚಿತ್ರ ಸಂಘರ್ಷ ಅವಳ ಆಲೋಚನೆಯೂ ಮೀರಿ ಮೆಲ್ಲಗೆ ದಾಪುಗಾಲಿಡುತಿತ್ತು. ಮೆದುಳು ಒಮ್ಮೆಲೆ ಭಾರವಾಗತೊಡಗಿ ಅವಳು ಕೂತಲ್ಲಿಂದ ಎದ್ದಳು ಮತ್ತು ನೇರವಾಗಿ ಒಳಖೋಲಿಗೆ ಹೋಗಿ ಬಾಗಿಲಿಕ್ಕಿಕೊಂಡಳು. ಲಕ್ಕಮ್ಮನ ಈ ವರ್ತನೆ ಮನೆಯವರನ್ನು ದಿಗಿಲಿಗೆ ಕೆಡವಿತು. ಮತ್ತೆ ಬಾಗಿಲು ತೆಗೆದವಳೇ, 'ನಂಗ ತಲಿ ನೊಯ್‌ಸಲತದ. ಜರಾ ಮಕ್ಕೊತ್ತಿನಿ' ಅಂದು ಒಳಸರಿದಳು. ಅವಳವ್ವ ಯಾಕ ಏನು ಅನ್ನುವುದರಲ್ಲೇ ಅಂಗಳದಲ್ಲಿ ಕೂತಿದ್ದ ಅವಳ ಅಪ್ಪ, 'ಇರಲಿ ಬಿಡು. ಜರಾ ಮಕ್ಕೊಂಡು ಏಳ್ಲಿ.' ಎಂದು ಹೇಳಿ ಚಿಂತೆಗೆ ಬಿದ್ದನು.

ಮುಂಜಾನೆ ಮನೆಗೆ ಬಂದಿದ್ದ ಬಸವರಾಜಪ್ಪ ಬಲು ಕಾಳಜಿಲಿಂದ ಮಾತಾಡಿದ್ದನು. ಹಾಗೆ ನೋಡಿದರೆ ಯಾವತ್ತೋ ಈ ಮನೆಗೆ ಬರಬೇಕಾದವನು. ಆದರೆ ಬಸವರಾಜಪ್ಪ ವರ್ಷಗಟ್ಟಲೆ ತಡ ಮಾಡಿ ಬಂದಿದ್ದ. ಅಂತೂ ಬಂದನಲ್ಲ..... ಸುಮ್ಮನೇನಲ್ಲ..... ದೊಡ್ಡ ಜಾತಿ. ದುಡ್ಡಿದ್ದ ಮನುಷ್ಯ. ಅಷ್ಟಕ್ಕೂ ಲಕ್ಕಮ್ಮನನ್ನು ಬಹುವಾಗಿ ಮೆಚ್ಚಿಕೊಂಡವನು. ನೋಡಿ ಮೆಚ್ಚಿಕೊಂಡ ಕೂಡಲೇ ಈ ಮನೆಗೆ ಖರ್ಚು ಮಾಡಿದ್ದು ಕಮ್ಮಿಯೇನಲ್ಲ..... ಅದೇನೋ ತನ್ನದೇ ಕಾರಣಕ್ಕಾಗಿ ಸ್ವಲ್ಪ ದಿನ ಈ ಕಡಿಗೆ ಬರಲಿಲ್ಲ. ದೊಡ್ಡವರೆಂದರೆ ಮತ್ತೆಲ್ಲ ಸಮಸ್ಯೆಗಳು ಇದ್ದೇ ಇರುತ್ತವಲ್ಲ..... ಎಲ್ಲವನ್ನೂ ನಿಭಾಯಿಸಬೇಕಾಗುತ್ತದೆ. ಬರುವುದು ಬಿಡುವುದು ಅವರ ಮರ್ಜಿ. ಅವರು ಬಂದಾಗ ಸತ್ಕರಿಸಬೇಕಾದದ್ದು ನಮ್ಮ ಕರ್ತವ್ಯ. ಆದರೆ ಮೊದಲೆಲ್ಲ ಎಷ್ಟೊಂದು ಕುತೂಹಲ ಮತ್ತು ಪ್ರೇಮದಿಂದ ಕಾಯುತ್ತಿದ್ದ ಲಕ್ಕಮ್ಮ ಇವತ್ತು ಮಾತ್ರ ವಿಚಿತ್ರವಾಗಿ ವರ್ತಿಸಿದ್ದು, ಯಾಕೊ ಏನೋ ಅನುಮಾನದ ಸೂಚನೆ ಇದು ಅಂತೆಲ್ಲ ಅವಳ ಅಪ್ಪ ಚಿಂತಿಸುತ ಅಂಗಳದ ಬೇವಿನ ಗಿಡದ ಬುಡಕ್ಕೆ ಗೋಣಿಚೀಲ ಹಾಸಿಕೊಂಡು ಹಂಗೆ ಅಡ್ಡಾಗಿದ. ಲಕ್ಕಮ್ಮನ ಅವ್ವ ಸಹ ನಾರಾಜಿನ ಮುಖಭಾವ ಹೊತ್ತು ಗಂಡನ ಪಕ್ಕದಲ್ಲಿ ಕೂತಳು. 'ಇವತ್ತ ಯ್ಯಾನಾಗ್ಯಾದ ಲಕ್ಕಿಗಿ? ಅಕಿಗಿ ದೇವ್ರಿಗಿ ಜಿಡ ಮುಂದ ಬಸರಾಜಪ್ಪ ಲಗ್ನದಂಗ ಖರ್ಚ ಮಾಡಿದ್ದು ನೆಂಪ ಹಾರ್ಯಾಳ. ಈ ಕೇರ್ಯಾಗ ಏಸ್ ಮನ್ಯಾಗ ದೇವ್ರಿಗಿ ಬಿಟ್ಟಿಲ್ಲ.....? ಉಡಿ ತುಂಬಾವ ಈಟ್ ಖರ್ಚು ಮಾಡಿದಂವ ಯಾರೂ ಇಲ್ಲ. ಆ ಕಡಿ ಮನಿ ಶ್ಯಾಣಮ್ಮಗ ಖಾಸಾ ಅಕಿನ ಸ್ವಾದರಮಾಂವನೇ ಉಡಿ ತುಂಬಿದನಲ್ಲ.. ಅದರ ಖರ್ಚಾ ಅಂವ ಕುಡಲೇ ಇಲ್ಲ. ಖುದ್ದ ಅಕಿನ ಅವ್ವ ಅಪ್ಪ ಮಾಡಿದ್ರು. ಅಂವ ಪುಗಸಟ್ಟೆ ಬಂದ ಹೋದ. ಮತ್ತ ಬಸರಾಜಪ್ಪ ದೊಡ್ಡ ಮನಸ್ಯಾ. ಲಕ್ಕಿಗಿ ಖರೆನೇ ಇಷ್ಟ ಪಡ್ತಾನ. ಅಂವ ಮನಸ ಮಾಡಿದ್ರ ಲಕ್ಕಿಗಿ ಕಡಿತನ ನೋಡ್ಕೊಂಡು ಇಟ್ಕೊತಾನ. ದ್ಯಾವ್ರ ಸೇವಾ ...ಡ್ಕೋತಾ ಇದ್ರ ಆಯ್ತುಲ.....? ...ಗನೂ ಒಂದ ಆಸರಿ ಆಗ್ತದ. ...ಗ ನೋಡದುರ ತಾಯಿ ಮಾಪುರಿ ...ಂದ ಉಡಿ ತುಂಬಿಸಿದ್ದ ಅಟೇ ...ತು. ಯಾರ ಕೇಳಿದರ್ರೂ ...ಲಾರದೇ ಕುಂತಾಳ. ಮನಸ್ನಾಗ ...' ಇಟ್ಕೊಂಡಾಳೋ ಏನೋ. ...ರಿಗ್ಗೊತ್ತು? ಇಕಿ ಹಿಂಗೆ ಜಿದ್ದ ...ಡದೂರ ಕಡಿತನ ಕಷ್ಟ ತಪ್ಪಿಲ್ಲ..... ...ವ್ರ ಹೆಣಮಗಳು ಅಕಿಗಿ ಏನ್ ಐಬಿಲ್ಲ. ...ಡ್ರೇ ಹಾರಿ ಬಿದ್ರ ಹ್ಯಾಂಗ ಆಯ್ತುದ?' ಅಪ್ಪ ಸಿಟ್ಟಿನಿಂದ ಚಿಂತೆಯಿಂದ ವಟಗುಟ್ಟತ್ತಲೇ ಇದ್ದ. ಅವ್ವ ಮಾತ್ರ ಒಂದೂ ಮಾತಾಡದೇ ಒಳ ಒಳಗೆ ಏನೇನೋ ವಿಚಾರದಲ್ಲಿ ಮುಳುಗಿದ್ದಂತಿದ್ದಳು. 'ಯಾಕ ಒಂದೂ ಮಾತಾಡವಲ್ಲಿ? ನಿನ ಮಗಳಿಗಿ ಹೇಳಬಾರದ?' ಎಂದು ಹೆಂಡತಿಗಿ ದಬಾಯಿಸಿದನು. 'ನಿ ಜರಾ ಸುಮ್ಮ ಇರು. ಮಗಳ ಮನಸನೂ ನೋಡಬೇಕಿಲ್ಲ.....?' ಎಂದು ರೇಗಿ 'ರೇಣು, ಒಲಿ ಮ್ಯಾಲಿನ ಮಟನ್ ಕುದ್ದಾದ ಇಲ್ಲ ನೋಡು' ಅಂತ ಕೇಳಿದಳು.

ಇತ್ತ ಲಕ್ಕಮ್ಮ ಒಳಗಿನ ಖೋಲಿಯ ಬಾಗಿಲು ಮುಚ್ಚಿಕೊಂಡು ಹೊರಸಿನ ಮೇಲೆ ಕುಂತವಳು ನಾನಾ ಚಿಂತೆಯಲ್ಲಿ ಒದ್ದಾಡತೊಡಗಿದಳು. ಅವಳ ಕಣ್ಣ ಮುಂದೆ, ನಿನ್ನೆ ಮೊನ್ನೆ ನಡೆದಂತೆ ನೆನಪುಗಳು ಕರಿ ಕಡಿದುಕೊಂಡು ಹರಿದಾಡತೊಡಗಿದವು. ಕತ್ತಲನ್ನು ಸೀಳಿ ದಾವಿಸುವ ಘಟನೆಗಳು..... ಅವುಗಳ ನಡುವಿಗೆ ತಾನು, ತನ್ನೊಳಗೆ ಕಂಡ ಕನಸುಗಳು.. ನಡೆವ ಘಟನೆಗಳೆಲ್ಲ ಸುಮ್ಮನೆ ಮೇಲ್ಪದರಿನಲ್ಲಿ ಚಲಿಸುವ ಮೋಡಗಳಂತೆ..... ಆದರೆ ಅವುಗಳ ಒಡಲಲ್ಲಿ ತುಂಬಿಕೊಂಡ ಮಳೆಯ ಆಗಮನಕ್ಕೆ, ಅದರ ಹೂವಿನಂಥ ಸ್ಪರ್ಷಕ್ಕೆ, ಮುದ ಕೊಡುವ ತಂಪಿಗೆ, ಎಣೆಯಿಲ್ಲದಂತೆ ಸುರಿವ ಸುಖಕ್ಕೆ, ನೆಲ ಮುಗಿಲನು ಏಕಗೊಳಿಸುವ ಚಮತ್ಕಾರಕ್ಕೆ, ನೆಲದ ಮೈದಡವಿ ಹರಿವ



ಜಲಲಲಕ್ಕ ಮೈಯೊಡ್ಡುವ ಮನಸೊಂದೇ ತನ್ನೊಳಗೆ ಜಾಗೃತವಾಗಿತ್ತಲ್ಲವೇ? ಅಂಥ ಭಾವವೊಂದು ಆಗ ತಾನೇ ಅರಳಿದ ಮೊಗ್ಗಿನಂತಿತ್ತು. ಎಲ್ಲವೂ ನವನವೀನ. ಹೊಸ ಅನುಭವಕ್ಕೆ ಹೃದಯ ತನ್ನ ಹೆಬ್ಬಾಗಿಲಿಗೆ ತೋರಣ ಕಟ್ಟ ಕಾದಿತ್ತು. ಅದೊಂದು ವ್ಯಕ್ತಿಸಲಾಗದ ಆನಂದದ ಪರಮೋಚ್ಛ ಸ್ಥಿತಿಯಾಗಿತ್ತು.

ಲಕ್ಕಮ್ಮ ದೊಡ್ಡವಳಾಗಿ ಬಹಳ ದಿನಗಳೇನಾಗಿರಲಿಲ್ಲ. ಅವ್ವನೊಂದಿಗೆ ಕೂಲಿಗೆ ಹೋಗುತ್ತಿದ್ದಳು. ಅದು ಬಸರಾಜಪ್ಪನ ಹೊಲವೇ ಆಗಿತ್ತು. ಒಂದೆರಡು ಸಾರಿ ಹೊಲಕ್ಕೆ ಬಂದಾಗ ಎಲ್ಲರಿಗೂ ಕೂಲಿ ಕೊಡುವಂತೆ, ಕೆಲಸ ಮುಗಿಸಿ ಹೋಗುವಾಗ ಇವಳಿಗೂ ಕೊಟ್ಟಿದ್ದನು. ಹರೆಯದ ವಯಸ್ಸುಗಳು. ಸಹಜವಾದ ನಾಚಿಕೆಯೊಂದು ಹಣಿಕಿತ್ತು. ಬಸರಾಜಪ್ಪನ ಕಣ್ಣಲ್ಲಿಯೂ ಒಂದು ಮೆಚ್ಚುಗೆ ಬೆಳಕಿನಂತೆ ಹೊಳೆದು ಮಾಯವಾಗಿತ್ತು. ಅಷ್ಟೆ. ಅದಷ್ಟೆ ನಡೆದದ್ದು. ಆದರೆ ಅದು ಮನದ ಮೂಲೆಯಲ್ಲಿ ಕಾಡುವ ಹಿತವಾದ ಕ್ಷಣವಾಗಿ ಉಳಿಯಿತು.

ಮುಂದೇನಾಯ್ತು? ಅವಳಿಗೂ ಗೊತ್ತಿರಲಿಲ್ಲ..... ಅವ್ವ ತಾನು ಹುಟ್ಟುವ ಮೊದಲು, ಹಡಲಗಿಯ ಯಲ್ಲಮ್ಮದೇವಿಗೆ ಉಡಿ ತುಂಬಿಸಿ, ಹುಟ್ಟಿ ಹುಟ್ಟಿ ದೇವಿ ಪಾದ ಸೇರಿದ ಮಕ್ಕಳಲ್ಲಿ ಒಂದಾದರೂ ಉಳಿಸಿದರೆ ಆ ಕೂಸು ಹೆಣ್ಣಾಗಿದ್ದರೆ ನಿನ್ನ ಸೇವೆಗೆ ಬಿಡುತಿನಿ. ನೀ ನನ್ನ ಒಡಲ ತುಂಬು. ನಾ ನಿನ್ನ ಉಡಿ ತುಂಬತಿನಿ ಅಂತ ಬೇಡಿಕೊಂಡಳಂತೆ. ಆನಂತರ ಹುಟ್ಟಿದ ಕೂಸೇ ಲಕ್ಕಮ್ಮ. ವಯಸ್ಸು ತುಂಬಿದ ಮೇಲೆ ಮದುವೆ ಮಾಡಿಕೊಳ್ಳುವವರು ಮುಂದೆ ಬರುವವರೇ. ಹರಕೆ ತೀರಿಸಲೇಬೇಕಲ್ಲವೇ? ಅದೊಂದು ದಿನ ನಿಗದಿ ಮಾಡಿಯೇಬಿಟ್ಟರು. ಉಗಾದಿಯಾದ ಮೇಲೆ ಬರುವ ಅಕ್ತಾದಿ ಮುಗಿದು ಬಾದಮಿ ಹುಣ್ಣಿಮೆಯಾದ ಮೂರು ದಿನಕ್ಕೆ ನೆಲಸಿಡಿಯಾಡಿ ಆನಂತರ ಉಡಿ ತುಂಬುವ ಮತ್ತು ಅದಕ್ಕೂ ಮೊದಲು ಪಟ್ಟಕ್ಕೆ ಹಾಕುವುದು ಇತ್ಯಾದಿ ಎಲ್ಲವೂ ನಡೆಸಲು ತಯಾರಿಗಳು ಆರಂಭಗೊಂಡವು.

ಸೇರಿಸಿ ಇನ್ನೊಂದು ಕಡೆಯಿಂದ ಹೊರಗೆಳೆಯುವಾಗ ನೋವು ಅರಿವಿಗೆ ಬರಲೂ ಬಿಡದಷ್ಟು ಭಕ್ತಾದಿಗಳ ಜೈಕಾರ, ಉಧೋ ಉಧೋ ಮುಗಿಲು ಮುಟ್ಟುತ್ತಿತ್ತು. ಆದರೆ ಒಳಗೆ ನೋವೊಂದು ಸಣ್ಣಗೆ ಹರಿದಾಡುವಾಗಲೇ ಆವೇಶದಲ್ಲಿ ದೇವಿಯ ಪಾದ ಮುಟ್ಟಲು ಹೊರಟಿದ್ದಾಯ್ತು. ಹೊರಳಿ ಬಂದ ಮೇಲೆ ಕೊಂಡಿ ತೆಗೆಯಲು ನಿಂತವರು ಎಳೆದು ತೆಗೆದದ್ದೇ ತಡ ಇನ್ನೊಬ್ಬ ಪೂಜಾರಿ ಅರಶಿನ ಸವರಿದನು. ಫತ್ತರಗಿ ಭಾಗಮ್ಮನಿಗಾದರೆ ಕೊಂಡಿ ಚುಚ್ಚಿಸಿಕೊಂಡು ಉಡಿಯಲ್ಲಿನ ಅಳ್ಳು ಹೂವು ತೂರಾಡುತ, ಒಂಟಿ ಹಗ್ಗದಿಂದ ಮೇಲು ಮೇಲಕ್ಕೆ ನೇತಾಡುತ್ತ ಹೋಗಬೇಕು. ಆದರೆ ನೆಲಸಿಡಿ ಮಾತ್ರ ನೆಲದ ಮೇಲಿಂದಲೇ ನಡೆಯುತ ಓಡುತ ದೇವಿ ಪಾದ ಮುಟ್ಟಬೇಕು. ಅಂಥ ನೆಲಸಿಡಿಯಾಡುವುದು ಲಕ್ಕಮ್ಮನ ಪಾಲಿಗೆ ಬಂದದ್ದಾಗಿತ್ತು. ಅವ್ವನ ಹರಕೆ ಈಡೇರಿಸಲೇಬೇಕಿತ್ತು. ಒಂದು ನಮೂನೆ ಕುತೂಹಲ ಹಿಂಜರಿಕೆ ಏನೆಲ್ಲ ಅನಿಸಿದರೂ ಮನೆಯವರು ಹೇಳಿದಂತೆ ಕೇಳುತ ಎಲ್ಲವನ್ನೂ ನಡೆಸಿಕೊಟ್ಟಳು.

ಮುಂದಿನ ಶುಕ್ರವಾರ ಪಟ್ಟಕ್ಕೆ ಹಾಕುವುದು. ಲಕ್ಕಮ್ಮನಿಗೆ ಪಟ್ಟಕ್ಕೆ ಹೋಗಲು ನಿರಾಕರಿಸಿದರೆ ದೇವಿ ಸಿಟ್ಟಾಗುವಳು ಎಂಬುದು ಗೊತ್ತಿತ್ತು. ತಮ್ಮದೇ ಗಲ್ಲಿಯಲ್ಲಿ ಹೊತ್ತ ಹರಕೆ ನಡೆಸಿಕೊಡದಿದ್ದರೆ ದೇವಿಯ ಶಾಪಕ್ಕೆ ಬಲಿಯಾದವರನ್ನು ನೋಡಿದ್ದಳು. ಆದ್ದರಿಂದ ಪಟ್ಟದ ತಯಾರಿಗೆ ತಾನೂ ಸಿದ್ಧವಾಗಿದ್ದಳು.

ಪಟ್ಟಕ್ಕೆ ಹಾಕುವುದು ಮಾಡಲೇಬೇಕಾದ ಸಂಭ್ರಮದ ಕಾರ್ಯವೆಂಬಂತೆ ಎಲ್ಲ ತಯಾರಿಗಳೂ ನಡೆದಿದ್ದವು. ಪಟ್ಟಕ್ಕೆ ಬಿದ್ದವರು ಮದುವೆಯಾಗುವಂತಿಲ್ಲ ಎಂಬುದು ಅವಳಿಗೆ ಹೆಚ್ಚು ಚಿಂತೆಯ ವಿಷಯವಾಗಿತ್ತು. ಆದರೆ ಸನ್ಯಾಸಿಯೂ ಆಗಬೇಕೆಂದಿಲ್ಲ. ಕಡಿಮನೆಯ ಕಸ್ತೂರೆವ್ವ ದೇವದಾಸಿ ಆಗಿಯೂ ಒಬ್ಬನ ಜೊತೆ ಮಾತ್ರ ಸಂಸಾರ ಮಾಡುತ್ತಿರುವುದು ನೆನೆದು ಅವಳಿಗೆ ಸಮಾಧಾನ ಅನಿಸುತು. ತಮ್ಮದೇ ಸಂಬಂಧಿ ನೀಲವ್ವ

ಏನೋ ವಿಜಯ ಸಾಧಿಸಿದಂತೆ ಮಾತಾಡತೊಡಗಿದ. 'ಏಯ್ ಬಾ ಇಲ್ಲಿ.....' ಲಕ್ಕಮ್ಮನ ಅವ್ವ 'ಯಾಕ ಇಷ್ಟ ಜಾಸ್ತಿ ಕುಡದು ಬಂದಿದಿ? ಯಾರು ಪುಗಸಟ್ಟೆ ಕುಡಸ್ಯಾರ?' ಎಂದು ದಬಾಯಿಸುತ್ತಲೇ ಪಡಸಾಲಿಗೆ ಬಂದಳು. 'ನಮ್ಮ ಲಕ್ಕಿ ಹಣಿಬಾರ ಚಲೊ ಅದ. ಪಟ್ಟದ ದಿನ ಉಡಿ ತುಂಬಲಾಕ ನಮ್ ಬಸರಾಜಪ್ಪ ಧೊರಿ ತಯಾರ ಆಗ್ಯಾರ.....' ಹೇಳಿ ಕಿಸೆಯಿಂದ ನೂರರ ನೋಟುಗಳನ್ನು ತೆಗೆದು ತೋರಿಸುತ 'ಇಕಾ ಖರ್ಚಿನ ಸಲ್ಯಾಕ ಈಗೇ ರೊಕ್ಕಾನೂ ಕೊಟ್ಟಾರ. ಆದ್ರ ಒಂದ ಕಂಡಿಷನ್ ಹಾಕ್ಯಾರ.....' ಅಂದು ತೊದಲುತ ಸ್ವಲ್ಪ ತಡೆದ, 'ಏನಂದ್ರ, ಪಟ್ಟಕ್ಕ ಹಾಕಾ ಸುದ್ದಿ ಬಕ್ಕೋಳು ಪ್ರಚಾರ ಮಾಡಬಾರದು ಅಂತ' ಅವನು ಮಾತು ಮುಗಿಸಿರಲಿಲ್ಲ, 'ಆಯ್ತು ಅವ್ರು ಹ್ಯಾಂಗ ಹೇಳ್ತಾರ ಹಂ ಮಾಡಾರಿ' ಅಂದಳು. ಬಸರಾಜಪ್ಪನಂಥಂವ ತಮ್ಮ ಮಗಳಿಗೆ ಉಡಿ ತುಂಬುವನು ಎಂಬುದೇ ನಂಬಲಿಕ್ಕೆ ಸಾಧ್ಯವಿಲ್ಲದ ಸಂಗತಿಯಾಗಿತ್ತು. ಅಂಥಾದರಲ್ಲಿ ಅವನ ಷರತ್ತು ಏನಿದ್ದರೂ ಪರಿಪಾಲಿಸಲು ತುದಿಗಾಲ ಮೇಲೆ ನಿಲ್ಲುವಂಗಾಯ್ತು. ಅವರ ಹೊಲದ ಅನ್ನ ತಿಂದು ಬೆಳೆದ ದೇಹ ಅವರಿಗೆ ಒಪ್ಪಿಸುವುದೆಂದರೆ ಅದೊಂದು ಪುಣ್ಯ ಮಾಡಿದಂತೆಯೇ. ಯಲ್ಲಮ್ಮತಾಯಿ ದೊಡ್ಡಾಕಿ ಎಂದು ಬಗೆದರು. ಬಸರಾಜಪ್ಪ ಕೊಟ್ಟ ರೊಕ್ಕದಲ್ಲಿ ಮಾಡಿದ ಸಾಲವೂ ಸ್ವಲ್ಪ ತೀರಿಸಬಹುದು ಅಂತ ಅವ್ವನಿಗೆ ಅನಿಸಿತು.

ಈ ಸುದ್ದಿಯಂತೂ ಲಕ್ಕಮ್ಮನಿಗೆ ತನ್ನ ಕಿವಿಗಳನ್ನೇ ಅನುಮಾನಿಸುವಂತಾಗಿತ್ತು. ಅದು ಯಾವುದೋ ಸಂದರ್ಭದಲ್ಲಿ ಪ್ರಜ್ಞೆಗೂ ಬರುವ ಮೊದಲು ಒಲವಿನ ಕುಡಿಯೊಂದು ಕಣ್ಣು ಬಿಟ್ಟಿದ್ದು ಸಹಜವೇ ಆಗಿತ್ತಾದರು ಆ ಹೊತ್ತಲ್ಲಿ ಬಸರಾಜಪ್ಪ ಎಂಬ ಯುವಕ ತನಗಿಂತಲೂ ಜಾಸ್ತಿಯೇ ವಯಸ್ಸಿನವನಾದರೂ ಎಲ್ಲ ಅಂತಸ್ತುಗಳ ಗಡಿ ದಾಟಿ ಮನಸಿನ ಮೂಲೆಯಲ್ಲಿ ದಾಖಲಾಗಿಬಿಟ್ಟಿದ್ದ. ಮದುವೆಯನ್ನುವುದು ಅಂಥವರ ಜೊತೆ ಕಲ್ಪಿಸಿಕೊಳ್ಳುವುದೂ ಅಸಾಧ್ಯವಾದದ್ದೇ ಆಗಿತ್ತು. ಮತ್ತು

ಬಸರಾಜಪ್ಪ ಎಷ್ಟು ಅವಸರದಲ್ಲಿ ಬಂದಿದ್ದನೋ ಅಷ್ಟೆ ಅವಸರದಲ್ಲಿ ತಾನು ತಂದ ಗಾಡಿ ಹತ್ತಿ ಹೊರಟೇ ಬಿಟ್ಟನು. ಹೊರಡುವಾಗ ಇವಳೊಂದಿಗೆ ಮಾಡಿಸಿಕೊಂಡ ಹೊಸ ಬಟ್ಟೆಯನ್ನು ಬಿಚ್ಚಿಟ್ಟು, ಹಣೆಯ ಕುಂಕುಮ ತೆಗೆದು ಫಟಾಫಟ್ಟೆಂದು ಹೊರಟೇಬಿಟ್ಟನು.

ತಣ್ಣೀರಲ್ಲಿ ಮಿಂದೆದ್ದು ಶುದ್ಧಳಾಗಿ, ಹಸಿಬಟ್ಟೆಯಲ್ಲಿಯೇ ಬೇವಿನ ತಪ್ಪಲು ಮುಡಿದು, ಬಾಯಲ್ಲಿ ನಿಂಬೆ ಹಿಡಿದು, ಹಣೆಗೆ ದೇವಿಯ ಭಂಡಾರ ಬಳಿದು, ತಲೆತುಂಬ ದಂಡಿ, ತುಂಬಿದಉಡಿ ಉಧೋ ಉಧೋ ಎಂದು ಭಕ್ತರು–ಬಳಗದೊಂದಿಗೆ ಯಲ್ಲಮ್ಮದೇವಿಯ ಗುಡಿಯ ಪ್ರಾಂಗಣಕ್ಕೆ ಬರುವಾಗ ಪೂಜಾರಿಗಳು ಬೆನ್ನಿಗೆ ಚುಚ್ಚುವ ಚೂಪಾದ ಕೊಂಡಿಗಳನ್ನು ಸಿದ್ಧ ಮಾಡಿಕೊಂಡೇ ಇದ್ದರು. ಬೆನ್ನಿನ ಮೇಲೆ ಬಾವು ಬರಿಸಿ ಕೊಂಡಿಗಳನ್ನು ಒಳಗೆ



ಅನೇಕರೊಂದಿಗೆ ಗೆಳೆತನ ಮಾಡಿದ್ದು ಅವಳಿಗೆ ಗೊತ್ತಿದೆ. ದೇವಿಯ ಸೇವೆ ಮಾಡುವವರಿಗೆ ದೈಹಿಕ ಸಂಬಂಧಗಳ ಶ್ಲೀಲ–ಅಶ್ಲೀಲದ ಪ್ರಶ್ನೆಯಿರುವುದಿಲ್ಲ ಎಂಬುದು ಆಗಾಗ ಅವ್ವ ಹೇಳುವುದು ಅವಳ ಮನಸಿನ ಮೂಲೆಯಲ್ಲಿತ್ತು.

ಪಟ್ಟಕ್ಕೆ ಹಾಕುವ ದಿನ ಯಾರಾದರೂ ಒಬ್ಬರು ಉಡಿ ತುಂಬಬೇಕಲ್ಲ..... ಯಾರು ಉಡಿ ತುಂಬುವರು ಗೊತ್ತಿಲ್ಲ? ಅವ್ವ ಹೇಳುತ್ತಿದ್ದಳು, ಅವಳ ದೂರದ ಅಣ್ಣನ ಮಗ ಬೊಂಬಾಯಿಯಲ್ಲಿ ಇರುವನು. ಅವನಾದರೆ ಅಂದಿನ ಎಲ್ಲ ಖರ್ಚು ವೆಚ್ಚ ಕೊಟ್ಟು ಉಡಿ ತುಂಬಬಹುದು ಎಂದು. ಆದರೆ ಅಷ್ಟು ದೂರದಿಂದ ಬರಲು ಸಾಧ್ಯವಾಗುವುದಿಲ್ಲ. ಏನು ಮಾಡುವುದು? ಅಪ್ಪ ಯಾರು ಯಾರಿಗೋ ಕೇಳಿ ನೋಡಿದ. ಅದೊಂದು ದಿನ ರಾತ್ರಿ ಹೊತ್ತಲ್ಲಿ ಮನೆಗೆ ಬರುವಾಗ ಮಸ್ತ್ ಪಾಕೀಟು ಕುಡಿದು ಬಂದು ಬಲು ಉಮೇದಿನಲ್ಲಿ ಮತ್ತು

ದಿಕ್ಕಿನಲ್ಲಿ ಆಲೋಚನೆ ಮಾಡುವಷ್ಟು ಅವಳ ಅರಿವಿನ ಪರಿಧಿಯೂ ವಿಸ್ತರಿಸಿರಲಿಲ್ಲ. ಯಾವ ಪರವ್ಯಾಪ್ತಿಗೂ ನಿಲುಕದೆ ಸುಮ್ಮನೆ ತನ್ನ ಪಾಡಿಗೆ ತಾನು ಚಿಗುರಿದ ಭಾವಗಳ ಲೋಕದಲ್ಲಿ ಬಸರಾಜಪ್ಪ ಹೀರೋ ಆಗಿದ್ದ. ಬಹುಶಃ ಅದೂ ಸಹ ತಾಯಿ ಯಲ್ಲಮ್ಮದೇವಿಯ ಕೃಪೆಯೇ ಆಗಿರಬೇಕೆನಿಸಿತು. ಆದ್ದರಿಂದಲೇ ಪಟ್ಟಕ್ಕೆ ಹಾಕುವ ಪ್ರಸ್ತಾಪವು ಅವಳ ಮುಂದೆ ಬಂದಾಗ ಅವಳು ಮೌನದಿಂದ ಸ್ವಾಗತಿಸಿದ್ದಳು. ಮತ್ತು ಈಗಂತೂ ಬಸರಾಜಪ್ಪನೇ ಉಡಿ ತುಂಬುವನು ಎಂಬುದೊಂದು ಅವಳನ್ನು ಕನಸಿನಲ್ಲಿ ಹಾರಾಡಲು ರೆಕ್ಕೆ ಬಂದಂತಾಗಿತ್ತು. ಅವಳಿಗರಿವಿಲ್ಲದೆ ಅವಳು ಪಟ್ಟಕ್ಕೆ ಹಾಕುವ ದಿನಕ್ಕಾಗಿ ಕಾಯತೊಡಗಿದಳು.

ಅವತ್ತು ಕುರಿಯೊಂದು ಹೂವಿನ ಹಾರದಿಂದ ಸಿಂಗರಿಸಲ್ಪಟ್ಟಿತು. ಐದು ಜನ ಹಿರಿಯ ದೇವದಾಸಿಯ

ಡಾರ, ಅಕ್ಕಿ, ಗೋಧಿ, ಕುಂಕುಮ, ಅರಿಶಿನ ಹೀಗೆ
ದು ದಿನಸುಗಳಿಂದ ರಂಗ ಬರೆದರು. ಸುರುಗಿ
ತ್ತಿದರು. ನಡುವಲ್ಲಿ ಕಳಸ. ಲಕ್ಕಮ್ಮನವ್ನು ರಂಗದಲ್ಲಿ
ಡಿಸಿದರು. ಗೋಧಿ ಹಿಟ್ಟಿನಲ್ಲಿ ಮಾಡಿದ ಸಣ್ಣ
ಬತ್ತು ಬಟ್ಟಲುಗಳಲ್ಲಿ ಬತ್ತಿ ಇಟ್ಟು ಎಣ್ಣೆ ಹಾಕಿದರು.
ಕದ ಹೋಳಿಗೆಯ ಮೇಲೆ ಒಂದು ಗೋಧಿ ಹಿಟ್ಟಿನ
ತಿಯಲ್ಲಿ ಬತ್ತಿಯೊಂದಿಗೆ ಅದನ್ನು ಮರದಲ್ಲಿಟ್ಟರು.
ತ್ತು ಐದೂ ಜನ ದೇವದಾಸಿಯರು ತುಂಬಿದ
ಲವನ್ನು ಲಕ್ಕಮ್ಮನ ತಲೆಯ ಮೇಲಿಟ್ಟು 'ಸಾಕಾ?
ಕಾ?' ಎಂದು ಕೇಳಿದರು. ಹೀಗೆ ಐದು ಸಲ
ಳಿದಾಗಲೂ ಲಕ್ಕಮ್ಮ ಬಲು ಉತ್ಸಾಹದಿಂದ ಬೇಕು
ದಳು. ಅವಳ ದನಿಯಲ್ಲಿ ಉಲ್ಲಾಸವೂ ಇತ್ತು. 'ತಾಯಿ
ರ ಬೇಕಾ? ಬೇಡ?' ಕೇಳಿದರು. ಬೇಕು ಅಂದ
ಡಲೇ ಹಿರಿಯ ಜೋಗತಿಯು ಮೂರು
ಯಮಗಳನ್ನು ಉಸುರಿದಳು. ಸುಳ್ಳು ಹೇಳಬಾರದು.
ತನ ಮಾಡಬಾರದು. ಮತ್ತು ಹೊಲದ ಬೆಳೆ ದನ
ನ್ನುತಿದ್ದರೂ ಹೊಡೆಯಬಾರದು. ಲಕ್ಕಮ್ಮ ಎಲ್ಲಕ್ಕೂ
ಣು ಹಾಕುತಿದ್ದಳು. ನಂದಿಕೋಲಿನಂತೆ. ಒಂದು
ಕಣಕದ ಬಟ್ಟಲನ್ನು ಮತ್ತು ಅದರೊಳಗಿನ
ತ್ತಿಯನ್ನು ನುಂಗಿಸಿದರು. ಅದರ ರುಚಿಯೇನಿತ್ತೋ
ಳ ಗಮನಕ್ಕೆ ಬರಲಿಲ್ಲ. ಐದು ಜನರಲ್ಲಿನ
ಯಳೊಬ್ಬಳು ತಾಳಿ ಸರವನ್ನು ದೇವಿಗೆ
ಟ್ಟಿಸಿದಳು. ಮತ್ತು ದೇವಿಯ ಪ್ರತಿನಿಧಿಯಾಗಿ
ಳಿಯನ್ನು ಲಕ್ಕಮ್ಮನಿಗೆ ಕಟ್ಟಿದರು. ಲಕ್ಕಮ್ಮನ ಮದುವೆ
ದು ಹೋಯಿತು. ಲಕ್ಕಮ್ಮನಿಗೆ ಪುಳಕದ ಘಟನೆ
ಗಿರಲಿಲ್ಲ. ಇನ್ನು ಮುಂದಿನ ಘಟನಾವಳಿಗಳೇ
ಳಿಗೆ ನಿಜವಾದ ಮದುವೆಯಾಗಿತ್ತು.

ರಂಗದಲ್ಲಿರುವಾಗಲೇ ಲಕ್ಕಮ್ಮನಿಗೆ ಹೊಸ ಸೀರೆ
ಡಿಸಲಾಯಿತು. ಮದುಮಗಳಾದಂತೆ. ನಂತರ ರಂಗ
ದರು. ಭಾಸಿಂಗದಷ್ಟೆ ಪ್ರಮುಖವಾದದ್ದು ರಂಗಕ್ಕೆ
ದ ದಾರ. ಸುರಗಿ. ಅದನ್ನು ಕಂಡಲ್ಲಿ
ಯುವುದಿಲ್ಲ. ಕೆರೆಯಲ್ಲಿ ಅಥವ ನದಿಯಲ್ಲಿ ತೇಲಿ
ವರು. ಈಗ ಲಕ್ಕಮ್ಮನನ್ನು ಸುರಗಿಯಿಂದ ಹೊರ
ತಂದರು. ಮತ್ತು ಜಮಖಾನೆ ಹಾಸಿ ಅದರ ಮೇಲೆ
ಮ್ಮನನ್ನು ಕೂಡಿಸಿದರು. ಲಕ್ಕಮ್ಮ ಅಕ್ಷರಶಃ
ದುಮಗಳಂತೆ ನಾಚಿ ನೀರಾದಳು. ಈಗ ಅವರು
ವರು...... ಅವಳು ಕಾದಳು. ಕ್ಷಣಗಳು
ಗವಾದಂತೆ. ಬಸರಾಜಪ್ಪನ ಅಣತಿಯಂತೆ ಹೆಚ್ಚು
ರನ್ನು ಸೇರಿಸಿರಲಿಲ್ಲ. ಮನೆಯವರು ಮತ್ತು ಐದು
ದೇವದಾಸಿಯರು ಮಾತ್ರ. ಪ್ರತಿ ಗಳಿಗೆಯೂ ಒಂದು
ನೆಯ ತಲ್ಲಣದಲ್ಲಿ ಜಾರುತಿತ್ತು. ಅಲ್ಲಿವರೆಗೆ
ರಾಜಪ್ಪ ಅಲ್ಲಿಗೆ ಬಂದಿರಲಿಲ್ಲ. ಮೊದಲು ಅವನು
ದ ಸೀರೆ ಬಂದಿತು. ಅವಳು ಉಟ್ಟಳು. ಅವನ
ವಿಗಾಗಿ ಅವಳು ಕಾದಳು. ಬಲು ಕಾತರದಿಂದ.
ತ್ತು ನೆರೆದವರು ಕಾದರು. ಆ ಕಾಯುವಿಕೆ ತಮಗೆ
ರಕಿದ ಸೌಭಾಗ್ಯವೆಂದು ಭಾವಿಸಿದಂತೆ
ಭ್ರಮಿಸುತ್ತಿದ್ದರು.

ಬಸರಾಜಪ್ಪ ಬಂದನು. ಬಹಳ ಅವಸರದಲ್ಲಿ.
ರೂ ಅವನನ್ನು ಕರೆತಂದು ಲಕ್ಕಮ್ಮನ ಪಕ್ಕದಲ್ಲಿ
ಡಿಸಿದರು. ಈಗ ಲಕ್ಕಮ್ಮನಿಗೆ ಅತಿ ಭಾವುಕತೆಯೊಂದು
ರಿಸಿ ಮೆಲ್ಲಗೆ ಕಾಲುಗಳು ಕಂಪಿಸತೊಡಗಿದವು.

ಹೊಲಕ್ಕೆ ಹೋದಾಗ ಅದು ಯಾವಾಗಲೋ ಅವನ ಕೈ ಸೋಕಿದ್ದು ನೆನಪಾಗಿ ಮೆಲ್ಲಗೆ ಕಣ್ಣೆತ್ತಿ ಅವನೆಡೆಗೆ ನೋಡುವ ಸಾಹಸ ಮಾಡಿದಳು. ಅವಳ ಸೆರಗಿಗೆ ಮತ್ತು ಅವನ ಶಲ್ಯಕ್ಕೆ ಗಂಟು ಹಾಕಿದರು. ಆ ಗಂಟೇ ಅವಳ ಪಾಲಿಗೆ ಮದುವೆಯಾಗಿತ್ತು. ಜೀವನತುಂಬ ಬಿಡಿಸದ ಬಂಧವಾಗಲಿ ಎಂದು ಬಯಸಿದಳು. ತನ್ನದೇ ಒಂದು ಜಿಂದಗಾಣಿಯಾಗುವುದು. ಅದೂ ತಾನು ಬಯಸಿದವನ ಜೊತೆಗೆ..... ಲಕ್ಕಮ್ಮ ತನ್ನ ಆನಂದದ ಸೀಮೆಯಲ್ಲಿ ವಿಹರಿಸುತ್ತಿದ್ದಳು. ಬಸರಾಜಪ್ಪ ಅವಳಿಗೆ ಉಡಿ ತುಂಬಲು ಬೇಕಾದ ಪದಾರ್ಥವೆಲ್ಲ ತರಲು ಹಣ ಕೊಟ್ಟಿದ್ದನು. ಅಡಿಗೆ ಸಿದ್ದವಾಗಿತ್ತು.

ಬಸರಾಜಪ್ಪ ಎಷ್ಟು ಅವಸರದಲ್ಲಿ ಬಂದಿದ್ದನೋ ಅಷ್ಟೆ ಅವಸರದಲ್ಲಿ ತಾನು ತಂದ ಗಾಡಿ ಹತ್ತಿ ಹೊರಟೇಬಿಟ್ಟನು. ಹೊರಡುವಾಗ ಇವಳೊಂದಿಗೆ ಮಾಡಿಸಿಕೊಂಡ ಹೊಸ ಬಟ್ಟೆಯನ್ನು ಬಿಚ್ಚಿಟ್ಟು, ಹಣೆಯ ಕುಂಕುಮ ತೆಗೆದು ಫಟಾಫಟ್ಟೆಂದು ಹೊರಟೇಬಿಟ್ಟನು. ಸುತ್ತಲಿನವರು ಏನೂ ನಡೆದೇ ಇಲ್ಲ ಅನ್ನುವಂತೆ ನಿಶ್ಚಿಂತವಾಗಿದ್ದರು. ಮತ್ತು ಎಲ್ಲರೂ ಊಟಕ್ಕೆ ಕೂತರು. ಲಕ್ಕಮ್ಮನಿಗೆ ಮಾತ್ರ ಉಲ್ಲಾಸದ ಗುಳ್ಳೆಯೊಂದು ಬಿರುಗಾಳಿಗೆ ಒಡೆದು ಹೋದಂತಾಯಿತ್ತು. ಬಸರಾಜಪ್ಪ ಬಂದಿದ್ದು ಮತ್ತು ಅವನು ತನ್ನ ಪಕ್ಕ ಕೂತಿದ್ದು ಎಲ್ಲವೂ ಅನುಭವಕ್ಕೆ ದಕ್ಕುವ ಮುನ್ನವೇ ಕೋಲ್ಮಿಂಚಿನಂತೆ ಸುಳಿದು ಮಾಯವಾದಂತಾಯಿತು. ಇದ್ದಕ್ಕಿದ್ದಂತೆ ಲಕ್ಕಮ್ಮನ ಮನಸ್ಥಿತಿಯು ಕುಸಿಯತೊಡಗಿತು.

ದೂರದ ಬೇವಿನ ಮರದ ಬುಡದಲ್ಲಿ ಸುತ್ತಲೂ ಕೂತು ಊಟ ಮಾಡುತ್ತಿದ್ದರು. ನಿನ್ನೆ ರಾತ್ರಿ ಸಿಂಗಾರಗೊಂಡು ನಿಂತ ಕುರಿಯ ಮಾಂಸವು ದೊಡ್ಡದೊಂದು ಬಗೋಣಿಯಲ್ಲಿ ಪಲ್ಯವಾಗಿತ್ತು. ಅಲ್ಲಲ್ಲಿ ಸಾರಾಯಿ ಬಾಟಲಿಗಳು ಸರಬರಾಜಾಗುತ್ತಿದ್ದವು. ಹಿರಿಯ ದೇವದಾಸಿಯರಲ್ಲಿ ಒಬ್ಬಳ ಹೊರತು ಉಳಿದವರೂ ಎಲ್ಲರೊಂದಿಗೆ ಕಂಪನಿ ಕೊಡುತ್ತಿದ್ದರು. ಲಕ್ಕಮ್ಮನಿಗೆ ಊಟಕ್ಕೆ ಕರೆದರು. ಅವಳಿಗೆ ಯಾವುದೂ ಬೇಡವಾಗಿತ್ತು. ಅವ್ವ ಮತ್ತು ಹಿರಿಯ ದೇವದಾಸಿಯೊಬ್ಬಳು ಜಬರಿ ಮಾಡಿ ಕರೆದೊಯ್ದರು. ಊಟ ಗಂಟಲಲ್ಲಿ ಇಳಿಯಲಿಲ್ಲ. ಕುರಿಯೊಂದು ಮ್ಯಾ ಎಂದಂತಾಗಿ ಅದು ತನ್ನ ಒಡಲೊಳಗಿಂದಲೇ ಆವಾಜು ಬಂದಂತಾಯಿತು. ಅವಳ ಬಾಡಿದ ಮುಖ ಕಂಡು ಒಬ್ಬ ದೇವದಾಸಿಯು, 'ಯಾಕ ಚಿಂತಿ ಮಾಡ್ತಿ? ಉಡಿ ತುಂಬಿದಾಂವ ಹೊಂಟ ಹೋದನಂತ? ಎಲ್ಲಿಗಿ ಹೋಗ್ತಾನಾ? ಎಂದರೆ ಬಂದೇ ಬರ್ತಾನ. ಅಂವ ಇಲ್ಲ ಇನ್ನೊಬ್ಬಾಂವ. ಈಗೇನ ನೀ ಗ್ವಾಡಿ ಹಾರಿ ಹೋಗಂಗರೇ ಇಲ್ಲಲ.......ನಾವು ದೇವ್ರ ಹೆಣಮಕ್ಕಳು. ನಮಗೇನ ಐಬಿಲ್ಲ. ದೊಡ್ಡ ಮಂದಿ ಉಡಿ ತುಂಬದುರ ಹಿಂಗೆ. ಪಾಪ, ಅಂವ ಏನೋ ದೊಡ್ಡ ಮನಸ ಮಾಡಿ ಉಡಿ ತುಂಬಲಾಕ ಬಂದ. ಆದರ ಹಿಂಗ ಹಾಡೇ ಹಗಲೇ ನಮ್ಮ ಗೂಡ ಬರಲಾಕ ಆಗ್ತದೇನು? ಎಂದ ಅವನಿಗಿ ಸವುಡ ಸಿಗ್ತದ, ಕದ್ದು ಮುಚ್ಚಿ ಬಂದೇ ಬರ್ತಾನ. ನಾವಿಲ್ಲ ಅಂದರ ಅವ್ರ ಹರ್ಯಾದ ಸೊಕ್ಕ ಮುರ್ಯಾದೇ ಇಲ್ಲ... ಅದಕ್ಕೇ ಹುಡಕೊಂಡು ಬರ್ತಾರ. (ಉಳಿದ ದೇವದಾಸಿಯರು ಗಲ ಗಲ ನಕ್ಕರು) ಹಗಲ ಹೋದರೇನಾಯ್ತು? ಏನ್ ಮಾಡ್ಕೊಂಡಿದ ಗಂಡನಂಗ ಅವ್ನ ಸಲ್ಲ್ಯಾಕ ಮಾರಿ ಸಣ್ಣ ಮಾಡ್ಕೊಬ್ಯಾಡ..... ಮುಂದಿನ ದಿನಾಗೋಳು ನಿಂದೇ ಅವಾ..... ಏಟ್ ಮುರಕಾ ಮಾಡ್ತಿ ನಾವನೂ ನೋಡ್ತೇವು.....' ಅವಳ ಮಾತುಗಳು ರಂಗು ರಂಗಿನ ಸಂಭಾಷಣೆಯಲ್ಲಿ ಮುಂದುವರೆಯುತ್ತಿದ್ದವು. ಅವ್ವ ಅಪ್ಪ ಮಾತ್ರ ಎಲ್ಲರಿಗೂ ಊಟ ಮಾಡಿಸುವಲ್ಲಿ ತಲ್ಲೀನರಾಗಿದ್ದರು. ಅದೊಂದು ಮದುವೆಯ ಸಂಭ್ರಮದಂತೆಯೇ ಇತ್ತು. ಆದರೆ ಮದುಮಗನಿಲ್ಲ ಅಷ್ಟೆ. ಇದ್ದ ಕ್ಷಣದ ಮದುಮಗನೂ ಮಾಯವಾಗಿದ್ದ. ಇದು ಲಕ್ಕಮ್ಮನ ಹೃದಯವನ್ನು ಆಘಾತದ ಅಲೆಗಳಲ್ಲಿ ಹೊರಳಾಡಿಸಿತು. ಅವಳಿಗೆ ಏನೇನೋ ಅನುಭವಗಳು ದಕ್ಕುವ ಮೊದಲೇ ಇಂಥದೊಂದು ಪ್ರಕರಣದಿಂದ ಅವಳ ಮನಸಿನಲ್ಲಿ ಸಹಿಸಲು ಸಾಧ್ಯವಾಗದ ನೋವೊಂದು ಹುಟ್ಟಿಕೊಂಡಿತು. ಒಳ ಒಳಗೆ ಬಿಕ್ಕತೊಡಗಿದಳು. ತಾನು ಅಂಥದೊಂದು ಕನಸು ಕಾಣಲೇಬಾರದಾಗಿತ್ತು ಅಂತ ಬಹಳ ಸಾರಿ ಅನಿಸಿದರೂ, ಯಾವುದೂ ಅವಳ ಕೈಯಲ್ಲಿರಲಿಲ್ಲ. ತನ್ನ ಪಾಡಿಗೆ ತಾನು ಬೆಳೆಯುತ್ತಿರುವ ಮನದ ಬಯಕೆಗಳಿಗೂ ನಡೆವ ಘಟನೆಗೂ ಸಂಬಂಧ ಹೆಣಿಕೆಗೊಳ್ಳತೊಡಗಿತು. ಅದರಲ್ಲಿ ಅವಳ ಪಾತ್ರವೇನೂ ಇರಲಿಲ್ಲ. ಬೆನ್ನ ಹಿಂದೆಯೇ ಹರಿದು ಬರುವ ಮಧುರ ಭಾವನೆಗಳು ಅವಳನ್ನು ಇನ್ನಿಲ್ಲದಂತೆ ಮೀಯಿಸಿದ್ದವು. ಮತ್ತು ಅವು ಹೊಚ್ಚ ಹೊಸದಾಗಿದ್ದವು. ಯಾವುದೇ ಕಲ್ಮಷವಿರಲಿಲ್ಲ. ಈಗ



'ಏಯ್ ಒಳಗ ಹಾಸಿಗಿ ಮಾಡು. ಮತ್ತ ಜಲ್ದಿ ಉಳ್ಳಾಕ ಕುಡು' ಅಂತ ಲಕ್ಕಮ್ಮನ ಅಪ್ಪ ಹೆಂಡತಿಗೆ ಹೇಳಿದ. ಅವಳೂ ಸಂಭ್ರಮದಿಂದ ಎದ್ದಳು. ಬಸರಾಜಪ್ಪನಂಥವರು ಊಟ ಮಾಡಲು ಯೋಗ್ಯವಾಗಿರುವ ಒಂದೇ ಒಂದು ಗಂಗಾಳು ಇಲ್ಲದ್ದು ಅವಳಲ್ಲಿ ಚಿಂತೆ ತಂದಿತ್ತು. ಇನ್ನು ಮುಂದೆ ಈ ಕಷ್ಟಗಳೆಲ್ಲ ನಿವಾರಣೆಯಾಗುತ್ತವೆ ಅನಿಸಿತು.

ಅಂಥದೊಂದು ಸುಂದರ ಸೌಧವು ಅವಳ ಕಣ್ಣ ಮುಂದೆಯೇ ನೆಲಕಚ್ಚಿ ಚೂರುಚೂರಾಯಿತು. ಯಾವತ್ತೂ ಜೋಡಣೆಗೆ ಲಾಯಖಾಗದಂತೆ ನೆಲದ ಮೇಲಿನ ಮಣ್ಣಲ್ಲಿ ಮಣ್ಣಾಗಿ ನಿಂತಿತು. ಅದರ ಮೇಲೆ ಪಾದವೂರಿ ನಡೆಯುವ ಸಾಧ್ಯತೆ ಮಾತ್ರ ಇತ್ತು.

ಆನಂತರ. ಲಕ್ಕಮ್ಮ ಮನೆಗೆ ಬಂದಾದ ಮೇಲೆ ದಿನಗಳು ಯಥಾರೀತಿ ಸಾಗುತ್ತಿದ್ದವು. ಲಕ್ಕಮ್ಮ ಇತರ ದೇವದಾಸಿಯರೊಂದಿಗೆ ಪರಡಿ ಹೊತ್ತು ಗುಡಿಗೆ ಹೋಗುವುದಾಗಲಿ ಮಾಡಲು ಮನಸು ಒಪ್ಪುತ್ತಿರಲಿಲ್ಲ. ಕೆಲವರ ಪ್ರಸ್ತಾಪ ಅಪ್ಪ ಮಾಡುತ್ತಿದ್ದ. ಹರೆಯದ ಹುಡುಗಿಯೊಬ್ಬಳು ದೇವದಾಸಿಯಾದ ಸುದ್ದಿ ಗಾಳಿಗಿಂತಲೂ ವೇಗದಲ್ಲಿ ಹರಡಿಕೊಂಡಿತ್ತು. ಮುರುಕು ಮನೆಯು ಒಂದಿಷ್ಟು ಮಣ್ಣು ಸುಣ್ಣ ಕಾಣಬಹುದು ಎಂದು ಕನಸು ಕಂಡ ಅವಳ ಅಪ್ಪನಿಗೆ ಮಗಳ ವರ್ತನೆಯಿಂದ ಬೇಸರವೇ ಇತ್ತು. ಕೆಲವು ತಿಂಗಳುಗಳ ತರುವಾಯ ಲಕ್ಕಮ್ಮ ತಾನು ಕೂಲಿಗೆ ಹೋಗಲು ಮನಸು ಮಾಡಿದಳು. ಯಾಕೊ ಅದರಿಂದಲೂ ಹಿಂಜರಿದಳು. ಹಳ್ಳಿ ಬೇಡವಾಗಿತ್ತು. ಕಂಡವರು ತನ್ನತ್ತ ಜೊಲ್ಲು ಸುರಿಸುತ ನೋಡುವುದು ಅವಳಿಗೆ ಅಸಹ್ಯ ತರಿಸುತ್ತಿತ್ತು. ಅವಳು ತರಕಾರಿ ಮಾರುವುದಕ್ಕಾಗಿ ಕಲಬುರ್ಗಿಗೆ ಬರತೊಡಗಿದಳು. ಮನೆಯ ಬಡತನ ಅವಳನ್ನು ಕೆಲಸದತ್ತ ದೂಡಿತು. ಎಲ್ಲವೂ ಮರೆಯಲು ಅವಳಿಗೂ ಕೆಲಸ ಬೇಕಿತ್ತು. ಮೊದಲ ದಿನ ದೊಡ್ಡ ಜಾತಿಯವನಾಗಿದ್ದ ಕಾರಣಕ್ಕೆ ತನ್ನನ್ನು ತಿರಸ್ಕರಿಸಿ ಮುಟ್ಟದೆಯೂ ಮೈಲಿಗೆ ಮಾಡಿದ ಬಸರಾಜಪ್ಪನ ಬಗ್ಗೆ ಅವಳಲ್ಲಿ ಪ್ರೇಮವಾಗಲಿ ಗೌರವವಾಗಲಿ ಉಳಿದಿರಲಿಲ್ಲ. ಎಲ್ಲ ಇತಿ ಮಿತಿಗಳನ್ನು ಮೀರಿ ಅವನ ಬಗ್ಗೆ ಹುಟ್ಟಿಕೊಂಡ ವ್ಯಕ್ತಿಸಲೂ ಸಾಧ್ಯವಾಗದಂತಹ ಪ್ರೇಮದ ಕೊಂಡಿಯೊಂದು ಕಳಚಿ ಬಿದ್ದು ಹಸಿ ಮನಸಿನ ಮೇಲೆ ಗಾಯ ಮಾಡಿತ್ತು. ತಾನು ದೇವದಾಸಿ. ಹೀಗೆಲ್ಲ ನಿರೀಕ್ಷಿಸವುದು, ಬಯಸುವುದು, ತನ್ನಿಚ್ಛೆಯಂತೆ ಬದುಕು ಕಟ್ಟಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಅರಿವಿಗೆ ಬರುವ ಹಂತದಲ್ಲಿ ಲಕ್ಕಮ್ಮ ಸಹಜ ಬಯಕೆಗಳಿಂದ ವಿಮುಖಳಾಗತೊಡಗಿದಳು. 'ಮುಂದಿನ ದಿನಗೋಳು ನಿಂದೆ' ಅಂದ ದೇವದಾಸಿಯರ ಮಾತುಗಳು ಅರ್ಥವೇ ಆಗಿರಲಿಲ್ಲ. ಅರ್ಥವಾದ ಈ ಹೊತ್ತಲ್ಲಿ ಅವಳಿಗೆ ಮತ್ತೂ ತನ್ನದೇ ನಿಲುವಿನ ಜೇಡವೊಂದು ಗಟ್ಟಿ ಬಲೆ ಹೆಣೆದಿತ್ತು.

ಲಕ್ಕಮ್ಮನಿಗೆ ಎಲ್ಲ ನೆನಪುಗಳು ಮಂದ ಬೆಳಕಲ್ಲೂ ನಿಚ್ಚಳವಾಗಿ ಚಿತ್ರ ಪಟದಂತೆ ಕಣ್ಣ ಮುಂದಿಂದ ಸರಿದು ಹೋದವು. ಈಗ ಅದೇ ಬಸರಾಜಪ್ಪ ಇಷ್ಟು ತಿಂಗಳ ತರುವಾಯ ಮತ್ತೆ ತನ್ನನ್ನು ಬಯಸಿ ಸೀರೆ ಕಳಿಸಿರುವನು. ಇಷ್ಟು ದಿನಗಳಲ್ಲಿ ತಾನು ಎಷ್ಟು ಹಿಂಸೆ ಅನುಭವಿಸಿರುವೆನು ಎನ್ನುವುದು ಯಾರಿಗೆ ಗೊತ್ತಿದೆ? ಅವ್ವ ಅಪ್ಪನಂತೂ ತಾನು ಯಾವ ಗಂಡಸನ್ನೂ ಆವ್ಹಾನಿಸುತ್ತಿಲ್ಲ ಎಂಬುದಕ್ಕೆ ತನ್ನ ಮೇಲೆ ವ್ಯಗ್ರರಾಗಿರುವರು. ಹೊಟೆಲ್ ಮೇಲೆ ಕುಂತು ಚಹಾ ಕುಡಿಯುವವರು, ಸಾರಾಯಿ ಅಂಗಡಿಯಲ್ಲಿ ನಶೆಯಲ್ಲಿರುವವರು, ರಸ್ತೆಯಲ್ಲಿ ನಡೆಯುವಾಗ ತನ್ನನ್ನು ಕಂಡು ತಮ್ಮ ಕಣ್ಣ ದಿಟ್ಟಿಯೇ ಬದಲಾಗಿ ನೋಡುವವರು ಎಲ್ಲವನ್ನೂ ಮೀರಿ ತನ್ನ ಪಾಡಿಗೆ ತಾನು ಬದುಕಲು ಹೆಜ್ಜೆ ಹಾಕುವಾಗ ಈ ದೇವದಾಸಿತನ ನೆರಳಾಗಿಯೇ ಇದ್ದು, ಹುಟ್ಟಿಸಿದ ತಲ್ಲಣಗಳು ಕಡಿಮೆಯೇ?

ಈಗ ಬಸರಾಜಪ್ಪ ತಾನು ಹುಂ ಅಂದರೆ ಸಾಕು ಬರುವನು. ರಾತ್ರಿ ಹೊತ್ತಲ್ಲಿ. ಯಾರೂ ನೋಡದ ಸಮಯದಲ್ಲಿ. ಅವನ ಮುಖಭಾವ ತನಗೆ ಗೊತ್ತಾಗುವುದಿಲ್ಲ. ತನ್ನ ಬಯಕೆ ಭಾವಗಳೂ ಅವನಿಗೆ ಗೊತ್ತಾಗುವುದಿಲ್ಲ. ಆಮೇಲೆ? ಹಿಂದಿನ ಮನೆಯ ರಂಗಮ್ಮಕ್ಕನ ಮನೆಗೆ ಬರುವ ಗಂಡಸರಂತೆ ಈ ಬಸರಾಜಪ್ಪನೂ...... ಕಬ್ಬಿಣದ ಸಂದೂಕಿನಲ್ಲಿ ಪಟ್ಟಕ್ಕೆ ಹಾಕುವ ದಿನ ಅವನು ಉಡಿ ತುಂಬಲು ತಂದ ಸೀರೆಯಿತ್ತು. ಲಕ್ಕಮ್ಮ ಎದ್ದು ಅದನ್ನು ಹೊರತೆಗೆದಳು. ಎಂಥ ಸುಂದರ ಬಣ್ಣದ್ದು. ಅವತ್ತು ಅದು ತನಗೆ ಗೊತ್ತೇ ಆಗಿರಲಿಲ್ಲ. ಅವತ್ತು ತನ್ನ ಮನದ ತುಂಬ ಬಸರಾಜಪ್ಪ ಮಾತ್ರ ಎಲ್ಲ ಬಣ್ಣಗಳನ್ನು ಕಬ್ಜಾ ಮಾಡಿ ತಾನೇ ಪ್ರಧಾನ ಬಣ್ಣವಾಗಿ ಕಂಗೊಳಿಸಿದ್ದ. ಆಗ ಈ ಸೀರೆಯ ಬಣ್ಣ ಕಾಣದಾಗಿತ್ತು.

ಬಾಗಿಲು ಬಡಿದ ಸಪ್ಪಳಾಯಿತು. ಬೆಳಕಿಂಡಿಯಿಂದ ಸಣ್ಣಗೆ ಬರುವ ಬೆಳಕಿನ ಕಿರಣಗಳು ಇಲ್ಲವಾಗಿದ್ದವು. ಬೆಳಕಿಗಾಗಿ ಬಾಗಿಲು ತೆರೆಯಲೇಬೇಕಿತ್ತು. ಬಾಗಿಲು ತೆರೆದು ಹೊರಬಂದಳು. ಹೊರಗೆ ಥಾಳು ಕತ್ತಲು ಆವರಿಸಿತ್ತು. ಹೊರಸಿನ ಮೇಲೆ ಕೂತವನು ಬಸವರಾಜಪ್ಪನಾಗಿದ್ದನು. ಅಪ್ಪ ಪಡಸಾಲೆಯ ಕಂಬಕ್ಕೆ ಕೂತಿದ್ದ. ಅವ್ವನ ಕೈಯಲ್ಲಿ ಸೀರೆಯಿತ್ತು. ಲಕ್ಕಮ್ಮನ ಕೈಯಲ್ಲಿಯೂ ಸೀರೆಯಿತ್ತು. ಪಡಸಾಲೆಯಲ್ಲಿ ಕಂದೀಲು ಮಂದ ಬೆಳಕು ಚೆಲ್ಲುತ್ತಿತ್ತು. ಅಂದುಕೊಂಡಂತೆ ಬಸರಾಜಪ್ಪ ಕತ್ತಲಲ್ಲಿಯೇ ಬಂದಿದ್ದ. ಲಕ್ಕಮ್ಮನ ನಡಿಗೆಯಲ್ಲಿ ಯಾವ ಸಂಕೋಚವೂ ಇರಲಿಲ್ಲ. ಅಂದು ಬಸರಾಜಪ್ಪನನ್ನು ಕಂಡಾಗ ಮೂಡಿದ ನಾಚಿಕೆಯೂ ಇಂದು ಇರಲಿಲ್ಲ. ಅಡಿಗೆ ಮನೆಯಿಂದ ಮಾಂಸದಡಿಗೆಯ ಘಮ್ಮನೆ ವಾಸನೆ ವ್ಯಾಪಿಸಿತ್ತು. ಮನೆಯವರೆಲ್ಲ ಹೊರಗಡೆ ಮಲಗಲೆಂದು ಕೌದಿ, ಗೋಣಿಚೀಲ ಹಾಸಿಕೊಂಡಿದ್ದರು. ಮಕ್ಕಳು ಆಗಲೇ ನಿದ್ದೆ ಮಾಡುತ್ತಿದ್ದವು.

ಲಕ್ಕಮ್ಮ ಅವ್ವನ ಕೈಯಿಂದ ಸೀರೆ ಇಸಿದುಕೊಂಡ
ಕೆಂಪು ಮತ್ತು ಹಸಿರು ಬಣ್ಣದ ಸೀರೆಗಳು. ಅವಳು ಪಡಸಾಲೆ ದಾಟಿ ಅಂಗಳಕ್ಕೆ ಕಾಲಿಟ್ಟಳು. ಬಸರಾಜಪ್ಪ ಲಕ್ಕಮ್ಮನನ್ನು ಇಡಿಯಾಗಿ ಆಸ್ವಾದಿಸುವಂತೆ ಚಿತ್ತವಿಟ್ಟು ನೋಡುತ್ತಿದ್ದನು. ಲಕ್ಕಮ್ಮ ನೇರವಾಗಿ ಬಸರಾಜಪ್ಪ ಕೂ
ಹೊರಸಿನ ಹತ್ತಿರ ಬಂದಳು. ಮಗಳ ಮನಸು ಬದಲಾಗಿರುವುದಕ್ಕೆ ಅವ್ವ ಅಪ್ಪ ಮೆಚ್ಚುಗೆಯಿಂದ ನೋಡುತ್ತಿದ್ದರು. 'ಏಯ್ ಒಳಗ ಹಾಸಿಗಿ ಮಾಡು.
ಜಲ್ದಿ ಉಳ್ಳಾಕ ಕುಡು.' ಅಂತ ಲಕ್ಕಮ್ಮನ ಅಪ್ಪ ಹೆಂಡ
ಹೇಳಿದ. ಅವಳೂ ಸಂಭ್ರಮದಿಂದ ಎದ್ದಳು. ಬಸರಾಜಪ್ಪನಂಥವರು ಊಟ ಮಾಡಲು ಯೋಗ್ಯವಾಗಿರುವ ಒಂದೇ ಒಂದು ಗಂಗಾಳು ಇಲ್ಲದ
ಅವಳಲ್ಲಿ ಚಿಂತೆ ತಂದಿತ್ತು. ಇನ್ನು ಮುಂದೆ ಈ ಕಷ್ಟಗ
ನಿವಾರಣೆಯಾಗುತ್ತವೆ ಅನಿಸಿತು.

ಲಕ್ಕಮ್ಮ ಸೀರೆಗಳನ್ನು ಹಿಡಿದು ತನ್ನ ಮುಂದೆ ನಿಂತಿರುವಾಗಲೇ ಬಸರಾಜಪ್ಪ ಏನು ಎನ್ನುವಂತೆ ಅವಳೆಡೆಗೆ ನೋಡಿದನು. ಲಕ್ಕಮ್ಮ ಎರಡೂ ಸೀರೆಗಳ
ಅವನ ತೊಡೆಯ ಮೇಲಿಟ್ಟು ಒಂದೇ ಒಂದು ಮಾತಾಡದೆ ಹೊರಳಿ ಪಡಸಾಲೆಯ ಮೆಟ್ಟಿಲೇರಿದಳು. ಮತ್ತು ಖೋಲಿಯ ಒಳಗೆ ಹೋಗಿ ಬಾಗಿಲು ಹಾಕಿಕೊಂಡಳು. ಖೋಲಿಯಲ್ಲಿ ಬಿಡುಗಡೆಗೊಳ್ಳಲು ಒದ್ದಾಡುತ್ತಿರುವ ಕತ್ತಲಿತ್ತು. ಆದರೆ ಲಕ್ಕಮ್ಮನ ಮನದ ಒಳಗೆ ಯಾರಿಗೂ ಕಾಣದ ಬೆಳಕಿನ ಕಿರಣವೊಂದು ಬೆಳಗುತ ಬೆಳೆಯುತಿತ್ತು.

ನೀಲಾ ಕೆ

ಚಿಂತನೆ ಹಾಗೂ ಚಳವಳಿ ಪೂರಕವಾಗಿ ಹೆಜ್ಜೆ ಹಾಕಬೇಕೆಂಬ ನಿಲುವು; ಅನೇಕ ಸಂಘಟನೆಗಳೊಂದಿಗೆ ಒಡನಾಟ. ಮಹಿಳೆ ಸಮಸ್ಯೆ-ಸವಾಲುಗಳ ಬಗ್ಗೆ ನಿರಂತರ ಹೋರಾಟ. ಕಲಾವಿದೆಯೂ ಹೌದು, ಬರಹಗಳಲ್ಲಿ ಜನರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ತುಡಿತ. ಅನೇಕ ಅನುಭವಜನ್ಯ ಕೃತಿಗಳ ಪ್ರಕಟಣೆ ಕೆಲವು ಕಥೆ ಲೇಖನಗಳು ಪದವಿ ತರಗತಿಗಳಿಗೆ ಪಠ್ಯಗಳಾಗಿವೆ. 'ಕೊಂದಹರುಳಿದರೆ' ಕತೆಗೆ ಗುಲ್ಬರ್ಗಾ ವಿವಿಯಿಂದ ಚಿನ್ನದ ಪದಕದೊಂದಿಗೆ ರಾಜ ಪುರೋಹಿತ ದತ್ತಿ ಪುರಸ್ಕಾರ ದೊರೆತಿದೆ.




In Harmony with Nature...
'Best Refinery of the Year' Award honoring performance in refining of petroleum in India during the year 2009-10 by Petrofed.
Best Exporter Award (Gold) - 2010 for exporting products through NMPT, by Federation of Karnataka Chamber of Commerce & Industries.
1st in 'Most consistent Safety Performer in Refineries' Award by Oil Industry Safety Directorate for the year 2009-10.
First Refinery to start recycle and re-use of treated effluent for cooling towers, on a continuous and consistent basis.
Well established ISO 14001 certified Environment Management System.
Company with a turn over of ₹43,800 crores (2010-11) with ongoing investment of ₹15,000 crore for growth.
ONGC
एम आर पी एल
MRPL
Mangalore Refinery and Petrochemicals Ltd.
(An ONGC Group Company)
Kuthethoor P.O., Via Katipalla, Mangalore - 575 030, Karnataka.
www.mrpl.co.in

ಹನಿ ಹನಿದು ಹರಳುಗಟ್ಟಿದೆ

ಒಚ್ಚು ಮಾತು
ಮೊನಚು ಮೌನ
ಇರಿದು,
ಕೆಂಪಗೆ ನೋವು ಸುರಿದು
ಹನಿ ಹನಿ ಜಿನುಗುತ್ತದೆ
ಪದ ಪದವಾಗಿ
ಹಾಳೆಮೇಲೆ
ಮಣಿ ಮಣಿ ಮಾಲೆ

ನನಗೆ ಕೆಂಪಿನ ಖಯಾಲಿ
ಕೈ ಇಟ್ಟರೆ ಸಾಕು,
ಹರಿವ ನೆತ್ತರೂ ನಿಂತು
ಹರಳಾಗಿ ಹೊಳೆಯುತ್ತದೆ.
ಹಾರವಾಗುತ್ತದೆ.

ಗದ್ಗದ ಕಂಠದ ಸುತ್ತ ಪೋಣಿಸಿದ
ಎರಡೆಳೆ ದುಃಖಕ್ಕೆ ಜೋತುಬಿಟ್ಟ ಹೃದಯ
ಡವಗುಟ್ಟುತ್ತದೆ ಭಾರವಾಗಿ.

ಅವನು ಕೊಟ್ಟದ್ದೋ.. ನಾನು ಪಡೆದದ್ದೋ..
ಒಟ್ಟಲ್ಲಿ ಒಡೆದು ಹೋಗಿರುವುದಂತೂ ನಿಜ.

ಹನಿ ಹನಿದು ಹರಳುಗಟ್ಟಿದೆ ಕೆಂಪಗೆ.
ಆಯ್ದಿಟ್ಟುಕೊಂದಿದ್ದೇನೆ
ಒಂದೊಂದೇ..
ಒಂದೊಂದೇ..
ಹೀಗೆ ಎಷ್ಟೋ!!

ಮಮತಾ ಜಿ. ಸಾಗರ

ಕವಿಯತ್ರಿ, ವಿಮರ್ಶಕಿ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕಿ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ದೇಶ ವಿದೇಶಗಳಲ್ಲಿ ಅನೇಕ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. 'ಕಾಡ ನವಿಲಿನ ಹೆಜ್ಜೆ' ಮತ್ತು 'ನದಿ ನೀರಿನ ತೇವ' ಎಂಬ ಎರಡು ಕವನ ಸಂಕಲನ ಹಾಗೂ ಲೇಖನಗಳ ಸಂಗ್ರಹದ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಇವರ ಬರಹಗಳನ್ನು ನಾಡಿನ ಜನಪ್ರಿಯ ಪತ್ರಿಕೆಗಳು ನಿರಂತರವಾಗಿ ಪ್ರಕಟಿಸುತ್ತಿವೆ. ಅನೇಕ ಸಾಹಿತ್ಯ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ.

ಕವನ

ಮುಟ್ಟಿನ ನೆತ್ತರಲ್ಲಿ ಅ.ಆ.ಇ.ಈ ತಿದ್ದಿ ಕಲಿತವ

ಎಚ್. ಲಕ್ಷ್ಮೀನಾರಾಯಣಸ್ವಾಮಿ

ಯುವ ಪ್ರತಿಭೆ. ವಿದ್ಯಾರ್ಥಿ ದೆಸೆಯಿಂದಲೇ ಕವಿತೆ ಬರೆಯುವುದರಲ್ಲಿ ಆಸಕ್ತಿ. ಎಂ. ಎ. ಪದವೀಧರ. ಬಡತನದ ಬೇಗೆಯನ್ನು ಸ್ವತಃ ಕಂಡುಂಡದ್ದರಿಂದ ಕವಿತೆಗಳಲ್ಲಿ ಅ ಬಗ್ಗೆ ಸಮರ್ಥವಾಗಿ ಅಭಿವ್ಯಕ್ತಿಸುವ ಕಲೆ ಕರಗತ. ಹಲವು ಜನಪ್ರಿಯ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟವಾಗಿವೆ.

ನಾನು ಅಸ್ಪೃಶ್ಯರೊಳಗೆ ಅಸ್ಪೃಶ್ಯ
ದೇವದ್ರವವನ್ನೆಲ್ಲಾ ಪೈರುಗಳಿಗೆ ಉಣಿಸಿ
ನಿಮ್ಮೊಡನೆ ನಿಮ್ಮ ದನಗಳನ್ನೂ
ಕೊಬ್ಬಿಸುತ್ತೀನಿ
ಕೊಟ್ಟಿದ್ದನ್ನು ಉಂಡು
ಅಲ್ಲೇ ವಿಸರ್ಜಿಸಿ ಗೊಬ್ಬರವಾಗಿಸುತ್ತೀನಿ
ನೀವು ಕೊಟ್ಟಿದ್ದನ್ನು
ನಾನು ಇಟ್ಟುಕೊಳ್ಳಲಾರೆ

ನಾ ಗೊಂತಿಗೆ ಕಟ್ಟಿದ ದನವಿರಬಹುದು
ನೆನಪಿರಲಿ
ನನ್ನ ಕೆಚ್ಚಲಿಗೆ ಕೈಯಿಟ್ಟರೆ
ಹಾಯುತ್ತೀನಿ
ಪಕ್ಕೆ ಮೂಳೆಗಳೆಲ್ಲ
ಪತರಗುಟ್ಟುವ ಹಾಗೆ
ನೀವಿಡುವ ಹಿಡಿ ಹುಲ್ಲಿಗೆ
ಬದುಕನ್ನೇ ತೇದರು
ಹಾವಿಗೆ ಹಾಲೆರೆದಂತೆ

ನಿಮ್ಮ ಚಿತ್ರಕಲೆಯ ತೆವಲಿಗೆ
ಬೆನ್ನ ನೀಡಿ
ಲೇಖನಿಯ ಮೋಜಿನ ಬರಹಕ್ಕೆಲ್ಲ
ಹಲಗೆಯಾಗಿದ್ದೆ
ಬಂಡೆಯಂತೆ ಇನ್ನೂ ನಿಮ್ಮ
ಉಳಿಯ ಪೆಟ್ಟನ್ನು ತಾಳಲಾರೆ
ನಾರುಗೋಲಿಡಿದು ಬರುತ್ತಿದ್ದೀನಿ
ನಿಮ್ಮ ಮೊಸಳೆ ಮೃಗಳಿಗೆ
ಇದೂ ಕಡಿಮೆಯೆ

ನಿಮ್ಮ ಕಣ್ಣ ಪಾಪೆಯೊಳಗೆ
ಇನ್ನೂ ಹೆರೆಯಾಗಿರುವ
ನನ್ನವ್ವ ಅಕ್ಕಂದಿರ ಬೆತ್ತಲೆ
ಚಿತ್ರಗಳ ನುಂಗುವ
ಅಲೆಯಾಗಿ ರಾಚುತ್ತೀನಿ
ಯಾವ ಜ್ಞಾನ-ವಿಜ್ಞಾನಕ್ಕೂ
ನನ್ನನ್ನು ತಡೆಯಲಾಗದು
ನಿಮ್ಮ ಜಾತಕದಲ್ಲಿ ಶನಿಕಾಟ ಶುರುವಾದಂತೆ

ಇನ್ನೂ ಊರ ಹೊರಗೆ ಕೂತು
ನಿಮ್ಮ ಕೋಟೆ ಕೊತ್ತಲುಗಳ
ರಾಣಿ ಮಹಾರಾಣಿಯರ
ಹಾದರವ ಕಾಯಲಾಗದು
ನಾನೀಗ ಹೊಸಾ ಮನುಷ್ಯ
ಮುಟ್ಟಿನ ನೆತ್ತರಲ್ಲಿ ಅ.ಆ.ಇ.ಈ
ತಿದ್ದಿ ಕಲಿತವ
ಅಕ್ಷರದ ಲ್ಯಾಟೀನು ಹಿಡಿದು
ಊರತ್ತ ಸಾಗುತ್ತಿದ್ದೀನಿ,
ಎಲ್ಲಕ್ಕೂ ಸಿದ್ಧನಾಗಿ!

RAMKY GROUP
towards sustainable growth
WITH BEST COMPLIMENTS FROM
WHAT THE WORLD NEEDS, WE ENGINEER...
25-30, 3rd floor, Ramky House,
2nd Cross, Ragavendra Nagar,
Hennur Ring Road, Kalyan Nagar,
Bangalore- 560093
Ph: 9845147596
Ramky Infrastructure Limited

With Best Compliments From

MANIRAM GROUP

TS 16949 CERTIFIED COMPANY
MANIRAM INDUSTRIAL ENTERPRISES
26/31, 1ST FLOOR, 2ND MAIN INDUSTRIAL TOWN, RAJAJINAGR, BANGALORE-560044
PH: 23350620, FAX:23118139
Manufacturers of Precision Turned Components

ESSEMM MULTISPINDLE AUTOMATS (UNIT-1)

49/12, 2ND MAIN INDUSTRIAL TOWN, RAJAJINAGAR, BANGALORE-560044
PH:23350431, 23356537, 23118139 FAX: 23118139
E-mail:maniram.group@gmail.com
Manufacturers of Precision Turned Components on Multispindle Automats & CNC Machines.

ESSEMM MULTISPINDLE AUTOMATS (UNIT-||)

#35,2 ND MAIN INDUSTRIAL TOWN, RAJAJINAGAR, BANGALORE-560044
Ph: 23303457 Fax: 23118139
Reputed Electroplaters

ALFAA PRECISION PRODUCTS

#26/31,2ND MAIN INDUSTRIAL TOWN,RAJAJINAGAR, BANGALORE-560044
PH:23383883, 23206481 FAX: 23118139
Manufacturers of Precision Turned Components on Multispindle Automats

GARTEX INSTA APPARELS (UNIT-|)

#17, 4TH BLOCK,,RAJAJINAGAR, BANGALORE-560010
PH: 23153007, 231350138 FAX: 23301334
Manufacturers & Exporters of Ready Made Garments

GARTEX INSTA APPARELS (UNIT-||)

#180, 6th MAIN, 4TH CROSS, 3RD PHASE
PEENYA INDUSTRIAL SUBURB,
BANGALORE-560058
PH: 28372472/473/474/475/476, FAX: 28372481/482 EMAIL:gartex@blr.vsnl.net.in

Manufacturers & Exporters of Ready Made Garments

ಕರಡಿ ಖಲಂದರರರು ಮತ್ತು ಹಾವಾಡಿಗರು: ಬದುಕು ಬೀದಿಯಲ್ಲ

ಅವರ್ಗೀಕೃತ, ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ರಾಷ್ಟ್ರೀಯ ಆಯೋಗವ ಅಸ್ತಿತ್ವಕ್ಕೆ ಬಂದು ಅವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇಕಡ 10ರಷ್ಟು ಮೀಸಲಾ ಕೊಡುವಂತೆ ಒತ್ತಾಯಿಸಿದರೂ ಕೂಡ ಸರ್ಕಾರ ಇದಕ್ಕೆ ಯಾವ ಮಹತ್ವವನ್ನು ಕೊಡದ ಈ ತಬ್ಬಲಿ ಸಮುದಾಯಗಳನ್ನು ಸಂಪೂರ್ಣವಾಗಿ ಬೀದಿಪಾಲು ಮಾಡಿತು

ಕೆ. ಎಲ್. ಚಂದ್ರಶೇಖರ ಐಜೂರ

ದಕ್ಷಿಣ ಏಷಿಯಾ ಅತಿ ದೊಡ್ಡ ಅಲೆಮಾರಿ ಸಮುದಾಯವನ್ನು ಹೊಂದಿರುವ ಪ್ರದೇಶ. ದಕ್ಷಿಣ ಏಷ್ಯಾದ ಅಲೆಮಾರಿಗಳು ಕುದುರೆ, ದನಕರು, ಬಾತುಕೋಳಿ, ಹಂದಿ, ಕುರಿ, ಆಡು, ಒಂಟೆ ಹೀಗೇ ಭೂಮಿಯ ಮತ್ತಿನ್ಯಾವ ಭಾಗದಲ್ಲೂ ಕಾಣದಷ್ಟು ವೈವಿಧ್ಯಮಯ ಪ್ರಾಣಿಗಳನ್ನು ಸಾಕಿಕೊಂಡಿದ್ದಾರೆ. ಪುರಾತನ ಅಲೆಮಾರಿ ಸಮುದಾಯಗಳಿಗೆ ಸೇರಿರುವ ಹಾವಾಡಿಗರು ಮತ್ತು ಕರಡಿ ಖಲಂದರರು ತಮ್ಮ ವೃತ್ತಿ ಮತ್ತು ಪ್ರವೃತ್ತಿಗಳ ಕಾರಣಗಳಿಂದಾಗಿ ಆಗಾಗ ನಮ್ಮ ನಡುವೆ ಕಾಣಿಸಿಕೊಂಡು ಮರೆಯಾಗುವುದುಂಟು. ಆದರೆ ನಮ್ಮ ಸಾಮಾಜಿಕ ಬದುಕಿನ ಎಲ್ಲೂ ಯಾವ ಹಂತದಲ್ಲೂ ಈ ನಾಗರಿಕ ಸಮಾಜ ಇವರನ್ನು ಒಳಗೊಳ್ಳದೆ ದೂರವೇ ಇಟ್ಟಿದೆ. ಎರಡು ಸಾವಿರ ವರ್ಷಗಳ ಕೆಳಗಿನ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, 'ಸಂಗೀತಗಾರರು, ನಟರು ಮತ್ತು ಇತರೆ ಭಿಕ್ಷಾಟನೆ ವೃತ್ತಿಗಿಳಿದವರು ಮಳೆಗಾಲದಲ್ಲಿ ಒಂದುಕಡೆ ನೆಲೆ ನಿಲ್ಲಲೇಬೇಕು; ತಪ್ಪಿದಲ್ಲಿ ಅವರಿಗೆ ದಂಡ ಅಥವಾ ಛಡಿಯೇಟಿನ ಶಿಕ್ಷೆ ನೀಡಲಾಗುವುದು' ಎಂಬ ಉಲ್ಲೇಖವಿದೆ. ಕ್ರಿ. ಶ. ಆರನೇ ಶತಮಾನದ ತಮಿಳಿನ ಶಂಗಂ ಸಾಹಿತ್ಯದಲ್ಲಿ ಅಲೆಮಾರಿ ಸಂಗೀತಗಾರರು, ಕಣಿ ಹೇಳುವವರು, ಭಿಕ್ಷುಕರು, ಮೋಡಿಗಾರರು, ದೊಂಬರ ಕುರಿತಾದ ಉಲ್ಲೇಖವಿದೆ. ಕ್ರಿ.ಪೂ.1500ರಲ್ಲಿ ಭಾರತಕ್ಕೆ ಬಂದ ಆರ್ಯನ್ನರೂ ಕೂಡ ಅಲೆಮಾರಿಗಳೇ ಅನ್ನುವುದನ್ನು ನಾವೆಲ್ಲ ಗಮನಿಸಬೇಕಿದೆ.

ಭಾರತದಲ್ಲಿ 15 ಕೋಟಿ ಅವರ್ಗೀಕೃತ (ಡಿನೋಟಿಫೈಡ್) ಮತ್ತು ಅಲೆಮಾರಿ ಸಮುದಾಯಗಳಿವೆ. 100 ಅಲೆಮಾರಿ ಹಾಗೂ ಅರೆಅಲೆಮಾರಿ ಬುಡಕಟ್ಟುಗಳು ಹಾಗೂ 198 ಅವರ್ಗೀಕೃತ ಬುಡಕಟ್ಟುಗಳು ಇದರಲ್ಲಿ ಸೇರಿವೆ. ಭಾರತವೊಂದೇ 500 ಅಲೆಮಾರಿ ದನಗಾಹಿಗಳು, ಮೇಕೆ, ಕುರಿ ಮೇಯಿಸುವವರು ಹಾಗೂ ಸಂಚಾರಿ ಸ್ವರೂಪದ ವಲಸೆ ಸಮುದಾಯಗಳನ್ನು ಹೊಂದಿದೆ. ಅಂದರೆ ಅಂದಾಜು ಭಾರತದ ಶೇಕಡ 7ರಷ್ಟು ಜನ ಅಲೆಮಾರಿಗಳು. ಅವರ ಗಣತಿ ಮತ್ತು ವರ್ಗೀಕರಣವೇ ಇವತ್ತಿನ ಇಂಡಿಯಾದ ಗಣತಿ ಕಾರ್ಯದ ನಿಜವಾದ ಸಮಸ್ಯೆಯಾಗಿದೆ. ಈ ಅಲೆಮಾರಿಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರದೇ ಇರುವುದರಿಂದ, ದೇಶಾದ್ಯಂತ ಅವರ ವರ್ಗೀಕರಣದಲ್ಲಿ ಏಕರೂಪತೆ ಇಲ್ಲದಿರುವುದು ಒಂದು ಸಮಸ್ಯೆಯಾಗಿದೆ. ಹಾಗಾಗಿಯೇ ಅವರಿಗೆ ಕೇಂದ್ರ ಸರ್ಕಾರ ಕೊಡಮಾಡುವ ಯಾವುದೇ ಮೀಸಲಾತಿಯಾಗಲೀ, ಸೌಲಭ್ಯಗಳಾಗಲೀ ಸಿಗದೆ ಹೋಗಿವೆ. ಅವರ ಜನಸಂಖ್ಯಾ ಮಾಹಿತಿ ಇಲ್ಲದ್ದರಿಂದ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜಿಸಲಿಕ್ಕೂ ತೊಡಕಾಗಿದೆ.

1960ರ ನಂತರದ ಅಭಿವೃದ್ಧಿ ಮಾದರಿಗಳು ಅಲೆಮಾರಿ ಜೀವನಕ್ರಮಕ್ಕೆ ಸಮಸ್ಯೆಯಾಗಿ ಪರಿಣಮಿಸಿವೆ. 70ರ ದಶಕದಲ್ಲಿ ಅವರ ಬಗ್ಗೆ ಅಧ್ಯಯನ ಶುರುವಾದರೂ ಅದರಲ್ಲಿ ಮುಖ್ಯವಾಗಿ ಅವರನ್ನು ಹಿಂದುಳಿದ ಮತ್ತು ಅಭಿವೃದ್ಧಿಗೆ ಅಡ್ಡಗಾಲಾಗಿರುವ ಜನಸಮುದಾಯವೆಂದೇ ಪರಿಗಣಿಸಲಾಯಿತು. ಅವರಿಂದ ಅರಣ್ಯನಾಶವಾಗುತ್ತಿದೆಯೆಂದು ಹೇಳುವವರ ದೊಡ್ಡ ಗುಂಪೊಂದು ಹುಟ್ಟಿಕೊಂಡಿತು. ನಗರೀಕೃತ ಮನಸ್ಸುಗಳು ಅಲೆಮಾರಿಗಳ ಪುನರ್ವಸತಿಯೆಂದರೆ ಅವರು ಒಂದೆಡೆ ನೆಲೆ ನಿಲ್ಲುವುದು ಎಂದೇ ಯೋಚಿಸಿದವು. ಬೇಟೆ ನಿಷೇಧವಾಯಿತು. 1972 ಮತ್ತು 1991ರ **ವನ್ಯಜೀವಿ ಸಂರಕ್ಷಣಾ ಅಧಿನಿಯಮವು** ಅಸ್ತಿತ್ವಕ್ಕೆ ಬಂದು ಕರಡಿ ಸಾಕಿಕೊಂಡಿರುವ ಖಲಂದರರನ್ನು ಮತ್ತು ಹಾವಾಡಿಗರನ್ನು ಬಂಧಿಸಲು ಅವಕಾಶ ನೀಡಿತು. ಕರಡಿ ಖಲಂದರರು ಮತ್ತು ಹಾವಾಡಿಗರ ಅಳಿವು-ಉಳಿವಿನ ಪ್ರಶ್ನೆಗಳಿಗಿಂತಲೂ **ವನ್ಯಜೀವಿ ಸಂರಕ್ಷಣಾ ಅಧಿನಿಯಮವನ್ನು** ವ್ಯಾಪಕ ಮತ್ತು ಬಲಗೊಳಿಸುವದರತ್ತಲೇ ಸರ್ಕಾರಗಳು ಮತ್ತದರ ಸಂಸ್ಥೆಗಳು ಕಾಲಕಳೆದವು.

ಅವರ್ಗೀಕೃತ, ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ರಾಷ್ಟ್ರೀಯ ಆಯೋಗವು ಅಸ್ತಿತ್ವಕ್ಕೆ ಬಂದು ಅವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇಕಡ 10ರಷ್ಟು ಮೀಸಲಾತಿ ಕೊಡುವಂತೆ ಒತ್ತಾಯಿಸಿದರೂ ಕೂಡ ಸರ್ಕಾರ ಇದಕ್ಕೆ ಯಾವ ಮಹತ್ವವನ್ನು ಕೊಡದೆ ಈ ತಬ್ಬಲಿ ಸಮುದಾಯಗಳನ್ನು ಸಂಪೂರ್ಣವಾಗಿ ಬೀದಿಪಾಲು ಮಾಡಿತು.

ಕರ್ನಾಟಕದ ಸಂದರ್ಭದಲ್ಲಿ ಈ ತಬ್ಬಲಿ ಸಮುದಾಯಗಳು

ಕರ್ನಾಟಕ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಇಲ್ಲಿ 34.6 ಲಕ್ಷ ಬುಡಕಟ್ಟು ಜನಸಂಖ್ಯೆ ಇದ್ದು (6.6%) ಅವರಲ್ಲಿ ಶೇಕಡ 70ರಷ್ಟು ಜನ ಆರು ಜಿಲ್ಲೆಗಳಲ್ಲಿ – ಚಿತ್ರದುರ್ಗ, ರಾಯಚೂರು, ಕೊಪ್ಪಳ, ಮೈಸೂರು, ಬಳ್ಳಾರಿ, ಬೀದರ್‌ಗಳಲ್ಲಿ ಹರಡಿಕೊಂಡಿದ್ದಾರೆ. ಡಾ.ಸಿ.ಎಸ್.ದ್ವಾರಕಾನಾಥ್ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಈ ಸಮುದಾಯಗಳ ಒಳಿತಿಗಾಗಿ ಕೆಲವು ಶಿಫಾರಸು ಮತ್ತು ಸಲಹೆಗಳನ್ನು ನೀಡಿದ್ದು ಅವು ಹೀಗಿವೆ:

- ಈ ಸಮುದಾಯಗಳು ಆರ್ಥಿಕವಾಗಿ ಬಲಗೊಳ್ಳಲು ಹಣಕಾಸಿನ ನೆರವು ನೀಡಿ ಬದುಕಿಗೊಂದು ಮಾರ್ಗ ಕಲ್ಪಿಸುವುದು
- ಭೂಮಿ ನೀಡುವುದು
- ಶಿಕ್ಷಣ
- ವಸತಿ
- ಸಾಮಾಜಿಕ ಸುರಕ್ಷೆ
- ಈ ಸಮುದಾಯಗಳ ಕುರಿತು ಅಧ್ಯಯನ ಕೈಗೊಳ್ಳುವುದು

ಹಾವಾಡಿಗರು

ಬೆಂಗಳೂರು ನಗರದ ಸುತ್ತಮುತ್ತ ಈ ಹಾವಾಡಿಗರು ಅಲ್ಲಲ್ಲಿ ಕಾಣಸಿಗುತ್ತಾರೆ. ಮಾನವ ಶಾಸ್ತ್ರಜ್ಞರು ಅಲೆಮಾರಿ ಸಮುದಾಯಗಳ ಮುಖ್ಯ ಲಕ್ಷಣ ಎಂದು ಗುರುತಿಸುವ ಏಕವ್ಯಕ್ತಿ ನಾಯಕತ್ವವನ್ನು ಅವರು ಹೊಂದಿದ್ದಾರೆ. ಅಬ್ದುಲ್ ರಜಾಕ್ ಅವರ ನಾಯಕ. ಅವರ ಅಂದಿನ ದುಡಿಮೆ ಅವತ್ತಿನ ಹೊಟ್ಟೆಪಾಡಿಗಷ್ಟೆ. ಕೂಡಿಡಲು ಅಥವಾ ಹೆಚ್ಚೆಚ್ಚು ದುಡಿಯಲು ಅವರೆಂದೂ ಉತ್ಸುಕರಾಗಿಲ್ಲ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಅದರ ಸುತ್ತಮುತ್ತ ಸುಮಾರು 371 ಹಾವಾಡಿಗರ ಕುಟುಂಬಗಳಿವೆ. ಇತ್ತೀಚೆಗೆ 'ಜೈ ಭುವನೇಶ್ವರಿ ನಗರ'ದಲ್ಲಿ ಹಾವಾಡಿಗರ ಕಾಲೋನಿಯೊಂದು ತಲೆಯೆತ್ತಿದೆ. ಫ್ಲೈ ಓವರ್ ನಿರ್ಮಾಣದಿಂದ ನೆಲೆ ಕಳೆದುಕೊಂಡಿದ್ದವರಿಗೆ ಕೊಳಚೆ ನಿರ್ಮೂಲನಾ ಮಂಡಳಿ ಈ ವಸತಿ ನೆಲೆ ಕಲ್ಪಿಸಿದೆ. 20 ಕುಟುಂಬಗಳಿಂದ ಶುರುವಾದ ಈ ನೆಲೆ ಈಗ 150 ಕುಟುಂಬಗಳನ್ನು ಹೊಂದಿದೆ. ಕೊಳಚೆ ನಿರ್ಮೂಲನಾ ಮಂಡಳಿ ಅವರಿಗೆ ಒಂದು ಕೋಣೆ, ಒಂದು ಬಚ್ಚಲುಕೋಣೆಯಿರುವ ಶೆಡ್‌ಗಳನ್ನು ನಿರ್ಮಿಸಿಕೊಟ್ಟಿದೆ. ಇಷ್ಟಾಗಿಯೂ ಈ ಸಮುದಾಯಗಳು ತಮಗೆ ಕೊಟ್ಟಿರುವ ಕಿರಿದಾದ ಮನೆಗಳಲ್ಲಿ ಹಾಗೂ ಅದರ ಆಚೀಚೆ ಟೆಂಟ್ ಹಾಕಿಕೊಂಡು ಹೇಗೋ ಒಗ್ಗಿಕೊಳ್ಳಲು ಕಷ್ಟಪಡುತ್ತಾ ತಮ್ಮ ಬದುಕಿನ ಬಂಡಿಯನ್ನು ಎಳೆಯುತ್ತಿವೆ.

ಇವರಲ್ಲಿ ಹೆಚ್ಚಿನವರು ತಮ್ಮ ಸಾಮಾನುಗಳನ್ನು ಅಡವಿಟ್ಟು ಸಾಲ ತೆಗೆದುಕೊಂಡಿದ್ದರೆ, ಕೆಲವರು ಸುಲಭದ ರೇಟಿಗೆ ಸಿಗುವ ನಗರದ ಪಾತ್ರೆ ಸಾಮಾನುಗಳನ್ನು ತಂದಿಟ್ಟುಕೊಂಡಿದ್ದಾರೆ. ಬಡತನ ಎಂಬ ಒಂದೇ ಕಾರಣಕ್ಕೆ ಇವರಿಗೆ ಮಧ್ಯಾಹ್ನದ ಊಟವಿಲ್ಲ. ದಿನಕ್ಕೆ ಎರಡು ಬಾರಿಯಷ್ಟೇ ಊಟ ಮಾಡಲು ಶಕ್ತರು. ಒಂದು ರೂಪಾಯಿಗೊಂದು ಬಕೆಟಿನಂತೆ ಸಾರ್ವಜನಿಕ ಶೌಚಾಲಯದಿಂದ ನೀರು ತರುತ್ತಾರೆ. ಕುಡಿಯಲು, ಮತ್ತೆಲ್ಲಕ್ಕೂ ಅದೇ ನೀರು ಬಳಸುತ್ತಾರೆ. ಎದುರಿನ ಮೈದಾನವನ್ನು ಶೌಚಕ್ಕಾಗಿ ಬಳಸುತ್ತಾರೆ. ಸೂರ್ಯಾಸ್ತಕ್ಕೂ ಮುನ್ನ ಮತ್ತು ಸೂರ್ಯೋದಯದ ನಂತರವಷ್ಟೆ ಇವರಿಗೆ ಶೌಚದ ಭಾಗ್ಯ. ಕಡಿಮೆ ಬೆಲೆಗೆ ಸಿಕ್ಕ ಅಕ್ಕಿ ಮತ್ತು ತರಕಾರಿಯಲ್ಲಿ ಅಡುಗೆ ಮಾಡಿ ಉಣ್ಣುತ್ತಾರೆ. ಹುಡುಗರು 10 ರೂ. ಕೊಟ್ಟು ಸಾರ್ವಜನಿಕ ಸ್ನಾನಗೃಹ, ಶೌಚಾಲಯಗಳಲ್ಲಿ ಸ್ನಾನ ಮುಗಿಸಿ ಮಸೀದಿಗೆ ನಮಾಜಿಗೆಂದು ಹೋಗುತ್ತಾರೆ.

ಜಗತ್ತಿನಲ್ಲಿಯೇ ಇವರಷ್ಟು ಅತಿ ಸರಳವಾದ ಮದುವೆ ಮತ್ತೊಂದು ಇರಲಾರದು. ಹುಡುಗನ ಮನೆಯವರು ಮದುವೆ ಆಚರಣೆಗಳಿಗಾಗಿ 20 ರೂಪಾಯಿ ವೀಳ್ಯದೆಲೆ ತರಬೇಕು. ಹುಡುಗಿ ಕಡೆಯವರು 10 ರೂಪಾಯಿ ಎಲೆ ತರಬೇಕು. ಹಣ ಕೊಟ್ಟು ತೆಗೆದುಕೊಳ್ಳುವ ಪದ್ಧತಿ ಇವರಲ್ಲಿಲ್ಲ. ದುಡ್ಡಿದ್ದವರು ಬಿರಿಯಾನಿ ಊಟ ಹಾಕಿಸಿದರೆ ಉಳಿದವರು ತರಕಾರಿ ಊಟ ಅಥವಾ ಚಹಾ ಬಿಸ್ಕತ್ ಕೊಟ್ಟು ಮದುವೆ ಮುಗಿಸುತ್ತಾರೆ.

ಹಾವಾಡಿಗರದು ಕಲಾವಿದರ ಸಮುದಾಯ. ಅದು ಸಣ್ಣ ಸಮುದಾಯವಾದ್ದರಿಂದ ಒಗ್ಗಟ್ಟಿನಿಂದಿದ್ದಾರೆ. ಇವರ ಬದುಕೇ ಹಾವಿನೊಂದಿಗಿನ ಪ್ರದರ್ಶನದ ಸುತ್ತ ಗಿರಕಿ ಹೊಡೆಯುತ್ತಿದೆ. ಇವರ ಬದುಕಿನ ಘನತೆ, ಹೆಮ್ಮೆ ಎಲ್ಲವೂ ತರಾವರಿ ಹಾವಿನೊಂದಿಗಿನ ಪ್ರದರ್ಶನದಲ್ಲಿದೆ. ತಲೆಮಾರುಗಳಿಂದ ರೂಢಿಸಿಕೊಂಡು ಬಂದ ಈ ಪ್ರದರ್ಶನವೇ ಇವರಿಗೆ ಅನ್ನ ನೀರು ಕೊಟ್ಟಿದೆ. ಉಪವಾಸ ಬಿದ್ದರೂ ತಮ್ಮ ವೃತ್ತಿ ಬಿಟ್ಟು ಬೇರೆ ಕೆಲಸ ಮಾಡಲೊಪ್ಪದ ಇವರನ್ನು ಆಗಾಗ ಪೊಲೀಸರು ಬೆದರಿಸಿ ಇವರು ಸಂಪಾದಿಸಿದ ಪುಡಿಗಾಸನ್ನು ಕಿತ್ತುಕೊಂಡು ಹೋಗುತ್ತಾರೆ. ಜನರಿಗೆ ಹೆದರಿ ಊರೊಳಗೆ ಹೋಗದೇ ತಮ್ಮ ಕಿರಿದಾದ ಓಣಿಯ ಬಿಡಾರದಲ್ಲೆ ಕಾಲ ಕಳೆಯುವುದರಿಂದ ಹಸಿವು ಮತ್ತು ಸೋಮಾರಿತನ ಇವರೊಳಗೆ ಒಟ್ಟೊಟ್ಟಿಗೆ ಹುಟ್ಟಿಕೊಂಡಿವೆ.



ಹಣತೆ

ಕುಂಬಾರರು ಮಾಡಿದ ಹಣತೆಗೆ
ಗಾಣಿಗರ ಎಣ್ಣೆಯ ತುಂಬಿ
ಒಕ್ಕಲಿಗರು ಬೆಳೆದ ಹತ್ತಿಯ ಹೊಸೆದು
ಬತ್ತಿಯ ಮಾಡಿ ದೀಪವ ಹಚ್ಚಿದರೆ
ಹಲವು ಜಾತಿಗಳು ಕೂಡಿ
ಕುಲಗೆಟ್ಟ ಬೆಳಕು ನೋಡ

ಜರಗನಹಳ್ಳಿ ಶಿವಶಂಕರ್

ಕರಡಿ ಖಲಂದರರು:

ಕರಡಿಯ ಬೆನ್ನ ಮೇಲೆ ಕೂತರೆ ಮಕ್ಕಳು ಧೈರ್ಯವಂತರಾಗುತ್ತಾರೆ, ರಾತ್ರಿ ಹಾಸಿಗೆಯಲ್ಲಿ ಮೂತ್ರ ಮಾಡಿಕೊಳುವುದಿಲ್ಲ ಎಂಬ ಪ್ರತೀತಿ ಈಗಲೂ ಜನರಲ್ಲಿದೆ. ಅಲ್ಲದೆ ಕರಡಿಯ ಉಗುರು ಮತ್ತು ಹಲ್ಲಿಗೆ ಔಷಧೀಯ ಗುಣಗಳಿವೆ ಎಂದು ಕೆಲವರು ನಂಬಿದ್ದಾರೆ. ಕರಡಿಯಾಡಿಸುವ ಖಲಂದರರು ಸಣ್ಣ ತಾಯಿತಗಳನ್ನು, ಬಿಲ್ಲೆಗಳನ್ನು ಮಾಡಿ ಮಾರುತ್ತಾರೆ. ನಿಯಮಿತವಾಗಿ ಕೈಕಡಗ, ಕೋಲು ಕುಟ್ಟುತ್ತ ಕುಣಿಸುತ್ತ ಬರುವ ಕರಡಿಯಾತನನ್ನು ಹಳ್ಳಿಗರು ಪ್ರೀತಿಯಿಂದ ಕಾಣುತ್ತಾ ದವಸ ಧಾನ್ಯ, ಹಳೆ ಬಟ್ಟೆ ಕೊಟ್ಟು ಕಳಿಸುವ ಚಿತ್ರಗಳು ದಶಕದ ಹಿಂದೆ ಎಲ್ಲ ಹಳ್ಳಿಗರಲ್ಲೂ ಹಸಿರಾಗಿತ್ತು.





With Best Compliments From
Jayalakshmi Ananthram
Managing Director
Om Thara Kala Kuteera
2201 XI Main, A Block, II Stage,
Rajajinagar, Bangalore-560010
Ph: 080-23375139/23374369
Mob: 9845006522/ 9845050108
Survey No: 42/2,
Basavenahalli,Solur Hobli,
Magadi Taluk,
Ramanagar Dist.

ಈಗ ಕರಡಿ ಖಲಂದರರು ನಮ್ಮೂರುಗಳಲ್ಲಿ ಣಿಸಿಕೊಳ್ಳುವುದು ಅಪರೂಪವಾಗಿದೆ. ವನ್ಯಜೀವಿಗಳ ಮೇಲಣ ರ್ಯ (ನಿಯಂತ್ರಣ) ಅಧಿನಿಯಮ ಮತ್ತು ವನ್ಯ ಜೀವಿ ರಕ್ಷಣಾ ಅಧಿನಿಯಮಗಳು ಸಾರ್ವಜನಿಕ ಪ್ರದೇಶಗಳಲ್ಲಿ ಡುಪ್ರಾಣಿಗಳನ್ನು ಅಕ್ರಮವಾಗಿ ಂದಿರುವವರನ್ನು ಕ್ರಿಮಿನಲ್‌ಗಳೆಂದು ಸರಿಸಿವೆ. ಹೀಗಾಗಿ ಕರಡಿಯನ್ನೇ ಬಿಕೊಂಡಿರುವ ಖಲಂದರರು ಕಾನೂನಿನ ನಲ್ಲಿ ಕ್ರಿಮಿನಲ್‌ಗಳು.

ಕರಡಿ ಖಲಂದರರ ಬಗ್ಗೆ ಅಂಥ ದೊಡ್ಡ ಶೋಧನೆಗಳೇನು ನಡೆದಿಲ್ಲ. ಪ್ರ.ರಹಮತ್ ೀಕೆರೆಯವರು **ಕರಡಿ ಲಂದರರು:ಒಂದು ಅದೃಶ್ಯ ಮುದಾಯ** ಎಂಬ ಲೇಖನದಲ್ಲಿ ಲಂದರರ ಸಂಕಟ ತುಂಬಿಕೊಂಡ ರುಣ [illegible] ಚಿತ್ರಗಳನ್ನು ಹಸಿಯಾಗಿ ಚಿತ್ರಿಸಿದ್ದಾರೆ: ದಲಿಗೆ ಪ್ರಾಣಿ ರಕ್ಷಕ ಎನ್‌ಜಿಓಗಳ ರ್ಯಾಚರಣೆಯಿಂದ ಖಲಂದರರು ಗಾಲಾದರು. ಮೇನಕಾಗಾಂಧಿ ಹದವರಿಂದ ಈ ಪ್ರಾಣಿಪ್ರಿಯರು ಜ್ಜಾದರು. ಮಲೆನಾಡಿನಲ್ಲಿ ಆಗಿರುವಂತೆ ಯೂ ಕೂಡ ಪರಿಸರವಾದಿಗಳು ಜನರ ಕಷ್ಟವನ್ನು ಆಲೋಚಿಸುವುದಿಲ್ಲ. ಮುವಾದಿಗಳು, ಅಮೆರಿಕಾದ ಸಾಮ್ರಾಜ್ಯಶಾಹಿ ಯುದ್ಧಗಳು ಜನರನ್ನು ಕೊಲ್ಲುವಾಗ ಪ್ತವಾಗಿರುವ ಇವರು; ನಾಯಿ, ಮಂಗ, ಕತ್ತೆ, ಕುದುರೆಗಳಿಗಾಗಿ ಕರುಣೆ ೀರುವುದು ಒಂದು ವ್ಯಂಗ್ಯ. ಯೂರೋಪಿನ ಅನೇಕ ಪರಿಸರವಾದಿಗಳು ಹಾಗೆಯೇ. ಕದ ಸಿಂಹ, ಆನೆ, ಮೊಸಳೆಗಳಿಗಾಗಿ ಅವರು ತೋರುವ ಕಳವಳವನ್ನು ಆಫ್ರಿಕನ್ನರ ಮಣ ಬದುಕಿನ ಬಗ್ಗೆ ತೋರುವುದಿಲ್ಲ. ಖಲಂದರರು ಕೇಳುತ್ತಾರೆ: 'ಸಾರ್, ವಸ್ಥಾನಗಳಲ್ಲಿ ಆನೆ ಸಾಕಲಾಗಿದೆ. ಅದನ್ನು ಇಟ್ಟುಕೊಂಡು ಮಠಗಳು ಊರೂರು ಗಿ ಕಾಣಿಕೆ ಸಂಗ್ರಹಿಸುತ್ತವೆ. ಜೂಗಳಲ್ಲಿ ಪ್ರಾಣಿಗಳನ್ನು ಬಳಸುತ್ತಾರೆ. ಅದು ೀಹಿಂಸೆ ಅಲ್ಲವಾದರೆ ನಮ್ಮದು ಹೇಗೆ?'

ಪಟ್ಟಿ 1: ಕರ್ನಾಟಕದಲ್ಲಿ ಖಲಂದರರ ಜನಸಂಖ್ಯೆ

	ತಾಲ್ಲೂಕು	ಗ್ರಾಮ	ಕುಟುಂಬಗಳು
ೀಲಾರ	ಶ್ರೀನಿವಾಸಪುರ	ಅರಳಕುಂಟೆ	25
ರಿ	ಹೊಸಪೇಟೆ	ಹಂಪಿನಕಟ್ಟೆ	100
	ಹಡಗಲಿ	ಐನಹಳ್ಳಿ	130
ಪ್ಪಳ	ಕೊಪ್ಪಳ	ಮಂಗಳಾಪುರ	30
	ಗಂಗಾವತಿ	ಹುಲಿಹೈದರ್	125
		ಚಿಕ್ಕಾಡ	50
ಾವಾಡ	ಕಲಘಟಗಿ	ಯೆರಗುಡಿ	50
		ಶಿವ್ನಾಪುರ	25
		ಗೋನಾರ್	50
ಗಾಂ	ರಾಮದುರ್ಗ	ಹಳ್ಳೇಲಿ	15
	ಖಾನಾಪುರ	ಚಿಕ್ಕಂಗ್ರೋಳಿ	19 to 22
		ಒಟ್ಟು	489 ಕುಟುಂಬಗಳು



[ಮಾಹಿತಿ: ಕರಡಿಯಾಟಗಾರರ ಸಂಘದ ಅಧ್ಯಕ್ಷರಾದ ಮಂಗಳಾಪುರದ ರಾಜಾಸಾಬ್ ಹುಸೇನರು ನೀಡಿರುತ್ತಾರೆ.]

ಹಾವಾಡಿಗರು ಮತ್ತು ಕರಡಿ ಖಲಂದರರು ಮೂರು ಕಾರಣಗಳಿಗಾಗಿ ತಾರತಮ್ಯಕ್ಕೊಳಗಾಗಿದ್ದಾರೆ. ಮೊದನೆಯದು ಅಲೆಮಾರಿಗಳೆಂಬ ಕಾರಣಕ್ಕೆ, ಎರಡನೆಯದು ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದ ಕಾರಣಕ್ಕೆ, ಮೂರನೆಯದು ಕಾನೂನು ನಿಷೇಧಿಸಿರುವ ವೃತ್ತಿ ಮಾಡಿಕೊಂಡಿರುವ ಕಾರಣಕ್ಕೆ.

ಈ ಎರಡೂ ಸಮುದಾಯಗಳು ಮುಸ್ಲಿಂ ಧರ್ಮಕ್ಕೆ ಸೇರಿವೆ. ಎರಡೂ ಒಂದೇ ತೆರಹದ ಸಮಸ್ಯೆಯನ್ನು ಎದುರಿಸುತ್ತಿವೆ. ಮುಖ್ಯ ವ್ಯತ್ಯಾಸವೆಂದರೆ ಹಾವಾಡಿಗರು ನಗರೀಕೃತಗೊಂಡರೆ ಖಲಂದರರು ಹಳ್ಳಿಗಳ ಜೊತೆ ಬದುಕು ಬೆಸೆದುಕೊಂಡಿದ್ದಾರೆ. ಹಾವುಗಳನ್ನು ಆಡಿಸಲು ಕಾನೂನು ಅಷ್ಟು ನಿರ್ಬಂಧಿಸಲಾರದು. ಆದರೆ ಕರಡಿ ಆಡಿಸುವುದು ಕಷ್ಟವಿದೆ. ತತ್‌ಕ್ಷಣದ ಪುನರ್ವಸತಿ ಕಾರ್ಯಕ್ರಮವೆಂದರೆ ಸಮುದಾಯದ ಹಳೆಯ ಸದಸ್ಯರು ಈ ವೃತ್ತಿಯನ್ನು ಕೆಲ ಕಾಲ ಮೃಗಾಲಯದ ಅಧಿಕಾರಿಗಳ ಪರವಾನಿಗೆ ಪಡೆದು ಮುಂದುವರೆಸಲು ಅನುಮತಿ ನೀಡುವುದು, ಈಗಿನ ಪೀಳಿಗೆಗೆ ಸಾಗುವಳಿ ಭೂಮಿ ಒದಗಿಸುವುದು.

ವಿಶ್ವಸಂಸ್ಥೆಯು ಮೂಲನಿವಾಸಿಗಳ ಹಕ್ಕುಗಳ ಕುರಿತು ಅನೇಕ ನಿಯಮಗಳನ್ನು ರೂಪಿಸಿದೆ. ಅವುಗಳಲ್ಲಿ ಬಹುಮುಖ್ಯವಾಗಿ ಒಂದು ದೇಶದ ಮೂಲನಿವಾಸಿಗಳಿಗೆ ಕೊಡಬೇಕಾಗಿರುವ ಕೆಲವು ಅಗತ್ಯ ಹಕ್ಕುಗಳ ಕುರಿತು ಪ್ರಸ್ತಾಪಿಸುತ್ತದೆ. ಅದರಲ್ಲಿನ ಕೆಲವು ನಿಯಮ ಮತ್ತು ಉಪಬಂಧಗಳು ಹಾವಾಡಿಗರು ಮತ್ತು ಖಲಂದರರಿಗೂ ಅನ್ವಯಿಸುತ್ತವೆ:

- ತಮ್ಮ ಪಾರಂಪರಿಕ ಕಲೆ ಮತ್ತು ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವ ಹಕ್ಕು
- ಪಾರಂಪರಿಕವಾಗಿ ಹೊಂದಿದ್ದ ಭೂಮಿ, ಪ್ರದೇಶ, ಮತ್ತು ಸಂಪನ್ಮೂಲಗಳನ್ನು ಹೊಂದುವ, ಅಭಿವೃದ್ಧಿಪಡಿಸುವ ಹಾಗೂ ಬಳಸುವ ಹಕ್ಕು

With Best Compliments From

TOYOTA

RAVINDU TOYOTA
No.25, Chord Road, Opp. ISKCON Temple
Rajajinagar Indl. Suburb
Bangalore- 560022. (INDIA)
Ph: 080-30111600, Fax: 080-30111611
Mobile: 9900204283
E- mail: sales@ravindu.co.in
Website: www.ravindutoyota.net

Showroom:
Vaswani Victoria, No. 30, Victoria Road,
B'lore-25.(INDIA)
PH: 080-25577201-205, fAX: 080-41145005

Showroom:
NO. 80/3, Bellandur Village, Varthur Hobli,
Marathahalli Ring Road, Bangalore- 560103
Ph. 080-33150000

With Best Compliments From

Swathi
Restaurant
Andhra Style Family Restaurant

SWATHI RESTAURANT
ANDHRA STYLE FAMILY RESTAURANT
West of Chord Road, Rajajinagar,
Bangalore-86

Tel: 23595565, 32921516, 23498074
Email: swathigroup24@gmail.com.
Web: swathigroup.co.in
Free Home Delivery 9900013400/401

With Best Compliments From

Mr. D. D. BHAT
General Manager
J K.Tyre and Industries Ltd,
VIKRANT TYRE PLANT-1
K. R. S. Road, Metagalli,
Mysore-570016

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಇಂಥ ಮೂಲನಿವಾಸಿ ಜನರ ಸಾಂಸ್ಕೃತಿಕ, ರ್ಮಿಕ, ಆಧ್ಯಾತ್ಮಿಕ ಸೊತ್ತನ್ನು ಅವರ ಮುಕ್ತ ಒಪ್ಪಿಗೆಯಿಂದ ಮತ್ತು ಸೂಕ್ತ ವ್ಯವಸ್ಥೆ ಪ್ಪಿಸಿ ಸ್ವಾಧೀನಪಡಿಸಿಕೊಳ್ಳಬೇಕು. ಅವರ ಭೂಮಿ, ಆಸ್ತಿಗಳ ಮೇಲಿನ ಹಕ್ಕನ್ನು ನೂನು ಮಾನ್ಯ ಮಾಡಬೇಕು.

ಆದರೆ ನಮ್ಮ ದೇಶದ ಕಾನೂನು ಈ ಸಮುದಾಯಗಳನ್ನು ಅವರು ತಮ್ಮ ತ್ತಿಗಾಗಿ ಸಾಕಿರುವ, ತರಬೇತಿ ಕೊಟ್ಟು ಬಳಸುವ ಪ್ರಾಣಿಗಳ ಕಾರಣದಿಂದ ಪರಾಧಿಗಳೆಂದೇ ಪರಿಗಣಿಸುತ್ತದೆ. ಈ ಎರಡು ಸಮುದಾಯಗಳ ಮೇಲೆ ಕಾನೂನು ು ಕೈಗೊಳ್ಳುವಂತೆ ಮಾಡಿರುವ ಕಾನೂನುಗಳೆಂದರೆ:

1. ವನ್ಯಜೀವಿಗಳ ಮೇಲಣ ಕ್ರೌರ್ಯ (ನಿಯಂತ್ರಣ) ಅಧಿನಿಯಮ, 1960
2. ವನ್ಯ ಜೀವಿ ಸಂರಕ್ಷಣಾ ಅಧಿನಿಯಮ, 1972

ಇವೆರಡು ಅಧಿನಿಯಮಗಳು ಮನುಷ್ಯರು ವನ್ಯಪ್ರಾಣಿಗಳನ್ನು ಸಾಕುವುದನ್ನು, ಗಿಸುವುದನ್ನು, ವೃತ್ತಿಗಾಗಿ ಊರೂರಿಗೆ ಕೊಂಡೊಯ್ದು ತಿರುಗುವುದನ್ನು ೀಧಿಸುತ್ತವೆ. ಎಲ್ಲವೂ ಕೊನೆಗೆ ಸೂಕ್ತ ಅಥಾರಿಟಿಯಿಂದ ಮೊದಲೇ ಅನುಮತಿ ೆಯಬೇಕೆಂಬ ಷರತ್ತು ವಿಧಿಸುತ್ತವೆ. ಅದೇ ವೇಳೆಗೆ ಪೊಲೀಸರಿಗೆ ಮತ್ತು ಅರಣ್ಯ ಾಖೆಗೆ ಯಾರನ್ನಾದರೂ ಪ್ರಶ್ನಿಸುವ, ಬಂಧಿಸುವ, ವಿಚಾರಣಾಧೀನ ದಿಯನ್ನಾಗಿಸಿ ಕಸ್ಟಡಿಯಲ್ಲಿಟ್ಟುಕೊಳ್ಳುವ, ಜಪ್ತಿ ಮಾಡುವ ಅನಿಯಂತ್ರಿತ ಕಾರವನ್ನು ನೀಡಿವೆ.

ಸುಪ್ರೀಂ ಕೋರ್ಟ್ *N.R. Nair and Others Vs. Union of India d Others*; (AIR 2001 SC 2337) ಪ್ರಕರಣದ ತೀರ್ಪಿನಲ್ಲಿ ಕರಡಿಯಂಥ ಪ್ರಾಣಿಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಿದ್ದರೂ ಸಾಕಿಕೊಳ್ಳಬಹುದೆಂದು ಳಿತ್ತು. 2002ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಬಂದು ಶಪಾರಂಪರ್ಯವಾಗಿ ಬಂದ ಪ್ರಾಣಿಗಳು ಹಾಗೂ ಪ್ರಾಣಿ ಉತ್ಪನ್ನಗಳಲ್ಲದೇ ಿದಂತೆ ಪ್ರಾಣಿಗಳನ್ನು ಹೊಂದುವುದು, ಸಾಕುವುದು, ನಿಯಂತ್ರಿಸುವುದು, ಮಾರುವುದನ್ನು ನಿಷೇಧಿಸಿತು. ಕೇಂದ್ರ ಸರ್ಕಾರ 2003ರ ವನ್ಯಜೀವಿ ಸಂಗ್ರಹ(ಸ್ಟಾಕ್) ನಿಯಮಗಳಿಗನುಗುಣವಾಗಿ ಅವುಗಳನ್ನಿಟ್ಟುಕೊಳ್ಳುವುದಕ್ಕೆ ಅನುಮತಿಯನ್ನು ಕಡ್ಡಾಯ ಮಾಡಿತು. 2003ರ ಮಧ್ಯಪ್ರದೇಶ ಹೈಕೋರ್ಟ್ *Jadugar Anand Vs. State of M.P. and Others*, (2003 (1) MPHT 297, 2003 (1) MPLJ 231) ಪ್ರಕರಣದ ತೀರ್ಪಿನಲ್ಲಿ ಪ್ರದರ್ಶನವೆಂದರೆ ಟಿಕೆಟ್‌ಗಳನ್ನು ಮಾರಾಟ ಮಾಡಿ ಪ್ರದರ್ಶಿಸುವುದು ಎಂದೂ, 'ತರಬೇತಿ ಕೊಡುವುದು' ಎಂದರೆ ಪ್ರದರ್ಶನಕ್ಕೆ ತಕ್ಕುದಾಗಿ ಪ್ರಾಣಿಗಳಿಗೆ ತರಬೇತಿ ಕೊಡುವುದೆಂದೂ ಸ್ಪಷ್ಟಪಡಿಸಿದೆ. ಆದರೆ ಖಲಂದರರಾಗಲೀ, ಹಾವಾಡಿಗರಾಗಲೀ ಟಿಕೆಟ್ ಇಟ್ಟು ಮಾರಿ ಪ್ರದರ್ಶನ ಏರ್ಪಡಿಸುವುದಿಲ್ಲವಾದ್ದರಿಂದ ಇವರು ಆ ಕಾನೂನಿನ ವ್ಯಾಪ್ತಿಯ ಹೊರಗೆ ಬರುತ್ತಾರೆ. ಈ ತಬ್ಬಲಿ ಸಮುದಾಯಗಳ ಅನಕ್ಷರತೆ ಮತ್ತು ಬಡತನವನ್ನು ಗಮನದಲ್ಲಿಟ್ಟುಕೊಂಡು ಅವರ ಬದುಕಿನ ಭಾಗವಾಗಿರುವ ಪ್ರಾಣಿಗಳನ್ನು ಹೊತ್ತೊಯ್ಯುವ ಮೊದಲು ನಮ್ಮಂತೆ ಬದುಕುವ ಎಲ್ಲ ಹಕ್ಕು, ರಹದಾರಿಗಳನ್ನು ಸರ್ಕಾರಗಳು ನಿರ್ಮಿಸಬೇಕಿವೆ.

ಬಾಳಿಕೆ

ಹತ್ತಾರು ವರುಷ
ನೆರಳಾಗಿ ನಿಂತ ಮರ
ತೊಲೆಯಾಗಿ ಉಳಿಯಿತು
ನೂರಾರು ವರುಷ
ನೂರು ವರುಷ
ಆಳಿದ ಅರಸ
ಹೆಣವಾಗಿ ಉಳಿಯಲಿಲ್ಲ
ಮೂರು ದಿವಸ

ಜರಗನಹಳ್ಳಿ ಶಿವಶಂಕರ್

ಕೆ. ಎಲ್. ಚಂದ್ರಶೇಖರ ಐಜೂರ್

ಕ್ರಿಮಿನಲ್ ಲಾ, ಅಂಬೇಡ್ಕರ್ ಅಧ್ಯಯನ ಮತ್ತು ರಾಜ್ಯಶಾಸ್ತ್ರಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಐಜೂರ್ 'ಕನ್ನಡ ಟೈಮ್ಸ್' ವಾರಪತ್ರಿಕೆಯ ಸಂಪಾದಕರಾಗಿದ್ದರು. 'ಅಸಮಾನ ಭಾರತ', 'ಸಂವಿಧಾನ-60: ಸಾಮಾಜಿಕ ನ್ಯಾಯ ಮತ್ತು ಕರ್ನಾಟಕ', 'ದೇಶವಿದೇನಹಾ ಕಾಲವಿದೇನಹಾ!' ಇವರ ಸಂಪಾದಿತ ಕೃತಿಗಳು. ಈಗ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರದಲ್ಲಿ ಸಂಶೋಧಕರಾಗಿದ್ದಾರೆ.

ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು

ರಂಗನಾಥ ಕಂಟನಕುಂಟೆ

ಸಾಂಸ್ಕೃತಿಕವಾಗಿ ಜಾತಿ ಮತ್ತು ಪುರುಷ ಪ್ರಧಾನ ಸಮಾಜದ ಮೌಲ್ಯಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ತೋರುತ್ತಲೆ ತಮ್ಮ ಅಸ್ಮಿತೆಗಳನ್ನು ಹುಡುಕಿಕೊಳ್ಳುವ ಪ್ರಯತ್ನ ನಡೆಸಲಾಯಿತು. ಅದರಿಂದ ಸಾಹಿತ್ಯಕ್ಕೆ ಒಂದು ಬಗೆಯ ಫೋಕಸ್ ಸಿಕ್ಕಂತಾಯಿತೇ ಹೊರತು ಅದರಿಂದ ಸಾಹಿತ್ಯ ಸಾವನ್ನಪ್ಪಲಿಲ್ಲ. ಅಂತಹ ಫೋಕಸ್ ವಚನ ಪಂಥಕ್ಕೆ, ಭಕ್ತಿ ಪಂಥಕ್ಕೆ, ನವೋದಯ, ನವ್ಯ ಸಾಹಿತ್ಯದ ಬರೆಹಗಾರರಿಗೂ ಸಿಕ್ಕಿದೆ; ಸಿಕ್ಕ ಕಾರಣವಾಗಿಯೇ ಕೆಲವು ಚಹರೆಗಳನ್ನು ಆಧರಿಸಿ ಅದನ್ನು ಒಂದು ನಿರ್ದಿಷ್ಟ ಸಾಹಿತ್ಯಕ ಚಳವಳಿಯನ್ನಾಗಿ ಗುರುತಿಸುವುದು. ಸದ್ಯದ ಸಾಹಿತ್ಯಕ್ಕೆ ಅಂತಹ ಒಂದು ಫೋಕಸ್ ಇಲ್ಲದ ಕಾರಣ ಅದು ದುರ್ಬಲವಾಗಿ ಕಾಣುತ್ತಿದೆ. ಇದನ್ನು ಲೇಖಕರು ಅರಿಯಬೇಕಿದೆಯಷ್ಟೇ.

ಕೆಲವು ಕೇಳ್ವಿಗಳ ಮೂಲಕ ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನು ವಿವರಿಸಿಕೊಳ್ಳಬಹುದೆನಿಸುತ್ತದೆ. 'ಇತ್ತೀಚಿನ' ಎನ್ನುವುದನ್ನು 'ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶ' ಎಂದು ಗ್ರಹಿಸುವುದು ಒಳಿತು; ಆಗ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಈ 'ಸಮಕಾಲೀನತೆ'ಗೆ ಅರ್ಥವೇನು? ಈ ಕಾಲಗಟ್ಟದಲ್ಲಿ ಸೃಷ್ಟಿಸುವ ಸಾಹಿತ್ಯವೆಲ್ಲವೂ ಸಮಕಾಲೀನವೇ? ಸಾಹಿತ್ಯ ಸಾಂಸ್ಕೃತಿಕವಾಗುವ ಬಗೆ ಹೇಗೆ? ವರ್ತಮಾನದಲ್ಲಿ ನಿಂತು ನಿನ್ನೆ ಮತ್ತು ನಾಳೆಗಳನ್ನು ತಬ್ಬಿಕೊಂಡು ಆಲೋಚಿಸುವುದೆ? ಕಾಲದ ದೃಷ್ಟಿಯಿಂದ ಇಂದು ನಾವು ಯೋಚಿಸುತ್ತಿರುವ, ಸಾಹಿತ್ಯ ಸೃಷ್ಟಿಸುತ್ತಿರುವ ಸಂದರ್ಭ **'ಸಮಕಾಲೀನ'** ಎನ್ನಬಹುದು. **ಆದರೆ ಸಾಹಿತ್ಯ ಕೃತಿಯೊಂದರ ಒಡಲಲ್ಲಿರುವ ಜೀವನಾನುಭವಗಳು, ಅಲ್ಲಿನ ವಿಚಾರಧಾರೆಗಳು ಸಮಕಾಲೀನವಾಗಿವೆಯೇ? ಸಾಂಸ್ಕೃತಿಕವಾಗಿವೆಯೇ? ಅವುಗಳಿಂದ ಇಂದು ಮತ್ತು ನಾಳಿನ ಬದುಕಿಗೆ ಕಸುವನ್ನು ಪಡೆಯಲು ಸಾಧ್ಯವೇ? ಬದಲಾದ ಕಾಲಕ್ಕನುಗುಣವಾಗಿ ಹೊಸಭಾಶೆಯನ್ನು ಲೇಖಕರು ಮೈಗೂಡಿಸಿಕೊಂಡಿದ್ದಾರೆಯೇ? ಹೊಸತಲೆಮಾರಿನ** ಲೇಖಕರು ತಮ್ಮ ಕಾಲದ ಪಲ್ಲಟಗಳನ್ನು ಎಚ್ಚರಿಕೆಯಿಂದ ಗ್ರಹಿಸುತ್ತಿದ್ದಾರೆಯೇ? ಎಂಬ ಕೇಳ್ವಿಗಳನ್ನು ನಾವು ಕೇಳಿಕೊಳ್ಳಬೇಕಿದೆ. ಇಂತಹ ಕೇಳ್ವಿಗಳಿಂದ ಸೃಜನಶೀಲತೆಯ ಪ್ರಕ್ರಿಯೆಯನ್ನು ಅರಿಯಲು ಸುಲಬವಾಗುತ್ತದೆ. ಹೊಸಸಾಹಿತ್ಯದ ನುಡಿಯನ್ನು ಮುಂಚೂಣಿಗೆ ತರಲು ಸಾಧ್ಯವಾಗುತ್ತದೆ. ಹೊಸತಲೆಮಾರಿನ ಲೇಖಕರನ್ನು ಗಮನಿಸುವಾಗ ಇದು ಬಹಳ ಮುಖ್ಯವೆನಿಸುತ್ತದೆ. ಕವಿ ಬ್ರೆಕ್ಟ್ ತನ್ನ ಕವಿತೆಯೊಂದರಲ್ಲಿ ಹೀಗೆ ಹೇಳುತ್ತಾನೆ.



ಹೊಸಯುಗಗಳು ಏಕಾಏಕಿ ಶುರುವಾಗುವುದಿಲ್ಲ.
ನಮ್ಮ ಅಜ್ಜನಾಗಲೇ ಹೊಸಯುಗದಲ್ಲಿ ಬಾಳುತ್ತಿದ್ದ;
ನನ್ನ ಮೊಮ್ಮಗನನ್ನೂ ಪ್ರಾಯಶಃ ಹಳೆಯದರಲ್ಲೇ ಬಾಳುವನೇನೂ. ಹೊಸ ಮಾಂಸ ತಿನ್ನುವುದು ಹಳೆಯ ಪೋರ್ಕುಗಳಿಂದಲೇ. ಹೊಸ ಆಂಟೆನಾಗಳು ಹರಡಿದ್ದು ಹಳೆಯ ಮೂರ್ಖತನಗಳನ್ನೇ ವಿವೇಕ ಸಾಗಿಬಂದಿದ್ದು ಬಾಯಿಂದ ಬಾಯಿಗೆ. (ಬ್ರೆಕ್ಟ್ ಕವಿತೆಗಳು ರ್ಗಾಳ, ಅನು–ಶಾ.ಬಾಲುರಾವ್) ಎನ್ನುತ್ತಾನೆ. ಅಂದರೆ ವಯಸ್ಸು ಸಮಕಾಲೀನತೆಯನ್ನು ನಿರ್ಧರಿಸುವ ಸಂಗತಿಯಲ್ಲ. ಅವನ ಈ ಕವಿತೆಯ ದನಿ ನಮ್ಮನ್ನು ಕಲಕುತ್ತದೆ. ಮತ್ತೆ ಮತ್ತೆ ಯೋಚಿಸುವಂತೆ ಮಾಡುತ್ತದೆ. ಅದರಲ್ಲಿಯೂ ಹೊಸತಲೆಮಾರು ಇಲ್ಲವೆ ತರುಣ ಲೇಖಕರು ಎಂದು ವಿಂಗಡಿಸಿಕೊಂಡು ಯೋಚಿಸುವಾಗ ಬ್ರೆಕ್ಟ್ ಹೇಳುವ ಹಳೆಯ ಕಾಲದಲ್ಲೇ ಹರಿದಾಡುವ 'ಮೊಮ್ಮಕ್ಕಳು' ಸಾಹಿತ್ಯ ವಲಯದಲ್ಲಿ ಕಣ್ಣ ಮುಂದೆ ನಿಲ್ಲುತ್ತಾರೆ. ದೇಹ ಯಾವುದೇ ವಯಸ್ಸಿನದಾದರೂ ಅದು ಹೇಗೆ ಯೋಚಿಸುತ್ತದೆ. ಎಂತಹ ಚಿಂತನೆಗಳನ್ನು ಹುಟ್ಟಿಸಲು ಬಯಸುತ್ತದೆ ಎಂಬುದು ಮಾತ್ರ ಅದರ ಸಮಕಾಲೀನತೆಯನ್ನು ಹೊಸತನವನ್ನು ನಿರ್ಧರಿಸುತ್ತದೆ. ಅಂದರೆ ವ್ಯಕ್ತಿಯ ಪ್ರಜ್ಞೆಯ ಮಟ್ಟ ಯಾವುದು ಎಂಬುದು ಇಲ್ಲಿ ಮುಖ್ಯವಾದುದು.

ಬ್ರೆಕ್ಟನ ಕವಿತೆ ಹನಿಸುವ ಅರಿವನ್ನು ನೆನಪಿಸಿಕೊಂಡಾಗ ಒಮ್ಮೆ ಆತಂಕವೇ ಹುಟ್ಟುತ್ತದೆ. ಅದರಲ್ಲಿಯೂ ಭಾರತೀಯ ಸಮಾಜದ ಪ್ರಜ್ಞೆಯನ್ನು ನೋಡಿದಾಗ ಜನರ ಪ್ರಜ್ಞೆಯ ಗೋಜಲು ಸ್ವರೂಪ ತಿಳಿಯುತ್ತದೆ. ಇದು ಕೇವಲ ಗೋಜಲಾದರೆ ಅಡ್ಡಿಯಿಲ್ಲ. ಆದರೆ ಇದು ಚಲನಶೀಲತೆಯನ್ನು ತಡೆಯುವಂತಹ ಗೋಜಲು ಪ್ರಜ್ಞೆ. ಲೋಕದ ಬದಲಾವಣೆಯನ್ನು ಗ್ರಹಿಸುವ ವಿಧಾನಗಳಲ್ಲಿ ಹಲವು ದಾರಿಗಳಿರುತ್ತವೆ. ಅ ಕೇವಲ ಭಿನ್ನತೆಗಳಾಗಿದ್ದರೆ ಸಮಸ್ಯೆಯಿಲ್ಲ. ಆದರೆ ದಿಕ್ಕು ತಪ್ಪಿಸುವ ಗ್ರಹಿಕೆಗಳಾದರೆ ಸಮಸ್ಯೆ. ಪ್ರಜ್ಞೆ ಮತ್ತು ಗ್ರಹಿಕೆಯಲ್ಲಿನ ಗೊಂದಲಗಳು ಸೃಜನಶೀಲತೆಯನ್ನು ದಿಕ್ಕುತಪ್ಪಿಸಬಹುದು. ಸಮರ್ಥ ಲೇಖಕನಾದವನು ಈ ಬಗೆಯ ಗೊಂದಲವಾದ ಬಗೆಯನ್ನು ವಿಶಿಷ್ಟವಾಗಿ ಮಂಡಿಸುವ ಮೂಲಕ ಸಾಹಿತ್ಯವನ್ನು ಸೃಷ್ಟಿಸಬಹುದು. ಸದ್ಯದಲ್ಲಿ ಅಂತಹ ಗೋಜಲು ಸನ್ನಿವೇಶವನ್ನೇ ಸಾಹಿತ್ಯವಾಗಿಸಬೇಕಿದೆ. ಯಾಕೆಂದರೆ ಸದ್ಯದ ಸಮಾಜ ಪ್ರಜ್ಞೆಯ ಕ್ರಮ ಅಂತಹದ್ದು.

ಯಾವುದೇ ಹೊಸತಲೆಮಾರು ತನ್ನ ಕಾಲದವರೆ ಸಾಹಿತ್ಯದೊಟ್ಟಿಗೆ ಅನುಸಂಧಾನ ನಡೆಸುತ್ತಲೇ ತನ್ನನ್ನು ತಾನು ಶೋಧಿಸಿಕೊಳ್ಳಬೇಕಾದ ಅಗತ್ಯವಿದೆ. ಹೊಸ ಬಗೆಯ ಪ್ರಜ್ಞಾವಲಯವನ್ನು ರೂಪಿಸಿಕೊಳ್ಳಬೇಕಿದೆ. ಅದನ್ನೇ ಬ್ರೆಕ್ಟ್ ಸೂಚಿಸುತ್ತಿರುವುದು. ಹೊಸತಲೆಮಾರು **ಅಂತಹ** ಸಾಹಿತ್ಯಾನುಸಂಧಾನ ಮಾಡುತ್ತಲೇ ಈವರೆಗೆ **ಸಾಹಿತ್ಯ** ನಡೆದುಬಂದಿರುವ ದಾರಿಯನ್ನು ಮತ್ತು ಅದ ಸಾಗಬೇಕಾಗಿರುವ ಹಾದಿ ಎರಡನ್ನೂ ಕಂಡುಕೊಳ್ಳಬೇಕಿದೆ. ಎಷ್ಟೋ ಸಾರಿ ನಮ್ಮ ಕಾಲವನ್ನು ಕುರಿತೇ ಯೋಚಿಸುತ್ತಿದ್ದೇವೆ; ನಮ್ಮ ಕಾಲವನ್ನೇ **ಸಾಹಿತ್ಯಕ**ವಾಗಿ ಮರುಸೃಷ್ಟಿಸುತ್ತಿದ್ದೇವೆ. ಇಲ್ಲವೆ ಹೊಸದ **ಸೃಷ್ಟಿಸುತ್ತಿದ್ದೇ**ವೆ ಎಂದು ಭಾವಿಸುತ್ತೇವೆ. ಆದರೆ **ಪಲ್ಲಟಗಳ**ನ್ನು ಸಾಹಿತ್ಯ ಕೃತಿಯೊಳಗೆ ಹಿಡಿದಿಡುವಲ್ಲಿ ಬೇರೆಯದೇ ಹೆಜ್ಜೆಯನ್ನು ಇಟ್ಟಿರುತ್ತೇವೆ. ಕರ್ನಾಟಕದಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ (ದಲಿತ–ಬಂಡಾಯೋತ್ತ ಸಾಹಿತ್ಯದ ಸಂದರ್ಭದಲ್ಲಿ) ಜನರ ಬದುಕಲ್ಲಿ ಆಗಿರುವ **ಬದಲಾವಣೆಗಳನ್ನು ಗಮನಿಸಿದರೆ ಸರಿಯಾದ ದಾರಿಯನ್ನು ಕಂಡುಕೊಳ್ಳಲು ಸಾಧ್ಯವಾಗದಿರು**ವುದನ್ನು ಕಾಣಬಹುದು. ಜನರ ಬದುಕನ್ನು, ಅದರ ಬದಲಾವಣೆಯನ್ನು ಗಮನಿಸಿದಾಗ ಇದು ನಿಜವೆನಿಸು

ನ್ನಡದ ಕಥಾ ಸಾಹಿತ್ಯ ಈ ಬದಲಾವಣೆಯನ್ನು ಸಾಹಿತ್ಯ ಕಥನ' ವಾಗಿಸುವಲ್ಲಿ ಹಿಂದೆ ಬಿದ್ದಿದೆ ನ್ನಿಸುತ್ತದೆ. ಕಳೆದ ಆರು ದಶಕಗಳ ಜಕಾರಣ ಮತ್ತು ಆರ್ತಿಕ ಚಟುವಟಿಕೆಗಳು ನರ ಬದುಕಿನಲ್ಲಿ ಉಂಟುಮಾಡಿರುವ ಲ್ಲಟಗಳನ್ನು ಸರಿಯಾಗಿ ಗುರುತಿಸಿಕೊಳ್ಳಲು ಮಗಿನ್ನೂ ಸಾಧ್ಯವಾಗಿಲ್ಲವೆನ್ನಿಸುತ್ತದೆ. ಮನುಶ್ಯ ಬಂಧಗಳಲ್ಲಾಗಿರುವ ಪಲ್ಲಟವನ್ನು, ಕಲಾಟವನ್ನು ಕಥನಿಸಿಕೊಳ್ಳಲು ನಮಗೆ ನ್ನೂ ಎಶ್ಟು ಕಾಲಬೇಕೋ ಎನ್ನಿಸುತ್ತದೆ. ಂಡವಾಳಶಾಹಿ ವ್ಯವಸ್ಥೆಯ ಬೇರುಗಳು ಬ್ಬತೊಡಗಿದಂತೆ, ಅದು ಊಳಿಗಮಾನ್ಯಶಾಹಿ ವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ದಿದೆ. ಯುರೋಪಿನಲ್ಲಿ ಹದಿನೇಳು ದಿನೆಂಟನೆಯ ಶತಮಾನದಲ್ಲಿ ಸಂಬವಿಸಿದ ದಲಾವಣೆ ನಮ್ಮ ಗ್ರಾಮೀಣ ಬದುಕಿನಲ್ಲಿ ಈಗ ಬವಿಸುತ್ತಿದೆ. ಚಾರಿತ್ರಿಕವಾಗಿ ಇದು ಹುಮುಖ್ಯ ವಾದ ವಿದ್ಯಮಾನ. ಈಗ ಅದನ್ನು ಖನಿಸದಿದ್ದರೆ ನಂತರದಲ್ಲಿ ಅದು ಕೈಗೆ ಸಿಗುವ ವಸ್ತುವು ಲ್ಲ. ಅಂತಹ ಚಾರಿತ್ರಿಕ ಕರ್ತವ್ಯವನ್ನು ಸಾಹಿತ್ಯ ಚಿಸುವವರೇ ಮಾಡಬೇಕು. ಇತರೆಲ್ಲ ಾನವಿಕಗಳಿಗಿಂತ ಹೆಚ್ಚು ಸಾದ್ಯತೆಗಳಿರುವುದು ಸಾಹಿತ್ಯಕ್ಕೆ ಾತ್ರ.

ಕರ್ನಾಟಕದ ಹಳ್ಳಿಗಳಲ್ಲಿ ಆಗಿರುವ, ಆಗುತ್ತಿರುವ ಲ್ಲಟಗಳನ್ನು ಅರಿಯಲು ಸುತ್ತಾಟ ಮಾಡುವಾಗ ಇದು ನ್ನೂ ತೀವ್ರವಾಗಿ ಅನ್ನಿಸಿದೆ. ಸದ್ಯ ಕತೆಗಾರರು ಮತ್ತು ದಂಬರಿಕಾರರಿಗೆ ಕಸುವಾದ ಬೂಮಿಕೆಯಿದೆ. ಒಳ್ಳೆಯ ಳೆ ಬೆಳೆಯಲು ಅದು ಸಿದ್ದವಾಗಿದೆ. ಬೆಳೆ ಬೆಳೆವವರಿಗೆ ದು ಕಾಯುತ್ತಿದೆ. ನಮ್ಮ ಬೇಸಾಯಗಾರರಂತೆ ಸಾಹಿತ್ಯ ಶಿಕರು ದಣಿದಿರುವುದು ಕನ್ನಡ ಸಾಹಿತ್ಯದ ಈಚಿನೆ ಲವುಗಳಲ್ಲಿ ಒಂದೆನಿಸುತ್ತದೆ. ಇದು ನಕಾರಾತ್ಮಕವಾದ ಳವಣಿಗೆ. ಇಂತಹ ದಣಿವನ್ನು ನೀಗಿಸಿಕೊಳ್ಳಬೇಕಾದ ರ್ತು ಕನ್ನಡ ಲೇಖಕರ, ಅದರಲ್ಲಯೂ ತರುಣ ೀಖಕರ ಎದುರಿಗಿದೆ. ಸೃಶ್ಟಿ ಕ್ರಿಯೆಯಲ್ಲಿ ಎಷ್ಟು ಸುವುಳ್ಳವರಾಗಿದ್ದೇವೆ ಎಂಬುದನ್ನು ತಿಳಿಸುವುದು; ಭಾಶೆಯನ್ನು ಕುಶಲತೆಯಿಂದ ಬಳಸುವುದು ಮಾತ್ರವಲ್ಲ. ಸಾಮಾಜಿಕ(ಬದುಕಿನ) ಬದಲಾವಣೆಯನ್ನು ಅದರ ಚಲನಶೀಲತೆಯಲ್ಲಿ ಹೇಗೆ ಗ್ರಹಿಸುತ್ತಿದ್ದೇವೆ ಮತ್ತು ಮಂಡಿಸುತ್ತಿದ್ದೇವೆ ಎಂಬ ವಿಚಾರ ಮುಖ್ಯವಾದುದು.

ಈ ಹಿನ್ನೆಲೆಯಲ್ಲಿ ಯೋಚಿಸಿದರೆ ಸಾಹಿತ್ಯದ ಈಚಿನ ಒಲವುಗಳ ವಿಚಾರ ಮತ್ತು ಅದರ ರೂಪ ಅಸ್ಪಶ್ಟವಾಗಿಯೇ ಉಳಿದಿದೆ. ಇದನ್ನೇ ಈ ಕಾಲದ ಕನ್ನಡ ಸಾಹಿತ್ಯದ ಪಾಸಿಟಿವ್ ಆದ ಗುಣವನ್ನಾಗಿ ಭಾವಿಸಲಾಗುತ್ತಿದೆ. ಈ ಬಗೆಯ ಅಸ್ಪಶ್ಟತೆಯನ್ನೇ ಈ ಕಾಲದ ಬಹುಮುಖ್ಯ ಲಕ್ಶಣವೆಂದು ವಾದಿಸಲಾಗುತ್ತಿದೆ. ಇದು ಹೆಚ್ಚು ಚರ್ಚಾರ್ಹವಾದುದು. ಈ ಕಾಲದಲ್ಲಿ ಯಾವುದೇ ಚಳವಳಿಗಳಿಲ್ಲ. ಅವುಗಳ ಒತ್ತಡವೂ ಇಲ್ಲ. ಲೇಖಕರು ಸಿದ್ಧಾಂತಗಳ ಭಾರಗಳಿಂದ ನಲುಗದೆ ಸ್ವತಂತ್ರವಾಗಿ ಬರೆಹ ಮಾಡಲು ಅನುಕೂಲವಾಗಿದೆ ಎಂದು ಭಾವಿಸಲಾಗುತ್ತದೆ. ಇದನ್ನು ಅನೇಕ ತರುಣ ಲೇಖಕರು ಆಳವಾಗಿ ನಂಬಿದ್ದಾರೆ. ಆ ದಾರಿಯಲ್ಲಿ ಸಾಗಿದ್ದಾರೆ. ಚಳವಳಿ ಇಲ್ಲವೆ ಒಂದು ಸಿದ್ಧಾಂತ ಎನ್ನುವುದು ಲೋಕವನ್ನು ಅರಿಯುವ ಒಂದು ದಾರಿ. ಅದು ಅರಿಯುವ ಒಂದು ವಿಧಾನವೇ ಹೊರತು ಕೊಲ್ಲುವ ಕತ್ತಿಯಲ್ಲ. ಕತ್ತಿಯಂತೆ ಬಯಸುವ ಕ್ರಮ ದೋಶಪೂರಿತವಾದ ಧೋರಣೆಯೇ ಸರಿ. ಚಳವಳಿ ಎನ್ನುವುದು ಒಂದು ಸಾಮಾಜಿಕ ಚಲನೆ. ಆ ಚಲನೆಯ ಜೊತೆ ಲೇಖಕರು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೋ ಇಲ್ಲವೇ ವಿಮುಖರಾಗಿರುತ್ತಾರೋ ಎಂಬುದಶ್ಟೇ ಇಲ್ಲಿನ ವಿಚಾರ. ಅಜ್ಜ ಮತ್ತು ಮೊಮ್ಮಕ್ಕಳಲ್ಲಿ ಅಜ್ಜನೇ ಹೊಸ ಕನಸು ಉಳ್ಳವನಾಗಿರಬಹುದು.

ಇಲ್ಲಿ ಗಮನಿಸಬೇಕಾಗಿರುವ ಒಂದು ಸಂಗತಿಯೆಂದರೆ, ಲೇಖಕರಾದವರು ಚಳವಳಿಯ ಪ್ರೇರಣೆ–ಚಲನಶೀಲ ಅರಿವು– ಜೀವನ ದರ್ಶನವನ್ನು ಇಟ್ಟುಕೊಂಡು ತನ್ನ ಸೃಶ್ಟಿಕಾರ್ಯವನ್ನು ಮುನ್ನಡೆಸಿದಾಗ ಬರೆಹಕ್ಕೆ ಒಂದು ಫೋಕಸ್ ಸಿಗುತ್ತದೆ. ಈವರೆಗಿನ ಎಲ್ಲ ಮಹತ್ವದ ಲೇಖಕರು ಅಂತಹ ಚಳವಳಿಗಳ ಸಿದ್ಧಾಂತಗಳಿಂದ ಕಸುವು ಪಡೆದಿದ್ದಾರೆ. ಅಂತಹ ಸಿದ್ಧಾಂತಗಳನ್ನು ಜೀವನ ದರ್ಶನವಾಗಿಸಿಕೊಂಡಿದ್ದಾರೆ. ಪಂಪನಲ್ಲಿಯೂ ಅದಿದೆ. ಅವನ ಜೈನ ತಾತ್ವಿಕತೆ ಅಂದಿನ ಸಮಾಜ ಮತ್ತು ಚಳವಳಿಯ ಉತ್ಪತ್ತಿ. ಬಸವ, ಅಲ್ಲಮರಲ್ಲಿಯೂ ಅದಿದೆ. ಕನಕದಾಸ, ಕುಮಾರವ್ಯಾಸ ಕುವೆಂಪು ಲಂಕೇಶ್ ಅವರಲ್ಲಿಯೂ ಅದಿದೆ. ಇವರೆಲ್ಲಾ ಆಯಾ ಕಾಲದ ಚಳವಳಿಯ, ಚಲನಶೀಲ ಬದುಕಿನ ಉತ್ಪನ್ನಗಳೇ ಆಗಿದ್ದಾರೆ. ಹೊಣೆಗಾರಿಕೆಯುಳ್ಳ ಯಾವ ಸೂಕ್ಶ್ಮ ಬರೆಹಗಾರರೂ ಇದನ್ನು ನಿರಾಕರಿಸಲಾರರು. ಇದನ್ನು ಅರಿಯದೆ ಚಳವಳಿಗಳ ಸಿದ್ಧಾಂತಗಳ ಮಹತ್ವವನ್ನು ಮರೆಮಾಚಲಾಗುತ್ತದೆ. ಅದನ್ನು ಕುಬ್ಜಗೊಳಿಸುವ ಪ್ರಯತ್ನ ಮಾಡಲಾಗುತ್ತದೆ. ಆ ಮೂಲಕ ಚಲನಶೀಲ ಅರಿವಿನ ಹಾದಿಯನ್ನೇ ನಿರಾಕರಿಸಲಾಗುತ್ತದೆ. ಅಂತಹ ನಿರಾಕರಣೆಯಿಂದ ಲೇಖಕರು ಅನಿಮಿಕ್ ಆಗುತ್ತಾರೆಯೇ ವಿನಃ ಬೇರಾರೂ ಅಲ್ಲ. (ಚಳವಳಿಯೂ ಆಗುತ್ತದೆ. ಅದು ಬೇರೆಯದೇ ಚರ್ಚೆ.) ಇಂತಹ ಅರಿವಿನಿಂದ ವಿಮುಖವಾದ ಸಾಹಿತಿಗಳು ತೀರ ವ್ಯಕ್ತಿಗತವಾದ ಹಳವಂಡಗಳಲ್ಲಿ ಬಿದ್ದು ಕೂಪಮಂಡೂಕಗಳಾಗಬಹುದು. ಇನ್ನು ಇವರು ಎಂತಹ ಜೀವನದರ್ಶನವನ್ನು ಓದುಗರ ಮುಂದಿಡುತ್ತಾರೆ ಎಂಬುದೇ ಪ್ರಶ್ನೆ.

ಎಪ್ಪತ್ತರ ದಶಕದ ನಂತರ ದಲಿತ, ಮಹಿಳಾ ಧ್ವನಿಗಳು ನಮ್ಮಲ್ಲಿ ಪ್ರಧಾನವಾಗಿ ಕೇಳಿಬರತೊಡಗಿದವು. ಸಾಂಸ್ಕೃತಿಕವಾಗಿ ಜಾತಿ ಮತ್ತು ಪುರುಶ ಪ್ರಧಾನ ಸಮಾಜದ ಮೌಲ್ಯಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ತೋರುತ್ತಲೆ ತಮ್ಮ ಅಸ್ಮಿತೆಗಳನ್ನು ಹುಡುಕಿಕೊಳ್ಳುವ ಪ್ರಯತ್ನ ನಡೆಸಲಾಯಿತು. ಅದರಿಂದ ಸಾಹಿತ್ಯಕ್ಕೆ ಒಂದು ಬಗೆಯ ಫೋಕಸ್ ಸಿಕ್ಕಂತಾಯಿತೇ ಹೊರತು ಅದರಿಂದ ಸಾಹಿತ್ಯ ಸಾವನ್ನಪ್ಪಲಿಲ್ಲ. ಅಂತಹ ಫೋಕಸ್ ವಚನ ಪಂಥಕ್ಕೆ, ಭಕ್ತಿ ಪಂಥಕ್ಕೆ, ನವೋದಯ, ನವ್ಯ ಸಾಹಿತ್ಯದ ಬರೆಹಗಾರರಿಗೂ ಸಿಕ್ಕಿದೆ; ಸಿಕ್ಕ ಕಾರಣವಾಗಿಯೇ ಕೆಲವು ಚಹರೆಗಳನ್ನು ಆಧರಿಸಿ ಅದನ್ನು ಒಂದು ನಿರ್ದಿಶ್ಟ ಸಾಹಿತ್ಯಕ



With Best Compliments From

GCC
Emphasis is on life

Garden City College

ISO 9001-2008

Institution with all Departments certified Accredited by a National body of the UGC, National Assesment and Accreditation Council (NAAC) as 'A' Grade.

Combination of Subjects like Journalism, History, Tourism and others.

Fashion Design, Hospitality, IT, Commerce and Management, Media and Life Science.

Contact:
Garden City College
16th K.M, Old Madras Road
Bangalore-560049
Ph: 66487600
Fax: 66487667
Email: gcc@gardencity college.edu



ಳವಳಿಯನ್ನಾಗಿ ಗುರುತಿಸುವುದು. ಸದ್ಯದ ಸಾಹಿತ್ಯಕ್ಕೆ ಂತಹ ಒಂದು ಫೋಕಸ್ ಇಲ್ಲದ ಕಾರಣ ಅದು ಿರ್ಬಲವಾಗಿ ಕಾಣುತ್ತಿದೆ. ಇದನ್ನು ಲೇಖಕರು ರಿಯಬೇಕಿದೆಯಷ್ಟೇ. ಈಗ ಬರೆಯ ತೊಡಗಿರುವ ಲವು ಲೇಖಕರು ಹಳೆಯ ಲೋಕಗ್ರಹಿಕೆಗಳಿಂದಲೇ ರೆಯುತ್ತಿದ್ದಾರೆ. ಇಲ್ಲವೆ ತಮಗೆ ತೋಚಿದಂತೆ ರೆಯುವುದೇ ಸರಿ ಎಂಬ ಧೋರಣೆಯೂ ಇದೆ. ಈ ೋರಣೆ ಕಲಿಕೆಯನ್ನು ತಡೆಯುತ್ತದೆ. ಇದರಿಂದ ಹೊಸ ಂಸ್ಕೃತಿಕ ಮತ್ತು ಸಾಮಾಜಿಕ ಶಕ್ತಿಗಳು ತಮ್ಮ ಸ್ಮಿತೆಗಳ ಮೇಲೆ ಹೇರಿರುವ ಒತ್ತಡಗಳೇನು? ಂಬುದನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಈಚಿನ ನ್ನಡ ಸಾಹಿತ್ಯಕ್ಕೆ ಇನ್ನೂ ಒಂದು ಖಚಿತವಾದ ಾಪವನ್ನು ಹೊರಪಡಿಸಲು ಸಾಧ್ಯವಾಗಿಲ್ಲ. ಅದು ಲವು ರೂಪಗಳಲ್ಲಿ, ದಾರಿಗಳಲ್ಲಿ ಚೆಲ್ಲಿಕೊಂಡಂತೆ

ದಬ್ಬಾಳಿಕೆ

ಕತ್ತಲ ಗುಣ
ಸೌಮ್ಯ ಸೌಜನ್ಯ
ಅದರ ಮೇಲೆ
ಬೆಳಕು ಮಿಂಚಾಗಿ
ಎರಗಿ
ನಡೆಸುತ್ತೆ ದೌರ್ಜನ್ಯ

ಜರಗನಹಳ್ಳಿ ಶಿವಶಂಕರ್

ಕನ್ನಡ ಸಾಹಿತ್ಯದಲ್ಲಿ ಈವರೆಗೆ ಅನರ್ಹವಾಗಿದ್ದ ಎಷ್ಟೋ 'ಸಾಹಿತ್ಯ ನಾಣ್ಯಗಳು' ಇಂದು ಚಲಾವಣೆಗೊಳ್ಳಲಾರಂಬಿಸಿವೆ. ಈ ಹಿಂದೆಯೇ ಹೇಳಿದಂತೆ ಅಧಿಕಾರ ರಾಜಕಾರಣವು ಜನತೆಯ ಸಾಂಸ್ಕೃತಿಕ ಲೋಕದ ಜೀವಪರ ಮೌಲ್ಯಗಳನ್ನು ಭ್ರಷ್ಟಗೊಳಿಸುವ ಪ್ರಯತ್ನವನ್ನು ಉದ್ದೇಶ ಪೂರಕವಾಗಿ ಮಾಡುತ್ತಲೇ ಇರುತ್ತದೆ.

ಣುತ್ತದೆ. ಅದಕ್ಕೆ ಫೋಕಸ್ ಸಿಗದೆ ಇಲ್ಲವೆ ಿದುಕೊಳ್ಳದೆ ಅದನ್ನು ಕವಲು ದಾರಿಗಳಲ್ಲಿ ನ್ನಡೆಸಲಾಗುತ್ತಿದೆ. ಒಂದು ಫೋಕಸ್ ಇಲ್ಲದ ಸಾಹಿತ್ಯ ಷ್ಟಿಯ ಕೆಲಸವು ಮಹತ್ವದ ವಿಚಾರವನ್ನು, ಸಾಹಿತ್ಯವನ್ನು ಷ್ಟಿಸಲು ಸಾಧ್ಯವಿಲ್ಲ. ಹೊಸತಲೆಮಾರು ಅಂತಹ ೋಕಸ್ ಉಳ್ಳ ಸಾಹಿತ್ಯವನ್ನು(ಆಶಯ ಮತ್ತು ಕೃತಿಗಳು ಕೂಡಿದಂತೆ) ಸೃಷ್ಟಿಸುವತ್ತ ಿಕೆಡಿಸಿಕೊಳ್ಳಬೇಕಿದೆ. ಇದನ್ನು ಹೊಣೆಯ ಯಕವೆಂದೇ ಭಾವಿಸಬೇಕು.

ಹೊಸತಲೆಮಾರಿನ ಲೇಖಕರು ಮೇಲ್ನೋಟಕ್ಕೆ ಗಿನ ಬದುಕಿನ ಮೇಲಿನ ಒತ್ತಡಗಳಿಂದ ಆತಂಕಿತರಾಗಿ ಚಲಿತರಾಗಿ ವಿಶಾದದ ಹೊಳೆಯಲ್ಲಿ ಮುಳುಗಿರುವಂತೆ ಡರೂ ಅದು ಕಸುವುಳ್ಳ ಸಾಹಿತ್ಯವಾಗಿ ಹೊರಬರಲು ಧ್ಯವಾಗಿಲ್ಲವೆನ್ನಿಸುತ್ತದೆ. ಹೊಸವಸ್ತುಗಳನ್ನು ಸಿಕೊಂಡರೂ ಹೊಸ ನಿರ್ವಹಣೆಯ ಕ್ರಮ ಮತ್ತು ಿಗಟ್ಟಿಲ್ಲದಿರುವುದರಿಂದ ಹೊಸದರ್ಶನವನ್ನು ರಪಡಿಸಲು ಸಾಧ್ಯವಾಗುತ್ತಿಲ್ಲವೇನೂ ಎಂದನಿಸುತ್ತದೆ. ಷ್ಟು ಮಾತ್ರವಲ್ಲ ಇಂದಿನ ಕಾವ್ಯ ಗೇಯತೆಯ ಿಯಿಂದ ಗದ್ಯವಾಗುವುದರತ್ತ ಸಾಗಿದಂತೆ ಕಾಣುತ್ತಿದೆ. ಸುವ ಕಾವ್ಯದ ಬದಲಿಗೆ ಓದಿಕೊಳ್ಳುವ ಕಾವ್ಯ ್ರಯಾಗುತ್ತಿದೆ. ಇದು ಹೊಸಬದಲಾವಣೆಯೋ ಇಲ್ಲವೆ ್ನಡ ಕಾವ್ಯದ ಸೋಲೋ ಎಂಬುದನ್ನು ಇನ್ನೂ ಶೀಲಿಸಬೇಕಿದೆ. ನಿರಂತರ ಹುಡುಕಾಟದ ಮೂಲಕ ಖಕರು ಇದನ್ನು ಮಾಡಬೇಕಾಗಿದೆ. ಈ ಕಾಲದಲ್ಲಿ ಸುತ್ತಿರುವ ಸಾಹಿತ್ಯದ ಬೇರುಗಳನ್ನು ಗೊಳಿಸುತ್ತದೆ.

ಇಲ್ಲವಾದಲ್ಲಿ ತನ್ನದೇ ಆದ ಹೊಸನೆಲೆಯನ್ನು ಡುಕೊಳ್ಳಲು ಇಂದಿನ ಲೇಖಕರಿಗೆ ಕಶ್ಟವಾಗುತ್ತದೆ. ದು ಬರೆಯತೊಡಗಿರುವ ಎಲ್ಲರ ಮುಂದೆಯೂ ಈ ಸವಾಲಿದೆ. ಇಲ್ಲಿ ನಮಗೆ ಎಚ್ಚರಿಕೆಯ ಅಗತ್ಯವಿದೆ. ಆಯಾ ಸಮಕಾಲೀನ ಸಾಂಸ್ಕೃತಿಕ ಪಲ್ಲಟಗಳನ್ನು ಸಾಹಿತ್ಯವಾಗಿಸುವುದು ಅಷ್ಟು ಸುಲಭದ ಕಾರ್‍ಯವಲ್ಲ. ಅದನ್ನು ಒಂದು ಕೃತಿಯ ಮೂಲಕ ಮಾಡಲು ಸಾಧ್ಯವಿಲ್ಲ. ಸೂಕ್ಷ್ಮಸಂವೇದಿಯಾದ ಒಂದು ತಲೆಮಾರಿನ ಲೇಖಕರು ನಿರಂತರವಾಗಿ ಸಾಹಿತ್ಯ ಸೃಷ್ಟಿಯ ಪಯಣದಲ್ಲಿ ಅದನ್ನು ಮಾಡಬಲ್ಲರು. ಅದು ಸಾಹಿತ್ಯಕ್ಕೆ ಒಂದು ನಿರ್ದಿಶ್ಟರೂಪವನ್ನು ತಂದು ಕೊಟ್ಟೀತು. ಒಂದು ಸೀಮಿತ **ಅವಧಿಯಲ್ಲಿ ಇಲ್ಲವೇ ಈಗ ತಾನೆ ಬರೆವಣಿಗೆಗೆ ತೊಡಗಿಸಿಕೊಂಡಿರುವ ಲೇಖಕನಿಂದ ಅದನ್ನು ನಿರೀಕ್ಷಿಸುವುದು ಕೊಂಚ ಅತಿಯಾಗಬಹುದು. ಈಗಿನ ಸಾಹಿತ್ಯದ** ರೂಪ ಮತ್ತು **ಮೌಲ್ಯಗಳನ್ನು ಕಾಲವೇ ನಿರ್ಣಯಿಸಲಿದೆ** ಎಂದು ಮಾತ್ರ **ಸದ್ಯಕ್ಕೆ ಹೇಳಬಹುದೆನಿಸುತ್ತದೆ.**



ಈ ಎಚ್ಚರಿಕೆಯಿಂದ ಮುಂದುವರೆದು ಹೇಳಬಹುದಾದರೆ, ಬಹಳ ಮುಖ್ಯವಾಗಿ ನಮ್ಮ ಕಾಲವೇ ಹಲವು ವೈರುಧ್ಯಗಳಿಂದ ಕೂಡಿದೆ. ಅಂದರೆ ಸಮಾಜ ವಿವಿಧ ವೈರುಧ್ಯಗಳಿಂದ ಕೂಡಿದೆ. ಕಾಲವೆನ್ನುವುದು, ನಿನ್ನೆ ಮತ್ತು ಇಂದಿನ ಹಲವು ಸಮಸ್ಯೆಗಳನ್ನು ಹೊತ್ತು ನಾಳೆಗಳತ್ತ ಸಾಗಿದೆ. ಹೊಸತಲೆಮಾರಿನ ಲೇಖಕರು ಬರೆವಣಿಗೆ ಮಾಡುತ್ತಿರುವ ಭಿನ್ನ ನೆಲೆಗಳನ್ನು ಗಮನಿಸಿದರೆ ಇದು ಅರ್ತವಾಗುತ್ತದೆ. ಅಲ್ಲಿರುವ ವೈವಿಧ್ಯತೆಗಳನ್ನು, ಸಾಂಸ್ಕೃತಿಕ ನೆಲೆಗಳನ್ನು ಅವರು ತಬ್ಬಿಕೊಂಡು ಬರೆಯುತ್ತಿರುವುದನ್ನು ಗಮನಿಸಿದರೆ ಅದು ಅರ್ಥವಾಗುತ್ತದೆ. ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆಗಳು ಕಂಡಂತೆ ಕೃತಿಯ ಓದಿನ ನಂತರ ನಮ್ಮನ್ನು ಕಲಕುವ ವಸ್ತುಗಳು ವೈರುಧ್ಯದ ನೆಲೆಗಳಲ್ಲಿಯೇ ನಿಲ್ಲುತ್ತವೆ. ಇವುಗಳ ನಡುವೆ ಇಡೀ ಹೊಸತಲೆಮಾರಿನ ಬರೆಹಗಾರರಲ್ಲಿ ಸಮಾನತೆಯನ್ನು, ಸಮಾನ ಆಶಯವನ್ನು ಗುರುತಿಸುವುದು ಕಶ್ಟವಾಗುತ್ತದೆ. ಇದು ಲೇಖಕರ ಮಿತಿ ಎಂದು ಅನ್ನಿಸಿದರೂ ಕಾಲ ಮತ್ತು ಸಮಾಜಗಳಲ್ಲಿಯೇ ಇರುವ ವೈರುಧ್ಯಗಳು ಇಲ್ಲಿ ಪ್ರಧಾನವಾಗಿರುತ್ತವೆ. ಅಂದರೆ ನಮ್ಮ ಸಾಂಸ್ಕೃತಿಕ ಸಮಸ್ಯೆಗಳಲ್ಲಿಯೇ ಒಂದು ಶ್ರೇಣೀಕರಣವಿದೆ. ಈ ಶ್ರೇಣೀಕರಣದಲ್ಲಿ ಲೇಖಕರು ಯಾವುದೋ ಒಂದು ನೆಲೆಗೆ ತನ್ನನ್ನು ಸೀಮಿತಗೊಳಿಸಿಕೊಂಡು ಬರೆಯಲು ತೊಡಗಿದಾಗ ಅವರಿಗೆ ದಕ್ಕುವ ಈ ಕಾಲದ ಅನುಭವಗಳು ಸೀಮಿತವಾಗಿರುತ್ತವೆ. ಆದ್ದರಿಂದ ಅವರ ಬರೆಹಕ್ಕೂ ಒಂದು **ಸೀಮಿತ ಚೌಕಟ್ಟು** ರೂಪುಗೊಳ್ಳುತ್ತದೆ. ಅವರು **ತಮ್ಮ ಸಮಾಜದ ಬಹುಮುಖಿ ಸಮಸ್ಯೆಗಳನ್ನು, ನೆಲೆಗಳನ್ನು, ಅನುಭವಗಳನ್ನು ಕುರಿತು ಬರೆಯಲು ಸಾಧ್ಯವಾಗದೇ ಹೋಗಬಹುದು.** ಬರಹಕ್ಕೆ ಇಡಿಯಾದ ನೋಟ ಸಿಗದೇಹೋಗಬಹುದು. ಇಂತಹ ಸಮಸ್ಯೆ ಹಳೆಯ ತಲೆಮಾರಿಗಿಂತ ಹೊಸತಲೆಮಾರಿಗೆ

ಹೆಚ್ಚಿದೆ. ಅಂದರೆ ಇಂದು ಕಾಲದ ಮತ್ತು ಸಾಮಾಜಿಕ ಸಾಂಸ್ಕೃತಿಕ ನೆಲೆಗಳ ವ್ಯಾಪ್ತಿ ವಿಸ್ತಾರವಾಗಿವೆ. ನಗರ ಮತ್ತು ಹಳ್ಳಿಗಳ, ಕೃಶಿ ಮತ್ತು ಕೈಗಾರಿಕೆಗಳ ನಡುವೆ ಅಗಾಧ ಅಂತರಗಳಿವೆ. ಅವುಗಳ ಅನುಭವಗಳಲ್ಲಿ, ಆಲೋಚನೆಯ ಕ್ರಮಗಳಲ್ಲಿ ವ್ಯತ್ಯಾಸಗಳಿವೆ. ಇಂತಹದ್ದರ ನಡುವೆ ಸಂಸ್ಕೃತಿಯ ಬದಲಿಗೆ "ಸಂಸ್ಕೃತಿಗಳು" ರೂಪುಗೊಂಡಿವೆ. ಇವುಗಳ ನಡುವೆ ತಾಕಲಾಟಗಳು ನಡೆದಿವೆ. ಇಂತಹ ವಿಭಿನ್ನ ಸಂಸ್ಕೃತಿಗಳ ನೆಲೆಗಳಿಂದ ಲೇಖಕರು ಬರೆಯಲು ತೊಡಗುವುದು ಸವಾಲಿನ ಸಂಗತಿಯೇ ಸರಿ. ಇದು ಇಡಿಯಾಗಿ ಗ್ರಹಿಸುವುದನ್ನು ತಪ್ಪಿಸಿ ಅನುಭವವನ್ನು ಸೀಳಿಕೊಂಡು ಯೋಚಿಸುವುದನ್ನು ಕಲಿಸಿದೆ. ಲೇಖಕರು ತಮ್ಮನ್ನು ಯಾವುದೋ ಒಂದು ಪ್ರಕಾರಕ್ಕೆ ಸೀಮಿತಗೊಳಿಸಿಕೊಂಡು ಬರೆಯುವುದು; ಬದುಕಿನ ಒಂದು ನೆಲೆಗೆ ಸೀಮಿತಗೊಂಡು ಬರೆಯುವುದು ಇಡಿಯಾದ ದರ್ಶನ ಮತ್ತು ಅಭಿವ್ಯಕ್ತಿಗೆ ತೊಡಕನ್ನು ಉಂಟುಮಾಡುತ್ತದೆ. ಆದರೆ ಈಚಿನ ಬರೆಹಗಾರರಲ್ಲಿ ಇದು ಎದ್ದುಕಾಣುವ ಸಂಗತಿ.

ಇಂದು ಲೇಖಕರಿಗೆ ತಮ್ಮ ಕಾಲವನ್ನು, ಸಮಾಜವನ್ನು ಹಲವು ನೆಲೆಗಳಿಂದ ಎದುರುಗೊಳ್ಳುವುದು; ಅವುಗಳನ್ನು ತಮ್ಮ ಅನುಭವದ ವ್ಯಾಪ್ತಿಯೊಳಕ್ಕೆ ಬಿಟ್ಟುಕೊಳ್ಳುತ್ತ ತಮ್ಮ ಅನುಭವದ ಮೂಸೆಯಿಂದ ಸೃಜನಶೀಲ ಅಭಿವ್ಯಕ್ತಿಯಾಗಿಸಲು ಸಾಧ್ಯವಾಗದೇ ಹೋಗಬಹುದಾದ ಸಾಧ್ಯತೆಗಳಿವೆ. ಕೆಲವರು ಸಮನ್ವಯ ಸಾಧಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೂ ಬದುಕನ್ನು ಇಡಿಯಾಗಿ ಗ್ರಹಿಸಲು ಸಾಧ್ಯವಾಗದ ಸ್ಥಿತಿಯೊಂದು ಈಚೆಗೆ ಕಾಣಿಸಿಕೊಂಡಿದೆ. ಅದರಲ್ಲಿಯೂ ಕಿರಿಯ ಇಲ್ಲವೇ ಹೊಸತಲೆಮಾರಿನವರಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಈ ಮಧ್ಯೆ ವಿಭಿನ್ನ ವೈಚಾರಿಕತೆಯ ಹಿನ್ನೆಲೆಗಳಿಂದ ಬರೆವವರು ಇದ್ದಾರೆ. ಮೇಲ್ಜಾತಿ ಮತ್ತು ನಗರದ ಮಧ್ಯಮ ವರ್ಗಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆವವರಿದ್ದಾರೆ. ಇವುಗಳನ್ನು ಅನನ್ಯವಾಗಿ ಓದತೊಡಗಿದಾಗ ನಮ್ಮನ್ನು ನಿಜವಾಗಿಯೂ ಗಾಢವಾಗಿ ಕಲಕುತ್ತವೆ. ಆದರೆ ಇಲ್ಲಿ ಯಾವುದನ್ನು 'ಸಾಂಸ್ಕೃತಿಕ ಸಮಸ್ಯೆಗಳು' ಎಂದು ಗುರುತಿಸುತ್ತೇವೆಯೋ ಆ ಸಮಸ್ಯೆಗಳು ತಾರ್ಕಿಕ ಅಂತ್ಯ ಕಾಣದೆ ಎಲ್ಲವೂ ಒಂದರೊಳಗೊಂದು ಹೆಣೆದುಕೊಂಡು ಬದುಕುತ್ತಿವೆ. ನಿನ್ನೆಯ ಸಮಸ್ಯೆಗಳು ವರ್ತಮಾನವನ್ನು ದಾಟಿ ನಾಳೆಯತ್ತ ಸಾಗಿವೆ. ಈ ಕಾಲದಲ್ಲಿ ಬರೆಯ ತೊಡಗುವ ಹೊಸತಲೆಮಾರಿಗೆ ನಮ್ಮ ಸಮಾಜದ ಪಾರಂಪರಿಕ ಸಾಹಿತ್ಯ, ಸಾಂಸ್ಕೃತಿಕ ಮೌಲ್ಯಗಳು ಒಂದೆಡೆಯಾದರೆ ಬದಲಾದ ಕಾಲಕ್ಕೆ ಬದಲಾದ ಹೊಸಮೌಲ್ಯಗಳು ಬರೆಹಗಾರರನ್ನು ಆವರಿಸಿರುತ್ತವೆ. ಒಬ್ಬನೇ ಲೇಖಕನಲ್ಲಿ ಈ ಎರಡೂ ಇರಬಹುದು. ಇಲ್ಲದೆಯೂ ಇರಬಹುದು.



ಈ ಎಲ್ಲವನ್ನು ಬಿಟ್ಟು ಹೊಸದರ ಅನ್ವೇಶಣೆಯತ್ತಲೆ ಸಾಗಬಹುದು. ಬಹುತೇಕ ವೇಳೆ ಈ ಎರಡರ ಮಿಶ್ರಣವೇ ಹೆಚ್ಚು ಕಂಡುಬರುತ್ತದೆ. ಈ ನಡುವೆ ನಮ್ಮ ಕಾಲದಲ್ಲಿ ಮನುಶ್ಯ ಸಂಬಂಧಗಳು ಇನ್ನಶ್ಟು ತೀವ್ರವಾದ ಬಿಕ್ಕಟ್ಟಿನಲ್ಲಿ ಹಾದು ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಮೂಹದಲ್ಲಿದ್ದೇ ಸಮೂಹಾತೀತರಾಗಿ ಜನರು ದ್ವೀಪಗಳಾಗಿ ಬದುಕುತ್ತಿರುವ ಪರಿಸ್ಥಿತಿ ನಮ್ಮೆದುರಿಗಿದೆ. ಮನುಶ್ಯನ ಸ್ವಾರ್ಥಪರತೆ ಮತ್ತು ವ್ಯಕ್ತಿವಾದ ಪ್ರಧಾನವಾದ ಜೀವನ ಮೌಲ್ಯಗಳಾಗಿವೆ. ನಾಗರಿಕತೆ ಮತ್ತು ಮಾನವೀಯ ಮೌಲ್ಯಗಳು ಅರ್ತ ಕಳೆದುಕೊಂಡಿವೆ. ಮಾರುಕಟ್ಟೆ ಅರ್ತಶಾಸ್ತ್ರ ಎಲ್ಲವನ್ನು ವ್ಯಾವಹಾರಿಕಗೊಳಿಸಿದೆ. 'ಮಾನವತಾವಾದ' ನೈಜವಾದ ಜಾಗತೀಕರಣವನ್ನು ತರಬೇಕಿತ್ತು. ಆದರೆ ಜಾಗತೀಕರಣ ಮಾನವತಾವಾದದ ಬೆನ್ನುಮೂಳೆ ಮುರಿದಿದೆ. ಅದು ಇಂದು ಬೆನ್ನೆಲುಬಿಲ್ಲದ ಬಾವಲಿಯಾಗಿ ಹಾರಲಾಗದೆ ತೆವಳುತ್ತಿದೆ. ಬದುಕು ವ್ಯವಹಾರವಾಗುತ್ತಿದೆ. ಬಂಡವಾಳಶಾಹಿಗಳ ಮಾರುಕಟ್ಟೆಯ ವಿಸ್ತರಣಾವಾದ ಗೆಲ್ಲುತ್ತಿದೆ. ಮಾರುಕಟ್ಟೆಯ ಅಬ್ಬರದಲ್ಲಿ 'ಸಮೂಹ ಪ್ರಜ್ಞೆ' ಬಿಕ್ಕಟ್ಟಿನಲ್ಲಿದೆ. ಉತ್ಪಾದಕ ಮತ್ತು ಗ್ರಾಹಕನ ಸಂಬಂಧಗಳು ವಿಭಜನೆಗೊಂಡಂತೆ ಮನುಶ್ಯ ಸಂಬಂಧಗಳು ವಿಭಜನೆಗೊಂಡಿವೆ. ಧಾರ್ಮಿಕ ಸೌಹಾರ್ದದ ಬದುಕು ಹಲ್ಲೆಗೊಳಗಾಗಿದೆ.

ಈ ಎಲ್ಲದರ ಪ್ರಭಾವ ಸಾಹಿತ್ಯ ವಲಯದ ಮೇಲೂ ಆಗಿದೆ. ನಮ್ಮ ನಮ್ಮ ವಿಚಾರಗಳೇ ಪ್ರತ್ಯೇಕ ದ್ವೀಪಗಳನ್ನು ಸೃಶ್ಟಿಸುತ್ತಿವೆ. 'ಮನುಶ್ಯ ಜಾತಿ ತಾನೊಂದೆ ವಲಂ' ಎಂಬ ಮಾತನ್ನು ಚಂದವಾಗಿ ಹೇಳಲು ಬಳಕೆಯಾಗುತ್ತಿದೆ. ಅದರ ಆಚರಣೆಗಲ್ಲ. ಬರೆಹಗಾರರಿಗೂ ಇದನ್ನು ಮೀರಲಾಗದೇ ಇರುವುದು ವಿಶಾದದ ಸಂಗತಿ. ಇದನ್ನು ಯಾಕೆ ಹೇಳಲಾಯಿತೆಂದರೆ ಸಾಮಾಜಿಕ ಬದಲಾವಣೆಯೆನ್ನುವುದು ಜನಸಾಮಾನ್ಯರನ್ನು ಮಾತ್ರ ಸೀಳವುದಿಲ್ಲ; ಅದು ಲೇಖಕರಲ್ಲಿಯೂ ವ್ಯಕ್ತಿತ್ವದ, ಆಲೋಚನೆಯ ಅಭಿವ್ಯಕ್ತಿಯ ಮೇಲೂ ತೀವ್ರವಾದ ಪರಿಣಾಮ ಬೀರುತ್ತದೆ. ಅಂತಹ ತೀವ್ರವಾದ ಪರಿಣಾಮ ಈಚಿನ ಕನ್ನಡ ಸಾಹಿತ್ಯದ ಮೇಲೂ ಆಗಿದೆ. ಅಂದರೆ ಸಾಹಿತ್ಯ ಸೃಶ್ಟಿಸುವ ಮತ್ತು ಅದನ್ನು ಓದುವವರ ಮೇಲೂ ಆಗಿದೆ. ಅಧ್ಯಯನ ಎನ್ನುವುದು ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯಾಗದೆ ಅದು ಕೇವಲ ಕಡತಗಳ ನಿರ್ಮಾಣದ ಪರಿಪಾಠವಾಗಿದೆ. ಇದು ಒಟ್ಟು ಅರಿವ ವಿಸ್ತರಣೆಗೆ ಹೊಸದ ಹುಡುಕಾಟಕ್ಕೆ ತೀವ್ರ ಪೆಟ್ಟನ್ನು ಕೊಡುತ್ತಿದೆ ಈ ಪ್ರವೃತ್ತಿ ಕನ್ನಡ ಸಂಸ್ಕೃತಿಯನ್ನು, ಕರ್ನಾಟಕವನ್ನು ಒಂದಶ್ಟು ಹಿಂದಕ್ಕೆ ಎಳೆದೊಯ್ಯಬಹುದು.

ನಮ್ಮ ಗ್ರಹಿಕೆ ಮತ್ತು ಆಲೋಚನೆ ನಮ್ಮ ಸೃಶ್ಟಿಕ್ರಿಯೆಯನ್ನು ನಿಯಂತ್ರಿಸುತ್ತಿರುತ್ತದೆ. ಹಾಗೆಯೇ ಸಮಾಜದ ಮನಸ್ಸನ್ನು ವಿವಿಧ ಶಕ್ತಿಗಳು ರೂಪಿಸುತ್ತಿರುತ್ತವೆ. ಹಿಂದೂ ಕೋಮುವಾದಿ ಶಕ್ತಿಗಳೂ ಇರಬಹುದು. ಸಾಮ್ರಾಜ್ಯವಾದಿ ಬಂಡವಾಳಶಾಹಿ ಶಕ್ತಿಗ ಆಗಿರಬಹುದು. ನಮ್ಮ ಸಮಾಜದ ವಿವಿಧ ವರ್ಗಗಳ ಹಿತಾಸಕ್ತಿಗಳು ಇರಬಹುದು. ಸಾಹಿತಿಗಳಿಗಿಂತ, ಸಾಹಿತ್ಯಕ್ಕಿಂತ ಈ ಶಕ್ತಿಗಳ ಹಿಡಿತದಲ್ಲಿರುವ ಮಾಧ್ಯಮಗಳು ರೂಪಿಸುತ್ತಿರುತ್ತವೆ. ನಾವು ಈ ಮಾಧ್ಯಮಗಳ ಭಾಶೆಯನ್ನು ಅಶ್ಟಾಗಿ ಚರ್ಚಿಸಲು ತೊಡಗುವುದೇ ಇಲ್ಲ. ಇಂತಹ ಚರ್ಚೆಯಾಗದ ಹಲವು ನೆಲೆಗಳಿಂದಲೇ ಇಂದಿನ ಸಮಕಾಲೀನ ವೈಚಾರಿಕ ಸಾಹಿ ತನ್ನ ದಾರಿಯನ್ನು ಕಂಡುಕೊಳ್ಳಬೇಕಿದೆ. ಮತ್ತೆ ಕೆಲವರಿ ಸಮಕಾಲೀನ ಸಾಹಿತ್ಯ ಸೃಶ್ಟಿಗೆ ಪ್ರೇರಣೆಯು ಭೂತಕಾಲದಿಂದ ಒದಗಿಬರಬಹುದು. ಇನ್ನು ಕೆಲವರಿಗ ಭವಿಶ್ಯದಲ್ಲಿರಬಹುದು. ಇನ್ನು ಕೆಲವರಿಗೆ ಅಮೂರ್ತ ಅನುಭಾವದ ಅನುಭವಗಳ ಶೋಧನೆಯಲ್ಲಿರಬಹುದು. ಇನ್ನು ಕೆಲವರಿಗೆ ತನ್ನ ಕಾಲವು ಹಲವು ಗೋಜಲುಗಳ ರಾಶಿಯಾಗಿ ಕಾಣಬಹುದು. ಕೆಲವರಿಗೆ ತಮ್ಮ ಅನುಭವವೇ ನಿಜವೆನಿಸಿರಬಹುದು. ವರ್ತಮಾನವೇ ಪ್ರಧಾನವಾಗಿ ಕಾಡಿಸಬಹುದು. ಹಿರಿಯ ಮತ್ತು ಕಿರಿಯತಲೆಮಾರಿನ ಹಲವು ಮಹತ್ವದ ಲೇಖಕರು ನಗರಗಳಲ್ಲಿ ನೆಲೆಸಿದ್ದರೂ ಅವರ ನಿಜವಾದ ಸಾಹಿತ್ಯ ಸೃ ಕ್ರಿಯೆಯ ಕೇಂದ್ರ ಭಿತ್ತಿ ಇಂದಿಗೂ ಗ್ರಾಮೀಣ ಜೀವನ ಪರಿಸರವೇ ಆಗಿರುವುದನ್ನು ಗಮನಿಸಬಹುದು. ಅಂತಹ ಭಿತ್ತಿ ವ್ಯಕ್ತಿವಾದಿ ನೆಲೆಯದೂ ಆಗಿರಬಹುದು. ಒಟ್ಟು ಸಮಾಜದಲ್ಲಿ ಮತ್ತು ಲೇಖಕರಲ್ಲಿ ವ್ಯಕ್ತಿವಾದಿ ಪ್ರವೃತ್ತಿಯನ್ನೇ ಬೆಳೆಸುತ್ತಿದೆ. ಈ ವಿದ್ಯಮಾನವು ವ್ಯಕ್ತಿ ಮತ್ತು ಸಮಾಜದ ನೆಲೆಗಳ ವಿಶ್ಲೇಶಣೆಯ ದಾರಿಗಳನ್ನೇ ಪಲ್ಲಟಿಸುತ್ತದೆ. ಸಾಹಿತ್ಯ ಮತ್ತು ಸಮಾಜದ ಬಗೆಗೆ ಕಾಳಜಿ, ಹೊಣೆಗಾರಿಕೆಯುಳ್ಳ ಎಲ್ಲರೂ ಈ ಬಗೆಗೆ ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ.

ನಗರೀಕರಣ ಮತ್ತು ಬಂಡವಾಳಶಾಹಿ ಜಗತ್ತಿನ ಹಿಂಸೆ ವ್ಯಾಪಕವಾಗಿ ಬೆಳೆಯುತ್ತಿದ್ದರೂ ಅದರ ಕುರಿತಾ

ಹಿತ್ಯ ಸೃಷ್ಟಿ ನಮ್ಮಲ್ಲಿ ಇಂದಿಗೂ ರಂಬದ ಹಂತದಲ್ಲಿಯೇ ರುವುದನ್ನು ಗಮನಿಸಬಹುದು. ಗರೀಕರಣ ನಮ್ಮನ್ನು ೀವ್ರವಾಗಿ ಕಲಕುತ್ತಿದ್ದರೂ ಆ ರಿತಾದ, ಮನಸ್ಸು ಲಕುವಂತಹ ಸಾಹಿತ್ಯ ನ್ನಡದಲ್ಲಿ ಇಂದಿಗೂ ಶ್ಟಿಯಾಗಿಲ್ಲ ಎನ್ನಬಹುದು. ದು ನಮ್ಮ ಬದುಕಿನ ನಿಜವಾದ ತ್ತಿ ಗ್ರಾಮೀಣ ಜೀವನ ಕ್ರಮವೇ ಂದಿಗೂ ಪ್ರಧಾನವಾಗಿದೆ ಂಬುದನ್ನು ೂಚಿಸುತ್ತಿರಬಹುದೇ? ನಗರ ತ್ತು ಬಂಡವಾಳಶಾಹಿ ರೂಪಿತ ೀವನ ವಿಧಾನಗಳು ಇನ್ನೂ ಮ್ಮ ಸೃಜನಶೀಲ ನೆಲೆಗಳಲ್ಲಿ ನ ಪಡೆದುಕೊಳ್ಳುವಷ್ಟು ನಮ್ಮ ದುಕನ್ನು ಪ್ರಭಾವಿಸಿಲ್ಲವೇ? ಥವಾ ಅದನ್ನು ಸೂಕ್ತ ೀತಿಯಲ್ಲಿ ಗ್ರಹಿಸಲು ನಮಗೆ ಸಾಧ್ಯವಾಗುತ್ತಿಲ್ಲವೇ? ಮೀನುದಾರಿ ವ್ಯವಸ್ಥೆಯ ದೊರೆಯನ್ನು ತ್ತಲಾಗಿಸಿದಂತೆ ಬಂಡವಾಳಶಾಹಿ 'ದೊರೆ'ಯನ್ನು ನಮ್ಮ ಹಿತ್ಯ ಇನ್ನೂ ಬೆತ್ತಲಾಗಿಸಿಲ್ಲ. ಇದು ಈಚಿನ ಕನ್ನಡ ಹಿತ್ಯಕ್ಕೆ ಇನ್ನೂ ಸರಿಯಾಗಿ ಗ್ರಹಿಸಲು ಧ್ಯವಾಗಿಲ್ಲವೆನ್ನಿಸುತ್ತದೆ. 'ಮಾಡ್ರನ್ ಟೈಮ್ಸ್' ಚಿತ್ರದ ೂಲಕ ಚಾಪ್ಲಿನ್ ಮಾಡಿದ ಪ್ರಯತ್ನವನ್ನು ಕಥನದ ೂಲಕ ಕನ್ನಡದಲ್ಲಿ ನಮಗಿನ್ನೂ ಪೂರ್ಣವಾಗಿ ಮಾಡಲು ಧ್ಯವಾಗಿಲ್ಲವೆನ್ನಿಸುತ್ತದೆ. ಸಣ್ಣಕತೆಗಳ ಮೂಲಕ ಕೆಲವರು ರಂಭಿಸಿದ್ದಾರೆ. ಅದು ಇನ್ನಷ್ಟು ವ್ಯಾಪಕ ಮತ್ತು ೀವ್ರವಾದ ಅಭಿವ್ಯಕ್ತಿಯಾಗಬೇಕಿದೆ.

ಸಮಾಜದ ಸಾಂಸ್ಕೃತಿಕ ಬದಲಾವಣೆಗಳನ್ನು ೂಕ್ಷ್ಮವಾಗಿ ಗ್ರಹಿಸಬಲ್ಲ ಲೇಖಕರಿಗೆ ತನ್ನ ಕಾಲದ ಎಲ್ಲ ಲ್ಲಟಗಳನ್ನು, ತಲ್ಲಣಗಳನ್ನು, ಮನುಶ್ಯನ ೂಸಸಂಕಟಗಳನ್ನು, ನೋವು–ನಲಿವುಗಳನ್ನು ತ್ಪಾದಿಸುವ ವಿವಿಧ ನೆಲೆಗಳನ್ನು, ಬದಲಾದ ದರ್ಭಕ್ಕೆ ತಕ್ಕಂತೆ ಶೋಧಿಸಲು ಸಾಧ್ಯವಾಗುತ್ತದೆ. ಂತಹ ಶೋಧನೆಗಳಿಂದ ಈಗಾಗಲೆ ಸಿದ್ದಗೊಂಡಿರುವ ರಿವಿಗಿಂತ ಭಿನ್ನವಾದ ದರ್ಶನವೊಂದನ್ನು ನೀಡಲು ಧ್ಯವಾಗುತ್ತದೆ. ಅಥವಾ ಇರುವ ಬದುಕಿನಲ್ಲಿಯೇ ಲೆಮರೆ ಕಾಯಿಯಂತಿರುವ ಜೀವಸೆಲೆಗಳನ್ನು ಶೋಧಿಸಿ ವುಗಳನ್ನು ಬದುಕಿಗೆ ಆಶ್ರಯವಾಗಿಸಿಕೊಡಲು ಧ್ಯವಾಗಬಹುದು. ಅಂತಹ ಸಣ್ಣ ಸಣ್ಣ ಪ್ರಯತ್ನಗಳನ್ನು ಾಡಲಾಗುತ್ತಿದೆ. ಅಲ್ಲದೆ ಇನ್ನು ಕೆಲವು ಬಾರಿ ತನ್ನ ುವಳಿಕೆಯಾಚೆಗೆ ಹುಟ್ಟುವ ವಿಚಾರಗಳನ್ನು ತನ್ನ ತಿಯ ಜೀವನದ ದರ್ಶನವಾಗಿ ಳವಡಿಸಿಕೊಳ್ಳಬಹುದು. ಇಂತಹ ಕ್ರಿಯೆಯ ವಾಗಿಯೇ ಹಲವು ಚಿಂತನೆಗಳ ಪ್ರಭಾವವು ನಮ್ಮ ೂರ್ವಸೂರಿಗಳ ಕೃತಿಗಳ ಮೇಲಾಗಿರುವುದನ್ನು ನಾವು ಣಬಹುದು. ಇನ್ನೂ ಕೆಲವರ ಮೇಲೆ ಸನಾತನ ೀವನ ಮೌಲ್ಯಗಳು ಪ್ರಭಾವ ಬೀರಿರುವುದನ್ನು ನಾವು ಕಾಣಬಹುದು. ಅವು ಹಲವರನ್ನು ದಾರಿ ತಪ್ಪಿಸಿಯೇ ಇವೆ. ಇವರು ನಮ್ಮ ಕಾಲದಲ್ಲಿ ಜೀವಿಸುತ್ತಿದ್ದರೂ ಇವರ ವಿಚಾರಗಳು ಗತಕಾಲದೊಂದಿಗೆ ನಂಟನ್ನು ಹೊಂದಿವೆ. ಜೀವನ ನವ ನಾಗರಿಕತೆಯ ತುತ್ತತುದಿಯಲ್ಲಿದೆ. ಸನಾತನವಾದಿ ಮನುಶ್ಯ ವಿರೋಧಿ ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆ. ಇವುಗಳನ್ನು ಕನ್ನಡ ಸಾಹಿತ್ಯದ ಹೊಸತಲೆಮಾರು ಎಚ್ಚರಿಕೆಯಿಂದ ಗಮನಿಸಬೇಕಿದೆ. ಅವುಗಳ ವಿರುದ್ಧ ಸೆಣಸಾಡಬೇಕಿದೆ. ಹಿಂದೂ ಕೋಮುವಾದಿ ಬಲಪಂಥೀಯರು ಅಧಿಕಾರದ ಗದ್ದುಗೇರಿರುವ ಈ ಸಂದರ್ಭದಲ್ಲಿ ಇದರ ಪ್ರಭಾವವು ಇನ್ನಷ್ಟು ತೀವ್ರವಾಗಿರುತ್ತದೆ. ಸಾಹಿತ್ಯಕ ವಲಯದ ಮತೀಕರಣದ ಪ್ರಯತ್ನಗಳು ಸಾಗಿವೆ. ಮತೀಯವಾದಿ ಚಿಂತಕರನ್ನು ಫೋಕಸ್ ಮಾಡುವ ಮೂಲಕ ಮತ್ತು ಅವರನ್ನು ಆಯಕಟ್ಟಿನ ಜಾಗಗಳಲ್ಲಿ ಸ್ಥಾಪಿಸುವ ಮೂಲಕ ಈ ಕೆಲಸವನ್ನು ಮಾಡಲಾಗುತ್ತಿದೆ.

ಈ ದಿಸೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಈವರೆಗೆ ಅನರ್ಹವಾಗಿದ್ದ ಎಷ್ಟೋ 'ಸಾಹಿತ್ಯ ನಾಣ್ಯಗಳು' ಇಂದು ಚಲಾವಣೆಗೊಳ್ಳಲಾರಂಭಿಸಿವೆ. ಈ ಹಿಂದೆಯೇ ಹೇಳಿದಂತೆ ಅಧಿಕಾರ ರಾಜಕಾರಣವು ಜನತೆಯ ಸಾಂಸ್ಕೃತಿಕ ಲೋಕದ ಜೀವಪರ ಮೌಲ್ಯಗಳನ್ನು ಭ್ರಷ್ಟಗೊಳಿಸುವ ಪ್ರಯತ್ನವನ್ನು ಉದ್ದೇಶ ಪೂರಕವಾಗಿ ಮಾಡುತ್ತಲೇ ಇರುತ್ತದೆ. ಇದರ ಭಾಗವಾಗಿ ಸಾಹಿತ್ಯಕ ಲೋಕವನ್ನು ಮಾಡಬಹುದು. ನಮ್ಮ ಹಿರಿಯ ತಲೆಮಾರಿನ ಅನೇಕ ಲೇಖಕರು ಕೋಮುವಾದಿ ಚಿಂತನೆಗಳ ಬೆಂಬಲಿಗರಾಗಿ ರೂಪಾಂತರಗೊಂಡಿರುವುದನ್ನು ಗಮನಿಸಿದಾಗ ಇದರ ಭೀಕರತೆ ಅರ್ಥವಾಗುತ್ತದೆ. ಈ ಹಿಂದೆಯೂ ಅಂತಹವರಿದ್ದರು; ಅವರು ತಮ್ಮ ರಾಜಕೀಯ ಸಿದ್ಧಾಂತವನ್ನು ಬಹಿರಂಗವಾಗಿ ಮಂಡಿಸುವ ಹಂತಕ್ಕೆ ಏರಿರಲಿಲ್ಲ. ಆದರೆ ಇಂದು ಕೋಮುವಾದಿ ಚಿಂತನೆಯ ಪರಿಣಾಮವಾಗಿ ಕನ್ನಡದ ಸೃಜನಶೀಲ ವಲಯ ಸೀಳಿಹೋಗಿರುವುದು ಇದೆ. ಈ ವಿದ್ಯಮಾನ ಕರ್ನಾಟಕ ಒಳಗಡೆಯೇ ಆಂತರಿಕ ಕಲಹಕ್ಕೆ ಕಾರಣವಾಗುತ್ತದೆ. ಇದು ಕನ್ನಡ ಸಂಸ್ಕೃತಗಳ ಸಂಬಂಧಗಳ ವಿಚಾರದಲ್ಲಿಯೂ ನಿಜ. ಪ್ರಭುತ್ವದ ಜೊತೆಗಿನ ನಂಟಿನ ವಿಚಾರದಲ್ಲಿಯೂ ನಿಜ. ಸಾಹಿತ್ಯ ಸೃಶ್ಟಿಯಲ್ಲಿ ಸೀಳಿರುವಂತೆ ಇತರೆ ವಿಚಾರಗಳಲ್ಲಿ ಸೀಳಿಹೋಗಿರುವುದೇ ದೊಡ್ಡ ಸಂಗತಿ; ಮತ್ತು ದುರಂತ. ಇದು ಸಾಹಿತ್ಯದ ಸೃಶ್ಟಿ ಶಕ್ತಿಯನ್ನು ಹೆಚ್ಚಿಸುವುದಕ್ಕಿಂತ ಕುಂದಿಸುತ್ತದೆ. ಪ್ರತಿಗಾಮಿ ವಿಚಾರಧಾರೆಯನ್ನು ಬೆಳೆಸುತ್ತದೆ. ಒಂದು ಬಗೆಯ ನಿಶ್ಕ್ರಿಯ ವಾತಾವರಣವನ್ನು ಉಂಟು ಮಾಡುವಂತಹ ವಿದ್ಯಮಾನ ಬೆಳೆಯುತ್ತಿದೆ. ಸಮಾಜದಲ್ಲಿ ಇಂತಹ ಬಿರುಕುಗೊಂಡ ಸಾಂಸ್ಕೃತಿಕ ಸನ್ನಿವೇಶವಿದ್ದರೆ, ಫ್ಯಾಸಿಸ್ಟ್ ಚಿಂತನೆಗಳು ಹುಲುಸಾಗಿ ಬೆಳೆಯಲು ಕಾರಣವಾಗುತ್ತದೆ. ಹೊಲವನ್ನು ಉತ್ತುಬಿತ್ತು ಹಸನು ಮಾಡಿ ಬೆಳೆಬೆಳೆಯದೇ ಬೀಡುಬಿಟ್ಟರೆ ಅಲ್ಲಿ ಅನೇಕ ಬಗೆಯ ಮುಳ್ಳುಗಿಡ ಕಸಕಡ್ಡಿ ತುಂಬಿಕೊಂಡು ಕಾಲಿಡದಂತಾಗಿ ಆ ಪ್ರದೇಶ ಬರಡಾಗುತ್ತದೆ. ಫ್ಯಾಸಿಸ್ಟ್ ಚಿಂತನೆಗಳು ಬೆಳೆದರೆ ಅಲ್ಲಿ ಸಾಹಿತ್ಯ ವಿಶಾಲವಾಗುವುದರ ಬದಲು ಕುಬ್ಜವಾಗುತ್ತ ಸಾಗುತ್ತದೆ. ಈ ಬಗೆಗೆ ಯಾರೂ ಅಚ್ಚರಿಪಡಬೇಕಿಲ್ಲ.

ಸಾಹಿತ್ಯದ ಇತ್ತೀಚಿನ ಒಲವುಗಳ ಬಗೆಗೆ ಯೋಚಿಸುವಾಗ ಕಾಲವನ್ನು, ಸಮುದಾಯವನ್ನು, ಸಮಾಜವನ್ನು, ಜನರ ಬದುಕನ್ನು, ಬದಲಿಸುವ ಶಕ್ತಿಗಳನ್ನು ಗುರುತಿಸಿಕೊಳ್ಳಬೇಕು. ಸೂಕ್ಷ್ಮ ಮತ್ತು ಸ್ಥೂಲ ನೆಲೆಗಳಲ್ಲಿ, ವ್ಯಕ್ತಿ ಮತ್ತು ಸಮಾಜಗಳು ಹೇಗೆ ಬದಲಾಗುತ್ತವೆ ಎಂಬುದನ್ನು ಗಮನಿಸಬೇಕಿರುತ್ತದೆ. ಇದಕ್ಕೆ ವೈಚಾರಿಕ ಹಿನ್ನೆಲೆ, ಬದಲಾವಣೆಗೆ ತೀವ್ರವಾಗಿ ಸ್ಪಂದಿಸುವ ಆಸಕ್ತಿ, ಸೃಜನಶೀಲತೆಯಲ್ಲಿ ಶ್ರದ್ಧೆ, ಸಾಮಾಜಿಕ ಕಳಕಳಿ ಇರಬೇಕಾಗುತ್ತವೆ. ಒಂದು ವರ್ಶ, ಒಂದು ದಶಕದಲ್ಲಿ ಮಾತ್ರವಲ್ಲದೆ, ಒಂದು ತಲೆಮಾರಿನಲ್ಲಿ, ಒಂದು ಶತಮಾನದಲ್ಲಿ ಬದಲಾವಣೆಗಳು ಹೇಗೆ ಸಂಭವಿಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬೇಕಿರುತ್ತದೆ. ಆ ಬದಲಾವಣೆಯನ್ನು ಲೇಖಕ ತನ್ನದೇ ಆದ ಜೀವನ ದೃಶ್ಟಿಕೋನದಲ್ಲಿ ದಾಖಲಿಸಬೇಕಿರುತ್ತದೆ. ತನ್ನ ಕಾಲದ ಈ ಬದಲಾವಣೆಯನ್ನು ಗ್ರಹಿಸಲಾಗದ ಲೇಖಕ ಅಮೂರ್ತವಾದ ವಿಚಾರಗಳೊಂದಿಗೆ ಸಮುದ್ರವನ್ನು ಬೊಗಸೆಯಲ್ಲಿ ಎಶ್ಟು ಹಿಡಿದಿಡಲು ಸಾಧ್ಯವೋ ಅಶ್ಟನ್ನು, ಅದರಲ್ಲಿಯೂ ತನ್ನ ಭೂತ ಕಾಲದ



With Best Compliments From

NAGARJUNA
Construction Company Ltd

No. 8, Batavia Chambers, No. 301,
Kumara krupa Road Near Shivananda Circle
Bangalore-560001
Ph: 22253309/ 22258992/ 22258991

ಸಮಕಾಲೀನ ಸಾಂಸ್ಕೃತಿಕ ಪಲ್ಲಟಗಳನ್ನು ಇನ್ನೂ ಸೂಕ್ಷ್ಮವಾಗಿ ಅರಿಯಲು ಸಾಧ್ಯವಾಗದಿರುವ ಕಾರಣ ಕಾದಂಬರಿಯಂತಹ ಕ್ಷೇತ್ರದಲ್ಲಿ ಮಹತ್ವವಾದದ್ದನ್ನು ಸೃಷ್ಟಿಸುವ ಪ್ರಯತ್ನಕ್ಕೆ ಹೊಸತಲೆಮಾರಿನ ಲೇಖಕರು ಕೈಹಾಕಿದಂತೆ ಕಾಣುತ್ತಿಲ್ಲ. ಎಲ್ಲ ಪ್ರಮುಖ ಕಾದಂಬರಿಗಳಲ್ಲಿ ಚರಿತ್ರೆ ಮತ್ತು ಸಮಾಜಗಳು ಪ್ರಧಾನ ನೆಲೆಗಳಾಗಿರುತ್ತವೆ. ಆ ಸಮಾಜದದೊಳಗಿಳ ಸಂಘರ್ಶ ಕೃತಿಕಾರನ ಸೃಜನಶೀಲತೆಯ ವಸ್ತುವಾಗಿರುತ್ತದೆ.

ವರ-ವಿಚಾರಗಳೊಂದಿಗೆ ಕೃತಿಯೊಂದರ ಸೃಷ್ಟಿಯಲ್ಲಿ ಾಡಗಿರುತ್ತಾನೆ. ಅಂತಹ ಕ್ರಿಯೆಗಳಿಂದ ಸಮಕಾಲೀನ ಮಾಜದ ಪಲ್ಲಟಗಳು ಲೇಖಕನಿಂದ ತಪ್ಪಿಸಿಕೊಂಡು ಡುತ್ತಿರುತ್ತವೆ. ಅಂದರೆ ಲೇಖಕರು ಜಡತ್ವವನ್ನು ಾಡವಿಕೊಂಡು ಮೇಲೇಳಬೇಕು. ಇಂದಿನ ಸಾಹಿತ್ಯಕ ತಾವರಣವು ಜಡವಾಗಿದೆ ಎಂದು ಅನೇಕರು ಕ್ತಮಾಡುವ ಅಭಿಪ್ರಾಯಗಳನ್ನು ಗಂಭೀರವಾಗಿ ವಾಲಾಗಿ ಪರಿಗಣಿಸಬೇಕಿದೆ. ನಿಜವಾಗಿಯೂ ಒಂದು ಮಾಜದ ಸಾಂಸ್ಕೃತಿಕ ಮತ್ತು ಸಾಹಿತ್ಯಕ ವಾತಾವರಣ ಡತ್ವದತ್ತ ಸಾಗುವುದು ಸಾಮುದಾಯಿಕವಾಗಿ ತಮ್ಮನ್ನು ವೇ ಕೊಂಡುಕೊಂಡಂತಿರುತ್ತದೆ.

ಇಂದಿನ ಹೊಸತಲೆಮಾರು ಮಿಶ್ರಿತ ಗುಂಪಾಗಿದೆ. ಮ ತನ್ನ ಗ್ರಹಿಕೆಗೆ ಸಿಕ್ಕಷ್ಟು ಮತ್ತು ಅದನ್ನು ಸೃಜನಶೀಲ ಕೃತಿಯಾಗಿ ರೂಪಾಂತರಗೊಳಿಸಲು ಸಾಧ್ಯವಾದಷ್ಟು ಮಕಾಲೀನವಾಗಿದೆ. ತನ್ನ ಕಾಲವನ್ನು ಹೊಸತಾಗಿ, ಕ್ಷ್ಮವಾಗಿ ಗ್ರಹಿಸುತ್ತಿದೆ ಎನ್ನಬಹುದು. ಅಲ್ಲಿ ಕಲ್ಪಿತ ಚಾರಗಳು, ಅಸೂಕ್ಷ್ಮ ವಿಶ್ಲೇಶಣೆಗಳು ಮತ್ತು ದಲಾವಣೆಯನ್ನು ಅರಿಯಲು ಪ್ರಯತ್ನಿಸದಿರುವುದು ದೆ. ಇದು ಹೊಸತಲೆಮಾರಿನಲ್ಲಿ ಹೊಸತನ ಮತ್ತು ಮಕಾಲೀನತೆ ಕಳೆದು ಹೋಗಲು ಕಾರಣವೂ ಆಗಿದೆ. ಾಸತಲೆಮಾರು ವಿದ್ವತ್ ಗಳಿಕೆಯ ಬಗೆಗೆ ಒತ್ತನ್ನೇ ಡುವಂತೆ ಕಾಣುತ್ತಿಲ್ಲ; ಬದಲಿಗೆ ಅಂತಹವರನ್ನು ಶಯಿಸಿ ನೋಡುವ, ನಿಶ್ಟುರ ವಿಮರ್ಶೆಯನ್ನೇ ಒಪ್ಪದ ೀರಣೆಯಿದೆ. ವಿಮರ್ಶೆ, ವಿಶ್ಲೇಶಣೆರಹಿತವಾದ ಮಗಳನ್ನು ಮುಂದುವರೆಸಿರುವುದನ್ನು ಕಾಣಬಹುದು. ಮು ತೀಕ್ಷ್ಣವಾಗಿದ್ದರೆ ಹೊಸತಲೆಮಾರಿನಲ್ಲಿ ವಿಮರ್ಶಕರ ರತೆ ಎದ್ದು ಕಾಣುತ್ತಿರಲಿಲ್ಲ. ಅಲ್ಲದೆ ಜನರಿಂದ ದೂರ ಳಿದಿರುವ ಪರಿಣಾಮವಾಗಿಯೇ ಹೆಚ್ಚು ನಾಟಕಗಳು ಂದು ರಚನೆಗೊಳ್ಳುತ್ತಿಲ್ಲ. ಇಂದು ರಂಗಭೂಮಿಯು ನವಳಿಯಿಂದ ದೂರವಾಗಿ ಅದು ಹವ್ಯಾಸಿ ಚುವಟಿಯಾಗಿದೆ. ಕಳೆದ ಶತಮಾನದ ಎಪ್ಪತ್ತು ಬತ್ತರ ದಶಕದಲ್ಲಿ ಸಾಹಿತಿಗಳ ಜನರ ಮುಖಾಮುಖಿ ಚ್ಚಿದ್ದಾಗ, ಚಳವಳಿಗಳು ತೀವ್ರವಾಗಿದ್ದಾಗ ಹೆಚ್ಚು ಟಕಗಳು ಹುಟ್ಟಿವೆ. ಬೇರೆ ಬೇರೆ ಮೂಲಗಳಿಂದ ಷವಾದಿಸಿಕೊಂಡು ಜನರ ಕಸುವನ್ನು ಹೆಚ್ಚಿಸಲು ಬಸಲಾಗಿದೆ. ಅಂದರೆ ಚಳವಳಿ ಮತ್ತು ಜನರೊಂದಿಗಿನ ಟವಾದ ನಂಟು ಒಳ್ಳೆಯ ಸಾಹಿತ್ಯವನ್ನೇ ಸೃಶ್ಟಿಸುತ್ತದೆ ಬುದಕ್ಕೆ ಅದು ಒಳ್ಳೆಯ ನಿದರ್ಶನ.

ಸಮಕಾಲೀನ ಸಾಂಸ್ಕೃತಿಕ ಪಲ್ಲಟಗಳನ್ನು ಇನ್ನೂ ಕ್ಷ್ಮವಾಗಿ ಅರಿಯಲು ಸಾಧ್ಯವಾಗದಿರುವ ಕಾರಣ ದಂಬರಿಯಂತಹ ಕ್ಷೇತ್ರದಲ್ಲಿ ಮಹತ್ವವಾದದ್ದನ್ನು ಷ್ಟಿಸುವ ಪ್ರಯತ್ನಕ್ಕೆ ಹೊಸತಲೆಮಾರಿನ ಲೇಖಕರು ಹಾಕಿದಂತೆ ಕಾಣುತ್ತಿಲ್ಲ. ಎಲ್ಲ ಪ್ರಮುಖ ಕಾದಂಬರಿಗಳಲ್ಲಿ ಚರಿತ್ರೆ ಮತ್ತು ಸಮಾಜಗಳು ಪ್ರಧಾನ ನೆಲೆಗಳಾಗಿರುತ್ತವೆ. ಆ ಸಮಾಜದದೊಳಗಿಳ ಸಂಘರ್ಶ ಕೃತಿಕಾರನ ಸೃಜನಶೀಲತೆಯ ವಸ್ತುವಾಗಿರುತ್ತದೆ. ಅದನ್ನು ಕೃತಿಯೊಳಗೆ ನಿರ್ಮಿಸುವುದಕ್ಕೆ ಸಾಮಾಜಿಕ ಮತ್ತು ಚಾರಿತ್ರಿಕ ಪ್ರಜ್ಞೆ ಅಗತ್ಯವಿರುತ್ತದೆ. ಆ ಮೂಲಕ ಸಮಾಜದ ಸಾಂಸ್ಕೃತಿಕ ಸಮಸ್ಯೆಗಳನ್ನು ಲೇಖಕರು ಮುಖಾಮುಖಿ ಮಾಡುತ್ತಾರೆ. ಕನ್ನಡದ ಈವರೆಗಿನ ಕಾದಂಬರಿಗಳನ್ನು ಅವಲೋಕಿಸಿದರೆ ಇದು ಅರ್ತವಾದೀತು. ಎಲ್ಲ ಮುಖ್ಯ ಕೃತಿಗಳು ಆಯಾ ಕಾಲದ ಪಲ್ಲಟಗಳನ್ನು ತಮ್ಮ ಕೃತಿಗಳ ಮೂಲಕ ಹಿಡಿದಿಡಲು ಯತ್ನಿಸಿವೆ. ಅಂದರೆ ಆ ಕಾಲದ ಸಮಾಜದ ಬದಲಾವಣೆಯನ್ನು ಗ್ರಹಿಸುವಲ್ಲಿ ಹಿರಿಯ ತಲೆಮಾರು ಪ್ರಯತ್ನಿಸಿದೆ. ಇದು ಹೊಸತಲೆಮಾರಿಗೆ ಇನ್ನೂ ಸಾಧ್ಯವಾದಂತೆ ಕಾಣುತ್ತಿಲ್ಲ. ಆ ಪಲ್ಲಟಗಳನ್ನು ಗ್ರಹಿಸುವ ಹಾದಿಯಲ್ಲಿ ಪ್ರಯೋಗ ಮಾಡುತ್ತ ಸಾಗಿದೆ ಎಂಬ ಆಶಾವಾದಿಯಾದ ಮಾತನ್ನಶ್ಟೇ ಈಗ ಹೇಳಬಹುದಾಗಿದೆ.

ಆದ್ದರಿಂದ ಹೊಸತಲೆಮಾರು ಸಮಕಾಲೀನವಾಗುವ ಮತ್ತು ಸೃಜಶೀಲಕ್ರಿಯೆಯನ್ನು ತೀವ್ರವಾಗಿಸುವ ಹೊಸತಾಗಿಸುವ ಹಂತದಲ್ಲಿ ಈ ಸಂಗತಿಗಳನ್ನು ಗಮನಿಸಲೇಬೇಕಿದೆ. ಇಲ್ಲವಾದರೆ ಜಾಗತೀಕರಣದ ಆತಂಕಗಳನ್ನು ಮಾನಸಿಕವಾಗಿ ನಾವು ಎದುರಿಸುತ್ತೇವೆ ಎಂದುಕೊಂಡರೂ, ಸಮಕಾಲೀನ ಸಮಾಜ ಮತ್ತು ಜೀವನ ಮೌಲ್ಯಗಳನ್ನು ರೂಪಿಸುವ ಶಕ್ತಿಗಳು ಮೇಲು ಮೇಲಿನವೇ ಆಗಿರುತ್ತವೆ. ಸಮಾಜ ಮತ್ತು ಜನರ ಜೀವನ ಮೌಲ್ಯಗಳನ್ನು ರೂಪಿಸುವ ಶಕ್ತಿಗಳನ್ನು ಮರೆತು ಬರೆಯಲು ಸಾಧ್ಯವಿಲ್ಲ. ಈ ಎಚ್ಚರ ಇದ್ದರೆ ನಿಜವಾದ ಸಮಕಾಲೀನ ಮತ್ತು ಬೇರೆಯದೇ ರೀತಿಯಾದ ಸಾಹಿತ್ಯ ತನ್ನ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಸಾಹಿತ್ಯದ ಯಾವುದೇ ಪ್ರಕಾರಗಳನ್ನು ನಮ್ಮ ಸೃಜನಶೀಲತೆ ಸೃಶ್ಟಿಗೆ ಆರಿಸಿಕೊಂಡರೂ ಅದು ಸತ್ಯ. ಸಮಾಜವನ್ನು **ದೂರವಿಟ್ಟು ಅಮೂರ್ತವಾಗಿ** ಬರೆಯಲಾಗುವುದಿಲ್ಲ. **ಬರೆದರೂ ಅದು ತೀರ** ಸೀಮಿತವಾಗಿರುತ್ತದೆ. ಈ ಎಚ್ಚರ **ಹೊಸತಲೆಮಾರಿಗೆ** ಅಗತ್ಯ.

ಹಾಗಾಗಿ ಈ ಕಾಲಘಟ್ಟದಲ್ಲಿ ನಮ್ಮನ್ನು ಕಾಡುವ ಬೇಸಾಯದ ಅವನತಿ-ರೈತರ ಆತ್ಮಹತ್ಯೆಗಳು, ಹಳ್ಳಿಗಳ ಜನರು ನಗರಗಳಿಗೆ ಗುಳೆಹೋಗುವುದು. ನಗರಗಳಲ್ಲಿ ನೆಲೆಸಿ ಕಾರ್ಮಿಕರಾಗುವುದು; ಅಲ್ಲಿ ಕೆಲಸ ಮಾಡುತ್ತ ಅಲ್ಲಿನ ಬದುಕಿನಲ್ಲಿ ಕಾಣೆಯಾಗುವುದು. ಬಹುರಾಶ್ಟ್ರೀಯ ಕಂಪನಿಗಳು ನಮ್ಮ ನಾಡಿನ ಪ್ರಾಕೃತಿಕ ಸಂಪತ್ತನ್ನು ದೋಚುತ್ತಿರುವುದು, ಹಿಂದೂ ಕೋಮುವಾದ, ತೀವ್ರ ನಗರೀಕರಣದ ಬಿಕ್ಕಟ್ಟುಗಳು, ಬೆಲೆಗಳ ಏರಿಕೆ-ಜೀವ ಅಗ್ಗವಾಗುವ ಬಗೆ, ಜೀವನ ವಿಧಾನದ ಸರಕೀಕರಣ, ಪ್ರಜಾಪ್ರಭುತ್ವದ ಅವಸಾನ, ಜಾತಿ ಮತ್ತು ಲಿಂಗ ಅಸಮಾನತೆಗಳು, ನಗರ-ಹಳ್ಳಿಗಳ ಅಸಮಾನತೆ, ತೀವ್ರವಾಗುತ್ತಿರುವ ವರ್ಗ ಅಸಮಾನತೆ, ಪ್ರಾದೇಶಿಕ ಅಸಮತೋಲಗಳು ಮುಂತಾದ ಸಾಮಾಜಿಕ ಸಮಸ್ಯೆಗಳು ಕಾಡುತ್ತಿವೆ. ಇಂದಿನ ಸಾಹಿತ್ಯ ಇವುಗಳ ಒಲವು ತೋರಿಸುತ್ತ ಕನ್ನಡ ಸಾಹಿತ್ಯವನ್ನು ಹೊಸದಾರಿಯಲ್ಲಿ ಮುನ್ನಡೆಸಬೇಕಿದೆ. ಇಂದು ಸಾಹಿತ್ಯಕ ಚಳವಳಿ ಮತ್ತು ಸಾಮಾಜಿಕ ಚಳವಳಿಗಳು ಛಿದ್ರೀಕರಣವಾಗಿ ಬಹುಮುಖೀ ಹಾದಿಗಳಲ್ಲಿ ಸಾಗಿವೆ. ಇಂತಹ ಸಂದರ್ಭದಲ್ಲಿ ಸಾಹಿತ್ಯವನ್ನು ಅಮೂರ್ತವಾಗಿ ನೋಡದೆ ಸಾಮಾಜಿಕ ಬದಲಾವಣೆಗಳ ಜತೆಗೆ ಮುಖಾಮುಖಿಯಾಗಿಸಬೇಕು. ಹೊಸಸಂವೇದನೆಗಳನ್ನು ಸಾಹಿತ್ಯದ ಹೊಳೆಗೆ ಹೊಸ ನೀರಾಗಿ ಹರಿಸಬೇಕು. ಆಗ ಸೃಜನಶೀಲತೆ ಹೊಸರೂಪ ಪಡೆಯುತ್ತದೆ. ಲೇಖಕರು ಸೃಜನಶೀಲರಾಗುವುದರ ಜತೆಗೆ ಸಮಾಜವನ್ನು ಸೃಜನ ಶೀಲಗೊಳಿಸಿದಂತಾಗುತ್ತದೆ. ಇದು ಸಾಧ್ಯವಾಗಲು ಸಾಹಿತ್ಯಕ ವಲಯ ತನ್ನ ಜಡತ್ವವನ್ನು ಕಳಚಿಕೊಂಡು ಮೇಲೇಳಬೇಕಶ್ಟೇ. ಅಂತಹ ವಿದ್ಯಮಾನ ಕರ್ನಾಟಕದ ನಾಳೆಗಳ ಬದುಕಿನಲ್ಲಿ ಸಂಬವಿಸಲಿ ಎಂದು ಕನಸೋಣ.

ರಂಗನಾಥ ಕಂಟನಕುಂಟೆ

ಬೆಂಗಳೂರಿನ ಬಸವನಗುಡಿ ನ್ಯಾಶನಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ಭಾಷಾ ವಿಜ್ಞಾನ ವಿಶೇಷ ಅಧ್ಯಯನ ಕ್ಷೇತ್ರ. ಹಂಪಿ ಕನ್ನಡ ವಿವಿ ಯಿಂದ ಡಾಕ್ಟರೇಟ್ ಪದವಿ. ಜನಭಾಷೆ ಮತ್ತು ಪ್ರಭುತ್ವಗಳ ಸಂಘರ್ಷ, ಜನರ ವ್ಯಾಕರಣ ಕೃತಿಗಳು ಜನ ಮೆಚ್ಚುಗೆ ಪಡೆದಿವೆ. ನದಿಯ ತೀರದ ನಡಿಗೆ, ಸೋರೆದೋಣಿಯ ಗೀತ, ಗೋಡೆಯ ಚಿತ್ರ ಪ್ರಕಟಿಕ ಕವನ ಸಂಕಲನಗಳು. ಅನೇಕ ಕವನಗಳು, ಲೇಖನಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಾಮಾಜಿಕ ಸಂಘಟನೆಗಳೊಂದಿಗೆ ಕಳೆದ ಒಂದು ದಶಕದಿಂದಲೂ ಒಡನಾಟವಿದೆ.

ಹದ್ದು ಮೀರದ ಹಾಳೂರಿನ ಗೋಡೆಗಳು..

ಡಾ॥ ಎಸ್.ಬಿ.ಜೋಗುರ

1

ಕೇಳ್ರೆಪೋ ಕೇಳ್ರಿ..
ಆಸರಕಿ, ಬ್ಯಾಸರಕಿ ಮರತು ಕಿವಿ ನಿಮರಿಸಿ ಕೇಳ್ರಿ,
ಕುಂತ ಕುಂತಲ್ಲೇ, ನಿಂತ ನಿಂತಲ್ಲೇ ಮೈ ಮ್ಯಾಲ ಖಬರ್ ಇಲ್ಲದೇ ಕಲ್ಲಾಗಿ ಕೇಳ್ರಿ,
ಹಸಿದ ಹೊಟ್ಟೀ ಮ್ಯಾಲ, ಗಚ್ಯಾಗಿ ಮುಕಳೀಯೂರಿ ಕೇಳ್ರಿ,
ಹುಬ್ಬೇರಿಸಿ ಕೇಳ್ರಿ.. ತುಟಿ ಕಚ್ಚಿ ಕೇಳ್ರಿ,
ಮರ್ತೆದೊಳಗಿನ ಕೊಳಕ ಮಂದೀದು...ಹರಕ ಮನಸಿಂದು ಕಥಿ ಕೇಳ್ರಿ,
ಇದು ಒಂದಾನೊಂದು ಕಾಲದ ಚೆಂದೂರಿನ ಕಥಿಯಲ್ಲ,
ಹದ್ದು ಮೀರದ ಹಾಳೂರಿನ ಗ್ವಾಡಿಗಳ ಕಥಿ.
ಗ್ವಾಡೀಗೂ ಕಿವಿ ಇರ್ತಾವ ಅಂತಾರ,
ಏನಿದ್ದರ ಏನು..? ಇವು ಮೂಕ, ಕಿವುಡ, ಕುರುಡ ಗ್ವಾಡಿ.
ಅದ್ಕೇ ಕತೀನ್ನ ನಿಮ್ಮುಂದ ನಾ ಹೇಳಾಕತ್ತೀನಿ.
ಕೇಳ್ರೆಪೋ ಕೇಳ್ರಿ...

ಅಷ್ಟೂ ಇದ್ದರ ಅಷ್ಟೂ ಹಿಮ್ಮಡ ಒಡಿದ ಬರಿಗಾಲುಗಳೇ..

ಅವರ ಬದುಕೂ ಹಂಗೇ ಐತಿ, ಬರೀ ಬಣ ಬಣ, ಒಣ ಒಣ. ಕರ್ಲು ನೆಲದಂ ಜಿಗಟ ಮೈ ಕಮಟು ಬಟ್ಟಿ ಅವತ್ತಿಂದು ಅವತ್ತೇ ಕಾಯ್ಸಿ ಬಡಿಯೋ ಜೀವಗೋಳಿಗಿ ನಾಳಿನ ತಿಪಲ ತಲ್ಯಾಗ ತುಂಬಿದ್ದಾದರೂ ಯಾರು..? ಹಿಂಗ ಇದ್ದಕಿದ್ದಂಗ ಗುಂಪಿ ಗುಂಪಿಯಾಗಿ ಹೆಜ್ಜಿಗೋಳು ಊರ ಹೊರಗಿನ ಗುಡಿ ಮುಂದ ಮೂಡ್ಯಾವ ಅಂದ್ರ ಹಾಳೂರಾಗ ಏನೋ ಕಿಸಾಮತಿ ನಡಿಯೂದೈತಿ, ಇಲ್ಲಾ ನಡದೈತಿ ಅಂತ ಅರ್ಥ.

ಸುಡಗಾಡ ಸನೆಸನೆ, ಸೂರ್ಯ ಹುಟ್ಟೊ ದಿಕ್ಕಿಗಿ ಇರೋ ಮರಗಮ್ಮ ಲಕ್ಕಮ್ಮನ ಗುಡಿ ಮುಂದ ಹಿಂಗ ಕಂಡಾಪಟಿ ಮಂದಿ ಸೇರೂದು ವರ್ಷದಾಗ ಒಂದೇ ಸರ್ತಿ. ಜಾತ್ರಿ ಮುಂದ. ಅದೂ ಹ್ಯಾಂಗ..? ಹಿಂಗ ಕೂಡ್ಯಾರ ಅನ್ನೋದರೊಳಗ ಹಂಗ ಕರಗಿರತಾರ. ಭೇಷನ್ಯಾಗೆ ತಾಸಗಟ್ಟಲೇ ಕುಂತು ಪಂಟ ಹೊಡಿಯುವಂಗಿಲ್ಲ. ಹಂಗೇನಾರ ದೇವರ ಕಾರ್ಯ ಮುಗದ ಮ್ಯಾಲೂ ಆ ಜನಾ ಅಲ್ಲೇ ಗುಂಡಗಟ್ಟಿದರ, ವಾಲಿಕಾರ ತುಳಜ್ಯಾ ಭಂವ್.. ಅಂತ ಜೆಟ್ ಇಮಾನ ಹೋದಂಗ ಹೋಗಿ, ಸಾಹುಕಾ ಸಿದ್ದಲಿಂಗಪ್ಪನ ಕಿವಿ ಕಚಕ್..! ಅಂತ ಕಚ್ಚಿ ಬರತಿದ್ದ.

ಅವತ್ತು ನೋಡದರ ಅತ್ಲಾಗ ಹಬ್ಬಾನೂ ಅಲ್ಲ.. ಇತ್ಲಾಗ ಹುಣ್ಣವೀನೂ ಇಲ್ಲ. ಜಾತ್ರಿ ನೋಡದರ ಮೊನ್ನೆ ಮೊನ್ನೇನೇ ಮುಗದೈತಿ. ಹೊಟ್ಟೀತಿಪಲಕ್ಕ ಹೋಗೂ ವ್ಯಾಳೆದೊಳಗ ಇಲ್ಲಿ ಸೇರ್ಯಾರಂದರ ಏನೋ ತಾರಾತಿಗಡಿ ನಡಿಯೂದೈತಿ ಅಂತ ವಾಲಿಕಾರ ತುಳಜ್ಯಾ ದೂರ ನಿತಗೊಂಡೇ ಲೆಕ್ಕಾ ಹಾಕಿದ್ದ. ಇವನ ಹೆಂಡತಿ ತುಳಜವ್ವ ಆ ಗುಡಿ ಪೂಜ್ಯಾರಿಕಿ ಮಾಡಾಕಿ, ಅಕಿಗಿ ಸೈತ ಅವತ್ತು ಅಲ್ಲಿ ಏನು ನಡಿಯೂದೈತಿ ಅಂತ ಈ



ಅವತ್ತ ಬಡಸಕೊಂಡು ನಾಪತ್ತೆಯಾದ ತಳವಾರ ಸುಬ್ಯಾ ಇಂಥಲ್ಲೇ ಅದಾನ ಅಂತ ಇವತ್ತಿನ ಮಟ ಪತ್ತೇ ಸೈತ ಇರಲಿಲ್ಲ. ಸಾಹುಕಾರ ಸಿದ್ದಲಿಂಗ ಹಾಳೂರಾಗ ತಂದೇ ನಡೀಬೇಕು ಅಂತ ಇವತ್ತಿನ ಮಟ ಜಿದ್ದಿಗಿ ಬಿದ್ದು ನಡಸಕೊಂಡು ಬಂದಂವ. ಅದರಾಗೂ ಕೆಳಗಿನ ಕೇರಿಯೊಳಗ ಕೂಸು-ಕುನ್ನಿ ಜೋರಾಗಿ ಅತ್ತರೂ ತಾಕೀತು ಮಾಡೊ ಗತ್ತ ಇಟಕೊಂಡಂವ.

ಮಂದಿ ಹಚ್ಚಿಗೊಟ್ಟಿರಲಿಲ್ಲ. ಅಟ್ಟರ ಮಟ್ಟಿಗೆ ಮೊಗಮ್ ಆಗಿ ಆ ಬೆರಕೀ ದಂಡ ಅಲ್ಲಿ ಸೇರಿತ್ತು.

ಇದೆಲ್ಲಾ ತಳವಾರ ಸುಬ್ಯಾನ ಕಿತ್ತಾಪತಿ ಇರಬೇಕು ಅಂತ ತುಳಜಪ್ಪ ಅಂದ್ಕೊಳ್ಳುದರೊಳಗ, ಸುಬ್ಯಾ ಕುತಗಿಗಿ ಒಂದು ಕೆಂಪು ಬಣ್ಣದ ಟವಲ್ ಬಿಕ್ಕೊಂಡು,, ಇನಾ ಈಗ ಕ್ವಾಣಾ ಕತ್ತರಿಸಿ ಬಂದವರಂಗ ಹಣಿ ಮ್ಯಾಲ ರಾವ್ ಆಗಿ ಕುಂಕಮ ಬಳಕೊಂಡು ' ಬರ್ರಿ ಎಲ್ಲಾರೂ ಇಕಾಡಿ ಬರ್ರಿ' ಅಂತ ಹೇಳಿದ್ದೇ ಆ ಬರಿಗಾಲುಗಳೆಲ್ಲಾ ಒಂದುಗೂಡದ್ವು. ಸುಬ್ಯಾ ಕೆಮ್ಮದಂಗ ಮಾಡಿ, ಅಕಾಡಿ ಇಕಾಡಿ ಹೊಳ್ಳಿ ನೋಡಿ, ಅಲ್ಲೇ ತುಸು ದೂರ ನಿಂತಕೊಂಡಿದ್ದ ತುಳಜ್ಯಾನ ವ್ಯಾಸಿಯಾಗಿ ಕೆಕ್ಕರಿಸಿ ನೋಡಿದ್ದೇ

'ಸಮಾಜ ..ಸಮಾಜ ಅಂತ ಹೊಯ್ಕೊಂತೀರಿ, ನಮ್ಮೂವೇ ನಮಗ ವೈರಿ ಆದ್ರ ಬದುಕೂದು ಹ್ಯಾಂಗ..?' ಅಂದ. ತುಳಜ್ಯಾಗ ತುಸು ಕಸಿವಿಸಿ ಆಗಿ ಮತ್ತೂ ತುಸು ದೂರ ಹೋಗಿ ನಿಂತ. ಸುಬ್ಯಾ ಗುಡಿ ಮುಂದಿನ ಏಳುಮಕ್ಕಳ ತಾಯಿ ಮೂರ್ತಿ ಬಾಜೂ ನಿಂತು ಮಾತಾಡಲಾಕ ಶುರು ಮಾಡದ.

'ನೀವು ಎಷ್ಟು ದಿನ ಅಂತ ಹಿಂಗೇ ಬದಕವರು..? ನಿಮ್ಮನ್ನ ಕಂಡ್ರ ಮ್ಯಾಲಿನಕೇರಿಯವರು ನಾಯಿ , ಹಂದಿನ್ನ ಕಂಡಂಗ ಮಾಡತಾರ. ಬರ್ರಿ ನನ್ನ ಜೋಡಿ, ನಿಮಗೂ ಗೌರವ ಸಿಗೂವಂಗ ಮಾಡ್ತೀನಿ. ನನ್ನ ಮ್ಯಾಲ ನಿಮಗ ವಿಶ್ವಾಸ ಇಲ್ಲಾಂದ್ರ ಇಲ್ಲೆ ಬಾಜೂ ಚಂದೂರಾಗ ಕೇಳ್ರಿ, ಅವರೆಲ್ಲಾ ಹ್ಯಾಂಗ ಇದ್ದರು.. ಹ್ಯಾಂಗ ಆದರು. ನಮ್ಮ ಲೀಡರ್ ಅಂಬೇಡ್ಕರ್ ರಂಥವರೇ ಬೌದ್ಧ ಧರ್ಮಕ್ಕ ಹೋಗಿರಬೇಕಾದರ ನೀವ್ಯಾಕ ಹೀಂಗೆ.. ನೀವು ಹಿಂಗೇ ನಾಯಿ ಮುಚ್ಕೊಂಡು ಉಳದರ ನಿಮ್ಮನ್ನು ಜೀವಂತ ಹೂತು ಹಾಕಿ ಬಿಡ್ತಾರ.? ಎಟ್ಟಂತ ಸೈಸಕೋತೀರಿ..? ಬತ್ತಲೆ ಮಾಡದರು.. ಸೈಸಕೊಂಡರಿ, ಗುಡಸಲಾ ಸುಟ್ಟರು..'ಅನ್ನೂವದರೊಳಗ ವಾಲಿಕಾರ ತುಳಜ್ಯಾ ಮಂಗ ಮಾಯ ಆಗಿದ್ದ. ಕಣ್ಣ ಮುಚ್ಚಿ ಕಣ್ಣ ತಗಿಯೂದರೊಳಗ ಬಡಿಗಿ, ಕೊಡ್ಲಿ ಬಂದ್ವು, ಗುಂಪುಗೂಡಿದ್ದ ಬೆತ್ತಲೆ ಕಾಲುಗೋಳು ದಿಕ್ಕು ದಿಶೆ ತಿಳಿಲಾರದಂಗ ಓಡಿ ಹೋದ್ವು. ಕೈಗಿ ಸಿಕ್ಕ ಸುಬ್ಯಾನ ಕಥಿ ನ್ಯಾಡ. ದನಕ್ಕ ಬಡದಂಗ ಬಡದು, ಮುದ್ದೀ ಮಾಡಿ ಚಂಡಕೇನ ಹಳ್ಳದಾಗ ಬೀಸಾಕಿ ಬಿಟ್ಟರು. ಅಟ್ಟೆ ಅಲ್ಲ ಬಡದವರೇ ಬಡಿಸಿಕೊಂಡವರ ಮ್ಯಾಲ ' ಸುಬ್ಯಾ ಮರಗಮ್ಮ ಅಕ್ಕಮ್ಮನ ಗುಡಿ ಮುಂದ ಮತಾಂತರ ನಡಸಿದ್ದ' ಅಂತ ಉಲ್ಟಾ ಕಂಪ್ಲೇಂಟ್ ಕೊಟ್ಟು, ಹದಿನೈದು ದಿನ ಜೈಲಿನಾಗ ಕಾಯ್ಸಿಕೊಳುವಂಗ ಮಾಡಿದ್ದರು.

ಅವತ್ತ ಬಡಸಕೊಂಡು ನಾಪತ್ತೆಯಾದ ತಳವಾರ ಸುಬ್ಯಾ ಇಂಥಲ್ಲೇ ಅದಾನ ಅಂತ ಇವತ್ತಿನ ಮಟ ಪತ್ತೇ ಸೈತ ಇರಲಿಲ್ಲ. ಸಾಹುಕಾರ ಸಿದ್ದಲಿಂಗ ಹಾಳೂರಾಗ ತಂದೇ ನಡೀಬೇಕು ಅಂತ ಇವತ್ತಿನ ಮಟ ಜಿದ್ದಿಗಿ ಬಿದ್ದು ನಡಸಕೊಂಡು ಬಂದಂವ. ಅದರಾಗೂ ಕೆಳಗಿನ ಕೇರಿಯೊಳಗ ಕೂಸು-ಕುನ್ನಿ ಜೋರಾಗಿ ಅತ್ತರೂ ತಾಕೀತು ಮಾಡೊ ಗತ್ತ ಇಟಕೊಂಡಂವ. ಇಂಥಾ ಗಂಡ ಗಚ್ಚಿ ಗತ್ತು, ರಾತ್ರೋ ರಾತ್ರಿ ಸಣ್ಣ ಆಗಿ ಬಿಚಗೊಂಡು, ಕೆಳಗಿನ ಕೇರಿ ಮೂಲಿ ಮನಿಯಿಂದ ಜೋತ್ಯಾಡಸ್ಕೊಂತ ಬರೊ ಮುಂದ ಸೈತ ಅವನ ಕುರಸಾಲ್ಯಾ ಮನಸು ಹೇಸಕೋತಿರಲಿಲ್ಲ. ಒಟ್ಟಿ ಏನಪಾ ಅಂದ್ರ, ಆ ಮೂಲಿ ಮನಿ ಹೆಂಗಸರೆಲ್ಲಾ ಇವರ ಮನಿತನಕ್ಕ ಗುತ್ತಗೀ ಬರದಂಗ ಆಗಿತ್ತು. ಹಿಂಗಿದ್ದೂ ಕೆಳಗಿನ ಕೇರಿಯೊಳಗ ಏನಾರ ಖುಷಿ ಸುದ್ದಿ ಬಯಲಾಗಿ ಇವನ ಕಿವಿಗಿ ಬಿದ್ದರ, ಮೈಯಾಗ ಕರಿ ಚೇಳು ಹರದಾಡದಂಗ ಆಗತಿತ್ತು.

ತನ್ನ ಎದುರ ಯಾರರೇ ಎತ್ತಿ ಕಟ್ಟಾ ಕತ್ತರ ಜೀವಂತೇ ಹೂತುಹಾಕಿ ಬಿಡ್ತೇನಿ' ಅಂತ ಮಾತ ಮಾತಿಗೂ ಹೇಳಿ ಎರಡು ವರ್ಷದ ಹಿಂದ ಹಂಗ ನಡಕೊಂಡಿದ್ದೂ ಇತ್ತು. ಇಂವಾ ಊರ ತುಂಬಾ ಕಟಗೊಂಡಿರೋ ಗ್ವಾಡಿ ಕೆಡವಬೇಕು ಅಂತ ಅದೆಟ್ಟೊ ಸುಬ್ಯಾಗೋಳು ಬಂದರು, ಹೇಳಹೆಸರಿಲ್ಲದಂಗ ಹೋದರು. ಉಳದವರದು ಬಿಡ್ರಿ, ಬರೀ ಒಂದೇ ಒಂದು ತಿರಗಿ ಮಾತಾಡಿದ್ದಲು ಅಂತ ಹೊಟ್ಲಿ ಇರೋ ಹೆಂಡತೀನ್ನ ಝಾಡ್ಸಿ ಬಿದ್ದು, ಕೂಸ ಕಳಕೊಂಡ ಮ್ಯಾಲೂ ಅಂವಾ ಒಂಚೂರೂ ಕರಗಿರಲಿಲ್ಲ. ಅಂತಾ ಒಟ್ಟಿ ಮನುಷಾ ಈ ಸಿದ್ದಲಿಂಗಪ್ಪ.



2

ಹಾಳೂರಲ್ಲಿ ಇವತ್ತಿಗೂ ಗಪ್ ಚುಪ್ ಆಗಿ ಜಮೀನ್ದಾರಿಕೆ ನಡಸಕೊಂಡು ಬಂದ ಸಿದ್ದಲಿಂಗಪ್ಪ ಅಡದುಡ್ಡಿಗೆ ಬಡವರ ಜಮೀನ ಹಡಪಿದ್ದು, ಇಡೀ ಊರಿಗೂರೇ ಗೊತ್ತೈತಿ. ಆದ್ರೂ ಯಾರೂ ತುಟಿ ಪಿಟ್ ಅನ್ನೂವಂಗಿಲ್ಲ. ಸಮಗಾರ ಧರೆಪ್ಪಗ ವೈದೇ ಮಾಡಿ, ಮೂರು ತಿಂಗಳದೊಳಗ ಸಾಲಾ, ಬಡ್ಡಿ ಕಟ್ಟಲಿಲ್ಲ ಅಂದ್ರ, ಅವನ ಮೂರು ಎಕರೆ ಮಡ್ಡಿ ಜಮೀನ ಅಕಾಡಿದಕಾಡೆ ಹಾರಿ ಹೊಡಿಯೂದು ಅನ್ನೂವಂಗ ಬರಸಕೊಂಡು, ಜೋರಾವರಿ ಮಾಡಿ ಹೆಬ್ಬಟ್ಟು ಒತ್ತಿಸಿಕೊಂಡಿದ್ದ. ಏನ್ನೇನ ಕಟಿಬಿಟಿ ಮಾಡಿ ಧರೆಪ್ಪ ಮಗಳ ಮದುವಿ ಮಾಡದ. ಅಕಿ ಅಕಾಡಿ ಗಂಡನ ಮನಿಗಿ ನಡೀಲಾಕ ಹೋಗಿದ್ದೇ ಇಕಾಡಿ ಧರೆಪ್ಪ ಮೆಣಸಿನ ಗಿಡಕ್ಕ ಹೊಡಿಯೋ ಎಣ್ಣೀ ಕುಡದು ಕಲಾಸ್ ಆಗಿದ್ದ. ಎಲ್ಲಾ ಸಿದ್ದಲಿಂಗಪ್ಪನ ಲೆಕ್ಕದಂಗೇ ಆಗಿತ್ತು. ಕಾಟಕರು, ಕಬ್ಬಲಿಗೇರು ಇವನ್ನ ಕಂಡ್ರ ಸಾಕು ಒಳಗೊಳಗ ಒಂದ ಸವನ ಕೊತಕೊತ ಅಂತ ಕುದಿತಿದ್ದರು. ಆದರ ಏನು ಮಾಡೂದು..? ಆ ಸಿಟ್ಟ ಒಮ್ಮೂ ದವಡೀ ಬಿಟ್ಟು ಬಯಲಾಗಲೇ ಇಲ್ಲ.

ಬಯಲುಸೀಮೆ ದಂಡೀಯೊಳಗ ಇರೋ ಈ ಹಾಳೂರು ಹೆಸರಿಗಿ ತಕ್ಕಂಗ ಹಾಳೇ ಆದಂಗಿತ್ತು. ಇಡೀ ಊರಿಗೂರೇ ಎಣಸಿದರೂ ಎರಡು ನೂರು ಮನಿ ಇರಲಿಲ್ಲ, ಆದರ ಮನಿಗೊಂದು ಲಿಗಾಡ ಮಾತ್ರ ಇದ್ದೇ ಇದ್ದು. ಊರ ತುಂಬಾ ಗ್ವಾಡಿ. ಇಡೀ ಊರು ಎಂಟತ್ತು ಹೋಳಾಗಿ ಅಡ್ಡಾದಿಡ್ಡಿ ಸೀಳದಂಗಿತ್ತು. ಮ್ಯಾಲಿಂದ ಮಾತ್ರ ನಿಚ್ಚಳ ಆಗಿ ಕಾಣೂದು ಎರಡೇ.. ಒಂದು ಮ್ಯಾಲಿನಕೇರಿ, ಇನ್ನೊಂದು ಕೆಳಗಿನಕೇರಿ. ಈ ಎರಡೂ ಕೇರಿಗಳೊಳಗ ಮತ್ತ ಹತ್ತಾರು ಗಟ್ಟೂಳಾದ ಗ್ವಾಡಿಗೋಳು. ಹಂಗೇ ಎದ್ದುಬಿಡತಿದ್ವು, ಜೀವ ಊರುಳಿದರೂ ಗ್ವಾಡಿ ಉರಳುವಂಗಿಲ್ಲ. ಅಂಥಾ ದಿಪ್ಪನ ಗ್ವಾಡಿ ಅವು. ಮ್ಯಾಲಿನಕೇರಿ ತುಂಬಾ ಸಿದ್ದಲಿಂಗಪ್ಪನಂಥವರೇ ತುಂಬಿದ್ದರು. ಮಾತೆತ್ತದರ ಸಾಕು ಜಾತಿ, ಧರ್ಮ, ಪದ್ಧತಿ ಬಿಡಲಾಕ ಆಗತೈತಿ ಅನೂ..? ಅನ್ನೋ ಮಾತೇ

With Best Compliments From

BANGALORE TURF CLUB LTD,

BANGALORE

POST BOX NO.5038
52, RACE COURSE ROAD, BANGALORE-560001

TEL: OFF: 22262391/2/3/5
Secretary : 22261379 Fax: 91-80-22206372
Email: secbtc@yahoo.com
91-80-22256995



ಕುಟುಂಬ

ವಿತೆ:
ಅಕ್ಷರಗಳ ಒಂದು
ಸುಂದರ ಕುಟುಂಬ
ಹೊಂದಿಕೊಂಡಿದ್ದರೆ ಮೆರಗು
ಹೊಡಿಕೊಂಡಿದ್ದರೆ ಸೊಬಗು
ಇಲ್ಲವಾದರೆ ಕೊರಗು

ಚರಗನಹಳ್ಳಿ ಶಿವಶಂಕರ್



ಳತಿದ್ದು. ಮ್ಯಾಲಿನಕೇರಿ ಅನ್ನೂದು ಮೆಲ್ಜಾತಿ ಮಂದಿ ಇರೋ ಗ್ವಾಡಿ. ಹಂಗೇ ತುಸು ಮುಂದ ಹೋದರ ಸವುಳ ಬಾವಿ ಬಾಜೂ ಕುರುಬರ ಕೇರಿ, ಲಕ್ಕ್ಮೀ ಗುಡಿ ಹಿಂದಿನ ಬಾಜೂ ಒಂದ್ಯೆದು ಉಪ್ಪಾರ ಮನಿ. ಒಂದತ್ತು ಹೆಜ್ಜಿ ಮುಂದ ಹೋದರ ಮುಸುಲರ ಣಿ. ಸಾಲೀ ಮುಂದಿನ ರಸ್ತೆ ಆಚಿ ಬಾಜೂ ತುಸು ಕೆಳಗ ಹೋದರ ಕೆಳಗಿನ ಕೇರಿ. ಣಾ ಹೂಳೊ ಜಾಗಕ್ಕೇ ಬೆನ್ನ ಕೊಟ್ಟು ಬೆಳದಿರೋ ಈ ಕೇರಿ, ನೂರಾರು ರ್ಷಗಳಿಂದ ಹೆಂಗಿತ್ತೋ ಥೇಟ್ ಹಂಗೇ ಇತ್ತು.

ಸಿದ್ದಲಿಂಗಪ್ಪನ ಅಪ್ಪ ಮಲ್ಲೇಶಪ್ಪ ಊರ ಬೆಳೀಲಾರದಂಗ, ಈ ಕೇರಿ ಉದ್ದಾರ ಗಲಾರದಂಗ ನೋಡಕೊಳಾಕ ಏನೇನೋ ಬೇಕೋ ಅದೆಲ್ಲಾ ಬರೊಬ್ಬರಿ ಂದೋಬಸ್ತ ಮಾಡಿಟ್ಟಿದ್ದ. ದಿನ್ನಾ ಹೊತ್ತ ಹೊಂಟರ ಊರ ಮಂದಿ ಇವನ ಮನಿ ಮುಂದ ಕೈಕಟಕೊಂಡು ನಿಂತು 'ಸಾವುಕಾರ' ಅಂತ ಕಾಯಬೇಕು. ಬಾರೀಕಾಲ ದರಾಗೇ ಸುಖ ಕಂಡು ಕಣ್ಣು ಮುಚ್ಚದಂವ ಮಲ್ಲೇಶಪ್ಪ. ಅವನ ಹೊಟ್ಟೀಲೆ ಇಬ್ಬರೇ ಕ್ಕಳು ಒಂದು ಹೆಣ್ಣು, ಇನ್ನೊಂದು ಗಂಡು. ಈ ಗಂಡೇ ಸಿದ್ದಲಿಂಗಪ್ಪ. ಇವನ ಡ್ಡೀಗಿ ಮೂರು ಮಂದಿ ಮಕ್ಕಳು, ಎರಡು ಹೆಣ್ಣು ಒಂದು ಗಂಡು. ಮಗ ಹಾದೇವಪ್ಪ ಅಪ್ಪ ನೆಟ್ಟ ಆಲದ ಮರದ ನೆರಳಾಗೇ ಸುಖಾ ಕಾಣೊ ಜೀವ. ಥೇಟ್ ವರಪ್ಪನಂಗೇ ಅಂತ ಅನಿಸಿಕೊಳ್ಳೂದೇ ಅಂವಗ ಬಾಳ ಉಮೇದು ಕೊಡತಿತ್ತು. ಳೂರಾಗ ಬಾಳ ಮಂದಿ ಇಂವಾ ಅವರಪ್ಪನ್ನೇ ಮೀರಸ್ತಾನ ಅಂತ ಮಾತಾಡೂದು ಳಿ, ಎಲದರಲ್ಲೂ ಅಪ್ಪನಿಗಿಂತಾ ಒಂದು ಗೇಣ ಹೆಚ್ಚೇ ಅನ್ನೂವಂಗ ನಡಕೋತಿದ್ದ. ಡ್ತಿ ಶಿವನಿಂಗವ್ವಳ ಮಾತು ಏನೂ ನಡೀತಿರಲಿಲ್ಲ. ಹಿಂಗಾಗಿ ಊರ ಜನಾ 'ಪಾಪ..! ವಕಾರತಿ, ಬಾಯಿ ಸತ್ತ ಹೆಣಮಗಳು' ಅಂತ ಲೇಬಲ್ ಅಂಟಿಸಿ ಬಿಟ್ಟಿದರು.

ಇಡೀ ಊರಿಗೂರೇ ವಜ್ಜಿ ಆಗಿ, ಸಿದ್ದಲಿಂಗಪ್ಪ ಪಂಚಾಯತಿ ಇಲೆಕ್ಷನ್ ನಿಲ್ಲತಾನ ನ್ನೂದು ಆಜೂ ಬಾಜೂ ಊರವರಿಗೂ ಒಂದು ಗಮ್ಮತ್ತಾಗಿತ್ತು. ಬಾಳ ಮಂದಿ ಅವನ ಹಿನಿ ಊರಾಗ ಚುಲೋ ಇಲ್ಲ ಅದಕ್ಕ ಟಿಕೆಟ್ ಕೊಡಬ್ಯಾಡ್ರಿ ಬಾಳ ಖೋಡಿ ಅದ. ತ ಹೇಳದ ಮ್ಯಾಲೂ ಅಂವಗೇ ಟಿಕೆಟ್ ಸಿಕ್ಕಿತ್ತು. ತನ್ನ ಜಾತಿ ವೋಟ್ ಅಂತೂ ಗ ಬಿದ್ದೇ ಬೀಳತಾವ ಅನ್ನೂದು ಅಂವಗ ನೂರಕ್ಕ, ನೂರಾ ಒಂದಿತ್ತು. ಇಡೀ ರಾಗ ಸಿದ್ದಲಿಂಗಪ್ಪನ ವಿರುದ್ದ ಯಾರೂ ನಿಲ್ಲೂದಿಲ್ಲ ಅನ್ನೂದು ಗೊತ್ತಾಗಿ ಇನ್ನೇನು ರೋಧವಾಗಿ ಆಯ್ಕೆ ಆಗ್ತಾನ ಅಂತ ಗೊತ್ತಾಗಿದ್ದೇ, ಬಾಜೂ ಊರ ಭೀಮಶ್ಯಾ ಖುಬರ ಲಕ್ಕಣ್ಣಗ ಇಲೆಕ್ಷನಕ್ಕ ನಿಲ್ಲಿಸಿ ಬಿಟ್ಟ, ಈಗ ಸಿದ್ದಲಿಂಗಪ್ಪಗ ತುಸು ಬಿರಿ ಬಂತು. ಾಕಂದರ ಕೆಳಗಿನ ಕೇರಿ ವೋಟೆಲ್ಲಾ ಅಂವಗೇ ಹೋಗ್ತಾವ. ಹಂಗೇನಾರೆ ಆದರ ನೇ ಆರಿಸಿ ಬರೂದು ಖಾತ್ರಿ ಅಂತ ಗೊತ್ತಾಗಿ, ತೋಟದ ಮನಿಯೊಳಗ ಸಂಜಿ ಂದ ತನ್ನ ಜಾತಿ ಹಿರೇರ ಜೋಡಿ ಗಪ್ ಚುಪ್ ಆಗಿ ಒಂದೆರಡು ಬೈಟಕ್ ಡದ.

ಲಕ್ಕಣ್ಣ ಗ ತನ್ನ ಎದುರು ನಿಲ್ಲೂವಂಗ ಮಾಡದವರು ಯಾರು..? ಅನ್ನೂದು ವಗ ಗೊತ್ತಿತ್ತು. ಅದು ಬದಾಮಿ ಅಮವಾಶ್ಯೆ. ಇಡೀ ಹಾಳೂರು ಗವ್..! ಅನ್ನೋ ಸ್ನ ಹೊದಕೊಂಡು, ಅದನ್ನೇ ಹಾಸಕೊಂಡು ಸಂಪಾಗಿ ಮಲಗಿತ್ತು. ಇದ್ದಕ್ಕಿದ್ದಂಗ ನಕೇರಿಯೊಳಗ ನಾಯಿಗೋಳು ಒಂದೇ ಸವನ ಬೌ..ಬೌ.. ಅಂತ ಶೃತಿ ಹಿಡದಂಗ ಗಳಾಕತ್ತು. ಶೆಕ್ಕಿಗಟ್ಟಲೆ ಮಿಂಚು ಹುಳ ಹಾರಾಡುವಂಗ ಕಾಣತು, ತುಸು ಹೊತ್ತಿನ ಲ ಕಿಡಿ ಎದ್ದಂಗ ಕಂಡತು, ಕಿಡಿ ಇದ್ದದ್ದು ಬೆಂಕಿ ಆಗಿ, ಬೆಂಕಿ ಇದ್ದಿದ್ದು ನಂಥಾ ದುಳ್ಳುರಿಯಾಗಿ ಇಡೀ ಕೆಳಗಿನ ಕೇರಿನ್ನ ತನ್ನ ಅಡಾಲಕನ ಕೆನ್ನಾಲಿಗೆಯಿಂದ ಒತಾಟಿಂದೇ ನಿಗಟದಂಗ ಮಾಡತು. ರಾತ್ರೋರಾತ್ರಿ ಜನ ಮಕ್ಕಳು-ಮರಿನ್ನ ಕಟಗೊಂಡು ಹುಯ್ಯಂತ ಅಳಕೊಂತ.. ಕರಕೊಂತ ಸೀದಾ ಸಿದ್ದಲಿಂಗಪ್ಪನ ಮನಿ ಅಂಗಳಕ್ಕ ಬಂದರು. ಇದೆಲ್ಲಾ ಹಿಂಗೇ ಆಗತ್ಯೆತಿ... ಹಿಂಗೇ ಆಗಬೇಕು ಅನೂದು ಅವನ ಆಸ್ಯಾ ಆಗಿತ್ತು. ಅದು ಹಂಗೇ ಆಯ್ತು. ತಲಿ ಮ್ಯಾಲ ಸ್ಕಾರ್ಫ್ ಹಾಕೊಂಡು, ದಡಬಡಿಸಿ ಬಂದಂಗ ಮಾಡಿ, ಕ್ಯಾಕರಿಸಿ ಕೆಮ್ಮದಂಗ ಮಾಡಿ ಮಾತಿಗಿ ನಿಂತ.

'ಇದು ಯಾರೋ ಕೊಳಕು ಬಡ್ಡಿಮಕ್ಕಳ ಕೆಲಸ. ಯಾರ ಮುಕಳಿ ಗಂಟ ಯಾವಾಗ ಒಡೀಬೇಕು ಅಂತ ನನಗೂ ಗೊತ್ತೈತಿ. ಇರಲಿ ನೀವೇನೂ ತಲಿ ಕೆಡಸ್ಕೋಬ್ಯಾಡ್ರಿ, ಎಟ್ಟೇ ಆಗಲಿ ನೀವೂ ಇದೇ ಊರವರು, ಆಪತ್ತು ಅನುವುಗಳಲ್ಲಿ ಒಬ್ಬರಿಗೊಬ್ಬರು ಬೇಕಾಗತ್ಯೆತಿ.. ನಾಳಿನೇ ನಿಮಗೆಲ್ಲಾ ಗುಡಸಲಾ ಕಟ್ಟಿಸಿಕೊಡೊ ಜವಾಬ್ದಾರಿ ನಂದು. ಆದರ ನಿಮ್ಮದೇನು ವೋಟ್ ಐತಿ, ಅದು ನನಗೇ ಕೊಡಬೇಕು.' ಅಂತ ಹೇಳೂದರೊಳಗೇ ಅವರೆಲ್ಲಾ 'ಆಯ್ತರೀ ಸಾವುಕಾರ ಅಟ್ಟು ಮಾಡಿ ಪುಣ್ಯಾ ಕಟಗೊಳರಿ ಯಪಾ' ಅಂದರು. ' ನಾ ಎಂಥಾ ಅಡಮುಟ್ಟ ಇದೀನಿ ಅಂತ ನಿಮಗೂ ಗೊತ್ತೈತಿ, ಜರ್ಕರತ್ ನೀವೇನಾರೇ ಗಲತ್ತಿಪಲಾ ಮಾಡದಿರಿ.. ಈ ಊರೇ ಬಿಡಬೇಕಾಗತ್ಯೆತಿ. ಈಗ ನೀವೆಲ್ಲಾ ನಮ್ಮ ದನದ ಕೊಟಗ್ಯಾಗ ಮಲಗರಿ. ಕರಕೊಂಡು ಹೋಗೋ' ಅಂತ ತುಳಜ್ಯಾಗ ಹೇಳಿ ಒಳಗ ನಡದ.

ಮರುದಿನ ಹೊತ್ತ ಹೊಂಟಿದ್ದೇ ತಾಬಡತೋಬಡ ಸುಟ್ಟ ಜಾಗದಾಗೇ ಮತ್ತ ಹೊಸ ಗುಡಸಲು ಎದ್ದು, ಸಾವುಕಾರನ ಈ ಹಿಕಮತ್ತಿನ ಮುಂದ ತಾ ಸೋಲೂದು ಗ್ಯಾರಂಟಿ, ಸುಮ್ಮೇ ಯಾಕ ಅವನ ಜೋಡಿ ಗುದಮುರಗಿ ಅಂತ ಲಕ್ಕಣ್ಣ ಕಣದಿಂದ ಹಿಂದ ಸರಕೊಂಡು ಬಿಟ್ಟ, ಸಿದ್ದಲಿಂಗಪ್ಪ ಅವಿರೋಧವಾಗಿ ಆರಿಸಿ ಬಂದು ಪಂಚಾಯತಿಯ ಅಧ್ಯಕ್ಷನೂ ಆದ.

3

ಸಿದ್ದಲಿಂಗಪ್ಪ ರಾಜಕೀಯಕ್ಕ ಬರಬಾರದ ಬಂದು, ಪಂಚಾಯತಿ ಅಧ್ಯಕ್ಷ ಆಗಿಂದ ಇಡೀ ಹಾಳೂರು ಹದ್ದಿನ ಕೈಗಿ ಒಪ್ಪಿಸದಂಗ ಆಗಿತ್ತು. ಮಾತೆತ್ತಿದರ ಜಾತಿ, ಧರ್ಮ ಅನ್ನೋ ಇವನಿಗೆ ಊರ ಬೆಳಿತ್ಯೆತಿ ಅಂದ್ರ ಸಾಕು ಇವನ ಮೈ ಕಿಚ್ಚಾಗತಿತ್ತು. 'ಈಗೇನಾಗ್ಯೆತಿ ಈ ಊರಿಗೆ..? ಈಗ ಬೆಳಿದಿದ್ದೇ ಸಾಕು ಅಂತಿದ್ದ.' ಹಾಳೂರಿಗೆ ಅಂತ ಸರಕಾರ ಹೈಸ್ಕೂಲ್ ಮಂಜೂರು ಮಾಡದರ 'ಇಲ್ಲೇ ಬಾಜೂ ಊರಾಗ ಐತೆಲ್ಲಾ? ಬ್ಯಾರೆ ಕಡಿ ಕೊಡ್ರಿ' ಅಂತ ಅದನ್ನ ಮುಂದಿನೂರಿಗೆ ಅಟ್ಟಿದ್ದ.

ಥೇಟ್ ಅವರಪ್ಪನಂಗೆ ಬದುಕಬೇಕು ಅನ್ನೋ ಸಿದ್ದಲಿಂಗಪ್ಪನ ಇರಾದೆ ಹಾಳೂರಾಗ ಪಕ್ಕಾ ಕೈಗೂಡದಂಗ ಇತ್ತು. ಮಹಾಜಾತಿವಾದಿಯಾಗಿದ್ದ ಇವನ ಮನಿಗಿ ಯಾರಾದರೂ ಕೆಳಗಿನ ಕೆರಿಯವರು ಬಂದ್ರ ಅಂಗಳದಾಗ ನಾಯಿ ಕಟ್ಟೊ ಜಾಗದಾಗ ಕೂಡ್ರಿಸಿ, ಹೆಂಡತಿ ಕಡೀಂದ ಎತ್ತರಿಸಿ ಜರ್ಮನ್ ತಂಬಗಿಯೊಳಗ ನೀರ ಹಾಕಸತಿದ್ದ. ಹಾಳೂರಾಗ ಇವಂದೇ ಒಂದು ಸರಕಾರ, ಇವಂದೇ ಒಂದು ಆಡಳಿತ ಅನ್ನೂವಂಗ ಇತ್ತು. ಒಂದ್ಸಾರಿ ಅಪ್ಪಿ ತಪ್ಪಿ ದೋಸ್ತರ ಜೋಡಿ ಲಕ್ಷ್ಮೀ ಗುಡಿಯೊಳಗ ಸಮಗಾರ ಕೆಂಚಪ್ಪನ ಮಗ ಎಂಟ್ರಿ ಹೊಡೆದದ್ದಕ. ಚಾವಡಿಯೊಳಗ ಒಂದು ದೊಡ್ಡ ಸಭಾ ಮಾಡಿ, ಆ ಹುಡುಗನ ಅವ್ವ-ಅಪ್ಪನ ಕಡಿಂದ ಗಲ್ಲ ಗಲ್ಲ ಬಡ್ಕೊಂಡು ಊರ ಮಂದಿ ಮುಂದ ತೋಬಾ ತೋಬಾ ಅನಿಸಿದ್ದೈತಿ. ಊರ ಲೀಡರ್ ಆಗಿ, ತನ್ನಂದಲೇ ಜಾತಿ ,ಧರ್ಮ, ಸಂಪ್ರದಾಯ ಊಳಿಯೂದ್ಯೆತಿ ಅನ್ನೂವಂಗ ಮಾಡತಿದ್ದ. ಅಂತರ ಜಾತಿ ಮಾದುವೆಯಾದ ಒಂದು ಜೋಡಿನ್ನ ಊರ ಬಿಟ್ಟೇ ಓಡಿಸಿದ ಕೀರ್ತಿ ಇವಂದು.

ಕೆಳಜಾತಿ ಜನಾ ಯಾರೂ ಬೆಳೀಬಾರದು ಅನ್ನೋ ಥರಾ ಆಡೊ ಇವನ ಆಟಾ ಕಂಡು ಕೆಳಗಿನಕೇರಿಯ ಕೆಲವರು ತಮ್ಮ ಮಕ್ಕಳು-ಮರಿನ್ನಾ ತಮ್ಮ ತಮ್ಮ ಸಂಬಂಧಿಗಳ ಮನ್ಯಾಗ ಇಟ್ಟು ಓದಸತಿದ್ದಿದ್ದೂ ಇತ್ತು. ಆ ಕೇರಿಯವರು ಏನು ಮಾಡದರೂ ಇಂವಗ ಸೇರಕಿ ಆಗ್ತಿರಲಿಲ್ಲ. ಡೊಹರ ಚಂದ್ರಾಮನ ಬೀಗರು ಅವನ ಹೆಂಡತಿಗಿ ಒಂದು ಆಕಳಾ ದಾನಾ ಕೊಟ್ಟರು ಅಂತ ಅಂವಾ ರಾತ್ರೋ ರಾತ್ರಿ ಹೊಡಕೊಂಡು ಬಂದು, ಗುಡಸಲದೊಳಗ ಕಟಗೊಂಡ ಸುದ್ದಿ ಅದು ಹೆಂಗೋ ಲೀಕ್ ಆಗಿ, ಸಿದ್ದಲಿಂಗಪ್ಪ ಅವನ್ನ ಆಕಳ ಸಮೇತ ಪಂಚಾಯತಿ ಕಟ್ಟಿಗಿ ಕರಸಿ, 'ನಿನ್ನ ಬೀಗರು ಆಕಳಾ ದಾನ ಕೊಡುವಷ್ಟು ದೊಡ್ಡವರಾದರನೂ..? ಅವರು ಕೊಟ್ರು ನೀನು ತಂದೆ. ದಡ್ಡ ಬೋಳಿ ಮಗನ್ನ ತಗೊಂಡು ಬಂದು. ಈ ಊರಲ್ಲಿ ಹಾರವರು ಅದಾರ, ಆಕಳು ದಾನ



With Best Compliments From

SAGAR A/C RESTAURANT

NO.1846/A,
Sagar Video Building
Dr. Rajkumar Road
Bangalore-560010
ph.23325917

ಾಡೋದು ಅವರಿಗಿ ನಿನಗಲ್ಲ.' ಅಂದಾಗ ಚಂದ್ರಾಮ ಕೈ ಕೈ ಸವರ್ಕೋಂತ 'ತಪ್ಪು ಯ್ತರಿ ಸಾವುಕಾರ, ಹೋಗಿ ತಿರುಗಿ ಕೊಟ್ಟು ಬರ್ತೀನ್ರಿ' ಅಂದ.

ಇಡೀ ಹಾಳೂರಲ್ಲಿ ಕೆಳಗಿನ ಕೇರಿಯವರು ಯಾರೂ ಆಕಳಾ ಸಾಕುವಂಗಿಲ್ಲ, ಹೈನಾ ಾಡೂವಂಗಿಲ್ಲ. ಇದ್ಯಾವ ನ್ಯಾಯ..? ಅಂತ ಕೇಳೇ ಬಿಡ್ತೀನಿ ಅಂತ ಹೋಗಿದ್ದ ಿಮುನಪ್ಪ ತಿರುಗಿ ಬರಲೇ ಇಲ್ಲ. ಈ ಸಿದ್ದಲಿಂಗಪ್ಪ ಅನ್ನೋ ಹದ್ದಿನ ಕೈಯಾಗ ಸಿಕ್ಕು ಾಳೂರು ಹೆಸರಿಗೆ ತಕ್ಕಂಗ ದಿನದಿಂದ ದಿನಕ್ಕ ಹಾಳಾಗಲಿಕತ್ತಿತ್ತು.

4

ಅಕಿ ಮ್ಯಾಲ ಅದು ಯಾವ ಭೋಳಿಮಗನ ಕಣ್ಣ ಬಿತ್ತೋ ಗೊತ್ತಿಲ್ಲ. ಆ ಹುಡುಗಿ ಡೀ ಹಾಳೂರಿಗೇ ಬ್ಯಾಡ ಆದಳು. ಅಕಿ ಮಾಡಿದ್ದಾದರೂ ಏನು..? ಆ ಹುಡುಗಿ ಳಗಿನ ಕೇರಿ ಅಂಬೋಜಿ ಮಗಳು ಸತ್ತೆವ್ವ, ಸುತ್ತ ಮುತ್ತ ನಾಕು ಹಳ್ಳಿಯೊಳಗ ಅವರ ಾತಿಯೊಳಗ ಫಸ್ಟ್ ಕ್ಲಾಸ್ ಲ್ಲಿ ಮೆಟ್ರಿಕ್ ಮುಗಿಸಿರೋ ಮೊಟ್ಟ ಮೊದಲ ಹುಡುಗಿ ಅಕಿ. ಪ್ಪ ಅಂಬೋಜಿ ಈ ಹಾಳೂರು ಸಾವಾಸವೇ ಬ್ಯಾಡ ಅಂತ ಸೋದರಳ್ಯಾನ ಮನ್ಯಾಗ ಟ್ಟು ಅಕಿಗಿ ಓದಿಸಿದ್ದ. ಅಕಿನೂ ಚುಲೋ ಪಾಸಾಗಿದ್ದಲು. ಸರಕಾರದವರು ಅಕಿಗೆ ೈಕಲ್ ಕೊಟ್ಟಿದ್ದರು. ಮತ್ತೂ ಮುಂದ ಓದಸಲಿಕ್ಕ ಅಂಬೋಜಿಗೆ ಧೈರ್ಯ ಸಾಲಲಿಲ್ಲ. ಮ್ಮ ಮಗಳು ಕಣ್ಣ ಮುಂದ ಇರಲಿ ಅಂತ ಇದ್ದೂರಿಗಿ ಕರಕೊಂಡು ಬಂದ. ಅದು ದಿದ ಹುಡುಗಿ. ಸೈಕಲ್ ತಗೊಂಡು ಹಾಳೂರಲ್ಲಿ ಒಂದೇ ಒಂದು ಸುತ್ತು ಹಾಕಿದ್ದೇ ಪ್ಪ ಅಂಬೋಜಿ ಮಗಳಿಗಿ ತಾಕೀತ್ ಮಾಡಿದ್ದ. 'ನೀ ಏನೇ ಸೈಕಲ್ ಆಡೂದಿದ್ದರೂ ಲ್ಲೇ.. ಮ್ಯಾಲಿನಕೇರಿ ಮಟ ಹೋಗಬ್ಯಾಡ.' ಅಂದಿದ್ದ. ಆ ಹುಡುಗಿಗೆ ಅವರಪ್ಪನ ುಗುಡ ನೋಡಿ ಅದ್ಯಾಕ..? ಅಂತ ಕೇಳಿದ್ದರೂ ಉತ್ತರ ಸಿಕ್ಕಿರಲಿಲ್ಲ.

ಒಂದಿನ ಅಂಬೋಜಿ ಬಾವಿ ಕೆಲಸಕ್ಕ ಅಂತ ಹೋದಾಗ ಮಗಳು ಸತ್ತೆವ್ವ ಸೈಕಲ್ಲೇರಿ ಊಯ್.. ಅಂತ ಹೊಂಟೇ ಬಿಟ್ಟಳು. ಭರಾಟೆಯೊಳಗ ಅಪ್ಪ ಹೇಳಿದ್ದ ಲಕ್ಷ್ಮಣ ರೇಖೆ ಾಟಿದ್ದಳು. ಹುಯ್.. ಅಂತ ಓಣ್ಯಾನ ಮಕ್ಕಳು ಸೈಕಲ್ ಬೆನ್ನಿಗೆ ಬಿದ್ದರು. ಅವಳ ಲಗೋಳು ಮತ್ತೂ ನೇಟಾಗಿ ಪೈಡಲ್ ತುಳದ್ವು, ಪಂಚಾಯತಿ ಕಟ್ಟೆ ಸನ್ಯಾಕ ರತಿದ್ದಂಗ ಅಚಾನಕ್ ಆಗಿ ಆಕೆ ಬೆಲ್ ಬಾರಿಸದ್ಲು. ಅಲ್ಲೇ ಕುಳಿತಿದ್ದ ಸಿದ್ದಲಿಂಗಪ್ಪ ೂರಳಿ ನೋಡದ. ಚೋಟಿ ಹುಡಗಿ..! ತನ್ನ ನೋಡಿ ಬೆಲ್ ಬಾರ್ಸ್ತಾಳಾ..? ನ್ನೂವಂಗ ಆಯ್ತು ಎದುರಿರೋ ಮೆಂಬರ್ ಗುರುಪಾದಗ 'ಯಾರಕಿ..?' ಅಂತ ೇಳದ. ಅವನೂ ಹೇಳದ 'ಸಾವುಕಾರ ಆ ಹುಡುಗಿ ನಿಮ್ಮನ್ನು ನೋಡಿ ಬೆಲ್ ಾರಿಸಿರಲಿಕ್ಕಿಲ್ಲ.' ಅಂತ. 'ಅದೇನೇ ಇರಲಿ ಹುಡುಗಿಯಾಗಿ ಹಿಂಗ ಸೈಕಲ್ ೂಡಿಯೋದು ಸರಿಯನೂ..? ಅದೂ ಅಲ್ಲದೇ ಅಂಬೋಜಿ ಮಗಳು. ನಮ್ಮ ಲ್ಯರ್ಣೇರ ಮಕ್ಕಳೇ ಸೈಕಲ್ ಹೊಡಿಯುವಂಗಿಲ್ಲ. ನಾಳೆ ಅಂಬೋಜಿಗೆ ಕರಿಲಿಕ್ಕ ಳಸು' ಅಂದ.

ಅಂಬೋಜಿ ಚಾವಡಿ ಕಟ್ಟಿಯೊಳಗ ಕೈಕಟಗೊಂಡು ನಿಂತಿದ್ದ. ಅಲ್ಲೇ ಬಾಜೂದಾಗ ಗಳೂ ನಿಂತಿದ್ದಳು. ಸೈಕಲ್ ತಂದಿರಲಿಲ್ಲ. ಸೇರಿದ ಮಂದಿ ಗುಸು ಗುಸು ಅಂತಿದ್ದರು. ನಿನ್ನೆ ನಿನ್ನ ಮಗಳು, ಸೈಕಲ್ ಮ್ಯಾಲ್ ಹತ್ತೊಂಡು ಊರ ತುಂಬಾ ತಿರಗತಿದ್ದಲು. ದು ಅಟ್ಟೇ ಅಲ್ಲ, ನನ್ನ ನೋಡಿ ಮತ್ತ ಬೆಲ್ ಬ್ಯಾರೇ ಬಾರಸ್ತಾಳ. ಅಕಿನ್ನ ಹಿಂಗೇ ಟ್ಟರ ಇಡೀ ಊರ ಚುಕ್ಕೋಳನ್ನ ಹಾಳ ಮಾಡ್ತಾಳ. ಇರಲಿ. ಹಿಂಗಂತೂ ಆಗ್ಯೆತಿ ುಂದೇನು..?' ಅಂತ ಅಂಬೋಜಿ ಕಡಿ ಕೆಕ್ಕರಿಸಿ ನೋಡದ. ಅಂವಾ ಕೆಳಗ ನೆಲಾ ೋಡಕೊಂತೇ 'ಸಾವುಕಾರೇ ನೀವು ಹ್ಯಾಂಗ ಅಂತೀರಿ ಹಂಗ, ಎಟ್ಟೇ ಆಗಲಿ ನೀವು ಮಗ ಆಸರೆ ಕೊಟ್ಟವರು, ಈ ಊರ ನಾಯಕರು. ನೀವು ಹೆಂಗ ಹೆಳ್ತೀರೋ ಹಂಗ. ದೂ ಅಲ್ಲದೇ ಅಕಿಗಿ ನಾ ಹೇಳಿದ್ದೆ, ಗೊತ್ತಾಗಲಾರದೇ ಇಕಾಡಿ ಬಂದಾಳ. ಇನ್ನ ುಂದ ಹಂಗ ಆಗಲಾರ್ದಂಗ ನೋಡ್ಕೋತೀನ್ರಿ' ಅಂತ ಉಗುಳು ನುಂಗ್ತಾ ನಿಂತ.

ಆ ಹುಡುಗಿಗೆ ತಾ ಏನು ತಪ್ಪ ಮಾಡ್ದೆ ಅನ್ನೂದೇ ತಿಳಿಲಿಲ್ಲ. ಒಂದು ಸಾರಿ ವರಪ್ಪನ ಮುಖಾ, ಇನ್ನೊಂದು ಸಾರಿ ಆ ಸಾವುಕಾರ ಮುಖಾ ಮಿಕಿಮಿಕಿ ನೊಡತಾ ಂತಿದ್ಲು. ಸಿದ್ದಲಿಂಗಪ್ಪ ಮತ್ತದೇ ಗತ್ತಿನ್ಯಾಗ 'ನೋಡು, ನಿನ್ನ ಮುಂದ ಎರಡು ಹಾದಿ ಡ್ತೇನಿ. ಒಂದು ನಿನ್ನ ಮಗಳಿಗಿ ಮದುವಿ ಮಾಡು. ಇಲ್ಲಾ, ಅಕಿ ಈ ಊರಾಗ ರೋಮಟ ಸೈಕಲ್ ತುಳಿಲಾರದಂಗ ನೋಡ್ಕೊ ಯಾವುದು ಮಾಡ್ತಿ..?' ಅಂಬೋಜಿ ಗೂರಕ ಸಾವುಕಾರ ಕಾಲ ಬಳಿ ಕುತ್ಗೊಂಡು 'ಯಪ್ಪಾ.. ನೀವು ಹೇಳದಂಗೇ ಾಡ್ತೀನಿ.' 'ಆಯ್ತು ಹಂಗಿದ್ದರ, ಹ್ಯಾಂಗೂ ದೊಡ್ಡಕಿ ಆಗ್ಯಾಳ ಅಂತಿ, ಮದುವಿ ಮಾಡಿ ಡು, ರೊಕ್ಕ ಬೇಕಂದರ ಮನಿಕಡಿ ಬಾ' ಅಂದ.

'ನಾ ಇನ್ನೂ ಓದಬೇಕು' ಅಂದರೂ ಅಕಿನ ಮಾತ ಅಂಬೋಜಿ ಕೇಳಲಿಲ್ಲ. ಳಗಿನ ಸಂಬಂಧದೊಳಗೇ ಆ ಹುಡುಗಿ ಮದುವೆ ಆಯ್ತು. ಹುಡುಗ ಸಾಲೀ ಪೆವಟಣಿಗಿ ಅಲ್ಲ, ಸಾಲಿ ಇರೋ ಜಾಗಾ ಸೈತ ತುಳದಂವ ಅಲ್ಲ. ಅಂಬೋಜಿ ಸಾಹುಕಾರ ಸಿದ್ದಲಿಂಗಪ್ಪನ ಮನಿ ಅಂಗಳದಾಗ ಮಗಳು ಮತ್ತ ಅಳ್ಯಾನ ಜೋಡಿ, ನಾಯಿ ಕಟ್ಟೊ ಜಾಗದಾಗ ಕುತಗೊಂಡಿದ್ದ. ಸಾವುಕಾರಗ ಆತ ಮಾತ ಕೊಟ್ಟಂಗ ನಡಕೊಂಡೀನಿ ಅಂತ ಹೇಳದಂಗೂ ಆಯ್ತು, ಹಂಗೇ ಆಶೀರ್ವಾದ ತಗೊಂಡು ಹೋದಂಗೂ ಆಯ್ತು ಅಂತ ಬಂದಿದ್ದ. ಸಾವಕಾರ ಒಳಗ ದೇವರ ಪೂಜೆ ಮಾಡತಿದ್ದ. ಹೆಂಡತಿ ಶಿವನಿಂಗವ್ವ ಮದುವಿ ಆದ ಹುಡುಗಿ ಉಡಿಯೊಳಗ ಒಂದು ಬೊಗಸಿ ಅಕ್ಕಿ, ಒಂದು ಜಂಪರ್ ಪೀಸ್ ನೀರ ಹಾಕೂಥಂಗ ಎತ್ತರಿಸಿ ಹಾಕಿದ್ದಳು. ಹುಡುಗಿ ಕಣ್ಣಾಗಿನ ನೀರ ಹನಿ ಟಪ್..ಟಪ್.. ಅಂತ ಆ ಜಂಪರ್ ಪೀಸ್ ಮ್ಯಾಲ ಬಿದ್ದು, ಥೇಸಿ ಒಂದು ರೂಪಾಯಿಯಷ್ಟು ಅಗಲ ಆದ್ವು. ಆ ಎರಡೂ ಹನಗಳು ಅಕಿಗಿ ತನ್ನ ಸೈಕಲ್ ಗಾಲಿ ಥರಾ ಕಂಡ್ವು. ಅಷ್ಟರೊಳಗ ಸಿದ್ದಲಿಂಗಪ್ಪ ಹೊರಗ ಬಂದ. 'ಭೇಷ ಮಾಡದಿ ಲಗ್ನಾ ಮಾಡಿ'. ಅಂದದ್ದೇ ಸತ್ತೆವ್ವ ಮುಖಾ ಮ್ಯಾಲೆತ್ತಿ ನೋಡದಳು. ಅಕಿ ಕಣ್ಣ ಅನ್ನೂವು ಕೆಪಾಗ ಬೆಂಕಿ ಉಂಡಿ ಆದಂಗ ಆಗಿದ್ವು. ಶತಮಾನದ ಸಿಟ್ಟು ಅಕಿ ಕಣ್ಣು ಗುಡ್ಡೀಯೊಳಗ ಜ್ವಾಲಾಮುಖಿ ಹುತ್ತ ಕಟ್ಟದಂಗ ಇತ್ತು.

5

ಸತ್ತೆವ್ವ ಗಂಡನ ಮನಿಗಿ ನಡೀಲಾಕ ಹೋದದ್ದೇ ಅಕಿ ಸೈಕಲ್ ಈಗ ಅನಾಥಾಗಿ ಗುಡಿಸಲ ಮೂಲ್ಯಾಗ ನಿಂತಿತ್ತು. ಸೈಕಲ್ ಬೆಲ್‌ನ ನಾದ ಅದರ ಕುತಗಿ ಹಿಚಕದಂಗ ಕೇಳತಿತ್ತು. ಟ್ರೀಣ್.. ಟ್ರೀಣ್ ಅನ್ನೋ ಆ ನಾದ ಸತ್ತ ಸುದ್ದಿ ಬರೂದರಲ್ಲಿತ್ತು. ಅಂಬೋಜಿ ಮನ್ಯಾಗಿನ ಹಾಸಗಿ, ಹೊದಕಿ ನಡುವ ಅದರ ಶರೀರ ಕಳದುಹೋದಂಗಾಗಿತ್ತು. ಒಂದೇ ಒಂದು ಪೈಡಲ್ ಮಾತ್ರ ಮ್ಯಾಲ ಹಾಕಿದ ಕೌದಿ ಸರಿಸಿ, ಇಣುಕಿ ನೋಡತ್ತಿತ್ತು. ತನ್ನ ನಿರ್ಗತಿಕ ಬೆನ್ನ ತುಳಿಯೋ ಪಾದಗಳಿಗಾಗಿ ಹುಡಕಾಡತಿತ್ತು. ತಡಕಾಡತಿತ್ತು. ಸತ್ತೆವ್ವಳ ತಮ್ಮ ಕಾಲ್ರಾಯ ಆ ಸೈಕಲ್‌ನ ಹಿಂದಿನ ಗಾಲೀನ ಬರ್ಸ್ ಅಂತ ತಿರಗಿಸತಿದ್ದ. ಅಂವಾ ತಿರಗಸೋ ಗಜ್ಜೀಗಿ ಗಾಲಿಯೊಳಗಿನ ಒಂದೂ ಕಡ್ಡಿ ಕಾಣತಿರಲಿಲ್ಲ, ಬರೀ ಗಾಲಿ ಅಟ್ಟೇ ಕಾಣತಿತ್ತು. ಅದರ ಅವಾಜ್ ಈಗ ಗಡಸಾಗಿತ್ತು. ತಿರಗತಿತ್ತು.. ತಿರಗತಿತ್ತು.. ಒಂದೇ ಸವನೆ ತಿರಗೇ ತಿರಗತಿತ್ತು.

ಡಾ॥ ಎಸ್.ಬಿ.ಜೋಗುರ



ಧಾರವಾಡಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು. ಮೂರು ಅಂಕಣ ಬರಹಗಳು-ಮೂರು ಕಥಾಸಂಕಲನಗಳು-ಮೂವತ್ತು ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳು-ನೂರಕ್ಕಿಂತಲೂ ಹೆಚ್ಚು ಬಿಡಿ ಬರಹಗಳು ಪ್ರಕಟವಾಗಿವೆ. ಗ್ರಾಮೀಣ ಯುವಕರಲ್ಲಿ ಬದಲಾವಣೆಯನ್ನು ಕುರಿತು ಸಂಶೋಧನಾ ಪ್ರಬಂಧವನ್ನು ಮಂಡಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಾರೆ.



ಲೋಹಿಯಾ ಅವರು ತಮ್ಮನ್ನು ಮಹಾತ್ಮಾ ಗಾಂಧೀಜಿಯವರ 'ಕುಜಾತ ವಾರಸುದಾರ' ಎಂದು ಹೇಳಿಕೊಳ್ಳುತ್ತಾರೆ. ತಮಗೆ ಮಹಾತ್ಮಾ ಗಾಂಧೀಜಿಯವರ ಬಗ್ಗೆ 'ವಿಚಾರಾತೀತ ಭಕ್ತಿ' ಇದ್ದುದಾಗಿ ಹೇಳಿಕೊಳ್ಳುತ್ತಾರೆ. ಲೋಹಿಯಾ ಅನುಯಾಯಿಗಳು ಎರಡು ಸ್ತರಗಳಲ್ಲಿ ಲೋಹಿಯಾ-ಗಾಂಧೀ ಸಂಬಂಧಗಳನ್ನು ವಿವರಿಸುತ್ತಾರೆ, ಒಂದು ವೈಯಕ್ತಿಕ ಸ್ತರದಲ್ಲಿ, ಇನ್ನೊಂದು ಸೈದ್ಧಾಂತಿಕ ಸ್ತರದಲ್ಲಿ.

ಲೋಹಿಯಾ ಗಾಂಧಿ ಮತ್ತು ಗಾಂಧೀವಾದ

ಬಾಪು ಹೆದ್ದೂರಶೆಟ್ಟಿ

1920ರ ನಂತರ ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಮಹಾತ್ಮಾ.ಗಾಂಧಿ ಒಂದು ಕೇಂದ್ರ ಬಿಂದುವಾಗಿದ್ದರು. ಎಲ್ಲಾ ರಾಜಕೀಯ ಮುಖಂಡರು ಅವರೊಂದಿಗೆ ತಮ್ಮ ಸಂಬಂಧವನ್ನು ನಿರ್ವಚಿಸುವುದು ಅತ್ಯವಶ್ಯಕವಾಗಿತ್ತು. ಆದುದರಿಂದಲೇ ಸಮಾಜವಾದಿಗಳು ಕೂಡ ಮಹಾತ್ಮಾ ಗಾಂಧಿಯವರೊಂದಿಗೆ ತಮ್ಮ ಸಂಬಂಧಗಳನ್ನು ನಿರ್ವಚಿಸುತ್ತ ಬಂದರು. 1934ರಲ್ಲಿ ಅಶೋಕ ಮೆಹತಾ ಅವರು ಸಮಾಜವಾದ ಮತ್ತು ಗಾಂಧೀವಾದ ಎಂಬ ಲೇಖನವನ್ನು ಬರೆಯುವುದರಿಂದ ಮೊದಲು ಮಾಡಿ 1969ರಲ್ಲಿ ನಾನಾಸಾಹೇಬ ಗೋರೆಯವರ ವರೆಗೂ ಇದೇ ವಿಷಯದ ಮೇಲೆ ಸಮಾಜವಾದಿಗಳು ಲೇಖನಗಳನ್ನು ಬರೆದಿದ್ದಾರೆ. ರಾಮಮನೋಹರ ಲೋಹಿಯಾ ಅವರು ಕೂಡ 1952ರಲ್ಲಿ ಇದೇ ವಿಷಯದ ಬಗ್ಗೆ ಲೇಖನ ಬರೆದಿದ್ದಾರೆ. ನಂತರ 1960ರಲ್ಲಿ ಗಾಂಧೀಜಿಯವರ ಬಗ್ಗೆ ಇನ್ನೊಂದು ಲೇಖನವನ್ನು ಬರೆದಿದ್ದಾರೆ. ಲೋಹಿಯಾ ಅವರ ಮೊದಲ ಲೇಖನದ ತಲೆಬರಹ "ಗಾಂಧಿವಾದ ಹಾಗೂ ಸಮಾಜವಾದ" ಎಂದಿದ್ದರೆ, ಅಶೋಕ ಮೆಹತಾ ಬರೆದ ಮೊದಲ ಲೇಖನದ ತಲೆಬರಹ "ಸಮಾಜವಾದ ಮತ್ತು ಗಾಂಧಿವಾದ" ಎಂದಿದ್ದುದು ಆಕಸ್ಮಿಕವಾಗಿರದೇ ಅವರವರ ಆದ್ಯತೆಗಳ ದ್ಯೋತಕಗಳಾಗಿದ್ದವು ಎನಸುತ್ತದೆ. ಗಾಂಧಿ ಹಾಗೂ ಸಮಾಜವಾದ ಎನ್ನುವುದು ಇಂದಿಗೂ ಆಕರ್ಷಕ ವಿಷಯವಾಗಿದೆ.

1.2 ಲೋಹಿಯಾ ಅವರು ತಮ್ಮನ್ನು ಮಹಾತ್ಮಾ ಗಾಂಧೀಜಿಯವರ 'ಕುಜಾತ ವಾರಸುದಾರ' ಎಂದು ಹೇಳಿಕೊಳ್ಳುತ್ತಾರೆ. ತಮಗೆ ಮಹಾತ್ಮಾ ಗಾಂಧೀಜಿಯವರ ಬಗ್ಗೆ 'ವಿಚಾರಾತೀತ ಭಕ್ತಿ' ಇದ್ದುದಾಗಿ ಹೇಳಿಕೊಳ್ಳುತ್ತಾರೆ. ಲೋಹಿಯಾ ಅನುಯಾಯಿಗಳು ಎರಡು ಸ್ತರಗಳಲ್ಲಿ ಲೋಹಿಯಾ-ಗಾಂಧೀ ಸಂಬಂಧಗಳನ್ನು ವಿವರಿಸುತ್ತಾರೆ, ಒಂದು ವೈಯಕ್ತಿಕ ಸ್ತರದಲ್ಲಿ, ಇನ್ನೊಂದು ಸೈದ್ಧಾಂತಿಕ ಸ್ತರದಲ್ಲಿ.

ಲೋಹಿಯಾ ಅವರ ಅನುಯಾಯಿಗಳು ಲೋಹಿಯಾ ಅವರನ್ನು 'ಗಾಂಧಿವಾದಿ ಸಮಾಜವಾದಿ' ಎಂದು ರೆಯುತ್ತಾರೆ. ಭಾರತದಲ್ಲಿ ಕೋಮುವ್ವಾದಿ ಸಂಘಟನೇ ಂದೇ ಗುರುತಿಸಲ್ಪಡುವ ಭಾರತೀಯ ಜನತಾ ಪಕ್ಷ ೂಡ ತಾನು 'ಗಾಂಧೀ ಪ್ರಣೀತ ಸಮಾಜವಾದ'ವನ್ನು ಪ್ಪಿಕೊಂಡಿರುವುದಾಗಿ ಹೇಳಿತ್ತು ಎನ್ನುವುದನ್ನು ಇಲ್ಲಿ ನಪಿಸಿಕೊಳ್ಳಬಹುದು.

1.3 ಆದರೆ ಲೋಹಿಯಾ ಅನುಯಾಯಿಗಳು ೂೋಹಿಯಾ ಅವರನ್ನು ಹೊಗಳುವ ತಮ್ಮ ತವಕದಲ್ಲಿ ುಹಾತ್ಮಾ ಗಾಂಧೀಜಿಯವರನ್ನೂ ಅವಹೇಳನ ಾಡುತ್ತಾರೆ. 'ಕಳೆದ ನೂರಕ್ಕಿಂತ ಹೆಚ್ಚು ವರ್ಷಗಳಲ್ಲಿ ಾರತ ನೀಡಿದ ಒಬ್ಬನೇ ಒಬ್ಬ ಅತ್ಯಂತ ಒರಿಜಿನಲ್ ಂತಕ ಲೋಹಿಯಾ' ಎಂದು ಹೇಳುವ ಮೂಲಕ ೂೋಹಿಯಾ ಅವರನ್ನು ಮಹಾತ್ಮಾ ಗಾಂಧಿಗಿಂತ ರಿಜಿನಲ್ ಚಿಂತಕ ಎಂದೂ ಪ್ರತಿಪಾದಿಸುತ್ತಾರೆ. ೂೋಹಿಯಾ ಅವರ 'ಫಂಡಮೆಂಟಲ್ಸ್' ಆಫ್ ಎ ವರ್ಲ್ಡ್ ೈಂಡ್' ಎಂಬ ಪುಸ್ತಕದ 1985ರ ಆವೃತ್ತಿಗೆ ಬರೆದ ುನ್ನುಡಿಯಲ್ಲಿ ಲೋಹಿಯಾ ಅವರ ಇನ್ನೊಬ್ಬ ನುಯಾಯಿ ಕೆ.ಎಸ್.ಕಾರಂತ ಅವರು "ತಮ್ಮ ಚಾರಗಳ ಎದೆಗಾರಿಕೆ ಹಾಗೂ ತೀಕ್ಷ್ಣತೆಯಲ್ಲಿ ಹಾಗೂ ುವುಗಳ ಒರಿಜಿನಾಲಿಟಿಯಲ್ಲಿ ಲೋಹಿಯಾ ಅವರಿಗೆ, ರಿ ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿ ಸರಿಸಾಟಿ ಯಾರೂ ಇರಲಿಲ್ಲ." ಎಂದು ಹೇಳುತ್ತಾರೆ. ಪಾಪ ುಹಾತ್ಮಾ ಗಾಂಧಿ! ?



1.4 ಮಹಾತ್ಮಾ ಗಾಂಧೀಜಿಯವರ ಚಿಂತನೆಯನ್ನು ಂಕ್ಷಿಪ್ತವಾಗಿ ಐದು ಶಬ್ದಗಳಲ್ಲಿ ಹೇಳಬಹುದು : ಸತ್ಯ, ಿಂಸೆ, ಸತ್ಯಾಗ್ರಹ, ದಾರಿ ಮತ್ತು ಗುರಿಗಳ ಶುದ್ಧತೆ ುತ್ತು ಅಪರಿಗ್ರಹ. ಆದರೆ ಲೋಹಿಯಾ ಅವರಲ್ಲಿ ುಹಾತ್ಮಾ ಗಾಂಧೀಜಿಯವರ ಈ ಐದೂ ಆದರ್ಶಗಳ ರತೆ ಕಂಡು ಬರುತ್ತದಷ್ಟೇ ಅಲ್ಲ, ಅವುಗಳಿಗೆ ುರುದ್ಧವಾಗಿ ನಡೆದುಕೊಂಡದ್ದೂ ಕಂಡು ಬರುತ್ತದೆ. ಾಂಧೀಜಿಯವರ ಬದುಕಿನ ಅರ್ಥವನ್ನು ತಿಳಿಯಲು ವರ ಜೀವನ ಹಾಗೂ ಕಾರ್ಯಕ್ರಮಗಳಿಗೆ ೋಗಬೇಕೇ ಹೊರತು ಅವರ ಮಾತು ಹಾಗೂ ರವಣಿಗೆಗಳಿಗಲ್ಲ' ಎನ್ನುತ್ತಾರೆ ಲೋಹಿಯಾ. ಆದರೆ ಯಕ್ತಿಕ ಹಾಗೂ ಸೈದ್ಧಾಂತಿಕ, ಇವೆರಡೂ ಸ್ತರಗಳಲ್ಲೂ, ೀವನ ಹಾಗೂ ಕಾರ್ಯಕ್ರಮಗಳಲ್ಲೂ ಮತ್ತು ಮಾತು ುತ್ತು ಬರವಣಿಗೆಗಳಲ್ಲೂ ಲೋಹಿಯಾ, ಮಹಾತ್ಮಾ ಗಾಂಧಿಯವರಿಂದ ಬಹಳ ದೂರ ಇರುವಂತೆ ತೋರುತ್ತಾರೆ.

1.5 ವೈಯಕ್ತಿಕ ಸ್ತರದಲ್ಲಿ, ಮಹಾತ್ಮಾ ಗಾಂಧೀಜಿಯವರು ಸತ್ಯದ ಆರಾಧಕರಾಗಿದ್ದರು, ಲೋಹಿಯಾ ಸುಳ್ಳುಗಳನ್ನು ಪ್ರೋತ್ಸಾಹಿಸುತ್ತಿದ್ದರು. ಮಹಾತ್ಮಾ ಗಾಂಧೀಜಿಯವರು ಹಿಂಸೆಯನ್ನು ಒಂದು ರಾಜಕೀಯ ಸಾಧನವನ್ನಾಗಿ ಸಂಪೂರ್ಣವಾಗಿ ತ್ಯಜಿಸಿದ್ದರು, ಲೋಹಿಯಾ ಅವರು ಹಲವು ಸಂದರ್ಭಗಳಲ್ಲಿ ರಾಜಕೀಯವಾಗಿ ಹಿಂಸೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರಷ್ಟೇ ಅಲ್ಲ, ಅಂತರಾಷ್ಟ್ರೀಯ ಸ್ತರದಲ್ಲಿ ಹಿಂಸೆಗೆ ಪರ್ಯಾಯವಿಲ್ಲ ಎಂದು ಹೇಳುತ್ತಿದ್ದರು. ಮಹಾತ್ಮಾ ಗಾಂಧೀಜಿಯವರಿಗೆ ಸತಿಮಾರ್ಗವಾಗಿದ್ದರೆ, ಲೋಹಿಯಾ ಅವರಿಗೆ ಅದೊಂದು ತಂತ್ರವಾಗಿತ್ತು, ಸತ್ಯಾಗ್ರಹ ಮಾಡಿ ಜೈಲಿಗೆ ಹೋಗುವುದು ಮಹಾತ್ಮಾ ಗಾಂಧೀಜಿಯವರಿಗೆ ಒಂದು ಪವಿತ್ರ ಕರ್ತವ್ಯವಾಗಿದ್ದರೆ, ಲೋಹಿಯಾ ಅವರಿಗೆ ಜೈಲಿಗೆ ಹೋಗುವುದು ತಮ್ಮ ಧೈರ್ಯವನ್ನು ತೋರಿಸುವ ಸಾಧನವಾಗಿತ್ತು, ಒಂದು ಗೀಳಾಗಿತ್ತು. ಹಿಂಸೆಯನ್ನು ಒಪ್ಪಿಕೊಳ್ಳುವುದರ ಮೂಲಕ ಲೋಹಿಯಾ ಅವರು ಮಹಾತ್ಮಾ ಗಾಂಧೀಜಿಯವರು ಒತ್ತಾಯಿಸುತ್ತಿದ್ದ ದಾರಿ ಹಾಗೂ ಗುರಿಗಳೆರಡರ ಶುದ್ಧತೆಯ ಸಿದ್ಧಾಂತವನ್ನು ತಿರಸ್ಕರಿಸಿದ್ದರು. ತಮ್ಮ ಅಪರಿಗ್ರಹದ ಸಿದ್ಧಾಂತಕ್ಕೆ ಅನುಗುಣವಾಗಿ ಮಹಾತ್ಮಾ ಗಾಂಧೀಜಿಯವರು ಸರಳವಾದ ಜೀವನವನ್ನು ನಡೆಸಿದರು, ಬರಿ ಒಂದೇ ಪಂಚೆಯನ್ನು ತೊಡುತ್ತಿದ್ದರು, ರೈಲಿನಲ್ಲಿ ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಆದರೆ ಲೋಹಿಯಾ ಅವರು ವಿಮಾನಗಳಲ್ಲೂ ಪ್ರಯಾಣ ಮಾಡುತ್ತಿದ್ದರಲ್ಲದೇ ಹಲವು ಬಾರಿಯಾದರೂ ರೈಲಿನಲ್ಲಿ ವಾತಾನುಕೂಲಿತ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಮಹಾತ್ಮಾ ತಮ್ಮ ಎದುರಾಳಿಗಳ ಬಗ್ಗೆಯೂ ಸೌಜನ್ಯದಿಂದ ವರ್ತಿಸುತ್ತಿದ್ದರು, ಲೋಹಿಯಾ ತಮ್ಮ ಸಹೋದ್ಯೋಗಿಗಳ ಬಗ್ಗೆಯೂ ಒರಟಾಗಿ ವರ್ತಿಸುತ್ತಿದ್ದರು.

ಸತ್ಯದ ಬಗ್ಗೆ

2.1 ಮಹಾತ್ಮಾ ಗಾಂಧಿ ಸತ್ಯದ ಆರಾಧಕರಾಗಿದ್ದರು. 'ದೇವರೇ ಸತ್ಯ, ಸತ್ಯವೇ ದೇವರು' ಎಂದು ನಂಬಿದ್ದರು. ಅವರು ತಮ್ಮ ಜೀವನ ಚರಿತ್ರೆಯನ್ನು 'ನನ್ನ ಸತ್ಯಾನ್ವೇಷಣೆ' ಎಂದು ಕರೆದರು. ತನ್ನ ಬ್ರಹ್ಮಚರ್ಯವನ್ನು ಪರೀಕ್ಷಿಸಲು ತನ್ನ ಮುದಿ ವಯಸ್ಸಿನಲ್ಲಿ ಯುವತಿಯರೊಂದಿಗೆ ಬೆತ್ತಲೆ ಮಲಗುತ್ತಿದ್ದೆ ಎನ್ನುವುದನ್ನೂ ಮರೆಮಾಚಲಿಲ್ಲ. ಆದರೆ ಮಹಾತ್ಮಾ ಗಾಂಧಿಯವರು ಲೋಹಿಯಾ ಅವರನ್ನು ಪದೇ ಪದೇ ಡಾ. ಲೋಹಿಯಾ ಎಂದೇ ಸಂಬೋಧಿಸುತ್ತಿದ್ದರೂ, ತನಗೆ ಡಾಕ್ಟರ್ ಪದವಿಯನ್ನು ನೀಡಲಾಗಿಲ್ಲ ಎಂದು ಮಹತ್ಮಾ ಗಾಂಧಿಯವರಿಗೆ ಹೇಳುವ ಸೌಜನ್ಯವೂ ಲೋಹಿಯಾ ಅವರಿಗಿರಲಿಲ್ಲ. ಲೋಹಿಯಾ ಅವರಿಗೆ ಡಾಕ್ಟರ್ ಪದವಿಯನ್ನು ನೀಡಲಾಗಿರಲಿಲ್ಲ ಎನ್ನುವುದು ಈಗ, 2010ರ ಅಕ್ಟೋಬರ್ 2–8ರ ಎಕೊನೊಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಲೋಹಿಯಾ ಬಗೆಗೆ ಯೋಗೇಂದ್ರ ಯಾದವ ಅವರು ಸಂಪಾದಿಸಿದ ವಿಶೇಷ ವಿಭಾಗದಲ್ಲಿ ಜರ್ಮನಿಯ ಪಂಡಿತೆ ಜೋಕಿಮ್ ಆಸ್ಟರ್ಹೆಲ್ಡ ಪ್ರಕಟಿಸಿದ ಲೇಖನದಿಂದ, ಖಚಿತವಾಗಿ ರುಜುವಾತಾಗಿದೆ. ಲೋಹಿಯಾ ಅವರು ಬರೆದ ಪ್ರೌಢ ಪ್ರಬಂಧದ ಒಂದು ಪ್ರತಿಯೂ ಲಭ್ಯವಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಲೋಹಿಯಾ ಅವರು ಕೂಡ ತಮ್ಮ ಯಾವುದೇ ಲೇಖನದಲ್ಲಿ ಈ ಪ್ರೌಢ ಪ್ರಬಂಧದ ಬಗ್ಗೆ ಹೇಳುವುದೇ ಇಲ್ಲ.

2.2 ಒಂದು ಪದವಿಗೆ ಅರ್ಹನಾಗಿದ್ದರೂ ಆ ಪದವಿಯನ್ನು ನೀಡದೇ ಇರುವಾಗ ಅದನ್ನು ತನ್ನ ಹೆಸರಿನೊಂದಿಗೆ ಬಳಸುವುದು ಶೈಕ್ಷಣಿಕ ಅನೌಚಿತ್ಯವಾಗುತ್ತದೆ. ಪದವಿದಾನ ಸಮಾರಂಭದಲ್ಲಿ ವಿಶ್ವವಿದ್ಯಾಲಯವು ಪದವಿಯನ್ನು ನೀಡುವ ವರೆಗೆ ಪದವಿ ಪರೀಕ್ಷೆಯಲ್ಲಿ ಪಾಸಾಗಿದ್ದರೂ ಅವರನ್ನು ಪದವೀಧರರೆಂದು ಪರಿಗಣಿಸಲಾಗುವುದಿಲ್ಲ ಎನ್ನುವುದು ಶೈಕ್ಷಣಿಕ ಬದುಕಿನ ಒಂದು ಸಾಮಾನ್ಯ ಸಂಗತಿ. ಆದರೆ ಮಹಾತ್ಮಾ ಗಾಂಧೀಜಿಯವರಂತಹ ವ್ಯಕ್ತಿಯಿಂದ ಇಂತಹ ವಿಷಯವನ್ನು ಬಚ್ಚಿಡುವುದು. ಅಪ್ರಾಮಾಣಿಕತೆಯ ಲ್ಲದಿದ್ದರೂ, ಶೈಕ್ಷಣಿಕ ಅನೌಚಿತ್ಯವನ್ನು ಮೀರಿದ

With Best Compliments From

Amar Engineers

B-245, B-Type, 6th Main,
2nd Stage, Peenya Industrial Estate,
Bangalore - 560 058.

Phone : 080-28360326
Fax : 080-28366646
E-mail: bjagannathshetty@hotmail.com
amarengineers@india.com

ಸಂಗತಿಯಾಗುತ್ತದೆ. suppressio veri, suggestio falsi ಎನ್ನುವುದೊಂದು ಕಾನೂನಿನ ವರಸೆ. ಅದರ ಅರ್ಥ ಸತ್ಯವನ್ನು ಬಚ್ಚಿಡುವುದು ಸುಳ್ಳನ್ನು ಸೂಚಿಸಿದಂತೆ ಎಂದು. ತಮಗೆ ಡಾಕ್ಟರ್ ಪದವಿಯನ್ನು ನೀಡಲಾಗಿಲ್ಲ ಎನ್ನುವುದನ್ನು ಲೋಹಿಯಾ ಬಚ್ಚಿಟ್ಟಿದುದರ ಅರ್ಥ ತಮಗೆ ಡಾಕ್ಟರ್ ಪದವಿಯನ್ನು ನೀಡಲಾಗಿದೆ ಎಂದು ಅವರು ಸೂಚಿಸಿದ ಹಾಗಾಗುತ್ತದೆ. ಸಾಮಾನ್ಯ ಜನರಿಂದ ಇದನ್ನು ಲೋಹಿಯಾ ಅವರು ಬಚ್ಚಿಟ್ಟಿದ್ದರೂ ಅದನ್ನು ಅಷ್ಟೇನೂ ಮಹತ್ವದ್ದಲ್ಲದ ಸಂಗತಿ ಎಂದು ಪರಿಗಣಿಸಬಹುದಿತ್ತು. ಆದರೆ ಮಹಾತ್ಮಾ ಗಾಂಧೀಜಿಯವರಂತಹ ವ್ಯಕ್ತಿಯಿಂದ ಅದನ್ನು ಬಚ್ಚಿಡುವುದನ್ನು ಅಷ್ಟು ಲಘುವಾಗಿ ಪರಿಗಣಿಸಲಾಗದು. ಆದರೆ ಇದೊಂದು ದೊಡ್ಡ ವಿಷಯವಲ್ಲ ಎಂದು ತೇಲಿಸಿ ಬಿಡುವ ಲೋಹಿಯಾ ಭಕ್ತರೂ ಇದ್ದಾರೆ.

2.3 ಮಹಾತ್ಮಾ ಗಾಂಧೀಜಿಯವರ ಹತ್ಯೆಯಾದಾಗ, ಅವರ ಪಾರ್ಥಿವ ಶರೀರವನ್ನು ಕೊಂಡೊಯ್ಯುತ್ತಿದ್ದ ವಾಹನವನ್ನು ನೆಹರೂ ಹತ್ತಿ ಕುಳಿತುಕೊಂಡದ್ದನ್ನು ಖಂಡಿಸುತ್ತ ಲೋಹಿಯಾ, "ಮಹಾತ್ಮಾ ಗಾಂಧೀಜಿಯವರ ಪಾರ್ಥಿವ ಶರೀರವನ್ನು ಕೊಂಡೊಯ್ಯುತ್ತಿದ್ದ ವಾಹನದ ಮೇಲೆ ಹತ್ತುವುದು ದೇಶಕ್ಕೆ ಅವಮಾನ ಮಾಡಿದ ಹಾಗೆ. ಇದು ಅಲಕ್ಷಣದ ಹುಚ್ಚುತನವಾಗಿದ್ದರೆ, ಅದನ್ನು ಮಾಡಿದವರು ಪಾಶ್ಚಾತ್ತಾಪ ಪಡುವ ಮೂಲಕ, ಕ್ಷಮೆ ಕೋರುವ ಮೂಲಕ, ತಮ್ಮ ತಪ್ಪಿನಿಂದ ತಪ್ಪಿಸಿಕೊಳ್ಳಬಹುದಿತ್ತು" ಎನ್ನುತ್ತಾರೆ. ಆದರೆ ಮಹಾತ್ಮಾ ಗಾಂಧಿಯವರು ಬದುಕಿದ್ದಾಗಲೇ ಅವರನ್ನು ತಮ್ಮ ಡಾಕ್ಟರ್ ಪದವಿಯ ಬಗ್ಗೆ ಹೀಗೆ ಕತ್ತಲಲ್ಲಿ ಇಟ್ಟದ್ದು ಲೋಹಿಯಾ ಅವರಿಗೆ ಅಪರಾಧ ಎನ್ನಿಸುವುದೇ ಇಲ್ಲ, ಆದುದರಿಂದ ಅವರು ಪಾಶ್ಚಾತ್ತಾಪ ಪಡುವ ಅಥವಾ ಕ್ಷಮೆ ಕೇಳುವ ಪ್ರಶ್ನೆಯೇ ಬರುವುದಿಲ್ಲ.

2.4 ಲೋಹಿಯಾ ಅವರು ಜರ್ಮನಿಯಲ್ಲಿ ಡಾಕ್ಟರೇಟ್ ಪಡೆದು ಭಾರತಕ್ಕೆ ಮರಳಿದ ನಂತರ ಮಹಾತ್ಮಾ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು ಎಂದೆಲ್ಲ ಲೋಹಿಯಾ ಅವರನ್ನು ಅಮೇರಿಕೆಯ ಜನಸಭೆಗಳಲ್ಲಿ, ಪತ್ರಿಕೆಗಳಲ್ಲಿ ಅವರ ಪ್ರವಾಸದ ಸಂದರ್ಭದಲ್ಲಿ ಪರಿಚಯಿಸಲಾಯಿತು. ಇಂತಹ ಸುಳ್ಳು ಮಾಹಿತಿಯನ್ನು ಅಮೇರಿಕದ ಜನರಿಗೆ ಲೋಹಿಯಾ ಅವರಲ್ಲದೇ ಬೇರೆ ಯಾರು ನೀಡಿರಲು ಸಾಧ್ಯ? ಲೋಹಿಯಾ ಅವರು ಮಹಾತ್ಮಾ ಗಾಂಧಿಯವರಿಗೆ ಆಪ್ತ ಕಾರ್ಯದರ್ಶಿಯಾಗಿರಲಿಲ್ಲ. ಆದರೂ ಅಮೇರಿಕೆಯಲ್ಲಿ ಈ ಮಾತನ್ನು ಹೇಳಿದಾಗ ಲೋಹಿಯಾ ಅದನ್ನು ಅಲ್ಲಗಳೆಯದೇ ಇರುವುದು ಮೇಲೆ ಹೇಳಿದ ಕಾನೂನಿನ ವರಸೆಯನ್ನು ಮತ್ತೇ ನೆನಪಿಗೆ ತರುತ್ತದೆ. ಆದರೆ ಇಲ್ಲಿ ಅದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಅಲ್ಲಿ ಅದು suppressio veri, suggestio falsi ಎಂದಾಗಿತ್ತು. ಇಲ್ಲಿ ಅದು suggestio falsi, suppressio veri ಆಗುತ್ತದೆ. ಅಂದರೆ ಅಲ್ಲಿ ಸತ್ಯವನ್ನು ಮರೆಮಾಚುವುದರ ಮೂಲಕ ಸುಳ್ಳನ್ನು ಸೂಚಿಸಿದ ಹಾಗಾಗುತ್ತಿದ್ದರೆ, ಇಲ್ಲಿ ಅದು ಸುಳ್ಳನ್ನು ಸೂಚಿಸುವ ಮೂಲಕ ಸತ್ಯವನ್ನು ಮರೆಮಾಚಿದ ಹಾಗೆ ಆಗುತ್ತದೆ. ಇದು ಲೋಹಿಯಾ ಅವರಿಗೆ ಗೊತ್ತಿರಲಿಲ್ಲ ಎಂದೇನಲ್ಲ. ಈ ಸುಳ್ಳನ್ನು ಒಳಗೊಂಡ 'ಲೋಹಿಯಾ ಅಂಡ್ ಅಮೇರಿಕಾ ಮೀಟ್' ಪುಸ್ತಕಕ್ಕೆ ಲೋಹಿಯಾ ಅವರೇ ಮುನ್ನುಡಿ ಬರೆದಿದ್ದರೂ, ತಮ್ಮ ಮುನ್ನುಡಿಯಲ್ಲಿಯೂ ಅವರು ಈ ಸುಳ್ಳನ್ನು ಅಲ್ಲಗಳೆಯುವುದಿಲ್ಲ. ಇದೂ ಕೂಡ ಮಹಾತ್ಮಾ ಗಾಂಧಿಯವರಿಗೆ ಲೋಹಿಯಾ ಮಾಡಿದ ದ್ರೋಹ ಎಂದೇ ಹೇಳಬೇಕಲ್ಲವೇ?

2.5 ಇಂತಹ ವಿಷಯಗಳ ಬಗ್ಗೆ ಲೋಹಿಯಾ ಉದಾಸೀನರಾಗಿರುತ್ತಿದ್ದರು ಎಂದೇನಲ್ಲ. ಇದಕ್ಕಿಂತ ಗಂಭೀರವಲ್ಲದ ಇತರ ತಪ್ಪು ಮಾಹಿತಿಗಳು ಅಮೇರಿಕದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದಾಗ ಲೋಹಿಯಾ ತಕ್ಷಣ ಅವುಗಳನ್ನು ಅಲ್ಲಗಳೆಯುತ್ತಿದ್ದರು, ಖಂಡಿಸುತ್ತಿದ್ದರು. ಉದಾಹರಣೆಗೆ, ಲೋಹಿಯಾ ನೇತೃತ್ವ ವಹಿಸಿದ 75,000 ರೈತರು ದೆಹಲಿಯಲ್ಲಿ ಕೆಂಪು ಟೋಪಿ ಹಾಕಿಕೊಂಡು ಪ್ರದರ್ಶನ ನಡೆಸಿದ್ದರು ಎಂದು ಅಮೇರಿಕೆಯ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಅವರ ಗಮನಕ್ಕೆ ತಂದಾಗ ಲೋಹಿಯಾ ಸಿಡಿಮಿಡಿಗೊಂಡು ಅದನ್ನು ಖಂಡಿಸಿದ್ದರು. ಯಾಕೆಂದರೆ ಸಮಾಜವಾದಿಗಳು ಕೆಂಪು ಟೋಪಿಯನ್ನು ಹಾಕಿಕೊಳ್ಳಬೇಕೆಂದು ಹೇಳಿದ್ದು ಲೋಹಿಯಾ ಅವರಲ್ಲ, ಜಯಪ್ರಕಾಶ ನಾರಾಯಣರು. ಈ ಹಿನ್ನೆಲೆಯಲ್ಲಿ ಲೋಹಿಯಾ ಅವರು ಉದ್ದೇಶಪೂರ್ವಕವಾಗಿಯೇ, ತಮಗೆ ಡಾಕ್ಟರ್ ಪದವಿಯನ್ನು ನೀಡಲಾಗಿದೆ ಎನ್ನುವ, ತಾವು ಮಹಾತ್ಮಾ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಗಳಾಗಿದ್ದರು ಎನ್ನುವ ಸುಳ್ಳುಗಳನ್ನು ಪ್ರೋತ್ಸಾಹಿಸುತ್ತಿದ್ದರು ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.



...ಮತ್ತು ಹಿಂಸೆ-ಅಹಿಂಸೆಗಳ ಬಗ್ಗೆ

3.1 ಸಮಾಜವಾದಿ ಚಿಂತಕ ಪ್ರೂಧೋಂನಂತೆ ಮಹಾತ್ಮಾ ಗಾಂಧೀಜಿ ಕೂಡ ಹಿಂಸೆಯನ್ನು ಒಂದು ರಾಜಕೀಯ ಸಾಧನದ ರೂಪದಲ್ಲಿ ತಿರಸ್ಕರಿಸಿದ್ದರು. ಆದರೆ ಮಹಾತ್ಮಾ ಗಾಂಧೀಜಿ ಪ್ರೂಧೋಂನಿಗಿಂತ ಮುಂದೆ ಹೋಗಿ, ಬರಿ ಹಿಂಸೆಯನ್ನು ತಿರಸ್ಕರಿಸದೇ, ಒಂದು ರಾಜಕೀಯ ಸಾಧನವಾಗಿ ಅಹಿಂಸೆಯನ್ನು ಪುರಸ್ಕರಿಸಿದರು. ಆದರೆ ವ್ಯಕ್ತಿಗತವಾಗಿ ಆವಶ್ಯಕತೆ ಇದ್ದಾಗ ಮಹಾತ್ಮಾ ಗಾಂಧೀಜಿ ಹಿಂಸೆಯನ್ನು ಸಮರ್ಥಿಸುತ್ತಿದ್ದರು. ಉದಾಹರಣೆಗೆ ತಮ್ಮ ಆಶ್ರಮದಲ್ಲಿ ಒಂದು ಬಳಲುತ್ತಿದ್ದ ಕೋತಿಯನ್ನು ಸಾಯಿಸುವ ಪ್ರಸಂಗ ಬಂದಾಗ. ಆದರೆ ಲೋಹಿಯಾ ಅವರು ಒಂದು ರಾಜಕೀಯ ಸಾಧನದ ರೂಪದಲ್ಲಿಯೇ ಹಲವು ಸಂದರ್ಭಗಳಲ್ಲಿ ಹಿಂಸೆಯನ್ನು ಬಳಸಬಹುದು ಎಂದು ಸಮರ್ಥಿಸಿಕೊಂಡಿದ್ದರು.

3.2 ತಮ್ಮ ಪಂಚಮಡಿಯಲ್ಲಿ ಮಾಡಿದ ಭಾಷಣದಲ್ಲಿ ಲೋಹಿಯಾ ಅವರು ಹೀಗೆ ಹೇಳುತ್ತಾರೆ: "ಪ್ರಸ್ತುತ ವ್ಯವಸ್ಥೆ ಬರಿ ಬಂದೂಕಿನ ಮೇಲೆ ಆಧರಿಸಿರುವಂತಹ, ಆದರೆ ಬಂದೂಕು ಡೋಲಾಯಮಾನವಾಗಿರುವಂತಹ ಹಾಗೂ ವಿಶಾಲ ಜನಸ್ತೋಮದಲ್ಲಿ ಹೊಸ ವ್ಯವಸ್ಥೆಗಾಗಿ ದೃಢಸಂಕಲ್ಪರಾಗಿರುವಂತಹ ಕ್ಷಣವೂ ಜನರ ಜೀವನದಲ್ಲಿ ಬರಬಹುದು. ಈ ಅಲ್ಪ ಕ್ಷಣದಲ್ಲಿ, ಹಳೆಯ ವ್ಯವಸ್ಥೆಯ ಪ್ರಾಣಪೀಡೆಯನ್ನು ಕೊನೆಗೊಳಿಸಲು ಹಾಗೂ ಹೊಸ ವ್ಯವಸ್ಥೆಗೆ ಜನ್ಮ ನೀಡಲು ನಾವು ಬಲವನ್ನು ಉಪಯೋಗಿಸಬಹುದು. **ಇದು ಜನತೆಯಿಂದ ಮಾಡಲಾಗುವ ಸ್ವಯಂಸ್ಫೂರ್ತ ಹಾಗೂ ಅಲ್ಪಕ್ಷಣದ ಹಿಂಸೆಯಾದೀತು**" ಎನ್ನುತ್ತಾರೆ.

3.3 1966ರ ಮಾರ್ಚನಲ್ಲಿ ಕಲ್ಕತ್ತೆಯಲ್ಲಿ ಹಿಂಸೆ ತಲೆದೋರಿತು. 12 ರಿಂದ 14 ವರ್ಷ ವಯಸ್ಸಿನ ಹುಡುಗರು ಪೋಲಿಸನೊಬ್ಬನ ತಲೆಯನ್ನು ಚಚ್ಚಿ ಹಾಕಿದ್ದರು. ಈ ಸಂದರ್ಭದಲ್ಲಿ "ನಮ್ಮ ದೇಶವನ್ನು ನಾವು ನಾಶವಾಗಿ ಹೋಗುವುದರಿಂದ ಉಳಿಸಬೇಕಾದರೆ ಹಿಂಸೆಯನ್ನು ತ್ಯಜಿಸಬೇಕು" ಎಂದು ಹೇಳಿದ ಲೋಹಿಯಾ ಅವರು ಅದೇ ವರ್ಷದ ಏಪ್ರಿಲ್ ತಿಂಗಳಲ್ಲಿ ಕೋಟಾದಲ್ಲಿ ನಡೆದ ಸಂಯುಕ್ತ ಸಮಾಜವಾದಿ ಪಕ್ಷದ ಸಮ್ಮೇಳನದಲ್ಲಿ ಹಿಂಸೆಯನ್ನು ತಡೆಗಟ್ಟಲು ಪ್ರತಿಹಿಂಸೆಯನ್ನು ಪ್ರತಿಪಾದಿಸಿದರು. ಸಮ್ಮೇಳನದಲ್ಲಿ ಅವರು ಹೀಗೆ ಹೇಳಿದರು: "ಈ ಅನಿಷ್ಟವಾದ ಹಿಂಸೆಯನ್ನು ತಡೆಗಟ್ಟಲೇ ಬೇಕು, ಸಾಧ್ಯವಾದರೆ ಅಹಿಂಸೆಯ ಮೂಲಕ ಹಾಗೂ ಎಂದಾದರೂ ಆವಶ್ಯಕತೆ ಬಿದ್ದರೆ **ಸಂಘಟಿತ** ಹಿಂಸೆಯ (ಬರಿ ಹಿಂಸೆಯಲ್ಲ, ಸಂಘಟಿತ ಹಿಂಸೆ) ಮೂಲಕ. ಮೊದಲಿಗೆ ನಾವು ಜನಸ್ತೋಮ

ಹಿಂಸೆಯನ್ನು ಬಳಕೆ ಮಾಡುತ್ತಿರುವ ಘೋರ ಹತ್ಯೆಗಳನ್ನು ತಡೆಗಟ್ಟಬೇಕು. ನಂತರ ನಾವು ಸಾಧ್ಯವಾದರೆ ಹಿಂಸೆಯನ್ನು ಸಂಘಟಿತ ಜನಸ್ತೋಮದ ಅಹಿಂಸೆಯಿಂದ ತಡೆಗಟ್ಟಬೇಕು. ಇದೂ ಸಾಧ್ಯವಾಗದೇ ಹೋದರೆ, ಹಿಂಸೆಯನ್ನು ತಡೆಗಟ್ಟುವ ಮೂರನೆಯ ಪರ್ಯಾಯವೆಂದರೆ, ಬಲಪೂರ್ವಕವಾಗಿ ಸರಕಾರಿ ಕಚೇರಿಗಳನ್ನು, ಆಕಾಶವಾಣಿ ಕೇಂದ್ರಗಳನ್ನು ಸಂಘಟಿತ ಹಿಂಸೆಯ ಮೂಲಕ ಹಿಡಿದುಕೊಳ್ಳಬೇಕು."

3.4 ಹಿಂಸೆಗೆ ಸಂಬಂಧಪಟ್ಟಂತೆ ಮಹಾತ್ಮಾ ಗಾಂಧಿಯವರ ನಿಲುವು ಇದಕ್ಕೆ ತದ್ವಿರುದ್ಧವಾಗಿತ್ತು. ಹಿಂಸೆಯನ್ನು ಸಂಘಟಿತ ಪ್ರತಿಹಿಂಸೆಯಿಂದ ತಡೆಗಟ್ಟಬೇಕು ಎಂದು ಲೋಹಿಯಾ ಹೇಳಿದರೆ, ಮಹಾತ್ಮಾ ಗಾಂಧೀಜಿ 1939ರ ಮಾರ್ಚ್ 2ರಂದು ಅಂದಿನ ವೈಸರಾಯ್ ಅವರಿಗೆ ಬರೆದ ಪತ್ರದಲ್ಲಿ "ಬ್ರಿಟಿಷ್ ಸರಕಾರದ ಸಂಘಟಿತ ಹಿಂಸೆಯನ್ನು ಸಂಘಟಿತ ಅಹಿಂಸೆ ಮಾತ್ರವೇ ತಡೆಗಟ್ಟಬಲ್ಲದು" ಎಂದು ಬರೆದಿದ್ದರು.

3.5 ಲೋಹಿಯಾ ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂಸೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರಷ್ಟೇ ಅಲ್ಲ, ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂಸೆಗೆ ಪರ್ಯಾಯವಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಅವರು ಅಮೇರಿಕೆಯಲ್ಲಿದ್ದಾಗ 28, ಎಪ್ರಿಲ್ 1964ರ ಹೊನುಲುಲು ಸ್ಟಾರ್ ಬುಲೆಟಿನ್ ಎಂಬ ಪತ್ರಿಕೆ ಹೀಗೆ ವರದಿ ಮಾಡಿತ್ತು "ಡಾಕ್ಟರ್ ಲೋಹಿಯಾ ತನ್ನ ಕೇಳುಗರಿಗೆ ಹೇಳುತ್ತಾರೆ, 'ನಾನು ಹಿಂಸೆಯನ್ನು ನಂಬುವುದಿಲ್ಲ, ಕನಿಷ್ಟ ಪಕ್ಷ ಆಂತರಿಕ ಉದ್ದೇಶಗಳಿಗಾಗಿ'. ಅಂತರಾಷ್ಟ್ರೀಯ ಉದ್ದೇಶಗಳಿಗಾಗಿ ಹಿಂಸೆಗೆ ಪರ್ಯಾಯವಿಲ್ಲ". ಒಂದು ಸಲವಂತೂ ಲೋಹಿಯಾ ಮಹಾತ್ಮಾ ಗಾಂಧಿಯವರನ್ನು ಅಹಿಂಸೆಗಾಗಿ ಹಳಿದಿದ್ದರೂ ಕೂಡ. ನಂತರ ಲೋಹಿಯಾ ಅವರು ಈ ವರದಿಗಳನ್ನು 'ಲೋಹಿಯಾ ಅಂಡ್ ಅಮೇರಿಕಾ ಮೀಟ್' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯ ಮುಖಾಂತರ ಪ್ರಮಾಣೀಕರಿಸಿದರು ಕೂಡ.

3.6 ಮಹಾತ್ಮಾ ಗಾಂಧಿ ವರ್ಗ ಹೋರಾಟದ ವಿಧಾನವನ್ನು ವಿರೋಧಿಸಿದ್ದರು. ಅವರಿಗೆ ವರ್ಗ ಹೋರಾಟವೂ ಒಂದು ರೀತಿಯ ಹಿಂಸೆಯೇ ಆಗಿತ್ತು. ನಮ್ಮ ಸಮಾಜದಲ್ಲಿ ವರ್ಗ ಹೊರಾಟ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಲೂ ಅವರು ಅಹಿಂಸಾತ್ಮಕ ವರ್ಗ ಹೋರಾಟವನ್ನು ಬಯಸಿದ್ದರು. "ಕಾರ್ಮಿಕರು ಹಾಗೂ ಬಂಡವಾಳಗಾರರ ನಡುವೆ ಅಥವಾ ವರ್ಗಗಳು ಹಾಗೂ ಜನಸಾಮಾನ್ಯರ ನಡುವೆ ತಮ್ಮ ಸಾಮಾನ್ಯ ಒಳಿತಿಗಾಗಿ ಜೊತೆ ಸೇರಿ ಕೆಲಸ ಮಾಡದೇ ಇರುವಂತಹ ವೈರುಧ್ಯವಿದೆ ಎನ್ನುವುದು ವರ್ಗ ಹೋರಾಟದ ಪರಿಕಲ್ಪನೆಯ ಹಿಂದಿರುವ ಒಂದು ಅನುಮಾನ. ಇದು ನನಗೆ ಇಷ್ಟವಿಲ್ಲ. ಬಹಳ ಕಾಲ ವಿಸ್ತೃತವಾಗಿ ಹರಡಿರುವ ನನ್ನ ಅನುಭವ ಇದಕ್ಕೆ ವಿಪರೀತವಾಗಿದೆ" ಎನ್ನುವುದು ಅವರ ಅಭಿಪ್ರಾಯವಾಗಿತ್ತು. ವರ್ಗ ಹೋರಾಟದ ಉದ್ದೇಶ ತನ್ನನ್ನು ತಾನೇ ದಂಡಿಸಿಕೊಳ್ಳುವುದಾಗಿರದೇ ತನ್ನ ಎದುರಾಳಿಯನ್ನು ದಂಡಿಸುವುದಾಗಿದ್ದುದರಿಂದ ಮಹಾತ್ಮಾ ಗಾಂಧಿ ಅದನ್ನು ವಿರೋಧಿಸುತ್ತಿದ್ದರು.

ಮಹಾತ್ಮಾ ಗಾಂಧಿ ಬರಿ ಕ್ರಿಯೆಯಲ್ಲಿ ಮಾತ್ರವಲ್ಲ, ಭಾಷೆಯನ್ನು ಬಳಸುವಲ್ಲಿಯೂ ಹಿಂಸೆಯನ್ನು ತಿರಸ್ಕರಿಸುತ್ತಿದ್ದರು. ಮಹಾತ್ಮಾ ಗಾಂಧಿ ಸಾವಿರಾರು ಪುಟಗಳಷ್ಟು ಬರೆದಿದ್ದಾರೆ. ನೂರಾರು ವಿರೋಧಿಗಳನ್ನು, ಎದುರಾಳಿಗಳನ್ನು ಎದುರಿಸಿದ್ದಾರೆ. ತಮ್ಮ ಎದುರಾಳಿಯನ್ನು ಅವರು ಎಂದೂ ತಮ್ಮ ಶತ್ರುವೆಂದು ಬಗೆಯಲಿಲ್ಲ. ತಮ್ಮ ವಿರೋಧಿಗಳ ಬಗ್ಗೆ ಅವರೆಂದೂ, ಬಯ್ಗುಳದ ಭಾಷೆ ಹಾಗಿರಲಿ, ಕಟುವಾದ ಭಾಷೆಯನ್ನೂ ಬಳಸಲಿಲ್ಲ.



3.7 ಗಾಂಧೀ ಅವರು "ನಾನು ಹೇಗೆ ಬ್ರಿಟಿಷರ ವಿರುದ್ಧದ ಹೋರಾಟವನ್ನು ಹರಿಜನರು ಸಮರ್ಥಿಸಲಿ ಎನ್ನುವ ಕಾರಣದಿಂದ ಅವರ ಬಗ್ಗೆ ಕೆಲಸ ಮಾಡುತ್ತಿಲ್ಲವೋ ಹಾಗೆಯೇ ಸಮಾಜವಾದಿಗಳು ಕೂಡ ಸಾಮ್ರಾಜ್ಯವಾದದ ವಿರುದ್ಧ ಬಳಸುವ ಉದ್ದೇಶದಿಂದ ಕಾರ್ಮಿಕರ ಸಂಘಟನೆ ಮಾಡಬಾರದು" ಎನ್ನುವ ಅಭಿಪ್ರಾಯ ಹೊಂದಿದ್ದರು. ಲೋಹಿಯಾ ಅವರ ಅಭಿಪ್ರಾಯ ಇದಕ್ಕೆ ತದ್ವಿರುದ್ಧವಾಗಿತ್ತು. ಆದರೆ ಲೋಹಿಯಾ ಅವರ ವಿಚಾರಗಳು ಇದಕ್ಕೆ ತದ್ವಿರುದ್ಧವಾಗಿದ್ದವು. 1936ರಲ್ಲಿ ಮಾಡಿದ ಭಾಷಣದಲ್ಲಿ ಲೋಹಿಯಾ ಅವರು ವರ್ಗ ಸಂಘರ್ಷವನ್ನು ಪ್ರತಿಪಾದಿಸಿದ್ದರು. ಸಾಮ್ರಾಜ್ಯವಾದಿ ವಿರೋಧಿ ಹೋರಾಟದಲ್ಲಿ ಅದಕ್ಕೆ ಪ್ರಮುಖ ಪಾತ್ರ ನೀಡಿದ್ದರು. "ವರ್ಗ ಸಂಘರ್ಷ ಬಂಡವಾಳವಾದದ ವಿನಾಶವನ್ನು ತೀವ್ರಗೊಳಿಸುತ್ತದೆ. ಇದಲ್ಲದೇ ಮೂರರಲ್ಲಿ ಎರಡರಷ್ಟು ಜಗತ್ತು ಮೊದಲ ಹೆಜ್ಜೆಯನ್ನೂ ಇಡಲಾಗದು" ಎಂದು ಲೋಹಿಯಾ ಹೇಳುತ್ತಾರೆ. "ಕಾರ್ಮಿಕರ ಸಂಘಟನೆ ಹಾಗೂ ಆಂದೋಲನಗಳು ಸಾಮ್ರಾಜ್ಯವಾದ–ವಿರೋಧಿ ಹೋರಾಟದಲ್ಲಿ ದೊಡ್ಡ ಶಕ್ತಿ, ಇವು ಸಾಮ್ರಾಜ್ಯವಾದಕ್ಕೆ ದೊಡ್ಡ ಆಘಾತವನ್ನುಂಟು ಮಾಡುತ್ತವೆ" ಎನ್ನುವುದು ಲೋಹಿಯಾ ಅವರ ಅಭಿಪ್ರಾಯವಾಗಿತ್ತು.

3.8 ಆದುದರಿಂದ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದ ವಿಧಾನವನ್ನೂ, ವರ್ಗ ಸಹಕಾರವನ್ನೂ ಪ್ರತಿಪಾದಿಸಿದ್ದರು. ಆದರೆ ಲೋಹಿಯಾ ಅವರು ತಮ್ಮ ಪಂಚಮಡಿಯ ಭಾಷಣದಲ್ಲಿ, 'ಸತ್ಯಾಗ್ರಹ ಹಾಗೂ ವರ್ಗ ಹೋರಾಟಗಳ ನಡುವೆ **ಭ್ರಮಾತ್ಮಕ ವೈರುಧ್ಯ**ವನ್ನು ಬೆಳೆಸಲು ಬಿಡಲಾಗಿದೆ' ಎಂದು ಹೇಳುವ ಮೂಲಕ ಮಹಾತ್ಮಾ ಗಾಂಧಿಯವರ ಈ ವರ್ಗ ಹೋರಾಟ ಹಾಗೂ ಸತ್ಯಾಗ್ರಹಗಳ ನಡುವಣ ವೈರುಧ್ಯದ ನಿಲುವನ್ನು **ಭ್ರಮಾತ್ಮಕ** ಎಂದು ಪರೋಕ್ಷವಾಗಿ ಮೂದಲಿಸಿದ್ದರು. ಪಂಚಮಡಿಯ ಭಾಷಣದಲ್ಲಿ ಲೋಹಿಯಾ ಮಾರ್ಕ್ಸ್‌ವಾದ ಹಾಗೂ ಗಾಂಧಿವಾದಗಳ ಬಗ್ಗೆ ಎಷ್ಟೊಂದು ಗೊಂದಲವನ್ನುಂಟು ಮಾಡಿದರೆಂದರೆ, ಕೊನೆಗೆ 'ನಾನು ಮಾರ್ಕ್ಸ್‌ನ ಪರವಾಗಿಯೂ ಇಲ್ಲ, ಗಾಂಧೀ ಪರವಾಗಿಯೂ ಇಲ್ಲ, ಮಾರ್ಕ್ಸ್‌ನ ವಿರುದ್ಧವೂ ಇಲ್ಲ, ಗಾಂಧಿ ವಿರುದ್ಧವೂ ಇಲ್ಲ' ಎಂದು ವಿವರಣೆ ನೀಡಬೇಕಾಗಿ ಬಂತು.

3.9 ಮಹಾತ್ಮಾ ಗಾಂಧಿ ಬರಿ ಕ್ರಿಯೆಯಲ್ಲಿ ಮಾತ್ರವಲ್ಲ, ಭಾಷೆಯನ್ನು ಬಳಸುವಲ್ಲಿಯೂ ಹಿಂಸೆಯನ್ನು ತಿರಸ್ಕರಿಸುತ್ತಿದ್ದರು. ಮಹಾತ್ಮಾ ಗಾಂಧಿ ಸಾವಿರಾರು ಪುಟಗಳಷ್ಟು ಬರೆದಿದ್ದಾರೆ. ನೂರಾರು ವಿರೋಧಿಗಳನ್ನು, ಎದುರಾಳಿಗಳನ್ನು ಎದುರಿಸಿದ್ದಾರೆ. ತಮ್ಮ ಎದುರಾಳಿಯನ್ನು ಅವರು ಎಂದೂ ತಮ್ಮ ಶತ್ರುವೆಂದು ಬಗೆಯಲಿಲ್ಲ. ತಮ್ಮ ವಿರೋಧಿಗಳ ಬಗ್ಗೆ ಅವರೆಂದೂ, ಬಯ್ಗುಳದ ಭಾಷೆ ಹಾಗಿರಲಿ, ಕಟುವಾದ ಭಾಷೆಯನ್ನೂ ಬಳಸಲಿಲ್ಲ. ತಮ್ಮ ಆತ್ಮವನ್ನೇ ತುಂಡರಿಸುವಂತೆ ಪಾಕಿಸ್ತಾನದ ಬೇಡಿಕೆಯನ್ನು ಮುಂದಿಟ್ಟ ಮಹಮ್ಮದ ಆಲಿ ಜಿನ್ನಾ ಅವರು ಮಹಾತ್ಮಾ ಗಾಂಧಿಯವರನ್ನು 'ಮಿಸ್ಟರ್ ಗಾಂಧಿ' ಎಂದೇ ಸಂಬೋಧಿಸುತ್ತಿದ್ದರೂ ಕೂಡ ಜಿನ್ನಾ ಅವರನ್ನು ಮಹಾತ್ಮಾ ಗಾಂಧಿ ಯಾವಾಗಲೂ 'ಸಹೋದರ ಜಿನ್ನಾ' ಎಂದೇ ಸಂಬೋಧಿಸುತ್ತಿದ್ದರು. ಬಹುಶಃ ಮಹಾತ್ಮಾ ಗಾಂಧಿ ಬಳಸಿದ ಅತ್ಯಂತ ಕಟುವಾದ ಶಬ್ದಗಳೆಂದರೆ ದಕ್ಷಿಣ ಆಫ್ರಿಕೆಯಲ್ಲಿ ಜನರಲ್ ಸ್ಮಿಟ್ಸ್ ಅವರನ್ನು 'ಹೃದಯಹೀನ ಮನುಷ್ಯ' ಎಂದು ಕರೆದದ್ದು.

3.10 ಆದರೆ ಲೋಹಿಯಾ ತಮ್ಮ ಎದುರಾಳಿಗಳ ಬಗ್ಗೆ, ತಮ್ಮ ವಿರೋಧಿಗಳ ಬಗ್ಗೆ ಬಳಸುವ ಭಾಷೆ

ಕವನ

ನೀನೊಂದು ಬೆರಗು

ನಿನ್ನ ಚೇತನ ಘಟ್ಟಂತ
ಪುಟಿದು ಚಿಮ್ಮಿದಾಗ
ಹೊಮ್ಮುವ ಒಂದು ನಗು
ಕವಿತೆಯ ಅಲೆಯಾಗಿ
ಈ ಲೋಕದ ಅಳುವನ್ನು ಅಳಿಸಬಲ್ಲದು

ನಿನ್ನ ಸುಖದ ಉನ್ಮಾದ
ಸಾವಿರದ ಸೂರ್ಯಕಾಂತಿ ಹೂಗಳನ್ನು
ಒಮ್ಮೆಲೆ ಅರಳಿಸಿ
ನೂರಾರು ಕವಿತೆಗಳ ಬೀಜ ಬಿತ್ತಿ
ಈ ಭೂಮಿಯನ್ನು ನಗಿಸಬಲ್ಲದು

ಒಮ್ಮೊಮ್ಮೆ ನೀನು ಸೊರಗಿ
ನನ್ನೆದೆಗೆ ಒರಗಿ
ಬಿಡುವ ನಿಟ್ಟುಸಿರು
ಸಾಂತ್ವನದ ಕವಿತೆಯಾಗಿ
ವಿರಹಿಗಳನ್ನು ಸಂತೈಸಬಲ್ಲದು

ಒಟ್ಟಾರೆ ನೀನು
ಉಂಡದ್ದು ಉಟ್ಟದ್ದು
ಕಟ್ಟಿದ್ದು ಬಿಟ್ಟಿದ್ದು ಎಲ್ಲವೂ
ಕವಿತೆಯಾಗಿ ..

ಈ ಲೋಕಕ್ಕೆ
ನೀನೊಂದು ಬೆರಗು
ನನಗೋ ಒಂದು ಬೆಡಗು

ಮೂಡ್ನಾಕೂಡು ಚಿನ್ನಸ್ವಾಮಿ



ಬೆಂಗಳೂರು ಮಹಾನಗರ ಸಾರಿಗೆ ನಿಗಮದಲ್ಲಿ ಉನ್ನತ ಅಧಿಕಾರಿ. ಕನ್ನಡದ ಹಿರಿಯ ಕವಿಗಳಲ್ಲಿ ಪ್ರಮುಖರು. ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಸಮಾಜ ಸೇವೆ ಪ್ರವೃತ್ತಿಗಳು. ಇವರ 23 ಪುಸ್ತಕಗಳು ಪ್ರಕಟ. ಬಹಳಷ್ಟು ಕವಿತೆಗಳು ಅನೇಕ ಭಾರತೀಯ ಭಾಷೆಗಳು ಸೇರಿದಂತೆ ಇಂಗ್ಲಿಷ್, ಸ್ಪ್ಯಾನಿಷ್ ಹಾಗೂ ಹೀಬ್ರೂ ಭಾಷೆಗಳಿಗೆ ಅನುವಾದಗೊಂಡಿವೆ. ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಕವಿತೆ ವಾಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸೇರಿದಂತೆ ಅನೇಕ ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಅತ್ಯಂತ ಕಟುವಾಗಿರುತ್ತಿತ್ತು, ಬಯ್ಗುಳದ ಭಾಷೆಯಾಗಿರುತ್ತಿತ್ತು. ಲೋಹಿಯಾ ಅವರು 'ಮೂರ್ಖರನ್ನು ಖುಷಿಯಿಂದ ಸಹಿಸುತ್ತಿದ್ದರು. ಆದರೆ ತಮ್ಮ ತಾತ್ವಿಕ ಚೌಕಟ್ಟುಗಳನ್ನು ಪ್ರಶ್ನಿಸಬಹುದಾದ ಯಾರೊಂದಿಗೂ ಅವರಿಗೆ ಸಹನೆ ಪ್ರದರ್ಶಿಸಲಾಗುತ್ತಿರಲಿಲ್ಲ.. ..ತಮ್ಮೊಂದಿಗೆ ಭಿನ್ನಾಭಿಪ್ರಾಯಕ್ಕೆ ಇಳಿಯುವವರೊಂದಿಗೆ ಚರ್ಚೆ ಶುರು ಮಾಡಿದರೆ ಅವರ ನಾಲಿಗೆ ಹಲ್ಲಾಗಿಬಿಡುತ್ತಿತ್ತು ಮತ್ತು ಲೇಖನ ತರೆದು ಹಾಕುವ ಖಡ್ಗವಾಗಿಬಿಡುತ್ತಿತ್ತು' ಎಂದು ಲೋಹಿಯಾ ಅವರ ಅನುಯಾಯಿ ಭೋಲಾ ಚಾಟರ್ಜಿ ಹೇಳುತ್ತಾರೆ.

3.11 ಮೊದಲಿಗೆ ಕಾಂಗ್ರೆಸ್ ಸಮಾಜವಾದಿ ಪಕ್ಷದಲ್ಲಿ ಹಾಗೂ ನಂತರ ಸಮಾಜವಾದಿ ಪಕ್ಷದಲ್ಲಿ, ತದನಂತರ ಪ್ರಜಾ ಸಮಾಜವಾದಿ ಪಕ್ಷದಲ್ಲಿದ್ದ ತಮ್ಮ ಸಹೋದ್ಯೋಗಿಗಳಲ್ಲಿ ಅವರು ಜಯಪ್ರಕಾಶ ನಾರಾಯಣರನ್ನು 'ಮಹಂತ ಎಂದೂ, 'ಕೋತಿ ಕುಣಿಸುವವ ಎಂದೂ, ನೆಹರೂ ಅವರ 'ಏಜೆಂಟ' ಎಂದೂ, ಆಚಾರ್ಯ ಕೃಪಲಾನಿಯವರನ್ನು 'ಸಾರಸ ಪಕ್ಷಿ' ಎಂದೂ (ಒಂದೇ ಕಾಲಿನ ಮೇಲೆ ತಪಸ್ಸು ಮಾಡುವವರಂತೆ ನಿಂತಿದ್ದು, ಮೀನು ಕಂಡಾಗ ತಟಕ್ಕನೇ ಹಿಡಿದು ಕೊಳ್ಳುವ, ಅಂದರೆ ತೋರಿಕೆಗೆ ತಾಪಸನಂತೆ ಕಂಡರೂ ವಾಸ್ತವದಲ್ಲಿ ಬೇಟೆಗಾರ ಎಂಬ ಅರ್ಥದಲ್ಲಿ), ತಮ್ಮ ಅಭಿಪ್ರಾಯವನ್ನು ಒಪ್ಪದ ಸಮಾಜವಾದಿಗಳನ್ನು 'ಪಾರ್ಶ್ವವಾಯುಗ್ರಸ್ತ' ರೆಂದೂ, 'ನಪುಂಸಕ' ರೆಂದೂ, (ನಪುಂಸಕರೂ ಕೂಡ ಮನುಷ್ಯರು, ಗೌರವಯುತ ಸಂಬೋಧನೆಗೆ ಪಾತ್ರರೂ ಎನ್ನುವುದು ಸಮಾನತೆಯಲ್ಲಿ ನಂಬಿಕೆ ಇದ್ದ ಲೋಹಿಯಾ ಅವರಿಗೆ ಹೊಳೆಯುವುದೇ ಇಲ್ಲ), ತಮ್ಮ ಪಕ್ಷವನ್ನು ಬಿಟ್ಟು ಹೋದವರನ್ನು 'ಕೊಳಕು ಜನ' ಎಂದೂ, 'ಗಟಾರಿನಲ್ಲಿ ಓಡಾಡುವವ' ರೆಂದೂ ಜರಿಯುತ್ತಿದ್ದ ಲೋಹಿಯಾ, ಲೋಕಸಭಾ ಸದಸ್ಯರನ್ನು 'ಕೋತಿ'ಗಳೆಂದೂ, 'ನಪುಂಸಕ'ರೆಂದೂ, ಇತಿಹಾಸಜ್ಞ ಒಬ್ಬರನ್ನು 'ಆನುವಂಶಿಕ ಗುಲಾಮ'ರೆಂದೂ, ಇಂಗ್ಲೀಷ ಭಾಷೆಯನ್ನು ಬೆಂಬಲಿಸುವವರನ್ನು 'ಮೂರ್ಖರು', 'ಕುತ್ಸಿತ ಬುದ್ಧಿ'ಯವರೆಂದೂ ಜರಿಯುತ್ತಿದ್ದರು, ಅವರ ಈ ಭಾಷಾ ಪ್ರಯೋಗವನ್ನು ಗಮನಿಸಿ ಲೋಹಿಯಾ ಅವರ ಶಿಷ್ಯರಲ್ಲೊಬ್ಬರಾದ ಕಿಶನ್ ಪಟ್ನಾಯಕ್ '..ವಿರೋಧಿಗಳನ್ನು ಲೇವಡಿ ಮಾಡುತ್ತಿದ್ದ ಲೋಹಿಯಾರ ವಿಧಾನ ಗಾಂಧೀವಾದಿ ವಿಧಾನವಂತೂ ಆಗಿರಲಿಲ್ಲ ಎನ್ನುವುದರಲ್ಲಿ ಸಂದೇಹವಿರಲಾರದು' ಎನ್ನುತ್ತಾರೆ. ಬಹುಶಃ ಇಂತಹ ಭಾಷಾ ಪ್ರಯೋಗವನ್ನು ಮಹಾತ್ಮಾ ಗಾಂಧಿಯವರೂ ಹಿಂಸೆಯ ಒಂದು ರೂಪವೆಂದೇ ಪರಿಗಣಿಸುತ್ತಿದ್ದರು.

3.12 ಸ್ವತಃ ಲೋಹಿಯಾ ಅವರೇ ಒಂದು ಘಟನೆಯನ್ನು ಪ್ರಾಸ್ತಾಪಿಸುತ್ತಾರೆ. ಒಂದು ಬಾರಿ ಅವರು ಮಹಾತ್ಮಾ ಗಾಂಧಿಯವರ ಒಂದು ಕಾರ್ಯಕ್ರಮವನ್ನು ಟೀಕಿಸಿ ಒಂದು ಲೇಖನವನ್ನು ಬರೆದು ಅದನ್ನು ಮಹಾತ್ಮಾ ಗಾಂಧಿಯವರ ಅಭಿಪ್ರಾಯಕ್ಕಾಗಿ ಕಳಿಸಿದರಂತೆ. ಅದಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿ "ನೀವು ನನ್ನ ಅಭಿಪ್ರಾಯ ಕೇಳುವ ಅಗತ್ಯವಿರಲಿಲ್ಲ. ಏಕೆಂದರೆ ನಮ್ಮಲ್ಲಿ ವಿರೋಧಿಗಳ ದೃಷ್ಟಿಕೋನವನ್ನು ಸಹಿಸಿಕೊಳ್ಳುವ ಧೈರ್ಯವೇ ಇಲ್ಲ" ಎಂದು ಹೇಳಿದ್ದರು.

3.13 ಹೀಗೆ ಲೋಹಿಯಾ ಅವರು ಬರಿ ಅಲ್ಪಕ್ಷಣದ ಮಾತ್ರವಲ್ಲ ಸಂಘಟಿತ ಹಿಂಸೆಯನ್ನು ಸಮರ್ಥಿಸುತ್ತಾರಲ್ಲದೇ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಹಿಂಸೆಗೆ ಪರ್ಯಾಯವಿಲ್ಲ ಎಂದು ಹೇಳುತ್ತಾರೆ. ಅವರು ತಾವು ಬಳಸುವ ಭಾಷೆಯಲ್ಲಿಯೂ ಹಿಂಸಾತ್ಮಕರಾಗಿದ್ದರು. ಈ ರೀತಿ ಲೋಹಿಯಾ ಶುದ್ಧ ಗುರಿಗಳನ್ನು ತಲುಪಲು ಅಷ್ಟೇ ಶುದ್ಧ ದಾರಿಗಳನ್ನು ಬಳಸಬೇಕೆಂಬ ಮಹಾತ್ಮಾ ಗಾಂಧಿಯವರ ತತ್ವವನ್ನೂ ಅವರು ತಿರಸ್ಕರಿಸುತ್ತಾರೆ.

...ಮತ್ತು ಸತ್ಯಾಗ್ರಹದ ಬಗ್ಗೆ

4.1 5 ನವಂಬರ್ 1919ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಸತ್ಯಾಗ್ರಹದ ತಮ್ಮ ಕಲ್ಪನೆಯ ಬಗ್ಗೆ ಮಹಾತ್ಮಾ ಗಾಂಧಿ ಹೀಗೆ ಬರೆದಿದ್ದರು: "ಮೆಡೆಸ್ ಮತ್ತು ಪರ್ಶಿಯನ್ನರ ಕಾನೂನುಗಳು ತನ್ನ ಅಂತಃಸಾಕ್ಷಿಯನ್ನು ನೋಯಿಸಿದಾಗ, ಡೇನಿಯಲ್ ಅವುಗಳನ್ನು ಕಡೆಗಣಿಸಿದ್ದ ಮತ್ತು ಹಾಗೆ ಕಡೆಗಣಿಸಿ, ವಿಧೇಯತೆಯಿಂದ ಶಿಕ್ಷೆಯನ್ನು ಅನುಭವಿಸಿದ. ಈ ಮೂಲಕ ಆತ ಅತ್ಯಂತ ಶುದ್ಧ ರೂಪದ ಸತ್ಯಾಗ್ರಹವನ್ನು ಆಚರಿಸಿದ. ಸಾಕ್ರೆಟಿಸ್ ತಾನು ಸತ್ಯವೆಂದು ಅರಿತಿದ್ದನ್ನು ಅಥೇನ್ಸ್‌ನ ಯುವಕರಿಗೆ ಬೋಧಿಸಲು ಹಿಂದೆಗೆಯಲಿಲ್ಲ ಮತ್ತು ಅದಕ್ಕಾಗಿ ಮರಣ ಶಿಕ್ಷೆಯನ್ನೂ ಧೈರ್ಯವಾಗಿ ಸಹಿಸಿಕೊಂಡ. ಆತ ನಿಜವಾದ ಒಬ್ಬ ಸತ್ಯಾಗ್ರಹಿ. ಪ್ರಹ್ಲಾದ, ತಂದೆಯ ಆಜ್ಞೆ ತನ್ನ ಅಂತಃಸಾಕ್ಷಿಗೆ ಯನ್ನು ವಿರುದ್ಧವೆನ್ನಿಸಿದಾಗ ಅದನ್ನು ನಿರಾಕರಿಸಿದ. ಅದಕ್ಕಾಗಿ ಆತ ಯಾರನ್ನೂ ದೂರದೇ, ತನಗೆ ವಿಧಿಸಿದ ದಂಡನೆಗಳನ್ನು ಸಂತೋಷದಿಂದ ತಾಳಿಕೊಂಡ. ತನ್ನ ಅಂತಃಸಾಕ್ಷಿಗೆ ಬದ್ಧಳಾಗಿದ್ದ ಮೀರಾಬಾಯಿ, ಅದಕ್ಕಾಗಿ ತನ್ನ ಗಂಡನಿಗೇ ವಿರೋಧವಾಗಿ ನಿಂತು ಆತನಿಂದ ಬೇರೆಯಾಗಿ ಬದುಕಬೇಕಾಗಿ ಬಂದರೂ ವಿಚಲಿತಗೊಳ್ಳಲಿಲ್ಲ. ಗಂಡನ ಇಚ್ಛೆಗೆ ತಲೆಬಾಗುವಂತೆ ಮಾಡಲು ಯೋಜಿಸಲಾದ ಎಲ್ಲ ಬಗೆಯ ಅನ್ಯಾಯಗಳನ್ನೂ ಆಕೆ ಶಾಂತ ಗಾಂಭೀರ್ಯದಿಂದ ಅನಾಸಕ್ತಿಯಿಂದ ಸಹಿಸಿದಳು. ಪ್ರಹ್ಲಾದ ಮತ್ತು ಮೀರಾಬಾಯಿ ಸಾಧಿಸಿದ್ದು ಸತ್ಯಾಗ್ರಹವನ್ನೇ. ಡೇನಿಯಲ್ ಸಾಕ್ರೆಟಿಸರಾಗಲಿ, ಇಲ್ಲವೇ ಪ್ರಹ್ಲಾದ ಮೀರಾಬಾಂಯಿ ಅವರಾಗಲೀ ತಮ್ಮನ್ನು ಹಿಂಸಿಸಿದವರ ಬಗ್ಗೆ ಮನಸ್ಸು ಕಲುಷಿತ ಮಾಡಿಕೊಳ್ಳಲಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಡೇನಿಯಲ್ ಮತ್ತು ಸೊಕ್ರೆಟಿಸ್ ತಾವು ಬದುಕಿದ ರಾಜ್ಯದಲ್ಲಿ ಆದರ್ಶ ನಾಗರಿಕರೆಂದು ಗಣ್ಯರಾದರು, ಪ್ರಹ್ಲಾದ ಆದರ್ಶ ಪುತ್ರನೆನಿಸಿದ, ಮೀರಾ ಆದರ್ಶ ಪತ್ನಿಯೆನಿಸಿಕೊಂಡಳು"

4.2 ಹೀಗೆ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹದ ಪರಿಕಲ್ಪನೆ ತಮ್ಮ ಎದುರಾಳಿಯ ಮನಸ್ಸನ್ನು ಗೆಲ್ಲಲು, ತಮ್ಮ ನಿಲುವು ಸರಿಯಾಗಿದೆ ಎಂದು ತಮ್ಮ ಎದುರಾಳಿಗೆ ಮನದಟ್ಟು ಮಾಡಿಕೊಡಲು, ತಮ್ಮನ್ನು ತಾವೇ ದಂಡಿಸಿಕೊಳ್ಳುವುದಾಗಿತ್ತು. ಮಹಾತ್ಮಾ ಗಾಂಧಿಯವರ ಪ್ರಕಾರ ಒಬ್ಬ ಸತ್ಯಾಗ್ರಹಿ ಕಾನೂನಿಗೆ ಬದ್ಧನಾಗಿಯೇ ನಡೆದುಕೊಳ್ಳುತ್ತಿರುತ್ತಾನೆ. ಆದರೆ ಕಾನೂನು ಸರಿಯಾಗಿಲ್ಲ ಎಂದು ಅವನಿಗೆ ಮನದಟ್ಟಾದರೆ ಆತ ಅದನ್ನು ಉಲ್ಲಂಘಿಸುತ್ತಾನೆ. ಆದರೆ ಈ ಉಲ್ಲಂಘನೆಯ ಉದ್ದೇಶ ಅಶಿಸ್ತನ್ನು ಅರಾಜಕತೆಯನ್ನು ಹರಡುವುದಾಗಿರುತ್ತಿರಲಿಲ್ಲ. ಆದುದರಿಂದಲೇ ಮಹಾತ್ಮಾ ಗಾಂಧಿ ಇಂತಹ ಉಲ್ಲಂಘನೆಯನ್ನು 'ಅಪರಾಧಿಕ' ಕಾನೂನು ಭಂಗವಲ್ಲ, 'ನಾಗರಿಕ' ಕಾನೂನು ಭಂಗ ಎಂದೇ ಕರೆಯುತ್ತಿದ್ದರು. ಆದುದರಿಂದಲೇ ಅವರು ಶಿಕ್ಷೆಯನ್ನು ಅಹ್ವಾನಿಸುತ್ತಿದ್ದರು. ಮಹಾತ್ಮಾ ಗಾಂಧಿಯವರನ್ನು ಮೊದಲ ಬಾರಿಗೆ ದಿನಾಂಕ 11, ಜನವರಿ 1908ರಂದು ದಕ್ಷಿಣ ಆಫ್ರಿಕೆಯ ಟ್ರಾನ್ಸವಾಲಿನಲ್ಲಿ ಬಂಧಿಸಿ ನ್ಯಾಯಾಧೀಶರೆ ಮುಂದೆ ಇತರ ಸತ್ಯಾಗ್ರಹಿಗಳೊಂದಿಗೆ ಹಾಜರು ಪಡಿಸಿದಾಗ ಮಹಾತ್ಮಾ ಗಾಂಧಿ, ನಾನು ಸತ್ಯಾಗ್ರಹಿಗಳ ನಾಯಕನಾಗಿರುವುದರಿಂದ ನನಗೆ ಅತ್ಯಂತ ಹೆಚ್ಚಿನ ಶಿಕ್ಷೆ ನೀಡಬೇಕೆಂದು ನ್ಯಾಯಾಧೀಶರನ್ನು ಗೌರವಯುತವಾಗಿ ಕೇಳಿಕೊಂಡಿದ್ದರು. ಭಾರತದಲ್ಲಿ ಕೂಡ ಮೊದಲ ಬಾರಿಗೆ ದಿನಾಂಕ 18, ಮಾರ್ಚ್ 1922ರಂದು ಅವರನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ಅವರು

ನಿಮ್ಮನ್ನು ಬಡವರನ್ನಾಗಿ ಇಡಲು ದೇಶ ಬಹಳ ಹಣ ಖರ್ಚು ಮಾಡಬೇಕಾಗಿ ಬರುತ್ತಿದೆ ಎಂದು ಮಹಾತ್ಮಾ ಗಾಂಧಿಯವರಿಗೆ ಒಂದು ಸಲ ಸರೋಜಿನಿ ನಾಯಡು ಹೇಳಿದ್ದರಂತೆ. ಹಾಗೆಯೇ ಲೋಹಿಯಾ ಅವರು ತಮ್ಮ ಶಸ್ತ್ರಚಿಕಿತ್ಸೆಗೆಂದು ದೆಹಲಿಯ ವೆಲಿಂಗ್ಡನ್ ಆಸ್ಪತ್ರೆ ಸೇರಿದಾಗ, ಎಂಟು ದೇಶಗಳ 16 ಡಾಕ್ಟರುಗಳು ಅವರ ಚಿಕಿತ್ಸೆಯನ್ನು ಕೈಗೊಂಡಿದ್ದರಂತೆ. ಇಂತಹ ಬಡತನವನ್ನು ಯಾರಾದರೂ ಬಯಸಿಯಾರು.



ನಗೆ ಅತ್ಯಂತ ಹೆಚ್ಚಿನ ಶಿಕ್ಷೆಯನ್ನು ವಿಧಿಸಬೇಕು' ದೇ ಕೇಳಿಕೊಂಡಿದ್ದರು. ಅವರು ಎಂದೆಂದಿಗೂ ತಮ್ಮ ಧನವನ್ನಾಗಲೀ, ಜೈಲು ಶಿಕ್ಷೆಯನ್ನಾಗಲೀ ್ಯಾಯಾಲಯದಲ್ಲಿ ಪ್ರಶ್ನಿಸಲಿಲ್ಲ. ಶಿಕ್ಷೆಯ ವಿರುದ್ಧ ಅವರು ದೂ ಮೇಲ್ಮನವಿ ಸಲ್ಲಿಸಲಿಲ್ಲ.

4.3 ಆದರೆ ಲೋಹಿಯಾ ಅವರ ವರ್ತನೆ ಇದಕ್ಕೆ ಪರೀತವಾಗಿರುತ್ತಿತ್ತು. 'ಶಾಸನಗಳನ್ನು ಲ್ಲಂಘಿಸುವುದು, ನ್ಯಾಯಾಲಯದ ಶಿಕ್ಷೆಗಳನ್ನು ಾನಿಸುವುದು, ಅಧಿಕಾರಿಗಳಿಂದ ಶಿಕ್ಷೆಯನ್ನು ಾನಿಸುವುದು, ಪ್ರಾಣಾರ್ಪಣೆಯವರೆಗೂ ುಂದುವರೆಯುವುದು – ಅದು ದುಃಖದ ಷಯವಾದರೂ – ಬದಲಾವಣೆಯನ್ನು ಮಾಡುವ ಕಮಾತ್ರ ಹಾಗೂ ಸಮರ್ಪಕ ಮಾರ್ಗವೆಂದು ಗೆಯುತ್ತೇನೆ ಎಂದೇನೋ ಅವರು ಹೇಳುತ್ತಿದ್ದರು.



ಆದರೆ ಅವರ ಈ ಮಾತಿಗೂ ಅವರ ಕೃತಿಗೂ ಬಹಳಷ್ಟು ಅಂತರವಿರುತ್ತಿತ್ತು.

4.4 ಲೋಹಿಯಾ ಅವರು ಯಾವತ್ತೂ ಶಿಕ್ಷೆಯನ್ನು ಅಹ್ವಾನಿಸಲಿಲ್ಲ. ಅವರು ಪ್ರತಿ ಬಾರಿಯೂ ತಮ್ಮ ಬಂಧನವನ್ನು ಪ್ರಶ್ನಿಸಿದರು ಹಾಗೂ ಜಾಮೀನು ಕೊಟ್ಟು ಬಿಡುಗಡೆಯಾಗುತ್ತಿದ್ದರು, ವಾದ ಮಾಡಿ ಮೊಕದ್ದಮೆ ಗೆಲ್ಲುತ್ತಿದ್ದರು. ಮಹಾತ್ಮಾ ಗಾಂಧಿಯವರ ಹಾಗೆ ಕಾನೂನು ಮುರಿದ ತಮ್ಮ ತಪ್ಪನ್ನು ಒಪ್ಪಿ ತಮಗೆ ಅತಿ ಹೆಚ್ಚಿನ ಶಿಕ್ಷೆ ಕೊಡಬೇಕೆಂದು ಲೋಹಿಯಾ ಕೇಳಿದ್ದೇ ಇಲ್ಲ. ಲೋಹಿಯಾ ಅವರ ಮೊದಲ ಬಂಧನವಾಗಿದ್ದು 1939ರ ಮೇ 24ರಂದು. ಆ ಸಂದರ್ಭದಲ್ಲಿ ಅವರು ಜಾಮೀನು ಕೊಟ್ಟು ಬಿಡುಗಡೆ ಹೊಂದಿದ್ದರು. ಜಾಮೀನು ಕೇಳುವಾಗ ಕಾನೂನು ಸರಿಯಾಗಿದೆ ಎಂದೂ ಆದರೆ ಆ ಕಾನೂನಿನ ಪ್ರಕಾರ ಕೂಡ ತಾನು ತಪ್ಪು ಮಾಡಿಲ್ಲ ಎಂದೂ ಅಂದರೆ ತಾನು ಕಾನೂನನ್ನು ಉಲ್ಲಂಘಿಸಿಲ್ಲ ಎಂದೂ ಹೇಳಬೇಕಾಗುತ್ತದೆ. ನಂತರ ನ್ಯಾಯಾಲಯದಲ್ಲಿ ವಾದ ಮಾಡಿ ಅವರು 14, ಅಗಸ್ಟ 1939ರಂದು ಬಿಡುಗಡೆ ಹೊಂದಿದರು. ಇದು ಕೂಡ ಮಹಾತ್ಮಾ ಗಾಂಧೀಜಿಯವರ ವಿಧಾನಕ್ಕೆ ವಿರುದ್ಧವಾದುದೇ ಆಗಿತ್ತು.

4.5 1942ರ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಲೋಹಿಯಾ, ಜಯಪ್ರಕಾಶ ನಾರಾಯಣರಂತೆ ಭೂಗತರಾಗಿ ಹೋರಾಟ ನಡೆಸಿದ್ದರು. ಬಹಿರಂಗವಾಗಿ ಕಾನೂನನ್ನು ಉಲ್ಲಂಘಿಸಿ ಶಿಕ್ಷೆಯನ್ನು ಆಹ್ವಾನಿಸುತ್ತಿದ್ದ ಮಹಾತ್ಮಾ ಗಾಂಧಿಯವರಿಗೆ ಭೂಗತರಾಗಿ ಹೋರಾಡುವುದೂ ಒಂದು ರೀತಿಯ ಹಿಂಸೆಯೇ ಎಂಬ ಅಭಿಪ್ರಾಯವಿತ್ತು. ಆದರೆ ಜಯಪ್ರಕಾಶ ನಾರಾಯಣರು ಮಹಾತ್ಮಾ ಗಾಂಧಿಯವರ ಅಹಿಂಸಾತ್ಮಕ ವಿಧಾನಗಳನ್ನು ಒಪ್ಪಿರಲಿಲ್ಲ. ಆದುದರಿಂದ ಭೂಗತ ಹೋರಾಟವನ್ನು ನಡೆಸುವಲ್ಲಿ ಅವರಿಗೆ ಯಾವ ಮುಜುಗರವೂ ಇರಲಿಲ್ಲ. ಆದರೆ ಮಹಾತ್ಮಾ ಗಾಂಧಿಯವರ ಬಗ್ಗೆ ವಿಚಾರಾತೀತ ಭಕ್ತಿ ಇದ್ದ ಲೋಹಿಯಾ ಕೂಡ ಏಕೆ ಭೂಗತರಾಗಿ ಹೋರಾಟ ನಡೆಸಿದರು? ಅಂದರೆ ಅವರು ಕೂಡ ಗಾಂಧಿಯವರ ವಿಧಾನವನ್ನು ಒಪ್ಪುತ್ತಿರಲಿಲ್ಲ ಎಂದಲ್ಲವೇ?

4.6 ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಬಂಧಿತರಾದ ಲೋಹಿಯಾ ತಮ್ಮ ಬಂಧನವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ಹೇಬಿಯಸ್ ಕೋರ್ಪಸ್ (?) ಅರ್ಜಿ ಸಲ್ಲಿಸಿದರು ಎಂದು ಇಂದುಮತಿ ಕೇಳ್ಕರ್ ಹೇಳುತ್ತಾರೆ. ಹೇಬಿಯಸ್ ಕೋರ್ಪಸ್ ಅರ್ಜಿಗೂ ಚಳವಳಿಯಲ್ಲಿ ಬಂಧಿತರಾಗುವುದಕ್ಕೂ ಏನು ಸಂಬಂಧ ಎನ್ನುವುದನ್ನು ಲೋಹಿಯಾ ಅಥವಾ ಇಂದುಮತಿ ಅವರು ವಿವರಿಸಬೇಕಿದ್ದರೂ, ಅದೇ ಚಳವಳಿಯಲ್ಲಿ ಬಂಧಿತರಾಗಿದ್ದ ಮಹಾತ್ಮಾ ಗಾಂಧಿ ಯಾವುದೇ ಅರ್ಜಿಗಳನ್ನು ಸಲ್ಲಿಸಲಿಲ್ಲ. ಲೋಹಿಯಾ ಅವರು ಬರಿ ಅರ್ಜಿ ಸಲ್ಲಿಸಿದರಷ್ಟೇ ಅಲ್ಲ, ನಂತರ ಫೆಡರಲ್ ಕೋರ್ಟಿಗೆ ಮೇಲ್ಮನವಿಯನ್ನೂ ಸಲ್ಲಿಸಿ ಸೋತರು.

.. ..ಮತ್ತು ಅಪರಿಗ್ರಹದ ಬಗ್ಗೆ

5.1 ಗಾಂಧಿ ಎಂದೆಂದಿಗೂ ಸರಳ ಜೀವನ ನಡೆಸಿದವರು. ಅವರು ಬರಿ ಒಂದೇ ಪಂಚೆಯನ್ನು ಧರಿಸುತ್ತಿದ್ದರಷ್ಟೇ ಅಲ್ಲ, ಅವರು ಯಾವಾಗಲೂ ರೈಲಿನಲ್ಲಿ ಮೂರನೆಯ ದರ್ಜೆಯಲ್ಲಿಯೇ ಪ್ರಯಾಣ ಮಾಡುತ್ತಿದ್ದರು. ಅವರು ತಮ್ಮ ಶೌಚಾಲಯವನ್ನು ತಾವೇ ಸ್ವಚ್ಛಗೊಳಿಸುತ್ತಿದ್ದರಷ್ಟೇ ಅಲ್ಲ, ಹಲವಾರು ಬಾರಿ ಬೇರೆಯವರ ಶೌಚಾಲಯಗಳನ್ನೂ ಸ್ವಚ್ಛಗೊಳಿಸುತ್ತಿದ್ದರು. ಆದುದರಿಂದಲೇ ಅವರು ಒಂದು ಸಲ ಒಬ್ಬ ಬ್ಯಾರಿಸ್ಟರನಿಗೂ ಒಬ್ಬ ಭಂಗಿಗೂ ಸಮನಾದ ವೇತನವಿರಬೇಕು ಎಂದು ಹೇಳಿದ್ದರು. ಆದರೆ 1946ರಲ್ಲಿ ಲೋಹಿಯಾ ಗೋವಾದಲ್ಲಿ ಬಂಧನದಲ್ಲಿದ್ದಾಗ ಒಂದು ಸಲ ಅವರನ್ನು ಶೌಚಾಲಯಕ್ಕೆ ಕರೆದೊಯ್ಯಲಾಯಿತಂತೆ. ಅದು ಸೈನಿಕರು ಶೌಚ ಮಾಡುವ ಸ್ಥಳವಾಗಿತ್ತಂತೆ. ಆದುದರಿಂದ ಅಲ್ಲಿ ಶುದ್ಧರಾಗಲು ನಿರಾಕರಿಸಿ ಲೋಹಿಯಾ, ತಮಗೆ ಅದಕ್ಕಿಂತ ಒಳ್ಳೆಯ ಸ್ಥಳದ ವ್ಯವಸ್ಥೆಯಾಗಬೇಕು ಎಂದು ಕೇಳಿಕೊಂಡರಂತೆ. ಆಗ ಅಧಿಕಾರಿಗಳು ಬಳಸುತ್ತಿದ್ದ ಶೌಚಾಲಯಕ್ಕೆ ಲೋಹಿಯಾ ಅವರನ್ನು ಕರೆದೊಯ್ಯಲಾಯಿತಂತೆ. ಬಹುಶಃ ಲೋಹಿಯಾರ ಸ್ಥಾನದಲ್ಲಿ ಗಾಂಧಿ ಇದ್ದಿದ್ದರೆ ತಮಗೂ ಇತರೆ ಸೈನಿಕರಿಗೂ ಅನುಕೂಲವಾಗುವಂತೆ ಅವರು ಸೈನಿಕರ ಶೌಚಾಲಯವನ್ನೇ ಸ್ವಚ್ಛಗೊಳಿಸಿ ಬಳಸುತ್ತಿದ್ದರು ಎಂದು ತೋರುತ್ತದೆ. ಮಹಾತ್ಮಾ ಯಾವಾಗಲೂ ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದರೆ, ಲೋಹಿಯಾ ಅವರು ಹಲವಾರು ಬಾರಿ ವಿಮಾನಗಳಲ್ಲೂ, ಹಲವು ಬಾರಿಯಾದರೂ ರೈಲಿನ ವಾತಾನುಕೂಲಿತ ದರ್ಜೆಯಲ್ಲಿಯೂ ಪ್ರಯಾಣ ಮಾಡುತ್ತಿದ್ದರು.

5.2 ನಮ್ಮನ್ನು ಬಡವರನ್ನಾಗಿ ಇಡಲು ದೇಶ ಬಹಳ ಹಣ ಖರ್ಚು ಮಾಡಬೇಕಾಗಿ ಬರುತ್ತಿದೆ ಎಂದು ಮಹಾತ್ಮಾ ಗಾಂಧಿಯವರಿಗೆ ಒಂದು ಸಲ ಸರೋಜಿನಿ ನಾಯಡು ಹೇಳಿದ್ದರಂತೆ. ಹಾಗೆಯೇ ಲೋಹಿಯಾ ಅವರು ತಮ್ಮ ಶಸ್ತ್ರಚಿಕಿತ್ಸೆಗೆಂದು ದೆಹಲಿಯ ವೆಲಿಂಗ್ಡನ್ ಆಸ್ಪತ್ರೆ ಸೇರಿದಾಗ, ಎಂಟು ದೇಶಗಳ 16 ಡಾಕ್ಟರುಗಳು ಅವರ ಚಿಕಿತ್ಸೆಯನ್ನು ಕೈಗೊಂಡಿದ್ದರಂತೆ. ಇಂತಹ ಬಡತನವನ್ನು ಯಾರಾದರೂ ಬಯಸಿಯಾರು.

.. ..ಮಹಾತ್ಮರಿಗಿಂತ ಮುಂದೆ (?)

6.1 ಮಹಾತ್ಮಾ ಗಾಂಧಿಯವರಿಗೆ ಸತ್ಯಕ್ಕಾಗಿ ತಾವು ನಡೆಸುತ್ತಿದ್ದ ಹೋರಾಟದಲ್ಲಿ ಸತ್ಯಾಗ್ರಹವು ಕೊನೆಯ ಸಾಧನವಾಗಿತ್ತು. ಸತ್ಯಾಗ್ರಹವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಅವರು ಬೇರೆ ಎಲ್ಲಾ ವಿಧಾನಗಳನ್ನೂ ಬಳಸುತ್ತಿದ್ದರು. ನಂತರ ಸರಿಯಾದ ಸಿದ್ಧತೆಗಳನ್ನು ಮಾಡಿಕೊಂಡೇ



With Best Compliments From

fs FAVOURITE SHOP

CORPORATE OFFICE
FS FAVOURITE SHOP
14, Bachammal Road, Cox Town,
Bangalore-560005
Ph:+ 918040858888 /22956307,
Fax:22956311

'ಜಾಗತಿಕ ವೇದಿಕೆಯ ಮೇಲೆ ಅವರು (ಮಹಾತ್ಮಾ ಗಾಂಧಿ) ಭಾರತವನ್ನು ಬಲಿ ಕೊಟ್ಟರು ಎಂದು ನನಗೆ ಹಲವು ಬಾರಿ ಅನ್ನಿಸುತ್ತದೆ.. ..ತಮ್ಮ ಅಹಿಂಸೆ ಹಾಗೂ ನಾಗರಿಕ ಅಸಹಕಾರಗಳ ತತ್ವಗಳನ್ನು ಬೆಂಬತ್ತುವುದರಲ್ಲಿ ಅವರು ತಾತ್ಕಾಲಿಕವಾಗಿ ಭಾರತಕ್ಕೆ ಹಾನಿಯಾಗುವಂತಹ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ' ಎಂದೂ ಲೋಹಿಯಾ ಹೇಳುತ್ತಾರೆ.

ತ್ಯಾಗ್ರಹವನ್ನು ಪ್ರಾರಂಭಿಸುತ್ತಿದ್ದರು. ಏಸಿಯಾಟಿಕ್ ಜಿಸ್ಟ್ರೇಶನ್ ಕಾನೂನಿನ ವಿರುದ್ಧ ತಮ್ಮ ಸತ್ಯಾಗ್ರಹವನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಅವರು ಲಂಡನ್ನಿಗೆ ಹೋಗಿ ಅಲ್ಲಿ ಬ್ರಿಟಿಷ್ ಸರಕಾರದಲ್ಲಿ ವಸಾಹತುಗಳ ಮಂತ್ರಿಗಳಾಗಿದ್ದ ಲಾರ್ಡ್ ಎಲ್ಗಿನ್ ಅವರನ್ನೂ, ಭಾರತದ ಮಂತ್ರಿಗಳಾಗಿದ್ದ ಜಾನ್ ಮೋರ್ಲೆಯವರನ್ನೂ, ಬ್ರಿಟಿಷ್ ಸಂಸತ್ತಿನ ಸದಸ್ಯರನ್ನೂ ಭೇಟಿಯಾಗಿ ಆ ಕಾನೂನನ್ನು ಜಾರಿಗೊಳಿಸಬಾರದು ಎಂದು ಒತ್ತಾಯ ಮಾಡಿದ್ದರು.

6.2 ಆದರೆ ಲೋಹಿಯಾ ಅವರಿಗೆ ಹೋರಾಟವೇ ಮೊದಲ ಅಸ್ತ್ರವಾಗಿರುತ್ತಿತ್ತು. ಬೇರೆ ವಿಧಾನಗಳನ್ನು ಬಳಸುವುದಕ್ಕಿಂತ ಮೊದಲೇ ಅವರು ಹೋರಾಟದಲ್ಲಿ ಧುಮುಕುತ್ತಿದ್ದರು. ಒಂದು ಬಾರಿ ಆರು ತಿಂಗಳ ಕಾಲ ಸಿದ್ಧತೆಗಳನ್ನು ಮಾಡಿಕೊಂಡ ನಂತರ ಹೋರಾಟವನ್ನು ಪ್ರಾರಂಭಿಸಬೇಕೆಂದು ಗೋವೆಯ ಹಲವು ಮುಖಂಡರು ಲೋಹಿಯಾ ಅವರನ್ನು ಕೇಳಿಕೊಂಡಾಗ ಲೋಹಿಯಾ ಅವರು, ನಾನು ಈಗಲೇ ಹೋರಾಟ ಪ್ರಾರಂಭಿಸುತ್ತೇನೆ, ನೀವು ಆರು ತಿಂಗಳ ನಂತರ ಬಂದು ಸೇರಿ ಎಂದಿದ್ದರಂತೆ. ಆದರೆ ಲೋಹಿಯಾ ಅವರೇ ತಮ್ಮ ಸಮಾಜವಾದಿ ಪಕ್ಷದ ಸ್ಥಾಪನಾ ಸಮ್ಮೇಳನದಲ್ಲಿ ಅಂಗೀಕರಿಸಲಾದ ನೀತಿ ನಿರೂಪಣೆಯಲ್ಲಿ "ಪ್ರಾಮಾಣಿಕ ಬುದ್ಧಿಕ ಕಾರ್ಯದ ಮೂಲಕ ಹಾಗೂ ಭಾವನಾತ್ಮಕ ಮುತಿಸುವಿಕೊಳ್ಳುವಿಕೆಯ ಮೂಲಕ ಜನಸಾಮಾನ್ಯರನ್ನು ಸಿದ್ಧಪಡಿಸದೇ ಅವರನ್ನು ಉದ್ರೇಕಿತಗೊಳಿಸುವುದು ಬರಿ ಮೇಲೆ ಮೇಲಿನ ಚಟುವಟಿಕೆಯಲ್ಲಿ ಪರ್ಯವಸಾನ ಹೊಂದುತ್ತದೆಯೇ ಹೊರತು ಒಂದಿಷ್ಟೂ ಮೂಲಭೂತ ಬದಲಾವಣೆಯನ್ನು ತರುವುದಿಲ್ಲ" ಎಂದು ಹೇಳಿದ್ದರು.

6.3 ತಮ್ಮ ಗೋವೆಯ ಹೋರಾಟದ ಬಗ್ಗೆ ಎಂದಿನಂತೆ ಲೋಹಿಯಾ ಯಾರೊಂದಿಗೂ, ಮಹಾತ್ಮಾ ಗಾಂಧಿಯವರೊಂದಿಗೂ, ಚರ್ಚಿಸಲಿಲ್ಲ. ಆದರೂ ಕೂಡ, ಮಹಾತ್ಮಾ ಗಾಂಧಿ ಗೋವೆಯ ಗವರ್ನರ್ ಜನರಲ್‌ಗೆ ಒಂದು ಪತ್ರ ಬರೆದು ಲೋಹಿಯಾ ಅವರನ್ನು ಬಿಟ್ಟುಬಿಡಬೇಕೆಂದು ಒತ್ತಾಯ ಪಡಿಸಿದರು. ಇದನ್ನೇ ಲೋಹಿಯಾ ಅನುಯಾಯಿಗಳು, ಮಹಾತ್ಮಾ ಗಾಂಧಿಯವರು ಲೋಹಿಯಾ ಅವರ ಗೋವಾ ಹೋರಾಟವನ್ನು ಬೆಂಬಲಿಸಿದರು ಎಂದು ಅರ್ಥೈಸುತ್ತಾರೆ. ಆದರೆ ಮಹಾತ್ಮಾ ಗಾಂಧಿ ಲೋಹಿಯಾ ಅವರ ಹೋರಾಟವನ್ನು ಗೋವೆಯ ವಿಮೋಚನೆಗಾಗಿ ನಡೆಸಿದ ಹೋರಾಟ ಎಂದು ಪರಿಗಣಿಸದೇ, ಅಲ್ಲಿ ನಾಗರಿಕ ಹಕ್ಕುಗಳಿಗಾಗಿ ನಡೆದ ಹೋರಾಟ ಮಾತ್ರ ಎಂದು ಪರಿಗಣಿಸಿದ್ದರು. ಆದುದರಿಂದ ನಂತರ ಮಹಾತ್ಮಾ ಗಾಂಧಿಯವರ ಸಲಹೆಯಂತೆ ಲೋಹಿಯಾ ಗೋವೆಗೆ ಮರಳಿ ಹೋಗಲಿಲ್ಲ ಎಂದು ನಾನಕಚಂದ ಮೆಹ್ರೊತ್ರಾ ದಾಖಲಿಸುತ್ತಾರೆ. ಗೋವೆಯ ಬಗ್ಗೆ ತಮಗಿದ್ದ ಯೋಜನೆಗಳ ಬಗ್ಗೆ ಗಾಂಧಿಯವರೊಂದಿಗೆ ಚರ್ಚಿಸದೇ ಇದ್ದರೂ ಕೂಡ, ಗಾಂಧಿಯವರು ತಕರಾರಿನೊಂದಿಗೆ ಹಾಗೂ ನೋವಿನೊಂದಿಗೆ ತಮ್ಮ ಕರ್ತವ್ಯವನ್ನು ಮಾಡಿದುದಾಗಿ ಲೋಹಿಯಾ ಅವರಿಗೆ ಹೇಳಿದ್ದರೆಂದು ಲೋಹಿಯಾ ಅವರೇ ಒಂದು ಕಡೆ ದಾಖಲಿಸುತ್ತಾರೆ.

6.4 ಆದರೆ ಮಹಾತ್ಮಾ ಗಾಂಧೀಜಿಯವರ ವಿಚಾರಗಳನ್ನು ಕದ್ದು ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವಲ್ಲಿ ಲೋಹಿಯಾ ಹಿಂದೆ ಬೀಳಲಿಲ್ಲ. 1944ರಲ್ಲಿ ಮಹಾತ್ಮಾ ಗಾಂಧಿಜಿಯವರು ಮೊಹಮ್ಮದ ಅಲಿ ಜಿನ್ನಾ ಅವರೊಂದಿಗೆ ನಡೆಸಿದ ಮಾತುಕತೆಗಳಲ್ಲಿ ಭಾರತ ಹಾಗೂ ಪಾಕಿಸ್ತಾನಗಳು ಸೇರಿ ಒಂದೇ ಒಕ್ಕೂಟವನ್ನು ಸ್ಥಾಪಿಸಬೇಕು ಎನ್ನುವ ಪರಿಕಲ್ಪನೆಯನ್ನು ಮುಂದಿಟ್ಟಿದ್ದರು. ಮುಸಲ್ಮಾರು ಬಹುಸಂಖ್ಯೆಯಲ್ಲಿರುವ ಬಲೂಚಿಸ್ತಾನ, ಸಿಂಧ, ಉತ್ತರ-ಪಶ್ಚಿಮ ಗಡಿನಾಡುಗಳಲ್ಲಿ ಹಾಗೂ ಮುಸಲ್ಮಾರು ಬಹುಸಂಖ್ಯೆಯಲ್ಲಿರುವ ಬಂಗಾಳ, ಆಸ್ಸಾಮ್ ಮತ್ತು ಪಂಜಾಬಗಳ ಪ್ರದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹಿಸಬೇಕೆಂದೂ, ಅಲ್ಲಿಯ ಜನರು ಭಾರತದ ಒಕ್ಕೂಟದಿಂದ ಹೊರಹೋಗಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಭಾರತ ಸ್ವತಂತ್ರವಾದ ನಂತರ ಶೀಘ್ರದಲ್ಲಿಯೇ ಅಂತಹ ಪ್ರದೇಶಗಳನ್ನು ಒಟ್ಟುಗೂಡಿಸಿ ಒಂದು ಪ್ರತ್ಯೇಕ ರಾಷ್ಟ್ರವನ್ನು ಮಾಡಬಹುದೆಂದೂ, ಆದರೆ ಇವೆರಡೂ ರಾಷ್ಟ್ರಗಳು ಸೇರಿ ವಿದೇಶಾಂಗ ನೀತಿ, ರಕ್ಷಣೆ, ಆಂತರಿಕ ಸಂಪರ್ಕ ಹಾಗೂ ವ್ಯಾಪಾರಗಳಿಗೆ ಸಂಬಂಧ ಪಟ್ಟಂತೆ ಒಂದು ಒಕ್ಕೂಟವನ್ನು ರಚಿಸಿಕೊಳ್ಳಬೇಕೆಂದೂ ಸಲಹೆ ಮಾಡಿದ್ದರು. ನಂತರ ಲೋಹಿಯಾ ಅವರು ಭಾರತ ಹಾಗೂ ಪಾಕಿಸ್ತಾನಗಳು ಸೇರಿ ಒಂದೇ ಒಕ್ಕೂಟವನ್ನು ರಚಿಸಿಕೊಳ್ಳಬೇಕು ಎಂದು ಹೇಳಿದರು. ಆದರೆ ಈ ಮೊದಲು ಮಹಾತ್ಮಾ ಗಾಂಧೀಜಿಯವರು ಈ ಸಲಹೆಯನ್ನು ನೀಡಿದ್ದರು ಎಂದು ಹೇಳುವ ಸೌಜನ್ಯವನ್ನು ತೋರಿಸದೇ, ಆ ಪರಿಕಲ್ಪನೆ ತಮ್ಮದೇ ಒರಿಜಿನಲ್ ಪರಿಕಲ್ಪನೆ ಎನ್ನುವಂತೆ ಹೇಳಿದರು. ಇಂದು ಅವರ ಅನುಯಾಯಿಗಳೆಲ್ಲ ಭಾರತ-ಪಾಕಿಸ್ತಾನ ಒಕ್ಕೂಟದ ಪರಿಕಲ್ಪನೆ ಲೋಹಿಯಾ ಅವರದ್ದೇ ಒರಿಜಿನಲ್ ಪರಿಕಲ್ಪನೆ ಎಂದು ಬೀಗುತ್ತಾರೆ.

6.5 2, ಮಾರ್ಚ್ 1930ರಂದು ಮಹಾತ್ಮಾ ಗಾಂಧಿಯವರು ಅಂದಿನ ವೈಸರಾಯ್ ಅವರಿಗೆ ಒಂದು ಪತ್ರ ಬರೆದಿದ್ದರು. ಭೂಗಂದಾಯ ಹಾಗೂ ಉಪ್ಪಿನ ಮೇಲೆ ಹಾಕಿದ ಕರವನ್ನು ಉದ್ಧರಿಸಿ ಆ ಪತ್ರದಲ್ಲಿ ಮಹಾತ್ಮಾ ಗಾಂಧೀ ಹೀಗೆ ಬರೆದಿದ್ದರು: 'ಮೇಲೆ ಉದಾಹರಿಸಿದ ಅಸಮಾನತೆಗಳನ್ನು ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ವೆಚ್ಚದ ಒಂದು ವಿದೇಶಿ ಆಡಳಿತವನ್ನು ಉಳಿಸಿಕೊಂಡು ಬರಲು ಮುಂದುವರೆಸಿಕೊಂಡು ಬರಲಾಗುತ್ತಿದೆ. ಉದಾಹರಣೆಗೆ ನಿಮ್ಮ ಸಂಬಳವನ್ನೇ ತೆಗೆದುಕೊಳ್ಳಿ. ಇನ್ನಿತರ ಹಲವಾರು ಅಪರೋಕ್ಷ ಅನುಕೂಲಗಳನ್ನು ಹೊರತು ಪಡಿಸಿ ನಿಮ್ಮ ಸಂಬಳ ತಿಂಗಳಿಗೆ ರೂ. 21,000 (1750 ಪೌಂಡ್‌ಗಳು) ಇರುತ್ತದೆ. ನೀವು ದಿನವೊಂದಕ್ಕೆ ರೂ. 700 ಕ್ಕಿಂತ ಹೆಚ್ಚು ಪಡೆಯುತ್ತಿದ್ದೀರಿ. ಇದಕ್ಕೆ ಪ್ರತಿಯಾಗಿ ಭಾರತದ ದಿನದ ಸರಾಸರಿ ಆದಾಯ ಎರಡು ಆಣೆಗಿಂತ (ಎರಡು ಪೆನ್ಸ) ಕಡಿಮೆ ಇರುತ್ತದೆ. ಈ ರೀತಿ ನೀವು ಭಾರತದ ಸರಾಸರಿ ಆದಾಯಕ್ಕಿಂತ 5000 ಪಟ್ಟಿಗಿಂತ ಹೆಚ್ಚು ಪಡೆಯುತ್ತಿದ್ದೀರಿ. ಬ್ರಿಟನ್ನಿನ ಪ್ರಧಾನ ಮಂತ್ರಿಗಳು ಬ್ರಿಟನ್ನಿನ ಸರಾಸರಿ ಆದಾಯಕ್ಕಿಂತ ಬರಿ 90 ಪಟ್ಟು ಮಾತ್ರ ಹೆಚ್ಚಿಗೆ ಪಡೆಯುತ್ತಿದ್ದಾರೆ. ಈ ವಿಷಯಗಳ ಬಗ್ಗೆ ನೀವು ಯೋಚಿಸಬೇಕೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ' ಎಂದು ಬರೆದಿದ್ದರು.

6.6 ಲೋಕಸಭೆಯಲ್ಲಿ ಭಾರತದ ಸಾಮಾನ್ಯ ಜನರ ಆದಾಯ ಹಾಗೂ ಪ್ರಧಾನ ಮಂತ್ರಿಗಳ ಆದಾಯಗಳನ್ನು ಹೋಲಿಸಿ ಒಂದು ಸಲ ಲೋಹಿಯಾ ಭಾಷಣ ಮಾಡಿದರು. ಇದೊಂದು ಅತ್ಯಂತ ಮಹತ್ವದ ಒರಿಜಿನಲ್ ಚಿಂತನೆ ಎಂದು ಲೋಹಿಯಾವಾದಿಗಳು ಹೇಳುತ್ತಾರೆ. ಆದರೆ ತಮ್ಮ ಭಾಷಣದಲ್ಲಿ ಲೋಹಿಯಾ ಒಂದು ಬಾರಿಯೂ ಮಹಾತ್ಮಾ ಗಾಂಧಿಯವರು ಮಾಡಿದ ಹೋಲಿಕೆಯನ್ನು ಉಲ್ಲೇಖಿಸಲಿಲ್ಲ. ಬಹುಶಃ ಅವರಿಗೆ ಅದೂ ಗೊತ್ತೂ ಇರಲಿಲ್ಲ ಎಂದು ತೋರುತ್ತದೆ. ಆದುದರಿಂದಲೇ ತತ್ವಶಾಸ್ತ್ರದ ಇತಿಹಾಸವನ್ನು ಅರಿಯದವರು ಅದನ್ನು ಪುನರಾವರ್ತಿಸುತ್ತಾರೆ ಎಂದು ತತ್ವಚಿಂತಕ ಜಾರ್ಜ ಸಾಂತಾಯಾನಾ ಹೇಳುವಂತೆ ಸಮಾಜವಾದಿ ಇತಿಹಾಸವನ್ನು ಅರಿಯದವರು ಅದನ್ನು ಪುನರಾವರ್ತಿಸುತ್ತಾರೆ ಎನ್ನುತ್ತಾರೆ ಅಶೋಕ ಮೆಹತಾ. ಇಂತಹ ಪುನರಾವರ್ತನೆ ತಪ್ಪಲ್ಲದ್ದಿದ್ದರೂ ಅದನ್ನೇ ಒರಿಜಿನಲ್ ವಿಚಾರ ಎಂದು ಹೊಗಳುವುದು ಇತಿಹಾಸದ ಬಗ್ಗೆ ಇರುವ ಅಜ್ಞಾನದ ಸಂಕೇತವೇ ಆಗುತ್ತದೆ.

6.7 ಗಾಂಧೀವಾದದ ಬಗ್ಗೆ ಲೋಹಿಯಾ ಅವರ ಅಭಿಪ್ರಾಯವೇನಿತ್ತು? ಮಹಾತ್ಮಾ ಗಾಂಧಿಜಿಯವರ ಹತ್ಯೆಯಾದ ಐದು ವರ್ಷಗಳ ನಂತರ ಕೂಡ ಲೋಹಿಯಾ ಅವರು ಮಹಾತ್ಮಾ ಗಾಂಧಿಯವರ "ಜೀವನ ಕ್ರಮದಿಂದ ಒಂದು ಸಿದ್ಧಾಂತವನ್ನು ರೂಪಿಸಲು ಇನ್ನೂ ಯತ್ನಗಳನ್ನು ಮಾಡಬಹುದಾಗಿದೆ. 'ಗಾಂಧೀವಾದ' ಅಥವಾ 'ಗಾಂಧೀವಾದಿ' ಮುಂತಾದ ಪದಗಳು ಇನ್ನೂ ನಮ್ಮ



Institutions run by

Venkatesha Education Society

MVJ Medical College and Research Hospital

(Recognized by : MCI and Govt. of India)
30th KM Milestone, National Highway 4, Hoskote,
Bangalore - 562 114. Tel.: 080 - 27931473



MVJ College of Engineering

(Affi VTU, Belgaum, Appr. by ACCTE, New Delhi and
Rec. by Govt. of Karnataka)
Channasandra, Near ITPL, Bangalore - 560067
Tele Fax : 080 - 28452443

MVJ Polytechnic (Estd. 1985), (Recognized by DTE, Govt. of Karnataka)
Near Whitefield, Bangalore - 560 067. Tel : 080 - 2845 1671

MVJ College of Education (Estd. 1980), (Recognized by NCTE)
Marathahalli, Bangalore - 560 037. Tel : 080 - 2540 0295

MVJ Institute of Nursing (Estd. 1993), (Recognized by INC & KNC)
Hoskote, Bangalore - 562 114. Tel : 080 - 2793 1644

MVJ International School (Estd. 2010)
Marathahalli, Bangalore - 560 037. Tel : 080 - 2540 0295

GROUP OF INSTITUTIONS
MVJ
VES
Engineered for excellence in education

Venkatesha Education Society

Regd. Office : # 19, Hutchins Road Cross, Ashoka Road, St. Thomas Town, Bangalore - 560 084.
Phone : 080 25805606, 25805607 Fax : 080 25805532
Email : drmohan_mvj@rediffmail.com
Website : www.mvjeducation.com

M.J. Ramani, M.Com., M.B.A.,
President

Dr. M.J. Mohan, MBBS, MS
Secretary and Correspondent

ದೇಶದಲ್ಲಿ ಆಕರ್ಷಕ ಕಲ್ಪನೆಗಳಾಗಿವೆ. ಏನೇ ಇರಲಿ, ಅಂಥದೊಂದು ಕಾರ್ಯಪದ್ಧತಿ ಅಥವಾ ಆಡಳಿತ ಸಂಪ್ರದಾಯ ಬರಲು ಕೆಲ ಕಾಲ ಹಿಡಿಯಬಹುದು, ಪ್ರಸ್ತುತ ಅಂಥದೊಂದು ಕಾಣುತ್ತಿಲ್ಲ" ಎಂದು ಹೇಳುವ ಮೂಲಕ ಗಾಂಧಿವಾದದ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಜೊತೆಗೆ ಸಮಾಜವಾದ ಎನ್ನುವ ಸಿದ್ಧಾಂತ ಈಗಾಗಲೇ ಇರುವುದರಿಂದ "ಗಾಂಧೀವಾದ ಎಂಬ ಹೊಸ ವಾದವನ್ನು ರೂಪಿಸುವುದರ ಬದಲು, ಗಾಂಧೀಜಿಯವರ ಜೀವನ ಹಾಗೂ ಕಾರ್ಯಕ್ರಮದ ಅಂತಸ್ಸತ್ವವು ಜಾಗತಿಕ ರಂಗದಲ್ಲಿ ಈಗಾಗಲೇ ಇರುವ ಪದ್ಧತಿಗಳೊಳಗೆ ಒಳಗೊಳ್ಳುವಂತೆ ಮಾಡುವುದೇ ಒಳ್ಳೆಯದು" ಎನ್ನುತ್ತಾರೆ. "ಗಾಂಧೀವಾದವೆಂಬ ಒಂದು ಪ್ರತ್ಯೇಕ ಪಂಥದ ನಿರ್ಮಾಣ ಪ್ರಪಂಚಕ್ಕೆ ಅಷ್ಟೊಂದು ಉಪಯುಕ್ತ ಎಂದು ನಾನು ನಂಬುವುದಿಲ್ಲ" ಎಂದೂ ಹೇಳುವ ಮೂಲಕ ಲೋಹಿಯಾ ಗಾಂಧೀಜಿಯವರಿಗೆ ಹಾಗೂ ಗಾಂಧೀವಾದಗಳಿಗೆ ತಮ್ಮ ಗೌರವವನ್ನು ಅರ್ಪಿಸುತ್ತಾರೆ. "ಒಬ್ಬ ವ್ಯಕ್ತಿ ಒಳ್ಳೆಯವನಾಗಿರುವ ಸಾಧ್ಯತೆ ಇರುವ ವಾತಾವರಣವನ್ನು ಸೃಷ್ಟಿಸಿದರೆ, ಅದರೊಡನೆ ಅಸಹಕಾರ ಚಳವಳಿಯಂತಹ ಅಸೀಮ ಆಯುಧವನ್ನು ಸಮಾಜವಾದದೊಡನೆ ಸಂಯೋಗಗೊಳಿಸಿದರೆ, ಇಡೀ ಮಾನವಕೋಟಿಗೆ ಮಹದುಪಕಾರವಾದೀತು" ಎನ್ನುತ್ತಾರೆ ಲೋಹಿಯಾ.

6.8 ಎರಡನೆಯ ಮಹಾಯುದ್ಧದಲ್ಲಿ ಲಂಡನ್ನಿನ ವೆಸ್ಟಮಿನ್ಸ್ಟರ್ ಎಬ್ಬೆಗೆ ಬಾಂಬುಗಳಿಂದಾಗಿ ಹಾನಿಯಾದಾಗ ಮಹಾತ್ಮಾ ಗಾಂಧೀ ದು:ಖ ವ್ಯಕ್ತಪಡಿಸಿದ್ದರಂತೆ. ಇದನ್ನು ಕೇಳಿ ಲೋಹಿಯಾ ಅವರಿಗೆ ಮಹಾತ್ಮಾ ಗಾಂಧಿಯವರ ಮೇಲೆ ಬಹಳ ಕೋಪ ಬಂದಿತ್ತಂತೆ. ಯಾಕೆಂದರೆ ಲೋಹಿಯಾ ಅವರ ಪ್ರಕಾರ ವೆಸ್ಟಮಿನ್ಸ್ಟರ್ ಎಬ್ಬೆ ಬ್ರಿಟಿಷರ ಪ್ರತಿನಿಧಿಯಾಗಿತ್ತು. 'ಇಂಥ ಹೇಳಿಕೆಗಳು (ಗಾಂಧೀ) ಅವರನ್ನು ವಿಶ್ವನಾಯಕತ್ವದ ಹಂತದಿಂದ ಕೆಳಗಿಳಿಸಿವೆ' ಎಂದು ಲೋಹಿಯಾ ವಿಶ್ವದಲ್ಲಿ ಮಹಾತ್ಮಾ ಗಾಂಧಿಯವರ ಹಂತವನ್ನು ನಿರ್ಧರಿಸಿ ಬಿಡುತ್ತಾರೆ. 'ಜಾಗತಿಕ ವೇದಿಕೆಯ ಮೇಲೆ ಅವರು (ಮಹಾತ್ಮಾ ಗಾಂಧಿ) ಭಾರತವನ್ನು ಬಲಿ ಕೊಟ್ಟರು ಎಂದು ನನಗೆ ಹಲವು ಬಾರಿ ಅನ್ನಿಸುತ್ತದೆ.. ..ತಮ್ಮ ಅಹಿಂಸೆ ಹಾಗೂ ನಾಗರಿಕ ಅಸಹಕಾರಗಳ ತತ್ವಗಳನ್ನು ಬೆಂಬತ್ತುವುದರಲ್ಲಿ ಅವರು ತಾತ್ಕಾಲಿಕವಾಗಿ ಭಾರತಕ್ಕೆ ಹಾನಿಯಾಗುವಂತಹ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ' ಎಂದೂ ಲೋಹಿಯಾ ಹೇಳುತ್ತಾರೆ. ತಮಗೆ ವಿಚಾರಾತೀತ ಭಕ್ತಿ ಇದ್ದ ಮಹಾತ್ಮಾ ಗಾಂಧಿಯವರಿಗೆ ಹಾಗೂ ಅವರ ಅಹಿಂಸೆಯ ಸಿದ್ಧಾಂತಕ್ಕೆ ಇದು ಲೋಹಿಯಾ ಅವರು ನೀಡಿದ ಗೌರವವಾಗಿತ್ತು.

6.9 1962ರಲ್ಲಿ ನಾಗಾರ್ಜುನಸಾಗರದಲ್ಲಿ ನಡೆದ ಕಾರ್ಯಕರ್ತರ ಶಿಬಿರದಲ್ಲಿ 'ನೀವು ಯಾವುದೋ ಭಂಗಿ ಅಥವಾ ಅಹೀರರ ಮನೆಯಲ್ಲಿ ಹುಟ್ಟಿದ್ದರೆ ಚೆನ್ನಾಗಿತ್ತು ಎಂದು ಹೇಳಿದ್ದಿರಲ್ಲ' ಎಂಬ ಪ್ರಶ್ನೆಗೆ ಉತ್ತರವಾಗಿ ಲೋಹಿಯಾ "ವಾಸ್ತವವಾಗಿ ಆ ವಾಕ್ಯದ ತಾತ್ಪರ್ಯ ಏನಾಗಿತ್ತೆಂದರೆ ನಮಗೆ ಯಾವುದೇ ತೊಂದರೆ ಇಲ್ಲದೇ ಒಂದು ದೊಡ್ಡ ಸಮೂಹ ದೊರಕುತ್ತಿತ್ತು ಹಾಗೂ ಒಂದು ಸಿದ್ಧವಾದ ಹಳೆಯ ಸೈನ್ಯ ದೊರಕುತ್ತಿತ್ತು" ಎಂದು ಹೇಳುತ್ತಾರೆ.[1] ಅಂದರೆ ಲೋಹಿಯಾ ಭಂಗಿ ಅಥವಾ ಮಹಾರರ ಪರಿವಾರದಲ್ಲಿ ಹುಟ್ಟ ಬಯಸಿದ್ದಕ್ಕೆ ಕಾರಣ ಆ ಜಾತಿಯ ಜನರ ನೋವನ್ನು ತಾವು ಅನುಭವಿಸಬೇಕು ಎನ್ನುವುದಾಗಿರಲಿಲ್ಲ, ಅದರಿಂದ ರಾಜಕೀಯ ಲಾಭ ಪಡೆಯುವುದೇ ಆಗಿತ್ತು. ಮಹಾತ್ಮಾ ಗಾಂಧಿ ಕೂಡ ಒಬ್ಬ ಅಸ್ಪೃಷ್ಯನಿಗೆ ಹುಟ್ಟಬಯಸುವುದಾಗಿ ಹೇಳಿದ್ದರು. ಅವರು ಈ ಬಗ್ಗೆ ಹೀಗೆ ಹೇಳಿದ್ದರು: "ನಾನು ಮತ್ತೇ ಹುಟ್ಟ ಬಯಸುವುದಿಲ್ಲ. ಆದರೆ ನಾನು ಮತ್ತೇ ಹುಟ್ಟಲೇ ಬೇಕು ಎನ್ನುವುದಾದರೆ, ನಾನು ಒಬ್ಬ ಅಸ್ಪೃಷ್ಯನಾಗಿ ಹುಟ್ಟಬಯಸುತ್ತೇನೆ, ಅವರ ದುಃಖವನ್ನು, ಕಷ್ಟಗಳನ್ನು ಹಾಗೂ ಅವರ ಮೇಲೆ ಹೊರಿಸಲಾಗುವ ಅವಮಾನಗಳನ್ನು ಅನುಭವಿಸಲು, ನನ್ನನ್ನು ಹಾಗೂ ಅವರನ್ನು ಈ ಅಸಹ್ಯ ಸ್ಥಿತಿಯಿಂದ ಪಾರುಮಾಡಲು" ಎಂದಿದ್ದರು ಎಂದು ಲೂಯಿ ಫಿಶರ್ ಹೇಳುತ್ತಾರೆ.

6.10 ಈ ಎಲ್ಲ ಹಿನ್ನೆಲೆಯಲ್ಲಿ ನಾವು ಲೋಹಿಯಾ ಅವರನ್ನು ಗಾಂಧಿವಾದಿ ಸಮಾಜವಾದಿ ಎಂದು ಕರೆಯಬಹುದೇ? ಬಹುಶಃ ತಮ್ಮನ್ನು ಗಾಂಧಿಯವರ ಕುಜಾತ ವಾರಸುದಾರ ಎಂದು ಲೋಹಿಯಾ ಸರಿಯಾಗಿಯೇ ಕರೆದುಕೊಂಡಿದ್ದರು ಎಂದು ತೋರುತ್ತದೆ.

[1] ಸಮಾಜವಾದಿ ಆಂದೋಲನಕಾ ಇತಿಹಾಸ – 162

ಬಾಪು ಹೆದ್ದೂರಶೆಟ್ಟಿ.

ವೃತ್ತಿಯಿಂದ ವಕೀಲರೂ, ಪ್ರವೃತ್ತಿಯಿಂದ ಸಮಾಜವಾದಿ ರಾಜಕಾರಣಿಗಳೂ ಆದ ಇವರು ತಮ್ಮ ಕಾಲೇಜಿನ ದಿನಗಳಿಂದಲೇ ಸಮಾಜವಾದಿ ಆಂದೋಲನದ ಜೊತೆಗೆ ಗುರುತಿಸಿಕೊಂಡವರು. ಸರಕಾರಿ ಅಧಿಕಾರವನ್ನೂ ಕಂಡಿದ್ದಾರೆ. ಅವರು ಬರೆದ ಹಾಗೂ ಪ್ರಕಟಗೊಂಡ ಲೇಖನಗಳು ಹಲವಾರು, ಅವರು ಬರೆದ ಭಾರತದ ಹಾಗೂ ವಿಶ್ವದ ಸಮಾಜವಾದಿ ಆಂದೋಲನದ ಇತಿಹಾಸಗಳು, ಕಮ್ಯುನಿಜಂ, ಜನತಂತ್ರ, ಹಾಗೂ ಸಮಾಜವಾದಗಳ ಬಗ್ಗೆ, ಮುಂದೆ ಸಮಾಜವಾದಿ ಚಿಂತನೆ ಹಾಗೂ ಆಂದೋಲನಗಳು ಪಡೆಯಬಹುದಾದ ಆಯಾಮಗಳ ಬಗ್ಗೆ ವಿಚಾರಪೂರ್ಣ ಲೇಖನಗಳ ಸಂಗ್ರಹಗಳೂ ಪ್ರಕಟವಾಗಿವೆ. ಸಮಾಜವಾದಿ ಅಧ್ಯಯನ ಕೇಂದ್ರದ ಸಂಸ್ಥಾಪಕ ಸದಸ್ಯರಲ್ಲಿ ಇವರೂ ಒಬ್ಬರು.

ಪಂಚಮ ನಾಡೊಳಗೆ...



ಮುಂದಿನ ಕೆಲವು ಉಲ್ಲೇಖಗಳನ್ನು ಗಮನಿಸೋಣ.

ಬೆಂಡಿಗೇರಿ ಬೆಳಗಾಂ ತಾಲೂಕಿನ ಒಂದು ಹಳ್ಳಿ. ಎಲ್ಲಾ ಹಳ್ಳಿಗಳಂತೆಯೇ ಇಲ್ಲಿಯೂ ದಲಿತರು ಅಲ್ಪ ಸಂಖ್ಯಾತರು. ಪ್ರಬಲ ಜಾತಿಗಳ ನಿರಂತರ ತುಳಿತದಡಿ ನುಜ್ಜುಗುಜ್ಜಾದವರು. ತುಳಿತಕ್ಕೆ ಇನ್ನಷ್ಟು ಕಸುವು ತುಂಬುವ ಜನತಾ ಸರ್ಕಾರದ ವಿಕೇಂದ್ರೀಕರಣದ ವಿಕೃತಕೂಸು ದಲಿತರ ಪಾಲಿನ ಮರಣಮಾರಿಯಾಗಿ ಪರಿಣಮಿಸಿದೆ. ಊರೂರುಗಳಿಗೆ ಪ್ಲೇಗಿನಂತೆ ದಾಳಿಯಿಟ್ಟಿರುವ ಮಂಡಲ್ ಮಾರಿ, ಬೆಂಡಿಗೇರಿಗೂ ಬಂತು. ದಲಿತರು ತಮಗೆ ಇಷ್ಟ ಬಂದ ಅಭ್ಯರ್ಥಿಗೆ ಮತ ನೀಡಿದರು. ಇದೇ ಅವರು ಮಾಡಿದ ಘನಘೋರ ಅಪರಾಧ. ದಲಿತರ ಮೈ ಮನಸ್ಸು ತಮ್ಮ ಗುತ್ತಿಗೆಯೆಂದು ಭಾವಿಸಿರುವ ಪ್ರಬಲ ಕೋಮಿನ ಒಂದು ಗುಂಪಿಗೆ ಕೋಡು ಮುರಿದಂತೆ ಆಯಿತು. ಈ ಗುಂಪು ದಲಿತರ ಸೊಕ್ಕು ಮುರಿದು ಪಾಠ ಕಲಿಸಲು ತೀರ್ಮಾನಿಸಿತು. ಈ ಪಾಠ ಕಲಿಸುವ ಮೊದಲ ಪೀಠಿಕೆಯೆ ೩.೮.೧೯೮೭ರ ಸೋಮವಾರದಂದು ನಡೆದ ನಾಡಿಗೆ ನಾಡೇ ನಾಚಿ ತಲೆ ತಗ್ಗಿಸಬೇಕಾದ ಘಟನೆ.

ಅಂದು ಎಂದಿನಂತೆ ದಲಿತರು ತಮ್ಮ ಕಾಳುಕಡ್ಡಿ ಕಾಯಕದಲ್ಲಿ ತೊಡಗಿದ್ದರು. ಜಾತಿ ಅಹಂಕಾರದಿಂದ ಕುದಿಯತೊಡಗಿದ್ದ ಈ ಲಿಂಗಾವಂತ ಗೂಂಡಾಗುಂಪು ದಲಿತ ಕಲ್ಲಪ್ಪ ದ್ಯಾಮಪ್ಪ ತಳವಾರ, ಸುಭಾಶ್ ಕಲ್ಲಪ್ಪ ಕೋಳಕರ, ಸಾವಂತ ಸಿದ್ದಪ್ಪ ಕೋಳಕರ, ಯಲ್ಲಪ್ಪ ದಂಡೆಪ್ಪ ಕೋಳಕರ ಮತ್ತು ಮಡಿವಾಳ ಮುದುಕಪ್ಪ ಹೈಬತ್ತಿಯವರನ್ನು ತಮ್ಮ ಜಮೀನಿನಲ್ಲಿ ಮೇವು ಕಳವು ಮಾಡಿದರೆಂಬ ಆರೋಪ ಹೊರಿಸಿ ಹುಚ್ಚುನಾಯಿಗಳಂತೆ ಬೀದಿಯಲ್ಲಿ ದರದರನೆ ಎಳೆದೊಯ್ದರು. ದೆವ್ವದಂತಹ ತಮ್ಮ ವಾಡದಲ್ಲಿ ಕೂಡಿಹಾಕಿದರು. ಹಾಡುಹಗಲೇ ಇಲ್ಲಿ ಹೀಗೆ ಎಳೆದೊಯ್ಯುವಾಗ, ಗ್ರಾಮದ ೪೦೦-೫೦೦ ಜನರ ಗುಂಪು ಮೌನವಾಗಿ ನೋಡುತ್ತಿತ್ತು.

ದಲಿತರನ್ನು ಎಳೆದೊಯ್ದು ಆವರಣದೊಳಗೆ ಕೂಡಿಹಾಕಿ ಬಿಡಿಸಲು ಇನ್ನುಳಿದ ದಲಿತರು ಯಾರೂ ಬಾರದಿರುವಂತೆ ಗೇಟು ಮುಚ್ಚಿಕೊಂಡರು. ಹೀಗೆ ಮುಚ್ಚಿದ ಕೂಡಲೆ ಅವರ ಹೃದಯದ ಬಾಗಿಲುಗಳು ತೆರೆದುಕೊಂಡವು. ಆ ತೆರೆದ ಬಾಗಿಲುಗಳಿಂದ ಸಾವಿರಾರು ವರ್ಷಗಳಿಂದ ತಳವೂರಿದ್ದ ಸೈತಾನರು ಹೊರಬಂದರು.

ಆ ನಂತರದ್ದು ಮನುಷ್ಯರು ಅಂದುಕೊಳ್ಳುವವರೆಲ್ಲ ತಾವು ಮನುಷ್ಯರೆನಿಸಿಕೊಂಡ ಏಕಮಾತ್ರ ಕಾರಣಕ್ಕಾಗಿಯೇ ನಾಚಿ, ಹೇಸಿ, ನರಳಬೇಕಾದ ಕೃತ್ಯ. ಈ ಸೈತಾನ ಗುಂಪಿನ ಗುರುಪಾದಪ್ಪ ಗಂಗಪ್ಪ ಮೇಳದ ಎಂಬಾತನು ಈ ದಲಿತರಲ್ಲೊಬ್ಬಾತನನ್ನು ಕರೆದುಕೊಂಡು ಹೊರಹೋಗಿ, ತಾನು ಮುಟ್ಟಲು ಹೇಸಿದ ಮಲವನ್ನು ಆತನ ಕೈಯಲ್ಲೆ ಹೊರಿಸಿ ತಂದನು. ಎಲ್ಲರೂ ತಿನ್ನುವಂತೆ ಒತ್ತಾಯಿಸಲಾಯಿತು. ತಿನ್ನಲು ಒಲ್ಲದ ದಲಿತರನ್ನು ಹೊಡೆದು ಬಡಿದು ಬಲಾತ್ಕಾರವಾಗಿ ಮಲ ತಿನ್ನಿಸಲಾಯಿತು. ಹೀಗೆ ತಿನ್ನಿಸಿದ ಪರಾಕ್ರಮಕ್ಕೆ ಸಂತೋಷಪಟ್ಟ ಈ ಗುಂಪು ಕುಣಿದು ಕೇಕೆ ಹಾಕಿತು. ಪೋಲೀಸ್ ಗಿಲೀಸ್ ಅಂತ ದೂರು ಒಯ್ದರೆ ಸುಟ್ಟು ಬಿಡುವುದಾಗಿ ಬೆದರಿಸಿ ಹೊರದಬ್ಬಿತು.

ಅವಮಾನದ ನೋವು ಹೊಟ್ಟೆಯಲ್ಲಿಟ್ಟುಕೊಳ್ಳಲಾಗದ ದಲಿತರು ೫.೮.೧೯೮೭ರಂದು ಬಾಗೇವಾಡಿ ಪೋಲೀಸರಿಗೆ ದೂರು ಕೊಟ್ಟರು. ಇವರ ದೂರು ಖಾಕಿ ಮೃತ ಮನಸ್ಸಿಗೆ ಮೊದಮೊದಲು ನಾಟಲಿಲ್ಲ. ಕೊನೆಗೆ ಇದು ಮೇಲಕ್ಕೆ ಹೋಗಿ ಮುಂದೊಂದು ದಿನ ತಾವೇ ತಮ್ಮ ಕೈಯ್ಯಾರೆ ಎಲ್ಲಿ ಹೇಲು ತಿನ್ನಬೇಕಾಗುತ್ತದೊ ಎಂದು ಹೆದರಿ ತಾತ್ಸಾರದಿಂದಲೆ ಬೆಂಡಿಗೇರಿಗೆ ಹೋಗಿ ಬಂದರು. ಬಾಗೇವಾಡಿಯ ಸಬ್‌ಇನ್ಸ್‌ಪೆಕ್ಟರ್ ಎಸ್.ವಿ. ಬಾಡವಾಡಗಿ ಹಲ್ಲೆಕೋರರ ಎಂಜಲನ್ನೊ, ಏನನ್ನೊ ನಾಲಿಗೆಯಿಂದಲೆ ಬಾಚಿಬಿಟ್ಟದ್ದರಿಂದ ಏನು ಕ್ರಮಕೈಗೊಳ್ಳದೆ ಸುಮ್ಮನಾದರು.

* * *

'ದಿನಾಂಕ ೩೦.೦೪.೧೯೮೨ರಂದು, ಮೂಡಿಗೆರೆಯಲ್ಲಿ ಅಂಬೇಡ್ಕರ್ ಜಯಂತಿ ನಡೆಯುವ ಸಂದರ್ಭದಲ್ಲಿ, ವೆಂಕಟಪ್ಪ ಬಂದು ಭಯದಿಂದ ತನ್ನ ಸ್ಥಿತಿಯನ್ನು ನನಗೆ ವಿವರಿಸಿದ. ಮತ್ತು ಆಲ್ದೂರು ಇನ್ಸ್‌ಪೆಕ್ಟರ್ ಹಾಗೂ ಮೂಡಿಗೆರೆಯ ಸರ್ಕಲ್ ಇನ್ಸ್‌ಪೆಕ್ಟರ್ ಶಾಮೀಲಾಗಿ ಹುಲ್ಲೇಮನೆಯಲ್ಲಿ ನಡೆದ ಘಟನೆಯನ್ನು ಮೂಲೆಗೆ ಹಾಕಿದರು. ನಾನು ಹಾಗೂ ದಲಿತ ಸಂಘರ್ಷ ಸಮಿತಿಯ ಮಿತ್ರರು ಕೆಲವರು ಹೋಗಿ, ಮೂಡಿಗೆರೆ ಸರ್ಕಲ್ ಇನ್ಸ್‌ಪೆಕ್ಟರ್

ಮುಳ್ಳಿನ ಬದುಕಾಗಿರುವವರನ್ನು ಅಥವಾ ಬದುಕೇ ಮುಳ್ಳಾಗಿರುವವರನ್ನು ವಿಷ್ಣುವಿನ ಮಕ್ಕಳು ಅಂತ ಕರೆದರೆ ಅವರ ಬದುಕಿಗೆ ಆಗುವ ಪ್ರಯೋಜನವಾದರೂ ಏನು? ವಸ್ತುಸ್ಥಿತಿಯನ್ನು ಯಾವ ಹೆಸರಿನಿಂದ ಕರೆಯಬೇಕು ಎಂಬುದೂ ಕೂಡ ರಾಜಕೀಯವಾಗಿ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ 'ಪಂಚಮ' ಪತ್ರಿಕೆಯು ಪಂಚಮ ಲೋಕದ ಒಡಲುರಿಯನ್ನು ಮೊದಲ ಬಾರಿಗೆ ತೆಗೆದು ತೋರಿಸಿದೆ.

ಷರೀಫರನ್ನು ಮೇಲಿನ ಎರಡೂ ಘಟನೆಯ ವಿಷಯವಾಗಿ ಕೇಳಿದೆವು. 'ಸರ್, ಹುಲ್ಲೇಮನೆ ಗಲಾಟೆಯಲ್ಲಿ ಹಲ್ಲೆ ನಡೆಸಿದವರ ಬಗ್ಗೆ ನೀವೇನು ಕ್ರಮ ತೆಗೆದುಕೊಂಡಿಲ್ಲ' ಎಂದೆ. ಅದಕ್ಕೆ ಕೂಡಲೆ ಇನ್ಸ್‌ಪೆಕ್ಟರ್ 'ನೀನು ಯಾರು ಅದನ್ನು ಕೇಳೋಕೆ' ಎಂದರು. ನಾನು ಶಾಂತವಾಗಿಯೇ 'ಸರ್, ನಾನು ಯಾರಾದರೂ ಆಗಿರಬಹುದು. ರಾಮಚಂದ್ರಪ್ಪ ದಲಿತರ ನಿವೇಶನ ವಶಪಡಿಸಿಕೊಂಡ ಬಗ್ಗೆ ನೀವು ದಲಿತರನ್ನ ಹೊಡೆದಿದ್ದೀರಿ. ಅಲ್ದೆ ಹುಲ್ಲೇಮನೆ ಗಲಾಟೆಯಲ್ಲಿ ಹರಿಜನರಿಗೆ ಹೊಡೆದವರ ಮೇಲೆ ಕೇಸ್ ಬುಕ್ ಮಾಡಿ, ಈಗ ಬೇರೆ ಮಾತಾಡ್ತೀರಲ್ಲ' ಎಂದೆ. ಇನ್ಸ್‌ಪೆಕ್ಟರ್ ಇಬ್ಬಂದಿತನ ಅವರಿಗೆ ಗೋಚರವಾಗಿ ಆತ ಕೂಡಲೆ ರೇಗಿಬಿಟ್ಟ, 'ಲೇ ಸುಭಾಶ್ ಭರಣಿ ಕಾಲದಲ್ಲಿ ಆಡಿದಂತೆ ಆಡಬೇಡ, ಕಾಲ್ ಮುರಿದು ಬಿಡ್ತಿನಿ' ಎಂದ. ಅವರೆಷ್ಟೇ ರೇಗಿದರೂ ನಾನು ತಾಳ್ಮೆಯಿಂದ ಕೇಳಿದೆ. ನಿವೇಶನದ ವಿಷಯದಲ್ಲಿ ಆದ ಅನ್ಯಾಯ ಹುಲ್ಲೇಮನೆಯಲ್ಲಾದ ಹಲ್ಲೆ ಬಗ್ಗೆ ನಾವಿನ್ಯಾರನ್ನು ಕೇಳಬೇಕು?' ಎಂದೆ. ಆತ ಕೂಡಲೆ ಗೆಟ್ ಔಟ್ ಫ್ರಂ ಹಿಯರ್' ಎಂದುದೂ ಅಲ್ಲದೆ 'ಹೊಲೆಯ ಸೂಳೆಮಕ್ಕಳು ಹೆಚ್ಚಿಕೊಂಡಿದ್ದೀರಿ. ಲೇ ಹಾಕು ಇವನ್ನ ಒಳಗೆ' ಎಂದು ಕೂಗಾಡಿದ. ನಾನು ಅವನಿಗೆ ಅವಮಾನವಾಗುವಷ್ಟು ತಾಳ್ಮೆಯಿಂದ 'ಸರ್ ಜಾತಿ ಹಿಡಿದು ಮಾತಾಡಬೇಡಿ, ನೀವೇ ಕೇಸ್ ಬುಕ್ ಮಾಡಿ, ಈಗ ನಾವೇ ಹೊಡೆದಾಡಿದ್ರೂ ಬಿಡಿಸಲು ಬಂದವರಿಗೆ ಹೊಡೆದು ಸುಳ್ಳು ಕಂಪ್ಲೈಂಟು ಕೊಡುತ್ತಿದ್ದೀರಿ ಎಂದಿದ್ದಿರಲ್ಲ. ಈ ಮೊದಲು ಅವರ ಮೇಲೆ ಕೇಸ್ ಬುಕ್ ಮಾಡಿದ್ದಿರಲ್ಲ' ಎಂದೆ. ಕೂಡಲೆ ಆತ 'ಸರ್ಕಾರಿ ಕೆಲಸಕ್ಕೆ ಅಡ್ಡಿಯುಂಟುಮಾಡಿ ಗಲಾಟೆ ಮಾಡ್ತಿಯ' ಎಂದು ಮನಸ್ಥಿತಿ ಕಳೆದುಕೊಂಡವನಂತೆ ಕೆಟ್ಟ ಮಾತುಗಳಿಂದ ಬೈಯುತ್ತ ನನ್ನ ಮುಖದ ಮೇಲೆ ರಪ್ಪೆಂದು ಹೊಡೆದ. ನನಗೆ ತಲೆ ತಿರುಗಿದಂತಾಗಿ 'ಸರ್ ಹೊಡೆಯಬೇಡಿ, ನಾವು ನ್ಯಾಯ ಕೇಳಲು ಬಂದಿದ್ದೇವೆ' ಎಂದೆ. ಮತ್ತೊಮ್ಮೆ ಆತ ತಲೆಯ ಮೇಲೆ ಹೊಡೆದ. ಅಷ್ಟರಲ್ಲಿ ಹಿಂದಿನಿಂದ ಪೊಲೀಸ್ ಹನುಮಂತಪ್ಪ ಬೂಟುಕಾಲಿನಿಂದ ಒದ್ದ. ಇನ್ಸ್‌ಪೆಕ್ಟರ್ ಹೊಡೆದ ಏಟಿಗೆ ನನ್ನ ಮೂಗಿನಿಂದ ರಕ್ತ ಬರಲಾರಂಭಿಸಿತು. ಬಟ್ಟೆಯೆಲ್ಲ ವದ್ದೆಯಾಯಿತು. ಹಿಂದಿನಿಂದ ಬೂಟುಕಾಲಿನಿಂದ ಒದ್ದ ಏಟಿಗೆ ನಾನು ಕೆಳಗೆ ಬಿದ್ದೆ. ಕೂಡಲೆ ಪೊಲೀಸ್ ಮತ್ತೆ ಒದ್ದ. ನನ್ನ ಬಟ್ಟೆನೆಲ್ಲ ಹರಿದರು. ಇಷ್ಟಾದರೂ ಇನ್ಸ್‌ಪೆಕ್ಟರ್ ಬೈಯ್ಯುವುದು ಹೊಡೆಯುವುದು ನಿಲ್ಲಿಸಲಿಲ್ಲ. ನನಗೆ ಪ್ರಜ್ಞೆ ಹೋಗುವಂತಹ ಸಮಯದಲ್ಲೂ 'ಸರ್ ಹೊಡಿಬೇಡಿ, ನೀವು ತಪ್ಪು ಮಾಡ್ತಿದಿರಿ' ಎಂದೆ. ಇನ್ಸ್‌ಪೆಕ್ಟರ್ 'ಹೊಲೆಯ' ಎಂಬ ಶಬ್ದ ಉಪಯೋಗಿಸದೆ ಯಾವ ಬೈಗುಳವನ್ನೂ



ನಾಡಿನಲ್ಲಿ ಶಿಕ್ಷಣದ ಮೂಲಕ ದಲಿತರು ಪಡೆದ ಎಚ್ಚರಿಕೆ, ಅವರು ಸಂಘಟಿಸಿದ ಹೋರಾಟಗಳು, ಅದರ ಫಲವಾಗಿ ಭೂಮಾಲೀಕರು, ಪೊಲೀಸರು ನಡೆಸಿದ ದಬ್ಬಾಳಿಕೆ, ದೌರ್ಜನ್ಯಗಳು; ಅವನ್ನು ವಿರೋಧಿಸಿ ದ.ಸಂ.ಸ.ದ ಪ್ರತಿಭಟನೆಗಳು, ಅದು ನಡೆಸಿದ ಸ್ವತಂತ್ರ ಹೋರಾಟಗಳು, ಅಧ್ಯಯನ ಶಿಬಿರದ ವರದಿಗಳು, ಲೇಖನಗಳು, ಕವನಗಳು, ವಾಗ್ವಾದಗಳು ಹೀಗೆ ಹಲವಾರು ವಿಷಯಗಳು 'ಪಂಚಮ'ದಲ್ಲಿವೆ



ಪಂಚಮ

ಸಂಪುಟ: ೧ ಪಾಕ್ಷಿಕ ಬೆಲೆ: ೨೦ ಪೈಸೆ ಸಂಚಿಕೆ: ೧

ಕಂಚನಹಳ್ಳೀಲಿ ಆಗುತ್ತಿರುವುದೇನು?

[ವರದಿ : ಸಿದ್ಧಲಿಂಗಯ್ಯ]

ಕಂಚನಹಳ್ಳಿಗೆ ಹೋದಾಗ ಉರಿಬಿಸಿಲು. ಚಕ್ಕೆಗಳಲ್ಲಿ ಸೀಳು ದಾರಿಗಳಲ್ಲೇ ಆ ಹಳ್ಳಿಗೆ ಹೋಗಬೇಕು. ...

ಕುಡಿಯುವ ನೀರಿಗೆ ಕಕ್ಕಸ್ಸು

ಹಬ್ಬದ ಕಿಚ್ಚು—ಬಹಿಷ್ಕಾರ

ವಲಸೆಹೋದರೂ ಬೆಂಕಿ

ಬೆಳೆಯದವರು ಬೆಳೆ ತಿಂದರು

(ಎರಡನೇ ಪುಟ ನೋಡಿ)

ಪ್ರಿಯರೇ,

ಖಾಸಗಿ ಪ್ರಸಾರಕ್ಕಾಗಿ ಪ್ರಕಟವಾಗುತ್ತಿದ್ದ 'ಶೋಷಿತ' ಇದೀಗ 'ಪಂಚಮ' ಹೆಸರಿನಲ್ಲಿ ಅಂಗೀಕೃತವಾಗಿ ಹೊರಬಂದಿದೆ.

* ಇದು ಯಾವ ರಾಜಕೀಯ ಪಕ್ಷಕ್ಕೂ ಬದ್ಧವಾಗಿಲ್ಲ.
* ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ, ಶೋಷಣೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಪ್ರಯತ್ನಿಸುತ್ತದೆ.
* ದಲಿತರು ತಮ್ಮ ಬಗ್ಗೆ ಮತ್ತು ಸಮಾಜದ ಬಗ್ಗೆ ವೈಜ್ಞಾನಿಕವಾಗಿ ವಿವೇಚಿಸುವಂತೆ ಮಾಡುವ ಉದ್ದೇಶ ಇಟ್ಟುಕೊಂಡಿದೆ.
* ವಿವಿಧ ವಿಚಾರಧಾರೆಗಳನ್ನೂ, ಸಿದ್ಧಾಂತಗಳನ್ನೂ ದಲಿತರಿಗೆ ತಲುಪಿಸಿ ವಿಚಾರಶೀಲರನ್ನಾಗಿ ಸಲು ಪ್ರಯತ್ನಿಸುತ್ತದೆ.
* ದಲಿತರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಚನಾತ್ಮಕವಾಗಿ ಅವರು ಕ್ರಿಯಾಶೀಲರಾಗಲು ಶ್ರಮಿಸುತ್ತದೆ.

ಇದಕ್ಕೆಲ್ಲ ತಮ್ಮ ಸಹಕಾರ, ಬೆಂಬಲ, ಸಲಹೆಗಳು ಅವಶ್ಯ.

—ಸಂಪಾದಕ

'ಪಂಚಮ' ಪತ್ರಿಕೆಯ ಪ್ರಥಮ ಸಂಚಿಕೆ

ಯ್ಯುತ್ತಿರಲಿಲ್ಲ. ಆದ್ದರಿಂದ ನನಗೆ ಏಟಿಗಿಂತಲೂ ಹೆಚ್ಚು
ೀವಾಯಿತು. 'ಹೊಲೆಯ' ಎಂದವನಿಗೆ ಶಿಕ್ಷಿಸಬೇಕಾದ
ಿಕಾರಿಯೇ 'ಹೊಲೆಯ' ಎಂದು ಕ್ರೂರಿಗುತ್ತಿರುವಾಗ
ವಿನ್ಯಾರಿಗೆ ಮೊರೆ ಹೋಗುವುದು? ಅವರ ರೋಷವೆಲ್ಲ
ಿದ ಮೇಲೆ ನನ್ನ ಬಟ್ಟೆ ಬಿಚ್ಚಿಸಿ ಲಾಕಪ್ಪಿಗೆ ಹಾಕಿದರು.
ಾದಲೆ ಊಟವಿಲ್ಲದೆ ಸೊರಗಿದ್ದ ನಾನು ಅಲ್ಲೆ ಕುಳಿತೆ. ಒಳಗೆ
ಂಡಿಗಿಂತಲೂ ವಾಸನೆ ತುಂಬಿತ್ತು. ನನಗೆ ಹೊಡೆತ ಬಿದ್ದ
ಗದಲೆಲ್ಲ ಹುಣ್ಣಿನಂತೆ ನೋಯುತ್ತಿತ್ತು. ಜೊತೆಗೊಬ್ಬ
ಣಾಧಿಕಾರಿ 'ಹೊಲೆಯ' ಎಂದುದು ಇನ್ನೂ ನೋಯುತಿತ್ತು'.
ಂ.ಡಿ. ಗಂಗಯ್ಯನವರ ಮಾತುಗಳು)

* * *

'ದುಡಿಯುವ ವರ್ಗಕ್ಕೆ ಅದರಲ್ಲೂ ಆರ್ಥಿಕ ಹಾಗೂ
ಮಾಜಿಕವಾಗಿ ತುಳಿತಕ್ಕೆ ಒಳಗಾಗಿರುವ ದಲಿತ ಜನಾಂಗಕ್ಕೆ
ಮಾಜಿಕ, ಆರ್ಥಿಕ ಹಾಗೂ ರಾಜಕೀಯ ಶಿಕ್ಷಣ ನೀಡುವುದು ಈಗ
ತ್ಯವಾಗಿದೆ. ಬಂಡವಾಳಶಾಹಿ ಹಾಗೂ ಪುರೋಹಿತಶಾಹಿ
ರ್ಶಗಳನ್ನೇ ತುಂಬಿಕೊಂಡು ನಮ್ಮ ಸಧ್ಯದ ಶಿಕ್ಷಣ ಫಲಿತ ಕೆಲವು
ಿದಿ ದಲಿತರನ್ನು ಕಬಳಿಸುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿರುವುದೇ
ಿದೆ. ದುಡಿಮೆಯ ಫಲ ಗೊತ್ತಿಲ್ಲದೆ ತನ್ನಲ್ಲಿರುವ ಶಕ್ತಿಯ ಅರಿವಿಲ್ಲದೆ
ೀ ದುಡಿಯುವ ವರ್ಗ ಈವರೆಗೆ ಮೂಕಪಶುವಿನಂತೆ ಆಗಿರುವುದನ್ನು
ೀಡಿದ್ದೇವೆ. ಹೀನಶಕ್ತಿಗಳ ಕಪಿಮುಷ್ಟಿ ಮುಂದೆ ಶ್ರಮಜೀವಿಗಳನ್ನು
ಿಸುವ ಹೊಣೆ ಕೂಡ ನಮ್ಮದೇ ಆಗಿದೆ.

ಅರ್ಥಪೂರ್ಣ ಸಂಸ್ಕೃತಿಯ ನಿರ್ಮಾಣಕ್ಕಾಗಿ, ಜನಜಾಗೃತಿಗಾಗಿ
ಜ್ಞಾನಿಕ ತಿಳುವಳಿಕೆಯನ್ನು ಮೂಡಿಸುವುದಕ್ಕಾಗಿ ಶ್ರಮಿಸಬೇಕಾದ
ಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾವೊ ಹೇಳಿರುವಂತೆ 'ನೋಡಲು
ಯಂಕರವಾಗಿರುವಂತೆ ಕಾಣುವ ಪ್ರತಿಗಾಮಿಗಳು ವಾಸ್ತವವಾಗಿ
ಹೀನರಾಗಿರುತ್ತಾರೆ. ಜನಶಕ್ತಿ ಒಂದುಗೂಡಿದಾಗ ಅವರು ನಿರ್ನಾಮವಾಗಿ
ೀಗುತ್ತಾರೆ'. ನಮ್ಮೊಳಗೂ ಇರುವ ಪ್ರತಿಗಾಮಿ ಶಕ್ತಿಗಳು ಸೇರಿದಂತೆ ಎಲ್ಲಾ
ಗಾಮಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ವೈಜ್ಞಾನಿಕವಾಗಿ ಜನರನ್ನು ಸಜ್ಜುಗೊಳಿಸುವ,
ಮೂಲಕ ನೊಂದ ಜನರ ಮನದಲ್ಲಿ ಭವಿಷ್ಯತ್ತನ್ನು ಕುರಿತು ವಿಶ್ವಾಸ ಮೂಡಿಸುವ
ಂತರ ಕಾಯಕವನ್ನು ಎಲ್ಲ ಪ್ರಗತಿಪರರೂ ಒಂದಾಗಿ ಮಾಡಬೇಕಾಗಿದೆ. ಆಗ ಮಾತ್ರ
ುಕಿಗೆ ನಿಜವಾದ ಅರ್ಥ ಬರಬಲ್ಲದು'. (ಇಂದೂಧರ ಹೊನ್ನಾಪುರ ಅವರ
ವಣಿಗೆ)

* * *

* ನಿಮ್ಮ ಜನರ ಹೋರಾಟ ಕೇವಲ ಸಾಮಾಜಿಕವಾಗಿ ಕಾಣಿಸಿದರೂ ಅದು ವರ್ಗ
ೀರಾಟವೂ ಹೌದು.

* ಇಂಡಿಯಾದಲ್ಲಿ ಅಸ್ಪೃಶ್ಯರು ಗಾಂಧಿಯಂತಹ ಶತ್ರುವನ್ನು ಹಿಂದೆಂದೂ
ದಿರಲಿಲ್ಲ. ಗಾಂಧಿಯವರು ತಮ್ಮ ಹರಿಜನೋದ್ಧಾರ ಕಾರ್ಯವನ್ನು, ಕೊನೆಯ
ಿರು ಬಿಡುತ್ತಿದ್ದ ಹಿಂದೂ ಧರ್ಮವನ್ನು ಉಳಿಸಲೆಂದೇ ಅದನ್ನು ಒಂದು ರಕ್ಷಾ
ಚವಾಗಿ ಬಳಸಿದರೇ ಹೊರತು ಸರ್ವಮಾನವ ಸಮಾನತೆಗಾಗಿ ಅಲ್ಲ.

* ಮಾನವೀಯತೆಗಾಗಿ, ಆತ್ಮಾಭಿಮಾನಕ್ಕಾಗಿ ನಿರಂತರವಾಗಿ ಸಾಗುವ ಸಮರದಲ್ಲಿ
ವು ಸಾವನ್ನಪ್ಪಿದರೆ, ನಮ್ಮ ಕೂಲಿ, ಗುಲಾಮತನ, ಅಸ್ಪೃಶ್ಯತೆ, ಹಸಿವು ಎಲ್ಲವೂ ಸುಟ್ಟು
ೀಗುತ್ತವೆಯೆ ಹೊರತು ಇದರಿಂದ ನಿಮಗಾಗುವ ನಷ್ಟವೇನೂ ಇಲ್ಲ. (ಡಾ.
ಬೇಡ್ಕರ್ ಅವರ ಸೂಕ್ತಿಗಳು)

* * *

'ಪಾಂಡವರ ಕಥೆಯಾಗಿಯೊ, ಕೌರವರ ಕಥೆಯಾಗಿಯೊ ಸಾಹಿತ್ಯ ನಮ್ಮ
ನಂಬಿಕೆಗಳನ್ನು ಆಳುತ್ತದೆ. ಸಮಾಜದ ಪ್ರಜ್ಞೆಯ ಸಾಮೂಹಿಕ ಚಿಂತನೆಯ ನೆಲೆಯಲ್ಲಿ
ಇದನ್ನೇ ವಿಸ್ತಾರವಾಗಿ ಕೈಗೆತ್ತಿಕೊಂಡರು ಕೃಷ್ಣಪ್ಪ. ಸಾಹಿತ್ಯದಿಂದ ನೇರವಾಗಿ
ಕ್ರಾಂತಿಯಾಗದಿರಬಹುದು. ಆದರೆ ಕ್ರಾಂತಿಗೆ ಬೇಕಾದ ಭೂಮಿಕೆಯನ್ನು ಅರಿವಿನ
ಹದವನ್ನು ತಯಾರು ಮಾಡುವ ಸಾಧನ ಸಾಹಿತ್ಯವೆ ಎನ್ನುವ ವಿಶ್ಲೇಷಣೆಯನ್ನು ಅವರು
ಮುಂದಿಟ್ಟರು'. (ಅಧ್ಯಯನ ಶಿಬಿರವೊಂದರಲ್ಲಿ ಪ್ರೊ. ಬಿ. ಕೃಷ್ಣಪ್ಪ ಅವರ ಮಾತುಗಳು)

* * *

'ದ.ಸಂ.ಸ. ಜಿಲ್ಲಾ ಸಂಚಾಲಕ ಎಂ.ಡಿ. ಗಂಗಯ್ಯ ಅವರು ಭೂ ಸಮಸ್ಯೆ
ಕುರಿತು ಮಾತನಾಡುತ್ತ, ನೈಸರ್ಗಿಕ ಸಂಪತ್ತು ಯಾರ ಸ್ವತ್ತೂ ಅಲ್ಲ;

ಪಂಚಮವನ್ನು ಅಧ್ಯಯನ ಮಾಡುವುದೆಂದರೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯನ್ನು ಮತ್ತು ಅದರ ಹೋರಾಟದ ಏಳುಬೀಳುಗಳನ್ನು ಅಧ್ಯಯನ ಮಾಡಿದಂತೆ. ಜೊತೆಗೆ ಎಚ್ಚರಗೊಂಡ, ಸಂಘಟಿತ ದಲಿತರ ವೈಚಾರಿಕ ನೆಲೆಗಟ್ಟನ್ನು ಅಧ್ಯಯನ ಮಾಡಿದಂತೆ.



GET ON THE ROAD TO SUCCESS

HEAD TO CMR FOR YOUR EDUCATION

www.cmr.ac.in E: info@cmr.ac.in

UNDER GRADUATE COURSES

BBM - Bachelor of Business Management
BCA - Bachelor of Computer Applications
B.Sc. - Bachelor of Science in Biotechnology Micro Biology/Genetics
B.S. - Bachelor of Science (4 Years) Integrated Course
B.Com - Bachelor of Commerce (Accredited by Institute of Chartered Accountants of India for CPT Coaching)
B.A. - Bachelor of Arts in Journalism, Psychology & Communicative English
B.Sc. - Bachelor of Nursing
B.Ed. - Bachelor of Education
LL.B - Bachelor of Law (3 Years)
B.A. LL.B - Bachelor of Law (5 Years)
BBA. LL.B - Bachelor of Law (5 Years)

POST GRADUATE COURSES

MBA - Master of Business Administration (Dual Specialistion)
MCA - Master of Computer Applications (3 Years)
M.Sc. - Master of Science in Bio Technology
M.Sc. - Master of Science in Bio Chemistry
M.Sc. - Master of Science in Micro Biology
M.Sc. - Master of Science in Psychology
M.Sc. - Master of Science in Electronic Media
M.Sc - Master of Nursing-OBG, Medical & Surgery & Community Health
M.S. - Mass Communication
M.Com - Master of Commerce
MSW - Master of Social Work

BACHELOR OF ENGINEERING

B.E - Computer Science and Engineering
B.E - Electronics & Communication Engineering
B.E - Information Science and Engineering
B.E - Telecommunication Engineering
B.E - Electrical & Electronics Engineering
B.E - Civil Engineering & B.E - Mechanical Engineering

POST GRADUATE COURSES

M.Tech - Master of Computer Science
M.Tech - Master of Digital Electronics
M.Tech - VLSI Design - Embedded Systems
M.Tech - Computer Network Engineering
M.Tech - Master of Digital Communication

DIPLOMA PROGRAMMES

GNM - General Nursing and Midwifery
D. Ed - Diploma in Education

DOCTORAL PROGRAMMES

Ph.D. - Electronics and Communication
Ph.D. - Mathematics
Ph.D. - Management
Ph.D. - Chemistry

PGDM

General Management (Dual Specialistion)
International Business & Technology Management (Dual Specialistion)

FEATURES : Highly Qualified Teachers | Extensive use of Technology in Learning | Industry Visits | High Profile Guest Speakers | Award Winning Campus Designs | High Tech Industry Sponsored Labs | On Campus Cafes & Food Courts | World Class Auditoriums & Convention Spaces | Secure Hostel for Boys & Girls | Award Winning Placement Cell | 15000+ Students | International Scholars from 55+ Countries.

CMR GROUP OF INSTITUTIONS BANGALORE, INDIA

For Further Details contact: Administrative Block,
C.A. No.2, 3rd C Cross, 6th A Main, 2nd Block, HRBR Layout, Kalyan Nagar,
Bangalore 560 043, T : + 91 80 25426177, 65353899, 65971397
F : +9180 25424433, E : info@cmr.ac.in, www.cmr.ac.in

ಊ ಅದಕ್ಕೆ ವಾರಸುದಾರರೂ ಅಲ್ಲ.
ನಿಂದಲೂ ಭೂಮಿಯ ಹಕ್ಕು ಕಳೆದುಕೊಂಡು
ಯುವುದೊಂದೇ ಆಧಾರವಾಗಿರುವ ಕಾರಣ
ರ ಅಜ್ಞಾನ, ಬಡತನ, ಅಂಧಾನುಕರಣೆಗಳು.
ಊ ಭೂಮಿಗೂ ನಿಕಟ ಸಂಬಂಧವಿದ್ದು,
ಾದಿಗಳೇ ಭೂ ಒಡೆಯರಾಗಿದ್ದಾರೆಂದು ತಿಳಿಸುತ್ತಾ,
ರಿಗೆ ನ್ಯಾಯ ಸಿಕ್ಕಿ ಎಲ್ಲದರಲ್ಲೂ ಸಮಾನತೆ
ೇಕೆಂದಾದರೆ ಆಸ್ತಿಯ ಹಕ್ಕು ರದ್ದಾಗಬೇಕು.
ತ್ತಿನ ಒಡೆತನ ಸರ್ಕಾರದ ಕೈ ಸೇರಬೇಕು ಎಂದು
ಸರು'. (ಅಧ್ಯಯನ ಶಿಬಿರದ ವರದಿ)
ಾನೂನು ವ್ಯವಸ್ಥೆಯ ಬಗ್ಗೆ ಮಾತನಾಡಿದ ವಕೀಲ
ಾರಾಯಣ ಅವರು 'ಯಾವುದೇ ಸಮಾಜದ
ಾವಣೆ ಕಾನೂನಿನಿಂದ ಸಾಧ್ಯವಿಲ್ಲ. ಸಂಘಟಿತ
ಾಟದ ಪರಿಣಾಮವಾಗಿ ಹೊಸ ವ್ಯವಸ್ಥೆಯೊಂದಿಗೆ
ನು ಸೃಷ್ಟಿಯಾಗುತ್ತದೆ' ಎಂದು ಅಭಿಪ್ರಾಯ
ಪತ್ತ ಉಪನ್ಯಾಸ ನೀಡಿದರು. (ಅಧ್ಯಯನ ಶಿಬಿರದ

ುಂದಿನ ಕೆಲವು ಶೀರ್ಷಿಕೆಗಳನ್ನು ಗಮನಿಸೋಣ.
ಿಕ್ಕಮಗಳೂರು ತಾಲೂಕಿನ
ುಬರಹಳ್ಳಿಯಲ್ಲಿ, ಜೀತ ಬಿಟ್ಟಿದ್ದಕ್ಕೆ ಹರಿಜನರ
ಹಲ್ಲೆ', ದ.ಸಂ.ಸ.ದಿಂದ ರಾಜ್ಯಾದ್ಯಂತ ಕರಾಳ
ಾಚರಣೆ', 'ತುಮಕೂರು ಬಳಿ ದಲಿತ ಕುಟುಂಬದ
ರ ಕೊಲೆ', 'ಮೂಡಿಗೆರೆ: ಪೊಲೀಸರಿಂದ ದಲಿತ
ಕನ ಕೊಲೆ', 'ಗಣರಾಜ್ಯೋತ್ಸವ ವಿರುದ್ಧ
ಸ. ಪ್ರತಿಭಟನೆ', 'ಗೋರಖ್‌ಪುರ ಬಳಿ ದಲಿತ
ಕನ ಸಜೀವ ದಹನ', 'ಕೋಲಾರ ಜಿಲ್ಲೆ: ೩
ಲ್ಲಿ ನಾಲ್ವರು ದಲಿತರ ಕೊಲೆ', 'ಸಂಘಟನೆ ಬಿಸಿ
ಸಬೇಕಾದೀತು ಕಾಗೋಡ್‌ಗೆ ಎಚ್ಚರಿಕೆ', 'ಸಿಟ್ಟಿಗೆದ್ದ
ನಕಾರರಿಂದ ವಿಧಾನಸೌಧಕ್ಕೆ ಲಗ್ಗೆ', 'ಗಾಂಧಿ:
ಲ್ ದಲಿತನ ದೃಷ್ಟಿಯಲ್ಲಿ ಡೋಂಗಿ', 'ಬಲಾಢ್ಯ
ಾಹಿಗಳಿಂದ ೭೦ ಗುಡಿಸಲುಗಳಿಗೆ ಬೆಂಕಿ',
ಾತ್: ೧೩ ಮಂದಿ ದಲಿತರ ಹತ್ಯೆ', 'ದಲಿತರ

ರಕ್ತದಿಂದ ಅರಳಿದ ಸುಂದರ ಕೊಡಗು', 'ಮುಸ್ಲಿಂ ಹರಿಜನರು', 'ಜಪಾನ್ ಹೊಲೆಯರು', 'ಕೊಳೆತ ಭಾರತ ಕುರಿತು ಮಾರ್ಕ್ಸ್ ಮಾತುಗಳು', 'ಸಾಲಪ್ಪನವರ ಮೇಲೆ ಹಲ್ಲೆ: ಷಂಡ ದಲಿತ ಪ್ರತಿನಿಧಿಗಳು', '೧೯೮೨: ಕೊಲೆ ಉತ್ಪಾದಕ ವರ್ಷ', 'ವಯಸ್ಕರ ಶಿಕ್ಷಣ ಸಂಸ್ಥೆಯಲ್ಲಿ ಒಕ್ಕಲಿಗರ ದಬ್ಬಾಳಿಕೆ', 'ದಲಿತರನ್ನು ಒತ್ತೆ ಇಟ್ಟ ದಲಿತ ಧುರೀಣರು', 'ಕೃಷಿ ಕಾರ್ಮಿಕರನ್ನು ಮುಟ್ಟದ ರೈತ ಸಂಘ' ಇತ್ಯಾದಿ.

ಮೇಲಿನ ಅಷ್ಟೂ ಉಲ್ಲೇಖಗಳು 'ಪಂಚಮ' ಪತ್ರಿಕೆಯ ಒಡಲಿನವು. 'ಪಂಚಮ' ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಒಡಲ ಕೂಸು. ಇದು ೧೯೭೭ರಿಂದ ೧೯೯೨ರವರೆಗೆ ಪಾಕ್ಷಿಕ ಪತ್ರಿಕೆಯಾಗಿ ಬಂದಿದೆ. ನಡುನಡುವೆ ಕೆಲವು ತೊಂದರೆಗಳಿಂದ ಪ್ರಕಟವಾಗಿಲ್ಲ. ದಲಿತ ಸಂಘರ್ಷ ಸಮಿತಿಯ ಬೇರೆಬೇರೆ ನಾಯಕರು ಇದಕ್ಕೆ ಸಂಪಾದಕರಾಗಿದ್ದರು. ಈಗ ಎಲ್ಲಾ ಸಂಚಿಕೆಗಳು ಇಡಿಯಾಗಿ ಒಂದು ಕಡೆ ಸಿಗುತ್ತಿಲ್ಲ. ಸಧ್ಯಕ್ಕೆ ಮಂಗಳೂರು ವಿಜಯ ಅವರು, ೫–೭ ಡಿಸೆಂಬರ್ ೧೯೭೭ರಿಂದ ಜನವರಿ ೧೯೯೨ರವರೆಗಿನ ಸಂಚಿಕೆಗಳನ್ನು ಸಂಗ್ರಹಿಸಿದ್ದಾರೆ.

ನಾಡಿನಲ್ಲಿ ಶಿಕ್ಷಣದ ಮೂಲಕ ದಲಿತರು ಪಡೆದ ಎಚ್ಚರಿಕೆ, ಅವರು ಸಂಘಟಿಸಿದ ಹೋರಾಟಗಳು, ಅದರ ಫಲವಾಗಿ ಭೂಮಾಲೀಕರು, ಪೊಲೀಸರು ನಡೆಸಿದ ದಬ್ಬಾಳಿಕೆ, ದೌರ್ಜನ್ಯಗಳು; ಅವನ್ನು ವಿರೋಧಿಸಿ ದ.ಸಂ.ಸ.ದ ಪ್ರತಿಭಟನೆಗಳು, ಅದು ನಡೆಸಿದ ಸ್ವತಂತ್ರ ಹೋರಾಟಗಳು, ಅಧ್ಯಯನ ಶಿಬಿರದ ವರದಿಗಳು, ಲೇಖನಗಳು, ಕವನಗಳು, ವಾಗ್ವಾದಗಳು ಹೀಗೆ ಹಲವಾರು ವಿಷಯಗಳು 'ಪಂಚಮ'ದಲ್ಲಿವೆ.

'ಪಂಚಮ' ಹೆಸರಿನಲ್ಲೇನಿದೆ?

'ಪಂಚಮ' ಎಂಬ ಹೆಸರಿನಲ್ಲೇ ಏನೊ ಇದೆ ಅಂತ ಅನಿಸುತ್ತದೆ. ಕೆ.ಬಿ. ಸಿದ್ದಯ್ಯನವರು 'ದಲಿತ' ಎಂಬ ಪದ ಬಳಕೆಯನ್ನು ವಿರೋಧಿಸುತ್ತಾರೆ. ಅವರ ಪ್ರಕಾರ 'ಅಸ್ಪೃಶ್ಯ' ಅಂತ ಕರಿಬೇಕಂತೆ. ಕೆಲವು ಸಲ ಹಾಗನ್ನಿಸುತ್ತದೆ. ಅಸ್ಪೃಶ್ಯ ಅಂತ ಕರೆದಾಗ, ಮೂಡುವ ಭಾವವು ದಲಿತ ಅಂತ ಕರೆದಾಗ ಮೂಡುವುದಿಲ್ಲ. ದಲಿತ ಎಂಬುದು ಅಕಡೆಮಿಕ್ ಪದ ಅಷ್ಟೆ. ಅದು ಯಾವ ಭಾವಲೋಕವನ್ನೂ ಸ್ಫುರಿಸುವುದಿಲ್ಲ. ಅದೇ ರೀತಿ ಎಸ್.ಸಿ./ಎಸ್.ಟಿ. ಮುಂತಾದ ಪದಗಳು ಸರಕಾರಿ ಪದಗಳು. ಈ ದೃಷ್ಟಿಯಲ್ಲಿ ಗಾಂಧಿ ಪ್ರಯೋಗಿಸಿದ 'ಹರಿಜನ' ಪದವೂ ಕೂಡ. ಆ ಬಗ್ಗೆ ಆರ್. ಮಾನಸಯ್ಯ ಅವರ ಕವನದ ಸಾಲು ಹೀಗಿದೆ.

ಮುಳ್ಳಿನ ಬದುಕಿಗೆ ಹೂವಿನ ಹೆಸರಿಟ್ಟೆ
ಕ್ರಾಂತಿಯ ಕರಗಿಸಿ ಶಾಂತಿ ಬೀಜವ ನೆಟ್ಟೆ
ಓ ನನ್ನ ಗಾಂಧಿ ನೀ ನಮ್ಮ ದೇಶಕ್ಕೆ ತಂದಿ?

ಹೌದು. ಮುಳ್ಳಿನ ಬದುಕಾಗಿರುವವರನ್ನು ಅಥವಾ ಬದುಕೇ ಮುಳ್ಳಾಗಿರುವವರನ್ನು ವಿಷ್ಣುವಿನ ಮಕ್ಕಳು ಅಂತ ಕರೆದರೆ ಅವರ ಬದುಕಿಗೆ ಆಗುವ ಪ್ರಯೋಜನವಾದರೂ ಏನು? ವಸ್ತುಸ್ಥಿತಿಯನ್ನು ಯಾವ ಹೆಸರಿನಿಂದ ಕರೆಯಬೇಕು ಎಂಬುದೂ ಕೂಡ ರಾಜಕೀಯವಾಗಿ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ 'ಪಂಚಮ' ಪತ್ರಿಕೆಯು ಪಂಚಮ ಲೋಕದ ಒಡಲುರಿಯನ್ನು ಮೊದಲ ಬಾರಿಗೆ ತೆಗೆದುತೋರಿಸಿದೆ.

ಪಂಚಮ: ನಾಡಿನ ಆತ್ಮಕಥೆ

ಪಂಚಮದ ಪುಟಪುಟಗಳಲ್ಲಿಯೂ ದುಡಿಯುವ ದಲಿತರ, ಶಿಕ್ಷಣ ಪಡೆದು ಸಂಘಟಿತರಾದ ದಲಿತರ ಕ್ರೂರ ವಸ್ತುಸ್ಥಿತಿಗಳ ಸೂಕ್ಷ್ಮಾತಿಸೂಕ್ಷ್ಮ ವಿವರಗಳು ನಿರೂಪಣೆಗೊಂಡಿವೆ. ಜೊತೆಗೆ ದಬ್ಬಾಳಿಕೆ ಮಾಡುವವರ ವಿಕೃತ ಕ್ರೌರ್ಯಗಳೂ ಅನಾವರಣಗೊಂಡಿವೆ. ಇದು ಕೇವಲ ವಸ್ತುಸ್ಥಿತಿಯ ಭೌತಿಕ ವರದಿಯನ್ನು ಮಾತ್ರ ಕೊಡುತ್ತಿಲ್ಲ. ಬದಲಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಏಳುಬೀಳಿನ ಕಥೆಯನ್ನೂ ನಿರೂಪಿಸುತ್ತಿದೆ. ಅದರೊಳಗೆ ವೈಚಾರಿಕ ಭಿನ್ನತೆಗಳೂ, ವೈಚಾರಿಕ ಸಂಘರ್ಷಗಳೂ ನಡೆದಿರುವುದನ್ನು ಕಾಣಬಹುದು. ಈ ದೃಷ್ಟಿಯಿಂದ ಪಂಚಮ ಸಂಪುಟಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ನಾಡಿನ ಬಗ್ಗೆ ಆಸಕ್ತಿ ಇರುವವರು, ಅದರಲ್ಲೂ ಸಂಶೋಧಕರು 'ಪಂಚಮ'ವನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಪಂಚಮವು ಹಸಿದವರ,
ಹತಾಶೆಗೊಂಡವರ, ನೊಂದವರ ಮತ್ತು
ಅವುಗಳ ವಿರುದ್ಧ ವೈಚಾರಿಕವಾಗಿ
ಹಾಗೂ ಭೌತಿಕವಾಗಿ ಹೋರಾಡಿದ
ಸಾಮುದಾಯಿಕ ಆತ್ಮಕಥೆ.
ಅದರ ಒಂದೊಂದು
ಪುಟವೂ ನಾಡಿನ
ಅಂತರಂಗದ
ಕ್ರೌರ್ಯವನ್ನು
ಮತ್ತದರ ವಿರೋಧಿ

(೨೬೫ನೇ ಪುಟಕ್ಕೆ)



New Mangalore Port Trust

Eco-friendly Port

Your gateway to the world market

HIGHLIGHTS

- Largest LPG handling port in India
- Deepest Inner harbour with 15.40 mtrs. depth at the entrance channel
- All weather port
- Closer to the major international sea route
- One of the largest iron ore handling ports
- First port to have state of the art cement terminal
- Equipped with modern Vessel Traffic Management System & CCTV
- Highest labour productivity among Major Port
- Regular feeder / Main line container service
- Availability of sufficient storage area - both covered and open
- Fast Turn Round of Vessel
- Deep draft berths for handling POL, other liquid cargo and general cargo
- Ideally suited port for container terminal
- All facilities focused towards complete customer satisfaction
- Ideal for handling Project cargo & heavy machinery
- Fully Computerised Port

New Mangalore Port Trust

Panambur, Mangalore - 575 010 Tel: 0091-824-2407300 Fax: 0824-2408390/2408300

Email: nmptchairman@sify.com Website: http://www.newmangalore-port.com



An ISO 9001:2008, 14001:2004 & ISPS Compliant Port

ಶಬ್ದಚಾಲಕಿಯ ಗರ್ವಭಂಗ

ಕವನ

ಇತ್ತು ನನಗೆ
ಶಬ್ದಚಾಲಕಿ ನಾನೆಂಬ ಗರ್ವ
ಸಾದಾಮಾತುಗಳಾಗಿಬಿಡುತ್ತವೆ ಶಬ್ದಗಳು
ಅವರಿವರ ಬಾಯಿಗಳಲ್ಲಿ
ತಗಡಿನ ಡಬ್ಬದೊಳಗೆ ಲೊಳಲೊಳ ಕಲ್ಲು
ನಾನಾದರೋ ಚಲಾವಣೆ ಮಾಡುತ್ತೇನೆ ಮುಖಬೆಲೆಯ
ಮೊಹರೊತ್ತಿ
ಕವಿಗಿಂತಲು ತಿಳಿದವರುಂಟೆ ಮಾತಿನ ಶಕ್ತಿ
ಇತ್ಯಾದಿ ಇತ್ಯಾದಿ

ಈಗ
ಶಬ್ದಚಾಲಕಿಯ ಗರ್ವಭಂಗ
ಸಮರ್ಥಿಸಿಕೊಳ್ಳುವುದಾದರೆ ಏನನ್ನೂ ಮಾತಿನ ಚಾಲೂಕಿನಲ್ಲಿ
ಎಂಜಲಸ್ನಾನ ಅಮೇಧ್ಯದಸ್ನಾನ ಕಂಡವರ ಶ್ರಮದಸ್ನಾನಗಳನ್ನೂ
ಅಲಂಕರಿಸುವುದಾದರೆ ಪದಪುಂಜಗಳಲ್ಲಿ
ಹೊಡಿ ಕೆರದಲ್ಲಿ ಮಾತಿನಶಕ್ತಿಗೆ
ಬಾಯೆಂಬುದು ಸಾಕು ಉಣ್ಣುವುದಕ್ಕೆ

ಕವಿತ್ವವೆಂಬುದು
ಉಗುರಿಗೆ ಬಣ್ಣಹಚ್ಚಿದ ಹುಲಿ
ತೂಕ ಮಾಡಿಕೊಟ್ಟ ಮಾಂಸ ತಿಂದು ರೂಢಿಯಾಗಿಬಿಟ್ಟರೆ
ಜಿಂಕೆ ಎದುರಿಗೇ ಬಂದು ಕೂತರೂ
ದೇಶಾವರಿ ನಗು !

ಲಲಿತಾ ಸಿದ್ಧಬಸವಯ್ಯ

ತುಮಕೂರು ಜಿಲ್ಲೆ ಕೊರಟಗೆರೆಯವರಾದ ಲಲಿತಾ ಸಿದ್ಧಬಸವಯ್ಯ ಬಿ.ಎಸ್ಸಿ ಪದವಿಧರರು. ಸರ್ಕಾರಿ ನೌಕರರಾಗಿ ನಾನಾ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಇದುವರೆಗೆ ಸ್ವಂತದ್ದಾದ ಚಿನ್ಮಯಿ ಪ್ರಕಾಶನದಿಂದ ಐದು ಕವನ ಸಂಕಲನಗಳು, ಒಂದು ನಾಟಕ, ಒಂದು ನಗೆಲೇಖನಗಳ ಸಂಗ್ರಹ, ಒಂದು ಕಥಾ ಸಂಕಲನ ಹೀಗೆ ಎಂಟು ಪುಸ್ತಕಗಳನ್ನು ಹೊರತಂದಿದ್ದಾರೆ. ಅನೇಕ ಸಾಹಿತ್ಯ ಪುರಸ್ಕಾರಗಳನ್ನು ಪಡೆದಿದ್ದಾರೆ.

ರಾಜಕೀಯ ಮತ್ತು ಸಿನಿಮಾ

ಕೃಷ್ಣ ಮಾಸಡಿ.



ಸಿನಿಮಾದಲ್ಲಿ ರಾಜಕೀಯ ಗುರುತಿಸುವುದು ಅಂದರೆ ಕಷ್ಟಕರ ಸಂಗತಿ. ಹೆಚ್ಚು ಕಡಿಮೆ ಪ್ರಪಂಚದಲ್ಲಿ ತಯಾರಾಗುವ ಚಿತ್ರಗಳು ಒಂದಲ್ಲಾ ಒಂದು ತರಹ ರಾಜಕಾರಣಕ್ಕೆ ಒಳಗಾಗಿ ತಯಾರಾಗಿರುತ್ತವೆ. ಎನೂ ಇಲ್ಲದಿದ್ದರೂ ಸಹ ತನ್ನ ಸಂಗಾತಿಗಳ ಕೊಂಕಿಗೆ ಸಿಕ್ಕೇ ಇರುತ್ತವೆ. ರಾಜಕೀಯ ಚಿತ್ರಗಳೆಂದು ಮೊದಲು ಗುರುತಿಸುವುದು ಅಮೇರಿಕದಲ್ಲಿ ತಯಾರಾದ ಚಿತ್ರಗಳನ್ನು. ಅದರಲ್ಲೂ ಡಿ.ಡಬ್ಲ್ಯೂ. ಗ್ರಿಫಿತ್ ನ 'ಬರ್ತ್ ಆಫ್ ನೇಷನ್' ನಿಂದ. ಈ ಚಿತ್ರ ತಯಾರಾಗುವ ಹೊತ್ತಿನಲ್ಲಿ ಮೊದಲ ಮಹಾಯುದ್ದದ ಸದ್ದು ನಡೆಯುತ್ತಿತ್ತು. ಈ ಗ್ರಿಫಿತ್‌ನೊಂದಿಗೆ ಚಾರ್ಲಿ ಚಾಪ್ಲಿನ್ ಸೇರಿಕೊಂಡು ಹುಟ್ಟುಹಾಕಿದ 'ಯುನೈಟೆಡ್ ಆರ್ಟಿಸ್ಟ್ಸ್' ಬಹಳ ಹೆಸರುವಾಸಿ ಸಂಸ್ಥೆ. ಗ್ರಿಫಿತ್‌ನಂತೆ ಚಾಪ್ಲಿನ್ ಸಹ ರಾಜಕೀಯ ಸ್ಪಷ್ಟತೆಹೊಂದಿದ ವ್ಯಕ್ತಿಯಾಗಿದ್ದ. ಹಾಗೆ ನೋಡಿದರೆ ಚಾಪ್ಲಿನ್‌ನೇ ಪ್ರಥಮ ರಾಜಕೀಯ ಚಿತ್ರಗಳಿಗೆ ಮತ್ತು ತನ್ನ ರಾಜಕೀಯ ದೃಷ್ಟಿಕೋನಕ್ಕೆ ಅಮೇರಿಕವನ್ನು ತೊರೆಯಬೇಕಾಯಿತು.

ಬರ್ತ್ ಆಫ್ ಎ ನೇಷನ್- ಚಿತ್ರ ೧೯೧೪ ರಲ್ಲಿ ತಯಾರಾಗಿ ೧೯೧೫ ರಲ್ಲಿ ಅಮೇರಿಕಾದಲ್ಲಿ ಬಿಡುಗಡೆ ಹೊಂದಿತು. ಈ ಚಿತ್ರದಲ್ಲಿ ಬಿಳಿ ನಟನಿಗೆ ಕಪ್ಪು ಬಣ್ಣ ಬಳಿದು ನಿಗ್ರೋ ಆಗಿ ಮಾಡಲಾಗಿತ್ತು. ಅಮೇರಿಕಾದಲ್ಲಿ ನಡೆದ ಸಿವಿಲ್ ವಾರ್‌ನ ಕತೆಯ ಹಿನ್ನಲೆಯಲ್ಲಿ ಅಬ್ರಹಾಂ ಲಿಂಕನ್ ಕಾಲಧ ಕತೆಯನ್ನೂ ಸಹ ಚಿತ್ರದಲ್ಲಿ ಹೇಳಲು ಯತ್ನಿಸಿತ್ತು. ಆದರೆ ಚಿತ್ರ ಬಿಡುಗಡೆಗೊಂಡಾಗ ಅನೇಕ ಪಟ್ಟಣ- ಊರುಗಳು ಹತ್ತಿ ಉರಿದವು. ಕೆಲವು ಕಡೆ ನಿಗ್ರೋಗಳ ಕೊಲೆಯೂ ನಡೆದು ಆಗಿನ ಅಧ್ಯಕ್ಷ ಉಡ್ರೋ ವಿಲ್ಸನ್ ಈ ಚಿತ್ರವನ್ನು

ಡಿಕ್ಟೇಟರ್ ಸಿನಿಮಾ ನೋಡಿ ಸರ್ವಾಧಿಕಾರಿಗಳಾಗಿದ್ದ ಹಿಟ್ಲರ್ ಮತ್ತು ಮುಸೋಲಿನಿ ಸಿಟ್ಟಾದರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಇಲ್ಲಿಯೇ ಇತಿಹಾಸದ ವ್ಯಂಗ್ಯವಿರುವುದು. ಅಂದರೆ ಸರ್ವಾಧಿಕಾರದ ಅಹಂಕಾರಕ್ಕೆ ಯುದ್ಧ ಮಾಡುತ್ತಿದ್ದ ಹಿಟ್ಲರ್‌ನಂತೆ ಮಿತ್ರ ಪಡೆಗಳು ತಮ್ಮ ಬಂಡಾವಾಳಶಾಹಿಯ ಪ್ರತಿಷ್ಟಾನಕ್ಕೆ ಈ ಯುದ್ಧ ಮಾಡುತ್ತಿದ್ದವು. ಏಕ ಕಾಲಕ್ಕೆ ಸರ್ವಾಧಿಕಾರವನ್ನು ಮತ್ತು ಬಂಡವಾಳಶಾಹಿಯನ್ನು ತಿರಸ್ಕರಿದ್ದ ಚಾಪ್ಲಿನ್‌ನ್ನು ಅರಗಿಸಿಕೊಳ್ಳಲು ಅಮೇರಿಕಾ ತಯಾರಿರಲಿಲ್ಲ.

ನೋಡಬೇಕಾಯಿತು. ವೈಟ್ ಹೌಸ್‌ನಲ್ಲಿ ಪ್ರಥಮ ಬಾರಿಗೆ ಪ್ರದರ್ಶನಗೊಂಡ ಚಿತ್ರ ಸಹ ಇದೆಂದು ದಾಖಲೆ ಬರೆಯಿತು. ಮೂಕಿ ಚಿತ್ರಗಳು ಆಗ ತಾನೆ ಗರಿಗಟ್ಟಿಕೊಳ್ಳುತ್ತಿದ್ದ ಕಾಲದಲ್ಲಿ ಅದೂ ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಗ್ರಿಫಿತ್‌ನ 'ಬರ್ತ್ ಆಫ್ ಎ ನೇಷನ್' ರಾಜಕೀಯ ಸಿನಿಮಾಗಳ ಬಗ್ಗೆ ಮಾತನಾಡುವಾಗ ನಿಸ್ಸಂಶಯವಾಗಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ.

ಅದೇ ರೀತಿ ಗ್ರಿಫಿತ್‌ನ ಸ್ನೇಹಿತ ಮತ್ತು ಪಾಲುದಾರನಾಗಿದ್ದ ಚಾರ್ಲಿ ಚಾಪ್ಲಿನ್ ಸಹ ತನ್ನ ಸಿನಿಮಾಗಳ ಮೂಲಕ ರಾಜಕೀಯ ತಲ್ಲಣಗಳನ್ನು ಸೃಷ್ಟಿಸಿದ ಇನ್ನೊಬ್ಬ ಮಹನೀಯ. ಚಾಪ್ಲಿನ್‌ನ್ನು ಅರಿಯದ ಜನ ಪ್ರಪಂಚದಲ್ಲಿ ಇಲ್ಲವೆಂದು ಒಂದು ಅಂದಾಜು. ಅದೂ ಈಗಲೂ ಹುಟ್ಟುತ್ತಿರುವ ಮಗುವಿನಿಂದ ಹಿಡಿದು, ಭಾಷೆ ದೇಶಗಳ ಎಲ್ಲೇ ಮೀರಿ ಅವನು ಖ್ಯಾತಿ ಪಡೆದ ಪರಿಚಯವಾಗುತ್ತಿರುವ ಇನ್ನೊಬ್ಬ ಜಾಗತಿಕ ನಟ. ಇಂಗ್ಲೆಂಡ್‌ನ ಸ್ಲಂನಲ್ಲಿ ಹುಟ್ಟಿ ಅಮೇರಿಕಾದ ಮೂಕಿ ಚಿತ್ರಗಳಲ್ಲಿ ಖ್ಯಾತನಾದ ಚಾಪ್ಲಿನ್ ತನ್ನ 'ಟ್ರ್ಯಾಂಪ್' ಅಲೆಮಾರಿ ವೇಷದಿಂದ ಮತ್ತು ತನ್ನದೆ ವಿಶೇಷ ನಟನೆಯಿಂದ ಹೆಸರುವಾಸಿಯಾದವನು. ಇವನೂ ಸಹ ಎರಡು ಮಹಾಯುದ್ಧಗಳನ್ನು ಕಂಡವನು ಮತ್ತು ಆ ಸಮಯದಲ್ಲಿ ಚಿತ್ರಗಳನ್ನು ನಿರ್ಮಿಸಿದವನು. ಮೊದಲನೇ ಮಹಾಯುದ್ಧದ ಸಮಯದಲ್ಲಿ ಅವನು ರಾಜಕೀಯ ಪ್ರೇರಿತ ಸಿನಿಮಾಗಳನ್ನು ನಿರ್ಮಿಸಿಲ್ಲ ಅಂತ ಕಾಣುತ್ತದೆ. ಆದರೆ 'ಕಿಡ್' ೧೯೨೧ ರಲ್ಲಿ ತೆರೆಕಂಡಿತು. ಅದೇ ರೀತಿ 'ಸಿಟಿ ಲೈಟ್ಸ್' ಸಹ ಆ ದಶಕದಲ್ಲಿಯೇ ತೆರೆಕಂಡಿತು. ಇಡೀ ಅಮೇರಿಕಾ ಅವನ ಸಿನಿಮಾಗಳಿಂದ ತಮ್ಮ ಸ್ಥಿತಿಯನ್ನು ನೆನೆಯುತ್ತಲೇ ವಿಡಂಬನೆಯ ತಮಾಷೆಯಿಂದ ನಕ್ಕು ವಿಷಾದ ಭಾವನೆಯಿಂದ ಮನೆಗೆ ಮರಳುತ್ತಿದ್ದರು. ಈ ರೀತಿ ಜನ ಮುಗಿಬಿದ್ದು ಅವನ ಚಿತ್ರಗಳಿಂದ ಪ್ರಭಾವಿತವಾಗುವುದು ಪ್ರಭುತ್ವ ನಡೆಸುವ ರಾಜಕೀಯಸ್ಥರಿಗೆ–ಅಧಿಕಾರಿಗಳಿಗೆ ಬೇಕಿರಲಿಲ್ಲ ಅಂತ ಕಾಣುತ್ತದೆ. ಸದಾ ಸಮಾನತೆ ಸಮಾಜವಾದದ ಕನಸನ್ನು ನಂಬಿದ್ದ ಚಾಪ್ಲಿನ್ ಮೇಲೆ ಅಮೇರಿಕಾದವರು ಒಂದು ಕಣ್ಣು ನೆಟ್ಟೇ ಇದ್ದರು.

೧೯೩೧ರಲ್ಲಿ ಚಾಪ್ಲಿನ್ ಲಂಡನ್‌ನಲ್ಲಿ ಗಾಂಧೀಜಿಯನ್ನು ಭೇಟಿಯಾಗುತ್ತಾನೆ. ಆದಾದ ನಂತರ ಅವನ 'ಮಾಡ್ರನ್ ಟೈಂಸ್' ೧೯೩೬ರಲ್ಲಿ ತೆರೆ ಕಂಡಿತು. ಯುರೋಪ್ ಮತ್ತು ಅಮೇರಿಕಾಗಳು ಕೈಗಾರಿಕಾರಣದ ಕಡೆ ಮುಖ ಮಾಡಿ ಅಪ್ಪಿಕೊಳ್ಳುತ್ತಿರುವಾಗ ಚಾಪ್ಲಿನ್ ಅದರ ಪೊಳ್ಳುತನವನ್ನು ಗೇಲಿ ಮಾಡುತ್ತಾನೆ. ಚಿತ್ರದ ಆರಂಭವೇ ಮನುಷ್ಯ ಮತ್ತು ಕುರಿಗಳ ನಡುವೆ ಇರದ ಅಂತರದಿಂದ ಎನ್ನುವುದು ಇಲ್ಲಿ ಪ್ರಮುಖವಾಗಿ ಉಲ್ಲೇಖಿಸಬಹುದುದಾಗಿದೆ. ಕುರಿಗಳ ಮಂದೆಯೊಂದಿಗೆ ಮನುಷ್ಯರ ಗುಂಪನ್ನು ಮಿಕ್ಸ್ ಮಾಡಿ ಅಭಿವ್ಯಕ್ತಿ ಇಲ್ಲದ ಮನುಷ್ಯನ ಸ್ಥಿತಿಯನ್ನು ಒಂದೇ ಶಾಟ್‌ನೊಳಗೆ ಚಾಪ್ಲಿನ್ ತೋರಿಸಿರುವುದು ಏಕ ಕಾಲಕ್ಕೆ ಸಿನಿಮಾದಲ್ಲಿನ ಅವನ ಹಿಡಿತ ಮತ್ತು ಮನುಷ್ಯನ ಪ್ರಭೆಗೆ ಅವನಿಗಿರುವ ತುಡಿತ ಒಟ್ಟಿಗೆ ನಮಗೆ ಕಂಡುಬರುತ್ತದೆ. ಎರಡನೇ ಮಹಾಯುದ್ಧ ನಡೆಯುತ್ತಿರುವಾಗಲೇ ಅವನು ತಯಾರಿಸಿದ 'ಗ್ರೇಟ್ ಡಿಕ್ಟೇಟರ್' ೧೯೪೦ರಲ್ಲಿ ತೆರೆಕಂಡಿತು. ಹಿಟ್ಲರ್ ಬದುಕಿದ್ದಾಗಲೆ ಅದೂ ಪ್ರಪಂಚವನ್ನು ತನ್ನ ಅಡಿಯಾಳನ್ನಾಗಿ ಮಾಡಿಕೊಳ್ಳುವ ಹಂಬಲದಿಂದ ಯುದ್ಧ ಆರಂಭಿಸಿದ ಸಮಯದಲ್ಲಿಯೇ ಅವನನ್ನು ಕುರಿತು ಚಾಪ್ಲಿನ್ 'ಗ್ರೇಟ್ ಡಿಕ್ಟೇಟರ್' ಮಾಡಿದ್ದು ಐತಿಹಾಸಿಕವಾಗಿ ನೆನಪಿಸಿಕೊಳ್ಳುವ ಘಟನೆಯಾಗಿದೆ. ಒಬ್ಬನನ್ನೇ ಹೋಲುವ ಇಬ್ಬರು. ಒಬ್ಬ ಕ್ಷೌರಿಕ ಇನ್ನೊಬ್ಬ ಸರ್ವಾಧಿಕಾರಿ. ಸಾಮಾನ್ಯವಾಗಿ ನಾವು ನೋಡುತ್ತಾ ಬಂದಿರುವ ಮತ್ತು ಚರಿತ್ರೆಗಳಲ್ಲಿ ದಾಖಲಾದ ಸರ್ವಾಧಿಕಾರಿಗಳ ನಡತೆ ಅವರ ಸಿನಿಕತನ, ಅವರ ವ್ಯಾಮೋಹ, ಅವರ ಪುಕ್ಕಲುತನ, ಅವರ ಖಯಾಲಿಗಳು, ಪ್ರಪಂಚವನ್ನೇ ತನ್ನ ಕಾಲ ಬುಡದಲ್ಲಿ ಕೆಡವಿಕೊಳ್ಳುವ ಅವರ ಉತ್ಕಟ ಆಸೆ ಮತ್ತು ಅವರ ಚಡಪಡಿಕೆಗಳನ್ನು ಈ ಸಿನಿಮಾದಲ್ಲಿ ಚಾಪ್ಲಿನ್ ಎಷ್ಟು ಚೆನ್ನಾಗಿ ಅಭಿನಯಿಸಿ ತೋರಿಸಿದ್ದಾನೆಂದರೆ ಅದನ್ನು ಎಷ್ಟು ಹೊಗಳಿದರೂ ಅದು ಕಡಿಮೆಯೇ? ಏಕೆಂದರೆ ಅವನು ಕೇವಲ ಆಗಿದ್ದ ಹಿಟ್ಲರ್ ಮತ್ತು ಮುಸೋಲಿನಿಯರನ್ನಷ್ಟೇ ಅಲ್ಲ ತದನಂತರ ಜಗತ್ತು ಕಂಡ ಸರ್ವಾಧಿಕಾರಿಗಳು ಹೆಚ್ಚು ಕಡಿಮೆ ಅದೇ ತೆರಹನಾದ ತೆವಲುಗಳಿಂದ ನರಳುತ್ತಿದ್ದವರಾಗಿದ್ದರು. ಉದಾಹರಣೆಗೆ– ಈದಿ ಅಮೀನ್, ಸದ್ದಾಂ ಹುಸೇನ್, ಗಢಾಫಿ, ಜಿಯಾಉಲ್‌ಹಕ್, ಚೆಶನ್‌ಷೋಕೊ ಮುಂತಾದ ಅನೇಕರನ್ನು ನೋಡಿದರೆ ಮತ್ತು ಈಗಲೂ 'ನಾನೇ ಸರ್ವ ಶ್ರೇಷ್ಠ' ಎಂದು ನರಳುವ ಅನೇಕ ನಾಯಕರನ್ನು ನೋಡಿದರೆ ಚಾಪ್ಲಿನ್ ಹೇಳಿದ ಮತ್ತು ಅಭಿನಯ ಮಾಡಿ ತೋರಿಸಿದ ಗ್ರೇಟ್ ಡಿಕ್ಟೇಟರ್‌ನ ಕೆಲ ಭಾಗಕ್ಕೆ ಸರಿಯಾಗಿ ಹೊಂದುತ್ತಾರೆ.

ಈ ಸಿನಿಮಾದಿಂದ ಸರ್ವಾಧಿಕಾರಿಗಳಾಗಿದ್ದ ಹಿಟ್ಲರ್ ಮತ್ತು ಮುಸೋಲಿನಿ ಸಿಟ್ಟಾದರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಇಲ್ಲಿಯೇ ಇತಿಹಾಸದ ವ್ಯಂಗ್ಯವಿರುವುದು. ಅಂದರೆ ಸರ್ವಾಧಿಕಾರದ ಅಹಂಕಾರಕ್ಕೆ ಯುದ್ಧ ಮಾಡುತ್ತಿದ್ದ ಹಿಟ್ಲರ್‌ನಂತೆ ಮಿತ್ರ ಪಡೆಗಳು ತಮ್ಮ ಬಂಡಾವಾಳಶಾಹಿಯ ಪ್ರತಿಷ್ಟಾನಕ್ಕೆ ಈ ಯುದ್ಧ ಮಾಡುತ್ತಿದ್ದವು. ಏಕ ಕಾಲಕ್ಕೆ ಸರ್ವಾಧಿಕಾರವನ್ನು ಮತ್ತು ಬಂಡವಾಳಶಾಹಿಯನ್ನು ತಿರಸ್ಕರಿದ್ದ ಚಾಪ್ಲಿನ್‌ನ್ನು ಅರಗಿಸಿಕೊಳ್ಳಲು ಅಮೇರಿಕಾ ತಯಾರಿರಲಿಲ್ಲ. ಅವನು ಕಮ್ಯುನಿಷ್ಟ್ ಪರ ಸಹಾನುಭೂತಿ ಹೊಂದಿದ್ದಾನೆ ಸಮಾನತೆಯ ನೀತಿ ಪಾಠ ಹೇಳುತ್ತಿದ್ದಾನೆಂದು ೧೯೫೦ ರಲ್ಲಿ ತನ್ನ ದೇಶದೊಳಗೆ ಬಿಟ್ಟುಕೊಳ್ಳಲು ತಕರಾರು ತೆಗೆಯಿತು.





ಗ್ರೀಕ್ ದೇಶದ ಕೊಸ್ಟಾ ಗೋವರಸ್ ನಿರ್ದೇಶಿಸಿ ೧೯೬೯ ರಲ್ಲಿ ತೆರೆಕಂಡ ಫ್ರೆಂಚ್ ಚಿತ್ರ 'ಜಡ್' ಎಂಬ ಚಿತ್ರ ರಾಜಕೀಯವಾಗಿ ಅಲ್ಲೋಲ ಕಲ್ಲೋಲ ಮಾಡಿತು. ಈ ಚಿತ್ರವೂ ಕೂಡ ಸತ್ಯಘಟನೆಗಳನ್ನು ಆಧರಿಸಿ ತಯಾರಾಗಿತ್ತು. ೧೯೬೩ರಲ್ಲಿ ಗ್ರೀಸ್‌ನಲ್ಲಿ ರಾಜಕೀಯ ಮುಖಂಡನೊಬ್ಬನ ಹತ್ಯೆ ನಡೆದಿರುತ್ತದೆ. ಇದನ್ನು ಯಥಾವತ್ತಾಗಿ ಸಸ್ಪೆನ್ಸ್ ಥ್ರಿಲ್ಲರ್ ರೀತಿ ಈ ಸಿನಿಮಾವನ್ನು ಗೋವರಸ್ ಮಾಡಿದ್ದ.

ತಾನು ಹುಟ್ಟಿದ ತಾಯ್ನಾಡು ಇಂಗೆಂಡ್ ಸಹ ಅಮೇರಿಕಾವನ್ನು ಹಿಂಬಾಲಿಸುತ್ತಿದ್ದರಿಂದ ಅದೂ ಚಾಪ್ಲಿನ್‌ಗೆ ಆದರದ ಸ್ವಾಗತ ನೀಡಲಿಲ್ಲ. ಅವನು ಕೊನೆಗೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನೆಲೆಯೂರಬೇಕಾಯಿತು. 'ಗ್ರೇಟ್ ಡಿಕ್ಟೇಟರ್' ಚಾಪ್ಲಿನ್‌ನ ಮೊದಲ ಟಾಕಿ ಚಿತ್ರವಾಗಿತ್ತು.

ಇದು ಮೂಕಿ ಚಿತ್ರದಿಂದ ಹಿಡಿದು ಟಾಕಿಚಿತ್ರದ ರಾಜಕೀಯವಾಯ್ತು. ಬೇರೆ ವಿಷಯಕ್ಕೆ ಹೊರಳುವ ಮೊದಲು ಈ ಸಂಬಂಧ ದಾಖಲಿಸುವ ಇನ್ನೊಂದು ಘಟನೆ. ಕೊಸ್ಟಾ ಗೋವರಸ್ ಎಂಬ ಗ್ರೀಕ್ ಸಿನಿಮಾ ನಿರ್ದೇಶಕ ೧೯೮೨ ರಲ್ಲಿ 'ಮಿಸ್ಸಿಂಗ್' ಎನ್ನುವ ಹಾಲಿವುಡ್ ಸಿನಿಮಾ ಮಾಡುತ್ತಾನೆ. ಅದು ಅನೇಕ ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತದೆ. ಮುಖ್ಯವಾಗಿ ಕ್ಯಾನ್ ಉತ್ಸವದ ಪ್ರಮುಖ ಪ್ರಶಸ್ತಿ ಮತ್ತು ಹಾಲಿವುಡ್‌ನ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ. ಈ ಆಸ್ಕರ್ ಪ್ರಶಸ್ತಿ ಕೊಟ್ಟ ನಂತರ ಅಮೇರಿಕದವರಿಗೆ ಗೊತ್ತಾಯ್ತು ಈ ಸಿನಿಮಾ ಅಮೇರಿಕಾದ ವಿದೇಶಾಂಗ ಪದ್ಧತಿಯ ವಿರುದ್ಧ ಇದೆ ಎಂದು. ನಂತರ ಅದು ಮಾಡಬಾರದ ಮಸಲತ್ತುಗಳನ್ನು ಮಾಡಲು ಹೋಗಿ ಸಿಕ್ಕಿಹಾಕಿಕೊಂಡ ಸುದ್ದಿ ಈಗಲೂ ನನ್ನ ಮನಸ್ಸಿನಲ್ಲಿದೆ. ಈ ಚಿತ್ರ ಒಂದು ನಡೆದ ಘಟನೆಯನ್ನು ಆಧರಿಸಿ ತಯಾರಾಗಿತ್ತು. ಅದೇನೆಂದರೆ ಸದಾಕಾಲ ಬಲಪಂಥೀಯ ಒಲವುಗಳನ್ನುಳ್ಳ ವ್ಯಾಪಾರಿಯ ಮಗ ಕಾಣೆಯಾಗಿರುತ್ತಾನೆ. ಅವನ ಮಗ ಪತ್ರಕರ್ತನಾಗಿದ್ದು ಚಿಲಿ ದೇಶಕ್ಕೆ ರಿಪೋರ್ಟ್ ಮಾಡಲು ಹೋಗಿರುತ್ತಾನೆ. ಅಲ್ಲಿ ಅವನು ಕಾಣೆಯಾಗಿದ್ದು ಅವನ ಹೆಂಡತಿ ತನ್ನ ಮಾವನ ಸಹಾಯದಿಂದ ಆ ದೇಶಕ್ಕೆ ಹೋಗಿ ತನ್ನ ಗಂಡನ ಹುಡುಕಾಟದಲ್ಲಿ ತೊಡಗುವುದು ಕತೆ. ಇದು ನಡೆಯುವುದು ೧೯೭೩ರ ಸುಮಾರು. ಚಿಲಿಯಲ್ಲಿ ಜನರಿಂದ ಆಯ್ಕೆಯಾದ ಸಲ್ವಡೇರ್ ಅಲ್ಲಂಡೆ ಅಧ್ಯಕ್ಷನಾಗಿರುತ್ತಾನೆ. ಆದರೆ ಅಮೇರಿಕಾಗೆ

ಅವನು ಬೇಕಿರುವುದಿಲ್ಲ. ಹಾಗಾಗಿ ಪಿನೋಷೆ ಎಂಬ ಸೈನ್ಯಾಧಿಕಾರಿಯನ್ನು ತಮ್ಮ ಗುಲಾಮನಂತೆ ನೇಮಿಸಿ ಅಲ್ಲಂಡೆಯನ್ನು ಹತ್ಯೆಗೈಯುತ್ತಾರೆ. ಅಗಸ್ಟೋ ಪಿನೋಷೆ ಸರ್ವಾಧಿಕಾರದ ಪಟ್ಟ ಪಡೆದು ತನಗೆ ಆಗದವರನ್ನು ಹತ್ಯೆಗೈಯುತ್ತಾ ಬರುತ್ತಾನೆ. ಹೀಗೆ ಹತ್ಯೆಗೊಳಗಾದ ಪತ್ರಕರ್ತ ಮಗನ ಹೆಣ ಪಡೆದುಕೊಳ್ಳುತ್ತಲೇ ತನ್ನ ದೇಶದ ವಿಚ್ಛಿದ್ರಕಾರಕ ನೀತಿಯನ್ನು ತಿಳಿಯುತ್ತಾ ತನ್ನ ಸೊಸೆಯೊಂದಿಗೆ ಮನುಷ್ಯ ಸಂಬಂಧ ಬೆಸೆಯುವ ವ್ಯಾಪಾರಿ ಚಿತ್ರದಲ್ಲಿ ಕಾಣುತ್ತಾನೆ. ಈ ಪಾತ್ರದಲ್ಲಿ ಜಾಕ್ ಲೆಮನ್ ಅದ್ಭುತವಾಗಿ ನಟಿಸಿದ್ದನ್ನು ಇಲ್ಲಿ ಹೇಳಲೇಬೇಕು. ಸರಿ ಚಿತ್ರಕ್ಕೆ ಪ್ರಶಸ್ತಿ ಕೊಟ್ಟಾಗಿದೆ.. ಅದನ್ನು ನಿಷೇಧಿಸಲು ಇನ್ನಿಲ್ಲದ ಕಸರತ್ತನ್ನು ಮಾಡಿ ಕೊನೆಗೆ ಆ ದೇಶ ಚಿಲಿಯಲ್ಲ ಮತ್ತು ನಡೆದಿದ್ದು ಕಾಲ್ಪನಿಕ ಎಂದು ಹಾಕಿಸಿಕೊಳ್ಳುವಲ್ಲಿ ಅಮೇರಿಕ ಯಶಸ್ವಿಯಾಯಿತು. ಈ ಆಗಸ್ಟೋ ಪಿನೋಷೆಯ ದಬ್ಬಾಳಿಕೆಗೆ ಜನ ಬೇಸತ್ತು ಸೆರೆಹಿಡಿದು ಇಂಗ್ಲೆಂಡ್‌ನಲ್ಲಿ ಇಡಲಾಗುತ್ತದೆ. ಆದರೆ ವಿಚಾರಣೆ ನಡೆಸದೆ ನಾಟಕವಾಡಿ ಮತ್ತೆ ಚಿಲಿಗೆ ಕಳಿಸಲಾಗುತ್ತೆ. ಅಲ್ಲಿ ಅವನು ೨೦೦೬ರಲ್ಲಿ ಸಾಯುತ್ತಾನೆ.

ಗ್ರೀಸ್‌ನಲ್ಲಿ ರಾಜಕೀಯ ಮುಖಂಡನೊಬ್ಬನ ಹತ್ಯೆ ನಡೆದಿರುತ್ತದೆ. ಇದನ್ನು ಯಥಾವತ್ತಾಗಿ ಸಸ್ಪೆನ್ಸ್ ಥ್ರಿಲ್ಲರ್ ರೀತಿ ಈ ಸಿನಿಮಾವನ್ನು ಗೋವರಸ್ ಮಾಡಿದ್ದ. ಆದರೆ 'ಮಿಸ್ಸಿಂಗ್' ಚಿತ್ರಕ್ಕೆ ಆದಷ್ಟು ಹಾನಿ ಈ ಚಿತ್ರಕ್ಕಷ್ಟು ಆಗಲಿಲ್ಲ. ಏಕೆಂದರೆ ಇದ್ದುದರಲ್ಲಿಯೇ ಸ್ವಲ್ಪ ಉದಾರಿಗಳಾದ ಫ್ರಾನ್ಸ್‌ನಲ್ಲಿ ಇದು ತಯಾರಾಗಿತ್ತು. ಈಗಲೂ ನೀವು ಅಮೇರಿಕಾದ ಚಿತ್ರಗಳನ್ನು ನೋಡಿ ಒಬ್ಬನೇ ಹಿರೋ ಅಫ್ಘಾನಿಸ್ತಾನಕ್ಕೋ, ರಷ್ಯಾಕ್ಕೋ ಹೋಗಿ ಅಲ್ಲಿ ಅಡಗಿರುವ ಅಮೇರಿಕಾ ವಿರೋಧಿಗಳನ್ನು ಸದೆ ಬಡಿದು ಬರುವಂತ ಕಾಲ್ಪನಿಕ ಕತೆಗಳ ದರಿದ್ರಗಳೇ ಬರುತ್ತಿವೆ ಮತ್ತು ಬರುತ್ತಿರುತ್ತವೆ. ಇದ್ದುದರಲ್ಲಿ ಯುರೋಪ್ ನಲ್ಲಿಯೇ ಹೆಚ್ಚು ಕ್ರಿಯಾಶೀಲ ಮತ್ತು ರಾಜಕೀಯ ಪ್ರಜ್ಞೆಗಳುಳ್ಳ ಚಿತ್ರಗಳು ಬರುತ್ತಿವೆ.

ಪೋಲೆಂಡ್‌ನ ಕಮ್ಯುನಿಷ್ಟ್ ಆಡಳಿತ ಇದ್ದಾಗ ತಯಾರಾದ 'ಇಂಟರಾಗೇಷನ್' ಎಂಬ ಚಿತ್ರ ರಾಜಕೀಯವಾಗಿ ಸುದ್ಧಿ ಮಾಡಿದ ಒಳ್ಳೆಯ ಚಿತ್ರ. ಕಮ್ಯುನಿಷ್ಟರಿಗೆ ವಿರೋಧವಿತ್ತೆಂದು ೧೯೮೨ರಲ್ಲಿ ತಯಾರಾದ ಈ ಚಿತ್ರಕ್ಕೆ ೧೯೮೯ರಲ್ಲಿ ಬಿಡುಗಡೆಗೊಳಿಸಲು ಅನುಮತಿ ನೀಡಲಾಯಿತು. ಅಷ್ಟರಲ್ಲಿ ಸೋವಿಯಟ್ ಯುನಿಯನ್ ಎಂಬ ಕಮ್ಯುನಿಷ್ಟರ ಮಾಯದ ಮುಸುಕು ಸರಿದು ವಾಸ್ತವಾಂಶ



ಎಲ್ಲಾ ಕಡೆ ಹಾಡಿ ಹೊಗಳುವಂತೆ ಎಲ್ಲರ ಕನಸೂ ಅಮೇರಿಕಾ ಎಂದು ಹಪಹಪಿಸುವ ಅಮೇರಿಕಾ ಆಳದಲ್ಲಿ ಎಷ್ಟು ಕ್ರೂರವಾಗಿತ್ತು ಎನ್ನುವುದು ಮೇಲಿನ ಸಿನಿಮಾಗಳ ಉದಾಹರಣೆಯ ಮೂಲಕ ನೋಡಬಹುದಾಗಿದೆ. ಈಗಲೂ ಸ್ವಚ್ಚಂದ ಮತ್ತು ಮುಕ್ತತೆಗೆ ಇನ್ನೊಂದು ಹೆಸರು ಅಮೇರಿಕಾ ಎಂದು ಬೊಬ್ಬೆ ಹೊಡೆಯುವವರು ಒಮ್ಮೆ ಅವರ ವಿದೇಶಿ ಪಾಲಸಿಯನ್ನು ನೋಡಬಹುದಾಗಿದೆ. ಆ ದೇಶ ಈಗಲೂ ತನ್ನ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಮತ್ತು ತನ್ನ ದುರಾಸೆಯ ಯಜಮಾನ್ಯದ ಹಿಡಿತದ ಹಪಹಪಿಗೆ ತವಕಿಸುತ್ತಾ ಬಡ ಮತ್ತು ಅನಕ್ಷರಸ್ತ ರಾಷ್ಟ್ರಗಳ ಜನರನ್ನು ಅವರ ನಾಯಕ ಸರಿಯಲ್ಲವೆಂದೋ ಅಥವಾ ಅವರಿಗೆ ಮನುಷ್ಯತ್ವದ ಹಕ್ಕುಗಳೇ ಇಲ್ಲವೆಂದೋ ಹುಯಿಲೆಬ್ಬಿಸಿ ಆ ದೇಶದೊಳಗೆ ಹೋಗಿ ಜನರನ್ನು ಇರುವೆಗಳ ತರಹ ಸಾಯಿಸುತ್ತಾ ತಮ್ಮ ರಕ್ತದಾಹವನ್ನು ಇಂಗಿಸಿಕೊಳ್ಳುತ್ತಿರುವುದನ್ನು ನಾವು ಈಗಲೂ ನೋಡಬಹುದಾಗಿದೆ. ಈ ಸದ್ದಾಂ ಹುಸೇನ್ ಈ ಬಿನ್‌ಲಾಡೆನ್‌ಗಳು ಈ ಅಮೇರಿಕವೇ ಸೃಷ್ಟಿ ಮಾಡಿ ಬೆಳೆಸಿದ್ದು ಎಂಬುದು ಇತಿಹಾಸ. ಆದರೆ ಪಕ್ಕಾ ಬಂಡವಾಳಿಗರ ಕೈಯಲ್ಲಿರುವ ಈ ಮೀಡಿಯಾ ಈ ಇತಿಹಾಸವನ್ನು ಕಡೆಯ ಪಕ್ಷ ಅವರ ಮರಣದ ಸಮಯದಲ್ಲಾದರೂ ನೆನೆಯಬಹುದಿತ್ತು ಆದರೆ ನೆನಪಿಸಿಕೊಳ್ಳುತ್ತಿಲ್ಲ ಅಷ್ಟೆ?

ಗ್ರೀಕ್ ದೇಶದ ಕೊಸ್ತಾ ಗೋವರಸ್ ನಿರ್ದೇಶಿಸಿ ೧೯೬೯ ರಲ್ಲಿ ತೆರೆಕಂಡ ಫ್ರೆಂಚ್ ಚಿತ್ರ 'ಜಡ್' ಎಂಬ ಚಿತ್ರ ರಾಜಕೀಯವಾಗಿ ಅಲ್ಲೋಲ ಕಲ್ಲೋಲ ಮಾಡಿತು. ಈ ಚಿತ್ರವೂ ಕೂಡ ಸತ್ಯಘಟನೆಗಳನ್ನು ಆಧರಿಸಿ ತಯಾರಾಗಿತ್ತು. ೧೯೬೩ರಲ್ಲಿ

ಜಗತ್ತಿಗೆ ತೆರೆದಿತ್ತು. ಸೋವಿಯಟ್ ಯುನಿಯನ್ ಪ್ರವರ್ಧಮಾನದಲ್ಲಿರುವಾಗ ಬೋರಿಸ್ ಪಾಸ್ತಾರ್‌ನಾಕ್ ಬರೆದ ಕಾದಂಬರಿ 'ಡಾ.ಜಿವಾಗೋ' ಕಳ್ಳತನದಿಂದ ವಿದೇಶಕ್ಕೆ ಬಂದು ೧೯೫೭ ರಲ್ಲಿ ಪ್ರಕಟಗೊಂಡಿತು. ೧೯೫೮ರಲ್ಲಿ ಪಾಸ್ತಾರ್‌ನಾಕ್‌ಗೆ ನೋಬಲ್ ಪ್ರಶಸ್ತಿ ಬರುತ್ತದೆ. ಸ್ಟ್ಯಾಲಿನ್ ಮತ್ತು ಕಮ್ಯುನಿಷ್ಟರ ನಿಷ್ಠುರ ಟೀಕಾಕಾರವಾಗಿದ್ದ ಕಾದಂಬರಿಯನ್ನು ಆಧರಿಸಿ ಡೆವಿಡ್‌ಲೀನ್ ೧೯೬೫ ರಲ್ಲಿ ಚಿತ್ರ ತಯಾರಿಸುತ್ತಾನೆ. ಈ ಚಿತ್ರ ನಾನು ಅತ್ಯಂತ ಇಷ್ಟಪಡುವ ಚಿತ್ರ. 'ಡಾ.ಜಿವಾಗೋ' ಅಂತಹ ಚಿತ್ರಗಳ ಅಂತರಂಗವನ್ನು ನೋಡಲು ಒಬ್ಬ ಗೋರ್ಬಚೋವ್ ಬರಬೇಕಾಯಿತು. ಸೋವಿಯಟ್ ಯುನಿಯನ್ ಒಡೆದು ಚೂರಾಗಿ ಅಕ್ಕ ಪಕ್ಕದ ರಾಜ್ಯಗಳು ಜನಾಂಗ ದ್ವೇಷ-ದಳ್ಳುರಿಯಲ್ಲಿ ಹೊತ್ತಿ ಉರಿದವು. ಈಗಲೂ ಕೆಲವು ಕಡೆ ಹೊಡೆದಾಡಿ ಸಾಯುತ್ತಿದ್ದಾರೆ. ದೇವರು-ದಿಂಡಿರು, ಜಾತಿ-ಮತ ಇಲ್ಲದೆ ಎರಡು ಮೂರು ತಲೆಮಾರು ಬದುಕಿದ ಈ ಜನ ತಾನು ಕ್ರಿಶ್ಚಿಯನ್, ತಾನು ಮುಸ್ಲಿಂ, ತಾನು ಸ್ಲೋವಿಕ್, ತಾನು ಕ್ರೋವೆಕ್ ಎಂದು ಒಬ್ಬರಿಗೊಬ್ಬರು ಕೊಲೆ ಮಾಡಿಕೊಳ್ಳುತ್ತಾ ಇರುವುದನ್ನು ನೋಡಿದರೆ ಮನುಷ್ಯ ಮೂಲತಃ ದುಷ್ಟಪ್ರಾಣಿ ಸಂಕುಲ ಎನ್ನಬಹುದೇನೋ? ಈ ಕುರಿತು ಅನೇಕ ರಾಜಕೀಯ ಉತ್ತಮ ಚಿತ್ರಗಳು ಪೂರ್ವ ಯುರೋಪ್‌ನಲ್ಲಿ ತಯಾರಾಗಿವೆ. ಅದೇ



Jahan Mobile Phone,
Wahan CorpBank Branch.

Welcome to a new era of convenience in Banking.
With Mobile Banking features that let you transact from wherever you are.

Mobile Banking Features

- Shop at Merchant Establishments
- Pay Utility Bills
- Book Air/Train Tickets
- Request Cheque Book
- Request renewal of your deposit
- Transfer of funds to third party within the bank
- Transfer funds to account with other Banks - NEFT
- Get latest transactions details of any of your account
- Enquire your account balance
- Transfer funds between your accounts
- Get Cheque clearance status
- Stop Cheque payments

Contact your nearest branch or call Toll Free 1800 425 3555

Conditions apply www.corpbank.in

कार्पोरेशन बैंक Corporation Bank

A Premier Public Sector Bank

ಸಿನಿಮಾ ಮತ್ತು ರಾಜಕೀಯ ಕುರಿತು ಹೇಳುತ್ತಾ ಹೋಗುತ್ತಿದ್ದಂತೆ ಅದಕ್ಕೆ ಕೊನೆಯೆಂಬುದು ಸಿಗುವುದಿಲ್ಲ. ಏಕೆಂದರೆ ರಾಜಕೀಯ ಅನ್ನುವುದೇ ಒಂದು ಮಾಯಾಂಗನೆ. ಈ ಮಾಯಾಂಗನೆಯ ಬೆನ್ನು ಹತ್ತಿದ ಈ ಮಾಯಾಲೋಕ ಎಂಬ ಸಿನಿಮಾ ಸೃಷ್ಟಿಸುವವರು, ಸೃಷ್ಟಿಸಿದವರು ಇಲ್ಲಿ ಹೇಳಬೇಕಾದ ಅನೇಕರು ಉಳಿದುಬಿಟ್ಟಿದ್ದಾರೆ.

ರೀತಿ ತಮ್ಮದೇ ನೆಲವನ್ನು ಬಿಟ್ಟುಕೊಟ್ಟು ತಾವೇ ಕೆಲಸವಿಲ್ಲದೆ, ಸ್ವಾತಂತ್ರ್ಯವಿಲ್ಲದೆ, ನಿಲ್ಲಲು ನೆಲೆ ಇಲ್ಲದೆ ಇಸ್ರೇಲ್ ಎಂಬ ದೇಶದ ಮಿಲಿಟರಿ ಕೆಳಗೆ ಬದುಕುತ್ತಿರುವ ಪಾಲೇಸ್ತಿನ್‌ರು ತಯಾರಿಸಿದ ಅನೇಕ ರಾಜಕೀಯ ಚಿತ್ರಗಳು ಬಂದಿವೆ. ಅವುಗಳಲ್ಲಿ ಕೆಲವು ಉತ್ತಮ ಮಟ್ಟದಲ್ಲಿವೆ. ಅದೇ ರೀತಿ ಸೌಹಾರ್ದ ಬದುಕಿಗೆ ಹಂಬಲಿಸುವ ಇಸ್ರೇಲ್ ಚಿತ್ರಗಳು ಸಹ ಹೆಸರು ಮಾಡಿವೆ. ಈಗ ಅರಬ್ ದೇಶದಲ್ಲಿ ಪ್ರಥಮಬಾರಿಗೆ ಜನಜಾಗೃತಿ ಮೂಡುತ್ತಿದೆ. ಈ ಜನಜಾಗೃತಿ ಕುರಿತು ಅಂತಹ ಚಿತ್ರಗಳು ತಯಾರಾದಂತೆ ಕಂಡಿಲ್ಲ.

ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಸಮಯದಲ್ಲಿ ತಯಾರಾದ 'ಕಿಸ್ಸಾ ಕುರ್ಸಿಕಾ' ಎಂಬ ಚಿತ್ರ ರಾಜಕೀಯ ಕಾರಣಕ್ಕೆ ಸುದ್ದಿ ಮಾಡಿತ್ತು. ಇದೊಂದು ಕಳಪೆ ಚಿತ್ರ. ಈ ತರಹದ ಅನೇಕ ಕಳಪೆ ಚಿತ್ರಗಳು ರಾಜಕೀಯ ಕಾರಣಕ್ಕೋಸ್ಕರ ಗಲಾಟೆ ಮಾಡಿ ಮರೆಯಾಗಿರೋದು ಕಂಡು ಬರುತ್ತದೆ. ಈಗಲೂ ಚೀನಾ ಮತ್ತು ಇರಾನ್‌ನಲ್ಲಿ ಅಷ್ಟು ಮುಕ್ತತೆ ಇಲ್ಲದಿರುವುದರಿಂದ ಅಲ್ಲಿಯ ಸಂವೇದನಾಶೀಲ ನಿರ್ದೇಶಕರು ಸಿನಿಮಾದ ನುಡಿಕಟ್ಟುಗಳನ್ನೇ ಬದಲಿಸಿಕೊಂಡು ಅತ್ಯುತ್ತಮ ಚಿತ್ರಗಳನ್ನು ನೀಡುತ್ತಿದ್ದಾರೆ. ಪ್ರತಿಭಾವಂತ ನಿರ್ದೇಶಕ ಜಾಫರ್ ಪನಾಹಿಯನ್ನು ಇರಾನ್ ದೇಶ ಈಚೆಗೆ ಜೈಲಿಗೆ ಹಾಕಿದೆ. ಅದೇ ರೀತಿ ಅನೇಕ ಚೀನಿ ಸಿನಿಮಾ ತಯಾರಕರ ಸ್ವಾತಂತ್ರ್ಯ ಕಸಿದುಕೊಂಡಿದೆ. ಚೀನಾ ತಯಾರಿಸಿದ ಅತ್ಯುತ್ತಮ ಚಿತ್ರಗಳಲ್ಲೊಂದಾದ 'ಫೇರ್‌ವೆಲ್ ಮೈ ಕೊಂಕುಬೈನ್' ಎಂಬ ಚಿತ್ರಕ್ಕೆ ಚೀನಾದಲ್ಲಿ ನಿಷೇಧ ಹೇರಲಾಗಿದೆ.

ಭಾರತದಲ್ಲಿ ರಾಜಕೀಯವಾಗಿ ಅಂತಹ ಅಲ್ಲೋಲ ಕಲ್ಲೋಲ ಮಾಡಿದ ಚಿತ್ರಗಳು ಬಂದಿಲ್ಲ. ಗುಲ್ಜಾರ್ ನಿರ್ಮಿಸಿದ 'ಆಂದಿ' ಚಿತ್ರ ಅದು ಇಂದಿರಾಗಾಂಧಿಯ ಜೀವನಚಿತ್ರಕ್ಕೆ ಹೋಲುತ್ತೆ ಎಂದು ಸುದ್ದಿ ಮಾಡಿತ್ತು. ಹಾಗೆ ನೋಡಿದರೆ ನಮಗೆ ಸ್ವಾತಂತ್ರ್ಯವಿದ್ದೂ ಸಹ ಸೂಕ್ಷ್ಮ ಸಂವೇದನೆ ಹೊಂದಿದ ರಾಜಕೀಯ ಚಿತ್ರಗಳು ಅಷ್ಟು ತಯಾರಾಗಿಲ್ಲವೆಂದೇ ಹೇಳಬೇಕು. ಆದರೆ ಸಿನಿಮಾ ನಟರು ಸಿನಿಮಾವನ್ನು ರಾಜಕೀಯ ದಾಳವನ್ನಾಗಿ ಉಪಯೋಗಿಸಿರುವುದು ಉದ್ದಕ್ಕೂ ಕಾಣುತ್ತದೆ. ಅದರಲ್ಲಿ ಮುಖ್ಯವಾಗಿ ಎಂಜಿಆರ್. ನಟನೊಬ್ಬ ತಮಿಳುನಾಡನ್ನು ದಶಕಗಳ ಕಾಲ ಆಳಿದ್ದು ಮತ್ತು ಈಗಲೂ ಅವನ ಜನಪ್ರಿಯತೆಯಿಂದ ಆಳುತ್ತಿರುವ ನಟಿ ಜಯಲಲಿತಾ ಮೂಲತಹ ಸಿನಿಮಾರಂಗದವರು. ಅದೇ ರೀತಿ ಆಂಧ್ರಪ್ರದೇಶದಲ್ಲಿ ಎನ್‌ಟಿಆರ್ ಆಳಿದರು. ಹಿಂದಿಯಲ್ಲಿ ಅಮಿತಾಬ್ ಬಚನ್ ಆಳಲು ಹೋಗಿ ಸೋತರು. ಸುನಿಲ್‌ದತ್ ಸಹ ಕೇಂದ್ರದಲ್ಲಿ ಮಂತ್ರಿಯಾಗಿದ್ದರು. ಈ ತರಹದ ಜನ ಕೇವಲ ನಮ್ಮ ದೇಶದಲ್ಲಿ ಅಷ್ಟೇ ಅಲ್ಲ ಅಮೇರಿಕೆಯಂತಹ ದೇಶದಲ್ಲಿಯೂ ಇದ್ದಾರೆ. ಎರಡು ಬಾರಿ ಅಧ್ಯಕ್ಷನಾಗಿದ್ದ ರೊನಾಲ್ಡ್ ರೇಗನ್ ಒಬ್ಬ 'ಬಿ' ಗ್ರೇಡ್ ಸಿನಿಮಾಗಳ ನಾಯಕನಾಗಿದ್ದ. ಈಗ ಕ್ಯಾಲಿಫೋರ್ನಿಯ ರಾಜ್ಯದ ಅಧ್ಯಕ್ಷನಾಗಿರುವ ಅರ್ನಾಲ್ಡ್ ಸ್ವಜನಾಗರ್ ಒಬ್ಬ ನಟ. ಈ ತರಹದವರು ನಮ್ಮ ಕರ್ನಾಟಕದಿಂದ ಹಿಡಿದು ಎಲ್ಲಾ ಕಡೆ ಕಂಡು ಬರುತ್ತಾರೆ.



ಸಿನಿಮಾ ಮತ್ತು ರಾಜಕೀಯ ಕುರಿತು ಹೇಳುತ್ತಾ ಹೋಗುತ್ತಿದ್ದಂತೆ ಅದಕ್ಕೆ ಕೊನೆಯೆಂಬುದು ಸಿಗುವುದಿಲ್ಲ. ಏಕೆಂದರೆ ರಾಜಕೀಯ ಅನ್ನುವುದೇ ಒಂದು ಮಾಯಾಂಗನೆ. ಈ ಮಾಯಾಂಗನೆಯ ಬೆನ್ನು ಹತ್ತಿದ ಈ ಮಾಯಾಲೋಕ ಎಂಬ ಸಿನಿಮಾ ಸೃಷ್ಟಿಸುವವರು, ಸೃಷ್ಟಿಸಿದವರು ಇಲ್ಲಿ ಹೇಳಬೇಕಾದ ಅನೇಕರು ಉಳಿದುಬಿಟ್ಟಿದ್ದಾರೆ. ಈ ರಾಜಕೀಯಕ್ಕೆ ತುತ್ತಾಗಿ ನಲುಗಿದ ನನ್ನದೊಂದು ಕೊನೆಯ ಮಾತು. ನಾನು 'ಅವಸ್ಥೆ' ಎಂಬ ಅನಂತಮೂರ್ತಿ ಕಾದಂಬರಿ ಆಧರಿಸಿ ಸಿನಿಮಾವನ್ನು ೧೯೮೭ರಲ್ಲಿ ಮಾಡಿದೆ. ಆದರೆ ಅದು ರಾಜಕೀಯ ಕಾರಣಕ್ಕೆ ನಲುಗಿತು. ಆದರೆ ಅದು ರಾಜಕೀಯ ಚಿತ್ರ ಅಲ್ಲ ಎಂಬುದು ನನ್ನ ನಂಬಿಕೆ. S

ಕೃಷ್ಣ ಮಾಸಡಿ.



ವಿಶ್ವದ ಸಿನಿಮಾಗಳನ್ನು ವಿಮರ್ಶಿವಲ್ಲಿ ಪ್ರಮುಖ ಹೆಸರು. ಮೂರು ಕಥಾ ಸಂಕಲನಗಳನ್ನು, ಎರಡು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಅವಸ್ಥೆ' ಮತ್ತು 'ನಂಬಿಕೆಗಳು' ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಎಸ್. ನಿಜಲಿಂಗಪ್ಪ', 'ದೇವರಾಜ ಅರಸು', 'ಪಂಪ', 'ಅನಂತಮೂರ್ತಿ', ' ಜಿ.ಎಸ್. ಶಿವರುದ್ರಪ್ಪ' ಮತ್ತು 'ಪುತಿನ' ಮುಂತಾದವರ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. 'ಲಂಕೇಶ್ ಪತ್ರಿಕೆ' ಆರಂಭದ ಪತ್ರಕರ್ತ.



ನನ್ನ ಬೆಳಗಿನ ನಡಿಗೆಗೆ ನಾನು ಅರ್ಧ ಮೈಲಿ ದೂರ ಹೋಗಿ ನನ್ನ ಗಾಡಿಯನ್ನು ನಿಲ್ಲಿಸಬೇಕು. ಅ
ಒಂದು ಹಿಂಸೆಯ ಕೆಲಸ. ನಾನು 8:30ರ ಹೊತ್ತಿಗೆ ನನ್ನ ನಡಿಗೆ ಮುಗಿಸಿ ಹಿಂದೆ ಬಂದಾ
ಸುತ್ತಲೂ ಧೂಳು ತುಂಬಿರುತ್ತದೆ. ನಮ್ಮ ಪೌರ ಕಾರ್ಮಿಕರು ಪರಂಪರಾಗತ ಪೊ
ಉಪಯೋಗಿಸಿ ಬೀದಿಗುಡಿಸುತ್ತಾರೆ. ಅದರಿಂದಲೂ ಧೂಳುಂಟಾಗುತ್ತದೆ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಭಾರತದ ಪುನರ್‌ನಿರ್ಮಾಣ

ಭಾರತದ ಒಂದು ದೊಡ್ಡ ವರ್ಗ ಅಂದರೆ ನಗರವಾಸಿಗಳು, ರಾಮ್‌ಲೀಲಾ ಮೈದಾನದಲ್ಲಿ ಕೂಗು ಹಾಕುತ್ತಿದ್ದಂತ ಮೇಲ್ಮಧ್ಯಮ ವರ್ಗದವರು ಭಾರತ 2020ರ ಹೊತ್ತಿಗೆ ಒಂದು ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮುವುದೆಂದು ನಂಬಿದ್ದಾರೆ. 'ನಂಬುವುದು ಮತ್ತು ನಂಬಿಕೆ' ಇವೆರಡೂ ಭಿನ್ನ ವಿಚಾರಗಳು.

'ಮೆಟ್ರೊ' ಜಾಲ ಯಶಸ್ವಿಯಾಗಿ ದೆಹಲಿಯಲ್ಲಿ ಹರಡಿದ್ದನ್ನು ಮತ್ತು ದೇಶದ ಬೇರೆ ಬೇರೆ ಭಾಗಗಳಲ್ಲಿ ರಾಜ್ಯಗಳ ಯೋಜನೆಯಾಗಿ ಹರಡುತ್ತಿರುವುದನ್ನು ನೋಡಿದ ಮೇಲೆ ಮತ್ತು ಪುಣೆಯ ಹತ್ತಿರದ ಖಾಸಗಿ ವಲಯದ ಯೋಜನೆಯಾಗಿ ಏಳುತ್ತಿರುವ 'ಲಾವಾಸ' ನಗರಕ್ಕೆ ಬೇಟಿಕೊಟ್ಟ ನಂತರ ನಾನೂ ಸಹ ಭಾರತ 2020ರಲ್ಲಲ್ಲದಿದ್ದರೂ ಖಂಡಿತವಾಗಿ 2030ರ ಹೊತ್ತಿಗೆ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುವ ಶಕ್ತಿಯನ್ನು ಹೊಂದಿದೆ ಎಂದು ತೀರ್ಮಾನಿಸಿದ್ದೇನೆ. ಭಾರತ ತನ್ನೆಲ್ಲಾ ಭೂಭಾಗಕ್ಕೆ ದಿನವಿಡೀ ವಿದ್ಯುತ್‌ಶಕ್ತಿ ಪೂರೈಸಿದ ದಿನ ಆ ಪ್ರಯಾಣ ಅರ್ಧ ಮುಗಿದಂತೆಯೆ.

ಆದರೆ ಒಂದು ವಿವರಣೆ ಬೇಕಾಗುತ್ತದೆ. ನಮ್ಮ ಬಲಿಷ್ಠ ರಾಷ್ಟ್ರ ಕಲ್ಪನೆಯೆ ತಪ್ಪು ಗ್ರಹಿಕೆಯಿಂದ ಕೂಡಿದುದಾಗಿದೆ. ರಾಮ್‌ಲೀಲಾ ಮೈದಾನದಲ್ಲಿ ಸೇರಿದ್ದಂತವರಿಗೆ ಬಲಿಷ್ಠ ಶಕ್ತಿ ಎಂದರೆ ಸೈನಿಕ ಮತ್ತು ಆರ್ಥಿಕ ಬಲಿಷ್ಠತೆ. ಪ್ರಪಂಚದ ಎಲ್ಲಾ ದೇಶಗಳ ಬುದ್ಧಿಜೀವಿಗಳಿಗೆ ಯು.ಎಸ್ ಅದರ ಸಾಮಾಜಿಕ ಮತ್ತು ಜನಾಂಗೀಯ ನೀತಿಗೆ ಸಂಬಂಧಿಸಿದಂತೆ ಒಂದು ಲೇವಡಿಯ ವಸ್ತು. ಒಂದು ಬಲಿಷ್ಠ ರಾಷ್ಟ್ರ ಸಾಮಾಜಿಕವಾಗಿಯೂ ಸಹ ಉತ್ತಮವಾಗಿರಬೇಕಾಗುತ್ತದೆ. ಇಲ್ಲಿ ನಾನು ಜಾತಿ ಮತ್ತು ದಲಿತರ ವಿರುದ್ಧದ ತಾರತಮ್ಯದ ಬಗ್ಗೆ ಮತಾಡುವುದಿಲ್ಲ. ಆ್ಯಡಂಸ್ಮಿತ್ ಈ ವಿಚಾರವನ್ನು ನೋಡಿಕೊಳ್ಳುತ್ತಾರೆ. ನಾನು ಇಲ್ಲಿ ಹೇಳಬೇಕೆಂದಿರುವುದು ಸಭ್ಯ ಬದುಕಿನ ತಳಹದಿಯ ಬಗ್ಗೆ.

2007ರಲ್ಲಿ ನಾನು ಸಾಕಷ್ಟು ಸಮಯ ಯು.ಎಸ್‌ನಲ್ಲಿದ್ದೆ. ಒಂದು ಅಧ್ಯಯನ ಕೈಗೊಂಡು ನಾನು ಅಮೆರಿಕದ ಒಂದು ಪ್ರಖ್ಯಾತ ವಿಶ್ವವಿದ್ಯಾಲಯದಲ್ಲಿದ್ದೆ. ನಾನು ವಾಸಿಸುತ್ತಿದ್ದ ಅಪಾರ್ಟ್‌ಮೆಂಟ್‌ನ ಎದುರು ಹೊಸತೊಂದು ಕಟ್ಟಡ ಏಳುತ್ತಿತ್ತು. ನಾನಿದ್ದ 18ನೇ ಮಹಡಿಯ ಕೊಠಡಿಯಿಂದ ಅಮೆರಿಕನ್ನರು ಕೆಲಸ ಮಾಡುವುದನ್ನು ನೋಡುವ ಶ್ರೀಮಂತಿಕೆ ನನಗೊಲಿದಿತ್ತು. ಪ್ರತಿದಿನ ಸೂರ್ಯಾಸ್ತದ ನಂತರ ಒಂದು ದೊಡ್ಡ ಅಗ್ನಿಶಾಮಕದಂತಹ ಟ್ರಕ್ ಅಲ್ಲಿ ಬಂದು ಕಟ್ಟಡದ ಸೈಟ್ ಮೇಲೆ ನೀರು ಸಿಂಪಡಿಸುತ್ತಿತ್ತು. ಅದರ ಉದ್ದೇಶ ಈ ಕಟ್ಟಡದಿಂದ ಏಳುವ ಧೂಳನ್ನು ಆದಷ್ಟು ಕಡಿಮೆಗೊಳಿಸುವುದಾಗಿತ್ತು.

2001ರಲ್ಲಿ ನಾನು ಆಫ್ರಿಕಾದ ಡರ್ಬನ್‌ನಲ್ಲಿ ನಡೆಯುತ್ತಿದ್ದ ಪ್ರಖ್ಯಾತ ಜನಾಂಗೀಯ ಸಮ್ಮೇಳನಕ್ಕೆ ಹೋಗಿದ್ದೆ. ನಾವು ತಂಗಿದ್ದ ಹೋಟೆಲಿನ ಹತ್ತಿರ ಹೊಸತೊಂದು ಕಟ್ಟಡವನ್ನು ಕಟ್ಟುತ್ತಿದ್ದರು. ನಾನು ಪ್ರತಿ ಬೆಳಗ್ಗೆ ನಮ್ಮ ಹೋಟೆಲಿನಿಂದ ಹೊರಗಡೆ ಬಸ್ಸಿಗಾಗಿ ಕಾಯುತ್ತಿದ್ದಾಗ ಇಟ್ಟಿಗೆಗಳನ್ನು ಟ್ರಕ್‌ಗಳಲ್ಲಿ ತಂದು ಅಲ್ಲಿ ಶೇಖರಿಸುತ್ತಿದ್ದುದನ್ನು ನೋಡಿದೆ. ಈ ಇಟ್ಟಿಗೆಗಳನ್ನು ಪೊಟ್ಟಣಗಳಲ್ಲಿ ತರುತ್ತಿದ್ದರು. ಒಂದು ಪ್ಲಾಸ್ಟಿಕ್ ಬ್ಯಾಗಿನಲ್ಲಿ ನಾಲ್ಕು ಇಟ್ಟಿಗೆಗಳಿರುತ್ತಿದ್ದುವು. ಇದರ ಉದ್ದೇಶ ಟ್ರಕ್‌ಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಣೆ ಮಾಡುವಾಗ ಧೂಳು ಹರಡಬಾರದು ಎಂಬುದಾಗಿತ್ತು.

ಕೆಲವು ಗಂಟೆಗಳ ಮೊದಲು ನಾನು ಡಿಸ್ಕವರ್ ಸೈನ್ಸ್‌ನ ಕಾರ್ಯಕ್ರಮವೊಂದನ್ನು ನೋಡುತ್ತಿದ್ದೆ. ಈ ಕಾರ್ಯಕ್ರಮ ಯಂತ್ರಗಳ ಬಗ್ಗೆ ಇದ್ದು "ಅವರು ಹೇಗೆ ಅದನ್ನು ಮಾಡುತ್ತಾರೆ" ಎಂಬ ಶೀರ್ಷಿಕೆ ಹೊಂದಿತ್ತು. ಈ ಕಾರ್ಯಕ್ರಮದ ಬಹುಭಾಗ ದೊಡ್ಡ ದೊಡ್ಡ ಅರ್ಥ್‌ಮೂವರ್ ಯಂತ್ರಗಳ ಬಗ್ಗೆ ಇತ್ತು. ಯು.ಎಸ್‌ನಲ್ಲಿ ತಯಾರಾದ ಈ ಅರ್ಥ್‌ಮೂವರ್‌ಗಳು ಆಸ್ಟ್ರೇಲಿಯಾದ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುತ್ತಿದ್ದವು.

ನಾನು ಈ ವಿಷಯದ ಮೇಲೆ ಗಮನ ಹರಿಸಲು ಕಾರಣವೇನು? ಕಲ್ಲಿದ್ದಲನ್ನು ಹೊರ ಸಾಗಿಸುತ್ತಿದ್ದ ಟ್ರಕ್‌ಗಳ ಹಿಂಬದಿಯಲ್ಲಿ ನೀರನ್ನು ಸಿಂಪಡಿಸುವ ಯಂತ್ರಗಳನ್ನು ಸ್ಥಾಪಿಸಲಾಗಿತ್ತು. ಇದರ ಉದ್ದೇಶ ಆ ಟ್ರಕ್‌ನ ಹಿಂದೆ ಬರುವ ಇತರೆ ಡ್ರೈವರ್‌ಗಳನ್ನು ರಕ್ಷಿಸುವುದು. ಇದು ಎಲ್ಲಾ ಆಧುನಿಕ ಸಮಾಜಗಳು ತಮ್ಮದಾಗಿಸಿಕೊಂಡಿರುವ ನಾಗರೀಕ ಲಕ್ಷಣ. ನಾವೆಲ್ಲಿದ್ದೇವೆ?

ಕಾಮನ್‌ವೆಲ್ತ್ ಕ್ರೀಡಾಕೂಟದ ದಿನಗಳನ್ನು ಜ್ಞಾಪಿಸಿಕೊಳ್ಳಿ. ಆಗ ದೆಹಲಿ ಪೂರ್ತಿ ಧೂಳಿನಿಂದ ತುಂಬಿ ಹೋಗಿತ್ತು. ಕ್ರೀಡಾಕೂಟ ಮುಗಿದು ಒಂದು ವರ್ಷ ಕಳೆದಿದ್ದರೂ ದೆಹಲಿಯ ಅನೇಕ ಭಾಗಗಳು ಇನ್ನೂ ಧೂಳಿನಿಂದ ತುಂಬಿವೆ.

ನನ್ನ ಬೆಳಗಿನ ನಡಿಗೆಗೆ ನಾನು ಅರ್ಧ ಮೈಲಿ ದೂರ ಹೋಗಿ ನನ್ನ ಗಾಡಿಯನ್ನು ನಿಲ್ಲಿಸಬೇಕು. ಅದು ಒಂದು ಹಿಂಸೆಯ ಕೆಲಸ. ನಾನು 8:30ರ ಹೊತ್ತಿಗೆ ನನ್ನ ನಡಿಗೆ ಮುಗಿಸಿ ಹಿಂದೆ ಬಂದಾಗ ಸುತ್ತಲೂ ಧೂಳು ತುಂಬಿರುತ್ತದೆ. ನಮ್ಮ ಪೌರ ಕಾರ್ಮಿಕರು ಪರಂಪರಾಗತ ಪೊರಕೆ ಉಪಯೋಗಿಸಿ ಬೀದಿಗುಡಿಸುತ್ತಾರೆ. ಅದರಿಂದಲೂ ಧೂಳುಂಟಾಗುತ್ತದೆ. ಅವರು ಗುಡಿಸಿದ ಮೇಲೆ ಧೂಳನ್ನು ರಸ್ತೆಯ

ಭಾರತದ ಪುನರ್‌ನಿರ್ಮಾಣ ಯೋಜನೆಯ ಯಶಸ್ಸಿಗೆ ಬಹಳ ದೊಡ್ಡ ಮಟ್ಟದಲ್ಲಿ ಯಂತ್ರಗಳು ಮತ್ತು ಉಪಕರಣಗಳನ್ನು ಅವಲಂಭಿಸಬೇಕಾಗುತ್ತದೆ. ಭಾರತ ಒಂದು ನೈಜ ನಾಗರೀಕ ಸಮಾಜವಾಗಿ ವಿಕಾಸಗೊಳ್ಳಬೇಕಾಗುತ್ತದೆ.

ಆಂದೋಲನವನ್ನು ನಾವು ಪ್ರಾರಂಭಿಸಿದಾಗ ಸ್ನೇಹಿತರು ಅನುಮಾನವನ್ನು ಮುಂದಿಟ್ಟರು. ನಮ್ಮ ಭಾರತೀಯರಲ್ಲಿ ಅಮೆರಿಕ ವಿರೋಧಿ ಭಾವನೆ ಹೆಚ್ಚಿರುವಾಗ ಮಾಧ್ಯಮದಲ್ಲಿ ದಲಿತ ಹಕ್ಕುಗಳನ್ನು ಪಡೆದುಕೊಳ್ಳಲು ಅಮೆರಿಕದ ಮಾದರಿಯನ್ನು ಎತ್ತಿ ತೋರಿಸುವುದು ಬುದ್ಧಿವಂತಿಕೆಯೆ

ಬದಿಯಲ್ಲಿ ಹಾಕುತ್ತಾರೆ. ಅಲ್ಲಿಂದ ಮಾರನೆಯ ದಿನ ಬೆಳಗ್ಗೆ ಧೂಳು ಮತ್ತೆ ರಸ್ತೆಗೆ ಬಂದು ಬೀಳುತ್ತದೆ.

ನಾನು ಪ್ರವಾಸ ಮಾಡಿರುವ ಎಲ್ಲ ನಾಗರಿಕ ಸಮಾಜಗಳಲ್ಲಿ ಧೂಳನ್ನು ವ್ಯಾಕ್ಯೂಮ್ ಕ್ಲೀನರ್ ಟ್ರಕ್‌ಗಳು ಸ್ವಚ್ಛಗೊಳಿಸುತ್ತವೆ. ಈ ತಂತ್ರಜ್ಞಾನ ಕಾಲಾನಂತರ ಕಡಿಮೆ ಖರ್ಚಿನದಾಗಿರುವುದಲ್ಲದೆ ಬೀದಿಗಳನ್ನು ಸ್ವಚ್ಛಗೊಳಿಸುವ ಕಸುಬಿಗೆ ಘನತೆಯನ್ನು ತರುವಂತಹದಾಗಿದೆ. ಭಾರತ ಇಂತಹ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಏಕೆ ಉಪಯೋಗಿಸಬಾರದು?

ಭಾರತದ ಹೆಚ್ಚು ನಗರಗಳು ರಾಮ್‌ಲೀಲಾ ವರ್ಗದ ಜನ ತುಂಬಿರುವಂತಹ ಉಚ್ಛ ಮತ್ತು ಮಧ್ಯಮ ವರ್ಗದ ಬಡಾವಣೆಗಳನ್ನು ಹೊಂದಿರುತ್ತವೆ. ಉಳಿದೆಲ್ಲವೂ ಬದುಕಲಸಾಧ್ಯವಾದ ಕೊಳುಕಾದ ಪ್ರದೇಶಗಳು. ಪ್ರಜಾಪ್ರಭುತ್ವದ ಗೆಳೆಯರು ಇಂತಹುಗಳಲ್ಲಿ ನರಳುತ್ತಾರೆ.

ಭಾರತದ ಪುನರ್‌ನಿರ್ಮಾಣ ಯೋಜನೆಯ ಯಶಸ್ಸಿಗೆ ಬಹಳ ದೊಡ್ಡ ಮಟ್ಟದಲ್ಲಿ ಯಂತ್ರಗಳು ಮತ್ತು ಉಪಕರಣಗಳನ್ನು ಅವಲಂಭಿಸಬೇಕಾಗುತ್ತದೆ. ಭಾರತ ಒಂದು ನೈಜ ನಾಗರೀಕ ಸಮಾಜವಾಗಿ ವಿಕಾಸಗೊಳ್ಳಬೇಕಾಗುತ್ತದೆ. ಯಂತ್ರಗಳು ಈ ದಾರಿಯಲ್ಲಿ ಬಹಳ ಸಹಕಾರಿಯಾಗುತ್ತವೆ. ಬರಿ ಕೈಗಳು ಕೆಲಸದಿಂದ ದೂರವಾಗುತ್ತವೆ.

ಯಂತ್ರಗಳು ಮತ್ತು ಉಪಕರಣಗಳು ಕಸುಬುಗಳನ್ನು ಜಾತಿ ಮುಕ್ತ ಮಾಡುತ್ತವೆ. ಕಸುಬಿನ ಶ್ರೇಣೀಕರಣ ಒಡೆಯಲ್ಪಟ್ಟು, ಜಾತಿಪದ್ಧತಿಯ ಮುಂದುವರಿಕೆ ಅಸಾಧ್ಯವಾಗುತ್ತದೆ. ಅದರ ಹಿಂದೆಯೇ ರಕ್ತದ ಪರಿಶುದ್ಧತೆ ಮಣ್ಣುಗೂಡುತ್ತದೆ.

ಆದರೆ ಸರ್ಕಾರದ ನೀತಿ ನಿಯಮಗಳನ್ನು ಯಾರು ತೀರ್ಮಾನಿಸುತ್ತಾರೆ? ಸರ್ಕಾರ ಹೇಗೆ ಕೆಲಸ ಮಾಡುತ್ತದೆ. ಮಂಡಲ್, ಆರ್ಥಿಕ ಸುಧಾರಣೆ, ಉದ್ಯೋಗ ಖಾತ್ರಿ ಯೋಜನೆ ಇಂತಹ ಸರ್ಕಾರದ ನೀತಿಗೆ ಸಂಬಂಧಿಸಿದ ತೀರ್ಮಾನಗಳನ್ನು ಬಿಟ್ಟರೆ ಉಳಿದಂತೆ ಶಾಸಕಾಂಗ ಸಂಬಂಧಿತ ಸಂಸ್ಥೆಗಳು ಮತ್ತು ರಾಜಕಾರಣಿಗಳು ದೈನಂದಿನ ಆಡಳಿತವನ್ನು ಸರ್ಕಾರಿ ಅಧಿಕಾರಿ ವ್ಯವಸ್ಥೆಗೆ ಬಿಡುತ್ತಾರೆ. ಆದುದರಿಂದ ಮಂತ್ರಿ ಮಂಡಲದ ಕಾರ್ಯದರ್ಶಿ ದೆಹಲಿಯ ಮುಖ್ಯಮಂತ್ರಿಯವರಿಗೆ ದೆಹಲಿಯನ್ನು ಸ್ವಚ್ಛವೂ ಮತ್ತು ಧೂಳು ಮುಕ್ತವೂ ಮಾಡಲು ನೂರು ವ್ಯಾಕ್ಯೂಮ್ ಕ್ಲೀನರ್‌ಗಳನ್ನು ಒಳಗೊಂಡ ಭಾರಿ ಟ್ರಕ್ಕುಗಳನ್ನು ಹೊರಗಿನಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ ಮತ್ತು ಆರ್ಥಿಕವಾಗಿಯೂ ಇದು ವಿವೇಕಯುತವಾಗಿದೆ ಎಂದು ಒಂದು ಟಿಪ್ಪಣಿ ಸಲ್ಲಿಸಿದಲ್ಲಿ ಮುಖ್ಯಮಂತ್ರಿಯವರು ಅದಕ್ಕೆ ತಮ್ಮ ಅನುಮೋದನೆ ನೀಡುವುದಲ್ಲದೆ ಬೇರೇನೂ ಮಾಡಲಾರರು. ಭಾರತ ಸಾಮಾನ್ಯವಾಗಿ ನೌಕರ ಶಾಹಿಯಿಂದಲೇ ನಡೆಸಲ್ಪಡುತ್ತಿದೆ.

ಆದರೆ ಭಾರತದ ಈ ನೌಕರ ಶಾಹಿಯ ಸಾಮಾಜಿಕ ಆಸರೆ ಯಾವುದು? ಕೇಂದ್ರ ಸರ್ಕಾರದಲ್ಲಿ ದಲಿತ ವರ್ಗಕ್ಕೆ ಸೇರಿದ ಒಬ್ಬ ಕಾರ್ಯದರ್ಶಿಯೂ ಇಲ್ಲವೆಂದು ನಾನು ಕೇಳಿದ್ದೇನೆ. ಭಾರತದ ನೌಕರಶಾಹಿ ರಾಮ್‌ಲೀಲಾ ಮೈದಾನದಲ್ಲಿ ಸೇರಿದ್ದ ಪಿತೃಗಳಿಂದ ಮಾಡಲ್ಪಟ್ಟಿದೆ. ದಲಿತರೂ ಭಾರತದ ನೌಕರ ಶಾಹಿಯಲ್ಲಿ ಸೇರಿದ್ದಾರೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಅವರು ಇಲಾಖಾ ಮುಖ್ಯಸ್ಥರಾಗಿರುವುದು ಬಹಳ ವಿರಳ.

ಭಾರತದ ಪುನರ್‌ನಿರ್ಮಾಣದ ಯೋಜನೆಗೆ ರಚನಾತ್ಮಕ ನೌಕರ ಶಾಹಿ ಬೇಕಾಗುತ್ತದೆ. ಇದಕ್ಕೆ ಭಾರತವನ್ನು ಸಾಮಾಜಿಕವಾಗಿಯೂ ಮಾರ್ಪಡಿಸುವ ಉತ್ಸಾಹವಿರಬೇಕು. ಹಾಗಾದಲ್ಲಿ ಉಳಿದೆಲ್ಲವೂ ತನಗೆತಾನಾಗಿಯೆ ನಡೆಯುತ್ತದೆ. ಆದರೆ ನಾವು ಭಾರತದಲ್ಲಿ ಕಸುಬಿನ ಯಾಂತ್ರೀಕರಣವನ್ನು ಉಂಟುಮಾಡಬೇಕೆನ್ನುವ ಯಾವುದೇ ಆಂದೋಲನವನ್ನು ಕಂಡಿದ್ದೇವೆಯೆ?

* * * *

ಒಂದೂವರೆ ದಶಕಗಳ ಹಿಂದೆ ನಾನು ಹೊಸ ದಾರಿಯೊಂದನ್ನು ಹುಡುಕಿಕೊಂಡೆ. ದಾರಿಯನ್ನೂ ನಾನೇ ಸರಿಪಡಿಸಬೇಕಾಗಿತ್ತು. ನವೆಂಬರ್ 16, 1996ರಲ್ಲಿ ಪಯೋನಿರ್ ಪತ್ರಿಕೆ 'ದಲಿತ ಪತ್ರಕರ್ತನ ಹುಡುಕಾಟದಲ್ಲಿ' ಎಂಬ ತಲೆಬರಹವುಳ್ಳ ಒಂದು ಅಂಕಣವನ್ನು ಪ್ರಕಟಿಸಿತ್ತು. ಆ ಅಂಕಣವನ್ನು ಬರೆದವರು ಪ್ರಖ್ಯಾತ ಪತ್ರಕರ್ತ ಬಿ.ಎಮ್.ಉನಿಯಾಳ್. ಆ ಅಂಕಣ ಒಂದು ಕಥೆಯನ್ನು ಒಳಗೊಂಡಿತ್ತು.

ಯುವ ಟಿ.ವಿ ವರದಿಗಾರನೊಬ್ಬ ದಲಿತ ಮೇರು ನಾಯಕ ದಿವಂಗತ ಕಾಂನ್ಶಿರಾಮ್‌ಜಿಯವರನ್ನು ಹಿಂಸಿಸುತ್ತಿದ್ದ. ಅವನೇ ಹೇಳಿಕೊಂಡಂತೆ ಅವನಿಗೆ ಅವರು ಕಪಾಳಕ್ಕೆ ಬಾರಿಸಿದರು. ನಿಜವಾಗಿಯೂ ಅದು ಭಾರಿ ಹೊಡೆತವಾಗಿತ್ತು. ಅವನು ಒಂದೆರಡು ವಾರ ಅಳುತ್ತಲೇ ಇದ್ದ. ಉದ್ಧಾಮ ವರದಿಗಾರರು ವರದಿಗಾರನಿಗೆ ಹೊಡೆದುದು ಘೋರ ತಪ್ಪು ಎಂದು ತಮ್ಮ ಧ್ವನಿ ಎತ್ತಿದರು. ದಿ॥ ವಿ.ಪಿ.ಸಿಂಗ್ ರಾಷ್ಟ್ರಪತಿ ಭವನಕ್ಕೆ ನ್ಯಾಯ ಕೋರಿ ಜಾಥಾ ತೆಗೆದರು. ವರದಿಗಾರರ ಪರ ಇಡೀ ಮಾಧ್ಯಮ ಒಕ್ಕೊರಲಿನಿಂದ ಮಾತನಾಡಿತು. ಅವರೆಲ್ಲರೂ ಸಂಪೂರ್ಣವಾಗಿ ಪಕ್ಷಪಾತಿಗಳಾಗಿದ್ದರು. ಅವರು ಆ ವರದಿಗಾರನೇಕೆ ಕಾಂನ್ಶಿರಾಮ್‌ಜಿಯರ ವಸತಿ ಗೃಹದ ಹೊರಗಡೆ ನಿಂತಿದ್ದ ಎಂದು ಒಮ್ಮೆಯೂ ಕೇಳಲಿಲ್ಲ.

ಅಮೆರಿಕದ ಒಂದು ದೊಡ್ಡ ವೃತ್ತಿಪತ್ರಿಕೆಯ ವರದಿಗಾರನೊಬ್ಬ ಭಾರತದ ಮುಖ್ಯವಾಹಿನಿ ಮಾಧ್ಯಮದ ದಲಿತ ವರದಿಗಾರನೊಬ್ಬನ ಸಂದರ್ಶನ ಮಾಡಬೇಕೆಂದು ಬಯಸಿದ. ಅವನು ಒಬ್ಬ ದಲಿತ ವರದಿಗಾರನ ಹೆಸರನ್ನು ಸೂಚಿಸುವಂತೆ ಉನಿಯಾಳ್‌ಜಿ ಅವರ ಸಹಾಯ ಕೇಳಿದ. ಉನಿಯಾಳ್ ತಮ್ಮ ಹುಡುಕಾಟ ಪ್ರಾರಂಭಿಸಿದರು. ಆದರೆ ಅವರಿಗೆ ಯಾರೂ ಸಿಕ್ಕಲಿಲ್ಲ. ಆದುದರಿಂದಲೇ ಅವರ ಅಂಕಣ 'ದಲಿತ ವರದಿಗಾರನ ಹುಡುಕಾಟದಲ್ಲಿ'.

'ಶಕ್ಯ'ವಾದುದನ್ನು ಶ್ಲಾಘಿಸೋಣ

ವಾದ-ವಿವಾದವನ್ನು ಪ್ರೋತ್ಸಾಹಿಸಿದ ಭಾರತ!

ಕೊನೆಗೆ ಆ ಹೊರದೇಶದ ಪತ್ರಿಕೆ ನನ್ನನ್ನು ಸಂಪರ್ಕಿಸಿತು. ವರದಿಗಾರನ ಸಹದ್ಯೋಗಿ ಯುವ ಮಹಿಳಾ ಪತ್ರಕರ್ತೆ ಅಮೆರಿಕದ ಮಾಧ್ಯಮದಲ್ಲಿರುವ ವೈವಿಧ್ಯತೆಯನ್ನು ವಿವರಿಸಿದರು. ಎ.ಎಸ್.ಎನ್.ಇ (ಅಮೆರಿಕ ವಾರ್ತಾ ಪತ್ರಿಕೆಗಳ ಸಂಪಾದಕರ ಸೊಸೈಟಿ) ಅಮೆರಿಕದ ಮಾಧ್ಯಮದಲ್ಲಿನ ಜನಾಂಗೀಯ ವೈವಿಧ್ಯತೆಯ ಮೇಲೆ ಹೇಗೆ ಗಮನವಿಡುತ್ತದೆ ಮತ್ತು ಅಮೆರಿಕ ಪತ್ರಿಕೆಗಳ ವಾರ್ತಾ ಕೊಠಡಿಗಳಲ್ಲಿ ಹೆಚ್ಚು ಕರಿಯರನ್ನು ಸೇರಿಸಿಕೊಳ್ಳುವುದನ್ನು ಹೇಗೆ ಪ್ರೋತ್ಸಾಹಿಸುತ್ತದೆ ಎಂಬುದನ್ನು ಅವರು ವಿವರಿಸಿದರು.

1996ರಲ್ಲಿ ನಾನು ಕಂಪ್ಯೂಟರನ್ನು ಹೊಂದಿರಲಿಲ್ಲ ಮತ್ತು ನನಗೆ ಇ-ಮೇಲ್ ಐಡಿ ಸಹ ಇರಲಿಲ್ಲ. ನಿಜ ಹೇಳಬೇಕೆಂದರೆ ನನಗೆ ಆಗ ಹೇಗೆ ಸೈಬರ್ ಪ್ರಪಂಚವನ್ನು ಪ್ರವೇಶಿಸಬೇಕೆಂಬುದೂ ಗೊತ್ತಿರಲಿಲ್ಲ. ನನ್ನ ಕೋರಿಕೆಯ ಮೇರೆಗೆ ಅವರು ಅಮೆರಿಕ ಮಾಧ್ಯಮದ ಬಗ್ಗೆ, ಅಲ್ಲಿನ ವಾರ್ತಾ ಕೊಠಡಿಗಳ ವೈವಿಧ್ಯತೆ ಬಗ್ಗೆ ಮತ್ತು ಅಮೆರಿಕದ ಮಾಧ್ಯಮದಲ್ಲಿರುವ ಕರಿಯರ ಸಂಕಟಗಳ ಬಗ್ಗೆ ಬಹಳಷ್ಟು ಸಾಹಿತ್ಯವನ್ನು ಕಂಪ್ಯೂಟರ್‌ನಿಂದ ನಕಲು ಮಾಡಿಕೊಟ್ಟರು. ನಾನು ನನ್ನ ಪ್ರಾಣ ಸ್ನೇಹಿತ ಡಾ॥ ಶಿಯೊರಾಜ್ ಸಿಂಗ್ ಬೆಚೈನ್ ಅವರ ಸಹಕಾರದಿಂದ ಭಾರತದ ಮಾಧ್ಯಮದಿಂದ ವರ್ಣಭೇದ ಕೊನೆಗೊಳಿಸಿ ಎಂಬ ಒಂದು ನಿವೇದನೆ ತಯಾರಿಸಿದೆನು. ಆ ನಿವೇದನೆಯನ್ನು ನಾವು ಭಾರತದ ಪ್ರೆಸ್ ಕೌನ್ಸಿಲ್‌ಗೆ ಸಲ್ಲಿಸಿದೆವು. ಅದರಿಂದೇನು ಪ್ರಯೋಜನವಾಗಲಿಲ್ಲ. ಒಂದೆರಡು ವರ್ಷಗಳಲ್ಲಿ ದಲಿತ್ ಡೈರಿ ಹುಟ್ಟಿಕೊಂಡಿತು.

ಈ ವೈವಿಧ್ಯತೆಯ ಆಂದೋಲನವನ್ನು ನಾವು ಪ್ರಾರಂಭಿಸಿದಾಗ ಸ್ನೇಹಿತರು ಅನುಮಾನವನ್ನು ಮುಂದಿಟ್ಟರು. ನಮ್ಮ ಭಾರತೀಯರಲ್ಲಿ ಅಮೆರಿಕ ವಿರೋಧಿ ಭಾವನೆ ಹೆಚ್ಚಿರುವಾಗ ಮಾಧ್ಯಮದಲ್ಲಿ ದಲಿತ ಹಕ್ಕುಗಳನ್ನು ಪಡೆದುಕೊಳ್ಳಲು ಅಮೆರಿಕದ ಮಾದರಿಯನ್ನು ಎತ್ತಿ ತೋರಿಸುವುದು ಬುದ್ಧಿವಂತಿಕೆಯೆ?

ಇನ್ನೂ ಅನೇಕ ವಾದಗಳು ಬಂದವು. 'ಕ್ರಿಶ್ಚಿಯನ್ ಅಮೆರಿಕ ತನ್ನ ತಪ್ಪುಗಳನ್ನು ಕೂಡಲೆ ಸರಿಪಡಿಸಿಕೊಳ್ಳಬಲ್ಲುದು. ಭಾರತ ಆ ರೀತಿ ಎಂದೂ ಸರಿಪಡಿಸಿಕೊಳ್ಳುವುದಿಲ್ಲ', ಕೆಲವರು ಹೇಳಿದರು. ನನ್ನ ಉತ್ತರ ಸರಳವಾಗಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಮೆರಿಕದ ಉದಾಹರಣೆಯನ್ನು ನೀಡುವುದಾದರೆ ನಾನೇಕೆ ನೀಡಬಾರದು? ಹಿಂದೂ ಭಾರತದ ಬಗ್ಗೆ ನಾನು ಆಶಾವಾದಿಯಾದೆ. ಜಾಗತೀಕರಣದ ಈ ಕಾಲದಲ್ಲಿ ತನ್ನ ಕೆಲವು ಕೆಟ್ಟ ಪದ್ಧತಿಗಳನ್ನು ಬಿಟ್ಟ ಹೊರತು ಹಿಂದೂ ಧರ್ಮ ಉಳಿಯಲಾರದು. ಭಾರತ ಇಂದು ಪ್ರಂಪಂಚಕ್ಕೆ ತೆರೆದುಕೊಂಡಿದೆ. 'ಎಲ್ಲಾ ಎರಡು ಕಾಲಿನ ಪ್ರಾಣಿಗಳೂ ಬದಲಾಗಬಹುದಾದರೆ ಹಿಂದುಗಳೇಕೆ ಬದಲಾಗುವುದಿಲ್ಲ? ನಾನು ಪಿಸುಗುಡುತ್ತಿದ್ದೆ.

ಏಪ್ರಿಲ್ 4, 1999ರಲ್ಲಿ ದಲಿತ ಡೈರಿ ಹುಟ್ಟಿತು. ನನ್ನ ವಾರ್ತಾ ಕೊಠಡಿಗಳ ವೈವಿಧ್ಯತೆ ಆಂದೋಲನ ಖಾಸಗಿ ವಲಯದಲ್ಲಿ ಉದ್ಯೋಗಗಳ ವೈವಿಧ್ಯತೆ ಮತ್ತು ಭಾರತದ ಸಂಪತ್ತಿನಲ್ಲಿ ದಲಿತರ ಭಾಗ ಇವುಗಳಿಗೆ ವಿಸ್ತರಿಸಿತು. ಸರಬರಾಜುದಾರರ ವೈವಿಧ್ಯತೆ ನನ್ನ ಕಾರ್ಯಸೂಚಿಯ ಮೊದಲ ಅಧ್ಯಾಯವಾಯಿತು. ವಿಶಾಲ ಹೃದಯದ ಶ್ರೀ ದಿಗ್ವಿಜಯ ಸಿಂಗ್‌ಜಿಯವರ ನೇತೃತ್ವದ ಮಧ್ಯಪ್ರದೇಶ ಸರ್ಕಾರ ದಲಿತರು ಮತ್ತು ಆದಿವಾಸಿಗಳನ್ನು ಮೇಲೆತ್ತಲು ಒಂದು ಪ್ರಣಾಳಿಕೆ ಬರೆಯುವಂತೆ ನಾನು ಮತ್ತು ನನ್ನ ಸ್ನೇಹಿತರನ್ನು ಆಹ್ವಾನಿಸಿದರು. ಮೇರು ವ್ಯಕ್ತಿತ್ವದ ಐ.ಎ.ಎಸ್ ಅಧಿಕಾರಿ ಡಾ॥ ಅಮರ್‌ಸಿಂಗ್‌ಜಿ ಆಗ ಮುಖ್ಯಮಂತ್ರಿಯವರ ಕಾರ್ಯದರ್ಶಿಯಾಗಿದ್ದು ಬಹುಮುಖ್ಯ ಪಾತ್ರ ವಹಿಸಿದರು. ನನ್ನ ವಿದ್ವಾಂಸ ಸಹೋದ್ಯೋಗಿ ಡಿ.ಶಾಂಭಾಬು ಮತ್ತು ಬುದ್ಧಿವಂತ ಅಧಿಕಾರಿ ರಾಜಶೇಖರ್ ಉಂಡ್ರು ಇವರ ಸಹಾಯದಿಂದ ನಾನು 'ಭೂಪಾಲ್ ದಾಖಲೆ'ಯನ್ನು ತಯಾರು ಮಾಡಿದೆ. ಈ ದಾಖಲೆಯಲ್ಲಿ ಸರಬರಾಜುದಾರರ ವೈವಿಧ್ಯತೆಯ ಕಲ್ಪನೆ ಎದ್ದು ಕಾಣುತ್ತಿತ್ತು.

ಮಧ್ಯಪ್ರದೇಶ ಸರ್ಕಾರ ದಿನಾಂಕ 13 ಮತ್ತು 14 ಜನವರಿ 2002ರಲ್ಲಿ ಒಂದು ಭಾರಿ ಸಮ್ಮೇಳನವನ್ನು ಭೂಪಾಲ್‌ನಲ್ಲಿ ವ್ಯವಸ್ಥೆ ಮಾಡಿತು. ಭಾರತದ ಮೂಲೆ ಮೂಲೆಗಳಿಂದ ಆರಿಸಿದ ಚಿಂತಕರು ಮತ್ತು ಇತರ ಸುಮಾರು 300 ಪ್ರತಿನಿಧಿಗಳು ಸಮ್ಮೇಳನಕ್ಕೆ ಬಂದಿದ್ದರು. ಈ ಸಮ್ಮೇಳನವನ್ನು ಸಮಕಾಲೀನ ದಲಿತ ಚಳವಳಿಯ ಅತಿ ಮಹತ್ವದ ಮೈಲುಗಲ್ಲು ಎಂದು ಗುರುತಿಸಲಾಗಿದೆ.

ಎರಡು ದಿನಗಳ ಈ ಸಮ್ಮೇಳನದಲ್ಲಿ ಎಲ್ಲಾ ಮುಖ್ಯ ವೈವಿಧ್ಯತಾ ಅಧಿವೇಶನಗಳ ಅಧ್ಯಕ್ಷತೆಯನ್ನೂ ಪ್ರೊ. ಗೈಲ್ ಓಂವೆಟ್ ವಹಿಸಿದ್ದರು. ಮೊದಲ ಭಾಷಣಕಾರರು ತಮ್ಮ ಭಾಷಣವನ್ನು ಮುಗಿಸಿದ ಕೂಡಲೆ ನಾನು ಎದ್ದು ಮಾತನಾಡಬೇಕಿತ್ತು. ಇದ್ದಕ್ಕಿದ್ದಂತೆಯೆ ಮಹಿಳಾ ಪ್ರತಿನಿಧಿಯೊಬ್ಬರು ತಮ್ಮ ಸ್ಥಾನದಿಂದ ಜಿಗಿದು

ಲಾರ್ಡ್ ಮೆಕಾಲೆ

ಆಹ್ವಾನವಿಲ್ಲದಿದ್ದಾಗ್ಯೂ ವೇದಿಕೆಗೆ ಬಂದರು. ಅವರು ಒಂದು ವಿಷಯ ಹೇಳಬೇಕಿತ್ತು. 'ಸರಬರಾಜುದಾರರ ವೈವಿಧ್ಯತೆ ಭಾರತದಲ್ಲಿ ಅಸಾಧ್ಯ' ಎಂದು ಅವರು ಹೇಳಿದರು. ಅವರ ಈ ಮಧ್ಯೆಪ್ರವೇಶವನ್ನು ಸಮ್ಮೇಳನದಲ್ಲಿದ್ದ ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು.

ಸಮ್ಮೇಳನ ಮುಕ್ತಾಯಗೊಳ್ಳುವುದಕ್ಕೆ ಕೆಲ ನಿಮಿಷಗಳ ಮೊದಲು ಶ್ರೀ. ದಿಗ್ವಿಜಯ ಸಿಂಗ್‌ಜಿಯವರು ನಮ್ಮನ್ನು ಕೇಳಿದರು. ಈಗ ಹೇಳಿ 'ಏನನ್ನು ಘೋಷಿಸಬೇಕೆಂದು'. ನಾವು ಕೂಡಲೆ ಒಂದರ್ಧ ನಿಮಿಷ ಒಬ್ಬರೊಡನೊಬ್ಬರು ಚರ್ಚಿಸಿ ಅವರಲ್ಲಿ ಹೀಗೆ ಕೋರಿದೆವು. "ಸಾರ್, ದಯಮಾಡಿ ಸರ್ಕಾರದ ಎಲ್ಲಾ ಕೊಳ್ಳುವಿಕೆಯಲ್ಲಿ ಶೇ.30ರಷ್ಟು ಭಾಗವನ್ನು ದಲಿತರು ಮತ್ತು ಆದಿವಾಸಿ ಉದ್ಯಮದಾರರಿಂದ ಕೊಳ್ಳುತ್ತೇವೆಂದು ಘೋಷಿಸುವುದನ್ನು ಪರಿಶೀಲಿಸಬಹುದು".

ಈ ಘೋಷಣೆ ಮಾಡಿದ ಒಂದು ವರ್ಷದೊಳಗೆ ಶೇ.30 ಸರಬರಾಜುದಾರರ ವೈವಿಧ್ಯತೆ ವಾಗ್ದಾನ ಜಾರಿಗೆ ಬಂತು. ದಿಗ್ವಿಜಯಸಿಂಗ್ ಅಧಿಕಾರ ಕಳೆದುಕೊಂಡರಾದರೂ ಆ ಪದ್ಧತಿ ಮಧ್ಯಪ್ರದೇಶದಲ್ಲಿ ಇನ್ನೂ ಅಸ್ತಿತ್ವದಲ್ಲಿದೆ.

ಅನೇಕ ಜನರು ದಿಗ್ವಿಜಯ ಸಿಂಗ್ ಅವರ ಈ ಉತ್ತಮ ಕೆಲಸವನ್ನು ಓಟು ಬ್ಯಾಂಕಿಗಾಗಿ ಮಾಡಿದ ಒಂದು ತಂತ್ರ ಮತ್ತು ಬಿ.ಎಸ್.ಪಿ ಮಧ್ಯಪ್ರದೇಶದಲ್ಲಿ ಹರಡದಂತೆ ತಡೆಯಲು ಮಾಡಿದ ಕೆಲಸ ಎಂದು ಮುಂತಾಗಿ ಅರ್ಥೈಸಿದರು. ಡಿ ಮಾದರಿ ಅಂದರೆ ದಿಗ್ವಿಜಯಸಿಂಗ್ ಮಾದರಿ ಎಂದೇ ವರ್ಣಿಸಲಾದ ಈ ಸರಬರಾಜುದಾರರ ವೈವಿಧ್ಯತಾ ಕಾರ್ಯಕ್ರಮ ಅಂದರೆ ಸರ್ಕಾರದ ಕೊಳ್ಳುವಿಕೆಯ ಕೆಲಭಾಗವನ್ನು ದಲಿತ ಮತ್ತು ಆದಿವಾಸಿಗಳಿಗಾಗಿ ಮೀಸಲಿಡುವುದು, ಕಾಂಗ್ರೆಸ್‌ನ 2004ರ ಪಾರ್ಲಿಮೆಂಟರಿ ಚುನಾವಣೆಯ ಪ್ರಣಾಳಿಕೆಯಲ್ಲಿಯೂ ಸಹ ಸೇರಿಕೊಂಡಿತು. ಆದರೆ ಅದು ಜಾರಿಗೆ ಬರಲಿಲ್ಲ. ಮೊದಮೊದಲು ಬಿ.ಜೆ.ಪಿ ಇದಕ್ಕೆ ವಿರೋಧಿಯಾಗಿದ್ದರೂ 2009ರ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಅದೂ ಸಹ ಈ ಕಾರ್ಯಕ್ರಮವನ್ನು ತನ್ನದಾಗಿಸಿಕೊಂಡಿತು. ಹೀಗೆ ಸರಬರಾಜುದಾರರ ವೈವಿಧ್ಯತೆಯ ಬಗ್ಗೆ ಎಲ್ಲರಲ್ಲಿಯೂ ಒಮ್ಮತ ಮೂಡಿತು.

ಈ ನವೆಂಬರ್ 1ರಂದು 'ಅಸಾಧ್ಯ' ಎಂಬುದು ನನ್ನ ನೆನಪಿನಿಂದ ಕಳಚಿಬಿತ್ತು. ಭಾರತದ ಕೇಂದ್ರ ಸರ್ಕಾರ, ಸರ್ಕಾರದ ಕೊಳ್ಳುವಿಕೆಯ

CAMPCO
Chocolate
Introducing Yummy New ORANGE flavour
One thing that you wouldn't want to share!
KRUST
ORANGE
₹5/-
KRUST
Campco
The Campco Ltd.
Mission Street, Mangalore - 575001 Ph. 0824 - 2422398
www.campco.org
Dilwala Chocolate
ISO 22000 - 2005 Certified Company

ಕಿರಿಯ ಗಾಂಧಿ ತಮ್ಮ ಹಳ್ಳಿ ರಾಲೆಗಾಂ ಸಿದ್ದಿಯಲ್ಲಿ ತಾಲಿಬಾನ್ ರೀತಿಯ ನೀತಿ ಸಂಹಿತೆಯನ್ನು ಹೇರುತ್ತಾದರೂ ದಾರದ ಭಾರತ ಒಂದು ಸಲವಾದರೂ ಅದನ್ನು ವರದಿ ಮಾಡುವ ಅಥವಾ ಈ ಕಿರಿಯ ಗಾಂಧಿ ಕಟ್ಟಬೇಕೆಂದಿರುವ ಭಾರತದ ಬಗ್ಗೆ ಚರ್ಚೆ ನಡೆಸುವ ಗೋಜಿಗೆ ಹೋಗಿಲ್ಲ.

ಷ್ಟನ್ನು ದಲಿತ ಮತ್ತು ಆದಿವಾಸಿ ಉದ್ದಿಮೆದಾರರ ುತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಮೀಸಲಿಟ್ಟಿತು. ದಲಿತರು ಮತ್ತು ಆದಿವಾಸಿಗಳು ಿದೊಡನೆ ಪ್ರತಿ ವರ್ಷ ಅನೇಕ ಸಾವಿರ ುನ್‌ಗಳಷ್ಟು ವ್ಯಾಪಾರವನ್ನು ಮಾಡಬಹುದು. ದಲಿತ ಮತ್ತು ಆದಿವಾಸಿ ಸರ್ಕಾರಿ ನೌಕರರ ದನೆಯ ಅನೇಕ ಪಟ್ಟು ಹೆಚ್ಚಾಗಿದೆ.

ಂದು ನಾನು ಬಹಳ ಖುಷಿಯಾಗಿದ್ದೇನೆ. ಸರ್ಕಾರಿ ಳ ನಂತರ ಇಂದು ನಾವು ಭಾರತದ ಸಂಪತ್ತಿಗೆ ರರಾಗಿದ್ದೇವೆ. ಅಸಾಧ್ಯ ಎಂಬುದರ ಬಗ್ಗೆ ಮಾಡಿದ ಕೆಲವರ ಹೆಸರುಗಳನ್ನು ಜ್ಞಾಪಿಸಿಕೊಳ್ಳಿ.

****

ನ್ನನ್ನು ತಾನು ಕಲ್ಪಿಸಿಕೊಂಡಂತೆ ವಾಗ್ವಾದ ಚಿಂತನೆ ಇವುಗಳ ಭೌದ್ಧಿಕ ಪರಂಪರೆಯಲ್ಲಿ ಪುರಾತನ ಗ್ರೀಸ್‌ಗಿಂತ ಕಡಿಮೆಯೇನೂ ಇಲ್ಲ. ಮಾರ್ತ್ಯಸೇನ್ ವಿವಿಧ ಸಂದರ್ಭಗಳಲ್ಲಿ ಬರೆದ ಬಂಧಗಳ ಸಂಗ್ರಹವಾದ 'ಆರ್ಗ್ಯೂಮೆಂಟೇಟಿವ್ ುನ್'ನಲ್ಲಿ ಈ ಪರಂಪರೆಯನ್ನು ಾಳ್ಳುತ್ತಾರೆ.

ುದರಿಂದ ಈ ವಾದ-ವಿವಾದವನ್ನು ಹಿಸುವ ಭಾರತ ದ್ರೋಣಾಚಾರ್ಯರನ್ನು ಗಿ ಮೆಚ್ಚುತ್ತದೆ. ಈ ದ್ರೋಣಚಾರ್ಯ ಗ್ರಹದ ಮತ್ತು ತಾರತಮ್ಯದ ಅತಿರೇಖ. ಲ್ಲಿನ ಅತ್ಯುತ್ತಮ ಪ್ರದರ್ಶನಕ್ಕೆ ದ್ರೋಣಾಚಾರ್ಯ ನ್ನು ಸ್ಥಾಪಿಸಲಾಗಿದೆ. ಯಾವುದೇ ಸಭ್ಯ ಮನುಷ್ಯ ೀಣಾಚಾರ್ಯ ಪ್ರಶಸ್ತಿಯ ಸ್ಥಾಪನೆ ಭಾರತ ಒಂದು ದೊಡ್ಡ ತಪ್ಪು; ಅದನ್ನು ಕೂಡಲೆ ಹಾಕಬೇಕು ಎಂದು ನಮ್ಮ ವಾದ-ವಿವಾದವನ್ನು ಹಿಸುವ ಭಾರತದೊಡನೆ ವಾದ ಮಾಡಿ ದೆ?

ತತದ ಚರಿತ್ರೆ, ಪರಂಪರೆ, ಸಂಸ್ಕೃತಿ ವವುಗಳ ಬಗ್ಗೆ ಮಾತನಾಡುವಾಗ ನಿಜವಾಗಿ ುನಸ್ಸಿನಲ್ಲಿರುವುದು ಆ ಭಯಂಕರ ಪವಿತ್ರ ದ ಸುತ್ತುವರಿಯಲ್ಪಟ್ಟ ಭಾರತ. ಈ ಅಂಕಣದ ಹೆಚ್ಚು ಉಪಯೋಗಿಸಿಕೊಳ್ಳದಿರುವುದಕ್ಕೋಸ್ಕರ ವಾದವನ್ನು ಪ್ರೋತ್ಸಾಹಿಸುತ್ತೇವೆಂದುಕೊಳ್ಳುವ ನ್ನು ನಾನು ದಾರದಿಂದ ಸುತ್ತುವರಿದಿರುವ ಂದು ಕರೆಯುತ್ತೇನೆ.

ಶಾಲಾ ದಿನಗಳನ್ನು ಜ್ಞಾಪಿಸಿಕೊಳ್ಳುವುದಾದರೆ ಗಿ ನನ್ನ ಹೈಸ್ಕೂಲ್ ದಿನಗಳಿಂದ ದಾರದಿಂದ ುತ್ತಲ್ಪಟ್ಟ ನನ್ನ ಹಲವು ಸಹಪಾಠಿಗಳು ಮತ್ತು ಹಿರಿಯರು ಜಾತಿ ಪದ್ಧತಿಯನ್ನು ಸರಿ ಎಂದು ಹೇಳುವುದನ್ನು ನೋಡಿದ್ದೇನೆ. 'ಪ್ರತಿ ಜಾತಿ ತನ್ನದೇ ಆದ ಕಸುಬುಗಳಲ್ಲಿ ವರ್ಗೀಕರಿಸಲ್ಪಟ್ಟಿರುವುದರಿಂದ ಅದು ಸಮಾಜದಲ್ಲಿ ಶಿಸ್ತನ್ನು ಉಳಿಸುತ್ತದೆ' ಎನ್ನುವುದು ಅವರ ವಾದ. ಹಾಗಾದರೆ ಬ್ರಾಹ್ಮಣರು ತಮ್ಮ ಕಸುಬಲ್ಲದ ಜಮೀನ್ದಾರರಾಗಿ ಮತ್ತು ಅನೇಕ ಠಾಕೂರರು ತಮ್ಮ ಕಸುಬಲ್ಲದ ಉಪಾಧ್ಯಾಯರುಗಳಾಗಿ ಏಕೆ ಇದ್ದಾರೆ ಎಂದು ವಾದ ಮಾಡಿದರೆ, ಅವರಲ್ಲಿ ಪ್ರಗತಿಪರರು ಎನಿಸಿಕೊಂಡವರು 'ಅಸ್ಪೃಶ್ಯರೊಡನೆ ಸಂಪರ್ಕ ಇಟ್ಟುಕೊಳ್ಳುವುದರಲ್ಲಿ ನಮಗೇನೂ ಅಭ್ಯಂತರವಿಲ್ಲ. ಆದರೆ ಅವರು ಆರೋಗ್ಯ ಮತ್ತು ಸ್ವಚ್ಛತೆಯನ್ನು ಪಾಲಿಸಬೇಕು' ಎಂದು ವಾದಿಸುತ್ತಾರೆ. ಆದರೆ ಇದೇ ದಾರ ಸುತ್ತಿಕೊಂಡ ಭಾರತ ಹೊಸ ಬಟ್ಟೆಗಳನ್ನು ತೊಟ್ಟ ದಲಿತರನ್ನು ಲೇವಡಿ ಮಾಡುತ್ತದೆ.

ನನ್ನ ಬಾಲ್ಯ ಮತ್ತು ಹಳ್ಳಿಯ ಅನುಭವವನ್ನು ಮರೆತುಬಿಡಿ. ಒಂದೆರಡು ದಶಕಗಳ ಹಿಂದೆ ಇದೇ ದೆಹಲಿಯ ಪ್ರಖ್ಯಾತ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಚೆನ್ನಾಗಿ ಉಡುಪು ಧರಿಸಿದ ದಲಿತರನ್ನು 'ಸಂಸ್ಕೃತೀಕರಣ ಹೊಂದಿದ ದಲಿತರು' ಎಂದು ಕರೆಯಲಾಯಿತು. ಈ ಭಾಷೆ ಮೆಚ್ಚುಗೆಯಿಂದ ಉಪಯೋಗಿಸಿದ್ದೇನಲ್ಲ. ಇದು ದಾರದಿಂದ ಸುತ್ತಲ್ಪಟ್ಟ ಭಾರತ. ಈ ದಾರದ ಭಾರತದ ಬೌದ್ಧಿಕ ನೆಮ್ಮದಿಯ ಬಗ್ಗೆ ಕಣ್ಣು ಹಾಯಿಸುವುದೆ ನಿಜವಾದ ತಮಾಷೆಯ ವಿಷಯ.

ದಶಕದ ಹಿಂದೆ ನಾನು ಕೇಳಿದ ಆಂಧ್ರ ಪ್ರದೇಶದ ಒಂದು ಘಟನೆ ನಗೆಬರಿಸುವಂತದ್ದು. ಅತಿ ಎಡ ಪಕ್ಷಗಳ ಬುಟ್ಟಿಯ ಇಬ್ಬರು ಕಾಂಮ್ರೇಡ್‌ಗಳು, ಒಬ್ಬ ದಲಿತ ಮತ್ತು ಮತ್ತೊಬ್ಬ ದಾರದವ, ವರ್ಗ ಮತ್ತು ಜಾತಿ ಪ್ರಶ್ನೆಯ ಬಗ್ಗೆ ರಸ್ತೆಬದಿಯ ಟೀ ಅಂಗಡಿ ಮುಂದೆ ನಿಂತು ವಾದ ಮಾಡಿದರು. ಜಾತಿ ಒಂದು ವೈಭವೀಕರಣ ಮಾತ್ರ, ಸಮಾಜದಲ್ಲಿ ಅದರ ಪಾತ್ರ ಮಹತ್ವದ್ದೇನೂ ಅಲ್ಲ ಎಂದು ಒಪ್ಪಿಕೊಳ್ಳುವ ಮಟ್ಟಕ್ಕೆ ಈ ದಲಿತ ಕಾಂಮ್ರೇಡ್ ಬಂದ. ಆ ಟೀ ಅಂಗಡಿಯಲ್ಲಿ ಮೂರು ತರಹದ ಲೋಟಗಳಿದ್ದುವು. ಒಂದು ದಲಿತರಿಗಾಗಿ, ಮತ್ತೊಂದು ಈ ದಾರ ಸುತ್ತಿಕೊಂಡಿರುವವರಿಗಾಗಿ, ಮತ್ತು ಮೂರನೆಯದು ವ್ಯಕ್ತಿ ಯಾರು ಎಂಬುದು ಗೊತ್ತಿಲ್ಲದಿದ್ದಾಗ ಉಪಯೋಗಕ್ಕಾಗಿ.

ಈ ದಾರದ ಭಾರತವನ್ನು ನೀವು ಏಕೆ ಲಾರ್ಡ್ ರಾಬರ್ಟ್ ಕ್ಲೈವ್‌ಗಿಂತ ಮೆಕಾಲೆಯನ್ನು ಹೆಚ್ಚು ದ್ವೇಷಿಸುತ್ತೀರಿ ಎಂದು ಕೇಳಿ. ಲಾರ್ಡ್ ಮೆಕಾಲೆ ಅವರಿಗೆ ನಿಜವಾದ ಕೇಡಿಯಾಗಿರುವುದರಿಂದ ನೀವು ಉತ್ತರವನ್ನು ಊಹಿಸಬೇಕಾಗಿಲ್ಲ. ರಾಬರ್ಟ್ ಕ್ಲೈವ್ ಭಾರತೀಯರನ್ನು ಅಟ್ಟಾಡಿಸಿದ. ಅವರನ್ನು ಹಿಡಿದು ಬಡಿದ. ಅವರನ್ನು ನಾಯಿ ಮುಂತಾದ ಶಬ್ದಗಳಿಂದ ಕರೆದ. ಮತ್ತು ಬ್ರಿಟನ್ನಿಗೆ ಒಂದು ಚಕ್ರಾಧಿಪತ್ಯವನ್ನು ಗಳಿಸಿಕೊಟ್ಟ. ಲಾರ್ಡ್ ಮೆಕಾಲೆ ಭಾರತಕ್ಕೆ ಐ.ಪಿ.ಸಿ, ಸಿ.ಆರ್.ಪಿ.ಸಿ ಮತ್ತು ಆಧುನಿಕ ಇಂಗ್ಲೀಷ್ ಶಿಕ್ಷಣವನ್ನು ನೀಡಿದ. ಈ ದಾರದ ಭಾರತದ ಜೊತೆ ವಾದ ಮಾಡಿ ನೀವು ರಾಬರ್ಟ್ ಕ್ಲೈವ್‌ನನ್ನು ದ್ವೇಷಿಸದಿರುವುದು ಅವನು ಭಾರತದ ಮೇಲೆ ದಾಳಿ ನಡೆಸಿ ಅದನ್ನು ಸೋಲಿಸಿದ. ಆದರೆ ಅವನು ಜಾತಿ ಪದ್ಧತಿಯನ್ನು ಪ್ರಶ್ನಿಸಲಿಲ್ಲ. ಆದರೆ ಲಾರ್ಡ್ ಮೆಕಾಲೆ ಭಾರತಕ್ಕೆ ಆಧುನಿಕತೆ ಮತ್ತು ಸಭ್ಯತೆಯನ್ನು ನೀಡಿದ. ಆದರೆ ಅವನು ಜಾತಿ ಪದ್ಧತಿಯ ಮೇಲೆ ದಾಳಿ ಮಾಡಿದ ಎಂಬುದಕ್ಕಾಗಿಯೆ ಎಂದು ಕೇಳಿ. ಇಂತಹ ನಿದರ್ಶನಗಳು ಬೇಕಾದಷ್ಟು ಇವೆ.

ದಾರದ ಭಾರತ ಏಕಕಾಲದಲ್ಲಿ ನಗೆ ಬರಿಸುತ್ತದೆ ಮತ್ತು ಆಶ್ಚರ್ಯಗೊಳಿಸುತ್ತದೆ. ನಗೆ ಬರಿಸುತ್ತದೆ, ಏಕೆಂದರೆ ಅವರು ವಾದ ಮಾಡುವಂತೆ ನಟಿಸುವುದೂ ಇಲ್ಲ. ಆಶ್ಚರ್ಯಗೊಳಿಸುತ್ತದೆ. ಏಕೆಂದರೆ ಅದು ವಾದ ವಿವಾದಕ್ಕೆ ಒತ್ತುಕೊಟ್ಟ ಭಾರತ ಎಂಬುದಾಗಿ ಕಿರೀಟ ಪಡೆಯುತ್ತದೆ. ದಾರದ ಭಾರತಕ್ಕೆ ಬೇಕಾದಾಗ ಅವಿವೇಕವೆ ವಿವೇಕ ಮತ್ತು ವಿವೇಕವೆ ಅವಿವೇಕ. ಇತ್ತೀಚಿನ ದಿನಗಳಲ್ಲಿ ಅವರು ತಮ್ಮನ್ನು ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ನೋಡಿ ಹೇಗೆ ವಿವೇಕ ಮತ್ತು ಅವಿವೇಕದ ಮಧ್ಯದ ಗೋಡೆ ಇದ್ದಕ್ಕಿದ್ದಂತೆ ಮಾಯವಾಗುತ್ತದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡುವವರು ಮೊದಲು ತಾವು ಸ್ವಚ್ಛವಾಗಿರಬೇಕು. ಈ ಹಿಬ್ಬಾಗವಾಗಿರುವ ಭಾರತದಲ್ಲಿ ಕೆಳವರ್ಗವನ್ನು ಚುನಾಯಿತ ಸಂಸತ್ತು ಪ್ರತಿನಿಧಿಸುತ್ತದೆ. ದಾರದ ಭಾರತವನ್ನು ಅದರ ಮಾಧ್ಯಮ ಮತ್ತು ಇತರ ಅಭಿಪ್ರಾಯಗಳನ್ನು ತಯಾರು ಮಾಡುವ ವೇದಿಕೆಗಳು ಪ್ರತಿನಿಧಿಸುತ್ತವೆ. ಮಾಧ್ಯಮ ದಾರದ ಭಾರತದ ಸಂಸತ್ತಾಗಿ ಉದಯವಾಗಿದೆ.

ಈ ದಾರದ ಭಾರತದ ಸಂಸತ್ತು ವಾದ - ವಿವಾದ ಮಾಡುವುದಿಲ್ಲ. ಕೇವಲ ಸೂಚಿಸುತ್ತದೆ. ಆದರೆ ನಿಜವಾದ ಸಂಸತ್ತು ವಾದ ವಿವಾದ ಮಾಡುತ್ತದೆ. ತೀರ್ಮಾನಕ್ಕೆ ಬರುತ್ತದೆ. ಕಿರಿಯ ಗಾಂಧಿ ಹೇಳಿದಂತೆ ಭ್ರಷ್ಟಾಚಾರ ವಿರೋಧಿ ಆಂದೋಲನದ ಮುಖ್ಯ ಸದಸ್ಯರಲ್ಲಿ ಇಬ್ಬರಾದ, ತಂದೆ-ಮಕ್ಕಳಾದ ಶಾಂತಿ ಭೂಷಣ್ ಮತ್ತು ಪ್ರಶಾಂತ್ ಭೂಷಣ್ ಎರಡು ತೋಟದ ಮನೆಗಳು



ರಾಜಕುಮಾರಿ ಡಯಾನ ಕಥೆ ನಮಗೆಲ್ಲರಿಗೂ ಗೊತ್ತು. ಒಂದು ಸಾರಿ ಟಿ.ವಿ. ಸಂದರ್ಶನದಲ್ಲಿ ಪ್ರಶ್ನೆ ಎದುರಾದಾಗ ಮದುವೆಯ ಹೊರಗೆ ಸಂಬಂಧ ಬೆಳೆಸಿದ್ದುದಾಗಿ ಅವರು ಒಪ್ಪಿಕೊಂಡರು. ಸ್ವಲ್ಪ ಒತ್ತಡ ಬಂದಾಗ ಬಿಲ್ ಕ್ಲಿಂಟನ್ ಸಹ ಮಿಸೆಸ್.ಲೆವೆನ್‌ಸ್ಕಿ ಜೊತೆ ಸಂಬಂಧ ಹೊಂದಿರುವುದಾಗಿ ಒಪ್ಪಿಕೊಂಡ. ಇಂತಹುಗಳು ಭಾರತದಲ್ಲೇಕೆ ನಡೆಯುವುದಿಲ್ಲ! ಭಾರತೀಯರೇಕೆ ತಪ್ಪೊಪ್ಪಿಕೊಳ್ಳುವುದಿಲ್ಲ! ನಾವು ಎತ್ತಿ ಹಿಡಿಯಬಹುದಾದ ನೈತಿಕ ಗುಣಮಟ್ಟ ಯಾವುದು?

ಮತ್ತು ವಿಶಾಲ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡದ್ದು ಗುಪ್ತದಾರಿ ಮೂಲಕವಲ್ಲವೆ? ಅದು ಸ್ವಚ್ಛ ವ್ಯವಹಾರವೆ? ಇದರಲ್ಲಿ ಅದೃಷ್ಟದ ಕೈವಾಡವಿತ್ತೆ ಅಥವಾ ಭ್ರಷ್ಟಾಚಾರ ತನ್ನ ಪಾತ್ರ ವಹಿಸಿತ್ತೆ?

ಮಿಸ್ಟರ್. ಕ್ರೇಜಿವಾಲ್ ವಿಚಾರವಾದರೂ ಏನು? ಎಲ್ಲಾ ಸರ್ಕಾರಿ ನೌಕರರು ತಮ್ಮ ಸೇವಾ ನಿಯಮಗಳನ್ನು ಅನುಸರಿಸಬೇಕು. ಕೇಜಿವಾಲ್ ಅದನ್ನು ಮುರಿದರು. ಸರ್ಕಾರಕ್ಕೆ ನೀಡಬೇಕಾಗಿದ್ದ ಲಕ್ಷಾಂತರ ರೂಪಾಯಿಗಳನ್ನು ನೀಡಲಿಲ್ಲ. ದಾರದ ಭಾರತದ ಸಂಸತ್ತು ನಮ್ಮ ಕಿರಿಯ ಗಾಂಧಿಯನ್ನು ಅವರದೇ ಗುಂಪಿನ ಮುಖ್ಯ ಸದಸ್ಯನೊಬ್ಬ ತಾನು ಸರ್ಕಾರಕ್ಕೆ ಹಿಂತಿರುಗಿಸಬೇಕಾದುದನ್ನು ಹಿಂತಿರುಗಿಸದಿದ್ದಾಗ ಅವರಿಗೆ ಭ್ರಷ್ಟಾಚಾರದ ವಿರುದ್ಧ ಹೊರಾಟ ಮಾಡಲು ಯಾವ ನೈತಿಕ ಹಕ್ಕಿದೆ ಎಂದು ಕೇಳಬಾರದೆ? ಅವರು ಈಗ ಆ ಹಣವನ್ನು ಹಿಂತಿರುಗಿಸಿದ್ದಾರೆ ಎಂದಾಕ್ಷಣ ಅವರು ಸರ್ಕಾರಕ್ಕೆ ಅನುಕಂಪ ತೋರಿದ್ದಾರೆ ಎಂದಾಗಲಾರದು.

ಮಿಸಸ್. ಕಿರಣ್ ಬೇಡಿಯ ಬಗ್ಗೆಯಾದರೂ ಎಲ್ಲವೂ ಸ್ವಚ್ಛವೆ? ಅವರ ಪ್ರಯಾಣ ವೆಚ್ಚದಲ್ಲಿನ ವಂಚನೆಯ ಒಂದು ಪ್ರಕರಣವನ್ನಾದರೂ ಪರಿಶೀಲಿಸಿ. ಅವರು ದೆಹಲಿಯಿಂದ ನಿಜಾಮನ ನಗರವಾದ ಹೈದರಾಬಾದಿಗೆ ಪ್ರಮಾಣಿಕತೆಯನ್ನು ಮಾರಲಿಕ್ಕೆ ಹೋದರು. ಹಾಗೆಯೇ ಚೆನ್ನೈನಲ್ಲಿಯೂ ಸಹ ಪ್ರಾಮಾಣಿಕತೆಯನ್ನು ಮಾರಾಟ ಮಾಡಲಿಕ್ಕಾಗಿ ಹೈದರಾಬಾದ್‌ನಿಂದ ಹಾರಿದರು ಮತ್ತು ಅಲ್ಲಿಂದ ದೆಹಲಿಗೆ ಹಿಂತಿರುಗಿದರು. ಅವರ ನಿಜವಾದ ವಿಮಾನ ಯಾನ ದೆಹಲಿಯಿಂದ–ಹೈದರಾಬಾದ್–ಚೆನ್ನೈ–ದೆಹಲಿಗೆ ಇತ್ತು. ಇದನ್ನು ಅವರು ದೆಹಲಿಯಿಂದ–ಹೈದರಾಬಾದ್ ದೆಹಲಿ, ದೆಹಲಿ–ಚೆನ್ನೈ–ದೆಹಲಿ ಆಗಿ ಪರಿವರ್ತಿಸಿ ತಮಗೆ ಸಿಗಬೇಕಾದುದಕ್ಕಿಂತ ಹೆಚ್ಚು ಭತ್ಯೆ ಪಡೆದರು. ಇದು ವಂಚನೆಯಲ್ಲದಿದ್ದರೆ ಮತ್ತೆ ಯಾವುದು ವಂಚನೆ? ಆದರೆ ದಾರದ ಭಾರತ ಇದು ದಾನಕ್ಕಾಗಿ ಶೇಖರಿಸಿದ ಹಣ ಎಂಬ ಅವರ ವಿವರಣೆಯನ್ನು ಉದಾರವಾಗಿ ಒಪ್ಪಿಕೊಂಡಿತು.

ಕಿರಿಯ ಗಾಂಧಿ ತಮ್ಮ ಹಳ್ಳಿ ರಾಲೆಗಾಂ ಸಿದ್ದಿಯಲ್ಲಿ ತಾಲಿಬಾನ್ ರೀತಿಯ ನೀತಿ ಸಂಹಿತೆಯನ್ನು ಹೇರುತ್ತಾದರೂ ದಾರದ ಭಾರತ ಒಂದು ಸಲವಾದರೂ ಅದನ್ನು ವರದಿ ಮಾಡುವ ಅಥವಾ ಈ ಕಿರಿಯ ಗಾಂಧಿ ಕಟ್ಟಬೇಕೆಂದಿರುವ ಭಾರತದ ಬಗ್ಗೆ ಚರ್ಚೆ ನಡೆಸುವ ಗೋಜಿಗೆ ಹೋಗಿಲ್ಲ.

ದಾರದ ಭಾರತದ ನಡವಳಿಕೆಯ ಬಗ್ಗೆ ಭಾರತ ಮಿಲಿಯಗಟ್ಟಲೆ ಕೆಳವರ್ಗದ ಜನ ನಗುತ್ತಿದ್ದಾರೆ. ಆ ಅವರ ಧ್ವನಿಯನ್ನು ಅದುಮಿಡಲಾಗಿದೆ. ಎಲ್ಲಾ ಸರ್ವಾಧಿಕಾರಗಳೂ ಒಂದು ದಿನ ಉದುರಿಹೋಗು ದಾರದ ಭಾರತದ ಅಭಿಪ್ರಾಯ ಸರ್ವಾಧಿಕಾರ ಕೂ ಹಾಗೆಯೇ ಆಗುತ್ತದೆ. ಹಾಗಾದಾಗ ಭವಿಷ್ಯ ಭಾರತ ಚರಿತ್ರೆ ದಾರದ ಭಾರತದ ಬಗ್ಗೆ ಮುಂದೊಂದು ದಿ ಗಹಗಹಿಸಿ ನಗುತ್ತದೆ.

* * * *

ಇಂದು ಯುನೆಸ್ಕೊದಿಂದ ಪೂರ್ವಿಕರ ಉತ್ಕೃ ಕೊಡುಗೆ ಎಂದು ಗುರುತಿಸಲ್ಪಟ್ಟಿರುವ ಕಲ್ಕಾ–ಸಿಮ್ಲಾ ಆಟಿಕೆ ರೈಲು ಬ್ರಿಟಿಷರ ಇಂಜಿನಿಯರಿಂಗ್ ಅದ್ಭುತ. 1864ರಲ್ಲಿ ಸಿಮ್ಲಾ ಬ್ರಿಟಿಷ್ ಇಂಡಿಯಾದ ಬೇಸಿಗೆ ರಾಜಧಾನಿಯಾಯಿತು. ವಿಕಿಪೀಡಿಯಾದ ಒಂದು ಸಿಮ್ಲಾ ಬ್ರಿಟಿಷ್ ಇಂಡಿಯಾ ಸೈನ್ಯದ ಕೇಂದ್ರ ಸ್ಥಾನವಾಗಿತ್ತು ಎಂದು ಸಹ ಹೇಳುತ್ತದೆ. ಕಲ್ಕಾ–ಸಿ ಆಟಿಕೆ ರೈಲು ಅನೇಕ ಕಾರಣಗಳಿಗಾಗಿ ಇಂಜಿನಿಯ



ನೈತಿಕ ಗುಣಮಟ್ಟವನ ಯಾರು ನಿರ್ಧರಿಸುತ್ತಾರೆ

ಕವನ

ನಾನಲ್ಲ ನಿನ್ನ ಕಲ್ಪನೆ

ಹುಟ್ಟಿದ್ದು ಈ ಭೂಮಿ
ಬೆಳೆದಿದ್ದು ಈ ನೆಲ
ಕಲಿತದ್ದು ನೆಲದ ಭಾಷೆ
ಆಚಾರ ನನ್ನ ಆತ್ಮದ ಬಯಕೆ

ನೀ ಕೈ ಮುಗಿಯುವುದು ಸೂರ್ಯ
ನಾ ಕೈ ಮುಗಿಯುವುದು ಚಂದ್ರ
ಸೂರ್ಯ ಚಂದ್ರರ ಸ್ನೇಹ ಭೂಮಿಗೆ
ಇವರೊಳಗಿಲ್ಲದ ಭಿನ್ನ ನಮ್ಮೊಳಗೇಕೆ?

ನಿನಗೊಂದು ಗೋಪುರ
ನನಗೊಂದು ಗೋಪುರ
ಇವೆರಡರ ನೆಲೆ ಒಂದೇ
ಅದು ನಿನ್ನ ಪಂಜರ ಇದು ನನ್ನ ಪಂಜರ

ನಿನ್ನ ಶ್ರೇಯಸ್ಸಿಗೆ ನಿನ್ನ ಪೂಜೆ
ನನ್ನ ಶ್ರೇಯಸ್ಸಿಗೆ ನನ್ನ ಪ್ರಾರ್ಥನೆ
ನಿನ್ನ ದಿನ ಗಂಟೆಯ ಶಬ್ಧದಿಂದ
ನನ್ನ ದಿನ ಪ್ರಾರ್ಥನೆಯ ಕೂಗಿನಿಂದ

ಎಲ್ಲೋ ಸಿಡಿದ ಬಾಂಬಿನ ಸದ್ದು
ನನ್ನದೇ ಎಂಬ ಕೂಗು ಏಕೆ?
ಅದಕ್ಕೂ ನನಗೂ ಇಲ್ಲ ನಂಟು
ನಾನಲ್ಲ ನಿನ್ನ ಕಲ್ಪನೆ!

ಮಖ್ತಿರ್ ಪಾಷ

ಕನ್ನಡ ಸಾಹಿತ್ಯ ಲೋಕದಲ್ಲಿ ಅರಳುತ್ತಿರುವ ಪ್ರತಿಭೆ. ಕನ್ನಡ ಎಂ. ಎ ಪದವೀಧರ. ವಿದ್ಯಾರ್ಥಿ ದೆಸೆಯಿಂದಲೇ ಕಥೆ, ಕಾವ್ಯ ರಚನೆಗಳಲ್ಲಿ ಆಸಕ್ತಿ. ಜನಪ್ರಿಯ ಪತ್ರಿಕೆಗಳಲ್ಲಿ ಕವನಗಳ ಪ್ರಕಟ. ಅನೇಕ ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ಸಂಘಟಿಸಿದ ಹೆಗ್ಗಳಿಕೆ ಮಖ್ತಿರ್ ಪಾಷರದು.

ಅದ್ಭುತ. ಮೊದಲನೆಯದಾಗಿ ಆ ಪ್ರದೇಶದಲ್ಲಿ ಎತ್ತಿನಗಾಡಿ ಸಹ ಚಲಿಸುವುದು ಕಷ್ಟವಿದ್ದಾಗ ರೈಲು ಹಳಿಯನ್ನು ಯಶಸ್ವಿಯಾಗಿ ಹಾಕಲಾಯಿತು. 1898ರಲ್ಲಿ ಈ ಕೆಲಸ ಪ್ರಾರಂಭವಾಯಿತು. ಈ 96.54 ಕಿ.ಮೀ ರೈಲ್ವೆ ಹಳಿ ಹಾಕುವ ಕೆಲಸ ಪೂರ್ತಿಯಾದದ್ದು ನವೆಂಬರ್ 1903ರಲ್ಲಿ. ಮೊದಲ ರೈಲು 9–11–1903ರಲ್ಲಿ ಈ ಹಳಿಯ ಮೇಲೆ ಚಲಿಸಿತು.

ಕಲ್ಕಾ–ಸಿಮ್ಲಾ ಆಟಿಕಾ ರೈಲು 103 ಸುರಂಗಗಳನ್ನು ಹೊಂದಿದೆ. ಅವುಗಳಲ್ಲಿ 102 ಸುರಂಗಗಳು ಇಂದಿಗೂ ಉಪಯೋಗದಲ್ಲಿವೆ. ಈ ಮಾರ್ಗ 864 ಸೇತುವೆಗಳನ್ನು ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮನುಷ್ಯ ನಿರ್ಮಿತ ಅದ್ಭುತ ಈ ಸಿಮ್ಲಾ ಆಟಿಕಾ ರೈಲು ಹಿಮಾಲಯ ಪರ್ವತ ಶ್ರೇಣಿಯ ಹೊಟ್ಟೆಯ ಒಳಹೊಕ್ಕು ಹೊರ ಬರುತ್ತದೆ. ಇಂದು ಭಾರತ ದೆಹಲಿಯ ಸಂಪೂರ್ಣ ಸಮತಟ್ಟಾದ ಪ್ರದೇಶದಲ್ಲಿ ಒಂದು ಸ್ಟೇಡಿಯಂನ್ನು ಎಂಟು ವರ್ಷಗಳಲ್ಲಿ ಕಟ್ಟಲಾಗದಿದ್ದರೆ, ಅಂದು ದೊಡ್ಡ ದೊಡ್ಡ ಅರ್ಥ್ ಮೂವರ್‌ಗಳು ಮತ್ತು ಬುಲ್ಡೋಜರ್‌ಗಳು ಇಲ್ಲದಿದ್ದಾಗ ಬ್ರಿಟಿಷ್ ಇಂಜಿನಿಯರ್‌ಗಳು ಒಂದು ಇಂಜಿನಿಯರಿಂಗ್ ಅದ್ಭುತವನ್ನು ಐದು ವರ್ಷಗಳಲ್ಲಿ ಕಟ್ಟಿ ಮುಗಿಸಿದರು.

ಆದರೆ ಈ ಸಿಮ್ಲಾ ಆಟಿಕಾ ರೈಲು ತನ್ನದೇ ಆದ ದುರಂತ ಕಥೆಯನ್ನು ಹೇಳುತ್ತದೆ. ಸಿಮ್ಲಾ ಆಟಿಕೆ ರೈಲು ಯೋಜನೆಯ ಹಿಂದೆ ಇದ್ದ ಪ್ರಚಂಡ ಬುದ್ಧಿವಂತರ ಮಧ್ಯೆ ಬರೋಗ್ ಎಂಬ ಒಬ್ಬ ಇಂಜಿನಿಯರ್ ಕೂಡ ಇದ್ದ.

ಸುಮಾರು 1143.61 ಮೀ. ಉದ್ದದ ಇಲ್ಲಿನ ಒಂದು ಸುರಂಗಕ್ಕೆ ಬರೋಗ್ ಹೆಸರನ್ನು ಇಟ್ಟಿದ್ದಾರೆ. ಅಂದಿನ ಪದ್ಧತಿಯಂತೆ ಸುರಂಗಗಳನ್ನು, ಸಮಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಎರಡೂ ಕಡೆಗಳಿಂದ ಅಗೆಯುತ್ತಿದ್ದರು. ಹೀಗೆ ಅಗೆದ ಸುರಂಗಗಳು ಮಧ್ಯಭಾಗದಲ್ಲಿ ಸಂಧಿಸಬೇಕಾಗಿತ್ತು. ಈ ಪ್ರತಿಭಾವಂತನ ಲೆಕ್ಕಾಚಾರ ತಪ್ಪಾಯಿತು. ಎರಡೂ ಕಡೆಯಿಂದ ಬಂದ ಸುರಂಗಗಳು ಮಧ್ಯೆ ಸಂಧಿಸಲಿಲ್ಲ. ಇದೊಂದು ಇಂಜಿನಿಯರಿಂಗ್ ದುರಂತ.

ಆಗ ಬ್ರಿಟಿಷ್ ಇಂಡಿಯಾ ಸರ್ಕಾರ ಏನು ಮಾಡಿತು? ಅದು ಒಂದು ವಿಚಾರಣೆಯನ್ನು ಈ ಘಟನೆಯ ಮೇಲೆ ನಡೆಸಿತು. ಇಂಜಿನಿಯರ್ ಬರೋಗ್ ಮೇಲೆ ಒಂದು ರೂಪಾಯಿಯ ದಂಡ ವಿಧಿಸಲಾಯಿತು. ಇದಕ್ಕೆ ಆ ಪ್ರತಿಭಾವಂತ ಇಂಜಿನಿಯರ್ ಹೇಗೆ ಸ್ಪಂದಿಸಿದ! ಅವನು ತನ್ನ ಸೇವಾ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಸತ್ತ.

ಬ್ರಿಟಿಷ್ ಸಮಾಜ ತನ್ನ ಪ್ರಜೆಗಳ ಮುಂದೆ ಎತ್ತಿ ಹಿಡಿದಿದ್ದ ನೈತಿಕ ಗುಣಮಟ್ಟ ಅದು. ಇಂಜಿನಿಯರ್ ಬರೋಗ್ ಅದನ್ನು ಅನುಸರಿಸಿದ. ಸಮಾಜದಲ್ಲಿ ಉತ್ತಮ ನೈತಿಕ ಗುಣಮಟ್ಟ ಬೆಳೆಯಬೇಕೆನ್ನುವುದಾದರೆ ಮೊದಲು ತಪ್ಪಾದಾಗ ತಪ್ಪು ಮಾಡಿದ ವ್ಯಕ್ತಿ ನಾಚಿಕೆಯಿಂದ ಕುಗ್ಗುವ ಪ್ರವೃತ್ತಿ ಬೆಳೆಸಿಕೊಳ್ಳಬೇಕಾಗುತ್ತದೆ. ನಾಚಿಕೆ ನೈತಿಕ ಗುಣಮಟ್ಟ ಬೆಳೆಸುವ ದಾರಿಯ ಮೊದಲ ಹೆಜ್ಜೆ. ಇಂಜಿನಿಯರ್ ಬರೋಗ್ ಅದನ್ನು ಸಂಪೂರ್ಣ ಒಪ್ಪಿಕೊಂಡ ಮತ್ತು ತನ್ನ ಜೀವವನ್ನು ತಾನೆ ತೆಗೆದುಕೊಂಡ. ಅವನು ತನಗೆ ವಿದಿಸಿದ ದಂಡವಾದ ಒಂದು ರೂಪಾಯಿಯನ್ನು ಕಟ್ಟಿಬಿಡಬಹುದಿತ್ತು. ಮತ್ತು ಜೊತೆಗೆ ಆ ತಪ್ಪನ್ನು ತನ್ನ ಕೆಳಗಿನ ಯಾವುದಾದರೂ ಕಿರಿಯನ ಮೇಲೆ ಹೊರಿಸಬಹುದಾಗಿತ್ತು.

ಇಂದಿನ ಭಾರತದಲ್ಲಿ ಸೇತುವೆಗಳು, ಕಟ್ಟಡಗಳು ಮತ್ತು ಸುರಂಗಗಳು ಉದ್ಘಾಟನೆಗೆ ಮೊದಲೆ ಕುಸಿದು ಬೀಳುತ್ತವೆ.

1857ರ ಸಿಪಾಯಿ ಧಂಗೆಯಲ್ಲಿ ಮೀರತ್‌ನಲ್ಲಿ ಅನೇಕ ಬ್ರಿಟನ್ನರನ್ನು ಕೊಲೆ ಮಾಡಲಾಯಿತು. ಬ್ರಿಟನ್ ಕೊನೆಯಲ್ಲಿ ಜಯಶಾಲಿಯಾಯಿತು. ಆತಂಕಗೊಂಡಿದ್ದ ಬ್ರಿಟಿಷ್ ಅಧಿಕಾರಿಗಳು ಇಂಡಿಯಾ ಸೈನಿಕರು ತಮ್ಮ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರೆಂದು ಆರೋಪ ಮಾಡಿದರು. ವಿಚಾರಣೆಗಾಗಿ ಒಂದು ಆಯೋಗವನ್ನು ನೇಮಿಸಲಾಯಿತು. ಅದರ ಮುಖ್ಯಸ್ಥ ಒಬ್ಬ ಇಂಗ್ಲೀಷ್‌ನವನಾಗಿದ್ದ. ಆಯೋಗ ಆರೋಪವನ್ನು ಸುಳ್ಳು ಎಂದು ತಳ್ಳಿ ಹಾಕಿತು. ಧಂಗೆಯನ್ನು ಅಡಗಿಸಿದ್ದ ವಿಚಾರಣಾ ಆಯೋಗ ಆರೋಪವನ್ನು ಸುಲಭವಾಗಿ ಎತ್ತಿ ಹಿಡಿಯಬಹುದಿತ್ತು ಮತ್ತು ಇನ್ನೂ ಕೆಲವು ಭಾರತೀಯರನ್ನು ಗಲ್ಲಿಗೆ ಕಳಿಸಬಹುದಿತ್ತು. ಆದರೆ ಅವರ ಸಮಾಜ ಅವರ ದೇಶದಲ್ಲಿ ಕಟ್ಟಿಕೊಂಡಿದ್ದ ನೈತಿಕ ಮಟ್ಟವನ್ನು ಅವರು ಅನುಸರಿಸಿದರು.

ಪ್ರಖ್ಯಾತ ನೀರಾವರಿ ಇಂಜಿನಿಯರ್ ಸರ್. ಆರ್ಥರ್ ಥೋಮಸ್ ಕಾಟನ್ ಇವರ ಪ್ರಕರಣವನ್ನೆ ತೆಗೆದುಕೊಳ್ಳಿ, ಗೋಧಾವರಿ ನದಿಯನ್ನು ಪಳಗಿಸುವ ಮೂಲಕ ಈ ಶ್ರೇಷ್ಠ ಇಂಜಿನಿಯರ್ ಆಂಧ್ರಾದ ಕಡಲಸೀಮೆಯನ್ನು ಅನ್ನದ ಕಣಜವಾಗಿ ಪರಿವರ್ತಿಸಿದ. ಅವನು ದುಂದುವೆಚ್ಚ ಮಾಡಿದ ಎಂದು ಒಂದು ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ಒಂದು ವರದಿಯ ಪ್ರಕಾರ ಆಯೋಗದ ಸದಸ್ಯರು ರಾಜಮುಂಡ್ರಿ ಎನ್ನುವ ಆ ಪ್ರದೇಶಕ್ಕೆ ಬೇಟಿ ನೀಡಿದಾಗ ಅವನು ಅವರನ್ನು ಒಂದು ದೋಣಿಯಲ್ಲಿ ಆ ನದಿಯ ಸೌಂದರ್ಯವನ್ನು ತೋರಿಸುವುದಕ್ಕಾಗಿ ಕರೆದೊಯ್ದ. ಜೊತೆಯಲ್ಲಿ ಅವನು ಒಂದು ಗೋಣಿಚೀಲ ತುಂಬಾ ನಾಣ್ಯಗಳನ್ನು ಕೊಂಡೊಯ್ದ. ದೋಣಿ ನದಿಯ ಮಧ್ಯಕ್ಕೆ ಬಂದಾಗ ಅವನು ಚೀಲದಿಂದ ನಾಣ್ಯಗಳನ್ನು ತೆಗೆದು ನದಿಗೆ ಎಸೆಯತೊಡಗಿದ. ಇದರಿಂದ ಆಶ್ಚರ್ಯಗೊಂಡ ಆಯೋಗದ ಸದಸ್ಯರು 'ನಾಣ್ಯಗಳನ್ನು ನೀರಿಗೆ ಏಕೆ ಎಸೆಯುತ್ತಿದ್ದೀಯ' ಎಂದು ಅವನನ್ನು ಕೇಳಿದರು. 'ಈ ಬಲಶಾಲಿ ಗೋಧಾವರಿಯನ್ನು ಪಳಗಿಸಲು ನಾನು ಈ ರೀತಿ ಹಣವನ್ನು ಎಸೆದಿದ್ದೇನೆ', ಎಂದ ಅವನು.

ನಾನು ಮುಗ್ಧ ಎಂದು ಸಾಬೀತು ಮಾಡುವು ಸರ್.ಆರ್ಥರ್ ಕಾಟನ್ ವಿವಿಧ ಕಾರಣಗಳನ್ನು ನೀಡಬಹುದಿತ್ತು.. ಆದರೆ ನೀತಿವಂತನಾದ ಅವನು ಹೇಗೆ ಹಣವನ್ನು ಖರ್ಚುಮಾಡಿದೆ ಎನ್ನುವುದನ್ನು ಮುಚ್ಚು ಮರೆಯಿಲ್ಲದೆ ಒಪ್ಪಿಕೊಂಡ. ಅವನು ಕಟ್ಟಿದ ಅಣೆಕಟ್ಟು ಜನರ ಹಸಿವನ್ನು ನಿವಾರಿಸುತ್ತಿದೆ ಅನಿಸಿದ 1861ರಲ್ಲಿ ಬ್ರಟಿಷ್ ಸರ್ಕಾರ ಅವನಿಗೆ 'ನೈಟ್' ಪದವಿಯನ್ನು ನೀಡಿ ಗೌರವಿಸಿತು.

ರಾಜಕುಮಾರಿ ಡಯಾನ ಕಥೆ ನಮಗೆಲ್ಲರಿಗೂ ಗೊತ್ತು. ಒಂದು ಸಾರಿ ಟಿ.ವಿ. ಸಂದರ್ಶನದಲ್ಲಿ ಪ್ರ ಎದುರಾದಾಗ ಮದುವೆಯ ಹೊರಗೆ ಸಂಬಂಧ ಬೆಳೆಸಿದ್ದುದಾಗಿ ಅವರು ಒಪ್ಪಿಕೊಂಡರು. ಸ್ವಲ್ಪ ಒತ್ತ ಬಂದಾಗ ಬಿಲ್ ಕ್ಲಿಂಟನ್ ಸಹ ಮಿಸೆಸ್. ಲೆವೆನ್‌ಸ್ಕಿ ಜೊತೆ ಸಂಬಂಧ ಹೊಂದಿರುವುದಾಗಿ ಒಪ್ಪಿಕೊಂಡ ಇಂತಹುಗಳು ಭಾರತದಲ್ಲೇಕೆ ನಡೆಯುವುದಿಲ್ಲ!

ಭಾರತೀಯರೇಕೆ ತಪ್ಪೊಪ್ಪಿಕೊಳ್ಳುವುದಿಲ್ಲ! ನಾವು ಎತ್ತಿ ಹಿಡಿಯಬಹುವಾದ ನೈತಿಕ ಗುಣಮಟ್ಟ ಯಾವುದು?

ಎಲ್ಲಾ ಸಮಾಜಗಳಲ್ಲಿಯೂ ಮೇಲ್ವರ್ಗ ನೈತಿಕ ಗುಣಮಟ್ಟವನ್ನು ಇತರರ ಮುಂದೆ ಎತ್ತಿ ಹಿಡಿಯುತ್ತದೆ. ಪಾಪಪ್ರಜ್ಞೆ ಆಗ ಉಂಟಾಗುತ್ತದೆ. ಇತರ ವಿಚಾರಗಳೂ ಏಳುತ್ತದೆ. ಈ ಪ್ರಕ್ರಿಯೆ ಒಂದು ಹಂತದಲ್ಲಿ ನಿಲ್ಲುತ್ತದೆ. ಯಾರು ಈ ನೈತಿಕ ಸೂಚಿಯನ್ನು ಉಲ್ಲಂಘಿಸುತ್ತಾರೋ ಅಂತಹವರನ್ನು ವಿಶಾಲ ಸಮಾಜ ಶಿಕ್ಷಿಸುತ್ತದೆ.

ಭಾರತದಲ್ಲಿ ಮೇಲ್ವರ್ಗ ಎಂದರೆ ಸಾಮಾನ್ಯವಾಗಿ ಮೇಲ್ಜಾತಿಗಳು. ಶತಮಾನಗಳ ಕಾಲ ಜನರ ಮೇಲೆ ದಬ್ಬಾಳಿಕೆ ನಡೆಸಿದ ಮೇಲ್ಜಾತಿಗಳು ಇದ್ದಕ್ಕಿದ್ದಂತೆಯೆ ನೀತಿಯುತರಾಗಲಾರರು. ಯಾರು ಬಹುಜನರನ್ನು ಕೀಳಾಗಿ ನೋಡುವಲ್ಲಿ ಖುಷಿ ಪಡೆದರೂ ಅಂತಹವರು ಸುಲಭವಾಗಿ ಬದಲಾಗುವುದಿಲ್ಲ.

ಆದರೆ ಬದಲಾವಣೆಯ ಸೂಚನೆ ನೀಡಲು ಮೇಲ್ಜಾತಿಗಳು ಎಷ್ಟು ಸಮಯ ತೆಗೆದುಕೊಳ್ಳಬಲ್ಲರು? ಒಂದು ನೈತಿಕ ವ್ಯವಸ್ಥೆಯನ್ನು ಭಾರತಕ್ಕೆ ಉತ್ಪಾದಿಸಲು ಅವರೆಷ್ಟು ಸಮಯ ತೆಗೆದುಕೊಳ್ಳುತ್ತಾರೆ?

ಲಂಚ ಕೇಳಿದ ಮೊದಲ ಭಾರತೀಯ ಯಾರು ಎಂದು ನಾನು ಕೇಳಲಿಚ್ಛಿಸುತ್ತೇನೆ? ನಿಶ್ಚಿತವಾಗಿ, ಮೊದಲು ಸರ್ಕಾರದ ನೌಕರರಾಗಿ, ಅಧಿಕಾರಿಗಳಾಗಿ, ರಾಜಕಾರಣಿಗಳಾಗಿ ಸೇರಿದವರೆ ಇರಬೇಕಲ್ಲವೆ? ಅವರು ಯಾರು? ಮೊದಲು ತೆರಿಗೆಯಿಂದ ತಪ್ಪಿಸಿಕೊಂಡವರಾರು? ನಿಶ್ಚಿತವಾಗಿ, ಯಾರು ಹಣ ಮಾಡಿದರೂ ಅವರಲ್ಲವೆ? ಅವರು ಯಾರು? ಸರ್ಕಾರದ ಗುತ್ತಿಗೆಗಳನ್ನು ಮೊದಲು ದೋಚಿ ಕೆಟ್ಟರಸ್ತೆಗಳು, ಸೇತುವೆಗಳು ಮತ್ತು ಸುರಂಗಗಳನ್ನು ಕಟ್ಟಿದವರು ಯಾರು? ಈ ಪಟ್ಟಿಗೆ ಕೊನೆಯೆ ಇಲ್ಲ.

ದಲಿತರು ಮತ್ತು ಓ.ಬಿ.ಸಿಗಳು ಯಾರನ್ನು ಹಿಂಬಾಲಿಸುತ್ತಾರೆ? ಭಾರತದಲ್ಲಿ ಭ್ರಷ್ಟಾಚಾರದ ತುತ್ತತುದಿಯಲ್ಲಿರುವ ಮೇಲ್ಜಾತಿಗಳು ತಾವು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇವೆಂದರೆ ಅವರ ಪ್ರಾಮಾಣಿಕತೆಯನ್ನು ಯಾರು ನಂಬುತ್ತಾರೆ? ನಮ್ಮ ಕಿರಿಯ ಗಾಂಧಿಯವರ ಒಳಪಂಗಡದಲ್ಲಿರುವ ಸದಸ್ಯರು ಮೋಸಗಾರರಿಗಿಂತ ಕಡಿಮೆ ಇಲ್ಲದಿರುವಾಗ ನಮ್ಮ ಕಿರಿಯ ಗಾಂಧಿಯನ್ನು ಯಾರು ನಂಬುತ್ತಾರೆ? ಕಿರಿಯ ಗಾಂಧಿಯಾದರೂ ನ್ಯಾಯ ಪರವಾಗಿದ್ದಾರೆಯೆ?

ಸಾರ್ವಕಾಲಿಕವಾದ ಅಪವಾದದ ನಿಯಮವನ್ನು ಮೇಲ್ಜಾತಿಗಳು ಅನುಸರಿಸಲಿಲ್ಲ. ಎಲ್ಲ ವಸ್ತುಗಳು ಹೆಪ್ಪುಗಟ್ಟಿದಾಗ ಚಿಕ್ಕದಾಗುತ್ತವೆ. ನೀರು ಇದಕ್ಕೊಂದು ಅಪವಾದ. ಅದು ಹೆಪ್ಪುಗಟ್ಟಿದಾಗ ದೊಡ್ಡದಾಗುತ್ತದೆ.

ಕಿರಿಯ ಗಾಂಧಿಯ ಮೇಲೆ ಅತಿಕ್ರಮಣಕ್ಕೆ ಏಕೆ ಕೇಸು ದಾಖಲು ಮಾಡಲಿಲ್ಲವೆಂದು ಮೇಲ್ಜಾತಿಯ ಯಾವ ವ್ಯಕ್ತಿಯೂ ಕೇಳಲಿಲ್ಲ. ಅವರನ್ನು ತಿಹಾರ್ ಜೈಲಿನಲ್ಲಿ ತಮ್ಮ ಬಿಡುಗಡೆಯ ನಂತರವೂ ಉಳಿದಿದ್ದಕ್ಕೆ ಏಕೆ ಮರು ದಸ್ತಗಿರಿ ಮಾಡಲಿಲ್ಲ ಎಂದು ಕೇಳಲಿಲ್ಲ!

ಮೇಲ್ಜಾತಿಗಳು ಭಾರತ ಸಮಾಜಕ್ಕೆ ಒಂದು ನೈತಿಕ ವ್ಯವಸ್ಥೆ ನೀಡದಿದ್ದುದರಿಂದ ಇಂತಹುದೆಲ್ಲವೂ ನಡೆಯುತ್ತವೆ!

ಚಂದ್ರಬಾನ್ ಪ್ರಸಾದ್

ಉತ್ತರ ಪ್ರದೇಶದ ಅಜಮ್‌ಘರ್ ಜಿಲ್ಲೆಯ ಕುಗ್ರಾಮದವರಾದ ಸಿಬಿಪಿ ಭಾರತದ ಮೊತ್ತಮೊದಲ ದಲಿತ ಅಂಕಣಕಾರ. ದೇಶದ ಪ್ರತಿಷ್ಠಿತ ಆಂಗ್ಲ ದಿನ ಪತ್ರಿಕೆ 'ದಿ ಪಯನೀರ್' ಗೆ 1999ರಿಂದ ನಿರಂತರವಾಗಿ 'ದಲಿತ್ ಡೈರಿ' ಅಂಕಣವನ್ನು ಬರೆಯುತ್ತಿದ್ದಾರೆ. ಈ ವಿಚಾರ ಪ್ರಚೋದಕ ಅಂಕಣ ಅಪಾರ ಜನಪ್ರಿಯತೆ ಗಳಿಸಿದೆ. ವಿದ್ಯಾರ್ಥಿ ದೆಸೆಯಲ್ಲಿಯೇ ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿ ತಳೆದು ಎಡ ಪಂಥೀಯ ವಿಚಾರಧಾರೆಯನ್ನು ಮೈಗೂಡಿಸಿಕೊಂಡರು. ಅಂತರರಾಷ್ಟ್ರೀಯ ರಾಜಕೀಯ ಶಾಸ್ತ್ರದಲ್ಲಿ ಪದವಿ ಪಡೆದಿದ್ದಾರೆ. ಮುಕ್ತ ವಾಣಿಜ್ಯ ಮಾರುಕಟ್ಟೆ ನೀತಿ ಕುರಿತು ಅಪಾರ ಪಾಂಡಿತ್ಯ ಹೊಂದಿದ್ದಾರೆ. ಹೊಸ ಆಲೋಚನೆ, ವಿಶಾಲ ಮನೊಭಾವನೆಯಿಂದ ಕೂಡಿದ ಸಿಬಿಪಿರವರ ಲೇಖನಗಳು ಶೋಷಿತ ಸಮುದಾಯಗಳು ಆಧುನಿಕತೆಯನ್ನು ಮೈಗೂಡಿಸಿಕೊಂಡು ಬದುಕಲು ಪ್ರೇರೇಪಿಸುತ್ತವೆ.

ಎಸ್. ಮರಿಸ್ವಾಮಿ

ನ್ಯಾಯ-ನಿಷ್ಠೂರತೆಗೆ ಹೆಸರಾದ ನಿವೃತ್ತ ಪೊಲೀಸ್ ಅಧಿಕಾರಿ. ಮೃದು ಮಾತಿನ ಹಸನ್ಮುಖಿ. ಸಕಲ ಸಮಾಜಗಳೂ ಸೌಹಾರ್ದಯುತವಾಗಿ ಬದುಕಬೇಕೆಂಬ ಹಂಬಲವುಳ್ಳವರು. ಸಾಮಾಜಿಕ ಕಾಳಜಿಯೊಂದಿಗೆ ನಿರಂತರ ಉತ್ಸಾಹದ ಬುಗ್ಗೆಯಾದ ಮರಿಸ್ವಾಮಿಯವರು 'ಸ್ಫೂರ್ತಿಧಾಮ'ದ ರೂವಾರಿಯೂ ಆಗಿದ್ದಾರೆ.





ಗಾಂಧಿಗೊಂದು ಪತ್ರ

ಭಾರತದ ಸದ್ಯದ
ಸಮಸ್ಯೆಗಳ ಬಗ್ಗೆ
ಮೊನ್ನೆ ಮೊನ್ನೆ ಗಾಂಧಿಗೊಂದು
ಪತ್ರ ಬರೆದೆ.

ವಾಪಾಸಾಗಿದೆ
ಅದು ಇಂದು
Return with thanks
– ಸೀಲಿನೊಂದಿಗೆ,
ಮೊದಲಿನಷ್ಟೇ ಒಪ್ಪವಾಗಿ.

ಈಗಲೂ
ಗಾಂಧಿ ಸತ್ತಿರುವುದ
ನಾನು ನಂಬುವುದಿಲ್ಲ.

ದಯಾನಂದ



ಯಾರ ಮಾತನ್ನು ನಂಬುತ್ತೀಯೆ?



ಡಾ॥ ಜೆ. ಬಾಲಕೃಷ್ಣ

ಒಂದು ದಿನ ಪಕ್ಕದ ಮನೆಯಾತ ನಸ್ರುದ್ದೀನ್ ಬಳಿ ಬಂದು, 'ಈ ದಿನ ಸಂತೆಯಿಂದ ಕೆಲವು ಸಾಮಾನು ತರಬೇಕಿದೆ. ನನ್ನ ಕತ್ತೆಗೆ ಕಾಯಿಲೆಯಾಗಿದೆ. ನಿನ್ನ ಕತ್ತೆಯನ್ನು ಕೊಡುವೆಯಾ?' ಎಂದು ಕೇಳಿದ.

ಆತನಿಗೆ ತನ್ನ ಕತ್ತೆಯನ್ನು ಕೊಡಲು ಇಷ್ಟವಿಲ್ಲದ ನಸ್ರುದ್ದೀನ್, 'ಕ್ಷಮಿಸು ಗೆಳೆಯಾ, ನನ್ನ ಕತ್ತೆಯನ್ನು ಈಗಾಗಲೇ ಬೇರೆ ಯಾರಿಗೋ ಕೊಟ್ಟಿದ್ದೇನೆ' ಎಂದ.

ಅಷ್ಟರಲ್ಲಿ ನಸ್ರುದ್ದೀನ್‌ನ ಮನೆಯ ಹಿತ್ತಲಲ್ಲಿದ್ದ ಕತ್ತೆ ಜೋರಾಗಿ ಕೂಗಿತು.

ಅದನ್ನು ಕೇಳಿಸಿಕೊಂಡ ಪಕ್ಕದ ಮನೆಯಾತ, 'ಸುಳ್ಳು ಹೇಳುತ್ತಿದ್ದೀಯ ಹೋಜಾ! ನೋಡು ಕತ್ತೆ ನಿನ್ನ ಮನೆಯ ಹಿತ್ತಲಲ್ಲೇ ಇದೆ!' ಎಂದ.

'ನಾನು ಸುಳ್ಳು ಹೇಳುತ್ತಿದ್ದೀನೆಯೆ! ನೀನು ನನ್ನ ಮಾತನ್ನು ನಂಬುತ್ತೀಯಾ ಅಥವಾ ಆ ಕತ್ತೆಯ ಮಾತನ್ನೇ?' ಕೇಳಿದ ನಸ್ರುದ್ದೀನ್.

ಚಿಕ್ಕ ಮೀನು–ದೊಡ್ಡ ಮೀನು



ಪ್ರಖ್ಯಾತ ವಿದ್ವಾಂಸನೊಬ್ಬ ನಸ್ರುದ್ದೀನ್‌ನ ಹಳ್ಳಿಯಲ್ಲಿ ಹಾದು ಹೋಗುತ್ತಿದ್ದ. ಆತನಿಗೆ ಹಸಿವಾಗಿತ್ತು. ಎದುರಿಗೆ ಸಿಕ್ಕ ನಸ್ರುದ್ದೀನ್‌ನನ್ನು ಆ ಊರಿನಲ್ಲಿ ಒಳ್ಳೆಯ ಊಟ ಸಿಗುವ ಸ್ಥಳ ಯಾವುದು ಎಂದು ಕೇಳಿದ. ನಸ್ರುದ್ದೀನ್ ತನಗೆ ತಿಳಿದಿದ್ದ ಉಪಾಹಾರ ಮಂದಿರದ ವಿಳಾಸ ತಿಳಿಸಿದ. ಆ ವಿದ್ವಾಂಸನಿಗೆ ನಸ್ರುದ್ದೀನ್ ಸಹ ಒಬ್ಬ ವಿದ್ವಾಂಸನ ಹಾಗೆ ಕಂಡು ಆತನೊಂದಿಗೆ ಬಹಳಷ್ಟು ವಿಷಯ ಚರ್ಚೆ ಮಾಡಬಹುದೆಂದು ಆತನನ್ನು ಸಹ ತನ್ನ ಜೊತೆ ಊಟಕ್ಕೆ ಬರುವಂತೆ ಆಹ್ವಾನಿಸಿದ. ಬಹಳ ಸಂತೋಷದಿಂದ ಒಪ್ಪಿದ ನಸ್ರುದ್ದೀನ್ ಆತನನ್ನು ಉಪಾಹಾರ ಮಂದಿರಕ್ಕೆ ಕರೆದೊಯ್ದ. ಅಲ್ಲಿ ಊಟಕ್ಕೆ ತಾಜಾ ಮೀನು ಸಿಗುತ್ತದೆ ಎಂದು ತಿಳಿದು ವಿದ್ವಾಂಸ ಎರಡು ಮೀನು ಬಡಿಸಲು ಹೇಳಿದ. ಬಡಿಸುವವ ತಟ್ಟೆಯಲ್ಲಿ ಎರಡು ಮೀನು ತಂದಾಗ ಅದರಲ್ಲಿ ಒಂದು ಸ್ವಲ್ಪ ದೊಡ್ಡದು ಮತ್ತೊಂದು ಸಣ್ಣದಿತ್ತು. ನಸ್ರುದ್ದೀನ್ ಗಬಕ್ಕನೆ ದೊಡ್ಡ ಮೀನನ್ನು ಎತ್ತಿ ತನ್ನ ತಟ್ಟೆಗೆ ಹಾಕಿಕೊಂಡ. ಅದನ್ನು ನೋಡಿದ ವಿದ್ವಾಂಸ ಮುಲ್ಲಾ ನಸ್ರುದ್ದೀನ್‌ಗೆ ಆತನ ನಡತೆಯ ಬಗ್ಗೆ ದೊಡ್ಡ ಭಾಷಣವನ್ನೇ ಮಾಡಿದ. ಆ ರೀತಿ ಯಾವುದೇ ವ್ಯಕ್ತಿ ಸ್ವಾರ್ಥಿಯಾಗಿರಬಾರದೆಂದೂ, ಆ ರೀತಿಯ ನಡತೆಯು ಎಲ್ಲ ನೈತಿಕ ಮೌಲ್ಯಗಳನ್ನು ಧಿಕ್ಕರಿಸುವುದೆಂದೂ ಹೇಳಿದ. ಆ ವಿದ್ವಾಂಸ ಬಹಳಷ್ಟು ಹೇಳಿ ತನ್ನ ಭಾಷಣ ನಿಲ್ಲಿಸಿದ. ಅದನ್ನೇ ಕಾಯುತ್ತಿದ್ದ ನಸ್ರುದ್ದೀನ್, 'ನನ್ನ ಸ್ಥಾನದಲ್ಲಿ ನೀವಿದ್ದಿದ್ದರೆ ಏನು ಮಾಡುತ್ತಿದ್ದಿರಿ?' ಎಂದು ಕೇಳಿದ.

'ನಾನು ನಿಸ್ವಾರ್ಥಿ, ಇತರರ ಬಗ್ಗೆ ಆಲೋಚಿಸುವವನು. ಹಾಗಾಗಿ ನಾನು ಮೊದಲು ಚಿಕ್ಕ ಮೀನೇ ತೆಗೆದುಕೊಳ್ಳುತ್ತಿದ್ದೆ' ಎಂದ ವಿದ್ವಾಂಸ.

ಅದಕ್ಕೆ ನಸ್ರುದ್ದೀನ್, 'ಹೌದೆ. ತೆಗೆದುಕೊಳ್ಳಿ, ನಿಮ್ಮ ಚಿಕ್ಕ ಮೀನು ಇನ್ನೂ ಇಲ್ಲೇ ಇದೆ' ಎನ್ನುತ್ತಾ ಅದನ್ನು ತೆಗೆದು ವಿದ್ವಾಂಸನ ತಟ್ಟೆಗೆ ಹಾಕಿದ.



ನೋಡು ಅಲ್ಲಾಡುತ್ತಿದ್ದಾನೆ!

ನಸ್ರುದ್ದೀನ್ ತನ್ನ ಗೆಳೆಯರ ಜೊತೆ ಕೂತು ಹರಟೆ ಹೊಡೆಯುತ್ತಿದ್ದ. ಅವರ ಮಾತಿನ ವಿಷಯ ಸಾವಿನ ಕಡೆಗೆ ಹೊರಳಿತು. ಅವರಲ್ಲೊಬ್ಬ, 'ನೀನು

ಸತ್ತು ನಿನ್ನ ಹೆಣ ಶವದ ಪೆಟ್ಟಿಗೆಯಲ್ಲಿರುವಾಗ ನಿನ್ನನ್ನು ನೋಡುವ ಬಂಧು ಬಳಗದವರ ಬಾಯಿಂದ ಯಾವ ಮಾತನ್ನು ಕೇಳಲು ಬಯಸುತ್ತೀಯೆ?' ಎಂದ.

ಅವರಲ್ಲಿ ವೈದ್ಯನಾದವನೊಬ್ಬ, 'ಅವರು ನನ್ನನ್ನು ನೋಡುತ್ತಾ, ಆತನೊಬ್ಬ ಮಹಾನ್ ವೈದ್ಯನಾಗಿದ್ದ, ಒಳ್ಳೆಯ ವ್ಯಕ್ತಿಯಾಗಿದ್ದ' ಎನ್ನುವುದನ್ನು ಕೇಳಲು ಬಯಸುತ್ತೇನೆ ಎಂದ.

ಮತ್ತೊಬ್ಬ ಅಧ್ಯಾಪಕನಾಗಿದ್ದವನು, 'ಆತನೊಬ್ಬ ಒಳ್ಳೆಯ ಅಧ್ಯಾಪಕ, ಮಕ್ಕಳ ಭವಿಷ್ಯವನ್ನು ಚೆನ್ನಾಗಿ ರೂಪಿಸಿದಾತ, ಆತ ತನ್ನ ಹೆಂಡತಿಗೆ ಅದ್ಭುತ ಗಂಡನೂ ಆಗಿದ್ದ ಎಂದು ಕೇಳಲು ಬಯಸುತ್ತೇನೆ' ಎಂದ.

ನಸ್ರುದ್ದೀನ್‌ನ ಸರದಿ ಬಂದಾಗ ಆತ, 'ನನ್ನ ಬಂಧು ಬಳಗದವರು ನನ್ನ ಹೆಣವನ್ನು ನೋಡುತ್ತಾ ಆತ ಪುನಃ ಬದುಕಿದ್ದಾನೆ, ನೋಡು ಅಲ್ಲಾಡುತ್ತಿದ್ದಾನೆ ಎನ್ನುವುದನ್ನು ಕೇಳಲು ಬಯಸುತ್ತೇನೆ' ಎಂದ.

ದೇವರೆಂಬ ಬದನೆಕಾಯಿ

ದರ್ವೇಶಿಗಳ ಗುರು ನಸ್ರುದ್ದೀನ್‌ನನ್ನು ಒಮ್ಮೆ 'ದೇವರ ಸ್ವರೂಪ'ದ ಬಗ್ಗೆ ಮಾತನಾಡಲು ಮಸೀದಿಗೆ ಕರೆಸಲಾಯಿತು. ಅಲ್ಲಿ ಬಹಳ ವಿದ್ವಾಂಸರು ಸೇರಿದ್ದರು. ಅವರೆಲ್ಲಾ ದೇವರ ಸ್ವರೂಪದ ಬಗೆಗೆ ಸುದೀರ್ಘ ಭಾಷಣಗಳನ್ನು ಮಾಡಿದರು. ಅಲ್ಲಿ ನೆರೆದಿದ್ದ ಜನರೆಲ್ಲಾ ಅವರ ವಿದ್ವತ್ತಿಗೆ ತಲೆದೂಗಿದರು. ಕೊನೆಗೆ ನಸ್ರುದ್ದೀನ್‌ನ ಸರದಿ ಬಂತು. ನಸ್ರುದ್ದೀನ್ ಬಹಳ ಸಂಕೋಚದಿಂದಲೇ ಎದ್ದು ನಿಂತ.

'ದೇವರೆಂದರೆ..........' ನಸ್ರುದ್ದೀನ್‌ಗೆ ಏನು ಹೇಳಬೇಕೆಂದು ತೋಚಲಿಲ್ಲ. ಕೊನೆಗೆ ತನ್ನ ಜೇಬಿನಲ್ಲಿದ್ದ ಒಂದು ಬದನೆಕಾಯಿ ತೆಗೆದು, 'ದೇವರೆಂದರೆ...ಈ ಬದನೆಕಾಯಿ' ಎಂದ. ವಿದ್ವಾಂಸರು ಮತ್ತು ಅಲ್ಲಿ ನೆರೆದಿದ್ದ ಜನರೆಲ್ಲಾ 'ಹೋ' ಎಂದು ಉದ್ಗಾರ ತೆಗೆದರು. ನಸ್ರುದ್ದೀನ್ ದೈವ ನಿಂದನೆ ಮಾಡಿದ್ದಾನೆಂದು ತಮ್ಮ ತಮ್ಮಲ್ಲೇ ಮಾತನಾಡಿ ಕೊಳ್ಳತೊಡಗಿದರು. ಕೊನೆಗೆ ವಿದ್ವಾಂಸನೊಬ್ಬ ಎದ್ದು ನಿಂತು ಜನರನ್ನು ನಿಶ್ಶಬ್ದಗೊಳಿಸಿ ತನ್ನ ಮಾತಿನ ಅರ್ಥ ವಿವರಿಸುವಂತೆ ನಸ್ರುದ್ದೀನ್‌ನನ್ನು ಕೇಳಿದ.

ನಸ್ರುದ್ದೀನ್, 'ಈ ದಿನ ಇಲ್ಲಿನ ವಿದ್ವಾಂಸರೆಲ್ಲಾ ತಾವು ಕಂಡಿರದುದ್ದನ್ನು ಹಾಗೂ ತಾವು ಅರ್ಥಮಾಡಿಕೊಂಡಿಲ್ಲದಿರುವುದರ ಬಗೆಗೆ ಮಾತನಾಡಿದ್ದಾರೆ. ದೇವರು ಈ ಭೂಮಿಯ ಎಲ್ಲಾ ವಸ್ತುಗಳಲ್ಲಿಯೂ ಇದ್ದಾನಲ್ಲವೆ? ನಾವೆಲ್ಲಾ ಬದನೆಕಾಯಿ ನೋಡಿದ್ದೇವಲ್ಲವೆ?' ಎಂದು ಸಭಿಕರನ್ನು ಪ್ರಶ್ನಿಸಿದ.

ಜನರು ಹೌದೆಂದು ತಲೆಯಾಡಿಸಿದರು.

'ಹಾಗಾದರೆ, ದೇವರೆಂದರೆ ಈ ಬದನೆಕಾಯಿ' ಎಂದು ಹೇಳಿ ತನ್ನ ಸ್ಥಾನದಲ್ಲಿ ಹೋಗಿ ಕೂತ.



ಕತ್ತೆ ಮತ್ತು ಮುಠ್ಠಾಳರು

ಮುಲ್ಲಾ ನಸ್ರುದ್ದೀನ್ ಮತ್ತು ಆತನ ಮಗ ತಮ್ಮ ಕತ್ತೆಯ ಮೇಲೆ ಕೂತು ಮಾರುಕಟ್ಟೆಗೆ ಹೋಗುತ್ತಿದ್ದರು. ಅದನ್ನು ನೋಡಿದ ಕೆಲವರು, 'ಎಂಥಾ ಕಾಲ ಬಂತು ನೋಡಿ! ಈ ಇಬ್ಬರು ಜನ ಮೂಕ ಪ್ರಾಣಿಯ ಮೇಲೆ ಕೂತು ಹೋಗುತ್ತಿದ್ದಾರೆ. ಬಡಪಾಯಿ ಪ್ರಾಣಿ ಅವರ ತೂಕಕ್ಕೆ ಬಾಗಿಹೋಗಿದೆ!' ಎಂದರು.

ಆ ಮಾತನ್ನು ಕೇಳಿದ ನಸ್ರುದ್ದೀನ್ ತನ್ನ ಮಗನಿಗೆ ಕತ್ತೆಯಿಂದ ಕೆಳಗಿಳಿದು ನಡೆದುಕೊಂಡು ಬರಲು ತಿಳಿಸಿದ. ಸ್ವಲ್ಪ ಮುಂದೆ ಹೋದಂತೆ ರಸ್ತೆಯ ಬದಿಯಲ್ಲಿ ನಿಂತಿದ್ದ ಕೆಲವರು, 'ಎಂಥಾ ಕಾಲ ಬಂತು ನೋಡಿ! ಈ ಧಡಿಯ ತನ್ನ ಬಡಪಾಯಿ ಮಗನನ್ನು ನಡೆಸಿಕೊಂಡು ತಾನು ಕತ್ತೆಯ ಮೇಲೆ ಕೂತು ಹೋಗುತ್ತಿದ್ದಾನೆ!' ಎಂದರು.

ಅದನ್ನು ಕೇಳಿಸಿಕೊಂಡ ನಸ್ರುದ್ದೀನ್ ತಾನು ಕತ್ತೆಯಿಂದ ಕೆಳಗಿಳಿದು ತನ್ನ ಮಗನನ್ನು ಕತ್ತೆಯ ಮೇಲೆ ಕೂರಿಸಿ, ತಾನು ಅವರ ಪಕ್ಕದಲ್ಲಿ ನಡೆಯುತ್ತಾ ಹೋದ. ಒಂದಷ್ಟು ದೂರ ಹೋದ ಮೇಲೆ ಒಂದು ಜನರ ಗುಂಪು ಇವರನ್ನು ಹಾದು ಹೋಯಿತು. ಅವರಲ್ಲೊಬ್ಬ, 'ಎಂಥಾ ಕಾಲ ಬಂತು ನೋಡಿ! ವಯಸ್ಸಿನ ಹುಡುಗ ಕತ್ತೆಯ ಮೇಲೆ ಕೂತು ಹೋಗುತ್ತಿದ್ದಾನೆ, ವಯಸ್ಸಾದ ಆತನ ತಂದೆ ನಡೆದುಹೋಗುತ್ತಿದ್ದಾನೆ!' ಎಂದ.

ಆತನ ಮಾತು ಕೇಳಿಸಿಕೊಂಡ ನಸ್ರುದ್ದೀನ್ ತನ್ನ ಮಗನನ್ನೂ ಕೆಳಕ್ಕಿಳಿಸಿ ಕತ್ತೆಯ ಹಗ್ಗ ಹಿಡಿದುಕೊಂಡು ಅದನ್ನು ಕರೆದೊಯ್ಯುತ್ತಾ ಇಬ್ಬರೂ ನಡೆದುಕೊಂಡು ಹೊರಟರು. ಎದುರಿಗೆ ಮತ್ತೊಂದು ಜನರ ಗುಂಪು ಬಂದಿತು. ಇವರನ್ನು ನೋಡಿದ ಅವರಲ್ಲೊಬ್ಬಾತ, 'ಈ ಮುಠ್ಠಾಳರನ್ನು ನೋಡಿ! ಅವರ ಬಳಿ ಕತ್ತೆಯೊಂದಿದೆ, ಆದರೂ ನಡೆದು ಹೋಗುತ್ತಿದ್ದಾರೆ!' ಎಂದ.

ಪ್ರವಚನ

ಮುಲ್ಲಾ ತನ್ನ ಹಳ್ಳಿಯ ಮಸೀದಿಯಲ್ಲಿ ಪ್ರತಿ ಶುಕ್ರವಾರ ಗ್ರಾಮಸ್ಥರಿಗೆ ಪ್ರವಚನ ನೀಡುತ್ತಿದ್ದ. ಒಂದು ದಿನ ಆತನಿಗೆ ಹೇಳಲು ಏನೂ ಇರಲಿಲ್ಲ. ಆದರೂ ಅದನ್ನು ತೋರಗೊಡದೆ ಆತ, 'ಈ ದಿನ ನಾನು ಯಾವ ವಿಷಯದ ಬಗೆಗೆ ಮಾತನಾಡುತ್ತೇನೆ ಗೊತ್ತೆ?' ಎಂದು ಕೇಳಿದ. ಅಲ್ಲಿ ನೆರೆದಿದ್ದ ಜನ 'ಇಲ್ಲ' ಎಂದರು. 'ಹಾಗಾದರೆ ನಿಮ್ಮಂಥ ದಡ್ಡರಿಗೆ ಪ್ರವಚನ ಮಾಡುವುದರಿಂದ ಏನು ಲಾಭ? ಕಳೆದ ಒಂದು ವಾರದಲ್ಲಿ ಈ ಜಗತ್ತಿನಲ್ಲಿ ಏನೇನು ನಡೆದಿದೆ ಎನ್ನುವುದೂ ನಿಮಗೆ ತಿಳಿದಿಲ್ಲ!' ಎಂದು ಮುನಿಸಿಕೊಂಡವನಂತೆ ಹೇಳಿ ಅಲ್ಲಿಂದ ಹೊರಟುಹೋದ.

ಮುಂದಿನ ಶುಕ್ರವಾರ ಮಸೀದಿಗೆ ಪ್ರವಚನಕ್ಕೆ ಬಂದಾಗ ಅಲ್ಲಿ ನೆರೆದಿದ್ದ ಜನರಿಗೆ ಪುನಃ ಅದೇ ಪ್ರಶ್ನೆ ಕೇಳಿದ, 'ಈ ದಿನ ನಾನು ಯಾವ ವಿಷಯದ ಬಗೆಗೆ ಮಾತನಾಡುತ್ತೇನೆ ಗೊತ್ತೆ?'. ಕಳೆದ ವಾರ ಮುಲ್ಲಾ ಸಿಟ್ಟು ಮಾಡಿಕೊಂಡು ಹೋದದ್ದದ್ದು ಜನರಿಗೆ ನೆನಪಿದ್ದುದರಿಂದ ಯಾರೂ 'ಇಲ್ಲ' ಎಂದು ಹೇಳಲಿಲ್ಲ, ಬದಲಿಗೆ 'ನಮಗೆ ತಿಳಿದಿದೆ' ಎಂದರು. 'ಹೌದೆ? ನಿಮಗೆ ಈಗಾಗಲೇ ಎಲ್ಲಾ ತಿಳಿದಿರುವುದರಿಂದ ನಾನು ಏನು ಹೇಳಲಿ? ನನಗೆ ಹೇಳುವುದೇನೂ ಉಳಿದಿಲ್ಲ' ಎಂದು ಹೇಳಿ ಮುಲ್ಲಾ ನಸ್ರುದ್ದೀನ್ ಅಲ್ಲಿಂದ ಹೊರಟುಹೋದ. ಮೂರನೇ ಶುಕ್ರವಾರ ಎಂದಿನಂತೆ ಮುಲ್ಲಾ ಮಸೀದಿಗೆ ಬಂದು ಆ ವಾರವೂ ಆತ ಅದೇ ಪ್ರಶ್ನೆಯನ್ನು ಕೇಳಿದ. ಆತನ ಪ್ರವಚನ ಕೇಳಲು ಬಂದ ಜನರಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಕೆಲವರು 'ಗೊತ್ತಿಲ್ಲ' ಎಂದರು, ಇನ್ನು ಕೆಲವರು 'ಗೊತ್ತಿದೆ' ಎಂದರು. ಅದನ್ನು ಕೇಳಿದ ಮುಲ್ಲಾ, 'ಒಂದು ಕೆಲಸ ಮಾಡಿ. ಗೊತ್ತಿದೆ ಎಂದವರು ಗೊತ್ತಿಲ್ಲ ಎಂದವರಿಗೆ ತಿಳಿಸಿ ಹೇಳಿಬಿಡಿ' ಎಂದು ಹೇಳಿ ಅಲ್ಲಿಂದ ಹೊರಟುಹೋದ.



ಅಸಾಮಾನ್ಯ ಶಕ್ತಿ

ಮುಲ್ಲಾ ಎಷ್ಟು ವಯಸ್ಸಾಗಿದ್ದರೂ ತನ್ನ ಶಕ್ತಿ ಏನೂ ಕುಂದಿಲ್ಲವೆಂದು ತನ್ನ ಗೆಳೆಯರ ಬಳಿ ಜಂಭಕೊಚ್ಚಿಕೊಳ್ಳುತ್ತಿದ್ದ.

'ಅದು ಹೇಗೆ ಸಾಧ್ಯ?' ಆತನ ಗೆಳೆಯರು ಕೇಳಿದರು.

'ನನ್ನ ಮನೆಯ ಎದುರು ಒಂದು ದೊಡ್ಡ ಕಲ್ಲಿದೆ ನೋಡಿ. ನಾನು ಯುವಕನಾಗಿದ್ದಾಗ ಆ ಕಲ್ಲು ಎತ್ತಲು ಸಾಧ್ಯವಾಗುತ್ತಿರಲಿಲ್ಲ. ಈಗ ವಯಸ್ಸಾದ ಮೇಲೂ ಅದನ್ನು ಎತ್ತಲು ಸಾಧ್ಯವಾಗುತ್ತಿಲ್ಲ' ಎಂದ ನಸ್ರುದ್ದೀನ್.

ಸುಳ್ಳೆಂಬ ಸತ್ಯ

ಒಂದು ದಿನ ಒಬ್ಬ ದಡ್ಡ ನಸ್ರುದ್ದೀನ್‌ನನ್ನು ಕೇಳಿದ, 'ದೇವರು ಸತ್ಯವೆ?'

'ಈ ಜಗತ್ತಿನಲ್ಲಿರುವುದೆಲ್ಲಾ ಸತ್ಯ' ಹೇಳಿದ ನಸ್ರುದ್ದೀನ್.

'ಹಾಗಾದರೆ ಸುಳ್ಳುಗಳೂ ಸಹ ಸತ್ಯವೆ?'

'ಹೌದು, ಸುಳ್ಳುಗಳೂ ಸಹ ಸತ್ಯ'

'ಅದು ಹೇಗೆ ಸಾಧ್ಯ?'

'ನನಗೇನು ಗೊತ್ತು. ಅವುಗಳನ್ನು ನಾನು ಮಾಡಿಲ್ಲವಲ್ಲ!' ಹೇಳಿದ ನಸ್ರುದ್ದೀನ್.

ಕುದುರೆ ಹಾಡಬಹುದೇನೋ!

ಒಂದು ದಿನ ನಸ್ರುದ್ದೀನ್ ತನ್ನ ರಾಜ್ಯದ ರಾಜಧಾನಿಗೆ ಹೋಗಿದ್ದ. ಅಲ್ಲಿ ಯಾರೊಂದಿಗೋ ಮಾತನಾಡುತ್ತಾ ಸುಲ್ತಾನನ ಬಗ್ಗೆ ಏನೋ ತಮಾಷೆಯ ಮಾತನಾಡಿದ. ಗೂಢಚಾರರಿಂದ ಸುಲ್ತಾನನಿಗೆ ಸುದ್ದಿ ತಲುಪಿ ಸೈನಿಕರು ನಸ್ರುದ್ದೀನ್‌ನನ್ನು ಬಂಧಿಸಿ ಸುಲ್ತಾನನ ಮುಂದೆ ತಂದು ನಿಲ್ಲಿಸಿದರು. ಸುಲ್ತಾನನಿಗೆ ತನ್ನ ಬಗ್ಗೆ ತಮಾಷೆಯ ಮಾತನಾಡಿದ್ದುದರಿಂದ ಮುಲ್ಲಾನ ಬಗ್ಗೆ ವಿಪರೀತ ಸಿಟ್ಟು ಬಂದಿತ್ತು. ನಸ್ರುದ್ದೀನ್ ಕ್ಷಮಾಪಣೆ ಕೇಳಿದರೂ ಅವನ ಸಿಟ್ಟು ಕಡಿಮೆಯಾಗಲಿಲ್ಲ. ಸಿಟ್ಟಿನಿಂದ ಮರುದಿನ ಬೆಳಿಗ್ಗೆ ನಸ್ರುದ್ದೀನ್‌ನ ತಲೆ ತೆಗೆಯುವಂತೆ ಆದೇಶ ನೀಡಿದ. ಮರುದಿನ ಸುಲ್ತಾನನ ಮುಂದೆ ನಸ್ರುದ್ದೀನ್ ಪುನಃ ಕ್ಷಮಾಪಣೆ ಕೋರಿ, 'ಸುಲ್ತಾನ್ ನೀನು ನೂರು ಕಾಲ ಬಾಳು! ನಿಮಗೆ ಗೊತ್ತಿದೆ ನಾನೊಬ್ಬ ಮಹಾನ್ ಬೋಧಕ. ನಿಮ್ಮ ಸಾಮ್ರಾಜ್ಯದಲ್ಲೇ ನನ್ನನ್ನು ಸರಿಗಟ್ಟುವವರು ಯಾರೂ ಇಲ್ಲ. ನನ್ನ ಮರಣದಂಡನೆಯನ್ನು ಒಂದು ವರ್ಷ



ಂದೂಡಿ. ಆ ಒಂದು ವರ್ಷದೊಳಗೆ ನಾನು ನಿಮ್ಮ ುರೆಗೆ ಹಾಡಲು ಕಲಿಸುತ್ತೇನೆ' ಎಂದ.
ಸುಲ್ತಾನನಿಗೆ ಮುಲ್ಲಾನ ಮಾತಿನಿಂದ ರ್ಯವಾಯಿತು. ಒಂದು ದಿನ ದಿದ್ದುದರಿಂದ ಆತನ ಸಿಟ್ಟೂ ಸಹ ಮೆಯಾಗಿತ್ತು. ನಸ್ರುದ್ದೀನನ ದಾರ್ಷ್ಯ ಜನೀಯವೂ ಎನ್ನಿಸಿತು. ಕ್ಷಿಸಿಬಿಡೋಣವೆಂದು, 'ಆಯಿತು. ನಿನಗೆ ದು ವರ್ಷ ಸಮಯ ಕೊಡುತ್ತೇನೆ. ವರ್ಷದ ನೆಯಲ್ಲಿ ನನ್ನ ಕುದುರೆಗೆ ನೀನು ಹಾಡಲು ಸಲಿಲ್ಲವೆಂದಲ್ಲಿ, ನೀನು ಒಂದು ವರ್ಷದ ಹಿಂದೆಯೇ ತ್ತಹೋಗಿದ್ದಿದ್ದರೆ ಚೆನ್ನಾಗಿತ್ತು ಎನ್ನಿಸುವಂತೆ ಡಿಬಿಡುತ್ತೇನೆ. ಎಚ್ಚರವಿರಲಿ!' ಎಂದ ಸುಲ್ತಾನ.
ಆ ದಿನ ನಸ್ರುದ್ದೀನ್‌ನನ್ನು ಆತನ ಗೆಳೆಯರು ಧಿಖಾನೆಯಲ್ಲಿ ಭೇಟಿಯಾದರು. ನಸ್ರುದ್ದೀನ್ ಅತ್ಯಂತ ತೋಷದಿಂದಿದ್ದ. ಅವನನ್ನು ಕಂಡ ಆತನ ಗೆಳೆಯರು, ಗೇಗೆ ಅಷ್ಟೊಂದು ಸಂತೋಷವಾಗಿದ್ದೀಯೆ? ತ್ತಾನನ ಕುದುರೆಗೆ ನೀನು ನಿಜವಾಗಲೂ ಹಾಡು ಸಬಹುದೆಂಬ ನಂಬಿಕೆ ನಿನಗಿದೆಯೆ?' ಎಂದು ದರು. 'ಖಂಡಿತವಾಗಿಯೂ ಇಲ್ಲ. ಆದರೆ ಈಗ ುಕಲು ನನ್ನ ಬಳಿ ಒಂದು ವರ್ಷವಿದೆ. ನಿನ್ನೆ ೂ ಇರಲಿಲ್ಲ. ಈ ಒಂದು ವರ್ಷದ ಸಮಯದಲ್ಲಿ ು ಬೇಕಾದರೂ ನಡೆಯಬಹುದು. ಸುಲ್ತಾನನಿಗೆ ು ಸಂಪೂರ್ಣ ಇಳಿದುಹೋಗಿ ನನಗೆ ಕ್ಷಮಾಪಣೆ ನೀಡಿ ನನ್ನನ್ನು ಬಿಡುಗಡೆ ಡಬಹುದು ಅಥವಾ ಆತ ಯದ್ಧದಲ್ಲೋ ಅಥವಾ ಕಾಯಿಲೆಯಿಂದಲೋ ುಹೋಗಬಹುದು. ಆ ನಂತರ ಬರುವ ಸುಲ್ತಾನರು ಸಂಪ್ರದಾಯದಂತೆ ುಗಳಿಗೆ ಕ್ಷಮಾದಾನ ಮಾಡಬಹುದು ಅಥವಾ ಸುಲ್ತಾನನ ವಿರುದ್ಧ ಇತರರು ೆದ್ದು ಹೊಸಬರು ಸುಲ್ತಾನರಾಗಬಹುದು. ಅವರು ನನ್ನನ್ನು ಬಿಡುಗಡೆ ಡಬಹುದು ಅಥವಾ ಒಂದು ವರ್ಷದೊಳಗೆ ಸುಲ್ತಾನನ ಕುದುರೆಯೇ ುಹೋಗಬಹುದು. ಆಗ ಸುಲ್ತಾನ ವಿಧಿಯಿಲ್ಲದೆ ನನ್ನನ್ನು ಬಿಡುಗಡೆ ಡಬೇಕಾಗುತ್ತದೆ. ಇದೇನೂ ಆಗುವುದಿಲ್ಲ ಎಂದಿಟ್ಟುಕೊಳ್ಳೋಣ, ಯಾರಿಗೆ ಗೊತ್ತು, ುರೆ ಹಾಡಲು ಕಲಿತೂಬಿಡಬಹುದು!' ಎಂದ ನಸ್ರುದ್ದೀನ್.

ತ್ತವನು ಯಾರು?

ಒಬ್ಬ ಸತ್ತ ವ್ಯಕ್ತಿಯನ್ನು ಅಂತ್ಯಸಂಸ್ಕಾರಕ್ಕೆಂದು ಹೊತ್ತೊಯ್ಯುತ್ತಿದ್ದರು. ಆತನ ಧುಬಳಗದ ದೊಡ್ಡ ಹಿಂಡೇ ಅದನ್ನು ಹಿಂಬಾಲಿಸುತ್ತಿತ್ತು. ಆ ಊರಿಗೆ ಹೊಸದಾಗಿ ದಿದ್ದ ವ್ಯಕ್ತಿಯೊಬ್ಬ ಅಲ್ಲೇ ಪಕ್ಕದಲ್ಲಿ ನಿಂತು ನೋಡುತ್ತಿದ್ದ ನಸ್ರುದ್ದೀನ್‌ನನ್ನು 'ಸತ್ತಿರುವ ಯಾರು?' ಎಂದು ಕೇಳಿದ.
ಯಾವುದೋ ಆಲೋಚನೆಯಲ್ಲಿದ್ದ ನಸ್ರುದ್ದೀನ್, 'ಯಾರೋಪ್ಪ, ನನಗೂ ಗೊತ್ತಿಲ್ಲ. ುಶಃ ಆ ಶವಪೆಟ್ಟಿಗೆಯಲ್ಲಿರುವ ವ್ಯಕ್ತಿಯೇ ಇರಬೇಕು' ಎಂದ.

ಂಬಿಕೆ

ಒಂದು ದಿನ ನಸ್ರುದ್ದೀನ್ ಮತ್ತು ಆತನ ಗೆಳೆಯರು ಊರಿನ ಜನಗಳಿಗೆ ಒಂದು ು ಹೇಳಿ ತಮಾಷೆ ಮಾಡೋಣವೆಂದು ನಿರ್ಧರಿಸಿದರು. ನಸ್ರುದ್ದೀನ್ ಊರಿನ ನ್ನೆಲ್ಲಾ ಸೇರಿಸಿ ಊರಿನ ಪಕ್ಕದಲ್ಲಿರುವ ಬೆಟ್ಟದ ಒಂದು ನಿರ್ದಿಷ್ಟ ಸ್ಥಳದಲ್ಲಿ ನಿಧಿಯಿದೆ ಎಂದು ಹೇಳಿದ. ಆತನ ಮಾತನ್ನು ನಂಬಿದ ಜನರೆಲ್ಲಾ ಆ ನಿಧಿಯನ್ನು ಪಡೆಯಲು ಬೆಟ್ಟದೆಡೆಗೆ ಓಡತೊಡಗಿದರು. ನಸ್ರುದ್ದೀನ್ ಸಹ ಅವರ ಜೊತೆ ಓಡತೊಡಗಿದ. ಅದನ್ನು ನೋಡಿದ ಆತನ ಗೆಳೆಯ 'ನೀನ್ಯಾಕೆ ಅವರ ಜೊತೆ ಓಡುತ್ತಿದ್ದೀಯೆ?' ಎಂದು ಕೇಳಿದ್ದಕ್ಕೆ, 'ಅಷ್ಟೊಂದು ಜನ ನನ್ನ ಮಾತನ್ನು ನಂಬಿದರಲ್ಲಾ! ಅಲ್ಲಿ ನಿಧಿ ಇರುವುದು ನಿಜವೇ ಇದ್ದರೂ ಇರಬಹುದೇನೋ!' ಎಂದು ಹೇಳಿ ಓಡುವುದನ್ನು ಮುಂದುವರಿಸಿದ.

ಡಾ|| ಜೆ. ಬಾಲಕೃಷ್ಣ



ಬೆಂಗಳೂರು ಕೃಷಿ ವಿವಿಯಲ್ಲಿ ಸಹ ಪ್ರಾಧ್ಯಾಪಕರು. ವಿಜ್ಞಾನದಿಂದ ಮೊದಲ್ಗೊಂಡು ಸಾಹಿತ್ಯ, ಸೂಫಿ,ಝೆನ್ ತತ್ವದರ್ಶನ ಹೊಕ್ಕಾಡಿದರೂ ಅಂತಿಮವಾಗಿ ಬಾಲಕೃಷ್ಣರವರ ಮನಸ್ಸು ನೆಲೆಗೊಳ್ಳುವುದು ಜೀವ ಕಾರುಣ್ಯದಲ್ಲೇ. ಆಸಕ್ತಿಯ ವಲಯಗಳು ಜೀವ ವೈವಿಧ್ಯದಷ್ಟೇ ವಿಸ್ತಾರವಾದವು. ಎಲ್ಲ ವಿಷಯಗಳನ್ನು ತಡವಿ ನೋಡುವ ಅವರ ಅನನ್ಯ ಪ್ರಯೋಗಗಳಿಂದಾಗಿ ಬಾಲು ಬರವಣಿಗೆಗೆ ಸಾಹಿತ್ಯೇತರವಾದ ಕೌತುಕದಾಯಾಮಗಳೂ ದಕ್ಕುತ್ತವೆ.

With Best Compliments From

Orient Blackswan Private Limited

'Tapavan', # 46/47, Rama Rao Layout,
Banashankari 3rd Stage,
Katriguppe, Bangalore-560085.
Ph: 080-26600258, 32971048
Fax: 080-26691907
Email: Bangalore@orientblackswan.co m

With Best Compliments From

MALABAR GOLD ®

MALABAR JEWELS & GEMS (P) LT

NO.13 Dickenson Road
Bangalore-560042
Tel: 080-41283916, 41284916
Fax: 080 -41270916
Email: mgbangalore@malabargroup.com

With Best Compliments From

SUBHAS STORES
BOOK CORNER
One stop solution for all Stationery Items & Books

Krishna Buildings, 22/23
Avenue Road, Bangalore-560002
Ph: 22216624, 41695816

With Best Compliments From

S. AKRAM

S. A. VEGETABLE MERCHANT

NO.8/3, SLAUGHTER HOUSE,
'A' STREET BROADWAY
SHIVAJINAGAR,
BANGALORE-560051



ಪಂಚಮ ನಾಡೊಳಗೆ...

ಈ ದೇಶದಲ್ಲಿ ಸರಕಾರ, ಕಾನೂನಿನ ವ್ಯವಸ್ಥೆ ಇಲ್ಲದೆ ಇದ್ದಾಗ್ಯೂ ಈ ದೇಶ ಹಾಗೂ ಹೀಗೂ ಮುಂದುವರಿದುಕೊಂಡು ಬಂದಿರುವುದಕ್ಕೆ ಕಾರಣ–ಜಾತಿ. ಜಾತಿ ಒಂದು ರೀತಿಯ ಬ್ಯಾಂಕ್‌ನ ಹಾಗೆ, ಒಂದು ವೇಲ್‌ಫೇರ್ ಸಿಸ್ಟಮ್‌ನ ಹಾಗೆ ಕೆಲಸ ಮಾಡುತ್ತ ಬಂದಿರುವುದರಿಂದಲೇ ಅದು ಕ್ರಿಯೇಟಿವ್ ಆಗಿ ಉಳಿದುಕೊಂಡಿದೆ.

ಾಗಿನೇ ಪುಟದಿಂದ)

ಾರಿಕತೆಯನ್ನೂ ಬಿಚ್ಚಿಟ್ಟಿದೆ. ನಾಡನ್ನು ಕುರಿತು ತಾಡುವವರು ಮತ್ತು ಬರೆಯುವವರು ಚಮ'ವನ್ನು ಬದಿಗಿಟ್ಟರೆ ಅದು ಪಾರ್ಶ್ವಿಕವಾಗುತ್ತದೆ; ಧ್ಧಾಂತಿಕ ವಂಚನೆಯಾಗುತ್ತದೆ. ಕನ್ನಡ ಸಾಹಿತ್ಯ, ಸ್ಕೃತಿ ಚರ್ಚೆಗಳಲ್ಲಿ ಕೆಲವರು ಕೆಲವು ಸಾಹಿತ್ಯ ಕೆಗಳ ಉಲ್ಲೇಖ ಮಾಡುತ್ತಾರೆ. ಆದರೆ ಪಂಚಮವನ್ನು ಲ್ಲೇಖ ಮಾಡಿರುವ ಉದಾಹರಣೆಗಳು ಕಡಿಮೆ. ಚಮವನ್ನು ಅಧ್ಯಯನ ಮಾಡಿದರೆ ಲಂಕೇಶ್ ಪತ್ರಿಕೆ, ುವಾತು, ಸಾಕ್ಷಿ, ಪ್ರಬುದ್ಧ ಕರ್ನಾಟಕ, ಸಾಧನೆ ಂತಾದವುಗಳಿಗಿಂತ ಭಿನ್ನ ಲೋಕವೊಂದು ದುರು ಬರುತ್ತದೆ. ಇದರಲ್ಲಿ ಶತಮಾನಗಳಿಂದ ವಳಿದ ನೂರಾರು ಕೇರಿಗಳ ಕಣ್ಣೀರಿದೆ, ಯುವವರ ಬೆವರಿನ ವಾಸನೆ ಇದೆ, ಅಸಹಾಯಕ ್ರಮಕ್ಕಳ ಆಕ್ರಂದನವಿದೆ; ಅದಕ್ಕೆ ಸಂಘಟಿತ ೋಧದ ಅಗತ್ಯವನ್ನು ಒತ್ತಿ ಹೇಳಿರುವ ಸಮ ಾಜ ನಿರ್ಮಾಣದ ಕನಸಿದೆ. ಪಂಚಮದ ಆರಂಭದ ಿಕೆಯಿಂದ ಲೆಕ್ಕ ಹಾಕಿದರೆ ಈಗ ಮೂರು ಕಗಳು ಕಳೆದುಹೋಗಿವೆ. ಈ ಮೂರು ದಶಕಗಳಲ್ಲಿ ತರ ಮೇಲೆ ನಡೆಸುತ್ತಿರುವ ದಮನ ದಬ್ಬಾಳಿಕೆಗಳು, ್ಯಯ ಸುಲಿಗೆಗಳು ಯಾವ ರೀತಿಯಲ್ಲಿಯೂ ುೆಯಾಗಿಲ್ಲ.

ದಲಿತ ಹೋರಾಟದ ಸೈದ್ಧಾಂತಿಕ ನೆಲೆ

ಪಂಚಮವನ್ನು ಅಧ್ಯಯನ ಮಾಡುವುದೆಂದರೆ ಾಟಕ ದಲಿತ ಸಂಘರ್ಷ ಸಮಿತಿಯನ್ನು ಮತ್ತು ಅದರ ಹೋರಾಟದ ಏಳುಬೀಳುಗಳನ್ನು ಅಧ್ಯಯನ ಮಾಡಿದಂತೆ. ಜೊತೆಗೆ ಎಚ್ಚರಗೊಂಡ, ಸಂಘಟಿತ ದಲಿತರ ವೈಚಾರಿಕ ನೆಲೆಗಟ್ಟನ್ನು ಅಧ್ಯಯನ ಮಾಡಿದಂತೆ. ಮೊದಲ ದಿನಗಳಲ್ಲಿ ದಲಿತರು ಅದೆಷ್ಟು ತೀವ್ರವಾಗಿ ಮತ್ತು ತೀಕ್ಷ್ಣವಾಗಿ ತಮ್ಮ ಸಮುದಾಯಗಳ ಬಗ್ಗೆ ಬದ್ಧತೆಯಿಂದ ಇದ್ದರು ಹಾಗೂ ಹೋರಾಡಿದರು ಎಂಬುದು ತಿಳಿಯುತ್ತದೆ. ಆ ಹೋರಾಟದ ಕಾವು ಅವರಲ್ಲಿ ಮೂಡಿಸಿದ ವೈಚಾರಿಕತೆಯ ಸ್ವರೂಪ ಅದೆಷ್ಟು ಪ್ರಗತಿಪರವಾಗಿತ್ತು ಎಂಬುದು ಗಮನಕ್ಕೆ ಬರುತ್ತದೆ. 'ಮಾನವೀಯತೆಗಾಗಿ, ಆತ್ಮಾಭಿಮಾನಕ್ಕಾಗಿ ನಿರಂತರವಾಗಿ ಸಾಗುವ ಸಮರದಲ್ಲಿ ನೀವು ಸಾವನ್ನಪ್ಪಿದರೆ, ನಮ್ಮ ಕೂಲಿ, ಗುಲಾಮತನ, ಅಸ್ಪೃಶ್ಯತೆ, ಹಸಿವು ಎಲ್ಲವೂ ಸುಟ್ಟು ಹೋಗುತ್ತವೆಯೆ ಹೊರತು ಇದರಿಂದ ನಮಗಾಗುವ ನಷ್ಟವೇನೂ ಇಲ್ಲ' ಎಂಬ ಅಂಬೇಡ್ಕರರ ಆಲೋಚನೆಯ ಉಲ್ಲೇಖವನ್ನು; 'ನೋಡಲು ಭಯಂಕರವಾಗಿರುವಂತೆ ಕಾಣುವ ಪ್ರತಿಗಾಮಿಗಳು ವಾಸ್ತವವಾಗಿ ಶಕ್ತಿಹೀನರಾಗಿರುತ್ತಾರೆ. ಜನಶಕ್ತಿ ಒಂದುಗೂಡಿದಾಗ ಅವರು ನಿರ್ನಾಮವಾಗಿ ಹೋಗುತ್ತಾರೆ' ಎಂಬ ಮಾವೋ ವಿಚಾರದ ಉಲ್ಲೇಖವನ್ನು; 'ದಲಿತರಿಗೆ ನ್ಯಾಯ ಸಿಕ್ಕಿ ಎಲ್ಲದರಲ್ಲೂ ಸಮಾನತೆ ಬರಬೇಕೆಂದರೆ ಆಸ್ತಿಯ ಹಕ್ಕು ರದ್ದಾಗಬೇಕು. ಸಂಪತ್ತಿನ ಒಡೆತನ ಸರ್ಕಾರದ ಕೈ ಸೇರಬೇಕು' ಎಂಬುದನ್ನು; 'ಯಾವುದೇ ಸಮಾಜದ ಬದಲಾವಣೆ ಕಾನೂನಿನಿಂದ ಸಾಧ್ಯವಿಲ್ಲ. ಸಂಘಟಿತ ಹೋರಾಟದ ಪರಿಣಾಮವಾಗಿ ಹೊಸ ವ್ಯವಸ್ಥೆಯೊಂದಿಗೆ ಕಾನೂನು ಸೃಷ್ಟಿಯಾಗುತ್ತದೆ' ಎಂಬ ವಿಚಾರವನ್ನು ಗಮನಿಸಬಹುದು.

ದಲಿತರು ಶಿಕ್ಷಣದ ಮೂಲಕ ಎಚ್ಚರಗೊಂಡದ್ದು, ತಮ್ಮ ಮೇಲಿನ ಶೋಷಣೆಯ ವಿರುದ್ಧ ಸಂಘಟಿತರಾಗಿ ಹೋರಾಟಕ್ಕೆ ಇಳಿದುದು ಶೋಷಕ ವರ್ಗದಲ್ಲಿ ನಡುಕ ಹುಟ್ಟಿಸಿದ್ದು ನಿಜ. ಆ ನಡುಕದಿಂದ ಅವರ ಮೇಲಿನ ದಬ್ಬಾಳಿಕೆ ಕೂಡ ಸಂಘಟಿತ ರೂಪದಲ್ಲಿ ಸಂಯೋಜನೆಗೊಂಡಿತು. ಅದನ್ನು ಎದುರಿಸಲು ವರ್ಗ ಹೋರಾಟದ ದಾರಿಯನ್ನು ಕಂಡುಕೊಳ್ಳುವ ಪ್ರಬಲ ಸೈದ್ಧಾಂತಿಕ ಸೂಚನೆಗಳು ಕಾಣುತ್ತವೆ. ಮೊದಲ ಸಂಚಿಕೆಗಳಲ್ಲಿ ಭೂಮಿ, ಅಧಿಕಾರ ಪಡೆಯುವ ಬಗ್ಗೆ, ಅಂಬೇಡ್ಕರರ ಆಲೋಚನೆಗಳ ಮೂಲಕ ಮಾರ್ಕ್ಸ್ ಹಾಗೂ ಮಾವೋ ಆಲೋಚನೆಗಳ ಪ್ರಸ್ತಾಪ ಬಂದಿವೆ. ಇವು ಕೇವಲ ಬೌದ್ಧಿಕ ವಲಯದ ಸೃಷ್ಟಿಗಳಲ್ಲ; ಬದಲಿಗೆ ಊಳಿಗಮಾನ್ಯಶಾಹಿ ಕ್ರೌರ್ಯದ ವೈಚಾರಿಕ ಫಲಗಳು.

ಎರಡನೇ ಹಂತದಲ್ಲಿ ಊಳಿಗಮಾನ್ಯಶಾಹಿ ಕ್ರೌರ್ಯದ ಬಗೆಗಿನ ಗಮನ ಹಾಗೂ ವೈಚಾರಿಕ ತೀವ್ರತೆ ಸಡಿಲವಾಗುತ್ತ ಹೋಗಿದೆ. ಆಡಳಿತ ವಿಕೇಂದ್ರೀಕರಣದ ಹೆಸರಿನ ಉಪಕರಣಗಳಾದ ಜಿಲ್ಲಾ ಪರಿಷತ್ ಮುಂತಾದುವು ಹಳ್ಳಿಗಳ ಮೇಲೆ ಮತ್ತು ದ.ಸಂ.ಸ.ದ ಮೇಲೆ ಉಂಟುಮಾಡಿರುವ ಪರಿಣಾಮಗಳು ಗೋಚರಿಸುತ್ತವೆ. ರೈತ ಸಂಘ ಮತ್ತು ದಲಿತ ಸಂಘ ಒಟ್ಟಾಗಬೇಕೆ? ಬೇಡವೆ? ಎಂಬ ಚರ್ಚೆಗಳು ನಡೆದಿವೆ. ದ.ಸಂ.ಸ. ಸಂಸದೀಯ ಚುನಾವಣೆಗೆ ಇಳಿದದ್ದು ನಂತರದ ಬೆಳವಣಿಗೆಗಳು ಕಾಣುತ್ತವೆ. ಆ ಹೊತ್ತಿಗಾಗಲೆ ದ.ಸಂ.ಸ. ಹೋರಾಟ ಮತ್ತು ಅದರ ಪ್ರಖರ ವೈಚಾರಿಕತೆಯೊಳಗೆ ದಲಿತ ವಿರೋಧಿ ವೈಚಾರಿಕತೆ ಪ್ರವೇಶ ಮಾಡಿದೆ. ವ್ಯವಸ್ಥೆಯ ಶೋಷಣೆಯನ್ನು ವಿರೋಧಿಸುತ್ತ ಹುಟ್ಟಿದ ದ.ಸಂ.ಸ. ಶೋಷಣೆಗೆ ಹೊಂದಿಕೊಂಡು ಹೋಗುವ ವೈಚಾರಿಕತೆಯ ದಾರಿ ತುಳಿದಿರುವ ವಿಧಾನ ಕಾಣಿಸುತ್ತದೆ.

ದಲಿತ – ರೈತ ಚಳುವಳಿ

ಪಂಚಮವು ದಲಿತ–ರೈತ ಚಳುವಳಿಯ ವಿಶೇಷಾಂಕವನ್ನು ಪ್ರಕಟಿಸಿದೆ. ರೈತ ಸಂಘದ ಹುಟ್ಟಿಗೆ ದಲಿತ ಸಂಘದ ಹೋರಾಟವೂ ಕಾರಣವಾಗಿತ್ತು. ಈ ವಿಶೇಷಾಂಕದಲ್ಲಿ ರೈತ ಸಂಘದ ಸಾಮಾನ್ಯ ವಿಮರ್ಶೆಯೂ ಇದೆ. ಆದರೆ ಎರಡೂ ಹೋರಾಟಗಳ ಭೌತಿಕ ಅನಿವಾರ್ಯತೆ ಮತ್ತು ಅವುಗಳ ನಡುವಿನ ವೈರುಧ್ಯಗಳ ಅಧ್ಯಯನದಲ್ಲಿ ಕೆಲವು ಸೈದ್ಧಾಂತಿಕ ಕೊರತೆಗಳಿವೆ. ಆದರೂ ಗಮನ ಸೆಳೆಯುವ ಕೆಲವು ತುಣುಕುಗಳನ್ನು ಗಮನಿಸಬಹುದು. 'ಕೃಷಿ ಕಾರ್ಮಿಕರಿಗೆ ನ್ಯಾಯವಾದ ವೇತನ ಮತ್ತು ಇತರ ಸೌಲಭ್ಯಗಳು ದೊರೆಯಬೇಕೆಂಬುದು ರೈತ ಚಳುವಳಿಯ ಒಂದು ಯೋಗ್ಯ ಬೇಡಿಕೆ. ಆದರೆ ಆ ವೇತನವನ್ನು ಕೊಡುವಂತೆ ಭೂ ಮಾಲೀಕರನ್ನು ರೈತ ಸಂಘ ಒತ್ತಾಯಿಸಿದ

ನಿದರ್ಶನಗಳು ಚಳುವಳಿಯ ಉದ್ದಕ್ಕೂ ಎಲ್ಲಿಯೂ ಕಾಣಿಸುವುದಿಲ್ಲ' –ಜಿ. ರಾಜಶೇಖರ್. 'ರೈತ ಚಳುವಳಿಯು ಮೂಲಭೂತವಾಗಿ ಕೃಷಿಕಾರ್ಮಿಕರ ಚಳುವಳಿಯಾಗಲೆ ಇಲ್ಲ. ಕೃಷಿ ಕಾರ್ಮಿಕರನ್ನು ಕೇಂದ್ರ ಮಾಡಿಕೊಂಡು ಒಮ್ಮೆಯೂ ಈ ಚಳುವಳಿಗಾರರು ಹೋರಾಟ ನಡೆಸಲಿಲ್ಲ' –ಜೆ.ಪಿ.ಬಸವರಾಜು. 'ಈ ಹರಿಜನರಿಗೆ ಪಾಠ ಕಲಿಸದೆ ಹೋದರೆ ನಾವು ನಮ್ಮ ಅಪ್ಪಂದಿರಿಗೆ ಹುಟ್ಟಿದ ಮಕ್ಕಳೇ ಅಲ್ಲ. ಇದು ದೆಹಲಿಗೆ ಕೂಗಳತೆಯಲ್ಲಿರುವ ಕಂಜಾವಾಲಾ ಎಂಬ ಕುಗ್ರಾಮದ ೧೦ ವರ್ಷದ ರೈತ ಹುಡುಗ ಆಡಿದ ಮಾತು. ಈ ಕುಗ್ರಾಮದ ಹರಿಜನರು ಎಸಗಿರುವ ಅಪರಾಧವೆಂದರೆ ಭೂ ರಹಿತ ಕೂಲಿಕಾರರಾಗಿದ್ದ ಅವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಅಲ್ಲಿ ಪಾಳುಬಿದ್ದಿದ್ದ ಗೋಮಾಳದ ಜಮೀನನ್ನು ಪಡೆದದ್ದು' –ಮಾನವ. 'ಇಂದು ಹಳ್ಳಿಗಳಲ್ಲಿ ವಿಚಾರವಂತ ರೈತ ನಾಯಕರನ್ನು ಮೀರಿಯೂ ಹಳ್ಳಿಗಳ ಜಮೀನುದಾರರು ತಮಗೆ ರೈತ ಸಂಘದ ಸಹಕಾರವಿರುವುದರಿಂದ ಪೋಲೀಸ್, ಸರಕಾರ, ಕಾನೂನು ಏನೂ ಮಾಡಲಾರದು ಎಂಬ ಧಿಮಾಕಿನಿಂದ ಮತ್ತೆ ದಲಿತರ ಮೇಲೆ ಹಲ್ಲೆ ಸುಲಿಗೆ ನಡೆಸುತ್ತಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಬಸಲಾಪುರದ ಘಟನೆ ಹಾಗೂ ಪತ್ರಕರ್ತ ಪುಟ್ಟರಾಮು ಮೇಲೆ ನಡೆದ ಹಲ್ಲೆಯೇ ಸಾಕ್ಷಿ' –ರಂಗನಹಳ್ಳಿ ಭಾಸ್ಕರ. 'ಒಂದು ಕಡೆ ಹರಿಜನ ಸಂಘಟನೆಗಳು ಭೂ ರಹಿತರಿಗೆ ಭೂಮಿ ಕೊಡಿಸಲು ಹೋರಾಡುತ್ತಿದ್ದಾರೆ. ಇನ್ನೊಂದು ಕಡೆ ರೈತ ಸಂಘದ ಧುರೀಣರು ಸರ್ಕಾರಿ ಯಂತ್ರದ ಜೊತೆ ಕಬ್ಬು ಬೆಳೆಗಾರರಿಗೆ ಹೆಚ್ಚು ಬೆಲೆ ಕೊಡಿಸಲು ಧರಣಿ ಹೂಡುತ್ತಿದ್ದಾರೆ. ಪ್ರಜ್ಞಾವಂತರು ಇವರಲ್ಲಿ ಯಾರನ್ನು ಬೆಂಬಲಿಸಬೇಕು? ಬಂಡವಾಳಶಾಹಿಗಳನ್ನೇ ಅಥವಾ ಕೂಲಿಯವರನ್ನೇ?' –ಲಿಂಗದೇವರು ಹಳೇಮನೆ. ಈ ವಿಮರ್ಶೆಗಳು ಇಂದಿಗೂ ಕೂಡ ಪ್ರಸ್ತುತವಾಗಿವೆ. ಜಮೀನ್ದಾರಿ ವ್ಯವಸ್ಥೆಯನ್ನು ಬದಿಗಿಟ್ಟು ರೈತ ಸಂಘವನ್ನು, ಅದೇ ರೀತಿ ರೈತ ಸಂಘವನ್ನು ಬದಿಗಿಟ್ಟು ದಲಿತ ಸಂಘವನ್ನು ನೋಡಲು ಬರುವುದಿಲ್ಲ.

ಗಂಭೀರ ಚರ್ಚೆಗೆ ಮತ್ತು ತೀವ್ರ ಪ್ರತಿಭಟನೆಗೆ ಕಾರಣವಾಗಿದ್ದ ಯು.ಆರ್. ಅನಂತಮೂರ್ತಿ ಮತ್ತು ದೇವನೂರ ಮಹಾದೇವ ಅವರ ಲೇಖನದ ತುಣುಕುಗಳನ್ನು ಗಮನಿಸಬಹುದು. 'ನಮ್ಮ ಹಲವು ಜಾತಿಗಳು, ನಂಬಿಕೆಗಳು, ನಡವಳಿಕೆಗಳು ವಿಕೇಂದ್ರೀಕೃತ ವ್ಯವಸ್ಥೆಯ ಫಲಗಳು. ನನಗೆ ಅನೇಕ ಸಾರಿ ಅನ್ನಿಸಿದೆ: ಈ ದೇಶದಲ್ಲಿ ಸರಕಾರ, ಕಾನೂನಿನ ವ್ಯವಸ್ಥೆ ಇಲ್ಲದೆ ಇದ್ದಾಗ್ಯೂ ಈ ದೇಶ ಹಾಗೂ ಹೀಗೂ ಮುಂದುವರಿದುಕೊಂಡು ಬಂದಿರುವುದಕ್ಕೆ ಕಾರಣ–ಜಾತಿ. ಜಾತಿ ಒಂದು ರೀತಿಯ ಬ್ಯಾಂಕ್‌ನ ಹಾಗೆ, ಒಂದು ವೇಲ್‌ಫೇರ್ ಸಿಸ್ಟಮ್‌ನ ಹಾಗೆ ಕೆಲಸ ಮಾಡುತ್ತ ಬಂದಿರುವುದರಿಂದಲೇ ಅದು ಕ್ರಿಯೇಟಿವ್ ಆಗಿ ಉಳಿದುಕೊಂಡಿದೆ. ಹರಿಜನರ ದೃಷ್ಟಿಯಿಂದ ಎಲ್ಲ ಜಾತಿಗಳೂ ಕೆಡುಕಾಗಿದ್ದರೂ ಉಳಿದ ಜಾತಿಗಳಿಗೆ ಅವಕ್ಕಂಟಿಕೊಂಡವರ ಭರವಸೆಗಳು, ಆಸೆಗಳು ಕಳೆದುಹೋಗುವಷ್ಟು ಅವು ಕೆಟ್ಟಿಲ್ಲ. ಕೆಟ್ಟು ಹೋಗಿದ್ದ ಪಕ್ಷದಲ್ಲಿ ಅವುಗಳನ್ನು ನಾಶಮಾಡಿಬಿಡಬಹುದಿತ್ತೇನೋ?'–ಅನಂತಮೂರ್ತಿ. 'ಗಾಂಧಿ' ಸಿನಿಮಾವನ್ನು ದಲಿತ ಸಂಘಟನೆ ಬಹಿಷ್ಕರಿಸಿತ್ತು. ಆದರೆ ದೇವನೂರ ಮಹಾದೇವರು ಅದನ್ನು ನೋಡಿ, 'ನಾನು ಗಾಂಧಿ ಚಿತ್ರ ನೋಡಿದೆ ಅಥವಾ ಆಕಾಶದೆತ್ತರಕ್ಕೆ ಎರಡು ಗೇಣು ಕಮ್ಮಿ' ಎಂಬ ಲೇಖನ ಬರೆದರು. ಅದರ ಕೊನೆಯಲ್ಲಿ 'ಗಾಂಧಿಯೂ ನಮಗೆ ದಿಕ್ಕಾಗಬಹುದು' ಎಂದು ಬರೆದಿದ್ದರು. ಸಂಘಟನೆಯ ಅನೇಕರಿಗೆ ಇದು ಸಿಟ್ಟು ತರಿಸಿತ್ತು. ಆಗ ಎನ್. ವೆಂಕಟೇಶ್ ಅವರು 'ಮೆಟ್ಟಿಲುಗಳಿಲ್ಲದ ಮಹಡಿ ಹತ್ತಿದ ಮಹಾದೇವ' ಎಂಬ ಲೇಖನ ಬರೆದು ಮಹಾದೇವ ಅವರ ಲೇಖನವನ್ನು ವಿಮರ್ಶಿಸಿದರು.

ಈಗ ಲಭ್ಯವಿರುವ ಪಂಚಮದ ಅಷ್ಟೂ ಸಂಚಿಕೆಗಳು ಅಧ್ಯಯನ ಯೋಗ್ಯ. ಆದರೆ ಯಾವುದೇ ಕಾರಣಕ್ಕೂ ಇವು ಅಧ್ಯಯನಕ್ಕೆ ಆಕರಗಳಲ್ಲ. ನಾಡನ್ನು ಕುರಿತು ಈಗಾಗಲೆ ನಿರ್ಮಾಣ ಮಾಡಿರುವ ವೈಚಾರಿಕ ಚೌಕಟ್ಟಿಗೆ ಅನುಗುಣವಾಗಿ ಪಂಚಮದ ಸಂಚಿಕೆಗಳನ್ನು ಆಕರಗಳನ್ನಾಗಿ ದುರುಪಯೋಗ ಮಾಡಿಕೊಳ್ಳಬಾರದು. ಪಂಚಮದ ಒಡಲೊಳಗಿಂದಲೇ ನಾಡನ್ನು ಕುರಿತ ವೈಚಾರಿಕ ಚರ್ಚೆಯನ್ನು ಎತ್ತಬೇಕಾಗಿದೆ. ಪಂಚಮದ ಹೊರಗೆ ನಿಂತು ಅದನ್ನು ನೋಡಬಾರದು. ಪಂಚಮದ ಒಳಗೆ ನಿಂತು ನಾಡನ್ನು ನೋಡಬೇಕು. ಆ ಮೂಲಕ ಪಂಚಮ ದೃಷ್ಟಿಕೋನವನ್ನು ನಿರ್ಮಾಣ ಮಾಡಬೇಕು. ಅಂತಹ ಪ್ರಯತ್ನಕ್ಕೆ ಇದೊಂದು ಸಾಮಾನ್ಯ ಪ್ರವೇಶಿಕೆ ಅಷ್ಟೆ.



ಡಾ. ಬಿ. ಎಂ. ಪುಟ್ಟಯ್ಯ

ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು. ನಾಡಿನ ಅಕಡೆಮಿಕ್ ವಲಯಕ್ಕೆ ಪರಿಚಿತರು.

ಇದುವರೆಗಿನ ಅಧ್ಯಯನಗಳಿಗಿಂತ ಮತ್ತು ಸಂಶೋಧನೆಗಳಿಗಿಂತ ಹೊಸದಾದುದನ್ನು ಹಾಗೂ ಭಿನ್ನವಾದುದನ್ನು ಖಚಿತವೂ, ಸ್ಪಷ್ಟವೂ ಆದ ರೀತಿಯಲ್ಲಿ ಹೇಳುವ ಶಕ್ತಿಶಾಲಿ ಗುಣವನ್ನು ದಕ್ಕಿಸಿಕೊಂಡಿದ್ದಾರೆ. ನಾಡಿ ನಾದ್ಯಂತ ವಿವಿಧ ಗೋಷ್ಠಿ, ಸಭೆ, ಸಮಾರಂಭಗಳಲ್ಲಿ ವಿಚಾರ ಪ್ರಚೋದಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಶಿಕ್ಷಣ, ಹೋರಾಟ, ಚಳವಳಿ, ರಾಜಕೀಯ, ಆರ್ಥಿಕ ವಿಷಯಗಳಲ್ಲದೆ ರೈತರು, ದಲಿತರು, ಮಹಿಳೆಯರು, ಮತ್ತು ಕಾರ್ಮಿಕರ ಸ್ಥಿತಿಗತಿಯ ಬಗ್ಗೆ ಪರಿಣಾಮಕಾರಿ ವಿಚಾರಗಳನ್ನು ಮಂಡಿಸಿದ್ದಾರೆ.



ಝುನಾಯಣ

ಬದುಕಿಗಿಲ್ಲ ಧೀರ್ಘವೆಂಬುದು
ಸಾವಿಗಿಲ್ಲ ನಿಧಾನವೆಂಬುದು
ಮರಣಶಯ್ಯೆಯಿಂದ ಇಳಿಯ ಬೇಕಿದೆ
ಮನೋದಾಢ್ಯದಿ ಮರಣಬೇನೆ ದಾವಿ
ಮೌದ್ಗಲ್ಯಾಯನಂತೆ ಆತ್ಮಸ್ಥೆರ್ಯ
ಪ್ರಕಟಿಸಬೇಕಾಗಿದೆ
ಮರಣ ಮಂಡಲಮಧ್ಯ ನಿಂತು
ಜೀವನ ಸಮರಸ ಬೋಧಿಸಬೇಕಿದೆ

ಬದುಕಿನ ತುಂಬ ಸಾವು ಮಂಜುಗಟ್ಟ
ಶಿಖರಗಳ ಮಧ್ಯ ಕಣಿವೆಗಳಿಗೆ
ನಾನಿನ್ನೂ ಸೇತುವೆ ಕಟ್ಟಬೇಕಿದೆ
ಸಾಗಿ ಬರುವ ಪೀಳಿಗೆಗಳನ್ನು ಆಚೆ ದ
ಮುಟ್ಟಿಸಿ, ಬೆಳಕಿನ ದರ್ಶನ
ಮಾಡಿಸಬೇಕಿದೆ

ಆಕಾಶಕ್ಕಿರುವುದು ಉದಯವೊಂದೇ
ಅಲೆಗಳಿಗಿರುವುದು ಸಾಗರವೊಂದೇ
ಜಗಕ್ಕಿರುವುದು ಪ್ರೇಮವೊಂದೇ
ನಮ್ಮನ್ನರಿಯಬೇಕು ಜ್ಞಾನದಿಂದೇ

ಜಂಬಣ್ಣ ಅಮರ ಚಿಂತ

With Best Compliments From

S.R. RAVISHANKAR

CLASS 1 KPWD CIVIL CONTRACTOR
#80, 1ST MAIN ROAD CHAMARAJAPET
BANGALORE- 560018
TELE FAX: 26613738
MOBILE: 9844010536

With Best Compliments From

CANARA STANDARD KEYS

Since 1966

MANUFACTURERS OF INDUSTRIAL KEYS

M.M. INDUSTRIAL ESTATE, P. B. 8206,
K. R. ROAD YEDIYUR, BANGALORE-560082, INDIA
TEL: 91-80-26763258/26768292
FAX: 91-80-26768293
EMAIL: CANARAKEY@DATAONE.IN/ CSKEYS@VSNL.COM
WEBSITE: WWW.CANARAKEYS.NET



ಅರ್ಜುನ ಕೋರಟಕರ

ಮಣ್ಣಿಗೆ ಹೋಗಬೇಕಂತೀನಿ
ಬಾಚಣಗಿ ಭರಮಪ್ಪ ಇನ್ನೂ ಸಾಯವೊಲ್ಲ
ಅಂದ್ರ, ಅಂವ್ನ ಸಾಯುದನ್ನೇ ಕಾಯಕ ಹತ್ತೀನಿ ಅಂತ ತಿಳಿಬ್ಯಾಡ್ರಿ
ಯಾವಾಗರ ಸಾಯ್ಲಿ, ಅದಕೇನ ತಕರಾರಿಲ್ಲ
ಸಾಯೂದ್ಕ ತಕರಾರ ಮಾಡೂದು ವಾಜಿಮೆಲ್ಲಂತ
ನನಗೂ ಗೊತ್ತೈತಿ.

ಆದ್ರ, ಅಂವ ಸತ್ತಾಗ ನಾ ಊರಾಗಿರಬೇಕಲ್ಲ ! ಅಂಬೂ ಚಿಂತಿ ನನಗ.
ಅದಕ, ಆಜು-ಬಾಜೂದವ್ರನ್ನ ಕಂಡು
ಅಂವ ಜೀವಂತ ಇರೂದನ್ನ ಖಾತ್ರಿ ಮಾಡಿಕೊಂಡು
ಮಾತನ್ಯಾಗ ಮಾತ ಬೆರಿಸಿ
ಹಂಗೇನರಾ ಹೆಚ್ಚು ಕಮ್ಮಿ ಆದ್ರ
ನನಗೊಂಚೂರು ಸುದ್ದಿ ಮುಟ್ಟಿಸಿರಂತ
ಆಗಾವ ಹೇಳಿಟ್ಟೇನಿ.

ವಿಚಿತ್ರಂದ್ರ, ಅವನ ಸಲುವಾಗಿ ನನ್ನ ಜೀವ
ಇಷ್ಟ್ಯಾಕ ಚಡಪಡಿಸುತ್ತೊ ಅನ್ನೂದು ನನಗ್ಸ ಗೊತ್ತಿಲ್ಲ!
ಹೊರ್ಗಿ ಕೇಳಿದ್ರ 'ಅಂವಾ ಯಾವ ಚಲೋ ಕೆಲಸಾ ಮಾಡ್ಯಾನ?
ಹೇಳಿ-ಕೇಳಿ ಕೆಟ್ಟ ಮನಶ್ಯಾ' ಅಂತ ಅಂತಾರ

ಹೌದು, ಅದೂ ಖರೇನ್ಸ
ಆದ್ರ, ದುಷ್ಟ ಮಾತ್ರ ಅಲ್ಲ!

ಸಾಫ್ ಸಿದಾ ಹೇಳಬೇಕಂದ್ರ
ಜೀವನದಾಗ ಖರೇಕ ಸತ್ತವ್ರೆಲ್ಲ ಹರಲೀ ಹೊತ್ತ್ಸ ಸತ್ತಾರ!
ಅಂಥವ್ರ ಒಂದ್ ಮಕಾ ನೋಡಿದವ್ರು
ಅವ್ರದ್ಸ ಇನ್ನೊಂದು ಮಕಾ ನೋಡೂ ಮನಸ ಮಾಡಬೇಕು.
ಹತ್ತ ಮಂದಿಗೆ ಸೈ ಅನಿಸಿಕೊಂಡಾಂವ ಒಬ್ಬಗರ್ಸ ಬ್ಯಾಡಾಗಿರ್ತಾನು

ಆದ್ರ ಇಂಥವ್ರ ಲೆಕ್ಕ ಬದುಕಿದಾಗ ಸಿಗೂದಿಲ್ಲ...

ಇಲ್ಕೇಳ್ರಿಲ್ಲೆ ಈ ನನ್ನ ಹೀರೋ ಬಾಚಣಗಿ ಭರಮಪ್ಪಗ
ಈಗ ಎಷ್ಟ ವರ್ಷಂತೀರಿ? ಐದಿಪ್ಪತ್ತರ ಮ್ಯಾಲೆ ಹತ್ತು !
ಇದು ಇನ್ನೂ ಬದುಕಿದಾಗಿನ ಲೆಕ್ಕ ! ಸತ್ತ ಮ್ಯಾಲಿಂದು ಮುಂದ ಬರತ್ತ !

ಇಷ್ಟಕ್ಕ ಮುಗಿಲಿಲ್ಲ ಇವನ ತಾರೀಫು
ಮಂದಿ ರೋಗಕ್ಕ ಮದ್ದ ಕೊಡತಾನ
ತನಗಂತ ಇಲ್ಲೀತನಕ ಸೂಜಿ ಮಾಡಿಕೊಂಡಿಲ್ಲ ಗುಳಿಗಿ ನುಂಗಿಲ್ಲ !
ತೆಲಿ, ಕಣ್ಣು, ಕಿವಿ, ಬಾಯಿ ಮೂಗು ಬಾಯಾನ ಹಲ್ಲು



ಕವನ

ಎಲ್ಲಾ ಅಂದ್ರ ಎಲ್ಲಾನೂ ಅವನ ಸ್ವಾಧೀನದಾಗ ಅದಾವು !

ಆದ್ರೂ ಒಮ್ಮೊಮ್ಮಿ ನಡಿಯೂಮುಂದ ಲಾಪ ಹೊಡಿತಾನು
ಆವಾಗ, 'ಜೋಲಿ ಹೋಗಿ ಬಿದ್ದ-ಗಿದ್ದಿ ಕೈಯ್ಯಾಗ ಬಡಿಗಿ ಹಿಡಿ ಅಂದ್ರ
'ಬಡಿಗ್ಯಾಕ? ನಾಯೇನ ಮುದುಕೇನ್'? ಅಂತಾನ
'ಕುಂಡ್ರು ಮುಂದ ಗ್ವಾಡೀ ಆಸರಾ ಮಾಡಿಕೋ' ಅಂದ್ರ
ಸಿಟ್ಟಿಲೆ ದಿಟ್ಟಿಸಿ ನೋಡತಾನ.

ಈಗ ನಾ ಹೇಳಾಕ ಹೊಂಟದ್ದು ಭರಮಪ್ಪಗ ಸಮ್ಮಂದ ಪಟ್ಟಾಂಗ
ಅಸಲೀ ಕತಿ. ನಮ್ಮೂರಿನ ನಾಶಿ ಗಲ್ಲಿ ಕತಿ.

ಒಂದಾನೊಂದ ಕಾಲಕ್ಕ ಅಲ್ಲೆ ಕೆಂಪ ದೀಪ ಉರಿತ್ತಿತ್ತು
ರಾತ್ರೀ ಆತು ಆಂದ್ರ – ಕೆಂಪ ದೀಪದ ಕೆಳಗ
ಹರ್ಯೇದ ಹುಡಿಗೇರ ಸೆರಗ ಸರೀತಿದ್ವು
ಇಂಥಾ ಆ ಗಲ್ಲ್ಯಾಗ ಮರ್ಯಾದಿಸ್ತರೂ ಇದ್ರು
ಅವರು ಕೆಂಪ ದೀಪದ ವಿರುದ್ಧ ಹೋರಾಟಕ್ಕಿಳಿದ್ರು,
ಹಿಂಗ ಹತ್ತಾರು ವರ್ಷದಿಂದ ಆಗಾಗ ಈ ಹೋರಾಟ ನಡೆದೇ ಇತ್ತು.

ಮುಂದೊಂದ ದಿನ ಕೆಂಪ ದೀಪದ ಜಾಗಾದಾಗ
ಮರ್ಕ್ಯೂರಿ ಉರಿಯಾಕ ಹತ್ತಿದ್ದ ನೋಡಿ ಆಶ್ಚರ್ಯಾತು!



ದಂಥೇ ಮಾಡೂ ಹುಡಿಗೇರಂದ್ರ
ಸರಕಾರೀ ಸಾಹೇಬ್ರು ಬ್ಯಾಟಿ ನಾಯಿ ಆಗ್ತಾರು
ನ್ಯಾಯಾ ಗೂಟಕ್ಕ ಬಿಗದು – ನಾಚಗೀ ನಾಗೊಂದ್ಗಿ ಮ್ಯಾಗಿಟ್ಟು
ಪೆನ್ನಿನ್ಯಾಗ ಅಧಿಕಾರದ ಗುಂಡಿಟ್ಟು
ಕಾನೂನಿನ ಹೆಸರಿನ್ಯಾಗ ಬ್ಯಾಟಿ ಆಡತಾರು!
ಹಂಗಽ ತಮ್ಮ ತೊಡಿಯಾಗಿನ ತಿಂಡಿ
ಹರೇದ ಹುಡಿಗೇರ ತೊಡಿಗೆ ತಿಕ್ಕಿ
ತಿಂಡಿ ತೀರೂ ಮಟಾ ಕಾಡತಾರು!
ಎಲ್ಲಾ ಮುಗಿಸಿ ಹೊರಗ ಹೋಗು ಮುಂದ
ಉಟ್ರದ ಬಾಳಿ ಪಟ್ಟಿ, ಮಲಿಕಟ್ಟಿನ್ಯಾಗಿನ ದುಡ್ಡ ಬೇಡತಾರು.

ಹಿಂತಾದೆಲ್ಲ ನೋಡಕೋತ ಹಲ್ಲಾಗ ನಾಲ್ಗಿ ಇಟಗೊಂಡಿದ್ದ
ಭರಮಪ್ಪ ನಾಶೀ ಗಲ್ಲೀ ಕೆಂಪದೀಪಾ ಆರಸಾಕಂತ ಬಂದವ್ರಿಗೆ ಬ್ಯಾಡಂದ್ಹಾಽವಲ್ಲ
ಹುಡಿಗೇರ ಕಂಡು ಹುಬ್ ಹಾರ್ಸೂ ಹಲ್ಕಾಗೊಳನ್ನ ಕಂಡು
ಒಳಗೊಳಗಽ ನೊಂದಕೊಂಡಾಂವ.
ಮನಸ ಒಟ್ಟರಿಸಿದಾಗ,
'ಲೇ... ಸೂಳೆಮಕ್ಕಳ್ರ್ಯಾ,
ಮಾಮೂಲ ಮುಟ್ಟೊ ಕೈ ದಂಥೆ ಮಾಡೂ ಮೈ
ಎರಡೂ ಒಂದಽ ಅಂತ ಅಂದೇ ಅಂತಿದ್ದ ಒದಕಿ ತಿಂದೇ ತಿಂತಿದ್ದ!'

ಅನಾಥ ಮಕ್ಕಳು, ಗತಿಗೇಡಿ ಮುದುಕರಂದ್ರ
ಭರಮಪ್ಪನ ಎದೀ ಕರಗಿ ನೀರಾಕ್ಕಿತ್ತು
ಹಿರೇಮನಸ್ಯಾರಿದ್ದ ಮನಿ ಚಂದಂತ
ಮನ್ಯಾಗ ಮುದಕರನ್ನಿಟಗೊಂಡು
ಅವ್ರ ಸೇವಾದಾಗ ದೇವ್ರನ್ನ ಕಂಡಾವ.

ನೌಕ್ರೀ ಮಾಡಿ ನಿವೃತ್ತ ಆದಮ್ಯಾಲೆ
ನಾಟೀ ವೈದ್ಯಕೀ ಮಾಡಿ ಹೆಸರ ಮಾಡಿದ್ದ : ಅಂದ್ರ
ಕೆಟ್ಟ ಹೆಸರ ಮಾಡಿದ್ದ.



ಊರ ಮಂದಿನ ಕೆರಿಯಾಗ
ಕೂಸು ತೇಲೂದ ಕಂಡ ದಿನಾ
ಭರಮಪ್ಪ ಊಟಾ ಮಾಡತಿದ್ದಿಲ್ಲ!
ಕೂಸಗೋಳನ್ನ ಯಾರೇ ಕೆರಿಯಾಗ ಹಾಕಿ ಹೋದ್ರೂ
ಹರಲಿ ಬರೂದು ಈ ಭರಮಪ್ಪನ ಮ್ಯಾಗ!

ಗುಟ್ಟೀಲೆ ಬಸರಾದ ಹುಡಿಗೇರ ಬಸರ ತಗಿಯೂದು
ಬಸರ ತಗಸಾಕ ಒಲ್ಲದ ಬಾಲೆರು ಹಡೆಯೂತನಕ
ಮನ್ಯಾಗಿಟಗೊಂಡು ಮಾನಾ ಕಾದು ಪ್ರಾಣಾ ಉಳಿಸೂದಂದ್ರ
ಭರಮಪ್ಪಗ ಭಗವಂತನ ಸೇವಾ!
ಹೆರಿಗಿ ಆತೂಂದ್ರ,
ಕೂಸಿನ್ನ ಸಾಕತೀವಂದ ದಾತಾಗೋಳ ಮಡಿಲಾಗಿಟ್ಟ
ತಂಣಗಿರಾಂವ!

ಒಂದೇ ಮಾತಿನ್ಯಾಗ ಹೇಳಬೇಕಂದ್ರ
ಹಾದರಕ್ಕ ಬಸರಾಗೂ ಬಾಲೇರ
ಅಪ್ಪ – ಅಮ್ಮ – ಸೂಲಗಿತ್ತಿ ಎಲ್ಲಾ ಆಗಿದ್ದ!

ಸಮಾಜಕ್ಕಂಜಿ, ಯಾವ್sಕೆರಾ ಸೆರಗಿನ ಮರಿಯಾಗ ಕಂದಮ್ಮನ್ನ
ಮುಚಗೊಂಡು ಭರಪ್ಪನ ಮನಿ ಮುಂದ ನಿಂತ್ಲೂ..
'ಹೂಂ ಕೊಡು ಮಗು – ನಡಿ ಲಗೂ!'
ಅಂತ ಎದಿಯಾಗಿನ ಮಾತ ಆಡಿದಾಂವ.

ಇಂಥಾ ಭರಮಪ್ಪ ಈಗ ನಾಕದಿನದಿಂದ ಹಾಸಿಗಿ ಹಿಡಿದ ಮಲಗಿದಾ
ನೂರಾರ ವರ್ಸ ಉಸಿರಾಡಕೊಂಡ ಜೀವಾ ತೇದು ತೇದು ಸವದು ಚಕ್ಕಳ್ಯಾದ

ಸಾವಂದ್ರೇನು? ಇಡೀ ಹೋಗಿ ಹಿಡೀ ಆಗಿ ಮನ್ನಾಗ ಕರಗೂ ಕಾಲ!
ಹಂಗ ಭರಮಪ್ಪ ಮಂಣಾಗ ಕರಗೂ ಕಾಲಾ ಕಾಯಕೊಂಡು ಕುಂತ್s ಕುಂತ.

ನಾಕದಿನಾ ಕಾದು ಐದನೇ ದಿನಾ ಅವನ್ನ ನೋಡೆರಾ ಬರೂನಂತ
ನಾಕ ಹಣ್ಣ ಕೈಯಾಗ ಹಿಡಕೊಂಡ ಮನೀ ಬಿಟ್ಟು ಬೀದಿಗಿ ಬಂದಾಗ,
ಹೆಗಲಮ್ಯಾಲೆ ಟಾವೆಲ್ ಹಾಕ್ಕೊಂಡ ಇದರಿಗೆ ಬಂದವ್ರ ಹೇಳಿದ ಸುದ್ದಿ ಕೇಳಿ
ದಂಗಾಗಿ ನಿಂತೆ!

ಅಂವ ಸತ್ತರ ಹೂವಿನ ಹಾರದಗೂಡ
ನಾಕ ಹನಿ ಕಂಣೀರ ಉದುರಿಸಿ ಹಿಡಿ ಮಣ್ಣು ಹಾಕಿ
ಅವನ ಋಣಾ ತೀರಿಸಬೇಕಂದ್ರ
ನನ್ನ ಹೀರೋ ನನ್ನ ಕಂಣ ತಪ್ಪಿಸಿ ಮಣ್ಣಾಗ
ಮಲಗಿದ್ದ!

MILIND PUBLIC SCHOOL
LOVE WISDOM JUSTICE
MILIND
PUBLIC SCHOOL
"Spoorthidhama"
Anjananagara, Magadi Main Road, Bangalore - 560 091.
MILIND PUBLIC SCHOOL

ಆರೋಗ್ಯಕರ ಸಮಾಜದತ್ತ ಯೋಜನೆಗಳ ಮಹಾಪೂರ

ಕರ್ನಾಟಕ ಮುನ್ನಡೆಯುತ್ತಿದೆ



ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು





ಸಮಗ್ರ ಕರ್ನಾಟಕದ ಸಮೃದ್ಧ ಅಭಿವೃದ್ಧಿಗಾಗಿ ಸಾಮಾಜಿಕ ಆರೋಗ್ಯ ಸೇವೆಯಲ್ಲಿ ಉತ್ತಮ ಗುಣಮಟ್ಟವು ಎಲ್ಲರಿಗೂ ದೊರೆಯುವಂತೆ ಮಾಡಲು ಸರಕಾರವು ಆದ್ಯತೆ ನೀಡಿ ಕಾರ್ಯಪ್ರವೃತ್ತವಾಗಿದೆ. ಸಾರ್ವತ್ರಿಕ ಆರೋಗ್ಯ ನೀತಿಯಲ್ಲಿ ಜನಪ್ರಿಯವಾಗಿರುವ "ವಾಜಪೇಯಿ ಆರೋಗ್ಯಶ್ರೀ" ಮತ್ತು "ಆರೋಗ್ಯ ಕವಚ" ಯೋಜನೆಗಳ ಯಶಸ್ಸಿನ ಮಾಹಿತಿ ಹೀಗಿವೆ.

ವಾಜಪೇಯಿ ಆರೋಗ್ಯ ಶ್ರೀ



ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ದುರಂತ ಮಾಡುವ ಆರೋಗ್ಯ ಅಪಘಾತಗಳಿಗೆ ಒಳಗಾದಾಗ ಉಂಟಾಗುವ ತೊಂದರೆಯನ್ನು ನಿವಾರಿಸಲು ಉಚಿತ ಆರೋಗ್ಯ ಚಿಕಿತ್ಸಾ ಯೋಜನೆ "ವಾಜಪೇಯಿ ಆರೋಗ್ಯಶ್ರೀ" ಇದನ್ನು ಪ್ರಾರಂಭ ಹಂತದಲ್ಲಿ ಬೀದರ್, ಗುಲ್ಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದು, ಯೋಜನೆಯ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಎಲ್ಲೆಡೆಗೂ ವಿಸ್ತರಿಸಲಾಗುತ್ತಿದೆ.

- 'ವಾಜಪೇಯಿ ಆರೋಗ್ಯಶ್ರೀ' ಯೋಜನೆಯು ಫೆಬ್ರವರಿ 2010 ರಿಂದ ಜಾರಿಯಲ್ಲಿದೆ.
- ಪ್ರಾರಂಭಿಕ ಹಂತದಲ್ಲಿ 6 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಂಡಿದ್ದು, ಅನಂತರ 7 ಜಿಲ್ಲೆಗಳಿಗೆ ಮುಂದುವರಿಸಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಗೂ ಯೋಜನೆಯು ಹಂತ ಹಂತವಾಗಿ ಅನುಷ್ಠಾನಗೊಳ್ಳಲಿದೆ.
- ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟಗಾಯಗಳು, ಪಾಲಿಟ್ರೋಮ ಹಾಗೂ ಇತರ ಚಿಕಿತ್ಸೆ/ಶಸ್ತ್ರ ಚಿಕಿತ್ಸೆಗಳಿಗೆ ರೂ. 2.00 ಲಕ್ಷದವರೆಗೆ "ಫ್ಯಾಮಿಲಿ ಫ್ಲೋಟರ್"ಆಧಾರದ ಮೇಲೆ, ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.
- ಉತ್ತರ ಕರ್ನಾಟಕದ ಗುಲ್ಬರ್ಗಾ ಮತ್ತು ಬೆಳಗಾವಿಯ 13 ಜಿಲ್ಲೆಗಳ 32.50 ಲಕ್ಷ ಬಿಪಿಎಲ್ ಕುಟುಂಬಗಳಿಗೆ 'ವಾಜಪೇಯಿ ಆರೋಗ್ಯಶ್ರೀ' ಯೋಜನೆಯ ಶ್ರೀರಕ್ಷೆ.
- 8740 ಫಲಾನುಭವಿಗಳು, ರೂ. 2 ಲಕ್ಷವರೆಗಿನ ಉಚಿತ ಚಿಕಿತ್ಸೆ/ ಶಸ್ತ್ರಚಿಕಿತ್ಸೆ ಪಡೆದಿದ್ದಾರೆ.
- 2011-12ರ ಆಯವ್ಯಯದಲ್ಲಿ "ವಾಜಪೇಯಿ ಆರೋಗ್ಯಶ್ರೀ" ಯೋಜನೆಗಾಗಿ ರೂ. 40 ಕೋಟಿ ಹಂಚಿಕೆ.

ಆರೋಗ್ಯ ಕವಚ

ಉಚಿತವಾಗಿ ವೈದ್ಯಕೀಯ, ಪೊಲೀಸು ಮತ್ತು ಅಗ್ನಿಶಾಮಕ ಸಂಬಂಧಿಸಿದಂತೆ ಯಾವುದೇ ತುರ್ತುಸ್ಥಿತಿಯಲ್ಲಿ ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ '108' ಸಂಖ್ಯೆಗೆ ಕರೆ ಮಾಡಿದಲ್ಲಿ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ಉಪಕರಣಗಳನ್ನು ಒಳಗೊಂಡ ಅಂಬ್ಯುಲೆನ್ಸ್ ಘಟನೆಯ ಸ್ಥಳಕ್ಕೆ ತೆರಳಿ, ತುರ್ತು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತದನಂತರ ಆಸ್ಪತ್ರೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಈ ಸೇವೆ ಸಂಪೂರ್ಣ ಉಚಿತವಾಗಿದೆ. ಇದನ್ನು "ಆರೋಗ್ಯ ಕವಚ 108" ಯೋಜನೆ ಎಂದು ಕರೆಯಲಾಗುತ್ತಿದೆ.

- ಆರೋಗ್ಯ ಕವಚ 18 ಯೋಜನೆಯಡಿ 2.18 ಕೋಟಿ ಕರೆಗಳನ್ನು ಸ್ವೀಕರಿಸಿದೆ.
- 10.77 ಲಕ್ಷ ಅಮೂಲ್ಯ ಜೀವಗಳ ರಕ್ಷಣೆಯಾಗಿದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಒಟ್ಟು 517 ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ.
- ಆರೋಗ್ಯ ಕವಚ 108 ಯೋಜನೆಯಡಿ ಕಾರ್ಯ ಕೈಗೊಂಡ ಪ್ರಕರಣಗಳಲ್ಲಿ ಶೇಕಡ 42ರಷ್ಟು ಹೆರಿಗೆಗೆ ಸಂಬಂಧಿಸಿದವುಗಳು.

ಕಳೆದ 3 ವರ್ಷಗಳ ಹಿನ್ನೋಟ ಇಲ್ಲಿದೆ.

ಆರೋಗ್ಯ ಕವಚ ವೈಶಿಷ್ಟ್ಯತೆಗಳು

•24×7 ತುರ್ತು ಸೇವೆಗಳು ಲಭ್ಯ • ಉಚಿತ ಕರೆಗಳು, ನೇರವಾಗಿ ಯಾವುದೇ ದೂರವಾಣಿ ಇಲ್ಲವೆ ಮೊಬೈಲ್‌ನಿಂದ ಸಾಧ್ಯ •ಸರಾಸರಿ 18 ನಿಮಿಷಗಳಲ್ಲಿ ತುರ್ತುಸೇವಾ ಸಹಾಯ ನಿಮಗೆ ಲಭ್ಯ •"108" ಕರೆಗಳನ್ನು ಇವುಗಳಿಗಾಗಿ ಮಾಡಿರಿ • ಜೀವ ರಕ್ಷಣೆಗಾಗಿ •ಅಪರಾಧಗಳು ನಡೆಯುತ್ತಿರುವಾಗ • ಬೆಂಕಿ ಅವಘಡಗಳಿಗಾಗಿ

ಸಂಪೂರ್ಣ ಆರೋಗ್ಯ – ಸದೃಢ ಕರ್ನಾಟಕ

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ


ಸದೃಢ ತೋಟಗಾರಿಕೆ
ಸಮೃದ್ಧ ಕರ್ನಾಟಕ
ಕರ್ನಾಟಕ ಮುನ್ನಡೆಯುತ್ತಿದೆ
ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು
ತೋಟಗಾರಿಕೆ ಇಲಾಖೆಯ ಯೋಜನೆಗಳು
Power operated machines/tools including Power saw and Plant protection equipments etc. (1set / beneficiary)
Power Machines (upto 20 BHP) with rotavator/euipment) (1 set / beneficiary)
C. Power machines (20 HP & above) including accessories/quipments (1 set / beneficiary)
ತೋಟಗಾರಿಕೆ ಅಭಿವೃದ್ಧಿ – ನಾಡು ಸಮೃದ್ಧಿ
ಕರ್ನಾಟಕ ವಾರ್ತೆ

UPKAR ESTATES™

SINCE 1974

The most trusted property developers in Bangalore

A name of repute for over thirty years, Upkar Estates has always been an icon resembling the value of trust, quality and deliverance.

We inspire healthy living through each of our projects, where we ensure meticulous planning and flawless execution along with the personalised guidance and care taken to handle all the documentation procedures and hand them over to you with minimal hassles.

With thousands of happy customers, we have built and maintained relationships and bonds that have lasted for over three decades. Now, we invite you to be a part of this ongoing story of trust and confidence.

APPROVED BMRDA TOWNSHIPS

CREDAI BENGALURU

Our On-going Projects

UPKAR Spring Fields HOSUR MAIN ROAD	UPKAR Meadows NEAR ELECTRONIC CITY	UPKAR Green Fields HOSUR MAIN ROAD
UPKAR Oakland HOSUR MAIN ROAD	UPKAR Royal Garden AFFORDABLE VILLAS AT HOSUR	UPKAR Green Valley NELAMANGALA

Upkar Towers, No.28, 9th Cross, Off. R.V.Road, II Block, Jayanagar, Bangalore - 560 011
Tel: 080-40300900, Fax: 080-26572155, E-Mail: info@upkar.co.in www.upkar.co.in

LOANS AVAILABLE FROM LEADING FINANCIAL INSTITUTIONS

'SAMVADA' Kannada Monthly, February 2012 KA/BGW-706/2012-2014 RNI No. KARKAN/2002/9246
Posted at Bangaluru G.P.O on 1st & 7th of every month (No. off Pages-276)

SURANA COLLEGE
Bengaluru

16, South End Road, Bangalore-04
(Affiliated to Bangalore University, Approved by AICTE, Recognised by Govt. of Karnataka and UGC 2f)
Phone: 91-080-26642292/22446141, Fax: 26541095
www.suranacollege.edu.in,

PG COURSES

MBA,
(Two years full time course)

MCA,
(Three years full time course)

MSc-Psychology
(Two years full time course)

Character, Competence and Professionalism . . . . You acquire at the Surana Institutions
Unique, innovative and enjoyable . . . You realise your dreams at Surana College
Vibrant, varied and vigorous . . . the learning environment designed for you
Culture, Discipline and Mentoring . . . You will know the values.
Life at Surana College is about developing faith in yourself and creating your own path.
It is about dreaming and realising to make a difference



PUC COURSES

SCIENCE STREAMS
* PCMB (Physics, Chemistry, Maths, Biology)
* PCMC (Physics, Chemistry, Maths, Computer Science)
* PCME (Physics, Chemistry, Maths, Electronics)

COMMERCE STREAMS
* EBAC (Economics, Business Studies, Accountancy, Computer Sce)
* SEBA (Statistics, Economics, Business Studies, Accountancy)
* BASM (Business Studies, Accountancy, Statistics, Maths)
* HEBA (History, Economics, Business Studies, Accountancy)

ARTS STREAMS
* HEPPy (History, Economics, Political Science, Psychology)

B.Com Evening Course
From the Academic Year-2011-12

DEGREE COURSES

* BSC -Chemistry, Botany, Biotechnology
  -Physics, Maths, Computer Science
  -Statistics, Maths, Computer Science
* BCA -As per Bangalore University norms
* BCom -As per Bangalore University norms
* BBM -As per Bangalore University norms
* BA -Psychology, Opt-Eng, Journalism
  -Journalism, Opt-Eng, Pol-Science
  -History, Economics, Pol-Science
  -Tourism, Journalism, History

Add on Courses:
Personality Development, Multimedia, Dot Net, Web page design, Networking. Production & Operations Management, Human Resources, Photo Journalism.

Value Additions:
Placement & Training, Soft Skills, Yoga, Culture & Sports, NSS, NCC, Mentoring, Community Services